ಕನ್ನಡ ಸಾಂಸ್ಕೃತಿಕ ವಿಮರ್ಶೆ: ತಾತ್ವಿಕ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಜಿ. ಗಂಗರಾಜು

ಮಾರ್ಗದರ್ಶಕರು
ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೫

ಕನ್ನಡ ಸಾಂಸ್ಕೃತಿಕ ವಿಮರ್ಶೆ: ತಾತ್ವಿಕ ಸ್ವರೂಪ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಜಿ. ಗಂಗರಾಜು

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೫

ಪ್ರಮಾಣಪತ್ರ

"ಕನ್ನಡ ಸಾಂಸ್ಕೃತಿಕ ವಿಮರ್ಶೆ: ತಾತ್ವಿಕ ಸ್ವರೂಪ" ಎಂಬ ಮಹಾಪ್ರಬಂಧವನ್ನು **ಪ್ರೊ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ **'ಭಾಷಾ ನಿಕಾಯ'**ದ **'ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ'**ಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 1/10/2015

(ಜಿ. ಗಂಗರಾಜು)
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ– ೫೮೩ ೨೭೬

ದೃಢೀಕರಣ ಪತ್ರ

ಜಿ. ಗಂಗರಾಜು ಅವರು **"ಕನ್ನಡ ಸಾಂಸ್ಕೃತಿಕ ವಿಮರ್ಶೆ: ತಾತ್ವಿಕ ಸ್ವರೂಪ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ **'ಭಾಷಾ ನಿಕಾಯ'**ಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢಪಡಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ: 1/10/2015

(ಡಾ. ರಹಮತ್ ತರೀಕೆರೆ)
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ– ೫೮೩೨೭೬

ಪರಿವಿಡಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

೧.೧ ಪೀಠಿಕೆ

೧.೨ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪ

೧.೩ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕುರಿತ ಅಧ್ಯಯನದ ಕೊರತೆಗಳು, ಸಮಸ್ಯೆಗಳು ಮತ್ತು ಅವಕಾಶಗಳು

೧.೪ ಅಧ್ಯಯನದ ಉದ್ದೇಶ

೧.೪.೧ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಪರಿಶೀಲನೆ

೧.೪.೨ ವಿಮರ್ಶೆಯ ಸ್ಥಿತ್ಯಂತರದ ಅವಲೋಕನ

೧.೪.೩ ಇದುವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ವಿಶ್ಲೇಷಣೆ

೧.೪.೪ ಸಾಂಸ್ಕೃತಿಕ ವಿಮರ್ಶೆಯ ಸ್ವರೂಪದ ಚಿಂತನೆ

೧.೪.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಕಲ್ಪನಾತ್ಮಕ ಚರ್ಚೆ

೧.೪.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಯಾಮಗಳ ವಿಶ್ಲೇಷಣೆ

೧.೪.೭ ಸಮಸ್ಯೆಗಳ ವಿಶ್ಲೇಷಣೆ

೧.೪.೮ ಅಧ್ಯಯನದ ಪ್ರಮುಖ ಫಲಿತಗಳು ಮತ್ತು ಅಧ್ಯಯನದ ಹೊಸ ಸಾಧ್ಯತೆಗಳು

೧.೫ ಅಧ್ಯಯನದ ವ್ಯಾಪ್ತಿ

೧.೫.೧ ಕೃತಿ ಮತ್ತು ಕೃತಿಕಾರ ವ್ಯಾಪ್ತಿ

೧.೫.೨ ಕಾಲವ್ಯಾಪ್ತಿ

೧.೫.೩ ಆಕರ ವ್ಯಾಪ್ತಿ

೧.೬ ಅಧ್ಯಯನದ ವಿಧಾನ

೧.೬.೧ ಆಕರಗಳ ಆಯ್ಕೆ ವಿಧಾನ

೧.೬.೨ ಆಕರಗಳ ವರ್ಗೀಕರಣ ವಿಧಾನ

೧.೬.೩ ಆಕರಗಳ ವಿಶ್ಲೇಷಣಾ ವಿಧಾನ

೧.೬.೪ ಗ್ರಹಿಕೆ ವಿಧಾನ

೧.೬.೫ ಬರವಣಿಗೆ ವಿಧಾನ

೧.೭ ಅಧ್ಯಯನದ ಮಹತ್ವ

೧.೭.೧ ಚಾರಿತ್ರಿಕ ಮಹತ್ವ

೧.೭.೨ ಸಾಂಸ್ಕೃತಿಕ ಮಹತ್ವ

೧.೭.೩ ವಿಮರ್ಶೆಯ ವಿಮರ್ಶೆಯಾಗಿ ಮಹತ್ವ

೧.೭.೪ ವಿಮರ್ಶಾ ಮೀಮಾಂಸೆಯಾಗಿ ಮಹತ್ವ

ಅಧ್ಯಾಯ –೧: ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

೧.೧ ಪೀಠಿಕೆ

ಸಾಹಿತ್ಯದ ಮೂಲಕ ಮಾಡುವ ಜಗತ್ತಿನ ವಿಶ್ಲೇಷಣೆಯೇ ಸಾಹಿತ್ಯ ವಿಮರ್ಶೆ. ಲೋಕ ಸ್ವರೂಪ ಕುರಿತ ಸೃಜನಾತ್ಮಕ ಆಖ್ಯಾನ ಮತ್ತು ವ್ಯಾಖ್ಯಾನವಾದ ಸಾಹಿತ್ಯದ ಅನುಸಂಧಾನ ವಿಮರ್ಶೆಯ ಪ್ರಧಾನ ಕಾರ್ಯ.

ಸಮಕಾಲೀನತೆ ಮತ್ತು ಸಾರ್ವಕಾಲೀನತೆ ಸಾಹಿತ್ಯ ಸ್ವರೂಪದ ಎರಡು ಪ್ರಮುಖ ಸಂಗತಿಗಳು. ನಿರ್ದಿಷ್ಟ ಕಾಲ, ಪರಿಸರ ಮತ್ತು ಸಂದರ್ಭದ ಹಿನ್ನೆಲೆಯಲ್ಲಿ ಸೃಷ್ಟಿಯಾಗುವ ಸಾಹಿತ್ಯ, ತನ್ನ ಚಾರಿತ್ರಿಕತೆಯನ್ನು ಮೀರಿದ ಬಹುರೂಪಿ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಆಕೃತಿ ಮತ್ತು ಆಶಯಗಳ ಕೌಶಲ್ಯಪೂರ್ಣ ಹೊಂದಾಣಿಕೆಯ ವಿನ್ಯಾಸಗಳ ಮೂಲಕ ಸಾಹಿತ್ಯದಲ್ಲಿ ಕಥನ ಮತ್ತು ಸಂಕಥನಗಳ ಅರ್ಥಪೂರ್ಣ ಬೆಸುಗೆಯನ್ನು ಸಾಧಿಸಲಾಗುತ್ತದೆ.

ಸಮಾಜವೇ ಸಾಹಿತ್ಯದ ಭಿತ್ತಿ. ನಿರಂತರ ಬದಲಾವಣೆ ಸಮಾಜದ ಸಹಜ ಪ್ರಕ್ರಿಯೆ. ಆದರೆ ಇದು ಯಾವಾಗಲೂ ಹೊರನೋಟಕ್ಕೆ ಕಾಣುವಷ್ಟು ಸರಳವಾಗಿರದೆ ಸಂಕೀರ್ಣತೆಯಿಂದ ಕೂಡಿರುವ ವಿದ್ಯಮಾನವಾಗಿರುತ್ತದೆ. ಹೀಗಾಗಿಯೇ, ದ್ವಂದ್ವಾತ್ಮಕತೆ ಮತ್ತು ಸಂಘರ್ಷಾತ್ಮಕತೆಗಳು ಸಾಮಾಜಿಕ ಬದಲಾವಣೆಯ ಗತಿಶೀಲ ಪ್ರಕ್ರಿಯೆಯ ಮುಖ್ಯವಾದ ಎರಡು ಚಹರೆಗಳಾಗಿರುತ್ತವೆ. ಬದಲಾವಣೆಯನ್ನು ಬಯಸುವ ಮತ್ತು ವಿರೋಧಿಸುವ ಸಂಗತಿಗಳು ಹಾಗೂ ಶಕ್ತಿಗಳು ಸಮಾಜದಲ್ಲಿ ಯಾವಾಗಲೂ ಏಕಕಾಲದಲ್ಲಿ ಕ್ರಿಯಾಶೀಲವಾಗಿರುತ್ತವೆ. ಯಥಾಸ್ಥಿತಿಯ ರಕ್ಷಣೆ ಮತ್ತು ಅಬಾಧಿತ ಮುಂದುವರಿಕೆ ಬದಲಾವಣೆಯ ವಿರೋಧಿ ಶಕ್ತಿಗಳ ಮುಖ್ಯ ಉದ್ದೇಶವಾಗಿರುತ್ತದೆ. ಅಮಾನವೀಯ ವಾಸ್ತವತೆ, ಕ್ರೂರ ವ್ಯವಸ್ಥೆಯ ನಿರ್ಮೂಲನೆ ಹಾಗೂ ಜೀವಪರ ಸಮಾಜದ ನಿರ್ಮಾಣ ಬದಲಾವಣೆಯ ಪರವಾದ ಶಕ್ತಿಗಳ ಪ್ರಧಾನ ಕಾಳಜಿಯಾಗಿರುತ್ತದೆ. ಹಾಗೆಯೇ, ಇದರೊಂದಿಗೆ ಕಲ್ಪಿತ ಅಥವಾ ಭಾವಿತ ಸ್ವರೂಪದ ಗತ ಆದರ್ಶಮಯ ಭವ್ಯ ಸಂಸ್ಕೃತಿಯನ್ನು ಮರುಸ್ಥಾಪಿಸುವ ತೀವ್ರವಾದ ಉದ್ದೇಶದ, ಪ್ರತಿಗಾಮಿ ಪುನರುತ್ಥಾನವಾದಿ ಹಿತಾಸಕ್ತಿಗಳು ಸಹ ಕಾರ್ಯೋನ್ಮುಖವಾಗಿರುತ್ತವೆ. ಇವು ತಮ್ಮ ನಿರ್ದಿಷ್ಟ ಉದ್ದೇಶ ಮತ್ತು ಗುರಿಸಾಧನೆಗಾಗಿ ಬಹುಬಗೆಯ ಕಾರ್ಯತಂತ್ರಗಳು ಮತ್ತು ಸಾಧನೋಪಾಯಗಳನ್ನು ಪ್ರಬಲವಾಗಿ ಅನುಸರಿಸುತ್ತಿರುತ್ತವೆ. ಹೊಸ ಮಾದರಿಯ ಸಂಕಥನಗಳನ್ನು ರೂಪಿಸುತ್ತಿರುತ್ತವೆ.

ಇದರಿಂದಾಗಿ, ಪ್ರತಿಯೊಂದು ಸಮಾಜದಲ್ಲಿ ಯಾವುದೇ ಕಾಲ ಮತ್ತು ಸಂದರ್ಭಗಳಲ್ಲೂ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಮೊದಲಾದ ಸಂಘರ್ಷಗಳು ವಿವಿಧ

ಸ್ವರೂಪ, ವಿನ್ಯಾಸ ಹಾಗೂ ನೆಲೆಗಳಲ್ಲಿ ನೇರವಾಗಿ ಅಥವಾ ಮರೆಯಲ್ಲಿ ಘಟಿಸುತ್ತಿರುತ್ತವೆ. ಈ ವಿದ್ಯಮಾನವನ್ನು 'ಪುರೋಗಾಮಿ ಮತ್ತು ಪ್ರತಿಗಾಮಿಶಕ್ತಿಗಳ ನಡುವಿನ ಸಂಘರ್ಷ' ಅಥವಾ 'ಸಂಪ್ರದಾಯ ಮತ್ತು ಆಧುನಿಕತೆಗಳ ನಡುವಿನ ಜಗಳ' ಮೊದಲಾದ ಪರಿಭಾಷೆ, ಪರಿಕಲ್ಪನೆಗಳ ಮೂಲಕ ವಿವರಿಸಲಾಗುತ್ತದೆ.

ಸಾಹಿತ್ಯದಲ್ಲಿ ಸಹ ಈ ವಿದ್ಯಮಾನ ವಿವಿಧ ರೂಪ, ವಿನ್ಯಾಸ ಮತ್ತು ಮಾದರಿಗಳಲ್ಲಿ ಪ್ರಕಟವಾಗುತ್ತದೆ. ವ್ಯಕ್ತಿ, ಸಮಾಜ, ಸಮುದಾಯಗಳು, ಸಂಸ್ಕೃತಿಗಳು ಮತ್ತು ಮೌಲ್ಯಗಳ ನಡುವಿನ ಘರ್ಷಣೆ ಅಥವಾ ಬಿಕ್ಕಟ್ಟುಗಳ ರೂಪದಲ್ಲಿ ಇದು ಪ್ರತಿಫಲನಗೊಳ್ಳುತ್ತದೆ. ಇವು ಮೂಲತಃ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಸಂಘರ್ಷಗಳಾಗಿದ್ದು, ರೂಢಿಗತ ವ್ಯವಸ್ಥೆಯ ವಿರುದ್ಧದ ಪ್ರತಿರೋಧಗಳಾಗಿರುತ್ತವೆ. ಈ ಪ್ರತಿರೋಧಕತೆ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುವ ಪ್ರಮಾಣ, ತೀವ್ರತೆ ಮತ್ತು ಸ್ವರೂಪಕ್ಕೆ ಅನುಸಾರವಾಗಿ ಸಾಹಿತ್ಯಾಭಿವ್ಯಕ್ತಿಯ ರೂಪಗಳು ಹಾಗೂ ಆಶಯಗಳು ಸಹ ಸ್ಥಿತ್ಯಂತರಗೊಳ್ಳುತ್ತವೆ. ಹೀಗೆ ಸಾಹಿತ್ಯೇತರ ಸಂಗತಿಗಳು, ಶಕ್ತಿಗಳು ಮತ್ತು ಹಿತಾಸಕ್ತಿಗಳೇ ಸಾಹಿತ್ಯದ ಆಕೃತಿ ಮತ್ತು ಆಶಯಗಳನ್ನು ಪಲ್ಲಟಗೊಳಿಸುವುದು ಬಹುತೇಕ ಎಲ್ಲ ಕಾಲದ, ಎಲ್ಲ ಭಾಷೆಗಳ ಸಾಹಿತ್ಯಗಳ ಸಾಮಾನ್ಯ ಚಹರೆಯಾಗಿದೆ.

ಸಾಹಿತ್ಯದ ಈ ಸಂಕೀರ್ಣ ಸ್ವರೂಪದ ಬಹುರೂಪಿ ನೆಲೆಗಳನ್ನು ಪರಿಣಾಮಕಾರಿಯಾಗಿ ಅರಿಯುವುದು, ವಿವರಿಸುವುದು ಮತ್ತು ನಿರೂಪಿಸುವುದು ಯಾವಾಗಲೂ ಸಾಹಿತ್ಯ ವಿಮರ್ಶೆಗೆ ಇರುವ ಬಹುದೊಡ್ಡ ಸವಾಲು. ಇದರ ಸಮರ್ಥ ನಿರ್ವಹಣೆಯ ಹೊಣೆಗಾರಿಕೆಯು ಕಾಲಕಾಲಕ್ಕೆ ಸಾಹಿತ್ಯ ವಿಮರ್ಶೆಯ ಕಾರ್ಯಮಾದರಿಗಳು ಮತ್ತು ವಿಧಾನಗಳನ್ನು ಸ್ಥಿತ್ಯಂತರಗೊಳಿಸುತ್ತದೆ. ವ್ಯಾಪಕ ಪ್ರಮಾಣ ಮತ್ತು ತೀವ್ರ ಸ್ವರೂಪದಲ್ಲಿ ಈ ಪ್ರಕ್ರಿಯೆ ನಡೆಯುವ ಮೂಲಕ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪ ರೂಢಮೂಲ ಪಲ್ಲಟ (paradigm shift)ಗಳಿಗೆ ಒಳಗಾಗುತ್ತದೆ. ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲೂ ಇಂಥ ಸ್ಥಿತ್ಯಂತರಗಳು ಮತ್ತು ಪಲ್ಲಟಗಳು ನಡೆದಿವೆ.

೧.೨ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪ

ಪಾಶ್ಚಾತ್ಯ ವಸಾಹತುಶಾಹಿ ಆಳ್ವಿಕೆ ಸಾಧನವಾದ ಇಂಗ್ಲಿಷ್ ಭಾಷೆಯ ಸಾಹಿತ್ಯದ ಸಂಪರ್ಕದಿಂದ, ಇಪ್ಪತ್ತನೆ ಶತಮಾನದ ಆರಂಭಿಕ ಹಂತದಲ್ಲಿ ಕನ್ನಡದಲ್ಲಿ ಹಲವು ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿದವು. ಸಾಹಿತ್ಯ ವಿಮರ್ಶೆ ಸಹ ಇಂಥ ಒಂದು ಆಧುನಿಕ ಪ್ರಕಾರ. ಕಳೆದ ಶತಮಾನದ ಎರಡನೆ ದಶಕದಲ್ಲಿ ರೂಪುಗೊಂಡ ಕನ್ನಡ ಸಾಹಿತ್ಯ ವಿಮರ್ಶೆಗೆ ಈಗ ನೂರು ವರ್ಷ ತುಂಬುತ್ತಿದೆ. ಒಂದು ಶತಮಾನದಷ್ಟು ದೀರ್ಘ ಚರಿತ್ರೆಯುಳ್ಳ ಕನ್ನಡ ಸಾಹಿತ್ಯ ವಿಮರ್ಶೆಗೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನ ಮತ್ತು ಮಹತ್ವ ಇದೆ.

ಆರಂಭದಿಂದಲೂ ಹಲವು ಸಾಹಿತ್ಯಕ ಮತ್ತು ಸಾಹಿತ್ಯೇತರ ಸಂಗತಿಗಳು, ಆಂದೋಲನಗಳು ಹಾಗೂ ಚಳವಳಿಗಳು ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿವೆ. ಪ್ರತಿಯೊಂದು ಕಾಲಘಟ್ಟದಲ್ಲೂ ಅನೇಕ ಲೇಖಕರು ಗಂಭೀರವಾದ ವಿಮರ್ಶೆ ರಚಿಸಿದ್ದಾರೆ. ಹಲವು ಪ್ರಕಾರಗಳಲ್ಲಿ ಉತ್ಕೃಷ್ಟವಾದ ಸಾಹಿತ್ಯ ಸೃಷ್ಟಿಸಿರುವುದರಜೊತೆಯಲ್ಲಿ, ಅಷ್ಟೇ ಮಹತ್ವಪೂರ್ಣವಾದ ಸಾಹಿತ್ಯ ವಿಮರ್ಶೆ ಸಹ ರಚಿಸಿದ್ದಾರೆ. ಇದರೊಂದಿಗೆ, ಹೊಸತಲೆಮಾರಿನ ಅನೇಕರು ಸಾಹಿತ್ಯ ವಿಮರ್ಶೆಯನ್ನೇ ತಮ್ಮ ಪ್ರಧಾನ ಮಾಧ್ಯಮವನ್ನಾಗಿ ಸ್ವೀಕರಿಸುವ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯ ಪರಂಪರೆಯ ದಿಗಂತವನ್ನು ವಿಸ್ತರಿಸಿದ್ದಾರೆ. ಆರಂಭದ ಮೊದಲ ಹಂತಗಳಲ್ಲಿ ಕೇವಲ ಶೈಕ್ಷಣಿಕ ವಲಯದ ವಿದ್ವಾಂಸರ ಬೌದ್ಧಿಕ ಆಸಕ್ತಿಯಾಗಿದ್ದ ಸಾಹಿತ್ಯ ವಿಮರ್ಶೆ, ಇಂದು ಈ ನಿರ್ದಿಷ್ಟ ಆವರಣವನ್ನು ಮೀರಿ ವಿಶಾಲವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜಗತ್ತಿಗೆ ವಿಸ್ತರಣೆಗೊಂಡಿದೆ.

ಶತಮಾನದ ಅವಧಿಯಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪ ಅನೇಕ ಪಲ್ಲಟಗಳಿಗೆ ಒಳಗಾಗುತ್ತಾ ಬಂದಿದೆ. ವಿಮರ್ಶೆಯ ಉದ್ದೇಶ, ಕಾರ್ಯಮಾದರಿಗಳು, ವಿಧಾನಗಳು, ಪರಿಕರಗಳು ಮತ್ತು ತಂತ್ರಗಳಲ್ಲಿ ವ್ಯಾಪಕವಾದ ಬದಲಾವಣೆಗಳಾಗಿವೆ. ಹಾಗೆಯೇ, ವಿಮರ್ಶೆಯ ಒಲವುಗಳು, ಧೋರಣೆಗಳು ಮತ್ತು ನಿಲುವುಗಳಲ್ಲಿ ಸಹ ತೀವ್ರವಾದ ಮಾರ್ಪಾಟುಗಳಾಗಿವೆ.

ಕನ್ನಡ ಸಾಹಿತ್ಯ ವಿಮರ್ಶೆಯ ರೂಪೀಕರಣ ಮತ್ತು ಪಲ್ಲಟೀಕರಣವನ್ನು ಹಲವು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ತತ್ವಗಳು, ಸಾಹಿತ್ಯ ಮತ್ತು ಸಂಸ್ಕೃತಿ ಸಿದ್ಧಾಂತಗಳು, ವೈಚಾರಿಕ ತತ್ವವಾದಗಳು ಪ್ರಭಾವಿಸಿವೆ. ಇದರೊಂದಿಗೆ, ಭಾರತೀಯ ಮತ್ತು ಕರ್ನಾಟಕದ ಪರಿಸರದಲ್ಲಿ ನಡೆದ ಅನೇಕ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಹಿತ್ಯಕ ಚಳುವಳಿಗಳು ಸಹ ಮುಖ್ಯ ಪ್ರೇರಣೆಗಳನ್ನು ಒದಗಿಸಿವೆ.

ಪ್ರಕೃತಿ, ಪರಿಸರ, ಸಮಾಜ, ಸಂಸ್ಕೃತಿ, ಚರಿತ್ರೆ, ಧರ್ಮ ಮತ್ತು ಭಾಷೆ ಮೊದಲಾದವುಗಳನ್ನು ಕುರಿತು ಮಾನವನ ಆಲೋಚನೆ ಹಾಗೂ ಪ್ರಜ್ಞೆಯ ನೆಲೆಗಳನ್ನು ಅನೂಹ್ಯ ಪ್ರಮಾಣದಲ್ಲಿ ವಿಸ್ತರಿಸಿದ ಪಾಶ್ಚಾತ್ಯ, ಭಾರತೀಯ ಮತ್ತು ಕರ್ನಾಟಕದ ಹಲವಾರು ಚಿಂತಕರ ವಿಚಾರಧಾರೆಗಳು ಸಹ ಕನ್ನಡ ಸಾಹಿತ್ಯ ವಿಮರ್ಶೆಯ ಬಹುಮುಖ್ಯ ತಾತ್ವಿಕ ಗ್ರಹಿಕೆಗಳನ್ನು ರೂಪಿಸಿವೆ.

ರೂಪುಗೊಳ್ಳುವಿಕೆಯ ವಸಾಹತುಶಾಹಿ ಕಾಲಘಟ್ಟದಲ್ಲಿ, ರಾಜಕೀಯ ಪರಾಧೀನತೆಯ ವಿರುದ್ಧದ ಹೋರಾಟ ಮತ್ತು ಸಾಂಸ್ಕೃತಿಕ ಪುನರುಜ್ಜೀವನದ ಪ್ರಶ್ನೆಗಳು ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಧಾನ ಕಾಳಜಿಗಳಾಗಿದ್ದವು. ವಿಪರ್ಯಾಸವೆಂದರೆ, ಇಂದಿನ ನವವಸಾಹತುಶಾಹಿ ಆಧುನಿಕೋತ್ತರ ಕಾಲಘಟ್ಟದಲ್ಲಿ ಸಹ ಇದೇ ಪ್ರಶ್ನೆಗಳೆ ವಿಭಿನ್ನ ವಿನ್ಯಾಸ, ಮಾದರಿ ಹಾಗೂ

ಪ್ರಮಾಣಗಳಲ್ಲಿ ಕನ್ನಡ ವಿಮರ್ಶೆಯ ಮುಂದಿರುವ ಗಂಭೀರವಾದ ಸವಾಲುಗಳಾಗಿವೆ. ಆದ್ದರಿಂದ, ಬಹುಕಾಲದವರೆಗೆ ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಧಾನ ಆಕರಗಳೆಂದು ಪರಿಗಣಿತವಾಗಿದ್ದ ಸಾಹಿತ್ಯ ಕೃತಿಗಳ ಜೊತೆಯಲ್ಲಿ, ಸಾಹಿತ್ಯೇತರ ಬಹುರೂಪಿ ಪಠ್ಯಗಳು ಸಹ ಈಗ ಸ್ಥಾನ ಪಡೆದಿವೆ. ಹೀಗಾಗಿ ಸೃಜನೇತರ ಪ್ರಕಾರವೆಂದು ಪರಿಗಣಿತವಾಗಿದ್ದ ಕನ್ನಡ ಸಾಹಿತ್ಯ ವಿಮರ್ಶೆ ಇಂದು ಮಹತ್ವದ 'ಸೃಜನಶೀಲ' ರೂಪವೆಂದು ಒಪ್ಪಿತವಾಗಿದೆ. ಸಾಹಿತ್ಯಾನುಸಂಧಾನದೊಂದಿಗೆ 'ಕನ್ನಡ ಜಗತ್ತಿನ' ನಿರ್ಮಾಣದ ಬಹುಮುಖ್ಯ ಸಂಕಥನ ಮಾಧ್ಯಮವಾಗಿ ಪರಿವರ್ತನೆಯಾಗಿದೆ.

೧.೩ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕುರಿತ ಅಧ್ಯಯನದ ಕೊರತೆಗಳು, ಸಮಸ್ಯೆಗಳು ಮತ್ತು ಅವಕಾಶಗಳು

ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅಧ್ಯಯನಕ್ಕೆ ಒಳಪಟ್ಟಿರುವ ಆಧುನಿಕ ಕನ್ನಡ ಸಾಹಿತ್ಯದ ಕೆಲವು ಪ್ರಕಾರಗಳಲ್ಲಿ ಸಾಹಿತ್ಯ ವಿಮರ್ಶೆ ಸಹ ಒಂದು. ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕುರಿತ ಅಧ್ಯಯನಗಳು ತುಂಬಾ ತಡವಾಗಿ ಆರಂಭವಾದವು. ಇಷ್ಟೇ ಅಲ್ಲದೆ, ಇವುಗಳ ಉದ್ದೇಶ ಮತ್ತು ಆಸಕ್ತಿಗಳು ಸಹ ಹೆಚ್ಚಿನ ಮಹಾತ್ವಾಕಾಂಕ್ಷೆಯಿಂದ ಕೂಡಿರಲಿಲ್ಲ. ಸಾಹಿತ್ಯ ವಿಮರ್ಶೆಯನ್ನು ಕುರಿತು ಬಹುಕಾಲದವರೆಗೆ ಗಂಭೀರವಾದ ಅಧ್ಯಯನಗಳು ನಡೆಯದಿರುವುದು ಕನ್ನಡ ಸಾಹಿತ್ಯ ಸಂಶೋಧನೆಯ ಸಂದರ್ಭದ ಒಂದು ಬಹುದೊಡ್ಡ ಕೊರತೆಯಾಗಿದೆ. ಒಂದು ಶತಮಾನದಷ್ಟು ದೀರ್ಘವಾದ ಚರಿತ್ರೆಯನ್ನುಳ್ಳ ಮತ್ತು ಸಾಂಸ್ಕೃತಿಕವಾಗಿಯೂ ಅತ್ಯಂತ ಮಹತ್ವ ಹೊಂದಿರುವ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕುರಿತು ಹಲವು ನೆಲೆಗಳಿಂದ ಗಂಭೀರವಾಗಿ ಅಧ್ಯಯನ ಮಾಡಲು ಸಾಕಷ್ಟು ಅವಕಾಶವಿದೆ.

ಕನ್ನಡ ಸಾಹಿತ್ಯ ವಿಮರ್ಶೆ ಕುರಿತು ನಡೆದಿರುವ ಬಹುಪಾಲು ಅಧ್ಯಯನಗಳು ಪರಿಶೀಲನೆ ಅಥವಾ ಅವಲೋಕನದ ಮಾದರಿಗಳಲ್ಲಿ ಇವೆ. ಸಾಮಾನ್ಯವಾಗಿ ಸಾಹಿತ್ಯ ವಾರ್ಷಿಕ, ದಶವಾರ್ಷಿಕ ಸಂಪುಟಗಳು, ಸುವರ್ಣ ಸ್ವಾತಂತ್ರ್ಯೋತ್ಸವ ಸಂಪುಟಗಳು, ಶತಮಾನದ ಸಂಪುಟಗಳು, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಸಂಪುಟಗಳು, ಅಭಿನಂದನ ಗ್ರಂಥಗಳು, ಸ್ಮರಣ ಸಂಚಿಕೆಗಳು ಮೊದಲಾದ ಗ್ರಂಥಗಳ ಭಾಗವಾಗಿ ಇಂಥ ಅಧ್ಯಯನಗಳು ನಡೆದಿರುತ್ತವೆ.

ಕನ್ನಡ ವಿಮರ್ಶೆ ಕುರಿತ ಇಂಥ ಅಧ್ಯಯನಗಳ ಕೆಲವು ಮಾದರಿಗಳನ್ನು ಹೀಗೆ ಗುರುತಿಸಬಹುದು. ಅ. ಚಾರಿತ್ರಿಕ ಅಧ್ಯಯನಗಳು ಆ. ಸಮೀಕ್ಷಾತ್ಮಕ ಅಧ್ಯಯನಗಳು ಇ. ತೌಲನಿಕ ಅಧ್ಯಯನಗಳು ಈ. ಕಾಲಘಟ್ಟ ಕೇಂದ್ರಿತ ಅಧ್ಯಯನಗಳು ಮತ್ತು ಉ. ವಿಮರ್ಶಕ ಕೇಂದ್ರಿತ ಅಧ್ಯಯನಗಳು ಮೊದಲಾದವು.

ಇಂಥ ಸರಳ ಮತ್ತು ನೇರ ವಿಧಾನದ ಅಧ್ಯಯನಗಳ ಹೊರತಾಗಿ, ಕನ್ನಡ ಸಾಹಿತ್ಯ ವಿಮರ್ಶೆಯನ್ನು ಇನ್ನಿತರ ಹಲವು ಗಂಭೀರ ರೂಪಗಳಲ್ಲಿ ಅನುಸಂಧಾನ ಮಾಡುವುದಕ್ಕೆ ಸಮೃದ್ಧವಾದ ಅವಕಾಶವಿದೆ. ಇಂಥ ಕೆಲವು ಸಾಧ್ಯತೆಗಳನ್ನು ಹೀಗೆ ಗುರುತಿಸಬಹುದು.

ಅ. ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಮುಖ ಒಲವುಗಳು, ಪ್ರವೃತ್ತಿಗಳು, ಆಸಕ್ತಿಗಳು ಮತ್ತು ಧೋರಣೆಗಳ ಸ್ವರೂಪ ಕುರಿತು ವಿಶ್ಲೇಷಿಸುವುದು. ಇವುಗಳ ಬದಲಾವಣೆಯ ಹಿಂದಿನ ಒತ್ತಡಗಳು, ಪ್ರೇರಣೆಗಳು, ಹಿತಾಸಕ್ತಿಗಳು ಹಾಗೂ ಇದರಿಂದಾಗಿರುವ ಪರಿವರ್ತನೆಯ ವಿನ್ಯಾಸಗಳನ್ನು ಗುರುತಿಸುವುದು.

ಆ. ವಿವಿಧ ರೂಪಗಳ ಪಾಶ್ಚಾತ್ಯ ಪ್ರಭಾವಗಳು ಕನ್ನಡ ಸಾಹಿತ್ಯ ವಿಮರ್ಶೆಯ ಸಂವೇದನೆ ಮತ್ತು ಗ್ರಹಿಕೆಗಳನ್ನು ರೂಪಿಸುವಲ್ಲಿ ಪಡೆದುಕೊಳ್ಳುವ ವಿಭಿನ್ನ ಆಯಾಮಗಳನ್ನು ಕುರಿತು ವಿಶ್ಲೇಷಿಸುವುದು.

ಇ. ನಿರ್ದಿಷ್ಟ ಸಾಹಿತ್ಯ ಚಳವಳಿ ಅಥವಾ ನಿರ್ದಿಷ್ಟ ಕಾಲಘಟ್ಟದ ಸಾಹಿತ್ಯದೊಂದಿಗೆ ಸಮೀಕರಣಗೊಂಡಿರುವ ಸಾಹಿತ್ಯ ವಿಮರ್ಶಾ ರೂಪಕ್ಕೆ ಪ್ರಾಪ್ತವಾದ ವಿಶೇಷ ಅವಕಾಶಗಳು ಮತ್ತು ಸಮಸ್ಯೆಗಳ ಸ್ವರೂಪವನ್ನು ಕುರಿತು ಪರಿಶೋಧಿಸುವುದು.

ಈ. ಕನ್ನಡ ಸಾಹಿತ್ಯ ವಿಮರ್ಶೆಯನ್ನು ಕಟ್ಟಿದ, ಬೆಳೆಸಿದ ಮತ್ತು ಹೊಸ ಪರಿವರ್ತನೆಗಳಿಗೆ ಕಾರಣರಾದ ಶ್ರೇಷ್ಠ ವಿಮರ್ಶಕರ ಸಾಧನೆ ಹಾಗೂ ಸಮಸ್ಯೆಗಳನ್ನು ಅಭ್ಯಸಿಸುವುದು

ಉ. ಸಾಹಿತ್ಯಕ, ಸಾಂಸ್ಕೃತಿಕ ಮತ್ತು ತಾತ್ವಿಕ ಪ್ರಭಾವಗಳು ವಿಮರ್ಶೆಯ ವಸ್ತು, ಆಶಯ ಮತ್ತು ಆಕೃತಿಗಳ ಸಂಬಂಧದಲ್ಲಿ ಸೃಷ್ಟಿಸುವ ದ್ವಂದ್ವಾತ್ಮಕ ವಿನ್ಯಾಸಗಳನ್ನು ವಿಶ್ಲೇಷಿಸುವುದು.

ಊ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಸಮಾಜ, ಸಂಸ್ಕೃತಿ, ರಾಜಕಾರಣ, ಆರ್ಥಿಕತೆ, ಭಾಷೆ, ಸಾಹಿತ್ಯ, ಧರ್ಮ, ಚರಿತ್ರೆ ಮತ್ತು ಪರಿಸರ ಮೊದಲಾದವುಗಳ ಪ್ರಶ್ನೆಗಳನ್ನು ಎದುರುಗೊಂಡಿರುವ ಸ್ವರೂಪದ ದ್ವಂದ್ವಾತ್ಮಕ ಹಾಗೂ ಸಂಕೀರ್ಣಾತ್ಮಕ ವಿನ್ಯಾಸಗಳನ್ನು ಕುರಿತು ವಿವೇಚಿಸುವುದು.

ಹೀಗೆ, ಇನ್ನು ಹಲವು ಕ್ರಮಗಳಲ್ಲಿ ಆಳವಾದ ಅಧ್ಯಯನ ಮಾಡುವ ಅಪಾರ ಅವಕಾಶ ಮತ್ತು ಸಾಧ್ಯತೆಗಳಿವೆ.

೧.೪ ಅಧ್ಯಯನದ ಉದ್ದೇಶ

ಇಪ್ಪತ್ತನೆಯ ಶತಮಾನದ ಆಧುನಿಕ ಕನ್ನಡ ಸಾಹಿತ್ಯದಂತೆಯೆ, ವಿಮರ್ಶೆಯನ್ನು ಸಹ ನವೋದಯ, ನವ್ಯ ಮತ್ತು ನವ್ಯೋತ್ತರ ಅಥವಾ ದಲಿತ–ಬಂಡಾಯ ಎನ್ನುವ ಮೂರು ಪ್ರಮುಖ ಪ್ರಕಾರಗಳು ಹಾಗೂ ಕಾಲಘಟ್ಟಗಳ ರೂಪದಲ್ಲಿ ಗುರುತಿಸಲಾಗಿದೆ. ಚಾರಿತ್ರಿಕ, ಸಾಹಿತ್ಯಕ ಮತ್ತು

ಸಾಂಸ್ಕೃತಿಕ ದೃಷ್ಟಿಕೋನ ಈ ವರ್ಗೀಕರಣದ ಹಿಂದಿರುವ ಮುಖ್ಯ ಪ್ರೇರಣೆಯಾಗಿದೆ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯು, ಕನ್ನಡದ ಈ ಪ್ರಮುಖ ಸಾಹಿತ್ಯ ಚಳವಳಿಗಳ ಉದ್ದೇಶ, ಧೋರಣೆ ಮತ್ತು ಆಶಯಗಳನ್ನು ವಿವರಿಸುವ, ವಿಶ್ಲೇಷಿಸುವ, ಸಮರ್ಥಿಸುವ ಮತ್ತು ಪ್ರತಿಪಾದಿಸುವ ಪ್ರಮುಖ ಸಾಧನವಾಗಿ ರೂಪುಗೊಂಡಿರುವುದು ಅದರ ಸಾಮಾನ್ಯ ಚಹರೆಯಾಗಿದೆ. ಇಷ್ಟಾದರೂ ಸಹ, ನಿರ್ದಿಷ್ಟ ಸಾಹಿತ್ಯ ಚಳವಳಿಯ ಅಧೀನತೆ ಮತ್ತು ಅನುವರ್ತನತೆಯನ್ನು ಮೀರುವ ವಿಶಿಷ್ಟ ಪ್ರಜ್ಞೆ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಆರಂಭದಿಂದಲೂ ವಿವಿಧ ಸ್ವರೂಪ, ಪ್ರಮಾಣ ಮತ್ತು ವಿನ್ಯಾಸಗಳಲ್ಲಿ ಮುಂದುವರೆದುಕೊಂಡು ಬಂದಿದೆ. ಈ ವಿದ್ಯಮಾನ ನವ್ಯೋತ್ತರ ಅಥವಾ ದಲಿತ–ಬಂಡಾಯ ಕಾಲಘಟ್ಟದ ವಿಮರ್ಶೆಯ ಸಂದರ್ಭದಲ್ಲಿ ಹೆಚ್ಚು ತೀವ್ರತೆ, ವ್ಯಾಪಕತೆ ಮತ್ತು ಸ್ಪಷ್ಟತೆಯನ್ನು ಪಡೆದುಕೊಂಡಿದೆ.

ದಲಿತ ಮತ್ತು ಬಂಡಾಯ ಸಾಹಿತ್ಯ ವಿಮರ್ಶೆಗಳು ನವ್ಯ ವಿಮರ್ಶೆಯ ಶುದ್ಧ ಸಾಹಿತ್ಯಕತೆ ಮತ್ತು ಅತಿತಾಂತ್ರಿಕತೆಯನ್ನು ತೀವ್ರವಾಗಿ ವಿರೋಧಿಸಿ ಹುಟ್ಟಿಕೊಂಡವು. ನವ್ಯದ ಅಸಾಮಾಜಿಕ ಮತ್ತು ಅಚಾರಿತ್ರಿಕ ವಿಮರ್ಶಾ ದೃಷ್ಟಿಕೋನಕ್ಕೆ ಬದಲಾಗಿ, ಸಾಹಿತ್ಯವನ್ನು ಅದು ಸೃಷ್ಟಿಯಾಗುವ ಸಮಾಜ, ಚರಿತ್ರೆ ಮತ್ತು ಸಂಸ್ಕೃತಿ ಸಂದರ್ಭದಲ್ಲಿ ಅರಿಯಬೇಕು ಎನ್ನುವುದು ದಲಿತ ಮತ್ತು ಬಂಡಾಯ ವಿಮರ್ಶೆಯ ಪ್ರಧಾನ ಕಾಳಜಿ. ಸಾಹಿತ್ಯದ ಕಲಾತ್ಮಕತೆಯ ಪ್ರಶ್ನೆಗಿಂತ, ಅದರ ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳು ಈ ವಿಮರ್ಶೆಗಳ ಮುಖ್ಯ ಆಸಕ್ತಿಗಳಾದವು. ಸಾಮಾಜಿಕ ವಿಮರ್ಶೆ, ಸಮಾಜವಾದಿ ವಿಮರ್ಶೆ ಮತ್ತು ಎಡಪಂಥೀಯ ವಿಮರ್ಶೆಯ ವಿವಿಧ ರೂಪಗಳಲ್ಲಿ ಪ್ರಕಟವಾಗಿರುವ ದಲಿತ ಮತ್ತು ಬಂಡಾಯ ವಿಮರ್ಶೆಗಳು ವಿಮರ್ಶೆಯ ವಿಧಾನ, ಪರಿಕರ ಮತ್ತು ಕಾರ್ಯಮಾದರಿಗಳಲ್ಲಿ ಹಲವು ಮಹತ್ವದ ಪಲ್ಲಟಗಳನ್ನು ಉಂಟುಮಾಡಿದವು. ಇಷ್ಟಾದರೂ, ಈ ವಿಮರ್ಶೆಗಳು ಸಾಹಿತ್ಯ ಮತ್ತು ಸಂಸ್ಕೃತಿ ಪಠ್ಯಗಳನ್ನು ಕುರಿತು ತಾಳಿದ ಶುದ್ಧ ಸಾಮಾಜಿಕತೆ ಮತ್ತು ಆರ್ಥಿಕನಿಷ್ಠತೆ ದೃಷ್ಟಿಕೋನಗಳ ಕಾರಣದಿಂದ, ಕನ್ನಡ ಸಾಹಿತ್ಯ ವಿಮರ್ಶೆಯ ಸೂಕ್ಷ್ಮ ಸಂವೇದನಾಶೀಲತೆ ಮತ್ತು ಗ್ರಹಿಕೆಯ ವಿಶಿಷ್ಟ ಸಾಧ್ಯತೆಗಳು ಮೊನಚು ಕಳೆದುಕೊಂಡವು. ಆದರೆ, ಇದೇ ಕಾಲಘಟ್ಟದಲ್ಲಿ ನವ್ಯದ ಶುದ್ಧ ಸಾಹಿತ್ಯಕತೆ, ದಲಿತದ ಶುದ್ಧ ಸಾಮಾಜಿಕತೆ ಮತ್ತು ಬಂಡಾಯದ ಶುದ್ಧ ಆರ್ಥಿಕನಿಷ್ಠತೆ ಪ್ರಶ್ನೆಗಳ ಬದಲು, ಸಾಹಿತ್ಯವನ್ನು ಈ ಎಲ್ಲಾ ಆಯಾಮಗಳ ಸಂಶ್ಲೇಷಕ ವಿಧಾನದಲ್ಲಿ ಅರಿಯುವ ಮತ್ತು ವಿಶ್ಲೇಷಿಸುವ ವಿಮರ್ಶಾಕ್ರಮ ಹೆಚ್ಚು ಮುನ್ನೆಲೆಗೆ ಬಂದಿತು.

ಈ ವಿಮರ್ಶಾ ಪ್ರಕಾರಗಳ ಮುಖ್ಯ ವಿಚಾರಗಳನ್ನು ಕನ್ನಡ ಸಾಹಿತ್ಯ ವಿಮರ್ಶೆಯ ವಿವೇಕದೊಂದಿಗೆ ಬೆಸೆಯುವ ಪ್ರಜ್ಞೆ ಹೆಚ್ಚು ಪ್ರಾಮುಖ್ಯತೆ ಗಳಿಸಿಕೊಂಡಿತು. ಸಾಹಿತ್ಯದ ಕಲಾತ್ಮಕತೆಯ

ಸ್ವರೂಪಕ್ಕೆ ಧಕ್ಕೆ ತಾರದೆ ಸಾಹಿತ್ಯವನ್ನು ಸಮಾಜ, ಸಂಸ್ಕೃತಿ, ಭಾಷೆ, ರಾಜಕಾರಣ, ಧರ್ಮ, ಪರಿಸರ, ಚರಿತ್ರೆ ಮತ್ತು ಆರ್ಥಿಕ ವ್ಯವಸ್ಥೆ ಮೊದಲಾದವುಗಳ ಪರಿಪ್ರೇಕ್ಷ್ಯದಲ್ಲಿ ವಿಶ್ಲೇಷಿಸುವ ಪ್ರವೃತ್ತಿ ಹೆಚ್ಚು ಚಾಲನೆ ಪಡೆದುಕೊಂಡಿತು. ಸಾಹಿತ್ಯ ವಿಮರ್ಶೆಯ ಉದ್ದೇಶ ಮತ್ತು ಕಾರ್ಯಮಾದರಿಗಳಲ್ಲಿ ಅರ್ಥಪೂರ್ಣ ವಿಸ್ತರಣೆಯಾಯಿತು. ವಿಮರ್ಶೆಯ ವಿಧಾನಗಳು, ಪರಿಕರಗಳು ಹಾಗೂ ಸಾಧನಗಳಲ್ಲಿ ಹೊಸ ಮಾದರಿಗಳು ರೂಢಿಗೆ ಬಂದವು. ಹೀಗೆ, ಈ ಕಾಲಘಟ್ಟದಲ್ಲಿ ಹೊಸ ವಿಮರ್ಶಾ ವಿಧಾನವೊಂದು ಮುನ್ನೆಲೆಗೆ ಬರುವ ಮೂಲಕ ಸಮಕಾಲೀನ ಘಟ್ಟದವರೆಗೆ ವಿಕಾಸಗೊಳ್ಳುತ್ತಾ ಬಂದಿರುತ್ತದೆ. ಈ ವಿಮರ್ಶೆಯ ಸ್ವರೂಪವನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡುವುದು ನನ್ನ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ 'ಕನ್ನಡ ಸಂಸ್ಕೃತಿ ವಿಮರ್ಶೆ', 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಮತ್ತು 'ಕನ್ನಡ ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆ' ಮೊದಲಾದ ಪರಿಕಲ್ಪನೆಗಳನ್ನು ಸಾಮಾನ್ಯವಾಗಿ ಬಳಸಲಾಗುತ್ತಿದೆ. ಇವುಗಳನ್ನು ಕೆಲವೊಮ್ಮೆ ನಿರ್ದಿಷ್ಟ ಉದ್ದೇಶ ಮತ್ತು ಅರ್ಥದಲ್ಲಿ ಬಳಸುತ್ತಿರುವಂತೆ ಮತ್ತು ಬಹಳಷ್ಟು ಸಲ ಹಾಗೆ ಯಾವುದೇ ನಿರ್ದಿಷ್ಟ ಎಚ್ಚರವಿಲ್ಲದೆ ಸಾಮಾನ್ಯ ಪರಿಭಾಷೆಯಾಗಿ ಉಪಯೋಗಿಸುತ್ತಿರುವಂತೆ ಕಂಡು ಬರುತ್ತದೆ. ಕಳೆದ ಶತಮಾನದ ಕೊನೆಯ ಎರಡು ದಶಕದಿಂದ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮುನ್ನೆಲೆಗೆ ಬಂದ ಈ ಪ್ರವೃತ್ತಿಯು ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆಗಳ ಪ್ರಮುಖ ತಾತ್ವಿಕತೆಯಾಗಿ ಮಾರ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ಇಂದಿನ ಸಾಹಿತ್ಯ ವಿಮರ್ಶೆಯನ್ನು ' ಕನ್ನಡ ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆ' ಅಥವಾ 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಎಂದು ಭಾವಿಸಿಕೊಂಡಿರುವಂತೆ ಮತ್ತು ಒಪ್ಪಿಕೊಂಡಿರುವಂತೆ ಕಂಡುಬರುತ್ತದೆ.

ಈ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಅರಿಯುವುದು ನನ್ನ ಈ ಅಧ್ಯಯನದ ಪ್ರಧಾನ ಉದ್ದೇಶ. ಅಧ್ಯಯನವನ್ನು ಮುಂದಿನ ಸ್ವರೂಪದಲ್ಲಿ ಮಾಡಲಾಗುವುದು.

೧.೪.೧ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಪರಿಶೀಲನೆ

ಸ್ವಾತಂತ್ರ್ಯೋತ್ತರ ಕಾಲಘಟ್ಟದ ಕರ್ನಾಟಕದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ರಂಗದಲ್ಲಿ ಉಂಟಾದ ಬದಲಾವಣೆಗಳು ಹಾಗೂ ಬೆಳವಣಿಗೆಗಳಿಗೂ, ಕನ್ನಡ ಸಾಹಿತ್ಯ ಮತ್ತು ವಿಮರ್ಶೆಗೂ ನೇರ ಸಂಬಂಧವಿದೆ. ವಿವಿಧ ಬಗೆಯ ಸಾಮಾಜಿಕ ಚಳವಳಿಗಳು, ರಾಜಕೀಯ ಹೋರಾಟಗಳು ಹಾಗೂ ಸಾಂಸ್ಕೃತಿಕ ಆಂದೋಲನಗಳು ಈ ಕಾಲಘಟ್ಟದ ಕರ್ನಾಟಕದ ಸಂದರ್ಭದಲ್ಲಿನ ವಿಶಿಷ್ಟವಾದ ಬೆಳವಣಿಗೆ. ಇವುಗಳೊಂದಿಗೆ, ಇದೇ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯದಲ್ಲಿ ತಲೆದೋರಿದ ಎರಡು ಪ್ರಮುಖ ಸಾಹಿತ್ಯ ಚಳವಳಿಗಳು ಅತ್ಯಂತ

ಮಹತ್ವಪೂರ್ಣವಾದವು. ಇವುಗಳ ಪ್ರಭಾವದಿಂದ ಮೊಟ್ಟ ಮೊದಲ ಬಾರಿಗೆ ಸಮಾಜದ ಹಲವು ಅಜ್ಞಾತ, ದಮನಿತ ಮತ್ತು ನಿರ್ಲಕ್ಷಿತ ಸಮುದಾಯಗಳ ಮೊದಲ ತಲೆಮಾರಿನ ಅಕ್ಷರಸ್ಥರು ತಮ್ಮ ಬರವಣಿಗೆಯ ಮೂಲಕ ಕನ್ನಡ ಸಾಹಿತ್ಯ ಹಾಗೂ ವಿಮರ್ಶೆಯನ್ನು ಕುರಿತ ಹೊಸ ವ್ಯಾಖ್ಯಾನ ಹಾಗೂ ನಿರೂಪಣೆಗಳನ್ನು ಮಾಡಿದರು.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಾಹಿತ್ಯ ಸಿದ್ಧಾಂತಗಳು, ಸಂಸ್ಕೃತಿ ಸಿದ್ಧಾಂತಗಳು, ವಿಮರ್ಶಾ ತತ್ವಗಳು ಹಾಗೂ ವಿವಿಧ ವೈಚಾರಿಕ ತತ್ವವಾದಗಳು ಸಾಕಷ್ಟು ದಟ್ಟವಾದ ಪ್ರಭಾವ ಬೀರಿರುವುದನ್ನು ಕಾಣಬಹುದು. ಇದರೊಂದಿಗೆ ಪಾಶ್ಚಾತ್ಯ, ಭಾರತೀಯ ಮತ್ತು ಕರ್ನಾಟಕದ ಅನೇಕ ಮಹತ್ವಪೂರ್ಣ ಚಿಂತಕರ, ವಿಚಾರವಾದಿಗಳ ಆಲೋಚನೆಗಳು ಸಹ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ತಾತ್ವಿಕ ಸ್ವರೂಪವನ್ನು ತೀವ್ರವಾಗಿ ಪಲ್ಲಟಗೊಳಿಸಿವೆ. ಬಹಳ ಮುಖ್ಯವಾಗಿ ಶತಮಾನದ ಕೊನೆಯ ಘಟ್ಟದ ವೇಳೆಗೆ ಕರ್ನಾಟಕವೂ ಒಳಗೊಂಡಂತೆ, ಒಟ್ಟಾರೆ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಪ್ರಥಮ ಜಗತ್ತಿನ ರಾಷ್ಟ್ರ ಜಾರಿಗೊಳಿಸಿದ ರಾಜಕೀಯಾರ್ಥಿಕ ಸಿದ್ಧಾಂತಗಳು ಮತ್ತು ಅವುಗಳ ವಿವಿಧ ಸಾಂಸ್ಕೃತಿಕ ಪ್ರಮೇಯಗಳು ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ ಖಚಿತ ರೂಪ ಪಡೆದುಕೊಳ್ಳಲು ಪ್ರಮುಖ ಕಾರಣವಾಗಿದೆ.

ಈ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಈ ಅಧ್ಯಯನದ ಸಂದರ್ಭದಲ್ಲಿ ಸೂಕ್ತವಾಗಿ ವಿವೇಚಿಸಲಾಗುವುದು.

೧.೪.೨ ವಿಮರ್ಶೆಯ ಸ್ಥಿತ್ಯಂತರದ ಅವಲೋಕನ

ನವ್ಯೋತ್ತರದ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಉದ್ದೇಶಗಳು, ಕಾರ್ಯಮಾದರಿಗಳು, ವಿಧಾನಗಳು, ಪರಿಕರಗಳು ಮತ್ತು ತಂತ್ರಗಳಲ್ಲಿ ತೀವ್ರವಾದ ಪಲ್ಲಟಗಳಾದವು. ಸಾಹಿತ್ಯದ ಸ್ವರೂಪ, ಪ್ರಯೋಜನಗಳನ್ನು ಕುರಿತ ಧೋರಣೆಗಳು ಮತ್ತು ನಿಲುವುಗಳಲ್ಲಿ ಉಂಟಾದ ವ್ಯಾಪಕ ಬದಲಾವಣೆಗಳಿಂದ ವಿಮರ್ಶೆಯ ಮೂಲ ಪರಿಕಲ್ಪನೆಗಳು, ದೃಷ್ಟಿಕೋನಗಳು ಮತ್ತು ಗ್ರಹಿಕೆಗಳಲ್ಲೂ ಅನೇಕ ವ್ಯತ್ಯಾಸಗಳಾದವು. ಸಮಾಜ, ಸಂಸ್ಕೃತಿ, ರಾಜಕಾರಣ ಕುರಿತು ರೂಪುಗೊಂಡ ಹೊಸ ಆಲೋಚನೆಗಳು ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಪ್ರಶ್ನೆಗೊಳಪಡಿಸಿದವು.

ಹೀಗೆ, ಕನ್ನಡ ಸಾಹಿತ್ಯ ವಿಮರ್ಶೆ ನವ್ಯೋತ್ತರ ಕಾಲಘಟ್ಟದಲ್ಲಿ ಆವರೆಗಿನ ಕನ್ನಡ ವಿಮರ್ಶೆಗಿಂತ ಭಿನ್ನವಾದ ಸ್ವರೂಪ ಹಾಗೂ ಆಯಾಮಗಳನ್ನು ಪಡೆದುಕೊಂಡಿತು. ಈ ಸ್ಥಿತ್ಯಂತರದ ಸ್ವರೂಪ ಕುರಿತು ಆ ಅಧ್ಯಯನದಲ್ಲಿ ವಿಶ್ಲೇಷಿಸಲಾಗುವುದು.

೧.೪.೩ ಇದುವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ವಿಶ್ಲೇಷಣೆ

ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತು ನಡೆದಿರುವ ಅಧ್ಯಯನಗಳು, ಅವುಗಳ ಸ್ವರೂಪಗಳು, ಮಹತ್ವಗಳು ಮತ್ತು ಸಮಸ್ಯೆಗಳನ್ನು ಕುರಿತು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು.

೧.೪.೪ಸಾಂಸ್ಕೃತಿಕ ವಿಮರ್ಶೆಯ ಸ್ವರೂಪದ ಚಿಂತನೆ

ಸಾಹಿತ್ಯ ವಿಮರ್ಶೆಯ ಸಾಮಾನ್ಯ ಸ್ವರೂಪಕ್ಕಿಂತ ಸಾಂಸ್ಕೃತಿಕ ವಿಮರ್ಶೆಯ ಸ್ವರೂಪ ಹೇಗೆ ಭಿನ್ನವಾಗಿದೆ ಮತ್ತು ವಿಶಿಷ್ಟವಾಗಿದೆ ಎನ್ನುವುದನ್ನು ಕುರಿತು ಚಿಂತಿಸಲಾಗುವುದು. ಸಾಹಿತ್ಯ ಕೃತಿಗಳು, ಸಾಹಿತ್ಯ ಪರಂಪರೆಗಳು ಮತ್ತು ಸಂಸ್ಕೃತಿ ಪಠ್ಯಗಳನ್ನು ಗ್ರಹಿಸುವ, ಪರಿಭಾವಿಸುವ ಕ್ರಮದಲ್ಲಿ ಸಾಂಸ್ಕೃತಿಕ ವಿಮರ್ಶೆ ಯಾವ ವಿಧಾನ ಮತ್ತು ದೃಷ್ಟಿಕೋನವನ್ನು ಅನುಸರಿಸುತ್ತದೆ. ಸಾಂಪ್ರದಾಯಕ ವಿಮರ್ಶಾ ಕ್ರಮಕ್ಕಿಂತ ಇದು ಯಾವ ನೆಲೆಗಳಲ್ಲಿ ಬೇರೆಯಾಗಿದೆ. ವಿಮರ್ಶೆಯ ಆಸಕ್ತಿ, ಕಾಳಜಿ ಮತ್ತು ಹೊಣೆಗಾರಿಕೆಗಳ ವಿಚಾರದಲ್ಲಿ ಸಾಂಸ್ಕೃತಿಕ ವಿಮರ್ಶೆಯ ಧೋರಣೆಗಳೇನು ಎನ್ನುವ ಸಂಗತಿಗಳನ್ನು ಕುರಿತು ಚರ್ಚಿಸುವುದು ಈ ಅಧ್ಯಯನದ ಒಂದು ಮಹತ್ವದ ಉದ್ದೇಶವಾಗಿದೆ.

೧.೪.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಕಲ್ಪನಾತ್ಮಕ ಚರ್ಚೆ

ಇಂದು 'ಸಂಸ್ಕೃತಿ ವಿಮರ್ಶೆ', 'ಸಂಸ್ಕೃತಿ ನಿಷ್ಠ ವಿಮರ್ಶೆ', 'ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆ' ಮತ್ತು 'ಸಾಂಸ್ಕೃತಿಕ ವಿಮರ್ಶೆ', ಹೀಗೆ ಹಲವು ರೂಪಗಳಲ್ಲಿ ಗುರುತಿಸಲಾಗುತ್ತಿರುವ 'ಕನ್ನಡ ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆ' ಅಥವಾ ' ಕನ್ನಡ ಸಾಂಸ್ಕೃತಿಕ ವಿಮರ್ಶೆಯ' ಸ್ವರೂಪವೇನು ಎನ್ನುವುದನ್ನು ಪರಿಶೀಲಿಸುವುದು ಈ ಅಧ್ಯಯದ ಒಂದು ಪ್ರಧಾನವಾದ ಉದ್ದೇಶ. ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ ಯಾವ ನೆಲೆಗಳಲ್ಲಿ ಮತ್ತು ವಿನ್ಯಾಸಗಳಲ್ಲಿ ಪ್ರಕಟವಾಗಿದೆ. ಇದೊಂದು ನೋಟ ಕ್ರಮವೇ, ದೃಷ್ಟಿಕೋನವೇ, ಆಲೋಚನಾ ಮಾದರಿಯೇ ಗ್ರಹಿಕೆಯ ವಿಧಾನವೇ, ಓದಿನ ಹೊಸ ರೂಪವೇ, ಹೊಸ ವಿಮರ್ಶಾ ಪ್ರಕಾರವೇ ಅಥವಾ ಕನ್ನಡ ಸಾಹಿತ್ಯ ವಿಮರ್ಶೆಗೆ ಸಮಕಾಲೀನ ಸಂದರ್ಭದಲ್ಲಿ ನೀಡುತ್ತಿರುವ ಹೊಸ ಹೆಸರೇ ಎನ್ನುವ ಪ್ರಶ್ನೆಗಳನ್ನು ಕುರಿತು ವಿವೇಚಿಸಲಾಗುವುದು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ನಿರ್ವಚಿಸುವುದು ಈ ಉದ್ದೇಶದ ಒಂದು ಮುಖ್ಯ ಭಾಗ. ವಿವಿಧ ವಿಮರ್ಶಕರು ಯಾವ ಬಗೆಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ವ್ಯಾಖ್ಯಾನಿಸಿದ್ದಾರೆ ಎನ್ನುವುದನ್ನು ಕುರಿತು ಪರಿಶೀಲಿಸಲಾಗುವುದು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ರೂಪರೇಷೆಗಳನ್ನು ಅಥವಾ ಚಹರೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು. ಈ ವಿಮರ್ಶೆಯ ವಿಶಿಷ್ಟವಾದ ವಿಧಾನಗಳು ಯಾವುವು ಎನ್ನುವುದನ್ನು ಕುರಿತು ಆಲೋಚಿಸಲಾಗುವುದು. ಇದರೊಂದಿಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ

ಮಾದರಿಗಳನ್ನು ಕುರಿತು ಚರ್ಚಿಸಲಾಗುವುದು. ಪಾಶ್ಚಾತ್ಯ ಮತ್ತು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸ್ವರೂಪ ಕುರಿತು ತೌಲನಿಕ ವಿವೇಚನೆ ಈ ಅಧ್ಯಯನದ ಉದ್ದೇಶಗಳಲ್ಲಿ ಸೇರಿರುವ ಒಂದು ಮುಖ್ಯ ಸಂಗತಿಯಾಗಿದೆ.

೧.೪.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಯಾಮಗಳ ವಿಶ್ಲೇಷಣೆ

ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯ ಮಾತ್ರವಲ್ಲದೆ, ಸಾಹಿತ್ಯೇತರ ಸಂಗತಿಗಳು ಮತ್ತು ಸೃಜನೇತರ ಪ್ರಕಾರಗಳನ್ನು ಹೇಗೆ ಅರ್ಥೈಸುತ್ತದೆ, ಸಾಹಿತ್ಯದ ಸಾಹಿತ್ಯಕ ಮತ್ತು ಕಲಾತ್ಮಕ ಸಂಗತಿಗಳ ಜೊತೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಭಾಷಿಕ ಮೊದಲಾದ ವಿಚಾರಗಳನ್ನು ಪರಿಭಾವಿಸುವ ಸ್ವರೂಪವೇನು, ಸಾಹಿತ್ಯದ ಸದ್ಯಕಾಲೀನ ಮತ್ತು ಸಾರ್ವಕಾಲೀನ ಆಯಾಮಗಳೊಂದಿಗೆ ಸಮಕಾಲೀನ ಸಂದರ್ಭದ ಬದುಕಿನ ಮುಖ್ಯ ಪ್ರಶ್ನೆಗಳನ್ನು ಹೇಗೆ ಮುಖಾಮುಖಿಯಾಗುತ್ತದೆ ಎನ್ನುವುದನ್ನು ಕುರಿತು ಅನುಸಂಧಾನ ಮಾಡುವುದು ಈ ಅಧ್ಯಯನದ ಇನ್ನೊಂದು ಮುಖ್ಯ ಉದ್ದೇಶ. ಈ ಉದ್ದೇಶದ ಭಾಗವಾಗಿ ಕನ್ನಡ ಸಾಹಿತ್ಯ ವಿಮರ್ಶೆಯ ಬಹುರೂಪಿ ಆಯಾಮಗಳನ್ನು ಕುರಿತು ಚರ್ಚಿಸಲಾಗುವುದು.

೧.೪.೭ ಸಮಸ್ಯೆಗಳ ವಿಶ್ಲೇಷಣೆ

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳು ಯಾವುವು, ಅವುಗಳ ಸ್ವರೂಪವೇನು, ಇದರಿಂದ ಸಾಹಿತ್ಯ ವಿಮರ್ಶೆಗೆ ಎದುರಾಗಿರುವ ಆತಂಕಗಳೇನು ಮತ್ತು ಇವುಗಳಿಗೆ ಕಾರ್ಯಸಾಧ್ಯ ಪರಿಹಾರಗಳು ಇವೆಯೇ ಎನ್ನುವ ಕುರಿತು ಅಧ್ಯಯನ ಮಾಡುವುದು ಕೂಡಾ ಈ ಸಂಶೋಧನೆಯ ಒಂದು ಪ್ರಮುಖ ಉದ್ದೇಶ. ಈ ಸಮಸ್ಯೆಗಳು ಸಾಹಿತ್ಯ ಕುರಿತ ವಿಮರ್ಶೆಯ ದೃಷ್ಟಿಕೋನದಲ್ಲಿ ಇವೆಯೇ, ಸಾಹಿತ್ಯವನ್ನು ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡಿರುವ ವಿಧಾನದಲ್ಲಿವೆಯೇ, ಸಾಹಿತ್ಯೇತರ ಶಿಸ್ತುಗಳ ಜ್ಞಾನಮೀಮಾಂಸೆಯನ್ನು ಸಾಹಿತ್ಯ ಮತ್ತು ಸಂಸ್ಕೃತಿ ಪಠ್ಯಗಳ ಮೇಲೆ ಪ್ರಯೋಗಿಸುವ ಕ್ರಮದಿಂದ ಉದ್ಭವವಾಗಿವೆಯೆ ಇಲ್ಲವೇ ಸಮಕಾಲೀನ ಪರಿಸರ ಮತ್ತು ಬದುಕಿನ ಮೂರ್ತ ವಿದ್ಯಮಾನಗಳನ್ನು ಸಾಹಿತ್ಯದ ಅಮೂರ್ತ ಜಗತ್ತಿನೊಂದಿಗೆ ಅನ್ವಯಿಸುವ ವಿಧಾನದಿಂದ ಹುಟ್ಟಿಕೊಳ್ಳುತ್ತಿವೆಯೇ ಎನ್ನುವ ಬಹುಮುಖ್ಯ ಸಮಸ್ಯೆಗಳನ್ನು ಚರ್ಚಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

೧.೪.೮ ಅಧ್ಯಯನದ ಪ್ರಮುಖ ಫಲಿತಗಳು ಮತ್ತು ಅಧ್ಯಯನದ ಹೊಸ ಸಾಧ್ಯತೆಗಳು

ಇದು ಈ ಅಧ್ಯಯನದ ಕೊನೆಯ ಮತ್ತು ಪ್ರಮುಖ ಉದ್ದೇಶವಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಈ ಸಂಶೋಧನಾತ್ಮಕ ಅಧ್ಯಯನದಿಂದ ಕಂಡುಕೊಂಡ ಪ್ರಮುಖ ಫಲಿತಗಳನ್ನು ಇಲ್ಲಿ ನೀಡಲಾಗುವುದು. ಅಧ್ಯಯನಕ್ಕಾಗಿ ರೂಪಿಸಿಕೊಂಡಿರುವ

ಪ್ರತಿಯೊಂದು ಅಧ್ಯಾಯದ ಚರ್ಚೆಯ ಮೂಲಕ ಶೋಧಿತವಾದ ಹೊಸ ವಿಚಾರಗಳ ಸ್ವರೂಪವನ್ನು ಫಲಿತದ ರೂಪದಲ್ಲಿ ಕಟ್ಟಿಕೊಡಲಾಗುವುದು.

ಇದರೊಂದಿಗೆ, ಈ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯ ಚೌಕಟ್ಟಿನ ಆಚೆಗೆ ಅಧ್ಯಯನ ಮಾಡಲು ಇರುವ ಅವಕಾಶಗಳು, ಸಾಧ್ಯತೆಗಳು, ಅಧ್ಯಯನದ ಸ್ವರೂಪಗಳು ಮತ್ತು ವಿಧಾನಗಳನ್ನು ಕುರಿತ ಸಂಕ್ಷಿಪ್ತ ವಿವರವನ್ನು ನೀಡುವುದು ಸಹ ಈ ಅಧ್ಯಯನದ ಮುಖ್ಯ ಉದ್ದೇಶಗಳಲ್ಲಿ ಒಂದು.

೧.೫ ಅಧ್ಯಯನದ ವ್ಯಾಪ್ತಿ

ಅಧ್ಯಯನದ ವ್ಯಾಪ್ತಿಯನ್ನು ನಿರ್ದಿಷ್ಟ ವಿಧಾನ ಅನುಸರಿಸಿ ನಿಗದಿಪಡಿಸಿಕೊಳ್ಳಲಾಗಿದೆ. ಈ ಅಧ್ಯಯನವು, ನಿರ್ದಿಷ್ಟ ಕಾಲಘಟ್ಟದ ಅವಧಿಯೊಳಗೆ ಸಾಹಿತ್ಯ ವಿಮರ್ಶೆಯ ರಚನೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು, ಬೆಳವಣಿಗೆಗಳು ಮತ್ತು ಸಮಸ್ಯೆಗಳನ್ನು ಕುರಿತ ಅಧ್ಯಯನವಾಗಿದೆ. ಸಾಹಿತ್ಯ ವಿಮರ್ಶೆಯ ಉದ್ದೇಶ, ಸ್ವರೂಪ, ವಿಧಾನ, ಸಾಧನ ಮತ್ತು ಕಾರ್ಯಮಾದರಿಗಳಲ್ಲಿ ಆಗಿರುವ ಪಲ್ಲಟಗಳನ್ನು ಕುರಿತ ವಿಶ್ಲೇಷಣೆಯಾಗಿದೆ. ವಿಮರ್ಶೆಯ ಆಸಕ್ತಿಗಳು, ಕಾಳಜಿಗಳು ಮತ್ತು ಹೊಣೆಗಾರಿಕೆಗಳ ಸ್ವರೂಪದ ಸ್ಥಿತ್ಯಂತರವು ವಿಮರ್ಶೆಯ ಗ್ರಹಿಕೆ ಮತ್ತು ತಾತ್ವಿಕತೆಯನ್ನು ಹೊಸದಾಗಿ ಕಟ್ಟಿರುವುದರ ವಿನ್ಯಾಸ ಕುರಿತ ಅನುಸಂಧಾನವಾಗಿದೆ. ಕನ್ನಡ ವಿಮರ್ಶೆಯ ಒಲವು, ಧೋರಣೆ ಮತ್ತು ಆಲೋಚನಾ ಕ್ರಮಗಳಲ್ಲಾದ ತೀವ್ರವಾದ ಸ್ಥಿತ್ಯಂತರದಿಂದ ಹೊಸ ವಿಮರ್ಶಾ ಪ್ರಕಾರವೊಂದು ರೂಪುಗೊಂಡಿರುವ ಮತ್ತು ಅದರ ಬಹುರೂಪಿ ಆಯಾಮಗಳು ಪ್ರಕಟಗೊಂಡಿರುವ ಸ್ವರೂಪ ಕುರಿತ ತಾತ್ವಿಕ ವಿವೇಚನೆಯಾಗಿದೆ.

ಈ ಕಾರಣಗಳಿಂದ ಅಧ್ಯಯನದ ವ್ಯಾಪ್ತಿಯನ್ನು ವಿಶಿಷ್ಟ ಕ್ರಮದಲ್ಲಿ ರೂಪಿಸಿಕೊಳ್ಳಲಾಗಿದೆ.

೧.೫.೧ ಕೃತಿ ಮತ್ತು ಕೃತಿಕಾರ ವ್ಯಾಪ್ತಿ

ಈ ಅಧ್ಯಯನವು, ಸಾಹಿತ್ಯ ವಿಮರ್ಶೆಯ ಹೊಸ ಪ್ರಕಾರವೊಂದನ್ನು ಕುರಿತ ಚಾರಿತ್ರಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಆಯಾಮಗಳ ಅಧ್ಯಯನವಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ನವ್ಯೋತ್ತರ ಕಾಲಘಟ್ಟದಿಂದ ಸಮಕಾಲೀನ ಕಾಲಘಟ್ಟದವರೆಗೆ ಕನ್ನಡ ವಿಮರ್ಶೆಯ ಚರಿತ್ರೆಯಲ್ಲಿ ಹೊಸದಾಗಿ ರೂಪುಗೊಂಡಿರುವ ಸಾಹಿತ್ಯ ವಿಮರ್ಶೆಯ ಪ್ರಕಾರವೊಂದನ್ನು ಕುರಿತು ತಾತ್ವಿಕ ವಿಶ್ಲೇಷಣೆಯಾಗಿದೆ. ಆದ್ದರಿಂದ, ಇಲ್ಲಿ ಯಾವುದೇ ನಿರ್ದಿಷ್ಟ ವಿಮರ್ಶಾ ಕೃತಿಗಳನ್ನು ಅಥವಾ ವಿಮರ್ಶಕರನ್ನು ಅಧ್ಯಯನದ ಆಕರಗಳನ್ನಾಗಿ ಬಳಸಿಕೊಳ್ಳುವುದು ಸಾಧ್ಯವಿಲ್ಲ. ಕನ್ನಡ ಸಾಹಿತ್ಯ ವಿಮರ್ಶೆಯ ಒಲವುಗಳು ಮತ್ತು ಪ್ರವೃತ್ತಿಗಳನ್ನು ಸ್ಥಿತ್ಯಂತರಗೊಳಿಸಿದ, ಹೊಸ ಆಸಕ್ತಿಗಳು ಹೊಣೆಗಾರಿಕೆಗಳು ಮತ್ತು ವಿಧಾನಗಳನ್ನು ಪ್ರಚುರಗೊಳಿಸಿದ ಹಾಗೂ ಆ ಮೂಲಕ ಹೊಸ ವಿಮರ್ಶಾ ಪ್ರಕಾರವೊಂದನ್ನು ಕಟ್ಟಿದ ಶ್ರೇಯಸ್ಸು ಸಾಮಾನ್ಯವಾಗಿ ಹೀಗೆ ಯಾವುದೇ ಒಂದು

ನಿರ್ದಿಷ್ಟ ಕೃತಿ ಅಥವಾ ಕೃತಿಕಾರನಿಗೆ ದೊರೆಯುವುದಿಲ್ಲ. ಇದೊಂದು ಸಾಮೂಹಿಕ ಅಥವಾ ಸಮಷ್ಟಿ ಪ್ರಯತ್ನವಾಗಿರುತ್ತದೆ. ಆದ್ದರಿಂದ, ಅಧ್ಯಯನದ ಸಂದರ್ಭದಲ್ಲಿ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ಕೃತಿ ಮತ್ತು ವಿಮರ್ಶಕರನ್ನು ಮಾತ್ರ ಪರಿಶೀಲಿಸಲಾಗುವುದು. ಇದು ಸಾಧ್ಯವಾದಷ್ಟು ಕಡಿಮೆ ಪ್ರಮಾಣದಲ್ಲಿರುತ್ತದೆ. ಆದರೆ, ಚರ್ಚೆ ಅಥವಾ ವಿಶ್ಲೇಷಣೆಗೆ ಉಪಯುಕ್ತವಾದ ಸಂಗತಿಗಳನ್ನು, ವಿಚಾರಗಳನ್ನು ವಿಮರ್ಶಾ ಕೃತಿಗಳಿಂದ ಮತ್ತು ವಿಮರ್ಶಕರಿಂದ ಪಡೆದುಕೊಳ್ಳಲಾಗುವುದು.

೧.೫.೨ ಕಾಲವ್ಯಾಪ್ತಿ

ಈ ಅಧ್ಯಯನವು ಪ್ರಧಾನವಾಗಿ ಕಾಲವ್ಯಾಪ್ತಿಯನ್ನು ಅನುಸರಿಸಿದೆ. ಕನ್ನಡ ವಿಮರ್ಶೆಯಲ್ಲಿ ಸಾಂಸ್ಕೃತಿಕ ವಿಮರ್ಶೆಯ ವಿಧಾನಗಳು ಮತ್ತು ಮಾದರಿಗಳು ಮುಖ್ಯವಾಗಿ ನವ್ಯೋತ್ತರ ಅಥವಾ ದಲಿತ–ಬಂಡಾಯ ಸಾಹಿತ್ಯ ವಿಮರ್ಶೆಗಳ ಸಂದರ್ಭದಲ್ಲಿ ಹುಟ್ಟಿ ಇಂದಿನವರೆಗೂ ಮುಂದುವರೆದುಕೊಂಡು ಬರುತ್ತಿವೆ.

ಈ ಹಿನ್ನೆಲೆಯಲ್ಲಿ, ನವ್ಯೋತ್ತರದಿಂದ ಇಂದಿನ ಆಧುನಿಕೋತ್ತರದವರೆಗೆ ಅಧ್ಯಯನದ ಕಾಲಾವಧಿಯನ್ನು ನಿಗದಿಪಡಿಸಿಕೊಳ್ಳಲಾಗಿದೆ. ಇದನ್ನು ಕನ್ನಡದ ಶ್ರೇಷ್ಠ ಲೇಖಕರಾದ ಪೂರ್ಣಚಂದ್ರ ತೇಜಸ್ವಿ ಅವರ ಎರಡು ಪ್ರಸಿದ್ಧ ಲೇಖನಗಳು ಪ್ರಕಟವಾದ ಕಾಲಾವಧಿ ಎಂದು ಸ್ಥೂಲವಾಗಿ ನಿರ್ಧರಿಸಿಕೊಳ್ಳಲಾಗಿದೆ. ಅವುಗಳಲ್ಲಿ ಮೊದಲನೆಯದು, ಅವರು ೧೯೭೩ರಲ್ಲಿ ಪ್ರಕಟಿಸಿದ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದಲ್ಲಿ ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆಯನ್ನು ತೀವ್ರವಾಗಿ ಖಂಡಿಸಿ ಹೊಸ ಸ್ವರೂಪದ ಸಾಹಿತ್ಯ ಹಾಗೂ ವಿಮರ್ಶೆಯ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿ ಬರೆದ ಮುನ್ನುಡಿಯಾದ 'ಹೊಸದಿಗಂತದೆಡೆಗೆ' ಲೇಖನ. ಇನ್ನೊಂದು, ಕನ್ನಡದ ಪ್ರಸಿದ್ಧ ವಿಮರ್ಶಕರಾದ ಚಂದ್ರಶೇಖರ ನಂಗಲಿ ಅವರಿಗೆ ಸಾಹಿತ್ಯ ಮತ್ತು ವಿಮರ್ಶೆ ಸ್ವರೂಪ ಕುರಿತು ೧೧ನೇ ಮಾರ್ಚ್ ೨೦೦೭ರಲ್ಲಿ ಬರೆದ 'ಚಂದ್ರಶೇಖರ ನಂಗಲಿಯವರಿಗೆ ಪತ್ರ' ಎನ್ನುವ ಲೇಖನ. ಇದು ಸ್ಥೂಲವಾದ ಕಾಲಾವಧಿ. ಇಷ್ಟಾದರೂ ಅಧ್ಯಯನದ ಕಾಲಾವಧಿಯು ಅಗತ್ಯಾನುಸಾರವಾಗಿ ಕೆಲವು ಕಾಲದವರೆಗೆ ಹಿಂದಕ್ಕೆ ಮತ್ತು ಮುಂದಕ್ಕೆ ಚಲಿಸುತ್ತದೆ.

ಇದರೊಂದಿಗೆ ಉದ್ದೇಶಿತ ಕಾಲಾವಧಿಯ ಅಧ್ಯಯನದ ಸಂದರ್ಭದಲ್ಲಿ, ಅಗತ್ಯಾನುಸಾರ ಆಧುನಿಕ ಕನ್ನಡ ವಿಮರ್ಶೆಯ ಪ್ರಮುಖ ವಿಮರ್ಶಕರು, ವಿಮರ್ಶಾ ಕೃತಿಗಳು ಮತ್ತು ವಿಮರ್ಶಾ ವಿಚಾರಗಳನ್ನು ಚರ್ಚೆ ಹಾಗೂ ವಿಶ್ಲೇಷಣೆಗಳಿಗಾಗಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗುವುದು. ಇದು ಮುಖ್ಯವಾಗಿ ಅಧ್ಯಯನದ ವಿಧಾನದ ಭಾಗವಾಗಿ ಬರುತ್ತದೆಯೇ ಹೊರತು, ಅಧ್ಯಯನದ ಅವಧಿಯ ವ್ಯಾಪ್ತಿಯಲ್ಲಿ ಅಲ್ಲ. ಹೀಗೆ, ಸುಮಾರು ನಾಲ್ಕು ದಶಕಗಳ ಕನ್ನಡ ಸಾಹಿತ್ಯ

ವಿಮರ್ಶೆಯನ್ನು ಅಧ್ಯಯನದ ಪ್ರಧಾನ ಕಾಲಾವಧಿಯೆಂದು ಪರಿಗಣಿಸಿದ್ದರೂ ಸಹ ಸಮಗ್ರ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಹಿನ್ನೆಲೆಯಲ್ಲಿ ಭಿತ್ತಿ ರೂಪದಲ್ಲಿ ಇರುತ್ತದೆ.

೧.೫.೩ ಆಕರ ವ್ಯಾಪ್ತಿ

ಈ ಅಧ್ಯಯನವು ಆಕರವ್ಯಾಪ್ತಿಯನ್ನು ಖಚಿತವಾಗಿ ನಿರ್ಧರಿಸಿಕೊಂಡಿದೆ. ಇದು ವಿಮರ್ಶಾ ಲೇಖನಗಳನ್ನು ಆಕರಗಳಾಗಿ ಬಳಸಿಕೊಂಡಿರುವ ಒಂದು ವಿಶಿಷ್ಟ ಸ್ವರೂಪದ ಅಧ್ಯಯನವಾಗಿದೆ. ಉದ್ದೇಶಿತ ಕಾಲವ್ಯಾಪ್ತಿಯೊಳಗೆ ಪ್ರಕಟವಾಗಿರುವ ಸಾಹಿತ್ಯ ವಿಮರ್ಶೆಯ ಲೇಖನಗಳೆ ಈ ಅಧ್ಯಯನದ ಪ್ರಧಾನ ಆಕರಗಳಾಗಿವೆ.

ಅಧ್ಯಯನದ ಆಕರಗಳಾದ ಲೇಖನಗಳ ಸಂಖ್ಯಾವ್ಯಾಪ್ತಿಯನ್ನು ಸಹ ಅನುಸರಿಸಲಾಗಿದೆ. ಈ ಅಧ್ಯಯನವು ಒಟ್ಟು ಹತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಮತ್ತು ಕೊನೆಯ ತಾಂತ್ರಿಕ ಅಧ್ಯಾಯಗಳನ್ನು ರಚಿಸುವುದಕ್ಕೆ ವಿಮರ್ಶಾ ಲೇಖನಗಳ ಅಗತ್ಯ ಇಲ್ಲ. ಇನ್ನುಳಿದ ಪ್ರಮುಖ ಅಧ್ಯಾಯಗಳನ್ನು ಮುಖ್ಯವಾಗಿ ಪ್ರಧಾನ ಆಕರಗಳನ್ನು ಬಳಸುವ ಮೂಲಕ ರೂಪಿಸಲಾಗುವುದು. ಪ್ರತಿಯೊಂದು ಅಧ್ಯಾಯಕ್ಕೂ ಸುಮಾರು ಆರರಿಂದ ಎಂಟು ಲೇಖನಗಳನ್ನು ಬಳಸಲಾಗುವುದು. ಆರಂಭದ ತಾತ್ವಿಕ ಅಥವಾ ಪರಿಕಲ್ಪನಾತ್ಮಕ ಚರ್ಚೆಯ ಅಧ್ಯಾಯಗಳಿಗೆ ಕನ್ನಡ ಸಾಹಿತ್ಯ ವಿಮರ್ಶೆ, ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳ ಕೃತಿಗಳನ್ನು ಆಕರಗಳಾಗಿ ಉಪಯೋಗಿಸಿಕೊಳ್ಳಲಾಗುವುದು. ಹೀಗೆ, ಇಡೀ ಅಧ್ಯಯನಕ್ಕೆ ಸುಮಾರು ಎಪ್ಪತ್ತ ರಿಂದ ಎಪ್ಪತ್ತೈದು ವಿಮರ್ಶಾ ಲೇಖನಗಳನ್ನು ಪ್ರಧಾನ ಆಕರಗಳಾಗಿ ಪರಿಗಣಿಸಲಾಗಿದೆ. ಆದರೆ, ಪೂರಕ ಆಕರಗಳ ವಿಷಯದಲ್ಲಿ ಹೀಗೆ ಯಾವುದೇ ಸಂಖ್ಯಾ ಪ್ರಮಾಣವನ್ನು ಖಚಿತವಾಗಿ ನಿರ್ಧರಿಸಿಕೊಂಡಿಲ್ಲ. ಇವುಗಳನ್ನು ಅಗತ್ಯತೆಯನುಸಾರ ಉಚಿತ ಕ್ರಮದಲ್ಲಿ ಆಯ್ಕೆಮಾಡಿಕೊಳ್ಳಲಾಗುವುದು.

೧.೬ ಅಧ್ಯಯನದ ವಿಧಾನ

ಸುಮಾರು ಐವತ್ತು ವರ್ಷಗಳಷ್ಟು ಕಾಲಾವಧಿಯನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ವಿಮರ್ಶೆಯ ಚರಿತ್ರೆಯಲ್ಲಿ ಇದು ಅತ್ಯಂತ ವ್ಯಾಪಕವಾದ ಅವಧಿಯಾಗಿದೆ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಒಂದು ಶತಮಾನದ ಚರಿತ್ರೆಯಲ್ಲಿ ಈ ಅವಧಿಯು ಉತ್ತರಾರ್ಧದ ಸುಮಾರು ಅರ್ಧಶತಮಾನದ ಕಾಲಮಾನವನ್ನು ಒಳಗೊಳ್ಳುತ್ತದೆ. ಇದು ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ದೃಷ್ಟಿಯಿಂದ ಮಾತ್ರವಲ್ಲದೆ, ಸಾಹಿತ್ಯೇತರ ಆಯಾಮಗಳ ದೃಷ್ಟಿಯಿಂದಲೂ ಅತ್ಯಂತ ಮಹತ್ವಪೂರ್ಣವಾದ ಅವಧಿಯಾಗಿದೆ. ಸಾಹಿತ್ಯ, ಸಮಾಜ, ಸಂಸ್ಕೃತಿ, ರಾಜಕಾರಣ, ಧರ್ಮ ಮತ್ತು ಆರ್ಥಿಕ ವಿಚಾರಗಳ ನಡುವೆ ತೀವ್ರವಾದ ಮುಖಾಮುಖಿ, ಕೊಡುಕೊಳ್ಳುವಿಕೆ ಮತ್ತು ಸಂಘರ್ಷಗಳು ನಡೆದಿರುವ ಕಾಲ ಇದು.

ಈ ಅವಧಿಯಲ್ಲಿ ಕನ್ನಡದಲ್ಲಿ ಹಲವು ಹೊಸ ವಿಮರ್ಶಾ ವಿಧಾನಗಳು ಮತ್ತು ಪ್ರಕಾರಗಳು ರೂಪುಗೊಂಡಿವೆ. ವಿಮರ್ಶೆಯ ಉದ್ದೇಶಗಳು, ಆಸಕ್ತಿಗಳು, ಸಾಧನಗಳು ಮತ್ತು ಕಾರ್ಯಮಾದರಿಗಳಲ್ಲಿ ಸ್ಥಿತ್ಯಂತರಗಳು, ಪಲ್ಲಟಗಳು ಮತ್ತು ಹೊಸ ಬೆಳವಣಿಗೆಗಳು ವ್ಯಾಪಕ ಪ್ರಮಾಣದಲ್ಲಿ ತಲೆದೋರಿವೆ. ದಲಿತ ಮತ್ತು ಬಂಡಾಯ ಸಾಹಿತ್ಯ ವಿಮರ್ಶೆಗಳ ಹಲವು ಸಾಮಾಜಿಕ, ಎಡಪಂಥೀಯ, ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ವಿಮರ್ಶಾ ರೂಪಗಳು ಹುಟ್ಟಿವೆ. ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿ ಸಿದ್ಧಾಂತಗಳು, ವೈಚಾರಿಕ ತತ್ವವಾದಗಳು ಕನ್ನಡ ಸಾಹಿತ್ಯ ವಿಮರ್ಶೆಯ ಮೇಲೆ ವ್ಯಾಪಕವಾದ ಪ್ರಭಾವ ಬೀರಿವೆ. ಭಾರತೀಯ ಮತ್ತು ಸ್ಥಳೀಯ ವಿಚಾರ ಪ್ರಣಾಲಿಗಳು ವಿಮರ್ಶೆಯ ತಾತ್ವಿಕತೆಯನ್ನು ಮುರಿದು ಕಟ್ಟಿವೆ. ಪಾಶ್ಚಾತ್ಯ ವಿಮರ್ಶೆಯ ಪ್ರಭಾವದಿಂದ ಕನ್ನಡದಲ್ಲಿ ಹೊಸದಾಗಿ 'ಸ್ತ್ರೀವಾದಿ ವಿಮರ್ಶೆ' ಪ್ರಕಾರ ಪ್ರವರ್ಧಮಾನಕ್ಕೆ ಬಂದಿದೆ.

ಇಂಥ ಸಂಕೀರ್ಣ ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸನ್ನಿವೇಶದ ಹಿನ್ನೆಲೆಯುಳ್ಳ ವಿಷಯವನ್ನು ಅಧ್ಯಯನ ಮಾಡುವುದು ಸಾಹಿತ್ಯ ವಿಮರ್ಶೆಯ ಅಧ್ಯಯನಕಾರನಿಗೆ ಬಹುದೊಡ್ಡ ಸವಾಲು. ಇದು ಆಕರಗಳ ಆಯ್ಕೆಯಿಂದ ಆರಂಭವಾಗಿ ಆಕರಗಳ ವರ್ಗೀಕರಣ ಮತ್ತು ಆಕರಗಳ ವಿಶ್ಲೇಷಣೆಯೂ ಸೇರಿದಂತೆ ಪ್ರೌಢಪ್ರಬಂಧ ರಚನೆಗೆ ಅಗತ್ಯವಾದ ಅರ್ಥಪೂರ್ಣ ಗ್ರಹಿಕೆಯನ್ನು ರೂಪಿಸಿಕೊಳ್ಳುವವರೆಗೂ ಚಾಚಿದೆ.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ವಿಷಯವನ್ನು ನಿರ್ದಿಷ್ಟವಾದ ಒಂದು ಅಥವಾ ಕೆಲವು ಆಯ್ಕೆಯ ವಿಧಾನಗಳಿಂದ ಅಧ್ಯಯನ ಮಾಡುವುದು ಸಮರ್ಪಕವಾದ ಕ್ರಮವಲ್ಲ ಎಂದು ಭಾವಿಸಿಕೊಳ್ಳಲಾಗಿದೆ. ಬೇರೆ ಬೇರೆ ಅಧ್ಯಾಯಗಳ ಮತ್ತು ಬೇರೆ ಬೇರೆ ಚರ್ಚೆಗಳ ಸಂದರ್ಭಕ್ಕೆ ಸೂಕ್ತವಾದ ಹಾಗೂ ಉಪಯುಕ್ತವಾದ ಅಧ್ಯಯನ ವಿಧಾಗಳನ್ನು ಅನುಸರಿಸುವುದು ಸಮಂಜಸವೆಂದು ತಿಳಿಯಲಾಗಿದೆ. ಹೀಗಾಗಿ ಈ ಅಧ್ಯಯನವನ್ನು ಬಹುರೂಪಿ ವಿಧಾನಗಳ ಮೂಲಕ ಮಾಡುವುದು ಅರ್ಥಪೂರ್ಣ ಕ್ರಮವೆಂದು ನಂಬಲಾಗಿದೆ.

ಹೀಗಾಗಿ ಅಧ್ಯಯನ ವಿಧಾನವನ್ನು ಮುಂದಿನ ಸ್ವರೂಪದಲ್ಲಿ ರೂಪಿಸಿಕೊಳ್ಳಲಾಗಿದೆ.

೧.೬.೧ ಆಕರಗಳ ಆಯ್ಕೆ ವಿಧಾನ

ಕನ್ನಡ ಸಾಹಿತ್ಯ ವಿಮರ್ಶೆ, ಸಂಸ್ಕೃತಿ ಚಿಂತನೆ, ವಿಚಾರ ಸಾಹಿತ್ಯ ಮತ್ತು ಸಂಶೋಧನಾ ಸಾಹಿತ್ಯ ಮೊದಲಾದ ಪ್ರಕಾರಗಳಿಂದ, ಮುಖ್ಯವಾಗಿ ಲೇಖನಗಳನ್ನು ಪ್ರಧಾನ ಮತ್ತು ಪೂರಕ ಆಕರಗಳನ್ನಾಗಿ ಆಯ್ಕೆಮಾಡಿಕೊಳ್ಳಲಾಗುವುದು. ಆಕರಗಳು, ನಿರ್ದಿಷ್ಟವಾಗಿ ಅಧ್ಯಯನದ ಕಾಲವ್ಯಾಪ್ತಿ ಮತ್ತು ಸಂಖ್ಯಾವ್ಯಾಪ್ತಿಯೊಳಗೆ ಇರುವಂತೆ ನೋಡಿಕೊಳ್ಳಲಾಗುವುದು. ಆದರೂ ಅತ್ಯಂತ ಅಗತ್ಯವಿರುವ ಸಂದರ್ಭಗಳಲ್ಲಿ ಈ ಕಟ್ಟುಪಾಡನ್ನು ಸಡಿಲಿಸುವ ಕ್ರಮವನ್ನು ಸಹ ಅನುಸರಿಸಲಾಗುವುದು.

ಆಕರಗಳನ್ನು, ಪ್ರಧಾನವಾಗಿ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಕ್ಷೇತ್ರದಿಂದ ಆಯ್ಕೆ ಮಾಡಿಕೊಳ್ಳಲಾಗುವುದು. ವಿಷಯದ ತೌಲನಿಕ ವಿವೇಚನೆಯ ಅವಶ್ಯಕತೆಯನುಸಾರ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ, ಸಾಹಿತ್ಯ ಮತ್ತು ಸಂಸ್ಕೃತಿ ಸಿದ್ಧಾಂತಗಳ ಮೂಲಗಳಿಂದಲೂ ಸಹ ಆಯ್ಕೆ ಮಾಡಿಕೊಳ್ಳಲಾಗುವುದು.

ಆಕರಗಳನ್ನು ಆಯ್ಕೆಗೆ ಪರಿಗಣಿಸುವಾಗ 'ಸಾಹಿತ್ಯ ಮತ್ತು ಸಾಹಿತ್ಯೇತರ', 'ಸೃಜನಶೀಲ ಮತ್ತು ಸೃಜನೇತರ' ಎನ್ನುವ ಪರಿಕಲ್ಪನೆಗಳ ಬೇಧಾತ್ಮಕ ಮನೋಭಾವ ಇಟ್ಟುಕೊಳ್ಳದೆ 'ಪಠ್ಯ'ಗಳೆಂದು ಪರಿಭಾವಿಸಲಾಗುವುದು.

ಕನ್ನಡದ ಆಕರಗಳನ್ನು ವಿಮರ್ಶಾ ಕೃತಿಗಳು, ವಿವಿಧ ಸ್ವರೂಪದ ವಿಮರ್ಶಾ ಸಂಪುಟಗಳು, ಸಾಹಿತ್ಯ ಪತ್ರಿಕೆಗಳು, ವೃತ್ತ ಪತ್ರಿಕೆಗಳು, ವಿವಿಧ ನಿಯತಕಾಲಿಕ ಪತ್ರಿಕೆಗಳು, ಸ್ಮರಣ ಸಂಚಿಕೆಗಳು, ಅಭಿನಂದನ ಗ್ರಂಥಗಳು, ನಿರ್ದಿಷ್ಟ ಸಾಹಿತ್ಯ ಕೃತಿ ಮತ್ತು ನಿರ್ದಿಷ್ಟ ಲೇಖಕರ ಸಾಹಿತ್ಯ ಕುರಿತು ಸಂಕಲಿಸಿರುವ ವಿಮರ್ಶಾಲೇಖನಗಳ ಸಂಪಾದಿತ ಗ್ರಂಥಗಳು ಮೊದಲಾದ ಮೂಲಗಳಿಂದ ಪಡೆದುಕೊಳ್ಳಲಾಗುವುದು. ಕನ್ನಡದ ಬಹಳಷ್ಟು ಶ್ರೇಷ್ಠ ವಿಮರ್ಶೆ ಲೇಖಕರ ಕೃತಿಗಳಿಗೆ ಬರೆದ ಮುನ್ನುಡಿ ಮತ್ತು ಬೆನ್ನುಡಿಗಳ ರೂಪದಲ್ಲಿ ಸೃಷ್ಟಿಯಾಗಿದೆ. ಹಾಗೆಯೇ, ವಿವಿಧ ಕಾಲಾಧಾರಿತ ಪತ್ರಿಕೆಗಳಲ್ಲಿ ಸಾಂದರ್ಭಿಕವಾಗಿ ನಡೆಯುವ ಪ್ರತಿಕ್ರಿಯೆಗಳು, ಚರ್ಚೆಗಳು, ಸಂವಾದಗಳು ಮತ್ತು ವಾಗ್ವಾದಗಳ ರೂಪದಲ್ಲಿ ಹುಟ್ಟಿಕೊಂಡಿದೆ. ಈ ಮೂಲಗಳಿಂದಲೂ ಅಗತ್ಯಾನುಸಾರ ಆಕರಗಳನ್ನು ಪರಿಗಣಿಸಲಾಗುವುದು.

ಅಧ್ಯಯನದ ಕಾಲವ್ಯಾಪ್ತಿಯಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ವಿವಿಧ ಪ್ರಕಾರಗಳಾದ ದಲಿತ ಮತ್ತು ಬಂಡಾಯ, ಸ್ತ್ರೀವಾದಿ, ಮಾರ್ಕ್ಸ್‌ವಾದಿ ಹಾಗೂ ಸಮಾಜವಾದಿ ಮೊದಲಾದ ಪ್ರಸಿದ್ಧ ವಿಮರ್ಶಾ ಪ್ರಕಾರಗಳನ್ನು ಆಕರಗಳ ಮುಖ್ಯ ಮೂಲಗಳೆಂದು ಪರಿಗಣಿಸಲಾಗುವುದು. ಇದರೊಂದಿಗೆ ಯಾವುದೇ ಪಂಥ, ತತ್ವ ಅಥವಾ ಸಿದ್ಧಾಂತದ ನಿಷ್ಠುರ ಬದ್ಧತೆಗೆ ಒಳಗಾಗದ ಮುಕ್ತ ಅಥವಾ ಸ್ವತಂತ್ರ ಸಾಹಿತ್ಯ ವಿಮರ್ಶೆಯನ್ನು ಸಹ ಆಕರಗಳ ಆಯ್ಕೆಗಾಗಿ ಪರಿಗಣಿಸಲಾಗುವುದು.

ಸಾಹಿತ್ಯ ವಿಮರ್ಶೆಯಲ್ಲಿ ಸಮಾಜ, ಸಂಸ್ಕೃತಿ, ರಾಜಕಾರಣ, ಆರ್ಥಿಕತೆ, ಭಾಷೆ, ಧರ್ಮ, ಚರಿತ್ರೆ ಮತ್ತು ಪರಿಸರದ ಪ್ರಶ್ನೆಗಳನ್ನು ಸಾಹಿತ್ಯಾನುಸಂಧಾನದಲ್ಲಿ ಮುಖ್ಯವಾಗಿ ಮುಖಾಮುಖಿ ಮಾಡಿರುವ ವಿಮರ್ಶೆಯನ್ನು ಈ ಅಧ್ಯಯನದ ಅತ್ಯಂತ ಪ್ರಮುಖ ಆಕರ ಮೂಲವೆಂದು ಭಾವಿಸಿ ಆಕರಗಳನ್ನು ಆಯ್ಕೆಮಾಡಿಕೊಳ್ಳಲಾಗುವುದು.

ಸಾಹಿತ್ಯ ವಿಮರ್ಶೆಯ ರೂಢಿಗತ ವಿಧಾನಗಳು, ಉದ್ದೇಶಗಳು, ಹೊಣೆಗಾರಿಕೆಗಳು ಮತ್ತು ಕಾರ್ಯಮಾದರಿಗಳನ್ನು ತೀವ್ರವಾಗಿ ಪಲ್ಲಟಗೊಳಿಸಿ ಹೊಸ ಚಲನೆಗಳನ್ನು ತಂದ ವಿಮರ್ಶಾ

ಲೇಖನ ಮತ್ತು ಬರಹಗಳನ್ನು ಮಹತ್ವದ ಆಕರಗಳೆಂದು ಪರಿಭಾವಿಸಿ ಆಯ್ಕೆಮಾಡಿಕೊಳ್ಳಲಾಗುವುದು.

ಕನ್ನಡದ ಶ್ರೇಷ್ಠ ವಿಮರ್ಶಕರು ಮತ್ತು ಚಿಂತಕರು ಪ್ರಕಟಿಸಿರುವ ವಿಮರ್ಶಾ ಸಾಹಿತ್ಯದೊಂದಿಗೆ, ಅರ್ಥಪೂರ್ಣವಾದ ಮತ್ತು ಮಹತ್ವಪೂರ್ಣವಾದ ವಿಮರ್ಶೆ ರಚಿಸಿದ್ದರೂ ಸಹ ಯಾವುದೇ ವಿಮರ್ಶಾ ಕೃತಿಯನ್ನಾಗಲೀ ಅಥವಾ ವಿಮರ್ಶಾ ಲೇಖನಗಳ ಸಂಕಲನ ಗ್ರಂಥವನ್ನಾಗಲೀ ಪ್ರಕಟಿಸದಿರುವಂಥ ವಿಮರ್ಶಕರ ಉತ್ತಮ ಬಿಡಿ ಲೇಖನಗಳನ್ನು ಸಹ ಈ ಅಧ್ಯಯನದಲ್ಲಿ ಉಚಿತತೆಯನುಸಾರ ಆಯ್ಕೆಮಾಡಿಕೊಳ್ಳಲಾಗುವುದು.

ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಮುಖ ಒಲವುಗಳು, ಪ್ರವೃತ್ತಿಗಳು ಮತ್ತು ಧೋರಣೆಗಳನ್ನು ಅಧ್ಯಯನದ ವಿಷಯದ ಚರ್ಚೆಗೆ ಪೂರಕವಾದ ಕ್ರಮದಲ್ಲಿ ಬಿಂಬಿಸಿರುವ ಲೇಖನಗಳನ್ನು ಆಕರಗಳಾಗಿ ಪರಿಗಣಿಸಲಾಗುವುದು. ಅಧ್ಯಯನದ ವಿಷಯಕ್ಕೆ ಸಂಗತವಾಗುವ ರೀತಿಯಲ್ಲಿ ದಲಿತ, ಬಂಡಾಯ, ಮಾರ್ಕ್ಸ್‌ವಾದಿ, ಸ್ತ್ರೀವಾದಿ, ಸಮಾಜವಾದಿ, ಎಡಪಂಥೀಯ ಮತ್ತು ಸಂಸ್ಕೃತಿನಿಷ್ಠ ವಿಮರ್ಶಾ ಪ್ರಕಾರಗಳ ಆಕರಗಳನ್ನು ಅರ್ಥಪೂರ್ಣ ಕ್ರಮದಲ್ಲಿ ಪ್ರತಿನಿಧಿತವಾಗುವಂತೆ ಆಯ್ಕೆ ಮಾಡಿಕೊಳ್ಳಲಾಗುವುದು.

ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚೆಗಾಗಿ ಎತ್ತಿಕೊಳ್ಳುವ ವಿಷಯಗಳು, ಸಮಸ್ಯೆಗಳು ಮತ್ತು ಪ್ರಶ್ನೆಗಳು ರೂಪಿಸುವ ತಾತ್ವಿಕ ಸ್ವರೂಪಕ್ಕೆ ಉಪಯುಕ್ತವಾಗುವಂತೆ ಸಾಧ್ಯವಾದಷ್ಟು ಆರರಿಂದ ಎಂಟು ಲೇಖನಗಳನ್ನು ಮಾತ್ರ ಪ್ರಧಾನ ಆಕರಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗುವುದು. ಹೀಗೆ, ಸಮಗ್ರ ಅಧ್ಯಯನಕ್ಕೆ ಸುಮಾರು ಎಪ್ಪತ್ತರಿಂದ ಎಪ್ಪತ್ತೈದು ಲೇಖನಗಳನ್ನು ಪ್ರಧಾನ ಆಕರಗಳಾಗಿ ತೆಗೆದುಕೊಳ್ಳಲಾಗುವುದು.

೧.೬.೨ ಆಕರಗಳ ವರ್ಗೀಕರಣ ವಿಧಾನ

ಮೊದಲಿಗೆ, ಕ್ರಮಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ರೂಪಿಸಿಕೊಂಡಿರುವ ಎಲ್ಲಾ ಅಧ್ಯಾಯಗಳಿಗೆ ಸೂಕ್ತವಾದ ಪ್ರಧಾನ ಆಕರಗಳನ್ನು ಗುರುತಿಸಿಕೊಂಡು ಅಧ್ಯಾಯವಾರು ವರ್ಗೀಕರಿಸಿಕೊಳ್ಳಲಾಗುವುದು. ಆನಂತರ, ಪ್ರತಿಯೊಂದು ಅಧ್ಯಾಯದ ಸಾಮಾನ್ಯ ಸ್ವರೂಪ ಕುರಿತು ಮಾಡಿಕೊಳ್ಳಲಾಗುವ ಪೂರ್ವಕಲ್ಪನೆಗೆ ಅನುಸಾರವಾಗಿ ಉಪಯುಕ್ತವಾಗಬಹುದಾದ ಪ್ರಧಾನ ಆಕರಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿಕೊಳ್ಳಲಾಗುವುದು. ಇದಾದ ಮೇಲೆ, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಸ್ತುವಿಷಯಗಳು, ಸಂಗತಿಗಳು, ಸಮಸ್ಯೆಗಳು ಮತ್ತು ಪ್ರಶ್ನೆಗಳ ಮೂಲಕ ಕಟ್ಟಬಹುದಾದ ಘಟಕಗಳು ಹಾಗೂ ಉಪಘಟಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಧಾನ ಆಕರಗಳನ್ನು ಕ್ರಮಾನುಸಾರ ಮರುವರ್ಗೀಕರಿಸಿಕೊಳ್ಳಲಾಗುವುದು.

ಆಕರಗಳನ್ನು ಹೀಗೆ ವರ್ಗೀಕರಿಸುವಾಗ ಮತ್ತು ಮರುವರ್ಗೀಕರಿಸುವಾಗ, ಅವುಗಳ ರಚನೆಯ ಕಾಲಾನುಕ್ರಮ ವಿಧಾನವನ್ನು ಅನುಸರಿಸುವುದಿಲ್ಲ. ಬದಲಾಗಿ, ತಾತ್ವಿಕತೆ ಅಥವಾ ಸೈದ್ಧಾಂತಿಕತೆಯನ್ನು ಅನುಲಕ್ಷಿಸಿ ವರ್ಗೀಕರಿಸಿಕೊಳ್ಳಲಾಗುವುದು.

ಪೂರಕ ಮತ್ತು ಅನುಷಂಗಿಕ ಆಕರಗಳನ್ನು ಸಹ ಹೀಗೆಯೇ ಸೈದ್ಧಾಂತಿಕ ಸ್ವರೂಪಗಳ ಆಧಾರದಲ್ಲಿ ವರ್ಗೀಕರಿಸುವ ಕ್ರಮ ಅನುಸರಿಸಲಾಗುವುದು.

೧.೬.೩ ಆಕರಗಳ ವಿಶ್ಲೇಷಣಾ ವಿಧಾನ

ಆಯ್ಕೆ ಮಾಡಿಕೊಳ್ಳಲಾಗುವ ಆಕರಗಳು ವೈವಿಧ್ಯಮಯ ಸ್ವರೂಪದವುಗಳಾಗಿವೆ. ಹೀಗಾಗಿ ಇವುಗಳನ್ನು, ರೂಪಿಸಿಕೊಳ್ಳಲಾಗುವ ಅಧ್ಯಾಯಗಳ ಸ್ವರೂಪದ ಪೂರ್ವಕಲ್ಪನೆಯನ್ನು ಆಧರಿಸಿ ಆಯ್ದುಕೊಳ್ಳಲಾಗುವುದು. ಪ್ರತಿಯೊಂದು ಅಧ್ಯಾಯವು ಬೇರೆ ಬೇರೆ ಸ್ವರೂಪದ ಆಕರಗಳ ಬಳಕೆ ಮೂಲಕ ರೂಪುಗೊಳ್ಳುತ್ತದೆ. ಈ ಅಧ್ಯಯನವು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಹೊಸದಾಗಿ ರೂಪುಗೊಂಡಿರುವ ವಿಮರ್ಶಾ ಪ್ರಕಾರ ಒಂದರ ತಾತ್ವಿಕ ಸ್ವರೂಪ ಕುರಿತ ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಸ್ವರೂಪದ ಅಧ್ಯಯನವಾಗಿದೆ. ವಿಮರ್ಶಾ ಪ್ರಕಾರವೊಂದರ ಹುಟ್ಟು, ಬೆಳವಣಿಗೆ ಮತ್ತು ಅದರ ವಿವಿಧ ಆಯಾಮಗಳನ್ನು ಕುರಿತ ಸಮಗ್ರ ವಿನ್ಯಾಸವನ್ನು ಶೋಧಿಸುವ ಸ್ವರೂಪದ್ದಾಗಿದೆ.

ಈ ಹಿನ್ನೆಲೆಯಲ್ಲಿ, ಇಲ್ಲಿ ಆಕರಗಳನ್ನು ಬಹುರೂಪಿ ವಿಶ್ಲೇಷಣಾ ವಿಧಾನಗಳನ್ನು ಬಳಸಿ ಚರ್ಚಿಸಲಾಗುವುದು ಮತ್ತು ವಿಶ್ಲೇಷಿಸಲಾಗುವುದು. ಬೇರೆ ಬೇರೆ ಅಧ್ಯಾಯಗಳಿಗೆ ಬೇರೆ ಬೇರೆ ರೀತಿಯ ಆಕರ ವಿಶ್ಲೇಷಣಾ ವಿಧಾನ ಬಳಸಲಾಗುವುದು. ಹಾಗೆಯೇ, ಕೆಲವೊಮ್ಮೆ ಒಂದೇ ಅಧ್ಯಾಯ ಅಥವಾ ಅಧ್ಯಾಯವೊಂದರ ಚರ್ಚೆಯ ಸನ್ನಿವೇಶದಲ್ಲಿ ಹಲವು ವಿಶ್ಲೇಷಣಾ ವಿಧಾನಗಳನ್ನು ಏಕಕಾಲದಲ್ಲಿ ಸಹ ಉಪಯೋಗಿಸಬಹುದಾದ ಸಾಧ್ಯತೆ ಕೂಡಾ ಇದೆ. ಇದನ್ನು ಸ್ಥೂಲವಾಗಿ ಈ ರೀತಿಯಲ್ಲಿ ನಿರೂಪಿಸಬಹುದಾಗಿದೆ.

ಅಧ್ಯಯನ ವಿಷಯದ ಪ್ರವೇಶಕ್ಕೆ ಸೂಕ್ತ ವೇದಿಕೆ ನಿರ್ಮಿಸುವ ಸ್ವರೂಪದ ಅಧ್ಯಾಯವಾದ 'ಇದುವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ವಿಶ್ಲೇಷಣೆ'ಗೆ ಸಂಬಂಧಿಸಿದ ಆಕರಗಳನ್ನು ವಸ್ತುನಿಷ್ಠ ಅಥವಾ ಕೃತಿನಿಷ್ಠ ವಿಶ್ಲೇಷಣಾ ವಿಧಾನದಲ್ಲಿ ಚರ್ಚಿಸಲಾಗುವುದು.

ಅಧ್ಯಯನದ ವಿಷಯ ಕುರಿತ ಮಹತ್ವದ ಅಧ್ಯಾಯವಾದ 'ತಾತ್ವಿಕ ಚರ್ಚೆ ಅಥವಾ ಪರಿಕಲ್ಪನಾತ್ಮಕ ಚರ್ಚೆ'ಗೆ ಬಳಸಲಾಗುವ ಆಕರಗಳನ್ನು ' ಸಂಶ್ಲೇಷಣಾತ್ಮಕ ವಿಧಾನ'ದ ಮೂಲಕ ವಿವೇಚಿಸಲಾಗುವುದು.

ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ, ಸಾಹಿತ್ಯಕ, ಸಾಂಸ್ಕೃತಿಕ ಚಹರೆಗಳು ಮತ್ತು ತಾತ್ವಿಕ ಆಯಾಮಗಳನ್ನು ಕುರಿತ ಆಕರಗಳ ಪರಿಶೀಲನೆಯಲ್ಲಿ ಪ್ರಧಾನವಾಗಿ ತೌಲನಿಕ ಚರ್ಚೆಯ ವಿಶ್ಲೇಷಣಾ ವಿಧಾನ ಹೆಚ್ಚು ಉಪಯುಕ್ತವಾಗುತ್ತದೆ.

ಅಧ್ಯಯನದ ಉಳಿದ ಅಧ್ಯಾಯಗಳಿಗೆ ಸಂಬಂಧಿಸಿದ ಹಲವು ಸ್ವರೂಪದ ಬಹುರೂಪಿ ಆಕರಗಳನ್ನು ಆಂತರಿಕ ತೌಲನಿಕ ವಿಧಾನ, ಅನ್ಯಶಿಸ್ತು ಮತ್ತು ಬಹುಶಿಸ್ತು ವಿಶ್ಲೇಷಣಾ ವಿಧಾನ ಹಾಗೂ ಸಂಶ್ಲೇಷಣಾ ವಿಧಾನಗಳನ್ನು ಅಗತ್ಯಾನುಸಾರ ಅರ್ಥಪೂರ್ಣ ಕ್ರಮಗಳಲ್ಲಿ ಬಳಸುವ ಮೂಲಕ ವಿಶ್ಲೇಷಿಸಲಾಗುವುದು.

೧.೬.೪ ಗ್ರಹಿಕೆ ವಿಧಾನ

ಈ ಅಧ್ಯಯನದ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆ ಮತ್ತು ವಿಮರ್ಶೆಯ ಅಧ್ಯಯನ ಕುರಿತು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಹಿಕೆಗಳನ್ನು ಪರಿಭಾವಿಸಿಕೊಳ್ಳಲಾಗಿದೆ. ಸಾಹಿತ್ಯವನ್ನು ಈಸ್ತೆಟಿಕ್, ಎಂಪಿರಿಸಿಸ್ಟ್ ಮತ್ತು ಪೊಸಿಟಿವಿಸ್ಟ್ ಧೋರಣೆಯಲ್ಲಿ ಪರಿಭಾವಿಸದೆ ಸಮಾಜ ಮತ್ತು ಸಂಸ್ಕೃತಿಗಳನ್ನು ಕುರಿತ ಮಹತ್ವದ ಆಖ್ಯಾನ ಹಾಗೂ ವ್ಯಾಖ್ಯಾನ ರೂಪ ಎಂದು ತಿಳಿಯಲಾಗಿದೆ. ಸಾಹಿತ್ಯವನ್ನು ಸಾಂಪ್ರದಾಯಕವಾಗಿ ವಿಂಗಡಿಸುವ 'ಸೃಜನಶೀಲ' ಮತ್ತು 'ಸೃಜನೇತರ' ಎನ್ನುವ ಕೃತಕ ವಿಭಜನೆಯನ್ನು ಇಲ್ಲಿ ಸಂಪೂರ್ಣ ತ್ಯಜಿಸಲಾಗಿದೆ. ಸಾಹಿತ್ಯೇತರ ಮತ್ತು ಸಾಹಿತ್ಯದಾಚೆಗಿನ ಜ್ಞಾನರೂಪಗಳು ಮತ್ತು ಶಿಸ್ತುಗಳನ್ನು ಕೂಡಾ ಸಾಹಿತ್ಯದ ಪರಿಧಿಯೊಳಗೆ ಪರಿಗಣಿಸಲಾಗಿದೆ. ಇದನ್ನು 'ಪಠ್ಯ'ಗಳು ಎನ್ನುವ ಪರಿಭಾಷೆ ಮೂಲಕ ಗ್ರಹಿಸಲಾಗಿದೆ.

ಸಾಹಿತ್ಯ ವಿಮರ್ಶೆಯನ್ನು 'ಸೃಜನೇತರ' ಎನ್ನುವ ಪರಿಭಾಷೆ ಮೂಲಕ ವಿವರಿಸುವುದನ್ನು ಇಲ್ಲಿ ನಿರಾಕರಿಸಲಾಗಿದೆ. ಸಾಹಿತ್ಯ ಕೃತಿಗಳನ್ನು ಆಧರಿಸಿ ನಡೆಯುವ ಸಾಹಿತ್ಯಾಧೀನ ಬೌದ್ಧಿಕ ಚಟುವಟಿಕೆ ಎನ್ನುವ ನಿರೂಪಣೆಗೆ ತೀವ್ರವಾದ ಭಿನ್ನಮತ ವ್ಯಕ್ತಪಡಿಸಲಾಗಿದೆ. ಸಾಹಿತ್ಯ ವಿಮರ್ಶೆಯು ಎರಡನೆ ದರ್ಜೆ ಚಟುವಟಿಕೆ ಅಲ್ಲ. ಅದು ಕೇವಲ ಸಾಹಿತ್ಯ ಕೃತಿ ಮತ್ತು ಸಾಹಿತ್ಯ ಪರಂಪರೆಗೆ ಮಾತ್ರ ಸೀಮಿತವಾದ ಕ್ರಿಯಾರೂಪವಲ್ಲ. ಸಾಹಿತ್ಯವೂ ಸೇರಿದಂತೆ ಸಮಾಜ, ಸಂಸ್ಕೃತಿ, ರಾಜಕಾರಣ, ಧರ್ಮ, ಚರಿತ್ರೆ, ಭಾಷೆ ಮೊದಲಾದ ಜ್ಞಾನರೂಪಗಳ ತಿಳಿವಳಿಕೆ ಮೂಲಕ ಹುಟ್ಟುವ ಜ್ಞಾನಮೀಮಾಂಸೆಯ ಪ್ರಮುಖ ಸಾಹಿತ್ಯಕ ರೂಪ. ಹೀಗಾಗಿ ಇದೂ ಕೂಡಾ ಸೃಜನಶೀಲ ಸ್ವರೂಪಿ ಎನ್ನುವ ಗ್ರಹಿಕೆ ಇಲ್ಲಿನದು. ಸಾಹಿತ್ಯ ವಿಮರ್ಶೆ ಸಮಕಾಲೀನ ಸಂದರ್ಭದ ಅತ್ಯಂತ ಪರಿಣಾಮಕಾರಿ ಸಂಕಥನ ಮಾಧ್ಯಮ ಎಂದು ಇಲ್ಲಿ ಭಾವಿಸಲಾಗಿದೆ. ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಯ ಪಠ್ಯಗಳನ್ನು ಇದು ಸಂಕಥನದ ಮುಖ್ಯ ಆಕರಗಳಾಗಿ ಭಾವಿಸುತ್ತದೆ ಎನ್ನುವುದು ಈ ಅಧ್ಯಯನದ ಸಂದರ್ಭದಲ್ಲಿ ತಳೆದಿರುವ ಮುಖ್ಯವಾದ ಗ್ರಹಿಕೆಯಾಗಿದೆ.

೧.೬.೫ ಬರವಣಿಗೆ ವಿಧಾನ

ಈ ಅಧ್ಯಯನ ವಿಮರ್ಶೆಯನ್ನು ಕುರಿತ ಅಧ್ಯಯನ ಅಥವಾ ವಿಮರ್ಶೆಯ ವಿಮರ್ಶೆಯಾಗಿದೆ. ಅಧ್ಯಯನಕ್ಕಾಗಿ ಬಳಸಿರುವ ಆಕರಗಳು, ಅವುಗಳನ್ನು ವರ್ಗೀಕರಿಸಿಕೊಂಡಿರುವ ಕ್ರಮ, ವಿಶ್ಲೇಷಿಸಿರುವ ವಿಧಾನಗಳು ವಿಶಿಷ್ಟವಾಗಿವೆ. ಹಾಗೆಯೇ ಸಾಹಿತ್ಯ, ವಿಮರ್ಶೆ ಮತ್ತು ಸಂಸ್ಕೃತಿಗಳ ಸ್ವರೂಪ ಕುರಿತು ತಾಳಿರುವ ಗ್ರಹಿಕೆಗಳಲ್ಲಿ ಹೊಸ ವಿಚಾರಗಳಿವೆ.

ಒಂದು ಶತಮಾನದ ಕನ್ನಡ ಸಾಹಿತ್ಯ ವಿಮರ್ಶೆಯ ಚರಿತ್ರೆಯಲ್ಲಿ ಉತ್ತರಾರ್ಧವು ಹಲವು ಕಾರಣಗಳಿಂದ ಅತ್ಯಂತ ಮಹತ್ವಪೂರ್ಣವಾದ ಕಾಲಾವಧಿಯಾಗಿದೆ. ಇಲ್ಲಿ, ಪ್ರಧಾನವಾಗಿ ಈ ಅವಧಿಯ ಸಾಹಿತ್ಯ ವಿಮರ್ಶೆಯ ಪ್ರವೃತ್ತಿಗಳನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಹಾಗೆಯೇ ಸಮಗ್ರ ಕನ್ನಡ ವಿಮರ್ಶಾ ಚರಿತ್ರೆಯನ್ನು ಹಿನ್ನೆಲೆಯ ಭಿತ್ತಿಯಾಗಿ ಭಾವಿಸಲಾಗಿದೆ. ಈ ಮೂಲಕ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಕಾಲಾವಧಿಯೊಳಗೆ ಕನ್ನಡದಲ್ಲಿ ಆಕಾರ ತಳೆದ ಹೊಸ ವಿಮರ್ಶಾ ಪ್ರಕಾರವೊಂದರ ಸಮಗ್ರ ಸ್ವರೂಪ ಕುರಿತು ವಿಶ್ಲೇಷಿಸಲಾಗುವುದು. ಈ ಹಿನ್ನೆಲೆಯಲ್ಲಿ ಮಾಹಿತಿ ಪ್ರಧಾನ, ವಿವರಣಪ್ರಧಾನ ಮತ್ತು ಸಾರಾಂಶಪ್ರಧಾನ ಬರವಣಿಗೆಗೆ ಇಲ್ಲಿ ಅವಕಾಶ ಇಲ್ಲ. ಬಹಳ ಮುಖ್ಯವಾಗಿ ಇದು ವಿಮರ್ಶೆಯನ್ನು ಕುರಿತ ಅಧ್ಯಯನ ಅಥವಾ ನಿರ್ದಿಷ್ಟವಾಗಿ ಹೇಳುವುದಾದರೆ 'ವಿಮರ್ಶೆಯ ವಿಮರ್ಶೆ'ಯಾಗಿದೆ. ಹೀಗಾಗಿ, ವಿಮರ್ಶಾ ಮೀಮಾಂಸೆಯ ಚಹರೆ ಈ ಅಧ್ಯಯನದ ಒಂದು ಮುಖ್ಯ ಸ್ವರೂಪವಾಗುತ್ತದೆ.

ಈ ಕಾರಣದಿಂದ ಇಲ್ಲಿನ ಬರವಣಿಗೆಯನ್ನು ಪ್ರಧಾನವಾಗಿ ವಿಶ್ಲೇಷಣಾತ್ಮಕ ವಿಧಾನದಲ್ಲಿ ಕಟ್ಟಲಾಗಿದೆ. ವಿಶ್ಲೇಷಣೆಯ ಮೂಲಕ ಹೊರಹೊಮ್ಮುವ ವಿಚಾರಗಳು ಮತ್ತು ಸಂಗತಿಗಳನ್ನು ವಿವಿಧ ಆಯಾಮಗಳಲ್ಲಿ ಅನುಸಂಧಾನ ಮಾಡುವ ಮೂಲಕ ಅವುಗಳ ಕೆಲವು ವಿಶಿಷ್ಟ ಮತ್ತು ಸಾಮಾನ್ಯ ಗುಣಲಕ್ಷಣಗಳನ್ನು ಗುರುತಿಸಲಾಗಿದೆ. ಇವುಗಳ ನಡುವೆ ಇರುವ ಸಂಬಂಧಗಳ, ವೈರುಧ್ಯಗಳ ಮತ್ತು ಸಮಸ್ಯೆಗಳ ಸ್ವರೂಪವನ್ನು ಕುರಿತು ಆಲೋಚಿಸಲಾಗಿದೆ. ಹೀಗಾಗಿ, ತಾತ್ವೀಕರಣ ಮತ್ತು ಸೈದ್ಧಾಂತೀಕರಣ ವಿಧಾನ ಬರವಣಿಗೆಯಲ್ಲಿ ಮುಖ್ಯವಾಗಿದೆ. ಆದ್ದರಿಂದ ಇಲ್ಲಿ ಪ್ರಧಾನವಾಗಿ ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಬರವಣಿಗೆಯ ಕ್ರಮಗಳನ್ನು ಬಳಸಲಾಗಿದೆ.

೧.೭ ಅಧ್ಯಯನದ ಮಹತ್ವ

ಇದು ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ರೂಪುಗೊಂಡಿರುವ ಹೊಸ ವಿಮರ್ಶಾ ಪ್ರಕಾರವೊಂದರ ತಾತ್ವಿಕ ಸ್ವರೂಪ ಕುರಿತ ವ್ಯಾಖ್ಯಾನಾತ್ಮಕ ಮತ್ತು ಸೈದ್ಧಾಂತೀಕರಣಾತ್ಮಕ ಅಧ್ಯಯನವಾಗಿದೆ. ಈ ಹೊಸ ವಿಮರ್ಶಾ ಪ್ರಕಾರ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ನಿರ್ದಿಷ್ಟ

ಸಾಹಿತ್ಯ ಚಳವಳಿ ಹಿನ್ನೆಲೆಯಲ್ಲಿ ಮತ್ತು ನಿರ್ದಿಷ್ಟ ವಿಮರ್ಶಕರ ಪ್ರಯತ್ನಗಳಿಂದ ಇದಕ್ಕಿದ್ದಂತೆ ಹುಟ್ಟಿದ್ದಲ್ಲ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಆರಂಭದಿಂದಲೂ ಕನ್ನಡ ವಿಮರ್ಶೆಯ ಮುಖ್ಯ ಆಸಕ್ತಿಗಳಲ್ಲಿ ಒಂದಾಗಿದ್ದ 'ಸಂಸ್ಕೃತಿ ಪ್ರಶ್ನೆ'ಯಪರಿಭಾವನೆಯ ಸ್ವರೂಪ ಮುಂದಿನ ಕಾಲಘಟ್ಟಗಳಲ್ಲಿ ತೀವ್ರವಾದ ಬದಲಾವಣೆಗಳಿಗೆ ಒಳಗಾಯಿತು. ಇದಕ್ಕೆ ವಿಮರ್ಶೆಯ ದೃಷ್ಟಿಕೋನಗಳು, ಗ್ರಹಿಕೆಗಳು, ಆಲೋಚನಾ ವಿಧಾನಗಳು ಮತ್ತು ಅನುಸಂಧಾನ ಕ್ರಮಗಳಲ್ಲಿ ಮುನ್ನೆಲೆಗೆ ಬಂದ ಹೊಸ ಪ್ರವೃತ್ತಿಗಳು ಉಂಟು ಮಾಡಿದ ಪಲ್ಲಟಗಳು ಮುಖ್ಯವಾದ ಕಾರಣಗಳು. ಇದರಿಂದ 'ಸಂಸ್ಕೃತಿ ಪ್ರಶ್ನೆ'ಯ ಪರಿಭಾವನೆಯ ಸಂದರ್ಭದಲ್ಲಿ 'ಸಾಹಿತ್ಯ' ಮತ್ತು 'ಸಂಸ್ಕೃತಿ' ಪರಿಕಲ್ಪನೆಗಳನ್ನು ಕುರಿತು ಹೊಂದಿದ್ದ 'ಸೀಮಿತ' ಹಾಗೂ 'ಸರಳೀಕೃತ' ಗ್ರಹಿಕೆಗಳನ್ನು ಬಲವಾಗಿ ಪ್ರಶ್ನಿಸಲಾಯಿತು. ಇವುಗಳ ಬದಲಾಗಿ ವ್ಯಾಪಕವಾದ ಮತ್ತು ಸಂಕೀರ್ಣವಾದ ಗ್ರಹಿಕೆಗಳನ್ನು ಪ್ರತಿಪಾದಿಸಲಾಯಿತು. ಇದರಿಂದ ಕನ್ನಡ ವಿಮರ್ಶೆಯಲ್ಲಿ ಮೊಟ್ಟ ಮೊದಲ ಬಾರಿಗೆ 'ಸಾಹಿತ್ಯ ಮತ್ತು ಸಂಸ್ಕೃತಿ ಪ್ರಶ್ನೆ'ಗಳ ಸಂಬಂಧವನ್ನು ಹಲವು ನೆಲೆಗಳಲ್ಲಿ ಹಾಗೂ ಬಹುರೂಪಿ ಆಯಾಮಗಳಲ್ಲಿ ವಿಶ್ಲೇಷಿಸುವ ಪ್ರಯತ್ನಗಳು ವ್ಯಾಪಕವಾದ ಪ್ರಮಾಣದಲ್ಲಿ ಮುನ್ನೆಲೆಗೆ ಬಂದವು. ಈ ಒಟ್ಟಾರೆ ವಿದ್ಯಮಾನದ ಪರಿಣಾಮವಾಗಿ ಕನ್ನಡದಲ್ಲಿ ಹೊಸ ಸ್ವರೂಪದ ವಿಮರ್ಶಾ ಪ್ರಕಾರವೊಂದು ರೂಪುಗೊಳ್ಳುವುದಕ್ಕೆ ಕಾರಣವಾಯಿತು ಎನ್ನುವುದು ಈ ಅಧ್ಯಯನದ ಹಿನ್ನೆಲೆಯಲ್ಲಿರುವ ಪ್ರಮುಖ ಗ್ರಹಿಕೆಯಾಗಿದೆ. ಈ ಹೊಸ ವಿಮರ್ಶೆಯ ಚಹರೆಗಳು, ಅನುಸಂಧಾನ ವಿಧಾನಗಳು, ಕ್ರಿಯಾತ್ಮಕ ಆಯಾಮಗಳು ಮತ್ತು ಅದು ಒಳಗೊಂಡಿರುವ ಸಮಸ್ಯೆಗಳು ಅಥವಾ ಬಿಕ್ಕಟ್ಟುಗಳನ್ನು ಕುರಿತು ಇಲ್ಲಿ ತಾತ್ವಿಕವಾಗಿ ಚಿಂತಿಸಲಾಗಿದೆ.

ಈ ಹಿನ್ನೆಲೆಯಲ್ಲಿ ನಿರ್ದಿಷ್ಟ ಕಾಲವ್ಯಾಪ್ತಿ ಮತ್ತು ಆಕರವ್ಯಾಪ್ತಿಯನ್ನು ಒಳಗೊಂಡೂ ಸಮಗ್ರ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳನ್ನು ವಿಶ್ಲೇಷಿಸುವುದು ಈ ಅಧ್ಯಯನದ ಒಂದು ಮುಖ್ಯ ಸ್ವರೂಪವಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನದಿಂದ ಬಹುರೂಪಿಯಾದ ಅನುಕೂಲಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ವಿಶೇಷವಾದ ಮಹತ್ವವಿದೆಯೆಂದು ಭಾವಿಸಲಾಗಿದೆ. ಇವುಗಳನ್ನು ಹೀಗೆ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅ. ಚಾರಿತ್ರಿಕ ಮಹತ್ವ, ಆ. ಸಾಂಸ್ಕೃತಿಕ ಮಹತ್ವ, ಇ. ವಿಮರ್ಶೆಯ ವಿಮರ್ಶೆಯಾಗಿ ಮಹತ್ವ ಮತ್ತು ಈ. ವಿಮರ್ಶಾ ಮೀಮಾಂಸೆಯಾಗಿ ಮಹತ್ವ

೧.೭.೧ ಚಾರಿತ್ರಿಕ ಮಹತ್ವ

ಕನ್ನಡ ಸಂಸ್ಕೃತಿ ವಿಮರ್ಶೆ ಅಥವಾ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತು ಇದುವರೆಗೆ ಯಾವುದೇ ಪೂರ್ಣ ಪ್ರಮಾಣದ ಅಥವಾ ಗಂಭೀರವಾದ ಅಧ್ಯಯನ ನಡೆದಿಲ್ಲ. ಹೀಗಾಗಿ ಇದು

ಇಂಥ ಒಂದು ಮಹತ್ವದ ಅಧ್ಯಯನ ಎನ್ನುವುದು ಇಲ್ಲಿನ ಭಾವನೆಯಾಗಿದೆ. ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸ್ವರೂಪ, ಚಹರೆಗಳು ಮತ್ತು ವಿಧಾನಗಳನ್ನು ಕುರಿತು ಕೆಲವು ಬಿಡಿ ವಿಮರ್ಶಾ ಲೇಖನಗಳು, ಪ್ರತಿಕ್ರಿಯೆ ರೂಪದ ಬರಹಗಳು ಹಾಗೂ ಸಾಂದರ್ಭಿಕ ವಿವರಣಾತ್ಮಕ ಹೇಳಿಕೆಗಳು ಇರುವುದನ್ನು ಮಾತ್ರ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ವಿಶೇಷವಾದ ಚಾರಿತ್ರಿಕ ಮಹತ್ವವಿದೆ. ಏಕೆಂದರೆ ಇದು ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿವೇಚನೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ನಿರ್ವಚನ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಚಹರೆಗಳು, ವಿಧಾನಗಳು, ಆಯಾಮಗಳು, ಮಾದರಿಗಳು ಹಾಗೂ ಸಮಸ್ಯೆಗಳು ಮೊದಲಾದವುಗಳ ವಿಶ್ಲೇಷಣೆಯನ್ನು ಪ್ರಧಾನ ಉದ್ದೇಶವಾಗಿ ಹೊಂದಿರುವ ಅಧ್ಯಯನವಾಗಿದೆ. ಹಾಗೆಯೇ, ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳ ತಾತ್ವಿಕ ಹಾಗೂ ಕ್ರಿಯಾತ್ಮಕ ಸ್ವರೂಪದ ಭಿನ್ನತೆಗಳನ್ನು ಕುರಿತು ಪರಿಶೀಲಿಸುವುದು ಸಹ ಈ ಉದ್ದೇಶದ ಒಂದು ಮುಖ್ಯ ಭಾಗವಾಗಿದೆ. ಹೀಗಾಗಿ, ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಮೊಟ್ಟಮೊದಲನೆಯ ಹಾಗೂ ಸಮಗ್ರ ಸ್ವರೂಪದ ಅಧ್ಯಯನವಾಗಿರುವುದರಿಂದ ಸಹಜವಾಗಿಯೇ ಈ ಅಧ್ಯಯನಕ್ಕೆ ಚಾರಿತ್ರಿಕ ಮಹತ್ವ ಪ್ರಾಪ್ತವಾಗುತ್ತದೆ.

೧.೭.೨ ಸಾಂಸ್ಕೃತಿಕ ಮಹತ್ವ

ಇದು ಮುಖ್ಯವಾಗಿ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿಯ ಪ್ರಶ್ನೆಗಳ ಸಂಬಂಧದ ಸ್ವರೂಪವನ್ನು ಕುರಿತ ಅಧ್ಯಯನವಾಗಿದ್ದರೂ ಈ ನಿರ್ದಿಷ್ಟ ಪರಿಧಿಯನ್ನು ಮೀರಿ ಸಾಹಿತ್ಯ, ಸಮಾಜ, ಚರಿತ್ರೆ, ಧರ್ಮ, ರಾಜಕಾರಣ, ವಿಜ್ಞಾನ, ಪರಿಸರ ಮತ್ತು ಭಾಷೆ ಮೊದಲಾದ ಪ್ರಶ್ನೆಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆ ಅನುಸಂಧಾನ ಮಾಡಿರುವ ಸ್ವರೂಪ ಕುರಿತು ಸಹ ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಇಪ್ಪತ್ತನೆಯ ಶತಮಾನದ ಆಧುನಿಕ ಭಾರತದ ಮತ್ತು ಕರ್ನಾಟಕದ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಡೆದ ಪ್ರಮುಖ ಬೆಳವಣಿಗೆಗಳು, ವಿದ್ಯಮಾನಗಳು ಮೊದಲಾದವು ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕತೆಯನ್ನು ಬೆಳೆಸಿದ ಮತ್ತು ಮುರಿದು ಮತ್ತು ಹೊಸದಾಗಿ ಕಟ್ಟಿದ ಸ್ವರೂಪ ಕೂಡಾ ವಿಶ್ಲೇಷಣೆಯ ಕಕ್ಷೆಯೊಳಗೆ ಬರುತ್ತದೆ. ಆದ್ದರಿಂದ, ವಸಾಹತುಶಾಹಿಯ ಆಧುನಿಕ ಕಾಲಘಟ್ಟದಿಂದ ನವವಸಾಹತುಶಾಹಿಯ ಆಧುನಿಕೋತ್ತರ ಕಾಲಘಟ್ಟದವರೆಗಿನ ವ್ಯಾಪಕ ಕಾಲಾವಧಿಯಲ್ಲಿ ಕರ್ನಾಟಕದ ಸಂದರ್ಭದಲ್ಲಿ ಉಂಟಾದ ವಿವಿಧ ಸಾಮಾಜಿಕ, ರಾಜಕೀಯ, ಸಾಹಿತ್ಯಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳು ಕನ್ನಡ ಸಾಹಿತ್ಯ ವಿಮರ್ಶೆಯ ವೈಚಾರಿಕ ಹಾಗೂ ಸೈದ್ಧಾಂತಿಕ ಆಕೃತಿಗಳನ್ನು ನಿರಂತರವಾಗಿ ರೂಪಿಸುತ್ತಾ ಬಂದಿರುವುದನ್ನು ಸಹ ಇಲ್ಲಿ ಚರ್ಚಿಸಲಾಗಿದೆ. ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಕವನ್ನು

ಸಾಹಿತ್ಯೇತರ ಸಂಗತಿಗಳು ಮುರಿಯುವ, ಕಟ್ಟುವ ಮತ್ತು ಪರಿವರ್ತಿಸುವ ಪ್ರಕ್ರಿಯೆಯನ್ನು ಸಹ ಇಲ್ಲಿ ಮುಖ್ಯವಾಗಿ ವಿಶ್ಲೇಷಿಸಿಸಿರುವುದರಿಂದ ಈ ಅಧ್ಯಯನಕ್ಕೆ ವಿಶಿಷ್ಟವಾದ ಸಾಂಸ್ಕೃತಿಕ ಮಹತ್ವ ದೊರೆಯುತ್ತದೆ.

೧.೭.೩ ವಿಮರ್ಶೆಯ ವಿಮರ್ಶೆಯಾಗಿ ಮಹತ್ವ

ನಿರ್ದಿಷ್ಟ ಕಾಲಾವಧಿಯ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಪ್ರಧಾನ ವಿವಕ್ಷೆಯಾಗಿ ಹೊಂದಿರುವುದು ಮತ್ತು ಸಮಗ್ರ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಚರಿತ್ರೆಯನ್ನು ಹಿನ್ನೆಲೆಯ ಭಿತ್ತಿಯಾಗಿ ಇಟ್ಟುಕೊಂಡಿರುವುದು ಈ ಅಧ್ಯಯನದ ವಿಶಿಷ್ಟತೆ. ಹೀಗಾಗಿ, ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಇಪ್ಪತ್ತನೆಯ ಶತಮಾನದಲ್ಲಿ ಪಾಶ್ಚಾತ್ಯ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ರೂಪುಗೊಂಡ ನಂತರ ಗಳಿಸಿಕೊಂಡಿರುವ ಪ್ರತ್ಯೇಕ ಅನನ್ಯತೆ ಮತ್ತು ವಿಶಿಷ್ಟತೆಗಳ ಜೊತೆಗೆ ಅದು ಕಟ್ಟಿಕೊಂಡ ತೊಡಕುಗಳನ್ನು ಸಹ ಇಲ್ಲಿ ಸಾಂದರ್ಭಿಕವಾಗಿ ವಿವೇಚಿಸಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಚಳವಳಿಗಳು, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಂದೋಲನಗಳು ಹುಟ್ಟಿಹಾಕಿದ ಸಾಹಿತ್ಯಕ, ಸಾಮಾಜಿಕ, ರಾಜಕೀಯ ಹಾಗೂ ಸೈದ್ಧಾಂತಿಕ ಬದ್ಧತೆಗಳು ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಮುಖ ಆಸಕ್ತಿಗಳು, ಒಲವುಗಳು ಮತ್ತು ಧೋರಣೆಗಳನ್ನು ರೂಪಿಸುವುದರಲ್ಲಿ ವಹಿಸಿದ ಪಾತ್ರಗಳೇನು, ಇದರಿಂದ ಕನ್ನಡ ಸಾಹಿತ್ಯ ವಿಮರ್ಶೆಗೆ ಆದ ಪ್ರಯೋಜನ ಹಾಗೂ ತೊಡಕುಗಳ ಸ್ವರೂಪವೇನು ಎನ್ನುವುದನ್ನು ಇಲ್ಲಿ ಮುಖ್ಯ ಪ್ರಶ್ನೆಯಾಗಿ ಗ್ರಹಿಸಲಾಗಿದೆ.

ಪಾಶ್ಚಾತ್ಯ ವಿಮರ್ಶೆಯ ವಿವಿಧ ತಾತ್ವಿಕ, ಸೈದ್ಧಾಂತಿಕ ಮತ್ತು ವೈಚಾರಿಕ ಆಕೃತಿಗಳನ್ನು ಕನ್ನಡ ಸಾಹಿತ್ಯ ವಿಮರ್ಶೆ ಎದುರುಗೊಂಡಿರುವ ಕ್ರಮದಲ್ಲಿ ಸೃಷ್ಟಿಯಾದ ಬಿಕ್ಕಟ್ಟುಗಳು ಹಾಗೂ ಇವುಗಳನ್ನು ಮೀರಲು ಮಾಡಿರುವ ಪ್ರಯತ್ನಗಳ ಸ್ವರೂಪ ಕುರಿತು ಪರ್ಯಾಲೋಚಿಸಿರುವುದು ಈ ಅಧ್ಯಯನದ ಒಂದು ಮಹತ್ವದ ವಿಚಾರವಾಗಿದೆ. ಕನ್ನಡ ವಿಮರ್ಶಕರ ಮತ್ತು ವಿಮರ್ಶೆಯ ತಾತ್ವಿಕ ದೃಷ್ಟಿಕೋನ ಹಾಗೂ ಗ್ರಹಿಕೆಯ ಕ್ರಮಗಳ ತೀವ್ರ ಪಲ್ಲಟಗಳಿಗೆ ಹಿನ್ನೆಲೆಯಾಗಿರುವ ಪ್ರೇರಣೆಗಳು, ಒತ್ತಡಗಳು ಮತ್ತು ಹಿತಾಸಕ್ತಿಗಳನ್ನು ಕುರಿತು ಸಹ ಪರ್ಯಾಲೋಚಿಸಲಾಗಿದೆ.

ಕನ್ನಡ ಸಾಹಿತ್ಯದ ಸೃಷ್ಟಿಶೀಲತೆಯ ಸ್ವರೂಪ, ಆಶಯಗಳು ಮತ್ತು ನಿರೂಪಣೆಗಳಲ್ಲಿ ಹೊಸ ಬೆಳವಣಿಗೆಗಳು, ತೀವ್ರ ಬದಲಾವಣೆಗಳು ಹಾಗೂ ಸ್ಥಿತ್ಯಂತರಗಳು ಉಂಟಾದಾಗ ಕನ್ನಡ ಸಾಹಿತ್ಯ ವಿಮರ್ಶೆ ಇವುಗಳನ್ನು ನಿರ್ವಹಿಸುವುದರಲ್ಲಿ ಎದುರಿಸಿದ ಬಿಕ್ಕಟ್ಟುಗಳು, ಪರಿಹಾರಗಳಿಗಾಗಿ ನಡೆಸಿದ ಹುಡುಕಾಟಗಳು ಮತ್ತು ಕಂಡುಕೊಂಡ ಪರ್ಯಾಯಗಳ ಸ್ವರೂಪ ಕುರಿತು ಚರ್ಚಿಸಿರುವುದು ಈ ಅಧ್ಯಯನದ ಒಂದು ಮುಖ್ಯ ಸಂಗತಿಯಾಗಿದೆ.

ಈ ಕಾರಣಗಳಿಂದ ಪ್ರಸ್ತುತ ಅಧ್ಯಯನ ಕನ್ನಡ ಸಾಹಿತ್ಯ 'ವಿಮರ್ಶೆಯ ವಿಮರ್ಶೆ'ಯಾಗಿ ವಿಶಿಷ್ಟ ಮಹತ್ವ ಹೊಂದಿದೆ.

೧.೭.೪ ವಿಮರ್ಶಾ ಮೀಮಾಂಸೆಯಾಗಿ ಮಹತ್ವ

ಸಾಹಿತ್ಯ ವಿಮರ್ಶೆ ಎನ್ನುವ ಸಂಪೂರ್ಣ ಹೊಸ ಸಾಹಿತ್ಯ ಪ್ರಕಾರವೊಂದನ್ನು ಪಾಶ್ಚಾತ್ಯ ಸಾಹಿತ್ಯ ಸಂಪರ್ಕದ ಪ್ರಭಾವದಿಂದ ಕನ್ನಡದಲ್ಲಿ ಬಳಸಲು ಆರಂಭಿಸಿದಾಗ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಗಳ ಸಂದರ್ಭದಲ್ಲಿ ಅದನ್ನು ಭಾವಿಸಿದ ಕ್ರಮಗಳು, ಅನ್ವಯಿಸಿದ ವಿಧಾನಗಳು ಹಾಗೂ ಆ ಮೂಲಕ ಸಾಧಿಸಲು ಬಯಸಿದ ಉದ್ದೇಶಗಳನ್ನು ಕುರಿತು ಚಿಂತಿಸಲಾಗಿದೆ. ಹಾಗೆಯೇ ಅವು ಈಡೇರಿದಾಗ ಉಂಟಾಗಿರುವ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಭಿನ್ನತೆಗಳ, ವೈರುಧ್ಯಗಳ ಹಾಗೂ ಬಿಕ್ಕಟ್ಟುಗಳ ಸ್ವರೂಪಗಳನ್ನು ಕುರಿತು ಇಲ್ಲಿ ಪರಿಶೀಲಿಸಲಾಗಿದೆ. ಇದನ್ನು ವಿಮರ್ಶೆಯ ವಿಮರ್ಶೆ ಸಂದರ್ಭದಲ್ಲಿ ಮಾಡಲಾಗುವ ಜಿಜ್ಞಾಸೆ ಅಥವಾ ಮೀಮಾಂಸೆ ಎಂದು ಗ್ರಹಿಸಲಾಗಿದೆ.

ಬೇರೆ ಯಾವುದೋ ಒಂದು ಸಂಪೂರ್ಣ ಭಿನ್ನವಾದ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ಹಾಗೂ ಸಾಹಿತ್ಯಕ ಪರಿಸರದಮತ್ತು ನಿರ್ದಿಷ್ಟ ಕಾಲಘಟ್ಟದ ಹಿನ್ನೆಲೆಯಲ್ಲಿ ಹುಟ್ಟುವ ಅನ್ಯ ವಿಮರ್ಶಾ ಪ್ರಜ್ಞೆ ಹಾಗೂ ವಿಧಾನಗಳನ್ನು ಕನ್ನಡದ ಭಾಷಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಿಗೆ ಅನ್ವಯಿಸುವುದರಿಂದ ಕನ್ನಡ ವಿಮರ್ಶೆ ಎದುರಿಸಿರುವ ತೊಡಕಿನ ಪ್ರಶ್ನೆಯನ್ನು ವಿಮರ್ಶೆಯ 'ಸಾಂಸ್ಕೃತಿಕ ಸಮಸ್ಯೆ' ಮತ್ತು 'ಹುಡುಕಾಟದ ಪ್ರಶ್ನೆ'ಯೆಂದು ಪರಿಗಣಿಸಿ ಇಲ್ಲಿ ಚಿಂತಿಸಲಾಗಿದೆ.

ಕನ್ನಡ ವಿಮರ್ಶೆಯ ಆರಂಭದಿಂದ ಬಹಳಷ್ಟು ಕಾಲದವರೆಗೂ ವಿಮರ್ಶೆಯನ್ನು 'ಸೃಜನೇತರ' ಮತ್ತು 'ಎರಡನೆ ದರ್ಜೆಯ ಚಟುವಟಿಕೆ' ಎಂದು ಭಾವಿಸಲಾಗಿತ್ತು ಹಾಗೂ ಬಲವಾಗಿ ನಂಬಲಾಗಿತ್ತು. ವಿಮರ್ಶಕನಿಗೆ ಸ್ವತಂತ್ರ ಸೃಷ್ಟಿಶೀಲ ಪ್ರತಿಭೆ ಇರುವುದಿಲ್ಲ ಎಂದು ಭಾವಿಸಿಕೊಂಡೇ ಈ ಅವಧಿಯ ಬಹುದೊಡ್ಡ ಸೃಷ್ಟಿಶೀಲ ಪ್ರತಿಭೆಯ ಲೇಖಕರು ವಿಮರ್ಶೆಯನ್ನು ಕಟ್ಟಿ ಬೆಳೆಸಿದರು. ಆದರೆ, ಸಮಕಾಲೀನ ಸಂದರ್ಭದಲ್ಲಿ ಈ ನಂಬಿಕೆ ಸಂಪೂರ್ಣವಾಗಿ ನೆಲೆ ಕಳೆದುಕೊಂಡಿದೆ. ವಿಮರ್ಶೆ ಸಹ ಒಂದು ಮಹತ್ವದ ಸೃಜನಶೀಲ ಪ್ರಕಾರ ಮತ್ತು ಸ್ವತಂತ್ರ ಸೃಷ್ಟಿಶೀಲ ಪ್ರತಿಭೆಯುಳ್ಳ ವಿಮರ್ಶಕನಿಂದ ಮಾತ್ರವೇ ಶ್ರೇಷ್ಠಮಟ್ಟದ ವಿಮರ್ಶೆಯ ರಚನೆ ಸಾಧ್ಯ ಎನ್ನುವ ಅಭಿಪ್ರಾಯ ಅರ್ಥ ಪಡೆದುಕೊಂಡಿದೆ. ವಿಮರ್ಶೆ ಕುರಿತ ಈ ಎರಡು ಪರಸ್ಪರ ವಿರುದ್ಧ ಧೋರಣೆಗಳು ಮತ್ತು ನಿಲುವುಗಳು ಕನ್ನಡ ವಿಮರ್ಶೆಯ ತಾತ್ವಿಕತೆಯನ್ನು ರೂಪಿಸುವುದರಲ್ಲಿ ಬೀರಿರುವ ಪ್ರಭಾವ ಮತ್ತು ಪರಿಣಾಮಗಳನ್ನು ಕುರಿತು ಈ ಅಧ್ಯಯನದಲ್ಲಿ ವಿವೇಚಿಸಲಾಗಿದೆ.

ಸಾಹಿತ್ಯ ಮತ್ತು ಸಂಸ್ಕೃತಿಯ ಅಮೂರ್ತ ಹಾಗೂ ಮೂರ್ತ ರೂಪದ ಪ್ರಶ್ನೆಗಳನ್ನು ವಿಶ್ಲೇಷಿಸುವುದಕ್ಕೆ ಸಂಬಂಧಿಸಿದಂತೆ, ವಿಮರ್ಶೆ ಭಾಷೆಯನ್ನು ಒಂದು ವಸ್ತು ಸಂಗತಿಯಾಗಿ

ಗ್ರಹಿಸಿದೆಯೋ, ಸಾಧನ ಅಥವಾ ಮಾಧ್ಯಮವಾಗಿ ಭಾವಿಸಿದೆಯೋ ಇಲ್ಲವೇ ಸ್ವತಂತ್ರ ಜ್ಞಾನರೂಪವಾಗಿ ಅರ್ಥೈಸಿಕೊಂಡಿದೆಯೋ ಎನ್ನುವ ಮಹತ್ವದ ಪ್ರಶ್ನೆಗಳನ್ನು ಸಹ ಇಲ್ಲಿ ಎತ್ತಲಾಗಿದೆ.

ಸಮಕಾಲೀನ ಸಾಹಿತ್ಯ ವಿಮರ್ಶೆ ಭಾಷಿಕ, ಶಾಬ್ದಿಕ ಮತ್ತು ಅಶಾಬ್ದಿಕವಾದ ಎಲ್ಲಾ ರಚನೆಗಳು, ಆಚರಣೆಗಳು ಹಾಗೂ ಕ್ರಿಯಾರೂಪಗಳನ್ನು 'ಪಠ್ಯ'ಗಳೆಂದು ಪರಿಭಾವಿಸುತ್ತದೆ. ಇದರೊಂದಿಗೆ, ಪಠ್ಯದ ವಿಶ್ಲೇಷಣೆಯಲ್ಲಿ ವರ್ತಮಾನದ ತವಕ ತಲ್ಲಣಗಳನ್ನು ಎದುರುಬದುರಾಗಿಸುವ ವಿಧಾನ ಅನುಸರಿಸುತ್ತಿದೆ. ಇದು ಸಾಹಿತ್ಯ ವಿಮರ್ಶೆಯ ಘನಿಷ್ಠ ತಾತ್ವಿಕತೆ ಅಥವಾ ನಿರ್ದಿಷ್ಟ ಚೌಕಟ್ಟಿಗೆ ಧಕ್ಕೆ ತರುತ್ತಿದೆಯೇ ಎಂದು ಪರಿಶೀಲಿಸಲಾಗಿದೆ. ಇಂದಿನ ವಿಮರ್ಶೆ ಜಾಗತಿಕ ಮತ್ತು ಸ್ಥಳೀಯ ಹಿತಾಸಕ್ತಿಗಳ ವಿವಿಧ ವಿದ್ಯಮಾನಗಳಿಗೆ ತೃತೀಯ ಜಗತ್ತಿನ ಸಂಕಥನ ಮಾಧ್ಯಮವಾಗಿ ಪ್ರತಿಕ್ರಿಯಿಸುತ್ತಿದೆ. ಹಾಗೆಯೇ, ಆಧುನಿಕೋತ್ತರ ಸಂದರ್ಭದ ಜ್ಞಾನಮೀಮಾಂಸೆಗಳು ಮತ್ತು ಬದುಕಿನ ಆಧುನಿಕ ಲಯಗಳಿಗೆ ವಿರುದ್ಧವಾಗಿ ದೇಶಿ ಜ್ಞಾನ ವಿಧಾನಗಳು ಹಾಗೂ ಜೀವನ ಪದ್ಧತಿಗಳ ಹೊಸಹುಡುಕಾಟದಲ್ಲಿ ತೀವ್ರವಾಗಿ ತೊಡಗಿದೆ. ಇದರಿಂದ ಸಾಹಿತ್ಯ ವಿಮರ್ಶೆಯ ಹೊಸ ತಾತ್ವಿಕತೆಗಳು ಹೇಗೆ ಹುಟ್ಟಿಕೊಳ್ಳುತ್ತವೆ ಮತ್ತು ಇವುಗಳಿಂದ ಸಾಹಿತ್ಯ ಹಾಗೂ ಮನುಷ್ಯ ಬದುಕಿನ ಪ್ರಶ್ನೆಗಳನ್ನು ಅರ್ಥೈಸುವ ಬಗೆ ಹೇಗೆ ಎನ್ನುವ ಪ್ರಶ್ನೆಯನ್ನು ಸಹ ಈ ಸಂದರ್ಭದಲ್ಲಿ ಪ್ರಧಾನವಾಗಿ ಆಲೋಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಈ ಅಧ್ಯಯನವು ಸಾಹಿತ್ಯ ವಿಮರ್ಶೆಯ ಮೀಮಾಂಸೆಯ ಆಯಾಮದಿಂದಲೂ ಅರ್ಥಪೂರ್ಣವಾದ ಮಹತ್ವ ಹೊಂದಿದೆ.

ಅಧ್ಯಾಯ-ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ವಿಮರ್ಶಾತ್ಮಕ ವಿಶ್ಲೇಷಣೆ

೨.೧ ಪೀಠಿಕೆ

೨.೨ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆ

೨.೩ ಸಾಂಸ್ಕೃತಿಕ ವಿಮರ್ಶೆ ಎಂದರೇನು?

೨.೩.೧ ಸಮಾವಿಷ್ಟ ನೆಲೆ

೧.೩.೨ ವಿಶಿಷ್ಟ ನೆಲೆ

೨.೪ ಸಾಂಸ್ಕೃತಿಕ ವಿಮರ್ಶೆಯ ರೂಪುರೇಷೆಗಳೇನು
ಅಥವಾ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಏನು?

೨.೪.೧ ನಕಾರಾತ್ಮಕ ನೆಲೆ

೨.೪.೨ ಸಕಾರಾತ್ಮಕ ನೆಲೆ

೨.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿಶ್ಲೇಷಣೆ

೨.೫.೧ ಪರಿಷ್ಕರಣವಾದಿ ನೆಲೆ

೨.೫.೨ ಆವಿಷ್ಕರಣವಾದಿ ನೆಲೆ

೨.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಚಿಂತನೆ

೨.೬.೧ ಸಾಂಸ್ಕೃತಿಕ ಯಾಜಮಾನ್ಯರಾಹಿತ್ಯತೆ ನೆಲೆ

೨.೬.೨ ದೇಶಿ ಸಂಸ್ಕೃತಿ ಶೋಧನೆ ನೆಲೆ

೨.೬.೩ ತೃತೀಯ ಜಗತ್ತಿನ ಸಂಕಥನ ನೆಲೆ

೨.೬.೪ ವಸಾಹತೋತ್ತರ ಚಿಂತನೆ ನೆಲೆ

೨.೬.೫ ನವವಸಾಹತುಶಾಹಿ ಸಾಂಸ್ಕೃತಿಕ ಶೋಧದ ನೆಲೆ

೨.೬.೬ ಸಾಮಾಜಿಕ ನೆಲೆ

೨.೬.೭ ಸಾಂಸ್ಕೃತಿಕ ನೆಲೆ

೨.೬.೮ ಸಂಘರ್ಷದ ನೆಲೆ

೨.೬.೯ ಸಾಹಿತ್ಯದ ನೆಲೆ

೨.೬.೧೦ ದೇಶಿ ನೆಲೆ

೨.೭ ಕೆಲವು ಪ್ರಶ್ನೆಗಳು

೨.೮ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನದ ಪರಿಶೀಲನೆ

೨.೯ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ಗುರುತಿಸುವಿಕೆ

೨.೧೦ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳ ವಿಶ್ಲೇಷಣೆ

ಅಧ್ಯಾಯ–೨: ಇದುವರೆಗೆ ನಡೆದಿರುವ ಅಧ್ಯಯನಗಳ ವಿಮರ್ಶಾತ್ಮಕ ವಿಶ್ಲೇಷಣೆ

೨.೧ ಪೀಠಿಕೆ

ಕನ್ನಡ ಸಾಹಿತ್ಯ ಸಂಶೋಧನೆಯ ಕ್ಷೇತ್ರದಲ್ಲಿ 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಕುರಿತು ಇದುವರೆಗೆ ಯಾವುದೇ ಪೂರ್ಣಪ್ರಮಾಣದ ಅಧ್ಯಯನ ನಡೆದಿಲ್ಲ. ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ವಿಧವಾದ ಕೃತಿಗಳು ಸಹ ಪ್ರಕಟವಾಗಿಲ್ಲ.

ಕನ್ನಡದ ಅನೇಕ ವಿಮರ್ಶಕರ ಬರಹಗಳಲ್ಲಿ ಈ ವಿಷಯ ಕುರಿತು ಸಾಂದರ್ಭಿಕವಾದ ಕೆಲವು ಚಿಂತನೆಗಳು ಮತ್ತು ಅಭಿಪ್ರಾಯೋಕ್ತಿಗಳು ವ್ಯಕ್ತವಾಗಿರುವ ಹಲವಾರು ನಿದರ್ಶನಗಳಿವೆ. ಸಾಮಾನ್ಯವಾಗಿ ಇಂಥ ಕಡೆಗಳಲ್ಲಿ 'ಸಾಂಸ್ಕೃತಿಕ ವಿಮರ್ಶೆ ಎಂದರೇನು' ಮತ್ತು 'ಸಾಹಿತ್ಯ ವಿಮರ್ಶೆಗೂ ಹಾಗೂ ಸಾಂಸ್ಕೃತಿಕ ವಿಮರ್ಶೆಗೂ ಇರುವ ಮೂಲಭೂತವಾದ ವ್ಯತ್ಯಾಸಗಳೇನು' ಎನ್ನುವ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕಂಡುಕೊಳ್ಳುವುದು ಪ್ರಧಾನ ಆಸಕ್ತಿಯಾಗಿರುತ್ತದೆ. ಹಾಗೆಯೇ, 'ಸಾಹಿತ್ಯ ವಿಮರ್ಶೆ', 'ಸಂಸ್ಕೃತಿ ವಿಮರ್ಶೆ', 'ಸಂಸ್ಕೃತಿ ನಿಷ್ಠ ವಿಮರ್ಶೆ', 'ಸಂಸ್ಕೃತಿ ಕೇಂದ್ರಿತ ವಿಮರ್ಶೆ', 'ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆ' ಮತ್ತು ' ಸಾಂಸ್ಕೃತಿಕ ವಿಮರ್ಶೆ' ಮೊದಲಾದ ಪರಿಕಲ್ಪನೆಗಳನ್ನು ಏಕಾರ್ಥ, ಅನೇಕಾರ್ಥ, ಸಮಾನಾರ್ಥ ಮತ್ತು ಭಿನ್ನಾರ್ಥದ ನೆಲೆಗಳಲ್ಲಿ ಬಳಸಿರುವುದು ಕಂಡು ಬರುತ್ತದೆ.

ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಕಲ್ಪನೆ, ಅದರ ಸ್ವರೂಪ, ವಿಕಾಸ, ವಿಧಾನ ಮತ್ತು ವಿನ್ಯಾಸ. ಮೊದಲಾದವುಗಳನ್ನು ಕುರಿತು ಸಾಕಷ್ಟು ಪ್ರಮಾಣದಲ್ಲಿ ಗಂಭೀರವಾದ ಚರ್ಚೆ ಮತ್ತು ವಿಶ್ಲೇಷಣೆಗಳು ನಡೆದಿಲ್ಲ. ಈ ಕುರಿತು ಅತ್ಯಂತ ಕಡಿಮೆ ಪ್ರಮಾಣದ ಸಾಮಗ್ರಿ ಮಾತ್ರ ದೊರೆಯುತ್ತದೆ. ಅದು ಮುಂದಿನಂತಿದೆ:

ಅ. ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ಕೇಶವಶರ್ಮ ಕೆ. ಇವರು ಸಂಪಾದಿಸಿರುವ 'ವಿಮರ್ಶೆ ೧೯೯೩' (೧೯೯೭) ಕೃತಿಯಲ್ಲಿರುವ ಮನು ಚಕ್ರವರ್ತಿ ಮತ್ತು ವಿ.ಎಸ್. ಶ್ರೀಧರ್ ಅವರ ಸಹರಚಿತ 'ಸಾಂಸ್ಕೃತಿಕ ವಿಮರ್ಶೆ ಮತ್ತು ಕನ್ನಡ ಸಾಹಿತ್ಯ ಸಂದರ್ಭ' ಎನ್ನುವ ಲೇಖನ.

ಆ. ವಿ.ಚಂದ್ರಶೇಖರ ನಂಗಲಿ ಅವರ 'ಮಾರ್ಕ್ಸ್‌ವಾದಿ ವಿಮರ್ಶೆ' ಕೃತಿಯಲ್ಲಿರುವ 'ತೊಂಬತ್ತರ ದಶಕದ ಸಾಹಿತ್ಯ ವಿಮರ್ಶೆ' ಎನ್ನುವ ಲೇಖನ.

ಇ. ಬೆಂಗಳೂರಿನ ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನ 'ಕನ್ನಡ ವೇದಿಕೆ' ಪ್ರಕಟಿಸಿರುವ 'ಕರ್ನಾಟಕ ಸಂಸ್ಕೃತಿ ಚಿಂತನೆ' (೨೦೦೫) ಕೃತಿಯಲ್ಲಿನ 'ಕರ್ನಾಟಕ ಸಂದರ್ಭದಲ್ಲಿ ಸಂಸ್ಕೃತಿ ಚಿಂತನೆ' ಎನ್ನುವ ವಿಷಯದ ಪ್ರಶ್ನಾವಳಿಯ ೨ನೇ ಪ್ರಶ್ನೆಯಾದ

'ಇತ್ತೀಚಿಗೆ ಕನ್ನಡ ಸಾಹಿತ್ಯ ವಿಮರ್ಶೆಯು ಸಂಸ್ಕೃತಿ ವಿಮರ್ಶೆಯ ಕಡೆಗೆ ಹೊರಳಿಕೊಳ್ಳುತ್ತಿದೆಯೇ ಇಂಥ ಬದಲಾವಣೆಯ ಹಿಂದಿನ ತಾತ್ವಿಕತೆ ಮತ್ತು ವಿಶ್ಲೇಷಣೆಯ ವಿಧಾನಗಳು ಹೇಗಿರಬೇಕು' ಎನ್ನುವುದಕ್ಕೆ ನಾಡಿನ ಹತ್ತು ಜನ ಹೆಸರಾಂತ ಬರಹಗಾರರು ನೀಡಿರುವ ಪ್ರತಿಕ್ರಿಯೆಗಳು.

ಈ. ಜಿ.ಬಿ. ಹರೀಶ್ ಅವರ 'ಬೆಳಕಿನಾಟ' (೨೦೦೫) ಕೃತಿಯ 'ಸಾಂಸ್ಕೃತಿಕ ವಿಮರ್ಶೆಯ ಸಂಕಥನಗಳು' ಎನ್ನುವ ಲೇಖನ.

ಉ. ಮೊಗಳ್ಳಿ ಗಣೇಶ್ ಅವರ 'ಮೌಖಿಕ ಕಥನ' (೨೦೦೬) ಕೃತಿಯಲ್ಲಿರುವ 'ಸಂಸ್ಕೃತಿ ವಿಮರ್ಶೆಯ ದೇಶಿ ಚಹರೆ' ಎನ್ನುವ ಲೇಖನ.

ಊ. ರಂಗನಾಥ ಕಂಟನಕುಂಟೆ ಅವರ 'ಜನರ ವ್ಯಾಕರಣ' (೨೦೧೧) ಕೃತಿಯಲ್ಲಿರುವ 'ಸಂಸ್ಕೃತಿ ವಿಮರ್ಶೆಯಾಗಿ ಸಾಹಿತ್ಯದ ಓದು' ಎನ್ನುವ ಲೇಖನ ಮತ್ತು

ಋ. ಕೇಶವಶರ್ಮ ಕೆ. ಅವರ 'ನೀಲನಕ್ಷೆ' (೨೦೧೧) ಕೃತಿಯಲ್ಲಿರುವ 'ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ' ಎನ್ನುವ ಲೇಖನ.

ಇಲ್ಲಿ, ಈ ಲೇಖನಗಳನ್ನು ಅವು ಪುಸ್ತಕ ರೂಪದಲ್ಲಿ ಪ್ರಕಟವಾಗಿರುವ ಕಾಲಾನುಕ್ರಮ ವಿಧಾನದಲ್ಲಿ ನೀಡಲಾಗಿದೆ. ಆದರೆ, ಇವುಗಳ ವಿಶ್ಲೇಷಣೆಯಲ್ಲಿ ಸಂಶ್ಲೇಷಣಾತ್ಮಕ ಕ್ರಮ ಅನುಸರಿಸಲಾಗಿದೆ.'ಸಾಂಸ್ಕೃತಿಕ ವಿಮರ್ಶೆ' ಮತ್ತು 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಕುರಿತು ಇವುಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು, ಗ್ರಹಿಕೆಗಳು, ಚಿಂತನೆಗಳು ಹಾಗೂ ಧೋರಣೆಗಳಲ್ಲಿರುವ ಪರಸ್ಪರ ಸಾದೃಶ್ಯ ಮತ್ತು ವೈದೃಶ್ಯ ಸಂಗತಿಗಳ ವಿಶಿಷ್ಟತೆಯನ್ನು ಆಧರಿಸಿದ ಸೈದ್ಧಾಂತೀಕರಣ ನೆಲೆಯಲ್ಲಿ ಇವುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಇಲ್ಲಿನ ವಿಮರ್ಶಕರು ಸಮಾಜ, ಸಂಸ್ಕೃತಿ, ಸಾಹಿತ್ಯ ಮತ್ತು ವಿಮರ್ಶೆ ಕುರಿತ ತಮ್ಮ ಗ್ರಹಿಕೆಗಳು, ಧೋರಣೆಗಳು ಹಾಗೂ ನಿಲುವುಗಳ ಮೂಲಕ ರೂಪಿಸಿಕೊಂಡಿರುವ ವಿಶಿಷ್ಟ ತಾತ್ವಿಕತೆಯ ಹಿನ್ನೆಲೆಯಲ್ಲಿ 'ಸಾಂಸ್ಕೃತಿಕ ವಿಮರ್ಶೆ' ಮತ್ತು 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಕುರಿತು ಚರ್ಚಿಸಿರುತ್ತಾರೆ. ಈ ಚರ್ಚೆಯಲ್ಲಿ ವ್ಯಾಪಕವಾದ ವೈವಿಧ್ಯತೆ ಇದೆ. ಕೆಲವು ಸಂಗತಿಗಳ ಕುರಿತು ಕೆಲವು ವಿಮರ್ಶಕರ ಅಭಿಪ್ರಾಯಗಳಲ್ಲಿ ಸಮಾನತೆ ಮತ್ತು ಏಕತೆ ಕಂಡುಬರುತ್ತದೆ. ಹಾಗೆಯೇ, ಅನೇಕ ವಿಷಯಗಳಲ್ಲಿ ತೀವ್ರವಾದ ಭಿನ್ನಮತವಿರುತ್ತದೆ. ಒಟ್ಟಾರೆ ಅತ್ಯಂತ ಆಸಕ್ತಿದಾಯಕವಾಗಿರುವ ಇಲ್ಲಿನ ಚರ್ಚೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ವಿಶ್ಲೇಷಣೆಯ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾಗಿವೆ.

ಈ ಲೇಖನಗಳ ಸಮಗ್ರ ವಿಶ್ಲೇಷಣೆಯಿಂದ ಇಲ್ಲಿನ ವಿಮರ್ಶಕರು ಸಾಂಸ್ಕೃತಿಕ ವಿಮರ್ಶೆಗೆ ಸಂಬಂಧಿಸಿದ ಹಲವು ಮಹತ್ವದ ಸಂಗತಿಗಳನ್ನು ಕುರಿತು ಗಂಭೀರವಾದ ಚರ್ಚೆ ಮಾಡಿರುವುದನ್ನು

ಗುರುತಿಸಬಹುದಾಗಿದೆ. ಅವುಗಳೆಂದರೆ ಅ. ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆ ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿಶ್ಲೇಷಣೆ ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ವಿವೇಚನೆ ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನದ ಪರಿಶೀಲನೆ ಉ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳ ಗುರುತಿಸುವಿಕೆ ಮತ್ತು ಊ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳ ಚರ್ಚೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಈ ಅಧ್ಯಯನದ ದೃಷ್ಟಿಯಿಂದ, ಮೇಲಿನ ಸಂಗತಿಗಳನ್ನು ಕುರಿತ ವಿಮರ್ಶಕರ ವಿಚಾರಗಳನ್ನು ವಿವರವಾಗಿ ಪರಿಶೀಲಿಸುವುದು ಅತ್ಯಂತ ಉಚಿತವಾಗಿದೆ. ಇದರಿಂದ ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದಿರುವ ಅಧ್ಯಯನಗಳು, ಅವುಗಳ ಸ್ವರೂಪ, ಅವುಗಳ ಮಹತ್ವ ಮತ್ತು ಮಿತಿಗಳನ್ನು ಅರಿಯುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ವಿಷಯವನ್ನು ಕುರಿತು ಈಗಾಗಲೇ ಯಾವ ಯಾವ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ, ಅವು ಒಳಗೊಂಡಿರುವ ಸಮಸ್ಯೆಗಳ ಸ್ವರೂಪವೇನು ಮತ್ತು ಇದರ ಹೊರತಾಗಿ ಇನ್ನು ಯಾವ ಹೊಸಬಗೆಯ ಹಾಗೂ ವಿಭಿನ್ನ ನೆಲೆಯ ಅರ್ಥಪೂರ್ಣ ಅಧ್ಯಯನ ಸಾಧ್ಯತೆಗಳಿವೆ ಎನ್ನುವ ಮಹತ್ವದ ಸಂಗತಿ ಕುರಿತು ಖಚಿತವಾದ ಮತ್ತು ಸ್ಪಷ್ಟವಾದ ತಾತ್ವಿಕ ಮುನ್ನೋಟ ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಮೇಲಿನ ಸಂಗತಿಗಳನ್ನು ಕುರಿತು ಇಲ್ಲಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

೨.೨ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆ

ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆಯು, ಮುಖ್ಯವಾಗಿ 'ಸಾಂಸ್ಕೃತಿಕ ವಿಮರ್ಶೆ ಎಂದರೇನು' ಮತ್ತು 'ಸಾಂಸ್ಕೃತಿಕ ವಿಮರ್ಶೆಯ ರೂಪುರೇಷೆಗಳೇನು' ಅಥವಾ 'ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಏನು' ಎನ್ನುವ ಎರಡು ಮಹತ್ವದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕಂಡುಕೊಳ್ಳುವ ಪ್ರಯತ್ನದ ಸ್ವರೂಪದಲ್ಲಿರುತ್ತದೆ. ಇಲ್ಲಿನ ಬಹಳಷ್ಟು ವಿಮರ್ಶಕರು ಈ ಪ್ರಶ್ನೆಗಳಿಗೆ ತಮ್ಮದೇ ಆದ ವಿಶಿಷ್ಟ ಉತ್ತರ ನೀಡುವ ಪ್ರಯತ್ನ ಮಾಡಿದ್ದಾರೆ. ಈ ಉತ್ತರಗಳು ವೈವಿಧ್ಯತೆಯಿಂದ ಕೂಡಿವೆ ಮತ್ತು ಆಸಕ್ತಿದಾಯಕವಾಗಿವೆ.

೨.೩ ಸಾಂಸ್ಕೃತಿಕ ವಿಮರ್ಶೆ ಎಂದರೇನು?

ಈ ಪ್ರಶ್ನೆಗೆ ಅರ್ಥಪೂರ್ಣವಾದ ಉತ್ತರ ಕಂಡುಕೊಳ್ಳುವುದು ತಾತ್ವಿಕ ಚರ್ಚೆಯ ಅತ್ಯಂತ ನಿರ್ಣಾಯಕ ಸಂಗತಿಯೆನ್ನುವಂತೆ ಪರಿಗಣಿಸಲಾಗಿದೆ. ಮುಖ್ಯವಾಗಿ ಎರಡು ರೀತಿಯಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನಗಳನ್ನು ಮಾಡಲಾಗಿದೆ. ಅವುಗಳೆಂದರೆ, ಅ. ಸಮಾವಿಷ್ಟ ನೆಲೆ ಮತ್ತು ಆ. ವಿಶಿಷ್ಟ ನೆಲೆ.

ಈ ನೆಲೆಗಳು 'ಸಾಂಸ್ಕೃತಿ ವಿಮರ್ಶೆ ಎಂದರೇನು' ಎನ್ನುವ ಮೂಲಭೂತ ಪ್ರಶ್ನೆಗೆ ಸಮಂಜಸ ಉತ್ತರ ಕಂಡುಕೊಳ್ಳುವ ಪ್ರಯತ್ನದ ಭಾಗವಾಗಿ ಮಾಡಿರುವ ಚರ್ಚೆಗಳು ಹಲವು ಕುತೂಹಲಕರವಾದ ಮತ್ತು

ವಿಶಿಷ್ಟವಾದ ಸಂಗತಿಗಳನ್ನು ಒಳಗೊಂಡಿವೆ. ಪ್ರಸ್ತುತ ಅಧ್ಯಯನಕ್ಕೆ ಅತ್ಯಂತ ಪೂರಕವಾಗಿರುವ ಹಿನ್ನೆಲೆಯಲ್ಲಿ ಇಲ್ಲಿ ಇವುಗಳನ್ನು ಕುರಿತು ಸ್ಥೂಲವಾಗಿ ಅವಲೋಕಿಸಲಾಗಿದೆ.

೨.೩.೧ ಸಮಾನಿಷ್ಟ ನೆಲೆ

'ಸಾಂಸ್ಕೃತಿಕ ವಿಮರ್ಶೆ ಎಂದರೇನು' ಎನ್ನುವ ಪ್ರಶ್ನೆಗೆ ವೈಜ್ಞಾನಿಕವಾದ ಅಥವಾ ನಿರ್ದಿಷ್ಟವಾದ ವ್ಯಾಖ್ಯೆ ನೀಡಲು ಸಾಧ್ಯವಿಲ್ಲ ಮತ್ತು ಅದು ಅನಗತ್ಯ ಕೂಡಾ ಎನ್ನುವುದನ್ನು ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆಯಲ್ಲಿ ಅನೇಕ ವಿಮರ್ಶಕರು ದೃಢೋಕ್ತಿಯೆನ್ನುವಂತೆ ಪ್ರತಿಪಾದಿಸಿದ್ದಾರೆ. ಯಾವುದೇ ಪರಿಪೂರ್ಣ ಎನ್ನಬಹುದಾದ ವ್ಯಾಖ್ಯೆ ಕೂಡಾ ಸಾಂಸ್ಕೃತಿಕ ವಿಮರ್ಶೆಯ ಸಮಗ್ರ ಅರ್ಥವನ್ನು ಒಳಗೊಳ್ಳುವುದಿಲ್ಲ. ಇಂಥ ವ್ಯಾಖ್ಯೆ ಸಾಮಾನ್ಯವಾಗಿ ಹಾಗೆ ಅರ್ಥವನ್ನು ಒಳಗೊಳ್ಳುವುದಕ್ಕೆ ಬದಲಾಗಿ ಹೊರಗೆ ಉಳಿಸುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ ಎನ್ನುವುದು ತಮ್ಮ ನಿಲುವಿಗೆ ಅವರು ನೀಡುವ ಸಮರ್ಥನೆಯಾಗಿದೆ. ಮನು ಚಕ್ರವರ್ತಿ ಮತ್ತು ವಿ. ಶ್ರೀಧರ್, ಈ ಕುರಿತು "ಪ್ರಚಲಿತವಿರುವ ಹಲವಾರು ಸಾಹಿತ್ಯ ವಿಮರ್ಶಾ ಪದ್ಧತಿಗಳಲ್ಲಿ 'ಸಾಂಸ್ಕೃತಿಕ ವಿಮರ್ಶೆ' ಎನ್ನುವುದು ಇನ್ನೊಂದು ನಿರ್ದಿಷ್ಟವಾದ ಪದ್ಧತಿ ಅಲ್ಲ. ಹಾಗೆಯೇ ಯಾವುದಾದರೊಂದು ನಿರ್ದಿಷ್ಟ ಬದುಕಿನ ಕ್ಷೇತ್ರದ ಹಿನ್ನೆಲೆಯಿಲ್ಲದೆ ಸಂಸ್ಕೃತಿ ವಿಮರ್ಶೆಯ ಬಗ್ಗೆ ಮಾತಾಡುವ ಹಾಗಿಲ್ಲ. ಸಂಗೀತವಿರಲಿ, ತತ್ವ–ಧರ್ಮಶಾಸ್ತ್ರವಿರಲಿ, ಕ್ರೀಡೆಯಿರಲಿ ಅಥವಾ ಕೇವಲ ಒಂದು ಜೋಕ್ ಆಗಲಿ–ಎಲ್ಲವೂ ಒಂದು ಬಗೆಯ ಸಂಸ್ಕೃತಿ ವಿಮರ್ಶೆಯೇ. ಸಾಹಿತ್ಯಾಧ್ಯಯನವೂ ಕೂಡಾ ಈ ಅರ್ಥದಲ್ಲಿ ಕೇವಲ ಸಾಹಿತ್ಯ ವಿಮರ್ಶೆಯಾಗದೆ ಮೂಲದಲ್ಲಿ ಸಂಸ್ಕೃತಿ ವಿಮರ್ಶೆಯೇ ಆಗಿರುತ್ತದೆ"[೧] ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸಾಂಸ್ಕೃತಿಕ ವಿಮರ್ಶೆಯನ್ನು ಸಾಹಿತ್ಯ ವಿಮರ್ಶೆಯ ನಿರ್ದಿಷ್ಟ ಅರ್ಥ ಮತ್ತು ಪರಿಸರದ ಹಿನ್ನೆಲೆಯಲ್ಲಿ ಗ್ರಹಿಸುತ್ತಿಲ್ಲ ಎನ್ನುವುದು ಮುಖ್ಯವಾದ ವಿಚಾರವಾಗಿದೆ. ಮನುಷ್ಯ ಸಂಸ್ಕೃತಿ ಎನ್ನುವುದು ಸಾಹಿತ್ಯವೂ ಸೇರಿದಂತೆ ಮಾನವನ ಸಮಸ್ತ ಕ್ರಿಯಾಚಟುವಟಿಕೆಗಳನ್ನು ಒಳಗೊಳ್ಳುವುದರಿಂದ, ಇಂಥ ಸಾಂಸ್ಕೃತಿಕ ಚಟುವಟಿಕೆಯ ಯಾವುದೇ ಒಂದು ರೂಪವನ್ನು ಕುರಿತ ವಿಮರ್ಶೆ ಕೂಡಾ ಮೂಲದಲ್ಲಿ ಸಂಸ್ಕೃತಿ ವಿಮರ್ಶೆಯೇ ಆಗಿರುತ್ತದೆ ಎನ್ನುವುದು ಗ್ರಹಿಕೆಯಾಗಿದೆ. ಈ ಕಾರಣದಿಂದಲೇ ಈ ಇಬ್ಬರು ವಿಮರ್ಶಕರು "ತೀರಾ ಸರಳವಾಗಿ ನೋಡಿದಾಗಲೂ ಸಹ ಎಂಥ ಕಳಪೆ ದರ್ಜೆಯ, ಮೇಲ್ಪದರದ ಸಾಹಿತ್ಯದ ಓದೂ ಕೂಡ ಸಾಹಿತ್ಯದ ಗರ್ಭದಲ್ಲಿರುವ ಸಾಂಸ್ಕೃತಿಕ ಸಂಗತಿಗಳಿಗೆ ಸ್ಪಂದಿಸುತ್ತಿರುತ್ತದೆ. ಹಾಗಾಗಿ ಎಂಥ ಕೆಳಮಟ್ಟದ ವಿಮರ್ಶೆ ಕೂಡ, ತೀರಾ ಸಂಕುಚಿತ ಅರ್ಥದಲ್ಲಿ ಸಾಂಸ್ಕೃತಿಕ ವಿಮರ್ಶೆಯೇ. ಅಂತಹ ವಿಮರ್ಶೆಗೂ ಕೂಡ ವಿಶೇಷವಾದ ಐತಿಹಾಸಿಕ ಕಾರಣ, ಸನ್ನಿವೇಶಗಳಿರುತ್ತವೆ"[೨] ಎಂದು ಹೇಳುವ ಮೂಲಕ ಸಾಂಸ್ಕೃತಿಕ ವಿಮರ್ಶೆಗೆ ಯಾವುದೇ ವಿಶಿಷ್ಟತೆಯಾಗಲಿ ಅಥವಾ ಅನನ್ಯತೆಯಾಗಲಿ ಇಲ್ಲವೆನ್ನುವ ನಿಲುವು

ತಾಳುತ್ತಾರೆ. ಎಲ್ಲ ಸಾಹಿತ್ಯ ವಿಮರ್ಶೆಯೂ ಒಂದಲ್ಲ ಒಂದು ಅರ್ಥದಲ್ಲಿ ಮತ್ತು ಒಂದಲ್ಲ ಒಂದು ರೂಪದಲ್ಲಿ ಸಾಂಸ್ಕೃತಿಕ ವಿಮರ್ಶೆಯೆ ಆಗಿರುತ್ತದೆ ಎನ್ನುವುದು ಇವರ ನಂಬಿಕೆಯಾಗಿದೆ.

ಸಾಂಸ್ಕೃತಿಕ ವಿಮರ್ಶೆಯ ಅಗತ್ಯ ಮತ್ತು ಮಹತ್ವವನ್ನು ಒಪ್ಪಿಕೊಂಡರೂ ಸಹ, ಅದಕ್ಕೆ ಯಾವುದೇ ವಿಶಿಷ್ಟತೆಯಾಗಲಿ ಅಥವ ಅನನ್ಯತೆಯಾಗಲಿ ಇಲ್ಲ ಎನ್ನುವುದು ಮನು ಮತ್ತು ಶ್ರೀಧರ್ ಅವರ ನಿಲುವು. ಬಹುಪಾಲು ಇದೇ ಧೋರಣೆಯನ್ನು ಎಸ್.ಎಸ್. ಹಿರೇಮಠ ಅವರ "ಕಾಲ, ದೇಶವೊಂದರ ಸಾಂಸ್ಕೃತಿಕ ಸಂದರ್ಭದಲ್ಲಿ ಕೃತಿ ರೂಪುಗೊಳ್ಳುವ ಕ್ರಿಯೆಯನ್ನು ಅರಿಯಲೆಳೆಸುವುದು ಸಮರ್ಪಕ ವಿಧಾನವೇ; ಆದರೆ ಇದಕ್ಕೆ 'ಸಂಸ್ಕೃತಿ ವಿಮರ್ಶೆ' ಎಂದು ಹೆಸರಿಸುವುದರ ಔಚಿತ್ಯವನ್ನು ಪರಾವಮರ್ಶಿಸಬೇಕಿದೆ"[೩] ಎನ್ನುವ ಮಾತುಗಳು ಖಚಿತಪಡಿಸುತ್ತವೆ.

ಸಾಹಿತ್ಯ ವಿಮರ್ಶೆಯೆಂದರೆ ಮೂಲತಃ ಅದು 'ಸಂಸ್ಕೃತಿ ವಿಮರ್ಶೆ'ಯೇ ಅಥವಾ 'ಸಾಂಸ್ಕೃತಿಕ ವಿಮರ್ಶೆ'ಯೇ ಆಗಿರುತ್ತದೆ ಎನ್ನುವುದು ಮೇಲ್ನೋಟಕ್ಕೆ ಆಕರ್ಷಕವಾಗಿ ಕಂಡರೂ ಸಹ, ವಾಸ್ತವದಲ್ಲಿ ಸಮಸ್ತ ಸಾಹಿತ್ಯ ವಿಮರ್ಶೆಯೆಲ್ಲವೂ ಸಾಂಸ್ಕೃತಿಕ ವಿಮರ್ಶೆಯಾಗಿರುವುದಿಲ್ಲ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಸಾಂಸ್ಕೃತಿಕ ವಿಮರ್ಶೆ'ಯಾಗಿಲ್ಲವೆಂದರೆ, ಅಂಥ ಸಾಹಿತ್ಯ ವಿಮರ್ಶೆ ಅಸಾಂಸ್ಕೃತಿಕ ವಿಮರ್ಶೆಯಾಗಿದೆ ಎಂದೇನೂ ಅರ್ಥವಲ್ಲ. ಏಕೆಂದರೆ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ವಿಮರ್ಶೆಯಾಗಿದೆಯೇ ಎನ್ನುವುದಕ್ಕಿಂತ ಮುಖ್ಯವಾಗಿ, ಅದು 'ಸಾಂಸ್ಕೃತಿಕ ಜವಾಬ್ದಾರಿ' ಮತ್ತು 'ಸಾಂಸ್ಕೃತಿಕ ಕಾಳಜಿ'ಗಳನ್ನು ಒಳಗೊಂಡಿರಬೇಕು ಎನ್ನುವ 'ಸಮಾವಿಷ್ಟ ನೆಲೆ'ಯ ವಿಮರ್ಶಕರು ಇಂಥ ಸಂದರ್ಭದಲ್ಲಿ ಒಂದು ಮುಖ್ಯವಾದ ವಿಚಾರವನ್ನು ಗಮನಿಸುವುದರಲ್ಲಿ ವಿಫಲರಾಗುತ್ತಾರೆ. ಸಾಹಿತ್ಯ ವಿಮರ್ಶೆ 'ಸಾಂಸ್ಕೃತಿಕ ಪ್ರಜ್ಞೆ'ಯನ್ನು ಅನುಸಂಧಾನದ ಪ್ರಮುಖ ಸಾಧನವಾಗಿ ಸ್ವೀಕರಿಸುವುದು ಮತ್ತು ಇದಕ್ಕೆ ಬದಲಾಗಿ 'ಸಾಂಸ್ಕೃತಿಕ ಜವಾಬ್ದಾರಿ' ಮತ್ತು 'ಸಾಂಸ್ಕೃತಿಕ ಕಾಳಜಿ'ಗಳನ್ನು ವಿಮರ್ಶೆಯ ಉದ್ದೇಶಗಳಿಗಾಗಿ ಕೇವಲ ಒಳಗೊಳ್ಳುವುದರ ನಡುವೆ ತಾತ್ವಿಕವಾಗಿ ಅಪಾರ ವ್ಯತ್ಯಾಸವಿರುತ್ತದೆ ಎನ್ನುವುದೇ ಇಂಥ ವಿಚಾರವಾಗಿದೆ. ಆದ್ದರಿಂದಲೇ 'ಸಾಂಸ್ಕೃತಿಕ ವಿಮರ್ಶೆ' ಮೂಲತಃ ಸಾಹಿತ್ಯ ವಿಮರ್ಶೆಯೆ ಆಗಿದ್ದರೂ ಸಹ, 'ಸಾಹಿತ್ಯ ವಿಮರ್ಶೆ' 'ವಸ್ತುತಃ' ಸಾಂಸ್ಕೃತಿಕ ವಿಮರ್ಶೆಯಾಗಿರಲು ಸಾಧ್ಯವಿಲ್ಲ. ಏಕೆಂದರೆ, ಸಾಹಿತ್ಯ ವಿಮರ್ಶೆಯ ಪ್ರಮುಖ ಕಾರ್ಯಮಾದರಿಗಳನ್ನು ಒಳಗೊಂಡೂ ಇನ್ನೂ ಹೆಚ್ಚು ಮಹತ್ವಪೂರ್ಣವಾದ ಮತ್ತು ಸಂಕೀರ್ಣವಾದ ನಿಯೋಗಗಳನ್ನು ಸಾಂಸ್ಕೃತಿಕ ವಿಮರ್ಶೆ ನಿರ್ವಹಿಸಬೇಕಿರುತ್ತದೆ. ಆದ್ದರಿಂದಲೇ, ಸಾಂಸ್ಕೃತಿಕ ವಿಮರ್ಶೆಯ ವ್ಯಾಪ್ತಿ ಮತ್ತು ಹೊಣೆಗಾರಿಕೆಗಳ ಸ್ವರೂಪವು ಸಾಹಿತ್ಯ ವಿಮರ್ಶೆಯ ವ್ಯಾಪ್ತಿ ಹಾಗೂ ಹೊಣೆಗಾರಿಕೆಗಳಿಗಿಂತ ಹೆಚ್ಚು ವ್ಯಾಪಕವೂ, ಸಂಕೀರ್ಣವೂ ಆಗಿರುತ್ತದೆ.

೨.೩.೨ ವಿಶಿಷ್ಟ ನೆಲೆ

ಸಾಂಸ್ಕೃತಿಕ ವಿಮರ್ಶೆಯ ಅರ್ಥವನ್ನು ವಿವರಿಸುವ ಮತ್ತು ಅದರ ಕಾರ್ಯಮಾದರಿಯ ಸ್ವರೂಪವನ್ನು ವಿಶ್ಲೇಷಿಸುವ ಪ್ರಯತ್ನವನ್ನು ಕೆಲವು ವಿಮರ್ಶಕರು ಮುಖ್ಯವೆಂದು ಭಾವಿಸಿಕೊಂಡಿರುತ್ತಾರೆ. ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ, ಸಾಂಸ್ಕೃತಿಕ ವಿಮರ್ಶೆಯು ಯಾವ ನೆಲೆಯಲ್ಲಿ ಬೇರೆಯಾಗಿದೆ ಎನ್ನುವುದು ಇವರ ವಿವೇಚನೆಯ ಮುಖ್ಯ ಆಸಕ್ತಿಯಾಗಿದೆ. ಸಾಂಸ್ಕೃತಿಕ ವಿಮರ್ಶೆಗೆ ಸಾಧ್ಯವಾದಷ್ಟು ಸಮಗ್ರ ಎನ್ನಬಹುದಾದ ವ್ಯಾಖ್ಯೆಯೊಂದನ್ನು ನೀಡುವ ಪ್ರಯತ್ನ ಮಾಡುತ್ತಾ, ಹರೀಶ್ ಅವರು "ಸಂಸ್ಕೃತಿಯನ್ನು ಇಡಿಯಾಗಿ ಅಥವಾ ಬಿಡಿಯಾಗಿ ವಿಮರ್ಶಿಸುವ, ಪ್ರಶ್ನಿಸುವ, ಒಡೆದು-ಕಟ್ಟುವ ಸಾಹಿತ್ಯಕ ಬರವಣಿಗೆ ಚಿಂತನೆಗೆ ಸಾಂಸ್ಕೃತಿಕ ವಿಮರ್ಶೆ ಎಂದು ಸ್ಥೂಲವಾಗಿ ಹೇಳಬಹುದು"[೪] ಎನ್ನುವ ಮಾತಿನ ಮೂಲಕ ಸಾಂಸ್ಕೃತಿಕ ವಿಮರ್ಶೆಯನ್ನು ನಿರ್ವಚಿಸುತ್ತಾರೆ. ಹಾಗೆಯೇ ರಂಗನಾಥ್ ಅವರು, ವಿಮರ್ಶೆಯನ್ನು 'ಓದು' ಎನ್ನುವ ಪರಿಕಲ್ಪನೆ ಮೂಲಕ ನಿರೂಪಿಸುತ್ತಾ, 'ಸಂಸ್ಕೃತಿ ಕೇಂದ್ರಿತ ಓದ'ನ್ನು 'ಸಂಸ್ಕೃತಿ ವಿಮರ್ಶೆ' ಎಂದು ವ್ಯಾಖ್ಯಾನಿಸುತ್ತಾರೆ. ಬಹಳ ಮುಖ್ಯವಾಗಿ ಅವರು ಈ 'ಓದ'ನ್ನು ಸಂಕೀರ್ಣವಾದ, ಅಂತರ್‌ಶಿಸ್ತೀಯವಾದ ಮತ್ತು ಬಹುಶಿಸ್ತೀಯವಾದ ಪರಿಪ್ರೇಕ್ಷ್ಯದ ಓದು ಎಂದು ಸ್ಪಷ್ಟಪಡಿಸುತ್ತಾರೆ.

ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು, ಅದರ ಅರ್ಥ ಮತ್ತು ಕಾರ್ಯಮಾದರಿಗಳ ವಿಶಿಷ್ಟ ಚಹರೆಯನ್ನು ಗುರುತಿಸುವ ಮೂಲಕ ವಿವರಿಸಲು ಮಾಡಿರುವ ಪ್ರಯತ್ನವನ್ನು ಇಲ್ಲಿ 'ವಿಶಿಷ್ಟ ನೆಲೆ' ಎಂದು ಕರೆಯಲಾಗಿದೆ. ಇಂಥ ಪ್ರಯತ್ನಗಳ ಇತಿಮಿತಿಗಳು ಏನೇ ಇದ್ದರೂ, ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆಯಲ್ಲಿ ಈ ವಿಮರ್ಶಕರ ವಿಚಾರಗಳಿಗೆ ವಿಶೇಷವಾದ ಮಹತ್ವ ಇದೆ.

೨.೪ ಸಾಂಸ್ಕೃತಿಕ ವಿಮರ್ಶೆಯ ರೂಪುರೇಷೆಗಳೇನು ಅಥವಾ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಏನು?

ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚರ್ಚೆಯಲ್ಲಿ ಸಾಂಸ್ಕೃತಿಕ ವಿಮರ್ಶೆಯ ರೂಪುರೇಷೆಗಳು ಯಾವುವು ಅಥವಾ ಸಾಂಸ್ಕೃತಿಕ ವಿಮರ್ಶೆಗೆ ನಿರ್ದಿಷ್ಟ ತಾತ್ವಿಕತೆಯ ಅಗತ್ಯವಿದೆಯೆ ಅಥವಾ ಇಲ್ಲವೆ ಎನ್ನುವ ಪ್ರಶ್ನೆಗಳನ್ನು ಸಹ ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದೆ. ಹಿಂದಿನ ಪ್ರಶ್ನೆಯಂತೆ, ಈ ಪ್ರಶ್ನೆಯ ಸಂಬಂಧದಲ್ಲಿ ಸಹ ವಿಮರ್ಶಕರ ನಡುವೆ ಏಕಾಭಿಪ್ರಾಯವಿಲ್ಲ. ಕೆಲವು ವಿಮರ್ಶಕರು ಸಾಂಸ್ಕೃತಿಕ ವಿಮರ್ಶೆಗೆ ಯಾವುದೇ ನಿರ್ದಿಷ್ಟ ರೂಪುರೇಷೆಗಳನ್ನು ಗುರುತಿಸಲು ಸಾಧ್ಯವಿಲ್ಲ ಮತ್ತು ಅದು ಉಪಯುಕ್ತವಲ್ಲ ಎಂದು ಅಭಿಪ್ರಾಯಪಡುತ್ತಾರೆ. ಆದರೆ, ಮತ್ತೆ ಕೆಲವರು ಅದರ ಅವಶ್ಯಕತೆ ಮುಖ್ಯವೆಂದು ಭಾವಿಸಿ, ನಿರ್ದಿಷ್ಟ ರೂಪುರೇಷೆ ಅಥವಾ ತಾತ್ವಿಕತೆಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ಪ್ರಯತ್ನವನ್ನು ಮುಖ್ಯವಾದ ಎರಡು ನೆಲೆಗಳಲ್ಲಿ ಗಮನಿಸಲಾಗಿದೆ ಅವುಗಳೆಂದರೆ, ಅ. ನಕಾರಾತ್ಮಕ ನೆಲೆ ಮತ್ತು ಆ. ಸಕಾರಾತ್ಮಕ ನೆಲೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಕೆಲವು ಆಸಕ್ತಿದಾಯಕವಾದ ಮತ್ತು ಮಹತ್ವಪೂರ್ಣವಾದ ವಿಚಾರಗಳನ್ನು ಈ ನೆಲೆಗಳು ಒಳಗೊಂಡಿವೆ. ಹೀಗಾಗಿ ಇವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ.

೨.೪.೧ ನಕಾರಾತ್ಮಕ ನೆಲೆ

ಸಾಹಿತ್ಯ ವಿಮರ್ಶೆಯ ಇನ್ನಿತರ ಪ್ರಕಾರಗಳಿಗೆ ಸಾಧ್ಯವಿರುವಂತೆ, ಸಾಂಸ್ಕೃತಿಕ ವಿಮರ್ಶೆಗೆ ನಿರ್ದಿಷ್ಟ ರೂಪುರೇಷೆಗಳು ಅಥವಾ ತಾತ್ವಿಕತೆಯನ್ನು ಗುರುತಿಸುವುದು ಸಾಧ್ಯವಿಲ್ಲ ಮತ್ತು ಅದು ಸಾಧುವೂ ಅಲ್ಲ ಎನ್ನುವ ವಿಮರ್ಶಕರ ನಿಲುವನ್ನು ಇಲ್ಲಿ 'ನಕಾರಾತ್ಮಕ ನೆಲೆ' ಎಂದು ಕರೆಯಲಾಗಿದೆ. ಇಂಥ ಪ್ರಯತ್ನದಿಂದ ಏನನ್ನೂ ಸಾಧಿಸದಂತೆ ಆಗುವುದಿಲ್ಲ ಎನ್ನುವುದು ಇವರು ತಮ್ಮ ನಿಲುವಿಗೆ ನೀಡುವ ಸಮಜಾಯಿಷಿ. ಮನು ಮತ್ತು ಶ್ರೀಧರ್ ಈ ವಿಚಾರ ಕುರಿತು ಚರ್ಚಿಸುತ್ತಾ, "ಸಾಂಸ್ಕೃತಿಕ ವಿಮರ್ಶೆಯಾಗುವ ಸಾಹಿತ್ಯ ವಿಮರ್ಶೆಯ ರೂಪು-ರೇಷೆಗಳನ್ನು ಯಾವುದೇ ಹಣೆಪಟ್ಟಿಯಿಂದಾಗಲಿ ಅಥವಾ ಯಾವುದೇ ನಿರ್ದಿಷ್ಟ ತಾತ್ವಿಕ ನೆಲೆಗಟ್ಟಿನಿಂದಾಗಲಿ ಬಣ್ಣಿಸಲಾಗುವುದಿಲ್ಲ. ಬಹುಶಃ ಅಂಥ ಪ್ರಯತ್ನ ಸಿಂಧುವೂ ಅಲ್ಲ"[೫] ಎಂದು ಅಭಿಪ್ರಾಯಪಡುತ್ತಾರೆ.

ಈ ಅಭಿಪ್ರಾಯವನ್ನು ಗಮನಿಸಿದರೆ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತು ಮನು ಮತ್ತು ಶ್ರೀಧರ್ ಅವರು ಅಖಂಡ ದೃಷ್ಟಿಕೋನ ಹೊಂದಿರುವಂತೆ ಕಂಡುಬರುತ್ತದೆ. ಆದ್ದರಿಂದಲೇ, ಅವರು ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯನ್ನು ಗುರುತಿಸುವ ಪ್ರಯತ್ನವೇ ಅತ್ಯಂತ ಅಪಾಯಕಾರಿ ಎನ್ನುವಂತೆ ಭಾವಿಸುತ್ತಾರೆ. ಇದನ್ನು "ಒಂದು ಸಂಸ್ಕೃತಿ ಕೇಂದ್ರಿತ ವಿಮರ್ಶೆಯ ಘೋಷಿತ ಅಥವಾ ಅಘೋಷಿತ ತಾತ್ವಿಕತೆಯನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಡುವ ಇದುವರೆಗಿನ ಯಾವ ಪ್ರಯತ್ನವೂ ಸಫಲವಾಗಿಲ್ಲ ಹಾಗೂ ವಿಮರ್ಶೆಯ ಒಂದು ಚೌಕಟ್ಟಿನಲ್ಲಿ ಸಾಗಿದ ಕೂಡಲೇ ತೀರಾ ಸರಳವಾಗಿಬಿಡುವ ಅಥವಾ ಅಂಥ ಚೌಕಟ್ಟಿನಿಂದ ಹೊರಗುಳಿಯುವ ಇನ್ನೊಂದಕ್ಕೆ ಕುರುಡಾಗುವ ಅಪಾಯವೇ ಹೆಚ್ಚು"[೬] ಎನ್ನುವ ತಮ್ಮ ಆತಂಕದ ಮೂಲಕ ವ್ಯಕ್ತಪಡಿಸುತ್ತಾರೆ.

ಮೊಗಳ್ಳಿ ಅವರೂ ಸಹ, 'ಸಂಸ್ಕೃತಿ ವಿಮರ್ಶೆಯು ಅಖಂಡವಾದದ್ದು' ಎನ್ನುವ ನಿಲುವು ಹೊಂದಿದ್ದಾರೆ. ಹೀಗಾಗಿ, ಅವರೂ ಸಹ ಸಾಂಸ್ಕೃತಿಕ ವಿಮರ್ಶೆಗೆ ನಿರ್ದಿಷ್ಟ ತಾತ್ವಿಕತೆ ಗುರುತಿಸುವ ಪ್ರಯತ್ನವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಸಾಂಸ್ಕೃತಿಕ ವಿಮರ್ಶೆಗೆ ತಾತ್ವಿಕತೆ ಗುರುತಿಸುವುದು ಅದಕ್ಕೆ ಮಿತಿ ಹೇರಿದ ಹಾಗೆ ಎಂದು ಭಾವಿಸುತ್ತಾ ಮೊಗಳ್ಳಿ ಅವರು, "ಯಾವುದೆ ಸಂಸ್ಕೃತಿ ವಿಕಾಸಕ್ಕೂ ನಿರ್ದಿಷ್ಟ ಬದ್ಧತೆಗಳಿಲ್ಲವಾದ್ದರಿಂದ ಸಂಸ್ಕೃತಿಯ ವಿಮರ್ಶೆಗೂ ನಿರ್ದಿಷ್ಟ ತಾತ್ವಿಕ ಚೌಕಟ್ಟನ್ನು ನಿರ್ಮಿಸಿಕೊಳ್ಳಬೇಕಾದ್ದಿಲ್ಲ. ಎಲ್ಲ ಬಗೆಯ ಸಂಸ್ಕೃತಿ ವಿಕಾಸವೂ ಅನಂತವಾದುದೆ. ಈ ಅನಂತತೆಯು ಮನುಷ್ಯನ ಅಭಿವ್ಯಕ್ತಿಸುವ ಪ್ರವೃತ್ತಿಯನ್ನು ವಿಕಾಸಕ್ಕೆ ಒಳಪಡಿಸುತ್ತಲೆ ಇರುತ್ತದೆ. ಹೀಗಾಗಿ ತಾತ್ವಿಕ ಬದ್ಧತೆಯಿಂದ

ಪೂರ್ವತೀರ್ಮಾನಗಳಿಂದ ಸಂಸ್ಕೃತಿ ವಿಮರ್ಶೆಯನ್ನು ರೂಪಿಸಬೇಕಾಗಿಲ್ಲ. ಸ್ವತಃ ಸಂಸ್ಕೃತಿ ವಿಮರ್ಶೆಯೆ ಎಲ್ಲ ಚೌಕಟ್ಟುಗಳನ್ನು ಮುರಿಯುವಂಥದ್ದು ಹಾಗೂ ಏಕಾಕಾರದ ಸಂಸ್ಕೃತಿಗಳ ಯಾಜಮಾನ್ಯವನ್ನು ನಿರಾಕರಿಸುವಂಥದ್ದು'[೨] ಎಂದು ಪ್ರತಿಪಾದಿಸುತ್ತಾರೆ.

ಸಾಂಸ್ಕೃತಿಕ ವಿಮರ್ಶೆಗೆ ನಿರ್ದಿಷ್ಟ ತಾತ್ವಿಕತೆಯ ಅಗತ್ಯವನ್ನು ವಿರೋಧಿಸುವ ಈ ಎಲ್ಲ ವಿಮರ್ಶಕರು, ಅದರ ಸ್ಥಾನದಲ್ಲಿ 'ಮೂಲಧಾತು'ವೊಂದನ್ನು ಪರ್ಯಾಯ ಪರಿಕಲ್ಪನೆಯಾಗಿ ಪ್ರತಿಪಾದಿಸುತ್ತಾರೆ. ಮನು ಮತ್ತು ಶ್ರೀಧರ್, ಇದನ್ನು ಪಾಶ್ಚಾತ್ಯ ಯುರೋಪಿನ ಸಾಹಿತ್ಯ ವಿಮರ್ಶೆಯ ಬಿಕ್ಕಟ್ಟಿನ ಸಂದರ್ಭದಲ್ಲಿ 'ಲಿವೀಸ್' ಮತ್ತು ಆತನ 'ಸ್ಕ್ರೂಟಿನಿ ಬಳಗ' ಕಂಡುಕೊಂಡ 'ಉದಾರ ಮಾನವಾಸಕ್ತಿ' ಅಥವಾ 'ಲಿಬರಲ್ ಪ್ರಜ್ಞೆ'ಯು ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಗೆ ಪರ್ಯಾಯ ಪರಿಕಲ್ಪನೆಯಾಗುವುದು ಅತ್ಯಂತ ಸೂಕ್ತವೆಂದು ವಾದಿಸುತ್ತಾರೆ. ಏಕೆಂದರೆ, ಇದು 'ಯಾವುದೇ ನಿರ್ದಿಷ್ಟ ತಾತ್ವಿಕತೆಯನ್ನು ಸೂಚಿಸುವಂಥದ್ದಲ್ಲ' ಮತ್ತು 'ಯಾವುದೇ ಒಂದು ತಾತ್ವಿಕತೆಯನ್ನು ಮೀರುವಂಥದ್ದು' ಎಂದು ಇದರ ವಿಶಿಷ್ಟತೆ ಮತ್ತು ಪ್ರಾಮುಖ್ಯತೆಯನ್ನು ವಿವರಿಸುತ್ತಾರೆ. 'ಉದಾರ ಮಾನವಾಸಕ್ತಿ' ಮುಖ್ಯವಾಗಿ ಒಂದು ಮನಸ್ಥಿತಿಯೇ ಹೊರತು 'ಸಿದ್ಧಾಂತ'ವಲ್ಲ. ಬಹಳ ಮುಖ್ಯವಾಗಿ, 'ಸಾಹಿತ್ಯ ವಿಮರ್ಶೆಯಲ್ಲಿ ಈ ವಾದ ಒಂದು ಶಿಸ್ತಿನ ಓದಿನ ಕ್ರಮವನ್ನು ನಿರ್ದೇಶಿಸುವ ಪ್ರಕ್ರಿಯೆಯೇ ಹೊರತು ವಿಶ್ಲೇಷಣೆಗೆ ಒದಗಿಸುವ ಸಾಧನವಲ್ಲ' ಎಂದು 'ಲಿಬರಲ್ ಪ್ರಜ್ಞೆ'ಯ ವಿಶಿಷ್ಟತೆಯನ್ನು ಗುರುತಿಸುತ್ತಾರೆ. ಅಂತಿಮವಾಗಿ 'ಈ ಓದಿನ ಶಿಸ್ತೇ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯನ್ನಾಗಿಸುವ ಏಕೈಕ ಸಾಧನ' ಎನ್ನುವ ನಿರ್ಣಯಾತ್ಮಕ ನಿಲುವು ಪ್ರಕಟಿಸುತ್ತಾರೆ.

ಮೊಗಳ್ಳಿ ಸಹ 'ನಮ್ಮ ಕಾಲದ ಸಂಸ್ಕೃತಿ ವಿಮರ್ಶೆಯು ಮಾನವೀಯ ಸಂಬಂಧಗಳನ್ನು ಪುನರ್‌ಸೃಷ್ಟಿಸುವ ಆಶಯಕ್ಕೆ ಒಳಪಡಬೇಕಾಗುತ್ತದೆ' ಎನ್ನುವ ಅಭಿಪ್ರಾಯದ ಮೂಲಕ 'ಅಖಂಡ ಮಾನವೀಯತೆ'ಯನ್ನು ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ರೂಪವಾಗಿ ಮಂಡಿಸುತ್ತಾರೆ.

ಸಾಂಸ್ಕೃತಿಕ ವಿಮರ್ಶೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಿರ್ದಿಷ್ಟ ತಾತ್ವಿಕತೆಯ ಹಂಗು ಬೇಡ ಎನ್ನುವ 'ನಿರಾಕರಣವಾದಿಗಳು' ಸಾಹಿತ್ಯದ ಆಶಯವನ್ನು ಸಾಂಸ್ಕೃತಿಕ ವಿಮರ್ಶೆಯ ಆಸಕ್ತಿಯಾಗಿ ಸ್ವೀಕರಿಸಬೇಕು ಎನ್ನುವ ನಿಲುವು ತಾಳುತ್ತಾರೆ. ಆದರೆ, ಇದೊಂದು ಪಾರ್ಶ್ವಿಕ ದೃಷ್ಟಿಕೋನವೇ ಸರಿ. ಏಕೆಂದರೆ, 'ಆಶಯ'ವು ರೂಪುಗೊಳ್ಳುವುದಕ್ಕೆ ಮತ್ತು ಪ್ರಕಟಗೊಳ್ಳುವುದಕ್ಕೆ 'ಆಕೃತಿ' ಮೂಲಭೂತ ಆಧಾರವಾಗಿರುತ್ತದೆ. ಹೀಗಾಗಿ, ಯಾವುದೇ ಸಾಹಿತ್ಯ ಕೃತಿಯ ಸಮರ್ಥ ಗ್ರಹಿಕೆಗೆ ಅದರ 'ಆಶಯ' ಮತ್ತು 'ಆಕೃತಿ'ಗಳೆರಡರ ಪರಿಣಾಮಕಾರಿ ಅರ್ಥೈಸುವಿಕೆ ಅತ್ಯಗತ್ಯವಾಗಿರುತ್ತದೆ. ಇದರೊಂದಿಗೆ, ಇವುಗಳನ್ನು ರೂಪಿಸುವುದರಲ್ಲಿ ಇವುಗಳ ಹಿನ್ನೆಲೆಯಲ್ಲಿರುವ 'ಸಂಸ್ಕೃತಿ' ವಹಿಸಿರುವ ಪಾತ್ರ ಮತ್ತು ಹಾಗೆ ರೂಪಿಸಿದ ಸಂಸ್ಕೃತಿ ಮೇಲೆ 'ರೂಪಿತ ಕೃತಿ' ಬೀರುವ ಪ್ರಭಾವ, ಇವೇ ಮೊದಲಾದ ಗಂಭೀರವಾದ ಸಂಗತಿಗಳನ್ನು ಕುರಿತು ಈ ವಿಮರ್ಶಕರು ಯಾವುದೇ ಚರ್ಚೆ ಮಾಡುವುದಿಲ್ಲ. ಆದ್ದರಿಂದ, ಸಾಂಸ್ಕೃತಿಕ ವಿಮರ್ಶೆಗೆ ನಿರ್ದಿಷ್ಟ

ತಾತ್ವಿಕತೆಯ ಅಗತ್ಯ ನಿರಾಕರಿಸುವ ವಿಮರ್ಶಕರು 'ಕೃತಿ' ಮತ್ತು 'ಸಂಸ್ಕೃತಿ' ನಡುವಿನ ಪರಸ್ಪರ ನಿರಂತರವಾದ ಪ್ರೇರಣೆಗಳ ಹಾಗೂ ಪ್ರಭಾವಗಳ ಸಂಕೀರ್ಣ ಸಂಬಂಧಾಂತರದ ಸ್ವರೂಪವನ್ನು ವಿಶ್ಲೇಷಿಸುವುದರಲ್ಲಿ ವಿಫಲರಾಗಿದ್ದಾರೆ.

ಇದರೊಂದಿಗೆ, ಸಾಂಸ್ಕೃತಿಕ ವಿಮರ್ಶೆಯ 'ಮೂಲಧಾತು'ವೆಂದು ಗುರುತಿಸಿರುವ, ಇಪ್ಪತ್ತನೆಯ ಶತಮಾನದ ಆರಂಭದ ಹಂತದ ಯುರೋಪಿನ ನವ್ಯ ವಿಮರ್ಶಕರು 'ತಮ್ಮ' ಸಮಸ್ಯೆಗಳಿಗೆ ಪರಿಹಾರವಾಗಿ ಕಂಡುಕೊಂಡ 'ಉದಾರ ಮಾನವಾಸಕ್ತಿ' ಅಥವಾ 'ಲಿಬರಲ್ ಸೆನ್ಸ್' ಅನ್ನು, ಇದೇ ಶತಮಾನದ ಕೊನೆಯ ಘಟ್ಟದಲ್ಲಿರುವ ಕನ್ನಡ ಸಾಂಸ್ಕೃತಿಕ ಸಂದರ್ಭದ ಸಾಹಿತ್ಯ ವಿಮರ್ಶೆಯ ಪ್ರಮುಖ 'ನಿರ್ದೇಶಕ ಪ್ರಜ್ಞೆ'ಯಾಗಿ ಪ್ರತಿಪಾದಿಸುವುದು ವಿಸಂಗತವೇ ಸರಿ. ಏಕೆಂದರೆ, ಈ ಪ್ರಜ್ಞೆ ದೇಶ, ಕಾಲ ಮತ್ತು ಸಂಸ್ಕೃತಿ ದೂರ ಪರಿಕಲ್ಪನೆ ಎನ್ನುವುದಷ್ಟೇ ಅಲ್ಲದೆ, ಆಧುನಿಕೋತ್ತರ ಕಾಲಘಟ್ಟದಲ್ಲಿ ಅತ್ಯಂತ ನಿರುಪಯುಕ್ತ ಮತ್ತು ಅಪಾಯಕಾರಿ ಪರಿಕಲ್ಪನೆ ಸಹ ಆಗಿದೆಯೆಂದು ಹೇಳಬೇಕಾಗುತ್ತದೆ. ಏಕೆಂದರೆ, ಇದು 'ಸಾಂಸ್ಕೃತಿಕ ಪಠ್ಯ'ವಾಗಿರುವ ಸಾಹಿತ್ಯ ಕೃತಿಯೊಳಗೆ ಪ್ರತಿಬಿಂಬಿತವಾಗಿರುವ ನಿರ್ದಿಷ್ಟ ಸಂಸ್ಕೃತಿ ಸಂದರ್ಭದ ಸಾಂಸ್ಕೃತಿಕ ವಿಕೃತಿ ಮತ್ತು ವಿದ್ರೋಹಗಳನ್ನು ಕುರಿತು ಮೌನವಹಿಸುತ್ತದೆ ಇಲ್ಲವೆ ನಿರಾಸಕ್ತ ನಿಲುವು ತಾಳುತ್ತದೆ. 'ಸಾಹಿತ್ಯದ ವಿಶ್ಲೇಷಣೆಗೆ ಒದಗದ ಕೇವಲ ಶಿಸ್ತುಬದ್ಧ ಓದಿನ ವಿಧಾನ'ವನ್ನು ಮಾತ್ರ ನಿರ್ದೇಶಿಸುವ ಈ 'ಲಿಬರಲ್ ಪ್ರಜ್ಞೆ' ಸಾಹಿತ್ಯ ವಿಮರ್ಶೆಯ ಮೂಲತತ್ವವಾದ 'ಕ್ರಿಟಿಕಲ್ ಸೆನ್ಸ್'ಗೆ ತಾತ್ವಿಕವಾಗಿ ಸಂಪೂರ್ಣ ವಿರುದ್ಧವಾದ ಪರಿಕಲ್ಪನೆಯೇ ಸರಿ. ಹೀಗಾಗಿ, ಇದು ಸಾಹಿತ್ಯ ವಿಮರ್ಶೆಯನ್ನು ಅದರ ಪ್ರಮುಖ ನಿಯೋಗಗಳಾದ 'ವಿಶ್ಲೇಷಣೆ' ಮತ್ತು 'ಮೌಲ್ಯಮಾಪನ'ಗಳಿಂದ ವಿಮುಖಗೊಳಿಸಿ ಸಾಹಿತ್ಯದ 'ಸ್ವತಂತ್ರ' ಅಥವಾ 'ಮುಕ್ತ' ಓದಿಗೆ ಮಾತ್ರ ಪ್ರೇರೇಪಿಸುವಂತಹದ್ದಾಗಿದೆ. ಆದ್ದರಿಂದ, ಭಾರತೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶದಲ್ಲಿ ಇಂಥ ಓದಿನಿಂದ ಆಗಬಹುದಾದ ಉಪಯೋಗವಾದರೂ ಏನು ಎನ್ನುವುದಕ್ಕಿಂತ, ಆಗುವ ಅಪಾಯ ಎಷ್ಟು ಘೋರವಾದುದು ಮತ್ತು ಕ್ರೂರವಾದುದು ಎನ್ನುವುದನ್ನು ಇಲ್ಲಿ ಮುಖ್ಯ ಪ್ರಶ್ನೆಯಾಗಿ ಇಟ್ಟುಕೊಳ್ಳಬೇಕಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಾಹಿತ್ಯದ ಎರಡು ಅವಿಭಾಜ್ಯ ಸಂಗತಿಗಳಾಗಿರುವ 'ಆಶಯ' ಮತ್ತು 'ಆಕೃತಿ'ಗಳ ಬಗೆಗೆ ಸಮಾನವಾದ ಆಸಕ್ತಿ, 'ಸಾಹಿತ್ಯಕ ಪ್ರಜ್ಞೆ' ಮತ್ತು 'ಸಾಂಸ್ಕೃತಿಕ ಪ್ರಜ್ಞೆ' ಗಳೆರಡರ ಅರ್ಥಪೂರ್ಣ ಸಂಯೋಜನೆ ಹಾಗೂ ವಿಮರ್ಶೆಯ ಮೂಲಭೂತ ನಿಯೋಗಗಳನ್ನು ನಿರ್ದೇಶಿಸುವ 'ಕ್ರಿಟಿಕಲ್ ಸೆನ್ಸ್'ಗಳ ಅವಿನಾಭಾವ ಸಮಾವಿಷ್ಟತೆಯನ್ನು ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಎಂದು ಸ್ಥೂಲವಾಗಿ ಗುರುತಿಸಬೇಕಾಗುತ್ತದೆ.

೨.೪.೨ ಸಕಾರಾತ್ಮಕ ನೆಲೆ

ಸಾಹಿತ್ಯ ವಿಮರ್ಶೆಯ ಇನ್ನಿತರ ಪ್ರಕಾರಗಳಂತೆ, ಸಾಂಸ್ಕೃತಿಕ ವಿಮರ್ಶೆಗೂ ಸಹ ನಿರ್ದಿಷ್ಟ ತಾತ್ವಿಕತೆ ಅಗತ್ಯ ಮಾತ್ರವಲ್ಲ; ಅನಿವಾರ್ಯ ಸಂಗತಿಯಾಗಿದೆ ಎನ್ನುವುದು ಅನೇಕ ವಿಮರ್ಶಕರ ದಢೋಕ್ತಿಯಾಗಿದೆ.

ತಾತ್ವಿಕತೆಯನ್ನು ಇವರು 'ಪರಿಕರ' ಅಥವಾ' ಸಾಧನ' ಎಂದು ತಿಳಿಯದೆ 'ಅನಿವಾರ್ಯ ದೃಷ್ಟಿಕೋನ' ಎನ್ನುವ ಅರ್ಥದಲ್ಲಿ ಗ್ರಹಿಸುತ್ತಾರೆ. ಹೀಗಾಗಿಯೇ, ಸಾಂಸ್ಕೃತಿಕ ವಿಮರ್ಶೆಗೂ ಸಹ ಖಚಿತ, ನಿಷ್ಕೃಷ್ಟ ಮತ್ತು ನಿರ್ದಿಷ್ಟ ತಾತ್ವಿಕತೆ ಅತ್ಯಂತ ಮೂಲಭೂತ ಆವಶ್ಯಕತೆ ಎಂದು ಪ್ರತಿಪಾದಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರು ಸಾಂಸ್ಕೃತಿಕ ವಿಮರ್ಶೆಯನ್ನು ಅಖಂಡ ರೂಪದಲ್ಲಿ ಮತ್ತು ಸಾರ್ವತ್ರಿಕ ನೆಲೆಯಲ್ಲಿ ಗುರುತಿಸುವುದಿಲ್ಲ. ಬದಲಾಗಿ ದೇಶ, ಭಾಷೆ, ಸಂಸ್ಕೃತಿ ಮತ್ತು ಕಾಲಬದ್ಧವಾದ ನಿರ್ದಿಷ್ಟ ನೆಲೆಗಳಲ್ಲಿ ಗ್ರಹಿಸುತ್ತಾರೆ. ಹೀಗಾಗಿ, ಏಕಕಾಲದಲ್ಲಿ ಒಂದೇ ಸಾಹಿತ್ಯಕ ಸಂದರ್ಭದಲ್ಲಿ ಹಲವು ಸಾಂಸ್ಕೃತಿಕ ವಿಮರ್ಶಾ ರೂಪಗಳು ಕ್ರಿಯಾಶೀಲವಾಗುವುದು ಸಹಜ ಎನ್ನುವುದು ಇವರ ನಿಲುವಾಗಿದೆ. ಈ ಭಿನ್ನ ರೂಪಗಳಿಗೆ ಅವು ಅಳವಡಿಸಿಕೊಂಡಿರುವ ವಿಭಿನ್ನ ತಾತ್ವಿಕತೆ ಅಥವಾ ನೋಟಕ್ರಮಗಳೇ ಕಾರಣ ಎನ್ನುವುದು ಇಂಥ ವಿಮರ್ಶಕರ ನಿಲುವಾಗಿದೆ. ವಿಮರ್ಶಕರ ಈ ನಿಲುವನ್ನು ಇಲ್ಲಿ 'ಸಕಾರಾತ್ಮಕ ನೆಲೆ' ಎಂದು ಕರೆಯಲಾಗಿದೆ.

ವಿಕ್ರಮ ವಿಸಾಜಿ, ಬಿ.ಯು.ಸುಮಾ, ಎಸ್.ಎಸ್.ಹಿರೇಮಠ, ಜಿ.ಬಿ.ಹರೀಶ್, ರಂಗನಾಥ್ ಮೊದಲಾದವರು ಇಂಥ ಸ್ವೀಕರಣವಾದಿಗಳಾಗಿದ್ದಾರೆ. ಇವರು ಸಾಂಸ್ಕೃತಿಕ ವಿಮರ್ಶೆಯ 'ನಿರ್ದಿಷ್ಟ ತಾತ್ವಿಕತೆ' ಎಂದು ಗುರುತಿಸುವ ಸಂಗತಿಗಳನ್ನು ಮುಂದಿನ ಘಟಕವಾದ 'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ವಿವೇಚನೆ'ಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

೨.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿಶ್ಲೇಷಣೆ

ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ ಎನ್ನುವುದು ನಿರ್ದಿಷ್ಟವಾಗಿ ಯಾವ ಕಾಲಘಟ್ಟದಲ್ಲಿ ಹುಟ್ಟಿಕೊಂಡಿತು ಮತ್ತು ಇದಕ್ಕೆ ಕಾರಣವಾದ ಸನ್ನಿವೇಶಗಳ ಸ್ವರೂಪ ಏನು ಎನ್ನುವುದನ್ನು ಕುರಿತು ಇಲ್ಲಿನ ವಿಮರ್ಶಕರು ಗಂಭೀರವಾಗಿ ಚರ್ಚಿಸಿರುತ್ತಾರೆ. ಈ ಚರ್ಚೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿವೇಚನೆ ಮಾತ್ರವಾಗಿರದೆ, ಸಾಂಸ್ಕೃತಿಕ ವಿಶ್ಲೇಷಣೆ ಸಹ ಆಗಿರುವುದು ಅತ್ಯಂತ ಮುಖ್ಯ ವಿಚಾರವಾಗಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹುಟ್ಟು ಮತ್ತು ಬೆಳವಣಿಗೆ ಕುರಿತ ಈ ವಿಮರ್ಶಕರ ವಿಚಾರಗಳಲ್ಲಿ ಮುಖ್ಯವಾದ ಎರಡು ನೆಲೆಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ, ಅ. ಪರಿಷ್ಕರಣವಾದಿ ನೆಲೆ ಮತ್ತು ಆ. ಆವಿಷ್ಕರಣವಾದಿ ನೆಲೆ

ಈ ಎರಡು ನೆಲೆಗಳು ಏಕಕಾಲಕ್ಕೆ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಸಮರ್ಥವಾಗಿ ಗ್ರಹಿಸುವುದಕ್ಕೆ ಸಹ ಅತ್ಯಂತ ಉಪಯುಕ್ತವಾಗಿವೆ. ಹೀಗಾಗಿ ಇವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ.

೨.೫.೧ ಪರಿಷ್ಕರಣವಾದಿ ನೆಲೆ

'ಸಾಂಸ್ಕೃತಿಕ ವಿಮರ್ಶೆ' ಎನ್ನುವುದು ಕನ್ನಡ ವಿಮರ್ಶೆಯಲ್ಲಿ 'ಇತ್ತೀಚೆಗೆ' ರೂಪುಗೊಂಡ ನೂತನ ಪ್ರಕಾರವೇನಲ್ಲ; ಹಾಗೆ ನೋಡುವುದಾದರೆ, 'ಶುದ್ಧ ಸಾಹಿತ್ಯ ವಿಮರ್ಶೆ' ಎನ್ನುವುದು ಎಂದಿಗೂ ಕನ್ನಡ

ಸಾಹಿತ್ಯ ವಿಮರ್ಶೆಯ ಮುಖ್ಯ ಒಲವಾಗಿರಲಿಲ್ಲ. ಆದ್ದರಿಂದ, 'ಸಂಸ್ಕೃತಿನಿಷ್ಠ ಪ್ರಶ್ನೆಗಳೇ' ಮತ್ತು 'ಸಾಂಸ್ಕೃತಿಕ ಕಾಳಜಿಗಳೇ' ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನ ಆಸಕ್ತಿಗಳಾಗಿರುತ್ತವೆ. ಆದರೆ, ಇತ್ತೀಚಿಗೆ ಮಾತ್ರ ಇವುಗಳ ಪ್ರಮಾಣ ಮತ್ತು ಬಳಕೆಯ ಸ್ವರೂಪದಲ್ಲಿ ಹೆಚ್ಚಳ ಹಾಗೂ ಪರಿವರ್ತನೆಗಳಾಗಿವೆ. ವಿಮರ್ಶೆಯ 'ಪರಿಭಾಷೆ', 'ಪರಿಕರಗಳು' ಮತ್ತು 'ವಿಧಾನಗಳಲ್ಲಿ ತಾತ್ವಿಕವಾದ ಮಾರ್ಪಾಟುಗಳಾಗಿವೆ. ಮುಖ್ಯವಾಗಿ, ಇಂದಿನ ವಿಮರ್ಶಕರು ಈ ಬಗ್ಗೆ ಸ್ವಯಂಜಾಗ್ರತರಾಗಿದ್ದಾರೆ. ಆದ್ದರಿಂದ, ಕನ್ನಡ ಸಾಹಿತ್ಯ ವಿಮರ್ಶೆಯ ಮೂಲಭೂತವಾದ ಆಸಕ್ತಿಯ ತೀವ್ರತರವಾದ ಪರಿಷ್ಕರಣೆಯೇ ಸದ್ಯದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಾಗಿದೆ ಮತ್ತು ಈ ಪ್ರಕ್ರಿಯೆಗೆ ಹಿನ್ನೆಲೆಯಾಗಿ ಹಲವಾರು ಸಂಗತಿಗಳು ಮುಖ್ಯ ಕಾರಣಗಳಾಗಿರುತ್ತವೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಉಗಮ ವಿರೋಧಿ' ಅಥವಾ 'ಪರಿಷ್ಕರಣವಾದಿ'ಗಳ ಖಚಿತ ನಿಲುವಾಗಿದೆ. ಕೆ.ವಿ. ಎನ್, ಹೆಚ್.ಎಸ್. ಆರ್, ರಾಮಲಿಂಗಪ್ಪ ಟಿ. ಬೇಗೂರು, ವಿಸಾಜಿ ಮತ್ತು ಸುಮಾ ಅವರು ಇಂಥ ಪ್ರಮುಖ ಪರಿಷ್ಕರಣವಾದಿಗಳಾಗಿದ್ದಾರೆ.

೨.೫.೨ ಆವಿಷ್ಕರಣವಾದಿ ನೆಲೆ

ಪರಿಷ್ಕರಣಾವಾದಿ ನೆಲೆಗೆ ಸಂಪೂರ್ಣ ವಿರುದ್ಧವಾದುದು ಆವಿಷ್ಕರಣಾವಾದಿ ನೆಲೆ. 'ಸಾಂಸ್ಕೃತಿಕ ವಿಮರ್ಶೆ' ಎನ್ನುವುದು ಕನ್ನಡದಲ್ಲಿ ನಿರ್ದಿಷ್ಟ ಕಾಲಘಟ್ಟವೊಂದರಲ್ಲಿ ಹೊಸದಾಗಿ ರೂಪುಗೊಂಡಿರುವ ಮತ್ತು ಇನ್ನೂ ವಿಕಾಸವಾಗುತ್ತಿರುವ ನೂತನ ಪ್ರಕಾರವಾಗಿದೆ. ಇದು ಹಿಂದಿನ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪಕ್ಕೆ ತಾತ್ವಿಕವಾಗಿ ಸಂಪೂರ್ಣ ಭಿನ್ನವಾಗಿರುವ ಆಧುನಿಕ ರೂಪವಾಗಿದೆ. ಹೀಗೆ ರೂಪಿತವಾಗುವುದರ ಹಿನ್ನೆಲೆಯಲ್ಲಿ ಹಲವು ಪ್ರಮುಖ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಗತಿಗಳು ಕಾರಣವಾಗಿವೆ ಎನ್ನುವುದು ಆವಿಷ್ಕರಣವಾದಿಗಳ ನಿಲುವು. ಮೊಗಳ್ಳಿ, ನಂಗಲಿ, ಹರೀಶ್ ಮತ್ತು ರಂಗನಾಥ್ ಅವರು ಇಂಥ ಮುಖ್ಯ ಆವಿಷ್ಕರಣವಾದಿಗಳಾಗಿದ್ದಾರೆ.

ಮೊಗಳ್ಳಿ ಅವರು, ನವ್ಯೋತ್ತರ ಕಾಲಘಟ್ಟದ ದಲಿತ-ಬಂಡಾಯ ವಿಮರ್ಶೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹುಟ್ಟನ್ನು ಗುರುತಿಸುತ್ತಾರೆ. ದಲಿತ-ಬಂಡಾಯದ ಸಾಮಾಜಿಕ ಮತ್ತು ಎಡಪಂಥೀಯ ವಿಮರ್ಶೆಗಳು ತಮ್ಮ ಮಿತಿಗಳನ್ನು ದಾಟುವ ಮೂಲಕ, ದೇಶಿ ಪ್ರಜ್ಞೆಯನ್ನು ತಾತ್ವಿಕತೆಯ ಮುಖ್ಯ ಆಸಕ್ತಿಯಾಗಿ ಆಳವಡಿಸಿಕೊಂಡು ಸಾಂಸ್ಕೃತಿಕ ವಿಮರ್ಶೆಯಾಗಿ ವಿಕಾಸವಾಗಿದೆ ಎನ್ನುವುದು ಇವರ ವಿಶ್ಲೇಷಣೆ. ರಂಗನಾಥ್ ಸಹ, ನವ್ಯೋತ್ತರ ಕಾಲಘಟ್ಟದಲ್ಲಿ 'ಸಂಸ್ಕೃತಿ ಕೇಂದ್ರಿತ ಓದಿ'ನ ಸಂಸ್ಕೃತಿ ವಿಮರ್ಶೆಯ ಮಾದರಿಗಳು ರೂಪುಗೊಂಡವು. ಇದಕ್ಕೆ ನಿಕಟಪೂರ್ವ ನವ್ಯಸಾಹಿತ್ಯ ಮತ್ತು ನವ್ಯ ವಿಮರ್ಶೆಯ ಜನವಿರೋಧಿ, ಸಮಾಜ ಮತ್ತು ಸಂಸ್ಕೃತಿ ಕುರಿತ ನಿರಪೇಕ್ಷ ಧೋರಣೆಗಳೇ ಮುಖ್ಯವಾದ ಕಾರಣಗಳಾಗಿವೆ. ಇದರೊಂದಿಗೆ ಇದೇ ಕಾಲಘಟ್ಟದ ಹಲವು ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಹೋರಾಟಗಳು, ಚಳುವಳಿಗಳು, ಅಧ್ಯಯನ ವಿಧಾನಗಳು ಮತ್ತು ಆಲೋಚನಾ ಕ್ರಮದಲ್ಲಾದ ಪಲ್ಲಟಗಳು ಸಹ ಅಷ್ಟೇ

ಮಹತ್ವದ ಕಾರಣಗಳಾಗಿವೆ ಎನ್ನುತ್ತಾರೆ. ಈ ಪ್ರವೃತ್ತಿಯನ್ನು ಕುರಿತು ಆಲೋಚಿಸುತ್ತಾ ಚಂದ್ರಶೇಖರ ನಂಗಲಿ ಅವರು, ಇಪ್ಪತ್ತನೆ ಶತಮಾನದ ಅಂತ್ಯದ ಕೊನೆಯ ಹತ್ತು ವರ್ಷಗಳ ಅವಧಿಯಲ್ಲಿ ಮೂಡಿಬಂದಿರುವ ವಿಮರ್ಶೆಯನ್ನು 'ಸಾಹಿತ್ಯ ವಿಮರ್ಶೆ' ಎಂದು ಕರೆಯುವುದು ತುಸು ಕಷ್ಟಕರ ಎಂದು ವಿವರಿಸುತ್ತಾರೆ. ಈ ವಿಮರ್ಶೆಯನ್ನು ಅವರು 'ಸಾಹಿತ್ಯ ಮತ್ತು ಸಂಸ್ಕೃತಿಗಳ ಗತಿಶೀಲ ಮುಖಾಮುಖಿ' ಸ್ವರೂಪದ ವಿಮರ್ಶೆ ಎಂದು ವ್ಯಾಖ್ಯಾನಿಸುತ್ತಾರೆ. ಹರೀಶ್ ಸಹ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಕಳೆದ ಶತಮಾನದ ತೊಂಭತ್ತರ ದಶಕದ ನೂತನ ವಿದ್ಯಮಾನವೆಂದೇ ವಿಶ್ಲೇಷಿಸಿದ್ದಾರೆ.

ಈ ಕಾಲಘಟ್ಟದಲ್ಲಿ ಭಾರತದಲ್ಲಿ ಜಾರಿಗೆ ಬಂದ ಅಂತರರಾಷ್ಟ್ರೀಯ ರಾಜಕೀಯಾರ್ಥಿಕ ಸಿದ್ಧಾಂತದ ಆಡಳಿತ ಕಾರ್ಯನೀತಿಯಾದ ಜಾಗತೀಕರಣದ ಪ್ರಭಾವ ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳುವುದಕ್ಕೆ ಒಂದು ಪ್ರಬಲವಾದ ಕಾರಣ ಎನ್ನುವುದನ್ನು ಈ ಎಲ್ಲಾ ಆವಿಷ್ಕರಣವಾದಿಗಳು ಸಾಮಾನ್ಯವಾಗಿ ಪ್ರತಿಪಾದಿಸುತ್ತಾರೆ.

ಕಳೆದ ಶತಮಾನದ ಎರಡನೆಯ ದಶಕದಲ್ಲಿ, ಮುಖ್ಯವಾಗಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯ ಫಲವಾಗಿ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಹುಟ್ಟಿತು. ಕಳೆದ ಶತಮಾನದ ಕನ್ನಡ ಭಾಷೆ, ಸಾಹಿತ್ಯ, ಚರಿತ್ರೆ ಮತ್ತು ಸಂಸ್ಕೃತಿಗಳ ಬೆಳವಣಿಗೆ ಹಾಗೂ ಸ್ಥಿತ್ಯಂತರಗಳಿಗೆ ಅನುಸಾರವಾಗಿ ಕನ್ನಡ ವಿಮರ್ಶೆ ಸಹ ಪಲ್ಲಟಗೊಳ್ಳುತ್ತಾ ಬಂದಿತು. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಪ್ರಸ್ಥಾನಗಳ ತಾತ್ವಿಕ ಆಶಯಕ್ಕೆ ಅನುಗುಣವಾಗಿ ಆಧುನಿಕ ಕನ್ನಡ ವಿಮರ್ಶೆ ಸಹ ರೂಪಿತವಾಯಿತು. ಹೀಗೆ, ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯ ಒಂದು ಮಹತ್ವದ ಅಂಗವಾಗಿ ಆಧುನಿಕ ಕನ್ನಡ ವಿಮರ್ಶೆ ವಿಕಾಸಗೊಂಡಿರುತ್ತದೆ.

ನವ್ಯೋತ್ತರದ ದಲಿತ–ಬಂಡಾಯ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆ ಹೊಸ ಆಯಾಮ ಪಡೆಯಿತು. ಈ ಅವಧಿಯಲ್ಲಿ ಪ್ರಾರಂಭದಿಂದಲೂ ಕನ್ನಡ ಸಾಹಿತ್ಯ ವಿಮರ್ಶೆಯ 'ಆಸಕ್ತಿ' ಮತ್ತು'ಕಾಳಜಿ'ಗಳಾಗಿದ್ದ ಸಮಾಜ, ಸಂಸ್ಕೃತಿ ಮತ್ತು ರಾಜಕಾರಣದ ಪ್ರಶ್ನೆಗಳು ತಮ್ಮ ಸೀಮಿತ ಮತ್ತು ಸರಳ ನೆಲೆಗಳ ಸೀಮೋಲ್ಲಂಘನೆ ಮಾಡುವ ಮೂಲಕ ಸಾಹಿತ್ಯಾನುಸಂಧಾನದ ಪ್ರಮುಖ ತಾತ್ವಿಕತೆಯಾಗಿ ವಿಕಾಸಗೊಂಡವು. ಇದರೊಂದಿಗೆ ಆರ್ಥಿಕತೆಯ ಪ್ರಶ್ನೆ ಸಹ ಅಷ್ಟೇ ಮಹತ್ವ ಪಡೆದುಕೊಂಡಿತು. ಇದರಿಂದ, ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾಳಜಿಯ ನೆಲೆಯ ತಾತ್ವಿಕ ಸ್ವರೂಪವು, ಈಗ 'ಸಂಸ್ಕೃತಿ ಪರಿಪ್ರೇಕ್ಷ್ಯ'ದ ನೆಲೆಗೆ ಹೊರಳಿಕೊಂಡಿತು. ಹೀಗೆ ಸಾಹಿತ್ಯಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ತೀವ್ರವಾಗಿ ಮತ್ತು ವ್ಯಾಪಕ ಪ್ರಮಾಣದಲ್ಲಿ ಪಲ್ಲಟಿಸಿದವು. ಇದರಿಂದ, ಕನ್ನಡ ಸಾಹಿತ್ಯ ವಿಮರ್ಶೆ ಬಹುಶಿಸ್ತು ನೆಲೆಗಳನ್ನು ಮತ್ತು ಸಂಶ್ಲೇಷಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಾಂಸ್ಕೃತಿಕ ಸಂಕಥನದ ಆಯಾಮ ಪಡೆದುಕೊಂಡಿತು.

ಕನ್ನಡ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ವಿಮರ್ಶೆಯಾಗಿ ರೂಪಾಂತರಗೊಂಡ ಈ ವಿದ್ಯಮಾನಕ್ಕೆ ತೊಂಭತ್ತರ ದಶಕದಲ್ಲಿ ಜಾರಿಗೆ ಬಂದ ಜಾಗತೀಕರಣ ಬೀರಿದ ಪ್ರಭಾವ ಮತ್ತು ಒಡ್ಡಿದ ಸವಾಲು ಹಾಗೂ ಆತಂಕಗಳು ಪ್ರಮುಖ ಕಾರಣಗಳಾಗಿವೆ.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿಶ್ಲೇಷಣೆ ಕುರಿತ ಆವಿಷ್ಕರಣವಾದಿಗಳ ವಿಚಾರಗಳು ಹೆಚ್ಚು ಪ್ರಸ್ತುತತೆ ಹೊಂದಿವೆ.

೨.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಚಿಂತನೆ

ಸಾಹಿತ್ಯ ವಿಮರ್ಶೆಯ ಸಾಮಾನ್ಯ ತಾತ್ವಿಕ ಸ್ವರೂಪಕ್ಕಿಂತ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಯಾವ ನೆಲೆಗಳಲ್ಲಿ ಭಿನ್ನವಾಗಿರಬೇಕು ಮತ್ತು ಇದರ ಚಹರೆಗಳೇನಿರಬೇಕು ಎನ್ನುವುದನ್ನು ಕುರಿತು ಇಲ್ಲಿನ ವಿಮರ್ಶಕರು ವಿಸ್ತೃತವಾಗಿ ಚರ್ಚಿಸಿದ್ದಾರೆ. ಒಂದು ರೀತಿಯಿಂದ ಈ ಚರ್ಚೆ, ಸಮಗ್ರ ಆಧುನಿಕ ಕನ್ನಡ ವಿಮರ್ಶೆಯ ಸ್ಥೂಲವಾದ ವಿಶ್ಲೇಷಣೆ ಮತ್ತು ಮೌಲ್ಯಮಾಪನ ಕೂಡಾ ಆಗಿದೆ. ಇಷ್ಟೇ ಅಲ್ಲದೆ, ಇಂದಿನ ಹಾಗೂ ನಾಳಿನ ಕನ್ನಡ ವಿಮರ್ಶೆಯ ಸ್ವರೂಪ ಕುರಿತ ತಾತ್ವಿಕ ಚಿಂತನೆಯ ಆಯಾಮವನ್ನು ಸಹ ಇದು ಒಳಗೊಂಡಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತ ಈ ವಿಮರ್ಶಕರ ಚಿಂತನೆಗಳಲ್ಲಿ ಮುಖ್ಯವಾದ ಹತ್ತು ನೆಲೆಗಳನ್ನು ಗುರುತಿಸಲು ಸಾಧ್ಯವಿದೆ. ಅವುಗಳೆಂದರೆ, ಅ. ಸಾಂಸ್ಕೃತಿಕ ಯಾಜಮಾನ್ಯರಾಹಿತ್ಯತೆ ನೆಲೆ ಆ. ದೇಶಿ ಸಂಸ್ಕೃತಿಶೋಧನೆ ನೆಲೆ ಇ. ತೃತೀಯ ಜಗತ್ತಿನ ಸಂಕಥನ ನೆಲೆ ಈ. ವಸಾಹತ್ತೋತ್ತರ ಚಿಂತನ ನೆಲೆಉ.ನವವಸಾಹತುಶಾಹಿ ಸಾಂಸ್ಕೃತಿಕ ಶೋಧದ ನೆಲೆ ಊ. ಸಾಮಾಜಿಕ ನೆಲೆ ಋ. ಸಾಂಸ್ಕೃತಿಕ ನೆಲೆ ೠ. ಸಂಘರ್ಷದ ನೆಲೆ ಎ. ಸಾಹಿತ್ಯದ ನೆಲೆ ಮತ್ತು ಏ. ದೇಶಿ ನೆಲೆ.

ಇವು ಮೇಲ್ನೋಟಕ್ಕೆ ಪರಸ್ಪರ ಬೇರೆ ಬೇರೆ ಎನ್ನುವಂತೆ ತೋರಿದರೂ ಸಹ, ಮೂಲತಃ ಒಂದಕ್ಕೊಂದು ಸಂಬಂಧ ಹೊಂದಿವೆ. ಅಲ್ಲದೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಗುರುತಿಸುವ, ವಿವರಿಸುವ ಮತ್ತು ವ್ಯಾಖ್ಯಾನೀಕರಿಸುವ ಕಾರಣದಿಂದ ಇವುಗಳನ್ನು ಇಲ್ಲಿ ಪ್ರತ್ಯೇಕವಾಗಿ ಆಲೋಚಿಸುವುದು ಅತ್ಯಂತ ಸೂಕ್ತವಾದ ಕ್ರಮವಾಗಿದೆ.

೨.೬.೧ ಸಾಂಸ್ಕೃತಿಕ ಯಾಜಮಾನ್ಯರಾಹಿತ್ಯತೆ ನೆಲೆ

ಸಾಮಾನ್ಯವಾಗಿ ಸಾಹಿತ್ಯ ವಿಮರ್ಶೆಯು 'ಸಾಂಸ್ಕೃತಿಕ ಸಾರ್ವತ್ರಿಕತೆ' ಮತ್ತು 'ವಿಶ್ವಾತ್ಮಕತೆ'ಯ ಆಯಾಮಗಳನ್ನು ಪಡೆಯುವ ಮೂಲಕವೇ 'ಸಾಂಸ್ಕೃತಿಕ ಯಾಜಮಾನ್ಯತೆ' ಆಯಾಮವನ್ನು ಪಡೆದುಕೊಳ್ಳುತ್ತದೆ. ಕನ್ನಡದಲ್ಲಿ 'ನವೋದಯ ವಿಮರ್ಶೆ' ಈ ರೀತಿಯ ಆಯಾಮ ಪಡೆದುಕೊಂಡಿತು. ಇಂಥ ವಿಮರ್ಶೆ ಸಂಸ್ಕೃತಿ ಮತ್ತು ಸಾಹಿತ್ಯದ ಪ್ರಶ್ನೆಗಳನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸುವುದರಲ್ಲಿ ಹೆಚ್ಚು ಸಫಲವಾಗಲಾರದು. ಆದ್ದರಿಂದ, ಯಾವುದೇ ವಿಮರ್ಶೆ 'ಸಾಂಸ್ಕೃತಿಕ ಯಾಜಮಾನ್ಯತೆ'ಯ ಆಯಾಮವನ್ನು

ನಿರಾಕರಿಸಿ, ದೇಶಿ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಶ್ನೆಗಳನ್ನು ತನ್ನ ಚಿಂತನೆಯ ಮುಖ್ಯ ಕಾಳಜಿಗಳನ್ನಾಗಿ ಮಾಡಿಕೊಳ್ಳುವುದರಿಂದ ಮಾತ್ರವೇ 'ಸಾಂಸ್ಕೃತಿಕ ವಿಮರ್ಶೆ' ಯಾಗಿ ರೂಪುಗೊಳ್ಳುತ್ತದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಇಂಥ ತಾತ್ವಿಕ ನೆಲೆ ಇನ್ನೂ ವ್ಯಾಪಕವಾಗಿ ದಕ್ಕಿಲ್ಲ. ಆದ್ದರಿಂದ, ಈ ತಾತ್ವಿಕ ನೆಲೆಯನ್ನು ತನ್ನದಾಗಿಸಿಕೊಳ್ಳಬೇಕು ಎನ್ನುವುದು ಮನು ಮತ್ತು ಶ್ರೀಧರ್ ಅವರ ಚಿಂತನೆಯಾಗಿದೆ. ಮೊಗಳ್ಳಿ ಸಹ ಸಾಂಸ್ಕೃತಿಕ ಯಾಜಮಾನ್ಯರಾಹಿತ್ಯತೆಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಮುಖ್ಯ ಚಹರೆಯಾಗಿಯೆ ಗುರುತಿಸುತ್ತಾರೆ.

೨.೬.೨ ದೇಶಿ ಸಂಸ್ಕೃತಿ ಶೋಧನೆ ನೆಲೆ

ಸಾಂಸ್ಕೃತಿಕ ಪ್ರಶ್ನೆಗಳು, ಕಾಳಜಿಗಳು ಮತ್ತು ಹೊಣೆಗಾರಿಕೆಗಳು ಕನ್ನಡ ಸಾಹಿತ್ಯ ವಿಮರ್ಶೆಯ ಮುಖ್ಯ ತಾತ್ವಿಕ ನೆಲೆಗಳೆ ಆಗಿದ್ದರೂ, ಈ ವಿಮರ್ಶೆ 'ನಮ್ಮ ಸಂಸ್ಕೃತಿ' ಶೋಧದ ಅರ್ಥಪೂರ್ಣ ಹಾಗೂ ಪರಿಣಾಮಕಾರಿ ಸಾಧನವಾಗುವುದರಲ್ಲಿ ಹೆಚ್ಚು ಸಫಲವಾಗಿಲ್ಲ. ನಮ್ಮ ಸಂಸ್ಕೃತಿಯ ರಚನೆಯ ಒಳಸ್ವರೂಪವನ್ನು ಗುರುತಿಸುವುದಕ್ಕೆ ಪಾಶ್ಚಾತ್ಯ ಸಾಂಸ್ಕೃತಿಕ ಪರಿಭಾಷೆಗಳ, ಪರಿಕಲ್ಪನೆಗಳ ಮತ್ತು ಸಿದ್ಧಾಂತಗಳ ನೆರವು ಮಹತ್ವದ ಪ್ರಯೋಜನವನ್ನೇನೂ ನೀಡಿಲ್ಲ. ಸಂಸ್ಕೃತಿಯ ಪುನರ್‌ಮೌಲ್ಯೀಕರಣ, ಸಾಂಸ್ಕೃತಿಕ ಅಧ್ಯಯನಗಳು, ಪರ್ಯಾಯ ಸಂಸ್ಕೃತಿ ಮತ್ತು ಪ್ರತಿಸಂಸ್ಕೃತಿ ಮೊದಲಾದಂಥ ಚಿಂತನೆಗಳು ನಮ್ಮ ಸಂಸ್ಕೃತಿ ಸಂದರ್ಭದ ಅಧಿಕಾರ ರಚನೆಗಳ ವಿನ್ಯಾಸಗಳ ವಿಶ್ಲೇಷಣೆಯಲ್ಲಿ ಈ ಕಾರಣದಿಂದಾಗಿಯೇ ಹೆಚ್ಚು ಯಶಸ್ವಿಯಾಗಲಿಲ್ಲ. ಆದ್ದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಾಹಿತ್ಯದ ಅನುಸಂಧಾನದಲ್ಲಿ 'ದೇಶೀಯ ಸಂಸ್ಕೃತಿಯ ಕಾಳಜಿಗಳನ್ನು' ತನ್ನ ತಾತ್ವಿಕತೆಯ ಮುಖ್ಯ ನೆಲೆಯಾಗಿ ಸ್ವೀಕರಿಸುವುದು ಹೆಚ್ಚು ಅರ್ಥಪೂರ್ಣ ಎನ್ನುವ ವಾದವನ್ನು ಮನು ಮತ್ತು ಶ್ರೀಧರ್ ಹಾಗೂ ಮೊಗಳ್ಳಿ ಮಂಡಿಸುತ್ತಾರೆ.

'ನಮ್ಮ ವಿಮರ್ಶೆ' ಎದುರಿಸುತ್ತಿರುವ ಪ್ರಶ್ನೆಗಳಿಗೆ 'ನಮ್ಮ ಸಂಸ್ಕೃತಿ' ಮೂಲದಿಂದಲೇ, ಅದರಲ್ಲೂ ದೇಶೀಯ ಸಂಸ್ಕೃತಿ ಮೂಲದಿಂದ ಪರಿಹಾರ ಕಂಡುಕೊಳ್ಳುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ನೆಲೆಯಾಗಬೇಕು ಎನ್ನುವ ಈ ವಿಮರ್ಶಕರ ವಿಚಾರ ಪ್ರಶ್ನಾರ್ಹವಾಗಿದೆ. ಆಧುನಿಕೋತ್ತರ ಕಾಲಘಟ್ಟದ ಸಂದರ್ಭದಲ್ಲಿ 'ದೇಶಿ ಸಂಸ್ಕೃತಿ' ಎಂದು ಕರೆಯಲಾಗುವ 'ನಮ್ಮ ಸಂಸ್ಕೃತಿ' ಎಂದರೆ ಯಾರ ಸಂಸ್ಕೃತಿ, 'ಯಾವ ಸಂಸ್ಕೃತಿ', 'ಒಂದೇ ಸಂಸ್ಕೃತಿಯೋ ಅಥವಾ ಹಲವು ಸಂಸ್ಕೃತಿಗಳೋ', 'ಸಂಸ್ಕೃತಿಯ ಶ್ರೇಣೀಕೃತ ರಚನೆಗೂ ಮತ್ತು ಅಧಿಕಾರ ವಿಭಜನೆಗೂ ಇರುವ ಸಂಬಂಧದ ಸ್ವರೂಪ ಏನು' ಎನ್ನುವ ಮಹತ್ವದ ಪ್ರಶ್ನೆಗಳನ್ನು ಈ ವಿಮರ್ಶಕರು ಇಂದಿನ ಜರೂರಿನ ಪ್ರಶ್ನೆಗಳೆಂದು ಭಾವಿಸಿದಂತೆ ಕಂಡು ಬರುವುದಿಲ್ಲ.

೨.೬.೩ ತೃತೀಯ ಜಗತ್ತಿನ ಸಂಕಥನದ ನೆಲೆ

ವಸಾಹತುಶಾಹಿ ರಾಷ್ಟ್ರಗಳ ಸಾಂಸ್ಕೃತಿಕ ಆಳ್ವಿಕೆಯ ದಮನದಿಂದ ವಿಮೋಚಿತವಾಗ ಬೇಕಿರುವುದು, ಕನ್ನಡವೂ ಸೇರಿದಂತೆ ಎಲ್ಲಾ ಮೂರನೆಯ ಜಗತ್ತಿನ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶೆಯ ಒಂದು

ಮುಖ್ಯವಾದ ತಾತ್ವಿಕ ನೆಲೆಯಾಗಿದೆ ಎನ್ನುವುದು ಮನು ಮತ್ತು ಶ್ರೀಧರ್ ಅವರ ಪ್ರತಿಪಾದನೆಯಾಗಿದೆ. ತೃತೀಯ ಜಗತ್ತಿನ ಬಹುಪಾಲು ರಾಷ್ಟ್ರಗಳು ಒಂದಲ್ಲ ಒಂದು ರೂಪದಲ್ಲಿ ವಸಾಹತುಶಾಹಿ ರಾಷ್ಟ್ರಗಳ ಮತ್ತು ನವವಸಾಹತುಶಾಹಿ ರಾಷ್ಟ್ರಗಳ ನಿಯಂತ್ರಣಕ್ಕೆ ಒಳಗಾಗಿರುತ್ತವೆ. ಈ ಸಾಂಸ್ಕೃತಿಕ ಸನ್ನಿವೇಶದ ಪ್ರತಿಕ್ರಿಯೆ ಮತ್ತು ಪ್ರತಿರೋಧದ ರೂಪದಲ್ಲಿ ಸೃಷ್ಟಿಯಾಗುತ್ತಿರುವ ಸೃಜನಶೀಲ ಸಾಹಿತ್ಯವನ್ನು, ಪಾಶ್ಚಾತ್ಯ ವಸಾಹತುಶಾಹಿ ಮತ್ತು ನವವಸಾಹತುಶಾಹಿ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶಾ ಮಾದರಿಗಳ ಬಳಕೆಯಿಂದ ವಿಮರ್ಶಿಸಲು ಸಾಧ್ಯವಿಲ್ಲ. ಹೀಗಾಗಿ, ತೃತೀಯ ಜಗತ್ತಿನ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶೆಯು ತಮ್ಮ ಸಮಾಜ ಸಂಸ್ಕೃತಿ ಮತ್ತು ಸಾಹಿತ್ಯಗಳ ಸಂಕಥನವನ್ನು ತನ್ನ ತಾತ್ವಿಕ ನೆಲೆಯಾಗಿ ಹೊಂದಬೇಕಾಗುತ್ತದೆ ಎನ್ನುವುದು ಈ ವಿಮರ್ಶಕರ ಆಲೋಚನೆಯ ಮುಖ್ಯ ವಿಚಾರವಾಗಿದೆ.

೨.೬.೪ ವಸಾಹತೋತ್ತರ ಚಿಂತನೆ ನೆಲೆ

ಸಂಸ್ಕೃತಿ ಪ್ರಶ್ನೆಯನ್ನು ಅತ್ಯಂತ ಮುಖ್ಯವೆಂದು ಪರಿಗಣಿಸಿರುವ ವಸಾಹತೋತ್ತರ ಚಿಂತನೆಯು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಒಂದು ಪ್ರಮುಖ ನೆಲೆ ಎಂದು ಕೇಶವಶರ್ಮ ಅಭಿಪ್ರಾಯಪಡುತ್ತಾರೆ. ಕನ್ನಡದ ಬಹುತೇಕ ವಿಮರ್ಶಕರು 'ಸಂಸ್ಕೃತಿ' ಪರಿಕಲ್ಪನೆಯನ್ನು ವಿಮರ್ಶಾತ್ಮಕ 'ಪರಿಕರ'ವಾಗಿ ಮತ್ತು ಅಧ್ಯಯನ 'ವಿಧಾನವಾಗಿ ಬಳಸಿಕೊಂಡಿದ್ದಾರೆ. ಕನ್ನಡದ ಸಾಂಸ್ಕೃತಿಕ ವಿಮರ್ಶೆಗಳು ವಿವಿಧ 'ಹತ್ಯಾರ'ಗಳನ್ನು ಬಳಸಿ ಸಂಸ್ಕೃತಿಯ ಅಧ್ಯಯನಗಳನ್ನು ಮಾಡಿವೆ. ವಸಾಹತುಶಾಹಿಯಿಂದ ಉಂಟಾಗಿರುವ ಸಾಂಸ್ಕೃತಿಕ ಮರೆವನ್ನು ಮರುಶೋಧಿಸುವ ಮುಖಾಂತರ ಪರಂಪರೆಯ ವಿಶಿಷ್ಟತೆಯನ್ನು ಅರ್ಥಪೂರ್ಣವಾಗಿ ಪರಿಷ್ಕರಿಸಿಕೊಳ್ಳುವ ಉದ್ದೇಶದ 'ಪೌರಾತ್ಯವಾದಿ ಚಿಂತನೆಯು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಮುಖ್ಯ ಚಹರೆಯಾಗಿದೆ ಎಂದು ಶರ್ಮ ಅವರು ವಿಶ್ಲೇಷಿಸುತ್ತಾರೆ.

೨.೬.೫ ನವವಸಾಹತುಶಾಹಿ ಸಾಂಸ್ಕೃತಿಕ ಶೋಧದ ನೆಲೆ

ವಿಮೋಚಿತ ವಸಾಹತು ರಾಷ್ಟ್ರಗಳ ವಸಾಹತೋತ್ತರ ಕಾಲಘಟ್ಟದ ನಿರ್ವಸಾಹತೀಕರಣ ಪ್ರಕ್ರಿಯೆಯನ್ನು ನಿಷ್ಫಲಗೊಳಿಸುವ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಧಾನ ಉದ್ದೇಶದಿಂದ ಪ್ರಥಮ ಜಗತ್ತು ತನ್ನ ನವವಸಾಹತುಶಾಹಿ ರಾಜಕೀಯಾರ್ಥಿಕ ಸಿದ್ಧಾಂತವನ್ನು ಇವುಗಳ ಮೇಲೆ ಹೇರಿದೆ. ಇದರ ಪರಿಣಾಮ ಕುರಿತ ಸಾಂಸ್ಕೃತಿಕ ಶೋಧವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇನ್ನೊಂದು ಮುಖ್ಯ ನೆಲೆಯಾಗಿದೆ ಎನ್ನುವುದು ಇಲ್ಲಿನ ಬಹುತೇಕ ವಿಮರ್ಶಕರ ಚಿಂತನೆ. ಆದ್ದರಿಂದ, ಮನು ಮತ್ತು ಶ್ರೀಧರ್ ಹಾಗೂ ರಂಗನಾಥ್ ಅವರು ಜಾಗತೀಕರಣ ವಿರೋಧಿ ಧೋರಣೆಯನ್ನು; ಮೊಗಳ್ಳಿ ಅವರು ಜಾಗತೀಕರಣ ಪರ ಧೋರಣೆಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಚಹರೆಗಳಾಗಿ ಗುರುತಿಸುತ್ತಾರೆ.

೨.೬.೬ ಸಾಮಾಜಿಕ ನೆಲೆ

ಸಾಮಾಜಿಕ ವಿಮರ್ಶೆಯ ದೃಷ್ಟಿಕೋನ ಮತ್ತು ವಿಧಾನಗಳಿಗಿಂತ ಉನ್ನತ ಹಂತದ ಸಾಮಾಜಿಕ ನ್ಯಾಯದ ಹಕ್ಕೊತ್ತಾಯದ ಆಯಾಮ ಹೊಂದಿರುವ 'ಸಾಮಾಜಿಕ ಬದ್ಧತೆ'ಯು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಮುಖ್ಯ ನೆಲೆಯಾಗಿರಬೇಕು ಎನ್ನುವ ವಾದವನ್ನು ರಂಗನಾಥ್ ಮಂಡಿಸುತ್ತಾರೆ. ಈ ವಿಮರ್ಶೆಯು, ಕೃತಿ ವಿಶ್ಲೇಷಣೆಯ ಸಂದರ್ಭದಲ್ಲಿ ಕೃತಿಯಲ್ಲಿ ನಿರೂಪಿತವಾಗಿರುವ ಸಮಾಜ ಮತ್ತು ಮಾನವ ಜಗತ್ತಿನ ವಿಶ್ಲೇಷಣೆಯ ಮೂಲಕ, ವಾಸ್ತವ ಸಮಾಜ ಹಾಗೂ ಜಗತ್ತಿನಲ್ಲಿ ಇರುವ ಸಮಾಜ ವಿರೋಧಿ, ಮನುಷ್ಯ ವಿರೋಧಿ ನೆಲೆಗಳ ನಿರ್ಮೂಲನೆಯನ್ನು ತನ್ನ ಪ್ರಮುಖ ಕಾರ್ಯಮಾದರಿಯಾಗಿಸಿಕೊಳ್ಳಬೇಕು ಎಂದು ತರ್ಕಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ವಿಮರ್ಶಕ ಓರ್ವ 'ಸಾಮಾಜಿಕ ಕಾರ್ಯಕರ್ತ'ನಂತೆ ಕಂಡರೂ ಆಶ್ಚರ್ಯವಿಲ್ಲ ಎನ್ನುವುದು ರಂಗನಾಥ್ ಅವರ ನಿಲುವು.

೨.೬.೭ ಸಾಂಸ್ಕೃತಿಕ ನೆಲೆ

ಸಾಹಿತ್ಯವನ್ನು 'ಸಾಂಸ್ಕೃತಿಕ ಪಠ್ಯ'ವೆಂದು ಮತ್ತು ಸಾಹಿತಿಯನ್ನು 'ಸಾಂಸ್ಕೃತಿಕ ವ್ಯಕ್ತಿ'ಯೆಂದು ಗುರುತಿಸುವ ನೂತನ ವಿಧಾನವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಸಾಂಸ್ಕೃತಿಕ ನೆಲೆ ಎಂದು ರಂಗನಾಥ್ ವಿವರಿಸುತ್ತಾರೆ. ನಮ್ಮ ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಏರಿರುವ ಏಕಮುಖಿ ಚಿಂತನೆಗಳ ಭಾರದಿಂದ ಬಿಡುಗಡೆ ಹೊಂದುವುದು ಈ ತಾತ್ವಿಕ ನೆಲೆಯ ಉದ್ದೇಶ ಎಂದು ವ್ಯಾಖ್ಯಾನಿಸುತ್ತಾರೆ.

೨.೬.೮ ಸಂಘರ್ಷದ ನೆಲೆ

ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ಪರಿಣಾಮವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಸಂಘರ್ಷದ ತಾತ್ವಿಕ ನೆಲೆ ಪ್ರಾಪ್ತವಾಗಿದೆ. 'ಸಾಮಾಜಿಕ ನ್ಯಾಯ' ಮತ್ತು 'ಸಾಂಸ್ಕೃತಿಕ ಅಸ್ಮಿತೆ'ಯನ್ನು ಸಾಧಿಸುವುದು ಈ ನೆಲೆಯ ಗುರಿಯಾಗಿದೆ ಎಂದು ರಂಗನಾಥ್ ನಿರೂಪಿಸುತ್ತಾರೆ.

೨.೬.೯ ಸಾಹಿತ್ಯದ ನೆಲೆ

ಮೂಲ ಸಾಹಿತ್ಯ ಕೃತಿಯನ್ನು ಓದದೆಯೂ ವಿಮರ್ಶೆಯನ್ನು ಸ್ವತಂತ್ರವಾಗಿ ಓದಲು ಸಾಧ್ಯವಿರುವ ಒಂದು 'ವಿಶೇಷ ಸ್ಥಿತಿ'ಯನ್ನು ರಂಗನಾಥ್ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಮಹತ್ವದ ತಾತ್ವಿಕ ನೆಲೆ ಎಂದು ಪರಿಗಣಿಸುತ್ತಾರೆ. ಇಷ್ಟೇ ಅಲ್ಲದೆ, ಅವರು ಇಂದು ಎಷ್ಟೋ ಮೂಲಕೃತಿಗಳಿಗಿಂತ ವಿಮರ್ಶೆಯ ಬರಹಗಳೇ ಹೆಚ್ಚು ಪ್ರಚಾರದಲ್ಲಿವೆ ಎಂದು ತಮ್ಮ ಅಭಿಪ್ರಾಯಕ್ಕೆ ಪುರಾವೆ ನೀಡುತ್ತಾರೆ.

೨.೬.೧೦ ದೇಶಿ ನೆಲೆ

ಇಲ್ಲಿನ ಬಹುತೇಕ ವಿಮರ್ಶಕರು 'ದೇಶಿ' ಮತ್ತು 'ದೇಶೀಯತೆ'ಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಒಂದು ಮಹತ್ವದ ನೆಲೆ ಎಂದು ಗುರುತಿಸುತ್ತಾರೆ. ಇನ್ನು ಕೆಲವು ವಿಮರ್ಶಕರು 'ದೇಶಿ' ಮತ್ತು 'ಕನ್ನಡ ಸಾಂಸ್ಕೃತಿಕ ವಿಮರ್ಶೆ' ಯನ್ನು ಅಭಿನ್ನ ಪರಿಕಲ್ಪನೆಯಾಗಿ ಪರಿಭಾವಿಸುತ್ತಾರೆ.

ಮನು ಮತ್ತು ಶ್ರೀಧರ್ ಅವರು, ಕೆ.ವಿ.ಎನ್. ಅವರ 'ಕನ್ನಡಿಗಳು ಇನ್ನು ಸಾಕು' ಎನ್ನುವ ಲೇಖನದಿಂದ ಪ್ರಭಾವಿತರಾಗಿದ್ದಾರೆ. ಹೀಗಾಗಿ, ಇವರು ನಮ್ಮ ಸಾಹಿತ್ಯ ವಿಮರ್ಶೆ ಎದುರಿಸುತ್ತಿರುವ ಸಮಸ್ಯೆಗಳಿಗೆ ನಮ್ಮ ಸಂಸ್ಕೃತಿ ಮೂಲದಿಂದಲೇ ಪರಿಹಾರಗಳನ್ನು ಕಂಡುಕೊಳ್ಳಬೇಕು.ಅಂಥ ಏಕೈಕ ಪರಿಹಾರಕ್ರಮವೆಂದರೆ ಒಟ್ಟಾರೆ ಅನ್ಯದೇಶೀಯ ವಿಮರ್ಶಾ ಮಾದರಿಗಳ ಆಮದನ್ನು ಆದಷ್ಟು ತಡೆಯುವುದು ಎಂದು ಹೇಳುತ್ತಾರೆ.

ಮೊಗಳ್ಳಿ ಸಹ, 'ದೇಶಿ'ಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಜೀವದ್ರವ್ಯವಾಗಿಯೇ ಗುರುತಿಸುತ್ತಾರೆ. ಆದ್ದರಿಂದಲೇ, "ಪಶ್ಚಿಮದ ಜ್ವರದಿಂದ ನರಳುತ್ತಿದ್ದ ಕನ್ನಡ ವಿಮರ್ಶೆ ತನ್ನ ಅಸ್ತಿತ್ವದ ಕಾರಣಕ್ಕಾಗಿ ದೇಶಿ ನಿರೂಪಣೆಯ ಮದ್ದನ್ನು ಕಂಡುಕೊಳ್ಳಬೇಕಾಗಿತ್ತು"[೮] ಎಂದು ವಿಶ್ಲೇಷಿಸುತ್ತಾರೆ. ದೇಶೀಯತೆಯನ್ನು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಪ್ರಭಾವದಿಂದ ಕನ್ನಡ ವಿಮರ್ಶೆಯನ್ನು ಸ್ವತಂತ್ರಗೊಳಿಸುವ ಮುಖ್ಯ ಸಾಧನ ಎಂದು ಹರೀಶ್ ವಿವರಿಸುತ್ತಾರೆ. ಇದರಿಂದ 'ಕನ್ನಡದ್ದೇ ಆದ ದೇಶೀಯ ಸಾಹಿತ್ಯ ಸಂಸ್ಕೃತಿ ವಿಮರ್ಶೆಯು ಬೇರು ಬಿಡಲು ಖಂಡಿತ ಅವಕಾಶವಿದೆ' ಎಂದು ವಾದಿಸುತ್ತಾರೆ.

ಹೀಗೆ, ಈ ವಿಮರ್ಶಕರು 'ದೇಶೀ'ಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಪ್ರಮುಖ ತಾತ್ವಿಕ ನೆಲೆಯಾಗಿ ಗುರುತಿಸುವುದಷ್ಟೇ ಅಲ್ಲದೆ, ಒಟ್ಟಾರೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯೇ 'ಶುದ್ಧ ಸ್ವಾಯತ್ತ ದೇಶಿ ವಿಮರ್ಶೆಯಾಗಿ ರೂಪುಗೊಳ್ಳಬೇಕು ಎಂದೂ ಆಶಿಸುತ್ತಾರೆ. ಕನ್ನಡಕ್ಕೆ ಕನ್ನಡದ್ದೇ ಆದ ವಿಮರ್ಶೆ ಬೇಕು.ಇದೇ ಕನ್ನಡ ಸಾಂಸ್ಕೃತಿಕ ವಿಮರ್ಶೆ ಎನ್ನುವುದು ಇವರ ತಾತ್ವಿಕ ಗ್ರಹಿಕೆಗಳ ಸಾರ ಎನ್ನಬಹುದಾಗಿದೆ.

೨.೭ ಕೆಲವು ಪ್ರಶ್ನೆಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಇಲ್ಲಿನ ವಿಮರ್ಶಕರ ಚಿಂತನೆಗಳು ಹಲವು ಅರ್ಥಪೂರ್ಣ ಸಂಗತಿಗಳನ್ನು ಒಳಗೊಂಡಿವೆ. ಇಷ್ಟಾದರೂ, ಕೆಲವು ವಿಮರ್ಶಕರ ಚಿಂತನೆಗಳ ದೃಷ್ಟಿಕೋನ ಮತ್ತು ವಿಶ್ಲೇಷಣಾ ವಿಧಾನ ಕುರಿತು ಗಂಭೀರವಾದ ಪ್ರಶ್ನೆಗಳನ್ನು ಎತ್ತಲು ಸಹ ಅವಕಾಶವಿದೆ. ಅವು ಇಂತಿವೆ:

ಅ. ನಮ್ಮ ವಿಮರ್ಶೆ ಎದುರಿಸುತ್ತಿರುವ ಪ್ರಶ್ನೆಗಳಿಗೆ 'ನಮ್ಮ ಸಂಸ್ಕೃತಿ' ಮೂಲದಿಂದಲೇ ಅದರಲ್ಲೂ, ದೇಶೀಯ ಸಂಸ್ಕೃತಿ ಮೂಲದಿಂದಲೇ ಪರಿಹಾರ ಕಂಡುಕೊಳ್ಳುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ನೆಲೆಯಾಗಬೇಕು ಎನ್ನುವ ಮನು ಮತ್ತು ಶ್ರೀಧರ್ ಹಾಗೂ ಹರೀಶ್ ಅವರ ವಿಚಾರಗಳು ಪ್ರಶ್ನಾರ್ಹವಾಗಿವೆ. ಸಮಕಾಲೀನ ಆಧುನಿಕೋತ್ತರ ಕಾಲಘಟ್ಟದ ಸಂದರ್ಭದಲ್ಲಿ 'ನಮ್ಮ ಸಂಸ್ಕೃತಿ' ಮತ್ತು 'ದೇಶಿ ಸಂಸ್ಕೃತಿ' ಎಂದು ಕರೆಯಲಾಗುವ ಸಂಸ್ಕೃತಿ ಎಂದರೆ ಯಾವ ಸಂಸ್ಕೃತಿ, ಯಾವ ಸಂಸ್ಕೃತಿ, 'ಒಂದು ಸಂಸ್ಕೃತಿಯೊ ಅಥವಾ ಹಲವು ಸಂಸ್ಕೃತಿಗಳೋ' ಮತ್ತು 'ಸಂಸ್ಕೃತಿಯ ಶ್ರೇಣೀಕೃತ ರಚನೆಗೂ ಹಾಗೂ ಅಧಿಕಾರ ವಿಭಜನೆಗೂ ಇರುವ ಸಂಬಂಧದ ಸ್ವರೂಪ ಏನು'

ಎನ್ನುವ ಇವೇ ಮೊದಲಾದ ಮಹತ್ವದ ಪ್ರಶ್ನೆಗಳನ್ನು ಇವರು ನಿರ್ಣಾಯಕ ಪ್ರಶ್ನೆಗಳೆಂದು ಭಾವಿಸಿರುವುದಿಲ್ಲ.

ಆ. ತೃತೀಯ ಜಗತ್ತಿನ ಸಂಕಥನ ಮತ್ತು ವಸಾಹತೋತ್ತರ ಚಿಂತನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಪ್ರಮುಖ ನೆಲೆಗಳಾಗಬೇಕು ಎಂದು ಪ್ರತಿಪಾದಿಸುವ ಮನು ಮತ್ತು ಶ್ರೀಧರ್ ಹಾಗೂ ಶರ್ಮ ಅವರ ಚಿಂತನೆಗಳು, ಈ ಸಂದರ್ಭದಲ್ಲಿ ವಹಿಸಬೇಕಾದ ಅಗತ್ಯ ಎಚ್ಚರವನ್ನು ಕುರಿತು ಸೂಕ್ಷ್ಮವಾಗಿ ಯೋಚಿಸಿದಂತೆ ಕಂಡು ಬರುವುದಿಲ್ಲ. ವಸಾಹತುಶಾಹಿ ರಾಷ್ಟ್ರಗಳು ಎಲ್ಲಾ ವಸಾಹತು ರಾಷ್ಟ್ರಗಳ ಮೇಲೆ ಸಂಪೂರ್ಣವಾಗಿ ಏಕರೂಪಿ ವಿದ್ರೋಹಾತ್ಮಕ ಪರಿಣಾಮಗಳನ್ನಷ್ಟೇ ಉಂಟುಮಾಡಿವೆ ಹಾಗೂ ಈ ಗಾಯಗಳನ್ನು ವಾಸಿಮಾಡಿಕೊಳ್ಳಲು ಇಂಥ ರಾಷ್ಟ್ರಗಳು ಮಾಡುತ್ತಿರುವ ಪ್ರಯತ್ನಗಳೂ ಸಹ ಏಕರೂಪಿಯಾಗಿವೆ ಎನ್ನುವ ಧೋರಣೆ ಇವರ ವಿಚಾರಗಳಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಆದರೆ ಮೂರನೆಯ ಜಗತ್ತಿನ ವಸಾಹತುರಾಷ್ಟ್ರಗಳ ವಸಾಹತುಶಾಹಿ ಅನುಭವಗಳ ಅನುಸಂಧಾನ ಪ್ರಕ್ರಿಯೆ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿರುತ್ತದೆ. ಅಷ್ಟೇ ಅಲ್ಲದೆ ಈ ಪ್ರಕ್ರಿಯೆ, ರಾಷ್ಟ್ರವೊಂದರ ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟಕಗಳ ನಡುವೆ ಸಹ ಬೇರೆ ಬೇರೆ ಸ್ವರೂಪಗಳಲ್ಲಿ ಹಾಗೂ ಸ್ಥರಗಳಲ್ಲಿ ಕ್ರಿಯಾತ್ಮಕವಾಗಿರುತ್ತದೆ ಎನ್ನುವ ವಾಸ್ತವ ಸಂಗತಿಯನ್ನು ಇಲ್ಲಿ ಮರೆಯಲಾಗಿದೆ.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಅತ್ಯಂತ ಪ್ರಮುಖ ನೆಲೆಯಾಗಿ ನವವಸಾಹತುಶಾಹಿ ಸಾಂಸ್ಕೃತಿಕ ಶೋಧವನ್ನು ಮನು ಮತ್ತು ಶ್ರೀಧರ್ ಅವರು ವ್ಯಾಖ್ಯಾನಿಸುತ್ತಾರೆ. ಹಾಗೆಯೇ ಇಲ್ಲಿನ ಬಹುಪಾಲು ವಿಮರ್ಶಕರು ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ನವವಸಾಹತುಶಾಹಿ ಸ್ವರೂಪದ ಸಂಬಂಧದ ವಿಭಿನ್ನ ಮುಖಗಳನ್ನು ಕುರಿತು ಚರ್ಚಿಸುತ್ತಾರೆ. ಇವುಗಳಲ್ಲಿ ಮುಖ್ಯವಾದ ಎರಡು ನೆಲೆಗಳನ್ನು ಗುರುತಿಸಬಹುದು. ಅವುಗಳೆಂದರೆ, ಜಾಗತೀಕರಣ ವಿರೋಧಿ ನೆಲೆ ಮತ್ತು ಜಾಗತೀಕರಣ ಪರ ನೆಲೆ.

ಜಾಗತೀಕರಣದ ಮೂಲಕ ನವವಸಾಹತುಶಾಹಿಯ ಏಕಧ್ರುವೀಕರಣ (unipolorisation) ಪ್ರಕ್ರಿಯೆ ಪ್ರಪಂಚಾದ್ಯಂತ ತೀವ್ರವಾಗಿ ವ್ಯಾಪಿಸುತ್ತಾ, 'ಅಮೇರಿಕೀಕರಣ ಇಲ್ಲವೇ ವಿನಾಶ' ಎನ್ನುವ ರಾಜಕೀಯಾರ್ಥಿಕ ಸಿದ್ಧಾಂತವನ್ನು ಪ್ರಬಲವಾಗಿ ಹರಡುತ್ತಿರುವುದರ ವಿರುದ್ಧ, ಪ್ರಾದೇಶಿಕ ಮತ್ತು ದೇಶಿಯ ಭಾಷೆಗಳ ಸಾಹಿತ್ಯಗಳು ಹಾಗೂ ವಿಮರ್ಶೆಗಳು ತೀವ್ರವಾದ ಪ್ರತಿರೋಧ ವ್ಯಕ್ತಪಡಿಸಬೇಕು ಎನ್ನುವುದು ಮನು ಮತ್ತು ಶ್ರೀಧರ್ ಅವರ ಪ್ರಮುಖವಾದ ಆಗ್ರಹವಾಗಿದೆ. ಇದು ಸೂಕ್ತವೂ ಹೌದು. ಆದರೆ, ಈ ಪ್ರತಿರೋಧದ ಸಾಧನವಾಗಿ ಇವರು 'ಲಿಬರಲ್ ಪ್ರಜ್ಞೆ' ಅಥವಾ 'ಲಿವೀಸಿಯನ್ ಉದಾರ ಮಾನವಾಸಕ್ತಿ'ಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ನೆಲೆಯಾಗಿ

ಪ್ರತಿಪಾದಿಸುವುದೂ ಮಾತ್ರ ಯುಕ್ತವಲ್ಲ. ಏಕೆಂದರೆ, ಜೀವಪರ ಸಂಸ್ಕೃತಿ ನಿರ್ಮಾಣದ ಉದ್ದೇಶ ಹೊಂದಿರುವ ಸಾಂಸ್ಕೃತಿಕ ವಿಮರ್ಶೆಗೆ ಯಾವಾಗಲೂ ಸಂಸ್ಕೃತಿಯ ವಿಕಾರ ಮತ್ತು ವಿದ್ರೋಹಗಳನ್ನು ಕುರಿತು ತೀವ್ರವಾದ ಪ್ರಶ್ನೆ ಎತ್ತಲು 'ಕ್ರಿಟಿಕಲ್ ಸೆನ್ಸ್' ಅಗತ್ಯವಾಗಿರುತ್ತದೆಯೇ ಹೊರತು 'ಲಿಬರಲ್ ಸೆನ್ಸ್' ಅಲ್ಲ. ಹಾಗೆಯೇ ಸಂಸ್ಕೃತಿಯೊಂದರಲ್ಲಿ ನಾಶವಾಗಬೇಕಾದ ಸಂಗತಿಗಳೂ ಸಾಕಷ್ಟಿರುವುದರಿಂದ, ಅವುಗಳನ್ನು ಅಳಿಸಿ ಸಂಸ್ಕೃತಿಯನ್ನು ಹಸನುಗೊಳಿಸಿಬೆಳೆಸುವ ಆಶಾಕಿರಣದಂತೆ ಜಾಗತೀಕರಣವನ್ನು ಪರಿಭಾವಿಸುವ ಮೊಗಳ್ಳಿ ಅವರ ನಿಲುವೂ ಕೂಡಾ ಆಕ್ಷೇಪಾರ್ಹವಾಗಿದೆ. ಏಕೆಂದರೆ, ಮೂಲತಃ ಅಸಮಾನ ನ್ಯಾಯಸೂತ್ರಗಳನ್ನು ಒಳಗೊಂಡಿರುವ ಜಾಗತೀಕರಣವು ಸಂಸ್ಕೃತಿಯಲ್ಲಿ ನಾಶಪಡಿಸಬಾರದ್ದನ್ನು ನಾಶಪಡಿಸಬಹುದಾದ ದಟ್ಟವಾದ ಸಾಧ್ಯತೆ ಇರುವುದನ್ನು ಕುರಿತು ಅವರು ಗಂಭೀರವಾಗಿ ಯೋಚಿಸಿದಂತೆ ಕಂಡುಬರುವುದಿಲ್ಲ.

ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಸಾಮಾಜಿಕ, ಸಾಂಸ್ಕೃತಿಕ, ಸಂಘರ್ಷಾತ್ಮಕ ಮತ್ತು ಸಾಹಿತ್ಯಕ ನೆಲೆಗಳನ್ನು ಕುರಿತ ರಂಗನಾಥ್ ಅವರ ವಿಶ್ಲೇಷಣೆಗಳು ಕೆಲವು ಮುಖ್ಯವಾದ ಅಪಕಲ್ಪನೆಗಳು, ಸರಳೀಕೃತ ಗ್ರಹಿಕೆಗಳು ಹಾಗೂ ದ್ವಂದ್ವಗಳಿಂದ ಕೂಡಿವೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ನೆಲೆಯನ್ನು ವಿವರಿಸುತ್ತಾ, ಅವರು ಸಾಹಿತ್ಯ ವಿಮರ್ಶಕನನ್ನು ಒಬ್ಬ 'ಸಾಮಾಜಿಕ ಕಾರ್ಯಕರ್ತ' ಎನ್ನುವ ಅರ್ಥಬರುವಂತೆ ವ್ಯಾಖ್ಯಾನಿಸುತ್ತಾರೆ. ವಿಮರ್ಶಕನ 'ಸಾಮಾಜಿಕ ಬದ್ಧತೆ' ಅವನ ಪ್ರಮುಖ ಹೊಣೆಗಾರಿಕೆಯೆಂದು ಪ್ರತಿಪಾದಿಸುತ್ತಾರೆ. ಆದರೆ ಕೇವಲ 'ಸಾಮಾಜಿಕ ಬದ್ಧತೆ' ಮತ್ತು 'ಸಾಮಾಜಿಕ ಕಾರ್ಯಕರ್ತತೆ'ಗಳೇ ಸಾಂಸ್ಕೃತಿಕ ವಿಮರ್ಶಕನ ಹೊಣೆಗಾರಿಕೆಗಳಾಗಿರದೆ ಇದಕ್ಕೂ ಮೀರಿದ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಭಾಷಿಕವಾದ ಸಂಕೀರ್ಣ ಹೊಣೆಗಾರಿಕೆಗಳು ಆತನ ಜರೂರಿನ ಜವಾಬ್ದಾರಿಗಳಾಗಿರುತ್ತವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಂಸ್ಕೃತಿಕ ನೆಲೆ ಕುರಿತು ವಿಶ್ಲೇಷಿಸುವಾಗ, ರಂಗನಾಥ್ 'ಸಾಹಿತ್ಯ' ಮತ್ತು 'ಸಾಹಿತಿ'ಯನ್ನು ಪರಿಭಾವಿಸುವ ಕ್ರಮದಲ್ಲಾದ ಪಲ್ಲಟಗಳು ಕೇವಲ 'ಜನಪರ ಜೀವನ ಮೀಮಾಂಸೆ'ಯನ್ನು ಕಟ್ಟುತ್ತಿವೆ ಎನ್ನುವ ಏಕಮುಖಿ ಗ್ರಹಿಕೆ ಇಟ್ಟುಕೊಂಡಿದ್ದಾರೆ. ಆದರೆ, ಕನ್ನಡದಲ್ಲಿ ಇಂದು ಯಾವತ್ತಿಗಿಂತ ಹೆಚ್ಚು ವ್ಯಾಪಕವೂ ಮತ್ತು ಸಂಕೀರ್ಣವೂ ಆದ ಸ್ತರಗಳಲ್ಲಿ 'ಜನ ವಿರೋಧಿ ಮೀಮಾಂಸೆ' ರೂಪಿಸುವುದಕ್ಕೆ ಸಹ ಇದೇ ಪಲ್ಲಟಗಳು ಕಾರಣವಾಗಿರುವ ವಾಸ್ತವವನ್ನು ಗ್ರಹಿಸಲು ವಿಫಲರಾಗುತ್ತಾರೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಎರಡೂ ಕಡೆ ಕುಯ್ಯುವ ಹರಿತವಾದ ಆಯುಧವಾಗದಂತೆ ಬಹುಮುಖಿ ಎಚ್ಚರವನ್ನು ತನ್ನ ಮೂಲದ್ರವ್ಯವಾಗಿ ರೂಪಿಸಿಕೊಳ್ಳಬೇಕಿರುತ್ತದೆ. ಇದು 'ಸರ್ವರ ಸಮ್ಮತಿ ಸಂತೆಯ ಹಾದಿ' ಎಂದು ತಿಳಿದು 'ಕತ್ತಿ ಯಂಚಿನ ದಾರಿ'ಯನ್ನು ಆಯ್ಕೆಮಾಡಿಕೊಳ್ಳಬೇಕಾದ ಅಗ್ನಿದಿವ್ಯವಾಗಿರುತ್ತದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಗೆ 'ಸಂಘರ್ಷದ ನೆಲೆ' ಪ್ರಾಪ್ತವಾಗಿರುವ ಕುರಿತು ಆಲೋಚಿಸುವಾಗಲೂ ಸಹ ರಂಗನಾಥ್ ಆಳವಾದ ಒಳನೋಟ ಕೊಡುವುದಿಲ್ಲ. 'ಸಾಮಾಜಿಕ ನ್ಯಾಯ' ಮತ್ತು 'ಸಾಂಸ್ಕೃತಿಕ ಅಸ್ಮಿತೆ'ಯನ್ನು ಸಾಧಿಸುವುದೇ ಇವುಗಳ ಗುರಿ ಎನ್ನುವಂತೆ ಹೇಳುತ್ತಾರೆ. ಆದರೆ ಸಂಘರ್ಷದ ನೆಲೆಗಳ ಹಿಂದೆ ಇರುವುದು 'ಸಾಂಸ್ಕೃತಿಕ ರಾಜಕಾರಣ' ಎನ್ನುವುದನ್ನು ರಂಗನಾಥ್ ಗುರುತಿಸುವುದಿಲ್ಲ. ಸಾಂಸ್ಕೃತಿಕ ರಾಜಕಾರಣ ಕೂಡಾ ಏಕಸ್ತರೀಯವೂ ಅಲ್ಲ ಮತ್ತು ಸರಳೊದ್ದೇಶಿತವೂ ಅಲ್ಲ ಎನ್ನುವುದು ಬಹಳ ಮುಖ್ಯವಾದ ವಿಚಾರ.

ಮೂಲ ಸಾಹಿತ್ಯ ಕೃತಿಯ ಹಂಗಿನಿಂದ ಮುಕ್ತವಾಗಿರುವಿಕೆಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಸಾಹಿತ್ಯಕ ನೆಲೆಯ ಗುಣವಿಶೇಷ ಎನ್ನುವಂತೆ ಪ್ರತಿಪಾದಿಸುವ ರಂಗನಾಥ್ ಅವರ ಚಿಂತನೆ ಸಹ ಸಂಪೂರ್ಣ ತಪ್ಪು ಗ್ರಹಿಕೆಯೇ ಸರಿ. ಏಕೆಂದರೆ, ಸಾಂಸ್ಕೃತಿಕ ವಿಮರ್ಶೆಯ ಮೂಲ ಗುಣವಾದ 'ಸಾಂಸ್ಕೃತಿಕ ವಾಗ್ವಾದ'ಕ್ಕೆ ಯಾವತ್ತೂ ಸಾಹಿತ್ಯ ಕೃತಿಯೇ ಆಕರವೂ ಹಾಗೂ ಆಧಾರವೂ ಆಗಬೇಕು. ಇಲ್ಲದಿದ್ದರೆ ಅದು ಸಾಂಸ್ಕೃತಿಕ ವಿಮರ್ಶೆಯ ಹೆಸರಿನಲ್ಲಿ ಕೃತಿ ಮತ್ತು ಸಂಸ್ಕೃತಿಯ ನೆಪಮಾತ್ರ ಉಲ್ಲೇಖ ಮಾಡುತ್ತಾ, ವಿಮರ್ಶಕನ ವ್ಯಕ್ತಿಗತ ಒಲವು ನಿಲುವುಗಳು ಹಾಗೂ ಹಿತಾಸಕ್ತಿಗಳ ಮಂಡನೆಯ ರಾಜಕಾರಣದ ವೇದಿಕೆಯಾಗುವ ಸಾಧ್ಯತೆ ಹೆಚ್ಚಾಗುತ್ತದೆ.

ಆದ್ದರಿಂದ, ಸಾಂಸ್ಕೃತಿಕ ವಿಮರ್ಶೆಯ ಅತ್ಯುತ್ತಮ ಬರಹವನ್ನು ಸ್ವತಂತ್ರವಾಗಿ ಓದಿ ಆಸ್ವಾದಿಸಲು ಸಾಧ್ಯವಿದ್ದರೂ, ಅದು ಯಾವತ್ತೂ ಮೂಲ ಸಾಹಿತ್ಯ ಕೃತಿಯಿಂದ ಓದಗನನ್ನು ಉಚ್ಚಾಟಿಸದೆ ಮತ್ತೆ ಮತ್ತೆ ಅದನ್ನು ಓದಲು ಪ್ರೇರೇಪಿಸುವ ಮೂಲಕ ಕೃತಿಯ ಆಳದಲ್ಲಿರುವ ವಿಭಿನ್ನ ಸಾಂಸ್ಕೃತಿಕ ನೆಲೆಗಳ ಪರಸ್ಪರ ಸಂಬಂಧ ಹಾಗೂ ವೈರುಧ್ಯಗಳನ್ನು ಸಮರ್ಥವಾಗಿ ಅರಿಯುವುದಕ್ಕೆ ನೆರವಾಗುವ ತಾತ್ವಿಕ ಆಯಾಮದಿಂದ ಕೂಡಿರಬೇಕು. ಕೃತಿ ಜಗತ್ತಿನಿಂದ ಸಂಸ್ಕೃತಿ ಜಗತ್ತಿಗೆ ಓದುಗನ ಆಲೋಚನೆ ಮತ್ತು ಚಿಂತನೆ ಹೊರಳುವಂತೆ ಮಾಡಬೇಕು. ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯ ಮೊದಲಾದವುಗಳನ್ನು ಕುರಿತು ಅರ್ಥಪೂರ್ಣವಾಗಿ ಚಿಂತಿಸಬಲ್ಲ ಪ್ರಜ್ಞಾವಂತ ಓದುಗನನ್ನು ರೂಪಿಸುವುದು ಸಾಂಸ್ಕೃತಿಕ ವಿಮರ್ಶೆಯ ನೈತಿಕ ಹೊಣೆಗಾರಿಕೆಯಾಗಬೇಕು.

೮. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಚರ್ಚೆಯ ಫಲಿತ ಎನ್ನುವಂತೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸ್ವಾಯತ್ತ ದೇಶಿ ಸಾಂಸ್ಕೃತಿಕ ವಿಮರ್ಶೆಯಾಗಿ ರೂಪುಗೊಳ್ಳಬೇಕು ಎನ್ನುವ ಆಶಯವನ್ನು ಮನು ಮತ್ತು ಶ್ರೀಧರ್, ಹರೀಶ್ ಹಾಗೂ ಮೊಗಳ್ಳಿ ವ್ಯಕ್ತಪಡಿಸುತ್ತಾರೆ. ಆದರೆ, ಸ್ವಾಯತ್ತ ದೇಶಿ ಸಾಂಸ್ಕೃತಿಕ ವಿಮರ್ಶೆ ವಾಸ್ತವದಲ್ಲಿ ಹಾಗೆ ರೂಪುಗೊಳ್ಳುವುದು ಇಂದಿನ

ನವವಸಾಹತುಶಾಹಿ ಮತ್ತು ಆಧುನಿಕೋತ್ತರ ಕಾಲಘಟ್ಟದಲ್ಲಿ ಸಾಧ್ಯವಿಲ್ಲ ಎನ್ನುವುದು ಇವರ ಆಶಯವನ್ನು ಹುಸಿಗೊಳಿಸುತ್ತದೆ. ಸಮಕಾಲೀನ ಜಾಗತೀಕರಣದ ಸಂಕೀರ್ಣ ಸವಾಲುಗಳು ಕೇವಲ ಸಾಹಿತ್ಯ ಮತ್ತು ವಿಮರ್ಶೆಗಳಿಗೆ ಮಾತ್ರವಲ್ಲದೆ, ಒಟ್ಟಾರೆ ಮನುಷ್ಯ ಬದುಕಿನ ಎಲ್ಲಾ ವಲಯಗಳು ಹಾಗೂ ಆಲೋಚನಾ ವಿಧಾನಗಳ ಮೇಲೂ ತಮ್ಮ ತೀವ್ರವಾದ ಪ್ರಭಾವಗಳನ್ನು ಬೀರುತ್ತಿವೆ. ಇಂಥ ಸಂದರ್ಭದಲ್ಲಿ ಪರಂಪರೆಯ ವಿವೇಕ ಪ್ರಜ್ಞೆಯ ಮೊತ್ತವೆನ್ನುವಂತೆ ಇವರು ಭಾವಿಸುವ ಸ್ವಾಯತ್ತ ದೇಶಿ ಪರಿಕಲ್ಪನೆ ಶುದ್ಧ ಹೋಲ್ಡಾಲ್ ಪರಿಕಲ್ಪನೆ ಮಾತ್ರವಾಗುತ್ತದೆ. ಈ ದೃಷ್ಟಿಯಿಂದ ದೇಶಿ ಕುರಿತು ಮೊಗಳ್ಳಿ ಮಾತ್ರ ಸೂಕ್ತ ವಿಮರ್ಶಾತ್ಮಕ ನಿಲುವು ತಾಳುತ್ತಾರೆ. ಆದರೆ, ಅವರೂ ಸಹ ಅಖಂಡ ಮಾನವೀಯತೆಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನ ತಾತ್ವಿಕತೆಯಾಗಬೇಕೆಂದು ಹೇಳುವ ಮೂಲಕ 'ಕ್ರಿಟಿಕಲ್ ಸೆನ್ಸ್'ನ ಪ್ರಾಮುಖ್ಯತೆಯನ್ನು ಮರೆತುಬಿಡುತ್ತಾರೆ. ಆದರೆ ಕನ್ನಡ ಸಾಹಿತ್ಯ ಪರಂಪರೆಯ ಶ್ರೇಷ್ಠ ಲೇಖಕರು ತಮ್ಮ ಅರ್ಥಪೂರ್ಣವಾದ 'ಕ್ರಿಟಿಕಲ್ ಸೆನ್ಸ್' ಮೂಲಕ ಅಖಂಡ ಮಾನವತಾವಾದಿ ಮೌಲ್ಯ ಪರಂಪರೆಯನ್ನು ಕಟ್ಟಿದ್ದಾರೆ ಎನ್ನುವುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಆದ್ದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಹ ಈ ವಿವೇಕ ಪ್ರಜ್ಞೆಯನ್ನು ತನ್ನ ತಾತ್ವಿಕ ಮತ್ತು ನೈತಿಕ ಹೊಣೆಗಾರಿಕೆಯಾಗಿ ಹೊಂದಬೇಕಿರುವುದು ಅತ್ಯಂತ ಅಗತ್ಯವಾದ ವಿಚಾರವಾಗಿದೆ.

೨.೮ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನದ ಪರಿಶೀಲನೆ

ಸಾಹಿತ್ಯ ಮತ್ತು ಪಠ್ಯದ ಅಧ್ಯಯನ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಯಾವ ವಿಶ್ಲೇಷಣಾ ವಿಧಾನಗಳನ್ನು ಬಳಸುವುದು ಸೂಕ್ತ ಎನ್ನುವುದನ್ನು ಕುರಿತು ಇಲ್ಲಿನ ವಿಮರ್ಶಕರು ಅತ್ಯಂತ ಅರ್ಥಪೂರ್ಣವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ವಿಮರ್ಶಕರು ವಿಶ್ಲೇಷಣೆಯ ಪರಿಕಲ್ಪನೆಯನ್ನು ಪಠ್ಯದ ಅಧ್ಯಯನದ ಸಂದರ್ಭದಲ್ಲಿ ಅನುಸರಿಸಬೇಕಾದ ಉಪಯುಕ್ತ ವಿಧಾನ ಎನ್ನುವಂತೆ ಅರ್ಥೈಸಿಕೊಳ್ಳುತ್ತಾರೆ. ಆದ್ದರಿಂದಲೇ ವಿಸಾಜಿ ಅವರು, "ಸಂಸ್ಕೃತಿಯ ಸೂಕ್ಷ್ಮತೆಗಳನ್ನರಿಯುತ್ತಾ, ಕೃತಿಯ ಒಳವಿವರಗಳು ಸಂಸ್ಕೃತಿಯೊಂದಿಗೆ ನಡೆಸಿರಬಹುದಾದ ನೈತಿಕ ಅನುಸಂಧಾನವನ್ನು ವಿಶ್ಲೇಷಿಸುವುದು ಸರಿಯಾದ ಕ್ರಮ"[೯] ಎಂದು ವ್ಯಾಖ್ಯಾನಿಸುತ್ತಾರೆ. ಇದಕ್ಕಿಂತ ಅರ್ಥಪೂರ್ಣವಾದ ಮತ್ತು ವ್ಯಾಪಕವಾದ ನೆಲೆಯಲ್ಲಿ 'ವಿಶ್ಲೇಷಣೆ' ಪರಿಕಲ್ಪನೆಯನ್ನು ಗ್ರಹಿಸಿರುವ ಸುಮಾ ಅವರು 'ಸ್ಥಾಪಿತ ರಚನೆ'ಗಳನ್ನು ಪ್ರಶ್ನಿಸುವ ಕ್ರಮವಾಗಿ ಅದನ್ನು ವಿವರಿಸುತ್ತಾರೆ. ಆದರೆ, ಹಿರೇಮಠ ಅವರು, ನಿರ್ದಿಷ್ಟ ಸೈದ್ಧಾಂತಿಕ ತಿರುಳಿನ ಮೂಲಕ ಸಾಹಿತ್ಯಾಧ್ಯಯನ ಮಾಡುವುದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನವಾಗಬೇಕೆಂದು ಪ್ರತಿಪಾದಿಸುತ್ತಾ "ಸಮಾಜವಾದೀ ಸಂಸ್ಕೃತಿಯ ನಿರ್ಮಾಣದ ಆಶಯಗಳು, ತುಡಿತಗಳು, ಸ್ಪಂದನೆಗಳು ತಾತ್ವಿಕತೆ ಮತ್ತು ವಿಶ್ಲೇಷಣೆಯ ವಿಧಾನವನ್ನು ನಿರ್ದೇಶಿಸುವಂತಾಗಬೇಕು"[೧೦] ಎನ್ನುತ್ತಾರೆ.

ಈ ದೃಷ್ಟಿಯಿಂದ ಕೆ.ವಿ.ಎನ್. ಅವರು ಹೇಳುವ ವಿಚಾರಗಳು ಅತ್ಯಂತ ಅರ್ಥಪೂರ್ಣವಾಗಿವೆ. ಅವರು, "ಸಂಸ್ಕೃತಿನಿಷ್ಠ ವಿಮರ್ಶೆಯು ಸಾಹಿತ್ಯ ಕೃತಿಗಳನ್ನು ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ಆಕರಗಳು ಎಂದು ಭಾವಿಸಬಹುದು. ಇಲ್ಲವೇ ಸಂಸ್ಕೃತಿಯ ಸಂಕೀರ್ಣ ಸ್ವರೂಪವನ್ನು ತಿಳಿಯಲು ಒಳನೋಟ ನೀಡುವ ಮೂಲವೆಂದೂ ತಿಳಿಯಬಹುದು ಅಥವಾ ಸಾಂಸ್ಕೃತಿಕ ವಾಗ್ವಾದಕ್ಕೆ ಅಗತ್ಯವಾದ ನಿದರ್ಶನವೆಂದೂ ಪರಿಗಣಿಸಬಹುದು. ಇವೆಲ್ಲವೂ ಕನ್ನಡದಲ್ಲಿ ಸದ್ಯ ಜಾರಿಯಲ್ಲಿರುವ ವಿಧಾನಗಳೇ ಆಗಿವೆ. ಆಸಕ್ತಿಗೆ ಅನುಗುಣವಾಗಿ ವಿಶ್ಲೇಷಣೆಯ ವಿಧಾನಗಳೂ ಬದಲಾಗುತ್ತವೆ"[೧೧] ಎಂದು ವಿಶ್ಲೇಷಿಸುತ್ತಾರೆ.

ಕೆ.ವಿ.ಎನ್. ಅವರ ಮಾತುಗಳು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ರೂಪಗಳು ಅಥವಾ ಒಂದೇ ರೂಪ ಭಿನ್ನ ಸ್ವರೂಪದ ಪಠ್ಯಗಳ ವಿಶ್ಲೇಷಣೆಗೆ ಸಂದರ್ಭ ಹಾಗೂ ಅಗತ್ಯಾನುಸಾರ ಬೇರೆ ಬೇರೆ ವಿಶ್ಲೇಷಣಾ ವಿಧಾನಗಳನ್ನು ಬಳಸಬಹುದು ಎನ್ನುವ ಮಹತ್ವಪೂರ್ಣ ವಿಚಾರಗಳನ್ನು ಮಂಡಿಸುತ್ತವೆ. ಎಂದರೆ, ಬಹುರೂಪಿ ವಿಶ್ಲೇಷಣಾ ವಿಧಾನಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಅಧ್ಯಯನದ ತಾತ್ವಿಕತೆಗಳನ್ನು ರೂಪಿಸುತ್ತವೆ ಎನ್ನುವ ಅರ್ಥಪೂರ್ಣ ವಿಚಾರ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನ ಕುರಿತ ಕೆ.ವಿ.ಎನ್. ಅವರ ಮುಖ್ಯ ಚಿಂತನೆಯಾಗಿದೆ.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಹಾಗೂ ವಿಶ್ಲೇಷಣಾ ವಿಧಾನ ಕುರಿತು "ಕನ್ನಡದಲ್ಲಿಂದು ಸಂಸ್ಕೃತಿ ವಿಮರ್ಶೆಯ ತಾತ್ವಿಕತೆ ಮತ್ತು ವೈಧಾನಿಕತೆಗಳ ಬಗೆಗೆ ಒಂದು ನಿರ್ದಿಷ್ಟ ರೂಪ ಇನ್ನೂ ಬಂದಿಲ್ಲ. ಅದಕ್ಕಿದು ಕೊನೆಗಾಲವೂ ಅಲ್ಲ"[೧೨] ಎನ್ನುವ ರಾಮಲಿಂಗಪ್ಪ ಅವರ ಅಭಿಪ್ರಾಯ ಹೆಚ್ಚು ಸಂಗತವಾಗಿರುವುದಿಲ್ಲ ಎಂದಷ್ಟೇ ಹೇಳಬಹುದಾಗಿದೆ.

೨.೯ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ಗುರುತಿಸುವಿಕೆ

ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತ ಬಹುತೇಕ ಚರ್ಚೆಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ತಾತ್ವಿಕ ನೆಲೆ'ಗಳ ಮತ್ತು 'ವಿಶ್ಲೇಷಣಾ ವಿಧಾನ'ಗಳ ಸ್ವರೂಪ ಕುರಿತ ವಿವೇಚನೆ ಪ್ರಧಾನ ಆಸಕ್ತಿಯಾಗಿರುತ್ತದೆ. ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ತೌಲನಿಕ ವಿಶ್ಲೇಷಣೆ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳನ್ನು ಕುರಿತ ಪರಿಶೀಲನೆಯ ಕೊರತೆ ಬಹುಪಾಲು ಈ ಎಲ್ಲಾ ಚರ್ಚೆಗಳ ಒಂದು ಸಾಮಾನ್ಯ ಲಕ್ಷಣವಾಗಿದೆ. ಈ ದೃಷ್ಟಿಯಲ್ಲಿ ಕೇಶವಶರ್ಮ ಅವರ ಲೇಖನ ಮಾತ್ರ ಒಂದು ಮುಖ್ಯ ಅಪವಾದವಾಗಿದೆ. ಇದರಲ್ಲಿ ಶರ್ಮ ಅವರು, ಕನ್ನಡದ ಅನೇಕ ಮಹತ್ವದ ವಿಮರ್ಶಕರನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ಅತ್ಯುತ್ತಮ ಪ್ರತಿನಿಧಿಗಳು ಎಂದು ಗುರುತಿಸುತ್ತಾರೆ. ಹಾಗೆಯೇ ಕನ್ನಡದಲ್ಲಿ ಕೆಲವು ಪ್ರಸಿದ್ಧವಾದ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ರೂಢಿಯಲ್ಲಿವೆ ಎಂದು ವಿವರಿಸುತ್ತಾರೆ.

ಈ ಮಾದರಿಗಳಿಗೆ ಶರ್ಮ ಅವರು ಎರಡು ಪ್ರಮುಖ ಕಾರಣಗಳನ್ನು ಹೇಳುತ್ತಾರೆ. 'ಸಂಸ್ಕೃತಿ' ಪರಿಕಲ್ಪನೆಯ ಅರ್ಥ ಕುರಿತು ಕನ್ನಡ ವಿಮರ್ಶೆಯಲ್ಲಿ ಕಾಲಕಾಲಕ್ಕೆ ಆಗಿರುವ ವ್ಯತ್ಯಾಸ ಮತ್ತು ಬೆಳವಣಿಗೆ ಇಂಥ ಒಂದು ಕಾರಣ. ಹಾಗೆಯೇ, ಸಂಸ್ಕೃತಿ ಮತ್ತು ಸಾಂಸ್ಕೃತಿಕ ವಿಮರ್ಶೆ ಕುರಿತು ತಮ್ಮ ವಿಭಿನ್ನ ಆಸಕ್ತಿಗಳು, ಸೈದ್ಧಾಂತಿಕ ಬದ್ಧತೆಗಳು ಹಾಗೂ ತಾತ್ವಿಕ ದೃಷ್ಟಿಕೋನಗಳಿಗೆ ಅನುಸಾರವಾಗಿ ವಿಮರ್ಶಕರು ಮಾಡುವ ವಿಭಿನ್ನ ವ್ಯಾಖ್ಯಾನಗಳು ಮತ್ತೊಂದು ಕಾರಣ ಎಂದು ವಿವರಿಸುತ್ತಾರೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳನ್ನು ಕುರಿತ ಶರ್ಮ ಅವರ ವಿಶ್ಲೇಷಣೆಯ ಸ್ವರೂಪ ಮುಂದಿನಂತಿದೆ.

ವಿವಿಧ ಸಾಂಸ್ಕೃತಿಕ ಪರಿಕಲ್ಪನೆಗಳು ಮತ್ತು ಸಿದ್ಧಾಂತಗಳು ಕನ್ನಡದಲ್ಲಿ ವಿವಿಧ ಸಾಂಸ್ಕೃತಿಕ ವಿಮರ್ಶಾಮಾದರಿಗಳನ್ನು ರೂಪಿಸಲು ಪ್ರೇರಣೆ ನೀಡಿವೆ. ಇಂಥ ಒಂದು ಪ್ರೇರಣೆಯಲ್ಲಿ ಮಾರ್ಕ್ಸ್‌ವಾದವೊಂದೇ ಕನ್ನಡದ ಬಹುರೂಪಿ ಸಾಂಸ್ಕೃತಿಕ ವಿಮರ್ಶಾ ಮಾದರಿಗಳಿಗೆ ಮುಖ್ಯ ಆಕರವಾಗಿದೆ ಎನ್ನುವುದು ಶರ್ಮ ಅವರ ವಾದವಾಗಿದೆ. ಈ ಕಾರಣದಿಂದ ಅವರು ಮುಂದಿನ ಕೆಲವು ಪ್ರಸಿದ್ಧ ಮಾದರಿಗಳನ್ನು ಹೆಸರಿಸುತ್ತಾರೆ.

ಅ. ವಸಾಹತೋತ್ತರ ಚಿಂತನೆ ಮಾದರಿ: ಬಸವರಾಜ ಕಲ್ಗುಡಿ ಅವರ 'ನಕ್ಷೆ ನಕ್ಷತ್ರ' (೨೦೧೦), 'ಅನುಭಾವ ಸಾಹಿತ್ಯ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' (೧೯೮೮) ಮತ್ತು ಕೆ.ವಿ. ನಾರಾಯಣ ಅವರ 'ಬೇರು ಕಾಂಡ ಚಿಗುರು' (೧೯೯೭) ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಆ. ದೇಶಿಮೂಲದ ಗ್ರಹಿಕೆ ಮಾದರಿ: ಮಲ್ಲೇಪುರಂ ಜಿ. ವೆಂಕಟೇಶ ಅವರ 'ತಿಳಿವ ತೇಜದ ಮುಂದೆ', ಕೆ.ಜಿ. ನಾಗರಾಜಪ್ಪ ಅವರ 'ಇಕ್ಕಟ್ಟು – ಬಿಕ್ಕಟ್ಟು' ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಇ. ಎಡಪಂಥೀಯ ಮಾದರಿ: ರಾಜಾರಾಂ ಹೆಗ್ಗಡೆ ಅವರ 'ಗತಕಥನ' (೨೦೦೫), 'ಲೌಕಿಕ ಅಲೌಕಿಕ' (೨೦೦೧), ಶಿವರಾಮ ಪಡಿಕ್ಕಲ್ ಅವರ 'ನಾಡು ನುಡಿಯ ರೂಪಕ' (೨೦೦೧), ಡಿ.ಆರ್. ನಾಗರಾಜ ಅವರ 'ಸಂಸ್ಕೃತಿ ಕಥನ' (೨೦೦೨) ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಈ. ಸಂಸ್ಕೃತಿಯ ರಾಜಕೀಯ ಅಭಿವ್ಯಕ್ತಿ ಗ್ರಹಿಕೆ ಮಾದರಿ: ಶಿವಪ್ರಕಾಶ ಅವರ 'ಮೊದಲ ಕಟ್ಟಿನ ಗದ್ಯ' (೧೯೯೫) ಮತ್ತು ಡಿ.ಆರ್. ನಾಗರಾಜ ಅವರ 'ಸಂಸ್ಕೃತಿ ಕಥನ' ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಉ. ಸಂಸ್ಕೃತಿಯ ಉತ್ಪಾದನಾ ಸಾಧನಗಳು ಮತ್ತು ಸಂಬಂಧಗಳ ಗ್ರಹಿಕೆ ಮಾದರಿ: ಬರಗೂರು ರಾಮಚಂದ್ರಪ್ಪ ಅವರ 'ಬಂಡಾಯ ಸಾಹಿತ್ಯ ಮೀಮಾಂಸೆ (೧೯೯೧) ಈ ಮಾದರಿಯ ಪ್ರಾತಿನಿಧಿಕ ಕೃತಿ.

ಊ. ಸಂಸ್ಕೃತಿಯ ಪ್ರಾಯೋಗಿಕ ಕ್ರಿಯಾಚರಣೆ ಗ್ರಹಿಕೆ ಮಾದರಿ: ಆರ್ಕೆ. ಮಣಿಪಾಲ ಅವರ ವಿಮರ್ಶಾ ಕೃತಿಗಳು, ರಾಜೇಂದ್ರ ಚೆನ್ನಿ ಅವರ 'ಅಧ್ಯಯನ' (೧೯೮೭) 'ಅಮೂರ್ತತೆ ಮತ್ತು ಪರಿಸರ' (೨೦೦೩) ಹಾಗು 'ನಡುಹಗಲಿನಲ್ಲಿ ಕಂದೀಲುಗಳು' (೨೦೦೪) ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಋ. ಸಂಸ್ಕೃತಿಯ ಮನುಷ್ಯಪ್ರಜ್ಞೆ ಅಭಿವ್ಯಕ್ತಿ ಮಾದರಿ: ಜಿ. ರಾಜಶೇಖರ ಅವರ ವಿಮರ್ಶಾ ಬರಹಗಳು ಈ ಮಾದರಿಯ ಪ್ರಾತಿನಿಧಿಕ ರಚನೆಗಳು.

ೠ. ಸಂಸ್ಕೃತಿಯ ಸಾಮಾಜಿಕ ಶ್ರೇಣೀಕರಣದ ವಿನ್ಯಾಸದ ಮಾದರಿ: ಆರ್.ವಿ. ಭಂಡಾರಿ, ಕೆ.ಆರ್.ದುರ್ಗಾದಾಸ್ ಮತ್ತು ಅರವಿಂದ ಮಾಲಗತ್ತಿ ಅವರ ವಿಮರ್ಶಾ ಬರಹಗಳು ಈ ಮಾದರಿಯ ಪ್ರಾತಿನಿಧಿಕ ರಚನೆಗಳು.

ಎ. ಸಂಸ್ಕೃತಿಯ ಶ್ರಮವಿಭಜನೆ ನೆಲೆಗಳ ಮಾದರಿ: ಜಿ. ರಾಮಕೃಷ್ಣ ಅವರ 'ಆಯತನ' ಎನ್. ಗಾಯತ್ರಿ ಅವರ 'ಮಹಿಳೆ ಬಿಡುಗಡೆಯ ಹಾದಿಯಲ್ಲಿ' , ಕವಿತಾ ಪಿ.ರೈ. ಅವರ 'ಮಹಿಳೆ:ಅಸ್ತಿತ್ವದ ಸಂಕಥನ' (೨೦೦೫) ಮತ್ತು ಕೆ.ಜಿ.ನಾಗರಾಜಪ್ಪ ಅವರ 'ಮರುಚಿಂತನೆ' (೧೯೮೫) ಈ ಮಾದರಿಯ ಪ್ರಾತಿನಿಧಿಕ ಕೃತಿಗಳು.

ಹೀಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳನ್ನು ಗುರುತಿಸುವಾಗ ಶರ್ಮ ಅವರು ಕೆಲವು ಮಹತ್ವದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ವಿವಿಧ ಮಾದರಿಗಳು ರೂಪುಗೊಳ್ಳುವುದಕ್ಕೆ ಹಿನ್ನೆಲೆಯಲ್ಲಿರುವ ಕಾರಣಗಳನ್ನು ಗುರುತಿಸಿರುವುದು ಒಂದು ಅರ್ಥಪೂರ್ಣ ಪ್ರಯತ್ನವೇ ಆಗಿದೆ.

೨.೧೦ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳ ವಿಶ್ಲೇಷಣೆ

ಇಲ್ಲಿನ ವಿಮರ್ಶಕರ ಪೈಕಿ ರಂಗನಾಥ್ ಒಬ್ಬರು ಮಾತ್ರ, ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆ ಒಳಗೊಂಡಿರುವ ಕೆಲವು ಪ್ರಮುಖ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಇಂಥ ಐದು ಸಮಸ್ಯೆಗಳಿವೆ. ಅವುಗಳೆಂದರೆ:

ಅ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆ ಒಂದು 'ಆಂಶಿಕ' ಮತ್ತು 'ಅಸಮಗ್ರ' ಓದು. ಇದರಿಂದ ಸಾಹಿತ್ಯದ 'ಸಮಗ್ರ ಕಲ್ಪನೆ' ಅಸಾಧ್ಯವಾಗಿದೆ.ಇದಕ್ಕೆ ವಿಮರ್ಶಕನ ವ್ಯಕ್ತಿಗತ ಧೋರಣೆ ಮತ್ತು ತಾತ್ವಿಕತೆಗಳು ಕಾರಣ. 'ಜಾತಿ', 'ಗುಂಪುಗಾರಿಕೆ' ಮೊದಲಾದ ಸಂಕುಚಿತ ಧೋರಣೆಗಳಿಂದ ತೀವ್ರತರವಾದ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತಿವೆ.

ಆ. ಏಕಕಾಲಕ್ಕೆ ಮೂರ್ತವೂ ಮತ್ತು ಅಮೂರ್ತವೂ ಆಗಿರುವುದು ಮಾತ್ರವಲ್ಲದೆ, ಸದಾ ವಿಸ್ಮೃತಿಗೊಳಗಾಗುವ ಹಾಗೂ ರೂಪಾಂತರಗೊಳ್ಳುವ ಸ್ವಭಾವದಿಂದ ಕೂಡಿರುವ ಸಂಸ್ಕೃತಿಯನ್ನು

ಪುನರ್ರಚಿಸುವ ಪ್ರಯತ್ನವು ಸಾಂಸ್ಕೃತಿಕ ವಿಮರ್ಶೆಗೆ 'ಅಧಿಕೃತತೆ' ಮತ್ತು 'ಸಮಗ್ರತೆ' ನೀಡಲು ಸಾಧ್ಯವಿಲ್ಲ.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆ ವರ್ತಮಾನದ ಸಮಸ್ಯೆಗಳಿಗೆ ಗತದ 'ಕ್ಲಾಸಿಕಲ್ ಪಠ್ಯ'ಗಳಲ್ಲಿ ಉತ್ತರ ಹುಡುಕುತ್ತಿದೆ. ಇದರಿಂದ 'ವರ್ತಮಾನದ ನಿರಾಕರಣೆ' ಹಾಗೂ 'ಭೂತದ ವಿಭಂಜಣೆ'ಗೆ ಅವಕಾಶವಾಗಿದೆ.

ಈ. 'ಏಕತಾನತೆ' ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಅತ್ಯಂತ ಗಂಭೀರವಾದ ಸಮಸ್ಯೆಯಾಗಿದೆ. 'ನಿರ್ದಿಷ್ಟ ತಾತ್ವಿಕತೆ' ಮತ್ತು ಇದು ಕಟ್ಟಿಕೊಡುವ 'ಸೂತ್ರಬದ್ಧ ಓದು' ಈ ಸಮಸ್ಯೆಯನ್ನು ಹುಟ್ಟುಹಾಕಿದೆ.

ಉ. ಜಾಗತೀಕರಣದ ವಿರುದ್ಧದ ಪ್ರತಿರೋಧದ ನಿಲುವಾಗಿ ಪ್ರತಿಪಾದಿಸುತ್ತಿರುವ 'ಬಹುಸಂಸ್ಕೃತಿವಾದ'ವು ಸದ್ಯದ ಕನ್ನಡ ಸಾಂಸ್ಕೃತಿಕತೆಯ ಬಹುಮುಖ್ಯವಾದ ಸಮಸ್ಯೆಯಾಗಿದೆ. ಭಾರತದಲ್ಲಿ 'ಬಹುಸಂಸ್ಕೃತಿಗಳ ಮಾನ್ಯೀಕರಣವೆಂದರೆ ಅದು ಅಸಮಾನತೆಯ ಮಾನ್ಯೀಕರಣ'ವೇ ಆಗಿದೆ.ಇದು ಸಂಸ್ಕೃತಿಗಳ ನಡುವಿನ ವೈರುಧ್ಯ ಹಾಗೂ ಸಂಘರ್ಷಗಳನ್ನು ಅಳಿಸಿಹಾಕುತ್ತದೆ.

೨.೧೧ ಸಮಸ್ಯೆಗಳ ಸಮಸ್ಯೆ

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಒಳಗೊಂಡಿರುವ ಸಮಸ್ಯೆಗಳನ್ನು ಕುರಿತ ರಂಗನಾಥ್ ಅವರ ವಿಶ್ಲೇಷಣೆ ಹಲವು ಮಹತ್ವದ ಒಳನೋಟಗಳಿಂದ ಕೂಡಿದೆ. ಇಷ್ಟಾದರೂ, ಇಲ್ಲಿನ ಪ್ರತಿಯೊಂದು ಸಮಸ್ಯೆ ಕುರಿತೂ ಭಿನ್ನಾಭಿಪ್ರಾಯ ಮತ್ತು ಆಕ್ಷೇಪಣೆ ವ್ಯಕ್ತಪಡಿಸಲು ಸಾಧ್ಯವಿದೆ. 'ಆಂಶಿಕತೆ' ಮತ್ತು 'ಅಸಮಗ್ರತೆ' ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆ ಮಾತ್ರವಲ್ಲ; ಹಾಗೆ ನೋಡಿದರೆ ಅದು ಯಾವುದೇ ಸಾಹಿತ್ಯ ವಿಮರ್ಶೆಯ ಸಮಸ್ಯೆ ಕೂಡಾ ಅಲ್ಲ. ಇದು ಸಾಹಿತ್ಯ ವಿಮರ್ಶೆಗಳ ಸಾಮಾನ್ಯ ಸ್ವರೂಪ. ಅಲ್ಲದೆ 'ಆಂಶಿಕತೆ' ಮತ್ತು 'ಆಯ್ಕೆಯ ಓದು'ಗಳು ತನ್ನಷ್ಟಕ್ಕೆ ತಾನೇ ಸಮಸ್ಯೆಯಲ್ಲ. ಇವುಗಳನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ತಾತ್ವಿಕ ಪ್ರಜ್ಞೆಗಳ ಸ್ವರೂಪ ಹಾಗೂ ಉದ್ದೇಶ ಏನು ಎನ್ನುವುದು ಇಂಥ ಸಂದರ್ಭದಲ್ಲಿ ಮುಖ್ಯವಾದ ವಿಚಾರವಾಗುತ್ತದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇವು ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ನಡೆಯುತ್ತಿವೆ ಎನ್ನುವುದು ಇದರ ಹಿನ್ನೆಲೆಯಲ್ಲಿರುವ ಬಹುಮುಖ್ಯವಾದ ವಿಚಾರವಾಗಿದೆ.

ಸಂಸ್ಕೃತಿಯ ಪುನರ್ರಚನೆ ಸಾಧ್ಯಗೊಳಿಸುವ ಸಾಂಸ್ಕೃತಿಕ ವಿಮರ್ಶೆಯ ಅಧಿಕೃತತೆಯ ಸಮಸ್ಯೆಯು, ಸಂಸ್ಕೃತಿಯ ವಿಶಿಷ್ಟ ಸ್ವರೂಪವನ್ನು ಗ್ರಹಿಸುವುದರಲ್ಲಿ ಇರುವ ಮಿತಿಯಿಂದ ಹುಟ್ಟಿದ್ದಾಗಿದೆ. ಯಾವುದೇ ಸಂಸ್ಕೃತಿ ಅಥವಾ ಸಂಸ್ಕೃತಿಗಳು ಮೂಲತಃ ಚಲನಶೀಲವಾದವುಗಳೇ ಆದರೂ, ಅವು ಒಂದು ನಿರ್ದಿಷ್ಟ ನೆಲೆಯಲ್ಲಿ ಸ್ಥಿತ್ಯಾತ್ಮಕ ಸ್ವರೂಪಿಗಳು ಆಗಿರುತ್ತವೆ. ಹೀಗಾಗಿ, ಯಾವುದೇ ಸಂಸ್ಕೃತಿಯನ್ನು ಹಾಗೆ ಅಖಂಡವಾಗಿ ಪುನರ್ರಚಿಸುವುದು ಸಾಧ್ಯವಿಲ್ಲ ಮತ್ತು ಅದು ಸಾಧುವೂ ಅಲ್ಲ. ಆದ್ದರಿಂದ ಅಸಮಾನತೆ, ತಾರತಮ್ಯ ಮತ್ತು

ಶ್ರೇಣೀಕತೆಗಳನ್ನು ಮೂಲಭೂತ ಸಂಗತಿಗಳಾಗಿ ಹೊಂದಿರುವ ಒಂದು ಸಂಸ್ಕೃತಿಯ ನಿರ್ದಿಷ್ಟ ಸ್ಥಿತ್ಯಾತ್ಮಕತೆಯನ್ನು ಪರಿಭಾವಿಸಿಕೊಳ್ಳಲು ಮಾತ್ರ ಸಾಧ್ಯವಿದೆ. ಈ ಪರಿಭಾವಿಸುವಿಕೆಯ ವಿಭಿನ್ನ ಸ್ವರೂಪಕ್ಕನುಸಾರವಾಗಿ ಸಾಂಸ್ಕೃತಿಕ ವಿಮರ್ಶೆಯ ಸ್ವರೂಪ ಸಹ ರೂಪುಗೊಳ್ಳುತ್ತದೆ. ಹೀಗಾಗಿಯೇ, ಕನ್ನಡದಲ್ಲಿ ಇಂದು ಹಲವು ಸಾಂಸ್ಕೃತಿಕ ವಿಮರ್ಶಾ ಮಾದರಿಗಳಿವೆ. ಇವು ಬಹುರೂಪಿ ತಾತ್ವಿಕ ನೆಲೆಗಳು ಹಾಗೂ ಅನುಸಂಧಾನ ವಿಧಾನಗಳಿಂದ ಕೂಡಿವೆ.

ವರ್ತಮಾನದ ಸಮಸ್ಯೆಗಳಿಗೆ ಭೂತಕಾಲದ 'ಪಠ್ಯ'ಗಳಲ್ಲಿ ಉತ್ತರ ಹುಡುಕುತ್ತಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆ ಸಹ ಹೀಗೆಯೇ ಅಪಕಲ್ಪನೆಯಿಂದ ಹುಟ್ಟಿದ್ದಾಗಿದೆ. ಏಕೆಂದರೆ, ವರ್ತಮಾನದ ಬಹುಪಾಲು ಸಮಸ್ಯೆಗಳ ಮೂಲ ವರ್ತಮಾನದಲ್ಲಿರದೆ ಭೂತದಲ್ಲೇ ಇರುತ್ತದೆ. ಹೀಗಾಗಿ, ಪ್ರಾಚೀನ ಪಠ್ಯಗಳನ್ನೇ ಆಗಲಿ ಅಥವಾ ಆಧುನಿಕ ಪಠ್ಯಗಳನ್ನೇ ಆಗಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಗ್ರಹಿಸುವ ಮತ್ತು ಅರ್ಥೈಸುವ ಬಗೆಗಳೇನು ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆಯಾಗಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಏಕತಾನತೆ' ಸಮಸ್ಯೆ ಕುರಿತ ವಿಚಾರಗಳಲ್ಲಿ ತಥ್ಯವಿದೆಯಾದರೂ, ಈ ಸಮಸ್ಯೆಯನ್ನು ಮೀರುವ ಹಲವಾರು ಅರ್ಥಪೂರ್ಣ ಪ್ರಯತ್ನಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ನಿರಂತರವಾಗಿ ನಡೆಯುತ್ತಲೇ ಇವೆ. ಹೊಸ ತಾತ್ವಿಕ ನೋಟಗಳು, ನೂತನ ವಿಶ್ಲೇಷಣಾ ವಿಧಾನಗಳು ಮತ್ತು ಬಹುರೂಪಿ ಅಧ್ಯಯನ ಮಾದರಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವೈವಿಧ್ಯಮಯ ಆಯಾಮಗಳನ್ನು ರೂಪಿಸುತ್ತಿವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುಸಂಸ್ಕೃತಿಗಳ 'ಸಮಾನ ಮಾನ್ಯೀಕರಣ'ದ ಸಮಸ್ಯೆ ಹುಟ್ಟಿಸುತ್ತಿರುವ ಆತಂಕ ಕುರಿತ ರಂಗನಾಥ್ ಅವರ ಚಿಂತನೆಗಳು ಸಮರ್ಪಕವಾಗಿವೆ. ಇದರಿಂದ ಸಂಸ್ಕೃತಿಗಳ ನಡುವಿನ ವೈರುಧ್ಯದ ಪ್ರಶ್ನೆ ಮಸುಕಾಗುತ್ತಿದೆ. ಇಷ್ಟೇ ಅಲ್ಲದೆ, ಸಾಂಸ್ಕೃತಿಕ ಸಮಾನ ಮಾನ್ಯೀಕರಣ ಧೋರಣೆಯಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ 'ಪ್ರಧಾನ ಸಂಸ್ಕೃತಿ'ಗಳು ತಮ್ಮ ವಿಶಿಷ್ಟ ಅನನ್ಯ ಪರಂಪರೆಯನ್ನು ಸಂರಕ್ಷಿಸುವ ಮತ್ತು ಸಂವರ್ಧಿಸುವ ಪ್ರಯತ್ನ ಮಾಡುತ್ತಿವೆ. ಇದಕ್ಕೆ ಪ್ರತಿಯಾಗಿ 'ಅಪ್ರಧಾನ', 'ಅಲಕ್ಷ್ಯಿತ' ಮತ್ತು 'ನಿರ್ಲಕ್ಷ್ಯಿತ' ಸಂಸ್ಕೃತಿಗಳು ವಿಸ್ಮೃತಿಗೊಳಪಟ್ಟಿರುವ ತಮ್ಮ ಅನನ್ಯ ಪರಂಪರೆ ಹಾಗೂ ಸಾಂಸ್ಕೃತಿಕ ಚರಿತ್ರೆಗಳನ್ನು ಹೊಸದಾಗಿ ಕಟ್ಟುವ, ಪುನರ್ರಚಿಸುವ ಪ್ರಕ್ರಿಯೆಯಲ್ಲಿ ತೀವ್ರವಾಗಿ ಮಗ್ನವಾಗಿವೆ. ಹೀಗೆ, ಸಾಂಸ್ಕೃತಿಕ ಹಿರಿಮೆ ಮತ್ತು ಅಸ್ಮಿತೆಯ ಪ್ರಶ್ನೆಗಳು ಸಂಸ್ಕೃತಿಯ ಮೂಲ ಹಾಗೂ ಆಳದ ಸಂರಚನೆಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಮೂಲಕ ಶಾಶ್ವತೀಕರಿಸುವ ಪ್ರಯತ್ನ ಮಾಡುತ್ತಿವೆ. ಇದು ಸದ್ಯದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಸಂಕೀರ್ಣವಾದ ಸಮಸ್ಯೆಯೇ ಆಗಿದೆ. ಇದರಿಂದ 'ಸಾಂಸ್ಕೃತಿಕ ಮೀಮಾಂಸೆ' ಹುಟ್ಟಿಕೊಳ್ಳುತ್ತಿದ್ದು 'ಸಾಂಸ್ಕೃತಿಕ ರಾಜಕಾರಣ'ಕ್ಕೆ ವ್ಯಾಪಕವಾದ ಪ್ರಾಮುಖ್ಯತೆ ಪ್ರಾಪ್ತವಾಗುತ್ತಿದೆ.

೨.೧೨ ಅಧ್ಯಾಯದ ಫಲಿತಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತ ವಿವಿಧ ವಿಮರ್ಶಕರ ಬರಹಗಳ ವಿಸ್ತೃತವಾದ ಅಧ್ಯಯನದಿಂದ ಈ ಮುಂದಿನ ಮುಖ್ಯ ಫಲಿತಗಳು ದೊರೆತಿವೆ.

ಅ. ಕನ್ನಡ ವಿಮರ್ಶೆ ಸಂದರ್ಭದಲ್ಲಿ 'ಸಾಂಸ್ಕೃತಿಕ ವಿಮರ್ಶೆ'ಯನ್ನು ಹಲವು ಹೆಸರುಗಳ ಮೂಲಕ ಗುರುತಿಸುತ್ತಿದ್ದರೂ, ಅವೆಲ್ಲವುಗಳ ಉದ್ದೇಶ ಮತ್ತು ಅರ್ಥ ಸಾಮಾನ್ಯವಾಗಿ ಒಂದೇ ಆಗಿದೆ.

ಆ. 'ಸಾಹಿತ್ಯ ವಿಮರ್ಶೆ'ಗೂ ಮತ್ತು ಸಾಂಸ್ಕೃತಿಕ ವಿಮರ್ಶೆ'ಗೂ ತಾತ್ವಿಕವಾಗಿ ಇರುವ ಮೂಲಭೂತ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಆದರೆ ಈ ಪ್ರಯತ್ನಗಳು ಬಹುಪಾಲು ಸಾಂದರ್ಭಿಕವಾದ ಅಭಿಪ್ರಾಯೋಕ್ತಿಗಳು ಮತ್ತು ಬೀಸು ಹೇಳಿಕೆಗಳ ರೂಪದಲ್ಲಿವೆ. ವ್ಯವಸ್ಥಿತ ಚರ್ಚೆಗಳಾಗಿ ಬೆಳೆದಿಲ್ಲ.

ಇ. ಸಾಂಸ್ಕೃತಿಕ ವಿಮರ್ಶೆಯ 'ತಾತ್ವಿಕತೆ'ಯ ಸ್ವರೂಪ ಕುರಿತು ವೈವಿಧ್ಯಮಯ ಅಭಿಪ್ರಾಯಗಳು ಮತ್ತು ಭಿನ್ನಾಭಿಪ್ರಾಯಗಳಿವೆ. ಇಷ್ಟಾದರೂ, 'ತಾತ್ವಿಕತೆ'ಯ 'ಅಗತ್ಯ' ಮತ್ತು 'ಮಹತ್ವ'ದ ಬಗ್ಗೆ ಯಾವುದೇ ವಿರೋಧಗಳಿಲ್ಲ. ಆದರೆ, ಸಾಂಸ್ಕೃತಿಕ ವಿಮರ್ಶೆಗೆ 'ಪಂಥೀಯ ವಿಮರ್ಶೆ'ಗಳಂತೆ 'ನಿರ್ದಿಷ್ಟ ತತ್ವ ಪ್ರಣಾಳಿಕೆ' ಅಥವಾ 'ನಿರ್ದಿಷ್ಟ ತಾತ್ವಿಕತೆ'ಯ ಚೌಕಟ್ಟು ಅನಗತ್ಯ ಎನ್ನುವುದು ಬಹುತೇಕ ಒಪ್ಪಿತ ನಿಲುವಾಗಿದೆ.

ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಉಗಮ ಕುರಿತು ಆಸಕ್ತಿದಾಯಕವಾದ ಎರಡು ನೆಲೆಗಳಿವೆ. ಆಧುನಿಕ ಕನ್ನಡ ವಿಮರ್ಶೆಯ ಆರಂಭದಿಂದಲೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಆಸಕ್ತಿಗಳಲ್ಲಿ ಒಂದಾಗಿರುವ 'ಸಾಂಸ್ಕೃತಿಕ ಕಾಳಜಿ'ಗಳೇ, ನವ್ಯೋತ್ತರ ಸಾಹಿತ್ಯ ವಿಮರ್ಶೆಯಲ್ಲಿ ಮುನ್ನೆಲೆಗೆ ಬಂದಿತು ಎನ್ನುವ 'ಪರಿಷ್ಕರಣವಾದಿ ನೆಲೆ' ಮತ್ತು ನವ್ಯೋತ್ತರ ಸಾಹಿತ್ಯ ಸಂದರ್ಭದಲ್ಲಿ ಸ್ಥಳೀಯ ಆಂತರಿಕ ಪ್ರೇರಣೆಗಳಿಂದ ಎಂಭತ್ತರ ದಶಕದಲ್ಲಿ ಆರಂಭಗೊಂಡು ಜಾಗತಿಕ ಬಾಹ್ಯ ಕಾರಣಗಳಿಂದ ತೊಂಭತ್ತರ ದಶಕದಲ್ಲಿ ಪ್ರವರ್ಧಮಾನಕ್ಕೆ ಬಂದಿತು ಎನ್ನುವ 'ಆವಿಷ್ಕರಣವಾದಿ ನೆಲೆ' ಇಂಥ ನೆಲೆಗಳು. ಇದರಿಂದಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಇಂಗ್ಲೆಂಡಿನ 'ಸಾಂಸ್ಕೃತಿಕ ಭೌತವಾದ' ಅಥವಾ 'ಸಾಂಸ್ಕೃತಿಕ ವಸ್ತುವಾದ' (cultural materialism) ಮತ್ತು ಅಮೇರಿಕಾದ 'ನವಚಾರಿತ್ರಿಕವಾದ' (New Historism)ಗಳ ಪ್ರೇರಣೆಗಳ ಅಥವ ಪ್ರಭಾವಗಳ ಕನ್ನಡದ ಪ್ರತಿರೂಪವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ದೇಶಿ ಸಂಕಥನ ಎಂದು ಪರಿಭಾವಿಸಿಕೊಂಡಿರುವುದು ಕಂಡು ಬರುತ್ತದೆ.

ಉ. 'ಕನ್ನಡ ಸಾಂಸ್ಕೃತಿಕ ವಿಮರ್ಶೆ'ಯ ತಾತ್ವಿಕತೆಯು ವೈವಿಧ್ಯಮಯವಾದ ನೆಲೆಗಳು ಮತ್ತು ಬಹುರೂಪಿ ಚಹರೆಗಳಿಂದ ಕೂಡಿರುವ ಸಂಕೀರ್ಣ ಸ್ವರೂಪದಲ್ಲಿದೆ. ಅಂಥ ಕೆಲವು ನೆಲೆಗಳು ಮತ್ತು ಚಹರೆಗಳು ಇಂತಿವೆ. ಅ. ಆಶಯದ ನೆಲೆ ಆ. ಆಕೃತಿಯ ನೆಲೆ ಇ. ಆಶಯ ಮತ್ತು ಆಕೃತಿಯ ಸಮಾವಿಷ್ಟ ನೆಲೆ ಈ. ಸಾಮಾಜಿಕ ನೆಲೆ ಉ. ಸಾಂಸ್ಕೃತಿಕ ನೆಲೆ ಊ. ರಾಜಕೀಯ ನೆಲೆ ಋ. ಸಾಹಿತ್ಯಕ ನೆಲೆ ೠ. ಸಾಂಸ್ಕೃತಿಕ ಸಂಕಥನದ ನೆಲೆ ಎ.ಸಾಂಸ್ಕೃತಿಕ ಸಂಘರ್ಷದ ನೆಲೆ ಏ. ಸಾಮಾಜಿಕ ನ್ಯಾಯದ ನೆಲೆ ಐ. ಸಾಂಸ್ಕೃತಿಕ ಶೋಧದ ನೆಲೆ ಒ. ದೇಶಿ ನೆಲೆ ಓ. ಜಾಗತೀಕರಣ ವಿರೋಧಿ ನೆಲೆ ಔ. ಜಾಗತೀಕರಣ ಪರ ನೆಲೆ ಅಂ. ಜಾತಿ, ಲಿಂಗ ಮತ್ತು ವರ್ಗ ಸಮಾನತೆ ನೆಲೆ ಅಃ. ಆಧುನಿಕೋತ್ತರ ನೆಲೆ ಕ. ವಿಜ್ಞಾನ ವಿಮರ್ಶೆ ನೆಲೆ ಮತ್ತು ಖ. ಹಸಿರು ವಿಮರ್ಶೆ ನೆಲೆ ಮೊದಲಾದವು.

ಊ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ವಿಶ್ಲೇಷಣಾ ವಿಧಾನ'ದಲ್ಲಿಯೂ ಹಲವು ದೃಷ್ಟಿಕೋನ ಮತ್ತು ಮಾದರಿಗಳಿವೆ. ಸಾಹಿತ್ಯ ಕೃತಿಯನ್ನು 'ಸಾಂಸ್ಕೃತಿಕ ಪಠ್ಯ'ವೆಂದು ಪರಿಗಣಿಸುವ ವಿಧಾನ, ಸಾಂಸ್ಕೃತಿಕ ಶೋಧನೆಗೆ 'ಆಕರ'ವೆಂದು ಭಾವಿಸುವ ವಿಧಾನ, ಅಂತರಶಿಸ್ತೀಯ ವಿಧಾನ, ಬಹುಶಿಸ್ತೀಯ ವಿಧಾನ ಮತ್ತು ಸಂಶ್ಲೇಷಣಾತ್ಮಕ ವಿಧಾನ ಇಂಥ ಕೆಲವು ಪ್ರಮುಖ ಮಾದರಿಗಳು.

ಋ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಹ ಏಕರೂಪಿಯಲ್ಲ. ಸಂಸ್ಕೃತಿ ಪರಿಕಲ್ಪನೆಯ ಅರ್ಥ ಮತ್ತು ವ್ಯಾಖ್ಯಾನಗಳು ಹಾಗೂ ವಿಮರ್ಶಕರ ವೈಯಕ್ತಿಕ ಆಸಕ್ತಿಗಳು ಹಾಗೂ ಸೈದ್ಧಾಂತಿಕ ಬದ್ಧತೆಗಳಿಗನುಸಾರವಾಗಿ ಬಹುರೂಪಿ ಮಾದರಿಗಳು, ವಿಭಿನ್ನ ರೂಪಗಳು ರೂಢಿಯಲ್ಲಿವೆ.

ೠ. ಕನ್ನಡ ಸಾಂಸ್ಕೃತಿಕ ವಿಮರ್ಶೆ 'ಸಾಂಸ್ಕೃತಿಕ ರಾಜಕಾರಣ'ದ ಬಹುಮುಖ್ಯ ಮಾಧ್ಯಮವಾಗಿದೆ. ಇದು 'ಪ್ರತಿಗಾಮಿ' ಮತ್ತು 'ಪುರೋಗಾಮಿ' ಶಕ್ತಿಗಳೆರಡರ ಕಾರ್ಯತಂತ್ರ ಹಾಗೂ ಕಾರ್ಯಾಚರಣೆಗಳ ಪ್ರಭಾವಶಾಲಿ ಸಾಧನವಾಗಿದೆ ಎನ್ನುವುದರ ಕುರಿತು ಪ್ರಾಸಂಗಿಕವಾದ ಕೆಲವು ಅಭಿಪ್ರಾಯಗಳು ಮಾತ್ರ ಕಂಡುಬರುತ್ತವೆ. ಗಂಭೀರವಾದ ಚರ್ಚೆಗಳು ನಡೆದಿಲ್ಲ.

ಎ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತು ಸಹ ವ್ಯವಸ್ಥಿತವಾದ, ಸಮಗ್ರವಾದ ಮತ್ತು ತಾರ್ಕಿಕವಾದ ಚರ್ಚೆಗಳು ಹೆಚ್ಚಾಗಿ ನಡೆದಿಲ್ಲ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯ ಸಾಮಾನ್ಯ ಸ್ವರೂಪಕ್ಕೆ ಸಂಬಂಧಿಸಿದಂತೆ ಸಹ ಬಹಳಷ್ಟು ಕಡೆಗಳಲ್ಲಿ ಇದೊಂದು 'ದೃಷ್ಟಿಕೋನವೋ' ಅಥವ 'ನೋಟಕ್ರಮ'ವೋ, 'ವಿಶ್ಲೇಷಣಾ ವಿಧಾನ'ವೋ ಅಥವ 'ವಿಮರ್ಶಾ ಪ್ರಕಾರ'ವೋ ಇಲ್ಲವೆ 'ಓದಿನ ಒಂದು ಬಗೆ'ಯೋ ಎನ್ನುವ ಪ್ರಶ್ನೆಗಳ ಕುರಿತು ಪರಿಕಲ್ಪನಾತ್ಮಕ ಅಸ್ಪಷ್ಟತೆಗಳು ಸಾಮಾನ್ಯವಾಗಿ ಕಂಡು ಬರುತ್ತವೆ.

ಏ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳು, ಬಿಕ್ಕಟ್ಟುಗಳು ಮತ್ತು ಅವುಗಳ ಪರಿಹಾರೋಪಾಯಗಳ ಕುರಿತು ಇಲ್ಲಿನ ಬಹುತೇಕ ವಿಮರ್ಶಕರ ಬರಹಗಳಲ್ಲಿ ಯಾವುದೇ ಪ್ರಸ್ತಾಪ

ಇರುವುದಿಲ್ಲ. ಕೇವಲ ಒಂದೇ ಒಂದು ಬರವಣಿಗೆಯಲ್ಲಿ ಮಾತ್ರ ಇಂಥ ಗಮನಾರ್ಹವಾದ ಚರ್ಚೆ ಕಂಡುಬರುತ್ತದೆ.

ಕೊನೆ ಟಿಪ್ಪಣಿಗಳು

೧. ಕೇಶವಶರ್ಮ ಕೆ., (ಸಂ), ಸಾಹಿತ್ಯ ವಿಮರ್ಶೆ ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭, ಪುಟ ೨೭

೨. ಅದೇ, ಪುಟ ೨೮

೩. ಸರಸ್ವತಿ ಎಂ. ಮತ್ತು ವಸಂತ್‌ಕುಮಾರ್ ಆರ್., (ಸಂ), ಕರ್ನಾಟಕ ಸಂಸ್ಕೃತಿ ಚಿಂತನೆ, ಕನ್ನಡ ವೇದಿಕೆ, ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜ್, ಬೆಂಗಳೂರು, ೨೦೦೫, ಪುಟ ೧೦೨

೪. ಹರೀಶ ಜಿ.ಬಿ., ಬೆಳಕಿನಾಟ, ಸಂಚಯ, ಬೆಂಗಳೂರು, ೨೦೦೫, ಪುಟ ೬೫

೫. ಕೇಶವಶರ್ಮ ಕೆ., (ಸಂ), ಸಾಹಿತ್ಯ ವಿಮರ್ಶೆ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭, ಪುಟ ೨೮

೬. ಅದೇ, ಪುಟ ೨೯

೭. ಮೊಗಳ್ಳಿ ಗಣೇಶ್, ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪುಟ ೯೭

೮. ಅದೇ, ಪುಟ ೮೭

೯. ಸರಸ್ವತಿ ಎಂ. ಮತ್ತು ವಸಂತ್‌ಕುಮಾರ್ ಆರ್., (ಸಂ), ಕರ್ನಾಟಕ ಸಂಸ್ಕೃತಿ ಚಿಂತನೆ, ಕನ್ನಡ ವೇದಿಕೆ, ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜ್, ಬೆಂಗಳೂರು, ೨೦೦೫, ಪುಟ, ೮೬

೧೦. ಅದೇ, ಪುಟ ೧೦೩

೧೧. ಅದೇ, ಪುಟ, ೭೬

೧೨. ಅದೇ, ಪುಟ, ೧೧೦

ಅಧ್ಯಾಯ–ಮೂರು

ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿವೇಚನೆ

ಅಧ್ಯಾಯ-೩: ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿವೇಚನೆ

"ಒಂದು ಸಾಹಿತ್ಯಕೃತಿ ಜಗತ್ತಿನ ಐತಿಹಾಸಿಕತೆಯಲ್ಲಿ ಹುಟ್ಟಬರುತ್ತದೆ. ಇಲ್ಲಿ ಐತಿಹಾಸಿಕತೆಯೆಂದರೆ ಕೇವಲ ಇತಿಹಾಸವಲ್ಲ. ಅದು ಆಯಾ ಕಾಲದ ರಾಜಕೀಯ ಮತ್ತು ಸಾಮಾಜಿಕ ಶಕ್ತಿಗಳ ಕೇಂದ್ರವಾಗಿರುತ್ತದೆ. ಈ ಕೇಂದ್ರ ಒಂದು ಕೃತಿಯ ಅರ್ಥವಂತಿಕೆಯನ್ನು ನಿರ್ಣಯಿಸುತ್ತದೆ. ಬಹುಶಃ ಸಾಹಿತ್ಯಮೀಮಾಂಸೆಯ ನಿಯಮಗಳು ಕೂಡ ಕಾಲಕಾಲಕ್ಕೆ ಬದಲಾಗುವುದು ಇದೇ ಕಾರಣಕ್ಕಾಗಿ ಇರಬೇಕು. ಗ್ರಂಥದ ಭಾಷೆ ಮತ್ತು ಸಾಮಾನ್ಯರ ಆಡುನುಡಿ ಇವು ಪ್ರತ್ಯೇಕವಾಗಿರಬೇಕೇ, ಅಥವಾ ಅವು ಒಂದೇ ಆಗಿರಬೇಕೇ - ಎಂಬ ಪ್ರಶ್ನೆಯನ್ನು ಹೇಗೆ ಬಿಡಿಸುವುದು? ಈ ಪ್ರಶ್ನೆ ಕೇವಲ ಸಾಹಿತ್ಯಿಕವಾದದ್ದಲ್ಲ. ಇದು ಐತಿಹಾಸಿಕವೂ ಹೌದು, ರಾಜಕೀಯವೂ ಹೌದು. ಅಥವಾ ಕೃತಿಕಾರಣ ಸ್ವಾತಂತ್ರ್ಯದ ಪ್ರಶ್ನೆಯೂ ಇಂಥದೇ ಆಗಿದೆ. 'ಸ್ವಾತಂತ್ರ್ಯ' ಶಬ್ದದ ಅರ್ಥ ಕೂಡ ಇಂದು ರಾಜಕೀಯದಿಂದ ನಿರ್ಣಯವಾಗಬೇಕಾಗಿದೆ. ಸಾಹಿತ್ಯ ವಿಮರ್ಶೆ ಕೂಡ ಅನುಸರಿಸಬೇಕಾದದ್ದು ಕಲೆಯ ನಿಯಮಗಳನ್ನೋ ಅಥವಾ ರಾಜಕೀಯ ಅಥವಾ ಸಾಮಾಜಿಕ ನೀತಿಯನ್ನೋ ಎನ್ನುವುದು ರಾಜಕೀಯವಾಗಿಯೇ ನಿರ್ಣಯವಾಗಬೇಕಾಗಿದೆ.'

ಕೀರ್ತಿನಾಥ ಕುರ್ತಕೋಟಿ, "ರಾಜಕೀಯ ಮತ್ತು ಧರ್ಮ" ಕೃತಿಯಿಂದ

೩.೧ ಪೀಠಿಕೆ

ಕಳೆದ ಶತಮಾನದ ಕೊನೆಯ ಘಟ್ಟದ ವೇಳೆಗೆ ಸಾಹಿತ್ಯ ವಿಮರ್ಶೆ ಎನ್ನುವ ಅಧ್ಯಯನಶಿಸ್ತಿನ ತಾತ್ವಿಕ ಸ್ವರೂಪ ರೂಢಮೂಲ ಪಲ್ಲಟಕ್ಕೆ ಒಳಗಾಯಿತು. ಈ ವಿದ್ಯಮಾನಕ್ಕೆ ಕೇವಲ ಸಾಹಿತ್ಯಕ ಸಂಗತಿಗಳಷ್ಟೇ ಮುಖ್ಯ ಕಾರಣಗಳಾಗಿಲ್ಲ. ಹಾಗೆ ನೋಡುವುದಾದರೆ, ಇವು ಈ ವಿಷಯದಲ್ಲಿ ವಹಿಸಿರುವ ಪಾತ್ರ ಬಹಳ ಕಡಿಮೆ ಎಂದೇ ಹೇಳಬಹುದು. ಗತ ಶತಮಾನಾವಧಿಯಲ್ಲಿ ಸಂಭವಿಸಿದ ಅನೇಕ ಮಹತ್ವದ ಜಾಗತಿಕ ವಿದ್ಯಮಾನಗಳು ವಿಶ್ವರಚನಾ ವ್ಯವಸ್ಥೆಯ ಮೂಲಸ್ವರೂಪದ ವಿನ್ಯಾಸಗಳನ್ನು ತೀವ್ರವಾಗಿ ಸ್ಥಿತ್ಯಂತರಗೊಳಿಸಿದವು. ಶತಮಾನದ ಪೂರ್ವಾರ್ಧದವರೆಗೂ ಬಲಿಷ್ಠ ಸಾಮ್ರಾಜ್ಯಶಾಹಿ ರಾಷ್ಟ್ರವಾಗಿದ್ದ ಇಂಗ್ಲೆಂಡ್ ಹೊಂದಿದ್ದ ಜಾಗತಿಕ ನಿಯಂತ್ರಣಾಧಿಕಾರವನ್ನು ಉತ್ತರಾರ್ಧದವೇಳೆಗೆ ನೂತನ ಶಕ್ತಿಶಾಲಿ ನವವಸಾಹತುಶಾಹಿ ರಾಷ್ಟ್ರವಾದ ಅಮೇರಿಕಾ ಆಕ್ರಮಿಸಿಕೊಂಡಿದ್ದು ಇಂಥ ಒಂದು ಪ್ರಮುಖ ವಿದ್ಯಮಾನವಾಗಿದೆ. ಇದರಿಂದ, ಇಡೀ ಜಗತ್ತಿನ ಮೇಲೆ ಅತ್ಯಂತ ಸಂಕೀರ್ಣವಾದ ಪ್ರಭಾವ ಮತ್ತು ಪರಿಣಾಮಗಳು ಬಹುತೀವ್ರ ಸ್ವರೂಪದಲ್ಲಿ ಉಂಟಾಗುತ್ತಿವೆ. ಅದರಲ್ಲೂ, ಶೀತಲ ಸಮರ ಅಂತ್ಯಗೊಂಡ ನಂತರ ವಿಶ್ವದಲ್ಲಿ 'ಪ್ರಥಮ ಜಗತ್ತು' ಮತ್ತು 'ತೃತೀಯ ಜಗತ್ತು' ಎನ್ನುವ ಹೊಸ ದ್ವಿರಾಷ್ಟ್ರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದೆ. ಇಂದು 'ತೃತೀಯ ಜಗತ್ತು', ವಿವಿಧ ರೂಪಗಳಲ್ಲಿ 'ಪ್ರಥಮ ಜಗತ್ತಿ'ನ ಬಲಿಷ್ಠ ಪರೋಕ್ಷ ಆಳ್ವಿಕೆಯ ವ್ಯೂಹಾತ್ಮಕ ನಿಯಂತ್ರಣಕ್ಕೆ ವೇಗವಾಗಿ ಒಳಗಾಗುತ್ತಿದೆ.

ವಸಾಹತುಶಾಹಿ ವ್ಯವಸ್ಥೆ ಸಂದರ್ಭದಲ್ಲಿ, ವಸಾಹತುಶಾಹಿ ರಾಷ್ಟ್ರಗಳು ನೇರ ಆಳ್ವಿಕೆ ಮೂಲಕ ತಮ್ಮ ಅಧೀನ ವಸಾಹತು ರಾಷ್ಟ್ರಗಳ ಮೇಲೆ ಉಂಟುಮಾಡುತ್ತಿದ್ದ ಪರಿಣಾಮಗಳಿಗಿಂತ ತೀವ್ರವೂ ಮತ್ತು ದಾರುಣವೂ ಆದ ಪರಿಣಾಮಗಳನ್ನು, ಸಮಕಾಲೀನ ನವವಸಾಹತುಶಾಹಿ ಶಕ್ತಿಯು ಜಗತ್ತಿನ ಬಹುಪಾಲು ಮೂರನೇ ಎರಡಕ್ಕಿಂತ ಹೆಚ್ಚಿನ ಸಂಖ್ಯೆಯ ರಾಷ್ಟ್ರಗಳ ಮೇಲೆ ಉಂಟುಮಾಡುತ್ತಿದೆ. ಇದರಿಂದ ಈ ರಾಷ್ಟ್ರಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಷ್ಟೇ ಅಲ್ಲದೆ ಒಟ್ಟಾರೆ ಮಾನವ ಬದುಕಿನ ವಿಧಾನಗಳು, ಆಲೋಚನಾ ಕ್ರಮಗಳು ಹಾಗೂ ಚಿಂತನೆಗಳು ಸಹ ತಮ್ಮ ವಿಶಿಷ್ಟವಾದ ಮೂಲ ಚಹರೆಗಳನ್ನು ಕಳೆದುಕೊಳ್ಳುತ್ತಿವೆ.

ಪ್ರಥಮ ಜಗತ್ತಿನ ನವವಸಾಹತುಶಾಹಿ ರಾಷ್ಟ್ರಗಳು ನಿರಂತರವಾಗಿ ಸೃಷ್ಟಿಸುತ್ತಿರುವ ಅಪಕಲ್ಪನೆಗಳು, ಅವಾಸ್ತವ ಮಿತ್‌ಗಳು ಮತ್ತು ಛದ್ಮವೇಷದ ಹುನ್ನಾರಗಳು 'ಅಧೀನ' ರಾಷ್ಟ್ರಗಳ ವೈವಿಧ್ಯಮಯ ಬೌದ್ಧಿಕ ಗ್ರಹಿಕೆಗಳು ಮತ್ತು ಚಿಂತನಾ ವಿಧಾನಗಳನ್ನು ನಾಶಗೊಳಿಸಿ ಆಲೋಚನೆಯ ಏಕರೂಪೀಕರಣಕ್ಕೆ ಒಳಪಡಿಸುವ ತೀವ್ರ ಪ್ರಯತ್ನ ಮಾಡುತ್ತಿವೆ. ಪ್ರಥಮ ಜಗತ್ತಿನ ರಾಷ್ಟ್ರಗಳ ಇಂಥ ಭೌತಿಕ, ಬೌದ್ಧಿಕ ಮತ್ತು ಮಾನಸಿಕ ಆಳ್ವಿಕೆಯ ಹಾಗೂ ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧ ಹೊಸ ಸ್ವರೂಪದ ಪರಾಧೀನ ರಾಷ್ಟ್ರಗಳಲ್ಲಿ ಹಲವು ರೀತಿಯ ವಿಮೋಚನಾ ಹೋರಾಟಗಳು ಹುಟ್ಟಿಕೊಂಡಿವೆ. ಇವುಗಳು ಮಾಡುತ್ತಿರುವ ವೈವಿಧ್ಯಮಯ ಸಾಂಸ್ಕೃತಿಕ ಹುಡುಕಾಟಗಳು ಪರಸ್ಪರ ಆಕರ್ಷಣಾತ್ಮಕ ಮತ್ತು ವಿಕರ್ಷಣಾತ್ಮಕ ಸಂಬಂಧ ಹೊಂದಿವೆ.

ಕಳೆದ ಶತಮಾನದ ಈ ಮಹಾಪಲ್ಲಟಗಳು ಮತ್ತು ಅವುಗಳ ಹಿನ್ನೆಲೆಯಲ್ಲಿರುವ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಉದ್ದೇಶಗಳ ಸಂಕೀರ್ಣ ಸ್ವರೂಪವನ್ನು ಕುರಿತು ವಿವಿಧ ಜ್ಞಾನರೂಪಗಳು ಆಳವಾದ ಅನುಸಂಧಾನ ಮಾಡಿವೆ. ಈ ಪ್ರಕ್ರಿಯೆಗೆ ಇದೇ ಕಾಲಾವಧಿಯಲ್ಲಿ ವೈಜ್ಞಾನಿಕ ಕ್ಷೇತ್ರದ ವಿವಿಧ ರಂಗಗಳಲ್ಲಿ ನಡೆದ ಮಹತ್ವಪೂರ್ಣ ಸಂಶೋಧನೆಗಳು ಸಹ ನೆರವಾಗಿವೆ. ಈ ಸಂಶ್ಲೇಷಕ ಅನುಸಂಧಾನದಿಂದ ಸಾಹಿತ್ಯವನ್ನೂ ಒಳಗೊಂಡಂತೆ, ಮಾನವನ ಬಹುತೇಕ ಅಭಿವ್ಯಕ್ತಿ ಪ್ರಕಾರಗಳ ಮತ್ತು ಜ್ಞಾನರೂಪಗಳ ಮೂಲ ಪರಿಕಲ್ಪನೆಗಳ ಅರ್ಥದ ನೆಲೆಗಳು ವಿಕಾಸಗೊಂಡಿವೆ. ಅನೇಕ ಹೊಸ ಪರಿಕಲ್ಪನೆಗಳು ಹುಟ್ಟಿಕೊಂಡಿವೆ. ಇದರಿಂದಾಗಿ, ಮಾನವನ ಲೋಕ ಗ್ರಹಿಕೆಯ ಸ್ವರೂಪದಲ್ಲಿ ಕ್ರಾಂತಿಕಾರಕವಾದ ಪರಿವರ್ತನೆಗಳು ಮತ್ತು ಬೆಳವಣಿಗೆಗಳಾಗಿವೆ.

ಕಳೆದ ಶತಮಾನದಲ್ಲಿ ರೂಪುಗೊಂಡ ಆಧುನಿಕ ಸಾಹಿತ್ಯ ವಿಮರ್ಶೆಯ ಜ್ಞಾನರೂಪದಲ್ಲೂ ಸಹ, ಈ ಪ್ರಕ್ರಿಯೆ ಅತ್ಯಂತ ತೀವ್ರವಾಗಿ ಮತ್ತು ವ್ಯಾಪಕವಾಗಿ ಆರಂಭಗೊಂಡಿದ್ದನ್ನು ಗುರುತಿಸಬಹುದು. ಇದು ಈಗಲೂ ಕ್ರಿಯಾತ್ಮಕವಾಗಿದೆ ಮತ್ತು ಸಾರ್ವತ್ರಿಕ ಪ್ರಕ್ರಿಯೆ ಎನ್ನುವ ಚಹರೆ ಹೊಂದಿರುವಂತೆ ಗೋಚರಿಸುತ್ತದೆ. ಅಭಿವ್ಯಕ್ತಿ ಪ್ರಕಾರಗಳ ಮತ್ತು ಜ್ಞಾನರೂಪಗಳ ಇಂಥ ನವೀನ ಪರಿಕಲ್ಪನೆಗಳು, ವೈಚಾರಿಕ ಆಕೃತಿಗಳು ಹಾಗೂ

ಆಧುನಿಕ ಪ್ರಮೇಯಗಳು ಸಾಹಿತ್ಯ ವಿಮರ್ಶೆಯ ಮೂಲ ಪರಿಕಲ್ಪನೆಗಳ ಅರ್ಥದ ನೆಲೆಗಳನ್ನು ಅನೂಹ್ಯವೆನ್ನುವಷ್ಟು ವಿಕಾಸಗೊಳಿಸಿವೆ.

ಈ ಪ್ರವೃತ್ತಿಯನ್ನು ಸಾಹಿತ್ಯ ವಿಮರ್ಶೆಯ 'ಮೂಲ ಪರಿಕಲ್ಪನೆಗಳ ವಿಕಾಸ' ಎಂದು ಕರೆಯಬಹುದು. ಇದರೊಂದಿಗೆ, ನೂತನವಾಗಿ ಪ್ರಚಾರಕ್ಕೆ ಬಂದ ವೈವಿಧ್ಯಮಯ 'ಪರಿಭಾಷೆ'ಗಳ ಹಾಗೂ 'ಪರಿಕಲ್ಪನೆ'ಗಳ ಪ್ರಕ್ರಿಯೆಯನ್ನು 'ಹೊಸ' ಪರಿಕಲ್ಪನೆಗಳ ಪ್ರವೇಶ' ಎಂದು ಹೆಸರಿಸಬಹುದು. ಹಾಗೆಯೇ, ವಿಶ್ಲೇಷಣೆಯ ಸಾಧನಗಳಾಗಿ ಒದಗಿಬಂದ ನವೀನ ರೂಪಗಳನ್ನು 'ಅನುಸಂಧಾನದ ಆಧುನಿಕ ವಿಧಾನಗಳು' ಎಂದು ವಿವರಿಸಬಹುದು. ಅಂತಿಮವಾಗಿ, ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪಗಳಲ್ಲಿ ಮುನ್ನೆಲೆಗೆ ಬಂದ ವೈವಿಧ್ಯಮಯ ಆಸಕ್ತಿಗಳನ್ನು ಮತ್ತು ಒಲವುಗಳನ್ನು 'ತಾತ್ವಿಕತೆಯ ಬಹುರೂಪಿ ಚಹರೆ'ಗಳು ಎಂದು ವ್ಯಾಖ್ಯಾನಿಸಬಹುದು. ಹೀಗೆ, ಕಳೆದ ಶತಮಾನದ ಉತ್ತರಾರ್ಧದಿಂದ ಸಾಹಿತ್ಯ ವಿಮರ್ಶೆಯ ಮೂಲ ತಾತ್ವಿಕ ಸ್ವರೂಪದಲ್ಲಿ ಆದ ರೂಢಮೂಲ ಪಲ್ಲಟದ ಸ್ವರೂಪವನ್ನು ಹಲವು ಆಯಾಮಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

ಈ ಹಿನ್ನೆಲೆಯಲ್ಲಿ, ಆಧುನಿಕ ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪದಲ್ಲಿ ಕಳೆದ ಶತಮಾನದ ಉತ್ತರಾರ್ಧದಿಂದ ಉಂಟಾಗಿರುವ ಸ್ಥಿತ್ಯಂತರವನ್ನು ಇಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಈ ಪ್ರಕ್ರಿಯೆ ಮುಖ್ಯವಾಗಿ ಕಳೆದ ಶತಮಾನದ ಆರಂಭದಿಂದಲೂ ವಿವಿಧ ವಿನ್ಯಾಸಗಳಲ್ಲಿ ಪ್ರಮುಖವಾದ ಐದು ಜ್ಞಾನರೂಪಗಳಲ್ಲಿ ನಡೆದಿರುವ ಅಧ್ಯಯನಗಳು, ಸಂಶೋಧನೆಗಳು, ವಾಗ್ವಾದಗಳು ಮತ್ತು ಸಿದ್ಧಾಂತಗಳ ಫಲಿತರೂಪ ಎನ್ನುವಂತೆ ಕಂಡುಬರುತ್ತದೆ. ಈ ಒಟ್ಟಾರೆ ವಿದ್ಯಮಾನವನ್ನು ಇಲ್ಲಿ 'ಸಂಕಥನ' ಎನ್ನುವ 'ತಾತ್ವಿಕ ಪರಿಭಾಷೆ' ಮೂಲಕ ಗುರುತಿಸಲಾಗಿದೆ.

ಇಂಥ ಐದು ಪ್ರಮುಖ ಸಂಕಥನಗಳಿವೆ. ಅವುಗಳೆಂದರೆ, ಅ. ಸಮಾಜ ಸಂಕಥನಗಳು ಆ. ಚರಿತ್ರೆ ಸಂಕಥನಗಳು ಇ. ಸಾಹಿತ್ಯ ಸಂಕಥನಗಳು ಈ. ಸಂಸ್ಕೃತಿ ಸಂಕಥನಗಳು ಮತ್ತು ಉ. ಓದಿನ ಸಂಕಥನಗಳು.

ಇವು ಅನೇಕ ನೆಲೆಗಳಲ್ಲಿ ಪರಸ್ಪರ ಸಾಹಚರ್ಯಾತ್ಮಕ ಸಂಬಂಧ ಹೊಂದಿವೆ. ಆದರೂ, ಸಾಹಿತ್ಯ ವಿಮರ್ಶೆಯ ಬದಲಾದ ತಾತ್ವಿಕತೆಯ ಸ್ವರೂಪದ ವಿಭಿನ್ನ ಚಹರೆಗಳನ್ನು ಮತ್ತು ನೆಲೆಗಳನ್ನು ಗುರುತಿಸುವ ದೃಷ್ಟಿಯಿಂದ, ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಂಕಥನಕ್ಕೆ ಸಂಬಂಧಿಸಿದಂತೆ, ಮೊದಲಿಗೆ ಪಾಶ್ಚಾತ್ಯ ಸಂಕಥನಗಳ ಸ್ವರೂಪವನ್ನು ಮತ್ತು ಆನಂತರ ಕನ್ನಡ ಸಂಕಥನಗಳ ಸ್ವರೂಪವನ್ನು ಪರಿಶೀಲಿಸಲಾಗಿದೆ. ಕೊನೆಯಲ್ಲಿ, ಇವು ರೂಪಿಸಿರುವ ಸಾಹಿತ್ಯ ಮೀಮಾಂಸೆಯ ಪ್ರಮುಖ ಚಹರೆಗಳನ್ನು ಗುರುತಿಸಲಾಗಿದೆ.

೩.೨ ಸಮಾಜ ಸಂಕಥನಗಳು

ಕಳೆದ ಶತಮಾನದಿಂದ ಮಾನವ ಸಮಾಜದ ಅಧ್ಯಯನ ಕ್ರಮಗಳಲ್ಲಿ ತೀವ್ರವಾದ ಬದಲಾವಣೆಗಳಾದವು. ಸಮಾಜದ ರಚನೆ ಮತ್ತು ಕಾರ್ಯಮಾದರಿಗಳನ್ನು ರೂಪಿಸುವುದರಲ್ಲಿ, ನಿಯಂತ್ರಿಸುವುದರಲ್ಲಿ ಮತ್ತು ನಿರ್ದೇಶಿಸುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವ ಮೂರ್ತ ಮತ್ತು ಅಮೂರ್ತ ಸಂಗತಿಗಳನ್ನು ಕುರಿತು ಅತ್ಯಂತ ಕುತೂಹಲಕರವಾದ ಸಂಶೋಧನೆಗಳು ಹಾಗೂ ಅಧ್ಯಯನಗಳು ನಡೆದವು. ಇದರಲ್ಲಿ ಸಮಾಜಶಾಸ್ತ್ರಜ್ಞರಿಗಿಂತ ಇತರ ಕ್ಷೇತ್ರಗಳ ಚಿಂತಕರ ಕೊಡುಗೆ ಅತ್ಯಂತ ಮಹತ್ವಪೂರ್ಣವಾದುದು.

ಈ ಅಧ್ಯಯನಗಳು ಸಮಾಜ ವಿಶ್ಲೇಷಣೆಯ ಸಾಂಪ್ರದಾಯಕ ಮತ್ತು ಸರಳೀಕೃತ ವಿಧಾನಗಳನ್ನು ಪ್ರಶ್ನಿಸಿದವು. ಹಲವು ಆಧುನಿಕ ಅರ್ಥಪೂರ್ಣ ಮಾದರಿಗಳನ್ನು ಕಟ್ಟಿದವು. ಸಮಾಜವನ್ನು 'ಲೀನಿಯರ್' ಮತ್ತು 'ಜಲವಿಭಾಜಕ' (watershed) ದೃಷ್ಟಿಕೋನದಲ್ಲಿ ವಿಶ್ಲೇಷಿಸುವ ಜನಪ್ರಿಯ ಮಾದರಿಗಳನ್ನು ನಿರಾಕರಿಸಿದವು. ಸಮಾಜದ ಸ್ತರವಿನ್ಯಾಸದ ಸಂಕೀರ್ಣ ನೆಲೆಗಳನ್ನು ನಿರ್ಮಿಸುವುದರಲ್ಲಿ ಅಧಿಕಾರ, ರಾಜಕಾರಣ, ಸಂಸ್ಕೃತಿ ಮೊದಲಾದ ಸಂಗತಿಗಳು ವಹಿಸುವ ಮಹತ್ವಪೂರ್ಣ ಪಾತ್ರ ಕುರಿತು ಹಲವು ಸಿದ್ಧಾಂತಗಳು, ತತ್ವಗಳು ಮತ್ತು ಪ್ರಮೇಯಗಳು ಮಂಡನೆಯಾದವು.

ಈ ಸಂಕಥನಗಳು ಕೇವಲ ಮಾನವ ಸಮಾಜದ ಸ್ವರೂಪ ಕುರಿತ ಅಧ್ಯಯನ ಕ್ರಮಗಳ ಮೇಲೆ ಮಾತ್ರವಲ್ಲದೆ, ಮಾನವನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯ ಮಹತ್ವದ ಮಾಧ್ಯಮವಾದ 'ಸಾಹಿತ್ಯ' ಹಾಗೂ ಅದರ ವಿಶ್ಲೇಷಣಾ ರೂಪವಾದ 'ವಿಮರ್ಶೆ'ಗಳ ಅಧ್ಯಯನ ವಿಧಾನಗಳ ಮೇಲೂ ಸಹ ಅಷ್ಟೇ ಗಾಢವಾದ ಪ್ರಭಾವ ಬೀರಿದವು. ಇದು ಕಳೆದ ಶತಮಾನದ ಉತ್ತರಾರ್ಧದಿಂದ ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ವಿಶಿಷ್ಟ ಚಹರೆಯಾಗಿದೆ.

ಸಮಾಜ ಸಂಕಥನಗಳು ಪಾಶ್ಚಾತ್ಯ ಮತ್ತು ಕನ್ನಡ ಪರಿಸರದ ಚಾರಿತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳ ಭಿನ್ನತೆಯ ಹಿನ್ನೆಲೆಗಳಿಗೆ ಅನುಸಾರವಾಗಿ ವೈವಿಧ್ಯಮಯ ರೂಪಗಳಲ್ಲಿ ನಡೆದಿವೆ. ಹೀಗಾಗಿ, ಇವುಗಳ ವಿಶಿಷ್ಟ ರೂಪುರೇಷೆಗಳನ್ನು ಇಲ್ಲಿ ಪ್ರತ್ಯೇಕವಾಗಿ ವಿವೇಚಿಸಲಾಗಿದೆ.

೩.೨.೧ ಪಾಶ್ಚಾತ್ಯ ಸಮಾಜ ಸಂಕಥನಗಳ ಸ್ವರೂಪ

ಪಾಶ್ಚಾತ್ಯ ಸಮಾಜ ಸಂಕಥನಗಳ ಹರವು ಬಹು ವಿಸ್ತಾರವಾದುದು. ಜಗತ್ತಿನ ವಿವಿಧ ರಾಷ್ಟ್ರಗಳ ಹಲವು ಜ್ಞಾನರೂಪಗಳಿಗೆ ಸೇರಿದ ಅನೇಕ ಚಿಂತಕರ ವಿಚಾರಗಳು ಇದರಲ್ಲಿ ಸಮಾವೇಶಗೊಂಡಿವೆ. ಇವು ಮಾನವ ಸಮಾಜದ ಸ್ವರೂಪ ಕುರಿತು ಮಾತ್ರವಲ್ಲದೆ, ಸಾಹಿತ್ಯ ಮತ್ತು ವಿಮರ್ಶೆಯ ಮೇಲೂ ದಟ್ಟವಾದ ಪ್ರಭಾವ ಬೀರಿವೆ.

ಪಾಶ್ಚಾತ್ಯ ಸಮಾಜ ಸಂಕಥನಗಳಲ್ಲಿ ಅತ್ಯಂತ ಮಹತ್ವಪೂರ್ಣವಾದುದು ಮಾರ್ಕ್ಸ್‌ವಾದಿ ಸಂಕಥನ. ಕಾರ್ಲ್‌ಮಾರ್ಕ್ಸ್ (೧೮೧೮–೧೮೮೩) ಮಾನವ ಸಮಾಜದ ಹುಟ್ಟು, ಬೆಳವಣಿಗೆ ಮತ್ತು ಅದರ ಸ್ವರೂಪ ಕುರಿತು ವಿವರಿಸುವ ಸಂದರ್ಭದಲ್ಲಿ ಮಂಡಿಸಿದ ಪರಿಕಲ್ಪನೆಗಳು, ಪ್ರಮೇಯಗಳು ಮತ್ತು ಸಿದ್ಧಾಂತಗಳು ಸಮಾಜದ ವಿವಿಧ ರಚನೆಗಳಾದ ಸಂಸ್ಕೃತಿ, ಸಾಹಿತ್ಯ ಚರಿತ್ರೆ ಮತ್ತು ರಾಜಕಾರಣಗಳನ್ನು ಕುರಿತ ಸಮರ್ಥ ವಿಶ್ಲೇಷಣೆಗಳಾಗಿ ಹೊಮ್ಮಿದವು. ಮಾರ್ಕ್ಸ್, ಮಾನವ ಸಮಾಜದ ಬೆಳವಣಿಗೆ ಮತ್ತು ಅದರ ಸ್ವರೂಪ ಕುರಿತು ವಿವರಿಸುವಾಗ ಉತ್ಪಾದನಾ ಸಾಧನಗಳು ಹಾಗೂ ಉತ್ಪಾದನಾ ಸಂಬಂಧಗಳು ಸೃಷ್ಟಿಸುವ ಆರ್ಥಿಕ ವರ್ಗಾಧಾರಿತ 'ಮಿಗುತಾಯ ಮೌಲ್ಯ' ಸಿದ್ಧಾಂತವನ್ನು ಪ್ರತಿಪಾದಿಸಿದನು. ಮಾರ್ಕ್ಸ್‌ನ ಈ ವಿಚಾರಗಳನ್ನು 'ಮೂಲ ಮಾರ್ಕ್ಸ್‌ವಾದ' ಅಥವಾ 'ಸಾಂಪ್ರದಾಯಕ ಮಾರ್ಕ್ಸ್‌ವಾದ' ಎಂದು ಕರೆಯಲಾಗಿದೆ. ಮಾರ್ಕ್ಸವಾದದ ಈ ಆದಿಮ ವಿಚಾರ ಧಾರೆಯಿಂದ ಸಮಾಜ ಮತ್ತು ಅದರ ರಚನೆಗಳಾದ ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆ ಮೊದಲಾದವುಗಳ ವಿಶ್ಲೇಷಣೆಗೆ ಸಂಬಂಧಿಸಿದ ಪ್ರಸಿದ್ಧ 'ತಳರಚನೆ ಮತ್ತು ತುದಿರಚನೆ' (Base-super structure) ತತ್ವ ಹುಟ್ಟಿಕೊಂಡಿತು. ಮುಂದೆ, ಲೆನಿನ್ (೧೮೭೦–೧೯೨೪) ರಷ್ಯಾದ ಸಂದರ್ಭದಲ್ಲಿ ಮಾರ್ಕ್ಸ್‌ವಾದವನ್ನು 'ದ್ವಂದ್ವಮಾನ ಭೌತವಾದ' ಹಾಗೂ 'ದ್ವಂದ್ವಮಾನ ಗತಿತಾರ್ಕಿಕವಾದ'ವಾಗಿ ಪರಿಷ್ಕರಿಸಿಕೊಂಡು ಸಮಾಜ, ಸಂಸ್ಕೃತಿ, ಕಲೆ ಹಾಗೂ ಸೌಂದರ್ಯ ಮೀಮಾಂಸೆಗಳ ಸ್ವರೂಪ ಕುರಿತು ವಿಶ್ಲೇಷಣೆ ಮಾಡಿದನು. ಈ ಸಂದರ್ಭದಲ್ಲಿ ಈತ 'ಸಮಾಜವಾದಿ ವಾಸ್ತವತೆ' ಎನ್ನುವ ಹೊಸ ಪರಿಕಲ್ಪನೆ ಪ್ರಚುರಗೊಳಿಸಿದನು. ಇದೇ ರೀತಿ ಚೀನಾದಲ್ಲಿ ಮಾವೋತ್ಸೆತುಂಗ್ (೧೮೯೩–೧೯೭೬), 'ಸಾಂಸ್ಕೃತಿಕ ವಿಶ್ಲೇಷಣೆ' ಎನ್ನುವ ವಿಶಿಷ್ಟ ಪರಿಕಲ್ಪನೆಯನ್ನು ರೂಪಿಸಿದನು. ಇವು 'ಪರಿಷ್ಕೃತ ಮಾರ್ಕ್ಸ್‌ವಾದದ' ಹೊಸ ಆವೃತ್ತಿಗಳಾಗಿವೆ. ಅನಂತರ ಇಟಲಿಯ ಆಂಟೋನಿಯಾ ಗ್ರಾಂಶಿ (೧೮೯೧–೧೯೩೭), ಮಾರ್ಕ್ಸ್‌ವಾದದ ಅನೇಕ ನ್ಯೂನತೆಗಳನ್ನು ಹೊಗಲಾಡಿಸಿ ಅದಕ್ಕೊಂದು ಹೊಸ ಉನ್ನತಿ ತಂದಂಥ 'ಸಾಂಸ್ಕೃತಿಕ ಯಾಜಮಾನ್ಯ' (cultural hegemony) ಪರಿಕಲ್ಪನೆಯನ್ನು ಪ್ರತಿಪಾದಿಸಿದನು.

ಈ ಎಲ್ಲಾ ಸಂಕಥನಗಳು ಸಮಾಜ, ಸಾಹಿತ್ಯ ಮತ್ತು ವಿಮರ್ಶೆಯ ಅಧ್ಯಯನದ ಹೊಸ ಮೀಮಾಂಸೆಗಳನ್ನು ರೂಪಿಸಿದವು. ಬಹುಮುಖ್ಯವಾಗಿ, ಇವು ಕಳೆದ ಶತಮಾನದ ಉತ್ತರಾರ್ಧದಿಂದ ಸಾಹಿತ್ಯ ವಿಮರ್ಶೆಯ ತಾತ್ವಿಕತೆಯ ಚಹರೆಗಳನ್ನು ಮುರಿದು ಕಟ್ಟಲು ಬಲವಾದ ಪ್ರೇರಣೆಗಳನ್ನು ಒದಗಿಸಿದವು.

ಆಧುನಿಕ ಸ್ತ್ರೀವಾದ ಸಹ, ಮಾರ್ಕ್ಸ್‌ವಾದಕ್ಕಿಂತ ಭಿನ್ನವಾದ ಆದರೆ ಅಷ್ಟೇ ಅರ್ಥಪೂರ್ಣವಾದ ಹೊಸ ಕ್ರಮದಲ್ಲಿ ಮಾನವ ಸಮಾಜ ಮತ್ತು ಅದರ ರಚನೆಗಳನ್ನು ಕುರಿತು ವಿಶ್ಲೇಷಣೆ ಮಾಡಿತು. ಇದು, 'ಪಿತೃ ಪ್ರಧಾನತೆ' ಮತ್ತು 'ಲೈಂಗಿಕ ರಾಜಕಾರಣ'ದ ಪರಿಕಲ್ಪನೆಗಳ ಮೂಲಕ ಸಮಾಜ, ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಗಳ ಸ್ವರೂಪವನ್ನು ಕುರಿತು ವಿಶ್ಲೇಷಣೆ ಮಾಡಿತು. ಫ್ರಾನ್ಸ್‌ನ ಸೀಮನ್ ದ ಬುವಾ (೧೯೦೮–೧೯೮೯) ತನ್ನ 'ಸೆಕೆಂಡ್ ಸೆಕ್ಸ್' (೧೯೪೯) ಕೃತಿಯಲ್ಲಿ, ಸಮಾಜ ಮಹಿಳೆಯನ್ನು 'ಎರಡನೆ ಪ್ರಜೆ'ಯಾಗಿ

ಪರಿಗಣಿಸಿರುವುದರ ಸ್ವರೂಪ ಕುರಿತು ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಪರಿಣಾಮಕಾರಿಯಾಗಿ ವಿಶ್ಲೇಷಿಸಿದಳು. ಕೇಟ್ ಮಿಲ್ಲೆಟ್, ಜೂಲಿಯಾ ಕ್ರಿಸ್ಟೋವಾ, ಜೂಡಿತ್ ಬಟ್ಲರ್ ಮತ್ತು ಎಲೈನ್ ಶೋವಾಲ್ಟರ್ ಮೊದಲಾದವರು ಸಹ ಸಮಾಜವನ್ನು ಹೀಗೆ ಹಲವು ವಿಭಿನ್ನ ನೆಲೆಗಳಲ್ಲಿ 'ಮಹಿಳಾ ದೃಷ್ಟಿಕೋನ'ದ ಪರಿಕಲ್ಪನೆ ಮೂಲಕ ವ್ಯಾಖ್ಯಾನಿಸಿದರು.

ಇವು ಸಾಹಿತ್ಯ ಮತ್ತು ವಿಮರ್ಶೆಯ ಅನುಸಂಧಾನಕ್ಕೆ ಹೊಸ ಆಯಾಮಗಳನ್ನು ಕಲ್ಪಿಸಿದವು. ವಿಮರ್ಶೆಯ ಪಲ್ಲಟೀಕರಣ ಪ್ರಕ್ರಿಯೆಗೆ ಅನಿರೀಕ್ಷಿತ ತೀವ್ರತೆ ಮತ್ತು ವ್ಯಾಪಕತೆ ಒದಗಿಸಿದವು.

ಆಧುನಿಕ ಸ್ತ್ರೀವಾದದ ಪ್ರಸಿದ್ಧ ಮಾದರಿಗಳಾದ ಇಂಗ್ಲೆಡನ 'ಸಮಾಜವಾದಿ ಸ್ತ್ರೀವಾದ', ಅಮೇರಿಕಾದ 'ಸಾಂಸ್ಕೃತಿಕ ಮತ್ತು ರಾಜಕೀಯ ಸ್ತ್ರೀವಾದ' ಮತ್ತು ಫ್ರಾನ್ಸ್‌ನ 'ಬೂರ್ಷ್ವಾಶಾಹಿ ವಿರೋಧಿ ಸ್ತ್ರೀವಾದ'ಗಳನ್ನು 'ಯುರೋಅಮೇರಿಕನ್ ಸ್ತ್ರೀವಾದ'ಗಳೆಂದು ಹಾಗೂ ಇವು 'ಮಧ್ಯಮ ವರ್ಗದ ಬಿಳಿ ಹೆಂಗಸರ ಆಲಾಪ' ಎಂದು ವಿರೋಧಿಸಿ 'ಕಪ್ಪು ಸ್ತ್ರೀವಾದ' ಹುಟ್ಟಿಕೊಂಡಿತು. 'ಲಿಂಗ' ಮತ್ತು 'ಮೈಬಣ್ಣ' ಹೀಗೆ ಎರಡೂ ನೆಲೆಯಿಂದ ಶೋಷಣೆ ಹಾಗೂ ಅಪಮಾನಕ್ಕೆ ಒಳಗಾಗಿರುವ ಆಫ್ರಿಕಾದ ಕಪ್ಪು ಮಹಿಳೆಯರ ಬದುಕಿಗೆ ಸಂಬಂಧಿಸಿದ ಈ ಸಂಕಥನವು ಸಮಾಜ ವಿಶ್ಲೇಷಣೆಗೆ ವಿಭಿನ್ನ ನೆಲೆಯೊಂದನ್ನು ಕಲ್ಪಿಸಿತು. ಆನಂತರ, 'ಗೇ'ಗಳು, ಸಲಿಂಗಕಾಮಿ ಮಹಿಳೆಯರು ಮತ್ತು ಲಿಂಗಾಂತರಿಗಳು ಪ್ರತಿಪಾದಿಸಿದ "ಕ್ವೀರ್ ಥಿಯರಿ'ಯು ಈ ಸಂಕಥನದ ಹೊಸ ಕವಲಾಗಿ ಬೆಳೆಯಿತು.

ಇವೆಲ್ಲವೂ ಸಮಕಾಲೀನ ಸಾಹಿತ್ಯ ವಿಮರ್ಶೆಯ ಧೋರಣೆಗಳನ್ನು ವ್ಯಾಪಕವಾಗಿ ಪಲ್ಲಟಗೊಳಿಸಿದವು. ವಿಮರ್ಶೆಗೆ ಹೊಸ ನೋಟಕ್ರಮ ಮತ್ತು ವಿಶ್ಲೇಷಣಾ ಪರಿಕರಗಳನ್ನು ಒದಗಿಸಿದವು. ವಿಮರ್ಶೆಯ ವ್ಯಾಪ್ತಿಯನ್ನು ವಿಸ್ತರಿಸಿದವು.

ಪಾಶ್ಚಾತ್ಯ ಬೌದ್ಧಿಕ ಕ್ಷೇತ್ರದಲ್ಲಿ ಮೊದಲಿಗೆ ೧೯೫೦ರ ವೇಳೆಯಲ್ಲಿ ಇಂಗ್ಲೆಡ್‌ನಲ್ಲಿ ಪ್ರವರ್ಧಮಾನಕ್ಕೆ ಬಂದು, ಆನಂತರ ೧೯೬೦ರ ಅವಧಿಯಲ್ಲಿ ಅಮೇರಿಕಾ ಮತ್ತು ಜಗತ್ತಿನ ಇನ್ನಿತರ ರಾಷ್ಟ್ರಗಳಿಗೆ ಪಸರಿಸಿದ 'ಆಧುನಿಕೋತ್ತರವಾದ' ಸಹ, ಸಮಾಜ ವಿಶ್ಲೇಷಣೆ ಸಂದರ್ಭದಲ್ಲಿ ಅನೇಕ ಹೊಸ ಪರಿಕಲ್ಪನೆಗಳು ಮತ್ತು ತತ್ವಗಳನ್ನು ಪ್ರತಿಪಾದಿಸಿತು. ಎರಡನೆ ಮಹಾಯುದ್ಧದ ನಂತರ ಮುಂಚೂಣಿಗೆ ಬಂದಿರುವ ಈ ಸಂಕಥನವು, ಆಧುನಿಕ ಸಮಾಜ ಮತ್ತು ಅದರ ರಚನೆಗಳನ್ನು ಕುರಿತ ತೀವ್ರವಾದ ವಿಮರ್ಶೆ ಹಾಗೂ ವಿರೋಧವನ್ನು ತನ್ನ ಪ್ರಧಾನ ತಾತ್ವಿಕತೆಯಾಗಿ ಹೊಂದಿದೆ. ಕಲೆ, ಚರಿತ್ರೆ, ಸಂಗೀತ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ರಾಜಕಾರಣ, ಪ್ರಜಾಪ್ರಭುತ್ವ, ಸೆಕ್ಯುಲರಿಸಂ ಮೊದಲಾದವುಗಳನ್ನು ಕುರಿತು ಈ ಸಂಕಥನ ತೀವ್ರವಾದ ಸಂದೇಹ ಮತ್ತು ತಿರಸ್ಕಾರ ತಾಳುತ್ತದೆ. ಚರಿತ್ರೆಯ ಸರಳರೇಖಾತ್ಮಕ ಪರಿಕಲ್ಪನೆ, ವಿಜ್ಞಾನದ ಸರ್ವಜ್ಞತೆ, ಸಂಸ್ಕೃತಿಗಳ ತರತಮ ವರ್ಗೀಕರಣ ಮೊದಲಾದ ಚಿಂತನೆಗಳನ್ನು ಕುರಿತು ಅತೀವವಾದ ವಿರೋಧ ವ್ಯಕ್ತಪಡಿಸುತ್ತದೆ. ಸಾಹಿತ್ಯದಲ್ಲಿ 'ಮಹಾ' ಅಥವಾ 'ವಿರಾಟ್' ಕಥನಗಳ ಬದಲು 'ಕಿರು' ಕಥನಗಳಿಗೆ, 'ಅಖಂಡ ನಿರೂಪಣೆ' ಬದಲು 'ಛಿದ್ರ

ನಿರೂಪಣೆ'ಗೆ ಮಹತ್ವಕೊಡುತ್ತದೆ. 'ಆಧುನಿಕ' ಮತ್ತು 'ಅತ್ಯಾಧುನಿಕ' ಸಮಾಜ ಹಾಗೂ ಸಂಸ್ಕೃತಿಗಳ ಬದಲಾಗಿ, 'ಅನಾಧುನಿಕ' ಅಥವಾ 'ಆಧುನಿಕ ಪೂರ್ವ'ದ ಸಮಾಜ, ಸಂಸ್ಕೃತಿ ಹಾಗೂ ಚಿಂತನಾಕ್ರಮಗಳಿಗೆ ವಿಶೇಷ ಪ್ರಾಮುಖ್ಯತೆ ಕೊಡುತ್ತದೆ.

ಈ ಸಂಕಥನವನ್ನು, ಸಮಾಜ ವಿಶ್ಲೇಷಣೆಯ 'ವೈಜ್ಞಾನಿಕ' ಅಥವಾ 'ವೈಚಾರಿಕ' ಸಿದ್ಧಾಂತ ಎಂದು ಹೆಸರಾದ 'ಮಾರ್ಕ್ಸ್‌ವಾದ'ವನ್ನು ಅಪ್ರಸ್ತುತಗೊಳಿಸುವ ಹುನ್ನಾರದ ಒಂದು ಸೈದ್ಧಾಂತಿಕ ಪ್ರಯತ್ನ ಎಂದು ಆಕ್ಷೇಪಿಸುವುದೂ ಉಂಟು. ಆದರೂ, ಇಪ್ಪತ್ತನೆಯ ಶತಮಾನದ ಉತ್ತರಾರ್ಧದಿಂದ ಇದು ಜಾಗತಿಕ ನೆಲೆಯಲ್ಲಿ ಸಾಹಿತ್ಯ ಹಾಗೂ ವಿಮರ್ಶೆಯ ವಿಚಾರಗಳ ಮೇಲೆ ಬಹುದೊಡ್ಡ ಪ್ರಮಾಣದಲ್ಲಿ ತನ್ನ ಪ್ರಭಾವ ಬೀರುತ್ತಿದೆ.

ಯುರೋಪಿನ ಇಂಗ್ಲೆಂಡ್, ಫ್ರಾನ್ಸ್, ಸ್ಪೈನ್, ಪೋರ್ಚುಗಲ್ ಮೊದಲಾದ ವಸಾಹತುಶಾಹಿ ರಾಷ್ಟ್ರಗಳು ಆಫ್ರಿಕಾ, ದಕ್ಷಿಣ ಏಷ್ಯಾ, ಲ್ಯಾಟಿನ್ ಅಮೇರಿಕಾ ಮತ್ತು ಕೆರಿಬಿಯನ್‌ನ ತಮ್ಮ ವಸಾಹತು ರಾಷ್ಟ್ರಗಳ ಮೇಲೆ ಉಂಟುಮಾಡಿದ ಘೋರ ಅನುಭವಗಳನ್ನು 'ನಿರ್ವಸಾಹತೀಕರಣ' ಮತ್ತು 'ವಸಾಹತೋತ್ತರವಾದ' ಗಳು ವಿಶ್ಲೇಷಿಸಿದವು. ಈ ವಸಾಹತುಶಾಹಿ ರಾಷ್ಟ್ರಗಳು ತಮ್ಮ ಅಧೀನ ವಸಾಹತುಗಳ ಸಂಬಂಧದಲ್ಲಿ ಅನುಸರಿಸಿದ ಕ್ರಮಗಳಿಂದ ಅವುಗಳ ವಿಶಿಷ್ಟ ಚರಿತ್ರೆ, ಸಂಸ್ಕೃತಿ ಮತ್ತು ಜ್ಞಾನಮೀಮಾಂಸೆಗಳಿಗೆ ವಿಸ್ಮೃತಿ ಉಂಟಾಗಿದೆ. ಇದರಿಂದ, ಸಂಪೂರ್ಣ ಬಿಡುಗಡೆ ಹೊಂದಬೇಕು ಮತ್ತು ದೇಶಿ ವಿವೇಕವನ್ನು ಮರು ಗಳಿಸಬೇಕು ಎನ್ನುವುದು ನಿರ್ವಸಾಹತೀಕರಣ ಸಂಕಥನದ ಮುಖ್ಯ ಚಿಂತನೆಯಾಗಿದೆ. ಅಲ್ಜೀರಿಯಾದ ಮಾರ್ಕ್ಸ್‌ವಾದಿ ಚಿಂತಕ ಫ್ರಾನ್ಜ್ ಫ್ಯಾನನ್ (೧೯೨೫-೧೯೬೧) ತನ್ನ 'ದ ವೈಟ್‌ಸ್ಕಿನ್ ಬ್ಲಾಕ್ ಮಾಸ್ಕ್' (೧೯೫೦) ಮತ್ತು 'ದ ರೆಚರ್ಡ್ ಆಫ್ ದ ಅರ್ಥ್' (೧೯೬೧) ಕೃತಿಯಲ್ಲಿ ಪ್ರತಿಪಾದಿಸಿದ 'ಸಮಗ್ರ ವಿಮೋಚನಾ ತತ್ವ' ಈ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು. ಆಫ್ರಿಕಾದ ನುಗಿ ವಾ ಥಿಯಾಂಗೋನ 'ಭಾಷಾ ನಿರ್ವಸಾಹತೀಕರಣ' ಮತ್ತು ಪ್ಯಾಲಸ್ಟೈನ್‌ನ ಎಡ್ವರ್ಡ್ ಸೈದ್‌ನ (೧೯೩೫-೨೦೦೩) 'ಪೌರಾತ್ಯವಾದ' ಸಹ ಇಂಥ ಮಹತ್ವಪೂರ್ಣ ನಿರ್ವಸಾಹತೀಕರಣವಾದಿ ಸಾಮಾಜಿಕ ಸಂಕಥನಗಳಾಗಿವೆ. ಸೈದ್ ತನ್ನ 'ಓರಿಯಂಟಲಿಸಂ' (೧೯೭೮) ಮತ್ತು 'ಕಲ್ಚರ್ ಅಂಡ್ ಇಂಪೀರಿಯಲಿಸಂ' (೧೯೯೩) ಕೃತಿಗಳಲ್ಲಿ ಪಶ್ಚಿಮವು ಪೂರ್ವವನ್ನು ನೋಡುವ ಕ್ರಮ ಕುರಿತು ಹುಟ್ಟುಹಾಕಿರುವ ಅಪಕಲ್ಪನೆಗಳು ಮತ್ತು ಅವಾಸ್ತವ ಮಿಥ್‌ಗಳನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದನು.

ವಸಾಹತೋತ್ತರವಾದ ಸಹ ಇದೇ ಮಾದರಿಯ ಇನ್ನೊಂದು ಸಾಮಾಜಿಕ ಸಂಕಥನ. ಇಟಲಿಯ ಆಂಟೋನಿಯಾ ಗ್ರಾಂಶಿ ತನ್ನ 'ನೋಟ್ಸ್ ಫ್ರಮ್ ದ ಪ್ರಿಸನ್' (೧೯೩೪-೩೫) ಕೃತಿಯ ಮೂರನೆ ಅಧ್ಯಾಯವಾದ 'ನೋಟ್ಸ್ ಆನ್ ದ ಹಿಸ್ಟರಿ ಆಫ್ ಇಟಲಿ'ಯಲ್ಲಿ ಇಟಲಿಯ ಸಮಾಜದ ಸಂರಚನೆ ಕುರಿತು ವಿಶ್ಲೇಷಿಸುವಾಗ ಬಳಸಿದ 'ಸಬಾಲ್ಟರ್ನ್' ಮತ್ತು 'ಹೆಗಮನಿ' ಪರಿಕಲ್ಪನೆಗಳು ಆಧುನಿಕ ಸಮಾಜ ವಿಶ್ಲೇಷಣೆಗೆ

ಹೊಸ ವಿಧಾನಗಳನ್ನು ಒದಗಿಸಿದವು. ೧೯೬೦ರ ದಶಕದಲ್ಲಿ ಇಂಗ್ಲೆಡ್‌ನ ಡೇವಿಡ್ ಲುಡನ್ ಪರಿಚಯಿಸಿದ ಇತಿಹಾಸದ ಅಧ್ಯಯನದ ಪರಿಕಲ್ಪನೆಯಾದ 'ರೀಡಿಂಗ್ ಸಬಾಲ್ಟರ್ನ್ ಸ್ಟಡೀಸ್' ಕೂಡಾ ಇದೇ ಮಾದರಿಯದ್ದಾಗಿದೆ. ಆದರೆ, ಗಾಯತ್ರಿ ಸ್ಪಿವಾಕ್ ಚಕ್ರವರ್ತಿ ಅವರು ಈ ಪರಿಕಲ್ಪನೆಗೆ ತಾತ್ವಿಕ ವಿರೋಧ ವ್ಯಕ್ತಪಡಿಸಿ 'Can Subltern Speack?' ಎಂದರೆ, 'ನಿಜವಾಗಿಯೂ ತಳಸ್ತರದವರೆ ಮಾತನಾಡುತ್ತಿದ್ದಾರೆಯೇ' ಎನ್ನುವ ಪ್ರಶ್ನೆ ಕೇಳಿದರು ಇದಕ್ಕೆ 'ತಳಸ್ತರದವರ ಮಾತುಗಳನ್ನು ಆಲಿಸಲಾಗುತ್ತಿದೆಯೇ' ಎನ್ನುವ ಪ್ರತ್ಯುತ್ತರ ವ್ಯಕ್ತವಾಯಿತು.

ಪಾಶ್ಚಾತ್ಯ ವಸಾಹತೋತ್ತರ ಚಿಂತನೆಯು ವಸಾಹತು ರಾಷ್ಟ್ರಗಳನ್ನು ರಾಷ್ಟ್ರ, ಜನಾಂಗ, ಲಿಂಗ, ರಾಜಕಾರಣ, ಭಾಷೆ, ಅನನ್ಯತೆ ಮತ್ತು ಜಾಗತಿಕ ವಲಸೆ (ಡಯಾಸ್ಪೊರ) ಮೊದಲಾದ ನೆಲೆಗಳಲ್ಲಿ ವಿಶ್ಲೇಷಿಸುತ್ತಿದೆ. ಆದರೆ ಈ ಸಂದರ್ಭದಲ್ಲಿ ಭಾರತೀಯ ಚಿಂತಕ ಹೋಮಿ ಕೆ. ಬಾಬಾ ಬಳಸಿದ 'ಹೈಬ್ರಿಡಿಟಿ' ಅಥವಾ 'ಸಂಕರಶೀಲತೆ' ಪರಿಕಲ್ಪನೆಯು ಅವರೇ ಬಳಸಿರುವ 'ಆ್ಯಂಬಿವೆಲೆನ್ಸ್' ಮತ್ತು 'ಮಿಮಿಕ್ರಿ' ಪರಿಕಲ್ಪನೆಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿದೆ. ಹಾಗೆಯೇ ಈ ಪ್ರಸ್ಥಾನವು ಸಮಾಜ ಮತ್ತು ಸಂಸ್ಕೃತಿ ವಿಶ್ಲೇಷಣೆಯಲ್ಲಿ ಬಳಸಿದ 'ಕೇಂದ್ರ ಮತ್ತು ಅಂಚು' ಹಾಗೂ 'ಸ್ವ ಮತ್ತು ಅನ್ಯ' ಪರಿಕಲ್ಪನೆಗಳು ಕೂಡಾ ಬಹಳ ಮುಖ್ಯವಾದವು.

ಕಳೆದ ಶತಮಾನದ ಉತ್ತರಾರ್ಧದಲ್ಲಿ ನವವಸಾಹತುಶಾಹಿ ಪ್ರತಿಪಾದಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಿಂದ ನಿರ್ವಸಾಹತೀಕರಣ ಸಿದ್ಧಾಂತ ಮತ್ತು ವಸಾಹತೋತ್ತರವಾದಗಳಿಗೆ, ಬಹುದೊಡ್ಡ ಸವಾಲು ಎದುರಾಯಿತು. ಜಾಗತೀಕರಣ ಎನ್ನುವ ಸಾಮಾನ್ಯ ಜನಪ್ರಿಯ ಪರಿಕಲ್ಪನೆಯು ವಾಸ್ತವವಾಗಿ ನವವಸಾಹತುಶಾಹಿ ಪ್ರಥಮ ಜಗತ್ತು, ವಿಶ್ವದ 'ಅಭಿವೃದ್ಧಿಶೀಲ' ಮತ್ತು 'ಹಿಂದುಳಿದ' ರಾಷ್ಟ್ರಗಳನ್ನು ಪರೋಕ್ಷವಾಗಿ ನಿಯಂತ್ರಿಸುವ ಹಾಗೂ ಆಳುವ 'ವ್ಯೂಹಾತ್ಮಕ ಕಾರ್ಯನೀತಿ'ಯ ಪ್ರಾಯೋಗಿಕ ರೂಪವಾಗಿದೆ. ಇದನ್ನು ಮೊಟ್ಟ ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಘಾನಾ ದೇಶದ ಪ್ರಥಮ ಅಧ್ಯಕ್ಷನಾದ ಕ್ವಾಮೆ ನುಕ್ರಮ್ (೧೯೦೯-೧೯೭೨) ಈ ಪರಿಕಲ್ಪನೆಯ ವಿರುದ್ಧ 'ಅಖಿಲ ಆಫ್ರಿಕನ್‌ವಾದ' ವನ್ನು (pan Africanism) ಪ್ರತಿಪಾದಿಸಿದನು. 'ನವವಸಾಹತುಶಾಹಿ' ಎನ್ನುವುದು ಈತನೇ ಸೃಷ್ಟಿಸಿದ ಪರಿಕಲ್ಪನೆ. ಈತನ 'ನಿಯೋಕಲೋನಿಯಲಿಸಂ: ದ ಲಾಸ್ಟ್ ಸ್ಟೇಜ್ ಆಫ್ ಇಂಪೀರಿಯಲಿಸಂ' (೧೯೬೫) ಕೃತಿ ನವವಸಾಹತುಶಾಹಿಯ ಹುನ್ನಾರಗಳನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಿದ ಮೊಟ್ಟ ಮೊದಲ ಮಹತ್ವದ ಕೃತಿಯಾಗಿದೆ.

ಕಳೆದ ಶತಮಾನದ ಕೊನೆಯ ಘಟ್ಟದ ವೇಳೆಗೆ ನವವಸಾಹತುಶಾಹಿಯ ವಾಣಿಜ್ಯರೂಪದ ರಾಜಕೀಯಾರ್ಥಿಕ ಆಳ್ವಿಕೆ ಬಹುಮಟ್ಟಿಗೆ ವಿಶ್ವಾದ್ಯಂತ ಕಾರ್ಯರೂಪಕ್ಕೆ ಬಂದ ಮೇಲೆ, ಅದರಿಂದ ಉಂಟಾಗುತ್ತಿರುವ ಬಹುರೂಪಿ ಪರಿಣಾಮಗಳನ್ನು ಕುರಿತು ಸಾಮಾಜಿಕ ಸಂಕಥನಗಳು ಇಂದು ತೀವ್ರವಾಗಿ

ವಿಶ್ಲೇಷಿಸುತ್ತಿವೆ. ಅದು, ಅ. ಜಾಗತೀಕರಣದ ಪ್ರತಿರೋಧಾತ್ಮಕ ನೆಲೆ ಆ. ಜಾಗತೀಕರಣದ ಸ್ವೀಕರಣಾತ್ಮಕ ನೆಲೆ ಮತ್ತು ಇ. ಅಪರಿಹಾರಾತ್ಮಕ ನೆಲೆ ಹಾಗೆಯೇ ಜಾಗತಿಕ ಭಯೋತ್ಪಾದನೆ, ಮೂಲಭೂತವಾದ, ಕೋಮುವಾದ, ಹಿಂಸಾವಾದ ಮತ್ತು ಪರಿಸರವಾದಗಳನ್ನುಕುರಿತ ಚರ್ಚೆಗಳು ಸಹ ಈ ಸಾಮಾಜಿಕ ಸಂಕಥನದ ಮಹತ್ವಪೂರ್ಣ ಭಾಗವಾಗಿವೆ.

ಇಷ್ಟೇ ಅಲ್ಲದೆ ಈ ಸಾಮಾಜಿಕ ಸಂಕಥನಗಳು ಸಾಹಿತ್ಯಾಧ್ಯಯನ ಮತ್ತು ವಿಮರ್ಶೆಯ ಪ್ರಮುಖ ನೋಟ ಕ್ರಮಗಳನ್ನು ಹಾಗೂ ವಿಶ್ಲೇಷಣಾ ವಿಧಾನಗಳನ್ನು ಸಹ ರೂಪಿಸಿವೆ. ಸಾಹಿತ್ಯ ವಿಮರ್ಶೆಯ ಕಕ್ಷೆಯೊಳಗೆ ಸಮಾಜ ಮತ್ತು ಸಂಸ್ಕೃತಿ ಪ್ರಶ್ನೆಗಳನ್ನು ಪ್ರಧಾನ ನೆಲೆಗಳಾಗಿ ಜೋಡಿಸಿವೆ.

೩.೨.೨ ಕನ್ನಡದ ಸಮಾಜ ಸಂಕಥನಗಳ ಸ್ವರೂಪ

ಸ್ವಾತಂತ್ರ್ಯೋತ್ತರ ಕರ್ನಾಟಕದ ಚರಿತ್ರೆಯಲ್ಲಿ ಕಳೆದ ಶತಮಾನದ ಎಪ್ಪತ್ತರ ದಶಕವು ಹಲವು ನೆಲೆಗಳಿಂದ ಅತ್ಯಂತ ಮಹತ್ವದ ಕಾಲಘಟ್ಟವಾಗಿದೆ. ಕರ್ನಾಟಕದ ಚರಿತ್ರೆಯಲ್ಲಿ, ಹನ್ನೆರಡನೆ ಶತಮಾನದ ವಚನಕಾರರ ಚಳವಳಿ ನಂತರ ಈ ಕಾಲಘಟ್ಟದಲ್ಲಿ ಮಾತ್ರ ಕರ್ನಾಟಕದ ಸಮಾಜ ಸಂಸ್ಕೃತಿ ಮತ್ತು ಸಾಹಿತ್ಯ ಕುರಿತು ಗಂಭೀರವಾದ ಹೋರಾಟಗಳು ಆರಂಭವಾದವು. ಇವು ವ್ಯಕ್ತಿ ಪ್ರಯತ್ನವನ್ನು ಮೀರಿದ ವ್ಯಾಪಕವಾದ 'ಸಾಮೂಹಿಕ ಪ್ರಯತ್ನ' ಅಥವ 'ಆಂದೋಲನಗಳು' ರೂಪದಲ್ಲಿ ನಡೆದವು.

ಈ ಕಾಲಘಟ್ಟದಲ್ಲಿ ಎತ್ತಲಾದ ಸಾಮಾಜಿಕ ಪ್ರಶ್ನೆಗಳಿಗೆ, ತಕರಾರುಗಳಿಗೆ ಆಳವಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕಾರಣಗಳಿದ್ದವು. ಇವು ಹೊರ ರೂಪದಲ್ಲಿ ಕೇವಲ ಸಾಮಾಜಿಕ ಪ್ರಶ್ನೆಗಳೆನ್ನುವಂತೆ ಕಂಡರೂ, ಮೂಲತಃ ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಕ ಮತ್ತು ಕಲಾ ಸಂಬಂಧಿತ ನಿರ್ಣಾಯಕ ಸ್ವರೂಪದ ಪ್ರಶ್ನೆಗಳಾಗಿದ್ದವು. ಹಾಗೆಯೇ ಮೇಲ್ನೋಟಕ್ಕೆ ನಿರ್ದಿಷ್ಟವಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಗೋಚರಿಸಿದರೂ, ವಾಸ್ತವವಾಗಿ ಸಮಗ್ರ ಭಾರತಕ್ಕೆ ಅನ್ವಯವಾಗುವ ಸ್ವರೂಪದವುಗಳಾಗಿದ್ದವು. ಹೀಗೆ ಕರ್ನಾಟಕದ ಸಮಾಜ ಮತ್ತು ಸಂಸ್ಕೃತಿ ಕುರಿತ ಪ್ರಶ್ನೆಗಳು ಅಖಿಲ ಭಾರತೀಯ ಅನ್ವಯಿಕತೆಯ ಆಯಾಮ ಹೊಂದಿದ್ದವು.

ಕರ್ನಾಟಕದ ಸಮಾಜ ಸಂಕಥನಗಳಿಗೆ, ಪಾಶ್ಚಾತ್ಯ ಸಮಾಜಶಾಸ್ತ್ರಜ್ಞರು ಮತ್ತು ಚಿಂತಕರಿಗಿಂತ ಈ ನೆಲದ ಚಿಂತಕರ ವಿಚಾರಗಳೇ ಮುಖ್ಯ ಮೂಲಗಳು. ಅದರಲ್ಲೂ ಕನ್ನಡದ ಸಾಹಿತಿಗಳು ಮತ್ತು ಸಂಸ್ಕೃತಿ ಚಿಂತಕರ ಪಾತ್ರ ಈ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಹೀಗಾಗಿಯೇ, ಇವುಗಳನ್ನು ಇಲ್ಲಿ 'ಕನ್ನಡದ ಸಮಾಜ ಸಂಕಥನಗಳು' ಎಂದೇ ಗುರುತಿಸಲಾಗಿದೆ.

ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹುಟ್ಟಿದ ವಿವಿಧ ಚಳವಳಿಗಳೇ ಮುಖ್ಯವಾಗಿ ಕನ್ನಡದ ಸಮಾಜ ಸಂಕಥನಗಳ ಪ್ರಮುಖ ತಾತ್ವಿಕತೆಯನ್ನು ರೂಪಿಸಿವೆ. ಬಸವಲಿಂಗಪ್ಪ ಅವರ ಕನ್ನಡ ಸಾಹಿತ್ಯ ಕುರಿತ 'ಬೂಸಾ' ಹೇಳಿಕೆಗೆ ವ್ಯಕ್ತವಾದ ತೀವ್ರ ವಿರೋಧಕ್ಕೆ ಪ್ರತಿಕ್ರಿಯೆಯಾಗಿ, ಬಿ. ಕೃಷ್ಣಪ್ಪ ಅವರು

೧೯೭೩ರಲ್ಲಿ ಭದ್ರಾವತಿಯಲ್ಲಿ ಸ್ಥಾಪಿಸಿದ 'ಕರ್ನಾಟಕ ದಲಿತ ಸಂಘರ್ಷ ಸಮಿತಿ', ೧೯೭೪ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ 'ಅಖಿಲ ಕರ್ನಾಟಕ ಬರಹಗಾರರು ಮತ್ತು ಕಲಾವಿದರ ಒಕ್ಕೂಟ' ಮತ್ತು ಬರಗೂರು ಅವರ ನೇತೃತ್ವದಲ್ಲಿ ೧೯೭೯ರಲ್ಲಿ ರೂಪುಗೊಂಡ 'ಕರ್ನಾಟಕ ಬಂಡಾಯ ಸಂಘಟನೆ'ಗಳು ಕರ್ನಾಟಕದ ಸಮಾಜ ಸಂಕಥನಗಳನ್ನು ರೂಪಿಸಿರುವ ಪ್ರಮುಖ ಸಂಘಟನೆಗಳಾಗಿವೆ. ಇವು ಕರ್ನಾಟಕದಲ್ಲಿ ಹುಟ್ಟುಹಾಕಿದ ದಲಿತ ಚಳವಳಿ, ಶೂದ್ರ ಚಳವಳಿ ಮತ್ತು ಬಂಡಾಯ ಚಳವಳಿಗಳು ಕರ್ನಾಟಕದ ಸಮಾಜ ಸಂಕಥನಗಳ ಪರಿಕಲ್ಪನೆ ಮತ್ತು ತಾತ್ವಿಕ ನೆಲೆಗಳನ್ನು ನಿರ್ಮಿಸಿವೆ. ಇಷ್ಟೇ ಅಲ್ಲದೆ ಇವು ಕರ್ನಾಟಕದ ಮಹಿಳಾ ಚಳವಳಿ ಮತ್ತು ರೈತ ಚಳವಳಿಗಳ ಹುಟ್ಟಿಗೆ ಸಹ ಪ್ರಮುಖ ಪ್ರೇರಣೆಗಳನ್ನು ಒದಗಿಸಿವೆ.

ಕನ್ನಡದ ದಲಿತ ಬರಹಗಾರರು ಮತ್ತು ಚಿಂತಕರು, ಭಾರತದ ಹಾಗೂ ಕರ್ನಾಟಕದ ಚರಿತ್ರೆಯಲ್ಲಿ ಮಾತ್ರವಲ್ಲದೆ ವರ್ತಮಾನದಲ್ಲಿ ಸಹ ದಲಿತರಿಗಾಗುತ್ತಿರುವ ಅನ್ಯಾಯವನ್ನು ಎಳೆಎಳೆಯಾಗಿ ವಿವರಿಸಿದರು. 'ವರ್ಣ', 'ವರ್ಗ' ಮತ್ತು 'ಜಾತಿ' ಈ ಮೂರು ನೆಲೆಗಳಲ್ಲಿ ಭಾರತದ 'ಹಿಂದೂ ಧರ್ಮ' ಮತ್ತು ಅದರ ಸಾಮಾಜಿಕ ನೀತಿ ಸಂಹಿತೆಯ ಕಾರ್ಯತಂತ್ರವಾದ 'ಜಾತಿ ಪದ್ಧತಿ' ದಲಿತರ ಪಾಲಿಗೆ ಸೃಷ್ಟಿಸಿರುವ ನರಕವನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದರು. ವರ್ತಮಾನದ ಬದುಕಿನಲ್ಲಿ ಅನುದಿನವೂ ಕರ್ನಾಟಕದ ವಿವಿಧ ಭಾಗಗಳಲ್ಲಿ ದಲಿತರಿಗಾಗುತ್ತಿರುವ ಅವಮಾನ, ಹಿಂಸೆ ಮತ್ತು ಅನ್ಯಾಯಗಳನ್ನು ಕುರಿತು ತೀವ್ರವಾದ ಆಂದೋಲನಗಳನ್ನು ಹುಟ್ಟುಹಾಕಿದರು. ದಲಿತರ ಆತ್ಮಗೌರವ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಅಗ್ರಹಿಸಿದರು. ಬಿ. ಕೃಷ್ಣಪ್ಪ, ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಮ.ನ. ಜವರಯ್ಯ ಮತ್ತು ಅರವಿಂದ ಮಾಲಗತ್ತಿ ಮೊದಲಾದವರು ಕರ್ನಾಟಕದ ಸಮಾಜ ಮತ್ತು ಸಾಹಿತ್ಯವನ್ನು ದಲಿತ ದೃಷ್ಟಿಕೋನದ ಮೂಲಕ ವ್ಯಾಖ್ಯಾನಿಸಿದರು. ಅಂಬೇಡ್ಕರ್, ಪೆರಿಯಾರ್ ಮತ್ತು ಬಸವಣ್ಣನಂಥ ಭಾರತೀಯ ಮನಸ್ಸುಗಳ ಮೂಲಕವೇ ದಲಿತರಿಗೆ ನ್ಯಾಯ ದೊರಕಿಸಬಹುದೇ ಹೊರತು, ಕಾರ್ಲ್‌ಮಾರ್ಕ್ಸ್‌ನ 'ವರ್ಗಸಂಘರ್ಷ' ಮತ್ತು 'ವರ್ಗಹೋರಾಟ'ದಂಥ ಆರ್ಥಿಕ ಪ್ರಶ್ನೆಗಳ ನೆಲೆಯ ಮೂಲದಿಂದ ಅಲ್ಲವೆಂದು ಪ್ರತಿಪಾದಿಸಿದರು.

ಇದೇ ಅವಧಿಯಲ್ಲಿ, ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಗಳು ಮತ್ತು ಕುವೆಂಪು ಅವರ ಶೂದ್ರವಾದಿ ಚಿಂತನೆಗಳ ಪ್ರೇರಣೆಯಿಂದ ಹುಟ್ಟಿದ ಶೂದ್ರಚಳವಳಿಯು ಕರ್ನಾಟಕದ ಸಮಾಜ ಮತ್ತು ಸಂಸ್ಕೃತಿಯನ್ನು ಶೂದ್ರವಾದಿ ಸಂಕಥನದ ಮೂಲಕ ವಿಶ್ಲೇಷಿಸಿತು. ಸಾಹಿತ್ಯ, ಕಲೆ, ಸಿನಿಮಾ, ಸಂಗೀತ ಮತ್ತು ಪತ್ರಿಕೋದ್ಯಮ ಮೊದಲಾದ ಕ್ಷೇತ್ರಗಳಿಗೆ ಸೇರಿದ ವಿವಿಧ ಚಿಂತಕರು ಈ ಸಂಕಥನವನ್ನು ಕಟ್ಟಿದರು. ಶಾಂತವೇರಿ ಗೋಪಾಲಗೌಡ, ಜೆ.ಹೆಚ್. ಪಟೇಲ್, ಬಂಗಾರಪ್ಪ, ಗಣಪತಿಯಪ್ಪ, ಕಾಗೋಡು ತಿಮ್ಮಪ್ಪ ಮೊದಲಾದವರು 'ಗೇಣಿ ಹೋರಾಟ'ದ ಮೂಲಕ ಭೂಹಿಡುವಳಿಯಲ್ಲಿರುವ ಚಾರಿತ್ರಿಕ ಅನ್ಯಾಯದ ವಿರುದ್ಧದ ಸಾಮಾಜಿಕ ನ್ಯಾಯದ ಸಾಧನವಾಗಿ ಈ ಸಂಕಥನವನ್ನು ರೂಪಿಸಿದರು. ಎಂ.ಡಿ. ನಂಜುಂಡಸ್ವಾಮಿ, ಪಿ. ಲಂಕೇಶ್, ರಾಮದಾಸ್, ತೇಜಸ್ವಿ, ಕಡಿದಾಳ್ ಶಾಮಣ್ಣ ಮೊದಲಾದವರು ಜಾತ್ಯತೀತ

ಸಮಾಜವಾದಿ ಸಮಾಜ ನಿರ್ಮಾಣದ ಉದ್ದೇಶದ 'ಜಾತಿವಿನಾಶ' ಆಂದೋಲನ ಕಟ್ಟಿದರು. ಇದು ಶೂದ್ರವಾದಿ ಸಂಕಥನದ ಮುಖ್ಯ ಕಾರ್ಯಪರಿಕಲ್ಪನೆಯಾಯಿತು. ಈ ಪರಿಕಲ್ಪನೆ ಮೂಲಕ ಶೂದ್ರವಾದಿ ಸಂಕಥನ 'ಭಾರತೀಯ ಸಂಸ್ಕೃತಿ'ಯ 'ಶ್ರೇಣೀಕೃತ ವ್ಯವಸ್ಥೆ' ಮತ್ತು 'ಜಾತಿ ಪದ್ಧತಿ' ಕುರಿತು ತೀವ್ರವಿರೋಧ ವ್ಯಕ್ತಪಡಿಸಿತು.

'ಭಾರತೀಯ ಸಂಸ್ಕೃತಿ' ಎಂದರೆ ಮೂಲತ ಅದು 'ಬ್ರಾಹ್ಮಣ ಸಂಸ್ಕೃತಿ' ಅಥವಾ 'ವೈದಿಕ ಸಂಸ್ಕೃತಿ' ಮಾತ್ರ. ಇದು 'ಜಾತಿಪದ್ಧತಿ'ಯನ್ನು ತನ್ನ ಉಸಿರಾಗಿಸಿಕೊಂಡಿದೆ. ಇದರಿಂದಾಗಿ, ಹಿಂದೂಧರ್ಮದ ಬಹುಸಂಖ್ಯಾತ ಶೂದ್ರ ಸಮುದಾಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಶೋಷಣೆಗೆ ಒಳಗಾಗಿದೆ. ಆದ್ದರಿಂದ, 'ಜಾತಿವಿನಾಶ'ವೊಂದೇ ಸಮಾಜವಾದಿ ಸಮಾಜ ನಿರ್ಮಾಣಕ್ಕಿರುವ ದಾರಿ. ಇದನ್ನು 'ಅಂತರ್ಜಾತಿ ವಿವಾಹ'ಗಳ ಮೂಲಕ ಮಾತ್ರ ಸಾಧಿಸಬಹುದು ಎಂದು ಈ ಸಂಕಥನ ಪ್ರತಿಪಾದಿಸಿತು.

ಹೀಗೆ ಕರ್ನಾಟಕದ ಸಾಮಾಜಿಕ ವಿಶ್ಲೇಷಣೆ ಮಾಡಿದ್ದು ಮಾತ್ರವಲ್ಲದೆ, ಸಾಮಾಜಿಕ ಪರಿವರ್ತನೆಗಾಗಿ ಸಮರ್ಪಕವಾದ ಪರಿಹಾರೋಪಾಯವೊಂದನ್ನು ಈ ಸಂಕಥನ ಕಟ್ಟಿಕೊಟ್ಟಿದ್ದು, ಇದರ ಮಹತ್ವದ ಸಾಧನೆಯಾಗಿದೆ.

ಕರ್ನಾಟಕದ ಸಮಾಜದಲ್ಲಿ ಎದ್ದು ಕಾಣುವ ವರ್ಗ ಸ್ವಭಾವ ಮತ್ತು ವರ್ಗ ಹಿತಾಸಕ್ತಿಯನ್ನು ಬಂಡಾಯ ಚಳವಳಿಯ ಬಂಡಾಯ ಸಾಮಾಜಿಕ ಸಂಕಥನ ವಿವರಿಸಿತು. ಗಾತ್ರದಲ್ಲಿ ಸಣ್ಣದಾಗಿದ್ದರೂ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಅಧಿಕಾರಬಲದಿಂದ ಪ್ರಬಲವಾಗಿರುವ 'ಪ್ರತಿಷ್ಠಿತ ವರ್ಗ' ಮತ್ತು ಅತ್ಯಂತ ದೊಡ್ಡ ಗಾತ್ರದಲ್ಲಿದ್ದರೂ ಎಲ್ಲ ಅಧಿಕಾರಶಕ್ತಿಗಳಿಂದ ವಂಚಿತವಾಗಿರುವ 'ದುರ್ಬಲವರ್ಗ'ಗಳ ನಡುವೆ ವರ್ಗ ಹೋರಾಟದ ಮೂಲಕ ಸಮಾನತೆ ಸಾಧಿಸಬೇಕು ಎನ್ನುವುದು ಈ ಸಂಕಥನದ ಉದ್ದೇಶ. ಕರ್ನಾಟಕದ ಸಮಾಜವನ್ನು ವರ್ಗ, ವರ್ಣ, ಜಾತಿ, ಲಿಂಗ ಮತ್ತು ಧಾರ್ಮಿಕ ಅಸಮಾನತೆಗಳಿಂದ ಮುಕ್ತವಾದ ಸಮಾನತಾ ಸಮಾಜವಾಗಿ ರೂಪಿಸಬೇಕು ಎನ್ನುವುದು ಇದರ ಆಶಯ. ಹೀಗಾಗಿ ಇದು ದಲಿತ ಮತ್ತು ಶೂದ್ರ ಸಂಕಥನಗಳಿಗಿಂತ ಭಿನ್ನವಾದ ಸಾಮಾಜಿಕ ಸಂಕಥನವಾಗಿದೆ. ಕರ್ನಾಟಕದ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಮನಿತರಾಗಿರುವ ವಿವಿಧ ನಿರ್ಲಕ್ಷಿತ ಸಮುದಾಯಗಳು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಮೊದಲಾದವರ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಈ ಸಂಕಥನ ಅತ್ಯಂತ ಮಹತ್ವದ ಪ್ರಶ್ನೆಗಳೆಂದು ಪರಿಗಣಿಸಿ ತನ್ನ ಹೋರಾಟ ರೂಪಿಸಿತು.

ಹೀಗೆ ಪಾಶ್ಚಾತ್ಯ ಮತ್ತು ಕನ್ನಡದ ಸಾಮಾಜಿಕ ಸಂಕಥನಗಳು ವಿಶಿಷ್ಟವಾದ ಸಾಮಾಜಿಕ ಮೀಮಾಂಸೆಯನ್ನು ರೂಪಿಸಿದವು. ಇಷ್ಟೇ ಅಲ್ಲದೆ ಸಾಹಿತ್ಯ ಕುರಿತು ನೂತನ ಸಾಹಿತ್ಯ ಮೀಮಾಂಸೆಗಳನ್ನು ಕಟ್ಟಿದವು. ಇವುಗಳ ಫಲಿತವಾಗಿ ಸಾಹಿತ್ಯ ವಿಮರ್ಶೆಯಲ್ಲೂ ಸಹ ಹೊಸ ಪ್ರವೃತ್ತಿಗಳು ತಲೆದೋರಿದವು.

ಇದರಿಂದ ಕಳೆದ ಶತಮಾನದ ಸಾಹಿತ್ಯ ಸಂದರ್ಭದಲ್ಲಿ ಉತ್ತರಾರ್ಧದಲ್ಲಿ ಪಾಶ್ಚಾತ್ಯ 'ಸಾಂಸ್ಕೃತಿಕ ವಿಮರ್ಶೆ' ಎನ್ನುವ ನೂತನ ವಿಮರ್ಶಾ ಪ್ರಕಾರ ಹುಟ್ಟಿಕೊಂಡಿತು. ಹಾಗೆಯೇ ಕನ್ನಡದ ಪ್ರಧಾನ ಧಾರೆಯ ಸಾಹಿತ್ಯ ವಿಮರ್ಶೆಯ ವ್ಯಾಪ್ತಿ, ವಿಧಾನ ಮತ್ತು ಸ್ವರೂಪಗಳಲ್ಲಿ ವ್ಯಾಪಕವಾದ ಪಲ್ಲಟಗಳು ತಲೆದೋರಿದವು.

ಈ ಹಿನ್ನೆಲೆಯಲ್ಲಿ ಸಮಾಜ ಸಂಕಥನಗಳು ಹುಟ್ಟುಹಾಕಿದ ಸಾಹಿತ್ಯ ಮೀಮಾಂಸೆಯ ಸ್ವರೂಪವನ್ನು ಕುರಿತು ಇಲ್ಲಿ ಸ್ಥೂಲವಾಗಿ ಪರಿಶೀಲನೆ ಮಾಡಲಾಗಿದೆ.

೩.೨.೩ ಸಾಹಿತ್ಯ ಮೀಮಾಂಸೆ

ಸಮಾಜ ಸಂಕಥನಗಳು ಬಹುರೂಪಿ ಸಾಹಿತ್ಯ ಮೀಮಾಂಸೆಗಳನ್ನು ರೂಪಿಸಿದವು. ಸಾಹಿತ್ಯದ ಅರ್ಥ, ಉಪಯೋಗ, ಸ್ವರೂಪ ಮತ್ತು ಮಹತ್ವಗಳನ್ನು ಕುರಿತು ಪ್ರಸಿದ್ಧವಾಗಿದ್ದ ರೂಢಿಗತ ಮೀಮಾಂಸೆಗಳನ್ನು ಈ ನೂತನ ಮೀಮಾಂಸೆಗಳು ಪ್ರಶ್ನಿಸಿದವು. 'ಕಾವ್ಯವೇ ಸಾಹಿತ್ಯ' ಅಥವಾ 'ಸಾಹಿತ್ಯವೆಂದರೆ ಶ್ರೇಷ್ಠವಾದ ಕಾವ್ಯ ಮಾತ್ರ' ಎನ್ನುವ 'ಕಾವ್ಯ ಮೀಮಾಂಸೆ'ಯ ಪರಮೋಚ್ಚ ಸ್ಥಾನದಲ್ಲಿ ಇವು ಹೊಸದಾಗಿ 'ಗದ್ಯ ಮೀಮಾಂಸೆ'ಯನ್ನು ಪ್ರತಿಪಾದಿಸಿದವು. ಮಾನವನ ಅನುಭವದ ಅಭಿವ್ಯಕ್ತಿಯಲ್ಲಿ ಕಾವ್ಯದಷ್ಟೇ 'ಗದ್ಯ' ಸಹ ಮಹತ್ವ ಹೊಂದಿದೆ ಎಂದು ವಿಶ್ಲೇಷಿಸಿದವು.

ಸಾಹಿತ್ಯದ ಸ್ವರೂಪ ಕುರಿತು ಪ್ರಸಿದ್ಧವಾಗಿದ್ದ 'ಅಭಿಜಾತ ಮೀಮಾಂಸೆ' ಅಥವಾ 'ಸೌಂದರ್ಯವಾದಿ ಮೀಮಾಂಸೆ'ಯನ್ನು ಸಹ ಈ ಹೊಸ ಸಾಹಿತ್ಯ ಮೀಮಾಂಸೆಗಳು ಪ್ರಶ್ನಿಸಿದವು. ಸಾಹಿತ್ಯದ 'ರಸಾಸ್ವಾದನ' ಅಥವಾ 'ಹೃದಯವಿಕಾಸ'ದ ಉದ್ದೇಶಕ್ಕೆ ಬದಲಾಗಿ ಮಾನವ ಸಮಾಜದ ಪರಿಣಾಮಕಾರಿ ಸಂಕಥನದ ಉದ್ದೇಶವನ್ನು ಪ್ರತಿಪಾದಿಸಿದವು. ಮಾರ್ಕ್ಸ್‌ವಾದದ 'ಸಮಾಜೋ-ಆರ್ಥಿಕ ಸಾಹಿತ್ಯ ಮೀಮಾಂಸೆ'ಯು ಸಾಹಿತ್ಯದ ಆಶಯ ಮತ್ತು ಆಕೃತಿಗಳು ಆಯಾ ಸಾಮಾಜಿಕ ಹಾಗೂ ಆರ್ಥಿಕ ರಚನೆಯ ಸನ್ನಿವೇಶಗಳಿಂದ ರೂಪಿತವಾಗುತ್ತವೆ ಎಂದು ವ್ಯಾಖ್ಯಾನಿಸಿತು. ಜರ್ಮನಿಯ ಬರ್ಟೋಲ್ಡ್ ಬ್ರೆಕ್ಟ್ (೧೮೯೮-೧೯೫೬) ತನ್ನ 'ಎಪಿಕ್ ರಂಗಭೂಮಿ' ಪರಿಕಲ್ಪನೆಯಲ್ಲಿ ಹಾಗೂ ಬಂಗಾಳಿ ನಾಟಕಕಾರ ಬಾದಲ್ ಸರ್ಕಾರ್ ತನ್ನ 'ಸಮುದಾಯ ರಂಗಭೂಮಿ' ಪರಿಕಲ್ಪನೆಗಳಲ್ಲಿ ಈ ಹೊಸ ಸಾಹಿತ್ಯ ಮೀಮಾಂಸೆಗಳನ್ನು ಸಮರ್ಥವಾಗಿ ಅಳವಡಿಸಿಕೊಂಡರು.

ಮಾರ್ಕ್ಸ್‌ವಾದಿ ಸಾಹಿತ್ಯ ಮೀಮಾಂಸೆಯ ವಿಶಾಲ ಭಿತ್ತಿಯ ಹಿನ್ನೆಲೆಯಿಂದ ಆಧುನಿಕ 'ಸ್ತ್ರೀವಾದಿ ಸಾಹಿತ್ಯ ಮೀಮಾಂಸೆ' ಹುಟ್ಟಿಕೊಂಡಿತು. ಅದರಲ್ಲೂ ಸಾಂಸ್ಕೃತಿಕ ಮಾರ್ಕ್ಸ್‌ವಾದದಿಂದ 'ಸಾಂಸ್ಕೃತಿಕ ಸ್ತ್ರೀವಾದಿ ಮೀಮಾಂಸೆ' ರೂಪಿತವಾಯಿತು. ಸಾಹಿತ್ಯದೊಳಗೆ ನಿಹಿತವಾಗಿರುವ ಪುರಷಪರ ಮತ್ತು ಮಹಿಳಾ ವಿರೋಧಿ ತಾತ್ವಿಕತೆಯನ್ನು ಈ ಮೀಮಾಂಸೆ ಪರಿಶೀಲನೆ ಮಾಡಿತು. ಇದು ಸಾಹಿತ್ಯವನ್ನು ಮಹಿಳಾ ಪಾತ್ರಗಳ 'ತೀವ್ರವಾದ ಕಣ್ಮರೆ', 'ಮಹಿಳಾ ಪಾತ್ರ ಚಿತ್ರಣದಲ್ಲಿರುವ ಪುರುಷ ಪರ ಧೋರಣೆ', 'ಕೆಳಮಟ್ಟದ ಚಿತ್ರಣ' ಮತ್ತು 'ಪುರುಷ ಭಾಷೆಯ ಬಳಕೆ' ಮೊದಲಾದ ನೆಲೆಗಳಲ್ಲಿ ವಿಶ್ಲೇಷಿಸಿತು.

ಆಧುನಿಕ ಸಮಾಜದ ರಚನೆ ಮತ್ತು ಸ್ವರೂಪ ಕುರಿತು ತೀವ್ರವಾದ ವಿರೋಧ ಹೊಂದಿರುವ 'ಆಧುನಿಕೋತ್ತರ ಸಾಹಿತ್ಯ ಮೀಮಾಂಸೆ'ಯು ಶಿಷ್ಟ ಮತ್ತು ಸಮಕಾಲೀನ ಸೃಜನಶೀಲ ಸಾಹಿತ್ಯಕ್ಕೆ ಬದಲಾಗಿ, ಅನಾಧುನಿಕ ಹಾಗೂ ಮಧ್ಯಕಾಲೀನ ಭಕ್ತಿ, ಅನುಭಾವ ಹಾಗೂ ಜಾನಪದ ಸಾಹಿತ್ಯವನ್ನು ಹೆಚ್ಚು ಮಹತ್ವಪೂರ್ಣವಾದವುಗಳೆಂದು ಪರಿಭಾವಿಸಿತು. ಪಾಶ್ಚಾತ್ಯ ಸಂದರ್ಭದಲ್ಲಿ 'ವಾಸ್ತವವಾದಿ' ಕಾದಂಬರಿಗಳ ಬದಲಾಗಿ 'ಮಾಂತ್ರಿಕ ವಾಸ್ತವವಾದಿ' ಕಾದಂಬರಿಗಳಿಗೆ ಹೆಚ್ಚು ಆಸಕ್ತಿ ವ್ಯಕ್ತಪಡಿಸಲಾಯಿತು. ಲ್ಯಾಟಿನ್ ಅಮೇರಿಕಾದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ (೧೯೨೭-೨೦೧೪) ಮತ್ತು ಐರ್ಲೆಂಡಿನ ಕವಿ ಡಬ್ಲ್ಯು.ಬಿ.ಯೇಟ್ಸ್ (೧೮೬೫-೧೯೩೯) ಇವರ ಸಾಹಿತ್ಯವನ್ನು ಈ ಮೀಮಾಂಸೆ ಶ್ರೇಷ್ಠಮಟ್ಟದ ಸಾಹಿತ್ಯವೆಂದು ವಾದಿಸಿತು. ಆಧುನಿಕೋತ್ತರವಾದದ 'ದೇಶಿಯತೆ' ಪರಿಕಲ್ಪನೆ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬೇಂದ್ರೆ, ಕಂಬಾರ ಮತ್ತು ಶಿವಪ್ರಕಾಶ್ ಅವರ ಕಾವ್ಯವನ್ನು ಅಭ್ಯಸಿಸುವ ಪ್ರವೃತ್ತಿ ಮೊದಲಾಯಿತು. ಆಧುನಿಕತೆ ಮತ್ತು ಅಧುನಿಕ ಜ್ಞಾನವ್ಯವಸ್ಥೆಗಳ ವಿಕಾರಕ್ಕೆ ಅಡಿಗರ ಕಾವ್ಯ ಹಲವು ನೆಲೆಗಳಲ್ಲಿ ಪ್ರತಿರೋಧ ವ್ಯಕ್ತಪಡಿಸಿದೆ ಎಂದು ಗುರುತಿಸುವ ಪ್ರಯತ್ನ ಮಾಡಲಾಯಿತು. ಆಧುನಿಕೋತ್ತರ ಸಾಹಿತ್ಯ ಮೀಮಾಂಸೆಯು ಜಾನಪದ ಮತ್ತು ನವಮೌಖಿಕತೆಯನ್ನು ಅತ್ಯಂತ ಪ್ರಮುಖ ಸಾಹಿತ್ಯ ರೂಪಗಳೆಂದು ಪರಿಗಣಿಸಿತು. ಅಮೇರಿಕದ ಮಲ್ಮಾನ್ ಪ್ಯಾರಿ 'ಇಲಿಯಡ್' ಮತ್ತು 'ಒಡೆಸಿ' ಮಹಾಕಾವ್ಯಗಳಿಗಿರುವ ಜಾನಪದ ಮೂಲಗಳನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದನು. ಕನ್ನಡದಲ್ಲೂ ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಕಾಡುಗೊಲ್ಲರ ಕಾವ್ಯಗಳು, ಹಾಲುಮತ ಕಾವ್ಯ ಮತ್ತು ಕೊಡೆಕಲ್ ಬಸವಣ್ಣನ ಕಾವ್ಯವನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸುವ ಕೆಲವು ಪ್ರಯತ್ನಗಳು ನಡೆದವು.

ಆಫ್ರಿಕಾದ ಚಿನುವಾ ಅಚಿಬೆಯ (೧೯೩೦-೨೦೧೩) 'ಥಿಂಗ್ಸ್ ಫಾಲ್ ಅಪಾರ್ಟ್' (೧೯೫೮), ವೊಲೆ ಶೊಯೆಂಕಾನ 'ದ ಡ್ಯಾನ್ಸ್ ಆಫ್ ದ ಫಾರಸ್ಟ್' (೧೯೬೧) ಮತ್ತು ಭಾರತದ ಸಲ್ಮಾನ್ ರಷ್ದಿಯ 'ದ ಮಿಡ್‌ನೈಟ್ ಚಿಲ್ಡ್ರನ್' (೧೯೮೧) ಕೃತಿಗಳನ್ನು ವಸಾಹತುಶಾಹಿ ಸಾಹಿತ್ಯ ಮೀಮಾಂಸೆಯ ಮೂಲಕ ಗ್ರಹಿಸಲಾಯಿತು.

'ತೃತೀಯ ಜಗತ್ತಿನ ರಾಷ್ಟ್ರಗಳ ಸಾಹಿತ್ಯ ಮೀಮಾಂಸೆ' ಎಂದೇ ಪ್ರಸಿದ್ಧವಾಗಿರುವ ನವವಸಾಹತುಶಾಹಿ ಸಾಹಿತ್ಯ ಮೀಮಾಂಸೆಯು ಜಾಗತೀಕರಣದ ಏಕರೂಪೀಕರಣದ ಕನಸಾದ 'ವಿಶ್ವಗ್ರಾಮ' ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತಿರುವ 'ದೂರದರ್ಶನ' ಕುರಿತು ಹೆಚ್ಚು ಆಸಕ್ತಿ ವ್ಯಕ್ತಪಡಿಸಿತು. ಇದನ್ನು 'ನವಮೌಖಿಕತೆ' ಎಂದು ಈ ಮೀಮಾಂಸೆ ವ್ಯಾಖ್ಯಾನಿಸಿತು. ಈ ಪ್ರವೃತ್ತಿಯನ್ನು ಕುರಿತು ಮಾರ್ಷಲ್ ಮ್ಯಾಕ್ ಲುಹನ್ (೧೯೧೧-೧೯೮೦) 'ದೂರದರ್ಶನ ಪ್ರಾಬಲ್ಯದಿಂದ ನಾವು ಜಾಗತಿಕ ಗ್ರಾಮ ಎನ್ನುವ ಮಾನವ ಇತಿಹಾಸದ ಹೊಸ ಘಟ್ಟವೊಂದಕ್ಕೆ ಪ್ರವೇಶಿಸಿದ್ದೇವೆ' ಎಂದು ವಿಶ್ಲೇಷಿದನು. ದೂರದರ್ಶನವನ್ನು ವಾಲ್ಟರ್ ಜೆ ಓಂಗ್ (೧೯೧೨-೨೦೦೩) 'ಎರಡನೆಯ ಜಾನಪದ' ಎಂದು ಗುರುತಿಸಿದನು.

ಕನ್ನಡದಲ್ಲೂ ನವ್ಯೋತ್ತರ ಕಾಲಘಟ್ಟದಿಂದ ದಲಿತ, ಶೂದ್ರ, ಬಂಡಾಯ ಮತ್ತು ಮಹಿಳಾ ಸಾಹಿತ್ಯ ಮೀಮಾಂಸೆಗಳು ಹುಟ್ಟಿಕೊಂಡವು. ತೊಂಭತ್ತರ ದಶಕದಿಂದ ನವವಸಾಹತುಶಾಹಿ ಸಾಹಿತ್ಯಮೀಮಾಂಸೆ ಮುನ್ನೆಲೆಗೆ ಬಂದಿದೆ. ಜಾಗತೀಕರಣ, ಮೂಲಭೂತವಾದ, ಕೋಮುವಾದ, ಉಗ್ರವಾದ, ಹಿಂಸಾವಾದ ಮತ್ತು ಪರಿಸರ ಸಮಸ್ಯೆ ಮೊದಲಾದ ವರ್ತಮಾನದ ಬದುಕಿನ ಆತಂಕಗಳು, ಸಾಹಿತ್ಯಾಧ್ಯಯನದ ನೆಲೆಗಳಾಗಿ ಪರಿಗಣಿತವಾಗಲು ನವವಸಾಹತುಶಾಹಿ ಸಾಹಿತ್ಯ ಮೀಮಾಂಸೆ ಮುಖ್ಯ ಕಾರಣವಾಗಿದೆ. ಇದರಿಂದ, ಕನ್ನಡ ಸಾಹಿತ್ಯ ಮೀಮಾಂಸೆಯ ತಾತ್ವಿಕ ಸ್ವರೂಪ ಸಹ ತೀವ್ರವಾದ ಪಲ್ಲಟಕ್ಕೆ ಒಳಗಾಗಿದೆ.

೩.೩ ಚರಿತ್ರೆ ಸಂಕಥನಗಳು

ಇಪ್ಪತ್ತನೆಯ ಶತಮಾನದ ಎರಡನೆಯ ಘಟ್ಟದಲ್ಲಿ ಚರಿತ್ರೆಯ ಅಧ್ಯಯನದಲ್ಲಿ ಹೊಸ ವಿಶ್ಲೇಷಣಾ ವಿಧಾನಗಳು, ಆಧುನಿಕ ಪರಿಕಲ್ಪನೆಗಳು ಮತ್ತು ಪ್ರಮೇಯಗಳು ಪ್ರಚಾರಕ್ಕೆ ಬಂದವು. ಇವು ಚರಿತ್ರೆಯನ್ನು ಸ್ವಾಯತ್ತ ನೆಲೆಯಲ್ಲಿ ಪರಿಭಾವಿಸುವ ಕ್ರಮಕ್ಕೆ ವಿರುದ್ಧವಾಗಿ, ವಿವಿಧ ಅನ್ಯಶಿಸ್ತು ಮತ್ತು ಬಹುಶಿಸ್ತುಗಳ ತಿಳಿವಳಿಕೆಗಳ ಸಂಶ್ಲೇಷಣಾ ವಿಧಾನದಲ್ಲಿ ವಿಶ್ಲೇಷಿಸುವ ಕ್ರಮಗಳನ್ನು ಪ್ರತಿಪಾದಿಸಿದವು.

ಚರಿತ್ರೆಯ ಈ ಸಂಕಥನಗಳು ಮಾನವನ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಚರಿತ್ರೆಗಳನ್ನು ಬಹುಮುಖಿ ನೆಲೆಗಳಲ್ಲಿ ಅನುಸಂಧಾನ ಮಾಡುವ ಹೊಸ ಸಾಧ್ಯತೆಗಳನ್ನು ಒದಗಿಸಿದವು. ಇದರಿಂದ ಮನುಷ್ಯನ ನಾಗರಿಕತೆ ಮತ್ತು ಚರಿತ್ರೆಗಳಿರುವ ಸಂಬಂಧವನ್ನು ವಿವಿಧ ಆಯಾಮಗಳಲ್ಲಿ ಅರ್ಥಪೂರ್ಣವಾಗಿ ಪುನಾರಾಲೋಕನ ಮಾಡಲಾಯಿತು. ಹಾಗೆಯೇ, ಇವು ಸಾಹಿತ್ಯ ಮತ್ತು ವಿಮರ್ಶೆಯ ತಾತ್ವಿಕ ಗ್ರಹಿಕೆಗಳ ಅರ್ಥಸಾಧ್ಯತೆಗಳನ್ನು ಸಹ ವಿಸ್ತರಿಸಿದವು ಮತ್ತು ಪಲ್ಲಟಗೊಳಿಸಿದವು.

ಚರಿತ್ರೆಯ ಈ ಪಾಶ್ಚಾತ್ಯ ಸಂಕಥನಗಳಿಗೂ ಮತ್ತು ಕನ್ನಡದ ಸಂಕಥನಗಳಿಗೂ ಕೆಲವು ಮೂಲಭೂತವಾದ ವ್ಯತ್ಯಾಸಗಳಿವೆ. ಹೀಗಾಗಿ, ಇವುಗಳ ವಿಶಿಷ್ಟ ರೂಪುರೇಷೆಗಳನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗಿದೆ.

೩.೩.೧ ಪಾಶ್ಚಾತ್ಯ ಚರಿತ್ರೆ ಸಂಕಥನಗಳ ಸ್ವರೂಪ

ಪಾಶ್ಚಾತ್ಯ ಚರಿತ್ರೆ ಸಂಕಥನಗಳಿಗೆ ಅತ್ಯಂತ ಮಹತ್ವದ ಪ್ರೇರಣೆ ನೀಡಿದ ಚಿಂತಕ ಇಂಗ್ಲೆಂಡಿನ ರೇಮಂಡ್ ವಿಲಿಯಮ್ಸ್ (೧೯೨೧–೧೯೮೮) ಈತ, 'ಆಧುನಿಕ ಮಾರ್ಕ್ಸ್‌ವಾದ' ಅಥವಾ 'ಸಾಂಸ್ಕೃತಿಕ ಮಾರ್ಕ್ಸ್‌ವಾದ'ದ ಪ್ರೇರಣೆಯ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ 'ಸಾಂಸ್ಕೃತಿಕ ಭೌತವಾದ'ವು (cultural materialism) ಪಾಶ್ಚಾತ್ಯ ಚರಿತ್ರೆ ಅಧ್ಯಯನಗಳಿಗೆ ಹೊಸ ದಿಕ್ಕನ್ನು ಕಲ್ಪಿಸಿತು.

ಪಾಶ್ಚಾತ್ಯ ಚರಿತ್ರೆಯ ಅಧ್ಯಯನಗಳಲ್ಲಿ ಚರಿತ್ರೆಯನ್ನು ಪ್ರಮುಖ ಘಟನಾವಳಿಗಳ ದಾಖಲೆಯ ಸರಳರೇಖಾತ್ಮಕ ಮತ್ತು ಅಖಂಡಾತ್ಮಕ ರೂಪಗಳಲ್ಲಿ ಪರಿಭಾವಿಸುವ ಸಾಂಪ್ರದಾಯಕ ವಿಧಾನಗಳನ್ನು ಬಲವಾಗಿ ಪ್ರಶ್ನಿಸಲಾಯಿತು. ಚರಿತ್ರೆಯನ್ನು ಕುರಿತು ಪ್ರಚಲಿತದಲ್ಲಿದ್ದ 'ಗತದ ವಾಸ್ತವ' ಮತ್ತು 'ಸತ್ಯದ

ದಾಖಲೆ' ಎನ್ನುವ ಜನಪ್ರಿಯ ನಿರೂಪಣೆಗಳನ್ನು ತೀವ್ರವಾಗಿ ವಿರೋಧಿಸಲಾಯಿತು. ಹೈಡೆನ್ ವೈಟ್ ಎನ್ನುವ ಚರಿತ್ರೆಗಾರ ಪ್ರತಿಪಾದಿಸಿದ 'ಹೊಸ ಸಾಂಸ್ಕೃತಿಕ ಚರಿತ್ರೆ' ಮತ್ತು 'ಚಾರಿತ್ರಿಕ ಸಂಕಥನಗಳ ಪರಿಕಲ್ಪನೆ'ಗಳಿಗೆ ಫ್ರಾನ್ಸ್‌ನ ಲಿನ್‌ಹಂಟ್ ಹಾಗೂ ಥಾಮಸ್ ಲಾಕ್ವಿಯರ್ ಸಹಮತ ವ್ಯಕ್ತಪಡಿಸಿದರು. ಈ ಮೂಲಕ ಚರಿತ್ರೆಯ ಆಧುನಿಕ ಸಂಕಥನಗಳು ಮುನ್ನೆಲೆಗೆ ಬಂದವು.

ಪಾಶ್ಚಾತ್ಯ ಚರಿತ್ರೆ ಸಂಕಥನಗಳಲ್ಲಿ ಅತ್ಯಂತ ಮುಖ್ಯವಾದದು, ಕಳೆದ ಶತಮಾನದ ಎಂಭತ್ತರ ದಶಕದಲ್ಲಿ ಅಮೇರಿಕಾದ ಸ್ಟೀಫನ್ ಗ್ರಿನ್‌ಬ್ಲಾಟ್‌ನ ನೇತೃತ್ವದಲ್ಲಿ ಪ್ರಸಿದ್ಧಿಸಿ ಬಂದ 'ನವಚಾರಿತ್ರಿಕವಾದ' (New Historism). ಗ್ರಿನ್‌ಬ್ಲಾಟ್, ಲೂಯಿಸ್ ಮಾಂಟ್ರೋಸ್, ಮಿಶೆಲ್ ವಾರ್ನರ್, ಫ್ರೆಡರಿಕ್ ಜೇಮ್ಸ್‌ನ್ ಮತ್ತು ಕ್ಲಿಫರ್ಡ್ ಗೀಟ್ಜ್ (೧೯೨೬-೨೦೦೬) ಮೊದಲಾದವರು ಚರಿತ್ರೆ ಕುರಿತು ಮಂಡಿಸಿದ ಪ್ರಮೇಯಗಳು, ಮೀಮಾಂಸೆಗಳು ಮತ್ತು ಸಿದ್ಧಾಂತಗಳು ಚರಿತ್ರೆ, ಸಾಹಿತ್ಯ ಹಾಗೂ ಸಾಹಿತ್ಯ ವಿಮರ್ಶೆಯ ಅಧ್ಯಯನಗಳಿಗೆ ಹೊಸ ಸ್ವರೂಪವನ್ನು ನೀಡಿದವು.

ನವಚಾರಿತ್ರಿಕವಾದಕ್ಕೆ ಹೆಸರು ಕೊಟ್ಟ ಸ್ಟೀಫನ್ ಗ್ರಿನ್‌ಬ್ಲಾಟ್ ತನ್ನ ಚರಿತ್ರೆಯ ಸಿದ್ಧಾಂತವನ್ನು ರೂಪನಿಷ್ಠವಾದ, ಸಂರಚನಾವಾದ ಮತ್ತು ವಿರಚನಾವಾದಗಳಿಗೆ ತೋರಿಸಿದ ತೀವ್ರ ವಿರೋಧದ ರೂಪದಲ್ಲಿ ಪ್ರತಿಪಾದಿಸಿದನು. ಈ ಎಲ್ಲಾ ಸಿದ್ಧಾಂತಗಳು 'ಪಠ್ಯ'ದ ವಿಶ್ಲೇಷಣೆಯಲ್ಲಿ ಚರಿತ್ರೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದವು. 'ಪಠ್ಯ'ವೊಂದನ್ನೇ 'ಸ್ವಾಯತ್ತ' ಮತ್ತು 'ಸ್ವಾಭಿಮುಖರಚನೆ' ಎಂದು ಪರಿಗಣಿಸಿದ್ದವು. ಪಠ್ಯಕ್ಕೆ ಯಾವುದೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಅಗತ್ಯವಿಲ್ಲ. 'ಪಠ್ಯ' ಎನ್ನುವುದು ಹಲವು ಸಾಪೇಕ್ಷ ಓದುಗಳ ಸಂಗಮ. ಆದ್ದರಿಂದ ಪಠ್ಯಕ್ಕೆ ಅಗತ್ಯವಿರುವುದು ಕೇವಲ 'ಮುಕ್ತ ಓದು' ಮಾತ್ರ ಎನ್ನುವುದು ಈ ತತ್ವವಾದಗಳ ತರ್ಕವಾಗಿತ್ತು. ಇದನ್ನು ಗ್ರಿನ್‌ಬ್ಲಾಟ್ ತೀವ್ರವಾಗಿ ಖಂಡಿಸಿ 'ಪಠ್ಯ'ದ (Text) ವಿಶ್ಲೇಷಣೆಯಲ್ಲಿ 'ಸಂದರ್ಭ'ಕ್ಕೆ (context) ಇರುವ ಅವಿನಾಭಾವ ಮಹತ್ವನ್ನು ಪ್ರತಿಪಾದಿಸಿದನು. ಈತ, 'ಪುನರುಜ್ಜೀವನ' ಕಾಲಘಟ್ಟದ ಕೃತಿಗಳನ್ನು 'ಪಠ್ಯ' ಮತ್ತು 'ಸಂದರ್ಭ'ದ ಸಾವಯವ ಸಂಬಂಧದ ನೆಲೆಗಟ್ಟಿನಲ್ಲಿ ಸಮರ್ಥವಾಗಿ ವಿಶ್ಲೇಷಿಸಿದನು. ಆತನ 'Resonance and wonder' (೧೯೯೦) ಈ ದೃಷ್ಟಿಯಿಂದ ಒಂದು ಗಮನಾರ್ಹ ಕೃತಿಯಾಗಿದೆ.

ನವಚಾರಿತ್ರಿಕವಾದದ ಮತ್ತೊಬ್ಬ ಮಹತ್ವದ ಚಿಂತಕನಾದ ಲೂಯಿಸ್ ಮಾಂಟ್ರೋಸ್, 'ಪಠ್ಯಗಳ ಚರಿತ್ರಾತ್ಮಕತೆ ಮತ್ತು ಚರಿತ್ರೆಯ ಪಠ್ಯಾತ್ಮಕತೆ' ತತ್ವ ಪ್ರತಿಪಾದಿಸಿದನು. ಹಾಗೆಯೇ ಮಿಶೆಲ್ ವಾರ್ನರ್ 'ಪಠ್ಯ ಚಾರಿತ್ರಿಕವಾದುದು ಮತ್ತು ಚರಿತ್ರೆ ಪಠ್ಯಾತ್ಮಕವಾದುದು' ಎನ್ನುವ ಪರಿಕಲ್ಪನೆ ಮಂಡಿಸಿದನು. ಇವು ಪಾಶ್ಚಾತ್ಯ ಬೌದ್ಧಿಕ ವಲಯದಲ್ಲಿ ಪಠ್ಯಗಳಿಗೆ ಕಳೆದುಹೋಗಿದ್ದ ಚಾರಿತ್ರಿಕ ಆಯಾಮವನ್ನು ಮತ್ತೆ ದೊರಕಿಸಿಕೊಟ್ಟವು.

ಹಾಗೆಯೇ ಪ್ರೆಡ್ರಿಕ್ ಜೇಮ್ಸ್‌ನ್‌ನ 'ನಿರಂತರ ಚಾರಿತ್ರಿಕತೆ' ಹಾಗೂ ಕ್ಲಿಫರ್ಡ್ ಗೀಟ್ಸ್‌ನ 'ಚರಿತ್ರೆಯ ಆಳವಾದ ಪರಿಜ್ಞಾನ' ಪರಿಕಲ್ಪನೆಗಳು ಸಹ ಈ ನೆಲೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ನೆರವಾದವು.

ಈ ವಾದವು ಚರಿತ್ರೆಯ ವಿಶ್ಲೇಷಣೆಯಲ್ಲಿ ವಿವಿಧ ಜ್ಞಾನರೂಪಗಳ ಮತ್ತು ವಿವಿಧ ವಲಯಗಳ ಚಿಂತಕರ ವಿಚಾರಗಳನ್ನು ವ್ಯಾಪಕವಾಗಿ ಬಳಸಿಕೊಂಡಿದೆ. ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳಾದ ರೇಮಂಡ್ ವಿಲಿಯಮ್ಸ್, ಫಿಶರೆ ಮ್ಯಾರಿ, ಆಂಟೋನಿಯಾ ಗ್ರಾಂಶಿ, ಲೂಯಿಸ್ ಅಲ್ತೂಸರ್ (೧೯೧೮-೧೯೯೦), ಸಾಂಸ್ಕೃತಿಕ ಮಾನವಶಾಸ್ತ್ರಜ್ಞನಾದ ಕ್ಲಿಫರ್ಡ್ ಗೀಟ್ಸ್, ರಷ್ಯಾದ ಸಾಂಸ್ಕೃತಿಕ ವಿಮರ್ಶಕ ಮಿಖಾಯಿಲ್ ಭಾಕ್ತಿನ್ (೧೮೯೫-೧೯೭೫), ಫ್ರಾನ್ಸ್‌ನ ಸಂರಚನೋತ್ತರವಾದಿ ಮಿಶೆಲ್ ಫುಕೋ (೧೯೨೬-೧೯೮೪) ಮತ್ತು ಆಧುನಿಕ ಸ್ತ್ರೀವಾದಿ ಚಿಂತಕರ ವಿಚಾರಗಳು ನವ ಚಾರಿತ್ರಿಕವಾದದ ಚರಿತ್ರೆಯ ಸಂಕಥನಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಇದು ಬಹುಮುಖ್ಯವಾಗಿ ಒಂದು ಸಂಕರಶೀಲ ಚಿಂತನೆಯಾಗಿರುವುದರಿಂದ ಪಠ್ಯದ ಅಧ್ಯಯನದಲ್ಲಿ 'ಅಂತರ್ ಪಠ್ಯಾತ್ಮಕ' ವಿಧಾನವನ್ನು ವ್ಯಾಪಕವಾಗಿ ಬಳಸುತ್ತದೆ. ಪಠ್ಯದ ಸೌಂದರ್ಯಮೀಮಾಂಸಕ ನೆಲೆಗಳ ಬದಲು ಸಾಂಸ್ಕೃತಿಕ ನೆಲೆಗಳಲ್ಲಿ ಆಸಕ್ತಿ ತಾಳುತ್ತದೆ. ಪಠ್ಯದ ಅಭ್ಯಾಸವನ್ನು ಗಂಭೀರ 'ಸಾಂಸ್ಕೃತಿಕ ಚಟುವಟಿಕೆ' ಅಥವಾ 'ಸಾಂಸ್ಕೃತಿಕ ಪ್ರಕ್ರಿಯೆ' ಎಂದು ಭಾವಿಸುತ್ತದೆ. ಪಠ್ಯವನ್ನು ಸಾಹಿತ್ಯ ಮತ್ತು ಸಾಹಿತ್ಯೇತರ ಎಂದು ವರ್ಗೀಕರಿಸುವುದಕ್ಕೆ ತೀವ್ರವಾದ ತಾತ್ವಿಕ ವಿರೋಧ ವ್ಯಕ್ತಪಡಿಸುತ್ತದೆ. ಪಠ್ಯವನ್ನು ಸಂಸ್ಕೃತಿ ಸಂಕಥನದ ಆಕರವನ್ನಾಗಿ ನಿರ್ವಚಿಸುತ್ತದೆ.

ನವಚಾರಿತ್ರಿಕವಾದದ ಆಲೋಚನೆಗಳು ಪಾಶ್ಚಾತ್ಯ ಸಂದರ್ಭದಲ್ಲಿ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಹೊಸ ಮೀಮಾಂಸೆಗಳನ್ನು ಮಂಡಿಸಿವೆ. ಇವು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳುವುದಕ್ಕೆ ಮಹತ್ತರವಾದ ಪ್ರೇರಣೆ ನೀಡಿವೆ.

೩.೩.೨ ಕನ್ನಡ ಚರಿತ್ರೆ ಸಂಕಥನಗಳ ಸ್ವರೂಪ

ಕನ್ನಡದಲ್ಲಿ ಇತಿಹಾಸಕಾರರಿಗಿಂತ ಹೆಚ್ಚಾಗಿ ಲೇಖಕರು, ಸಂಶೋಧಕರು ಮತ್ತು ವಿಮರ್ಶಕರು ತಮ್ಮ ಸಾಹಿತ್ಯ ರಚನೆ ಹಾಗೂ ಅಧ್ಯಯನದ ಸಂದರ್ಭದಲ್ಲಿ ಚರಿತ್ರೆಯ ಸಂಕಥನಗಳನ್ನು ರೂಪಿಸಿದ್ದಾರೆ, ಇಂಥ ಪ್ರಮುಖವಾದ ಮೂರು ಸಂಕಥನಗಳಿವೆ. ಅವುಗಳೆಂದರೆ, ಅ. ಪುರಾತನವಾದಿ ಸಂಕಥನಗಳು, ಆ. ಪುನರುತ್ಥಾನವಾದಿ ಸಂಕಥನಗಳು ಮತ್ತು ಇ. ಪುನಾರಾಲೋಕನವಾದಿ ಸಂಕಥನಗಳು.

ಪುರಾತನವಾದಿ ಸಂಕಥನ ಕನ್ನಡದ ಮೊದಲ ಚರಿತ್ರೆ ಸಂಕಥನ. ಇದು ಚರಿತ್ರೆ ಕುರಿತ ಸರಳ ಮತ್ತು ಮುಗ್ಧ ಸಂಕಥನ. ಇದು ಚರಿತ್ರೆಯನ್ನು 'ಗತವಾಸ್ತವ' ಮತ್ತು 'ಸತ್ಯ ಸಂಗತಿಗಳ ಮೊತ್ತ' ಎಂದು ನಂಬುತ್ತದೆ. ಚರಿತ್ರೆ ಎನ್ನುವುದು ಒಂದು'ಪೂರ್ಣಗೊಂಡಿರುವ ಕಥೆ' ಮತ್ತು ಈ ಹಿಂದೆ ನಡೆದಿರುವ ಪ್ರಮುಖ ಘಟನಾವಳಿಗಳು ಈ ಕಥೆಯ ಮುಖ್ಯ ಅಧ್ಯಾಯಗಳು ಎಂದು ಭಾವಿಸುತ್ತದೆ. ಚರಿತ್ರೆ ಮತ್ತು ವರ್ತಮಾನಗಳ

ನಡುವೆ ಸಾತತ್ಯವಿಲ್ಲ. ಇವುಗಳ ಮಧ್ಯೆ ಒಂದು ದೊಡ್ಡ ನಿಲುಬಿಂದು (Standpoint) ಇದೆ ಎಂದು ಪ್ರತಿಪಾದಿಸುತ್ತದೆ. ರಂ.ಶ್ರೀ. ಮುಗಳಿ ಅವರ 'ಕನ್ನಡ ಸಾಹಿತ್ಯ ಚರಿತ್ರೆ' (೧೯೫೩), 'ಕರ್ನಾಟಕ ಪರಂಪರೆ' ಸಂಪುಟಗಳು (೧೯೯೨), ಬೆಂಗಳೂರು ವಿಶ್ವವಿದ್ಯಾಲಯದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' (೧೯೭೭), ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟಗಳು, ಎಂ.ವಿ. ಸೀತಾರಾಮಯ್ಯ ಅವರ 'ಶ್ರೀವಿಜಯಕೃತ ಕವಿರಾಜಮಾರ್ಗ' (೧೦೬೮) ಎಂ.ಎ. ಕಲ್ಬುರ್ಗಿ ಅವರ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' (೧೯೭೩) ಮೊದಲಾದ ಕೃತಿಗಳನ್ನು ಈ ಮಾದರಿಯ ಪ್ರಾತಿನಿಧಿಕ ರಚನೆಗಳೆಂದು ಹೆಸರಿಸಬಹುದು.

ಕರ್ನಾಟಕದ ಚರಿತ್ರೆಯಲ್ಲಿ ಸಹ ಪ್ರಾಚೀನ ಗ್ರೀಕ್ ಮತ್ತು ಪ್ರಾಚೀನ ಭಾರತದ ಇತಿಹಾಸದಲ್ಲಿ ಇದ್ದಂತೆ 'ಆದರ್ಶ ಸುವರ್ಣ ಯುಗ' ಒಂದು ಇತ್ತು. ಅದೀಗ ಸಂಪೂರ್ಣ ನಾಶವಾಗಿದೆ. ಜೀವನದ ಉದಾತ್ತ ಮೌಲ್ಯಾದರ್ಶಗಳು ಮತ್ತು ಉಚ್ಚ್ರಾಯ ಸಾಂಸ್ಕೃತಿಕ ಸಾಧನೆಯ ಆ ಗತಯುಗದ ಮರುಸ್ಥಾಪನೆಯೇ ಚರಿತ್ರೆಯ ಸಂಶೋಧನೆಯ ಮುಖ್ಯ ಉದ್ದೇಶ ಎಂದು ಭಾವಿಸಿಕೊಂಡಿರುವ ಸಂಕಥನವೇ ಚರಿತ್ರೆಯ ಪುನರುತ್ಥಾನವಾದಿ ಸಂಕಥನ. ಈ ಸಂಕಥನವನ್ನು ವರ್ತಮಾನದ ಚಾರಿತ್ರಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಿಷಮತೆಗಳಿಗೆ ಹಾಗೂ ವಿಕೃತಿಗಳಿಗೆ ಪರಿಹಾರವೆನ್ನುವಂತೆ ಭಾವಿಸಿಕೊಂಡು ಕಟ್ಟಲಾಗಿರುತ್ತದೆ. ಆಲೂರ ವೆಂಕಟರಾಯರ 'ಕರ್ನಾಟಕ ಗತವೈಭವ' (೧೯೧೭), ಚ.ವಾಸುದೇವಯ್ಯ ಅವರ 'ಆರ್ಯಕೀರ್ತಿ', ಎಂ. ಚಿದಾನಂದಮೂರ್ತಿ ಮತ್ತು ಎಂ.ಎಂ. ಕಲ್ಬುರ್ಗಿ ಅವರ ಚರಿತ್ರೆಯ ಸಂಕಥನಗಳ ಪ್ರಧಾನ ಭಿತ್ತಿ ಇದೇ ಆಗಿದೆ. ಇಲ್ಲಿಯೂ ಸಹ ಚರಿತ್ರೆಯನ್ನು 'ಮುಗಿದು ಹೋಗಿರುವ ಕಥೆ' ಎಂದೇ ಭಾವಿಸಲಾಗುತ್ತದೆ.

ಇತಿಹಾಸವು ವರ್ತಮಾನದಲ್ಲೂ ವಿವಿಧ ರೂಪ ಮತ್ತು ವಿರೂಪಗಳಲ್ಲಿ ಜೀವಂತವಾಗಿ ಮುಂದುರೆಯುತ್ತಿರುತ್ತದೆ ಎನ್ನುವುದು ಈ ಎರಡೂ ಸಂಕಥನಗಳಿಗೆ ಅಳವಡದ ವಿಚಾರವಾಗಿದೆ.

ಈ ಸಂಕಥನಗಳಿಗೆ ಸಂಪೂರ್ಣ ಭಿನ್ನವಾಗಿರುವುದು ಪುನಾರಾಲೋಕನವಾದಿ ಸಂಕಥನ. ಇದು ಚರಿತ್ರೆಯನ್ನು ಮುಗಿದ ಅಥವಾ ಪೂರ್ಣಗೊಂಡ ಕತೆಯೆಂದು ಭಾವಿಸುವುದಿಲ್ಲ. ಪ್ರತ್ಯೇಕ, ತಟಸ್ಥ ಅಥವಾ ಸ್ವಾಯತ್ತ ಸ್ಥಿತಿ ಎಂದು ನಂಬುವುದಿಲ್ಲ. ಚರಿತ್ರೆ ಮತ್ತು ವರ್ತಮಾನದ ನಡುವೆ ನಿಲುಬಿಂದುವಿದೆ ಎಂದು ಪ್ರತಿಪಾದಿಸುವುದಿಲ್ಲ. ಬಹಳ ಮುಖ್ಯವಾಗಿ ಚರಿತ್ರೆಯಲ್ಲಿ 'ಆದರ್ಶ' ಅಥವಾ 'ಸುವರ್ಣಯುಗ' ಎನ್ನುವುದನ್ನು ಒಂದು 'ಕಲ್ಪಿತ ಆದರ್ಶ' ಅಥವಾ 'ಭ್ರಮೆ' ಎಂದು ಈ ಸಂಕಥನ ಭಾವಿಸುತ್ತದೆ.

ಕನ್ನಡದಲ್ಲಿ ಈ ಸಂಕಥನ ಬಹಳ ಮುಖ್ಯವಾಗಿ ನವ್ಯೋತ್ತರ ಕಾಲಘಟ್ಟದ ಬೆಳವಣಿಗೆ. ವಿವಿಧ ಮಾರ್ಕ್ಸ್‌ವಾದಿ ಚರಿತ್ರೆ ಸಂಕಥನಗಳು, ದಲಿತವಾದಿ ಹಾಗೂ ಮಹಿಳಾವಾದಿ ಚರಿತ್ರೆ ಸಂಕಥನಗಳು ಈ ಬಗೆಯವು. ಪಾಶ್ಚಾತ್ಯ ಪ್ರೇರಣೆಗಳ ಯಥಾರ್ಥ ಅನ್ವಯಿಸುವಿಕೆಯಿಂದ ಕೆಲವೊಮ್ಮೆ ಇಂಥ ಸಂಕಥನಗಳಿಗೆ ಅನೇಕ ಗಂಭೀರವಾದ ಮಿತಿಗಳೂ ಸಹ ಒದಗಿವೆ. ಸಿ. ವೀರಣ್ಣ ಅವರ 'ಕನ್ನಡ ಸಾಹಿತ್ಯ ಚಾರಿತ್ರಿಕ

ಬೆಳವಣಿಗೆ-೧' (೧೯೮೬), ಮತ್ತು 'ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ-೨' (೨೦೧೧) ಕೃತಿಗಳು, ಆರಂಭಕಾಲೀನ ಸ್ತ್ರೀವಾದಿ ಸಂಕಥನಗಳು ಹಾಗೂ ದಲಿತ ಸಂಕಥನಗಳು ಇದಕ್ಕೆ ಕೆಲವು ನಿದರ್ಶನಗಳು. ಆದರೆ, ಮುಂದಿನ ದಿನಗಳಲ್ಲಿ ಈ ಸಂಕಥನಗಳು ತಮ್ಮ ಈ ಮಿತಿಗಳಿಂದ ಹೊರಬರುವ ಗಂಭೀರ ಪ್ರಯತ್ನಗಳನ್ನು ಮಾಡಿರುತ್ತವೆ.

ಕನ್ನಡದ ಪುನಾರಾಲೋಕನವಾದಿ ಸಂಕಥನಗಳಿಗೆ ಕಲ್ಬುರ್ಗಿ ಅವರ 'ಅನುಭಾವ ಸಾಹಿತ್ಯ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' (೧೯೮೮); 'ನಕ್ಷೆ ನಕ್ಷತ್ರ' (೨೦೧೦) ಮತ್ತು 'ಮಹಾಸತಿ: ಒಂದು ಅಧ್ಯಯನ'; ಮ.ನ.ಜ. ಅವರ 'ದಲಿತವರ್ಗದ ಶರಣ ಶರಣೆಯರು' (೧೯೯೭); ಸಿ. ವೀರಣ್ಣ ಅವರ 'ಹನ್ನೆರಡನೆಯ ಶತಮಾನದ ಕಾಯಕ ಜೀವಿಗಳ ಚಳವಳಿ' (೧೯೮೬); ಮಾಲಗತ್ತಿ ಅವರ 'ದಲಿತ ಯುಗ ಮತ್ತು ಕನ್ನಡ ಸಾಹಿತ್ಯ' (೧೯೯೯); ರಾಜಾರಾಂ ಹೆಗ್ಗಡೆ ಅವರ 'ಗತ ಕಥನ' (೨೦೦೫) ಮತ್ತು 'ಲೌಕಿಕ ಅಲೌಕಿಕ'; ರಹಮತ್ ತರೀಕೆರೆ ಅವರ 'ಮತ, ಧರ್ಮ, ಪಂಥ ಮತ್ತು ಸಂಸ್ಕೃತಿ' ಕುರಿತ ಬರಹಗಳು ಹಾಗೂ ಡಿ.ಆರ್. ಅವರ 'ಸಾಹಿತ್ಯ ಕಥನ' (೧೯೯೬) ಮತ್ತು 'ಸಂಸ್ಕೃತಿ ಕಥನ' (೨೦೦೨)ಕೃತಿಗಳನ್ನು ಮುಖ್ಯ ನಿದರ್ಶನಗಳಾಗಿ ಹೆಸರಿಸಬಹುದು.

ಕೆ.ವಿ. ಸುಬ್ಬಣ್ಣ ಅವರ 'ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು' (೨೦೦೦) ಕನ್ನಡದ ಪುನಾರಾಲೋಕನವಾದಿ ಚರಿತ್ರೆ ಸಂಕಥನಕ್ಕೆ ಅತ್ಯುತ್ತಮ ಪ್ರಾತಿನಿಧಿಕ ಕೃತಿಯಾಗಿದೆ.

೩.೩.೩ ಸಾಹಿತ್ಯ ಮೀಮಾಂಸೆ

ಸಾಹಿತ್ಯದ ಸ್ವರೂಪ, ಉದ್ದೇಶ ಮತ್ತು ಪ್ರಯೋಜನಗಳನ್ನು ಕುರಿತು ಚರಿತ್ರೆ ಸಂಕಥನಗಳು ಬಹುರೂಪಿ ಸಾಹಿತ್ಯ ಮೀಮಾಂಸೆಗಳನ್ನು ರೂಪಿಸಿದವು. ಇವು ಸಾಹಿತ್ಯ ಮತ್ತು ಚರಿತ್ರೆಗಳಿಗಿರುವ ಸಂಬಂಧವನ್ನು ಹಲವು ಅರ್ಥಪೂರ್ಣ ನೆಲೆಗಳಲ್ಲಿ ವಿಶ್ಲೇಷಿಸಿದವು.

ನವ್ಯ ಸಾಹಿತ್ಯದ ಅಚಾರಿತ್ರಿಕ ಮತ್ತು ಅಸಾಮಾಜಿಕ ಮೀಮಾಂಸೆಯನ್ನು ಈ ನೂತನ ಮೀಮಾಂಸೆಗಳು ತೀವ್ರವಾಗಿ ವಿರೋಧಿಸಿದವು. ಸಾಹಿತ್ಯದ ವ್ಯಕ್ತಿವಾದಿ ಮತ್ತು ವಸ್ತುನಿಷ್ಠೆ ಧೋರಣೆಗಳ ಬದಲಾಗಿ ಇವು ಸಂದರ್ಭನಿಷ್ಠ ಹಾಗೂ ಸಂಸ್ಕೃತಿನಿಷ್ಠ ಧೋರಣೆಗಳನ್ನು ಮಂಡಿಸಿದವು.

ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಪರಂಪರೆ ಮತ್ತು ಚರಿತ್ರೆಗೆ ಇರುವ ಸಂಬಂಧದ ಸಂಕೀರ್ಣ ಆಯಾಮಗಳ ಹಿನ್ನೆಲೆಯಲ್ಲಿ ಹಲವು ಹೊಸ ಸಾಹಿತ್ಯ ಮೀಮಾಂಸೆಗಳು ಮುನ್ನೆಲೆಗೆ ಬಂದವು. ಪಂಪನನ್ನು ಕುರಿತು ಈ ಅವಧಿಯಲ್ಲಿ ಹೊಸ ಅಧ್ಯಯನಗಳಾದವು. ವಚನ ಚಳವಳಿಯನ್ನು ಭಿನ್ನ ನೆಲೆಗಳಲ್ಲಿ ವಿಶ್ಲೇಷಿಸಲಾಯಿತು. ಚರಿತ್ರೆಯಲ್ಲಿ ನಿರ್ಲಕ್ಷಕ್ಕೆ ಒಳಗಾದವರು ರಚಿಸಿದ್ದ ಸಾಹಿತ್ಯವನ್ನು ಮತ್ತು ನಿರ್ಲಕ್ಷಿಸಲಾಗಿದ್ದ ಸಾಹಿತ್ಯವನ್ನು ಮುಖ್ಯವೆಂದು ಪರಿಗಣಿಸುವ ಪ್ರವೃತ್ತಿ ಪ್ರಾರಂಭವಾಯಿತು. ಅಲಕ್ಷಿತ ಸಾಹಿತ್ಯ ಮತ್ತು ಸಾಹಿತ್ಯದ ಅಲಕ್ಷಿತ ನೆಲೆಗಳನ್ನು ವಿಶ್ಲೇಷಿಸುವುದಕ್ಕಾಗಿ 'ಅಲಕ್ಷಿತ ಸಾಹಿತ್ಯ ಮೀಮಾಂಸೆ' ಚಾಲನೆಗೆ ಬಂದಿತು. ಜಾನಪದ

ಮತ್ತು ಮೌಖಿಕ ಸಾಹಿತ್ಯಗಳು ಚರಿತ್ರೆಯನ್ನು ಅನುಸಂಧಾನ ಮಾಡಿರುವ ಕ್ರಮಗಳನ್ನು ಶೋಧಿಸುವ ಉದ್ದೇಶದ ಹಿನ್ನೆಲೆಯಲ್ಲಿ 'ಜಾನಪದ ಸಾಹಿತ್ಯ ಮೀಮಾಂಸೆ'ಯನ್ನು ಕಟ್ಟಲಾಯಿತು. ಜಾನಪದ ಸಾಹಿತ್ಯದಲ್ಲಿರುವ ಮಹಿಳಾ ಸಂವೇದನೆ, ಮಹಿಳಾ ಅಭಿವ್ಯಕ್ತಿಯ ವಿಶಿಷ್ಟ ನೆಲೆಗಳು, ಬಂಡಾಯದ ಆಯಾಮಗಳು ಮೊದಲಾದವು ಈ ಮೀಮಾಂಸೆಯ ಮುಖ್ಯ ಕಾಳಜಿಗಳಾದವು. ತರೀಕೆರೆ ಅವರ 'ಮರದೊಳಗಣ ಕಿಚ್ಚು' (೧೯೯೬) ಇಂಥ ಒಂದು ಮುಖ್ಯ ಕೃತಿ. ಹಾಗೆಯೇ, ಹಿ.ಶಿ. ರಾಮಚಂದ್ರೇಗೌಡ ಪುರುಷೋತ್ತಮ ಬಿಳಿಮಲೆ ಮತ್ತು ಸತ್ಯನಾಥ್ ಅವರ ಜಾನಪದ ಅಧ್ಯಯನಗಳು ಈ ದೃಷ್ಟಿಯಿಂದ ಗಮನಾರ್ಹವಾದವು.

ಈ ಮೀಮಾಂಸೆಗಳು ಇದುವರೆಗೂ ಅಷ್ಟೇನೂ ಪ್ರಾಮುಖ್ಯತೆ ಗಳಿಸದಿದ್ದ ಅನುಭಾವಿಗಳು, ತತ್ವಪದಕಾರರು, ಸೂಫಿಸಂತರು, ಅವಧೂತರು ಮತ್ತು ಬುಡಕಟ್ಟು ಜನರ ಅಭಿವ್ಯಕ್ತಿಗಳು ಸಮಾಜ ಹಾಗೂ ಸಂಸ್ಕೃತಿಯೊಡನೆ ನಡೆಸಿರುವ ವಾಗ್ವಾದದ ವಿಭಿನ್ನ ನೆಲೆಗಳ ಸ್ವರೂಪವನ್ನು ಕುರಿತು ಅಭ್ಯಸಿಸುವುದಕ್ಕಾಗಿ 'ಅನುಭಾವ ಸಾಹಿತ್ಯ ಮೀಮಾಂಸೆ'ಯನ್ನು ರೂಪಿಸಿದವು. ಶಿಶುನಾಳ ಷರೀಫರು ಹಾಗೂ ಇನ್ನಿತರ ತತ್ವಪದಕಾರರು ವಸಾಹತುಶಾಹಿಗೆ ತೋರಿಸಿರುವ ತಮ್ಮ ನಿಷ್ಠುರ ಪ್ರತಿರೋಧದ ನೆಲೆಗಳನ್ನು ಶೋಧಿಸುವ ಗಂಭೀರ ಪ್ರಯತ್ನಗಳನ್ನು ಮಾಡಲಾಯಿತು. ಇವು ಮಲೆ ಮಾದೇಶ್ವರ, ಮಂಟೇಸ್ವಾಮಿ, ಕಾಡುಗೊಲ್ಲ ಮತ್ತು ಹಾಲುಮತ ಮೊದಲಾದ ಜಾನಪದ ಮಹಾಕಾವ್ಯಗಳು ಪ್ರಾಚೀನ ಪರಂಪರೆ ಮತ್ತು ಸಮಕಾಲೀನ ಸಮಾಜವನ್ನು ವಿಶ್ಲೇಷಿಸಿರುವ ಹಾಗೂ ಮುಖಾಮುಖಿಯಾಗಿರುವ ಸ್ವರೂಪವನ್ನು ಹೆಚ್ಚು ಆಸಕ್ತಿಯಿಂದ ಅಧ್ಯಯನ ಮಾಡುವ ಪ್ರವೃತ್ತಿಯನ್ನು ಹುಟ್ಟುಹಾಕಿದವು.

ಹೀಗೆ ಕನ್ನಡದ ಈ ಹೊಸ ಸಾಹಿತ್ಯ ಮೀಮಾಂಸೆಗಳು ಸಾಹಿತ್ಯವನ್ನು 'ಸಾಂಸ್ಕೃತಿಕ ಪಠ್ಯ'ವೆಂದು ಪರಿಭಾವಿಸುವ ಪಾಶ್ಚಾತ್ಯ ಮೀಮಾಂಸೆಗಳಿಗಿಂತ ಭಿನ್ನವಾದ ಮತ್ತು ವ್ಯಾಪಕವಾದ ಆಯಾಮಗಳಲ್ಲಿ ಗ್ರಹಿಸುವ ಪ್ರಯತ್ನ ಮಾಡಿದವು. ಈ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಸಹ ಅಗಾಧ ಪ್ರಮಾಣದಲ್ಲಿ ಪಲ್ಲಟಗೊಳಿಸಿದವು.

೩.೪ ಸಾಹಿತ್ಯ ಸಂಕಥನಗಳು

ಸಾಹಿತ್ಯದ ಸ್ವರೂಪ, ಉದ್ದೇಶ, ಪ್ರಯೋಜನ ಮತ್ತು ಮಹತ್ವಗಳನ್ನು ಕುರಿತು ಇಪ್ಪತ್ತನೆಯ ಶತಮಾನದ ಆರಂಭದಿಂದ ಅನೇಕ ಮೂಲಭೂತವಾದ ಪ್ರಶ್ನೆಗಳು ಹುಟ್ಟಿಕೊಂಡವು. ಸಾಹಿತ್ಯದ ಆಶಯಗಳನ್ನು ಮತ್ತು ಕಾರ್ಯಮಾದರಿಗಳನ್ನು ಕುರಿತು ಹಲವು ವ್ಯಾಖ್ಯಾನಗಳು ಪ್ರತಿಪಾದನೆಯಾದವು. ಇದರಿಂದ, ಸಾಹಿತ್ಯದ ಮೂಲಪರಿಕಲ್ಪನೆಗಳ ಅರ್ಥದ ನೆಲೆಗಳು ವ್ಯಾಪಕವಾಗಿ ಸ್ಥಿತ್ಯಂತರಗೊಂಡವು.

ಸಾಹಿತ್ಯ ಸ್ವರೂಪ ಕುರಿತು ಈ ಸಾಹಿತ್ಯ ಸಂಕಥನಗಳುಮಾಡಿದ ಆಧುನಿಕವಾದ ಮತ್ತು ಸಂಕೀರ್ಣವಾದ ವ್ಯಾಖ್ಯಾನಗಳಿಂದ ಪ್ರಚಲಿತದಲ್ಲಿದ್ದ ಪ್ರಖ್ಯಾತ ಸಾಹಿತ್ಯ ಮೀಮಾಂಸೆಗಳು ಬಹುತೇಕ

ಅಪ್ರಸ್ತುತವಾದವು. ಇವುಗಳ ಸ್ಥಾನದಲ್ಲಿ ಪ್ರಚಾರಕ್ಕೆ ಬಂದ ನೂತನ ಸಾಹಿತ್ಯ ಮೀಮಾಂಸೆಗಳು, ಸಾಹಿತ್ಯ ಸ್ವರೂಪ ಕುರಿತು ಬಹುರೂಪಿಯಾದ ಮತ್ತು ಹಲವೊಮ್ಮೆ ವೈರುಧ್ಯಾತ್ಮಕವಾದ ಪರಿಕಲ್ಪನೆಗಳು, ಪ್ರಮೇಯಗಳು ಹಾಗೂ ಸೈದ್ಧಾಂತಿಕ ಆಕೃತಿಗಳನ್ನು ಮಂಡಿಸಿದವು. ಇವುಗಳ ಸಮಷ್ಟಿ ಪರಿಣಾಮವಾಗಿ ಕಳೆದ ಶತಮಾನದ ಉತ್ತರಾರ್ಧದಿಂದ ಸಾಹಿತ್ಯ ವಿಮರ್ಶೆಯ ಸ್ಥಾಪಿತ ನೆಲೆಗಳೂ ಕೂಡಾ ಗಂಭೀರವಾದ ಪಲ್ಲಟಗಳಿಗೆ ಒಳಗಾದವು. ವಿಮರ್ಶೆಯಲ್ಲಿ ಹೊಸ ತಾತ್ವಿಕ ಚಹರೆಗಳು, ಆಧುನಿಕ ವಿಶ್ಲೇಷಣಾ ವಿಧಾನಗಳು ಮತ್ತು ಹೊಸ ದೃಷ್ಟಿಕೋನಗಳು ದೊಡ್ಡ ಪ್ರಮಾಣದಲ್ಲಿ ಚಾಲನೆಗೆ ಬಂದವು.

ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ಸಂಕಥನಗಳು ತಮ್ಮ ವಿಭಿನ್ನ ಕಾಲಘಟ್ಟಗಳ ಚಾರಿತ್ರಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಹಿತ್ಯಕ ಆಶೋತ್ತರಗಳ ಫಲವಾಗಿ ರೂಪುಗೊಂಡಿವೆ. ಆದ್ದರಿಂದ ಇವುಗಳಲ್ಲಿ ಕೆಲವು ಮುಖ್ಯವಾದ ಭಿನ್ನತೆ ಮತ್ತು ವಿಶಿಷ್ಟತೆಗಳಿವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ಇಲ್ಲಿ ಪ್ರತ್ಯೇಕ ನೆಲೆಯಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

೩.೪.೧ ಪಾಶ್ಚಾತ್ಯ ಸಾಹಿತ್ಯ ಸಂಕಥನಗಳ ಸ್ವರೂಪ

ಪಾಶ್ಚಾತ್ಯ ಸಾಹಿತ್ಯ ಸಂಕಥನಗಳು ಮುಖ್ಯವಾಗಿ ಸಾಹಿತ್ಯದ ಮೂಲ ಪರಿಕಲ್ಪನೆಗಳನ್ನು ಕೇಂದ್ರೀಕರಿಸಿ ನಡೆದಿರುವಂತೆ ತೋರುತ್ತದೆ. ಇಂಥ ಮುಖ್ಯವಾದ ಮೂರು ಪರಿಕಲ್ಪನೆಗಳನ್ನು ಗುರುತಿಸಬಹುದು. ಅವುಗಳೆಂದರೆ, ಅ. ಕೃತಿಕಾರನ ಪರಿಕಲ್ಪನೆ ಆ. ಕೃತಿಯ ಪರಿಕಲ್ಪನೆ ಮತ್ತು ಇ. ಸಾಹಿತ್ಯದ ಪರಿಕಲ್ಪನೆ. ಈ ಪ್ರತಿಯೊಂದು ಪರಿಕಲ್ಪನೆಯ ಅರ್ಥವಿಕಾಸವು ವಿಭಿನ್ನ ಜ್ಞಾನಶಿಸ್ತುಗಳ ವೈವಿಧ್ಯಮಯ ಚಿಂತನೆಗಳ ನಡುವೆ ನಡೆದ ತಾತ್ವಿಕ ಚರ್ಚೆಯ ಪರ ಮತ್ತು ವಿರೋಧದ ಅಭಿಪ್ರಾಯಗಳ ಒಟ್ಟಾರೆ ಫಲಿತವಾಗಿದೆ.

'ಕೃತಿಕಾರ' ಎಂದರೆ ಯಾರು, ಅವನ ನಿಜವಾದ ಸ್ವರೂಪ ಏನು ಎನ್ನುವ ಪ್ರಶ್ನೆಗಳಿಗೆ ಪಾಶ್ಚಾತ್ಯ ಸಾಹಿತ್ಯ ಸಂಕಥನಗಳು ಕೊಟ್ಟಿರುವ ಉತ್ತರ ಅತ್ಯಂತ ಕುತೂಹಲಕರವಾಗಿದೆ ಮತ್ತು ಅರ್ಥಪೂರ್ಣವಾಗಿದೆ. ಟಿ.ಎಸ್. ಎಲಿಯಟ್, ಕೃತಿಕಾರ ಕೇಂದ್ರಿತ 'ಚಾರಿತ್ರಿಕ ವಿಮರ್ಶೆ' ಅಥವಾ 'ಜೀವನಚರಿತ್ರಾತ್ಮಕ ವಿಮರ್ಶೆ'ಯ ಧೋರಣೆಗಳನ್ನು ಖಂಡಿಸಿ 'ಚಾರಿತ್ರಿಕ ಪ್ರಜ್ಞೆ'ಗೆ ಪ್ರಾಧಾನ್ಯತೆ ನೀಡಿದ್ದಾಗ ಸಹ, ಕೃತಿಕಾರ ಪರಿಕಲ್ಪನೆಯ ಅರ್ಥ ಮತ್ತು ಮಹತ್ವಕ್ಕೆ ಬಹುದೊಡ್ಡ ಚ್ಯುತಿಯೇನೂ ಬಂದಿರಲಿಲ್ಲ. ಆದರೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ವಿವಿಧ ಪ್ರಸ್ಥಾನಗಳ ಚಿಂತಕರು ಈ ಪರಿಕಲ್ಪನೆಯ ರೂಢಿಗತ ಅರ್ಥದ ಸ್ತರಗಳನ್ನು ವಿರೋಧಿಸಿ ಅರ್ಥದ ಹೊಸ ಸಾಧ್ಯತೆಗಳನ್ನು ಮತ್ತು ಆಯಾಮಗಳನ್ನು ಮಂಡಿಸಿದರು.

ಫ್ರಾನ್ಸ್‌ನ ಪ್ರಸಿದ್ಧ ಸಂರಚನೋತ್ತರವಾದಿ ಚಿಂತಕ ರೊಲಾಂಡ್ ಬಾರ್ಥ್ಸ್ (೧೯೧೫-೧೯೮೦), ತನ್ನ 'ದ ಡೆತ್ ಆಫ್ ಆಥರ್' (೧೯೬೮) ಲೇಖನದಲ್ಲಿ 'ಕೃತಿಗಾರ' ಅಥವಾ 'ಲೇಖಕ'ನನ್ನು ಕುರಿತು ಮೊಟ್ಟ ಮೊದಲ ಬಾರಿಗೆ ಗಂಭೀರವಾದ ಹಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದನು. ಕೃತಿಗಾರ ಪಠ್ಯದ ನಿರ್ಮಾಪಕ ಎನ್ನುವ ಪೊಸಿಟಿವಿಸ್ಟ್ ಧೋರಣೆ ಹುರುಳಿಲ್ಲದ್ದು ಮತ್ತು ಅತ್ಯಂತ ಅಪಾಯಕಾರಿಯಾದದ್ದು.

ಇದು 'ಪಠ್ಯ'ವನ್ನು ವ್ಯಕ್ತಿಕೇಂದ್ರಿತ ಏಕಾರ್ಥದ ರಚನೆ ಎನ್ನುವಂತೆ ಪಠ್ಯಕ್ಕೆ ಸೀಮಿತಾರ್ಥ ಕಲ್ಪಿಸಿದೆ. ಆದರೆ ಪಠ್ಯದ ಅರ್ಥ ಅನಿರ್ದಿಷ್ಟ ಹಾಗೂ ಬಹುರೂಪಿ. ಪಠ್ಯದ ಈ ವಿಶಿಷ್ಟತೆ ಉಳಿಯಬೇಕಾದರೆ ಪಠ್ಯ ಪ್ರಪಂಚದಿಂದ ಆತನನ್ನು ಉಚ್ಚಾಟಿಸಬೇಕು ಎನ್ನುವುದು ಈತನ ತರ್ಕ. ಇದನ್ನು ಕುರಿತು ಬಾರ್ಥ್ ಲೇಖಕನನ್ನು ಹೀಗೆ "ಪಠ್ಯ ಪ್ರಪಂಚದಿಂದ ಹೊರಹಾಕಿದರೆ ಪಠ್ಯವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಫಲಪ್ರದವಾಗುತ್ತದೆ. ಪಠ್ಯವು ಲೇಖಕನ ರಚನೆ ಎನ್ನುವುದನ್ನು ಒಪ್ಪಿಕೊಂಡರೆ ಅದನ್ನು ಕುರಿತು ಏನನ್ನೂ ಬರೆಯಲು ಸಾಧ್ಯವಿಲ್ಲದ ಹಾಗೆ ಮಿತಿ ಹೇರಿದಂತೆ ಆಗುತ್ತದೆ. ಹಾಗೆ ನೋಡಿದರೆ, ಈ ದೃಷ್ಟಿಕೋನ ವಿಮರ್ಶೆಗೆ ಬಂದು ರೀತಿ ಉಪಯುಕ್ತವಾದುದೇ ಆಗಿದೆ. ಏಕೆಂದರೆ ಇದರಿಂದ ಪಠ್ಯವನ್ನು ಅರ್ಥೈಸಿಕೊಳ್ಳುವುದಕ್ಕೆ ಬದಲಾಗಿ ಲೇಖಕನನ್ನು ಪತ್ತೆ ಹಚ್ಚುವ (ಅಥವಾ ಆತನ ಸಮಾಜ, ಚರಿತ್ರೆ, ಮನಸ್ಸು, ಸ್ವಾತಂತ್ರ್ಯ) ಮಹತ್ತರ ಕಾರ್ಯವನ್ನು ಕಲ್ಪಿಸುತ್ತದೆ. ಲೇಖಕನನ್ನು ಕಂಡು ಹಿಡಿದರೆ ಪಠ್ಯವನ್ನೇ 'ವಿಶ್ಲೇಷಿಸಿದಂತೆ' ಆಗುತ್ತದೆ ವಿಮರ್ಶಕ ಜಯಶಾಲಿಯಾಗುತ್ತಾನೆ"[೧] ಎಂದು ವಿಡಂಬಿಸುತ್ತಾನೆ. ಅಂತಿಮವಾಗಿ ಪಠ್ಯದ ಬಹುರೂಪಿ ಅರ್ಥಗಳ ನಿಜವಾದ ಸೃಷ್ಟಿಕರ್ತನೆಂದರೆ ಓದುಗ. ಈತನೇ ಪಠ್ಯದ ಹುಟ್ಟು, ವಿಕಾಸ ಮತ್ತು ವಿಸ್ತಾರ ಎಲ್ಲಕ್ಕೂ ಮೂಲ. ಆದ್ದರಿಂದಲೇ ಬಾರ್ಥ್ಸ್ 'ಲೇಖಕನ ಸಾವಿನ ಮೂಲಕವೇ ಓದುಗ ಹುಟ್ಟುತ್ತಾನೆ' ಎಂದು ವ್ಯಾಖ್ಯಾನಿಸುತ್ತಾನೆ.

ಬಾರ್ಥ್ಸ್‌ನ ಲೇಖನಕ್ಕೆ ಪ್ರತಿಕ್ರಿಯೆಯಾಗಿ, ಫ್ರಾನ್ಸ್‌ನ ಸಂರಚನೋತ್ತರ ಚಿಂತಕ ಮಿಶೆಲ್ ಫುಕೋ ಬರೆದ 'ವಾಟ್ ಇಸ್ ಆ್ಯನ್ ಆಥರ್' (೧೯೬೯) ಲೇಖನವು 'ಕೃತಿಕಾರ'ನ ಪರಿಕಲ್ಪನೆಗೆ ಅರ್ಥದ ಹೊಸ ಆಯಾಮಗಳನ್ನು ಕಲ್ಪಿಸಿತು. ಫುಕೋ ಈ ಲೇಖನದಲ್ಲಿ 'ಕೃತಿಕಾರ'ನನ್ನು 'ಪಠ್ಯ' ಮತ್ತು 'ಓದುಗ'ನ ನಡುವಿನ ಪ್ರಮುಖ ಕೊಂಡಿ ಅಥವಾ ಮಾಧ್ಯಮ ಎನ್ನುವ ನಿಲುವನ್ನು ನಿರಾಕರಿಸುತ್ತಾನೆ. ಹಾಗೆಯೇ, ಪಠ್ಯ ಪ್ರಪಂಚದಿಂದ ಲೇಖಕನನ್ನು ಹೊರಹಾಕುವುದು ಸಾಧ್ಯವಿಲ್ಲ. ಏಕೆಂದರೆ ಲೇಖಕ ಕೇವಲ ಕೃತಿಯ ಭೌತಿಕ ನಿರ್ಮಾಪಕನಾಗಿ ಮಾತ್ರ ಉಳಿದಿರುವುದಿಲ್ಲ. ಆತನ ಸ್ವರೂಪ ಬೇರೊಂದು ವಿಶಿಷ್ಟ ವಿನ್ಯಾಸದಲ್ಲಿ ಇರುತ್ತದೆ. ಅದು 'ಪಠ್ಯ' ಮತ್ತು 'ಓದುಗರ' ನಡುವಿನ ಸಂಬಂಧಗಳನ್ನು ಸಾಧ್ಯಗೊಳಿಸುವ ಕಾರ್ಯಮಾದರಿಗಳ (functions) ರೂಪದಲ್ಲಿ ಆಕಾರ ಪಡೆದಿರುತ್ತದೆ ಎಂದು ವಿಶ್ಲೇಷಿಸಿದನು. 'ಕೃತಿಕಾರ'ನೆಂದರೆ ಕೇವಲ ಬರಹಗಾರ ಅಥವ ಕೃತಿಯ ನಿರ್ಮಾಪಕ ಎನ್ನುವುದನ್ನು ಒಪ್ಪದ ಫುಕೋ 'ಸಮಾಜ ಮತ್ತು ಸಂಸ್ಕೃತಿಗಳಲ್ಲಿ ಅಂತರ್ನಿಹಿತವಾಗಿರುವ ಸಂಕಥನಗಳ (discourse), ಅವುಗಳ ರಚನೆ ಮತ್ತು ಕಾರ್ಯಾಚರಣೆಗಳ ಸ್ವರೂಪವನ್ನು ನಿರೂಪಿಸುವವನೆ 'ಕೃತಿಕಾರ' ಎಂದು ವ್ಯಾಖ್ಯಾನಿಸುತ್ತಾನೆ. ಕೃತಿಕಾರ ಅಥವಾ ಲೇಖಕ ಕೆಲವೊಮ್ಮೆ ಕೃತಿಯ ರಚನಕಾರನಾಗಿಯೂ ಹಾಗೂ ಸಿದ್ಧಾಂತಗಳ, ಪರಂಪರೆಗಳ ಅಥವಾ ಜ್ಞಾನರೂಪಗಳ ವಾಹಕವಾಗಿಯೂ ನಾಗರೀಕತೆಯಷ್ಟು ಪುರಾತನವಾಗಿ ಸಂಕಥನ ರೂಪಗಳಲ್ಲಿ ಉಳಿದಿರುತ್ತಾನೆಂದು ಪ್ರತಿಪಾದಿಸುತ್ತಾನೆ. ಆನಂತರ ಇದಕ್ಕೆ ಸಮರ್ಥನೆಯನ್ನುವಂತೆ ಸಿಯಾನ್ ಬರ್ಕ್‌ನ 'ದ ಡೆತ್ ಆಂಡ್

ರಿಟರ್ನ್ ಆಫ್ ದ ಆಥರ್' (೧೯೯೮) ಎನ್ನುವ ಕೃತಿಯು, ಕೃತಿಕಾರನ ಪರಿಕಲ್ಪನೆಯ ವಾಗ್ವಾದಗಳಿಗೆ ಮರುವ್ಯಾಖ್ಯಾನ ಮಾಡಿತು.

ಕೃತಿಕಾರನ ಪರಿಕಲ್ಪನೆಯ ಆಧುನಿಕ ವ್ಯಾಖ್ಯಾನವು ಮಾರ್ಕ್ಸ್‌ವಾದದ ಐಡಿಯಾಲಾಜಿ ಪರಿಕಲ್ಪನೆ, ಸ್ತ್ರೀವಾದದ 'ಲಿಂಗ, ಮತ್ತು 'ಲೈಂಗಿಕತೆ' ಪರಿಕಲ್ಪನೆ ಹಾಗೂ ಸಂಸ್ಕೃತಿ ಚಿಂತನೆಗಳ ಪರಿಕಲ್ಪನೆಗಳ ಮೇಲೆ ಗಾಢವಾದ ಪ್ರಭಾವ ಬೀರಿತು.

'ಕೃತಿಕಾರ'ನ ಪರಿಕಲ್ಪನೆಯಂತೆಯೇ ಬಾರ್ಥ್ಸ್ ತನ್ನ 'ಫ್ರಮ್ ವರ್ಕ್ ಟು ಟೆಕ್ಸ್ಟ್' (೧೯೭೧) ಎನ್ನುವ ಪ್ರಬಂಧದಲ್ಲಿ 'ಕೃತಿ' ಪರಿಕಲ್ಪನೆಯ ಅರ್ಥವನ್ನು ಸಹ ವಿಸ್ತರಿಸಿದನು. 'ಕೃತಿ' ಎಂದರೆ 'ಸಾಹಿತ್ಯ ಕೃತಿ' ಅಥವಾ 'ಸೃಜನಶೀಲ ರಚನೆ' ಎನ್ನುವ ಪ್ರಚಲಿತ ಜನಪ್ರಿಯ ಅರ್ಥಕಲ್ಪನೆ ಸ್ಥಾನದಲ್ಲಿ ಈತ 'ಪಠ್ಯ' ಎನ್ನುವ ಆಧುನಿಕ ಪರಿಕಲ್ಪನೆ ಮಂಡಿಸಿದನು. ಬಹಳ ಮುಖ್ಯವಾಗಿ 'ಕೃತಿ' ಮತ್ತು 'ಪಠ್ಯ'ಕ್ಕಿರುವ ಪ್ರಮುಖ ವ್ಯತ್ಯಾಸಗಳನ್ನು ವಿವರಿಸಿದನು. ಇದನ್ನು ಬಾರ್ಥ್ಸ್ 'ಕೃತಿ' ಎನ್ನುವುದು ಕೈಯಲ್ಲಿರುವ ಸಂಗತಿಯಾದರೆ 'ಪಠ್ಯ' ಎನ್ನುವುದು ಭಾಷಿಕ ಸಂಗತಿಯಾಗಿರುತ್ತದೆ. ಆದರೆ 'ಪಠ್ಯ'ವು 'ಕೃತಿ'ಯು ಕರಗಿಹೋಗಿ ಹುಟ್ಟಿಕೊಳ್ಳುವ ರೂಪವಲ್ಲ, ಬದಲಾಗಿ 'ಕೃತಿ'ಯ ಕಾಲ್ಪನಿಕ ವಿಕಸಿತ ಆವೃತ್ತಿಯಾಗಿರುತ್ತದೆ. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ 'ಪಠ್ಯ'ವು ಕ್ರಿಯಾತ್ಮಕವಾಗಿ ಅನುಭವಿಸಬಹುದಾದ ರಚನೆ' ಎಂದು ವಿಶ್ಲೇಷಿಸುತ್ತಾನೆ. ಪಠ್ಯದ ವಿಶಿಷ್ಟ ಸ್ವರೂಪ ಕುರಿತು ಹೇಳುವಾಗ ಬಾರ್ಥ್ ಬಹಳ ಮುಖ್ಯವಾಗಿ 'ಕೃತಿ' ಏಕತ್ವಸೂಚಕವಾದರೆ; 'ಪಠ್ಯ' ಬಹುತ್ವದ ಸೂಚಕವಾಗಿರುತ್ತದೆ. 'ಕೃತಿ' ಲೇಖಕನೊಂದಿಗೆ ಜನ್ಯ ಜನಕ ಸಂಬಂಧ ಹೊಂದಿದ್ದರೆ; ಪಠ್ಯ ಸ್ವತಂತ್ರ್ಯ ಆಸ್ತಿತ್ವ ಹೊಂದಿರುತ್ತದೆ ಮತ್ತು ಭೌತಿಕ ರೂಪಕ್ಕೆ ಬದಲಾಗಿ ಮನೋಭೌತಿಕ ಹಾಗೂ ಭಾಷಿಕಸ್ತರದಲ್ಲಿ ಜೀವಂತವಾಗಿರುತ್ತದೆ ಎಂದು ವಿವರಿಸುತ್ತಾನೆ.

ಇದರೊಂದಿಗೆ ಫ್ರಾನ್ಸ್‌ನ ಮತ್ತೊಬ್ಬ ಪ್ರಖ್ಯಾತ ಸಂರಚನೋತ್ತರ ಚಿಂತಕನಾದ ಡೆರಿಡಾ, 'ಪಠ್ಯ' ಕುರಿತು ಪ್ರತಿಪಾದಿಸಿದ 'ಸ್ವಸಹಜ ನಿರಚನೀಕರಣ' ತತ್ವ ಈ ಸಂಕಥನಕ್ಕೆ ಹೊಸ ಅರ್ಥದ ಆಯಾಮಗಳನ್ನು ಕಲ್ಪಿಸಿತು. ಹಾಗೆಯೇ ಫ್ರಾನ್ಸ್‌ನ ಮನೋವಿಜ್ಞಾನಿ, ಕಾದಂಬರಿಗಾರ್ತಿ ಮತ್ತು ವಿಮರ್ಶಕಿಯಾದ ಜೂಲಿಯಾ ಕ್ರಿಸ್ಟೋವಾ ತನ್ನ ಪ್ರಸಿದ್ಧ ಕೃತಿಯಾದ 'ವರ್ಡ್, ಡೈಲಾಗ್ ಅಂಡ್ ನಾವೆಲ್' (೧೯೬೬)ನಲ್ಲಿ ಪ್ರಚುರಪಡಿಸಿದ 'ಅಂತರ್ ಪಠ್ಯಾತ್ಮಕತೆ' ಪರಿಕಲ್ಪನೆ ಸಹ ಪಾಶ್ಚಾತ್ಯ ಸಾಹಿತ್ಯ ಸಂಕಥನಗಳ ಒಂದು ಮುಖ್ಯ ಪರಿಕಲ್ಪನೆಯಾಗಿದೆ. ಈಕೆ 'ಪಠ್ಯ'ಗಳ ವಿಶಿಷ್ಟ ಸ್ವರೂಪ ಕುರಿತು ಹೇಳುವ 'ಯಾವುದೇ ಒಂದು ಪಠ್ಯ ಎನ್ನುವುದು ಹಲವು ಸೂಕ್ತಿಗಳ ಹೆಣಿಗೆ', ' ಯಾವುದೇ ಒಂದು ಪಠ್ಯ ಎನ್ನುವುದು ಇನ್ನೊಂದು ಪಠ್ಯದ ಹೀರಿಕೆ ಮತ್ತು ರೂಪಾಂತರ' ಮತ್ತು 'ಒಟ್ಟಾರೆ ಬರವಣಿಗೆ ಎನ್ನುವುದೇ ಒಂದು ಅಂತರ್ ಪಠ್ಯಾತ್ಮಕ ಚಟುವಟಿಕೆ' ಎನ್ನುವ ವಿಚಾರಗಳು 'ಪಠ್ಯ'ದ ಪರಿಕಲ್ಪನೆಗೆ ವಿಶೇಷ ಆಯಾಮ ತಂದುಕೊಟ್ಟವು.

ಈ ಎಲ್ಲ ಬೆಳವಣಿಗೆಗಳಿಂದ 'ಕೃತಿ' ಎಂದರೆ ಕೇವಲ 'ಸಾಹಿತ್ಯಕೃತಿ' ಅಥವಾ 'ಕಲಾತ್ಮಕ ಸೃಜನಶೀಲ ರಚನೆ' ಎನ್ನುವ 'ಸೀಮಿತ' ಮತ್ತು 'ನಿರ್ದಿಷ್ಟ' ಅರ್ಥ ಮರೆಯಾಗಿ ಸಾಹಿತ್ಯ ಮತ್ತು ಸಾಹಿತ್ಯ ಪರಂಪರೆಗಳೂ ಸೇರಿದಂತೆ ಮಾನವನ ಎಲ್ಲ ಭಾಷಿಕ ಮತ್ತು ಭಾಷೇತರ ಸೃಷ್ಟಿಶೀಲ ಪ್ರಕಾರಗಳ ಅಭಿವ್ಯಕ್ತಿಗಳು ಎನ್ನುವ ನೂತನ 'ಪಠ್ಯ'ದ ಪರಿಕಲ್ಪನೆ ಪ್ರಸಿದ್ಧಿಗೆ ಬಂದಿತು.

ಸಾಹಿತ್ಯ ಸಂಕಥನಗಳಿಂದ ಅತ್ಯಂತ ಮುಖ್ಯವಾದ 'ಸಾಹಿತ್ಯ ಪರಿಕಲ್ಪನೆ'ಗೆ ಸಂಬಂಧಿಸಿದಂತೆ ಸಹ ವೈವಿಧ್ಯಮಯವಾದ ಮತ್ತು ವೈರುಧ್ಯಾತ್ಮಕವಾದ ವ್ಯಾಖ್ಯಾನಗಳು ಪ್ರತಿಪಾದನೆಯಾದವು. ಆದರೆ ಈ ಎಲ್ಲಾ ವ್ಯಾಖ್ಯಾನಗಳು ಸಾಹಿತ್ಯದ ಅರ್ಥ ಮತ್ತು ಸ್ವರೂಪ ಕುರಿತು ಪ್ರಚಲಿತದಲ್ಲಿದ್ದ ಪ್ರತಿಷ್ಠಿತ ಹಾಗೂ ಜನಪ್ರಿಯ ವ್ಯಾಖ್ಯಾನಗಳನ್ನು ಸಂಪೂರ್ಣವಾಗಿ ವಿರೋಧಿಸಿದವು. ಹಾಗೆಯೇ, ಸಾಹಿತ್ಯದ ಸ್ವರೂಪ ಕುರಿತ ಪ್ರಖ್ಯಾತ ಸೌಂದರ್ಯ ಮೀಮಾಂಸಾತ್ಮಕ ವ್ಯಾಖ್ಯಾನವಾದ ಮಾನವನ ಅಪೂರ್ವ ಅನುಭವಗಳು ಬರವಣಿಗೆಯ ಮಾಧ್ಯಮದ ವಿವಿಧ ಸೃಜನಶೀಲ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿರುವ ಸುಂದರ ರಚನೆಗಳು' ಎನ್ನುವುದಕ್ಕೆ ಪ್ರಬಲವಾದ ತಾತ್ವಿಕ ವಿರೋಧ ವ್ಯಕ್ತಪಡಿಸಿದವು. ಹಾಗೆಯೇ 'ವಿಶ್ವಾತ್ಮಕತೆ', 'ಸಾರ್ವತ್ರಿಕತೆ' ಮತ್ತು 'ಸಾರ್ವಕಾಲಿಕತೆ'ಗಳು ಸಾಹಿತ್ಯದ ಬಹುಮುಖ್ಯ ಸ್ವರೂಪ ಎನ್ನುವ ಅಭಿಜಾತ ಮೀಮಾಂಸೆಯನ್ನು, ಉತ್ತಮ ಸಮಾಜ ಹಾಗೂ ನಾಗರೀಕತೆಯ ನಿರ್ಮಾಣವೇ ಸಾಹಿತ್ಯದ ಪರಮೋದ್ದೇಶ ಎನ್ನುವ ನೈತಿಕವಾದಿ ಮೀಮಾಂಸೆಯನ್ನು ಸಹ ಈ ಕಾಲಘಟ್ಟದ ಎಲ್ಲಾ ಸಾಹಿತ್ಯ ಸಂಕಥನಗಳ ವ್ಯಾಖ್ಯಾನಗಳು ನಿರಾಕರಿಸಿದವು.

ಸಾಹಿತ್ಯ ಕುರಿತು ಪ್ರಧಾನವಾಗಿ ರೂಢಿಯಲ್ಲಿದ್ದ ಅಭಿಜಾತವಾದಿ ಮೀಮಾಂಸೆಯು 'ಶ್ರೇಷ್ಠ ಕೃತಿಗಳು' (canon's) ಮತ್ತು ಅವುಗಳು ನಿರ್ಮಿಸಿರುವ 'ಉತ್ಕೃಷ್ಟ ಪರಂಪರೆ'ಯೇ ಸಾಹಿತ್ಯ ಎಂದು ಪ್ರತಿಪಾದಿಸಿತ್ತು. ಅತ್ಯುತ್ತಮ ಸಮಾಜ ನಿರ್ಮಾಣ ಮತ್ತು ಸಂಸ್ಕೃತಿ ರೂಪೀಕರಣವೇ ಸಾಹಿತ್ಯದ ಪ್ರಮುಖ ಧ್ಯೇಯ ಎನ್ನುವುದು ಈ ಮೀಮಾಂಸೆಯ ಮುಖ್ಯ ತಾತ್ವಿಕತೆಯಾಗಿತ್ತು. ಪಾಶ್ಚಾತ್ಯ ನವ್ಯ ಸಾಹಿತ್ಯ ಅಥವಾ ರೂಪನಿಷ್ಠ ಸಾಹಿತ್ಯ ಮೀಮಾಂಸೆಗಳು ಸಾಹಿತ್ಯದ ಪರಿಕಲ್ಪನೆ ಕುರಿತು ಹೊಂದಿದ್ದದ್ದು ಸಹ ಇದೇ ಅಭಿಜಾತವಾದಿ ದೃಷ್ಟಿಕೋನದ ಆಧುನಿಕ ಅವತರಣಿಕೆ ಎನ್ನಬಹುದಾದ ಆಕೃತಿ ಕೇಂದ್ರಿತ ಶ್ರೇಷ್ಠ ಕೃತಿ ಪರಿಕಲ್ಪನೆಯೇ ಆಗಿತ್ತು. ನವ್ಯ ಸಾಹಿತ್ಯವಂತೂ ಕಾವ್ಯವೊಂದನ್ನೇ 'ಪವಿತ್ರವಾದ ಕ್ಯಾನನ್' ಎಂದು ಪ್ರತಿಪಾದಿಸಿತು. ಕಾವ್ಯಾತ್ಮಕೀಕರಣಗೊಂಡ ಗದ್ಯಕಥನಕ್ಕೆ ದ್ವಿತೀಯ ಪ್ರಾಶಸ್ತ್ಯ ಕೊಟ್ಟಿತ್ತು.

ಕಳೆದ ಶತಮಾನದ ಉತ್ತರಾರ್ಧದಲ್ಲಿ ಅದರಲ್ಲೂ ಬಹಳ ಮುಖ್ಯವಾಗಿ ೧೯೬೦ರ ದಶಕದಿಂದ, ಪಾಶ್ಚಾತ್ಯ ಬೌದ್ಧಿಕ ಕ್ಷೇತ್ರದಲ್ಲಿ ಮುನ್ನೆಲೆಗೆ ಬಂದ 'ಥಿಯರಿ' ಅಥವಾ 'ಸಿದ್ಧಾಂತ'ಗಳು ಸಾಹಿತ್ಯದ ಪರಿಕಲ್ಪನೆಯ ಈ ಎಲ್ಲಾ ಅರ್ಥದ ನೆಲೆಗಳನ್ನು ಛಿದ್ರಗೊಳಿಸಿದವು. ಇವುಗಳು ನೀಡಿದ ಹೊಸ ವ್ಯಾಖ್ಯಾನಗಳಲ್ಲಿ ಪರಸ್ಪರ ಸಾಕಷ್ಟು ಭಿನ್ನತೆ ಮತ್ತು ವೈರುಧ್ಯಗಳಿರಬಹುದಾದರೂ, ಒಟ್ಟಾರೆಯಾಗಿ ಇವುಗಳು ಸಾಹಿತ್ಯದ ಪರಿಕಲ್ಪನೆಯ ಅರ್ಥದ ನೆಲೆಗಳನ್ನು ತೀವ್ರವಾಗಿ ವಿಕಾಸಗೊಳಿಸಿದವು. ವ್ಯಾಪಕ ಮತ್ತು ಬಹ್ವರ್ಥದ ಆಯಾಮಗಳನ್ನು

ನೀಡಿದವು. 'ಸಾಹಿತ್ಯ' ಮತ್ತು 'ಸಾಹಿತ್ಯೇತರ' ಹಾಗೂ 'ಸೃಜನಶೀಲ' ಮತ್ತು 'ಸೃಜನೇತರ' ಎನ್ನುವ ಶ್ರೇಣೀಕರಣಾತ್ಮಕ ವರ್ಗೀಕರಣಗಳನ್ನು ತೊಡೆದುಹಾಕಿದವು. ಸಾಹಿತ್ಯದ ಅರ್ಥವಲಯದೊಳಗೆ ಸೇರಿಸದೆ ದೂರವುಳಿಸಿದ್ದ ಜನಪ್ರಿಯ ಸಾಹಿತ್ಯ, ಪತ್ತೇದಾರಿ ಸಾಹಿತ್ಯ, ಅಶ್ಲೀಲ ಸಾಹಿತ್ಯ, ಜಾಹೀರಾತು ಸಾಹಿತ್ಯ ಮತ್ತು ವಾಣಿಜ್ಯ ಸಾಹಿತ್ಯ ಮೊದಲಾದವುಗಳನ್ನು 'ಸಾಂಸ್ಕೃತಿಕ ಪಠ್ಯ'ಗಳೆಂದು ಪರಿಗಣಿಸಿದವು. ಇವು ಶಾಬ್ದಿಕ ಮತ್ತು ಅಶಾಬ್ದಿಕ ರೂಪದ ಯಾವುದೇ ಅಭಿವ್ಯಕ್ತಿಯನ್ನು ಸಾಹಿತ್ಯಕ್ಕೆ ಸಂವಾದಿಯಾದ 'ಪಠ್ಯ'ದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಪರಿಗಣಿಸಿದವು.

ಸಾಹಿತ್ಯದ ಈ ಸ್ವರೂಪ ಕುರಿತು ಅಮೇರಿಕಾದ ಪ್ರಸಿದ್ಧ ವಿಮರ್ಶಕನಾದ ಜೋನಾಥನ್ ಕಲರ್ ತನ್ನ "ಲಿಟರರಿ ಥಿಯರಿ ಎ ವೆರಿ ಶಾರ್ಟ್ ಇನ್ಟ್ರುಡಕ್ಷನ್' (೧೯೯೭) ಕೃತಿಯಲ್ಲಿ "ಸಾಹಿತ್ಯ ಎನ್ನುವುದು ಸಾಂಸ್ಕೃತಿಕವಾಗಿ ಉನ್ನತರಾದವರ ಕಾರ್ಯಚಟುವಟಿಕೆಯಾಗಿರುತ್ತದೆ. ಇದು, ಕೆಲವೊಮ್ಮೆ ಸಾಂಸ್ಕೃತಿಕ ಬಂಡವಾಳ ಎಂದು ಕರೆಯುವಂಥ ಚಟುವಟಿಕೆಯಾಗಿದೆ. ಸಾಹಿತ್ಯವನ್ನು ಕುರಿತು ತಿಳಿದುಕೊಳ್ಳುವುದರಿಂದ ನಿಮಗೆ ಸಂಸ್ಕೃತಿಯಲ್ಲಿ ಆಸ್ಥೆಯನ್ನು ಮೂಡಿಸುತ್ತದೆ. ಇದು ನಿಮಗೆ ಬಹುರೂಪಗಳಲ್ಲಿ ಪ್ರಯೋಜನಕಾರಿಯಾಗಬಹುದು. ನೀವು ಸಾಮಾಜಿಕವಾಗಿ ಉನ್ನತಸ್ಥಾನದಲ್ಲಿರುವವರ ಸಹವಾಸ ಗಳಿಸಲು ನೆರವಾಗಬಹುದು. ಆದರೆ ಸಾಹಿತ್ಯವನ್ನು ಇಂಥ ಸಾಂಪ್ರದಾಯಕ ಸಾಮಾಜಿಕ ಕಾರ್ಯಮಾದರಿಗೆ ಸೀಮಿತಗೊಳಿಸಬಾರದು. ಇದು ಕ್ವಚಿತ್ತಾಗಿ 'ಕೌಟುಂಬಿಕ ಮೌಲ್ಯಗಳನ್ನು' ಪ್ರತಿಪಾದಿಸುತ್ತದೆ ಎನ್ನುವುದೇನೋ ನಿಜವಾದ ವಿಚಾರವೆ. ಆದರೂ ಇದು ಸರ್ವ ರೀತಿಯ ಅಪರಾಧಗಳನ್ನು ಕುರಿತು ಸಹ ವ್ಯಾಮೋಹ ಹುಟ್ಟಿಸುತ್ತದೆ. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್'ನಲ್ಲಿ ಸೇಟನ್ ದೇವರ ವಿರುದ್ಧ ಬಂಡೇಳುವುದರಿಂದ ಹಿಡಿದು ದಾಸ್ತೋವಸ್ಕಿಯ 'ಕ್ರೈ ಅಂಡ್ ಪನಿಷ್‌ಮೆಂಟ್'ನಲ್ಲಿ ರಾಸ್ಕೋಲ್ನಿಕೋವ್ ಮುದುಕಿಯೊಬ್ಬಳನ್ನು ಕೊಲ್ಲುವರೆಗೂ ಇದು ಚಾಚಿದೆ. ಇದು ಬಂಡವಾಳಶಾಹಿ ಮೌಲ್ಯಗಳು ಗಳಿಸುವ ಮತ್ತು ವ್ಯಯಿಸುವ ಚಟುವಟಿಕೆಗಳನ್ನು ಮಾಡುವುದಕ್ಕೆ ಪ್ರತಿರೋಧ ಒಡ್ಡುತ್ತದೆ. ಸಾಹಿತ್ಯ ಎನ್ನುವುದು ಸಂಸ್ಕೃತಿ ಮತ್ತು ಅದರ ಮಾಹಿತಿಯ ಬಿಂಬ. ಇದೊಂದು ವಾಹಕಶಕ್ತಿ ಮತ್ತು ಸಾಂಸ್ಕೃತಿಕ ಬಂಡವಾಳ. ಇದು ಓದಲು ಪ್ರೇರೇಪಿಸುವ ಮತ್ತು ಓದುಗರನ್ನು ಅರ್ಥದ ಸಮಸ್ಯೆಯೊಳಗೆ ನೂಕುವಂಥ ರೀತಿಯ ಬರವಣಿಗೆಯ ರೂಪವಾಗಿದೆ"[೨] ಎಂದು ವಿಶ್ಲೇಷಿಸುತ್ತಾನೆ.

ಸಾಹಿತ್ಯದ ಸ್ವರೂಪ ಮತ್ತು ಆಶಯಗಳ ಸಂಕೀರ್ಣ ನೆಲೆಗಳನ್ನು ಕಲರ್‌ನ ಈ ವಿಶ್ಲೇಷಣೆ ಅರ್ಥಪೂರ್ಣವಾಗಿ ನಿರೂಪಿಸುತ್ತದೆ. ಸಾಹಿತ್ಯದ ಅಭಿಜಾತವಾದಿ ಮತ್ತು ನೈತಿಕವಾದಿ ಮೀಮಾಂಸೆಗಳು ಹಿನ್ನೆಲೆಗೆ ಸರಿದ ಸಮಸ್ಯಾತ್ಮಕವಾದಿ ಮೀಮಾಂಸೆ ಮುನ್ನೆಲೆಗೆ ಬಂದಿರುವುದರ ಕುರಿತು ಪ್ರಸ್ತಾಪಿಸುತ್ತದೆ.

ಪಾಶ್ಚಾತ್ಯ ಸಾಹಿತ್ಯ ಸಂಕಥನಗಳ ಪರಿಣಾಮದಿಂದ ಕಳೆದ ಶತಮಾನದ ದ್ವಿತೀಯಾರ್ಧದಲ್ಲಿ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಹಲವು ಆಧುನಿಕ ಮೀಮಾಂಸೆಗಳು ರೂಪುಗೊಂಡವು. ಇವು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗೆ ಪ್ರಮುಖ ಪ್ರೇರಣೆಗಳನ್ನು ಒದಗಿಸಿದವು.

೩.೪.೨ ಕನ್ನಡ ಸಾಹಿತ್ಯ ಸಂಕಥನಗಳ ಸ್ವರೂಪ

ಕನ್ನಡ ಸಾಹಿತ್ಯ ಸಂಕಥನಗಳು ಪಾಶ್ಚಾತ್ಯ ಸಾಹಿತ್ಯ ಸಂಕಥನಗಳಿಗಿಂತ ತಾತ್ವಿಕವಾಗಿ ಭಿನ್ನವಾಗಿವೆ. ಪಾಶ್ಚಾತ್ಯ ಸಂಕಥನಗಳು ಪ್ರಧಾನವಾಗಿ ಕೆಲವು ಪ್ರಮುಖ ಸಾಹಿತ್ಯಕ ಪರಿಕಲ್ಪನೆಗಳನ್ನು ಕೇಂದ್ರೀಕರಿಸಿ ನಡೆದಿದ್ದರೆ; ಕನ್ನಡದಲ್ಲಿ ಸಾಹಿತ್ಯ ಮತ್ತು ಬದುಕಿನ ಸಂಬಂಧ ಕುರಿತ ಸಂಕೀರ್ಣ ಪ್ರಶ್ನೆಗಳು ಸಾಹಿತ್ಯ ಸಂಕಥನಗಳ ಬಹುಮುಖ್ಯ ಆಸಕ್ತಿಗಳಾಗಿವೆ. ನಿರ್ದಿಷ್ಟವಾಗಿ ನವ್ಯೋತ್ತರ ಕಾಲಘಟ್ಟದ ಕನ್ನಡ ಸಾಹಿತ್ಯ ಸಂಕಥನಗಳು ಸಮಾಜ, ರಾಜಕಾರಣ, ಆರ್ಥಿಕ, ಧಾರ್ಮಿಕ ಮತ್ತು ಕಲೆಯ ಪ್ರಶ್ನೆಗಳನ್ನು ಸಾಹಿತ್ಯದ ಸಂದರ್ಭದಲ್ಲಿ ಅತ್ಯಂತ ಮುಖ್ಯವೆಂದು ಪರಿಗಣಿಸಿವೆ. ಇವುಗಳನ್ನು ಮನುಷ್ಯನ ಚರಿತ್ರೆ ಮತ್ತು ವರ್ತಮಾನದ ಬದುಕಿನ ಹಿನ್ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿವೆ. ಸಾಹಿತ್ಯ ಹಾಗೂ ಬಧುಕಿನ ಸಂಬಂಧವನ್ನು ಸಂಪೂರ್ಣವಾಗಿ ಪ್ರತ್ಯೇಕತಾ ನೆಲೆಯಲ್ಲಿ ಪರಿಭಾವಿಸುತ್ತಿದ್ದ ನವ್ಯ ಸಾಹಿತ್ಯ ಸಂಕಥನಗಳಿಗೆ ವಿರುದ್ಧವಾಗಿ ಈ ಕಾಲಘಟ್ಟದ ಸಂಕಥನಗಳು ಸಮಾವಿಷ್ಟ ನೆಲೆಯಲ್ಲಿ ಮತ್ತು ಸಂಶ್ಲೇಷಕ ಕ್ರಮದಲ್ಲಿ ಆಲೋಚಿಸಿವೆ.

ಇಂಥ ಪ್ರಮುಖ ಮೂರು ಸಂಕಥನಗಳಿವೆ. ಅವುಗಳೆಂದರೆ ಅ. ಬಂಡಾಯ ಸಾಹಿತ್ಯ ಸಂಕಥನ ಆ. ದಲಿತ ಸಾಹಿತ್ಯ ಸಂಕಥನ ಮತ್ತು ಇ. ಸ್ತ್ರೀವಾದಿ ಸಾಹಿತ್ಯ ಸಂಕಥನ. ಸಾಹಿತ್ಯದ ಸ್ವರೂಪ, ಆಶಯ ಮತ್ತು ಆಕೃತಿ ವಿಚಾರಗಳಿಗೆ ಸಂಬಂಧಿಸಿದಂತೆ ಈ ಸಂಕಥನಗಳ ಗ್ರಹಿಕೆಗಳ ಬಹುಪಾಲು ಸಂಗತಿಗಳಲ್ಲಿ ಸಾಮ್ಯತೆ ಗುರುತಿಸಬಹುದು. ಹಾಗೆಯೇ ಕೆಲವು ಅಂಶಗಳಲ್ಲಿ ಭಿನ್ನತೆ ಸಹ ಇದೆ. ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿ ಕುರಿತ ಈ ಸಂಕಥನಗಳ ಗ್ರಹಿಕೆಗಳಲ್ಲಿ ಅಂಥ ತೀವ್ರವಾದ ವೈರುಧ್ಯವೇನೂ ಇಲ್ಲ. ಇಷ್ಟಾದರೂ, ಕೆಲವು ಮುಖ್ಯ ವಿಚಾರಗಳಲ್ಲಿ ಇವುಗಳ ನಡುವೆ ಭಿನ್ನಮತ ಕಂಡುಬರುತ್ತದೆ. ಇದಕ್ಕೆ ಈ ಪ್ರತಿಯೊಂದು ಸಂಕಥನವೂ, ತನ್ನದೇ ಆದ ವಿಶಿಷ್ಟ ಸಾಮಾಜಿಕ, ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಳವಳಿಗಳ ತಾತ್ವಿಕ ಪ್ರಣಾಳಿಕೆಗಳ ಪ್ರೇರಣೆಗಳಿಂದ ರೂಪಿತವಾಗಿರುವುದು ಮುಖ್ಯ ಕಾರಣವಾಗಿರುವಂತೆ ತೋರುತ್ತದೆ. ಆದರೂ ಈ ಮೂರೂ ಸಂಕಥನಗಳು ಸಾಹಿತ್ಯ, ವಿಮರ್ಶೆ ಮತ್ತು ಸಂಸ್ಕೃತಿ ಕುರಿತು ಎತ್ತಿದ ಪ್ರಶ್ನೆಗಳು ಹಾಗೂ ಮಾಡಿದ ವ್ಯಾಖ್ಯಾನಗಳು ಈ ಕಾಲಘಟ್ಟದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳಲು ಬಹುಮುಖ್ಯ ಪ್ರೇರಣೆಗಳಾಗಿವೆ ಎನ್ನುವುದು ಮಹತ್ವದ ವಿಚಾರವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಸಂಕಥನದ ಸ್ವರೂಪ ಕುರಿತು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

ನವ್ಯ ಸಾಹಿತ್ಯಕ್ಕೆ ತೀವ್ರ ವಿರೋಧದ ರೂಪದಲ್ಲಿ ಹುಟ್ಟಿದ ಬಂಡಾಯ ಸಾಹಿತ್ಯ ಚಳವಳಿ ಮೊಟ್ಟ ಮೊದಲ ಬಾರಿಗೆ ಸಾಹಿತ್ಯದ ಚರ್ಚೆಯಲ್ಲಿ ಸಮಾಜ, ಸಂಸ್ಕೃತಿ, ರಾಜಕಾರಣ ಮತ್ತು ಆರ್ಥಿಕ ಪ್ರಶ್ನೆಗಳನ್ನು ಅತ್ಯಂತ ನಿರ್ಣಾಯಕ ಸಂಗತಿಗಳೆಂದು ಪರಿಗಣಿಸಿತು. ನವ್ಯ ಸಾಹಿತ್ಯ ಚಳವಳಿ ಸಾಹಿತ್ಯದ ಶ್ರೇಷ್ಠತೆಯ ಪ್ರತೀಕಗಳೆಂದು ಪ್ರತಿಪಾದಿಸುತ್ತಿದ್ದ ಆಧುನಿಕ ಅಭಿಜಾತವಾದಿ ಮತ್ತು ಪರಿಷ್ಕೃತ ಸೌಂದರ್ಯಮೀಮಾಂಸಾವಾದಿ ಧೋರಣೆಗಳು ಸಾಹಿತ್ಯದ ಎಲೈಟಿಸ್ಟ್ ಸಂಕಥನವನ್ನು ನಿರ್ಮಿಸಿದ್ದವು. ಇದಕ್ಕೆ ವಿರುದ್ಧವಾಗಿ ಬಂಡಾಯ ಸಾಹಿತ್ಯ ಚಳವಳಿಯು ಸಾಹಿತ್ಯ ಮತ್ತು ವರ್ತಮಾನದ ಬದುಕಿನ ನಡುವೆ ಇರಬೇಕಾದ ಅರ್ಥಪೂರ್ಣ ಸಂಬಂಧದ ಹಿನ್ನೆಲೆಯಲ್ಲಿ ಸಾಹಿತ್ಯದ ಜನಪರ ಸಂಕಥನವನ್ನು ಪ್ರತಿಪಾದಿಸಿತು.

ಈ ಆಧುನಿಕ ಸಂಕಥನ ಸಾಹಿತ್ಯದ ಅತ್ಯಂತ ಪರಿಮಿತ ವಸ್ತುಪ್ರಪಂಚದ ಸ್ಥಾನದಲ್ಲಿ ಅಗಾಧವಾದ ಹೊಸ ವಸ್ತುಲೋಕವನ್ನು ಅನಾವರಣಗೊಳಿಸಿತು. ಗ್ರಾಮೀಣ ಬದುಕಿನ ವೈವಿಧ್ಯಮಯ ಅನುಭವ ದ್ರವ್ಯ ಸಾಹಿತ್ಯದ ಪ್ರಧಾನ ವಸ್ತುವಾಗಿ ಪರಿಗಣಿತವಾಯಿತು. ನಗರದ ಮಧ್ಯಮವರ್ಗದ ಬದುಕು ಮತ್ತು ಆಧುನಿಕ ಮನುಷ್ಯನ ವ್ಯಕ್ತಿಪ್ರಜ್ಞೆಗಳಷ್ಟೇ ಸಾಹಿತ್ಯದ ವಸ್ತು ಹಾಗೂ ಧೋರಣೆಗಳನ್ನು ರೂಪಿಸುತ್ತಿದ್ದ ಕ್ರಮವನ್ನು ತೀವ್ರವಾಗಿ ಪ್ರಶ್ನಿಸಲಾಯಿತು. ಇದರ ಸ್ಥಾನದಲ್ಲಿ ಬಹುಮುಖ್ಯವಾಗಿ ಗ್ರಾಮಭಾರತದ ಸಾಮಾನ್ಯ ಮನುಷ್ಯನ ಸಾಮಾಜಿಕ ಬದುಕು ಮತ್ತು ವ್ಯವಸ್ಥೆಯ ವಿರುದ್ಧದ ಸೆಣಸಾಟ ಸಾಹಿತ್ಯದ ವಸ್ತು, ಧೋರಣೆ ಹಾಗೂ ಆಶಯಗಳಾದವು. ಆಧುನಿಕ ಮನುಷ್ಯನ ಪ್ರಜ್ಞಾಪಾತಳಿಯ ಅಮೂರ್ತಾನುಭವಗಳು ಸಾಹಿತ್ಯದ ತಾತ್ವಿಕತೆಯನ್ನು ರೂಪಿಸುವ ಕ್ರಮಕ್ಕೆ ಈ ಸಂಕಥನ ತೀವ್ರ ವಿರೋಧ ವ್ಯಕ್ತಪಡಿಸಿತು. ಸಾಮಾನ್ಯ ಮನುಷ್ಯನ ಸಾಮಾಜಿಕ ಜೀವನದ ವಾಸ್ತವ ವಿವರಗಳಿಂದಲೇ ಸಾಹಿತ್ಯದ ತಾತ್ವಿಕತೆ ಹುಟ್ಟಬೇಕು ಎಂದು ಪ್ರತಿಪಾದಿಸಿತು. ಕಾಮ ಮತ್ತು ಲೈಂಗಿಕತೆಗಳ ಬದಲು ಹಸಿವು ಹಾಗೂ ಹಿಂಸೆಗಳು ಸಾಹಿತ್ಯದ ತಾತ್ವಿಕತೆಯನ್ನು ರೂಪಿಸುವ ಪ್ರಮುಖ ಸಂಗತಿಗಳೆಂದು ಪರಿಭಾವಿಸಲಾಯಿತು.

ಬಂಡಾಯ ಸಾಹಿತ್ಯ ಸಂಕಥನವು ಸಾಹಿತ್ಯದ ಸ್ವರೂಪ ಮತ್ತು ಆಶಯಗಳನ್ನು ಕುರಿತು ಹೊಸ ಮೀಮಾಂಸೆಯನ್ನು ಪ್ರತಿಪಾದಿಸಿತು. ಮನುಷ್ಯ ಮತ್ತು ಸಮಾಜದ ಪರಿಣಾಮಕಾರಿ ಅಭಿವ್ಯಕ್ತಿ ಸಾಹಿತ್ಯದ ಉದ್ದೇಶವಾಗಬೇಕು. ಸಾಹಿತ್ಯಾಧ್ಯಯನ ಅಥವಾ ಸಾಹಿತ್ಯದ ಓದು ಆತ್ಮನಿಷ್ಠ ಅನುಭವದ ಸಾಧನವಲ್ಲ. ಸಂಕೀರ್ಣ ಸ್ವರೂಪದ ಮನುಷ್ಯ ಸಮಾಜ ಮತ್ತು ವ್ಯವಸ್ಥೆಗಳು ಸಾಮಾನ್ಯ ಮನುಷ್ಯನ ಮೇಲೆ ಹೊಂದಿರುವ ನಿಯಂತ್ರಣದಿಂದ ಆತನ ಬದುಕಿನ ಮೇಲಾಗುತ್ತಿರುವ ಪ್ರಭಾವ ಹಾಗೂ ಪರಿಣಾಮಗಳ ಸಶಕ್ತ ಚಿತ್ರಣ ಸಾಹಿತ್ಯದ ಕಾಳಜಿಯಾಗಬೇಕು. ಇಷ್ಟೇ ಅಲ್ಲದೆ ಸಾಮಾಜಿಕ ವಸ್ತುಸ್ಥಿತಿ ಮತ್ತು ಬದುಕಿನ ಬದಲಾವಣೆಗಳು ಸಾಹಿತ್ಯದ ಪ್ರಮುಖ ಉದ್ದೇಶಗಳಾಗಬೇಕು ಎನ್ನುವುದು ಸಾಹಿತ್ಯದ ಸ್ವರೂಪ ಕುರಿತು ಬಂಡಾಯ ಸಾಹಿತ್ಯ ಸಂಕಥನ ವ್ಯಕ್ತಪಡಿಸಿದ ಖಚಿತವಾದ ನಿಲುವು.

ಈ ಸಂಕಥನ ಸಾಮಾಜಿಕ ಬದಲಾವಣೆಯ ಬಹುಮುಖ್ಯ ಸಾಧನವಾಗಿ 'ಪ್ರತಿಭಟನೆ' ಮತ್ತು 'ಪ್ರತಿರೋಧ'ವನ್ನು ಸಾಹಿತ್ಯದ ಪ್ರಧಾನವಾದ ಆಶಯಗಳಾಗಿ ಪ್ರತಿಪಾದಿಸಿತು. ಇದನ್ನು ಕುರಿತು ಬರಗೂರು ರಾಮಚಂದ್ರಪ್ಪ ಅವರು "ಸಾಹಿತ್ಯ ಸೃಷ್ಟಿಯೊಂದೇ ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯ ಗುರಿಯಲ್ಲ. ಬದುಕು ಹಸನಾಗಬೇಕು; ಅಸಮಾನತೆ–ಅನಕ್ಷರತೆಗಳಿಂದ ಮುಕ್ತವಾದ ಬದುಕೇ ಸ್ವತಃ ಸೃಜನಶೀಲ ಗುಣಗಳನ್ನು ಹೊಂದಿರಬೇಕು; ಈ ಮೂಲಕ ಮೊದಲು ನಾವು ಮನುಷ್ಯರಾಗಬೇಕು; ನಮ್ಮೊಳಗಿನ ನಾಯಿ, ನರಿ, ಹುಲಿ, ಸಿಂಹಗಳನ್ನು ಓಡಿಸಿ, ಪುರೋಹಿತಶಾಹಿ– ಬಂಡವಾಳಶಾಹಿ ಮೃಗೀಯತೆಗಳನ್ನು ಮೂಲೆ ಗುಂಪು ಮಾಡಿ, ನಿಜ ಮನುಷ್ಯರಾಗಬೇಕು. ಈ ರೀತಿ ಮನುಷ್ಯನಾಗುವುದೆಂದರೆ ಕಲಾಕಾರನಾಗುವುದು, ಕವಿಯಾಗುವುದು, ಎಂದೇ ಅರ್ಥ. ನಾವು ಮೊದಲು ಮನುಷ್ಯರಾಗುವುದರಲ್ಲೇ ಸಾಹಿತ್ಯಾದಿ ಕಲೆಗಳ ಸಾರ್ಥಕತೆಯ ಮೂಲವಿದೆ. ಈ ದೃಷ್ಟಿ ದರ್ಶನವನ್ನು ಒಳಗೊಂಡ ಬಂಡಾಯ ಸಾಹಿತ್ಯ ಚಳುವಳಿಯು ಹೋರಾಟ ಮತ್ತು ಅಕ್ಷರಾಭಿವ್ಯಕ್ತಿಗಳನ್ನು ಒಟ್ಟಿಗೇ ಸ್ವೀಕರಿಸಿದೆ. ಈ ಮೂಲಕ ಬದುಕಿನ ಹೊಸ ಸಂವಿಧಾನವನ್ನು ರೂಪಿಸುತ್ತ ಹೊಸ ಸಂಸ್ಕೃತಿಯ ದಿಕ್ಕನ್ನು ಕಾಣಿಸುತ್ತದೆ"[೩] ಎಂದು ವಿಶ್ಲೇಷಿಸಿದರು.

ಬಂಡಾಯ ಸಾಹಿತ್ಯ ಸಂಕಥನ ಸಾಹಿತ್ಯದ ವಸ್ತು, ಧೋರಣೆ ಮತ್ತು ಆಶಯಗಳಲ್ಲಿ ವ್ಯಾಪಕವಾದ ಬದಲಾವಣೆ ಉಂಟಾಗಿದುದರ ಹಿನ್ನೆಲೆಯಲ್ಲಿ, ಸಾಹಿತ್ಯದ ಆಕೃತಿ ಅಥವಾ ಅಭಿವ್ಯಕ್ತಿ ವಿನ್ಯಾಸಗಳನ್ನು ಅರ್ಥಮಾಡಿಕೊಳ್ಳಬೇಕು ಎನ್ನುವುದನ್ನು ಪ್ರತಿಪಾದಿಸಿತು. ಮನುಷ್ಯನ ಬದುಕು ಮತ್ತು ಮಾನವೀಕರಣಕ್ಕೆ ಬದ್ಧವಾದ ಸಾಹಿತ್ಯ ಸಹಜವಾಗಿಯೇ ಮನುಷ್ಯನಿಗೆ ಸುಲಭವಾಗಿ ಸಂವಹನವಾಗುವ ಅಭಿವ್ಯಕ್ತಿ ತಂತ್ರ, ಶೈಲಿ ಮತ್ತು ವಿನ್ಯಾಸಗಳನ್ನು ಒಳಗೊಳ್ಳಬೇಕಾಗುತ್ತದೆ. ಆದ್ದರಿಂದ, 'ಕಲಾತ್ಮಕತೆ' ಮತ್ತು 'ಶ್ರೇಷ್ಠತೆ'ಯ ಪರಿಕಲ್ಪನೆಗಳನ್ನು ಸಾಹಿತ್ಯದ ಸ್ವರೂಪ, ತಾತ್ವಿಕತೆ ಮತ್ತು ಆಶಯಗಳ ಹಿನ್ನೆಲೆಯಲ್ಲಿ ಪರಿಭಾವಿಸಬೇಕು ಎಂದು ವ್ಯಾಖ್ಯಾನಿಸಿತು. ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿವರ್ತನೆ ಸಾಹಿತ್ಯದ ಆಕೃತಿ ವಿಚಾರಗಳ ಮೂಲ ತತ್ವವಾಗಬೇಕು ಎನ್ನುವುದನ್ನು ಈ ಸಂಕಥನ ಹೊಸ ವಿಮರ್ಶಾ ಮೀಮಾಂಸೆ ಮೂಲಕ ನಿರೂಪಿಸಿತು. ಈ ಕಾರಣದಿಂದ ಇದು ಸಾಹಿತ್ಯ ವಿಮರ್ಶೆಯಲ್ಲಿ 'ವರ್ಗಸಂಬಂಧ' ಮತ್ತು 'ವರ್ಗಸ್ವಭಾವ'ಗಳನ್ನು ಅತ್ಯಂತ ಮಹತ್ವದ ಪರಿಕಲ್ಪನೆಗಳಾಗಿ ಮಂಡಿಸಿತು.

ಬಂಡಾಯ ಸಾಹಿತ್ಯ ಸಂಕಥನದ ಸಾಹಿತ್ಯ ಮತ್ತು ವಿಮರ್ಶೆ ಕುರಿತ ವಿಚಾರಗಳು ನವ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆಯ ಮೂಲ ಚಹರೆಗಳ ತೀವ್ರ ಸ್ಥಿತ್ಯಂತರಕ್ಕೆ ಪ್ರಮುಖ ಕಾರಣಗಳಾದವು. ಸಾಹಿತ್ಯಕ ಪ್ರಶ್ನೆಗಳಷ್ಟೇ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳಿಗೂ ವಿಮರ್ಶೆಯಲ್ಲಿ ಮಹತ್ವವಿದೆ ಎಂದು ಪ್ರತಿಪಾದಿಸಲಾಯಿತು. ಹೀಗಾಗಿ, ಈ ಕಾಲಘಟ್ಟದ ಕನ್ನಡ ವಿಮರ್ಶೆಗೆ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳು ಹೊಸದಾಗಿ ಸೇರ್ಪಡೆಗೊಂಡವು.

ಇದೇ ಕಾಲಘಟ್ಟದಲ್ಲಿ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪರಂಪರೆಯ ವಿರುದ್ಧ ತೀವ್ರವಾದ ತಾತ್ವಿಕ ವಿರೋಧ ವ್ಯಕ್ತಪಡಿಸುವ ಮೂಲಕ ಹುಟ್ಟಿದ ದಲಿತ ಸಾಹಿತ್ಯ ಚಳವಳಿ ಸಹ ಸಾಹಿತ್ಯದಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಭಾಷಿಕ ಸಂಗತಿಗಳನ್ನು ಬಹುಮುಖ್ಯ ವಿಚಾರಗಳೆಂದು ಮಂಡಿಸಿತು. ಭಾರತದ ಚರಿತ್ರೆ, ಪುರಾಣ ಮತ್ತು ಧರ್ಮವನ್ನು ದಲಿತ ದೃಷ್ಟಿಕೋನದಿಂದ ವ್ಯಾಖ್ಯಾನಿಸಿದ ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರೇರೇಪಿತವಾದ ದಲಿತ ಚಳವಳಿ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆ ಕುರಿತು ಅತ್ಯಂತ ನಿಷ್ಠುರವಾದ ವಿಮರ್ಶಾತ್ಮಕ ನಿಲುವು ತಾಳಿತು. ಈ ಚಳವಳಿ ಹಿನ್ನೆಲೆಯಲ್ಲಿ ರೂಪುಗೊಂಡ ದಲಿತ ಸಾಹಿತ್ಯ ಸಂಕಥನ ಕನ್ನಡ ಸಾಹಿತ್ಯ ಪರಂಪರೆಯನ್ನು ಜನಾಂಗ ನಿರ್ದಿಷ್ಟ ಪ್ರಶ್ನೆಗಳ ಮೂಲಕ ಮರುಮೌಲ್ಯಮಾಪನ ಮಾಡಿತು. ಹಾಗೆಯೇ, ಇದೇ ಜನಾಂಗ ನಿರ್ದಿಷ್ಟ ಪ್ರಶ್ನೆಗಳ ಮುಖಾಂತರವೇ, ಹೊಸ ಸಾಹಿತ್ಯ ಮತ್ತು ವಿಮರ್ಶಾ ರೂಪಗಳನ್ನು ನಿರ್ಮಿಸುವ ತೀವ್ರವಾದ ಪ್ರಯತ್ನವನ್ನು ಸಹ ಅತ್ಯಂತ ವ್ಯಾಪಕವಾಗಿ ಮಾಡಿತು. ಈ ಪ್ರಯತ್ನದ ಫಲವಾಗಿ ನೂತನ ದಲಿತ ಸಾಹಿತ್ಯ ಮತ್ತು ದಲಿತ ವಿಮರ್ಶಾ ಮೀಮಾಂಸೆಗಳು ಈ ಕಾಲದಲ್ಲಿ ಸ್ಪಷ್ಟ ಆಕಾರ ಪಡೆದುಕೊಂಡವು.

ದಲಿತ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಮತ್ತು ಜಾಗತಿಕ ಶೋಷಣಾನುಭವ ಪ್ರಧಾನ ಸಾಹಿತ್ಯಕ್ಕಿಂತ ನಿರ್ದಿಷ್ಟವಾದ ಭಿನ್ನ ಚಹರೆಗಳ ಮೂಲಕ ಈ ಸಂಕಥನ ವಿವರಿಸಿತು. ಬಹುಮುಖ್ಯವಾಗಿ ದಲಿತ ಮತ್ತು ಅಸ್ಪೃಶ್ಯ ಜನಾಂಗದ ಅನುಭವಗಳ ಸ್ವಯಂ ದಾಖಲೀಕರಣಾತ್ಮಕ ಅಭಿವ್ಯಕ್ತಿ ರೂಪಕ್ಕೆ ದಲಿತ ಸಾಹಿತ್ಯ ಎಂದು ವ್ಯಾಖ್ಯಾನಿಸಲಾಯಿತು. ಈ ಸಾಹಿತ್ಯದ ಸ್ವರೂಪ, ಧೋರಣೆಗಳು, ಆಶಯಗಳು ಮತ್ತು ನಿಲುವುಗಳನ್ನು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ನಿರೂಪಿಸಲಾಯಿತು. ಇಂಥ ಸಾಹಿತ್ಯ ವ್ಯಕ್ತಿ ಮೂಲದಿಂದ ಸೃಷ್ಟಿಯಾದರೂ, ನಿರ್ದಿಷ್ಟವಾಗಿ ಲೇಖಕ ಪ್ರತಿನಿಧಿಸುವ ಸಮಸ್ತ ಜನಾಂಗದ ಚರಿತ್ರೆ, ಪುರಾಣ, ವರ್ತಮಾನ ಮತ್ತು ಕನಸುಗಳನ್ನು ತಾತ್ವಿಕ ಭಿತ್ತಿಯಾಗಿ ಹೊಂದಿರಬೇಕು ಎಂದು ವಿಶ್ಲೇಷಿಸಲಾಯಿತು. ಇಂಥ ವಿಶಿಷ್ಟ ಹಾಗೂ ಹೊಸ ಸ್ವರೂಪದ ಸಾಹಿತ್ಯವನ್ನು ವಿವರಿಸಲು, ವಿಶ್ಲೇಷಿಸಲು ಮತ್ತು ಮೌಲ್ಯಮಾಪನ ಮಾಡಲು ರೂಢಿಗತ ಹಾಗೂ ಸ್ಥಾಪಿತ ವಿಮರ್ಶಾ ವಿಧಾನಗಳನ್ನು ಬಳಸುವುದು ಸೂಕ್ತವಲ್ಲ. ಹೀಗಾಗಿ, ಈ ನಿರ್ದಿಷ್ಟ ಸಾಹಿತ್ಯ ವಿಶಿಷ್ಟ ಹಾಗೂ ಈ ಸಾಹಿತ್ಯವನ್ನು ರೂಪಿಸುತ್ತಿರುವ ಸಂಸ್ಕೃತಿ ವಿಶಿಷ್ಟ ವಿಚಾರಾನುಭವಗಳ ದೃಷ್ಟಿಕೋನವಿರುವ ಹೊಸ ವಿಮರ್ಶೆಯ ಅಗತ್ಯವನ್ನು ಈ ಸಂಕಥನ ಬಲವಾಗಿ ಪ್ರತಿಪಾದಿಸಿತು. ಈ ವಿಮರ್ಶೆ ಸಾಹಿತ್ಯದಲ್ಲಿ ಮೂಲತಃ ಜನಾಂಗ ನಿರ್ದಿಷ್ಟವಾದ ಸಾಂಸ್ಕೃತಿಕ, ರಾಜಕೀಯಾತ್ಮಕ ಮತ್ತು ಭಾಷಿಕ ಪ್ರಶ್ನೆಗಳನ್ನು ಪ್ರತಿಷ್ಠಿತ ಸಾಹಿತ್ಯಕ ಪ್ರಶ್ನೆಗಳ ಎದುರು ಮುಖಾಮುಖಿಗೊಳಿಸಿತು. ಇದರಿಂದ ನವ್ಯೋತ್ತರ ಕನ್ನಡ ವಿಮರ್ಶೆಯ ವ್ಯಾಪ್ತಿ, ಸ್ವರೂಪ ಮತ್ತು ವಿಶ್ಲೇಷಣಾ ವಿಧಾನಗಳು ಹೊಸ ಆಯಾಮ ಪಡೆದುಕೊಂಡವು.

ದಲಿತ ಸಾಹಿತ್ಯ ಸಂಕಥನವನ್ನು ಕಟ್ಟುವ ಪ್ರಯತ್ನದ ಭಾಗವಾಗಿ ದೇವಯ್ಯ ಹರವೆ ಅವರು ದಲಿತ ಸಾಹಿತಿಯ ವಸ್ತುಲೋಕವನ್ನು ಕುರಿತು ಚರ್ಚಿಸುತ್ತಾ, "ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ

ನೋವುಗಳು ಕೇಂದ್ರಬಿಂದುವಾಗುತ್ತವೆ. ಮನುಷ್ಯನ ನೋವು, ಇವನ ಸಂಕೋಲೆಯ ಘಟನೆಗಳು, ಜಾತೀಯತೆಯಿಂದ ಉಂಟಾಗುವ ಸಮಸ್ಯೆಗಳು–ಈ ಕಾರಣಕ್ಕಾಗಿ ಪಡುವ ಯಾತನೆ, ಮನುಷ್ಯ ಮನುಷ್ಯರ ನಡುವಿರುವ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನೆಲೆ ಅವುಗಳೆಲ್ಲದರ ಇತಿಹಾಸ ಮೂಲಗಳನ್ನು ಅತ್ಯಂತ ಯಶಸ್ವಿಯಾಗಿ ಜಾನಪದ ಮಾಧ್ಯಮ ಮತ್ತು ಭಾಷೆಯ ಮುಖಾಂತರ ಸೃಷ್ಟಿ ಮಾಡುತ್ತಾನೆ"[೬] ಎಂದು ವಿಶ್ಲೇಷಿಸುತ್ತಾರೆ. ದಲಿತ ಸಾಹಿತ್ಯ ಮೂಲತಃ ದಲಿತ ಚಳವಳಿಯ ಹಿನ್ನೆಲೆಯಲ್ಲಿ ರೂಪುಗೊಂಡಿದೆ. ದಲಿತ ಚಳವಳಿ ಹೊರನೋಟಕ್ಕೆ ನಿರ್ದಿಷ್ಟ ಜನಾಂಗ ಅಥವಾ ಸಮುದಾಯವೊಂದರ ಬಹುರೂಪಿ ಸಮಸ್ಯೆಗಳನ್ನು ಕುರಿತ ಹೋರಾಟದಂತೆ ಕಂಡರೂ ಈ ಸಮಸ್ಯೆಗಳು ಊಳಿಗಮಾನ್ಯಶಾಹಿ, ಬಂಡವಾಳಶಾಹಿ ಮತ್ತು ನವವಸಾಹತುಶಾಹಿ ಹಿತಾಸಕ್ತಿಯ ಬೇರಿನಿಂದ ಹುಟ್ಟಿವೆ ಎನ್ನುವುದನ್ನು ಮನಗಾಣಬೇಕು. ಹೀಗಾಗಿ, ಇವೆಲ್ಲವುಗಳ ವಿರುದ್ಧ ಸೃಷ್ಟಿಸಲಾಗಿರುವ ಶಿಷ್ಟಸಾಹಿತ್ಯ, ಹೋರಾಟದ ಹಾಡುಗಳ ಸಾಹಿತ್ಯ, ಕರಪತ್ರ ಸಾಹಿತ್ಯ, ಘೋಷಣಾ ಸಾಹಿತ್ಯ, ಭಿತ್ತಿಪತ್ರ ಸಾಹಿತ್ಯ ಮತ್ತು ಪತ್ರಿಕಾ ವರದಿ ಸಾಹಿತ್ಯ ಮೊದಲಾದವುಗಳೂ ಕೂಡಾ ದಲಿತ ಸಾಹಿತ್ಯವೇ ಆಗಿದೆ ಎಂದು ಬಿ.ಎಂ. ಪುಟ್ಟಯ್ಯ ಅವರು ದಲಿತ ಸಾಹಿತ್ಯದ ವ್ಯಾಪ್ತಿ ಮತ್ತು ಸ್ವರೂಪವನ್ನು ವಿವರಿಸುತ್ತಾರೆ.

ದಲಿತ ಸಾಹಿತ್ಯ ಸಹ ಪ್ರಗತಿಪರ ಸಾಹಿತ್ಯವೆ. ಹೀಗಾಗಿ ಇದು ಸಾಮಾಜಿಕ ಬದಲಾವಣೆ, ಸಮಾಜದ ಸುಧಾರಣೆ ಮತ್ತು ಹೊಸ ಸಮಾಜದ ನಿರ್ಮಾಣವನ್ನು ತನ್ನ ಆಶಯಗಳನ್ನಾಗಿ ಸ್ವೀಕರಿಸಿತು. ಮಾನವೀಯತೆಯನ್ನು ಸಾಹಿತ್ಯದ ಪ್ರಧಾನ ಧೋರಣೆಯನ್ನಾಗಿ ಪ್ರತಿಪಾದಿಸಲಾಯಿತು. ಆರಂಭಿಕ ಘಟ್ಟದಲ್ಲಿ ಪುರಾಣ ವಿರೋಧಿ ಮತ್ತು ನಾಸ್ತಿಕತೆಗಳು ದಲಿತ ಸಾಹಿತ್ಯದ ನಿಲುವುಗಳಾಗಿದ್ದವು. ಆನಂತರ ಹಿಂದೂ ಧರ್ಮ ಮತ್ತು ವೈದಿಕತೆ ವಿರೋಧಿ ಪ್ರಜ್ಞೆಗಳು ಪ್ರಾಮುಖ್ಯತೆ ಪಡೆದುಕೊಂಡವು. ನಾಸ್ತಿಕತೆ ಬದಲಾಗಿ ದಲಿತ ಜನಾಂಗದ ಕುಲಪುರಾಣ, ಚರಿತ್ರೆ, ಪರಂಪರೆ, ಸಂಸ್ಕೃತಿ ಮತ್ತು ಕನಸುಗಳು ದಲಿತ ಸಾಹಿತ್ಯದ ತಾತ್ವಿಕತೆಯ ಬಹುಮುಖ್ಯ ಸಂಗತಿಗಳೆಂದು ಪರಿಗಣಿತವಾದವು. ಈ ಸಾಹಿತ್ಯ ಸಂಕಥನದ ಸಾಹಿತ್ಯ ಮೀಮಾಂಸೆಯನ್ನು ರೂಪಿಸುವುದರಲ್ಲಿ ದಲಿತ ಜನಾಂಗದ ಪುರಾಣ, ಪರಂಪರೆ ಮತ್ತು ಚರಿತ್ರೆಯ ಪುನಾರಚನೆಯ ಪ್ರಯತ್ನಗಳು ಮಹತ್ತರ ಪಾತ್ರ ವಹಿಸಿದವು. ಈ ಪ್ರವೃತ್ತಿಯನ್ನು ಕುರಿತು ಬಿ.ಎಂ. ಪುಟ್ಟಯ್ಯ ಅವರು, "ಭಾಷಿಕವಾಗಿ ಏನು ಮತ್ತು ಎಷ್ಟು ಅಭಿವ್ಯಕ್ತವಾಗಿದೆಯೊ ಅದಷ್ಟೇ ದಲಿತ ಸಾಹಿತ್ಯ ಎನ್ನುವುದು ಹುಡುಗಾಟಿಕೆಯ ಮತ್ತು ಸರಳ ತೀರ್ಮಾನವಾಗುತ್ತದೆ. ದಲಿತ ಸಾಹಿತ್ಯ ಅಂತ ಯಾವುದನ್ನು ಕರೆಯಲಾಗಿದೆಯೋ ಅದು ಗ್ರಾಂಥಿಕ ಸಾಹಿತ್ಯ ಮಾತ್ರವೇ ಅಲ್ಲ"[೭] ಎಂದು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾರೆ.

ದಲಿತ ಸಾಹಿತ್ಯದ ವಸ್ತು, ಆಶಯಗಳು ಮತ್ತು ತಾತ್ವಿಕ ನಿಲುವುಗಳಲ್ಲಿ ಕಾಲಕಾಲಕ್ಕೆ ಆದ ಸ್ಥಿತ್ಯಂತರಗಳು ದಲಿತ ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಸಹ ಪಲ್ಲಟಗೊಳಿಸುತ್ತಾ ಬಂದವು. ದಲಿತ ಸಾಹಿತ್ಯ ವಿಮರ್ಶೆಯ ಅವಸ್ಥಾಂತರವು ನವ್ಯೋತ್ತರ ಕನ್ನಡ ವಿಮರ್ಶೆಯ ಸ್ವರೂಪದ ಪರಿವರ್ತನೆಗೂ

ಮೂಲವಾಯಿತು. ಹೀಗಾಗಿ, ಸಾಹಿತ್ಯ ವಿಮರ್ಶೆಯ ಸಾಹಿತ್ಯಾಸಕ್ತ ನೆಲೆಗಳಲ್ಲಿ ಭಾಷೆ, ಸಂಸ್ಕೃತಿ, ರಾಜಕಾರಣ ಮತ್ತು ಚರಿತ್ರೆಯ ಸಂಗತಿಗಳು ಹೆಚ್ಚಿನ ಸ್ಥಾನ ಪಡೆದುಕೊಂಡವು. ಸಾಹಿತ್ಯಕ್ಕೂ ಮತ್ತು ಸಮಕಾಲೀನ ಬದುಕಿಗೂ ಇರುವ ಸಂಬಂಧದ ವಿಶ್ಲೇಷಣೆ ವಿಮರ್ಶೆಯ ಅತ್ಯಂತ ಮಹತ್ವದ ಪ್ರಶ್ನೆಯಾಯಿತು. ಜನಾಂಗ ಅಥವಾ ಸಮುದಾಯ ನಿರ್ದಿಷ್ಟ ಸಂಗತಿಗಳು ಸಾಹಿತ್ಯ ವಿಮರ್ಶೆಯಲ್ಲಿ ವಿಶ್ಲೇಷಣೆಗೊಳಗಾಗುವ ಸಂದರ್ಭದಲ್ಲಿ ಇವುಗಳನ್ನು ರೂಪಿಸುತ್ತಿರುವ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಹಿತಾಸಕ್ತಿಗಳ ಸಾಂಸ್ಕೃತಿಕ ರಾಜಕಾರಣ ಕುರಿತ ಚರ್ಚೆ ಮುನ್ನೆಲೆಗೆ ಬಂದಿತು. ಈ ಎಲ್ಲಾ ಪ್ರಯತ್ನಗಳು ನವ್ಯೋತ್ತರ ಕನ್ನಡ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ರೂಪಿಸಲಾರಂಭಿಸಿದವು.

ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಲೇಖಕಿಯರು ಮತ್ತು ಚಿಂತಕಿಯರ ಆಲೋಚನಾ ಕ್ರಮಗಳ ಮೇಲೆ ವ್ಯಾಪಕವಾದ ಪ್ರಭಾವ ಬೀರಿತು. ಸಮಾಜ, ಸಂಸ್ಕೃತಿ, ರಾಜಕಾರಣ, ಧರ್ಮ, ಭಾಷೆ, ಚರಿತ್ರೆ ಮತ್ತು ಸಾಹಿತ್ಯ ಮೊದಲಾದವುಗಳನ್ನು ಈ ಚಿಂತನೆ ಮಹಿಳಾ ದೃಷ್ಟಿಕೋನದ ಮೂಲಕ ವಿಶ್ಲೇಷಿಸುವ ಮತ್ತು ವ್ಯಾಖ್ಯಾನಿಸುವ ವಿಧಾನಗಳನ್ನು ಒದಗಿಸಿತು. ಇದರಿಂದ ಈ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಪರಂಪರೆ, ಸಮಕಾಲೀನ ಸಾಹಿತ್ಯ ಮತ್ತು ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಸ್ತ್ರೀವಾದಿ ಚಿಂತನೆಯ ಹಲವು ವಿಶ್ಲೇಷಣಾ ಕ್ರಮಗಳ ಮೂಲಕ ವಿಮರ್ಶೆಗೊಳಪಡಿಸಲಾಯಿತು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವ್ಯಕ್ತವಾಗಿರುವ ಪುರುಷನಿಷ್ಠ ದೃಷ್ಟಿಕೋನ ಮತ್ತು ಸ್ತ್ರೀದಮನದ ಸ್ವರೂಪವನ್ನು ಹಲವು ನೆಲೆಗಳಲ್ಲಿ ಪುನರ್‌ಮೌಲ್ಯೀಕರಣ ಮಾಡುವ ಪ್ರಕ್ರಿಯೆ ಪ್ರಾರಂಭವಾಯಿತು. ಹಾಗೆಯೇ, ಸ್ತ್ರೀಚೈತನ್ಯದ ನೆಲೆಗಳನ್ನು ಶೋಧಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆದವು. ಮಹಿಳಾ ಸಂವೇದನೆಯನ್ನು ಪ್ರಧಾನ ತಾತ್ವಿಕತೆಯನ್ನಾಗಿ ಹೊಂದಿರುವ ಸಾಹಿತ್ಯವನ್ನು ಮಹಿಳೆಯರೇ ಸೃಷ್ಟಿಸಬೇಕು ಎನ್ನುವುದು ಈ ಕಾಲಘಟ್ಟದಲ್ಲಿ ಪ್ರಸಿದ್ಧಿಗೆ ಬಂದ ಸ್ತ್ರೀವಾದಿ ಸಾಹಿತ್ಯ ಸಂಕಥನದ ಪ್ರಮುಖ ತತ್ವವಾಗಿದೆ.

ಈ ಸಂಕಥನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಿರೂಪಿತವಾಗಿರುವ ಮಹಿಳಾ ಪ್ರತಿನಿಧೀಕರಣ ಮತ್ತು ಸ್ತ್ರೀಬದುಕಿನ ಚಿತ್ರಣವನ್ನು ಸ್ತ್ರೀವಾದಿ ಪರಿಭಾಷೆಯ ಮೂಲಕ ಅವಲೋಕಿಸುವ ಅಗತ್ಯವನ್ನು ಪ್ರತಿಪಾದಿಸಿತು. ಹಾಗೆಯೇ, ಅಪ್ಪಟ ಸ್ತ್ರೀ ಸಂವೇದನೆಯ ನೈಜ ಮಹಿಳಾ ಸಾಹಿತ್ಯವು ಇದುವರೆಗಿನ ಪ್ರಧಾನಧಾರೆಯ ಸಾಹಿತ್ಯಕ್ಕಿಂತ ತನ್ನ ಸ್ವರೂಪ, ಆಶಯ ಮತ್ತು ನಿಲುವುಗಳಲ್ಲಿ ಹೇಗೆ ವಿಶಿಷ್ಟವಾಗಿರುತ್ತದೆ ಎನ್ನುವುದನ್ನು ಈ ಸಂಕಥನ ವಿವರಿಸಿತು. ಇಂಥ ಹೊಸ ಬಗೆಯ ಸಾಹಿತ್ಯವನ್ನು ಕನ್ನಡದ ಪ್ರಧಾನ ಧಾರೆಯ ವಿಮರ್ಶೆ ಮೂಲಕ ಸಮರ್ಪಕವಾಗಿ ವಿಶ್ಲೇಷಿಸಲು ಸಾಧ್ಯವಿಲ್ಲ. ಆದ್ದರಿಂದ, ಹೊಸ ಸ್ವರೂಪದ ವಿಮರ್ಶೆಯು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಅಗತ್ಯದ ಸಂಗತಿಯಾಗಿದೆ ಎಂದು ಪ್ರತಿಪಾದಿಸಲಾಯಿತು. ಇದನ್ನು ಕುರಿತು ಆಶಾದೇವಿ ಅವರು, "ಬದಲಾದ ಕಾಲ ಮತ್ತು ಸನ್ನಿವೇಶದ ಹಿನ್ನೆಲೆಯಲ್ಲಿ ಸಾಹಿತ್ಯದ ವ್ಯಾಖ್ಯಾನವೇ ಈ ಹಿಂದೆಂದೂ ಕಾಣದ ವಿಸ್ತಾರವನ್ನು, ವೈವಿಧ್ಯತೆಯನ್ನು ಪಡೆದುಕೊಳ್ಳುತ್ತಿರುವ ಈ

ದಿನಗಳಲ್ಲಿ, ಸಾಹಿತ್ಯೇತರ ಕಾರಣಗಳಿಗಾಗಿ ಸಾಹಿತ್ಯವನ್ನು ಗ್ರಹಿಸುವ ಓದುಗಳು ಮುಖ್ಯವಾಗುತ್ತಿವೆ. ಈ ಬಗೆಯ ಓದುಗಳು ಈ ತನಕ ರೂಪಿತವಾಗಿರುವ ಕಾಲಾತೀತ ಸಾಹಿತ್ಯಿಕ ಮಾನದಂಡಗಳನ್ನು ಪ್ರಶ್ನಿಸುತ್ತ ಓದುವ ಓದುಗಳೇ ಆಗಿರುತ್ತವೆ. ಅದು ಸ್ತ್ರೀವಾದಿ ನೆಲೆಗಳನ್ನು ಗುರುತಿಸುವುದಾಗಿರಬಹುದು, ಯಾಜಮಾನ್ಯದ ನೆಲೆಗಳನ್ನು ಗುರುತಿಸುವ ಓದಾಗಿರಬಹುದು, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಓದುವ ಓದಾಗಿರಬಹುದು, ಸಮಾಜಶಾಸ್ತ್ರೀಯ ಅಥವಾ ಮನಃಶಾಸ್ತ್ರೀಯ ಓದಾಗಿರಬಹುದು ಎಂದರೆ ಶುದ್ಧ ಕಾವ್ಯ ಮೀಮಾಂಸೆಯ ನೆಲೆಗಳಿಗಿಂತ ಭಿನ್ನವಾದ ನೆಲೆಯಲ್ಲಿ ಸಾಹಿತ್ಯವನ್ನು ಗುರುತಿಸುವ ಈ ಪ್ರಯತ್ನಗಳು ಸಹಜವಾಗಿಯೇ ಹೊಸ ಮಾನದಂಡಗಳ ರೂಪಿಸುವಿಕೆಯಲ್ಲಿ ಆಸಕ್ತವಾಗಿರುತ್ತವೆ"[೨೬] ಎಂದು ಸಮರ್ಥಿಸುತ್ತಾರೆ.

ಕನ್ನಡ ಸಾಹಿತ್ಯ ಸಂಕಥನಗಳ ಫಲವಾಗಿ, ಕಳೆದ ಶತಮಾನದ ಎರಡನೆಯ ಘಟ್ಟದ ಕೊನೆಯ ಮೂರು ದಶಕಗಳಲ್ಲಿ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಹಲವು ಹೊಸ ಬಗೆಯ ಮೀಮಾಂಸೆಗಳು ಚಾಲ್ತಿಗೆ ಬಂದವು. ಇವು ಸಾಹಿತ್ಯ ಮತ್ತು ವಿಮರ್ಶೆಗೆ ಇರುವ ಸಾಮಾಜಿಕ ಹೊಣೆಗಾರಿಕೆಯನ್ನು ಕುರಿತು ಹಲವು ನೆಲೆಗಳಲ್ಲಿ ವಿಶ್ಲೇಷಣೆ ಮಾಡಿದವು. ಇದರ ಪರಿಣಾಮವಾಗಿ ನವ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ವಿಮರ್ಶೆಯ ಆಯಾಮ ಪಡೆದುಕೊಂಡಿತು. ಈ ಹಿನ್ನೆಲೆಯಲ್ಲಿ, ಸಾಹಿತ್ಯ ಸಂಕಥನಗಳು ರೂಪಿಸಿರುವ ಸಾಹಿತ್ಯ ಮೀಮಾಂಸೆಯ ಪಾತ್ರ ಅತ್ಯಂತ ಗಮನಾರ್ಹವಾದುದು.

೩.೪.೩ ಸಾಹಿತ್ಯ ಮೀಮಾಂಸೆ

ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ಸಂಕಥನಗಳು ಕಳೆದ ಶತಮಾನದ ಅಂತ್ಯದ ವೇಳೆಗೆ ಸಾಹಿತ್ಯದ ಸ್ವರೂಪ, ವ್ಯಾಪ್ತಿ ಮತ್ತು ಕಾರ್ಯಮಾದರಿಗಳನ್ನು ಕುರಿತು ಹಲವು ಅರ್ಥಪೂರ್ಣ ಮೀಮಾಂಸೆಗಳನ್ನು ಕಟ್ಟಿದವು. ಈ ಮೀಮಾಂಸೆಗಳು ಇಪ್ಪತ್ತನೆಯ ಶತಮಾನದ ಆಧುನಿಕ ಸಾಹಿತ್ಯ ವಿಮರ್ಶೆ ಮತ್ತು ಆ ಮುಂಚಿನ ಕಾವ್ಯ ಮೀಮಾಂಸೆಯ ಸಾಹಿತ್ಯಕ ಗ್ರಹಿಕೆಗಳು ಹಾಗೂ ತತ್ವಗಳಿಗಿಂತ ಅತ್ಯಂತ ಭಿನ್ನವಾಗಿದ್ದವು. ಈ ಮೀಮಾಂಸೆಗಳು ಬಹುಮುಖ್ಯವಾಗಿ ಸಾಹಿತ್ಯದ ವ್ಯಾಖ್ಯೆ, ವ್ಯಾಪ್ತಿ ಮತ್ತು ಮಹತ್ವದ ಕುರಿತು ಹೊಸದಾಗಿ ಮಾಡಿದ ವಿಶ್ಲೇಷಣೆಗಳು ಸಾಹಿತ್ಯವನ್ನು ಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಅನೇಕ ತತ್ವ, ಪ್ರಮೇಯ ಮತ್ತು ಸಿದ್ಧಾಂತಗಳನ್ನು ಮಂಡಿಸಿದವು. ಹಲವು ಆಧುನಿಕ ಪರಿಭಾಷೆ ಹಾಗೂ ಪರಿಕಲ್ಪನೆಗಳನ್ನು ಒದಗಿಸಿದವು.

ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಗಳು ಪ್ರತಿಪಾದಿಸಿದ 'ಪಠ್ಯ ಮೀಮಾಂಸೆ' ಈ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದುದು. ಇದು ಸಾಹಿತ್ಯದ ಚರ್ಚೆಯಲ್ಲಿ ಹೊಸ ಸಂಚಲನ ತಂದಿತು. ಸಾಹಿತ್ಯದ ಸ್ವರೂಪ, ವ್ಯಾಪ್ತಿ ಮತ್ತು ಕಾರ್ಯಮಾದರಿಗಳನ್ನು ವ್ಯಾಪಕಗೊಳಿಸಿತು. ಪಠ್ಯದ ವಿಶ್ಲೇಷಣೆಯಲ್ಲಿ ಹಲವು ನೂತನ ವಿಧಾನಗಳ ಉಪಯುಕ್ತತೆಯನ್ನು ಕಲ್ಪಿಸಿಕೊಟ್ಟಿತು.

ಕನ್ನಡ ಸಾಹಿತ್ಯ ಸಂಕಥನಗಳು ರೂಪಿಸಿದ ಬಂಡಾಯ ಸಾಹಿತ್ಯ ಮೀಮಾಂಸೆ, ದಲಿತ ಸಾಹಿತ್ಯ ಮೀಮಾಂಸೆ ಮತ್ತು ಸ್ತ್ರೀವಾದಿ ಸಾಹಿತ್ಯ ಮೀಮಾಂಸೆಗಳು ಪಾಶ್ಚಾತ್ಯ ಮೀಮಾಂಸೆಗಳಿಗಿಂತ ಭಿನ್ನವಾದ ಮೀಮಾಂಸೆಗಳನ್ನು ಕಟ್ಟಿದವು. ಇವು ಮುಖ್ಯವಾಗಿ ಸಾಹಿತ್ಯದ ಅನುಸಂಧಾನದಲ್ಲಿ ಸಾಹಿತ್ಯೇತರ ಸಂಗತಿಗಳು ಮತ್ತು ವರ್ತಮಾನದ ಬದುಕಿನ ಪ್ರಶ್ನೆಗಳ ಮಹತ್ವವನ್ನು ಪ್ರತಿಪಾದಿಸಿದವು. ಸಾಹಿತ್ಯ ಎಂದರೇನು, ಸಾಹಿತ್ಯ ಯಾರಿಗಾಗಿ, ಸಾಹಿತ್ಯ ಏತಕ್ಕಾಗಿ ಮತ್ತು ಸಾಹಿತ್ಯದಿಂದ ಆಗುವ ಲಾಭ ಏನು ಎನ್ನುವ ಪ್ರಶ್ನೆಗಳನ್ನು ಕುರಿತು ಇವು ಅರ್ಥಪೂರ್ಣವಾದ 'ಜನಪರ ಸಾಹಿತ್ಯ ಮೀಮಾಂಸೆ'ಯನ್ನು ಪ್ರತಿಪಾದಿಸಿದವು. ಸಾಹಿತ್ಯ ನಿರಪೇಕ್ಷವೂ ಅಲ್ಲ ಅಥವಾ ಸಾಪೇಕ್ಷವೂ ಅಲ್ಲ; ಅದು ಜೀವಪರ ಅಥವಾ ಜನಪರ. ಬದುಕಿನ 'ಬದ್ಧತೆ'ಯೇ ಸಾಹಿತ್ಯದ ತಾತ್ವಿಕತೆ; ಸಾಮಾಜಿಕ ಹೊಣೆಗಾರಿಕೆಯೇ ಸಾಹಿತ್ಯದ ನೈತಿಕತೆ ಎನ್ನುವುದು ಈ ಮೀಮಾಂಸೆಯ ಪ್ರಮುಖ ನಿಲುವು. ಹೀಗೆ ಈ ಮೀಮಾಂಸೆ ಸಾಹಿತ್ಯದ ಸ್ವರೂಪ, ವ್ಯಾಪ್ತಿ ಮತ್ತು ಕಾರ್ಯೋದ್ದೇಶಗಳನ್ನು ವಿಸ್ತಾರಗೊಳಿಸಿತು ಹಾಗೂ ಸಂಕೀರ್ಣಗೊಳಿಸಿತು.

ಸಾಹಿತ್ಯದ ಧೋರಣೆಗಳನ್ನು ಕುರಿತು ಕನ್ನಡ ಸಾಹಿತ್ಯ ಸಂಕಥನಗಳ ಮೀಮಾಂಸೆಗಳು ಆಧುನಿಕವಾದ 'ಆಶಯ ಮೀಮಾಂಸೆ'ಯನ್ನು ನಿರೂಪಿಸಿದವು. ಸಾಮಾಜಿಕ ಸುಧಾರಣೆ ಅಥವಾ ಬದಲಾವಣೆಯನ್ನು ಗುರಿಯಾಗಿರಿಸಿಕೊಂಡಿರುವ 'ಸಾಮಾಜಿಕ ಪ್ರಜ್ಞೆ'; ಪರ್ಯಾಯ ಜನಪರ ರಾಜಕಾರಣದ ಸಾಧ್ಯತೆಯ ಉದ್ದೇಶದ 'ರಾಜಕೀಯ ಪ್ರಜ್ಞೆ'; ವರ್ತಮಾನದ ಬದುಕಿನ ಅರ್ಥಪೂರ್ಣ ಪರಿಷ್ಕರಣೆಗೆ ಅಗತ್ಯವಾಗಿರುವ 'ಚಾರಿತ್ರಿಕ ಪ್ರಜ್ಞೆ ಮತ್ತು ಪುರಾಣಪ್ರಜ್ಞೆ' ಹಾಗೂ ಮಾನವೀಯತೆಯ ಸಾಕಾರದ ಧ್ಯೇಯವುಳ್ಳ 'ಸಮಕಾಲೀನ ಸಂವೇದನೆ'ಗಳು ಸಾಹಿತ್ಯದ ಆಶಯಗಳಾಗಿರಬೇಕು ಎನ್ನುವುದನ್ನು ಈ ಮೀಮಾಂಸೆ ಬಲವಾಗಿ ಪ್ರತಿಪಾದಿಸಿತು.

ಹೊಸ ಸ್ವರೂಪದ ಸಾಹಿತ್ಯ, ನೂತನ ಆಶಯಗಳು, ಮತ್ತು ಅಭಿವ್ಯಕ್ತಿ ವಿಧಾನಗಳು ಸಂವಹನಶೀಲತೆಯಲ್ಲಿ ಉಂಟುಮಾಡಿದ ಪಲ್ಲಟವನ್ನು ಸಮರ್ಥಿಸುವುದಕ್ಕಾಗಿ ಇವು ವಿಶಿಷ್ಟವಾದ 'ಆಕೃತಿ ಮೀಮಾಂಸೆ'ಯನ್ನು ಸೃಷ್ಟಿಸಿದವು. ಚಾರಿತ್ರಿಕವಾಗಿ ಪ್ರಥಮಬಾರಿಗೆ ಅಕ್ಷರಲೋಕಕ್ಕೆ ಪ್ರವೇಶಿಸಿದ ಅಕ್ಷರವಂಚಿತ ಮತ್ತು ದಮನಿತ ಸಮುದಾಯಗಳ ಮೊದಲ ತಲೆಮಾರಿನ ಬರಹಗಾರರು ಸೃಷ್ಟಿಸುವ ಸಾಹಿತ್ಯವನ್ನು ಪ್ರತಿಷ್ಠಿತ ಸಾಹಿತ್ಯ ವಿಮರ್ಶೆ ಮತ್ತು ಮೀಮಾಂಸೆಯ ಮಾನದಂಡಗಳ ಮೂಲಕ ಬೆಲೆಕಟ್ಟುವುದು ಸೂಕ್ತವಲ್ಲ. ಸಾಹಿತ್ಯದ ಶ್ರೇಷ್ಠತೆ ಮತ್ತು ಕಲಾತ್ಮಕತೆಯ ಪರಿಕಲ್ಪನೆಗಳಿಗೂ; ಶ್ರೇಣೀಕೃತ ಮೌಲ್ಯವ್ಯವಸ್ಥೆ ಮತ್ತು ಪಾವಿತ್ರ್ಯದ ನಂಬಿಕೆಗಳಿಗೂ ನೇರವಾದ ಸಂಬಂಧವಿದೆ. ಆದ್ದರಿಂದ ಈ ದೃಷ್ಟಿಕೋನಗಳು ಸಾಹಿತ್ಯದಲ್ಲಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಲೈಂಗಿಕ ರಾಜಕಾರಣದ ಪ್ರಶ್ನೆಗಳನ್ನು ನಿರಾಕರಿಸುತ್ತವೆ. ರಸಾನುಭವ ಸಾಧ್ಯಗೊಳಿಸುವ ಆತ್ಮಾನುಭೂತಿಗೆ ವಿರುದ್ಧವಾಗಿ ಸಮಾಜ, ಸಂಸ್ಕೃತಿ, ರಾಜಕಾರಣ ಮತ್ತು ಆರ್ಥಿಕ ಸಂಗತಿಗಳ ಕುರಿತ ಪ್ರಖರವಾದ ಚಿಂತನೆ, ಅರ್ಥಪೂರ್ಣವಾದ ಆಲೋಚನೆ ಹಾಗೂ ಕ್ರಿಯಾತ್ಮಕವಾದ

ವೈಚಾರಿಕ ಸಂಘರ್ಷವನ್ನು ಪ್ರೇರೇಪಿಸಬೇಕಾದುದು ಸಾಹಿತ್ಯದ ಆಕೃತಿ ಪ್ರಶ್ನೆಗಳ ನೈತಿಕ ಕಾಳಜಿಯಾಗಬೇಕು ಎನ್ನುವುದು ಈ ಮೀಮಾಂಸೆಯ ನಿಲುವು. ಸಾಹಿತ್ಯದ ಸ್ವರೂಪ, ಆಶಯ ಮತ್ತು ಧೋರಣೆಗಳ ಪಲ್ಲಟದ ಪರಿಣಾಮವಾಗಿರುವ ಆಕೃತಿ ಪ್ರಶ್ನೆಯು ಸಮಾಜ, ಸಂಸ್ಕೃತಿ ಮತ್ತು ಚರಿತ್ರೆ ಕುರಿತ ವ್ಯಾಖ್ಯಾನ ಕೂಡಾ ಆಗಿದೆ ಎನ್ನುವುದು ಈ ನೂತನ ಆಕೃತಿ ಮೀಮಾಂಸೆಯ ವಾದವಾಗಿದೆ.

ಸಾಹಿತ್ಯ ಸಂಕಥನಗಳು ರೂಪಿಸಿದ ಈ ಆಧುನಿಕ ಸಾಹಿತ್ಯ ಮೀಮಾಂಸೆಗಳು ಪ್ರಧಾನಧಾರೆಯ ಸಾಹಿತ್ಯ ವಿಮರ್ಶೆಯ ತಾತ್ವಿಕತೆಯನ್ನು ಹೀಗೆ ತೀವ್ರವಾಗಿ ಪ್ರಶ್ನಿಸಿದವು. ಸಾಹಿತ್ಯದ ವಿಶ್ಲೇಷಣೆಯಲ್ಲಿ ಸಾಹಿತ್ಯೇತರ ಸಂಗತಿಗಳು, ಬಹುಶಿಸ್ತುವಿಧಾನಗಳು ಮತ್ತು ಸಮಕಾಲೀನ ಬದುಕಿನ ಗಂಭೀರ ಪ್ರಶ್ನೆಗಳನ್ನು ಅತ್ಯಂತ ಮುಖ್ಯವೆಂದು ಪರಿಗಣಿಸಿದವು. ಇದರಿಂದ ಕಳೆದ ಶತಮಾನದ ಕೊನೆಯ ಘಟ್ಟದ ವೇಳೆಗೆ ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ಪರಿಭಾವಿಸುವ ಕ್ರಮ ಮಾನ್ಯತೆ ಪಡೆದುಕೊಂಡಿತು.

೩.೫. ಸಂಸ್ಕೃತಿ ಸಂಕಥನಗಳು

ಕಳೆದ ಶತಮಾನದ ಆರಂಭದಿಂದ ಮಾನವ ಚರಿತ್ರೆಯಷ್ಟೇ ಪುರಾತನವೂ ಮತ್ತು ವೈವಿಧ್ಯಪೂರ್ಣವೂ ಆದ 'ಸಂಸ್ಕೃತಿ' ಕುರಿತು ವ್ಯಾಪಕವಾದ ಚಿಂತನೆಗಳು ಮತ್ತು ಅಧ್ಯಯನಗಳು ನಡೆಯಲಾರಂಭಿಸಿದವು. ಮೊದಲಿಗೆ, ಹತ್ತೊಂಭತ್ತನೆಯ ಶತಮಾನದಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಕವಿ ಮತ್ತು ಶಿಕ್ಷಣ ತಜ್ಞನಾಗಿದ್ದ ಮ್ಯಾಥ್ಯೂ ಆರ್ನಾಲ್ಡ್‌ನ (೧೮೨೨-೧೮೮೮) 'ಕಲ್ಚರ್ ಅಂಡ್ ಅನಾರ್ಕಿ' (೧೮೬೯) ಕೃತಿಯಿಂದ ಪಾಶ್ಚಾತ್ಯ ಸಂಸ್ಕೃತಿ ಕುರಿತ ಗಂಭೀರವಾದ ಅಧ್ಯಯನ ಆರಂಭವಾಯಿತು. ಆನಂತರ ಇದು ಯುರೋಪು ಮತ್ತು ಅಮೇರಿಕಾ ಖಂಡಗಳಿಗೆ ವಿಸ್ತರಿಸಿತು. ಕ್ರಮೇಣ ವಸಾಹತುಶಾಹಿ ಶಿಕ್ಷಣ ಮತ್ತು ಆಳ್ವಿಕೆಯ ನೀತಿಗಳ ಫಲವಾಗಿ ಜಗತ್ತಿನ ಬಹುಪಾಲು ವಸಾಹತು ರಾಷ್ಟ್ರಗಳಿಗೆ ಹರಡಿತು. ಇಪ್ಪತ್ತನೆಯ ಶತಮಾನದ ಎರಡನೆಯ ಘಟ್ಟದ ವೇಳೆಗೆ ಈ ಪಾಶ್ಚಾತ್ಯ ಸಂಸ್ಕೃತಿ ಅಧ್ಯಯನ ಕ್ರಮಗಳಲ್ಲಿ ಆಮೂಲಾಗ್ರ ಪಲ್ಲಟಗಳಾದವು. ಸಂಸ್ಕೃತಿ ಅಧ್ಯಯನದ ಪ್ರಾರಂಭಿಕ ಘಟ್ಟದಲ್ಲಿ ಸಂಸ್ಕೃತಿಯನ್ನು ಮಾನವ ಬದುಕಿನ 'ವಿಶೇಷ' ಅಥವಾ 'ಆದರ್ಶ ರೂಪ'ವೆಂದು ಭಾವಿಸಲಾಗಿದ್ದರೆ; ಈ ಹಂತದಲ್ಲಿ ಅದನ್ನು ಮನುಷ್ಯ ಜೀವನದ 'ಸಾಧಾರಣ' ಅಥವಾ 'ಸಾಮಾನ್ಯ ಸಂಗತಿ' ಎಂದು ವಿವರಿಸಲಾಯಿತು.

ಪಾಶ್ಚಾತ್ಯ ಸಂಸ್ಕೃತಿ ಚಿಂತನೆ ಅಥವಾ ಸಂಸ್ಕೃತಿ ಅಧ್ಯಯನ ಕ್ರಮಗಳ ಮೇಲೆ ಹಲವು ರಾಜಕೀಯ, ಆರ್ಥಿಕ ಮತ್ತು ತಾತ್ವಿಕ ವಿಚಾರಧಾರೆಗಳು ದಟ್ಟವಾದ ಪ್ರಭಾವಬೀರಿದವು. ಪರಿಣಾಮವಾಗಿ ಸಂಸ್ಕೃತಿಯ ಸ್ವರೂಪ ಮತ್ತು ಕಾರ್ಯಮಾದರಿಗಳನ್ನು ಕುರಿತು ವೈವಿಧ್ಯಮಯ ವ್ಯಾಖ್ಯಾನಗಳು, ಪ್ರಮೇಯಗಳು ಮತ್ತು ಸಿದ್ಧಾಂತಗಳು ಪ್ರತಿಪಾದನೆಯಾದವು. ಈ ವಿದ್ಯಮಾನದಲ್ಲಿ ಮೊದಲಿಗೆ ಪ್ರಧಾನವಾಗಿ ಸಾಹಿತ್ಯ ಚಿಂತಕರು ಮತ್ತು ವಿಮರ್ಶಕರು ಕಂಡುಬರುತ್ತಾರೆ. ಆನಂತರ ವೈವಿಧ್ಯಮಯ ಅಧ್ಯಯನ ಶಿಸ್ತುಗಳ, ವಿವಿಧ ಹಿನ್ನಲೆ ಮತ್ತು ಉದ್ದೇಶವುಳ್ಳ ಬಹುರೂಪಿ ಚಿಂತಕರು ತೊಡಗಿಕೊಂಡಿದ್ದಾರೆ. ಈ ಸಮಗ್ರ ಪ್ರಯತ್ನಗಳ ಫಲಿತವಾಗಿ

ಸಂಸ್ಕೃತಿಯನ್ನು ನಿರಪೇಕ್ಷ ನೆಲೆಗೆ ಬದಲು ಸಾಪೇಕ್ಷ ನೆಲೆಯಲ್ಲಿ; ಅಖಂಡ ಅಥವಾ ಏಕಘನಾಕೃತಿ ಬದಲು ಬಹುರೂಪಿಯಾದ ಬಿಡಿ ಆಕೃತಿಗಳಲ್ಲಿ; ನೈತಿಕ ಆದರ್ಶ ರೂಪಕ್ಕೆ ವಿರುದ್ಧವಾಗಿ ಬದುಕಿನ ಸಹಜ ವಾಸ್ತವದ ರೂಪಗಳಲ್ಲಿ ಹೀಗೆ ಬಹುಸ್ತರಗಳಲ್ಲಿ ಗ್ರಹಿಸುವ, ವಿವರಿಸುವ ವಿಧಾನಗಳು ಜನಪ್ರಿಯವಾದವು. ಬಹುಮುಖ್ಯವಾಗಿ ಸಂಸ್ಕೃತಿಯ 'ಶ್ರೇಣೀಕರಣ'ದ ಪರಿಕಲ್ಪನೆ ಸ್ಥಾನದಲ್ಲಿ 'ಸಮಾನತೀಕರಣ'ದ ಪರಿಕಲ್ಪನೆ ಮುನ್ನೆಲೆಗೆ ಬಂದಿತು. ಬಹುಸಂಸ್ಕೃತಿಗಳ ಮಾನ್ಯೀಕರಣಕ್ಕೆ ಹೆಚ್ಚು ಮನ್ನಣೆ ನೀಡಲಾಯಿತು. ಮುಂದಿನ ದಿನಗಳಲ್ಲಿ ಕನ್ನಡ ಸಂಸ್ಕೃತಿ ಚಿಂತನೆ ಮತ್ತು ಅಧ್ಯಯನ ಕ್ರಮಗಳಲ್ಲೂ ಈ ಪ್ರವೃತ್ತಿ ವ್ಯಾಪಕವಾಗಿ ಚಾಲನೆಗೆ ಬಂದವು.

ಸಂಸ್ಕೃತಿ ಕುರಿತ ಈ ಸಂಕಥನಗಳು ಹೊಸ ಸಾಂಸ್ಕೃತಿಕ ಮೀಮಾಂಸೆ ಮಾತ್ರವಲ್ಲದೆ, ನೂತನ ಸಾಹಿತ್ಯ ಮೀಮಾಂಸೆ ಹಾಗೂ ವಿಮರ್ಶಾ ಮೀಮಾಂಸೆಗಳನ್ನು ಸಹ ಕಟ್ಟಿದವು. ಇದರಿಂದ ಸಾಹಿತ್ಯದ ಸ್ವರೂಪ ಕುರಿತ ಸಾಂಪ್ರದಾಯಕ ಜನಪ್ರಿಯ ಗ್ರಹೀತಗಳು ಹಿನ್ನೆಲೆಗೆ ಸರಿದವು. ಹೊಸ ಆಲೋಚನೆಗಳು, ತಿಳಿವಳಿಕೆಗಳು ಮುಂಚೂಣಿಗೆ ಬಂದವು. ಇದು ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪದ ಮೇಲೂ ದಟ್ಟ ಪರಿಣಾಮಗಳನ್ನು ಉಂಟು ಮಾಡಿತು. ವಿಮರ್ಶೆಯ ಉದ್ದೇಶ ಮತ್ತು ಕಾರ್ಯಮಾದರಿಗಳಲ್ಲಿ ಗಂಭೀರವಾದ ಮಾರ್ಪಾಟುಗಳಾದವು. ಕಳೆದ ಶತಮಾನದ ಅರವತ್ತರ ದಶಕದ ವೇಳೆಗೆ ಪಾಶ್ಚಾತ್ಯರಲ್ಲಿ ಈ ವಿದ್ಯಮಾನಗಳಿಂದ 'ಸಾಂಸ್ಕೃತಿಕ ವಿಮರ್ಶೆ' ಎನ್ನುವ ಆಧುನಿಕ ವಿಮರ್ಶಾರೂಪ ಹುಟ್ಟಿಕೊಂಡಿತು. ಇದೇ ಅವಧಿಯ ಎಪ್ಪತ್ತರ ಮತ್ತು ಎಂಭತ್ತರ ದಶಕದ ವೇಳೆಗೆ ಕನ್ನಡ ಸಾಹಿತ್ಯ ವಿಮರ್ಶೆಯ ಸಾಂಸ್ಕೃತಿಕ ಆಸಕ್ತಿ ಮತ್ತು ಕಾಳಜಿಗಳ ಸ್ಥಾನದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಭಾಷಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳು ದಟ್ಟವಾಗಿ ಪ್ರವೇಶಿಸುವ ಮೂಲಕ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ವಿಮರ್ಶೆಯಾಗಿ ಅವಸ್ಥಾಂತರಗೊಂಡಿತು.

೩.೫.೧ ಪಾಶ್ಚಾತ್ಯ ಸಂಸ್ಕೃತಿ ಸಂಕಥನಗಳ ಸ್ವರೂಪ

ಪಾಶ್ಚಾತ್ಯ ಸಂಸ್ಕೃತಿ ಸಂಕಥನಗಳಿಗೆ ಸುಮಾರು ಒಂದೂವರೆ ಶತಮಾನದಷ್ಟು ದೀರ್ಘವಾದ ಚರಿತ್ರೆ ಇದೆ. ಯುರೋಪಿನ ಇಂಗ್ಲೆಂಡ್, ಜರ್ಮನಿ, ಇಟಲಿ, ಫ್ರಾನ್ಸ್ ಮತ್ತು ರಷ್ಯಾ ಹಾಗೂ ಅಮೇರಿಕಾಗಳು ಅತ್ಯಂತ ವೈವಿಧ್ಯಮಯವಾದ ಸಂಸ್ಕೃತಿ ಸಂಕಥನಗಳನ್ನು ಪ್ರತಿಪಾದಿಸಿವೆ. ಇಂಗ್ಲೆಂಡ್‌ನ ಸಂಕಥನಗಳಿಗೆ 'ಅಭಿಜಾತವಾದಿ ಬೌದ್ಧಿಕ ಪರಂಪರೆ'; ಜರ್ಮನಿಯ ಸಂಕಥನಗಳಿಗೆ 'ರಾಷ್ಟ್ರೀಯ ಚರಿತ್ರವಾದಿ ಬೌದ್ಧಿಕ ಪರಂಪರೆ' ಮತ್ತು ಫ್ರಾನ್ಸಿನ ಸಂಕಥನಗಳಿಗೆ 'ಜ್ಞಾನೋದಯವಾದಿ ಬೌದ್ಧಿಕ ಪರಂಪರೆಗಳು' ಪ್ರಮುಖ ಸ್ಫೂರ್ತಿಮೂಲಗಳಾಗಿವೆ. ಇವುಗಳಿಂದ ಪ್ರತಿಪಾದಿಸಲಾಗಿದ್ದ ಪ್ರತಿಷ್ಠಿತ ಸಂಸ್ಕೃತಿ ಚಿಂತನೆಗಳನ್ನು ಆನಂತರ ವಿವಿಧ ಜ್ಞಾನಶಿಸ್ತುಗಳ ಮತ್ತು ತತ್ವವಾದಗಳ ಚಿಂತನೆಗಳು ತೀವ್ರವಾಗಿ ಪರಿಷ್ಕರಿಸಿದವು. ಆರಂಭಕಾಲೀನ ಸಂಸ್ಕೃತಿ ಸಂಕಥನಗಳು ಪ್ರಧಾನವಾಗಿ ಸಾಹಿತ್ಯಕ ಕ್ಷೇತ್ರದ ಹಿನ್ನೆಲೆಯಿಂದ ರೂಪಿತವಾಗಿದ್ದವು. ನಂತರದ ಸಂಕಥನಗಳಿಗೆ ಮಾನವಿಕ ಶಿಸ್ತುಗಳಾದ ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಂಜ್ಞಾಶಾಸ್ತ್ರಗಳು

ಮತ್ತು ವಿವಿಧ ತತ್ವವಾದಗಳಾದ ಮಾರ್ಕ್ಸ್‌ವಾದ, ಸಂರಚನಾವಾದ, ನಿರಚನಾವಾದ, ಸ್ತ್ರೀವಾದ, ವಸಾಹತೋತ್ತರವಾದ ಹಾಗೂ ಆಧುನಿಕೋತ್ತರವಾದ ಮೊದಲಾದವು ಮುಖ್ಯವಾದ ಸ್ಫೂರ್ತಿ ಮೂಲಗಳಾಗಿವೆ.

ಪಾಶ್ಚಾತ್ಯ ಸಂಸ್ಕೃತಿ ಸಂಕಥನಗಳನ್ನು ಆಯಾ ಕಾಲಘಟ್ಟದಲ್ಲಿ ತೀವ್ರವಾದ ಪ್ರಭಾವ ಹೊಂದಿದ್ದ ಸಾಹಿತ್ಯಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ತತ್ವವಾದಗಳ ಮೂಲಕ ವಿವರಿಸಬಹುದು. ಈ ತತ್ವವಾದಗಳನ್ನು ಸ್ಥೂಲವಾಗಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ತತ್ವವಾದಗಳೆಂದು ಗುರುತಿಸಬಹುದು. ಈ ತತ್ವವಾದಗಳೆ ಪ್ರತಿಯೊಂದು ದೇಶದ ಆಯಾಕಾಲಘಟ್ಟದ ಸಂಸ್ಕೃತಿ ಸಂಕಥನಗಳನ್ನು ಪ್ರಭಾವಿಸಿವೆ ಅಥವಾ ಪರಿವರ್ತಿಸಿವೆ ಇಲ್ಲವೆ ಹೊಸ ಸಂಕಥನಗಳನ್ನು ಹುಟ್ಟುಹಾಕಿವೆ. ಪಾಶ್ಚಾತ್ಯ ಸಂದರ್ಭದಲ್ಲಿ ಸಂಸ್ಕೃತಿ ಚಿಂತಕರು ತಮ್ಮ ಸಮಕಾಲೀನ ತತ್ವವಾದದ ವಿಚಾರಧಾರೆಯನ್ನು ಸಂಭ್ರಮದಿಂದ ಸ್ವೀಕರಿಸುವ ಅಥವಾ ಆಕ್ರೋಶದಿಂದ ತಿರಸ್ಕರಿಸುವ ಇಲ್ಲವೆ ಸಾವಧಾನದಿಂದ ಪರಿಷ್ಕರಿಸುವ ಮೂಲಕ ತಮ್ಮ ವಿಶಿಷ್ಟ ಸಂಸ್ಕೃತಿ ಚಿಂತನೆಗಳನ್ನು ಪ್ರತಿಪಾದಿಸಿರುವುದು ಸಾಮಾನ್ಯ ವಿದ್ಯಮಾನವಾಗಿದೆ. ಇದಕ್ಕನುಸಾರವಾಗಿಯೆ ವೈವಿಧ್ಯಮಯ ಸಂಸ್ಕೃತಿ ಮೀಮಾಂಸೆ, ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶಾ ಮೀಮಾಂಸೆಗಳು ಹುಟ್ಟಿಕೊಂಡಿವೆ. ಹೀಗೆ, ಪಾಶ್ಚಾತ್ಯ ಸಂಸ್ಕೃತಿ ಸಂಕಥನಗಳು ಆಳದಲ್ಲಿ ಸಂಸ್ಕೃತಿ ಚಿಂತನೆ ಮೂಲಕ ಒಟ್ಟು ಸಮಗ್ರ ರಾಷ್ಟ್ರೀಯ ಜ್ಞಾನಮೀಮಾಂಸೆಗಳನ್ನು ರೂಪಿಸುವ ಮತ್ತು ಪರಿಷ್ಕರಿಸುವ ಸಾಂಸ್ಕೃತಿಕ ರಾಜಕಾರಣದಲ್ಲಿ ನಿರತವಾಗಿವೆ.

ಪಾಶ್ಚಾತ್ಯ ಸಂಸ್ಕೃತಿ ಮೀಮಾಂಸೆಗಳಿಗೂ ಮತ್ತು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಗೂ ನೇರವಾದ ಜೈವಿಕ ಸಂಬಂಧವಿದೆ. ಮ್ಯಾಥ್ಯೂ ಆರ್ನಾಲ್ಡನ ಆಧುನಿಕತಾವಾದದ 'ಉಚ್ಚ ಸಂಸ್ಕೃತಿ' ಪರಿಕಲ್ಪನೆ ರೊಮ್ಯಾಂಟಿಕ್ ಸಾಹಿತ್ಯ ವಿಮರ್ಶೆಯ ಮುಖ್ಯ ನೆಲೆಯಾಗಿದೆ. ಹಾಗೆಯೇ, 'ಪೊಸಿಟಿವಿಸಂ' ಅಥವಾ 'ಇಂದ್ರಿಯಾನುಭವಗಮ್ಯವಾದ'ದ 'ಉದಾರ ಮಾನವತಾವಾದಿ' ಸಂಸ್ಕೃತಿ ಪರಿಕಲ್ಪನೆಗಳು ಎಫ್.ಆರ್. ಲಿವೀಸ್ (೧೮೯೫-೧೯೭೮) ಮತ್ತು ಟಿ.ಎಸ್. ಎಲಿಯಟ್‌ರವರ (೧೮೮೮-೧೯೬೫) ರೂಪನಿಷ್ಠ ಅಥವಾ ನವ್ಯವಿಮರ್ಶೆಯ ಕೇಂದ್ರಪ್ರಜ್ಞೆಯಾಗಿವೆ.

ಪಾಶ್ಚಾತ್ಯ ಸಂಸ್ಕೃತಿ ಚಿಂತನೆ ಸಂದರ್ಭದಲ್ಲಿ ಪಾಶ್ಚಾತ್ಯ ನವ್ಯೋತ್ತರ ಕಾಲಘಟ್ಟ ಅತ್ಯಂತ ಗಮನಾರ್ಹವಾದುದು. ೧೯೫೦ರ ನಂತರ ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆಯ ಕ್ಷೇತ್ರಗಳಲ್ಲಿ ಹಲವು ವಿಭಿನ್ನ ಜ್ಞಾನಶಾಖೆಗಳ ಚಿಂತಕರು ಪ್ರತಿಪಾದಿಸಿದ ಚಿಂತನೆಗಳು ಹಾಗೂ ಸಿದ್ಧಾಂತಗಳು ಹಲವು ವಿನೂತನ ಸಂಸ್ಕೃತಿ ಪರಿಕಲ್ಪನೆಗಳನ್ನು ಪರಿಚಯಿಸಿದವು. ಈ ನೆಲೆಯಲ್ಲಿ ಸಾಂಪ್ರದಾಯಕ ಮಾರ್ಕ್ಸ್‌ವಾದದ ಚಾರಿತ್ರಿಕ ಭೌತವಾದಿ ತತ್ವದ 'ಬೇಸ್-ಸೂಪರ್ ಸ್ಟ್ರಕ್ಚರ್ ಮಾಡೆಲ್' ಸಂಸ್ಕೃತಿ ಪರಿಕಲ್ಪನೆಗೆ ವಿರುದ್ಧವಾಗಿ, ಆಧುನಿಕ ಮಾರ್ಕ್ಸ್‌ವಾದ ಹಾಗೂ ವಿಮರ್ಶಾತ್ಮಕ ಮಾರ್ಕ್ಸ್‌ವಾದ ಪ್ರತಿಪಾದಿಸಿದ 'ಸ್ವತಂತ್ರ ಅಸ್ತಿತ್ವ' ಮತ್ತು 'ಸಾಂಸ್ಕೃತಿಕ ಭೌತವಾದಿ' ಸಂಸ್ಕೃತಿ ಪರಿಕಲ್ಪನೆಗಳು ಸಂಸ್ಕೃತಿ ಸಂಕಥನಗಳಿಗೆ ಹೊಸ ತಿರುವು ಕೊಟ್ಟವು.

ಜರ್ಮನಿಯ ಮ್ಯಾಕ್ಸ್ ವೆಬರ್ (೧೮೬೪-೧೯೨೦), ಹಂಗೇರಿಯ ಜಾರ್ಜ್ ಲುಚಾಕ್ಸ್ (೧೮೮೫-೧೯೭೧) ಮತ್ತು ಇಟಲಿಯ ಆಂಟೋನಿಯಾ ಗ್ರಾಂಶಿ ಅವರ ಸಂಸ್ಕೃತಿ ಚಿಂತನೆಗಳು ಪಾಶ್ಚಾತ್ಯ ಸಾಹಿತ್ಯ ಮತ್ತು ವಿಮರ್ಶಾ ವಿವೇಕವನ್ನು ವಿಸ್ತರಿಸಿದವು. ಪಠ್ಯದ ವಿಶ್ಲೇಷಣೆಯಲ್ಲಿ ಸಾಂಸ್ಕೃತಿಕ ಮಾರ್ಕ್ಸ್‌ವಾದಿ ಸಂಸ್ಕೃತಿ ಸಂಕಥನಗಳು ಸಂಸ್ಕೃತಿ ಕುರಿತ ಹಲವು ಅರ್ಥಪೂರ್ಣ ಪ್ರಮೇಯಗಳನ್ನು ಅನ್ವಯಿಸಿದವು. ಅದರಲ್ಲೂ ವಿಮರ್ಶಾತ್ಮಕ ಮಾರ್ಕ್ಸ್‌ವಾದಿ ಅಥವಾ ಸಾಂಸ್ಕೃತಿಕ ಮಾರ್ಕ್ಸ್‌ವಾದಿ ಚಿಂತಕನಾದ ರೇಮಂಡ್ ವಿಲಿಯಮ್ಸ್ ಪ್ರತಿಪಾದಿಸಿದ 'ಸಂಸ್ಕೃತಿ ಎನ್ನುವುದು ಕೇವಲ ಬೌದ್ಧಿಕ ಮತ್ತು ಕಾಲ್ಪನಿಕ ವಿಚಾರಾಕೃತಿಗಳಿಂದ ನಿರ್ಮಿತವಾದದ್ದಲ್ಲ; ಮೂಲತಃ ಅದು ಸಮಗ್ರ ಜೀವನ ವಿಧಾನದ ಮೊತ್ತ' ಎನ್ನುವ ಚಿಂತನೆಯು ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಸಾಹಿತ್ಯ ಮತ್ತು ವಿಮರ್ಶಾ ವಿಧಾನಗಳ ಮೇಲೆ ವ್ಯಾಪಕ ಪ್ರಭಾವ ಬೀರಿತು.

ಪಾಶ್ಚಾತ್ಯ ಮಾನವಶಾಸ್ತ್ರದ ಪ್ರಸಿದ್ಧ ವಿದ್ವಾಂಸರಾದ ಎಮಿಲಿ ಡರ್ಕಿಮ್‌ನ (೧೮೫೮-೧೯೧೭) ಧರ್ಮಗಳನ್ನು ಕುರಿತ ಅಧ್ಯಯನಗಳು, ಫ್ರೆಂಚ್ ಭಾಷಿಕ ಸ್ವಿಸ್ ಭಾಷಾವಿಜ್ಞಾನಿಯಾದ ಫರ್ಡಿನೆಂಡ್ ಡಿ ಸಸೂರ್‌ನ (೧೮೫೭-೧೯೧೩) ಭಾಷೆಯ ಸಾಮಾಜಿಕ ಸ್ವರೂಪ ಕುರಿತ ಚಿಂತನೆಗಳು, ಕ್ಲಾಡ್ ಲೆವಿಸ್ಟ್ರಾಸ್‌ನ ಬಂಧುತ್ವ ಮತ್ತು ಪುರಾಣ ಕುರಿತ ಅಧ್ಯಯನಗಳು ಮಾನವಶಾಸ್ತ್ರೀಯ ಪರಿಕಲ್ಪನೆಯಾದ 'ಸಮಗ್ರ ಜೀವನ ವಿಧಾನ' ಸಂಸ್ಕೃತಿ ಪರಿಕಲ್ಪನೆಯನ್ನು ಹಲವು ಆಯಾಮಗಳಲ್ಲಿ ನಿರೂಪಿಸಿದವು.

ಫ್ರಾನ್ಸ್‌ನ ಜಾಕಸ್ ಲಕಾನ್‌ನಿಂದ ಪ್ರತಿಪಾದಿತವಾದ 'ಮನೋಭಾಷಾಭೌತಿಕ ಸಂಸ್ಕೃತಿ' ಪರಿಕಲ್ಪನೆಯು ಸಾಂಸ್ಕೃತಿಕ ಸ್ತ್ರೀವಾದಿಗಳು ರೂಪಿಸಿದ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಗೆ ಪ್ರಮುಖ ಪ್ರೇರಣೆಯಾಯಿತು. ಹಾಗೆಯೇ, ಅರವತ್ತರ ಮತ್ತು ಎಪ್ಪತ್ತರ ದಶಕಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿ ಅಧ್ಯಯನಗಳಲ್ಲಿ ರಾಜಕೀಯ ಸಂಘರ್ಷದ ಆಯಾಮಗಳು ಕೂಡಿಕೊಂಡವು. ಪಶ್ಚಿಮದ ಸಮಾಜವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನೆಲೆಗಳಲ್ಲಿ ನಿರ್ಮಿಸಿರುವ ತಾರತಮ್ಯಗಳ ವಿರುದ್ಧ ಪಾಶ್ಚಾತ್ಯ ಸ್ತ್ರೀವಾದಿ ಚಳವಳಿ ಮತ್ತು ವಿದ್ಯಾರ್ಥಿ ಆಂದೋಲನಗಳು ಹೂಡಿದ ಬಂಡಾಯ 'ಸಮಾನತೀಕರಣ' ಸಂಸ್ಕೃತಿ ಸಿದ್ಧಾಂತ ಪ್ರತಿಪಾದಿಸಿತು. ವರ್ಜಿನಿಯಾ ವೂಲ್ಫ್‌ಳ (೧೮೮೨-೧೯೪೧) ಸಾಹಿತ್ಯಕ ಮತ್ತು ವಿಮರ್ಶಾತ್ಮಕ ಬರವಣಿಗೆಗಳಲ್ಲಿ ಸ್ತ್ರೀಪರ ಚಿಂತನೆಗಳು ಬೀಜರೂಪಿಯಾಗಿದ್ದವು ಎನ್ನುವುದು ನಿಜವಾದ ವಿಚಾರವೆ ಆಗಿದೆ. ಆದರೆ, ಈಗ ಫ್ರಾನ್ಸ್‌ನ ಸೀಮನ್ ದ ಬುವಾ, ಕೇಟ್ ಮಿಲ್ಲೆಟ್, ಜೂಲಿಯಾ ಕ್ರಿಸ್ಟೋವಾ, ಎಲೈನ್ ಶೋವಾಲ್ಟರ್ ಮತ್ತು ಜೂಡಿತ್ ಬಟ್ಲರ್ ಮೊದಲಾದವರ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿ ಕುರಿತ ಚಿಂತನೆಗಳು ಜಾಗತಿಕವಾದ ಹೊಸ ಸಾಹಿತ್ಯ ಹಾಗೂ ವಿಮರ್ಶಾ ಮೀಮಾಂಸೆಗಳನ್ನು ಹುಟ್ಟುಹಾಕಿದವು ಎನ್ನುವುದು ಅತ್ಯಂತ ಮಹತ್ವದ ವಿಚಾರವಾಗಿದೆ.

ಫ್ರಾನ್ಸ್‌ನ ಸಂರಚನೋತ್ತರವಾದಿ ಚಿಂತಕನಾದ ಜಾಕಸ್ ಡೆರಿಡಾ (೧೯೩೦-೨೦೦೪) ಮತ್ತು ಮಿಶೆಲ್ ಫುಕೋ ಇವರಿಂದ ಹುಟ್ಟಿಕೊಂಡ 'ಸಂಕಥನೀಯ ರೂಪೀಕರಣ' ಸಂಸ್ಕೃತಿ ಪರಿಕಲ್ಪನೆ ಬಹುಮುಖ್ಯವಾಗಿ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ಸಂಶ್ಲೇಷಣಾತ್ಮಕ ಜ್ಞಾನಮೀಮಾಂಸೆಯನ್ನು ಪ್ರಚುರಗೊಳಿಸುವ ಮೂಲಕ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯನ್ನು ಖಚಿತಗೊಳಿಸಿತು.

ಇದೇ ಕಾಲಘಟ್ಟದ ವಸಾಹತೋತ್ತರವಾದಿ ಚಿಂತಕರು ಮಂಡಿಸಿದ 'ಪುನಾರಾಲೋಕನವಾದಿ' ಮತ್ತು 'ದೇಶಿವಾದಿ' ಸಂಸ್ಕೃತಿ ಪರಿಕಲ್ಪನೆಗಳು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ನೋಟಕ್ರಮಗಳಿಗೆ ಹೊಸ ನೆಲೆಗಳನ್ನು ಕಲ್ಪಿಸಿದವು. ಪ್ಯಾಲಸ್ಟೈನ್‌ನ ಎಡ್ವರ್ಡ್ ಸೈದ್, ಅಲ್ಜೀರಿಯಾದ ಫ್ರಾನ್ಜ್ ಫ್ಯಾನನ್ ಮತ್ತು ಆಫ್ರಿಕಾದ ನುಗಿ ವಾಂಗ್ ಥಿಯೊಂಗೋ ಮೊದಲಾದವರ ಸಾಂಸ್ಕೃತಿಕ ಚಿಂತನೆಗಳು ಪಾಶ್ಚಾತ್ಯ ಸಾಹಿತ್ಯ ಚಿಂತನೆಯ ಸಾಂಪ್ರದಾಯಕ ವಿನ್ಯಾಸಗಳನ್ನು ತೀವ್ರವಾಗಿ ಪಲ್ಲಟಗೊಳಿಸಿದವು.

ಕಳೆದ ಶತಮಾನದ ಕೊನೆಯ ಘಟ್ಟದಿಂದ ಪಾಶ್ಚಾತ್ಯ ಬೌದ್ಧಿಕ ಮೂಲದಿಂದ ಮುಂಚೂಣಿಗೆ ಬಂದಿರುವ ಆಧುನಿಕೋತ್ತರವಾದದ 'ಸಂದೇಹವಾದಿ' ಸಂಸ್ಕೃತಿ ಪರಿಕಲ್ಪನೆ ಮತ್ತು ನವವಸಾಹತುಶಾಹಿವಾದದ 'ಏಕರೂಪೀಕರಣ' ಸಂಸ್ಕೃತಿ ಪರಿಕಲ್ಪನೆಗಳು, ಕೇವಲ ತಮ್ಮ ರಾಷ್ಟ್ರ ಮೂಲದ ಸಾಹಿತ್ಯ ಚಿಂತನೆ ಮತ್ತು ವಿಮರ್ಶಾ ಗ್ರಹಿಕೆಗಳನ್ನಷ್ಟೇ ಅಲ್ಲದೆ, ಬಹುತೇಕ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೂ ಈ ವಿಷಯದಲ್ಲಿ ದಟ್ಟವಾದ ಪ್ರಭಾವ ಬೀರುತ್ತಿವೆ. ಹೀಗಾಗಿ ಪ್ರಸ್ತುತ ಇವುಗಳ ವಿರುದ್ಧವಾದ ಮತ್ತು ಪರವಾದ ಬೌದ್ಧಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಾಗ್ವಾದಗಳು ನಡೆಯುತ್ತಿರುವುದು ಸಾಮಾನ್ಯ ವಿದ್ಯಮಾನವಾಗಿದೆ.

ಪಾಶ್ಚಾತ್ಯ ಸಂಸ್ಕೃತಿ ಸಂಕಥನಗಳು ಮೊದಲ ಹಂತವಾಗಿ ನಿರ್ದಿಷ್ಟ ರಾಷ್ಟ್ರ ಮತ್ತು ಸಂಸ್ಕೃತಿ ವಿಶಿಷ್ಟ ಮೀಮಾಂಸೆಗಳನ್ನು ರೂಪಿಸುವ ಮೂಲಕ ತಮ್ಮ ಸಾಹಿತ್ಯ ಹಾಗೂ ವಿಮರ್ಶೆಯ ಸ್ವರೂಪವನ್ನು ಪ್ರಭಾವಿಸಿರುವುದನ್ನು ಗುರುತಿಸಬಹುದು. ಹೀಗಾಗಿಯೇ, ಕಳೆದ ಶತಮಾನದ ಎರಡನೆಯ ಘಟ್ಟದಲ್ಲಿ ಪಾಶ್ಚಾತ್ಯರಲ್ಲಿ 'ಸಾಂಸ್ಕೃತಿಕ ಭೌತವಾದ' ಮತ್ತು 'ನವಚಾರಿತ್ರಿಕವಾದ'ದ ಸಂಯೋಜಿತ ರೂಪವಾಗಿ ಸಾಂಸ್ಕೃತಿಕ ವಿಮರ್ಶೆ ಎನ್ನುವ ಹೊಸ ಪ್ರಕಾರ ವಿಕಾಸವಾಯಿತು. ಆನಂತರ ದೂರಗಾಮಿ ನೆಲೆಯಲ್ಲಿ ಇವು ಒಟ್ಟಾರೆ ತೃತೀಯ ಜಗತ್ತಿನ ಸಾಹಿತ್ಯ ಚಿಂತನೆ ಹಾಗೂ ವಿಮರ್ಶಾ ವಿಧಾನಗಳ ಪಲ್ಲಟಕ್ಕೂ ಕೂಡಾ ಅಷ್ಟೇ ದಟ್ಟವಾದ ಪ್ರಭಾವವನ್ನು ಬೀರಿರುವುದನ್ನು ಸಹ ಕಾಣಬಹುದು.

೩.೫.೨ ಕನ್ನಡ ಸಂಸ್ಕೃತಿ ಸಂಕಥನಗಳ ಸ್ವರೂಪ

ಕನ್ನಡದಲ್ಲಿ ಸಂಸ್ಕೃತಿ ಚಿಂತನೆ ಸಹ ಆಧುನಿಕ ಕನ್ನಡದ ಹಲವು ಸಾಹಿತ್ಯ ಪ್ರಕಾರಗಳಂತೆ ಪಾಶ್ಚಾತ್ಯ ಪ್ರಭಾವದಿಂದ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ರೂಪುಗೊಂಡಿದೆ. ಈ ಶತಮಾನದ ಅಂತ್ಯದ ವೇಳೆಗೆ

ಒಂದು ವಿಶಿಷ್ಟವಾದ ಪರಂಪರೆಯನ್ನು ನಿರ್ಮಿಸಿದೆ. ನಿರಂತರವಾದ ವಾಗ್ವಾದಗಳು ಮತ್ತು ವೈಚಾರಿಕ ಸಂಘರ್ಷಗಳು ಈ ಪರಂಪರೆಯ ಮುಖ್ಯ ಸ್ವರೂಪವಾಗಿದೆ.

ಕನ್ನಡ ಸಂಸ್ಕೃತಿ ಚಿಂತನೆ ಮೂಲತಃ ಪಾಶ್ಚಾತ್ಯ ಪ್ರಭಾವ ಮತ್ತು ಪ್ರೇರಣೆಯ ಫಲವಾಗಿ ರೂಪುಗೊಂಡಿದ್ದರಿಂದ, ಆರಂಭಿಕ ಹಂತದಲ್ಲಿ ಸಹಜವಾಗಿಯೇ ಪಾಶ್ಚಾತ್ಯ ಚಿಂತನೆಯ ಎಳೆಗಳು ಇದರಲ್ಲಿ ದಟ್ಟವಾಗಿದ್ದವು. ಸಂಸ್ಕೃತಿ ಕುರಿತ ಗ್ರಹಿಕೆಗಳು, ವ್ಯಾಖ್ಯಾನಗಳು ಮತ್ತು ವಿಶ್ಲೇಷಣೆಗಳನ್ನು ಪಾಶ್ಚಾತ್ಯ ಸಂಸ್ಕೃತಿ ಮೀಮಾಂಸೆಯೆ ನಿಯಂತ್ರಿಸಿತು. ಹಾಗೆಯೆ, ಪಾಶ್ಚಾತ್ಯ ಸಂಸ್ಕೃತಿ ಚಿಂತನೆ ತನ್ನ ನಿರ್ದಿಷ್ಟ ಮತ್ತು ನಿಖರ ನೆಲೆಯಿಂದ ಬಿಡುಗಡೆಗೊಂಡು ವ್ಯಾಪಕವಾದ ಬಹುರೂಪಿ ಸ್ತರಗಳನ್ನು ಪಡೆದುಕೊಂಡ ಕ್ರಮದಲ್ಲೆ, ಕನ್ನಡ ಸಂಸ್ಕೃತಿ ಚಿಂತನೆ ಸಹ ಪಲ್ಲಟಗೊಳ್ಳುತ್ತಾ ಬಂದಿತು. ಇಷ್ಟಾದರೂ, ಕಳೆದ ಶತಮಾನದ ಎರಡನೆಯ ಘಟ್ಟದ ಕೊನೆಯ ಎರಡು ಮೂರು ದಶಕಗಳಲ್ಲಿ ಕನ್ನಡ ಸಂಸ್ಕೃತಿ ಚಿಂತನೆಯು ಪಾಶ್ಚಾತ್ಯ ಸಂಸ್ಕೃತಿ ಚಿಂತನೆಯ ಪ್ರಭಾವ ಮತ್ತು ನಿಯಂತ್ರಣಗಳನ್ನು ಬಹುತೇಕ ಕಳೆದುಕೊಂಡು, ಸ್ವತಂತ್ರವಾದ ದೇಸಿ ಆಲೋಚನಾ ಮೀಮಾಂಸೆಯಾಗಿ ವಿಕಾಸಗೊಳ್ಳಲಾರಂಭಿಸಿತು. ಇಷ್ಟೇ ಅಲ್ಲದೆ, ಪಾಶ್ಚಾತ್ಯ ಸಂಸ್ಕೃತಿ ಚಿಂತನೆಯ ಹಿಂದಿರುವ ಗುಪ್ತ ರಾಜಕೀಯಾರ್ಥಿಕ ಉದ್ದೇಶಗಳ ವಿರುದ್ಧದ ಕುಡುಟೀಕೆಯ ಪ್ರಬಲ ಸಾಧನವಾಗಿ ಸಹ ರೂಪುಗೊಳ್ಳತೊಡಗಿತು.

ಕರ್ನಾಟಕದ ಚರಿತ್ರೆ, ಭಾಷೆ, ಸಾಹಿತ್ಯ, ರಾಜಕಾರಣ, ಆರ್ಥಿಕ ಸಂಬಂಧಗಳು ಮತ್ತು ಜೀವನ ಕ್ರಮಗಳ ಸಮಗ್ರ ವಿಶ್ಲೇಷಣೆ ಹಾಗೂ ವ್ಯಾಖ್ಯಾನವಾಗಿ ಕನ್ನಡ ಸಂಸ್ಕೃತಿ ಚಿಂತನೆ ವಿಕಾಸವಾಗಿದೆ. ಸಂಸ್ಕೃತಿ ಚಿಂತನೆಯಲ್ಲಿ ಮನುಷ್ಯ ಬದುಕಿನ ಪ್ರಶ್ನೆಗಳು ಅತ್ಯಂತ ನಿರ್ಣಾಯಕ ಸಂಗತಿಗಳಾಗಿ ಪರಿಗಣಿತವಾಗಿರುವುದು ಇದರ ವಿಶಿಷ್ಟತೆಯಾಗಿದೆ.

ಆರಂಭಿಕ ಘಟ್ಟದ ಕನ್ನಡ ಸಂಸ್ಕೃತಿ ಚಿಂತನೆಯು ಸಂಸ್ಕೃತಿಯನ್ನು 'ಬದುಕಿನ ಆದರ್ಶ ರೂಪ'ವೆಂದು ಭಾವಿಸಿಕೊಂಡಿರುವ ಕಾರಣದಿಂದ 'ನೈತಿಕವಾದಿ' ಸಂಸ್ಕೃತಿ ಮೀಮಾಂಸೆಯನ್ನು ಪ್ರತಿಪಾದಿಸಿತು. ಈ ಮೀಮಾಂಸೆಯು ಕರ್ನಾಟಕ ಸಂಸ್ಕೃತಿ ಎನ್ನುವುದು'ಭಾರತೀಯ ಸಂಸ್ಕೃತಿ'ಯ ಒಂದು 'ಕವಲು' ಅಥವಾ 'ಶಾಖೆ' ಎಂದು ನಿರೂಪಿಸಿತು. ಡಿ.ವಿ.ಜಿ, ಮಾಸ್ತಿ, ದೇವುಡು, ಬೆಟಗೇರಿ ಮೊದಲಾದವರು ಇಂಥ 'ನೈತಿಕವಾದಿ' ಸಂಸ್ಕೃತಿ ಮೀಮಾಂಸಕರು. ಇವರ ಚಿಂತನೆಯಲ್ಲಿ ಸಂಸ್ಕೃತಿ ಕುರಿತ ಕೆಲವು ಉದಾರವಾದಿ ದೃಷ್ಟಿಕೋನಗಳಿದ್ದರೂ, ಮೂಲತಃ ಸಂಸ್ಕೃತಿ ಎನ್ನುವುದು ಒಂದು 'ಆದರ್ಶೀಕೃತ ಜೀವನಾವಸ್ಥೆ' ಎಂದೇ ಪರಿಭಾವಿಸಿದರು. ಆದ್ದರಿಂದಲೆ ಇವರು ಸಂಸ್ಕೃತಿಯ ಚಲನಶೀಲತೆ ಮತ್ತು ಪರಿವರ್ತನಶೀಲತೆಯನ್ನು ಸಂಸ್ಕೃತಿಯ ಅವನತಿಯ ರೂಪಗಳೆಂದು ವ್ಯಾಖ್ಯಾನಿಸಿದರು. ಹೊಸ ಆಲೋಚನಾಕ್ರಮಗಳು, ನೂತನ ವೈಚಾರಿಕ ಆಕೃತಿಗಳು, ಆಧುನಿಕ ತಾತ್ವಿಕ ಮತ್ತು ಬೌದ್ಧಿಕ ಜ್ಞಾನರೂಪಗಳನ್ನು ಸಂಸ್ಕೃತಿಯ ಶತ್ರುಗಳೆಂದು ವಿಶ್ಲೇಷಿಸಿದರು. ಹೀಗಾಗಿಯೇ ಪ್ರಜಾಪ್ರಭುತ್ವ, ವಿಜ್ಞಾನ ಮತ್ತು

ಸಮಾಜವಾದಗಳನ್ನು ಈ ಮೀಮಾಂಸೆ ತೀವ್ರವಾಗಿ ವಿರೋಧಿಸಿತು. ಇದಕ್ಕೆ ವಿರುದ್ಧವಾಗಿ, ಭಾರತೀಯ ಸಂಸ್ಕೃತಿಯ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಹಾಗೂ ರಾಜಕೀಯ ವ್ಯವಸ್ಥೆಯ ಮೂಲತತ್ವಗಳಾದ ವರ್ಣ, ವರ್ಗ, ಜಾತಿ ಮತ್ತು ಲಿಂಗ ಭೇದಗಳನ್ನು ಸಂಸ್ಕೃತಿ ಸಂರಕ್ಷಣೆಯ ಮಹತ್ವದ ಸಾಧನಗಳೆಂದು ಪ್ರತಿಪಾದಿಸಿತು.

ಈ ಪ್ರತಿಷ್ಠಿತ ಮೀಮಾಂಸೆಗೆ ವಿರುದ್ಧವಾಗಿ ಕಳೆದ ಶತಮಾನದ ಎರಡನೆಯ ಘಟ್ಟದಲ್ಲಿ ಆಧುನಿಕ ಪ್ರಜಾಪ್ರಭುತ್ವಪದ್ಧತಿ, ಪ್ರಜಾಸತ್ತಾತ್ಮಕ ಸಮಾಜವಾದಿ ತತ್ವ ಮತ್ತು ಆಧುನಿಕ ಪ್ರಗತಿಶೀಲ ಮನೋಧರ್ಮಗಳಿಂದ ಸಾಧ್ಯವಾದ ಶೈಕ್ಷಣಿಕ ಬೆಳವಣಿಗೆ, ಸಾಮಾಜಿಕ ಸುಧಾರಣೆಗಳು ಹಾಗೂ ಸಾಂಸ್ಕೃತಿಕ ಉಪಕ್ರಮಗಳು ಕನ್ನಡದಲ್ಲಿ ಹಲವು ಹೊಸ ಬಗೆಯ ಸಂಸ್ಕೃತಿ ಅಧ್ಯಯನಗಳನ್ನು ಪ್ರೇರೇಪಿಸಿದವು. ಇವು ಕರ್ನಾಟಕ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿಗೆ ಅಧೀನ ಪರಿಕಲ್ಪನೆಯಾಗಿ ಪರಿಭಾವಿಸುವುದನ್ನು ತೀವ್ರವಾಗಿ ವಿರೋಧಿಸಿದವು. ಇದಕ್ಕೆ ವಿರುದ್ಧವಾಗಿ ಭಾರತೀಯ ಸಂಸ್ಕೃತಿ ಎನ್ನುವುದೆ ಮೂಲತಃ ಕರ್ನಾಟಕ ಮತ್ತು ಇನ್ನಿತರ ಪ್ರದೇಶ, ಭಾಷೆ ಹಾಗೂ ಜನಾಂಗ ವಿಶಿಷ್ಟವಾದ ಪ್ರಾಂತೀಯ ಸಂಸ್ಕೃತಿಗಳಿಂದ ರೂಪಿತವಾಗಿರುವ ಒಂದು 'ಸಾಪೇಕ್ಷಸ್ಥಿತಿ' ಎಂದು ವ್ಯಾಖ್ಯಾನಿಸಲಾಯಿತು. ಹಾಗೆಯೇ, ಅಖಂಡ ಕರ್ನಾಟಕ ಸಂಸ್ಕೃತಿ ಎನ್ನುವ ಏಕಘನಾಕೃತಿ ಪರಿಕಲ್ಪನೆಗೆ ಬದಲಾಗಿ ಪ್ರದೇಶ, ಭಾಷೆ, ಸಮುದಾಯ, ಧರ್ಮ, ಜನಾಂಗ, ಆಚರಣೆ, ಜಾತಿ ಮತ್ತು ಲಿಂಗ ಮೊದಲಾದವುಗಳ ರೂಪದಲ್ಲಿ 'ಕರ್ನಾಟಕ ಸಂಸ್ಕೃತಿಗಳು' ಸಹಾ ಅಸ್ತಿತ್ವದಲ್ಲಿವೆ ಎಂದು ಪ್ರತಿಪಾದಿಸಲಾಯಿತು.

ಮೊದಲಿನಿಂದಲೂ ಕನ್ನಡ ಸಂಸ್ಕೃತಿ ಚಿಂತನೆಯಲ್ಲಿ ಪ್ರಧಾನವಾಗಿ ಎರಡು ನೆಲೆಗಳು ಚಾಲ್ತಿಯಲ್ಲಿದ್ದವು. ಸಂಸ್ಕೃತಿಯನ್ನು ಮಾನವ ಬದುಕಿನ ಸಮಗ್ರ ಸಾಧನಗಳ, ಜೀವನ ಕ್ರಮಗಳ ವಿವರಗಳು ಮತ್ತು ಆಚರಣೆಗಳ ಹಿನ್ನೆಲೆಯಲ್ಲಿ ಅರ್ಥೈಸುವ ಕ್ರಮ ಇಂಥ ಒಂದು ನೆಲೆ. ಹಾಗೆಯೇ ಸಂಸ್ಕೃತಿಯನ್ನು, ಮಾನವನ ಸಮಕಾಲೀನ ಬದುಕಿನ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ನ್ಯಾಯಸಾಧನೆಯ ಹಿನ್ನೆಲೆಯಲ್ಲಿ ಅರ್ಥೈಸುವ ಕ್ರಮ ಇಂಥ ಇನ್ನೊಂದು ನೆಲೆ. ಆದರೆ, ಕಳೆದ ಶತಮಾನದ ಎಂಭತ್ತರ ದಶಕದಿಂದ ಈ ಎರಡೂ ನೆಲೆಗಳು ಸಂಯೋಜನೆಗೊಂಡ ಸಂಶ್ಲೇಷಕ ಸಂಸ್ಕೃತಿ ಮೀಮಾಂಸೆ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿತು. ಈ ಆಧುನಿಕ ಸಂಸ್ಕೃತಿ ಮೀಮಾಂಸೆಯು ಸಂಸ್ಕೃತಿ ಚರ್ಚೆಯಲ್ಲಿ ಮನುಷ್ಯನ ವಾಸ್ತವ ಬದುಕಿನ ಪ್ರಶ್ನೆಗಳನ್ನು ಮುಖ್ಯವೆಂದು ಪರಿಗಣಿಸಿತು. ಚರಿತ್ರೆಯಲ್ಲಿ ಆಗಿರುವ ಅನ್ಯಾಯಗಳಿಗೆ ವರ್ತಮಾನದಲ್ಲಿ ನ್ಯಾಯ ಪಡೆಯುವ ಮಾರ್ಗವಾಗಿ ಮತ್ತು ವಿಮೋಚನಾರೂಪವಾಗಿ ಸಂಸ್ಕೃತಿ ವಿಶ್ಲೇಷಣೆಯನ್ನು ಉಪಯೋಗಿಸಲಾಯಿತು. ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆ ಹಾಗೂ ಸಮಾನ ಪಾಲುಗಾರಿಕೆಯ ಸಾಧನವಾಗಿ ಕನ್ನಡ ಸಂಸ್ಕೃತಿ ಚಿಂತನೆ ರೂಪುಗೊಂಡಿತು. ಹೀಗಾಗಿಯೇ ವೈದಿಕ ಅಥವಾ ಬ್ರಾಹ್ಮಣ ಸಂಸ್ಕೃತಿ ಪರಿಕಲ್ಪನೆಗೆ ವಿರುದ್ಧವಾಗಿ ಶೂದ್ರ ಸಂಸ್ಕೃತಿ, ದಲಿತ

ಸಂಸ್ಕೃತಿ, ಮಹಿಳಾ ಸಂಸ್ಕೃತಿ, ವಿವಿಧ ಸಮುದಾಯ ಹಾಗೂ ಭಾಷಾಧಾರಿತ ಸಂಸ್ಕೃತಿ ಪರಿಕಲ್ಪನೆಗಳು ಕರ್ನಾಟಕ ಸಂಸ್ಕೃತಿ ಮೀಮಾಂಸೆಯನ್ನು ವಿಸ್ತರಿಸಿದವು.

ಈ ಹಿನ್ನೆಲೆಯಲ್ಲಿ, ಕನ್ನಡ ಸಂಸ್ಕೃತಿ ಚಿಂತನೆಯ ಈ ಒಟ್ಟಾರೆ ಪ್ರವೃತ್ತಿಯನ್ನು ಕುರಿತು ತರೀಕೆರೆ ಅವರು "ಸಂಸ್ಕೃತಿ ಎಂಬ ಈ ಶಬ್ದ ಅಥವಾ ಪರಿಕಲ್ಪನೆಯೊಳಗೆ ಚರ್ಚೆ ಮಾಡುತ್ತಿರುವುದು ಕೇವಲ ಜ್ಞಾನದ ಅಥವಾ ಶೈಕ್ಷಣಿಕವಾದ ಸಂಗತಿಗಳನ್ನಲ್ಲ. ಹಲವು ವರ್ಗ, ಸಮುದಾಯ ಮತ್ತು ಗುಂಪುಗಳು ತಮ್ಮ ಜೀವನದೃಷ್ಟಿ ಹಾಗೂ ಲೋಕದೃಷ್ಟಿಗಳನ್ನು ಮಂಡಿಸುತ್ತಿವೆ; ತಮ್ಮ ಕಲ್ಪನೆಯ ಸಮಾಜ ಕುರಿತ ರಾಜಕೀಯ ಆರ್ಥಿಕ ಧಾರ್ಮಿಕ ನಿಲುವುಗಳನ್ನೂ ಮಂಡಿಸುತ್ತಿವೆ; ತಮ್ಮ ಸಾಮಾಜಿಕ ರಾಜಕೀಯ ಆಶೋತ್ತರ ಹಾಗೂ ಹಕ್ಕೊತ್ತಾಯಗಳ ಮಂಡನೆಗೆ ಈ ಪರಿಕಲ್ಪನೆಯನ್ನು ಬಳಕೆ ಮಾಡುತ್ತಿವೆ–ಎಂದು ಹೊಳೆಯತೊಡಗುತ್ತದೆ. ಎಂತಲೇ ಸಂಸ್ಕೃತಿಯ ವಿಭಿನ್ನ ವ್ಯಾಖ್ಯೆಗಳು ಅಂತಿಮವಾಗಿ ರಾಜಕೀಯ ಸಾಮಾಜಿಕ ಆರ್ಥಿಕ ವ್ಯಾಖ್ಯೆಗಳೇ ಆಗಿವೆ"[೭] ಎಂದು ಸರಿಯಾಗಿಯೇ ವಿಶ್ಲೇಷಿಸಿದ್ದಾರೆ.

೩.೫.೩ ಸಾಹಿತ್ಯ ಮೀಮಾಂಸೆ

ಸಂಸ್ಕೃತಿ ಸಂಕಥನಗಳಿಂದ ರೂಪುಗೊಂಡ ಹಲವು ಸಂಸ್ಕೃತಿ ಮೀಮಾಂಸೆಗಳು ಕೇವಲ ಸಂಸ್ಕೃತಿ ನಿರ್ದಿಷ್ಟ ವಿಶ್ಲೇಷಣೆಗಳನ್ನಷ್ಟೇ ಮಾಡದೆ, ಸಾಹಿತ್ಯ ಮತ್ತು ವಿಮರ್ಶೆಯ ವಿಶ್ಲೇಷಣೆಯ ಸಾಧನಗಳಾಗಿ ಕೂಡಾ ಉಪಯುಕ್ತವಾದವು. ಈ ಪ್ರಕ್ರಿಯೆಯಲ್ಲಿ ಇವು ಹಲವು ವಿಶಿಷ್ಟ ಸ್ವರೂಪದ ಸಾಹಿತ್ಯ ಹಾಗೂ ವಿಮರ್ಶಾ ಮೀಮಾಂಸೆಗಳನ್ನು ರೂಪಿಸಿದವು. ಇದರ ಭಾಗವಾಗಿ ಅನೇಕ ನೂತನ ಪರಿಕಲ್ಪನೆಗಳು ಸೃಷ್ಟಿಯಾದವು. 'ಬಹುಸಂಸ್ಕೃತಿಗಳವಾದ' ಅಥವಾ 'ಸಾಂಸ್ಕೃತಿಕ ಬಹುತ್ವ' ಇಂಥ ಒಂದು ಆಧುನಿಕ ಪರಿಕಲ್ಪನೆ. ಇದು ಸಾಹಿತ್ಯ, ಚರಿತ್ರೆ, ಸಮಾಜ ಮತ್ತು ಧರ್ಮಗಳ ಅಧ್ಯಯನಕ್ಕೆ ಅತ್ಯಂತ ಪ್ರಯೋಜನಕಾರಿಯಾದ ಪರಿಕಲ್ಪನೆಯಾಗಿ ಸ್ವೀಕೃತವಾಯಿತು.

ನವ್ಯೋತ್ತರ ಕನ್ನಡ ವಿಮರ್ಶೆ ಸಂದರ್ಭದಲ್ಲಿ ಸಂಸ್ಕೃತಿ ಮೀಮಾಂಸೆಗಳಿಂದ ನಿರ್ವಚಿತವಾದ ಸಾಹಿತ್ಯ ಮತ್ತು ವಿಮರ್ಶಾ ಪರಿಕಲ್ಪನೆಗಳು ಸಾಹಿತ್ಯಾಧ್ಯಯನದ ವಿಧಾನಗಳಲ್ಲಿ ತೀವ್ರ ಸ್ವರೂಪದ ಮಾರ್ಪಾಟುಗಳನ್ನು ತಂದವು. ರಿಚರ್ಡ್ ಹೊಗಾರ್ಟ್ (೧೯೧೮–೨೦೧೪), ರೇಮಂಡ್ ವಿಲಿಯಮ್ಸ್, ಕ್ಲಾಡ್ ಲೆವಿಸ್ಟ್ರಾಸ್ (೧೯೦೮–೨೦೦೯) ಮೊದಲಾದವರ 'ಶ್ರಮಿಕರ ಸಂಸ್ಕೃತಿ', 'ಸಮೂಹ ಸಂಸ್ಕೃತಿ' ಮತ್ತು 'ಜನಪರ ಸಂಸ್ಕೃತಿ' ಮೊದಲಾದ ಪರಿಕಲ್ಪನೆಗಳು ಪಾಶ್ಚಾತ್ಯ ಸಾಹಿತ್ಯ ಚಿಂತನೆಯಷ್ಟೆ ಕನ್ನಡ ಸಾಹಿತ್ಯ ವಿಶ್ಲೇಷಣೆಯ ಸಾಧನಗಳಾಗಿ ಸಹ ಬಳಕೆಯಾದವು. ಈ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನದ ಭಾಗವಾಗಿ ಆರಂಭವಾದ ಸಮುದಾಯಗಳ ಅಧ್ಯಯನದ ಶಿಸ್ತಿನಲ್ಲಿ 'ಪರ್ಯಾಯ ಸಂಸ್ಕೃತಿ', 'ಉಪಸಂಸ್ಕೃತಿ', 'ಪ್ರತಿ ಸಂಸ್ಕೃತಿ' ಮತ್ತು 'ತಳಸಂಸ್ಕೃತಿ' ಮೊದಲಾದ ಪರಿಕಲ್ಪನೆಗಳು ವ್ಯಾಪಕ ಪ್ರಮಾಣದಲ್ಲಿ

ಚಾಲ್ತಿಗೆ ಬಂದವು. ಈ ಮೂಲಕ ಸಾಹಿತ್ಯ ಮೀಮಾಂಸೆಯಲ್ಲಿ ಸಾಂಸ್ಕೃತಿಕ ಆಶೋತ್ತರಗಳ ಪ್ರಶ್ನೆ ಅತೀವವಾದ ಪ್ರಾಮುಖ್ಯತೆ ಗಳಿಸಿಕೊಂಡಿತು.

ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್‌ವಾದಗಳ ಸಂಶ್ಲೇಷಣಾತ್ಮಕ ಸಂಸ್ಕೃತಿ ಮೀಮಾಂಸೆ ರೂಪಿಸಿದ ಹೊಸ ಸಾಹಿತ್ಯ ಮೀಮಾಂಸೆಯಿಂದ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭಾಷಿಕ ಪ್ರಶ್ನೆಗಳು ಸಾಹಿತ್ಯಕ ಪ್ರಶ್ನೆಗಳಷ್ಟೆ ಮುಖ್ಯವೆಂದು ಪರಿಗಣಿತವಾದವು. ಹೀಗಾಗಿ, ಈ ಕಾಲಘಟ್ಟದ ಕನ್ನಡದ ಸಾಮಾಜಿಕ ಹಾಗೂ ಎಡಪಂಥೀಯ ವಿಮರ್ಶೆಯ ಸರಳ ಸಾಹಿತ್ಯಾತ್ಮಕ ಮತ್ತು ಸಮಾಜೋ-ಆರ್ಥಿಕ ಧೋರಣೆಗಳಿಗೆ ಸಂಸ್ಕೃತಿಯ ಸಂಘರ್ಷದ ಆಯಾಮಗಳು ಹೊಸ ಆಲೋಚನೆಗಳನ್ನು ಕಲ್ಪಿಸಿದವು. ಹಾಗೆಯೇ, ಇದೇ ಸಂದರ್ಭದಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಸರಳೀಕೃತ ಸಾಮಾಜಿಕ ನೋಟಕ್ರಮಗಳನ್ನು ಸಾಂಸ್ಕೃತಿಕ ಮೀಮಾಂಸೆಗಳಿಂದ ಸೃಷ್ಟಿಯಾದ ಸಂಕೀರ್ಣ ಸಾಹಿತ್ಯ ಮೀಮಾಂಸೆ ಪರಿಷ್ಕರಿಸಿತು. ಸಮಕಾಲೀನ ವಸಾಹತೋತ್ತರ ಹಾಗೂ ಆಧುನಿಕೋತ್ತರ ಸಂಸ್ಕೃತಿ ಮೀಮಾಂಸೆಗಳ ಸಾಹಿತ್ಯ ಗ್ರಹಿಕೆಗಳು, ವಿಮರ್ಶೆಯ ಪ್ರತಿಷ್ಠಿತ ಅಖಂಡ ಸ್ವರೂಪದ ತಾತ್ವಿಕತೆಯನ್ನು ತುಂಡೀಕರಿಸಿ ಸಂಸ್ಕೃತಿ ಸ್ವರೂಪವನ್ನು ಬಿಡಿಬಿಡಿಯಾದ ಸ್ಥಿತಿಗಳಲ್ಲಿ ಗಮನಿಸುವಂತೆ ನಿರ್ದೇಶಿಸುತ್ತಿವೆ.

ಸಂಸ್ಕೃತಿ ಸಂಕಥನಗಳ ಸಾಹಿತ್ಯ ಮೀಮಾಂಸೆಗಳು ಸಾಹಿತ್ಯ ವಿಮರ್ಶೆಯಲ್ಲಿ ರೂಢಿಗೆ ತಂದ ಹೊಸ ಪರಿಭಾಷೆಗಳು, ಪರಿಕಲ್ಪನೆಗಳು, ವಿಧಾನಗಳು ಮತ್ತು ಪರಿಕರಗಳು ಹಲವು ಗೊಂದಲ ಹಾಗೂ ಸಮಸ್ಯೆಗಳನ್ನು ಸಹ ಹುಟ್ಟಿಸಿವೆ ಎನ್ನುವುದು ವಾಸ್ತವವೆ ಆಗಿದೆ. ಹಾಗೆಯೇ, ಇವು ಕನ್ನಡದಲ್ಲಿ ನವ್ಯೋತ್ತರ ಸಾಹಿತ್ಯ ವಿಮರ್ಶೆಯ ಸರಳೀಕೃತ ತಾತ್ವಿಕತೆಯನ್ನು ನಿರಾಕರಿಸಿ, ಸಂಕೀರ್ಣ ಸ್ವರೂಪದ ನೂತನ ತಾತ್ವಿಕ ಚಹರೆಗಳನ್ನು ಸಹ ಒದಗಿಸಿದವು ಎನ್ನುವುದೂ ಕೂಡಾ ಅಷ್ಟೇ ಮುಖ್ಯವಾದ ವಿಚಾರವಾಗಿದೆ.

೩.೬ ಓದಿನ ಸಂಕಥನಗಳು

ಕಳೆದ ಶತಮಾನದುದ್ದಕ್ಕೂ ವಿವಿಧ ಜ್ಞಾನರೂಪಗಳಲ್ಲಿ ನಡೆದ ತೀವ್ರವಾದ ಹುಡುಕಾಟಗಳು, ಶೋಧನೆಗಳು, ವಾಗ್ವಾದಗಳು, ವೈಚಾರಿಕ ಸಂಘರ್ಷಗಳು ಮತ್ತು ಬೌದ್ಧಿಕ ವಿನಿಮಯಗಳು ಮುಖ್ಯವಾಗಿ ಸಾಹಿತ್ಯದ ಓದಿನಲ್ಲಿ ಪ್ರಸಿದ್ಧವಾಗಿದ್ದ 'ಭಾವನಾವಾದಿ' ಹಾಗೂ 'ಎಂಪಿರಿಕಲ್' ಕ್ರಮಗಳನ್ನು ಅಮಾನ್ಯಗೊಳಿಸಿದವು. ಇವುಗಳ ಬದಲು ಗತಿತಾರ್ಕಿಕ, ಸಂಘರ್ಷಣಾತ್ಮಕ ಮತ್ತು ಸಂಕಥನಾತ್ಮಕವಾದ 'ಕ್ರಿಟಿಕಲ್' ವಿಧಾನಗಳನ್ನು ಮುನ್ನೆಲೆಗೆ ತಂದವು. ಸಾಹಿತ್ಯದ 'ಓದು' ಎನ್ನುವುದು ಸರಳವಾದ ಜನಪ್ರಿಯ ಅರ್ಥದಲ್ಲಿ ನಡೆಯುವ ಕ್ರಿಯೆಯಾಗಿರದೆ, 'ವಿಮರ್ಶೆ' ಎನ್ನುವ ಬೌದ್ಧಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆ ಎನ್ನುವ ಗ್ರಹೀತದಲ್ಲಿ ಬಳಕೆಯಾಗತೊಡಗಿತು. ಈ ವಿದ್ಯಮಾನ ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ಸಂದರ್ಭದ ಸಾಮಾನ್ಯ ಸ್ವರೂಪವೂ ಆಗಿದೆ. ಹಾಗೆಯೇ, ಇದು ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪದ ಪಲ್ಲಟಕ್ಕೆ ಅನ್ವಯಿಸುವ ಮಾತೂ ಸಹ ಆಗಿದೆ.

ಓದಿನ ಸಂಕಥನಗಳು ಪಾಶ್ಚಾತ್ಯ ಮತ್ತು ಕನ್ನಡದ ಸಂದರ್ಭದಲ್ಲಿ ಅನೇಕ ಅಂಶಗಳಲ್ಲಿ ಸಾಮ್ಯತೆಯನ್ನು ಮತ್ತು ಬಹುತೇಕ ವಿಷಯಗಳಲ್ಲಿ ವಿಶಿಷ್ಟವಾದ ಭಿನ್ನತೆಯನ್ನು ಒಳಗೊಂಡಿವೆ. ಆದ್ದರಿಂದ ಇವುಗಳನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ.

೩.೬.೧ ಪಾಶ್ಚಾತ್ಯ ಓದಿನ ಸಂಕಥನಗಳ ಸ್ವರೂಪ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ಕಾಲಘಟ್ಟದಿಂದ ಪಾಶ್ಚಾತ್ಯ ಸಾಹಿತ್ಯ ಸಂದರ್ಭದಲ್ಲಿ ಸೌಂದರ್ಯಮೀಮಾಂಸಾವಾದಿ ಮತ್ತು ನೈತಿಕ ಆದರ್ಶವಾದಿ ಓದು ಪ್ರಸಿದ್ಧಿಗೆ ಬಂದಿತು. ಇದಕ್ಕೆ ಬಹುಮುಖ್ಯ ಕಾರಣ ಈ ಕಾಲಘಟ್ಟದ ಯುರೋಪಿನ ಸಮಾಜದಲ್ಲಿ ಆಧುನಿಕತೆಗೆ ವಿರುದ್ಧವಾಗಿ ಮೂಡಿ ಬಂದ ಆಧುನಿಕತಾವಾದ ಅಥವಾ ರೊಮ್ಯಾಂಟಿಸಂ ಎಂದು ಹೇಳಲಾಗಿದೆ. ಈ ಸಾಹಿತ್ಯವಾದವು ಪಾಶ್ಚಾತ್ಯ ವಿಮರ್ಶೆಯಲ್ಲಿ ಮನೋರಂಜನೆ, ಮನೋವಿಕಾಸ ಮತ್ತು ಆತ್ಮಾನುಭೂತಿ ಸಾಧನವಾದ ಭಾವನಾವಾದಿ ಓದನ್ನು ಪ್ರತಿಷ್ಠಿತ ಓದನ್ನಾಗಿ ಮಂಡಿಸಿತು. ಇದಕ್ಕೆ ವಿರುದ್ಧವಾಗಿ ಹುಟ್ಟಿಕೊಂಡ ಇಪ್ಪತ್ತನೆಯ ಶತಮಾನದ ಆರಂಭಿಕ ಕಾಲಘಟ್ಟದ ನವ್ಯ ವಿಮರ್ಶೆಯ ರೂಪನಿಷ್ಠ ಓದು, ಯುರೋಪು ಮತ್ತು ಅಮೇರಿಕಾದಲ್ಲಿ ಪಠ್ಯಾತ್ಮಕವಾದ ನಿಕಟ ಓದನ್ನು ಪ್ರಬಲವಾಗಿ ಪ್ರತಿಪಾದಿಸಿತು. ಈ ಓದಿನಿಂದ ಸಾಹಿತ್ಯ ಮತ್ತು ಕೃತಿಯನ್ನು ನಿರಪೇಕ್ಷ ಸ್ಥಿತಿಯ ಸ್ವಾಯತ್ತ ಶ್ರೇಷ್ಠ ಭಾಷಿಕ ರಚನೆಗಳೆಂದು ಪರಿಭಾವಿಸುವ ಪ್ರಕ್ರಿಯೆ ತೀವ್ರವಾಯಿತು. ಸಾಹಿತ್ಯದ ಓದನ್ನು ಒಂದು ಪರಿಣತ ಕಲೆ ಅಥವಾ ಕುಶಲಕರ್ಮವೆಂದು ನಿರೂಪಿಸಲಾಯಿತು. ಪಠ್ಯ ಮತ್ತು ಓದುಗನ ಮಧ್ಯೆ ಇರುವ ಬಹುಮುಖ್ಯ ಸಂಗತಿಗಳನ್ನು ತ್ಯಜಿಸಲಾಯಿತು.

ಇದೇ ಶತಮಾನದ ಮಧ್ಯಭಾಗದಿಂದ ನವ್ಯದ ಆಕೃತಿನಿಷ್ಠ ಓದಿನ ಅಥವಾ ಕೃತಿನಿಷ್ಠ ಗ್ರಹಿಕೆಯ ವಿರುದ್ಧ ಮಂಡನೆಯಾದ ವಾಚನ ಸ್ಪಂದನ ಸಿದ್ಧಾಂತ, ಕೃತಿಯನ್ನು 'ಸಾಯಿಸುವ' ಮೂಲಕ ಓದುಗನನ್ನು ಹುಟ್ಟಿಸುವ ಪ್ರಯತ್ನ ಮಾಡಿತು. ಈ ತತ್ವ ಓದಿನ ಸಂಕೀರ್ಣ ಸ್ತರಗಳನ್ನು ಅನಾವರಣಗೊಳಿಸಿತು. ಎಂಪಿರಿಕಲ್ ಮತ್ತು ಎಲೈಟ್‌ಮೆಂಟ್ ಓದಿನ ಕ್ರಮಗಳ ಬದಲು ಆಂತರಿಕಾನುಭವನಿಷ್ಠ ಓದುಗಳನ್ನು ಪ್ರತಿಪಾದಿಸಿತು. ಓದು ಮತ್ತು ಓದಗರನ್ನು ಕುರಿತು ಹಿಂದೆಂದೂ ಕಾಣದಂಥ ತತ್ವಗಳು, ಸಿದ್ಧಾಂತಗಳು ಹಾಗೂ ಪ್ರಮೇಯಗಳನ್ನು ಹುಟ್ಟುಹಾಕಿತು. ಸ್ಟ್ಯಾನ್ಲಿ ಫಿಶ್ ಓದುಗರ 'ಗುರುತು'ಗಳು, 'ಪಾತ್ರಗಳು' ಮತ್ತು 'ಕಾರ್ಯ'ಗಳನ್ನು ವಿಶ್ಲೇಷಿಸಿದನು. ವೂಲ್ಫ್‌ಗಾಂಗ್ ಇಶ್‌ರ್ (೧೯೨೬-೨೦೦೭) 'ಸೂಚಿತ ಓದುಗ' ಮತ್ತು 'ಪ್ರೇರೇಪಿತ ಓದುಗ'ನ ಪರಿಕಲ್ಪನೆ ಮಂಡಿಸಿದನು. ಉಂಬರ್ಟೊ ಇಕೋ 'ಮಾದರಿ ಓದುಗ'ನ ಪರಿಕಲ್ಪನೆ ನೀಡಿದನು. ಆದರೆ, ಈ ಯಾವುದೇ ಪರಿಕಲ್ಪನೆಗಳಾಗಲಿ ಅಥವಾ ಸಿದ್ಧಾಂತಗಳಾಗಲಿ ಪಠ್ಯ ಮತ್ತು ಓದುಗರು ಸಂಧಿಸಿದಾಗ ಸಂಭವಿಸುವ, ಪರಿವರ್ತಿತಗೊಳ್ಳುವ ಸಂಕೀರ್ಣ ಅನುಭವ ಹಾಗೂ ಅರ್ಥದ ನೆಲೆಗಳಿಗೆ ಇರುವ ನಿಜ ಕಾರಣಗಳನ್ನು ಗುರುತಿಸಲಿಲ್ಲ. ಒಂದೇ ಪಠ್ಯ ವಿಭಿನ್ನ ಜನಾಂಗ, ವರ್ಗ, ಲಿಂಗ, ಜಾತಿ ಮತ್ತು

ವಯೋಮಾನಕ್ಕೆ ಏಕಕಾಲದಲ್ಲಿ ಅನೇಕ ರೂಪಗಳಲ್ಲಿ ಸಂವಹನವಾಗುವ ಹಾಗೂ ಅರ್ಥ ಪ್ರಸರಣಗೊಳ್ಳುವ ಸ್ವರೂಪದ ಹಿಂದಿರುವ ವಾಸ್ತವ ಸಂಗತಿಗಳನ್ನು ಕುರಿತು ವಿಶ್ಲೇಷಿಸಲಿಲ್ಲ.

ಸಾಹಿತ್ಯದ ವ್ಯಾಕರಣ ತತ್ವವನ್ನು ಪ್ರತಿಪಾದಿಸಿದ ಸಂರಚನಾವಾದದ ಮತ್ತು ಪಠ್ಯದ ಸ್ವಯಂನಿರಚನೆಯನ್ನು ಮಂಡಿಸಿದ ನಿರಚನಾವಾದದ ಓದುಗಳೂ ಕೂಡಾ 'ಎಲ್ಲಾ ಓದುಗಳೂ ಸಹ ರೂಪಾಂತರಗಳು ಮತ್ತು ಸೃಜನಶೀಲವಾದವು' ಎಂದು ಹೇಳಿದವೇ ಹೊರತು ಓದಿನ ಸೃಜನಶೀಲತೆ ಹಾಗೂ ರೂಪಾಂತರೀಕರಣಕ್ಕೆ ಇರುವ ಮೂಲಗಳನ್ನೇನೂ ಶೋಧಿಸಲಿಲ್ಲ.

ಈ ದೃಷ್ಟಿಯಲ್ಲಿ ಪಾಶ್ಚಾತ್ಯ ವಿಚಾರವಾದಗಳು, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳು ರೂಪಿಸಿದ ಓದುಗಳು ಅತ್ಯಂತ ಮಹತ್ವಪೂರ್ಣವಾದವು. ಮಾರ್ಕ್ಸ್‌ವಾದದ ಮೂಲಕ ಹುಟ್ಟಿಕೊಂಡ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನದ ಓದು, ಮುಂದೆ ಮಾರ್ಕ್ಸ್‌ವಾದದ ಹಲವು ಪರಿಷ್ಕೃತ ಚಿಂತನೆಗಳಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಓದುಗಳಾಗಿ ವಿಕಸಿತವಾಯಿತು. ಹಾಗೆಯೇ, ಫ್ರಾಯ್ಡ್‌ವಾದದಿಂದ ಪ್ರಸಿದ್ಧಿಗೆ ಬಂದ ಮನಃಶಾಸ್ತ್ರೀಯ ಓದು, ಜಾಕಸ್ ಲಕಾನ್ ಹಾಗೂ ಜೂಲಿಯಾ ಕ್ರಿಸ್ಟೋವಾ ಮೊದಲಾದವರಿಂದ ಸಾಂಸ್ಕೃತಿಕ ಸ್ತ್ರೀವಾದಿ ಓದಿನ ಆಯಾಮ ಪಡೆಯಿತು. ಈ ಎಲ್ಲ ಓದುಗಳು ಸಾಹಿತ್ಯವನ್ನು ಶುದ್ಧ ಸಾಹಿತ್ಯಾತ್ಮಕ ಸ್ವರೂಪದಲ್ಲಿ ಗ್ರಹಿಸುವುದಕ್ಕೆ ಬದಲಾಗಿ ಸಮಾಜೋ-ಸಾಂಸ್ಕೃತಿಕ ರಚನೆಗಳೆಂದು ಪರಿಭಾವಿಸಿದವು. ಹಾಗೆಯೇ, ಓದನ್ನು ಸಹಜ ಮನುಷ್ಯ ಆಸಕ್ತಿ ಅಥವಾ ಸರಳ ಚಟುವಟಿಕೆಯೆಂದು ನೋಡದೆ, ಓದೂ ಕೂಡಾ ಸಾಮಾಜಿಕ, ಚಾರಿತ್ರಿಕ, ಆರ್ಥಿಕ, ಜೈವಿಕ ಮತ್ತು ಸಾಂಸ್ಕೃತಿಕ ಸೃಷ್ಟಿ ಎಂದು ವ್ಯಾಖ್ಯಾನಿಸಿದವು.

ಈ ಎಲ್ಲಾ ಬೆಳವಣಿಗೆಗಳು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯದ ವಿಶ್ಲೇಷಣೆಯ ಸಂದರ್ಭದಲ್ಲಿ ಬಹುಶಿಸ್ತು ನೋಟಕ್ರಮಗಳ ಬಳಕೆಯನ್ನು ತೀವ್ರಗೊಳಿಸಿದವು. ವಿಮರ್ಶೆಯಲ್ಲಿ ಅರ್ಥದ ಹುಡುಕಾಟಕ್ಕೆ ಬದಲು ಅರ್ಥಹುಟ್ಟುತ್ತಿರುವ ಮತ್ತು ಅದು ಸಂವಹನಗೊಳ್ಳುತ್ತಿರುವ ಸ್ವರೂಪವನ್ನು ಕುರಿತು ಆಲೋಚಿಸತೊಡಗಿದವು. ಅರ್ಥದ ಸೃಷ್ಟಿಯ ಹಿಂದಿರುವ ಶಕ್ತಿಗಳ ಹಿತಾಸಕ್ತಿಗಳನ್ನು ಕುರಿತು ಸಂಘರ್ಷಾತ್ಮಕತೆಯ ಅಗತ್ಯತೆಯನ್ನು ಪ್ರತಿಪಾದಿಸಿದವು. ಇದರಿಂದ, ಸಾಹಿತ್ಯ ವಿಮರ್ಶೆಯಲ್ಲಿ ಸಾಂಸ್ಕೃತಿಕ ಸಂಘರ್ಷದ ತಾತ್ವಿಕ ಚಹರೆ ತೀವ್ರವಾದ ಮಹತ್ವ ಪಡೆದುಕೊಳ್ಳುವ ಮೂಲಕ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳಲಾರಂಭಿಸಿತು.

೩.೬.೨ ಕನ್ನಡ ಓದಿನ ಸಂಕಥನಗಳ ಸ್ವರೂಪ

ಈಗಾಗಲೆ ಚರ್ಚಿಸಿರುವಂತೆ ಆಧುನಿಕ ಕನ್ನಡದ ಆರಂಭಿಕ ಓದುಗಳೂ ಸಹ, ಪಾಶ್ಚಾತ್ಯ ಸೌಂದರ್ಯ ಮೀಮಾಂಸಾವಾದಿ ಧೋರಣೆಯ ಭಾವನಾವಾದಿ ಓದುಗಳಿಂದಲೆ ಹುಟ್ಟಿಕೊಂಡಿವೆ. ಇಷ್ಟಾದರೂ, ಈ ಓದುಗಳಿಗೆ ಸ್ಥಳೀಯ ಚಾರಿತ್ರಿಕ ಅಥವಾ ಐತಿಹಾಸಿಕ ಒತ್ತಡದ ಹಲವು ಹೊಣೆಗಾರಿಕೆಗಳು

ಸಹ ಸೇರಿಕೊಂಡಿದ್ದವು. ಈ ಕಾರಣದಿಂದ ಶ್ರೇಷ್ಠ ಮಟ್ಟದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಓದಾಗಿ ರೂಪುಗೊಳ್ಳಬಹುದಾಗಿದ್ದ ನವೋದಯದ ಓದು, ಭಾರತೀಯ ಕಾವ್ಯ ಮೀಮಾಂಸೆಯ ಅಧಿಕಾರಾತ್ಮಕ ನಿಯಂತ್ರಣದಿಂದಾಗಿ, ಪ್ರಧಾನವಾಗಿ 'ಅಭಿರುಚಿ ನಿರ್ಮಾಣ'ದ ಹಾಗೂ 'ಸಂಸ್ಕೃತಿ ಮೌಲ್ಯ ಪ್ರತಿಪಾದನಾ ಸಾಧನ'ದ ಓದಾಗಿಯೆ ಉಳಿದುಕೊಂಡಿತು.

ಕಳೆದ ಶತಮಾನದ ಮಧ್ಯಭಾಗದಲ್ಲಿ ಕನ್ನಡದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ನವ್ಯ ಚಳವಳಿಯ ರೂಪನಿಷ್ಠ ಓದು, ಮೂಲತಃ ಪಾಶ್ಚಾತ್ಯ ಕೃತಿನಿಷ್ಠ ಓದಿನ ಸಮಗ್ರ ತಾತ್ವಿಕ ಪರಿಕಲ್ಪನೆಗಳನ್ನು ಯಥಾರ್ಥವಾಗಿ ಅಳವಡಿಸಿಕೊಂಡ ಸ್ಥಳ ವ್ಯತ್ಯಾಸಾತ್ಮಕ ಓದಷ್ಟೆ ಆಗಿತ್ತು. ಈ ಓದು ಪ್ರತಿಪಾದಿಸಿದ 'ಮಣ್ಣಿನ ವಾಸನೆ' ಪರಿಕಲ್ಪನೆಯು ಪಾಶ್ಚಾತ್ಯ ಕೃತಿನಿಷ್ಠ ವಿಮರ್ಶೆಯ 'Hyper protected co-operative principle'ನ ಸಂವಾದಿ ರೂಪವಾದ 'ಸಾವಯವ ಸಮಗ್ರೀಕರಣ ಶಿಲ್ಪ'ದ ಪರಿಕಲ್ಪನೆಯ ಎದುರು ಹೆಚ್ಚು ಅರ್ಥಪೂರ್ಣವಾಗಿ ಬೆಳೆಯಲಿಲ್ಲ. ಹೀಗಾಗಿ, ಇದು ಸಹ ಒಂದು 'ಆಧುನಿಕ ಅಭಿಜಾತವಾದಿ' ಅಥವಾ 'ನವ ಸೌಂದರ್ಯವಾದಿ' ಓದು ಮಾತ್ರವಾಗಿಯೇ ಉಳಿಯಿತು.

ಇದೇ ಕಾಲಘಟ್ಟದಲ್ಲಿ ಎಪ್ಪತ್ತರ ದಶಕದ ನಂತರ ಕನ್ನಡದಲ್ಲಿ ಹೆಚ್ಚು ಚಾಲನೆಗೆ ಬಂದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಲಿಂಗಾಧಾರಿತ ಓದುಗಳು ಪಾಶ್ಚಾತ್ಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ತತ್ವವಾದಗಳಿಂದ ಪ್ರೇರಣೆ ಪಡೆದುಕೊಂಡವು. ಇದರೊಂದಿಗೆ, ಸ್ಥಳೀಯವಾಗಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಉಂಟಾದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳು ಸಾಹಿತ್ಯ ಮತ್ತು ವಿಮರ್ಶಾ ವಿಚಾರಗಳನ್ನು ಅನುಸಂಧಾನ ಮಾಡುವ ಹೊಸ ಸ್ವರೂಪದ ಓದಿನ ಮಾದರಿಗಳನ್ನು ನಿರ್ಮಿಸಿದವು. ಈ ದಿಶೆಯಲ್ಲಿ ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರವಾದಗಳಾದ ಅಂಬೇಡ್ಕರ್ ಹಾಗೂ ಲೋಹಿಯಾವಾದಗಳು ಹುಟ್ಟುಹಾಕಿದ ಓದುಗಳು ಬಹಳ ಮಹತ್ವಪೂರ್ಣವಾದವು.

ಆನಂತರ ತೊಂಭತ್ತರ ದಶಕದಿಂದ ಆಧುನಿಕೋತ್ತರ ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ಎದುರಾಗಿರುವ ಸಾಂಸ್ಕೃತಿಕ ಬಿಕ್ಕಟ್ಟುಗಳ ಪೃಥಕ್ಕರಣದ ಸಾಧನಗಳಾಗಿ ಮುನ್ನೆಲೆಗೆ ಬಂದಿರುವ ಹಲವು ಹೊಸ ಓದುಗಳು ಕನ್ನಡ ಓದಿನ ಸಂಕಥನಗಳಿಗೆ ಅರ್ಥಪೂರ್ಣ ಆಯಾಮಗಳನ್ನು ಕಲ್ಪಿಸಿದವು. ನವವಸಾಹತುಶಾಹಿಯ ಜಾಗತೀಕರಣದ 'ಸಂಸ್ಕೃತಿಗಳ ಸಂಘರ್ಷ'ದ ಸನ್ನಿವೇಶದಲ್ಲಿ ಸ್ಥಳೀಯ ಸಂಸ್ಕೃತಿ ಮತ್ತು ಜೀವನ ಕ್ರಮಗಳ ಮಹತ್ವದ ಮರುಶೋಧನೆಯ ರೂಪವಾಗಿ ದೇಸಿ ಓದು, ದೇಸಿ ಜ್ಞಾನಪರಂಪರೆಗಳ ಓದು, ಕೋಮುವಾದ ಮತ್ತು ಮೂಲಭೂತವಾದ ವಿರೋಧಿ ಓದು, ಹಸಿರು ಓದು ಮೊದಲಾದ ಆಧುನಿಕ ಓದುಗಳು ಹೆಚ್ಚು ಮಹತ್ವ ಪಡೆದುಕೊಂಡಿವೆ. ಇವು ಪ್ರಗತಿಪರ ಮತ್ತು ಪ್ರತಿಗಾಮಿ ಅಥವಾ ಜನಪರ ಮತ್ತು ಜನವಿರೋಧಿ ಶಕ್ತಿಗಳ ಪರಸ್ಪರ ಸಂಘರ್ಷ ಮತ್ತು ಹಿತಾಸಕ್ತಿಗಳ ಸಾಧನೋಪಾಯಗಳಾಗಿ ಬಳಕೆಯಾಗುತ್ತಿವೆ. ಒಟ್ಟಾರೆ, ಕನ್ನಡದ ಸಮಕಾಲೀನ ಓದುಗಳು ಸಾಂಸ್ಕೃತಿಕ ರಾಜಕಾರಣದ ಆಳವಾದ ಉದ್ದೇಶ ಹೊಂದಿವೆ. ಈ

ವಿದ್ಯಮಾನವು ಕಳೆದ ಶತಮಾನದ ಆರಂಭಿಕ ಹಂತದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಪ್ರಧಾನವಾಗಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅಭಿರುಚಿಯ ನಿರ್ಮಾಣದ ಉದ್ದೇಶದಿಂದ ರೂಪುಗೊಂಡ ಓದಿನ ತಾತ್ವಿಕತೆಯನ್ನು ಶತಮಾನದ ಅಂತ್ಯದ ವೇಳೆಗೆ ರೂಢಮೂಲವಾಗಿ ಪಲ್ಲಟಿಸುವ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ಪರಿವರ್ತಿಸಿತು.

೩.೬.೩ ಸಾಹಿತ್ಯ ಮೀಮಾಂಸೆ

ಓದಿನ ಸಂಕಥನಗಳು ಪ್ರಾಚೀನ ಕಾವ್ಯಮೀಮಾಂಸೆ ಮತ್ತು ಸಮಕಾಲೀನ ಪ್ರತಿಷ್ಠಿತ ಸಾಹಿತ್ಯ ಮೀಮಾಂಸೆಗಳಿಗೆ ವಿರುದ್ಧವಾಗಿ ಆಧುನಿಕವಾದ ಹಲವು ಹೊಸ ಸಾಹಿತ್ಯ ಮೀಮಾಂಸೆಗಳನ್ನು ರೂಪಿಸಿದವು. ಇವು ಅಂತಿಮವಾಗಿ ವಿಮರ್ಶಾ ಮೀಮಾಂಸೆಗಳಾಗಿ ಬೆಳೆಯುವ ಮೂಲಕ ಸಾಂಸ್ಕೃತಿಕ ವಿಮರ್ಶೆಯ ಹುಟ್ಟಿಗೆ ಪ್ರಮುಖ ಪ್ರೇರಣೆಗಳಾದವು.

ಸಾಹಿತ್ಯದ ಸ್ವರೂಪ ಕುರಿತು ಪ್ರತಿಪಾದಿಸಿದ್ದ ಪ್ರತಿಷ್ಠಿತ ಕಾವ್ಯಮೀಮಾಂಸೆ 'ಕಾವ್ಯ' ಮತ್ತು 'ಶ್ರೇಷ್ಠ ಕೃತಿಶ್ರೇಣಿ' ಪರಿಕಲ್ಪನೆಯನ್ನು ಆಧುನಿಕ ಓದಿನ ಸಂಕಥನಗಳ ಸಾಹಿತ್ಯ ಮೀಮಾಂಸೆಗಳು ನಿರಾಕರಿಸಿದವು. 'ಪಠ್ಯ'ದ ಪರಿಕಲ್ಪನೆ ಮೂಲಕ ಸಾಹಿತ್ಯದ ಸ್ವರೂಪ ಹಾಗೂ ವ್ಯಾಪ್ತಿಯನ್ನು ವ್ಯಾಪಕವಾಗಿ ವಿಸ್ತರಿಸಿದವು. ಹಾಗೆಯೇ ಸಾಹಿತ್ಯ ಕೃತಿಯ 'ವಿಶ್ಲೇಷಣೆ' ಮತ್ತು 'ಮೌಲ್ಯಮಾಪನ'ಗಳೆ ವಿಮರ್ಶೆಯ ಪ್ರಧಾನ ಕಾರ್ಯಮಾದರಿಗಳು; ಆದ್ದರಿಂದ, ಈ ಪ್ರಕ್ರಿಯೆಯಲ್ಲಿ ಸಾಹಿತ್ಯೇತರ ಸಂಗತಿಗಳಿಗೆ ಯಾವುದೇ ಅವಕಾಶವಿಲ್ಲ ಎನ್ನುವ ಅಭಿಜಾತವಾದಿ ವಿಮರ್ಶಾ ಮೀಮಾಂಸೆಯನ್ನು ಸಹ, ಈ ಕಾಲಘಟ್ಟದ ಸಾಮಾಜಿಕ, ರಾಜಕೀಯ ಮತ್ತು ಲಿಂಗಾಧಾರಿತ ಪ್ರಶ್ನೆಗಳ ಓದಿನ ಸಾಹಿತ್ಯ ಮೀಮಾಂಸೆಗಳು ತೀವ್ರವಾಗಿ ಪ್ರಶ್ನಿಸಿದವು. ಇದಕ್ಕೆ ಪ್ರತಿಯಾಗಿ ಇವು ನೂತನ ವಿಮರ್ಶಾ ಮೀಮಾಂಸೆಗಳನ್ನು ಮಂಡಿಸಿದವು. ಸಾಹಿತ್ಯದ ಓದು ಎನ್ನುವುದು ಮುಖ್ಯವಾಗಿ ಸಮಾಜ, ಸಂಸ್ಕೃತಿ, ಚರಿತ್ರೆ ಮತ್ತು ಭಾಷೆ ಮೊದಲಾದವುಗಳ ರಚನೆ, ಪ್ರಸರಣೆ ಮತ್ತು ಬಳಕೆಯ ಹಿನ್ನೆಲೆಯಲ್ಲಿರುವ ಅಧಿಕಾರ ರಾಜಕಾರಣದ ನೆಲೆಗಳನ್ನು ಅರಿಯುವ, ವಿವರಿಸುವ ಮತ್ತು ಪ್ರಶ್ನಿಸುವ ಮಹತ್ವಪೂರ್ಣವಾದ ಹೊಣೆಗಾರಿಕೆಯ ಕ್ರಿಯೆ ಎಂದು ನಿರೂಪಿಸಿದವು. ಇದು ಬಹುಮುಖ್ಯವಾಗಿ ಭೌತಿಕ ಚಟುವಟಿಕೆಗಿಂತ ಭಿನ್ನವಾಗಿರುವ ವಿಶಿಷ್ಟ ಸ್ವರೂಪದ ಮಾನಸಿಕ ಹಾಗೂ ಬೌದ್ಧಿಕ ಚಟುವಟಿಕೆ ಎಂದು ವ್ಯಾಖ್ಯಾನಿಸಿದವು.

ಈ ಕಾಲಘಟ್ಟದ ಆಧುನಿಕ ಓದುಗಳು ಸಾಹಿತ್ಯ ಕೃತಿ ಅಥವಾ ಪಠ್ಯದೊಳಗೆ ಅಂತರ್ನಿಹಿತವಾಗಿರುವ 'ಅರ್ಥ'ದ ಶೋಧನೆಯನ್ನು ಮುಖ್ಯ ಗುರಿಯಾಗಿ ಹೊಂದಿದ್ದ ಸಾಂಪ್ರದಾಯಕ ಓದಿನ ಮೀಮಾಂಸೆ ಅಥವಾ ವಿಮರ್ಶಾ ಮೀಮಾಂಸೆಯನ್ನು ಸಹ ಬಲವಾಗಿ ನಿರಾಕರಿಸಿದವು. ಇದಕ್ಕೆ ಪರ್ಯಾಯವಾಗಿ ಸಂಕೀರ್ಣವಾದ 'ಅರ್ಥ ಮೀಮಾಂಸೆ'ಯನ್ನು ಪ್ರತಿಪಾದಿಸಿದವು. 'ಅರ್ಥ' ಎನ್ನುವುದು ಪಠ್ಯದಲ್ಲಿ ಸ್ವಯಂಸಿದ್ಧವಾಗಿ ಹುದುಗಿರುವ ಆಕೃತಿಯಲ್ಲ; ಅದು ಪ್ರಯತ್ನಪೂರ್ವಕವಾಗಿ ನಿರ್ವಚಿಸಿಕೊಳ್ಳಬೇಕಾದ ಅಥವಾ ಕಟ್ಟಬೇಕಾದ

ರಚನೆ. ಈ ರಚನೆಯು ಮುಖ್ಯವಾಗಿ ಮಾನಸಿಕ ಅಥವಾ ಬೌದ್ಧಿಕ ನೆಲೆಯನ್ನಷ್ಟೇ ಹೊಂದಿರದೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುವ ಸ್ವರೂಪದ್ದಾಗಿದೆ. ಆದ್ದರಿಂದ ಪಠ್ಯದ ಅರ್ಥವು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಲಿಂಗಾಧಾರಿತ ನೆಲೆಗಳಿಂದ ಕೂಡಿರುವ ವಿಶಿಷ್ಟ ಸಂರಚನೆ ಎನ್ನುವುದು ಈ ನೂತನ ಮೀಮಾಂಸೆಯ ಪ್ರಬಲವಾದ ಪ್ರತಿಪಾದನೆ. ಇದನ್ನು ಕುರಿತು ಜೋನಾಥನ್ ಕಲರ್ ತನ್ನ 'ಲಿಟರರಿ ಥಿಯರಿ ಎ ವೆರಿ ಶಾರ್ಟ್ ಇನ್ಟ್ರುಡಕ್ಷನ್' (೧೯೯೭) ಕೃತಿಯಲ್ಲಿ ಪಠ್ಯದ ಅರ್ಥ ಕೇವಲ ಕಾವ್ಯ ಮೀಮಾಂಸೆ ಅಥವಾ ಅರ್ಥವಿವರಣಶಾಸ್ತ್ರದ (ಹರ್ಮ್ಯನೂಟಿಕ್ಸ್) ಪ್ರಯತ್ನಗಳಿಗೆ ದಕ್ಕುವಂಥಹದಲ್ಲ ಎಂದು ವಿವರಿಸುತ್ತಾನೆ. ಹಾಗೆಯೇ, ಕೃತಿನಿಷ್ಠ ಓದಿನ ಪ್ರಯತ್ನಗಳಿಂದ ಸಹ ಪಠ್ಯದ ಅರ್ಥದ ಸ್ವರೂಪವನ್ನು ಗ್ರಹಿಸಲು ಸಾಧ್ಯವಿಲ್ಲ ಎಂದು ವಿಶ್ಲೇಷಿಸುತ್ತಾನೆ.

ಈ ಸಂದರ್ಭದಲ್ಲಿ ಆತ, "ಕೃತಿಯ ಅರ್ಥ ಎನ್ನುವುದು, ಯಾವುದೋ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಲೇಖಕನ ಮನಸ್ಸಿನಲ್ಲಿ ಇದ್ದದ್ದೊ ಅಥವಾ ಈಗ ಪಠ್ಯದೊಳಗೆ ಇರುವಂಥಹದ್ದೊ ಇಲ್ಲವೇ ಓದುಗನ ಅನುಭವಕ್ಕೆ ಗ್ರಾಹ್ಯವಾಗುವಂಥಹದ್ದೋ ಆಗಿರುವುದಿಲ್ಲ. ಅರ್ಥ ಎನ್ನುವುದು ಹಾಗೆ ವಿಭಜಿಸಿ ಹೇಳುವಂಥ ಸ್ವರೂಪದ್ದೂ ಆಗಿರುವುದಿಲ್ಲ. ಏಕೆಂದರೆ, ಇದು ಸರಳವಾದದ್ದಾಗಲಿ ಅಥವಾ ಸುಲಭವಾಗಿ ನಿರ್ಧರಿಸುವುದಾಗಲಿ ಆಗಿರದ ವಿಶಿಷ್ಟ ಸ್ವರೂಪದ ಗ್ರಹಿಕೆಯಾಗಿದೆ. ಇದು ಏಕಕಾಲಕ್ಕೆ ಓದುಗನ ಅನುಭವವಾಗಿರುವಂತೆ ಪಠ್ಯದ ಉಸಿರೂ ಸಹ ಆಗಿರುತ್ತದೆ. ಇದು, ನಾವು ಏನನ್ನು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಪಠ್ಯದಲ್ಲಿರುವ ಯಾವುದನ್ನು ನಾವು ಅರ್ಥಮಾಡಿಕೊಳ್ಳಲು ಯತ್ನಿಸುತ್ತೇವೆ ಎನ್ನುವುದು ಒಗ್ಗೂಡಿ ರೂಪುಗೊಳ್ಳುವಂಥಹದ್ದಾಗಿರುತ್ತದೆ. ಅಲ್ಲದೆ ಅರ್ಥದ ಕುರಿತು ಯಾವಾಗಲೂ ತಕರಾರುಗಳಿರುವುದು ಸಹ ಸಾಧ್ಯವಿದೆ. ಆದ್ದರಿಂದ, ಅರ್ಥ ಎನ್ನುವುದು ಈಗಾಗಲೆ ನಿರ್ಧರಿತವಾಗಿರುವ ಸಂಗತಿಯಲ್ಲ; ಬದಲಾಗಿ ನಿರ್ಧರಿಸಬೇಕಾಗಿರುವ ಸಂಗತಿಯಾಗಿರುತ್ತದೆ. ಅಷ್ಟೇ ಅಲ್ಲದೆ ಇದು ಯಾವಾಗಲೂ ಪ್ರಶ್ನಾರ್ಹ ಕೂಡಾ ಎಂದು ಹೇಳಲಾಗುತ್ತದೆ. ಈ ಬಗ್ಗೆ ನಾವು ಒಂದು ಸಮಗ್ರ ಸೂತ್ರವೊಂದನ್ನು ನಿರೂಪಿಸಬೇಕೆಂದರೆ ಆಗ, ಅರ್ಥ ಎನ್ನುವುದು ಸಂದರ್ಭನಿಷ್ಠವಾದದ್ದು; ಹೀಗಾಗಿ ಸಂದರ್ಭದ ಹಿನ್ನೆಲೆಯ ಮೂಲಕವೇ ಅರ್ಥವನ್ನು ನಿರ್ಧರಿಸಬೇಕಿದೆ. ಆದರೆ, ಸಂದರ್ಭ ಎನ್ನುವುದು ಭಾಷೆಯ ನಿಯಮಗಳು, ಲೇಖಕನ ಮತ್ತು ಓದುಗನ ಹಿನ್ನೆಲೆ ಹಾಗೂ ಸೂಕ್ತವೆಂದು ಭಾವಿಸಬಹುದಾದ ಇನ್ನಿತರ ಯಾವುದೇ ಸಂಗತಿಗಳನ್ನು ಒಳಗೊಂಡೇ ಇರುವಂಥಹದ್ದಾಗಿರುತ್ತದೆ. ನಾವು ಒಂದು ವೇಳೆ ಅರ್ಥ ಎನ್ನುವುದು ಸಂದರ್ಭನಿಷ್ಠವಾದದ್ದು ಎಂದು ಹೇಳಬೇಕಾದರೆ, ಆಗ ಕಡ್ಡಾಯವಾಗಿ ನಾವು ಸಂದರ್ಭ ಎನ್ನುವುದು ಸರಹದ್ದುಗಳಿಲ್ಲದ ಅವಸ್ಥೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಿದೆ. ಆದ್ದರಿಂದ ನಾವು ಯಾವುದೆ ಸಂಗತಿಯನ್ನು ಸೂಕ್ತವಾದುದೆಂದು ಮುಂಗಡವಾಗಿ ನಿರ್ಧರಿಸುವುದಾಗಲೀ ಅಥವಾ ಸಂದರ್ಭದ ವಿಸ್ತರಣೆಗಾಗಿ ನಾವು ಬಳಸುವ ಯಾವುದೆ ಸಂಗತಿಯು ಯಾವುದನ್ನು ನಾವು ಕೃತಿಯ ಅರ್ಥವೆಂದು ಪರಿಗಣಿಸಿದ್ದೇವೊ ಅದನ್ನು ಪಲ್ಲಟಗೊಳಿಸುತ್ತದೆ

ಎಂದಾಗಲೀ ಊಹಿಸಲು ಸಾಧ್ಯವಿಲ್ಲ. ಏಕೆಂದರೆ ಅರ್ಥ ಎನ್ನುವುದು ಸಂದರ್ಭನಿಷ್ಠವಾದದ್ದು. ಆದರೆ ಸಂದರ್ಭಕ್ಕೆ ಸರಹದ್ದುಗಳೆ ಇಲ್ಲ."[೮] ಎಂದು ವಿಶ್ಲೇಷಿಸುತ್ತಾನೆ.

ಪಠ್ಯದಲ್ಲಿ ಏನನ್ನು ಹೇಳಲಾಗಿದೆ ಮತ್ತು ಹೇಗೆ ಹೇಳಲಾಗಿದೆ ಎನ್ನುವ ಆಶಯ ಹಾಗೂ ಆಕೃತಿ ಮೀಮಾಂಸೆಗೆ ಬದಲಾಗಿ, ಆಧುನಿಕ ಓದಿನ ಸಂಕಥನಗಳು ಪಠ್ಯ ಏನನ್ನು ಹೇಳಿಲ್ಲ ಮತ್ತು ಏನನ್ನು ಹೇಳಲು ನಿರಾಕರಿಸುತ್ತಿದೆ ಎನ್ನುವುದನ್ನು ಕುರಿತು ಪಠ್ಯದ 'ಮೌನ ಮೀಮಾಂಸೆ' ಯನ್ನು ಪ್ರತಿಪಾದಿಸಿದವು. ಆಧುನಿಕ ಮಾರ್ಕ್ಸ್‌ವಾದಿ ವಿಮರ್ಶಕ ಫಿಶರೆ ಮ್ಯಾರಿ ತನ್ನ 'ಎ ಥಿಯರಿ ಆಫ್ ಲಿಟರರಿ ಪ್ರೊಡಕ್ಷನ್' (೧೯೬೬) ಕೃತಿಯಲ್ಲಿ 'ಪಠ್ಯ ಏನನ್ನು ಹೇಳುವುದಿಲ್ಲ ಎನ್ನುವುದನ್ನು ಹೇಳುತ್ತದೆ' (Text says what it does not say) ಎನ್ನುವುದನ್ನು ಕುರಿತು ವಿಸ್ತೃತವಾಗಿ ವಿಶ್ಲೇಷಿಸುತ್ತಾನೆ. ಪಠ್ಯ ಏನನ್ನು ಹೇಳುತ್ತಿದೆ ಎನ್ನುವುದು ಮುಖ್ಯವಲ್ಲ; ಏನನ್ನು ಹೇಳುತ್ತಿಲ್ಲ ಹಾಗೂ ಏನನ್ನು ಹೇಳಲು ನಿರಾಕರಿಸುತ್ತಿದೆ ಎನ್ನುವುದೇ ಕೃತಿಯ ಬಹುಮುಖ್ಯ ವಿಶಿಷ್ಟತೆಯಾಗಿರುತ್ತದೆ. ಆದ್ದರಿಂದ ಪಠ್ಯದಲ್ಲಿರುವ ನಿಶ್ಯಬ್ದಗಳು, ಮೌನಗಳು ಮತ್ತು ಕಂದರಗಳ ಮೂಲಕವೇ ಕೃತಿಯನ್ನು ಸಮರ್ಥವಾಗಿ ಗ್ರಹಿಸಬೇಕು ಎಂದು ವಾದಿಸುತ್ತಾನೆ. ಇದನ್ನು, ಫಿಶರೆ 'ಮೌನಾಭಿವ್ಯಕ್ತಿಮಾಧ್ಯಮ' ಎಂದು ಗುರುತಿಸುತ್ತಾನೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲೂ ಈ ಕಾಲಘಟ್ಟದಲ್ಲಿ ಪಠ್ಯದ 'ಮೌನ ಮೀಮಾಂಸೆ'ಯ ಅಗತ್ಯ ಹಾಗೂ ಮಹತ್ವವನ್ನು ಕುರಿತು ಚರ್ಚಿಸುತ್ತಾ ಬರಗೂರು ಅವರು, "ಸಾಹಿತ್ಯ ಅಥವಾ ಸಾಹಿತ್ಯ ಪರಂಪರೆಯೊಂದು ಏನನ್ನು ಕುರಿತು ಮಾತಾಡುತ್ತಿದೆ, ಹೇಗೆ ಮಾತಾಡುತ್ತಿದೆ ಎಂದು ಚರ್ಚಿಸುವಾಗಲೇ ಏನನ್ನು ಕುರಿತು ಮೌನವಹಿಸಿದೆ, ಯಾಕೆ ಮೌನವಹಿಸಿದೆ ಎಂಬ ಪ್ರಶ್ನೆಯೂ ಮುಖ್ಯ. ಈ ಮೌನದ ನೆಲೆಯನ್ನು ಕುರಿತ ಪ್ರಶ್ನೆಯೇ ಮೌನಕ್ಕೆ ಮಾತು ಕೊಡುವ ಪ್ರಕ್ರಿಯೆಯಾದಾಗ, ಹೊಸ ಅಭಿವ್ಯಕ್ತಿ ನೆಲೆ ರೂಪುಗೊಳ್ಳುತ್ತದೆ. ಆದ್ದರಿಂದ ಸಾಹಿತ್ಯ ಮತ್ತು ಸಂಸ್ಕೃತಿಗಳ ಚರ್ಚೆ ಕೇವಲ ಮಾತಿನ ಚರ್ಚೆಯಲ್ಲ; ಮೌನದ ಚರ್ಚೆಯೂ ಹೌದು"[೯] ಎಂದು ಅಭಿಪ್ರಾಯಪಡುತ್ತಾರೆ.

ಓದಿನ ಸಂಕಥನಗಳಿಂದ ರೂಪುಗೊಂಡ ಸಾಹಿತ್ಯ ಮೀಮಾಂಸೆಗಳು ಆಧುನಿಕ ಸಾಹಿತ್ಯ ವಿಮರ್ಶೆ ಕುರಿತ ಹಲವು ಹೊಸ ವಿಮರ್ಶಾ ಮೀಮಾಂಸೆಗಳನ್ನು ಸಹ ರೂಪಿಸಿದವು. ಸಾಹಿತ್ಯ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ವೈಧಾನಿಕ ನೆಲೆಗಳನ್ನು ಕುರಿತು ಈ ಮೀಮಾಂಸೆಗಳು ಅರ್ಥಪೂರ್ಣವಾದ ಹೊಸ ಚಿಂತನೆಗಳನ್ನು ಮಂಡಿಸಿದವು. ಈ ಬಗ್ಗೆ ಆಲೋಚಿಸುತ್ತಾ ಬರಗೂರು ಅವರು, "ವಿಮರ್ಶೆಯೆಂದರೆ ಸಾಹಿತ್ಯವನ್ನು ಕುರಿತ ತತ್ವ ಮತ್ತು ವಿಶ್ಲೇಷಣಾ ವಿಧಾನ ಎರಡೂ ಸೇರಿರುತ್ತವೆ. ಸಾಹಿತ್ಯದ ಪರಿಕಲ್ಪನೆ ಮತ್ತು ಸಾಹಿತ್ಯದ ವಿಶ್ಲೇಷಣೆಗಳ ಅಂತರ್ ಸಂಬಂಧದಲ್ಲಿ ವಿಮರ್ಶೆ ಹುಟ್ಟುತ್ತದೆ. ಸಾಹಿತ್ಯದ ಪರಿಕಲ್ಪನೆಯೆಂದರೆ ಬದುಕಿನ ಪರಿಕಲ್ಪನೆಯೂ ಹೌದು; ಸಾಹಿತ್ಯ ವಿಮರ್ಶೆ ಎಂದರೆ ಸಾಹಿತ್ಯ ಒಳಗೊಂಡ ಬದುಕಿನ ವಿಶ್ಲೇಷಣೆಯೂ ಹೌದು. ಸಾಹಿತ್ಯ ವಿಮರ್ಶೆಯೆಂದರೆ ಸಾಹಿತ್ಯ ಒಳಗೊಂಡ ಬದುಕಿನ ವಿಶ್ಲೇಷಣೆಯೂ ಹೌದು. ವಿಮರ್ಶೆಯ ಕೆಲಸ ಕೇವಲ ಭಾಷೆ – ಶೈಲಿಗಳ ಚರ್ಚೆಯಲ್ಲ. ಸಾಹಿತ್ಯದಲ್ಲಿ ರೂಪುಗೊಳ್ಳುವ

ಭಾಷೆಯಲ್ಲಿ ಬದುಕಿನ ವಿವರ ಮತ್ತು ಒಳನೋಟಗಳೂ ಸೇರಿರುವುದರಿಂದ, ಬದುಕಿನ ವಿಶ್ಲೇಷಣೆಯು ವಿಮರ್ಶೆಯ ಅಂತರ್ಗತ ವಿಧಾನವಾಗಿರುತ್ತದೆ. ಸಾಹಿತ್ಯದ ಭಾಷೆಯನ್ನು ಚರ್ಚಿಸುವ ವಿಮರ್ಶೆಯ ಭಾಷೆಯಲ್ಲಿ ಬದುಕಿನ ಸೂಕ್ಷ್ಮಗಳೂ ಸೇರಿರುತ್ತವೆ. ಆದ್ದರಿಂದ ವಿಮರ್ಶೆಯ ಭಾಷೆ ಮತ್ತು ವಿಧಾನಗಳು ಸಾಹಿತ್ಯದೊಳಗಿನ ಜೀವನ ವಿವರಗಳನ್ನಷ್ಟೇ ವಿಶ್ಲೇಷಿಸುವುದಿಲ್ಲ; ಅಲ್ಲಿರುವ ಜೀವನ ದೃಷ್ಟಿ-ಧೋರಣೆಗಳನ್ನೂ ವಿಶ್ಲೇಷಿಸುತ್ತವೆ. ಅಂದರೆ ವಿಮರ್ಶೆಯು ತನ್ನದೇ ಆದ ಜೀವನ ದೃಷ್ಟಿ ಧೋರಣೆಗಳನ್ನು ಹೊಂದಿರುತ್ತದೆ"[೧೦] ಎಂದು ವಿಮರ್ಶೆಯ ಸ್ವರೂಪ ಕುರಿತು ವ್ಯಾಖ್ಯಾನಿಸುತ್ತಾರೆ.

ಕನ್ನಡದ ದಲಿತವಾದಿ ದೃಷ್ಟಿಕೋನದ ಓದುಗಳೂ ಸಹ ಹೊಸ ಸ್ವರೂಪದ ವಿಮರ್ಶೆಯ ಅಗತ್ಯ ಮತ್ತು ಅನಿವಾರ್ಯತೆಯನ್ನು ಬಲವಾಗಿ ಪ್ರತಿಪಾದಿಸಿದವು. ಸಾಹಿತ್ಯ ವಿಮರ್ಶೆ ಕೇವಲ ಸಾಹಿತ್ಯದ ಚರ್ಚೆಯ ಸಾಧನ ಮಾತ್ರವಾಗಿರದೆ, ಸಮಾಜ ಮತ್ತು ಸಂಸ್ಕೃತಿಯ ಸ್ವರೂಪವನ್ನು ವಿವರಿಸುವ ಹಾಗೂ ವಿಮರ್ಶಿಸುವ ಹೊಣೆಗಾರಿಕೆಯನ್ನು ತನ್ನ ತಾತ್ವಿಕತೆಯಲ್ಲಿ ಒಳಗೊಂಡಿರಬೇಕು ಎಂದು ಆಗ್ರಹಿಸಿದವು. ಈ ಹೊಸ ಸಾಮಾಜಿಕ ಹಾಗೂ ರಾಜಕೀಯ ವಿಮರ್ಶೆಯ ಸ್ಥಿತ್ಯಂತರದ ಸ್ವರೂಪವನ್ನು ಎನ್.ಕೆ. ಹನುಮಂತಯ್ಯ ಅವರ "ದಲಿತ ವಿಮರ್ಶೆ ಎನ್ನುವುದು ಶುದ್ಧ ಸಾಹಿತ್ಯ ವಿಮರ್ಶಾಮಾರ್ಗವನ್ನು ತಿರಸ್ಕರಿಸಿ ವಿಶಾಲವಾದ ಸಂಸ್ಕೃತಿ ವಿಮರ್ಶೆಯ ಕಡೆಗೆ ತಿರುಗಿದೆ"[೧೧] ಎನ್ನುವ ಮಾತು ನಿಖರವಾಗಿ ಗುರುತಿಸುತ್ತದೆ.

ಸಾಹಿತ್ಯದ ಸ್ವರೂಪದ ಗ್ರಹಿಕೆಯಲ್ಲಾಗಿರುವ ಪಲ್ಲಟದಿಂದ ವಿಮರ್ಶೆಯ ತಾತ್ವಿಕತೆಯಲ್ಲಾದ ಪರಿವರ್ತನೆಯ ಸ್ವರೂಪವನ್ನು ಕುರಿತು ಆಶಾದೇವಿ ಅವರು "ಸಾಹಿತ್ಯದ ಇವತ್ತಿನ ಬಹಳ ಮುಖ್ಯ ಬೆಳವಣಿಗೆಯೆಂದರೆ ಪಠ್ಯವೊಂದಕ್ಕೆ ನಾವು ಒದಗಿಸಿಕೊಳ್ಳುತ್ತಿರುವ ಬಹುಮುಖಿ ಓದುಗಳು. ಅದು ಕೊಡುವ 'ರಸಾನುಭವ'ದ ಜೊತೆಗೇ ಅದು ಕಟ್ಟಿಕೊಡುವ ಸಾಮಾಜಿಕ-ರಾಜಕೀಯ ಆಯಾಮಗಳೂ ರಸಾನುಭವದಷ್ಟೇ ಮುಖ್ಯ ಎನ್ನುವುದು ಇವತ್ತು ಪ್ರಶ್ನಾತೀತವಾಗಿ ಒಪ್ಪಿತವಾಗಿದೆ. ಕೃತಿಯೊಂದರ ಶ್ರೇಷ್ಠತೆ, ಮಹತ್ವ, ಪ್ರಸ್ತುತತೆ ಈ ಎಲ್ಲವನ್ನೂ ಇವತ್ತು ಕೇವಲ ಸಾಹಿತ್ಯಕ ಮಾನದಂಡಗಳು ನಿರ್ಧರಿಸುತ್ತಿಲ್ಲ. ಸಾಹಿತ್ಯೇತರ ಮಾನದಂಡಗಳೂ ಅಷ್ಟೇ ಶಕ್ತವಾಗಿ ನಿರ್ದೇಶಿಸುತ್ತಿವೆ"[೧೨] ಎಂದು ಗುರುತಿಸುತ್ತಾರೆ.

ಕಳೆದ ಶತಮಾನದ ಓದಿನ ಸಂಕಥನಗಳ ಸಾಹಿತ್ಯ ಮೀಮಾಂಸೆಗಳಿಂದ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ತಾತ್ವಿಕತೆಯಲ್ಲಾಗಿರುವ ರೂಢಮೂಲ ಪಲ್ಲಟದ ಸ್ವರೂಪವನ್ನು ಕುರಿತು ಬಿಜಯ್ ಕುಮಾರ್ ದಾಸ್ ಅವರು ತಮ್ಮ 'ಟ್ವೆಂಟಿಯತ್ ಸೆಂಚುರಿ ಲಿಟರರಿ ಕ್ರಿಟಿಸಿಸಂ' (೨೦೧೦) ಕೃತಿಯಲ್ಲಿ ದೀರ್ಘವಾಗಿ ಚರ್ಚಿಸುತ್ತಾರೆ. ಈ ಒಟ್ಟು ವಿದ್ಯಮಾನವನ್ನು ಅವರು "ಇಪ್ಪತ್ತನೆ ಶತಮಾನದಲ್ಲಿ ಬಳಕೆಯಲ್ಲಿದ್ದ ಪ್ರಮುಖವಾದ ಎಲ್ಲಾ ವಿಮರ್ಶಾ ಪಂಥಗಳು ಹಾಗೂ ಸಾಹಿತ್ಯ ಸಿದ್ಧಾಂತಗಳನ್ನು ಪರಿಶೀಲಿಸಿದ ನಂತರ, ಸಾಹಿತ್ಯ ಪಠ್ಯಗಳ ವಿಶ್ಲೇಷಣೆಗಾಗಿ ಹೊಸ ವಿಮರ್ಶಾ ಪಂಥದ ಅಥವಾ ಸಿದ್ಧಾಂತದ ಅಗತ್ಯ ಕುರಿತು ಆಲೋಚಿಸುವ ಪ್ರಯತ್ನಕ್ಕೆ ಯಾರೂ ಬೆಂಬಲಿಸುವುದಿಲ್ಲ. ಸಾಹಿತ್ಯ ಎನ್ನುವುದು ಒಂದು ಅಂತಃಸ್ಥಗುಣ

ಎಂದರೆ, ಸಾಹಿತ್ಯಾತ್ಮಕ ಗುಣ ಎಂದು ನಾವು ನಂಬಬೇಕೆಂದು ನಿರೀಕ್ಷಿಸುವ ಆಧುನಿಕೋತ್ತರ ವಿಮರ್ಶಕರ ಅಪೇಕ್ಷೆಗೆ ಅನುಸಾರವಾಗಿ, ಅದು ಕೇವಲ ಒಂದು ಸಾಹಿತ್ಯ ಪಠ್ಯಕ್ಕೆ ಪ್ರತಿಸ್ಪಂದಿಸಿ ಇನ್ನೊಂದು ಪಠ್ಯ ಸೃಷ್ಟಿಸುವ ಬರವಣಿಗೆಯ ರೂಪವಲ್ಲ ಎನ್ನುವುದನ್ನು ಯಾರೇ ಆಗಲಿ ಮರೆಯಬಾರದು. ಲೇಖಕ ಪಠ್ಯವನ್ನು ಸೃಷ್ಟಿಸುತ್ತಾನೆ. ಪಠ್ಯ ಮುದ್ರಿತ ರೂಪದಲ್ಲಿರುತ್ತದೆ. ಈ ಪಠ್ಯವನ್ನು ವಿಶ್ಲೇಷಿಸಲು ಓದುಗ ತನ್ನ ಸ್ವಂತ ಜ್ಞಾನ ಬಳಸುತ್ತಾನೆ. ಈ ಪಠ್ಯದ ಅಸ್ತಿತ್ವಕ್ಕೆ ಜಗತ್ತು ಅವಕಾಶ ಕಲ್ಪಿಸಿರುತ್ತದೆ. ಆದ್ದರಿಂದ, ಸಾಹಿತ್ಯ ಪಠ್ಯದ ಓದಿನಲ್ಲಿ ಈ ಎಲ್ಲವನ್ನೂ ಮುಖ್ಯವೆಂದು ಪರಿಗಣಿಸಬೇಕಿದೆ. ಸಾಹಿತ್ಯ ಪಠ್ಯವನ್ನು ಓದುವಾಗ ನಾವು ಯಾವಾಗಲೂ ಸಾಹಿತ್ಯದ 'ಸಾಹಿತ್ಯತನ'ವನ್ನು ಮನಸಿನಲ್ಲಿಟ್ಟುಕೊಳ್ಳಬೇಕು. ಸಾಹಿತ್ಯವು (ಭೌತವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಂತೆ ವಸ್ತು ಹಾಗೂ ವಿಷಯ ಸಂಗತಿ ಆಧಾರಿತವಾಗಿರದ) ಒಂದು ಕುಶಲಕಲೆ ಆಗಿರುವುದರಿಂದ ಅದನ್ನು ಅಭ್ಯಾಸ ಮಾಡಲು ವಿವಿಧ ದೃಷ್ಟಿಕೋನಗಳು ಯಾವಾಗಲೂ ಅಗತ್ಯವಾಗಿರುತ್ತವೆ ಎನ್ನುವುದನ್ನು ಒಪ್ಪಬೇಕು. ಆದ್ದರಿಂದ ಇಪ್ಪತ್ತೊಂದನೆಯ ಶತಮಾನದ ಸಾಹಿತ್ಯ ವಿಮರ್ಶೆಯು ಲೇಖಕ, ಪಠ್ಯ, ಓದುಗ ಮತ್ತು ಜಗತ್ತು ಈ ನಾಲ್ಕೂ ಸಂಗತಿಗಳನ್ನು ಸಾಹಿತ್ಯ ಸೃಷ್ಟಿ ಮತ್ತು ಸ್ವೀಕಾರಕ್ಕೆ ಸಂಬಂಧಿಸಿದ ಬಹುಮುಖ್ಯ ವಿಚಾರಗಳೆಂದು ಪರಿಭಾವಿಸುವ ಪ್ರಯತ್ನ ಮಾಡಬೇಕು. ಇದರಿಂದ ನಾವು ಸಾಹಿತ್ಯದ ಮೌಲ್ಯಮಾಪನ ಮತ್ತು ವಿಶ್ಲೇಷಣೆಯ ಹೊಸ ವಿಮರ್ಶಾಪಂಥವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ"[೧೩] ಎಂದು ವ್ಯಾಖ್ಯಾನಿಸುತ್ತಾರೆ.

ಇಂಥ ಸಂಶ್ಲೇಷಕ ಪ್ರಯತ್ನದಿಂದಾಗಿಯೇ ಕಳೆದ ಶತಮಾನದ ಉತ್ತರಾರ್ಧದ ಕಾಲಘಟ್ಟದಲ್ಲಿ ಪಾಶ್ಚಾತ್ಯ ಮತ್ತು ಕನ್ನಡ ವಿಮರ್ಶಾ ಸಂದರ್ಭದಲ್ಲಿ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿದೆ.

೩.೭. ಅಧ್ಯಾಯದ ಫಲಿತಗಳು

'ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ವಿವೇಚನೆ'ಯಿಂದ ಕಂಡುಕೊಂಡ ಮುಖ್ಯ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಸಾಂಸ್ಕೃತಿಕ ವಿಮರ್ಶೆ ಎನ್ನುವುದು ಪಾಶ್ಚಾತ್ಯ ಮತ್ತು ಕನ್ನಡ ಸಾಹಿತ್ಯ ವಿಮರ್ಶೆಯ ಎರಡೂ ಸಂದರ್ಭಗಳಲ್ಲಿ, ಪ್ರಧಾನವಾಗಿ ಕಳೆದ ಶತಮಾನದ ಎರಡನೆಯ ಘಟ್ಟದಲ್ಲಿ ಕಂಡುಬರುವ ವಿದ್ಯಮಾನವಾಗಿದೆ. ಎಂದರೆ, ಚಾರಿತ್ರಿಕವಾಗಿ ಸಾಂಸ್ಕೃತಿಕ ವಿಮರ್ಶೆ ಇಪ್ಪತ್ತನೆಯ ಶತಮಾನದ ದ್ವಿತೀಯಾರ್ಧದ ವಿದ್ಯಮಾನವಾಗಿದೆ.

ಆ. ಸಾಂಸ್ಕೃತಿಕ ವಿಮರ್ಶೆಯು ಐತಿಹಾಸಿಕವಾಗಿ, ಪಾಶ್ಚಾತ್ಯ ಮತ್ತು ಕನ್ನಡ ವಿಮರ್ಶೆಯ ಎರಡೂ ಸಂದರ್ಭಗಳಲ್ಲಿ ಸರಿಸುಮಾರು ಏಕಕಾಲಿಕವಾಗಿ ಕಂಡು ಬರುವ ಪ್ರವೃತ್ತಿಯಾಗಿದ್ದರೂ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಪ್ರೇಕ್ಷ್ಯದ ಹಿನ್ನೆಲೆಗಳ ಅವಲೋಕನದಿಂದ ಇವರೆಡಕ್ಕೂ ಬೇರೆಯದೆ ಆದ

ನೆಲೆಗಳಿವೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಂಪರೆಯು, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಿಂತ ದೀರ್ಘವಾಗಿದೆ ಹಾಗೂ ವ್ಯಾಪಕವಾಗಿದೆ.

ಇ. ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ, ನಿರ್ದಿಷ್ಟವಾಗಿ ಕಳೆದ ಶತಮಾನದ ಅರವತ್ತರ ಮತ್ತು ಎಪ್ಪತ್ತರ ದಶಕಗಳ ಸಂಸ್ಕೃತಿ ಅಧ್ಯಯನಗಳ ಹಾಗೂ ಚರಿತ್ರೆ ಅಧ್ಯಯನಗಳ ಪರಿಣಾಮವಾಗಿ ರೂಪುಗೊಂಡಿದೆ. ಇಂಗ್ಲೆಂಡಿನ 'ಸಾಂಸ್ಕೃತಿಕ ಭೌತವಾದ' ಅಥವಾ 'ಸಾಂಸ್ಕೃತಿಕ ವಸ್ತುವಾದ' ಹಾಗೂ ಅಮೇರಿಕಾದ 'ನವಚಾರಿತ್ರಿಕವಾದ'ಗಳನ್ನು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಎರಡು ರೂಪಗಳೆಂದು ಅಥವಾ ಇವೆರಡರ ಚಿಂತನೆಗಳನ್ನು ಸಮಾವಿಷ್ಟಗೊಳಿಸಿರುವ ಕ್ರಮವನ್ನು 'ಸಾಂಸ್ಕೃತಿಕ ವಿಮರ್ಶೆ' ಎಂದು ಗುರುತಿಸಲಾಗಿದೆ.

ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಹೀಗೆ ನಿರ್ದಿಷ್ಟ ಕಾಲಬದ್ಧ ಅಥವಾ ಸಿದ್ಧಾಂತಬದ್ಧ ಹಿನ್ನೆಲೆಯಿಂದ ಹುಟ್ಟಿಲ್ಲ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಆರಂಭದಿಂದಲೂ ಸಾಹಿತ್ಯಾಧ್ಯಯನ ಮತ್ತು ಕೃತಿ ವಿಶ್ಲೇಷಣೆಗಳಲ್ಲಿ ಸಾಂಸ್ಕೃತಿಕ ಪ್ರಶ್ನೆಗಳು, ಸಾಂಸ್ಕೃತಿಕ ಆಸಕ್ತಿಗಳು ಮತ್ತು ಸಾಂಸ್ಕೃತಿಕ ಸಂಗತಿಗಳು ಬಳಕೆಯಾಗುತ್ತಿದ್ದವು. ಇವು ಕಳೆದ ಶತಮಾನದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗಳು ಹಾಗೂ ಮಾನವನ ಬೌದ್ಧಿಕ ಆಲೋಚನೆಯ ಜ್ಞಾನಮೀಮಾಂಸೆಯಲ್ಲಿ ಆದ ರೂಢಮೂಲ ಪಲ್ಲಟಗಳಿಂದ ಸಾಂಸ್ಕೃತಿಕ ಸಂಘರ್ಷದ ಆಯಾಮ ಪಡೆದುಕೊಂಡವು. ಈ ಮೂಲಕ ಇವು ಪ್ರಧಾನವಾಗಿ ನವ್ಯೋತ್ತರ ಕಾಲಘಟ್ಟದ ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ಅವಸ್ಥಾಂತರಗೊಳಿಸಿದವು.

ಉ. ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯು, ಸಂಸ್ಕೃತಿಯ ಭೌತಿಕ ಆಕೃತಿಗಳು ಮತ್ತು ಬೌದ್ಧಿಕ ರಚನೆಗಳನ್ನು 'ಪಠ್ಯ'ಗಳೆಂದು ಪರಿಭಾವಿಸುವ ಮೂಲಕ ರೂಪುಗೊಂಡಿದೆ. 'ಸಾಂಸ್ಕೃತಿಕ ಭೌತವಾದ' ಸಮಕಾಲೀನ ಬದುಕಿನ ಸಂಸ್ಕೃತಿಯ ಮೂರ್ತರೂಪಗಳನ್ನು ಮತ್ತು ನವಚಾರಿತ್ರಿಕವಾದ ಪುನರುಜ್ಜೀವನ ಚಳವಳಿಯ 'ಕ್ಲಾಸಿಕಲ್ ಪಠ್ಯ'ಗಳನ್ನು ಅನುಸಂಧಾನ ಮಾಡುವ ಮೂಲಕ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ ರೂಪಿತವಾಗಿದೆ. ಹಾಗೆಯೇ, ಕನ್ನಡದಲ್ಲೂ ಕಳೆದ ಶತಮಾನದ ಎಪ್ಪತ್ತರ ದಶಕದ ನಂತರ ಸಾಹಿತ್ಯ ಮತ್ತು ಸಾಹಿತ್ಯೇತರ ಸಂಗತಿಗಳ ಅನುಸಂಧಾನದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆ ವಿಕಾಸವಾಗಿದೆ. ಹೀಗಾಗಿಯೇ, ಕರ್ನಾಟಕದ ಸಾಂಸ್ಕೃತಿಕ ಪುನುರುಜ್ಜೀವನ ಕಾಲಘಟ್ಟವೆಂದು ಕರೆಯಲಾಗುವ ನವೋದಯ ಕಾಲಘಟ್ಟದಲ್ಲಿ ಸಂಸ್ಕೃತಿ ಕುರಿತ 'ಅಭಿಮಾನದ ವಿಮರ್ಶೆ' ಬಂದರೆ;ಸಾಂಸ್ಕೃತಿಕ ಸಂಘರ್ಷದ ಕಾಲಘಟ್ಟವೆಂದು ಕರೆಯಬಹುದಾದ ನವ್ಯೋತ್ತರ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಪ್ರಜ್ಞೆಯಲ್ಲಿನ ಪ್ರಜಾಪ್ರಭುತ್ವೀಕರಣದ ಕಾರಣದಿಂದ 'ಸಾಂಸ್ಕೃತಿಕ ವಿಮರ್ಶೆ' ರೂಪುಗೊಂಡಿರುತ್ತದೆ.

ಊ. ಸಾಂಸ್ಕೃತಿಕ ವಿಮರ್ಶೆ ಪ್ರಧಾನವಾಗಿ ಕಳೆದ ಶತಮಾನದಲ್ಲಿ ಮಾನವಿಕ ಶಿಸ್ತುಗಳು ಉಂಟು ಮಾಡಿದ ಬೌದ್ಧಿಕ ಕ್ರಾಂತಿಯ ಸಂಶ್ಲೇಷಕ ಪರಿಣಾಮವಾಗಿದೆ. ವೈಜ್ಞಾನಿಕ ಮತ್ತು ತಾತ್ವಿಕ ಚಿಂತನೆಗಳು ಇದರ ಹಿನ್ನೆಲೆಯಲ್ಲಿ ಪ್ರೇರಣಾ ರೂಪದಲ್ಲಿವೆಯೆ ಹೊರತು ಮುನ್ನೆಲೆಯಲ್ಲಿರುವುದು ಪ್ರಧಾನವಾಗಿ ಮಾನವಿಕ ಚಿಂತನೆಗಳೆ.

ಋ. ಪಾಶ್ಚಾತ್ಯ ಮತ್ತು ಕನ್ನಡ ಸಾಂಸ್ಕೃತಿಕ ವಿಮರ್ಶೆ ಎರಡಕ್ಕೂ ಪ್ರಧಾನವಾಗಿ ಸಮಾಜ, ಚರಿತ್ರೆ, ಸಂಸ್ಕೃತಿ, ಸಾಹಿತ್ಯ ಮತ್ತು ಓದಿನ ಸಂಕಥನಗಳು ರೂಪಿಸಿದ ವೈವಿಧ್ಯಮಯವಾದ ಸಾಮಾಜಿಕ, ಚಾರಿತ್ರಿಕ, ಸಾಂಸ್ಕೃತಿಕ, ಸಾಹಿತ್ಯಕ ಮತ್ತು ವಿಮರ್ಶಾ ಮೀಮಾಂಸೆಗಳು ಬಹುಮುಖ್ಯವಾದ ಪ್ರೇರಣೆಗಳಾಗಿವೆ. ಈ ವಿಶಿಷ್ಟ ಮೀಮಾಂಸೆಗಳು ಮನುಷ್ಯನ ಚರಿತ್ರೆ, ಸಮಾಜ, ಸಂಸ್ಕೃತಿ, ಭಾಷೆ, ಧರ್ಮ, ರಾಜಕಾರಣ, ಲೈಂಗಿಕ ಪ್ರಶ್ನೆಗಳು, ಮನಸ್ಸು, ಪ್ರಜ್ಞೆ ಮತ್ತು ವರ್ತಮಾನದ ಬದುಕಿನ ಹಲವು ಸಂಕೀರ್ಣ ಸಮಸ್ಯೆಗಳನ್ನು ಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಅನೇಕ ಆಧುನಿಕ ಹಾಗೂ ಅರ್ಥಪೂರ್ಣ ತತ್ವಗಳು, ಪ್ರಮೇಯಗಳು ಹಾಗೂ ಸಿದ್ಧಾಂತಗಳನ್ನು ಕಲ್ಪಿಸಿರುತ್ತವೆ.

ೠ. ಈ ಮೀಮಾಂಸೆಗಳು ಸಾಹಿತ್ಯದ ಸ್ವರೂಪ, ವ್ಯಾಪ್ತಿ, ಆಶಯಗಳು ಮತ್ತು ಆಕೃತಿಗಳನ್ನು ಕುರಿತು ಪ್ರತಿಪಾದಿಸಿದ ಸಂಕೀರ್ಣವೂ ಹಾಗೂ ಅರ್ಥಪೂರ್ಣವೂ ಆದ ಗ್ರಹಿಕೆಗಳು ಮುಖ್ಯವಾಗಿ ಕಳೆದ ಶತಮಾನದಲ್ಲಿ ಸಾಹಿತ್ಯ ವಿಮರ್ಶೆಯ ತಾತ್ವಿಕತೆಯಲ್ಲಿ ಆದ ರೂಢಮೂಲ ಪಲ್ಲಟಗಳಿಗೆ ಪ್ರಮುಖ ಕಾರಣಗಳಾಗಿವೆ.

ಎ. ಸಾಹಿತ್ಯ ಮತ್ತು ಸಾಹಿತ್ಯೇತರ ಎನ್ನುವ ಬೈನರಿ ವರ್ಗೀಕರಣವನ್ನು ತೊಡೆದುಹಾಕಿದ 'ಪಠ್ಯ ಮೀಮಾಂಸೆ'; ಪಠ್ಯಾಂತರ್ಗತ ಅರ್ಥಶೋಧನೆಗೆ ತೀವ್ರ ವಿರೋಧ ತೋರಿದ 'ಅರ್ಥ ನಿರ್ವಚನಾ; ಮೀಮಾಂಸೆ' ಮತ್ತು ಪಠ್ಯೋಕ್ತ ಸಂಗತಿಗಳಿಗೆ ಭಿನ್ನಮತ ತಳೆದ 'ಮೌನಾಭಿವ್ಯಕ್ತಿ ಮಾಧ್ಯಮ' ಮೀಮಾಂಸೆಗಳು ಸಾಹಿತ್ಯದ ಸ್ವರೂಪವನ್ನು ಆಮೂಲಾಗ್ರವಾಗಿ ಪರಿಷ್ಕರಿಸುವ ಹಾಗೂ ವಿಸ್ತರಿಸುವ ಮೂಲಕ ಸಾಹಿತ್ಯದ ಹೊಸ ಮೀಮಾಂಸೆಗಳನ್ನು ರೂಪಿಸಿದುದು ಸಾಂಸ್ಕೃತಿಕ ವಿಮರ್ಶೆಯ ವಿಕಾಸಕ್ಕೆ ಬಹುಮುಖ್ಯ ಕಾರಣವಾಗಿದೆ.

ಏ. ಸಮಾಜ, ಚರಿತ್ರೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಪಟ್ಟಂತೆ ಪ್ರತಿಪಾದಿಸಲಾದ ತಾತ್ವಿಕ ಚಿಂತನೆ ಹಾಗೂ ಸೈದ್ಧಾಂತಿಕ ಆಕೃತಿಗಳು ಸಾಹಿತ್ಯದ ಆಶಯಗಳನ್ನು ಹಾಗೂ ಆಕೃತಿಗಳನ್ನು ಕುರಿತ ಉಂಟು ಮಾಡಿದ ಪಲ್ಲಟಗಳು ಸಹ ಸಾಹಿತ್ಯ ವಿಮರ್ಶೆಯ ಪ್ರತಿಷ್ಠಿತ ನಿಲುವುಗಳನ್ನು ಬಹುತೇಕವಾಗಿ ನಿರಾಕರಿಸಿ ಹೊಸ ವಿಮರ್ಶಾ ವಿಚಾರಗಳನ್ನು ಪ್ರತಿಪಾದಿಸಿದವು. ಇದರಿಂದ ಸಾಹಿತ್ಯ ವಿಮರ್ಶೆ ಸಾಂಸ್ಕೃತಿಕ ವಿಮರ್ಶೆಯಾಗಿ ವಿಕಾಸವಾಯಿತು.

೨. ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಉಗಮದಲ್ಲಿ ಪ್ರಧಾನವಾಗಿ ಕಳೆದ ಶತಮಾನದ ಅರವತ್ತರ ದಶಕದಿಂದ ಪ್ರಸಿದ್ಧಿಗೆ ಬಂದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ತತ್ವವಾದಗಳ ಅಥವಾ 'ಥಿಯರಿ'ಗಳ ಪಾತ್ರ ಹೆಚ್ಚಾಗಿರುವಂತೆ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ, ಇದಕ್ಕಿಂತ ಮುಖ್ಯವಾಗಿ ಮಾರ್ಕ್ಸ್‌ವಾದದ 'ಐಡಿಯಾಲಜಿ' ಪರಿಕಲ್ಪನೆ ಮುಂದಿನ ದಿನಗಳಲ್ಲಿ ಪಡೆದುಕೊಂಡ ಪರಿಷ್ಕಾರ ಹಾಗೂ ಅರ್ಥವಿಸ್ತಾರಗಳು, ಸಿಗ್ಮಂಡ್ ಫ್ರಾಯ್ಡ್‌ನ ಮನಃಶಾಸ್ತ್ರೀಯ ಚಿಂತನೆಗಳು ಪಡೆದುಕೊಂಡ ಭಾಷಿಕ ಹಾಗೂ ಸಾಂಸ್ಕೃತಿಕ ವ್ಯಾಖ್ಯಾನಗಳು ವಾಸ್ತವವಾಗಿ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣದ ಹಿನ್ನೆಲೆಯಲ್ಲಿರುವ ಅತ್ಯಂತ ಮಹತ್ವದ ಸಂಗತಿಗಳಾಗಿವೆ.

೭. ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಪಾಶ್ಚಾತ್ಯ ಮಾರ್ಕ್ಸ್‌ವಾದ, ಸ್ತ್ರೀವಾದ ಮತ್ತು ಮನೋವಿಶ್ಲೇಷಣಾತ್ಮಕವಾದಗಳೊಂದಿಗೆ ಇನ್ನಿತರ ಹಲವು ಸಾಂಸ್ಕೃತಿಕ ಹಾಗೂ ಮಾನವಶಾಸ್ತ್ರೀಯ ಅಧ್ಯಯನಗಳ ವಿಚಾರಗಳು ಸಹ ಪ್ರಭಾವ ಬೀರಿವೆ. ಆದರೂ, ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಬಹುಮುಖ್ಯವಾಗಿ ಅಂಬೇಡ್ಕರ್‌ವಾದ, ಲೋಹಿಯಾವಾದ ಮತ್ತು ಕುವೆಂಪು ಅವರ ಸಂಸ್ಕೃತಿ ಚಿಂತನೆಗಳು ದಟ್ಟವಾಗಿ ಪ್ರಭಾವಿಸಿವೆ.

೮. ಕನ್ನಡ ಸಂಸ್ಕೃತಿ ಚಿಂತನೆಯ ಆರಂಭಿಕ ಘಟ್ಟದ ಪ್ರತಿಷ್ಠಿತ ವ್ಯಾಖ್ಯಾನಗಳು ಭಾರತದ ಹೊಸ ಸಮಾಜ ಮತ್ತು ರಾಜಕೀಯ ಬೆಳವಣಿಗೆಗಳನ್ನು ವಿರೋಧಿಸುವ ಉದ್ದೇಶದಿಂದ ಸಂಸ್ಕೃತಿಯ ವಿಶ್ಲೇಷಣೆ ಹಾಗೂ ವಿಮರ್ಶೆಯಲ್ಲಿ ನಿರತವಾಗಿದ್ದವು. ಆದರೆ ಇಂಥ ವ್ಯಾಖ್ಯಾನಗಳಿಂದ ಹೀಗೆ ವಿರೋಧಕ್ಕೆ ಒಳಗಾಗಿದ್ದ ಸಂಗತಿಗಳೇ ವಾಸ್ತವವಾಗಿ ಮುಂದೆ ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳುವುದಕ್ಕೆ ಮುಖ್ಯವಾದ ಪ್ರೇರಣೆಗಳನ್ನು ಒದಗಿಸಿವೆ.

೯. ಸ್ವಾತಂತ್ರ್ಯೋತ್ತರ ಕಾಲಘಟ್ಟದ ಆರಂಭಿಕ ಹಂತದಲ್ಲಿ, ಯಾವ ಸಂಗತಿಗಳು ನವ್ಯ ವಿಮರ್ಶೆಗೆ ಭಾರತೀಯ ಸಮಾಜ, ರಾಜಕಾರಣ ಮತ್ತು ಸಂಸ್ಕೃತಿಯ ಅವನತಿಯ ಪ್ರತೀಕಗಳೆಂದು ತೋರಿದವೋ, ಅದೇ ಸಂಗತಿಗಳಾದ ಪ್ರಜಾಪ್ರಭುತ್ವ, ಸಮಾಜವಾದ, ಆಧುನಿಕ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ತಿಳಿವಳಿಕೆಗಳು ತಂದ ಬದಲಾವಣೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮುಖ್ಯ ಪ್ರೇರಣಾ ಮೂಲಗಳಾಗಿವೆ.

೧೦. ಸಾಂಸ್ಕೃತಿಕ ವಿಮರ್ಶೆಯ ಈ ವೈವಿಧ್ಯಮಯ ಬಹುರೂಪಿ ಪ್ರೇರಣಾ ಮೀಮಾಂಸೆಗಳು ರೂಢಿಗೆ ತಂದ ಹೊಸ ಪರಿಭಾಷೆಗಳು, ಪರಿಕಲ್ಪನೆಗಳು, ಅನುಸಂಧಾನದ ಆಧುನಿಕ ವಿಧಾನಗಳು ಮತ್ತು ತಾತ್ವಿಕ ಗ್ರಹಿಕೆಗಳಿಂದ ಪಠ್ಯದ ವಿಶ್ಲೇಷಣೆ ಹಾಗೂ ವ್ಯಾಖ್ಯಾನಗಳಲ್ಲಿ ಕೆಲವೊಮ್ಮೆ ಪರಸ್ಪರ ವಿರೋಧಾಭಾಸಗಳು ಮತ್ತು ಬಿಕ್ಕಟ್ಟುಗಳು ಕೂಡಾ ಸೃಷ್ಟಿಯಾಗಿವೆ.

ಆಃ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಂಸ್ಕೃತಿ ಚಿಂತನೆ, ಸಾಂಸ್ಕೃತಿಕ ಅಧ್ಯಯನ, ಸಾಹಿತ್ಯ ವಿಶ್ಲೇಷಣೆ ಮತ್ತು ಸಾಹಿತ್ಯ ಚಿಂತನೆಗಳು ಕೆಲವೊಮ್ಮೆ ಪ್ರತ್ಯೇಕವಾದ ವಿಶ್ಲೇಷಣಾತ್ಮಕ ನೆಲೆಯಲ್ಲಿ ನಡೆಯುತ್ತಿರುವುದನ್ನು ಕಾಣಬಹುದು. ಆದರೆ ಇದು ಬಹಳ ಕಡಿಮೆ ಪ್ರಮಾಣದಲ್ಲಿದೆ. ಆದರೆ ಇದಕ್ಕೆ ಬದಲಾಗಿ ಇವೆಲ್ಲವೂ ಒಗ್ಗೂಡಿರುವ ಸಂಶ್ಲೇಷಣಾತ್ಮಕ ನೆಲೆಯಲ್ಲಿ ನಡೆಯುತ್ತಿರುವುದು ಸಾಮಾನ್ಯ ಸ್ವರೂಪವಾಗಿದೆ. ಅಲ್ಲದೆ, ಇದು ಅತ್ಯಂತ ವ್ಯಾಪಕ ಪ್ರಮಾಣದಿಂದ ಕೂಡಿದೆ ಮತ್ತು ಬಹುತೇಕ ಏಕೀಕೃತವಾಗಿ ನಡೆಯುತ್ತಿದೆ.

ಕ. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಹಿತ್ಯವನ್ನು ಸಾಂಸ್ಕೃತಿಕ ರಾಜಕಾರಣದ ಮಾಧ್ಯಮವೆಂದು ಪರಿಗಣಿಸುತ್ತಿರುವ ನೆಲೆಗಳಲ್ಲಿ ಸಾಹಿತ್ಯ 'ಕೃತಿ' ಅಥವಾ 'ಪಠ್ಯ'ವನ್ನು ಸಾಂಸ್ಕೃತಿಕ ದಾಖಲೆ ಅಥವಾ ದಸ್ತಾವೇಜು ಎಂದು ಭಾವಿಸುತ್ತಿರುವುದನ್ನು ಸಹ ಕಾಣಬಹುದು.

ಇಂಥ ಇನ್ನು ಹಲವು ಫಲಿತಗಳನ್ನು ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಅಧ್ಯಯನದಿಂದ ವಿವರಿಸಿಕೊಳ್ಳಲು ಸಾಧ್ಯವಿದೆ. ಆದರೆ ಇಲ್ಲಿ ಅತ್ಯಂತ ಮುಖ್ಯವೆಂದು ಭಾವಿಸಲಾಗಿರುವ ಫಲಿತಗಳನ್ನು ಮಾತ್ರ ನಿರೂಪಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಡೆನ್ನಿಸ್ ವಾಲ್ಡರ್ (ಸಂ), ಲಿಟರೇಚರ್ ಇನ್ ದ ಮಾಡರ್ನ್ ವರ್ಲ್ಡ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಯು.ಎಸ್.ಎ, ೨೦೦೮, ಪುಟ ೨೬೨

೨. ಜೋನಾಥನ್ ಕಲರ್, ಲಿಟರರಿ ಥಿಯರಿ ಎ ವೆರಿ ಶಾರ್ಟ್, ಇನ್ಟ್ರುಡಕ್ಷನ್, ಆಕ್ಸ್‌ಫರ್ಡ್ ಯೂನಿರ್ವಸಿಟಿ ಪ್ರೆಸ್, ಯು.ಎಸ್.ಎ., ೨೦೦೦, ಪುಟ ೪೦.

೩. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫, ಪುಟ ೯೯.

೪. ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧, ಪುಟ ೧೦.

೫. ನಾಗರತ್ನ ಕುಮಾರಿ ಬಿ.ಎಸ್., (ಸಂ), ಸಾಹಿತ್ಯವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮, ಪುಟ ೨೩೫.

೬. ಆಶಾದೇವಿ ಎಂ.ಎಸ್., ಸ್ತ್ರೀಮತವನುತ್ತರಿಸಲಾಗಿದೆ?, ಅಕ್ಷರ ಪ್ರಕಾಶನ, ಸಾಗರ, ೨೦೦೬ ಪುಟ ೫೨.

೭. ರಹಮತ್ ತರೀಕೆರೆ, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೭, ಪುಟ ೧೦.

೮. ಜೋನಾಥನ್ ಕಲರ್, ಲಿಟರರಿ ಥಿಯರಿ ಎ ವೆರಿ ಶಾರ್ಟ್ ಇನ್ಟ್ರುಡಕ್ಷನ್, ಆಕ್ಸ್‌ಫರ್ಡ್ ಯೂನಿರ್ವಸಿಟಿ ಪ್ರೆಸ್, ಯು.ಎಸ್.ಎ. ೨೦೦೦, ಪುಟ ೬೭.

೯. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫, ಪುಟ ೧೦೨.

೧೦. ಅದೇ, ಪುಟ ೧೩೬.

೧೧. ಚಂದ್ರಶೇಖರ ಟಿ.ಆರ್., (ಸಂ), ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೨೦೦೫, ಪುಟ ೨೮೮.

೧೨. ಆಶಾದೇವಿ ಎಂ.ಎಸ್., ಸ್ತ್ರೀಮತವನುತ್ತರಿಸಲಾಗದೆ? ಅಕ್ಷರ ಪ್ರಕಾಶನ, ಸಾಗರ, ೨೦೦೬, ಪುಟ ೫೯.

೧೩. ಬಿಜಯ್ ಕುಮಾರ್ ದಾಸ್, ಟ್ವೆಂಟಿಯತ್ ಸೆಂಚುರಿ ಲಿಟರರಿ ಕ್ರಿಟಿಸಿಸಂ, ಅಟ್ಲಾಂಟಿಕ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ (ಪ್ರೈ) ಲಿಮಿಟೆಡ್, ನವದೆಹಲಿ, ೨೦೧೦, ಪುಟ ೨೨೪.

ಅಧ್ಯಾಯ–ನಾಲ್ಕು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ

ಅಧ್ಯಾಯ–೪: ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ

> "ಕನ್ನಡ ಸಾಹಿತ್ಯ ವಿಮರ್ಶೆಯ ಮುಖ್ಯಧಾರೆ ಯಾವಾಗಲೂ ಸಂಸ್ಕೃತಿನಿಷ್ಠ ಪ್ರಶ್ನೆಗಳನ್ನೇ ಅಲವಂಬಿಸಿ ಬೆಳೆದಿದೆ. ಶುದ್ಧ ಸಾಹಿತ್ಯ ವಿಮರ್ಶೆ ಎಂಬುದೂ ಇದೆ. ಆದರೆ ಅದರ ನಿರುಪಯುಕ್ತತೆ ಈಗಾಗಲೇ ಸಾಬೀತಾಗಿದೆ. ಅದೀಗ ಜಾಡಿಗೆ ಬಿದ್ದ ಪಿಹೆಚ್.ಡಿ. ಥೀಸಿಸ್‌ಗಳಲ್ಲಿ ಉಸಿರೆಳೆಯುತ್ತಿದೆ; ಕೆಲವು ಕಡೆ ಸಾಹಿತ್ಯಾಧ್ಯಯನದ ಕೋರ್ಸುಗಳಲ್ಲಿ ಅದು ಚಲಾವಣೆಯಲ್ಲಿ ಇದ್ದೀತು. ಕಳೆದ ಏಳೆಂಟು ದಶಕಗಳ ಸಾಹಿತ್ಯ ವಿಮರ್ಶಾ ಚಟುವಟಿಕೆಗಳ ಹಿಂದೆ ಇದ್ದ ಮುಖ್ಯ ಪ್ರೇರಣೆಗಳು ಸಾಂಸ್ಕೃತಿಕ ನೆಲೆಯಿಂದಲೇ ಬಂದಿವೆ ಅಥವಾ ಆ ಚಟುವಟಿಕೆಗಳ ಸಂಸ್ಕೃತಿನಿಷ್ಠ ನೆಲೆಯಿಂದ ಗ್ರಹಿಸುವ ಯತ್ನಗಳು ನಡೆದಿವೆ. ಕಳೆದ ಒಂದೆರೆಡು ದಶಕಗಳಲ್ಲಿ ನಮ್ಮ ಚರ್ಚೆಯ ಪರಿಕರ, ಪರಿಭಾಷೆಗಳು ಬದಲಾಗಿವೆ. ಅಲ್ಲದೆ ಸಂಸ್ಕೃತಿನಿಷ್ಠ ನೆಲೆಯ ಬಗ್ಗೆ ವಿಮರ್ಶಕರು ಸ್ವತಃ ಜಾಗೃತರಾಗಿದ್ದಾರೆ. ಹಿಂದಿನವರು ಹಾಗೆ ತಾವೇ ಜಾಗೃತರಾಗಿರದಿದ್ದರೂ ಅವರ ಚರ್ಚೆಗಳು ಮಾತ್ರ ಸಂಸ್ಕೃತಿನಿಷ್ಠವೇ ಆಗಿದ್ದವೆಂಬುದು ನನ್ನ ಗ್ರಹಿಕೆ. ಹಾಗಿಲ್ಲದ ಚರ್ಚೆಗಳು ಕೇವಲ ಬೌದ್ಧಿಕ ಆಸಕ್ತಿಗಳಾಗಿ ಮಾತ್ರ ಈಗ ಉಳಿದಿವೆ."
>
> ಕೆ.ವಿ. ನಾರಾಯಣ, "ಕರ್ನಾಟಕ ಸಂಸ್ಕೃತಿ ಚಿಂತನೆ" ಕೃತಿಯಿಂದ

೪.೧ ಪೀಠಿಕೆ

ಸಮಕಾಲೀನ ಕನ್ನಡ ವಿಮರ್ಶೆಯ ತಾತ್ವಿಕ ಸ್ವರೂಪವು ಈ ಹಿಂದಿನ ವಿಮರ್ಶಾ ಪ್ರಕಾರಗಳಷ್ಟೆ ಅಲ್ಲದೆ, ಪ್ರಧಾನಧಾರೆಯ ಸಮಗ್ರ ಕನ್ನಡ ಸಾಹಿತ್ಯ ವಿಮರ್ಶೆಯ ಸಾಮಾನ್ಯ ತಾತ್ವಿಕ ಸ್ವರೂಪಕ್ಕಿಂತ ಬಹುತೇಕ ಭಿನ್ನವಾಗಿದೆ. ಸಾಹಿತ್ಯ ಕೃತಿ ಅಥವಾ ಪಠ್ಯದ ವಿಶ್ಲೇಷಣೆಯಲ್ಲಿ ಇದುವರೆಗೂ ಅನುಸರಿಸದಿದ್ದ ವಿಧಾನಗಳು ಮತ್ತು ಮಾನದಂಡಗಳನ್ನು ಈಗ ವ್ಯಾಪಕವಾಗಿ ಬಳಸಲಾಗುತ್ತಿದೆ. ಸಾಹಿತ್ಯ ಕೃತಿ ಮತ್ತು ಸಾಹಿತ್ಯ ಪರಂಪರೆಯನ್ನು ಕುರಿತು ಪ್ರಚಲಿತದಲ್ಲಿದ್ದ ರೂಢಿಗತ ಹಾಗೂ ಪ್ರತಿಷ್ಠಿತ ಧೋರಣೆಗಳನ್ನು ಇಂದಿನ ವಿಮರ್ಶೆ ಸಂಪೂರ್ಣವಾಗಿ ತಿರಸ್ಕರಿಸಿದೆ. ಹಾಗೆಯೇ, ಸಾಹಿತ್ಯ ವಿಮರ್ಶೆಯ ಉದ್ದೇಶ ಮತ್ತು ಕಾರ್ಯಮಾದರಿಗಳನ್ನು ಕುರಿತ ಸಾಂಪ್ರದಾಯಕ ಪ್ರಧಾನಧಾರೆಯ ಗ್ರಹೀತಗಳನ್ನು ಸಹ ಬಹುತೇಕ ತ್ಯಜಿಸಲಾಗಿದೆ.

ಕನ್ನಡ ಸಾಹಿತ್ಯ ವಿಮರ್ಶೆಯ ಇಂದಿನ ಈ ಅವಸ್ಥೆಗೆ ಸಾಕಷ್ಟು ದೀರ್ಘವಾದ ಚರಿತ್ರೆ ಮತ್ತು ಸಾಂಸ್ಕೃತಿಕ ಹಿನ್ನೆಲೆ ಇದೆ. ಹಲವು ಬಗೆಯ ಪ್ರೇರಣೆ ಮತ್ತು ಪ್ರಭಾವಗಳ ಸಮಷ್ಟಿ ಪರಿಣಾಮದಿಂದ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿದೆ.

೪.೨ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ

ಚಾರಿತ್ರಿಕವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕಳೆದ ಶತಮಾನದ ಎರಡನೆಯ ಘಟ್ಟದ ವಿದ್ಯಮಾನ. ಇದರ ಹುಟ್ಟನ್ನು ನಿರ್ದಿಷ್ಟವಾಗಿ ಈ ಶತಮಾನದ ಎಪ್ಪತ್ತರ ದಶಕದಲ್ಲಿ ಗುರುತಿಸಬಹುದು. ಇದು ಕೇವಲ

ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿರದೆ ಸಾಹಿತ್ಯೇತರವಾದ ಹಲವು ಕ್ಷೇತ್ರಗಳ ಸಂಶ್ಲೇಷಕ ಪ್ರಭಾವದಿಂದ ರೂಪುಗೊಂಡಿರುವ ಸಂಕೀರ್ಣ ಸ್ವರೂಪದಿಂದ ಕೂಡಿದೆ.

ಗತ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷರಿಂದ ದೇಶೀಯರಿಗೆ ರಾಜಕೀಯ ಅಧಿಕಾರ ಹಸ್ತಾಂತರವಾಯಿತು. ಇದನ್ನು ರಾಜಕೀಯವಾಗಿ ದೇಶಕ್ಕೆ ಮತ್ತು ಜನತೆಗೆ ದೊರೆತ ಸ್ವಾತಂತ್ರ್ಯ ಎಂದು ಕರೆಯಲಾಗಿದೆ. ಆನಂತರ ನಮ್ಮನ್ನು ನಾವು ಆಳಿಕೊಳ್ಳುವುದಕ್ಕಾಗಿ ಪ್ರಜಾಪ್ರಭುತ್ವ ಆಡಳಿತ ಪದ್ಧತಿಯನ್ನು ಅಳವಡಿಸಿಕೊಳ್ಳಲಾಯಿತು. ಆಧುನಿಕ ಭಾರತದ ಅಸ್ತಿತ್ವ ಮತ್ತು ಬೆಳವಣಿಗೆಯ ಮೂಲತತ್ವಗಳನ್ನು ನಿರೂಪಿಸುವ 'ಭಾರತದ ಸಂವಿಧಾನ'ವನ್ನು ರಚಿಸಿ ನಮಗೆ ನಾವೇ ಅರ್ಪಿಸಿಕೊಳ್ಳಲಾಯಿತು. ಈ ಮೂರೂ ಸಂಗತಿಗಳು ಆಧುನಿಕ ಭಾರತದ ಚರಿತ್ರೆಯ ಅತ್ಯಂತ ಮಹತ್ವಪೂರ್ಣ ಘಟನೆಗಳು.

ಭಾರತದ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಂವಿಧಾನಗಳು ಕಳೆದ ಶತಮಾನದ ಎಪ್ಪತ್ತರ ದಶಕದ ವೇಳೆಗೆ ಕರ್ನಾಟಕದ ಚರಿತ್ರೆ, ಸಮಾಜ ಮತ್ತು ಸಂಸ್ಕೃತಿಗಳ ಮೇಲೆ ವ್ಯಾಪಕವಾದ ಪ್ರಭಾವಗಳನ್ನು ಬೀರಿದವು. ಇದರಿಂದ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಸ್ವರೂಪ ತೀವ್ರವಾದ ಪಲ್ಲಟಗಳಿಗೆ ಒಳಗಾಯಿತು. ಈ ವಿದ್ಯಮಾನ ಕಳೆದ ಶತಮಾನದ ಮುಕ್ತಾಯದ ವೇಳೆಗೆ ಒಂದು ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ರೂಪ ತಳೆಯಿತು. ಹೀಗೆ, ಇಪ್ಪತ್ತನೆಯ ಶತಮಾನದ ಅಂತ್ಯದ ವೇಳೆಗೆ ಇಂದು ಕನ್ನಡದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ 'ಸಂಸ್ಕೃತಿ ವಿಮರ್ಶೆ' ಅಥವಾ 'ಸಾಂಸ್ಕೃತಿಕ ವಿಮರ್ಶೆ' ರೂಪುಗೊಂಡಿತು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪುಗೊಳ್ಳುವಿಕೆಯ ಹಿನ್ನೆಲೆಯಲ್ಲಿರುವ ಪ್ರಭಾವ ಮತ್ತು ಪ್ರೇರಣೆಗಳನ್ನು ಅಥವಾ ಇನ್ನೂ ಖಚಿತವಾಗಿ ಹೇಳುವುದಾದರೆ, ಅದರ ಕಾರಣಗಳನ್ನು ಸ್ಥೂಲವಾಗಿ ಈ ರೀತಿಯಾಗಿ ಗುರುತಿಸಲು ಸಾಧ್ಯವಿದೆ. ಅವುಗಳೆಂದರೆ, ಅ. ಸಾಮಾಜಿಕ ಕಾರಣಗಳು ಆ. ಸಾಹಿತ್ಯಕ ಕಾರಣಗಳು ಇ. ರಾಜಕೀಯ ಕಾರಣಗಳು ಈ. ಆರ್ಥಿಕ ಕಾರಣಗಳು ಉ. ಸಾಂಸ್ಕೃತಿಕ ಕಾರಣಗಳು ಮತ್ತು ಊ. ಸೈದ್ಧಾಂತಿಕ ಕಾರಣಗಳು.

ಈ ಕಾರಣಗಳು ಮೇಲ್ನೋಟಕ್ಕೆ ಹಾಗೆ ಪ್ರತ್ಯೇಕೀಕರಿಸಲು ಆಗದಷ್ಟು ಪರಸ್ಪರ ಸಾಹಚರ್ಯಾತ್ಮಕ ಸಂಬಂಧ ಹೊಂದಿವೆ. ಬಹಳ ಮುಖ್ಯವಾಗಿ ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಚಿಂತನೆಗಳು ಹಾಗೂ ವಿದ್ಯಮಾನಗಳಿಂದ ತೀವ್ರವಾದ ಪ್ರೇರಣೆಗಳನ್ನು ಪಡೆದಿವೆ.

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಅದರ ವಿವಿಧ ರೂಪಗಳ ತಾತ್ವಿಕ ಸ್ವರೂಪವನ್ನು ಬಹುತೇಕ ರೂಢಮೂಲವಾಗಿ ಸ್ಥಿತ್ಯಂತರಗೊಳಿಸಿರುವ ಕಾರಣದಿಂದ ಇವುಗಳ ಸ್ವರೂಪವನ್ನು ಇಲ್ಲಿ ಅತ್ಯಂತ ಸ್ಥೂಲವಾಗಿ ವಿವೇಚಿಸಲಾಗಿದೆ.

೪.೨.೧ ಸಾಮಾಜಿಕ ಕಾರಣಗಳು

ಸ್ವತಂತ್ರ ಭಾರತದ ಆಶೋತ್ತರಗಳ ಪ್ರತಿರೂಪವಾಗಿರುವ ಭಾರತ ಸಂವಿಧಾನದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಶಯಗಳನ್ನು ಸಾಕಾರಗೊಳಿಸುವುದಕ್ಕಾಗಿ ಪ್ರಜಾಪ್ರಭುತ್ವವಾದಿ ಸಂಸದೀಯ ಸರ್ಕಾರಗಳು ಹಲವು ಉಪಕ್ರಮಗಳನ್ನು ಕೈಗೊಂಡವು. ಬಹಳ ಮುಖ್ಯವಾಗಿ, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಮಾಜವಾದಿ ತಾತ್ವಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡವು. ಇದರ ಭಾಗವಾಗಿ ಜಾರಿಗೊಳಿಸಲಾದ ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣ ನೀತಿಗಳಿಂದ ಚಾರಿತ್ರಿಕವಾಗಿ ಅಕ್ಷರವಂಚಿತರಾಗಿದ್ದ ಭಾರತದ ಬಹುದೊಡ್ಡ ಶೂದ್ರ, ದಲಿತ, ದಮನಿತ ಹಾಗೂ ಮಹಿಳಾ ಸಮುದಾಯಗಳು ಈ ಕಾಲಘಟ್ಟದ ವೇಳೆಗೆ ಮೊದಲ ಬಾರಿಗೆ ಅಕ್ಷರಸ್ಥರಾಗತೊಡಗಿದರು. ಹೀಗೆ ಅಕ್ಷರಸ್ಥರಾದ ಮೊದಲ ತಲೆಮಾರಿನ ಈ ಸಮುದಾಯಗಳ ಕೆಲವು ಪ್ರಜ್ಞಾವಂತ ಮತ್ತು ಸಂವೇದನಾಶೀಲ ವ್ಯಕ್ತಿಗಳು, ತಮ್ಮ ಬದುಕಿಗೆ ನೇರವಾಗಿ ಸಂಬಂಧಪಟ್ಟಿರುವ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಶೋಷಣೆಯ ಕರಾಳ ಮುಖಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದಿರುವುದನ್ನು ಕುರಿತು ತೀವ್ರವಾಗಿ ಪ್ರಶ್ನಿಸತೊಡಗಿದರು. ತಮ್ಮ ಸ್ವಂತ ಬದುಕಿನ 'ಅಥೆಂಟಿಕ್' ಅನುಭವಗಳನ್ನು ದಮನಿತ ಅಸ್ಪೃಶ್ಯರಾದ ತಾವು ಮಾತ್ರವೇ ಪ್ರಾಮಾಣಿಕವಾಗಿ ಅಭಿವ್ಯಕ್ತಿಸಲು ಸಾಧ್ಯ. ಇಂಥ ಸಾಹಿತ್ಯ ಕೇವಲ ದಲಿತರ ಮತ್ತು ಶೋಷಿತರ ವಿಮೋಚನೆ ಮಾತ್ರವಲ್ಲದೆ, ಎಲ್ಲಾ ದಮನಿತರ ನೋವು ಹಾಗೂ ಅವಮಾನಗಳಿಗೆ ಧ್ವನಿಯಾಗಬೇಕು. ಅಖಂಡ ಮಾನವತಾವಾದ ಇಂಥ ಸಾಹಿತ್ಯದ ಉಸಿರಾಗಬೇಕು ಎನ್ನುವ ತಾತ್ವಿಕತೆಯ ಮೂಲಕ ಪ್ರಥಮ ಬಾರಿಗೆ ಕನ್ನಡದಲ್ಲಿ ಹೊಸ ಸ್ವರೂಪದ ಸಾಹಿತ್ಯ ಸೃಷ್ಟಿಸಿದರು. ಈ ಸಾಹಿತ್ಯದ ಆಶಯ ಮತ್ತು ಆಕೃತಿಗಳನ್ನು ಸಮರ್ಥಿಸುವುದಕ್ಕಾಗಿ ಹಾಗೂ ಹಿಂದಿನ ಸಾಹಿತ್ಯದ ದಲಿತ ವಿರೋಧಿ ತಾತ್ವಿಕತೆಯನ್ನು ಖಂಡಿಸುವುದಕ್ಕಾಗಿ ಹೊಸ ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶಾ ಮೀಮಾಂಸೆಗಳನ್ನು ಹುಟ್ಟುಹಾಕಿದರು.

ಈ ಪ್ರವೃತ್ತಿ ಇದೇ ಕಾಲಘಟ್ಟದ ಮಹಿಳಾ ಸಾಹಿತ್ಯ, ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ನಿರ್ಲಕ್ಷಿತ ಸಮುದಾಯಗಳ ಸಾಹಿತ್ಯ ಸೃಷ್ಟಿಗೂ ಸಹ ದಟ್ಟವಾದ ಪ್ರೇರಣೆ ಒದಗಿಸಿತು. ಈ ನೂತನ ಸಾಹಿತ್ಯ ರೂಪಗಳೂ ಕೂಡಾ ತಮ್ಮ ಸೃಷ್ಟಿಶೀಲ ಸಾಹಿತ್ಯದ ಸಮರ್ಥನೆಗೆ ಬೇಕಾದ ತಾತ್ವಿಕ ಭೂಮಿಕೆ ಕಲ್ಪಿಸುವುದಕ್ಕೆ ಮತ್ತು ಸೃಷ್ಟಿತ ಸಾಹಿತ್ಯವನ್ನು ಅಳೆಯುವುದಕ್ಕೆ ಸಂಬಂಧಿಸಿದಂತೆ ಹೊಸ ಮಾದರಿಯ ವಿಮರ್ಶೆಯನ್ನು ರೂಪಿಸಿದವು. ಇದು ಈ ಕಾಲಘಟ್ಟದ ಕನ್ನಡ ಸಾಹಿತ್ಯ ವಿಮರ್ಶೆಯ ಅತ್ಯಂತ ಮಹತ್ವದ ವಿದ್ಯಮಾನವಾಗಿದೆ.

೪.೨.೨ ಸಾಹಿತ್ಯಕ ಕಾರಣಗಳು

ಇದೇ ಕಾಲಘಟ್ಟದಲ್ಲಿ ತನ್ನ ಹಿಂದಿನ ಉಚ್ಛ್ರಾಯ ಸ್ಥಿತಿಯನ್ನು ಕಳೆದುಕೊಂಡು ನಿಸ್ತೇಜವಾಗತೊಡಗಿದ್ದ ಮತ್ತು ಕೃತಕ ಸಾಹಿತ್ಯ ಸೃಷ್ಟಿಯ ಕ್ರಿಯೆಯಲ್ಲಿ ತೊಡಗಿದ್ದ ನವ್ಯ ಸಾಹಿತ್ಯವನ್ನು ತೀವ್ರವಾಗಿ ವಿರೋಧಿಸಲಾಯಿತು. ಸಾಹಿತ್ಯ ಕುರಿತು ಕನ್ನಡ ನವ್ಯ ಸಾಹಿತ್ಯ ಹೊಂದಿದ್ದ ಸೀಮಿತ ಮತ್ತು

ಅನಾರೋಗ್ಯಕರ ಗ್ರಹಿಕೆಗಳನ್ನು ಬಲವಾಗಿ ಖಂಡಿಸಲಾಯಿತು. ಸಾಹಿತ್ಯದ ಆಶಯ ಮತ್ತು ಆಕೃತಿ ಕುರಿತ ಈ ಸಾಹಿತ್ಯದ ಧೋರಣೆಗಳು ಮೂಲತಃ ಜನವಿರೋಧಿಯೂ ಹಾಗೂ ವೈದಿಕಶಾಹಿಯ ಪುನುರುತ್ಥಾನವಾದಿ ಆಶಯವುಳ್ಳವೂ ಆಗಿವೆ ಎನ್ನುವ ವಿಚಾರವನ್ನು ಪ್ರತಿಪಾದಿಸಲಾಯಿತು. ಚಾರಿತ್ರಿಕವಾಗಿ, ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಮುನ್ನುಡಿಯು ಕನ್ನಡದಲ್ಲಿ ಹೊಸ ಸ್ವರೂಪದ ಕಥನ ಸಾಹಿತ್ಯದ ಸೃಷ್ಟಿ ಹಾಗೂ ಕಥನಕ್ರಮದ ನಿರ್ಮಾಣಕ್ಕೆ ಮಹತ್ವದ ಪ್ರೇರಣೆ ನೀಡಿತು. ನವ್ಯ ವಿಮರ್ಶೆಗೆ ವಿರುದ್ಧವಾಗಿ ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನು ಮುಖ್ಯವೆಂದು ಭಾವಿಸುವ ಹೊಸ ವಿಮರ್ಶೆಯ ಅಗತ್ಯದ ಮಹತ್ವವನ್ನು ಪ್ರತಿಪಾದಿಸಿತು.

೪.೨.೩ ರಾಜಕೀಯ ಕಾರಣಗಳು

ರಾಷ್ಟ್ರ ಮತ್ತು ರಾಜ್ಯದ 'ರಾಜಕಾರಣದ ರಾಜಕಾರಣ' ಕುರಿತು ಈ ಕಾಲಘಟ್ಟದಲ್ಲಿ ತೀವ್ರವಾದ ವಿಮರ್ಶೆ ಪ್ರಾರಂಭವಾಯಿತು. ೧೯೪೭ರ ಆಗಸ್ಟ್ ೧೫ರಂದು ದೇಶಕ್ಕೆ ದೊರೆತಿದ್ದು ಕೇವಲ ರಾಜಕೀಯ ಅಧಿಕಾರದ ಹಸ್ತಾಂತರ ಮಾತ್ರ; ಅದು ಜನತೆಗೆ ದೊರೆತ ಸ್ವಾತಂತ್ರ್ಯ ಅಲ್ಲ. ಹಾಗೆ ನೋಡಿದರೆ, ನಿಜವಾದ ಅರ್ಥದಲ್ಲಿ ಈ ಹಿಂದೆಯೂ ಸ್ವಾತಂತ್ರ್ಯ ಇರಲಿಲ್ಲ; ಈಗಲೂ ಸಿಕ್ಕಿಲ್ಲ. ಇದನ್ನು ಮುಂದೆ ಸಾಧ್ಯಗೊಳಿಸಬೇಕಾಗಿದೆ. ಸ್ವಾತಂತ್ರ್ಯ ಎಂದರೆ ಎಲ್ಲ ರೀತಿಯ ಬಂಧನ ಮತ್ತು ಶೋಷಣೆಗಳಿಂದ ಎಲ್ಲರೂ ವಿಮೋಚಿತರಾಗಿರುವ ಸ್ಥಿತಿ. ಆದ್ದರಿಂದ ಈ ಅರ್ಥದ ಹಿನ್ನೆಲೆಯಲ್ಲಿ ಈಗ ದೊರೆತಿರುವುದು ಯಾರು ಚಾರಿತ್ರಿಕವಾಗಿ ಈ ರಾಷ್ಟ್ರದಲ್ಲಿ ಮೊದಲಿನಿಂದಲೂ ಸುರಕ್ಷಿತರಾಗಿರುವರೊ, ಅವರನ್ನು ಮುಂದೆಯೂ ಅಬಾಧಿತವಾಗಿ ಸುರಕ್ಷಿತವಾಗಿಡುವ ಮತ್ತು ಯಾರು ಅಸುರಕ್ಷಿತರಾಗಿರುವರೊ, ಅವರನ್ನು ಅದೇ ಸ್ಥಿತಿಯಲ್ಲಿ ನಿರಂತರವಾಗಿ ಉಳಿಸುವ ಯಥಾಸ್ಥಿತಿ ಪಾಲನೆಯ ಅಧಿಕಾರ ಗ್ರಹಣವಷ್ಟೆ. ನಿಜವಾದ ಅರ್ಥದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಮತ್ತು ಭೌತಿಕವಾಗಿ ಶೋಷಿತರಾಗಿರುವವರಿಗೆ ಹಾಗೂ ದಮನಿತರಾಗಿರುವವರಿಗೆ ಸಮಾನವಾದ ವ್ಯಕ್ತಿ ಸ್ವಾತಂತ್ರ್ಯ ದೊರೆಯಬೇಕು. ಆತ್ಮಗೌರವದ ಬದುಕು ಸಾಧ್ಯವಾಗಬೇಕು. ಇದಕ್ಕಾಗಿ ವ್ಯವಸ್ಥೆಯ ವಿರುದ್ಧ ತೀವ್ರವಾದ ಸಂಘರ್ಷ ಮತ್ತು ಹೋರಾಟ ಅನಿವಾರ್ಯವಾಗಿದೆ ಎನ್ನುವ ಆಲೋಚನೆಗಳು ಈ ಕಾಲಘಟ್ಟದಲ್ಲಿ ಅನೇಕ ಹೋರಾಟಗಳು, ಚಳವಳಿಗಳು ಮತ್ತು ಆಂದೋಲನಗಳನ್ನು ರೂಪಿಸಿದವು. ಈ ದೃಷ್ಟಿಯಿಂದ ಕರ್ನಾಟಕದ ದಲಿತ ಚಳವಳಿ, ಬಂಡಾಯ ಚಳವಳಿ, ರೈತ ಚಳವಳಿ ಮತ್ತು ಮಹಿಳಾ ಚಳವಳಿಗಳು ಮೂಲತಃ ರಾಜಕೀಯ ಚಳವಳಿಗಳೇ, ಆಗಿವೆ.

ಇವು ಈ ಕಾಲಘಟ್ಟದ ಹೊಸ ಸ್ವರೂಪದ ಸಾಹಿತ್ಯದಲ್ಲಿ ಮತ್ತು ವಿಮರ್ಶೆಯ ಕಾರ್ಯಮಾದರಿಗಳಲ್ಲಿ ರಾಜಕೀಯ ಪ್ರಶ್ನೆಗಳನ್ನು ವ್ಯಾಪಕವಾಗಿ ಮುನ್ನೆಲೆಗೆ ತಂದವು. ಮುಂದಿನ ದಿನಗಳಲ್ಲಿ ಈ ಪ್ರಶ್ನೆಗಳು ಸ್ಥಳೀಯ ಮತ್ತು ಜಾಗತಿಕ ಸವಾಲುಗಳನ್ನು ಮುಖಾಮುಖಿಗೊಂಡ ಕ್ರಮಗಳಲ್ಲಿ ಅಗಾಧವಾದ

ವಿಸ್ತಾರ ಹಾಗೂ ಬೆಳವಣಿಗೆಗಳನ್ನು ಪಡೆದುಕೊಂಡವು. ಇವೆಲ್ಲವುಗಳಿಂದ ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿತು.

೪.೨.೪ ಆರ್ಥಿಕ ಕಾರಣಗಳು

ಯಾವುದೇ ಒಂದು ಸಮಾಜ ಅಥವಾ ರಾಷ್ಟ್ರದ ನಿಜವಾದ ಬುನಾದಿ ಎಂದರೆ ಅದರ ಆರ್ಥಿಕ ಸಂರಚನೆಯ ಸ್ವರೂಪವೇ ಆಗಿದೆ. ಆರ್ಥಿಕತೆ ಎನ್ನುವುದು ಪ್ರಾಥಮಿಕವಾಗಿ ಭೌತಿಕ ಸಂಪತ್ತು ಮತ್ತು ಆನಂತರ ಅದರಿಂದ ಸೃಷ್ಟಿಯಾಗುವ ಹಣಕಾಸೂ ಸೇರಿದಂತೆ ಇನ್ನಿತರ ಎಲ್ಲಾ ಸಂಪತ್ತುಗಳನ್ನು ಒಳಗೊಂಡಿರುವ ರಚನೆ. ಒಂದು ಸಮಾಜದ ಬೌದ್ಧಿಕ ಸ್ಥಿತಿಗೂ ಮತ್ತು ಅದರ ಭೌತಿಕ ಹಾಗೂ ಆರ್ಥಿಕ ಸ್ಥಿತಿಗೂ ಅತ್ಯಂತ ನೇರವಾದ ಹಾಗೂ ಸಾವಯವವಾದ ಸಂಬಂಧವಿದೆ ಎನ್ನುವ ಚಿಂತನೆಯು ಈ ಕಾಲಘಟ್ಟದಲ್ಲಿ ಕರ್ನಾಟಕದ ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಕ ಕ್ಷೇತ್ರಗಳಲ್ಲಿ ಹಲವು ಗಂಭೀರವಾದ ಪ್ರಶ್ನೆಗಳನ್ನು ಹುಟ್ಟುಹಾಕಿತು.

ಚಾರಿತ್ರಿಕವಾಗಿ, ಭೌತಿಕ ಮತ್ತು ಆರ್ಥಿಕ ಸಂಪತ್ತಿನ ಕೇಂದ್ರೀಕರಣ ಹಾಗೂ ಒಡೆತನಗಳು ಹುಟ್ಟುಹಾಕಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ತಾರತಮ್ಯಗಳನ್ನು ಈ ಘಟ್ಟದಲ್ಲಿ ಹಲವು ಸ್ತರಗಳಲ್ಲಿ ವಿಶ್ಲೇಷಿಸಲಾಯಿತು. ಗ್ರಾಮೀಣ ಭಾರತದ ಊಳಿಗಮಾನ್ಯ ವ್ಯವಸ್ಥೆಗೆ ಭೌತಿಕ ಸಂಪತ್ತಿನ ಪ್ರಧಾನ ರೂಪವಾದ ಭೂ ಒಡೆತನ ಮತ್ತು ನಗರ ಭಾರತದ ಬಂಡವಾಳಶಾಹಿ ವ್ಯವಸ್ಥೆಗೆ ಆರ್ಥಿಕ ಸಂಪತ್ತಿನ ಮಾಲೀಕತ್ವದ ಕೇಂದ್ರೀಕೃತ ವ್ಯವಸ್ಥೆಗಳೆ ಪ್ರಮುಖ ಕಾರಣಗಳಾಗಿವೆ ಎನ್ನುವುದನ್ನು ಕರ್ನಾಟಕದ ಹಲವು ಆರ್ಥಿಕ ಹೋರಾಟಗಳು ನಿರೂಪಿಸಿದವು. ಭೂಮಿ ಮತ್ತು ಸಂಪತ್ತಿನ ಸಮಾನ ಹಂಚಿಕೆ ಹಾಗೂ ವಿತರಣೆಗಾಗಿ ವರ್ಗ ಸಂಘರ್ಷದ ಆಂದೋಲನಗಳು ತೀವ್ರವಾಗಿ ನಡೆಯಬೇಕು ಎಂದು ಪ್ರತಿಪಾದಿಸಿದವು. ಈ ಎಲ್ಲಾ ಪ್ರಶ್ನೆಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ವಿಶ್ಲೇಷಿಸಲಾಯಿತು. ಹೊಸ ಸಾಹಿತ್ಯದ ಆಶಯಗಳಲ್ಲಿ ಈ ಪ್ರಶ್ನೆಗಳು ಪ್ರಧಾನ ಅವಕಾಶ ಪಡೆದುಕೊಂಡವು. ಇದರ ಭಾಗವಾಗಿ ಎಡಪಂಥೀಯ ಸಾಹಿತ್ಯ ವಿಮರ್ಶೆ ಹಲವು ವಿನ್ಯಾಸಗಳಲ್ಲಿ ಕ್ರಿಯಾಶೀಲವಾಯಿತು. ಮುಂದಿನ ದಿನಗಳಲ್ಲಿ ರಾಷ್ಟ್ರ ಹಾಗೂ ರಾಜ್ಯದಲ್ಲಿ ಹೊಸ ರೂಪಗಳಲ್ಲಿ ತೀವ್ರಗೊಂಡ ಮತ್ತು ಇನ್ನಷ್ಟು ಸಂಕೀರ್ಣ ಆಯಾಮಗಳನ್ನು ಪಡೆದುಕೊಂಡ ರಾಜಕೀಯಾರ್ಥಿಕ ಪ್ರಶ್ನೆಗಳ ಅನುಸಂಧಾನದ ಸಂದರ್ಭದಲ್ಲಿ ಈ ಎಡಪಂಥೀಯ ವಿಮರ್ಶೆಯ ವಿವಿಧ ರೂಪಗಳು ತಮ್ಮ ಶುದ್ಧ ವರ್ಗನಿಷ್ಠ ಆರ್ಥಿಕ ಪ್ರಶ್ನೆಗಳನ್ನು ಸಂಸ್ಕೃತಿ ಸಂದರ್ಭದ ಪರಿಪ್ರೇಕ್ಷ್ಯದಲ್ಲಿ ಮುಖಾಮುಖಿಯಾಗುವ ಸ್ವರೂಪದಿಂದ ಕನ್ನಡ ಸಾಹಿತ್ಯ ವಿಮರ್ಶೆಯು ಕನ್ನಡ ಸಾಂಸ್ಕೃತಿಕ ವಿಮರ್ಶೆಯಾಗಿ ಅವಸ್ಥಾಂತರಗೊಳ್ಳಲಾರಂಭಿಸಿತು.

೪.೨.೫ ಸಾಂಸ್ಕೃತಿಕ ಕಾರಣಗಳು

ಆಧುನಿಕ ಕನ್ನಡ ಸಾಹಿತ್ಯದ ಆರಂಭಿಕ ಹಂತದಿಂದಲೂ ಸಂಸ್ಕೃತಿ ಚಿಂತನೆ ಅಥವಾ ಸಂಸ್ಕೃತಿ ಅಧ್ಯಯನವು ಒಂದು ಪ್ರತ್ಯೇಕ ಶಿಸ್ತಾಗಿ ಬೆಳೆದು ಬಂದಿದೆ. ಕನ್ನಡದ ಅನೇಕ ಮಹತ್ವದ ಲೇಖಕರು, ವಿಮರ್ಶಕರು ಮತ್ತು ಸಂಶೋಧಕರು ಸಂಸ್ಕೃತಿ ವ್ಯಾಖ್ಯಾನಗಳನ್ನು ಮಾಡಿಕೊಂಡು ಬಂದಿದ್ದಾರೆ. ಕಳೆದ ಶತಮಾನದ ಎರಡನೆಯ ಘಟ್ಟದವರೆಗೂ, ನಿರ್ದಿಷ್ಟವಾಗಿ ಹೇಳುವುದಾದರೆ ಎಪ್ಪತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿರುವ ಕನ್ನಡ ಸಂಸ್ಕೃತಿ ಚಿಂತನೆಯಲ್ಲಿ, ಕರ್ನಾಟಕ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಯನ್ನು ಪ್ರಧಾನವಾಗಿ ಅಖಂಡ ಏಕಘನಾಕೃತಿಯ ಮಾದರಿಗಳಲ್ಲೇ ವಿವರಿಸಲಾಗಿದೆ. ಕರ್ನಾಟಕ ಸಂಸ್ಕೃತಿಯನ್ನು 'ಭಾರತೀಯ ಸಂಸ್ಕೃತಿ'ಯ ಒಂದು ಪ್ರಮುಖ 'ಕವಲು' ಅಥವಾ 'ಶಾಖೆ' ಎಂದು ವ್ಯಾಖ್ಯಾನಿಸಲಾಗಿದೆ. 'ಬ್ರಾಹ್ಮಣ ಸಂಸ್ಕೃತಿ' ಅಥವಾ 'ಸನಾತನ ವೈದಿಕ ಸಂಸ್ಕೃತಿ'ಯನ್ನೇ 'ಭಾರತೀಯ ಸಂಸ್ಕೃತಿ' ಎಂದು ಪ್ರತಿಪಾದಿಸಲಾಗಿದೆ. ಈ ಸಂಸ್ಕೃತಿ ಸ್ವರೂಪವನ್ನು ಮುಖ್ಯವಾಗಿ 'ವೃಕ್ಷ ಮತ್ತು ವೃಕ್ಷದ ರೆಂಬೆಗಳು' ಹಾಗೂ 'ಮಾತೆ ಮತ್ತು ಮಗಳು' ಈ ಎರಡು ರೂಪಕಗಳಲ್ಲಿ ಕಟ್ಟಿಕೊಡಲಾಗಿದೆ.

ಈ ನಿರ್ವಚನಗಳಲ್ಲಿ 'ಪೋಷಕ ಪೋಷಿತ ಅಥವಾ 'ಜನಕ-ಜನ್ಯ' ಸಂಬಂಧ ಮಾತ್ರವಲ್ಲದೆ, ಶ್ರೇಣೀಕೃತ ತಾರತಮ್ಯ ಹಾಗೂ ಅಸಮಾನತೆ ಪ್ರತಿಪಾದಿತ ಸಿದ್ಧಾಂತಗಳು ಪ್ರಧಾನವಾದ ಪಾತ್ರ ವಹಿಸಿವೆ. ಸಂಸ್ಕೃತಿ ಕುರಿತ ಈ ಪ್ರಧಾನಧಾರೆಯ ವ್ಯಾಖ್ಯಾನಗಳಿಗೆ ವಿರುದ್ಧವಾದ ಅವೈದಿಕ ಹಾಗೂ ಮಾನವತಾವಾದಿ ವ್ಯಾಖ್ಯಾನಗಳು ಎಷ್ಟೆ ಅರ್ಥಪೂರ್ಣವಾದ ವಿಚಾರಗಳಿಂದ ಕೂಡಿದ್ದರೂ ಸಹ, ತಮ್ಮ ಸೀಮಿತ ಪ್ರಮಾಣ ಮತ್ತು ಪ್ರತಿಷ್ಠಿತ ಅಧಿಕಾರಸ್ಥಾನವಂಚಿತ ಸ್ವರೂಪದ ಕಾರಣದಿಂದ ಅವು ಅನಿವಾರ್ಯವಾಗಿ ಅಂಚಿನಲ್ಲೆ ಉಳಿಯಬೇಕಾಯಿತು.

ಈ ಹಿನ್ನೆಲೆಯಲ್ಲಿ, ಎಪ್ಪತ್ತರ ದಶಕದ ವೇಳೆಗೆ ಸ್ಥಳೀಯ ಮತ್ತು ಜಾಗತಿಕ ಪ್ರೇರಣೆಗಳ ಫಲವಾಗಿ ನಡೆದ ಸಂಸ್ಕೃತಿ ವಾಗ್ವಾದಗಳು ಕರ್ನಾಟಕದ ಸಂಸ್ಕೃತಿ, ಸಾಹಿತ್ಯ ಹಾಗೂ ವಿಮರ್ಶೆಗಳ ಮೇಲೆ ದಟ್ಟವಾದ ಪ್ರಭಾವಗಳನ್ನು ಉಂಟುಮಾಡಿದವು. ಅನಂತಮೂರ್ತಿ ಅವರ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಪ್ರಬಂಧಕ್ಕೆ ಪ್ರತಿಕ್ರಿಯಾ ರೂಪವಾಗಿ ಪೂರ್ಣಚಂದ್ರ ತೇಜಸ್ವಿ ಅವರು ಮಂಡಿಸಿದ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಪ್ರಬಂಧವು ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿ ಕುರಿತ ಪ್ರಧಾನಧಾರೆಯ ಪ್ರತಿಷ್ಠಿತ ವಿಕಲ್ಪಗಳನ್ನು ಸಂಪೂರ್ಣ ಬುಡಮೇಲು ಮಾಡಿತು. ಈ ಎರಡೂ ಸಂಸ್ಕೃತಿಗಳ ವಾಸ್ತವಿಕ ಸ್ವರೂಪವನ್ನು ಕುರಿತು ಸಂಪೂರ್ಣ ಹೊಸ ಆಲೋಚನೆಗಳನ್ನು ನಿರೂಪಿಸಿತು. ಇದರ ಪ್ರಭಾವದಿಂದ ಮುಂದೆ ಕರ್ನಾಟಕ ಸಂಸ್ಕೃತಿಯನ್ನು ಸಮುದಾಯಗಳು, ಧರ್ಮಗಳು, ಜಾತಿ-ಉಪಜಾತಿಗಳು, ಜೈವಿಕ ಲಿಂಗ ಮತ್ತು ಭಾಷಿಕ ಪರಿಕಲ್ಪನೆಗಳು, ಮೊದಲಾದ ನೆಲೆಗಳಲ್ಲಿ ವಿಶ್ಲೇಷಿಸುವ, ಅರ್ಥೈಸುವ ಹಾಗೂ ಪ್ರತಿಪಾದಿಸುವ ಪ್ರವೃತ್ತಿಗಳು ತೀವ್ರವಾದವು. ಈ ಒಟ್ಟು ವಿದ್ಯಮಾನದಿಂದ 'ಸಾಂಸ್ಕೃತಿಕ ಬಹುತ್ವ' ಅಥವಾ 'ಬಹುಸಂಸ್ಕೃತಿಗಳವಾದ'ದ

ಪರಿಕಲ್ಪನೆಗಳು ಸಂಸ್ಕೃತಿ, ಸಾಹಿತ್ಯ ಹಾಗೂ ವಿಮರ್ಶೆ ಕುರಿತ ಚರ್ಚೆಗಳಲ್ಲಿ ಮುನ್ನೆಲೆಗೆ ಬಂದವು. ಆನಂತರ ಶತಮಾನದ ಮುಕ್ತಾಯದ ವೇಳೆಗೆ ರಾಷ್ಟ್ರ ಮತ್ತು ರಾಜ್ಯದ ಒಟ್ಟಾರೆ ಸಂಸ್ಕೃತಿ ಸ್ಥಿತಿಗಳು ಹಾಗೂ ಬದುಕಿನ ಸಮಸ್ತ ಕ್ರಮಗಳನ್ನು ತೀವ್ರವಾಗಿ ಆಕ್ರಮಿಸಿಕೊಳ್ಳಲಾರಂಭಿಸಿದ ಸಾಂಸ್ಕೃತಿಕ ಏಕರೂಪೀಕರಣದ ಸನ್ನಿವೇಶದಿಂದ, ಕನ್ನಡ ಸಂಸ್ಕೃತಿ ಚಿಂತನೆಯ ವಿನ್ಯಾಸಗಳಿಗೆ ಗಂಭೀರವಾದ ಹಾಗೂ ಸಂಕೀರ್ಣವಾದ ಸವಾಲುಗಳು ಎದುರಾದವು. ಜಾಗತಿಕ ಸಾಂಸ್ಕೃತಿಕ ಆಕ್ರಮಣಶೀಲತೆಯ ಇಂಥ ಸಂದಿಗ್ಧ ಮತ್ತು ವಿಷಮ ಸನ್ನಿವೇಶದಲ್ಲಿ ಕನ್ನಡ ಸಂಸ್ಕೃತಿ ಚಿಂತನೆ ಸ್ಥಳೀಯ ಅಥವಾ ದೇಶಿ ಸಂಸ್ಕೃತಿಯ ಅಳಿವು ಮತ್ತು ಉಳಿವಿನ ಕುರಿತು ವಿವಿಧ ನೆಲೆಗಳಲ್ಲಿ ಪುನರಾನ್ವೇಷಣೆ ಮಾಡಿಕೊಳ್ಳುವ ಒತ್ತಡಕ್ಕೆ ಒಳಗಾಯಿತು. ಈ ವಿದ್ಯಮಾನವು ಕಳೆದ ಶತಮಾನದ ತೊಂಭತ್ತರ ದಶಕದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆ ದೇಶಿ ಸಂಸ್ಕೃತಿ ಶೋಧದ ಪ್ರಶ್ನೆಯನ್ನು ತನ್ನ ಮುಖ್ಯ ತಾತ್ವಿಕತೆಯನ್ನಾಗಿ ಅಳವಡಿಸಿಕೊಳ್ಳುವುದಕ್ಕೆ ಮಹತ್ವದ ಕಾರಣವಾಯಿತು.

೪.೨.೬ ಸೈದ್ಧಾಂತಿಕ ಕಾರಣಗಳು

ಇದುವರೆಗೆ ಚರ್ಚಿಸಲಾಗಿರುವ ಎಲ್ಲಾ ಕಾರಣಗಳಿಗೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೇರಣೆ ನೀಡಿರುವ ಈ ಕಾಲಘಟ್ಟದ ಮಹತ್ವದ ವಿದ್ಯಮಾನಗಳನ್ನು ಇಲ್ಲಿ ಸ್ಥೂಲವಾಗಿ ಸೈದ್ಧಾಂತಿಕ ಕಾರಣಗಳೆಂದು ಗುರುತಿಸಲಾಗಿದೆ. ವಿವಿಧ ಕ್ಷೇತ್ರಗಳ ಧೀಮಂತ ಚಿಂತಕರು ಮತ್ತು ಹೋರಾಟಗಾರರ ಚಿಂತನೆಗಳು, ವಿಚಾರಗಳು, ವಾದಗಳು ಮತ್ತು ಪಂಥಗಳನ್ನು ಸೈದ್ಧಾಂತಿಕತೆಯ ರೂವಾರಿಶಕ್ತಿಗಳೆಂದು ಭಾವಿಸಲಾಗಿದೆ. ಇವುಗಳಲ್ಲಿ ಮುಖ್ಯವಾದ ಮೂರು ನೆಲೆಗಳಿವೆ. ಅವುಗಳೆಂದರೆ: ಅ. ಭಾರತೀಯ ನೆಲೆ ಆ. ಕರ್ನಾಟಕದ ನೆಲೆ ಮತ್ತು ಇ. ಪಾಶ್ಚಾತ್ಯ ನೆಲೆ.

ಈ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಹಿತ್ಯಕ, ಸಾಂಸ್ಕೃತಿಕ ಮತ್ತು ವಿಮರ್ಶಾತ್ಮಕ ಚಿಂತನೆಗಳ ಮೇಲೆ ಮಹತ್ವದ ಪ್ರಭಾವ ಬೀರಿದ ಭಾರತೀಯರಲ್ಲಿ ಮಹಾತ್ಮಗಾಂಧಿ, ಅಂಬೇಡ್ಕರ್, ರಾಮಮನೋಹರ ಲೋಹಿಯಾ, ರಾಮಸ್ವಾಮಿ ನಾಯ್ಕರ್ ಮತ್ತು ಜ್ಯೋತಿ ಬಾ ಪುಲೆ ಮುಖ್ಯರಾಗಿದ್ದಾರೆ. ಅದರಲ್ಲೂ ಅಂಬೇಡ್ಕರ್‌ವಾದ, ಲೋಹಿಯಾವಾದ ಮತ್ತು ಪೆರಿಯಾರ್‌ವಾದಗಳು ಎಪ್ಪತ್ತರ ದಶಕದ ಕನ್ನಡ ಸಮಾಜ, ಸಂಸ್ಕೃತಿ ಮತ್ತು ವಿಮರ್ಶೆಯ ಗ್ರಹಿಕೆಗಳಲ್ಲಿ ತೀವ್ರವಾದ ಪಲ್ಲಟವುಂಟುಮಾಡಿದವು. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಅಗ್ರಮಾನ್ಯ ಲೇಖಕರಾದ ಕುವೆಂಪು, ಅಪ್ರತಿಮ ಸಂಸ್ಕೃತಿ ಅನ್ವೇಷಕರಾದ ಶಂಬಾ ಜೋಷಿ, ಕನ್ನಡದ ಶ್ರೇಷ್ಠ ಲೇಖಕರಾದ ಪೂರ್ಣಚಂದ್ರ ತೇಜಸ್ವಿ ಮತ್ತು ಸಾಮಾಜಿಕ ನ್ಯಾಯದ ಕಾಳಜಿಯ ಧೀಮಂತ ರಾಜಕಾರಣಿಯಾದ ಬಸವಲಿಂಗಪ್ಪ ಅವರ ಅತ್ಯಂತ ಮಹತ್ವಪೂರ್ಣವಾದ ವಿಚಾರಗಳು ಈ ಕಾಲಘಟ್ಟದ ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆಯ ರೂಪುರೇಷೆಗಳನ್ನು ಅರ್ಥಪೂರ್ಣವಾಗಿ ನಿರ್ಮಿಸಿದವು. ಕುವೆಂಪು ಅವರ ಪುರೋಹಿತಶಾಹಿ ವಿರುದ್ಧದ ಶೂದ್ರವಾದಿ ಮೀಮಾಂಸೆ ಈ ಕಾಲಘಟ್ಟದ ಸಮಾಜವಾದಿ ಮೀಮಾಂಸೆಯೊಂದಿಗೆ ಅರ್ಥಪೂರ್ಣ ಸಾಂಗತ್ಯ

ಪಡೆದುಕೊಂಡಿತು. ಕರ್ನಾಟಕದ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟದಿಂದ ಆರಂಭವಾದ ಶಂಬಾ ಅವರ ಸಂಸ್ಕೃತಿ ಸಂಶೋಧನೆಯು, ಭಾರತೀಯ ಸಂಸ್ಕೃತಿ ಸ್ವರೂಪದ ವಿಮರ್ಶೆಯಾಗಿ; ಕೊನೆಗೆ ಅಖಂಡ ಮಾನವ ಸಂಸ್ಕೃತಿ ಹುಡುಕಾಟದ ನೆಲೆಯಾಗಿ ವಿಕಾಸಗೊಂಡಿತು. ಬಸವಲಿಂಗಪ್ಪ ಅವರ 'ಬೂಸಾ' ಹೇಳಿಕೆಯು ಸಮಗ್ರ ಕನ್ನಡ ಸಾಹಿತ್ಯದ ಪುನಾರಾಲೋಕನ ಮತ್ತು ನೂತನ ಸಾಹಿತ್ಯ ಸೃಷ್ಟಿಗೆ ಸ್ಫೂರ್ತಿಮೂಲವಾಯಿತು.

ಈ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ನೋಟಕ್ರಮಗಳ ಹಾಗೂ ಕಾರ್ಯಮಾದರಿಗಳ ಮೇಲೆ ಗಾಢವಾದ ಪ್ರಭಾವ ಬೀರಿದವರಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಸಿಗ್ಮಂಡ್ ಫ್ರಾಯ್ಡ್ (೧೮೫೬-೧೯೩೯) ಅತ್ಯಂತ ಮುಖ್ಯರು. ಮಾರ್ಕ್ಸ್‌ವಾದ ಮತ್ತು ಅದರ ವಿವಿಧ ಪರಿಷ್ಕೃತ ಆಧುನಿಕ ರೂಪಗಳಾದ ಫ್ರಾಂಕ್‌ಫರ್ಟ್‌ಪಂಥ, ನವಮಾರ್ಕ್ಸ್‌ವಾದ ಹಾಗೂ ಸಾಂಸ್ಕೃತಿಕ ಮಾರ್ಕ್ಸ್‌ವಾದಗಳು; ಫ್ರಾಯ್ಡ್‌ನ ಮನಃಶಾಸ್ತ್ರೀಯ ಸಿದ್ಧಾಂತ ಹಾಗೂ ಅದರ ವಿಸ್ತರಣೆಯಾದ ಜಾಕಸ್ ಲಕಾನ್ (೧೯೦೧-೧೯೮೧)ನ ಮನೋವಿಶ್ಲೇಷಣಾವಾದ ಮತ್ತು ಸೀಮನ್ ದ ಬುವಾ ಹಾಗೂ ಇತರರ ಸ್ತ್ರೀವಾದಿ ಚಿಂತಕಿಯರ ವಿವಿಧ ಸ್ತ್ರೀವಾದಗಳು ಈ ಕಾಲಾವಧಿಯ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಶತಮಾನದ ಕೊನೆಯ ಘಟ್ಟದ ವೇಳೆಗೆ ಸಾಂಸ್ಕೃತಿಕ ವಿಮರ್ಶೆಯಾಗಿ ವಿಕಾಸಗೊಳಿಸಿದವು. ಇದರಲ್ಲಿ ಎಡ್ವರ್ಡ್ ಸೈದ್‌ನ ನಿರ್ವಸಾಹತೀಕರಣದ ಪೌರ್ವಾತವಾದ, ಫ್ರಾನ್ಜ್ ಫ್ಯಾನ್‌ನ ದೇಶಿವಾದ, ಜಾಗತೀಕರಣದ ಆಧುನಿಕೋತ್ತರವಾದ ಮತ್ತು ನವವಸಾಹತುಶಾಹಿ ವಿರೋಧಿ ಸಂಕಥನದ ವಿವಿಧ ಪ್ರಸ್ಥಾನಗಳು ವಹಿಸಿರುವ ಪಾತ್ರ ಕೂಡಾ ಅತ್ಯಂತ ಗಮನಾರ್ಹವಾದುದು.

ಈ ಎಲ್ಲಾ ಕಾರಣಗಳಿಂದ ರಾಜಕೀಯ ನೆಲೆಯಲ್ಲಿ ಸ್ವಾತಂತ್ರ್ಯಾನಂತರ; ಸಾಹಿತ್ಯಕ ನೆಲೆಯಲ್ಲಿ ನವ್ಯೋತ್ತರದ ದಲಿತ ಬಂಡಾಯ ಚಳವಳಿಗಳ ನಂತರ ಮತ್ತು ಸಮಕಾಲೀನ ನೆಲೆಯಲ್ಲಿ ನವವಸಾಹತುಶಾಹಿ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯು, ವಿವಿಧ ಹಂತಗಳಲ್ಲಿ ಮತ್ತು ಹಲವು ರೂಪಗಳಲ್ಲಿ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳನ್ನು ಹಾಗೂ ಆಯಾಮಗಳನ್ನು ಪಡೆದುಕೊಳ್ಳುವ ಮೂಲಕ ಇಂದಿನ 'ಸಾಂಸ್ಕೃತಿಕ ವಿಮರ್ಶೆ'ಯಾಗಿ ರೂಪಿತವಾಗಿದೆ. ಸ್ಥೂಲವಾಗಿ ಎಪ್ಪತ್ತರ ದಶಕದಲ್ಲಿ ಸಂಸ್ಕೃತಿ ಸ್ವರೂಪ ಕುರಿತ ಹೊಸ ವ್ಯಾಖ್ಯಾನಗಳ ರೂಪದಲ್ಲಿ ಮತ್ತು ಸಾಹಿತ್ಯದ ಸಾಮಾಜಿಕ ಜವಾಬ್ದಾರಿ ಕುರಿತ ವಿಶ್ಲೇಷಣೆಗಳ ರೂಪದಲ್ಲಿ ಆರಂಭವಾದ ಚರ್ಚೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಹಿತ್ಯೇತರ ಸಂಗತಿಗಳ ಪ್ರಸ್ತುತತೆಯನ್ನು ಪ್ರತಿಪಾದಿಸಿದವು. ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಜಗತ್ತುಗಳ ವ್ಯಾಪಕ ಪ್ರವೇಶದಿಂದ ಉಂಟಾದ ಆಶಯ ಮತ್ತು ಆಕೃತಿ ಪ್ರಶ್ನೆಗಳ ಸಮರ್ಥನೆಗಾಗಿ ಎಂಭತ್ತರ ದಶಕದ ವೇಳೆಯಲ್ಲಿ ಕಟ್ಟಲಾದ ಹೊಸ ಮೀಮಾಂಸೆಗಳು, ಸಾಹಿತ್ಯ ವಿಮರ್ಶೆಯ ಗ್ರಹಿಕೆಗಳಿಗೆ ಅನ್ಯಶಿಸ್ತು ಹಾಗೂ ಬಹುಶಿಸ್ತು ವಿಶ್ಲೇಷಣಾ ವಿಧಾನಗಳ ಆಯಾಮಗಳನ್ನು ಒದಗಿಸಿದವು. ತೊಂಭತ್ತರ ದಶಕದ ವೇಳೆಗೆ ಕೇವಲ ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಮಾತ್ರವಲ್ಲದೆ, ಒಟ್ಟಾರೆ ತೃತೀಯ ಜಗತ್ತಿನ ಮಾನವ ಬದುಕಿನ ಸಮಗ್ರ ಕ್ರಮಗಳ ಮೇಲೆ ಜಾಗತಿಕ

ಏಕರೂಪೀಕರಣದ ಯಾಜಮಾನ್ಯತೆಯು ಒಡ್ಡಲಾರಂಭಿಸಿದ ಆಕ್ರಮಣಶೀಲ ಸವಾಲುಗಳು ಸಾಹಿತ್ಯ ವಿಮರ್ಶೆಯ ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತು ರಾಜಕಾರಣ ಪ್ರಶ್ನೆಗಳಿಗೆ ಸಮಕಾಲೀನ ಬದುಕಿನ ಅತ್ಯಂತ ಗಂಭೀರವಾದ ಆತಂಕಗಳನ್ನು ಲಗತ್ತುಗೊಳಿಸಿದವು. ಇದು ಸಂಶ್ಲೇಷಣಾತ್ಮಕ ಸಂಕಥನಶೀಲತೆಯು ಕನ್ನಡ ಸಾಹಿತ್ಯ ವಿಮರ್ಶೆಯ ಮುಖ್ಯ ತಾತ್ವಿಕತೆಯಾಗಿ ಪರಿಗಣಿತವಾಗಲು ಪ್ರಮುಖ ಕಾರಣವಾಯಿತು.

೪.೩ ಸಾಂಸ್ಕೃತಿಕ ವಿಮರ್ಶೆಯ ನಿರ್ವಚನ

ಈಗಾಗಲೇ ಚರ್ಚಿಸಲಾಗಿರುವಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮುಖ್ಯವಾಗಿ ನವ್ಯೋತ್ತರ ಮತ್ತು ದಲಿತ – ಬಂಡಾಯೋತ್ತರ ವಿದ್ಯಮಾನ. ಇದು ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಅದರ ವಿವಿಧ ರೂಪಗಳು, ಎಪ್ಪತ್ತರ ದಶಕದಿಂದ ಹಂತಹಂತವಾಗಿ ತಮ್ಮ ತಾತ್ವಿಕ ಸ್ವರೂಪವನ್ನು ರೂಢಮೂಲವಾಗಿ ಪಲ್ಲಟಗೊಳಿಸಿಕೊಳ್ಳುವ ಮೂಲಕ ರೂಪುಗೊಂಡಿರುವ ಅವಸ್ಥೆಯಾಗಿದೆ. ಈ ಕಾಲಘಟ್ಟದಿಂದ ಕನ್ನಡ ಸಾಹಿತ್ಯ ವಿಮರ್ಶೆ ನಿಕಟಪೂರ್ವ ನವ್ಯ ವಿಮರ್ಶೆಯ ಶುದ್ಧ ಸಾಹಿತ್ಯಾತ್ಮಕ ಆಸಕ್ತಿ, ಪಠ್ಯಾಧಾರಿತ ದೃಷ್ಟಿಕೋನ, ಏಕಶಿಸ್ತು ವಿಶ್ಲೇಷಣಾವಿಧಾನ, ವಿಶ್ಲೇಷಣೆ ಮತ್ತು ಮೌಲ್ಯಮಾಪನ ಕಾರ್ಯಮಾದರಿಗಳ ಚಹರೆಗಳನ್ನು ಕಳೆದುಕೊಳ್ಳತೊಡಗಿತು. ಇದಕ್ಕೆ ವಿರುದ್ಧವಾಗಿ ಸಾಹಿತ್ಯಕ ಮತ್ತು ಸಾಹಿತ್ಯೇತರ ಆಸಕ್ತಿ, ಪಠ್ಯಾತ್ಮಕ ಮತ್ತು ಪಠ್ಯೇತರ ದೃಷ್ಟಿಕೋನ, ಬಹುಶಿಸ್ತು ವಿಶ್ಲೇಷಣಾ ವಿಧಾನ, ಸಾಹಿತ್ಯ ಮತ್ತು ಪಠ್ಯಗಳ ಹಿನ್ನೆಲೆಯಲ್ಲಿರುವ ಸಾಂಸ್ಕೃತಿಕ ರಾಜಕಾರಣದ ಹಿತಾಸಕ್ತಿಗಳ ಸ್ವರೂಪವನ್ನು ಬಹುಮುಖಿ ಆಯಾಮಗಳಲ್ಲಿ ವ್ಯಾಖ್ಯಾನಿಸುವ ಕ್ರಮವನ್ನು ಅಳವಡಿಸಿಕೊಂಡಿತು. ಮೌಲ್ಯಮಾಪನಕ್ಕಿಂತ ಹೆಚ್ಚಾಗಿ ಮೌಲ್ಯವ್ಯವಸ್ಥೆಗಳ ಸಂಕೀರ್ಣ ಸ್ವರೂಪದ ಶೋಧನೆಯನ್ನು ವಿಮರ್ಶೆಯ ಬಹುಮುಖ್ಯ ತಾತ್ವಿಕ ವಿಚಾರ ಎಂದು ಭಾವಿಸಲಾಯಿತು.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಸ್ಥೂಲವಾಗಿ, ಸಾಹಿತ್ಯಕ ಮತ್ತು ಸಾಹಿತ್ಯೇತರ ಪಠ್ಯಗಳ ಸಾಂಸ್ಕೃತಿಕ ರಾಜಕಾರಣದ ಸ್ವರೂಪವನ್ನು ಬಹುಶಿಸ್ತುಗಳ ಸಂಶ್ಲೇಷಣಾ ವಿಧಾನದಲ್ಲಿ ವ್ಯಾಖ್ಯಾನಿಸುವ ವಿಮರ್ಶಾವಿಧಾನ ಎಂದು ನಿರ್ವಚಿಸಿಕೊಳ್ಳಲಾಗಿದೆ.

ಈ ವಿಮರ್ಶೆಯ ವಿಧಾನ ರೂಪುಗೊಳ್ಳುವುದಕ್ಕೆ ಪ್ರಮುಖ ಪ್ರೇರಣೆಗಳನ್ನು ನೀಡಿರುವ ಅತ್ಯಂತ ಮಹತ್ವದ ನಾಲ್ಕು ವಿಮರ್ಶಾ ಪ್ರಬಂಧಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅವುಗಳೆಂದರೆ, ಅ. ಯು.ಆರ್. ಅನಂತಮೂರ್ತಿ ಅವರ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ', ಆ. ಪೂರ್ಣಚಂದ್ರ ತೇಜಸ್ವಿ ಅವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಮತ್ತು 'ಹೊಸದಿಗಂತದೆಡೆಗೆ' ಹಾಗೂ ಇ. ಬಿ. ಕೃಷ್ಣಪ್ಪ ಅವರ 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ'.

ಈ ಪ್ರಬಂಧ ಅಥವಾ ವಿಮರ್ಶಾ ಲೇಖನಗಳು ಬೇರೆ ಬೇರೆ ಕಾಲಾವಧಿಯಲ್ಲಿ ಮತ್ತು ಬೇರೆ ಬೇರೆ ಹಿನ್ನೆಲೆಗಳಲ್ಲಿ ರಚನೆಯಾಗಿವೆ. ಆದರೆ ಇವು ಕನ್ನಡ ಸಾಹಿತ್ಯ, ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹಾಗೂ ಮಂಡಿಸಿರುವ ಪ್ರಮೇಯಗಳು ಕಳೆದ ಶತಮಾನದ

ಕನ್ನಡ ಸಾಹಿತ್ಯ ಮತ್ತು ವಿಮರ್ಶಾ ಸ್ವರೂಪದ ತಾತ್ವಿಕ ಸ್ವರೂಪವನ್ನು ಬಹುತೇಕ ರೂಢಮೂಲವಾಗಿ ಪಲ್ಲಟಿಸುವುದಕ್ಕೆ ಬಹುಮುಖ್ಯ ಕಾರಣಗಳಾಗಿವೆ. ಇವು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆ ಸ್ವರೂಪ ಕುರಿತು ಎತ್ತಿದ ಪ್ರಶ್ನೆಗಳು, ಆಕ್ಷೇಪಣೆಗಳು ಮತ್ತು ತಕರಾರುಗಳು ಕನ್ನಡದಲ್ಲಿ ಮಹತ್ವದ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ವಿಮರ್ಶಾತ್ಮಕ ವಾಗ್ವಾದಗಳನ್ನು ಹುಟ್ಟಿಹಾಕಿದವು. ಮುಂದಿನ ದಿನಗಳಲ್ಲಿ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಹಲವು ಭಿನ್ನ ಸ್ವರೂಪದ ಮೀಮಾಂಸೆಗಳು ತಕ್ಕ ಪ್ರಮಾಣದಲ್ಲಿ ರೂಪುಗೊಳ್ಳುವುದಕ್ಕೆ ಪ್ರೇರಣೆ ನೀಡಿದವು. ಕಥನ ಸಾಹಿತ್ಯ ಮತ್ತು ಕಥನ ಕ್ರಮಗಳ 'ಆಶಯ' ಹಾಗೂ 'ಆಕೃತಿ' ಪ್ರಶ್ನೆಗಳಲ್ಲಿ ಸಂಸ್ಕೃತಿ ಪ್ರಶ್ನೆಗಳನ್ನು, ರಾಜಕೀಯ ಪ್ರಶ್ನೆಗಳನ್ನು ಮತ್ತು ವರ್ತಮಾನದ ಬದುಕಿನ ಪ್ರಶ್ನೆಗಳ ನೈತಿಕ ಹೊಣೆಗಾರಿಕೆಗಳನ್ನು ನಿರ್ಣಾಯಕ ಸಂಗತಿಗಳೆಂದು ಪರಿಗಣಿಸುವುದಕ್ಕೆ ಇವು ಪ್ರಮುಖ ಕಾರಣಗಳಾದವು. ಕನ್ನಡದ ಹಲವು ಸೈದ್ಧಾಂತಿಕ ಮತ್ತು ಪಂಥೀಯ ವಿಮರ್ಶಾ ರೂಪಗಳು ತಮ್ಮ ಒರಟು ಸೈದ್ಧಾಂತಿಕನಿಷ್ಠ ನೋಟಕ್ರಮವನ್ನು ಸ್ಥಳೀಯ ಪರಿಸರದ ಚರಿತ್ರೆ, ಸಮಾಜ, ಸಂಸ್ಕೃತಿ, ಭಾಷೆ ಮತ್ತು ರಾಜಕೀಯ ಪರಿಸರದಲ್ಲಿ ಪುರ್ನವ್ಯಾಖ್ಯಾನಿಸಿಕೊಳ್ಳುವ ಮೂಲಕ ದೇಶಿ ಅನುಸಂಧಾನದ ಮೀಮಾಂಸೆಯನ್ನು ಮುಖ್ಯ ತಾತ್ವಿಕತೆಯಾಗಿ ರೂಪಿಸಿಕೊಳ್ಳಲು ನೆರವಾದವು.

ಈ ವಿದ್ಯಮಾನದಿಂದ ಸಾಹಿತ್ಯವನ್ನು ಸಾಮಾಜಿಕ ಪ್ರತಿಫಲನ ಅಥವಾ ಪ್ರತಿನಿಧೀಕರಣದ ದೃಷ್ಟಿಕೋನದಿಂದ ಪರಿಶೀಲಿಸುವ ಸಾಮಾಜಿಕ ವಿಮರ್ಶಾ ರೂಪಗಳಾದ ದಲಿತ ಹಾಗೂ ಸ್ತ್ರೀವಾದಿ ವಿಮರ್ಶೆಗಳು, ಅರ್ಥಿಕ ಪ್ರಶ್ನೆಗಳ ವರ್ಗಸ್ವಭಾವದ ನೆಲೆಯಿಂದ ವಿಶ್ಲೇಷಿಸುವ ಎಡಪಂಥೀಯ ವಿಮರ್ಶಾರೂಪಗಳಾದ ಬಂಡಾಯ ವಿಮರ್ಶೆ, ಮಾರ್ಕ್ಸ್‌ವಾದಿ ವಿಮರ್ಶೆ ಹಾಗೂ ಸಮಾಜವಾದಿ ವಿಮರ್ಶೆಗಳು ಸಾಹಿತ್ಯ ಮತ್ತು ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಹೊಂದಿದ್ದ ಪರಿಮಿತ, ನಿರ್ದಿಷ್ಟ ಮತ್ತು ಕಠಿಣ ನಿಲುವುಗಳನ್ನು ವ್ಯಾಪಕವಾಗಿ ಬದಲಾಯಿಸಿಕೊಳ್ಳಲಾರಂಭಿಸಿದವು. ಆನಂತರದ ದಿನಗಳಲ್ಲಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪಠ್ಯಗಳ ರಚನೆ, ಪ್ರಸರಣೆ ಮತ್ತು ಸ್ವೀಕಾರಗಳಂಥ ಮಹತ್ವದ ಸಂಗತಿಗಳಲ್ಲಿ ಸಾಹಿತ್ಯೇತರ ಶಕ್ತಿಗಳ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಭಾಷಿಕ ಮತ್ತು ರಾಜಕೀಯ ಹಿತಾಸಕ್ತಿಗಳು ವಹಿಸುವ ಸಾಂಸ್ಕೃತಿಕ ರಾಜಕಾರಣದ ಸಂಕೀರ್ಣ ನೆಲೆಗಳನ್ನು ಕುರಿತ ಆಳವಾದ ಚಿಂತನೆ ಅಥವಾ 'ಡಿಸ್ಕೋರ್ಸ್' ಈ ಎಲ್ಲಾ ಪ್ರಧಾನಧಾರೆ ವಿಮರ್ಶಾ ಮಾದರಿಗಳ ಮುಖ್ಯ ತಾತ್ವಿಕತೆಯಾಗಿ ಪರಿಗಣಿತವಾಯಿತು.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಬಂಧಗಳ ಚಾರಿತ್ರಿಕ ಹಿನ್ನೆಲೆ ಮತ್ತು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಕುರಿತು ಸ್ಥೂಲವಾಗಿ ಅವಲೋಕಿಸಲಾಗಿದೆ. ಆನಂತರ ಇವು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆ ಕುರಿತು ಮಂಡಿಸಿದ ವಿಶಿಷ್ಟ ಹಾಗೂ ಅರ್ಥಪೂರ್ಣ ಪ್ರಮೇಯಗಳ ಮಹತ್ವ ಕುರಿತು ಚರ್ಚಿಸಲಾಗಿದೆ. ಅಂತಿಮವಾಗಿ ಇದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮುನ್ನೆಲೆಗೆ ಬಂದ ಹೊಸ ಚಹರೆಗಳ ಸ್ವರೂಪ ಕುರಿತು ವಿವೇಚಿಸಲಾಗಿದೆ.

೪.೩.೧ ಭಾರತೀಯ ಸಂಸ್ಕೃತಿ ಮತ್ತು ಲೇಖಕ

ಅನಂತಮೂರ್ತಿ ಅವರು ಈ ಪ್ರಬಂಧವನ್ನು ಮೊದಲು ಇಂಗ್ಲಿಷ್‌ನಲ್ಲಿ ಬರೆದರು. ಆನಂತರ ಇದರ ಕನ್ನಡ ಆವೃತ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' (೧೯೭೧) ವಿಮರ್ಶಾ ಕೃತಿಯಲ್ಲಿ ಪ್ರಕಟವಾಯಿತು. ಈ ಪ್ರಬಂಧದಲ್ಲಿ ಅವರು 'ಭಾರತೀಯ ಸಂಸ್ಕೃತಿ' ಪರಿಕಲ್ಪನೆಯ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಲೇಖಕರಾದ ಕುವೆಂಪು, ಬೇಂದ್ರೆ, ಗೋಕಾಕ್, ಕಾರಂತ ಮತ್ತು ಅಡಿಗರ ಕಥನ ಸಾಹಿತ್ಯ ಹಾಗೂ ಕಾವ್ಯ ಸಾಹಿತ್ಯವನ್ನು ವಿಶ್ಲೇಷಿಸಿದರು. ಆದರೆ, ಈ ಚರ್ಚೆಯಲ್ಲಿ ಯಾವ ಕಾರಣದಿಂದಲೊ ಮಾಸ್ತಿ ಅವರ ಸಾಹಿತ್ಯದ ವಿಶ್ಲೇಷಣೆ ಮಾಡಿಲ್ಲ.

ಪ್ರಬಂಧವನ್ನು, ಅನಂತಮೂರ್ತಿ ಅವರು ಕ್ರೈಸ್ತ ಮತ್ತು ಹಿಂದೂ ಧರ್ಮಗಳ ಜೀವನದೃಷ್ಟಿ ಕುರಿತ ಮುಖ್ಯ ವ್ಯತ್ಯಾಸಗಳ ಚರ್ಚೆ ಮೂಲಕ ಆರಂಭಿಸುತ್ತಾರೆ. ಆದರೆ, ಈ ಉದ್ದೇಶವೇ ಅವರ ಮುಖ್ಯ ಆಸಕ್ತಿಯಾಗಿಲ್ಲದಿರುವ ಕಾರಣದಿಂದ, ಆನಂತರ ತಮ್ಮ ಚರ್ಚೆಯನ್ನು ಪ್ರಧಾನವಾಗಿ ಹಿಂದೂಧರ್ಮದ ಸಮಸ್ಯಾತ್ಮಕ ಸ್ವರೂಪ ಕುರಿತ ವಿಶ್ಲೇಷಣೆಗೆ ಕೇಂದ್ರೀಕರಿಸುತ್ತಾರೆ. ಅವರ ಪ್ರಕಾರ ಹಿಂದೂ ಧರ್ಮ ಮೂಲತಃ ಪರಸ್ಪರ ವಿರೋಧಾಭಾಸದಿಂದ ಕೂಡಿರುವ ವಿಚಾರ ಹಾಗೂ ಮೌಲ್ಯಾದರ್ಶಗಳ ಸಂಗಮ. ಪ್ರತಿಪಾದನೆ ಮತ್ತು ಆಚರಣೆಗಳ ನಡುವೆ ತಾಳಮೇಳವಿಲ್ಲದ ಧರ್ಮ. ಪರಮ ಆಧ್ಯಾತ್ಮಿಕತೆ ಹಾಗೂ ಜಾತಿಪದ್ಧತಿ ಎರಡನ್ನೂ ಒಟ್ಟಿಗೆ ನಂಬುವ; ನಿರಾಕರ ಬ್ರಹ್ಮ ಹಾಗೂ ಸಾಕಾರ ಆಚರಣೆಗಳನ್ನು ಒಟ್ಟೊಟ್ಟಿಗೆ ಪ್ರತಿಪಾದಿಸುವ ದ್ವಂದ್ವ ಸ್ವರೂಪಿ. ಇಂಥ ಧರ್ಮ ಮತ್ತು ಅದರ ಪ್ರಮುಖ ದರ್ಶನದಿಂದ ರೂಪುಗೊಂಡಿರುವ ಭಾರತೀಯ ಸಂಸ್ಕೃತಿ ಕೂಡಾ ಇದೇ ಬಗೆಯ ಆಂತರಿಕ ವಿರೋಧಾಭಾಸಗಳಿಂದ ಕೂಡಿದೆ. ಇದನ್ನು ಅವರು 'ಭೋಳೆತನ' ಎನ್ನುವ ಪರಿಭಾಷೆ ಮೂಲಕ ವಿವರಿಸುತ್ತಾರೆ.

ಈ ತಾತ್ವಿಕ ಬುನಾದಿಯ ಹಿನ್ನೆಲೆ ಮೂಲಕ ಅವರು ಆಧುನಿಕ ಕನ್ನಡ ಸಾಹಿತ್ಯದ ಎರಡು ಪ್ರಮುಖ ಸಾಹಿತ್ಯಕ ಚಳವಳಿಗಳ ಹಾಗೂ ಈ ಚಳವಳಿಯ ಶ್ರೇಷ್ಠ ಪ್ರಾತಿನಿಧಿಕ ಲೇಖಕರ ಸಾಹಿತ್ಯ ಸ್ವರೂಪ ಕುರಿತು ವಿಶ್ಲೇಷಿಸುತ್ತಾರೆ. ಸ್ಥೂಲನೋಟಕ್ಕೆ ಇಂಥ ವ್ಯಾಪಕ ಭಿತ್ತಿ ಇರುವಂತೆ ಕಂಡರೂ, ಇದರ ಒಳಗೆ ಮುಖ್ಯವಾಗಿರುವುದು ಕುವೆಂಪು ಅವರ ಕಾದಂಬರಿ ಮತ್ತು ಕಾವ್ಯ ಸ್ವರೂಪ ಹಾಗೂ ಅಡಿಗರ ಕಾವ್ಯ ಸ್ವರೂಪ ಕುರಿತ ವಿಶ್ಲೇಷಣೆಯೆ ಆಗಿದೆ. ಇದಕ್ಕೆ ಪೂರಕವಾಗಿ ನವೋದಯ, ನವ್ಯ ಮತ್ತು ಪಾಶ್ಚಾತ್ಯ ಯುರೋಪಿಯನ್ ಸಾಹಿತ್ಯದ ತೌಲನಿಕ ವಿವೇಚನೆ ಮಾಡಲಾಗಿದೆ. ನವೋದಯ ಸಾಹಿತ್ಯ ಮತ್ತು ವಿಮರ್ಶೆಗಿಂತ ನವ್ಯ ಸಾಹಿತ್ಯ ಹಾಗೂ ವಿಮರ್ಶೆ ಶ್ರೇಷ್ಠವಾದದ್ದು; ಕುವೆಂಪು ಅವರ ಕಾದಂಬರಿ ಹಾಗೂ ಕಾವ್ಯಕ್ಕಿಂತ ಅಡಿಗರ ಕಾವ್ಯ ಮಹತ್ವಪೂರ್ಣವಾದದ್ದು ಎನ್ನುವುದನ್ನು ಪ್ರತಿಪಾದಿಸುವುದು ಈ ಪ್ರಬಂಧದ ಮುಖ್ಯ ಧ್ವನಿ ಆಗಿರುವಂತೆ ಕಂಡುಬರುತ್ತದೆ.

ಈ ಪ್ರಬಂಧದಲ್ಲಿ ಅನಂತಮೂರ್ತಿ ಅವರು, ಯಾವ ಲೇಖಕ ಅಥವಾ ಲೇಖಕರು ಆಂತರಿಕ ವಿರೋಧಾಭಾಸ ಸಹಿತವಾದ ಹಿಂದೂ ಧರ್ಮ ಮತ್ತು ಅದರ ದರ್ಶನದಿಂದ ಅವಿಮರ್ಶಾತ್ಮಕ ಪ್ರಭಾವ ಹಾಗೂ ಪ್ರೇರಣೆಗಳನ್ನು ಪಡೆದಿರುವರೊ, ಇಲ್ಲವೇ ಅದರ 'ಭೋಳೆತನ'ದ ಬಗ್ಗೆ ಕುರುಡಾಗಿರುವರೊ, ಅಂಥ ಲೇಖಕರ ಸಾಹಿತ್ಯ ಸಹ ಇದೇ ಬಗೆಯ ವಿರೋಧಾಭಾಸದಿಂದ ಕೂಡಿರುತ್ತದೆ. ಏಕೆಂದರೆ ಇಂಥ ಲೇಖಕರ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯಲ್ಲಿ ತೀವ್ರವಾದ ಸಮಸ್ಯೆ ಅಥವಾ ದೌರ್ಬಲ್ಯವಿದೆ ಎನ್ನುವ ವಾದ ಮಂಡಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಸಾಂಸ್ಕೃತಿಕ ಮತ್ತು ವಿಮರ್ಶಾತ್ಮಕ ಎಚ್ಚರವುಳ್ಳ ಲೇಖಕರ ಸಾಹಿತ್ಯ ಇಂಥ ಅಪಾಯದಿಂದ ಮುಕ್ತವಾದ ಉತ್ಕೃಷ್ಟ ಸಾಹಿತ್ಯವಾಗಿದೆ ಎನ್ನುವ ನಿಲುವು ತಾಳುತ್ತಾರೆ.

ಅನಂತಮೂರ್ತಿ ಅವರು ಭಾರತೀಯ ಸಂಸ್ಕೃತಿ ಸ್ವರೂಪ ಕುರಿತ ತಮ್ಮ ಈ ವಾದ ಮತ್ತು ನಿಲುವನ್ನು ಸಮರ್ಥಿಸುವುದಕ್ಕಾಗಿ, ಕುವೆಂಪು ಅವರ ಕಾದಂಬರಿಗಳು ಹಾಗೂ ಅಡಿಗರ ಕಾವ್ಯದ ತೌಲನಿಕ ಚರ್ಚೆಯನ್ನು ಅತ್ಯಂತ ವಿಸ್ತಾರವಾಗಿ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಪ್ರಾಯೋಗಿಕ ವಿಮರ್ಶೆ ಅಥವಾ ವಸ್ತುನಿಷ್ಠ ವಿಮರ್ಶೆಯ ಮೂಲಕ ತಮ್ಮ ಧೋರಣೆಯನ್ನು ಸಮರ್ಥಿಸಲು ಯತ್ನಿಸುತ್ತಾರೆ. ಹೀಗೆ, ಇಡೀ ಪ್ರಬಂಧದ ಮೊದಲರ್ಧ ಭಾಗವನ್ನು ಕುವೆಂಪು ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಸ್ವರೂಪ ಹಾಗೂ ಉಳಿದರ್ಧ ಭಾಗವನ್ನು ಅಡಿಗರ ವ್ಯಕ್ತಿತ್ವ ಹಾಗೂ ಕಾವ್ಯ ಸ್ವರೂಪ ಕುರಿತ ತೌಲನಿಕ ಚರ್ಚೆಯ ವಿನ್ಯಾಸದಲ್ಲಿ ಕಟ್ಟಲಾಗಿದೆ.

೪.೩.೨ ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ

ತೇಜಸ್ವಿ ಅವರು ಈ ಪ್ರಬಂಧವನ್ನು ೧೯೭೪ರಲ್ಲಿ ಮೈಸೂರಿನಲ್ಲಿ ನಡೆದ 'ಅಖಿಲ ಕರ್ನಾಟಕ ಕಲಾವಿದರ ಮತ್ತು ಬರಹಗಾರರ ಒಕ್ಕೂಟ'ದ ಪ್ರಥಮ ಸಮಾವೇಶದಲ್ಲಿ ಮಂಡಿಸಿದರು. ತಮ್ಮ ಈ ಪ್ರಬಂಧಕ್ಕೆ ಅನಂತಮೂರ್ತಿ ಅವರ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಪ್ರಬಂಧವೇ ಪ್ರಾತಿನಿಧಿಕ ಆಕರರೂಪಿ ಪ್ರೇರಣೆಯಾಗಿದ್ದು, ಅದಕ್ಕೆ ಪ್ರತಿಕ್ರಿಯೆಯಾಗಿ ತಮ್ಮ ಈ ಪ್ರಬಂಧವನ್ನು ರಚಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತೀಯ ಸಂಸ್ಕೃತಿ ಮತ್ತು ಅದರ ಪ್ರಮುಖ ದರ್ಶನ, ಕುವೆಂಪು ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಸ್ವರೂಪ ಕುರಿತು ಅನಂತಮೂರ್ತಿ ಅವರು ವ್ಯಕ್ತಪಡಿಸಿದ ವಿಚಾರಗಳನ್ನು ಸಮಗ್ರವಾಗಿ ಖಂಡಿಸುವುದಕ್ಕಾಗಿ ತೇಜಸ್ವಿ ಅವರು 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಪ್ರಬಂಧ ರಚಿಸಿದ್ದಾರೆ. ಈ ಸಂದರ್ಭದಲ್ಲಿ ನವೋದಯ ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯದಲ್ಲಿ ಭಾಷಾ ಬಳಕೆಯ ಸ್ವರೂಪ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ, ಧರ್ಮ ಮತ್ತು ದರ್ಶನಗಳಿಗೆ, ಸಾಹಿತ್ಯ ಹಾಗೂ ಸಮಾಜಕ್ಕೆ ಇರುವ ಸಂಬಂಧ ಮತ್ತು ವಿಮರ್ಶೆಯ ಹೊಣೆಗಾರಿಕೆ ಮೊದಲಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅನಂತಮೂರ್ತಿ ಅವರು ಮಂಡಿಸಿದ ಪ್ರಮೇಯಗಳನ್ನು ತೇಜಸ್ವಿ

ಅವರು ಸಂಪೂರ್ಣವಾಗಿ ನಿರಾಕರಿಸುತ್ತಾರೆ. ಅಲ್ಲದೆ ಇವುಗಳನ್ನು ಕುರಿತು ವಿಭಿನ್ನವಾದ ಮತ್ತು ಹೊಸ ಸ್ವರೂಪದ ವ್ಯಾಖ್ಯಾನ ಮಾಡುತ್ತಾರೆ.

ಮೊದಲು ಕುವೆಂಪು ಅವರ ಸಾಹಿತ್ಯದ ತಾತ್ವಿಕ ಪ್ರೇರಣೆಗಳನ್ನು ನಿರಾಕರಿಸುವುದು, ಆ ಮೂಲಕ ಅವರ ಕಾದಂಬರಿಗಳು ಮತ್ತು ಕಾವ್ಯ ಎರಡೂ ಸಹ 'ಭಾರತೀಯ ಸಂಸ್ಕೃತಿ' ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅರ್ಥಪೂರ್ಣವಾದವುಗಳಲ್ಲ ಎನ್ನುವುದನ್ನು ನಿರೂಪಿಸುವುದು 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಪ್ರಬಂಧದ ಒಳ ಸ್ವರೂಪದಲ್ಲಿರುವ ಪ್ರಮುಖ ಉದ್ದೇಶವಾಗಿದೆ ಎನ್ನುವ ನೈತಿಕ ವಿರೋಧದಲ್ಲಿ ತೇಜಸ್ವಿ ಅವರು ತಮ್ಮ ಪ್ರಬಂಧ ರಚಿಸಿರುವಂತೆ ಕಂಡುಬರುತ್ತದೆ.

ಈ ಪ್ರಬಂಧ ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತು ವಿಮರ್ಶೆ ಕುರಿತು ಮಂಡಿಸಿದ ಹೊಸ ಪ್ರಮೇಯಗಳು ಕರ್ನಾಟಕದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯ ಮುಖ್ಯ ವಾಗ್ವಾದಗಳನ್ನು ಹುಟ್ಟು ಹಾಕಿದವು. ಅಲ್ಲದೆ, ಇಂಥ ಇನ್ನಷ್ಟು ವಾಗ್ವಾದ ಹಾಗೂ ಚರ್ಚೆಗಳಿಗೆ ಮುಖ್ಯ ಪ್ರೇರಣೆಗಳೂ ಆದವು.

೪.೩.೩ ಹೊಸದಿಗಂತದೆಡೆಗೆ

ತೇಜಸ್ವಿ ಅವರು ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನಕ್ಕೆ ೧೯೭೩ರಲ್ಲಿ ಬರೆದ ಮುನ್ನುಡಿ 'ಹೊಸದಿಗಂತದೆಡೆಗೆ'. ಈ ಪ್ರಬಂಧದಲ್ಲಿ ತೇಜಸ್ವಿ ಅವರು ತನ್ನ ಉನ್ನತಿ ಕಳೆದುಕೊಂಡು ಕಳೆಗುಂದಿದ್ದ ಕನ್ನಡ ನವ್ಯ ಚಳವಳಿಯನ್ನು ಬಹುಮುಖಿ ನೆಲೆಗಳಲ್ಲಿ ವಿಮರ್ಶಿಸಿದರು. 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಪ್ರಬಂಧದಲ್ಲಿ ಸಮಕಾಲೀನ ಲೇಖಕರ ವಿಮರ್ಶಾತ್ಮಕ ಪ್ರಬಂಧವನ್ನು ಪ್ರಾತಿನಿಧಿಕ ಆಕರವಾಗಿ ಪರಿಗಣಿಸಿ, ಸಮಗ್ರ ಕನ್ನಡ ಸಾಹಿತ್ಯದ ತಾತ್ವಿಕ ಸ್ವರೂಪವನ್ನು ಕುರಿತು ಹೊಸ ಪ್ರಮೇಯಗಳನ್ನು ಪ್ರತಿಪಾದಿಸಿದರು. ಆದರೆ, ಈ ಪ್ರಬಂಧದಲ್ಲಿ ನವ್ಯ ಸಾಹಿತ್ಯ ಚಳವಳಿಯ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಅರ್ಥಹೀನ ಹಾಗೂ ಅಪ್ರಸ್ತುತ ಚಿಂತನೆಗಳನ್ನು ತೀವ್ರವಾಗಿ ಖಂಡಿಸಿದರು. ಈ ಮೂಲಕ ಕನ್ನಡದ ಮುಂದಿನ ಸಾಹಿತ್ಯ ಮತ್ತು ವಿಮರ್ಶೆಯ ಸ್ವರೂಪ ಹೇಗಿರಬೇಕು ಎನ್ನುವುದನ್ನು ಕುರಿತು ಹೊಸ ಪ್ರಮೇಯಗಳನ್ನು ಸಮರ್ಥವಾಗಿ ಪ್ರತಿಪಾದಿಸಿದರು. ಕನ್ನಡ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಅವರ ಈ ಆಶಯಗಳು ಮುಂದಿನ ದಿನಗಳಲ್ಲಿ ಬಹುಮಟ್ಟಿಗೆ ಈಡೇರಿದ್ದನ್ನು ಸಹ ಗಮನಿಸಬಹುದು.

೪.೪ ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ

ಕೃಷ್ಣಪ್ಪ ಅವರು ಈ ಲೇಖನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ೧೯೭೪ನೇ ಜನವರಿಯಲ್ಲಿ ಕುವೆಂಪು ಅವರ ಸಾಹಿತ್ಯ ಕುರಿತು ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದರು. ಈ ಪ್ರಬಂಧದಲ್ಲಿ ಅವರು ಕುವೆಂಪು ಅವರ ಎರಡು ಮಹಾಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಅಸ್ಪೃಶ್ಯರ ಪಾತ್ರಗಳ ಚಿತ್ರಣವನ್ನು ಬಹುಮುಖಿ ನೆಲೆಗಳಲ್ಲಿ ವಿಶ್ಲೇಷಿಸಿದರು. ಇದು ನವ್ಯೋತ್ತರ

ಕಾಲಘಟ್ಟದ ಕನ್ನಡ 'ಸಾಮಾಜಿಕ ವಿಮರ್ಶಾ' ಪ್ರಕಾರವನ್ನು ಚಾರಿತ್ರಿಕವಾಗಿ ಸ್ಪಷ್ಟರೂಪದಲ್ಲಿ ಉದ್ಘಾಟಿಸಿದ ಮಹತ್ವ ಹೊಂದಿರುವ ಲೇಖನವಾಗಿದೆ.

ಕೃಷ್ಣಪ್ಪ ಅವರು, ಸಾಹಿತ್ಯ ವಿಮರ್ಶೆಯಲ್ಲಿ ಸಾಮಾಜಿಕ ವಿಶ್ಲೇಷಣೆಯನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ವಿಮರ್ಶಾತ್ಮಕ ವಿಧಿವಿಧಾನಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಈ ವಿಮರ್ಶಾ ಪ್ರಬಂಧದಲ್ಲಿ ಬಳಸಿದರು. ಶತಮಾನದ ಕನ್ನಡದ ಶ್ರೇಷ್ಠ ಲೇಖಕ ಎನ್ನುವುದು ಕುವೆಂಪು ಅವರಿಗೆ ನಿಜಕ್ಕೂ ಸಲ್ಲಬೇಕಾದ ಗೌರವ ಎನ್ನುವ ನಿಲುವನ್ನು ಇಟ್ಟುಕೊಂಡೇ, ಇಂಥ ಶ್ರೇಷ್ಠ ಲೇಖಕನ ಕಾದಂಬರಿಗಳಲ್ಲಿರುವ ದಲಿತ ವಿರೋಧಿ ಊಳಿಗಮಾನ್ಯ ಯಾಜಮಾನ್ಯಶಾಹಿಯ ಸ್ವರೂಪವನ್ನು ಕುರಿತು ತರ್ಕಬದ್ಧವಾಗಿ ವಿಶ್ಲೇಷಿಸಿದರು. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವುದಕ್ಕೆ ಪೂರಕವಾಗಿ ಅವರು ಈ ಪ್ರಬಂಧದಲ್ಲಿ ಅನುಸರಿಸಿದ 'ಕೃತಿನಿಷ್ಠ', 'ಸಂಸ್ಕೃತಿನಿಷ್ಠ', 'ಸಮಾಜನಿಷ್ಠ' ಹಾಗೂ 'ಮಾನವತಾವಾದಿನಿಷ್ಠ' ಧೋರಣೆಗಳು ಕನ್ನಡ ಸಾಹಿತ್ಯ ವಿಮರ್ಶೆಯ ಮಟ್ಟಿಗೆ ಹೊಚ್ಚ ಹೊಸದಾದವುಗಳೂ ಹಾಗೂ ಅಷ್ಟೇ ಅರ್ಥಪೂರ್ಣವಾದವುಗಳೂ ಸಹ ಆಗಿದ್ದವು.

ಕೃಷ್ಣಪ್ಪ ಅವರು, ಕುವೆಂಪು ಅವರ ಕಾದಂಬರಿಗಳಲ್ಲಿರುವ ಪುರೋಹಿತಶಾಹಿ ವಿರೋಧಿ ಪ್ರಜ್ಞೆಯು ಹೇಗೆ ದಲಿತ ವಿರೋಧಿಯಾದ ಶೂದ್ರಶಾಹಿ ಪ್ರಜ್ಞೆಯಾಗಿ ಕ್ರಿಯಾತ್ಮಕವಾಗಿದೆ ಎನ್ನುವುದರ ಸ್ವರೂಪವನ್ನು ಕುರಿತು ಮನೋಜ್ಞವಾಗಿ ವಿಶ್ಲೇಷಿಸಿದರು. ಈ ಸಂದರ್ಭದಲ್ಲಿ ಅವರು ವರ್ಗಸ್ವಭಾವದ ಸ್ವರೂಪ ಕುರಿತು ಪ್ರತಿಪಾದಿಸಿದ ವಿಚಾರಗಳು ಸಾಹಿತ್ಯ ಸೃಷ್ಟಿ ಹಾಗೂ ನಿರೂಪಣೆಗಳು ಒಳಗೊಂಡಿರುವ ಸಾಂಸ್ಕೃತಿಕ ರಾಜಕಾರಣದ ಸ್ವರೂಪ ಕುರಿತ ಅತ್ಯುತ್ತಮವಾದ ಚಿಂತನೆಗಳಾಗಿವೆ.

ಈ ಲೇಖನದ ಮೂಲಕ ಕೃಷ್ಣಪ್ಪ ಅವರು ಮಂಡಿಸಿದ ವಿಚಾರಗಳು ಸಮಗ್ರ ಕನ್ನಡ ಸಾಹಿತ್ಯವನ್ನು ದಲಿತ ದೃಷ್ಟಿಕೋನದ ಮೂಲಕ ವ್ಯಾಖ್ಯಾನಿಸುವುದಕ್ಕೆ ಮುಖ್ಯವಾದ ಪ್ರೇರಣೆಗಳನ್ನು ಒದಗಿಸಿದವು. ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಪ್ರತಿಪಾದಿಸಿದ ಅನುಭವದ 'ಅಥೆಂಟಿಕ್ ಪ್ರಶ್ನೆ' ಮತ್ತು ಸಾಹಿತ್ಯ ನಿರೂಪಣೆಗಳಲ್ಲಿ ಅಂತರ್ಗತವಾಗಿರುವ 'ವರ್ಗಸ್ವಭಾವ'ದ ಸ್ವರೂಪ ಕುರಿತು ಮಂಡಿಸಿದ ಸಾಂಸ್ಕೃತಿಕ ರಾಜಕಾರಣದ ವಿಚಾರಗಳು ಕನ್ನಡದಲ್ಲಿ ಹೊಸ ಸ್ವರೂಪದ ಸಾಹಿತ್ಯ ಮತ್ತು ವಿಮರ್ಶೆಯ ರಚನೆಯ ಅಗತ್ಯವನ್ನು ಪ್ರಬಲವಾಗಿ ಪ್ರತಿಪಾದಿಸಿದವು. ಮುಂದೆ ಇಂಥ ವಿಶಿಷ್ಟ ಸ್ವರೂಪದ ಸಾಹಿತ್ಯ ಮತ್ತು ವಿಮರ್ಶೆಯ ಪರಂಪರೆಗಳು ಬೆಳೆದವು ಎನ್ನುವುದು ಅತ್ಯಂತ ಗಮನಾರ್ಹವಾದ ವಿಚಾರವಾಗಿದೆ.

ಈ ಪ್ರಬಂಧಗಳು ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಭಾಷೆ, ಅಭಿವ್ಯಕ್ತಿ ವಿಧಾನಗಳನ್ನು ಮತ್ತು ವಿಮರ್ಶೆಯ ಉದ್ದೇಶಗಳು, ಮಾನದಂಡಗಳು, ಕಾರ್ಯಮಾದರಿಗಳು ಹಾಗೂ ಹೊಣೆಗಾರಿಕೆಗಳನ್ನು ಕುರಿತು ಹುಟ್ಟು ಹಾಕಿದ ಪ್ರಮೇಯಗಳು, ವಾಗ್ವಾದಗಳನ್ನು ಮುಖ್ಯವಾದ ಮೂರು

ವಾಗ್ವಾದಗಳಲ್ಲಿ ಗುರುತಿಸಬಹುದಾಗಿದೆ. ಅವುಗಳೆಂದರೆ, ಅ. ಸಂಸ್ಕೃತಿ ವಾಗ್ವಾದಗಳು ಆ. ಸಾಹಿತ್ಯ ವಾಗ್ವಾದಗಳು ಮತ್ತು ಇ. ವಿಮರ್ಶೆ ವಾಗ್ವಾದಗಳು.

ಇವು ಮೇಲ್ನೋಟಕ್ಕೆ ಪರಸ್ಪರ ಪ್ರತ್ಯೇಕವಾಗಿರುವಂತೆ ತೋರಿದರೂ ಸಹ, ಒಳರೂಪದಲ್ಲಿ ಅವು ತಮ್ಮ ಸರಹದ್ದುಗಳನ್ನು ಮೀರಿ ಒಂದರೊಳಗೆ ಇನ್ನೊಂದು ಬೆರೆತಿರುವ ಸ್ವರೂಪದವುಗಳಾಗಿವೆ. ಅಲ್ಲದೆ ಈ ಪ್ರತಿಯೊಂದು ವಾಗ್ವಾದವು ಇನ್ನೊಂದು ವಾಗ್ವಾದ ಒಳಗೊಂಡಿರಬಹುದಾದ ಸಹಸ್ವರೂಪಿ ಅಥವಾ ಸಮಸ್ವರೂಪಿ ಸಂಗತಿಗಳನ್ನು ತನ್ನ ಕಕ್ಷೆಯೊಳಗೆ ಕೂಡಿಕೊಂಡಿರುವುದು ಕೂಡಾ ಅಷ್ಟೇ ವಾಸ್ತವವಾಗಿದೆ. ಈ ಮುಖ್ಯ ವಾಗ್ವಾದಗಳು ನವ್ಯೋತ್ತರ ಸಂದರ್ಭದಲ್ಲಿ ಹುಟ್ಟುಹಾಕಿದ ಹೊಸ ವಿಮರ್ಶಾತ್ಮಕ ಚಹರೆಗಳು ಮತ್ತು ತಾತ್ವಿಕ ಗ್ರಹಿಕೆಗಳು, ಹೇಗೆ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಮುಖ್ಯ ಪ್ರೇರಣೆಗಳಾಗಿವೆ ಎನ್ನುವುದನ್ನು ನಿರೂಪಿಸುವ ದೃಷ್ಟಿಯಿಂದ ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ವಿವೇಚಿಸಲಾಗಿದೆ.

೪.೪.೧ ಸಂಸ್ಕೃತಿ ವಾಗ್ವಾದಗಳು

ಅನಂತಮೂರ್ತಿ ಮತ್ತು ತೇಜಸ್ವಿ ಅವರ ಪ್ರಬಂಧಗಳಲ್ಲಿ ಸಂಸ್ಕೃತಿ ಕುರಿತ ಮುಖ್ಯ ವಾಗ್ವಾದದ ನೆಲೆಗಳಿವೆ. ಅನಂತಮೂರ್ತಿ ಅವರು ಸಂಸ್ಕೃತಿ ಸ್ವರೂಪ ಕುರಿತು "ಸಂಸ್ಕೃತಿಯೆಂದರೆ ಬುದ್ಧಿಯ ಅತ್ಯುತ್ತಮ ಮಟ್ಟದಲ್ಲಿ ಪ್ರೇರಕಶಕ್ತಿಗಳಾಗಿ ಕೆಲಸ ಮಾಡುವ ವಿಚಾರಗಳಲ್ಲದೆ ನಿತ್ಯದ ಆಚರಣೆಯಲ್ಲಿ ಜೀವನವನ್ನು ರೂಪಿಸುತ್ತಿರುವ ನಡೆನುಡಿಗಳೆಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತೇನೆ"[೧] ಎಂದು ಪಾಶ್ಚಾತ್ಯ ಮಾನವಶಾಸ್ತ್ರೀಯ ಜ್ಞಾನದ ತಿಳಿವಳಿಕೆಯ ಎಚ್ಚರಿಕೆಯನ್ನು ವ್ಯಕ್ತಪಡಿಸುತ್ತಾರೆ. ಆದರೂ ಈ ವ್ಯಾಪಕ ಪರಿಕಲ್ಪನೆಗೆ ಬದಲಾಗಿ, ಹಿಂದೂ ಧರ್ಮ ಮತ್ತು ಅದರ ದಾರ್ಶನಿಕ ತಿರುಳನ್ನೇ ಅಂತಿಮವಾಗಿ 'ಭಾರತೀಯ ಸಂಸ್ಕೃತಿ' ಎಂದು ಪ್ರತಿಪಾದಿಸುತ್ತಾರೆ. ಈ ಸಂಸ್ಕೃತಿ ಪರಿಕಲ್ಪನೆ ಧರ್ಮಾಧಾರಿತವಾದ ಮತ್ತು ಅಖಂಡವಾದ ಪರಿಕಲ್ಪನೆಯಾಗಿದೆ. ಇದರ ಅಸ್ತಿತ್ವವನ್ನು ಅವರು ರಾಷ್ಟ್ರೀಯ ನೆಲೆಯಲ್ಲಿ ಗುರುತಿಸುತ್ತಾರೆ. ಹಾಗೆ ನೋಡುವುದಾದರೆ, ಈ ಪರಿಕಲ್ಪನೆ ಮೂಲತಃ ಭಾರತೀಯ ನವೋದಯ ಕಾಲಘಟ್ಟದ 'ವೈದಿಕ ಸಂಸ್ಕೃತಿ' ಅಥವಾ 'ಸನಾತನ ಸಂಸ್ಕೃತಿ' ಪರಿಕಲ್ಪನೆಗಿಂತ ತೀರಾ ಬೇರೆಯಾದದ್ದೇನೂ ಅಲ್ಲ; ಒಂದು ಮುಖ್ಯವಾದ ವ್ಯತ್ಯಾಸವೆಂದರೆ, ಅನಂತಮೂರ್ತಿ ಅವರು ನವೋದಯ ಸಂಸ್ಕೃತಿ ಚಿಂತಕರು ಗುರುತಿಸಲು ಮತ್ತು ಚರ್ಚಿಸಲು ಇಚ್ಚಿಸದಿದ್ದ ಈ ಸಂಸ್ಕೃತಿಯಲ್ಲಿರುವ ವಿರೋಧಾಭಾಸಗಳನ್ನು ಗುರುತಿಸುತ್ತಾರೆ ಅಷ್ಟೆ. ನವೋದಯ ವೈದಿಕ ಸಂಸ್ಕೃತಿ ಚಿಂತನೆಯು ಒಪ್ಪಿಕೊಂಡ ಜಾತಿಪದ್ಧತಿಯನ್ನು ವಿರೋಧಿಸುವುದು ಮತ್ತು ಅದ್ವೈತ ದರ್ಶನವನ್ನು ಕಟುವಾಗಿ ಟೀಕಿಸುವುದನ್ನು ಹೊರತುಪಡಿಸಿದರೆ, ಈ ಪರಿಕಲ್ಪನೆಯು ಡಿ.ವಿ.ಜಿ., ದೇವುಡು ಮತ್ತು ಮಾಸ್ತಿ ಮೊದಲಾದವರು ಪ್ರತಿಪಾದಿಸಿದ 'ವೈದಿಕ ಸಂಸ್ಕೃತಿ' ಪರಿಕಲ್ಪನೆಯ ಆಧುನಿಕ ರೂಪವೇ ಆಗಿದೆ.

ಈ ಹಿನ್ನೆಲೆಯಲ್ಲಿ, ಅನಂತಮೂರ್ತಿ ಅವರ ಸಂಸ್ಕೃತಿ ಪರಿಕಲ್ಪನೆಯನ್ನು ತೇಜಸ್ವಿ ಅವರು ಸಂಪೂರ್ಣವಾಗಿ ವಿರೋಧಿಸಿದರು. ಅಷ್ಟೇ ಅಲ್ಲದೆ, ಭಾರತೀಯ ಸಂಸ್ಕೃತಿ ಕುರಿತ ಪ್ರತಿಷ್ಠಿತ 'ವೈದಿಕ ಸಂಸ್ಕೃತಿ ಪರಿಕಲ್ಪನೆ' ಅಥವಾ 'ಬ್ರಾಹ್ಮಣ ಸಂಸ್ಕೃತಿ ಪರಿಕಲ್ಪನೆ' ಎನ್ನುವುದು ಹುಟ್ಟಾ ಮಿಥ್ಯೆ ಎಂದು ನಿರೂಪಿಸಿದರು. 'ಭಾರತೀಯ ಸಂಸ್ಕೃತಿ' ಎನ್ನುವುದು ಯಾವತ್ತಿಗೂ ಅಖಂಡ ಏಕಘನಾಕೃತಿ ಸಂಸ್ಕೃತಿಯಾಗಿಲ್ಲ; ಬದಲಾಗಿ ಅದು ಹಲವು ಪ್ರಾದೇಶಿಕ ಸಂಸ್ಕೃತಿಗಳಿಂದ ಮತ್ತು ಹಲವು ಬ್ರಾಹ್ಮೇಣತರ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಜೀವನ ಕ್ರಮಗಳು ಒಗ್ಗೂಡಿದಾಗ ಏರ್ಪಡುವ ಒಂದು 'ಸಾಪೇಕ್ಷ ಅವಸ್ಥೆ' ಎಂದು ವಾದಿಸಿದರು. ಅನಂತಮೂರ್ತಿ ಅವರು ಭಾರತೀಯ ಸಂಸ್ಕೃತಿಯನ್ನು ರಾಷ್ಟ್ರೀಯ ಅಸ್ತಿತ್ವದಲ್ಲಿ ಗುರುತಿಸಿದರೆ; ತೇಜಸ್ವಿ ಇದಕ್ಕೆ ವಿರುದ್ಧವಾಗಿ ಅದನ್ನು ಪ್ರಾದೇಶಿಕ ಅಸ್ತಿತ್ವದಲ್ಲಿ ವಿವರಿಸಿದರು. ಆದ್ದರಿಂದ ಅವರು "ಭಾರತದಲ್ಲಿನ ಸಂಸ್ಕೃತಿಗಳನ್ನು ನಾವು ಅರಿಯಹೊರಟಾಗ ಭಾರತೀಯ ಸಂಸ್ಕೃತಿ ಎಂಬ ಪದವನ್ನು ನಾವು ಅಖೈರಾಗಿ ಉಚ್ಚಾಟಿಸಬೇಕಾಗುತ್ತದೆ"[೨] ಎಂದು ವಾದಿಸಿದರು. ಈ ಪರಿಭಾಷೆಯು ಸೃಷ್ಟಿಸುತ್ತಿರುವ ಅರ್ಥಹೀನ ಹಾಗೂ ಅವಾಸ್ತವ ಸತ್ಯವನ್ನು ಕುರಿತು ತೀವ್ರ ವಿರೋಧ ವ್ಯಕ್ತಪಡುತ್ತಾ, "ಅಖಂಡ ಭಾರತವೆನ್ನುವುದು ಅಲೆಮಾರಿಗಳೂ, ಪರ್ಯಟನಶೀಲ ಮನೋಭಾವದ ಪ್ರವಾಸೋದ್ಯಮಿಗಳೂ ಆದ ಬ್ರಾಹ್ಮಣ ಜನಾಂಗಕ್ಕೆ ಹೆಚ್ಚು ಸಂಬಂಧಿಸಿದುದು. ಆದ್ದರಿಂದಲೇ ಭಾರತೀಯ ಸಂಸ್ಕೃತಿ ಎನ್ನುವ ಪದವನ್ನೇ ನಾವು ನಮ್ಮ ಪರಿಭಾಷೆಯಿಂದ ತ್ಯಜಿಸಿದ ನಂತರವೇ ನಾವು ನಿಜವಾಗಿಯೂ ರೂಪಿಸಬೇಕಾಗಿರುವ ಭಾರತೀಯ ಸಂಸ್ಕೃತಿಯ ರೂಪುರೇಷೆಗಳು ಹೊಳೆದಾವು"[೩] ಎಂದು ವಿಶ್ಲೇಷಿಸಿದರು.

ತೇಜಸ್ವಿ ಅವರ ಸಂಸ್ಕೃತಿ ಕುರಿತ ಈ ವ್ಯಾಖ್ಯಾನಗಳು ಮುಂದೆ ಹೇಗೆ 'ಅಖಂಡ ಭಾರತೀಯ ಸಂಸ್ಕೃತಿ' ಎನ್ನುವ ಏಕರೂಪೀಕೃತ ಅವಸ್ಥೆ ಇಲ್ಲವೋ, ಹಾಗೆಯೇ 'ಅಖಂಡ ಕರ್ನಾಟಕ ಸಂಸ್ಕೃತಿ' ಎನ್ನುವುದೂ ಕೂಡಾ ಇಲ್ಲ. 'ಕರ್ನಾಟಕ ಸಂಸ್ಕೃತಿ' ಎನ್ನುವುದು ವಾಸ್ತವದಲ್ಲಿ 'ಕರ್ನಾಟಕ ಸಂಸ್ಕೃತಿಗಳು' ಎಂದಾಗಬೇಕು. ಕರ್ನಾಟಕ ಸಂಸ್ಕೃತಿ ಎನ್ನುವ ಅವಸ್ಥೆಯು ವಾಸ್ತವವಾಗಿ ಧರ್ಮ, ಮತ, ಸಮುದಾಯ, ಜಾತಿ, ಉಪಜಾತಿ, ಭಾಷೆ, ಉಪಭಾಷೆ, ಲಿಂಗ ಮೊದಲಾದವುಗಳಿಂದ ರೂಪಿತವಾಗಿರುವ ವಿವಿಧ ಕಿರು ಮತ್ತು ಅನನ್ಯ ಸಂಸ್ಕೃತಿ ಘಟಕಗಳು ಒಟ್ಟುಗೂಡಿದಾಗ ಭಾವಿಸಿಕೊಳ್ಳುವ ಒಂದು ಸಾಪೇಕ್ಷ ಸ್ಥಿತಿ ಎಂದು ನಿರ್ವಚಿಸಲಾಯಿತು. ಇವೆಲ್ಲವೂ ಪ್ರಾದೇಶಿಕ ಅಥವಾ ಭೌಗೋಳಿಕ ನೆಲೆಯಲ್ಲಿ ಅಸ್ತಿತ್ವ ಹೊಂದಿವೆ. ಕೆಲವೊಮ್ಮೆ ಈ ಅಸ್ತಿತ್ವ ನಿರ್ದಿಷ್ಟವೂ, ಹಾಗೆಯೇ ಹಲವೊಮ್ಮೆ ಅನಿರ್ದಿಷ್ಟವೂ ಆಗಿರಬಹುದು. ಇಷ್ಟಾದರೂ ಕರ್ನಾಟಕದಲ್ಲಿರುವುದು ವಾಸ್ತವವಾಗಿ ಬಹು ಸಂಸ್ಕೃತಿಗಳು. ಇವು ಅನ್ಯ ಸಂಸ್ಕೃತಿಗಳೊಂದಿಗೆ ಹೊರರೂಪಕ್ಕೆ ದೈನಿಕ ಸಹಬಾಳ್ವೆಯ ಸಂದರ್ಭದಲ್ಲಿ ಸಾಮರಸ್ಯವಾದಿ ಸ್ವರೂಪದಲ್ಲಿ ಕಂಡುಬರುತ್ತವೆ. ಆದರೂ ಈ ಸಂಸ್ಕೃತಿ ಘಟಕಗಳು ಮೂಲತಃ ಶ್ರೇಣೀಕೃತ ತಾರತಮ್ಯ ಸಿದ್ಧಾಂತಗಳಿಂದ ಹಾಗೂ ಆಚರಣಾತ್ಮಕ ತತ್ವಗಳಿಂದ ಹಲಬಗೆಯ ಕಟ್ಟುಪಾಡಿಗೆ ಬದ್ಧವಾಗಿವೆ. ಹೀಗಾಗಿ ಅವು ತಮ್ಮ ಒಳರೂಪದಲ್ಲಿ ಸಮಾನ ಹಕ್ಕು, ಅಧಿಕಾರ,

ಅಸ್ಮಿತೆ ಮತ್ತು ಅನನ್ಯತೆಯ ಸಾಧನೆಯ ಉದ್ದೇಶಗಳಿಂದ ವ್ಯಕ್ತ ಅಥವಾ ಅವ್ಯಕ್ತ ಸಂಘರ್ಷದಲ್ಲಿ ನಿರತವಾಗಿವೆ. ಇದು ಹಲವು ರೂಪ ಹಾಗೂ ಸ್ತರಗಳಲ್ಲಿ ಇದೆ. ಹೀಗೆ ಕರ್ನಾಟಕ ಸಂಸ್ಕೃತಿಯನ್ನು ಅದರ ಭೌತಿಕ ವಿವರಗಳಲ್ಲಿ ಗ್ರಹಿಸುವುದರೊಂದಿಗೆ, ಅದರ ಅಭೌತಿಕ ಹಾಗೂ ಮಾನಸಿಕ ಸ್ತರಗಳನ್ನೂ ಕೂಡಾ ಪರಿಣಾಮಕಾರಿಯಾಗಿ ವಿಶ್ಲೇಷಿಸಲಾಯಿತು.

ಈ ಪ್ರವೃತ್ತಿಗಳು ನವ್ಯೋತ್ತರ ಹಾಗೂ ದಲಿತ–ಬಂಡಯೋತ್ತರ ಕಾಲಘಟ್ಟದ ಕನ್ನಡ ಸಾಹಿತ್ಯ ಮೀಮಾಂಸೆಗಳ ಹಾಗೂ ವಿಮರ್ಶಾ ಮೀಮಾಂಸೆಗಳ ಬಹುಮುಖ್ಯ ಗ್ರಹಿಕೆಗಳಾದವು. ಇವು ಕರ್ನಾಟಕ ಸಂಸ್ಕೃತಿಯನ್ನು ಉತ್ಪಾದನಾ ಸಾಧನ ಮತ್ತು ಉತ್ಪಾದನಾ ಸಂಬಂಧಗಳ ಸ್ವರೂಪಗಳು, ಮಾನವಶಾಸ್ತ್ರೀಯ ಸಾಮಾಜಿಕ ಸಂರಚನಾ ವಿನ್ಯಾಸಗಳು, ಸಮುದಾಯಾಧಾರಿತ ಮತಧರ್ಮಾಚರಣೆಗಳು, ಭಾಷೆ ಮತ್ತು ಲಿಂಗಾಧಾರಿತ ರಚನೆಗಳು ಹೀಗೆ ವೈವಿಧ್ಯಮಯ ಬಗೆಗಳಲ್ಲಿರುವ 'ಕರ್ನಾಟಕ ಸಂಸ್ಕೃತಿಗಳ' ಸ್ವರೂಪವನ್ನು ವಿಶ್ಲೇಷಿಸಿದವು. ಈ ವಿದ್ಯಮಾನವು ಕಳೆದ ಶತಮಾನದ ಅಂತ್ಯದ ವೇಳೆಗೆ ಸ್ಥಳೀಯ ಸಂಸ್ಕೃತಿಗಳ ನಡುವಿನ ಸಾಂಸ್ಕೃತಿಕ ಸಂಘರ್ಷದ ಜೊತೆಗೆ ಪಾಶ್ಚಾತ್ಯ ಸಾಂಸ್ಕೃತಿಕ ಏಕರೂಪೀಕರಣದ ಯಾಜಮಾನ್ಯದ ವಿರುದ್ಧದ ಮಹಾಸಂಘರ್ಷವಾಗಿ ರೂಪುಗೊಳ್ಳುವ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ಪರಿವರ್ತಿಸಿತು.

೪.೪.೨ ಸಾಹಿತ್ಯ ವಾಗ್ವಾದಗಳು

ಈ ವಿಮರ್ಶಾ ಪ್ರಬಂಧಗಳು ಸಾಹಿತ್ಯದ ಸ್ವರೂಪ, ಉದ್ದೇಶ ಮತ್ತು ಉಪಯೋಗಗಳನ್ನು ಕುರಿತು ಅತ್ಯಂತ ಅರ್ಥಪೂರ್ಣವಾದ ಚಿಂತನೆಗಳನ್ನು ಒಳಗೊಂಡಿವೆ. ಕನ್ನಡ ಸಾಹಿತ್ಯ ವಿಮರ್ಶೆಯ ಚರಿತ್ರೆಯ ದೃಷ್ಟಿಯಿಂದ ಹೇಳುವುದಾದರೆ, ಇವು ಭಾರತೀಯ ಕಾವ್ಯ ಮೀಮಾಂಸೆಯ ಕಾವ್ಯಕೇಂದ್ರಿತ ದೃಷ್ಟಿಕೋನ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯ ಚಾರಿತ್ರಿಕ ವಿವರ ಕೇಂದ್ರಿತ ದೃಷ್ಟಿಕೋನಗಳಿಗೆ ಸಾಧ್ಯವಾಗದಿದ್ದ ಹಲವು ಅರ್ಥಪೂರ್ಣ ಸಾಹಿತ್ಯ ಮೀಮಾಂಸೆಗಳನ್ನು ಮತ್ತು ವಿಮರ್ಶಾ ಮೀಮಾಂಸೆಗಳನ್ನು ಅತ್ಯಂತ ಸಮರ್ಥವಾಗಿ ಕಟ್ಟಿದವು.

ಅನಂತಮೂರ್ತಿ ಅವರು ನವೋದಯ ಸಾಹಿತ್ಯದ ಸ್ವರೂಪವನ್ನು ಅದರ ದಾರ್ಶನಿಕ ಸ್ಫೂರ್ತಿ ಮೂಲದ ಹಿನ್ನೆಲೆಯ ಕಾರಣದಿಂದ ವಿರೋಧಿಸುತ್ತಾ, ಸಂಸ್ಕೃತಿ ಕುರಿತ ವಿಮರ್ಶಾತ್ಮಕ ಎಚ್ಚರವಿಲ್ಲದಿರುವ ಸಾಹಿತ್ಯವು ಜೀವನಾನುಭವದ ಶೋಧನೆ ಮಾಡುವುದಕ್ಕೆ ಶಕ್ತವಾಗಿರುವುದಿಲ್ಲ. ಅದು ಕೇವಲ ಸಂಸ್ಕೃತಿಯನ್ನು ಬಿಂಬಿಸುವಷ್ಟಕ್ಕೆ ಮಾತ್ರ ಸೀಮಿತವಾಗುತ್ತದೆ ಎಂದು ವಾದಿಸಿದರು. ಹಾಗೆಯೇ, ಕುವೆಂಪು ಅವರ ಸಾಹಿತ್ಯದಲ್ಲಿರುವ ಸಾಂಸ್ಕೃತಿಕ ಸಮಸ್ಯೆಗಳಿಗೆ ಅವರ ವ್ಯಕ್ತಿತ್ವದಲ್ಲಿರುವ 'ದ್ವಿದಳ' ವಿಘಟಿತ ಸ್ವರೂಪ ಕಾರಣವಾಗಿದೆ. ಆದ್ದರಿಂದ, 'ಸಾಮಾಜಿಕ ಕುವೆಂಪು' ಮತ್ತು 'ಸಾಹಿತಿ ಅಥವಾ ಕಲಾವಿದ ಕುವೆಂಪು' ಇಬ್ಬರೂ ಸಾಹಿತ್ಯ ಸೃಷ್ಟಿಯಲ್ಲಿ ಪರಸ್ಪರ ಬೇರೆಬೇರೆಯಾಗಿಯೇ ಉಳಿಯುತ್ತಾರೆ ಎಂದು ವಿಶ್ಲೇಷಿಸಿದರು.

ಇದಕ್ಕೆ ಬದಲಾಗಿ ಸಾಹಿತ್ಯದಲ್ಲಿನ ಸಾಹಿತಿಯ ಈ ಸ್ವಯಂಪ್ರತಿನಿಧೀಕರಣವು ಇಂಥ 'ದ್ವಿದಳ' ವಿಘಟಿತ ಸಮಸ್ಯೆಯನ್ನು ಮೀರಿ ಒಂದಾಗಬೇಕು ಮತ್ತು ಸಾಹಿತ್ಯದ ಪ್ರಬಂಧಧ್ವನಿಯಲ್ಲಿ ಇದು ಆವಿರ್ಭಾವವಾಗಬೇಕು ಎಂದು ಪ್ರತಿಪಾದಿಸಿದರು. ಈ ಹಿನ್ನೆಲೆಯಿಂದ ನೋಡುವುದಾದರೆ, ಪಾಶ್ಚಾತ್ಯ ನವ್ಯ ಸಾಹಿತ್ಯದಿಂದ ಹಾಗೂ ಯುರೋಪಿಯನ್ ಸಾಹಿತ್ಯದಿಂದ ನಮ್ಮ ಸಾಹಿತಿಗಳು ಪಡೆದುಕೊಂಡಿರುವ ಪ್ರೇರಣೆಯು ಅವರನ್ನು ನಮ್ಮ ಸಂಸ್ಕೃತಿಗೆ ಕುರುಡಾಗಿರುವಂಥ ಜೀವನದೃಷ್ಟಿಯನ್ನು ರೂಪಿಸಿಕೊಳ್ಳುವುದಕ್ಕೆ ಮುಖ್ಯ ಕಾರಣವಾಗಿದೆ ಎಂದು ಹೇಳಿದರು.

ತೇಜಸ್ವಿ ಅವರು ಅನಂತಮೂರ್ತಿ ಅವರ ಈ ಸಾಹಿತ್ಯ ಚಿಂತನೆ ಅಥವಾ ಸಾಹಿತ್ಯ ತತ್ವಗಳನ್ನು ಸಾರಾಸಗಟಾಗಿ ವಿರೋಧಿಸಿದರು. ಅನಂತಮೂರ್ತಿ ಅವರು, ನವೋದಯ ಸಾಹಿತ್ಯ ಹಾಗೂ ಕುವೆಂಪು ಅವರ ಸಾಹಿತ್ಯದ ಮುಖ್ಯ ತಾತ್ವಿಕ ಪ್ರೇರಣೆಯಾದ 'ಅದ್ವೈತ ತತ್ವ'ವನ್ನು 'ಭೋಳೆತನ' ಎಂದು ಕರೆದಿರುವುದು ಅತ್ಯಂತ ಖಂಡನೀಯ. ಏಕೆಂದರೆ, ಈ ತತ್ವ ಕೇವಲ ಆಧ್ಯಾತ್ಮಿಕ ಸಮಾನತಾವಾದವನ್ನಷ್ಟೇ ಬೋಧಿಸದೆ ಕರ್ನಾಟಕ ಮತ್ತು ಭಾರತೀಯ ಸಾಹಿತ್ಯ, ಸಂಸ್ಕೃತಿ ಸಂದರ್ಭಗಳಲ್ಲಿ 'ಸಾಮಾಜಿಕ ಸಮಾನತಾವಾದ'ವನ್ನು ಮುಖ್ಯ ದೃಷ್ಟಿಕೋನವಾಗಿ ಅಳವಡಿಸಿಕೊಳ್ಳಲು ಪ್ರೇರಣೆಯಾಗಿದೆ. ಇಡೀ ದೇಶದ ಶೂದ್ರಾಂದೋಲನಕ್ಕೆ ಈ ಅದ್ವೈತ ದರ್ಶನವೆ ಬಹುದೊಡ್ಡ ಪ್ರೇರಣೆಯಾಗಿದೆ ಎಂದು ಪ್ರತಿವಿಶ್ಲೇಷಣೆ ಮಾಡಿದರು. ಈ ಸಂದರ್ಭದಲ್ಲಿ ತೇಜಸ್ವಿ ಅವರು, "ಸಾಹಿತ್ಯ ತನ್ನ ಸಾರ್ಥಕ್ಯವನ್ನು ಪಡೆಯುವುದು ತನ್ನ ಪ್ರಾದೇಶೀಕತೆಯಲ್ಲಿ. ತನ್ನ ವೈಯಕ್ತಿಕತೆಯಲ್ಲಿ. ನಿಜಜೀವನದಲ್ಲಿ ಸರ್ವತೋಮುಖವಾಗಿ ಜನರಾಡುವ ಭಾಷೆಯಲ್ಲಿ ಆವಿರ್ಭವಿಸುವುದರಲ್ಲಿ"[೪] ಎನ್ನುವ ಅತ್ಯಂತ ಅರ್ಥಪೂರ್ಣ ತತ್ವವನ್ನು ಮಂಡಿಸಿದರು. ಹಾಗೆಯೇ, ತೇಜಸ್ವಿ ಅವರು 'ಹೊಸದಿಗಂತದೆಡೆಗೆ' ಪ್ರಬಂಧದಲ್ಲಿ ಕೂಡಾ ನವ್ಯ ಸಾಹಿತ್ಯದ ಸ್ವರೂಪ ಹಾಗೂ ಧೋರಣೆ ಕುರಿತು ತಮ್ಮ ತೀವ್ರವಾದ ವಿರೋಧ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರು "ನವ್ಯ ಸಾಹಿತ್ಯ ಸಂಪೂರ್ಣ ನಿಸ್ತೇಜಗೊಂಡಿದೆ. ಬದಲಾಗುತ್ತಿರುವ ಪರಿಸ್ಥಿತಿಗೆ ಪ್ರತಿಸ್ಪಂದಿಸಲು ಅದಕ್ಕೆ ಅಸಾಧ್ಯವಾಗಿದೆ. ಏಕೆಂದರೆ ಮೊದಲನೆಯದಾಗಿ ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಸಿದ್ಧಶೈಲಿ ಮತ್ತು ತಂತ್ರಗಳು. ಎರಡನೆಯದಾಗಿ ಕೇವಲ ಉಪಾಧ್ಯಾಯರಿಂದಲೇ ತುಂಬಿರುವ ಅದರ ಸಾಹಿತಿ ವರ್ಗ. ಮೂರನೆಯದಾಗಿ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡಿರುವ ಅದರ ಕ್ರಾಂತಿಕಾರಕತನ"[೫] ಎಂದು ವಿಶ್ಲೇಷಿಸಿದರು.

ಅನಂತಮೂರ್ತಿ ಅವರು, ಭಾರತೀಯ ಸಂಸ್ಕೃತಿ ಕುರಿತ ತಮ್ಮ ವಿಶಿಷ್ಟ ಪರಿಕಲ್ಪನೆಯ ಮೂಲಕ ನವೋದಯ ಸಾಹಿತ್ಯದ ಸ್ವರೂಪವನ್ನು ಮತ್ತು ನವೋದಯ ಕಾಲಘಟ್ಟದ ಪ್ರಮುಖ ಸಾಹಿತಿಗಳ ಸಾಹಿತ್ಯದ ಸ್ವರೂಪವನ್ನು ಕುರಿತು ವಿಶ್ಲೇಷಣೆ ಮಾಡುವಾಗ, ಪ್ರಧಾನವಾಗಿ ಭಾರತೀಯ ಸಂಸ್ಕೃತಿಯನ್ನು ಕುರಿತು ಆ ಲೇಖಕರು ಹೊಂದಿರುವ ಗ್ರಹಿಕೆಗೆ ಅನುಸಾರವಾಗಿ ಅವರ ಸಾಹಿತ್ಯ ಸಾರ್ಥಕ್ಯವಾಗಿದೆ ಎಂದು ವಿಶ್ಲೇಷಿಸಿದರು. ಆದರೆ ತೇಜಸ್ವಿ ಅವರು, ಕೇವಲ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯವನ್ನಷ್ಟೇ ಅಲ್ಲದೆ, ಸಮಗ್ರ ಕನ್ನಡ

ಸಾಹಿತ್ಯದ ಸ್ವರೂಪವನ್ನು ಕುರಿತು ಅತ್ಯಂತ ವಿಶಿಷ್ಟವೆನ್ನಬಹುದಾದ ತಮ್ಮ ಪ್ರಮೇಯ ಮಂಡಿಸಿದರು. ಇದಕ್ಕೆ ಬಹುಮುಖ್ಯವಾಗಿ, ಕುವೆಂಪು ಸಾಹಿತ್ಯದಲ್ಲಿ ಇರುವ ಸಿಟ್ಟಿಗೆ ಅವರು ಈ ಸಂಸ್ಕೃತಿಯ ಹೊರಗೆ ಹುಟ್ಟಿ ಪ್ರಕೃತಿಗೆ ಹತ್ತಿರವಾಗಿ ಬೆಳೆದವರು; ಎಂದರೆ ಶೂದ್ರ ಸಮುದಾಯಕ್ಕೆ ಸೇರಿದವರು ಎನ್ನುವ ಅರ್ಥದಲ್ಲಿ ಅನಂತಮೂರ್ತಿಯವರು ತಮ್ಮ ಲೇಖನದಲ್ಲಿ ಪ್ರತಿಪಾದಿಸಿದ್ದ ವಿಚಾರವೇ ಮುಖ್ಯವಾದ ಕಾರಣವಾಗಿರುವಂತೆ ತೋರುತ್ತದೆ. ಆದ್ದರಿಂದಲೇ ಈ ಸಿಟ್ಟು ಕೇವಲ ಕುವೆಂಪು ಸಾಹಿತ್ಯದ ಧೋರಣೆ ಅಷ್ಟೇ ಅಲ್ಲ; ಒಟ್ಟಾರೆ ಕನ್ನಡ ಸಾಹಿತ್ಯದ ಮುಖ್ಯವಾದ ಧೋರಣೆ ಕೂಡಾ ಆಗಿದೆ. ಕುವೆಂಪು ಸಾಹಿತ್ಯ ಈ ಧೋರಣೆಯ ಶ್ರೇಷ್ಟ ರೂಪ. ಇದು ಮೂಲತಃ ಕನ್ನಡದ ಆದಿಕವಿ ಪಂಪನಿಂದಲೇ ಆರಂಭವಾಗಿ ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ನಿರಂತರವಾಗಿ ಮುಂದುವರಿದುಕೊಂಡು ಬಂದಿದೆ ಎಂದು ವಿಶ್ಲೇಷಿಸುತ್ತಾ ತೇಜಸ್ವಿ ಅವರು, "ಕನ್ನಡ ಸಾಹಿತ್ಯ ಚರಿತ್ರೆ ಎಂದರೆ, ಸಂಸ್ಕೃತಿ ಚರಿತ್ರೆ ಎಂದರೆ, ಇನ್ನೇನು ಆಗಿರದೆ ಇಡೀ ಶೂದ್ರ ಸಮುದಾಯದ ಮೂಕ ಅನುಭವಗಳು ನಿಧಾನವಾಗಿ ಪ್ರಜ್ಞಾಗಮ್ಯವಾಗುತ್ತ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತ ಬಂದುದರ ಚರಿತ್ರೆ"[೬] ಎಂದು ವ್ಯಾಖ್ಯಾನಿಸಿದರು. ವೈದಿಕ ಅಥವಾ ಬ್ರಾಹ್ಮಣ ವಿರೋಧಿ ಬಂಡಾಯವೇ ಸಮಗ್ರ ಕನ್ನಡ ಸಾಹಿತ್ಯದ ಮುಖ್ಯ ಧೋರಣೆ ಎಂದು ವಿವರಿಸಿದರು.

ಈ ಪ್ರಮೇಯವು ಈಗಾಗಲೇ ಅವರು 'ಪರಂಪರೆ ಮತ್ತು ಕುವೆಂಪು' (೧೯೭೯) ಎನ್ನುವ ತಮ್ಮ ವಿಮರ್ಶಾ ಪ್ರಬಂಧದಲ್ಲಿ ಪ್ರತಿಪಾದಿಸಿದ್ದ ಚಿಂತನೆಯ ವಿಸ್ತೃತವಾದ ಮಂಡನೆಯಾಗಿದೆ. ಇದರಲ್ಲಿ ತೇಜಸ್ವಿ ಅವರು "ಕುವೆಂಪು ಹಿಂದೂ ಧರ್ಮವನ್ನು, ಜಾತಿಪದ್ಧತಿಯನ್ನೂ, ಸಂಪ್ರದಾಯಗಳನ್ನೂ, ತಿರಸ್ಕರಿಸುವ ಸಂದರ್ಭದಲ್ಲೇ ನಾವು ನೋಡಿದರೆ ಅವರು ಪದಾರ್ಪಣ ಮಾಡಿದ ಕನ್ನಡ ಸಾಹಿತ್ಯದ ಪರಂಪರೆಯೊಂದು ನಮಗೆ ಹೊಳೆಯುತ್ತದೆ. ಅದೇ ಆರ್ಯ ಮತ್ತು ವೈದಿಕ ಸಂಸ್ಕೃತಿಯೊಂದರ ವಿರುದ್ಧ ಪ್ರತಿಭಟನೆ. ಪಂಪ, ರನ್ನ, ವೃತ್ತ ವಿಲಾಸ, ವಚನಕಾರರು, ಹರಿಹರ, ರಾಘವಾಂಕ, ಇವರೆಲ್ಲರ ಹಿಂದೆ ಸಾಹಿತ್ಯ ರಚನೆಗೆ ಕೆಲಸ ಮಾಡಿದ ವರ್ಣ ಸಂಘರ್ಷವೇ ಮತ್ತೆ ಚೈತನ್ಯ ಶಕ್ತಿಯಾಗಿ ಸಮಕಾಲೀನ ಸಾಹಿತ್ಯದಲ್ಲೂ ಕೆಲಸ ಮಾಡಿರುವುದನ್ನು ಕಾಣಬಹುದು. ಕನ್ನಡ ಸಾಹಿತ್ಯ ಚರಿತ್ರೆ ಎಂದರೆ ಅದೊಂದು ಮರುಕಳಿಸುವ ಬಂಡಾಯದ ಚರಿತ್ರೆಯೇ ಆಗಿದೆ. ಆಲೋಚನೆ ಚಿಂತನೆ ಕಾವ್ಯಸೃಷ್ಟಿ ಮುಂತಾದವನ್ನೆಲ್ಲಾ ಪರಭಾಷೆಯಲ್ಲಿ ಕಾದಿರಿಸಿಕೊಂಡು ಮುಂದುವರಿಯುತ್ತಾ ಹೋದ ಆರ್ಯ ಸಂಸ್ಕೃತಿ ಒಂದು ಕಡೆ, ಭಾಷೆ ಬರವಣಿಗೆಗಳಿಂದ ವಂಚಿತರಾಗಿ ಶೂದ್ರರೆನ್ನಿಸಿಕೊಂಡು ಅನುಭವಗಳನ್ನು ಗುರುತ್ವಾಕರ್ಷದ ವರ್ತುಳದಲ್ಲಿ ಸಿಕ್ಕಿ ಚರಿತ್ರೆಯನ್ನು ನಿರ್ಮಿಸುತ್ತಾ ಹೋದ ಶೂದ್ರ ಸಮುದಾಯ ಒಂದು ಕಡೆ. ಇವೆರಡಕ್ಕೂ ನಡೆದ ತುಯ್ದಾಟ ಹೊಯ್ದಾಟಗಳೇ ಕನ್ನಡ ಸಾಹಿತ್ಯ ಚರಿತ್ರೆಯ ನಡೆಯನ್ನು ಮುಂದೊತ್ತುತ್ತಾ ಹೋಯಿತು"[೭] ಎಂದು ತರ್ಕಬದ್ಧವಾಗಿ ವ್ಯಾಖ್ಯಾನಿಸುತ್ತಾರೆ.

ಕನ್ನಡ ಸಾಹಿತ್ಯ ಚರಿತ್ರೆ ಕುರಿತ ತೇಜಸ್ವಿ ಅವರ ಈ ವೈದಿಕ ಸಂಸ್ಕೃತಿ ವಿರೋಧಿಯಾದ ಶೂದ್ರ ಪ್ರಜ್ಞೆಯ ಬಂಡಾಯದ ವ್ಯಾಖ್ಯಾನಕ್ಕೆ ವಿರುದ್ಧವಾಗಿ, ಬಿ. ಕೃಷ್ಣಪ್ಪ ಅವರು ಶೂದ್ರ ಸಂಸ್ಕೃತಿ ವಿರೋಧಿಯಾದ ದಲಿತ ಪ್ರಜ್ಞೆಯ ವ್ಯಾಖ್ಯಾನ ಮಾಡಿದರು. ಅವರು ತಮ್ಮ ಪ್ರಬಂಧದಲ್ಲಿ ಕುವೆಂಪು ಕಾದಂಬರಿಗಳು ಮೇಲ್ನೋಟಕ್ಕೆ ವೈದಿಕ ಸಂಸ್ಕೃತಿ ಅಥವಾ ಪುರೋಹಿತಶಾಹಿ ಸಂಸ್ಕೃತಿಯ ವಿರೋಧಿಗಳಾಗಿರುವಂತೆ ತೋರಿದರೂ, ವಾಸ್ತವದಲ್ಲಿ ಅವು ದಲಿತ ವಿರೋಧಿಯಾದ ಶೂದ್ರಶಾಹಿ ಸಂಸ್ಕೃತಿ ಪರ ವಕಾಲತ್ತು ವಹಿಸುವ ಊಳಿಗಮಾನ್ಯಶಾಹಿ ಸಂಸ್ಕೃತಿಯ ಧೋರಣೆಯವುಗಳಾಗಿವೆ ಎಂದು ಕೃತಿನಿಷ್ಠ ಅಥವಾ ವಸ್ತುನಿಷ್ಠ ಕ್ರಮದಲ್ಲಿ ವಿಶ್ಲೇಷಿಸಿದರು. ದಲಿತ ವಿರೋಧಿ ಧೋರಣೆಯು ಕನ್ನಡ ಸಾಹಿತ್ಯದ ಪ್ರಮುಖ ಧೋರಣೆಯಾಗಿಯೇ ಮುಂದುವರೆದುಕೊಂಡು ಬಂದಿದೆ ಎನ್ನುವುದನ್ನು ಕುರಿತು ಪ್ರತಿಪಾದಿಸುತ್ತಾ ಕೃಷ್ಣಪ್ಪ ಅವರು, "ನನ್ನ ಈ ಎಲ್ಲ ವಾದದ ಮೊತ್ತದ ಅಭಿಪ್ರಾಯ ಇಷ್ಟೆ. ಕುವೆಂಪು ಅವರಲ್ಲಿರುವ ಸಂದಿಗ್ಧತೆಗಳು ಮಿತಿಗಳು, ವರ್ಗಹಿತಾಸಕ್ತಿಗಳು ದಲಿತ ಜೀವನ ಚಿತ್ರಣಕ್ಕೆ ಅಥೆಂಟಿಸಿಟಿಯನ್ನೂ, ಸಮತೋಲನವನ್ನೂ ತಂದುಕೊಡದೆ ಹೋಗುತ್ತದೆ. ಈ ಮಾತು ಕೇವಲ ಕುವೆಂಪು ಅವರಿಗೆ ಮಾತ್ರವಲ್ಲ. ಇದುವರೆಗೂ ಕನ್ನಡ ಸಾಹಿತ್ಯದಲ್ಲಿ ದಲಿತೇತರರು, ದಲಿತರನ್ನು ಕುರಿತು ಬರೆದಿರುವ ಎಲ್ಲ ಕೃತಿಗಳಿಗೂ ಅನ್ವಯವಾಗುತ್ತದೆ. ನನ್ನ ಈ ಆರೋಪಕ್ಕೆ ಇತ್ತೀಚಿನ ದಿನಗಳಲ್ಲಿ ವಸ್ತು, ಭಾಷೆ, ಶೈಲಿಗಳ ದೃಷ್ಟಿಯಿಂದ ವಿಶಿಷ್ಟವಾಗಿ ಬೆಳೆಯುತ್ತಿರುವ ದಲಿತರೆ ರಚಿಸುತ್ತಿರುವ ದಲಿತ ಸಾಹಿತ್ಯ ಉತ್ತರವಾಗಿದೆ"[೮] ಎಂದು ವ್ಯಾಖ್ಯಾನಿಸಿದರು.

ಈ ಪ್ರಬಂಧಗಳು ಕೇವಲ ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ ಮತ್ತು ಧೋರಣೆಗಳ ವಿಮರ್ಶೆ ಮಾತ್ರವಲ್ಲದೆ, ಇದುವರೆಗಿನ ಪ್ರಧಾನಧಾರೆಯ ಸಾಹಿತ್ಯಕ್ಕಿಂತ ಭಿನ್ನವಾದ ಹೊಸ ಆಶಯಗಳು, ಹೊಸ ನಿರೂಪಣಾ ವಿಧಾನಗಳು ಹಾಗೂ ಅಭಿವ್ಯಕ್ತಿ ವಿನ್ಯಾಸಗಳನ್ನು ಒಳಗೊಂಡಿರುವ ಹೊಸ ಸ್ವರೂಪದ ಸಾಹಿತ್ಯದ ಅಗತ್ಯವನ್ನು ಪ್ರತಿಪಾದಿಸಿದವು. ಎಲ್ಲಕ್ಕಿಂತ ಮುಖ್ಯವಾಗಿ ಇಂಥ ಹೊಸ ಸಾಹಿತ್ಯವು ಸಮಾಜದ ಅರ್ಥಪೂರ್ಣ ಧ್ವನಿಯಾಗಬೇಕು ಎಂದು ವಿವರಿಸಿದವು. ಈ ಒಟ್ಟು ವಿದ್ಯಮಾನವನ್ನು ತೇಜಸ್ವಿ ಅವರು ನವ್ಯ ಸಾಹಿತ್ಯದ ನಗರಾನುಭವದ ಸಾಂಕೇತಿಕ ಶೈಲಿ ಮಾರ್ಗಕ್ಕೆ ವಿರುದ್ಧವಾಗಿ ಬರೆದ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಕತೆಗಳ ಸ್ವರೂಪ ಕುರಿತು ವಿವರಿಸುವಾಗ ಹೇಳಿರುವ "ಸರಳವಾಗಿ ನೇರವಾಗಿ ನೋಡುವ, ಕೇವಲ ದೃಷ್ಟಿಕೋನವಾಗಿ ಮಾತ್ರ ಸಾಹಿತಿ ಕಥೆಗಳಲ್ಲಿ ವ್ಯಕ್ತವಾಗುವ ಹೊಸದೊಂದು ಶಿಸ್ತನ್ನು ಬರವಣಿಗೆಯಲ್ಲಿ ನಾನು ಅಭ್ಯಾಸ ಮಾಡಬೇಕಾಯ್ತು. ಇದಕ್ಕೆ ನಮ್ಮ ಗ್ರಾಮಗಳಲ್ಲಿ ಕೇವಲ ವೀಕ್ಷಕನಾಗಿ ಮಾತ್ರವೆ ಇರಬೇಕಾಗಿ ಬಂದ ನನ್ನ ಜೀವನ ಸಂದರ್ಭವೂ ಒಂದು ಕಾರಣ. ಆದ್ದರಿಂದ ಕಲಾವಿದನ ಪ್ರಜ್ಞೆಯೊಳಗೇ ವಿಕಾಸವಾಗುವ ಅಥವಾ ಕಲಾವಿದ ಪ್ರಜ್ಞೆಯೇ ಕೇಂದ್ರವಾಗಿರುವ ಅಥವಾ ಸಾಹಿತಿಯೇ ನಾಯಕನಾದ, ಒಂದು ರೀತಿಯ ಆತ್ಮನಿಷ್ಠ ಬರಹಗಾರರಾದ ಯು.ಆರ್. ಅನಂತಮೂರ್ತಿ ಮತ್ತು 'ಗತಿಸ್ಥಿತಿ'ಯ ಗಿರಿ ಒಂದು ಕೊನೆಯಾದರೆ ಈ ಕಥಾ ಸಂಕಲನದ ನಾನು ಇನ್ನೊಂದು ತುದಿ"[೯]

ಎನ್ನುವ ಮಾತುಗಳು ಸ್ಪಷ್ಟವಾಗಿ ನಿರೂಪಿಸುತ್ತವೆ. ಈ ಸಾಹಿತ್ಯವನ್ನು ಸಮಗ್ರವನ್ನು ತ್ಯಜಿಸುವ ಮೂಲಕವೇ ಹೊಸ ಬಗೆಯ ಅರ್ಥಪೂರ್ಣ ಸಾಹಿತ್ಯ ರಚನೆ ಸಾಧ್ಯ ಎಂದು ಪ್ರತಿಪಾದಿಸುತ್ತಾ, "ಆದ್ದರಿಂದಲೇ ಈ ಮಾರ್ಗವನ್ನು ತ್ಯಜಿಸುವುದಷ್ಟೇ ಅಲ್ಲದೆ ಇದರ ಸ್ಫೂರ್ತಿ ಮೂಲಗಳು, ಅಭಿವ್ಯಕ್ತಿ ಪರಿಕರಗಳು, ಇದರ ಮೌಲ್ಯಗಳು ಎಲ್ಲವನ್ನೂ ತ್ಯಜಿಸಿ ರಾಜಕೀಯವಾಗಿ, ಸಾಮಾಜಿಕವಾಗಿ, ತಾತ್ವಿಕವಾಗಿ ಸಮಗ್ರವಾಗಿ ಬದಲಾವಣೆಯಾಗುವುದರಿಂದ ಮಾತ್ರವೇ ಹೊಸ ಸಾಹಿತ್ಯ ಬಂದೀತು. ಹೊಸ ಉಪಮಾನಗಳು, ಹೊಸ ಪದಪುಂಜಗಳು, ಹೊಸ ಅಚ್ಚು ಮಾಡುವ ಕ್ರಮ ಇವುಗಳಿಂದಲ್ಲ"[೧೦] ಎಂದು ವಿಶ್ಲೇಷಿಸಿದರು.

ನವ್ಯೋತ್ತರ ಕಾಲಘಟ್ಟದಲ್ಲಿ ಈ ಪ್ರಬಂಧಗಳು, ನವ್ಯ ಸಾಹಿತ್ಯವೂ ಸೇರಿದಂತೆ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅದರ ಧೋರಣೆಗಳ, ಆಶಯಗಳ ಮತ್ತು ಅಭಿವ್ಯಕ್ತಿ ವಿಧಾನಗಳ ಬಹುರೂಪಿ ನೆಲೆಗಳಲ್ಲಿ ವಿಶ್ಲೇಷಿಸಿದವು. ಅಲ್ಲದೆ ಮುಂದಿನ ಹೊಸ ಸಾಹಿತ್ಯದ ಸ್ವರೂಪ ಹಾಗೂ ತಾತ್ವಿಕತೆಯನ್ನು ಕುರಿತು ಅರ್ಥಪೂರ್ಣವಾದ ಮೀಮಾಂಸೆಗಳನ್ನು ಕಟ್ಟಿದವು. ಇದಕ್ಕೆ ನವ್ಯೋತ್ತರ ಅಥವ ದಲಿತ–ಬಂಡಾಯೋತ್ತರ ಕಾಲಘಟ್ಟದಿಂದ ಸೃಷ್ಟಿಯಾಗಲಾರಂಭಿಸಿ, ಸಮಕಾಲೀನ ಸಂದರ್ಭದಲ್ಲಿ ಹಲವು ಆಯಾಮಗಳನ್ನು ಪಡೆದುಕೊಂಡಿರುವ ಕನ್ನಡ ಸಾಹಿತ್ಯದ ಸ್ವರೂಪವು ಮಹತ್ವದ ನಿದರ್ಶನವಾಗಿದೆ.

೪.೪.೩ ವಿಮರ್ಶೆ ವಾಗ್ವಾದಗಳು

ಈ ಪ್ರಬಂಧಗಳು ಸಾಹಿತ್ಯ ವಿಮರ್ಶೆಯ ಸ್ವರೂಪ, ಉದ್ದೇಶಗಳು, ವಿಧಾನಗಳು, ಹೊಣೆಗಾರಿಕೆಗಳು ಮತ್ತು ಕಾರ್ಯಮಾದರಿಗಳನ್ನು ಕುರಿತು ಹಲವು ಉಪಯುಕ್ತವಾದ ವಿಚಾರಗಳನ್ನು ಪ್ರತಿಪಾದಿಸಿದವು. ಅನಂತಮೂರ್ತಿ ಅವರು ನವೋದಯ ವಿಮರ್ಶೆಯ ತಾತ್ವಿಕ ಪ್ರೇರಣೆಯ ಹಿನ್ನೆಲೆಯಲ್ಲಿ, ಅದು ಜೀವನಾನುಭವ ಶೋಧದ ಸಾಹಿತ್ಯವನ್ನು ವಿಶ್ಲೇಷಿಸಲು ಶಕ್ತವಾಗುವುದಿಲ್ಲ. ಹೀಗಾಗಿ, ಅದು ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ಭಾವುಕ ನಿಲುವು ತಳೆಯುತ್ತದೆ ಎಂದು ವಾದಿಸಿದರು. ಇದಕ್ಕೆ ತೀವ್ರವಾದ ಭಿನ್ನಮತ ವ್ಯಕ್ತಪಡಿಸಿದ ತೇಜಸ್ವಿ ಅವರು ಸಾಹಿತ್ಯ ವಿಮರ್ಶೆಯ 'ನೈತಿಕ ಹೊಣೆಗಾರಿಕೆಯೇ' ಅದನ್ನು ಶ್ರೇಷ್ಠ ಅಥವಾ ಅರ್ಥಪೂರ್ಣ ವಿಮರ್ಶೆಯಾಗಿ ರೂಪಿಸುತ್ತದೆಯೇ ಹೊರತು, ವಿಮರ್ಶಾ ಪ್ರಕಾರದ ವಿಶಿಷ್ಟತೆಯಾಗಲೀ ಅಥವಾ ಅದರ ತಾತ್ವಿಕ ಬದ್ಧತೆಯಾಗಲೀ ಅಲ್ಲವೆಂದು ಪ್ರತಿಪಾದಿಸಿದರು. ಹಾಗೆಯೇ ಕೃಷ್ಣಪ್ಪ ಅವರು, ಸಾಹಿತ್ಯ ವಿಮರ್ಶೆಯಲ್ಲಿ ಅನುಸರಿಸಬೇಕಾಗಿರುವ ಸಾಹಿತ್ಯೇತರ ಸಂಗತಿಗಳ ಪ್ರಾಮುಖ್ಯತೆ ಕುರಿತು ಅರ್ಥಪೂರ್ಣವಾಗಿ ಆನ್ವಯಿಕ ನೆಲೆಯಲ್ಲಿ ವಿಶ್ಲೇಷಿಸಿದರು.

ಅನಂತಮೂರ್ತಿ ಅವರು ನವೋದಯ ಸಾಹಿತ್ಯ ವಿಮರ್ಶೆ ಕುರಿತು "ನಮ್ಮ ಸಂಸ್ಕೃತಿ ಪ್ರೇರೇಪಿಸುವ ಅಪಾಯಕಾರಿ ಪ್ರವೃತ್ತಿಗಳು ನಮ್ಮ ಸಾಹಿತ್ಯ ವಿಮರ್ಶೆಯಲ್ಲೂ ಕಾಣಿಸಿಕೊಳ್ಳುತ್ತವೆ. ನಮ್ಮ ಸಂಸ್ಕೃತಿ ದೊಡ್ಡದೆಂಬ ಅಹಂಕಾರ ನಮ್ಮ ಸಾಹಿತ್ಯವೆಲ್ಲವೂ ಜೀವನವನ್ನು ಉದಾತ್ತಗೊಳಿಸಿ ಆದರ್ಶಗೊಳಿಸಿ ತೋರಿಸಬೇಕೆಂಬ ಅಪೇಕ್ಷೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ"[೧೧]. ಆದ್ದರಿಂದ ಇಂಥ ವಿಮರ್ಶೆ

ಅಪಾಯಕಾರಿಯಾದದ್ದು. ಇದು ಸಂಸ್ಕೃತಿಯ ಬಿಕ್ಕಟ್ಟು ಅಥವಾ ದ್ವಂದ್ವಗಳನ್ನು ಗಮನಿಸುವುದಿಲ್ಲ ಎಂದು ಹೇಳುವ ಮೂಲಕ, ಪ್ರಾಯಶಃ ನವೋದಯ ವಿಮರ್ಶೆಯು ಕುವೆಂಪು ಸಾಹಿತ್ಯದ ಬಗ್ಗೆ ನಿಷ್ಠುರವಾಗಿಲ್ಲ ಎನ್ನುವ ಅರ್ಥದ ಅಭಿಪ್ರಾಯ ವ್ಯಕ್ತಪಡಿಸಿದರು. ಕುವೆಂಪು ಅವರ ವಿಘಟಿತ ವ್ಯಕ್ತಿತ್ವ ಕುರಿತು "ಇವರ ಕಾವ್ಯದಲ್ಲಿ ಶಿಕ್ಷಿತಪ್ರಜ್ಞೆ ಮಾತ್ರ ಕೆಲಸ ಮಾಡುತ್ತದೆ; ಅನುಭವದ ವಿವರಗಳು ಬರುವುದಿಲ್ಲ. ಇವರ ಕಾದಂಬರಿಗಳಲ್ಲಿ ಅನುಭವದ ವಿವರಗಳು ಹೇರಳವಾಗಿ ಬರುತ್ತವೆ; ಆದರೆ ಇವುಗಳನ್ನೆಲ್ಲ ಒಂದು ಸೂತ್ರದಲ್ಲಿ ಹಿಡಿದು ವ್ಯಂಜಿಸುವ ಶಿಕ್ಷಿತಪ್ರಜ್ಞೆಯಿಲ್ಲ"[೧೨]. 'ಮಲೆಗಳಲ್ಲಿ ಮದುಮಗಳೂ' ಕೂಡಾ 'ಸೂತ್ರ ರೂಪದ ಕೇಂದ್ರ ಪ್ರಜ್ಞೆಯಿಲ್ಲದೆ ವಿವರಗಳಲ್ಲಿ ಸೊಕ್ಕಿಬಿಡುತ್ತದೆ' ಎಂದು ವಿಶ್ಲೇಷಿಸಿದರು. ಈ ಚರ್ಚೆಯ ಸಂದರ್ಭದಲ್ಲಿ ಕುವೆಂಪು ಅವರನ್ನು ಕಾರಂತರರೊಂದಿಗೆ ಹೋಲಿಸುತ್ತಾ, "ಕುವೆಂಪು ಕಾರಂತರಿಗಿಂತ ಉತ್ತಮ 'ಕಲಾವಿದರು'; ಆದರೆ ಕಾರಂತರು ಹೆಚ್ಚು ಸೀರಿಯಸ್ ದೃಷ್ಟಿಯುಳ್ಳ ಬರಹಗಾರರು. ಸ್ಪಷ್ಟದೃಷ್ಟಿಕೋನವಿಲ್ಲದ ತನ್ಮಯಶೀಲ ಕುವೆಂಪುರವರ ಪ್ರತಿಭೆ ಅಸ್ತವ್ಯಸ್ತ ಪ್ರಪಂಚವನ್ನು ಸೃಷ್ಟಿಸುತ್ತದೆ; ಆದರೆ ವೈಯಕ್ತಿಕ ದೃಷ್ಟಿಕೋನದ ಪರಿಮಿತ ದರ್ಶನಕ್ಕೆ ಬದ್ಧರಾದ ಕಾರಂತರದು ಖಚಿತವಾದ ಸಾಮಾಜಿಕ ಪ್ರಪಂಚವನ್ನು ಸೃಷ್ಟಿಸುತ್ತಾರೆ"[೧೩] ಎಂದು ವಿಶ್ಲೇಷಿಸಿದರು.

ಅನಂತಮೂರ್ತಿ ಅವರು, ಕುವೆಂಪು ಅವರೊಂದಿಗೆ ಅಡಿಗರ ಕಾವ್ಯವನ್ನು ತೌಲನಿಕವಾಗಿ ಚರ್ಚಿಸುವ ಸಂದರ್ಭದಲ್ಲಿ ಪ್ರಾಯೋಗಿಕ ವಿಮರ್ಶೆಯ ವಿಶ್ಲೇಷಣಾ ವಿಧಾನ ಬಳಸುತ್ತಾರೆ. ಕುವೆಂಪು ಕಾದಂಬರಿಗಳಲ್ಲಿನ ಎರಡು ಭಾಗಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು 'ರೆಟರಿಕ್' ಎಂದು ಗುರುತಿಸುತ್ತಾರೆ. ಅಡಿಗರ ಕಾವ್ಯ ಈ ಎಲ್ಲಾ ಬಿಕ್ಕಟ್ಟುಗಳಿಂದ ಮುಕ್ತವಾಗಿದೆ. ಅವರ ಇತ್ತೀಚಿನ ಧಾರ್ಮಿಕ ಪ್ರಜ್ಞೆಯ ರಿಲಿಜಿಯಸ್ ಕಾವ್ಯ ಕೂಡಾ ಶ್ರೇಷ್ಠ ಕಾವ್ಯವಾಗಿದೆ. ಇದಕ್ಕೆ ಕಾರಣ ಭಾರತೀಯ ಸಂಸ್ಕೃತಿ ಕುರಿತ ಅವರ ಚಿಕಿತ್ಸಕ ಎಚ್ಚರ ಅಥವಾ 'ವೈಯಕ್ತಿಕ ಘಾಟು'. ಹೀಗಾಗಿಯೇ, ಅವರ 'ಕನ್ಸರ್ವೇಟಿಸಂ' ಕೂಡಾ ಸಂಸ್ಕೃತಿ ಕುರಿತ ಬಂಡಾಯವೇ ಆಗಿದೆ ಎಂದು ವ್ಯಾಖ್ಯಾನಿಸುತ್ತಾರೆ.

ಅನಂತಮೂರ್ತಿ ಅವರ ಈ ಎಲ್ಲಾ ನಿಲುವು ಮತ್ತು ಧೋರಣೆಗಳನ್ನು ತೇಜಸ್ವಿ ಅವರು ಬಲವಾಗಿ ವಿರೋಧಿಸುತ್ತಾರೆ. ಅವರ ಪ್ರತಿಯೊಂದು ಅಭಿಪ್ರಾಯಕ್ಕೂ ಮಾರುತ್ತರ ನೀಡುತ್ತಾರೆ. ಈ ಸಂದರ್ಭದಲ್ಲಿ ಅವರು ಹೇಳುವ "ಒಂದು ವಿಮರ್ಶೆ ಮೂಲಭೂತವಾಗಿ ಶ್ರೇಷ್ಠವಾಗುವುದು ಅದರ ತತ್ವವಿಮರ್ಶೆಯಿಂದಲೂ ಅಲ್ಲ ಅಥವಾ ಕೃತಿನಿಷ್ಠ ವಿಮರ್ಶೆಯಿಂದಲೂ ಅಲ್ಲ. ತನ್ನ ಭಾಷೆ ಮತ್ತು ಜನಾಂಗದ ಬಗ್ಗೆ ತನಗಿರಬೇಕಾದ ನೈತಿಕ ಹೊಣೆಗಾರಿಕೆಯನ್ನು ತಾನು ತಿಳಿದಾಗ ಮಾತ್ರ"[೧೪] ಎಂದು ಸಾಹಿತ್ಯ ವಿಮರ್ಶೆಯ ತಾತ್ವಿಕತೆಯ ಸ್ವರೂಪ ಕುರಿತು ವ್ಯಾಖ್ಯಾನಿಸುತ್ತಾರೆ. ಕೃಷ್ಣಪ್ಪ ಅವರು ತಮ್ಮ ಪ್ರಬಂಧಕ್ಕೆ ವ್ಯಕ್ತವಾದ ಪ್ರಶ್ನೆಗಳಿಗೆ ಉತ್ತರ ನೀಡುವಾಗ ಸಹ ಇದೇ ವ್ಯಾಖ್ಯಾನವನ್ನು ಸಮರ್ಥಿಸುವಂತೆ "ಬದುಕಿನ ಬಗ್ಗೆ ಕಾಳಜಿ ವಹಿಸದ ಸಾಹಿತ್ಯ

ಸೃಷ್ಟಿ ಹಾಗೂ ವಿಮರ್ಶೆ ಎರಡೂ ಅಪಾಯಕಾರಿ ಮತ್ತು ಹೊಣೆಗೇಡಿ ಎಂದು ನನ್ನ ಅಭಿಪ್ರಾಯ"[೧೫] ಎಂದು ಹೇಳಿದ್ದಾರೆ.

ಕೃಷ್ಣಪ್ಪ ಅವರ ಪ್ರಬಂಧವು, ನವ್ಯ ಸಾಹಿತ್ಯದ ರೂಪನಿಷ್ಠ ವಿಮರ್ಶಾ ಸಂಪ್ರದಾಯಕ್ಕೆ ವಿರುದ್ಧವಾಗಿ ಆಶಯನಿಷ್ಠ ನೆಲೆಯಿಂದ ಕುವೆಂಪು ಕಾದಂಬರಿಗಳನ್ನು ವಿಮರ್ಶೆ ಮಾಡುವ 'ಸಾಮಾಜಿಕ ವಿಮರ್ಶೆ'ಯನ್ನು ಕನ್ನಡದಲ್ಲಿ ಚಾರಿತ್ರಿಕವಾಗಿ ಹುಟ್ಟುಹಾಕಿದ ಬರಹವಾಗಿದೆ. ಈ ಪ್ರಬಂಧದಲ್ಲಿ ಅವರು ಬಳಸಿದ ವಿಮರ್ಶಾ ವಿಧಾನ ಅತ್ಯಂತ ಅರ್ಥಪೂರ್ಣವಾಗಿದೆ. ಅವರು ಕೃತಿಕಾರ, ಕೃತಿ, ಓದುಗ ಮತ್ತು ಸಮಾಜ ಅಥವಾ ಸಂಸ್ಕೃತಿ ಈ ನಾಲ್ಕೂ ನೆಲೆಗಳಿಂದ ಕುವೆಂಪು ಕಾದಂಬರಿಗಳನ್ನು ವಿಶ್ಲೇಷಿಸಿದರು. ಕೃತಿಕಾರನ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳು ಅವನ ಸಾಹಿತ್ಯದ ತಾತ್ವಿಕತೆಯನ್ನು ನಿರ್ಧರಿಸುವುದರಲ್ಲಿ ವಹಿಸುವ ಪಾತ್ರ ಹಾಗೂ ಕೃತಿಯೊಳಗೆ ಸೃಷ್ಟಿಸುವ ವೈರುಧ್ಯವನ್ನು ಕುರಿತು ಈ ಪ್ರಬಂಧದಲ್ಲಿ ಪರಿಣಾಮಕಾರಿಯಾಗಿ ವಿವರಿಸಿದರು. ಹಾಗೆಯೇ, ಕೃತಿ ವಿಶ್ಲೇಷಣೆಯ ಸಂದರ್ಭದಲ್ಲಿ ಕೃತಿಯೊಳಗಿನ ವಿವರಗಳಿಗೆ ಮತ್ತು ಅವುಗಳು ಕಟ್ಟಿಕೊಡುವ ಆಶಯಕ್ಕೆ ನೀಡಬೇಕಾದ ಮಹತ್ವವನ್ನು ಮನದಟ್ಟು ಮಾಡಿದರು. ಅಲ್ಲದೆ, ಕೃತಿಯ ಅನುಸಂಧಾನದಲ್ಲಿ ಓದುಗನ ಮಹತ್ವವೇನು ಎನ್ನುವುದನ್ನು ಅಥವಾ ಕೃತಿಯ ಅಧ್ಯಯನಕ್ಕಾಗಿ ಓದುಗ ರೂಪಿಸಿಕೊಳ್ಳಬೇಕಾದ ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಕುರಿತು ವಿವರಿಸಿದರು. ಇದರೊಂದಿಗೆ ವಿಮರ್ಶೆ ಹೇಗೆ, ತನ್ನ ಕಾಲದ ಸಾಮಾಜಿಕ ಅಥವಾ ಸಾಂಸ್ಕೃತಿಕ ಆಶೋತ್ತರಗಳನ್ನು ಮಾತ್ರವಲ್ಲದೆ, ಎಲ್ಲ ಕಾಲದ ಜೀವಪರ ಅಥವಾ ಮಾನವಪರ ಆಶೋತ್ತರಗಳನ್ನು ತನ್ನ ತಾತ್ವಿಕ ದರ್ಶನವಾಗಿ ಹೊಂದಬೇಕು ಎನ್ನುವುದನ್ನು ಬಲವಾಗಿ ಪ್ರತಿಪಾದಿಸಿದರು.

ಈ ಪ್ರಬಂಧದಲ್ಲಿ ಕೆಲವು ಮಿತಿಗಳಿದ್ದರೂ ಕೂಡಾ, ಬಹಳ ಮುಖ್ಯವಾಗಿ ಅದು ಕನ್ನಡದ ನವ್ಯೋತ್ತರ ವಿಮರ್ಶೆಯ ಸಾಹಿತ್ಯ ಮತ್ತು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಕೃತಿ ವಿಶ್ಲೇಷಿಸುವ ವಿಧಾನಕ್ಕೆ ಒಂದು ಗಟ್ಟಿಯಾದ ಬುನಾದಿ ಹಾಕಿಕೊಟ್ಟಿತು. ಈ ಪ್ರಬಂಧ ಸಾಹಿತ್ಯ ಸೃಷ್ಟಿ ಕುರಿತು ಎತ್ತಿದ 'ಅಥೆಂಟಿಕ್' ಪ್ರಶ್ನೆಯು ಮುಂದೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಹು ದೊಡ್ಡ ವಾಗ್ವಾದವನ್ನು ಹುಟ್ಟುಹಾಕಿತು. ಇದು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಬಹುಮುಖ್ಯ ಪ್ರಶ್ನೆಯಾಗಿ ಕೂಡಾ ಮಾರ್ಪಟ್ಟಿತು. ಇದರಿಂದ, ಜನ್ಮಮೂಲದ ಮತ್ತು ಜೈವಿಕ ಪ್ರಬೇಧಮೂಲದ ಹಿನ್ನೆಲೆಯ 'ತಮ್ಮ' ಸ್ವಂತಾನುಭವಗಳು ಕಟ್ಟಿಕೊಡುವ 'ಅಂಥೆಟಿಸಿಟಿ' ಮೂಲಕ ಮಾತ್ರವೇ, ನಿಜವಾದ ಸಾಹಿತ್ಯ ಸೃಷ್ಟಿಸಬಹುದು ಮತ್ತು ಇಂಥ ಸಾಹಿತ್ಯವನ್ನು ವಿಮರ್ಶಿಸುವುದಕ್ಕೆ ಕೂಡಾ ಇಂಥದೇ ಪ್ರತ್ಯೇಕವಾದ 'ಅಥೆಂಟಿಕ್' ವಿಮರ್ಶೆಯೇ ಬೇಕಾಗುತ್ತದೆ ಎನ್ನುವ ಕೂಗುಗಳು ಬಲವಾದವು. ಇದು ಒಂದು ಸೀಮಿತ ನೆಲೆಯಲ್ಲಿ ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆಯ ಹುಟ್ಟಿಗೆ ಕೂಡಾ ಪ್ರೇರಣೆಯಾಯಿತು. ಏಕೆಂದರೆ ಈ ಕೂಗಿಗೆ ಒಂದು ಸೀಮಿತ ಪರಿಧಿಯಾಚೆಗೆ ಸಲ್ಲುವ ಪ್ರಸ್ತುತತೆ ಇರಲಿಲ್ಲ. ಹೀಗಾಗಿಯೇ ಇವು ಮುಂದಿನ ದಿನಗಳಲ್ಲಿ ತಮ್ಮ ತಾತ್ವಿಕ ಧೋರಣೆಗಳನ್ನು ಬದಲಿಸಿಕೊಂಡವು.

ಈ ಒಟ್ಟು ಚರ್ಚೆಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ನೆಲೆಯಿಂದ ಗಮನಿಸುವುದಾದರೆ, ಬಹುಮುಖ್ಯವಾಗಿ ಈ ನಾಲ್ಕು ಪ್ರಬಂಧಗಳು ನವ್ಯೋತ್ತರ ಸಂದರ್ಭದಲ್ಲಿ ನವ್ಯದ ರೂಪನಿಷ್ಠ ವಿಮರ್ಶೆಗೆ ವಿರುದ್ಧವಾಗಿ ಹೊಸ ಸಾಹಿತ್ಯ ವಿಮರ್ಶೆ ರೂಪುಗೊಳ್ಳಲು ಮುಖ್ಯ ಪ್ರೇರಣೆಗಳನ್ನು ಒದಗಿಸಿವೆ ಎಂದು ಹೇಳಬಹುದಾಗಿದೆ. ಸಾಹಿತ್ಯ ವಿಮರ್ಶೆಯಲ್ಲಿ ಇವು ಸಾಹಿತ್ಯೇತರ ಸಂಗತಿಗಳ ಆನ್ವಯಿಕತೆ ಮತ್ತು ಅದರ ಬಳಕೆಯ ಔಚಿತ್ಯ ಕುರಿತು ಮುಖ್ಯವಾದ ಪ್ರಶ್ನೆಗಳನ್ನು ಹುಟ್ಟು ಹಾಕಿದವು. ಸಾಹಿತ್ಯ ವಿಮರ್ಶೆಯಲ್ಲಿ ಸಮಾಜ, ಸಂಸ್ಕೃತಿ, ಭಾಷೆ, ರಾಜಕೀಯ ಮತ್ತು ಬದುಕಿನ ಪ್ರಶ್ನೆಗಳನ್ನು ನೈತಿಕ ಹೊಣೆಗಾರಿಕೆಯ ಪ್ರಶ್ನೆಗಳೆಂದು ಭಾವಿಸಬೇಕಾದ ಮಹತ್ವವನ್ನು ಪ್ರತಿಪಾದಿಸಿದವು. ಕೃತಿಕಾರ, ಕೃತಿ, ಸಮಾಜ ಮತ್ತು ಓದುಗನ ಒಟ್ಟಾರೆ ಆಶೋತ್ತರಗಳು ಸಾಹಿತ್ಯ ವಿಮರ್ಶೆಯಲ್ಲಿ ಹದವರಿತು ಉಪಯೋಗಿಸಬೇಕಾದ ಎಚ್ಚರವನ್ನು ಶ್ರುತಪಡಿಸಿದವು. ವಿಮರ್ಶೆಯ ವಿಶ್ಲೇಷಣೆಯಲ್ಲಿ ಸಂಶ್ಲೇಷಣಾ ವಿಧಾನ ಅಥವಾ ಬಹುಶಿಸ್ತು ವಿಶ್ಲೇಷಣಾ ಕ್ರಮದ ಸೂಕ್ತ ಬಳಕೆಯನ್ನು ಕುರಿತು ಕೂಡಾ ಪರಿಶೀಲನೆ ಮಾಡಿದವು. ಬಹಳ ಮುಖ್ಯವಾಗಿ, ವಿಮರ್ಶೆಯ ಕಾರ್ಯಮಾದರಿಗಳಿಗೆ ಸಾಮಾಜಿಕ ಪ್ರಶ್ನೆಗಳು ಹಾಗೂ ವರ್ತಮಾನದ ಬದುಕಿನ ಸಮಸ್ಯೆಗಳು ನೈತಿಕ ಹೊಣೆಗಾರಿಕೆಯ ಪ್ರಶ್ನೆಗಳಾಗಬೇಕೆಂದು ಒತ್ತಾಯಿಸಿದವು. ವಿಮರ್ಶೆ ಎನ್ನುವುದು ಕೇವಲ ನಿರ್ದಿಷ್ಟ 'ಕೃತಿ' ಅಥವಾ 'ಪಠ್ಯ'ದ ಆಶಯ ಅಥವಾ ಆಕೃತಿ ಕುರಿತ ಚರ್ಚೆ ಮತ್ತು ಮೌಲ್ಯಮಾಪನವಷ್ಟೇ ಅಲ್ಲ; ಅದಕ್ಕೂ ಮೀಗಿಲಾಗಿ, ನಿರ್ದಿಷ್ಟ ಭಾಷಿಕ ಮತ್ತು ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿರುವ ಸಮಸ್ತ ಸಾಹಿತ್ಯ ಪರಂಪರೆಯ ಸಾಂಸ್ಕೃತಿಕ ರಾಜಕಾರಣ ಕುರಿತ 'ತಾತ್ವಿಕ ಪರಿಶೋಧನೆ' ಎನ್ನುವುದನ್ನು ಈ ಪ್ರಬಂಧಗಳು ಅತ್ಯಂತ ಸಮರ್ಥವಾಗಿ ಮಂಡಿಸಿದವು.

ಈ ಪ್ರಬಂಧಗಳಿಂದ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಕೆಲವು ಸಮಸ್ಯೆಗಳು ಮತ್ತು ಬಿಕ್ಕಟ್ಟುಗಳು ಸಹ ಎದುರಾದವು. ವಿಮರ್ಶೆಯನ್ನು ಕೇವಲ ಪ್ರಾಯೋಗಿಕ ಆನ್ವಯಿಕತೆಯ ತತ್ವರೂಪ ಅಥವಾ ನಿರೀಕ್ಷಿತ ಉದ್ದೇಶಗಳ ಇಂಗಿತಸಾಧನಾ ಮಾಧ್ಯಮವೆಂದು ಭಾವಿಸಿದ್ದೇ ಇದಕ್ಕೆ ಮುಖ್ಯವಾದ ಕಾರಣವಾಗಿದೆ. ಇಷ್ಟಾದರೂ, ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ವಿಕಾಸಗೊಂಡ ಸಾಂಸ್ಕೃತಿಕ ವಿಮರ್ಶಾ ರೂಪಕ್ಕೆ ಇವು ಮುಖ್ಯವಾದ ಮೀಮಾಂಸಾ ಮೂಲಗಳಾಗಿವೆ ಎನ್ನುವುದು ಅತ್ಯಂತ ಸ್ಪಷ್ಟವಾದ ವಿಚಾರವಾಗಿದೆ.

೪.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಅದರ ಕೆಲವು ಪ್ರಮುಖ ಚಹರೆಗಳ ಮೂಲಕ ಗುರುತಿಸಬಹುದಾಗಿದೆ. ಅವುಗಳೆಂದರೆ, ಅ. ನವ್ಯ ವಿಮರ್ಶಾ ವಿರೋಧಿ ಚಹರೆ ಆ.ದಲಿತ ಮತ್ತು ಬಂಡಾಯ ವಿಮರ್ಶೆಯ ಪರಿಷ್ಕಾರಕ ಚಹರೆ ಇ. ಸಮಾಜವಾದಿ ವಿಮರ್ಶೆ ಚಹರೆ ಈ. ಸ್ತ್ರೀವಾದಿ ಚಿಂತನೆ

ಚಹರೆ ಉ. ಸಾಮಾಜಿಕ ನ್ಯಾಯಸಾಧನೆ ಚಹರೆ ಊ. ಸಾಂಸ್ಕೃತಿಕ ರಾಜಕಾರಣ ಚಹರೆ, ಋ. ನಿರ್ವಸಾಹತೀಕರಣ ಚಿಂತನೆ ಚಹರೆ ೠ. ಆಧುನಿಕೋತ್ತರ ಚಿಂತನೆ ಚಹರೆ ಎ. ನವವಸಾಹತುಶಾಹಿ ಚಿಂತನೆ ಚಹರೆ ಏ. ತೃತೀಯ ಜಗತ್ತಿನ ವಿಮರ್ಶೆ ಚಹರೆ ಮತ್ತು ಐ. ಕನ್ನಡ ಜಗತ್ತಿನ ನಿರ್ವಚನ ಚಹರೆ.

ಇಂಥ ಇನ್ನೂ ಕೆಲವು ಚಹರೆಗಳನ್ನು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳೆಂದು ಗುರುತಿಸಲು ಸಾಧ್ಯವಿದೆ. ಆದರೆ, ಅವು ಇಲ್ಲಿ ಗುರುತಿಸಿರುವ ಚಹರೆಗಳ ರೂಪುರೇಷೆಗಳಾಗಿರುವ ಅಥವಾ ಲಕ್ಷಣಗಳಾಗಿರುವ ಸಾಧ್ಯತೆ ಇದೆ. ಆದ್ದರಿಂದ, ಅವುಗಳನ್ನು ಈ ಮುಖ್ಯ ಚಹರೆಗಳ ಚರ್ಚೆಯ ಸಂದರ್ಭದಲ್ಲಿ ಪರಿಶೀಲಿಸಲಾಗುವುದು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇನ್ನಿತರ ವಿಚಾರಗಳಂತೆ ಈ ಪ್ರಮುಖ ಚಹರೆಗಳೂ ಕೂಡಾ, ಹೊರರೂಪಕ್ಕೆ ಬೇರೆ ಬೇರೆಯಾಗಿಯೂ ಹಾಗೂ ಒಳರೂಪದಲ್ಲಿ ಪರಸ್ಪರ ಸಂಬಂಧ ಉಳ್ಳವುಗಳಾಗಿಯೂ ಇವೆ. ಆದರೂ ಇವುಗಳನ್ನು ಕುರಿತು ಪ್ರತ್ಯೇಕವಾಗಿ ಆಲೋಚಿಸಲು ಸಾಧ್ಯವಿದೆ. ಬಹಳ ಮುಖ್ಯವಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ವಿಶ್ಲೇಷಣೆಯ ದೃಷ್ಟಿಯಿಂದ ಇದು ಅತ್ಯಂತ ಸೂಕ್ತವಾದ ಕ್ರಮವೂ ಸಹ ಆಗಿದೆ. ಆದ್ದರಿಂದ ಇವುಗಳನ್ನು ಕುರಿತು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

೪.೫.೧ ನವ್ಯ ವಿಮರ್ಶಾ ವಿರೋಧಿ ಚಹರೆ

ನವ್ಯೋತ್ತರ ಕಾಲಘಟ್ಟದಲ್ಲಿ ಮುನ್ನೆಲೆಗೆ ಬಂದ ವಿವಿಧ ವಿಮರ್ಶಾ ರೂಪಗಳು ಮುಖ್ಯವಾಗಿ ನವ್ಯ ವಿಮರ್ಶೆಗೆ ತೋರಿಸಿದ ತೀವ್ರವಾದ ವಿರೋಧಗಳೇ ಆಗಿದ್ದವು. ಅದರಲ್ಲೂ ಈಗಾಗಲೇ ಚರ್ಚಿಸಿರುವಂತೆ, ತೇಜಸ್ವಿ ಅವರ 'ಹೊಸದಿಗಂತದೆಡೆಗೆ' ಪ್ರಬಂಧದಲ್ಲಿ ನವ್ಯ ವಿಮರ್ಶೆಯ ಸಂಪೂರ್ಣ ತಿರಸ್ಕಾರ ಹಾಗೂ ಹೊಸ ಸ್ವರೂಪದ ವಿಮರ್ಶೆಯ ಅಗತ್ಯವನ್ನು ಚಾರಿತ್ರಿಕವಾಗಿಯೇ ಪ್ರತಿಪಾದಿಸಲಾಯಿತು. ಹಾಗೆಯೇ ಕೃಷ್ಣಪ್ಪ ಅವರ ಪ್ರಬಂಧ ಸಹ ನವ್ಯದ 'ಪ್ರಾಯೋಗಿಕ' ಮತ್ತು 'ವಸ್ತುನಿಷ್ಠ' ವಿಮರ್ಶಾ ಮಾದರಿಗಿಂತ ಸಂಪೂರ್ಣ ಭಿನ್ನವಾದ ಸಾಮಾಜಿಕ ವಿಮರ್ಶಾ ಮಾದರಿಯ ಬರಹವಾಗಿತ್ತು. ಹಾಗೆ ನೋಡುವುದಾದರೆ, 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಪ್ರಬಂಧದಲ್ಲೂ ಕೂಡಾ, ನವ್ಯದ ಕೃತಿನಿಷ್ಠ ಮಾದರಿಯ ತಾಂತ್ರಿಕ ಪರಿಭಾಷೆ ಹಾಗೂ ವಿಶ್ಲೇಷಣಾ ವಿಧಾನವನ್ನು ಬಳಕೆ ಬಹಳ ಕಡಿಮೆ ಪ್ರಮಾಣದಲ್ಲಿ ಬಳಸಲಾಗಿದೆ. ಆದರೂ, ಭಾರತೀಯ ಸಂಸ್ಕೃತಿ ಸ್ವರೂಪ ಕುರಿತ ಸೀಮಿತ ವ್ಯಾಖ್ಯಾನದ ಮೂಲಕ ಕಟ್ಟಿಕೊಳ್ಳಲಾದ ತಾತ್ವಿಕ ಚೌಕಟ್ಟು ಮತ್ತು ವಿಶ್ಲೇಷಣೆಗಾಗಿ ಬಳಸಲಾದ ಪ್ರಾಯೋಗಿಕ ವಿಮರ್ಶಾ ವಿಧಾನಗಳು ಈ ಪ್ರಬಂಧ ಪ್ರತಿಪಾದಿಸಿದ ಪ್ರಶ್ನಾರ್ಹ ತೀರ್ಮಾನಗಳಿಗೆ ಮುಖ್ಯವಾದ ಕಾರಣಗಳಾಗಿವೆ.

ಎಪ್ಪತ್ತರ ದಶಕದಿಂದ ಕನ್ನಡ ನವ್ಯ ವಿಮರ್ಶೆಯ ವಿಧಾನವನ್ನು ಅದರ ಎಲ್ಲಾ ನೆಲೆಗಳಲ್ಲೂ ಪ್ರಶ್ನಿಸುವ ವಿಮರ್ಶಾ ರೂಪಗಳು ಚಾಲ್ತಿಗೆ ಬಂದವು. ನವ್ಯದ ಕೃತಿನಿಷ್ಠ ಅಥವಾ ಆಕೃತಿನಿಷ್ಠ ವಿಮರ್ಶೆಗೆ ವಿರುದ್ಧವಾಗಿ ಸಮಾಜ, ಸಂಸ್ಕೃತಿ, ಭಾಷೆ ಮತ್ತು ರಾಜಕೀಯ ಪ್ರಶ್ನೆಗಳ ಮೂಲಕ ಪಠ್ಯವನ್ನು ವಿಶ್ಲೇಷಿಸುವ

ವಿಧಾನ ಆರಂಭವಾದವು. ನವ್ಯದ ಅಸಾಮಾಜಿಕ ಹಾಗೂ ಅಚಾರಿತ್ರಿಕ ಧೋರಣೆಗಳಿಗೆ ವಿರುದ್ಧವಾಗಿ ಸಾಹಿತ್ಯ, ಸಮಾಜ ಮತ್ತು ಚರಿತ್ರೆಗಳಿಗಿರುವ ಸಂಕೀರ್ಣ ಸಂಬಂಧ ಕೃತಿ ರಚನೆಯಲ್ಲಿ ವಹಿಸಿರುವ ಮಹತ್ತರ ಪಾತ್ರವನ್ನು ಈಗ ಅತ್ಯಂತವಾದ ಮುಖ್ಯ ಪ್ರಶ್ನೆಯಾಗಿ ಪರಿಗಣಿಸಲಾಯಿತು. ಈ ಕಾಲಘಟ್ಟದಲ್ಲಿ ಎಡಪಂಥೀಯ ವಿಮರ್ಶೆಯ ವಿವಿಧ ರೂಪಗಳು ಪ್ರಸಿದ್ಧಿಗೆ ಬಂದವು. ಇವು ಸಾಹಿತ್ಯ ಕೃತಿಯ ಆಶಯ ಆಕೃತಿಗಳನ್ನು ನಿರ್ಧರಿಸುವುದರಲ್ಲಿ ಸಮಾಜದ ಆರ್ಥಿಕ ಶಕ್ತಿಗಳ ಹಿತಾಸಕ್ತಿಗಳು ವರ್ಗಸ್ವಭಾವ ಅಥವಾ ವರ್ಗನಿಷ್ಠ ನೆಲೆಯಲ್ಲಿ ಬೀರುವ ಪ್ರಭಾವದ ಸ್ವರೂಪವನ್ನು ಕುರಿತು ಹಲವು ವಿನ್ಯಾಸಗಳಲ್ಲಿ ಪರಿಶೋಧನೆ ಮಾಡಿದವು. ಸಮಾಜವಾದ ಮತ್ತು ಮಾರ್ಕ್ಸ್‌ವಾದದ ಪ್ರೇರಣೆಯ ಹಲವು ರೂಪಗಳಾದ ಬಂಡಾಯ ವಿಮರ್ಶೆ, ಸಮಾಜವಾದಿ ವಿಮರ್ಶೆ ಮತ್ತು ಎಡಪಂಥೀಯ ವಿಮರ್ಶೆಗಳು ಈ ದೃಷ್ಟಿಯಿಂದ ಮುಖ್ಯವಾದವು. ಇವು 'ಸಾಮಾಜಿಕ ಪ್ರಜ್ಞೆ', 'ರಾಜಕೀಯ ಪ್ರಜ್ಞೆ', 'ಚರಿತ್ರೆ ಮತ್ತು ಪುರಾಣ ಕುರಿತ ವಿಮರ್ಶಾತ್ಮಕ ಪ್ರಜ್ಞೆ', 'ಮಾನವೀಯತೆಯ ಪ್ರಶ್ನೆ' ಮತ್ತು 'ಬದ್ಧತೆಯ ಪ್ರಶ್ನೆ' ಮೊದಲಾದವುಗಳನ್ನು ಸಾಹಿತ್ಯ ವಿಮರ್ಶೆಯ ವಿಶ್ಲೇಷಣಾ ವಿಧಾನಗಳ ಅತ್ಯಂತ ಮುಖ್ಯವಾದ ವಿಚಾರ ಮಂಡಿಸಿದವು.

ಆನಂತರದ ದಿನಗಳಲ್ಲಿ ಈ ವಿಮರ್ಶಾ ರೂಪಗಳು ವಿಶ್ಲೇಷಣೆಯ ಬಹುತೇಕ ಸಂದರ್ಭಗಳಲ್ಲಿ ಸಾಹಿತ್ಯ ಕೃತಿ ಅಥವಾ ಪಠ್ಯಗಳನ್ನು ಸೈದ್ಧಾಂತಿಕ ವಿಚಾರಧಾರೆಯ ಯಥಾರ್ಥ ಆನ್ವಯಿಕತೆಯ ಆಕರಗಳಾಗಿ ಪರಿಭಾವಿಸಲಾರಂಭಿಸಿದವು. ಈ ಪ್ರವೃತ್ತಿಗೆ ವಿರುದ್ಧವಾಗಿ ಕನ್ನಡ ವಿಮರ್ಶೆಯ ಒಡಲಿನೊಳಗಿಂದ ವ್ಯಕ್ತವಾದ ವಿರೋಧ ಹಾಗೂ ನಡೆದ ಆತ್ಮಾವಲೋಕನವು ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ರೂಪಿಸಲಾರಂಭಿಸಿತು. ಡಿ.ಆರ್. ಅವರು ತಮ್ಮ ಬಹುಪ್ರಿಯ 'ಫ್ರಾಂಕ್‌ಫರ್ಟ್ ಪಂಥ'ದ ವಿಶ್ಲೇಷಣಾ ವಿಧಾನವನ್ನು ತ್ಯಜಿಸಿದರು. ಸಾಹಿತ್ಯ ಮತ್ತು ಸಂಸ್ಕೃತಿಯನ್ನು 'ಕಥನ' ವಿಧಾನದಲ್ಲಿ ತಾತ್ವಿಕವಾಗಿ ಶೋಧಿಸುವ ಮತ್ತು ಕಟ್ಟುವ ಮಹತ್ಕಾರ್ಯಕ್ಕೆ ಮುಂದಾದರು. ತಮ್ಮ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' (೧೯೯೯)ಯಲ್ಲಿ ಕನ್ನಡ ಸಾಹಿತ್ಯವು ಭಾರತೀಯ ತತ್ವಶಾಸ್ತ್ರದ ಮಹತ್ವದ ಪ್ರಾಚೀನ ಪಂಥವಾದ ಶೈವಸಿದ್ಧಾಂತವನ್ನು ಅನುಸಂಧಾನ ಮಾಡುವ ಮೂಲಕ, ಕನ್ನಡದಲ್ಲಿ ವಿಶಿಷ್ಟವಾದ ಕ್ರಮದಲ್ಲಿ ಕಟ್ಟಿರುವ ತತ್ವಶಾಸ್ತ್ರೀಯ ವಾಗ್ವಾದದ ಅದ್ಭುತ ಜಗತ್ತನ್ನು ಅನಾವರಣಗೊಳಿಸಿದರು. ಈ ಜಗಿತ ಪಾಶ್ಚಾತ್ಯ ಪ್ರೇರಣೆಯ ದಟ್ಟ ಪ್ರಭಾವದಿಂದ ಬಿಡಿಸಿಕೊಂಡು ಸ್ಥಳೀಯ ವಿಶ್ವಕ್ಕೆ ಮುಖಮಾಡಿ ನಡೆಸಿದ ಅನುಸಂಧಾನದ ಅರ್ಥಪೂರ್ಣ ಯಾನವಾಗಿದೆ. ಹಾಗೆಯೇ ನವ್ಯ ಸಾಹಿತ್ಯ ಕನ್ನಡಕ್ಕೆ ಐತಿಹಾಸಿಕ ಅಗತ್ಯವಾಗಿ ಬರಲಿಲ್ಲ ಎಂದು ವಾದಿಸಿದ್ದ ಕುರ್ತಕೋಟಿ ಅವರು, ತಮ್ಮ 'ಯುಗಧರ್ಮ ಮತ್ತು ಸಾಹಿತ್ಯ ದರ್ಶನದ' (೧೯೯೨) ಸಾಹಿತ್ಯ ಪರಿಶೀಲನೆಯ ನಿರ್ದಿಷ್ಟ ಚೌಕಟ್ಟಿನಾಚೆಗೆ ಆಸಕ್ತರಾಗುವ ಮೂಲಕ 'ಸಾಹಿತ್ಯ ಸಂಸ್ಕೃತಿ'ಯ ಅವಗಾಹನಾ ವಿಧಾನವನ್ನು ರೂಪಿಸಿಕೊಂಡರು. ಇದೇ ಕಾಲಘಟ್ಟದಲ್ಲಿ ಅನಂತಮೂರ್ತಿ ಅವರೂ 'ಪರಿವರ್ತಿತ ನವ್ಯ'ರಾಗಿ ಸಾಹಿತ್ಯ ವಿಮರ್ಶೆಯಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಸಂಸ್ಕೃತಿ ಪರಿಭಾಷೆಗಳನ್ನು ವಿಪುಲವಾಗಿ ಬಳಸಲಾರಂಭಿಸಿದರು. ಅವರ 'ಪ್ರಜ್ಞೆ ಮತ್ತು

ಪರಿಸರ' (೧೯೭೧), 'ಸಮಕ್ಷಮ' (೧೯೮೦) ಮತ್ತು 'ಪೂರ್ವಾಪರ' (೧೯೯೦) ಮೊದಲಾದವು ಈ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ವಿಮರ್ಶಾ ಕೃತಿಗಳಾಗಿವೆ.

೪.೫.೨ ದಲಿತ ಮತ್ತು ಬಂಡಾಯ ವಿಮರ್ಶೆಯ ಪರಿಷ್ಕಾರಕ ಚಹರೆ

ನವ್ಯೋತ್ತರದ ಎಂಭತ್ತರ ದಶಕದ ಮುಕ್ತಾಯದ ವೇಳೆಗೆ, ಸಾಮಾಜಿಕ ಹಾಗೂ ಆರ್ಥಿಕ ಪ್ರಶ್ನೆಗಳ ಸೈದ್ಧಾಂತಿಕ ವಿಮರ್ಶಾ ಮಾರ್ಗಗಳು ಐಡಿಯಾಜಿಗಳನ್ನು ಕುರಿತ ತಮ್ಮ ಸರಳೀಕೃತ ಗ್ರಹಿಕೆಗಳ ಕಾರಣದಿಂದ ಜಡವಾಗಲಾರಂಭಿಸಿದವು. ಹೀಗೆ ಹೇಳಿದ ಮಾತ್ರಕ್ಕೆ, ಈ ವೇಳೆಗೆ ಮಾರ್ಕ್ಸ್‌ವಾದ ಅಥವಾ ಅಂಬೇಡ್ಕರ್‌ವಾದ ಅಥವಾ ಲೋಹಿಯಾವಾದಗಳು ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಮಹತ್ವ ಕಳೆದುಕೊಂಡು ಸಂಪೂರ್ಣವಾಗಿ ಅಪ್ರಸ್ತುತವಾದವು ಎಂದೇನೂ ಅರ್ಥವಲ್ಲ. ಏಕೆಂದರೆ ಈ ಎಲ್ಲಾ ವಾದಗಳು ಇಂದಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹೊಸಹುಟ್ಟು ಪಡೆದುಕೊಂಡಿರುವುದನ್ನು ಗಮನಿಸಬಹುದು. ಆದರೆ ಎಂಭತ್ತರ ದಶಕದ ವೇಳೆಗೆ ಈ ಸಾಮಾಜಿಕ ಮತ್ತು ಎಡಪಂಥೀಯ ವಿಮರ್ಶೆಯ ರೂಪಗಳು ಪ್ರಧಾನವಾಗಿ ಸಾಹಿತ್ಯದ ವಿಶಿಷ್ಟ ಸ್ವಂತಿಕೆಯನ್ನು, ಅಥವಾ ವಿಮರ್ಶಾತ್ಮಕ ಪರಿಭಾಷೆಯಲ್ಲಿ ಹೇಳುವುದಾದರೆ, ಸಾಹಿತ್ಯಕ ಸ್ವಾಯತ್ತ ಅನನ್ಯತೆಯನ್ನು ಸಾರಾಸಗಟಾಗಿ ಧಿಕ್ಕರಿಸಿದ್ದೇ ಇದಕ್ಕೆ ಮುಖ್ಯ ಕಾರಣ ಎನ್ನಬಹುದು. ಏಕೆಂದರೆ, ಇದು ಬೇಂದ್ರೆಯವರ ಕಾವ್ಯದ ವಿಶ್ಲೇಷಣೆಗೆ ಕೇವಲ 'ದ್ವಂದ್ವಮಾನ ಭೌತವಾದ' ಅಥವಾ 'ಚಾರಿತ್ರಿಕ ಗತಿತಾರ್ಕಿಕವಾದ'ದ ಹಿನ್ನೆಲೆಯಿಂದ ಕಟ್ಟಿಕೊಂಡ ವಿಮರ್ಶಾ ನೋಟಕ್ರಮವಷ್ಟೇ ಸಾಕೇ ಎಂಬ ಪ್ರಶ್ನೆಗೆ ಸಂಬಂಧಿಸಿದ ವಿಚಾರವಾಗಿದೆ. ಬೇಂದ್ರೆ ಅವರ ಕಾವ್ಯದ ಆಶಯ ಮತ್ತು ಆಕೃತಿಗಳು ಕವಿಯ ಜನ್ಮಜಾತ ಹಿನ್ನೆಲೆ, ಬದುಕಿನ ಸಾಮಾಜಿಕ ಮತ್ತು ದೈನಿಕ ಜಾತಿ ವಾಸ್ತವ ಮೊದಲಾದವುಗಳನ್ನು ಮೀರಿ ಹೇಗೆ ಸಾರ್ವತ್ರಿಕ ಅವಸ್ಥೆ ಪಡೆದುಕೊಳ್ಳುತ್ತವೆ ಎನ್ನುವುದನ್ನು ವಿಶ್ಲೇಷಿಸುವುದರಲ್ಲಿ ಇವು ಸಂಪೂರ್ಣ ವಿಫಲವಾದವು. ಆದ್ದರಿಂದಲೇ, ಈಗ 'ಒರಟು' ವಿಮರ್ಶಾ ಮಾದರಿಗಳನ್ನು ತೀವ್ರವಾಗಿ ಪ್ರಶ್ನಿಸಲಾಯಿತು.

ಈ ಮಾದರಿಯ ವಿಮರ್ಶಕರಾದ ಆರ್.ವಿ. ಭಂಡಾರಿ, ವಿಷ್ಣುನಾಯ್ಕ, ಶಿವರಾಮು ಕಾಡನಕುಪ್ಪೆ, ರಮಜಾನ ದರ್ಗಾ, ಎಲ್. ಹನುಮಂತಯ್ಯ ಮತ್ತು ಸಿ. ವೀರಣ್ಣ ಮೊದಲಾದವರು ತಮ್ಮ ವಿಮರ್ಶೆಗೆ ಒಳವಿರೋಧದ ಪ್ರಶ್ನೆಗಳನ್ನು ಹಾಕಿಕೊಳ್ಳಲು ಸೋತುಹೋದರು. ಇದು ಅವರ ವಿಮರ್ಶೆಯು, ಸಾಹಿತ್ಯದ ಮೂಲ ಸ್ವರೂಪ ಹಾಗೂ ಸಮಾಜದ ಸಂಕೀರ್ಣ ವಾಸ್ತವ ಈ ಎರಡರ ನಡುವೆ ಇರುವ ಪರಸ್ಪರ ದ್ವಂದ್ವಾತ್ಮಕ ಸಂಬಂಧದ ನೆಲೆಗಳನ್ನು ಗ್ರಹಿಸುವಲ್ಲಿ ವಿಫಲವಾಗುವುದಕ್ಕೆ ಮುಖ್ಯವಾದ ಕಾರಣವಾಯಿತು. ಆದರೆ, ಇದೇ ಪಂಥದ ಅನೇಕ ವಿಮರ್ಶಕರು ಸಾಹಿತ್ಯ ಮತ್ತು ಸಂಸ್ಕೃತಿ ನಡುವೆ ಇರುವ ಈ ಸೂಕ್ಷ್ಮವಾದ ಮತ್ತು ವೈರುಧ್ಯಾತ್ಮಕವಾದ ಸಂಬಂಧವನ್ನು ಗ್ರಹಿಸಿದರು. ಹೀಗಾಗಿ ಅವರು ತಮ್ಮ ದಲಿತ ಮತ್ತು ಬಂಡಾಯ ವಿಮರ್ಶೆಯ ನಿರ್ದಿಷ್ಟ ಸ್ವರೂಪವನ್ನು ಅರ್ಥಪೂರ್ಣವಾಗಿ ಪರಿಷ್ಕರಿಸಿಕೊಂಡರು ಅಥವಾ ವಿಸ್ತರಿಸಿಕೊಂಡರು. ಅರವಿಂದ ಮಾಲಗತ್ತಿ ಅವರ 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೯), 'ಸಾಹಿತ್ಯ ಸಂಸ್ಕೃತಿ ಮತ್ತು

ದಲಿತ ಪ್ರಜ್ಞೆ' (೨೦೦೩), ಮ.ನ.ಜ. ಅವರ 'ದಲಿತ ವರ್ಗದ ಶರಣ ಶರಣೆಯರು' (೧೯೯೭), ರಹಮತ್ ತರೀಕೆರೆ ಅವರ 'ಕತ್ತಿಯಂಚಿನ ದಾರಿ' (೨೦೦೬) ಕೃತಿಗಳು, ಬರಗೂರು ಮತ್ತು ಜಿ. ರಾಜಶೇಖರ ಮೊದಲಾದವರ ಮಹತ್ವದ ವಿಮರ್ಶಾ ಬರಹಗಳು ಹೀಗೆ ಪರಿಷ್ಕಾರಕ ದಲಿತ-ಬಂಡಾಯ ವಿಮರ್ಶೆಯ ಮಾದರಿಗಳೂ ಹಾಗೂ ಸಾಂಸ್ಕೃತಿಕ ವಿಮರ್ಶೆಯ ವಿಕಸಿತ ರೂಪಗಳೂ ಆಗಿ ಮೂಡಿವೆ.

೪.೫.೩ ಸಮಾಜವಾದಿ ವಿಮರ್ಶಾ ಚಹರೆ

ಕುವೆಂಪು ಮತ್ತು ಲೋಹಿಯಾ ಅವರ ಚಿಂತನೆಗಳ ದಟ್ಟವಾದ ಪ್ರಭಾವ, ಅಂಬೇಡ್ಕರ್ ಮತ್ತು ಮಾರ್ಕ್ಸ್ ಅವರ ವಿಚಾರಗಳ ವಿಮರ್ಶಾತ್ಮಕ ಸ್ವೀಕಾರದಿಂದ ಕನ್ನಡದಲ್ಲಿ ಹೊಸ ಸ್ವರೂಪದ ವಿಮರ್ಶಾ ಕ್ರಮವೊಂದು ಪ್ರಸಿದ್ಧಿಗೆ ಬಂದಿತು. ಇದು ಶುದ್ಧ ಸಾಮಾಜಿಕ ವಿಮರ್ಶೆಯ ಅಥವಾ ಶುದ್ಧ ಎಡಪಂಥೀಯ ವಿಮರ್ಶೆಯ ಸ್ವರೂಪಕ್ಕಿಂತ ಸಾಕಷ್ಟು ಭಿನ್ನವಾದ ಹೊಸ ರೀತಿಯ ವಿಮರ್ಶಾ ವಿಧಾನವಾಗಿದೆ. ಕುವೆಂಪು ಮತ್ತು ಲೋಹಿಯಾ ಅವರು ಭಾರತೀಯ ಸಮಾಜ ಮತ್ತು ಸಂಸ್ಕೃತಿಯ ಸ್ವರೂಪವನ್ನು ಮಾರ್ಕ್ಸ್ ಹಾಗೂ ಅಂಬೇಡ್ಕರ್‌ರವರ ಚಿಂತನೆಗಳಿಗಿಂತ ವಿಶಿಷ್ಟವಾದ ಅರ್ಥಪೂರ್ಣ ಕ್ರಮಗಳಲ್ಲಿ ವಿಶ್ಲೇಷಿಸಿದರು. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ಸಮಾಜವಾದಿ ಚಳವಳಿಯ ಸೈದ್ಧಾಂತಿಕ ವಿಚಾರಧಾರೆ ಕನ್ನಡದಲ್ಲಿ ಸಮಾಜವಾದಿ ವಿಮರ್ಶೆಯ ತಾತ್ವಿಕತೆಯನ್ನು ರೂಪಿಸಿತು.

ಕುವೆಂಪು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ' (೧೯೭೪) ಮತ್ತು ತೇಜಸ್ವಿ ಅವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' (೧೯೭೮) ಪ್ರಬಂಧಗಳಲ್ಲಿ ಇಂಥ ವಿಮರ್ಶೆಯ ಅಗತ್ಯದ ಪ್ರತಿಪಾದನೆ ಇದೆ. ಈ ವಿಮರ್ಶೆಯು ಸಾಹಿತ್ಯ ಕೃತಿಗಳ ಸಾಹಿತ್ಯಕ ಸ್ವಾಯತ್ತತೆಯನ್ನು ನಿರಾಕರಿಸದೆ ಮತ್ತು ಅವುಗಳನ್ನು ಕಲಾಕೃತಿಗಳೆಂದು ಪರಿಗಣಿಸುತ್ತಲೇ ಅವು ಹೇಗೆ ತಾವು ರೂಪುಗೊಂಡಿರುವ ಸಮಾಜ, ಸಂಸ್ಕೃತಿ ಮತ್ತು ಬದುಕಿನ ವಿಮರ್ಶೆಗಳೂ ಆಗಿವೆ ಎನ್ನುವುದನ್ನು ಅತ್ಯಂತ ಮುಖ್ಯ ಪ್ರಶ್ನೆಯಾಗಿ ಪರಿಗಣಿಸುತ್ತದೆ. ಈ ವಿಧಾನವು, ಕೃತಿ ಅಥವಾ ಪಠ್ಯಗಳನ್ನು ಕೇವಲ ಸಾಮಾಜಿಕ ಪ್ರತಿಫಲನದ ರೂಪಗಳೋ ಅಥವಾ ಸಮಾಜವಾದಿ ವಾಸ್ತವತೆಯ ನಿರೂಪಣಾ ಸಾಧನಗಳೋ ಎಂದಷ್ಟೇ ನಂಬುವುದಿಲ್ಲ. ಕೃತಿ ಅಥವಾ ಪಠ್ಯವು ತಾನು ರೂಪಿತವಾಗಿರುವ ಸಮಾಜ ಹಾಗೂ ಸಂಸ್ಕೃತಿಯ ಚಿತ್ರಣ ಕೊಡುವ ಕ್ರಮದಲ್ಲೇ ಅದರ ವಿಮರ್ಶೆಯನ್ನೂ ಮಾಡುತ್ತಿರುತ್ತದೆ. ಇಷ್ಟೇ ಅಲ್ಲದೆ, ತನ್ನ ಆಂತರ್ಯದಲ್ಲಿ ಹೊಸ ಸಂಸ್ಕೃತಿ ಸ್ವರೂಪವೊಂದನ್ನು ಕಟ್ಟುವ ಆಶೋತ್ತರವನ್ನು ಸಹ ಒಳಗೊಂಡಿರುತ್ತದೆ. ಹೀಗಾಗಿ ಸಾಹಿತ್ಯ ಕೃತಿ ಅಥವಾ ಪಠ್ಯವು ಸಾಹಿತ್ಯಕ, ಸಾಮಾಜಿಕ ಮತ್ತು ಆರ್ಥಿಕ ಪ್ರಶ್ನೆಗಳನ್ನು ಪ್ರತ್ಯೇಕ ಕಂಪಾರ್ಟ್‌ಮೆಂಟ್ ರೂಪದಲ್ಲಿ ಒಳಗೊಂಡಿರುವುದಿಲ್ಲ. ಇವೆಲ್ಲವೂ ಅದರೊಳಗೆ ಸಂಶ್ಲೇಷಿತವಾಗಿರುತ್ತವೆ. ಆದ್ದರಿಂದ, ಪಠ್ಯದ ವಿಶ್ಲೇಷಣೆ ಕೂಡಾ ಸಂಶ್ಲೇಷಕ ವಿಧಾನದಲ್ಲಿ ನಡೆಯಬೇಕು ಎನ್ನುವುದು ಕನ್ನಡದಲ್ಲಿ ಪ್ರಸಿದ್ಧಿಗೆ ಬಂದ ಸಮಾಜವಾದಿ ವಿಮರ್ಶೆಯ ಮುಖ್ಯ ಗ್ರಹಿಕೆಯಾಗಿದೆ.

ಈ ವಿಮರ್ಶೆಯನ್ನು ಹಲವು ಭಿನ್ನತೆಗಳ ರೂಪದಲ್ಲಿ ಬೇರೆಬೇರೆ ವಿಮರ್ಶಕರು ಬೆಳೆಸಿದರು. ಮಾರ್ಕ್ಸ್‌ವಾದಿ ಚಿಂತನಾ ನೋಟಕ್ರಮದೊಳಗೇ ಸಮಾಜವಾದಿ ಧೋರಣೆಯನ್ನು ಅಳವಡಿಸಿಕೊಂಡ ಆರಂಭಿಕ ಘಟ್ಟದ ಡಿ.ಆರ್., ಬರಗೂರು ಮತ್ತು ಆರ್ಕೆ. ಮಣಿಪಾಲ ಮೊದಲಾದವರದು ಒಂದು ರೀತಿಯ ಸಮಾಜವಾದಿ ವಿಮರ್ಶಾ ವಿಧಾನವಾಗಿದೆ. ಹಾಗೆಯೇ, ದಲಿತವಾದಿ ದೃಷ್ಟಿಕೋನದ ಚೌಕಟ್ಟಿನೊಳಗೇ ಸಮಾಜವಾದಿ ಆಶಯಗಳನ್ನು ಅಳವಡಿಸಿಕೊಂಡಿರುವ ಮೊಗಳ್ಳಿ, ಬಿ.ಎಂ., ಪುಟ್ಟಯ್ಯ ಮತ್ತು ಮ.ನ.ಜ. ಅವರ ಕ್ರಮ ಇನ್ನೊಂದು ರೀತಿಯ ವಿಧಾನವಾಗಿದೆ. ಪೋಲಂಕಿ ಅವರು ತಮ್ಮ ವಿಮರ್ಶೆ ಹಾಗೂ 'ಸೀತಾಯಣ' (೧೯೮೯)ದಂಥ ಕೃತಿಗಳಲ್ಲಿ ರ್‍ಯಾಡಿಕಲ್ ಎನ್ನಬಹುದಾದ ಸಂಘರ್ಷಾತ್ಮಕ ಸಮಾಜವಾದಿ ವಿಮರ್ಶಾ ರೂಪವೊಂದನ್ನು ಕಟ್ಟುವ ಪ್ರಯತ್ನ ಸಹ ಮಾಡಿದರು. ಕಲ್ಗುಡಿ ಅವರ 'ನಕ್ಷೆ ನಕ್ಷತ್ರ' (೨೦೧೦) ಕೃತಿಯ ಕೆಲವು ಮಹತ್ವದ ಬರಹಗಳು, ಡಿ.ಎಸ್. ನಾಗಭೂಷಣ ಅವರ ವಿಮರ್ಶಾ ಸ್ವರೂಪ ಮತ್ತು ನಟರಾಜ ಹುಳಿಯಾರ್ ಅವರ ವಿಮರ್ಶಾ ವಿಧಾನಗಳು ಸಮಕಾಲೀನ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಯ ಅತ್ಯುತ್ತಮವಾದ ಮಾದರಿಗಳಾಗಿವೆ.

೪.೫.೪ ಸ್ತ್ರೀವಾದಿ ಚಿಂತನೆ ಚಹರೆ

ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯ ಮತ್ತು ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ಪ್ರಭಾವದಿಂದ ಹುಟ್ಟಿದ ಕನ್ನಡ ಸ್ತ್ರೀವಾದಿ ಚಿಂತನೆಯು ನವ್ಯೋತ್ತರ ಕಾಲಘಟ್ಟದ ಎಂಭತ್ತರ ದಶಕದ ವೇಳೆಗೆ ವಿಶಿಷ್ಟವಾದ ವಿಮರ್ಶಾ ಪ್ರಕಾರವೊಂದನ್ನು ರೂಪಿಸಿತು. ಸಾಹಿತ್ಯ ಕೃತಿಗಳನ್ನು ಅಥವಾ ಪಠ್ಯಗಳನ್ನು ಮಹಿಳಾ ದೃಷ್ಟಿಕೋನದಿಂದ ವಿಶ್ಲೇಷಿಸುವ ಮೂಲಕ ಆರಂಭವಾದ ಕನ್ನಡ ಸ್ತ್ರೀವಾದಿ ವಿಮರ್ಶೆ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಚರಿತ್ರೆಯನ್ನು ಕೂಡಾ ಇದೇ ದೃಷ್ಟಿಕೋನಗಳ ಮೂಲಕ ವಿಸ್ತೃತವಾದ ಚರ್ಚೆಗೊಳಪಡಿಸಿತು. ಕನ್ನಡ ಸ್ತ್ರೀವಾದಿ ವಿಮರ್ಶೆಯ ಆರಂಭಿಕ ಘಟ್ಟದಲ್ಲಿ ವಿಮರ್ಶಕರೂ ಕೂಡಾ ಸ್ತ್ರೀವಾದಿ ವಿಮರ್ಶೆಯ ವಿಧಾನವನ್ನು ಉಪಯೋಗಿಸಿದ್ದನ್ನು ಕಾಣಬಹುದು. ಮನು ಚಕ್ರವರ್ತಿ ಮತ್ತು ಕೇಶವಶರ್ಮ ಅವರ ವಿಮರ್ಶೆಗಳಲ್ಲಿ ಇಂಥ ಬೇರೆಬೇರೆ ಮಾದರಿಗಳಿವೆ. ಆದರೆ ಸ್ತ್ರೀವಾದಿ ಚಿಂತನೆಯ ವಿಶಿಷ್ಟತೆಯನ್ನು ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ಬಳಸುವ ಪ್ರಯತ್ನವನ್ನು ಗಂಭೀರವಾದ ನೆಲೆಯಲ್ಲಿ ಮಾಡಿದ ಮೊದಲಿಗರೆಂದರೆ ವಿಜಯಾದಬ್ಬೆ. ಅವರ 'ನಾರಿ–ದಾರಿ–ದಿಗಂತ' (೧೯೯೭) ಕೃತಿ ಈ ದೃಷ್ಟಿಯಿಂದ ಬಹಳ ಮುಖ್ಯವಾದುದು.

ಆರಂಭದಲ್ಲಿ ಕನ್ನಡದ ಸ್ತ್ರೀವಾದಿ ಚಿಂತನೆಯ, ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯ ಮತ್ತು ಸ್ತ್ರೀವಾದಿ ವಿಮರ್ಶಾ ವಿಧಾನಗಳ ವಿವಿಧ ಪರಿಕಲ್ಪನೆಗಳು ಹಾಗೂ ಪರಿಭಾಷೆಗಳನ್ನು ಕನ್ನಡದ ಸಂದರ್ಭಕ್ಕೆ ಅವುಗಳ ಯಥಾವತ್ತಾದ ರೂಪಗಳಲ್ಲೇ ಅನ್ವಯಿಸುತ್ತಾ ಬಂದುದ್ದನ್ನು ಕಾಣಬಹುದು. ಆದರೆ ಮುಂದಿನ ದಿನಗಳಲ್ಲಿ ಕನ್ನಡ ಸ್ತ್ರೀವಾದಿ ವಿಮರ್ಶೆಯು ತನ್ನ ತತ್ವ ಮತ್ತು ಪ್ರಯೋಗಗಳ ವಿಚಾರಗಳಲ್ಲಿ ಸಾಕಷ್ಟು

ಅರ್ಥಪೂರ್ಣವಾದ ಪರಿವರ್ತನೆಗಳನ್ನು ಮಾಡಿಕೊಂಡಿತು. ಈ ವಿದ್ಯಮಾನದ ಒಟ್ಟು ಸ್ವರೂಪ ಕುರಿತು ಡಿ.ಆರ್. ಅವರು ತಮ್ಮ 'ಸಾಹಿತ್ಯ ಕಥನ'ದ (೧೯೯೬), 'ಸ್ತ್ರೀವಾದಿ ಸಾಹಿತ್ಯ ಮೀಮಾಂಸೆಯ ಸ್ವರೂಪ' ಎನ್ನುವ ಲೇಖನದಲ್ಲಿ ಅದ್ಭುತವಾದ ವಿಶ್ಲೇಷಣೆ ಮಾಡಿದರು. ಸ್ತ್ರೀವಾದಿ ಚಿಂತನೆಯ ತಾತ್ವಿಕ ಆಕೃತಿಗಳ ಕ್ರಿಯಾತ್ಮಕತೆಗೆ ಸಂಬಂಧಿಸಿದಂತೆ, ಪಾಶ್ಚಾತ್ಯ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗಳ ನಡುವೆ ಇರುವ ಭಿನ್ನತೆಗಳ ವಿಶಿಷ್ಟ ಸ್ವರೂಪವೇನು ಹಾಗೂ ಇದಕ್ಕಿರುವ ಮುಖ್ಯವಾದ ಕಾರಣಗಳೇನು ಎನ್ನುವುದನ್ನು ಕುರಿತು ಅರ್ಥಪೂರ್ಣವಾದ ವಿಚಾರಗಳನ್ನು ಮಂಡಿಸಿದರು. ಆನಂತರ ಕನ್ನಡ ಸ್ತ್ರೀವಾದಿ ಚಿಂತನೆಯ ದೇಶಿ ಜ್ಞಾನಮೀಮಾಂಸೆಯ ಅನುಭವವನ್ನು ತನ್ನ ವಿವೇಕ ಪ್ರಜ್ಞೆಯಾಗಿ ರೂಢಿಸಿಕೊಳ್ಳುವ ಪ್ರಯತ್ನ ಮಾಡಲಾರಂಭಿಸಿತು. ಈ ಪ್ರಯತ್ನದ ಭಾಗವಾಗಿ ಇಂದು ಕನ್ನಡದಲ್ಲಿ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆ ಸೃಷ್ಟಿಯಾಗುತ್ತಿದೆ. ಹೀಗಾಗಿ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ಚಿಂತನೆಯ ಚಹರೆಗಳು ವ್ಯಾಪಕವಾಗಿ ಕೂಡಿಕೊಂಡಿವೆ. ಸುಮಿತ್ರಾಬಾಯಿ, ಆಶಾದೇವಿ, ತಾರಿಣಿ ಶುಭದಾಯಿನಿ, ಕವಿತಾ ಪಿ.ರೈ, ಎಲ್.ಸಿ. ಸುಮಿತ್ರಾ ಮತ್ತು ಹೆಚ್.ಎಸ್. ಶ್ರೀಮತಿ ಮೊದಲಾದವರು ಈಗ ಸೈದ್ಧಾಂತಿಕ ಸ್ತ್ರೀವಾದ ವಿಮರ್ಶೆ ಬದಲು, ಭಾರತೀಯ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಮಾದರಿಗಳನ್ನು ಸೃಷ್ಟಿಸುತ್ತಿದ್ದಾರೆ. ಇಷ್ಟಾದರೂ ಈ ವಿಧಾನಗಳು ಕಲ್ಗುಡಿ ಅವರ 'ಬೇಂದ್ರೆ ಕಾವ್ಯದಲ್ಲಿ ಪ್ರೇಮ ಆವಿಷ್ಕಾರದ ಸ್ವರೂಪಗಳು' ಎನ್ನುವ ಲೇಖನ ಮತ್ತು ತರೀಕೆರೆ ಅವರ 'ಜನಪದ ಸಾಹಿತ್ಯದಲ್ಲಿ ಸ್ತ್ರೀ ಚೈತನ್ಯದ ನೆಲೆಗಳು' ಎನ್ನುವ ಬರಹ ಒಳಗೊಂಡಿರುವ ಅನುಸಂಧಾನದ ಗ್ರಹಿಕೆಗಳನ್ನು ತನ್ನ ವಿವೇಕಪ್ರಜ್ಞೆಯ ಭಾಗವಾಗಿ ಅಳವಡಿಸಿಕೊಂಡಿದ್ದೇ ಆದರೆ, ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಸಾಹಿತ್ಯ ಮತ್ತು ಸಂಸ್ಕೃತಿ ಪಠ್ಯಗಳ ವಿಶ್ಲೇಷಣೆಗೆ ಮಹತ್ವಪೂರ್ಣವಾದ ಆಯಾಮಗಳು ಒದಗಿದಂತಾಗುತ್ತದೆ.

೪.೫.೫ ಸಾಮಾಜಿಕ ನ್ಯಾಯಸಾಧನೆ ಚಹರೆ

ಸಾಹಿತ್ಯಾಸಕ್ತ ವಸ್ತುಕೇಂದ್ರಿತ ದೃಷ್ಟಿಕೋನವನ್ನು ಬಿಟ್ಟುಕೊಡುವ ಮೂಲಕ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಬೇಕಾದ ಅನಿವಾರ್ಯತೆಯ ಹಿಂದೆ ಕನ್ನಡ ಸಾಹಿತ್ಯ ವಿಮರ್ಶೆಗೆ ಹಲವು ರೀತಿಯ ಜರೂರುಗಳಿದ್ದವು. ಸಾಹಿತ್ಯ ವಿಮರ್ಶೆಯನ್ನು ಸಾಮಾಜಿಕ ನ್ಯಾಯಸಾಧನೆಯ ಪ್ರಬಲವಾದ ಸಾಧನವೆಂದು ಭಾವಿಸಿದ್ದು ಮತ್ತು ಬಳಸಿದ್ದು ಇಂಥಹ ಒಂದು ಮುಖ್ಯವಾದ ಒತ್ತಾಯವಾಗಿದೆ. ಪ್ರಧಾನಧಾರೆಯ ವಿಮರ್ಶೆಗಳು ಓದುಗ ಪಠ್ಯವನ್ನು ಆಸ್ವಾದಿಸುವುದಕ್ಕೆ ಮತ್ತು ಅರ್ಥೈಸಿಕೊಳ್ಳುವುದಕ್ಕೆ ನೆರವಾಗುವ ರೀತಿಯಲ್ಲಿ ಪಠ್ಯದ ಅರ್ಥ ಮತ್ತು ಮಹತ್ವವನ್ನು ವಿವಿಧ ನೆಲೆಗಳಲ್ಲಿ ವಿಶ್ಲೇಷಿಸುವುದನ್ನು ಅತ್ಯಂತ ಮುಖ್ಯವಾದ ಕಾರ್ಯವೆಂದು ಭಾವಿಸಿಕೊಂಡಿದ್ದವು. ಸಹೃದಯ ಅಥವಾ ಓದುಗನಿಗೆ ಪಠ್ಯದ ನಿಜ ಸ್ವರೂಪವನ್ನು ಹಾಗೂ ಅದರ ಅರ್ಥದ ನೆಲೆಗಳನ್ನು ಗ್ರಹಿಸುವುದಕ್ಕೆ ಬೇಕಾದ ಶಕ್ತಿ ಅಥವಾ ತಾಖತ್ತು ಇರುವುದಿಲ್ಲ. ಹೀಗಾಗಿ ಸಾಹಿತ್ಯ ವಿಮರ್ಶಕನನ್ನು ಲೇಖಕ ಮತ್ತು ಓದುಗನ ನಡುವೆ ಅಥವಾ ಕೃತಿಯ ಮತ್ತು ಸಹೃದಯನ ನಡುವೆ

ಇರಬೇಕಾದ ಅನಿವಾರ್ಯವಾದ ಸೇತುವೆ ಎಂದು ನವ್ಯೋತ್ತರ ಕಾಲಘಟ್ಟದವರೆಗೂ ಅಬಾಧಿತವಾಗಿ ನಂಬಿಕೊಂಡು ಬರಲಾಗಿತ್ತು.

ನವ್ಯೋತ್ತರ ಕಾಲಘಟ್ಟದ ಹಲವು ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಹಿತ್ಯಕ ಪ್ರವೃತ್ತಿಗಳು ಸಾಹಿತ್ಯ ವಿಮರ್ಶೆಯಲ್ಲಿ ವಿವಿಧ ಸ್ವರೂಪದ ಸಾಮಾಜಿಕ ನ್ಯಾಯಸಾಧನೆಯ ಪ್ರಶ್ನೆಗಳನ್ನು ಎತ್ತುವುದಕ್ಕೆ ಪ್ರೇರೇಪಣೆ ನೀಡಿದವು. ಸಾಹಿತ್ಯವು ಯಾವುದೇ ಕಾಲದಲ್ಲೂ ತನ್ನ ಸಮಾಜ ಮತ್ತು ಪರಿಸರದ ಸಂಸ್ಕೃತಿ, ಚರಿತ್ರೆ ಹಾಗೂ ಪರಂಪರೆಯ ಪ್ರಶ್ನೆಗಳನ್ನು ಒಳಗೊಂಡಿರುವ ಅಭಿವ್ಯಕ್ತಿ ರೂಪವಾಗಿರುವುದರಿಂದ, ಅದನ್ನು ಸಾಮಾಜಿಕ ನ್ಯಾಯದ ಪ್ರಶ್ನೆಗಳ ಮೂಲಕ ವಿವಿಧ ಆಯಾಮಗಳಲ್ಲಿ ಚರ್ಚಿಸಬೇಕು ಎನ್ನುವ ಧೋರಣೆ ಹೆಚ್ಚಿನ ಮಹತ್ವ ಪಡೆದುಕೊಂಡಿತು. ಈ ಪ್ರವೃತ್ತಿ ದಲಿತ, ಬಂಡಾಯ ಮತ್ತು ಸ್ತ್ರೀವಾದಿ ವಿಮರ್ಶೆಯ ವಿಧಾನಗಳ ಬಹುಮುಖ್ಯ ತಾತ್ವಿಕತೆಯಾಗಿ ಪರಿಗಣಿತವಾಯಿತು. ಪಂಪ, ವಚನ ಚಳವಳಿ, ಭಕ್ತಿ ಮತ್ತು ಅನುಭಾವ ಸಾಹಿತ್ಯದ ಅಧ್ಯಯನದಲ್ಲೂ ಸಾಮಾಜಿಕ ನ್ಯಾಯಾಗ್ರಹ ದೃಷ್ಟಿಕೋನವನ್ನು ವ್ಯಾಪಕವಾಗಿ ಬಳಸಲಾಯಿತು. ಮಾಲಗತ್ತಿ ಅವರ 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೯) ಹಾಗೂ ಮ.ನ.ಜ. ಅವರ 'ಪರಂಪರೆ ಹಾಗೂ ದಲಿತ-ಬಂಡಾಯ ಸಾಹಿತ್ಯ: ಸಮಗ್ರ ಅಧ್ಯಯನ' (೧೯೯೪), ಮೊದಲಾದ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಇಂಥ ಸಾಮಾಜಿಕ ನ್ಯಾಯದ ಪ್ರಶ್ನೆಗಳ ಮೂಲಕ ಆಳವಾದ ಚರ್ಚೆಗೆ ಒಳಪಡಿಸಿದವು. ಹಾಗೆಯೇ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ರೂಪಗಳೂ ಕೂಡಾ ಕನ್ನಡ ಸಾಹಿತ್ಯವನ್ನು ಮಹಿಳಾ ಸ್ವಾತಂತ್ರ್ಯ ಮತ್ತು ಸ್ತ್ರೀಯಾತ್ಮಕ ನ್ಯಾಯಸಾಧನೆಯ ಪ್ರಶ್ನೆಗಳ ಮೂಲಕ ವಿಸ್ತೃತವಾದ ಅನುಸಂಧಾನಕ್ಕೆ ಒಳಪಡಿಸಿದವು. ಹೀಗಾಗಿಯೇ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಜನ್ನನ ಕಾವ್ಯಗಳನ್ನು ಸ್ತ್ರೀವಾದಿ ವ್ಯಾಖ್ಯಾನ ಹಾಗೂ ಆಖ್ಯಾನಗಳ ಅತ್ಯಂತ ಮಹತ್ವದ ಪಠ್ಯಗಳೆಂದು ಪರಿಭಾವಿಸಲಾಗಿದೆ. ಅಕ್ಕನ ವಚನಗಳು ಹಾಗೂ ತಳವರ್ಗಗಳಿಗೆ ಸೇರಿದ ವಿವಿಧ ವಚನಕಾರರ ವಚನಗಳನ್ನು ಸಾಮಾಜಿಕ ನ್ಯಾಯಸಾಧನೆಯ ವರ್ತಮಾನದ ಅಗತ್ಯಕ್ಕೆ ಪೂರಕವಾದ ಅತ್ಯಂತ ಮಹತ್ವದ ಆಕರಗಳಾಗಿ ಹಾಗೂ ಪಠ್ಯಗಳಾಗಿ ಬಳಸಲಾಗುತ್ತಿದೆ. ಪರಂಪರಾಗತವಾದ ಶ್ರೇಣೀಕೃತ ಸಾಮಾಜಿಕ ಮತ್ತು ಸಾಂಸ್ಕೃತಿಕ ತಾರತಮ್ಯಗಳ ಬಹುರೂಪಿ ಅಸಮಾನತೆಗಳ ಹಾಗೂ ದಮನಗಳ ನಿರ್ಮೂಲನದ ಮಹತ್ವಪೂರ್ಣ ಸಾಧನವಾಗಿರುವ 'ಸೋಶಿಯಲ್ ಇಂಜಿನಿಯರಿಂಗ್' ಪ್ರಕ್ರಿಯೆಯು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ನ್ಯಾಯಸಾಧನೆ ಚಹರೆಯ ಪ್ರಮುಖ ಸ್ವರೂಪವಾಗಿದೆ.

೪.೫.೬ ಸಾಂಸ್ಕೃತಿಕ ರಾಜಕಾರಣ ಚಹರೆ

ವರ್ಣ, ವರ್ಗ, ಜಾತಿ ಮತ್ತು ಲಿಂಗ ಅಸಮಾನತೆಗಳನ್ನು ಆಧರಿಸಿದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ಬೆನ್ನೆಲುಬಾಗಿ ಹೊಂದಿರುವ ಭಾರತವು, ಈ ಕಾರಣದಿಂದಲೇ ಬಹುರೂಪಿಯಾದ ಸಾಂಸ್ಕೃತಿಕ ಅಸಮಾನತೆಗಳನ್ನು ಕೂಡಾ ಹುಟ್ಟುಹಾಕಿದೆ. ಇದು ಸಮಕಾಲೀನ ಆಧುನಿಕೋತ್ತರ ಸಂದರ್ಭಗಳಲ್ಲಿ ಇನ್ನಷ್ಟು

ಸಂಕೀರ್ಣವಾದ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ವರ್ಣ ವ್ಯವಸ್ಥೆಯು ವರ್ಗ ವ್ಯವಸ್ಥೆಯನ್ನು, ವರ್ಗ ವ್ಯವಸ್ಥೆಯು ಜಾತಿ ವ್ಯವಸ್ಥೆಯನ್ನು ಮತ್ತು ಇವೆಲ್ಲವೂ ಒಗ್ಗೂಡಿ ಲಿಂಗಾಧಾರಿತ ತಾರತಮ್ಯವನ್ನು ಪರಸ್ಪರ ಸಂರಕ್ಷಿಸುವ ಹಾಗೂ ಸಂವರ್ಧಿಸುವ ಪ್ರಯತ್ನದಲ್ಲಿ ತೀವ್ರವಾಗಿ ತೊಡಗಿವೆ.

ಸ್ವಾತಂತ್ರ್ಯಾನಂತರ ಸಾಮಾಜಿಕ ಮತ್ತು ರಾಜಕೀಯ ನೆಲೆಗಳಲ್ಲಿ ಮಹತ್ತರವಾದ ಪಲ್ಲಟಗಳು ಉಂಟಾದವು. ಇವು ಚಾರಿತ್ರಿಕವಾಗಿ, ದೇಶದ ಎಲ್ಲಾ ಭೌತಿಕ ಹಾಗೂ ಬೌದ್ಧಿಕ ಜ್ಞಾನಸಂಪತ್ತಿಗೆ ವಾರಸುದಾರರಾದ ವರ್ಗಗಳಿಗೆ ಹಲವು ಗಂಭೀರವಾದ ಪ್ರತಿರೋಧಗಳನ್ನು ಒಡ್ಡಿದವು. ಇದಕ್ಕೆ ಪರ್ಯಾಯವಾಗಿ ಇಂಥ ವರ್ಗಗಳು ಸ್ವರಕ್ಷಣಾತ್ಮಕ ಉದ್ದೇಶಗಳು ಮತ್ತು ಕಾರ್ಯತಂತ್ರಗಳನ್ನು ಮುಖ್ಯ ಗುರಿಯಾಗಿ ಹೊಂದಿರುವ ಹಲವು ಬಗೆಯ ಪುನರುತ್ಥಾನವಾದಿ ಸಾಂಸ್ಕೃತಿಕ ರಾಜಕಾರಣ ಮೀಮಾಂಸೆಗಳನ್ನು ಕಟ್ಟಲಾರಂಭಿಸಿದವು. ಈ ವಿದ್ಯಮಾನಕ್ಕೆ ವಿರುದ್ಧವಾಗಿ ಎಚ್ಚೆತ್ತ ಶೂದ್ರ, ದಲಿತ, ಮಹಿಳಾ ಹಾಗೂ ವಿವಿಧ ನಿರ್ಲಕ್ಷಿತ ಸಮುದಾಯಗಳು ತಮ್ಮ ತಮ್ಮ ಪರಂಪರೆಗಳ ಅಸ್ಮಿತೆಗಳ ಹುಡುಕಾಟ ಅನನ್ಯತೆಗಳ, ನಿರ್ವಚನ ಹಾಗೂ ಸಾಂಸ್ಕೃತಿಕ ಆಕೃತಿಗಳ ನಿರ್ಮಾಣದ ಉದ್ದೇಶಗಳನ್ನು ಪ್ರಧಾನ ಕಾಳಜಿಯಾಗಿ ಹೊಂದಿರುವ ಪ್ರತಿಸಾಂಸ್ಕೃತಿಕ ರಾಜಕಾರಣ ಮೀಮಾಂಸೆಗಳನ್ನು ರೂಪಿಸಲಾರಂಭಿಸಿದವು. ಇವು ಸಮಾಜ, ರಾಜಕೀಯ ಮತ್ತು ಸಂಸ್ಕೃತಿ ನಿರ್ಮಾಣದ ಉದ್ದೇಶಗಳಿಗೆ ಸಂಬಂಧಿಸಿದ ಪಟ್ಟಭದ್ರ ಹಿತಾಸಕ್ತಿಗಳ ಪ್ರಗತಿ ವಿರೋಧಿ ಆಶಯಗಳನ್ನು ಹಾಗೂ ಜನಪರ ಹಿತಾಸಕ್ತಿಗಳ ಪ್ರಗತಿಪರ ಆಶಯಗಳನ್ನು ಒಳಗೊಂಡಿವೆ. ಹೀಗಾಗಿ ಇವು ಪರಸ್ಪರ ದ್ವಂದ್ವಾತ್ಮಕವಾಗಿವೆ ಹಾಗೂ ಸಂಘರ್ಷಾತ್ಮಕವಾಗಿವೆ. ಈ ಸಂಕೀರ್ಣ ಸನ್ನಿವೇಶದಿಂದ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಬಲಪಂಥೀಯ, ಎಡಪಂಥೀಯ, ದಲಿತೀಯ, ಮಹಿಳಾಪರ ಮೀಮಾಂಸೆಗಳನ್ನು ಕಟ್ಟುವುದಕ್ಕಾಗಿ ಪಠ್ಯಗಳನ್ನು ಕೇವಲ ಆಕರಗಳಾಗಿ ಮಾತ್ರ ಬಳಸಿಕೊಳ್ಳುವ ಪ್ರವೃತ್ತಿ ತೀವ್ರವಾಗುತ್ತಿದೆ. ಇದರಿಂದ ಸಾಹಿತ್ಯ ವಿಮರ್ಶೆಯ ಚಟುವಟಿಕೆಯು ವರ್ಗ, ಜಾತಿ, ಧರ್ಮ ಮತ್ತು ಮತ ಮೊದಲಾದವುಗಳನ್ನು ವಿವಿಧ ಹಿತಾಸಕ್ತಿಗಳಿಗನುಸಾರವಾಗಿ ವಿಶ್ಲೇಷಿಸುವ ಸಾಧನ ಕೂಡಾ ಆಗಿ ಮಾರ್ಪಟ್ಟಿದೆ. ಇದು ಸಾಹಿತ್ಯ ವಿಮರ್ಶೆಯನ್ನು ಬಹುತೇಕ ಅರ್ಥಹೀನ ರಾಜಕೀಯ ಚಟುವಟಿಕೆಯಾಗಿ ರೂಪಿಸಿದೆ ಎನ್ನುವುದಕ್ಕೆ ಸಮಕಾಲೀನ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹೆಸರಿನಲ್ಲಿ ಬರುತ್ತಿರುವ ಹಲವು ರೀತಿಯ ಟೊಳ್ಳು ಮತ್ತು ಸುಳ್ಳು ವಿಮರ್ಶೆಗಳು ಮುಖ್ಯ ನಿದರ್ಶನಗಳಾಗಿವೆ.

೪.೫.೭ ನಿರ್ವಸಾಹತೀಕರಣ ಚಿಂತನೆ ಚಹರೆ

ವಸಾಹತೋತ್ತರ ಕಾಲಘಟ್ಟದಲ್ಲಿ ಆರಂಭವಾದ ವಸಾಹತುಶಾಹಿ ಪರಿಣಾಮ ಕುರಿತ ಚಿಂತನೆಯ ಹಲವು ಧಾರೆಗಳು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮುಖ್ಯ ಚಹರೆಗಳಾಗಿವೆ. ಪೌರಾತ್ಯವಾದ ಮತ್ತು ದೇಶಿವಾದಗಳು ಇಂಥ ಎರಡು ಪ್ರಮುಖ ಧಾರೆಗಳು. ಇವುಗಳನ್ನು 'ನಿರ್ವಸಾಹತೀಕರಣ ಚಿಂತನೆ'ಗಳೆಂಬ ಸಾಮಾನ್ಯ ಪರಿಭಾಷೆ ಮೂಲಕ ಗುರುತಿಸಲಾಗುತ್ತದೆ.

ವಸಾಹತುಶಾಹಿ ಭೌತಿಕವಾಗಿ ಮಾಡಿರುವ ಹಾನಿಗಿಂತಲೂ ಮಾನಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಾಡಿರುವ ನಷ್ಟ ಅತ್ಯಂತ ತೀವ್ರವಾದದ್ದು ಎಂದು ನಿರ್ವಸಾಹತೀಕರಣ ಚಿಂತನೆ ಭಾವಿಸುತ್ತದೆ. ಭಾರತದ ಅನಾಧುನಿಕ ಸಮಾಜವು ವಿಶಿಷ್ಟವಾದ ಸಾಂಸ್ಕೃತಿಕ ಹಾಗೂ ಬೌದ್ಧಿಕ ಸಾಮರ್ಥ್ಯವುಳ್ಳದ್ದಾಗಿತ್ತು. ಇವೆಲ್ಲವುಗಳನ್ನು ವಸಾಹತುಶಾಹಿ ಸಂಕಥನ ಸುಳ್ಳು ಮತ್ತು ಹುಸಿ ಎಂದು ನಂಬಿಸಿತು. ಇದರ ವಿರುದ್ಧ ನಾವಿಂದು ತೀವ್ರವಾಗಿ ಮರುಚಿಂತಿಸಬೇಕಿದೆ. ನಮ್ಮ ಅಧಿಕಾರ ಕೇಂದ್ರಗಳಿಗೆ ಹಾಗೂ ಜ್ಞಾನ ನಿರ್ಮಾಣ ಸಂಸ್ಥೆಗಳಿಗೆ ಕವಿದಿರುವ ಮಂಕಿನ ವಿರುದ್ಧ ಸ್ವಯಂ ಜಾಗ್ರತರಾಗಬೇಕಿದೆ ಎನ್ನುವ ಚಿಂತನೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಚಹರೆಯಾಗಿದೆ. ಇದು ಸಾಹಿತ್ಯ, ಸಮಾಜ, ಸಂಸ್ಕೃತಿ, ಭಾಷೆ ಮತ್ತು ಮತಾಚರಣೆಗಳನ್ನು ಹೊಸ ಪ್ರಜ್ಞೆಯಲ್ಲಿ ಪರಿಶೋಧಿಸಬೇಕು ಎನ್ನುವ ಉದ್ದೇಶದಿಂದ ಕೂಡಿದೆ. ಇಷ್ಟೇ ಅಲ್ಲದೆ ಇದು ಗತವೆಲ್ಲವೂ ಮತ್ತು ನಮ್ಮದೆಲ್ಲವೂ ಶ್ರೇಷ್ಠ ಎನ್ನುವ ದೇಶಿ ಪುನರುತ್ಥಾನವಾದಿ ಧೋರಣೆಯನ್ನು ಒಪ್ಪದ ಹಾಗೂ ವಸಾಹತುಶಾಹಿ ಸಂಪೂರ್ಣವಾಗಿ ಕೆಡುಕನ್ನೇ ಬಿತ್ತಿ ಬೆಳೆಯಿತು ಎನ್ನುವುದನ್ನು ನಂಬದ 'ಮಧ್ಯಮ ಮಾರ್ಗ'ದ ಚಿಂತನಾವಿಧಾನ ಕೂಡಾ ಆಗಿದೆ.

ಈ ಚಿಂತನೆಯು ಕನ್ನಡದಲ್ಲಿ ಡಿ.ಆರ್. ಅವರ 'ವಿಸ್ಮೃತಿ' ಪರಿಕಲ್ಪನೆ ಮೂಲಕ ವಿಸ್ತಾರವಾದ ನೆಲೆ ಪಡೆದುಕೊಂಡಿತು. ಇದಕ್ಕೆ ಮುಂಚೆ ಕೆ.ವಿ.ಎನ್. ಅವರು ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಪಾಶ್ಚಾತ್ಯ ವಿಮರ್ಶಾ ಮಾದರಿಗಳ ನೇರವಾದ ಹಾಗೂ ವ್ಯಾಪಕವಾದ ಅನ್ವಯಿಸುವಿಕೆಯ ಧೋರಣೆಗಳನ್ನು ವಿರೋಧಿಸಿ ಬರೆದ 'ಕನ್ನಡಿಗಳು ಇನ್ನು ಸಾಕು' ಎನ್ನುವ ಲೇಖನ ಕೂಡಾ ಇನ್ನೊಂದು ಆಯಾಮದಲ್ಲಿ ಇಂಥ ನಿರ್ವಸಾಹತೀಕರಣ ಚಿಂತನೆಯನ್ನೇ ಒಳಗೊಂಡಿತ್ತು. ಇದನ್ನು ಕನ್ನಡ ವಿಮರ್ಶೆಯನ್ನು ನಿರ್ವಸಾಹತೀಕರಣಗೊಳಿಸುವ ಪ್ರಯತ್ನವೆಂದು ಗುರುತಿಸಬಹುದು.

ವಿಸ್ಮೃತಿ ಪರಿಕಲ್ಪನೆಯ ಪ್ರೇರಣೆಯಿಂದ ಆರಂಭವಾದ ನಿರ್ವಸಾಹತೀಕರಣ ಆಲೋಚನಾ ವಿಧಾನವು ದೇಶಿ ಅನುಸಂಧಾನದ ಸಾಧನವಾಗಿ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಕ್ರಿಯಾತ್ಮಕವಾಗಿದೆ. ರಾಜೇಂದ್ರ ಚೆನ್ನಿ ಅವರ 'ನಡುಹಗಲಿನಲ್ಲಿ ಕಂದೀಲುಗಳು' (೨೦೦೪), 'ಅಮೂರ್ತತೆ ಮತ್ತು ಪರಿಸರ' (೨೦೦೩), ಅನಂತಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' (೧೯೭೧), 'ಪೂರ್ವಾಪರ' (೧೯೯೦), 'ಸಮಕ್ಷಮ' (೧೯೮೦), 'ಸನ್ನಿವೇಶ' (೧೯೭೪) ಮತ್ತು ಬೆತ್ತಲೆ ಪೂಜೆ ಯಾಕೆ ಕೂಡದು?' (೧೯೯೬), ಮೊದಲಾದ ಕೃತಿಗಳು ಮತ್ತು ಕೆ.ವಿ. ಸುಬ್ಬಣ್ಣ ಅವರ 'ನಮ್ಮ ತವಕ ತಲ್ಲಣಗಳು' (೧೯೯೫) ಮೊದಲಾದವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ನಿರ್ವಸಾಹತೀಕರಣ ಚಹರೆಗೆ ಉತ್ತಮ ಉದಾಹರಣೆಗಳು.

೪.೫.೮ ಆಧುನಿಕೋತ್ತರ ಚಿಂತನೆ ಚಹರೆ

ಯುರೋಅಮೇರಿಕನ್ ತತ್ವವಾದಗಳ ಪೈಕಿ ಅತ್ಯಂತ ಪ್ರಭಾವಶಾಲಿಯಾದ ವಾದವೆಂದರೆ ಸಮಕಾಲೀನ ಆಧುನಿಕೋತ್ತರ ಪ್ರಸ್ಥಾನ. ಹಾಗೆ ನೋಡಿದರೆ, ಇದನ್ನು ಏಕ ತತ್ವವಾದವೆಂದು ಗುರುತಿಸಲೂ

ಆಗದಷ್ಟು ಬಹು ತತ್ವವಾದಗಳಿಂದ ಕೂಡಿರುವ ವಿಶಿಷ್ಟ ಪ್ರಸ್ಥಾನವಾಗಿದೆ. ಸಾಹಿತ್ಯ, ಸಂಗೀತ, ಕಲೆ, ಚಿತ್ರಕಲೆ, ಸಿನಿಮಾ, ವಾಸ್ತುಶಿಲ್ಪ ಮತ್ತು ವಿಮರ್ಶೆ ಮೊದಲಾದ ಜ್ಞಾನಶಿಸ್ತುಗಳ ಚಿಂತನೆಗಳಿಂದ ಕೂಡಿದೆ. ಹಾಗೆಯೇ ಇವುಗಳ ಮೇಲಷ್ಟೇ ಅಲ್ಲದೆ, ಇನ್ನಿತರ ಜ್ಞಾನರೂಪಗಳು ಹಾಗೂ ಚಿಂತನಾ ವಿಧಾನಗಳ ಮೇಲೂ ತನ್ನ ದಟ್ಟವಾದ ಪ್ರಭಾವ ಬೀರುತ್ತಿದೆ.

ಬಹಳ ಮುಖ್ಯವಾಗಿ, ಆಧುನಿಕೋತ್ತರ ಚಿಂತನೆಯು ಪರಸ್ಪರ ಆಕರ್ಷಣೆ ಮತ್ತು ವಿಕರ್ಷಣೆಗಳಿಂದ ಕೂಡಿದ ದ್ವಂದ್ವಾತ್ಮಕ ಸ್ವರೂಪಿಯಾಗಿದೆ. ಕೇವಲ ಇದರ ತಾತ್ವಿಕ ಚಿಂತನೆಯ ಅಥವಾ ತರ್ಕದ ನೆಲೆಯ ಸ್ವರೂಪ ಕುರಿತು ಮಾತ್ರವೇ ಹೇಳುವುದಾದರೆ ಇದನ್ನು ಒಂದು ಅತ್ಯುತ್ತಮವಾದ ಚಿಂತನಾ ಪ್ರಸ್ಥಾನವೆಂದು ಕರೆಯಬಹುದು. ಇದು, 'ಎಲ್ಲವೂ ಮುಖ್ಯ ಮತ್ತು ಯಾವುದೂ ಅಮುಖ್ಯವಲ್ಲ', ಎನ್ನುವ 'ಅನೇಕಾಂತವಾದ' ಅಥವಾ 'ಸರ್ವಸಮಾನತಾವಾದ'ವನ್ನು ಮಂಡಿಸುತ್ತಿರುವಂತೆ ತೋರುತ್ತದೆ. ಆದರೆ ಇದೇ ಸಂದರ್ಭದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಮಾನವ ಸಮಾಜದ ಮಹಾನ್ ಪರಿವರ್ತನೆಗಳಿಗೆ ಮತ್ತು ಸುಧಾರಣೆಗಳಿಗೆ ಕಾರಣವಾಗಿರುವ ಅನೇಕ ಚಿಂತನೆಗಳು, ಜ್ಞಾನರೂಪಗಳು, ಸಾಮಾಜಿಕ, ವೈಜ್ಞಾನಿಕ ಮತ್ತು ಭಾಷಿಕ ಆಕೃತಿಗಳನ್ನು ಅತ್ಯಂತ ನಿರ್ದಯವಾಗಿ ನಿರಾಕರಿಸುತ್ತದೆ. ಅದರ ಈ ನೆಲೆಯಿಂದ ನೋಡುವುದಾದರೆ, ಈ ಚಿಂತನೆ ಅತ್ಯಂತ 'ಇರ್ರ್ಯಾಷನಲಿಸ್ಟ್' ಚಿಂತನೆ ಕೂಡಾ ಆಗಿದೆ. ಪಾಶ್ಚಾತ್ಯ ಸಂದರ್ಭದಲ್ಲಿ ಇದು ಮಧ್ಯಕಾಲೀನ ಸಮಾಜದ ಪುನರುಜ್ಜೀವನ ಪೂರ್ವ ಯುಗದ ಯುರೋಪಿನ ಸ್ಥಿತಿಯನ್ನು ಸಮಕಾಲೀನ ಸಂದರ್ಭದ ಅಗತ್ಯ ಸಂಗತಿಯಾಗಿ ಪ್ರತಿಪಾದಿಸುವಂತೆ ಕಾಣುತ್ತದೆ.

ಈ ದೃಷ್ಟಿಯಿಂದ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಪಾಶ್ಚಾತ್ಯ ಆಧುನಿಕೋತ್ತರ ಚಿಂತನೆಯ ಮೂಲರೂಪದ ಚಹರೆ ಮತ್ತು ಇಲ್ಲಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದ ಹಿನ್ನೆಲೆಗನುಸಾರವಾದ ವಿಮರ್ಶಾತ್ಮಕ ಸ್ವೀಕಾರ ರೂಪದ ಚಹರೆ ಈ ಎರಡೂ ಮಾದರಿಗಳು ಕಂಡು ಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಬರುತ್ತಿರುವ ವಿಮರ್ಶೆಗಳು ಹಾಗೂ ಚಿಂತನೆಗಳಲ್ಲಿ ಈ ಮಾದರಿಗಳಿವೆ. ಮನು ಚಕ್ರವರ್ತಿ, ಕೆ.ವಿ. ಅಕ್ಷರ, ರಾಜಾರಾಂ ಹೆಗ್ಗಡೆ ಅವರ ಆಲೋಚನೆಗಳ ಹಿಂದೆ ಆಶಿಸ್‌ನಂದಿ ಅವರ ಪಾಶ್ಚಾತ್ಯ ಆಧುನಿಕೋತ್ತರ ಚಿಂತನೆಯ ಮೂಲರೂಪಿ ಗ್ರಹಿಕೆಗಳಿವೆ. ಡಿ.ಆರ್, ಚೆನ್ನಿ, ಕೆ.ವಿ.ಎನ್, ಕಿ.ರಂ, ಮತ್ತು ಹೆಚ್. ಎಸ್. ಶಿವಪ್ರಕಾಶ ಅವರಲ್ಲಿ ಆಧುನಿಕೋತ್ತರ ಚಿಂತನೆಯ ವಿಮರ್ಶಾತ್ಮಕ ಎಚ್ಚರವಿದೆ. ಕನ್ನಡದ ದಲಿತ ಹಾಗೂ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಗಳೂ ಕೂಡಾ ಇಂಥ ಆರೋಗ್ಯಕರ ನಿಲುವಿನಿಂದ ಕೂಡಿವೆ. ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಆಧುನಿಕೋತ್ತರ ಚಿಂತನೆಯು ಕನ್ನಡ ನವೋದಯ ಕಾಲಘಟ್ಟದಲ್ಲಿ ಪಾಶ್ಚಾತ್ಯ ಪ್ರೇರಣೆಗಳು ಹೇಗೆ ದೇಶಿ ಪೃಥಕ್ಕರಣದ ಚಹರೆಗಳನ್ನು ಪಡೆದುಕೊಂಡವೊ ಅಂಥಹುದೇ ಅರ್ಥಪೂರ್ಣ ಚಹರೆಗಳನ್ನು ಗಳಿಸಿಕೊಳ್ಳುತ್ತಿರುವಂತೆ ಕಂಡುಬರುತ್ತಿದೆ.

೪.೫.೯ ನವವಸಾಹತುಶಾಹಿ ಚಿಂತನೆ ಚಹರೆ

ವಿಮೋಚಿತ ವಸಾಹತು ರಾಷ್ಟ್ರಗಳ ನಿರ್ವಸಾಹತೀಕರಣವು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭಾಷಿಕ ನೆಲೆಗಳಿಂದ ಕೂಡಿದ ತೀವ್ರವಾದ ದೇಶಿ ಸಂಸ್ಕೃತಿಶೋಧದ ಆಯಾಮ ಹೊಂದಿತ್ತು. ಅಲ್ಲದೆ ಇದು ವಸಾಹತೋತ್ತರ ಸಂದರ್ಭದ ತೃತೀಯ ಜಗತ್ತಿನ ರಾಷ್ಟ್ರಗಳ ಬಹುಮುಖ್ಯವಾದ ವಿದ್ಯಮಾನ ಕೂಡಾ ಆಗಿತ್ತು. ಇಂಥ ವಿಶಿಷ್ಟ ಸ್ವರೂಪದ ಸಂಕ್ರಮಣ ಸಂದರ್ಭದಲ್ಲಿ ವಿಶ್ವ ವ್ಯಾಪಾರ ಒಪ್ಪಂದದ ಹೆಸರಿನಲ್ಲಿ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಸಿದ್ಧಾಂತ ಜಾರಿಯಾಗತೊಡಗಿತು. ಇದು ಹೊರರೂಪದಲ್ಲಿ ತನ್ನ ಎಲ್ಲಾ ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರ, ವಾಣಿಜ್ಯ ಕೃಷಿ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು ಮೊದಲಾದವುಗಳ ವಿಷಯದಲ್ಲಿ ಸಮಾನ ಹಕ್ಕುಗಳು ಹಾಗೂ ಅವಕಾಶಗಳ ಸ್ವಾತಂತ್ರ್ಯ ಕಲ್ಪಿಸುವ ಆದರ್ಶ ಜಾಗತಿಕ ವೇದಿಕೆ ಎನ್ನುವಂತೆ ತೋರುತ್ತದೆ. ಆದರೆ ವಾಸ್ತವವಾಗಿ, ಶೀತಲ ಸಮರಾನಂತರದ 'ಪ್ರಥಮ ಜಗತ್ತು' ತೃತೀಯ ಜಗತ್ತನ್ನು ಅಧುನೀಕರಿಸಿಕೊಳ್ಳುವುದರ ಭಾಗವಾಗಿ ಅನುಷ್ಠಾನಗೊಳಿಸಿದ ಪರೋಕ್ಷ ಆಳ್ವಿಕೆಯ ವ್ಯವಸ್ಥಿತ ರೂಪವೇ ಇದರ ಅಸಲಿ ರೂಪವಾಗಿದೆ. ಹೀಗಾಗಿ, ಜಾಗತೀಕರಣ ಸಿದ್ಧಾಂತವು ನವವಸಾಹತುಶಾಹಿಯ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಭಾಷಿಕ ಆಯಾಮಗಳ ಸಿದ್ಧಾಂತ ಕೂಡಾ ಆಗಿದೆ. ಇದಕ್ಕೆ ಹೋಲಿಸಿದರೆ, ಈ ಹಿಂದಿನ ಯಾವುದೇ ಪಾಶ್ಚಾತ್ಯ ತತ್ವವಾದವಾಗಲಿ ಅಥವಾ ಸಿದ್ಧಾಂತವಾಗಲಿ ಹೀಗೆ ಬಹುಮುಖಿಯಾದ ಕಾರ್ಯಾಚರಣಾತ್ಮಕ ವಿಧಾನಗಳನ್ನು ಏಕಕಾಲದಲ್ಲಿ ತೀವ್ರ ಸ್ವರೂಪದಲ್ಲಿ ಅನುಷ್ಠಾನಗೊಳಿಸಿರಲಿಲ್ಲ. ನವವಸಾಹತುಶಾಹಿ ಚಿಂತನೆಯು ಮೂಲತಃ ಒಂದು ಚಿಂತನೆಯಲ್ಲದ ಚಿಂತನೆ; ತತ್ವವಲ್ಲದ ತತ್ವ ಮತ್ತು ಪ್ರಸ್ಥಾನವಲ್ಲದ ಪ್ರಸ್ಥಾನ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಏನೂ ಅಲ್ಲದಿರುವ ಆದರೆ ಎಲ್ಲವೂ ಆಗಿರುವ ಮತ್ತು ಎಲ್ಲವನ್ನೂ ನಿಯಂತ್ರಿಸುವ ವಿಶ್ವಾತ್ಮಕ ತತ್ವ. ಇದರ ಮುಖ್ಯವಾದ ಉದ್ದೇಶ ನವವಸಾಹತುಶಾಹಿ ಯಾಜಮಾನ್ಯ ಶಕ್ತಿಯ ಪರೋಕ್ಷವಾದ ಜಾಗತಿಕ ನಿಯಂತ್ರಣ ಮತ್ತು ಆಳ್ವಿಕೆ ಅಷ್ಟೆ.

ಈ ವಿದ್ಯಮಾನವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯಲ್ಲಿ ಕಳೆದ ಸುಮಾರು ಇಪ್ಪತ್ತೈದು ವರ್ಷಗಳಿಂದ ಜಾಗತೀಕರಣ ಎನ್ನುವ ಪ್ರಖ್ಯಾತ ಪರಿಕಲ್ಪನೆಯ ಮೂಲಕ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಜಾಗತೀಕರಣ ಚಿಂತನೆಯ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮುಖ್ಯವಾದ ಮೂರು ನೆಲೆಗಳಲ್ಲಿ ಕ್ರಿಯಾತ್ಮಕವಾಗಿದೆ. ಅವುಗಳೆಂದರೆ, ಅ. ಜಾಗತೀಕರಣದ ಸ್ವೀಕಾರದ ನೆಲೆ, ಆ. ಜಾಗತೀಕರಣದ ನಿರಾಕರಣೆ ನೆಲೆ ಮತ್ತು ಇ. ಜಾಗತೀಕರಣದ ಅಂಗೀಕರಣದ ನೆಲೆ.

ಜಾಗತೀಕರಣವು ನಮ್ಮ ಪರಂಪರೆಯ ಕೊಳಕು ಹಾಗೂ ವಿಕಾರಗಳನ್ನು ತೊಡೆದು ಹಾಕುವುದಕ್ಕಾಗಿ ದೊರೆತಿರುವ ಒಂದು ಅಪೂರ್ವ ಅವಕಾಶ ಎನ್ನುವುದು ಜಾಗತೀಕರಣದ ಸ್ವೀಕಾರದ ನೆಲೆಯ ವಾದವಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಜಾಗತೀಕರಣ ಎನ್ನುವುದು ನಮ್ಮ ಬದುಕು ಹಾಗೂ ಆಲೋಚನಾ ಕ್ರಮಗಳ

ವೈವಿಧ್ಯತೆಯನ್ನು ನಾಶ ಮಾಡುವ ವಿನಾಶಕಾರಿ ಚಿಂತನೆ ಎನ್ನುವುದು ಜಾಗತೀಕರಣದ ನಿರಾಕರಣೆ ನೆಲೆಯ ಪ್ರತಿವಾದವಾಗಿದೆ. ಇದು ಸಾಂಸ್ಕೃತಿಕ ಏಕರೂಪೀಕರಣದ ಚಿಂತನೆಗಳನ್ನು ಹೇರುತ್ತಿದೆ. ಮಾರುಕಟ್ಟೆ ಸಂಸ್ಕೃತಿ ಮತ್ತು ಗ್ರಾಹಕ ಸಂಸ್ಕೃತಿ ಇಂಥ ಏಕರೂಪೀಕರಣದ ಪ್ರಮುಖ ರೂಪಗಳು. ಇಷ್ಟೇ ಅಲ್ಲದೆ ಜಾಗತೀಕರಣದ ಯಾಜಮಾನ್ಯತೆಯ ಸಾಧನಗಳಾದ ಇಂಗ್ಲಿಷ್ ಭಾಷೆ ಮತ್ತು ಶಿಕ್ಷಣ ಕ್ರಮಗಳ ವ್ಯಾಪಕವಾದ ಅನುಷ್ಠಾನದಿಂದ ಸ್ಥಳೀಯ ಪ್ರಾದೇಶಿಕ ಭಾಷೆಗಳು ಹಾಗೂ ಕಲಿಕಾ ವಿಧಾನಗಳು ತೀವ್ರವಾಗಿ ನಿರ್ನಾಮಗೊಳ್ಳುತ್ತಿವೆ. ಇದರಿಂದ ನಮ್ಮ ನೋಡುವ, ಗ್ರಹಿಸುವ ಹಾಗೂ ಅಭಿವ್ಯಕ್ತಿಸುವ ಕ್ರಮಗಳ ಸ್ವಂತಿಕೆ ಸಂಪೂರ್ಣವಾಗಿ ನಾಶವಾಗುತ್ತಿದೆ ಎನ್ನುವುದು ಜಾಗತೀಕರಣದ ನಿರಾಕರಣೆ ನೆಲೆಯ ಮುಖ್ಯ ಆಕ್ಷೇಪಣೆಗಳು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆರಂಭಿಕ ಹಂತದಲ್ಲಿ ಜಾಗತೀಕರಣದ ಪರವಾಗಿರುವವರ ಸಂಖ್ಯೆ ಬಹಳ ಕಡಿಮೆ ಇತ್ತು. ಹಾಗೆ ಸಮರ್ಥಿಸುತ್ತಿದ್ದವರೂ ಕೂಡಾ ಜಾಗತೀಕರಣದಿಂದ ನಮ್ಮ ಪರಂಪರೆಯ ಕೊಳಕು ಮತ್ತು ವಿಕಾರಗಳು ಅಳಿದು ಹೋಗುತ್ತವೆ ಎನ್ನುವ ಬಲವಾದ ನಂಬಿಕೆ ಹೊಂದಿದ್ದರು. ಉದಾಹರಿಸುವುದಾದರೆ, ಮೊಗಳ್ಳಿ ಅವರ 'ದಲಿತರು ಮತ್ತು ಜಾಗತೀಕರಣ' (೧೯೯೪) ಕೃತಿಯಲ್ಲಿ ಇಂಥ ಧೋರಣೆ ಇದೆ. ಹಾಗೆಯೇ ತೇಜಸ್ವಿ ಅವರು 'ಲಂಕೇಶ್ ಪತ್ರಿಕೆ'ಗೆ (೨೦೦೪) ನೀಡಿದ ತಮ್ಮ ಸಂದರ್ಶನ ಒಂದರ ಸಂದರ್ಭದಲ್ಲಿ ಜಾಗತೀಕರಣವು 'ನಾಗರಿಕತೆಯ ವಿಕಾಸದ ಒಂದು ಸಹಜ ಅವಸ್ಥೆ' ಎನ್ನುವ ನಿಲುವು ತಾಳಿದ್ದರ ಹಿನ್ನೆಲೆಯಲ್ಲಿ, ಭಾರತದ ಚರಿತ್ರೆಯ ಅನೂಚೂನವಾದ ಸಾಮಾಜಿಕ ಹಾಗೂ ಧಾರ್ಮಿಕ ಅನಿಷ್ಟಗಳಿಗೆ ಇದರಿಂದ ಪರಿಹಾರೋಪಾಯಗಳು ದೊರೆಯಬಹುದೆಂಬ ಇಂಥ ಆಶಯ ಹಾಗೂ ಆಶಾವಾದವೇ ಇತ್ತು. ಆದರೆ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇಂದಿನ ಆಧುನಿಕೋತ್ತರ ಕಾಲಘಟ್ಟದಲ್ಲಿ ಜಾಗತೀಕರಣವನ್ನು ಪರೋಕ್ಷವಾಗಿ ಸಮರ್ಥಿಸುವ ಚಿಂತನೆಗಳು ಹೆಚ್ಚಾಗುತ್ತಿವೆ. ಬಹುಮುಖ್ಯವಾಗಿ ಇದು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿಚಾರಗಳ ಚರ್ಚೆಗಳ ರೂಪದಲ್ಲಿ ವ್ಯಕ್ತವಾಗುತ್ತಿದೆ. ಭಾರತದಂಥ ಬಹುಧರ್ಮ ಮತ್ತು ಬಹುಸಂಸ್ಕೃತಿಗಳ ದೇಶದಲ್ಲಿ ಪ್ರತಿಯೊಬ್ಬರಿಗೂ ಅವರವರ ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳನ್ನು ತಮ್ಮ ಇಷ್ಟಾನುಸಾರ ಪಾಲಿಸುವ ಹಕ್ಕು ಇದೆ. ಇದರಲ್ಲಿ ಯಾವುದೇ ಅಮಾನವೀಯವಾದ ಅವಮಾನಕರವಾದ ಹಾಗೂ ಹಿಂಸಾತ್ಮಕವಾದ ಪ್ರಶ್ನೆಗಳೇನಾದರೂ ಇದ್ದ ಪಕ್ಷದಲ್ಲಿ ಅವುಗಳನ್ನು ಅವರ ಲೋಕದ ಆಚೆಗಿರುವವರು ಪ್ರಶ್ನಿಸಬಾರದು. ಏಕೆಂದರೆ ನಂಬಿಕೆಯ ನೆಲೆ ಎನ್ನುವುದು ಏಕರೂಪಿಯಲ್ಲ ಮತ್ತು ಸರಳ ಸ್ವರೂಪಿಯಲ್ಲ. ಅದು ಅನೇಕ ಬಗೆಯ ಅವಮಾನಗಳು ಹಾಗೂ ಹಿಂಸೆಗಳಂಥ ಸಹಜ ನೆಲೆಗಳಿಂದ ಕೂಡಿದೆ. ಹೀಗಾಗಿ ನಂಬಿಕೆಯ ಲೋಕ ಎನ್ನುವುದು ಸುಲಭವಾದ ಉತ್ತರಗಳಿಂದ ವಿವರಿಸಲು ಸಾಧ್ಯವಿಲ್ಲದ ಒಂದು ವಿಶಿಷ್ಟವಾದ ಹಾಗೂ ಜಟಿಲವಾದ ಜಗತ್ತು. ಒಬ್ಬನಿಗೆ ಸ್ವಯಂ ಅವಮಾನಕರವಲ್ಲ ಎನ್ನುವ ಸಂಗತಿಯನ್ನು ಕುರಿತು, ಇನ್ನೊಬ್ಬರು ಅದು ಅವನಿಗಾದ ಅವಮಾನವೆಂದು ಹೇಳುವುದು ಶುದ್ಧ ತಪ್ಪು ಎನ್ನುವ ಆಧುನಿಕೋತ್ತರ ಚಿಂತನೆಯ

ಧಾರೆಗಳು ಸಮಕಾಲೀನ ಕನ್ನಡ ಸಂಸ್ಕೃತಿ ಚಿಂತನೆಯಲ್ಲಿ ವ್ಯಾಪಕವಾಗುತ್ತಿವೆ. ಇದಕ್ಕೆ ಬಹಳ ಮುಖ್ಯವಾಗಿ, ಭಾರತದ ಪ್ರಸಿದ್ಧ ಆಧುನಿಕೋತ್ತರ ಚಿಂತಕರಾದ ಆಶಿಸ್‌ನಂದಿ ಹಾಗೂ ಬಾಲಗಂಗಾಧರ ಅವರ ದಟ್ಟವಾದ ಪ್ರಭಾವದಿಂದ ಕೆ.ವಿ. ಅಕ್ಷರ, ಮನು ವಿ ದೇವದೇವನ್, ರಾಜಾರಂ ಹೆಗ್ಗಡೆ, ಜಿ.ಬಿ. ಹರೀಶ, ಅಜಕ್ಕಳ ಗಿರೀಶ್‌ಭಟ್ಟ್ ಮೊದಲಾದವರು ಕಳೆದ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಸೃಷ್ಟಿಸುತ್ತಿರುವ ವಿಮರ್ಶೆಯ ತಾತ್ವಿಕತೆ ಸ್ಪಷ್ಟವಾದ ನಿದರ್ಶನವಾಗಿದೆ.

ಹಾಗೆಯೇ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇದಕ್ಕೆ ವಿರುದ್ಧವಾಗಿ, ಜಾಗತೀಕರಣ ಮತ್ತು ಅದರ ವಿವಿಧ ಕಾರ್ಯಾಚರಣೆಯ ರೂಪಗಳಿಂದ ಆಗುತ್ತಿರುವ ಅಪಾಯಗಳನ್ನು ಕುರಿತ ತೀವ್ರವಾದ ಪ್ರತಿರೋಧವು ಹಲವು ನೆಲೆಗಳಲ್ಲಿ ಪ್ರಕಟವಾಗುತ್ತಿದೆ. ದಲಿತ ಸಾಂಸ್ಕೃತಿಕ ವಿಮರ್ಶೆ, ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆ ಹಾಗೂ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಗಳ ತಾತ್ವಿಕತೆಯ ಮುಖ್ಯವಾದ ಒಂದು ಚಹರೆ ಎಂದರೆ, ಅದು ಜಾಗತೀಕರಣದ ವಿವಿಧ ಕಾರ್ಯಾಚರಣೆಗಳು ಒಡ್ಡಿರುವ ಆತಂಕಗಳಿಗೆ ತೋರಿಸುತ್ತಿರುವ ತೀವ್ರವಾದ ಪ್ರತಿರೋಧವೇ ಆಗಿದೆ. ಹೀಗಾಗಿ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಹಿತ್ಯಕವಾಗಿ ಮತ್ತು ಆರ್ಥಿಕವಾಗಿ ಪರ್ಯಾಯ ನೆಲೆಗಳನ್ನು ಶೋಧಿಸುವುದು ಹಾಗೂ ಕಟ್ಟುವುದೂ ಕೂಡಾ ಕನ್ನಡ ಸಾಂಸ್ಕೃತಿಕ ವಿಮರ್ಶೆ ತನ್ನ ಹೆಗಲಿಗೆ ಏರಿಸಿಕೊಂಡಿರುವ ಗಂಭೀರವಾದ ಜವಾಬ್ದಾರಿಗಳಾಗಿವೆ. ಇದರಿಂದ ಹಲವು ಸಾಹಿತ್ಯಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕೊಡುತ್ತಿರುವ ಉತ್ತರಗಳು ಬಹುತೇಕ ಸಂದರ್ಭಗಳಲ್ಲಿ ಟೀಕೆಗೆ ಪಕ್ಕಾಗುತ್ತಿವೆ. ಆದರೆ ಸಾಹಿತ್ಯ ಹಾಗೂ ಸಾಹಿತ್ಯ ವಿಮರ್ಶೆಗಳು ತಮ್ಮ ಕ್ಷಿತಿಜವನ್ನು ದಾಟಿ ವರ್ತಮಾನದ ಬದುಕಿನ ಜ್ವಲಂತ ಪ್ರಶ್ನೆಗಳಿಗೆ ಮುಖಾಬಿಲೆಯಾಗುತ್ತಿವೆ. ಇದರ ಕ್ರಮವನ್ನು ಮತ್ತು ಸ್ವರೂಪವನ್ನು ಭಾರತದ ಹಾಗೂ ಕರ್ನಾಟಕದ ಧರ್ಮಗಳು, ಪಂಥಗಳು, ಆಚರಣೆಗಳು ಮತ್ತು ಬದುಕಿನ ಲೋಕಗಳನ್ನು ಕುರಿತ ತರೀಕೆರೆ ಅವರ ವೈವಿಧ್ಯಮಯ ಬರಹಗಳು ಅನ್ವೇಷಿಸುತ್ತಿವೆ. ಇಂಥ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆ ಹೇಗೆ ತಾನೆ ತನ್ನ ಪರಂಪರಾಗತ ಸಾಹಿತ್ಯಾಸಕ್ತ ದೃಷ್ಟಿಕೋನದ ತಾತ್ವಿಕತೆಗೇ ಅಂಟಿಕೊಳ್ಳಲು ಸಾಧ್ಯ ಎನ್ನುವುದು ಬಹು ಮುಖ್ಯವಾದ ವಿಚಾರವಾಗಿದೆ. ಹಾಗೆಯೇ, ಕನ್ನಡದ ಇಂದಿನ ಶ್ರೇಷ್ಠ ಸಾಂಸ್ಕೃತಿಕ ವಿಮರ್ಶಕರಲ್ಲಿ ಒಬ್ಬರಾದ ಜಿ. ರಾಜಶೇಖರ ಅವರ ಕೋಮುವಾದ, ಭಯೋತ್ಪಾದಕತೆ ಮೂಲಭೂತವಾದ ಹಿಂಸಾವಾದಗಳು ಮಾನವತಾವಾದವನ್ನು ನುಂಗಿಹಾಕುತ್ತಿರುವ ಸಂಗತಿಯನ್ನು ತಮ್ಮ ಬರವಣಿಗೆಯ ಜೀವನ್ಮರಣದ ತಾತ್ವಿಕ ಪ್ರಶ್ನೆಯಾಗಿ ಪರಿಭಾವಿಸಿರುವುದು ಸಹ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಜಾಗತೀಕರಣದ ಕಾರ್ಯಾಚರಣೆಗಳ ಸ್ವರೂಪವನ್ನು ಶೋಧಿಸುವ ಒಂದು ವಿಶಿಷ್ಟವಾದ ಮಾದರಿ ಎಂದೇ ತಿಳಿಯಬೇಕಿದೆ. ಚೆನ್ನಿ, ಆರ್ಕೆ ಮಣಿಪಾಲ ಮತ್ತು ಫಣಿರಾಜ್ ಮೊದಲಾದವರು ಮಾಡುತ್ತಿರುವ ಅನುಸಂಧಾನವಾದರೂ ಕೂಡಾ ಇದೇ ಆಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ಇಂದಿಗೂ ಕೂಡಾ ವಸ್ತುನಿಷ್ಠ ಕೃತಿ ವಿಶ್ಲೇಷಣೆಯಲ್ಲಿ ಗಟ್ಟಿಯಾದ ಆಸಕ್ತಿ ಹಾಗೂ ನಂಬಿಕೆ ಹೊಂದಿರುವ ಕನ್ನಡ ವಿಮರ್ಶಕರನ್ನು ಜಾಗತೀಕರಣದ ಅಂಗೀಕರಣದ ನೆಲೆಯ ವಿಮರ್ಶಕರೆನ್ನುವುದು ಸರಿಯಾದೀತು. ಟಿ.ಪಿ. ಅಶೋಕ, ಗಿರಡ್ಡಿ, ನರಹಳ್ಳಿ ಮತ್ತು ಜಿ.ಎಸ್. ಆಮೂರ ಮೊದಲಾದವರಿಗೆ ಸಾಹಿತ್ಯ ಮತ್ತು ಪಠ್ಯಗಳು ಇಂದಿಗೂ 'ಸ್ವಯಂಪೂರ್ಣವಾದ ನಿರಪೇಕ್ಷ ರಚನೆ'ಗಳಾಗಿಯೇ ಭಾಸವಾಗುತ್ತಿರುವಂತೆ ಅಥವಾ 'ಸಾಹಿತ್ಯ ಸಂಸ್ಕೃತಿ' ಎನ್ನುವ ವಿಶಿಷ್ಟವಾದ ಪ್ರತ್ಯೇಕ ಲೋಕವೊಂದು ಗೋಚರಿಸುತ್ತಿರುವಂತೆ ಕಾಣುತ್ತದೆ. ಹೀಗಾಗಿಯೇ ಸಾಹಿತ್ಯೇತರ ಸಂಗತಿಗಳ ವ್ಯಾಪ್ತಿಯಲ್ಲಿ ಬರುವ ಜಾಗತೀಕರಣದ ಚಿಂತನೆ ಇವರಿಗೆ ಅನಗತ್ಯ ಪ್ರಶ್ನೆಯಾಗಿರುವಂತೆ ಕಂಡುಬರುತ್ತದೆ.

೪.೫.೧೦ ತೃತೀಯ ಜಗತ್ತಿನ ವಿಮರ್ಶೆ ಚಹರೆ

ನಿರ್ದಿಷ್ಟವಾಗಿ ಹೇಳುವುದಾದರೆ, ಈಗ ಇರುವುದು 'ಪ್ರಥಮ ಜಗತ್ತು' ಮತ್ತು 'ತೃತೀಯ ಜಗತ್ತು' ಎನ್ನುವ 'ದ್ವಿ'ರಾಷ್ಟ್ರ ವ್ಯವಸ್ಥೆಗಳು ಮಾತ್ರ. ಯುಎಸ್‌ಎಸ್‌ಆರ್‌ನ ಪತನ ಹಾಗೂ ಜಗತ್ತಿನ ಪ್ರಬಲ ಕಮ್ಯುನಿಷ್ಟ್ ರಾಷ್ಟ್ರ ಚೀನಾ ತನ್ನ 'ಸಾಂಸ್ಕೃತಿಕ ಕ್ರಾಂತಿ'ಯ ಸಮಾಜವಾದಿ ಆಶೋತ್ತರಗಳಿಗೆ ವಿರುದ್ಧವಾಗಿ ನವಬಂಡವಾಳಶಾಹಿ ಮಾರುಕಟ್ಟೆ ಸಂಸ್ಕೃತಿಯ ಮಿಲಿಟರಿ ಆರ್ಥಿಕ ಶಕ್ತಿಯಾಗಿಯೇ ರೂಪುಗೊಂಡಿರುವುದು 'ದ್ವಿತೀಯ ಜಗತ್ತಿ'ನ ಸ್ಥಿತಿಯೊಂದನ್ನು ಸದ್ಯದಲ್ಲಿ ಊಹಿಸಿಕೊಳ್ಳುವುದಕ್ಕೂ ಸಾಧ್ಯವಾಗದಂತೆ ಮಾಡಿದೆ. ಇದರಿಂದ ಜಾಗತಿಕ ಅಧಿಕಾರ ಸಮತೋಲನ ವ್ಯವಸ್ಥೆ ಎನ್ನುವ ರಾಜಕೀಯ ನಿಯಂತ್ರಣ ರೂಪವನ್ನು ಈಗ ಕಲ್ಪಿಸಿಕೊಳ್ಳಲೂ ಆಗದಿರುವಂಥ ಭ್ರಮೆಯಷ್ಟೇ ಆಗಿದೆ. ಜಾಗತೀಕರಣದಿಂದಾಗಿ 'ಅಮೇರಿಕೀಕರಣ' ಪ್ರಕ್ರಿಯೆ ತೀವ್ರವಾಗಿ ನಡೆಯುತ್ತಿದೆ.

ಇಂಥ 'ವಿಶಿಷ್ಟ' ಸನ್ನಿವೇಶದಲ್ಲಿ ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳು ಅತೀವವಾದ ಪ್ರಾಮುಖ್ಯತೆ ಗಳಿಸಿಕೊಳ್ಳುತ್ತಿವೆ. ಅಭಿವೃದ್ಧಿ ಅಥವಾ ಪ್ರಗತಿ ಕುರಿತ ಬಹುಬಗೆಯ ಮೀಮಾಂಸೆಗಳು ಪರೋಕ್ಷವಾಗಿ ಸಾಮಾಜಿಕ ನ್ಯಾಯ, ರಾಜಕೀಯ ನ್ಯಾಯ ಮತ್ತು ಆರ್ಥಿಕ ನ್ಯಾಯಗಳಂತಹ ಸಮತಾವಾದಿ ಹಾಗೂ ಪ್ರಜಾಸತ್ತಾತ್ಮಕ ಸಮಾಜವಾದಿ ಆಶೋತ್ತರಗಳನ್ನು ಅಪ್ರಸ್ತುತಗೊಳಿಸುತ್ತಿವೆ. ಬಹುಮುಖ್ಯವಾಗಿ ಇವು ವಿಮೋಚಿತ ವಸಾಹತು ರಾಷ್ಟ್ರಗಳಾದ ತೃತೀಯ ಜಗತ್ತಿನ 'ಹಿಂದುಳಿದ' ದೇಶಗಳಲ್ಲಿ ಹಾಗೂ ಆದಿವಾಸಿ ಬುಡಕಟ್ಟು ಸಂಸ್ಕೃತಿಯ ಜೀವನ ಕ್ರಮಗಳಿರುವ ತೃತೀಯ ಜಗತ್ತಿನ 'ಅನಭಿವೃದ್ಧ' ರಾಷ್ಟ್ರಗಳಲ್ಲಿ ಬಲಪಂಥೀಯ ವಿಚಾರಧಾರೆಯ ಕಾರ್ಯಾಚರಣೆ ರೂಪಗಳಾದ ಜನಾಂಗವಾದ, ಮತೀಯವಾದ, ಕೋಮುವಾದ, ಧಾರ್ಮಿಕ ಹಿಂಸೆ ಹಾಗೂ ಭಯೋತ್ಪಾದನೆಗಳು ತೀವ್ರಗೊಳ್ಳಲು ಕಾರಣವಾಗುತ್ತಿದೆ. ಇಂಥ ಸಂದರ್ಭದಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳ ಸಾಹಿತ್ಯ ವಿಮರ್ಶೆಗೆ ಇರುವ ನೈತಿಕ ಹೊಣೆಗಾರಿಕೆಯ ಪ್ರಶ್ನೆಗಳು ಅತ್ಯಂತ ತೀವ್ರತೆಯಿಂದ ಕೂಡಿರುತ್ತವೆ. ಸಾಹಿತ್ಯ ಮತ್ತು ಬದುಕನ್ನು ಪ್ರತ್ಯೇಕವಾಗಿ ಭಾವಿಸಲಾಗದಂತೆ ಪರಸ್ಪರ ಹೆಣೆದುಕೊಂಡಿರುತ್ತಿವೆ. ಹೀಗಾಗಿಯೇ ನಿರ್ದಿಷ್ಟವಾಗಿ ಕಳೆದ ಶತಮಾನದ

ಕೊನೆಯ ದಶಕದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಮಕಾಲೀನ ಬದುಕಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಮಸ್ಯೆಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಡಿ.ಆರ್. ಅವರ 'ಸಾಹಿತ್ಯ ಕಥನ' (೧೯೯೬) ಮತ್ತು 'ಸಂಸ್ಕೃತಿ ಕಥನ' (೨೦೦೨), ತರೀಕೆರೆ ಅವರ 'ಕರ್ನಾಟಕದ ಸೂಫಿಗಳು' (೧೯೯೮) ಮತ್ತು 'ಕರ್ನಾಟಕದ ನಾಥಪಂಥ' (೨೦೦೬), ಚೆನ್ನಿ ಅವರ 'ಅಸಮಗ್ರ' (೨೦೧೦) ಹಾಗೂ 'ಸದ್ಯದ ಹಂಗು' (೨೦೧೨), ಅನಂತಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' (೧೯೭೧), 'ಪೂರ್ವಾಪರ' (೧೯೯೦) ಮತ್ತು 'ಬೆತ್ತಲೆ ಪೂಜೆ ಯಾಕೆ ಕೂಡದು?' (೧೯೯೬) ಮೊದಲಾದ ಕೃತಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತೃತೀಯ ಜಗತ್ತಿನ ವಿಮರ್ಶೆಯ ಚಹರೆಗಳಿಗೆ ಸೂಕ್ತವಾದ ನಿದರ್ಶನಗಳಾಗಿವೆ. ಇದೇ ಪ್ರಶ್ನೆಯನ್ನು ಕನ್ನಡ ಭಾಷೆಗೂ, ಬರವಣಿಗೆಗೂ ಮತ್ತು ಆಲೋಚನಾ ಕ್ರಮಗಳಿಗೂ ಹಾಗೂ ವರ್ತಮಾನದ ಬದುಕಿಗೂ ಇರುವ ವಿಸಂಗತಿಯ ಸ್ವರೂಪವನ್ನು ಕುರಿತು ಡಿ.ಎನ್. ಶಂಕರಭಟ್ಟರ 'ಕನ್ನಡ ಭಾಷೆ' ಕುರಿತ ಅಧ್ಯಯನಗಳು ಇನ್ನೊಂದು ಆಯಾಮದಲ್ಲಿ ಅನುಸಂಧಾನ ಮಾಡುತ್ತಿವೆ. ಕೆ.ವಿ.ಎನ್. ಅವರ 'ಕನ್ನಡ ಜಗತ್ತು ಅರ್ಧ ಶತಮಾನ' (೨೦೦೭) ಕೂಡಾ ಕನ್ನಡದ ಸಂದರ್ಭದಲ್ಲಿ ತೃತೀಯ ಜಗತ್ತಿನ ಚಿಂತನಾ ಮೀಮಾಂಸೆಯನ್ನು ಕಟ್ಟುವ ಪ್ರಯತ್ನವೇ ಆಗಿದೆ. ರಂಗನಾಥ ಕಂಟನಕುಂಟೆ ಅವರ 'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' (೨೦೦೯), ಮತ್ತು ಚಲಪತಿ ಅವರ 'ಪಠ್ಯ ಪುಸ್ತಕಗಳು ಹಾಗೂ ಸಾಂಸ್ಕೃತಿಕ ರಾಜಕಾರಣ' ಕೃತಿಗಳೂ ತೃತೀಯ ಜಗತ್ತಿನ ಭಾಷೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿರುವ ವಿದ್ರೋಹಗಳನ್ನು ಕುರಿತು ಪರಿಶೀಲಿಸುತ್ತವೆ.

೪.೫.೧೧ ಕನ್ನಡ ಜಗತ್ತಿನ ನಿರ್ವಚನ ಚಹರೆ

ಇಂದಿನ 'ವಿಶ್ವಗ್ರಾಮ'ದ ಪರಿಕಲ್ಪನೆಗೆ ವಿರುದ್ಧವಾಗಿ ರೂಪುಗೊಳ್ಳುತ್ತಿರುವ 'ಕನ್ನಡ ಜಗತ್ತು' ಪರಿಕಲ್ಪನೆಗೆ ಮುಖ್ಯವಾಗಿ ಎರಡು ನೆಲೆಗಳಿವೆ. ಅವುಗಳಲ್ಲಿ 'ಕವಿರಾಜಮಾರ್ಗ' ಕೃತಿಯ ಕಾಲದಿಂದ 'ಭಾರತೀಯ ಕಾವ್ಯ ಮೀಮಾಂಸೆ'ಯ 'ಮಾರ್ಗ ಸಂಸ್ಕೃತಿ' ಪರಂಪರೆಗೆ ಪ್ರತಿಯಾಗಿ, ಕನ್ನಡ ವಿವೇಕ ಕಟ್ಟಿಕೊಂಡು ಬಂದಿರುವ 'ಭಾವಿಸಿದ ಕನ್ನಡ ಜನಪದ' ಮತ್ತು 'ನೀಮೆಟ್ಟುವ ನೆಲ ಅದೆ ಕರ್ನಾಟಕ' ಎನ್ನುವ ನಿರ್ಭೌಗೋಳಿಕವಾದ ಭಾವಿತ ಕರ್ನಾಟಕದ ನಕ್ಷೆ ಇಂಥ ಒಂದು ನೆಲೆ. ಮೂಲತಃ ಇದು ಶ್ರೀವಿಜಯನ 'ಕವಿರಾಜ ಮಾರ್ಗ' ಕೃತಿಯಿಂದ ಪ್ರತಿಪಾದಿತವಾದರೂ, ಕ್ರಮೇಣ ಕನ್ನಡದ ಶಿಷ್ಟ ಸಾಹಿತ್ಯದ ನೋಟಕ್ರಮ ಹಾಗೂ ಆಶಯಗಳಲ್ಲಿ 'ದೇಸಿ ಸಂಸ್ಕೃತಿ'ಯ ರೂಪದಲ್ಲಿ 'ಕನ್ನಡ ಜಗತ್ತಿ'ನ ಸ್ವರೂಪವನ್ನು ವಿವರಿಸಿತು. ಆದರೆ ಇಂದಿನ 'ವಿಶ್ವಗ್ರಾಮ'ದ 'ವಿರಾಟ್ ಕಥನ'ಕ್ಕೆ ಪ್ರತಿರೋಧದ ರೂಪದಲ್ಲಿ ಕಟ್ಟುತ್ತಿರುವ 'ಕನ್ನಡ ಜಗತ್ತಿ'ನ 'ವಿರಾಟ್ ಕಥನ'ದ ಸ್ವರೂಪವು ಅತ್ಯಂತ ವಿಶಿಷ್ಟವಾದ ಹಾಗೂ ಅರ್ಥಪೂರ್ಣವಾದ ಬಹುನೆಲೆಗಳಿಂದ ಕೂಡಿದೆ. ಇದು ಕನ್ನಡದ ನಿರ್ಭೌಗೋಳಿಕ ನಕ್ಷೆಯೊಳಗೆ ಶಿಷ್ಟ ಸಾಹಿತ್ಯದ ಪರಿಧಿಯಾಚೆ ರೂಪುಗೊಂಡಿರುವ ಜನಪದ ಸಂಸ್ಕೃತಿಗಳು, ಮೌಖಿಕ ಪರಂಪರೆಗಳು, ಆಚರಣಾ ರೂಪಗಳು, ಧರ್ಮಗಳು, ಮತಗಳು

ಸಂಪ್ರದಾಯಗಳು, ಜೀವನೋಪಾಯ ವಿಧಾನಗಳು, ಜ್ಞಾನ ಪರಂಪರೆಗಳು, ತಿಳಿವಳಿಕೆ ರೂಪಗಳು, ಶಾಬ್ದಿಕ ಮತ್ತು ಅಶಾಬ್ದಿಕ ಅಭಿವ್ಯಕ್ತಿ ಕ್ರಮಗಳು, ಭಾಷಿಕ ರಚನೆಗಳು ಹಾಗೂ ಮೌಖಿಕ ಸೃಷ್ಟಿಗಳು ಮೊದಲಾದವುಗಳನ್ನು ಅತ್ಯಂತ ಮಹತ್ವಪೂರ್ಣ ನೆಲೆಗಳೆಂದು ಭಾವಿಸುತ್ತದೆ. ಅಷ್ಟೇ ಅಲ್ಲದೆ ಇವು ಭಾರತೀಯ ಪ್ರತಿಷ್ಠಿತ ಸಂಸ್ಕೃತಿಯ ಯಾಜಮಾನ್ಯವನ್ನು ಮುಖಾಮುಖಿ ಮಾಡುವ ಮೂಲಕ ಕಟ್ಟಿಕೊಂಡಿರುವ ವಿಶಿಷ್ಟವಾದ ಅನನ್ಯತೆಗಳು ಜಾಗತಿಕ ಯಾಜಮಾನ್ಯತೆಯನ್ನು ಎದುರಿಸುವ ಚೈತನ್ಯಗಳನ್ನು ಸಹ ಹೊಂದಿದೆ ಎನ್ನುವುದು ಇಂಥ ಇನ್ನೊಂದು ನೆಲೆ. ಇದನ್ನು ಪರ್ಯಾಯ ಮೂಲಗಳಿಂದ ರೂಪುಗೊಂಡಿರುವ ಪರಿಭಾವಿತ ಕನ್ನಡ ಜಗತ್ತಿನ ಸಂಸ್ಕೃತಿ ನಕ್ಷೆ ನೆಲೆ ಎಂದು ಗುರುತಿಸಬಹುದು. ಇಂಥ ವಿಶಿಷ್ಟ ಮತ್ತು ಅರ್ಥಪೂರ್ಣ ನೆಲೆಗಳಿಂದ ಕೂಡಿರುವ ಕನ್ನಡ ಜಗತ್ತಿನ ಸ್ವರೂಪವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ 'ನಕ್ಷೆ ನಕ್ಷತ್ರ' ಎನ್ನುವ ರೂಪಕದ ಮೂಲಕ ವ್ಯಾಖ್ಯಾನಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು.

ಸುಬ್ಬಣ್ಣ ಅವರ 'ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು' (೨೦೦೦) ಇಂಥ ಹೊಸ ನೆಲೆಯಿಂದ ಕನ್ನಡ ಜಗತ್ತನ್ನು ವ್ಯಾಖ್ಯಾನಿಸಿರುವ ಒಂದು ಮಹತ್ವದ ಕೃತಿ. ಇದರಲ್ಲಿ ಸುಬ್ಬಣ್ಣ ಅವರು, ಕನ್ನಡದ ಮೊಟ್ಟಮೊದಲ ಉಪಲಬ್ಧ 'ಕಾವ್ಯಾಲಂಕಾರ' ಕೃತಿಯೆಂದೇ ಜನಜನಿತವಾದ ಶ್ರೀವಿಜಯನ 'ಕವಿರಾಜಮಾರ್ಗ'ವನ್ನು ಕನ್ನಡದ ಒಂದು ಮಹತ್ವಪೂರ್ಣವಾದ 'ರಾಜಕೀಯ ಪಠ್ಯ' ಮತ್ತು 'ಸಾಂಸ್ಕೃತಿಕ ಪಠ್ಯ'ವೆಂದು ಪ್ರತಿಪಾದಿಸಿದರು. ಕರ್ನಾಟಕದ ರಾಜಕೀಯ ಚರಿತ್ರೆಯ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಒಂಭತ್ತನೆಯ ಶತಮಾನ ಅತ್ಯಂತ ಮಹತ್ವಪೂರ್ಣವಾದ ಕಾಲಘಟ್ಟವಾಗಿದೆ. 'ರಾಜ' ಮತ್ತು 'ಕವಿ' ಇಬ್ಬರೂ ಒಟ್ಟಾಗಿ ಕನ್ನಡ ಭಾಷೆ, ಕರ್ನಾಟಕ ಸಂಸ್ಕೃತಿ ಮತ್ತು ಕನ್ನಡ ದೇಶಗಳ ವಿಶಿಷ್ಟ ಸ್ವರೂಪ ಏನಿರಬೇಕು ಎನ್ನುವುದನ್ನು ಕುರಿತು ಗಂಭೀರವಾಗಿ ಆಲೋಚಿಸಿದ ಸಂದರ್ಭ ಇದು. ರಾಜಕೀಯ ಸಂಸ್ಕೃತಿ ಮತ್ತು ಜನಸಂಸ್ಕೃತಿಗಳನ್ನು ಕನ್ನಡ ಪ್ರಜ್ಞೆಯೂ ಹಾಗೂ ಕನ್ನಡ ಪ್ರಜ್ಞೆಯನ್ನು ರಾಜಕೀಯ ಸಂಸ್ಕೃತಿ ಮತ್ತು ಜನಸಂಸ್ಕೃತಿಗಳೂ ಪರಸ್ಪರ ಅವಿನಾಭಾವ ಕ್ರಮದಲ್ಲಿ ರೂಪಿಸುವ ಮೂಲಕ ಕರ್ನಾಟಕ ಸಂಸ್ಕೃತಿಯನ್ನು ಕಟ್ಟಬೇಕು ಎನ್ನುವುದು ಕವಿರಾಜ ಮಾರ್ಗಕಾರನ ಚಿಂತನೆಯಾಗಿದೆ. ಹೀಗೆ, ಒಂದು ಪ್ರಾದೇಶಿಕ ಪರಿಸರದ ಭಾಷಿಕ ರಚನೆ ಹಾಗೂ ರಾಜಕೀಯ ವ್ಯವಸ್ಥೆಗಳು ಮೇಳೈಸುವ ಮೂಲಕ ರೂಪುಗೊಳ್ಳುವ 'ಜನಪದ'ವೇ ನಿಜವಾದ ಒಂದು 'ರಾಷ್ಟ್ರ'. ಇಂಥ ರಾಷ್ಟ್ರದ ನಿರ್ಮಾಣದಿಂದಲೇ ಅರ್ಥಪೂರ್ಣವಾದ 'ಜಗತ್ತು' ರೂಪುಗೊಳ್ಳುತ್ತದೆ. ಇಂಥ 'ಕನ್ನಡ ಜಗತ್ತಿ'ನ ನಿರ್ಮಾಣವೇ ಕವಿರಾಜಮಾರ್ಗದ ಪ್ರಧಾನ ಉದ್ದೇಶವಾಗಿದೆ ಎನ್ನುವುದನ್ನು ಸುಬ್ಬಣ್ಣ ಅವರು ಅರ್ಥಪೂರ್ಣವಾಗಿ ವಿಶ್ಲೇಷಿಸಿದರು. ಆನಂತರ 'ಕನ್ನಡ ಜಗತ್ತಿ'ನ ನಿರ್ವಚನಕ್ಕೆ ಹೊಸ ದಿಕ್ಕು ಕೊಟ್ಟ ಕೃತಿ ಎಂದರೆ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' (೧೯೯೯). ಡಿ.ಆರ್. ಅವರು ಇದರಲ್ಲಿ ಕನ್ನಡದ ಅನುಭಾವಿ ಮತ್ತು ಕವಿ ಅಲ್ಲಮಪ್ರಭು ಕಾಶ್ಮೀರ ಶೈವ ಸಿದ್ಧಾಂತದ ಜೊತೆ

ವಾಗ್ವಾದ ಮಾಡುವ ಮೂಲಕ ಭಾರತೀಯ ತತ್ವಶಾಸ್ತ್ರ ಹಾಗೂ ದರ್ಶನಶಾಸ್ತ್ರವನ್ನು ವಿಮರ್ಶಿಸುವುದಷ್ಟೇ ಅಲ್ಲದೆ, ಕನ್ನಡ ತತ್ವಶಾಸ್ತ್ರದ ನಿರ್ಮಾಪಕನೂ ಆಗಿದ್ದಾನೆ ಎಂದು ಪ್ರತಿಪಾದಿಸಿದರು. ಕನ್ನಡ ಸಾಹಿತ್ಯ, ತನ್ನ ಸಾಹಿತ್ಯಕ ಚೌಕಟ್ಟಿನಾಚೆಗೆ ಇರುವ ಜಗತ್ತಿನೊಂದಿಗೆ ವಾಗ್ವಾದಿಸುವ ಮೂಲಕವೇ ಕನ್ನಡದ ನಿರ್ಭೌಗೋಳಿಕ ನಕ್ಷೆಯನ್ನು ವಿಸ್ತರಿಸುತ್ತದೆ ಮತ್ತು ಕನ್ನಡದ ದೇಸಿ ಪ್ರಜ್ಞೆಯನ್ನು ಬೆಳೆಸುತ್ತದೆ. ಇದೇ ನಿಜವಾದ 'ಕನ್ನಡ ಜಗತ್ತು' ಎನ್ನುವುದು ಈ ಕೃತಿಯ ಬಹುಮುಖ್ಯ ಪ್ರತಿಪಾದನೆ. ಭಾರತೀಯ ತತ್ವಶಾಸ್ತ್ರದ ಪ್ರತಿಷ್ಠಿತ ಪರಿಭಾಷೆಗಳು ಪ್ರಧಾನವಾಗಿ ಅವಲಂಬಿಸಿರುವ 'ಬೇಧಾಬೇಧ' ರೂಪಗಳನ್ನು ಹಿಡಿದು ಸಾಧಿಸುವ ಪರಿಣಾಮಕ್ಕಿಂತ ಉನ್ನತವಾದದ್ದನ್ನು ಅಲ್ಲಮ ತನ್ನ ನಿಗೂಢವಾದ, ವಿಸ್ಮಯಕಾರಿಯಾದ, ವಿಚಿತ್ರ ಪೂರ್ಣವಾದ ಮತ್ತು ಕೋಲಾಹಲಕಾರಿಯಾದ ಜೀವನದ ದ್ವಂದ್ವ ಸ್ಥಿತಿಗಳ 'ರೂಪಕ' ಮತ್ತು 'ಪ್ರತಿಮಾ ವಿಧಾನ'ದ ಮೂಲಕ ಸಾಧಿಸುತ್ತಾನೆ. ಅಲ್ಲಮ ಈ ಮೂಲಕ ಕನ್ನಡ ತತ್ವಶಾಸ್ತ್ರವನ್ನು ಕಟ್ಟಿರುವ ಕ್ರಮವನ್ನು ಡಿ.ಆರ್. ಇಲ್ಲಿ 'ಮಹಾಮೌನ' ಅಥವಾ 'ಅರ್ಥಪೂರ್ಣ ಶೂನ್ಯತ್ವ'ದ ಪರಿಭಾಷೆಗಳ ಮೂಲಕ ಹಾಗೂ ಪರಿಭಾಷೆಗಳ ಪರಿಭಾಷೆಯಾದ 'ಬಯಲಿ'ನ ಪರಿಭಾಷೆ ಮೂಲಕ ಗುರುತಿಸುತ್ತಾರೆ.

ಡಿ.ಆರ್. ನಂತರ ಕನ್ನಡ ಜಗತ್ತಿನ ನಿರ್ವಚನದ ಪ್ರಯತ್ನಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ನಡೆಯುತ್ತಿವೆ. ಆದರೆ ಇವುಗಳ ವ್ಯಾಪ್ತಿ ಮತ್ತು ಬೀಸುಗಳು ಕಿರಿದಾಗಿವೆ ಎನ್ನುವುದಕ್ಕಿಂತ ಸ್ಪಷ್ಟವಾದ ತಾತ್ವಿಕ ನೈಪುಣ್ಯತೆ ಇನ್ನೂ ಸಾಧಿತವಾಗಬೇಕಿದೆ ಎಂದು ಹೇಳಬಹುದಾಗಿದೆ. ಇದು ಮುಂದಿನ ದಿನಗಳಲ್ಲಿ ಸಾಧಿತವಾಗುವ ಸ್ವರೂಪದಿಂದ ಕೂಡಿದೆ ಎನ್ನುವುದು ಗಮನಾರ್ಹ ವಿಚಾರವಾಗಿದೆ.

೪.೫.೧೨ ಸೃಜನಶೀಲ ಬರವಣಿಗೆ ಚಹರೆ

ವಿಮರ್ಶೆ ಎನ್ನುವುದು ಒಂದು 'ದ್ವಿತೀಯ ದರ್ಜೆ'ಯ ಚಟುವಟಿಕೆ ಮತ್ತು 'ಸೃಜನೇತರ' ಪ್ರಕಾರ ಎನ್ನುವ ಬಹಳಷ್ಟು ಹಳೆಯದಾದ ಸಾಂಪ್ರದಾಯಕ ವ್ಯಾಖ್ಯಾನದಿಂದ ಇಂದಿನ ಕನ್ನಡ ಸಾಂಸ್ಕೃತಿಕ ವಿಮರ್ಶೆ ಬಹುತೇಕ ಮುಕ್ತವಾಗಿದೆ. ಕವಿಯಾಗುವುದರಲ್ಲಿ ವಿಫಲನಾದವನು ವಿಮರ್ಶಕನಾಗಿ ಸಫಲನಾಗುತ್ತಾನೆ ಅಥವಾ ಕಡಿಮೆ ಪ್ರತಿಭಾವಂತ ಕೂಡಾ ವಿಮರ್ಶಕನಾಗಬಹುದು, ಇವೇ ಮೊದಲಾದ ವಿಕಲ್ಪಗಳು ಇಂದು ಸಂಪೂರ್ಣ ಅರ್ಥ ಕಳೆದುಕೊಂಡಿವೆ. ವಿಮರ್ಶೆ ಕೂಡಾ ಎಲ್ಲಾ ಅಭಿವ್ಯಕ್ತಿ ಪ್ರಕಾರಗಳಂತೆ ಒಂದು ಮಹತ್ವಪೂರ್ಣವಾದ ಸೃಜನಶೀಲ ಅಭಿವ್ಯಕ್ತಿ ರೂಪವೇ ಹೊರತು ಅದೊಂದು ಒಣಶಾಸ್ತ್ರ ಅಥವಾ ನೀರಸವಾದ ಪಾಂಡಿತ್ಯ ಪ್ರಧಾನ ಚಟುವಟಿಕೆ ಅಲ್ಲ. ವಿಮರ್ಶೆಯು ಸೃಷ್ಟಿಶೀಲ ಸಾಮರ್ಥ್ಯವುಳ್ಳ ಪ್ರತಿಭಾವಂತನ ಮಾಧ್ಯಮವೇ ಹೊರತು, ಪ್ರತಿಭಾಹೀನರಾಗಲಿ ಅಥವಾ ಅರೆಬರೆ ಪ್ರತಿಭಾವಂತರಾಗಲಿ ಕೇವಲ ಸತತ ಪ್ರಯತ್ನ ಮಾತ್ರದಿಂದಲೇ ನಿರ್ಮಿಸಬಹುದಾದ ಸಾಹಿತ್ಯಾಧಾರಿತ ಉಪಕಸುಬು ಅಲ್ಲ. ಇಂದಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಉತ್ಕೃಷ್ಟ ಕೃತಿಗಳನ್ನು ಮಾತ್ರವಲ್ಲದೆ, ಒರಿಜಿನಲ್ ಆದ ಒಳನೋಟವಿರುವ

ಕೇವಲ ಮೂರ್‍ನಾಲು ಪುಟಗಳ ಯಾವುದೇ ಕಿರು ಲೇಖನಗಳನ್ನು ಓದಿದರೂ ಕೂಡಾ ಈ ವಿಚಾರ ಗ್ರಾಹ್ಯವಾಗುತ್ತದೆ. ಹೀಗಾಗಿ, 'ನಾನೇರುವೆತ್ತರಕ್ಕೆ ನೀನೇರಬಲ್ಲೆಯಾ' ಎನ್ನುವ ಸವಾಲನ್ನು ಸಾಕಾರಗೊಳಿಸಿರುವ ಕೆಲವು ಅಪೂರ್ವ ಕೃತಿಗಳನ್ನು, ಬರಹಗಳನ್ನು ಮತ್ತು ಶ್ರೇಷ್ಠ ವಿಮರ್ಶಕರನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಕಾಣಬಹುದು.

ಕುರ್ತಕೋಟಿ, ಅನಂತಮೂರ್ತಿ, ಡಿ.ಆರ್. ಸುಬ್ಬಣ್ಣ, ಚೆನ್ನಿ, ಕೆ.ವಿ. ಎನ್. ಕಲ್ಲುಗುಡಿ, ಜಿ. ರಾಜಶೇಖರ ಮತ್ತು ತರೀಕೆರೆ ಮೊದಲಾದವರನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸೃಜನಶೀಲ ಚಹರೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಸಾಧ್ಯಗೊಳಿಸಿರುವ ಕೆಲವು ಮಹತ್ವದ ವಿಮರ್ಶಕರೆಂದು ಗುರುತಿಸಬಹುದು. ಈ ಸೃಜನಶೀಲತೆಯ ಸ್ವರೂಪ ಬೇರೆ ಬೇರೆ ವಿಮರ್ಶಕರಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿರಬಹುದು. ಆದರೂ ವಿಮರ್ಶೆಯು ಸಾಹಿತ್ಯಾಧಾರಿತ ಅಥವಾ ಪಠ್ಯಾಧಾರಿತ ಕ್ರಿಯೆಯಾಗಿರುತ್ತಲೇ ಲೋಕ ಅಥವಾ ಸಮಾಜ ಕುರಿತ ಅನನ್ಯವಾದ ಗ್ರಹಿಕೆ ಮತ್ತು ಚಿಂತನೆಯೂ ಆಗಿರುವುದನ್ನು ಇಂಥ ವಿಮರ್ಶಕರ ಅತ್ಯುತ್ತಮವಾದ ರಚನೆಗಳು ರುಜುವಾತುಪಡಿಸುತ್ತವೆ. ಕುರ್ತುಕೋಟಿ ಅವರ 'ಉರಿಯ ನಾಲಗೆ' (೧೯೯೩), ಡಿ.ಆರ್. ಅವರ 'ಸಾಹಿತ್ಯ ಕಥನ' (೧೯೯೬), ಅನಂತಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' (೧೯೭೧), ಕೆ.ವಿ. ಸುಬ್ಬಣ್ಣ ಅವರ 'ಅರೆ ಶತಮಾನದ ಅಲೆ ಬರಹಗಳು' (೨೦೦೪), ಚೆನ್ನಿ ಅವರ 'ಅಮೂರ್ತತೆ ಮತ್ತು ಪರಿಸರ' (೨೦೦೩), 'ನಡುಹಗಲಿನಲ್ಲಿ ಕಂದೀಲುಗಳು' (೨೦೦೪), 'ಅಸಮಗ್ರ', 'ಸದ್ಯದ ಹಂಗು' (೨೦೧೨), ಕಲ್ಲುಗುಡಿ ಅವರ, 'ಅನುಭಾವ ಸಾಹಿತ್ಯ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' (೧೯೯೭), 'ನಕ್ಷೆ ನಕ್ಷತ್ರ' (೨೦೧೦), 'ಮೈಯೆ ಸೂರು ಮನವೆ ಮಾತು' (೨೦೧೨), ಕೆ.ವಿ. ನಾರಾಯಣ ಅವರ 'ಬೇರು ಕಾಂಡ ಚಿಗುರು' (೧೯೯೭), ಮತ್ತು ತರೀಕೆರೆ ಅವರ 'ಕರ್ನಾಟಕದ ಸೂಫಿಗಳು' (೧೯೯೮), 'ಕರ್ನಾಟಕದ ನಾಥಪಂಥ' (೨೦೦೬) ಮತ್ತು 'ಕತ್ತಿಯಂಚಿನ ದಾರಿ' (೨೦೦೬) ಮೊದಲಾದವು ಇಂಥ ಸೃಜನಶೀಲ ಕೃತಿಗಳಾಗಿವೆ. ತೇಜಸ್ವಿ ಮತ್ತು ಲಂಕೇಶ್ ಅವರ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷೆ ಕುರಿತ ಬರಹಗಳಲ್ಲಿ ಕೂಡಾ ಇಂಥ ಅಪೂರ್ವ ಮಾದರಿಗಳಿವೆ. ಈ ಪ್ರವೃತ್ತಿ ಕುರಿತು 'ಪ್ರಜಾವಾಣಿ' ದಿನ ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ 'ವಿಮರ್ಶೆಯ ಪಲ್ಲಟಗಳು' (೪-೧೧-೨೦೧೨) ಎನ್ನುವ ತಮ್ಮ ಲೇಖನದಲ್ಲಿ ಹೆಚ್.ಎಸ್.ಆರ್. ಅವರು "ವಿಮರ್ಶೆಯು, ಸಾಹಿತ್ಯ ಕೃತಿಗಳನ್ನು ಅವಲಂಬಿಸಿದ 'ಸೆಕೆಂಡರಿ' ಚಟುವಟಿಕೆಯಲ್ಲ. ಅದು ಕೂಡಾ ಲೋಕದಿಂದ ಕಲಿಯುವ, ಲೋಕವನ್ನು ಗ್ರಹಿಸುವ ಹಾಗೂ ಲೋಕವನ್ನು ಕಟ್ಟಿಕೊಡುವ ಬಗೆಯೇ ಆಗಿದೆ . . . ನಿಜವಾಗಿ ನೋಡಿದರೆ ಸಾಹಿತ್ಯ ಮೀಮಾಂಸೆ, ವಿಮರ್ಶೆ ಮತ್ತು ಸಂಶೋಧನೆಗಳು ಒಂದಕ್ಕೊಂದು ಬೆಸೆದುಕೊಂಡ ಚಟುವಟಿಕೆಗಳು"[೧೬] ಎಂದು ವಿಶ್ಲೇಷಿಸಿರುವುದು ಅತ್ಯಂತ ಸಮರ್ಪಕವಾದ ವಿಚಾರವಾಗಿದೆ.

ನವ್ಯೋತ್ತರ ಮತ್ತು ದಲಿತ–ಬಂಡಾಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಸಾಂಪ್ರದಾಯಿಕ ಹಾಗೂ ಸೈದ್ಧಾಂತಿಕ ತಾತ್ವಿಕ ಸ್ವರೂಪ ಬಹುತೇಕ ಪಲ್ಲಟಗೊಳ್ಳತೊಡಗಿತು. ಇಂಥಹ ಬದಲಾದ ಕಾಲಘಟ್ಟದ ಸಾಹಿತ್ಯಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಶೋತ್ತರಗಳ ಹಿನ್ನೆಲೆಯಲ್ಲಿ ಸಾಹಿತ್ಯ ವಿಮರ್ಶೆಯ ಹೊಸ ತಾತ್ವಿಕ ನೆಲೆಗಳನ್ನು ರೂಪಿಸುವ ಪ್ರಯತ್ನ ಅನೇಕ ಸ್ತರಗಳಲ್ಲಿ ನಡೆಯಿತು. ಚೆನ್ನಿ ಅವರ 'ನಡುಹಗಲಿನಲ್ಲಿ ಕಂದೀಲುಗಳು' (೨೦೦೪) ಎನ್ನುವ ವಿಮರ್ಶಾ ಕೃತಿಗೆ ಬರೆದಿರುವ ಮುನ್ನುಡಿಯಲ್ಲಿ ಈ ವಿದ್ಯಮಾನವನ್ನು ಕುರಿತು ಕಿ.ರಂ. ಅವರು "ಸಾಂಸ್ಕೃತಿಕ ವಿಮರ್ಶೆಗೆ ಕ್ರಮಬದ್ಧವಾದ ನೆಲೆಯೊಂದನ್ನು ರೂಪಿಸಲು ನಮ್ಮ ವಿಮರ್ಶಾ ವಲಯದಲ್ಲಿ ಅನೇಕ ಮಟ್ಟದ ಗಂಭೀರ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನದ ಹಿಂದೆ ವಿಮರ್ಶಕರು ಅನೇಕ ಸಂಬಂಧಗಳನ್ನು ತಮ್ಮ ಕಕ್ಷೆಗೆ ತಂದುಕೊಂಡಿದ್ದಾರೆ. ಪರಿಸರ, ಮೂಲಭೂತವಾದಿಗಳ ಕುತರ್ಕಗಳು, ಏಕವೂ, ಅಖಂಡವೂ ಆದ ನೆಲೆಗಳ ನಿರಾಕರಣೆ, ವಸಾಹತೀಕರಣದ ಆಧುನಿಕ ಸವಾಲುಗಳು ಹೀಗೆ ಅನೇಕ ಪ್ರಶ್ನೆಗಳು ಸಾಹಿತ್ಯ ವಾಹಿನಿಯಲ್ಲಿ ಸೇರ್ಪಡೆಯಾಗಿವೆ. ಒಂದು ಸಂದರ್ಭದಲ್ಲಿ ಸಾಹಿತ್ಯವನ್ನು ವಸ್ತುಕೇಂದ್ರಿತ ನೆಲೆಯನ್ನಾಗಿ ನೋಡುತ್ತಿದ್ದ ಕ್ರಮಗಳು ಈಗ ಇಡೀ ಸಾಹಿತ್ಯ ವಲಯದ ಚಿಂತನೆಯ ಮುಖ್ಯ ನೆಲೆಯನ್ನಾಗಿಸಿಕೊಂಡಿರುವುದು ಕನ್ನಡ ಸಾಹಿತ್ಯ–ಸಂಸ್ಕೃತಿಯ ತಾತ್ವಿಕತೆಯ ಗಾಂಭೀರ್ಯವನ್ನೇ ಹೇಳುತ್ತಿದೆ. ಖಚಿತವೆನ್ನುವಂತೆ ನಂಬಿದ್ದ ಸಿದ್ಧಾಂತಗಳನ್ನು ಅನುಲಕ್ಷಿಸಿಯೂ ಹೊಸ ತಾತ್ವಿಕ ನೆಲೆಗಳನ್ನು ರೂಪಿಸಿಕೊಳ್ಳುವ, ಶೋಧಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿರುವುದು ಗಮನೀಯವಾದದ್ದೆನಿಸಿದೆ"[೧೭] ಎಂದು ವಿಶ್ಲೇಷಿಸಿದ್ದಾರೆ. ಅವರ ಈ ವಿಶ್ಲೇಷಣೆ ಕೇವಲ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಚಹರೆಗಳನ್ನಷ್ಟೇ ನಿರೂಪಿಸದೆ ನಿಜವಾದ ಅರ್ಥದಲ್ಲಿ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ಅತ್ಯಂತ ಸಮಗ್ರವಾದ ಹಾಗೂ ಅರ್ಥಪೂರ್ಣವಾದ ವ್ಯಾಖ್ಯಾನವೇ ಆಗಿದೆ.

೪.೬. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಭಾಷೆಗಳು ಮತ್ತು ಪರಿಕಲ್ಪನೆಗಳು

ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯ ವಿಮರ್ಶೆಗಳ ಪರಿಭಾಷೆಗಳು ಹಾಗೂ ಪರಿಕಲ್ಪನೆಗಳಿಗಿಂತ ಭಿನ್ನವಾದ ಪರಿಭಾಷೆಗಳು ಮತ್ತು ಪರಿಕಲ್ಪನೆಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಬಳಸಲಾಗುತ್ತಿದೆ. ನವ್ಯ ವಿಮರ್ಶೆಯ 'ಆಕೃತಿ ಪ್ರಧಾನ' ವಿಶ್ಲೇಷಣೆಯ ಮತ್ತು ದಲಿತ–ಬಂಡಾಯ ವಿಮರ್ಶೆಗಳ 'ಆಶಯ ಪ್ರಧಾನ' ವಿಶ್ಲೇಷಣೆಯ ಸಾಧನಗಳಾದ ಪರಿಭಾಷೆಗಳು ಹಾಗೂ ಪರಿಕಲ್ಪನೆಗಳು ಸಾಂಸ್ಕೃತಿಕ ವಿಮರ್ಶೆಯ 'ಆಶೋತ್ತರ ಪ್ರಧಾನ' ವಿಶ್ಲೇಷಣೆಯ ವಿವಿಧ ರೂಪಗಳಿಗೆ ಹೊಂದಾಣಿಕೆಯಾಗುವುದು ಸಾಧ್ಯವೇ ಇರಲಿಲ್ಲ. ಏಕೆಂದರೆ ಇವು ಒಂದೋ ಶುದ್ಧ ಅಸಾಮಾಜಿಕ, ಅಚಾರಿತ್ರಿಕ ಮತ್ತು ಅಸಾಂಸ್ಕೃತಿಕ ನಿಲುವುಗಳಾಗಿರುತ್ತವೆ ಇಲ್ಲವೇ; ಶುದ್ಧ ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ನಿಲುವುಗಳಾಗಿರುತ್ತವೆ. ಆದರೆ, ಸಾಂಸ್ಕೃತಿಕ ವಿಮರ್ಶೆ ಹೀಗೆ ಸಾಹಿತ್ಯ ಕೃತಿ ಅಥವಾ ಪಠ್ಯವನ್ನು

ಕೇವಲ ಸ್ವಾಯತ್ತ ಕಲಾಕೃತಿ ಎಂದಾಗಲೀ ಅಥವಾ ಆಶಯಾಭಿವ್ಯಕ್ತಿಸಾಧನ ಎಂದಾಗಲೀ ನಂಬುವುದಿಲ್ಲ. ವಾಸ್ತವವಾಗಿ ಯಾವುದೇ ಕಾಲಘಟ್ಟದ ಪಠ್ಯ ಸಹ ಏಕಕಾಲಕ್ಕೆ ತಾನು ರಚನೆಯಾಗುತ್ತಿರುವ ಕಾಲ ಅಥವಾ ಸಂದರ್ಭದ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸನ್ನಿವೇಶದ ಅಭಿವ್ಯಕ್ತಿಯಾಗಿರುವಂತೆಯೇ, ಅವುಗಳನ್ನು ಕುರಿತ ವಿಶ್ಲೇಷಣೆ ಮತ್ತು ವಿಮರ್ಶೆ ಕೂಡಾ ಆಗಿರುತ್ತದೆ. ಈ ಕಾರಣದಿಂದಲೇ ಅದು ತನ್ನದೇ ಆದ ವಿಶಿಷ್ಟ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ಸೃಷ್ಟಿಸುವ ಶಕ್ತಿಯನ್ನು ತನ್ನ ಆಂತರ್ಯದಲ್ಲಿ ಸದಾ ಜೀವಂತವಾಗಿ ಇಟ್ಟುಕೊಂಡಿರುತ್ತದೆ ಎನ್ನುವುದು ಪಠ್ಯದ ಸ್ವರೂಪ ಕುರಿತು ಸಾಂಸ್ಕೃತಿಕ ವಿಮರ್ಶೆ ಹೊಂದಿರುವ ಮುಖ್ಯವಾದ ಧೋರಣೆಯಾಗಿದೆ. ಆದ್ದರಿಂದಲೇ ಇದು ಸಾಹಿತ್ಯ ಮತ್ತು ಪಠ್ಯದ ವಿಶ್ಲೇಷಣೆಯಲ್ಲಿ ಕೃತಿಕಾರ, ಕೃತಿ, ಓದುಗ ಮತ್ತು ಸಮಾಜ ಅಥವಾ ಸಂಸ್ಕೃತಿಗಳ ಚಲನಶೀಲ ಆಯಾಮಗಳಿಗೆ ಮನ್ನಣೆ ನೀಡುತ್ತದೆ. ಹೀಗಾಗಿ, ವಿಶ್ಲೇಷಣೆಯಲ್ಲಿ ಬಹುರೂಪಿ ಪರಿಭಾಷೆಗಳು ಮತ್ತು ಪರಿಕಲ್ಪನೆಗಳನ್ನು ಅರ್ಥಪೂರ್ಣವಾಗಿ ಬಳಸಲು ಪ್ರಯತ್ನಿಸುತ್ತದೆ.

ಇಷ್ಟೇ ಅಲ್ಲದೆ ಇವುಗಳ ಬಳಕೆಯಲ್ಲಿ ಸಹ ವ್ಯಾಪಕವಾದ ವೈವಿಧ್ಯತೆ ಮತ್ತು ಬಹುರೂಪತೆಗಳಿವೆ. ಸಾಂಸ್ಕೃತಿಕ ವಿಮರ್ಶೆ ತನ್ನ ಸಾಂದರ್ಭಿಕ ಅಗತ್ಯತೆಗನುಸಾರವಾಗಿ ಇವುಗಳನ್ನು ಬೇರೆ ಬೇರೆ ಸ್ತರಗಳಲ್ಲಿ ವಿಶ್ಲೇಷಣಾ ಸಾಧನಗಳಾಗಿ ಉಪಯೋಗಿಸುವುದು ಸಾಮಾನ್ಯವಾದ ಪ್ರಕ್ರಿಯೆಯಾಗಿದೆ. ಪ್ರಧಾನಧಾರೆಯ ರೂಢಿಗತ ಪರಿಭಾಷೆ ಮತ್ತು ಪರಿಕಲ್ಪನೆಗಳನ್ನು ಹೊಸ ಅರ್ಥಕ್ರಮಗಳಲ್ಲಿ ಬಳಸುವುದು, ವಿವಿಧ ಪಾಶ್ಚಾತ್ಯ ಮೂಲಗಳ ಮತ್ತು ಹಿನ್ನೆಲೆಗಳ ಪರಿಭಾಷೆಗಳು ಮತ್ತು ಪರಿಕಲ್ಪನೆಗಳನ್ನು ಇಲ್ಲಿನ ಸ್ಥಳೀಯ ಸಂದರ್ಭಗಳಿಗನುಸಾರವಾಗಿ ಪರಿಷ್ಕರಿಸಿ ಪ್ರಯೋಗಿಸುವುದು ಮತ್ತು ಅಗತ್ಯಾನುಸಾರ ನವೀನ ಪರಿಭಾಷೆಗಳು ಹಾಗೂ ಪರಿಕಲ್ಪನೆಗಳನ್ನು ಸೃಷ್ಟಿಸುವುದು, ಮೊದಲಾದವು ಇಂಥ ಕೆಲವು ಮುಖ್ಯ ಮಾದರಿಗಳಾಗಿವೆ. ಈ ಒಟ್ಟಾರೆಯಾದ ವಿದ್ಯಮಾನವನ್ನು ತರೀಕೆರೆ ಅವರು ತಮ್ಮ 'ಸಾಂಸ್ಕೃತಿಕ ಅಧ್ಯಯನ' (೨೦೦೪) ಕೃತಿಯಲ್ಲಿ 'ಪರಿಕಲ್ಪನೆಗಳ ಸಾವು ಮತ್ತು ಮರುಹುಟ್ಟು' ಎನ್ನುವ ಮಾತಿನ ಮೂಲಕ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಬಹುಮುಖ್ಯವಾದ ಸಂಗತಿಯೆಂದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಭಾಷೆಗಳು ಮತ್ತು ಪರಿಕಲ್ಪನೆಗಳು ಕೇವಲ ಸಾಹಿತ್ಯಕ ವಲಯಕ್ಕೆ ಮಾತ್ರ ಸಂಬಂಧಪಟ್ಟವುಗಳಾಗಿರುವುದಿಲ್ಲ. ಇವು ವಿವಿಧ ಮಾನವಿಕ ಕ್ಷೇತ್ರಗಳ ಜ್ಞಾನರೂಪಗಳ ಮತ್ತು ಸಾಂಸ್ಕೃತಿಕ ತತ್ವವಾದಗಳ ಹಾಗೂ ಸಿದ್ಧಾಂತಗಳ ಜಗತ್ತಿಗೂ ಕೂಡಾ ಸೇರಿದವುಗಳಾಗಿವೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಕೇವಲ ಪಠ್ಯದ ಅರ್ಥ ಮತ್ತು ಆಶಯಗಳಲ್ಲಿ ಮಾತ್ರವೇ ಆಸಕ್ತವಾಗದಿರುವುದರಿಂದ, ಸಾಹಿತ್ಯ ಕೃತಿ ಅಥವಾ ಪಠ್ಯಗಳ ವಿಶ್ಲೇಷಣೆ ಮತ್ತು ಮೌಲ್ಯಮಾಪನ ಕಾರ್ಯಮಾದರಿಗಳಿಗಷ್ಟೇ ಸೀಮಿತಗೊಳ್ಳದೆ ಸಂಸ್ಕೃತಿ ಸ್ವರೂಪ ಹಾಗೂ ಸಾಂಸ್ಕೃತಿಕ ರಾಜಕಾರಣದ ವಿನ್ಯಾಸಗಳನ್ನು ಪಠ್ಯದ ವಿಶ್ಲೇಷಣೆ ಮೂಲಕ ಅರಿಯುವ ಪ್ರಯತ್ನವನ್ನು ಎಂದರೆ, 'ಡಿಸ್ಕೋರ್ಸ್' ಅನ್ನು ತನ್ನ ಮುಖ್ಯವಾದ ಉದ್ದೇಶವಾಗಿ ಹೊಂದಿರುವುದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರಿಭಾಷೆಗಳು ಮತ್ತು

ಪರಿಕಲ್ಪನೆಗಳು ಬಹುಶಿಸ್ತುಗಳ ಹಿನ್ನೆಲೆಯ ಸಂಶ್ಲೇಷಣಾತ್ಮಕ ಸ್ವರೂಪದ್ದವುಗಳಾಗಿವೆ. ಇವು ವಿಮರ್ಶಕನ ಸಾಹಿತ್ಯ, ಸಮಾಜ, ಸಂಸ್ಕೃತಿ, ಚರಿತ್ರೆ ಮತ್ತು ರಾಜಕಾರಣ ಕುರಿತ ದೃಷ್ಟಿಕೋನಕ್ಕನುಸಾರವಾಗಿ ಬೇರೆ ಬೇರೆ ನೆಲೆಗಳಲ್ಲಿ ಬಳಕೆಯಾಗುತ್ತಿವೆ. ಹಾಗೆಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಆಯಾಮಗಳಲ್ಲಿ ವಿವಿಧ ರೂಪಗಳು ಮತ್ತು ಮಾದರಿಗಳಿರುವುದಕ್ಕೆ ಅನುಗುಣವಾಗಿ ಕೂಡಾ ಹಲವು ವ್ಯತ್ಯಾಸಾತ್ಮಕ ನೆಲೆಗಳಲ್ಲಿ ಬಳಕೆಯಾಗುತ್ತಿವೆ. ಇಂಥ ಸಾಹಿತ್ಯಕ, ಸಾಮಾಜಿಕ, ಆರ್ಥಿಕ, ಭಾಷಿಕ, ಧಾರ್ಮಿಕ, ರಾಜಕೀಯ ಮತ್ತು ಪರಿಸರಾತ್ಮಕ ಪರಿಭಾಷೆಗಳು ಹಾಗೂ ಪರಿಕಲ್ಪನೆಗಳು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಮಾನ್ಯವಾಗಿ ಪ್ರಯೋಗವಾಗುತ್ತಿವೆ. ಇವುಗಳ ಬಳಕೆಯ ಹಿಂದೆ ಮುಖ್ಯವಾಗಿ ಸಾಮಾಜಿಕ ನ್ಯಾಯಸಾಧನೆ, ರಾಜಕೀಯ ನ್ಯಾಯಸಾಧನೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಹುಡುಕಾಟಗಳಂಥ ಹಾಗೂ ಪ್ರತಿಪಾದನೆಗಳಂಥ ಗಂಭೀರವಾದ ಪ್ರಶ್ನೆಗಳಿವೆ.

೪.೭ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಧಾನಗಳು

ಸಾಹಿತ್ಯದ ಅನುಸಂಧಾನದಲ್ಲಿ ಸಾಹಿತ್ಯಾತ್ಮಕ ಏಕಶಿಸ್ತು ವಿಧಾನ ಮತ್ತು ಅದರ ವಿವಿಧ ಸಾಧನಗಳಿಗಿಂತ ಸಂಪೂರ್ಣ ಬೇರೆಯಾದ ವಿಶ್ಲೇಷಣಾ ವಿಧಾನಗಳನ್ನು ಸಾಂಸ್ಕೃತಿಕ ವಿಮರ್ಶೆಯು ಬಳಸುತ್ತದೆ. ಸಾಮಾನ್ಯವಾಗಿ ಇವು ಬಹುರೂಪಿಯಾಗಿರುತ್ತವೆ ಹಾಗೂ ಬಹುಸ್ತರೀಯವಾಗಿರುತ್ತವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯ ಮತ್ತು ಪಠ್ಯದ ವಿಶ್ಲೇಷಣೆಗಳಲ್ಲಿ ಪ್ರಸ್ತುತ ಇಂಥ ಬಹುರೂಪಿ ಹಾಗೂ ಬಹುಸ್ತರೀಯ ವಿಧಾನಗಳನ್ನು ಬಳಸಲಾಗುತ್ತಿದೆ. ಇಂಥ ಪ್ರಮುಖ ನಾಲ್ಕು ವಿಧಾನಗಳನ್ನು ಗುರುತಿಸಬಹುದು. ಅವುಗಳೆಂದರೆ, ಅ. ಸಂಶ್ಲೇಷಣಾತ್ಮಕ ವಿಧಾನ ಆ. ವಾಗ್ವಾದಾತ್ಮಕ ವಿಧಾನ ಇ. ಸಂಘರ್ಷಾತ್ಮಕ ವಿಧಾನ ಮತ್ತು ಈ. ಸಂಕಥನಾತ್ಮಕ ವಿಧಾನ.

ಇವು ಬಳಕೆಯಾಗುತ್ತಿರುವ ಸ್ವರೂಪ ಮತ್ತು ಅದರ ಹಿನ್ನೆಲೆ ಕುರಿತು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗಿದೆ.

೪.೭.೧ ಸಂಶ್ಲೇಷಣಾತ್ಮಕ ವಿಧಾನ

ಇದು ಈಗಾಗಲೇ ಪ್ರಸ್ತಾಪಿಸಲಾಗಿರುವ ಏಕಶಿಸ್ತು ವಿಧಾನ ಮತ್ತು ಅದರ ವಿವಿಧ ಸಾಧನಗಳಿಗೆ ಸಂಪೂರ್ಣ ವಿರುದ್ಧವಾದ ಅಧ್ಯಯನ ಕ್ರಮ. ಏಕಶಿಸ್ತು ವಿಧಾನ ಸಾಮಾನ್ಯವಾಗಿ ವಿಮರ್ಶೆಯ ಉದ್ದೇಶ ಮತ್ತು ಗುರಿಯನ್ನು ಅತ್ಯಂತ ಸೀಮಿತ ಮತ್ತು ನಿರ್ದಿಷ್ಟ ಅರ್ಥದಲ್ಲಿ ಭಾವಿಸುತ್ತದೆ. ಅದು 'ಸಹೃದಯ ಸಂವಾದ' ಆಗಿರಬಹುದು ಅಥವಾ 'ರೂಪನಿಷ್ಠ' ಆಸಕ್ತಿ ಆಗಿರಬಹುದು. ಒಟ್ಟಾರೆಯಾಗಿ ವಿಮರ್ಶೆಯು ಸಾಹಿತ್ಯ ಮತ್ತು ಪಠ್ಯ ಕುರಿತು ತಾಳುವ ಧೋರಣೆ ಮಾತ್ರ ಅತ್ಯಂತ ಸೀಮಿತ ಮತ್ತು ಪರಿಮಿತ ಎನ್ನುವುದು ವಾಸ್ತವ ವಿಚಾರವಾಗಿದೆ.

ಸಾಹಿತ್ಯ ಮತ್ತು ಪಠ್ಯಗಳ ಸ್ವರೂಪ ಹಾಗೂ ಅವುಗಳ ಕಾರ್ಯೋದ್ದೇಶಗಳನ್ನು ಸಾಂಸ್ಕೃತಿಕ ವಿಮರ್ಶೆ ಬಹುವ್ಯಾಪಕವಾದ ಆಯಾಮಗಳಲ್ಲಿ ಗ್ರಹಿಸುತ್ತದೆ. ಇದು ಕೇವಲ ಸೌಂದರ್ಯವಾದಿ ಅಥವಾ ಕಲಾವಾದಿ ಧೋರಣೆಗಳಿಗಿಂತ ಅತ್ಯಂತ ವಿಶಾಲವಾದ ನೆಲೆಗಳಿಂದ ಕೂಡಿದ್ದಾಗಿದೆ. ಯಾವುದೇ ಭಾಷೆಯ ಸಾಹಿತ್ಯಕ್ಕೂ ಅಥವಾ ಪಠ್ಯಕ್ಕೂ ಹಾಗೂ ಆ ಭಾಷಿಕ ಪರಿಸರದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಭಾಷಿಕ ಸಂಗತಿಗಳಲ್ಲಿಗೂ ನೇರವಾದ ಮತ್ತು ಅತ್ಯಂತ ಸಂಕೀರ್ಣವಾದ ಸಂಬಂಧವಿರುತ್ತದೆ. ಹೊರರೂಪಕ್ಕೆ ಕೇವಲ ಒಂದು ಕಲಾಕೃತಿಯಂತೆ ಅಥವಾ ಭಾಷಿಕ ರಚನೆಯಂತೆ ತೋರುವ ಪಠ್ಯವು ಅದರ ಒಳರೂಪದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಭಾಷಿಕ ಸಂಕಥನದ ಪ್ರಭಾವಶಾಲಿಯಾದ ಮಾಧ್ಯಮ ಕೂಡಾ ಆಗಿರುತ್ತದೆ ಎನ್ನುವುದು ಸಾಂಸ್ಕೃತಿಕ ವಿಮರ್ಶೆಯು ಪಠ್ಯದ ಸ್ವರೂಪ ಕುರಿತು ತಾಳಿರುವ ಅರ್ಥಪೂರ್ಣವಾದ ನಿಲುವು. ಹೀಗಾಗಿಯೇ, ಪಠ್ಯವನ್ನು ಕೇವಲ ಸ್ವತಂತ್ರ, ಸ್ವಾಯತ್ತ, ಸ್ವಾಭಿಮುಖ ಮತ್ತು ನಿರಪೇಕ್ಷ ರಚನೆ ಎನ್ನುವ ಪರಿಮಿತವಾದ ನಿಲುವಿಗೆ ಈ ವಿಮರ್ಶೆಯ ತೀವ್ರ ವಿರೋಧವಿದೆ. ಆದ್ದರಿಂದಲೇ ಇದು ಪಠ್ಯವನ್ನು ಮುಖ್ಯವಾಗಿ ಸಾಪೇಕ್ಷ ರಚನೆ ಎಂದು ಭಾವಿಸುತ್ತದೆ. ಸಾಹಿತ್ಯ ಮತ್ತು ಪಠ್ಯ ಎನ್ನುವುದು ಏಕಕಾಲಕ್ಕೆ ಸಾಹಿತ್ಯಕ, ಸಾಮಾಜಿಕ, ಆರ್ಥಿಕ, ಭಾಷಿಕ ಮತ್ತು ಬೌದ್ಧಿಕ ಆಯಾಮಗಳಿಂದ ಕೂಡಿರುವ ಬಹುಸ್ತರಗಳ ರಚನೆ ಎಂದು ನಂಬುತ್ತದೆ.

ಸಾಹಿತ್ಯ ಅಥವಾ ಪಠ್ಯವು ಕೇವಲ ಲೇಖಕನ ಆಶಯಗಳ ಮೊತ್ತವಾಗಲೀ, ಅರ್ಥದ ಒಗಟಾಗಲೀ. ಆಶಯಗಳ ಕಂತೆಯಾಗಲೀ ಇಲ್ಲವೇ ಆಕೃತಿಯ ಉತ್ಪನ್ನವಾಗಲೀ ಆಗಿರುವುದಿಲ್ಲ. ಅಲ್ಲದೆ ಇವೆಲ್ಲವೂ ಎಂದಿಗೂ ಪ್ರತ್ಯೇಕವಾಗಿ ಇರುವುದೂ ಇಲ್ಲ. ಹಾಗೆಯೇ, ಲೇಖಕ ಬಯಸಿದಂತೆಯೇ ಇವು ಪಠ್ಯದಲ್ಲಿ ಸಂಭವಿಸಿಯೂ ಇರುವುದಿಲ್ಲ. ಲೇಖಕನ ಕಾಲ ಹಾಗೂ ಸಂದರ್ಭದ ಒಲವು-ನಿಲುವುಗಳು ಕೃತಿ ರಚನೆಯ ಸಂದರ್ಭದಲ್ಲಿ ಆತನ ಆಶಯಗಳಿಗೆ ಪ್ರೇರಣೆಗಳನ್ನು ನೀಡಿರಬಹುದು. ಹಾಗೆಂದ ಮಾತ್ರಕ್ಕೇ ಅವುಗಳೆಲ್ಲವೂ ಲೇಖಕನ ಇಂಗಿತಾರ್ಥದಲ್ಲೇ ಕೃತಿಯಲ್ಲಿ ಮೈದಾಳಿರುವುದಿಲ್ಲ. ಆತನ ಆಶಯಗಳನ್ನು ಮೀರಿ ಬೆಳೆದಿರಬಹುದು ಅಥವಾ ಬೆಳೆಯದಿರಬಹುದು. ಹೀಗಾಗಿ, ಕೃತಿಯೇ ತನ್ನ ವಿಶಿಷ್ಟವಾದ ಮತ್ತು ಸ್ವತಂತ್ರವಾದ ಹೊಸ ಆಶಯಗಳನ್ನು ಕಟ್ಟಿಕೊಡುತ್ತಿರುತ್ತದೆ. ಹಾಗೆಯೇ, ಇಂಥ ಪಠ್ಯವನ್ನು ಬೇರೆಬೇರೆ ಕಾಲಘಟ್ಟದಲ್ಲಿ ಅಧ್ಯಯನ ಮಾಡುವ ಅಥವಾ ಅನುಸಂಧಾನ ಮಾಡುವ ವಿವಿಧ ಓದುಗರೂ ಕೂಡಾ ಪರಸ್ಪರ ಬೇರೆ ಬೇರೆಯಾಗಿರುವ ಆಶಯಗಳನ್ನು ಹೊಂದಿರುತ್ತಾರೆ. ಇದಕ್ಕೆ ಅವರವರ ಕಾಲದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ ಮತ್ತು ವೈಯಕ್ತಿಕ ಹಿನ್ನೆಲೆಗಳು ಮುಖ್ಯವಾದ ಕಾರಣಗಳಾಗಿರುತ್ತವೆ. ಇವೆಲ್ಲವೂ ಸೇರಿದಾಗ ಹುಟ್ಟಿಕೊಳ್ಳುವ ಆಶೋತ್ತರಗಳು ಯಾವಾಗಲೂ ಏಕರೂಪಿ, ಏಕಸ್ತರ ಅಥವಾ ಏಕನೆಲೆಯವುಗಳಾಗಿರುವುದಿಲ್ಲ. ಹೀಗಾಗಿಯೇ, ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಂಶ್ಲೇಷಣಾತ್ಮಕ ವಿಧಾನ ಅನಿವಾರ್ಯವೂ ಮತ್ತು ಅರ್ಥಪೂರ್ಣವೂ ಆದ ವಿಧಾನವಾಗಿದೆ.

ಈ ವಿಧಾನ ಬಹುಮುಖ್ಯವಾಗಿ ಅನ್ಯಶಿಸ್ತು ಮತ್ತು ಬಹುಶಿಸ್ತು ನೆಲೆಗಳಿಂದ ಕೂಡಿದೆ. ಪಠ್ಯ ರಚನೆಯಾದ ಸಂದರ್ಭದ ವಿವಿಧ ಸಂಗತಿಗಳ ಹಿನ್ನೆಲೆ, ಪಠ್ಯವನ್ನು ಅನುಸಂಧಾನ ಮಾಡುತ್ತಿರುವ ಕಾಲಘಟ್ಟದಲ್ಲಿ ಅದು ಮುಖಾಮುಖಿಗೊಳಗಾಗುತ್ತಿರುವ ಕ್ರಮ ಮತ್ತು ಇದರ ಹಿಂದಿನ ಉದ್ದೇಶಗಳು ಸಂಶ್ಲೇಷಣಾತ್ಮಕ ವಿಧಾನದ ಅನ್ಯಶಿಸ್ತು ಹಾಗೂ ಬಹುಶಿಸ್ತು ಸಾಧನಗಳನ್ನು ನಿರ್ಧರಿಸುತ್ತವೆ.

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯು ಚಾರಿತ್ರಿಕ, ಸಾಮಾಜಿಕ, ಮನಃಶಾಸ್ತ್ರೀಯ ಅಥವಾ ಮನೋವಿಶ್ಲೇಷಣಾತ್ಮಕ ಮತ್ತು ಧಾರ್ಮಿಕ ಶಿಸ್ತುಗಳ ಸಂಶ್ಲೇಷಣಾತ್ಮಕ ವಿಧಾನವನ್ನು ಬಳಸುತ್ತಿರುವುದನ್ನು ಕಾಣಬಹುದು. ವಚನ ಚಳವಳಿ, ವಿವಿಧ ವಚನಕಾರರು ಮತ್ತು ವಚನಕಾರ್ತಿಯರ ಅನುಸಂಧಾನದಲ್ಲಿ ಇಂಥ ಕ್ರಮಗಳ ವ್ಯಾಪಕವಾದ ಬಳಕೆ ಇದೆ. ಜನ್ನನ ಕೃತಿಗಳ ವಿಶ್ಲೇಷಣೆಯಲ್ಲಿ ಇವುಗಳನ್ನು ವೈವಿಧ್ಯಮಯವಾದ ಅನ್ವಯಿಕತೆ ಕಂಡುಬರುತ್ತದೆ. ಹಾಗೆಯೇ ದಲಿತ ಸಾಂಸ್ಕೃತಿಕ ವಿಮರ್ಶೆಯು ಸಮಾಜ, ಚರಿತ್ರೆ ಮತ್ತು ರಾಜಕೀಯ ಜ್ಞಾನಶಿಸ್ತುಗಳ ತಿಳಿವಳಿಕೆಯನ್ನು ಪಠ್ಯಾನುಸಂಧಾನದಲ್ಲಿ ಹೆಚ್ಚಾಗಿ ಬಳಸುತ್ತಿವೆ. ವಿವಿಧ ಮಾರ್ಕ್ಸ್‌ವಾದಿ ವಿಮರ್ಶೆಗಳು ಸಮಾಜ, ಚರಿತ್ರೆ, ಸಂಸ್ಕೃತಿ, ಅರ್ಥಶಾಸ್ತ್ರ ಮತ್ತು ತತ್ವಶಾಸ್ತ್ರದ ಚಿಂತನೆಗಳನ್ನು ವಿಶ್ಲೇಷಣೆಯ ದೃಷ್ಟಿಕೋನಗಳಾಗಿ ಉಪಯೋಗಿಸುತ್ತಿವೆ. ಈ ಒಟ್ಟು ವಿದ್ಯಮಾನವನ್ನು ಡಿ.ಆರ್. ಅವರು ಹೇಳುವ 'ಸಕಲಾನುಸಂಧಾನ' ಮತ್ತು 'ಭಿನ್ನತೆಗಳ ಪಥಕ್ಕರಣ' ಎನ್ನುವ ಪರಿಭಾಷೆಗಳಲ್ಲಿ ಸ್ಥೂಲವಾಗಿ ಗುರುತಿಸಬಹುದು. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ಪಠ್ಯದ ವಿಶ್ಲೇಷಣೆಯ ಸಂದರ್ಭದಲ್ಲಿ ಈ ಸಂಶ್ಲೇಷಣಾತ್ಮಕ ವಿಧಾನವನ್ನು ಹಲವು ನೆಲೆಗಳಲ್ಲಿ ಹಾಗೂ ಹಲವು ಸ್ತರಗಳಲ್ಲಿ ಬಳಸುತ್ತಿವೆ.

ಪಠ್ಯದ ವಿಶ್ಲೇಷಣೆಯಲ್ಲಿ ಈ ವಿಧಾನ ಎಷ್ಟೇ ಉಪಯುಕ್ತತೆಯಿಂದ ಕೂಡಿದ್ದರೂ ಸಹ ಮುಖ್ಯವಾದ ಕೆಲವು ಮಿತಿಗಳನ್ನು ಸಹ ಒಳಗೊಂಡಿದೆ. ತರೀಕೆರೆ ಅವರು ತಮ್ಮ 'ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಈ ವಿಧಾನದ ಬಳಕೆಯು ಒಳಗೊಂಡಿರುವ ಸಮಸ್ಯೆಗಳನ್ನು ಕುರಿತು ಹೇಳಿರುವ ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಅವರು, "ಬಹುಶಿಸ್ತೀಯ ವಿಧಾನವು ಅಪಾರ ಸಿದ್ಧತೆಯನ್ನು ನಿರೀಕ್ಷಿಸುತ್ತದೆ. ಸಮಾಜಶಾಸ್ತ್ರ, ಚರಿತ್ರೆ, ತತ್ವಶಾಸ್ತ್ರ, ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ವಿದ್ವತ್ ಪ್ರವೇಶ ಬೇಡುತ್ತದೆ. ಎಷ್ಟು ಸಿದ್ಧತೆ ಮಾಡಿಕೊಂಡರೂ ನಿರ್ದಿಷ್ಟ ಜ್ಞಾನಶಿಸ್ತಿನಲ್ಲೆ ಪಳಗಿದವರ ಪರಿಣತಿ ಬರುವುದು ಕಷ್ಟ. ಇದರಿಂದ ಬಹುಶಿಸ್ತೀಯ ರೂಪದ ಸಾಂಸ್ಕೃತಿಕ ವಿಧಾನದಿಂದ ಕೆಲವೊಮ್ಮೆ ಮೇಲ್ಪದರ ತಿಳಿವಳಿಕೆಯಿಂದ ನಿಭಾಯಿಸುವ ಸಂಭವಗಳು ಹೆಚ್ಚಿವೆ"[೧೮] ಎಂದು ವಿವರಿಸುತ್ತಾರೆ. ಇಷ್ಟಾದರೂ, ಇದೊಂದು ಉಪಯುಕ್ತವಾದ ವಿಧಾನವೇ ಆಗಿದೆ ಎನ್ನುವ ಅವರ ಅಭಿಪ್ರಾಯ ಸರಿಯಾಗಿದೆ. ಏಕೆಂದರೆ ಇದು ಮೂಲತಃ ಈ ವಿಧಾನದ ದೋಷವಲ್ಲ. ಅದನ್ನು ಉಪಯೋಗಿಸುವವರ ಅಸಾಮರ್ಥ್ಯ ಮತ್ತು ಸಿದ್ಧಾತಾ ಶಕ್ತಿಯ ಮಿತಿಗೆ ಸಂಬಂಧಪಟ್ಟ ಸಮಸ್ಯೆಯಾಗಿದೆ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ

ಸಂದರ್ಭದಲ್ಲಿ ಸಾಹಿತ್ಯೇತರ ಶಿಸ್ತು ಅಥವಾ ಜ್ಞಾನರೂಪದ ತಿಳಿವಳಿಕೆಯ ಸಂಪರ್ಕವೇ ಇಲ್ಲದೆ ಸಾಹಿತ್ಯ ಮತ್ತು ಪಠ್ಯದ ವಿಶ್ಲೇಷಣೆ ಮಾಡುವುದು ಬಹುಮಟ್ಟಿಗೆ ಅಪ್ರಸ್ತುತ ಎನ್ನುವಂತೆ ಆಗಿದೆ. ಹೀಗಾಗಿ ಸಂಶ್ಲೇಷಣಾತ್ಮಕ ವಿಧಾನದ ವಿವಿಧ ರೂಪಗಳು ಇಂದಿನ ಸಾಂಸ್ಕೃತಿಕ ವಿಮರ್ಶಕರ ಮುಖ್ಯವಾದ ವಿಶ್ಲೇಷಣಾ ವಿಧಾನಗಳಾಗಿ ಸ್ವೀಕೃತಗೊಂಡಿವೆ.

ಸಾಹಿತ್ಯ ಸಿದ್ಧಾಂತಗಳು, ತತ್ವವಾದಗಳು ಮತ್ತು ತತ್ವಶಾಸ್ತ್ರಗಳ ವಿಚಾರಗಳು ಹಾಗೂ ಚಿಂತನೆಗಳ ಸಂಶ್ಲೇಷಣಾತ್ಮಕ ವಿಧಾನದಿಂದ ಡಿ.ಆರ್. ಅವರು ಪಠ್ಯದ ವಿಶ್ಲೇಷಣೆಗೆ ರೂಪಿಸಿಕೊಳ್ಳುವ ತಾತ್ವಿಕತೆ; ಸಾಹಿತ್ಯ, ಸಂಸ್ಕೃತಿ ಮತ್ತು ಚರಿತ್ರೆಗಳ ಪೃಥಕ್ಕರಣದಿಂದ ಕಲ್ಗುಡಿ ಹಾಗೂ ಚೆನ್ನಿ ಅವರು ರಚಿಸಿಕೊಳ್ಳುವ ದೃಷ್ಟಿಕೋನಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದ ಸಂಶ್ಲೇಷಣಾ ವಿಧಾನದ ಎರಡು ಮಹತ್ವಪೂರ್ಣವಾದ ಮಾದರಿಗಳಾಗಿವೆ.

೪.೭.೨ ವಾಗ್ವಾದಾತ್ಮಕ ವಿಧಾನ

ಸಾಹಿತ್ಯ ಮತ್ತು ಪಠ್ಯವನ್ನು ವಸ್ತುನಿಷ್ಠ ಅಥವಾ ನಿರಪೇಕ್ಷೆ ನೆಲೆಯಲ್ಲಿ ವಿಶ್ಲೇಷಿಸುವ ಕ್ರಮಕ್ಕೆ ತಾತ್ವಿಕವಾಗಿ ವಿರುದ್ಧವಾದುದು ವಾಗ್ವಾದಾತ್ಮಕ ವಿಧಾನ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ವಾಗ್ವಾದಾತ್ಮಕ ವಿಧಾನದ ಇಂಥ ಪ್ರಮುಖವಾದ ಎರಡು ರೂಪಗಳು ಬಳಕೆಯಲ್ಲಿವೆ. ಸಾಹಿತ್ಯ ಕೃತಿಯನ್ನು ಅಥವಾ ಪಠ್ಯವನ್ನು ನಿರ್ದಿಷ್ಟವಾದ ವಾಗ್ವಾದಕ್ಕೆ ಆಕರ ಸಾಮಗ್ರಿಯೆಂದು ಭಾವಿಸಿಕೊಂಡು ವಿಶ್ಲೇಷಣೆ ಮಾಡುವುದು ಇಂಥ ಒಂದು ವಿಧಾನ. ಇದನ್ನು ಆನ್ವಯಿಕ ವಾಗ್ವಾದ ವಿಧಾನ ಎಂದು ಗುರುತಿಸಬಹುದು. ಹಾಗೆಯೇ ಸಾಹಿತ್ಯಕೃತಿ ಅಥವಾ ಪಠ್ಯದ ವಿಶ್ಲೇಷಣೆಯ ಮೂಲಕವೇ ವಾಗ್ವಾದವೊಂದನ್ನು ಕಟ್ಟುವುದು ಇನ್ನೊಂದು ವಿಧಾನ. ಇದನ್ನು ಸೃಜನಾತ್ಮಕ ವಾಗ್ವಾದ ವಿಧಾನ ಎಂದು ಕರೆಯಬಹುದು. ಇಂದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳಲ್ಲಿ ಆನ್ವಯಿಕ ವಾಗ್ವಾದ ವಿಧಾನದ ಹೇರಳವಾದ ಬಳಕೆ ಕಂಡುಬರುತ್ತದೆ. ಸೃಜನಾತ್ಮಕ ವಾಗ್ವಾದ ವಿಧಾನದ ಪ್ರಯತ್ನಗಳು ಬಹಳ ಕಡಿಮೆ ಪ್ರಮಾಣದಲ್ಲಿದೆ. ಆದರೆ, ಸಾಂಸ್ಕೃತಿಕ ವಿಮರ್ಶೆಯ ವಿಕಾಸದ ದೃಷ್ಟಿಯಿಂದ ಸೃಜನಾತ್ಮಕ ವಾಗ್ವಾದ ವಿಧಾನಕ್ಕೆ ಅತ್ಯಂತ ಹೆಚ್ಚಿನ ಮಹತ್ವವಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ವಾಗ್ವಾದಾತ್ಮಕ ವಿಧಾನ ಯಾಕೆ ಹುಟ್ಟಿಕೊಂಡಿದೆ ಮತ್ತು ಇದರ ಪ್ರಸ್ತುತತೆ ಏನು ಎಂದು ಆಲೋಚಿಸಿದರೆ ಅದಕ್ಕೆ ವಿಮರ್ಶೆಯ ತಾತ್ವಿಕತೆ ಹಾಗೂ ಕಾರ್ಯಮಾದರಿಗಳಲ್ಲಿ ಆದ ರೂಢಮೂಲ ಪಲ್ಲಟಗಳು ಮುಖ್ಯವಾದ ಕಾರಣಗಳು ಎನ್ನುವ ವಿಚಾರ ಕಂಡುಬರುತ್ತದೆ. ಇದರ ಪರಿಣಾಮವಾಗಿ ವಿಮರ್ಶೆಯೆಂದರೆ, ಕೇವಲ ಅಭಿರುಚಿಯ ನಿರ್ಮಾಣ ಮತ್ತು ರಸಾನುಭವದ ಸ್ವರೂಪ ಕುರಿತ ತಾತ್ವಿಕ ಚರ್ಚೆ ಅಲ್ಲ. ಅದಕ್ಕೆ ಮಿಗಿಲಾಗಿ ವಿಮರ್ಶೆ ಎನ್ನುವುದು ಒಂದು ಭಾಷಿಕ ಮತ್ತು ಸಾಂಸ್ಕೃತಿಕ ಪರಿಸರದ ಒಟ್ಟಾರೆ ಆಗುಹೋಗುಗಳನ್ನು ಕುರಿತ ಗಂಭೀರವಾದ ವಿಶ್ಲೇಷಣೆ

ಹಾಗೂ ವ್ಯಾಖ್ಯಾನವಾಗಿರುತ್ತದೆ ಎನ್ನುವ ಗ್ರಹಿಕೆ ಪ್ರಾಮುಖ್ಯತೆ ಪಡೆದುಕೊಂಡಿದ್ದೇ ಈ ವಾಗ್ವಾದಾತ್ಮಕ ವಿಧಾನದ ಹುಟ್ಟಿಗೂ ಮತ್ತು ಅದರ ಪ್ರಸ್ತುತತೆಗೂ ಇರುವ ಬಹು ಮುಖ್ಯವಾದ ಕಾರಣವಾಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹಾಗೆ ನೋಡುವುದಾದರೆ, ಆರಂಭದಿಂದಲೂ ಅನೇಕ ವಾಗ್ವಾದಗಳು ನಡೆದಿವೆ ಮತ್ತು ಈಗಲೂ ನಡೆಯುತ್ತಿವೆ. ಇವುಗಳ ಸ್ವರೂಪಕ್ಕೂ ವಿಮರ್ಶೆಯಲ್ಲಿ ವಿಶ್ಲೇಷಣಾ ವಿಧಾನವಾಗಿ ಬಳಕೆಯಾಗುತ್ತಿರುವ ವಾಗ್ವಾದದ ವಿಧಾನಗಳ ಸ್ವರೂಪಕ್ಕೂ ಮುಖ್ಯವಾದ ವ್ಯತ್ಯಾಸವಿದೆ. ಒಂದು ನಿರ್ದಿಷ್ಟ ಸಾಮಾಜಿಕ, ಸಾಂಸ್ಕೃತಿಕ ಮತ್ತು ವರ್ಗದ ಹಿನ್ನೆಲೆಯನ್ನು ಹೊಂದಿರುವ ಲೇಖಕ ಭಾರತೀಯ ಸಂಸ್ಕೃತಿ, ಪುರಾಣ, ಚರಿತ್ರೆ ಮತ್ತು ಧರ್ಮ ಮೊದಲಾದವುಗಳನ್ನು ಇನ್ನೊಂದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ವರ್ಗದ ಹಿನ್ನಲೆಯವರಿಗೆ 'ಅಪ್ರಿಯ' ಅಥವಾ 'ಅಹಿತಕಾರಿ' ಎನ್ನುವಂತೆ ತಮ್ಮ ಕೃತಿಗಳಲ್ಲಿ ಚಿತ್ರಿಸುವುದು ಇಲ್ಲವೇ ವ್ಯಾಖ್ಯಾನಿಸುವುದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇಂಥ ವಾಗ್ವಾದಗಳು ಹುಟ್ಟುವುದಕ್ಕೆ ಪ್ರಧಾನವಾದ ಕಾರಣವಾಗಿದೆ. ಹಾಗೆ ನೋಡಿದರೆ ಸಾಹಿತ್ಯದ ಸ್ವರೂಪಕ್ಕೆ, ಆಶಯಗಳಿಗೆ ಅಥವಾ ಆಕೃತಿಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಹೆಚ್ಚು ವ್ಯಾಪಕವಾದ ಮತ್ತು ಆಳವಾದ ವಾಗ್ವಾದಗಳು ನಡೆದಿಲ್ಲ. ಆದರೆ ಕಳೆದ ಶತಮಾನದ ಎಪ್ಪತ್ತರ ದಶಕದ 'ಬೂಸಾ' ಚಳುವಳಿ ಮಾತ್ರ ಇದಕ್ಕೆ ಒಂದು ಪ್ರಮುಖವಾದ ಅಪವಾದವಾಗಿದೆ.

ಈ ದೃಷ್ಟಿಯಿಂದ ನೋಡಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮತ್ತು ಸಂಸ್ಕೃತಿ ಚಿಂತನೆಯಲ್ಲಿ ನಡೆಯುತ್ತಿರುವ ವಾಗ್ವಾದಗಳ ಪರಿಯೇ ಬೇರೆ. ಹಾಗೆಯೇ ಇವುಗಳ ಉದ್ದೇಶಗಳ ಮತ್ತು ಆಯಾಮಗಳ ಸ್ವರೂಪ ಕೂಡಾ ಸಾಕಷ್ಟು ಭಿನ್ನವಾದುದು. ಇದಕ್ಕಿರುವ ಕಾರಣಗಳೂ ಸಹ ವಿಶಿಷ್ಟವಾದವು. ಸಾಹಿತ್ಯ ವಿಮರ್ಶೆಯಲ್ಲಿ ಅನುಚೂನವಾಗಿ ಪ್ರಾಮುಖ್ಯತೆ ಪಡೆದುಕೊಂಡು ಬಂದಿದ್ದ ಪ್ರಧಾನಧಾರೆಯ ಪ್ರತಿಷ್ಠಿತ ವರ್ಗ ಮತ್ತು ಜಾತಿ ಸ್ವಭಾವದ ನೆಲೆಗಳು ತಮ್ಮ ಮಹತ್ವ ಕಳೆದುಕೊಂಡಿದ್ದೇ ಈ ವಾಗ್ವಾದ ವಿಧಾನದ ಕಾರಣದಿಂದ. ಸಾಹಿತ್ಯ ವಿಮರ್ಶೆಯಲ್ಲಿ ಬಹುರೂಪಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಲಯಗಳ ಪಾಲ್ಗೊಳ್ಳುವಿಕೆಯ ಹಾಗೂ ಕ್ರಿಯಾತ್ಮಕತೆಯ ಪ್ರಮಾಣ ಹೆಚ್ಚಾದಂತೆ ವಾಗ್ವಾದ ವಿಧಾನ ಕೂಡಾ ತೀವ್ರವಾಗತೊಡಗಿತು. ಇದರ ಪರಿಣಾಮವಾಗಿ ವಿವಿಧ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯ ದನಿಗಳು ವಿಮರ್ಶೆಯನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ನ್ಯಾಯದ ಹಕ್ಕೊತ್ತಾಯದ ಆಗ್ರಹಪೂರ್ವಕ ಸಾಧನಗಳಾಗಿ ಬಳಸಲಾರಂಭಿಸಿದವು. ಸಾಹಿತ್ಯ ಮತ್ತು ಪಠ್ಯಗಳನ್ನು ಸಾಂಸ್ಕೃತಿಕ ರಾಜಕಾರಣದ ಸಮರ್ಥ ಸಾಧನವಾಗಿ ಬಳಸಲಾಗುತ್ತಿದೆ. ಆ ಮೂಲಕ ಶ್ರೇಣಿಕೃತ ತಾರತಮ್ಯ, ಪುರೋಹಿತಶಾಹಿ, ಊಳಿಗಮಾನ್ಯಶಾಹಿ ಮತ್ತು ಪುರುಷಶಾಹಿ ಮೌಲ್ಯಗಳನ್ನು ಅಬಾಧಿತವಾಗಿ ಪ್ರತಿಪಾದಿಸಲಾಗುತ್ತಿದೆ ಎನ್ನುವ ಬಹು ಮುಖ್ಯವಾದ ವಿಚಾರಗಳನ್ನು ಕುರಿತು ವಿವರಿಸುವುದಕ್ಕಾಗಿ ಹಾಗೂ ಅವುಗಳನ್ನು ಹಲವು ನೆಲೆಗಳಲ್ಲಿ ಪ್ರತಿರೋಧಿಸುವುದಕ್ಕಾಗಿ ಈ ವಿಧಾನವನ್ನು ವ್ಯಾಪಕವಾಗಿ ಬಳಸುವ ಪ್ರವೃತ್ತಿ ಹೆಚ್ಚಾಯಿತು.

ಕನ್ನಡದ ದಲಿತ ಸಾಂಸ್ಕೃತಿಕ ವಿಮರ್ಶೆ, ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆ ಮತ್ತು ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಗಳಲ್ಲಿ ಈ ವಿಧಾನ ಹಾಗೂ ಅದರ ವಿವಿಧ ರೂಪಗಳ ವ್ಯಾಪಕವಾದ ಬಳಕೆಯನ್ನು ಗುರುತಿಸಬಹುದು. ಮಾಲಗತ್ತಿ ಅವರ 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೯); ಮೊಗಳ್ಳಿ ಅವರ 'ತಕರಾರು' (೨೦೦೮) ಹಾಗೂ ಕನ್ನಡದ ವಾರಪತ್ರಿಕೆಯಾದ 'ಅಗ್ನಿ ಪತ್ರಿಕೆ'ಯ 'ಉರಿಗದ್ದಿಗೆ' ಎನ್ನುವ ಅಂಕಣದಲ್ಲಿ ಪ್ರಕಟವಾದ ಬರಹಗಳು; ವಿಜಯಾದಬ್ಬೆ ಅವರ 'ನಾರಿ–ದಾರಿ–ದಿಗಂತ' (೧೯೯೭), ಆಶಾದೇವಿ ಅವರ 'ಸ್ತ್ರೀಮತನವನ್ನುತ್ತರಿಸಲಾಗದೆ' (೨೦೦೬) ಮತ್ತು ಅನಂತಮೂರ್ತಿ ಅವರ 'ಬೆತ್ತಲೆ ಪೂಜೆ ಯಾಕೆ ಕೂಡದು' (೧೯೯೬) ಮೊದಲಾದ ಕೃತಿಗಳಲ್ಲಿ ಇಂಥ ಅನೇಕ ಬಗೆಯ ವಾಗ್ವಾದಾತ್ಮಕ ವಿಧಾನಗಳನ್ನು ಬಳಸಲಾಗಿದೆ. ಹಾಗೆಯೇ ಅನಂತಮೂರ್ತಿ ಅವರ 'ಕನ್ನಡ ಸಾಹತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ' ಮತ್ತು 'ಇಂಗ್ಲಿಷ್ ಬ್ರಾಹ್ಮಣ ಹಾಗೂ ಕನ್ನಡ ಶೂದ್ರ'ಗಳಂಥ ಪರಿಕಲ್ಪನೆಗಳು ಸಾಹಿತ್ಯ, ಭಾಷೆ, ಅಭಿವ್ಯಕ್ತಿ ವಿಧಾನ ಮತ್ತು ಸಂವಹನಶೀಲತೆಯ ವಿಚಾರಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ವಾಗ್ವಾದಾತ್ಮಕ ವಿಧಾನದ ಸಂದರ್ಭದಲ್ಲಿ ಬಳಸಲಾದ ಮಹತ್ವದ ಪರಿಕಲ್ಪನೆಗಳಾಗಿವೆ. ಸಮಕಾಲೀನ ದಲಿತ ಹಾಗೂ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ವಿಧಾನ ಹೆಚ್ಚು ಜನಪ್ರಿಯವಾಗಿದೆ.

ಸಾಹಿತ್ಯ ಮತ್ತು ಸಮಾಜದ ಸಂಬಂಧಗಳನ್ನು ಕುರಿತು ವಿಶ್ಲೇಷಣೆಯಲ್ಲಿ ಈ ವಿಧಾನವನ್ನು ಬಳಸುವುದರ ಹಿಂದೆ ಬಹುಮುಖ್ಯವಾಗಿ ರಾಜಕೀಯ ಪ್ರಶ್ನೆಗಳಿವೆ. ಇವು ಇಂದಿನ ಬದುಕಿನ ಸುಧಾರಣೆ ಹಾಗೂ ನಾಳಿನ ನೆಮ್ಮದಿಯ ಬಾಳಿನ ಕನಸಿನ ಆಶಯಗಳಿಂದ ಕೂಡಿವೆ. ಈಗ ಈ ವಿಧಾನಕ್ಕೆ ಜಾಗತೀಕರಣ ಒಡ್ಡಿರುವ ಸಂಕೀರ್ಣವಾದ ಸವಾಲುಗಳು ರಾಜಕೀಯ ಮಾತ್ರವಲ್ಲದೆ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆಗಳನ್ನು ಕೂಡಾ ಇದರೊಂದಿಗೆ ಜೋಡಿಸಿದೆ. ಆದ್ದರಿಂದ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ವಾಗ್ವಾದಾತ್ಮಕ ವಿಧಾನ ಹಲವು ಸ್ತರಗಳಲ್ಲಿ ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಕ್ರಿಯಾತ್ಮಕವಾಗಿದೆ.

೪.೭.೩ ಸಂಘರ್ಷಾತ್ಮಕ ವಿಧಾನ

ಸಾಹಿತ್ಯ ವಿಮರ್ಶೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಅನ್ಯಾಯಗಳ ವಿರುದ್ಧದ ಹೋರಾಟದ ಹಾಗೂ ಸಮಾನತೆಯ ಸಾಧನದ ಒಂದು ಮಹತ್ವಪೂರ್ಣವಾದ ಸಾಂಸ್ಕೃತಿಕ ರೂಪ ಎಂದು ಪರಿಗಣಿತವಾದ ನಂತರ ವಿಮರ್ಶೆಯ ವಿಶ್ಲೇಷಣೆಯಲ್ಲಿ 'ಸಂಘರ್ಷಾತ್ಮಕ ವಿಧಾನ' ಮುನ್ನೆಲೆಗೆ ಬಂದಿತು. ಶ್ರೇಣೀಕೃತ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಯು ವರ್ಣ, ವರ್ಗ, ಜಾತಿ ಮತ್ತು ಲಿಂಗದ ನೆಲೆಗಳಲ್ಲಿ ಹುಟ್ಟುಹಾಕಿರುವ ಅಮಾನವೀಯ ತಾರತಮ್ಯಗಳನ್ನು, 'ಸಾಂಸ್ಕೃತಿಕ ಮೌಲ್ಯ'ಗಳ ರೂಪದಲ್ಲಿ ಸಾಹಿತ್ಯ ಕೃತಿಗಳಲ್ಲಿ ಮತ್ತು ಪಠ್ಯಗಳಲ್ಲಿ ಪ್ರತಿಪಾದಿಸುತ್ತಾ ಬರಲಾಗಿದೆ. ಇವುಗಳಿಂದ ಶೋಷಿತರು, ಅಪಮಾನಿತರು ಮತ್ತು ದಮನಿತರು ವಿಮೋಚನೆಯಗಬೇಕಾದರೆ ಸಾಹಿತ್ಯ ಕೃತಿ ಅಥವಾ ಪಠ್ಯಗಳನ್ನು ಸಂಘರ್ಷದ ಕ್ರಮದಲ್ಲಿ

ಅನುಸಂಧಾನ ಮಾಡಬೇಕು. ಇದು ಏಕಕಾಲಕ್ಕೆ ಸಾಮಾಜಿಕ ಸಂಘರ್ಷವೂ ಹೌದು ಮತ್ತು ರಾಜಕೀಯ ಸಂಘರ್ಷವೂ ಹೌದು ಎನ್ನುವುದು ಸಾಂಸ್ಕೃತಿಕ ವಿಮರ್ಶೆಯ ನಂಬಿಕೆಯಾಗಿದೆ. ಸಾಂಸ್ಕೃತಿಕ ವಿಮರ್ಶೆಯ ಮೇಲೆ ಗಾಢವಾದ ಪ್ರಭಾವ ಬೀರಿದ ಕಾರ್ಲ್‌ಮಾರ್ಕ್ಸ್, ಅಂಬೇಡ್ಕರ್, ಫುಲೆ ಮತ್ತು ಪೆರಿಯಾರ್ ಮೊದಲಾದವರ ವಿಚಾರಧಾರೆಗಳು, ಹಾಗೆಯೇ ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿಯರಾದ ಸೀಮನ್ ದ ಬುವಾ, ಕೇಟ್ ಮಿಲ್ಲಟ್, ಜೂಡಿತ್ ಬಟ್ಲರ್, ಎಲೈನ್ ಶೋವಾಲ್ಟರ್ ಮೊದಲಾದವರ ಚಿಂತನೆಗಳು ಮುಖ್ಯವಾಗಿ ಈ ವಿಧಾನದ ತಾತ್ವಿಕತೆಯನ್ನು ರೂಪಿಸಿವೆ.

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹಲವು ರೂಪಗಳಲ್ಲಿ ಬಳಕೆಯಾಗುತ್ತಿರುವ 'ಸಾಂಸ್ಕೃತಿಕ ಮುಖಾಮುಖಿ', 'ಸಾಂಸ್ಕೃತಿಕ ಸಂಘರ್ಷ', 'ಯಾಜಮಾನ್ಯ ನೆಲೆಗಳ ವಿರುದ್ಧದ ಪ್ರತಿರೋಧ', 'ರಾಜಕೀಯ ಓದು' ಮತ್ತು 'ಅವಮಾನದ ಪ್ರಶ್ನೆ ಹಾಗೂ ನೋವಿನ ನೆಲೆಗಳು' ಮೊದಲಾದ ಪರಿಕಲ್ಪನೆಗಳು ಇಂಥ ಸಂಘರ್ಷಾತ್ಮಕ ವಿಧಾನದ ವಿಶ್ಲೇಷಣೆಯ ಪರಿಕರಗಳಾಗಿವೆ.

೪.೭.೪ ಸಂಕಥನಾತ್ಮಕ ವಿಧಾನ

ವಸ್ತುವಿಷಯಗಳಾಗಲೀ, ಲೋಕಸಂಗತಿಗಳಾಗಲೀ, ವೈಚಾರಿಕ ವಿದ್ಯಮಾನಗಳಾಗಲೀ ಅಥವಾ ಅಭಿವ್ಯಕ್ತಿ ರಚನೆಗಳಾಗಲೀ ತಮ್ಮ ಹೊರ ರೂಪದ ಗೋಚರತೆಗೆ ಭಿನ್ನವಾದ ಸ್ವರೂಪದಲ್ಲಿ ಅವುಗಳ ಒಳ ನೆಲೆಗಳಲ್ಲಿ ಕ್ರಿಯಾತ್ಮಕವಾಗಿರುವುದನ್ನು ಕುರಿತ ಜಿಜ್ಞಾಸೆಯನ್ನು ಅಥವಾ ಆಳವಾದ ಚಿಂತನೆಯನ್ನು ಇಲ್ಲಿ 'ಸಂಕಥನ' ಎಂದು ಭಾವಿಸಲಾಗಿದೆ. ಮೂಲತಃ ಇದು 'ಜ್ಞಾನಮೀಮಾಂಸೆ' ಅಥವಾ 'ಎಪಿಸ್ಟಮಾಲಜಿ'ಗೆ ಸಂಬಂಧಿಸಿದ ಪರಿಕಲ್ಪನೆ. ಮಿಶೆಲ್ ಫುಕೋ ಇದರ ಸ್ವರೂಪ ಕುರಿತು 'ಒಂದು ಸಂಸ್ಥೆ ಅಥವಾ ಶಿಸ್ತಿನ ಡಿಸ್ಕೋರ್ಸ್ ಅದರೊಳಗಿನ ಜ್ಞಾನದ ಉತ್ಪಾದನೆಯನ್ನು ನಿಯಂತ್ರಿಸುತ್ತದೆ' ಎಂದು ವಿವರಿಸುತ್ತಾನೆ. ಈ ಹಿನ್ನೆಲೆಯಲ್ಲಿ ಇಲ್ಲಿ 'ಡಿಸ್ಕೋರ್ಸ್'ಗೆ ಸಂವಾದಿಯಾಗಿ ಬಳಸಿರುವ 'ಸಂಕಥನ' ಪರಿಕಲ್ಪನೆಯು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂಕಥನಾತ್ಮಕ ವಿಧಾನವಾಗಿ ಮುಖ್ಯವಾದ ಎರಡು ನೆಲೆಗಳಲ್ಲಿ ಬಳಕೆಯಾಗಿದೆ. ಸಾಹಿತ್ಯ ಮತ್ತು ಪಠ್ಯದೊಳಗೆ ರೂಪಿತವಾಗುತ್ತಿರುವ ಸಂಕಥನದ ಮಾದರಿಗಳನ್ನು ಗುರುತಿಸುವುದು ಹಾಗೂ ಆಮೂಲಕ ಅವು ಸಮಾಜ ಮತ್ತು ಸಂಸ್ಕೃತಿಗಳ ಸಂಕಥನಗಳನ್ನು ಪ್ರಭಾವಿಸುತಿರುವ ಸ್ವರೂಪವನ್ನು ವಿಶ್ಲೇಷಿಸುವುದು ಅಂಥ ಒಂದು ನೆಲೆಯಾಗಿದೆ. ಹಾಗೆಯೇ, ವಿಮರ್ಶೆ ಎನ್ನುವ ಶಿಸ್ತು ಜ್ಞಾನಮೀಮಾಂಸೆಯ ಒಂದು ರೂಪವಾಗಿ, ಪ್ರತಿಷ್ಠಿತ ಶಕ್ತಿಯ ಒಂದು ವಿನ್ಯಾಸವಾಗಿ ಅಥವಾ ಅಧಿಕಾರ ರಚನೆಯ ಒಂದು ಮಾದರಿಯಾಗಿ ಹುಟ್ಟು ಹಾಕುತ್ತಿರುವ ವಿಭಿನ್ನ ಸ್ವರೂಪದ ಸಂಕಥನಗಳನ್ನು ಗುರುತಿಸುವುದು ಹಾಗೂ ಆ ಮೂಲಕ ಅವು ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಗಳ ಮೇಲೆ ಬೀರುತ್ತಿರುವ ಪ್ರಭಾವವನ್ನು ವಿಶ್ಲೇಷಿಸುವುದು ಅಂಥ ಇನ್ನೊಂದು ನೆಲೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ

ಸಂಕಥನ ವಿಧಾನವು 'ಸಾಹಿತ್ಯ', 'ಪಠ್ಯ' ಮತ್ತು 'ವಿಮರ್ಶೆ' ಈ ಮೂರನ್ನು ಕುರಿತ ಒಂದು ಅತ್ಯಂತ ಮಹತ್ವಪೂರ್ಣವಾದ ಅನುಸಂಧಾನದ ಸಾಧನವಾಗಿ ಬಳಕೆಯಗುತ್ತಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯ, ಸಂಸ್ಕೃತಿ ಮತ್ತು ವಿಮರ್ಶೆಗಳಿಗೆ ಸಂಬಂಧಪಟ್ಟ ವಿವಿಧ ಮೀಮಾಂಸೆಗಳನ್ನು ಕುರಿತು ಗಂಭೀರವಾಗಿ ಚರ್ಚಿಸುತ್ತದೆ. ಜ್ಞಾನ ಮತ್ತು ಅಧಿಕಾರ ರಚನೆಗಳು, ಸಾಹಿತ್ಯ ಹಾಗೂ ವಿಮರ್ಶೆಯ ಶಿಸ್ತುಗಳಲ್ಲಿ ವೈವಿಧ್ಯಮಯವಾದ ಆಕೃತಿಗಳನ್ನು ಪಡೆದುಕೊಳ್ಳುತ್ತವೆ. ಆ ಮೂಲಕ ಅವು ಬಹುರೂಪಿ ಯಾಜಮಾನ್ಯತೆಗಳನ್ನು ಹುಟ್ಟುಹಾಕುತ್ತವೆ ಎನ್ನುವುದರ ಸ್ವರೂಪವನ್ನು ಈ ವಿಧಾನ ಹಲವು ನೆಲೆಗಳಲ್ಲಿ ಹಾಗೂ ಹಲವು ಸ್ತರಗಳಲ್ಲಿ ವಿಶ್ಲೇಷಿಸುತ್ತದೆ. ಈ ದೃಷ್ಟಿಯಿಂದ ಪಾಲ್‌ಬೋವ್ ಹೇಳುವ 'ಅಧಿಕಾರ, ಜ್ಞಾನ, ಸಂಸ್ಥೆಗಳು, ಬುದ್ಧಿಜೀವಿಗಳು, ಜನಸಂಖ್ಯಾ ನಿಯಂತ್ರಣ ಮತ್ತು ಆಧುನಿಕ ಸರ್ಕಾರಗಳ ನಡುವಿನ ಬಾಹ್ಯರೂಪದ ಮೇಲ್ಪದರದ ಸಂದರ್ಭಗಳನ್ನು ವಿವರಿಸುವುದೇ ಸಂಕಥನ' ಎನ್ನುವ ವಿವರಣೆಗಿಂತ ಫುಕೋನ ವ್ಯಾಖ್ಯಾನವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ವಿಧಾನದ ಪ್ರಧಾನ ತಾತ್ವಿಕತೆಯನ್ನು ರೂಪಿಸಿದೆ ಎನ್ನಬಹುದು. ಕೆ.ವಿ. ನಾರಾಯಣ ಮತ್ತು ರಾಜೇಂದ್ರ ಚೆನ್ನಿ ಅವರ ವಿಮರ್ಶೆಗಳಲ್ಲಿ ಈ ವಿಧಾನವು ಸಾಹಿತ್ಯೇತರ ಸಂಗತಿಗಳ ಆಳ ಚಿಂತನೆಯ ಸಾಧನವಾಗಿ; ಕುರ್ತುಕೋಟಿ ಅವರಲ್ಲಿ ಪರಂಪರೆಯ ಪ್ರಭಾವದ ವಿವೇಚನೆಯ ಅವಗಾಹನಾ ರೂಪವಾಗಿ ಮತ್ತು ಡಿ.ಆರ್.ನಾಗರಾಜ ಅವರಲ್ಲಿ ಸಂಸ್ಕೃತಿಯ ವಿಮರ್ಶಾತ್ಮಕ ಶೋಧದ ದೇಸಿ ವ್ಯಾಖ್ಯಾನದ ಆಯಾಮವಾಗಿ, ಹೀಗೆ ಬಹುರೂಪಗಳಲ್ಲಿ ಪ್ರಕಟವಾಗಿದೆ.

೪.೮ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆ ಏಕರೂಪಿ ಅಲ್ಲ; ಬಹುರೂಪತೆ ಇದರ ಸಾಮಾನ್ಯ ಲಕ್ಷಣ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹಲವು ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ಅಥವಾ ರೂಪಗಳು ಬಳಕೆಯಲ್ಲಿವೆ. ಇವು ಮುಖ್ಯವಾಗಿ ಚಾರಿತ್ರಿಕ, ಸೈದ್ಧಾಂತಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ ರೂಪುಗೊಂಡಿವೆ. ಇಂಥ ಪ್ರಮುಖವಾದ ನಾಲ್ಕು ಮಾದರಿಗಳನ್ನು ಗುರುತಿಸಬಹುದು. ಅವುಗಳೆಂದರೆ ಅ. ದಲಿತ ಸಾಂಸ್ಕೃತಿಕ ವಿಮರ್ಶೆ ಆ. ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆ ಇ. ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆ ಮತ್ತು ಈ. ದೇಶಿವಾದಿ ಸಾಂಸ್ಕೃತಿಕ ವಿಮರ್ಶೆ.

ಈ ಮಾದರಿಗಳ ಒಳಗೆ ಹಲವು ಉಪಧಾರೆಗಳೂ ಕೂಡಾ ಚಾಲ್ತಿಯಲ್ಲಿವೆ. ಇದಕ್ಕೆ ವಿಮರ್ಶಕರ ಸೈದ್ಧಾಂತಿಕ ಹಾಗೂ ತಾತ್ವಿಕ ನಿಲುವಿನಲ್ಲಿರುವ ಭಿನ್ನತೆಗಳು ಮುಖ್ಯ ಕಾರಣಗಳಾಗಿವೆ. ಇಲ್ಲಿ ಇವುಗಳನ್ನು ಸ್ಥೂಲವಾಗಿ ವಿವೇಚಿಸುವ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆ ಹೇಗೆ ಬಹುರೂಪಿಯಾದ ಪ್ರಾಯೋಗಿಕ ಆಯಾಮ ಪಡೆದುಕೊಳ್ಳುವ ಪ್ರಯತ್ನ ಮಾಡಿದೆ ಎನ್ನುವ ಸಂಗತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೪.೮.೧ ದಲಿತ ಸಾಂಸ್ಕೃತಿಕ ವಿಮರ್ಶೆ

ನವ್ಯೋತ್ತರ ಸಂದರ್ಭದಲ್ಲಿ ಸಾಮಾಜಿಕ ವಿಮರ್ಶೆಯ ತಾತ್ವಿಕ ಸ್ವರೂಪದಲ್ಲಿ ಆದ ತೀವ್ರವಾದ ಪರಿವರ್ತನೆಯು ದಲಿತ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯ ರೂಪವಾಗಿ ಪರಿವರ್ತಿಸಿತು. ಸಾಹಿತ್ಯ ಮತ್ತು ಪಠ್ಯವನ್ನು ಕೇವಲ ಸಾಮಾಜಿಕ ಪ್ರತಿಫಲನದ ಮತ್ತು ಪ್ರತಿನಿಧೀಕರಣದ ಆಶಯಗಳ ಅಭಿವ್ಯಕ್ತಿಯಾಗಿ ಗ್ರಹಿಸುವ ಪರಿಮಿತ ದೃಷ್ಟಿಕೋನಕ್ಕಿಂತ ವ್ಯಾಪಕವಾದ ನೋಟಕ್ರಮ ಎಂಭತ್ತರ ದಶಕದ ನಂತರ ದಲಿತ ವಿಮರ್ಶೆಗೆ ಸಾಧ್ಯವಾಯಿತು. ಜಾತಿ ಪ್ರಶ್ನೆಗಳ ಜೊತೆಗೆ ವರ್ಗ ಮತ್ತು ಲಿಂಗದ ಪ್ರಶ್ನೆಗಳು ದಲಿತ ವಿಮರ್ಶೆಯ ಚೌಕಟ್ಟಿನೊಳಗೆ ಬಂದವು. ಸಂಸ್ಕೃತಿಯನ್ನು ಕುರಿತ ಗಂಭೀರವಾದ ಚಿಂತನೆಗಳು ಹಾಗೂ ವ್ಯಾಖ್ಯಾನದ ಆಯಾಮಗಳು ಹೊಸದಾಗಿ ಸೇರ್ಪಡೆಗೊಂಡವು. ಮುಖ್ಯವಾಗಿ ಸಾಹಿತ್ಯವನ್ನು ಒಂದು ಮಹತ್ವಪೂರ್ಣವಾದ ಕಲಾರೂಪವೆಂದು ಮತ್ತು ವಿಮರ್ಶೆಯನ್ನು ಒಂದು ಗಂಭೀರವಾದ ಚಿಂತನಾರೂಪವೆಂದು ದಲಿತ ಸಾಮಾಜಿಕ ವಿಮರ್ಶೆ ಒಪ್ಪಿಕೊಂಡಿತು. ವಿಶ್ಲೇಷಣೆಯ ಸಂದರ್ಭದಲ್ಲಿ ಕೃತಿಕಾರ, ಕೃತಿ, ಓದು ಮತ್ತು ಸಂಸ್ಕೃತಿಗಳ ಪ್ರಶ್ನೆಗಳು ಸಮಾವಿಷ್ಟಗೊಂಡವು. ಸಾಮಾಜಿಕ ಅನುಸಂಧಾನದಲ್ಲಿ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮತ್ತು ಭಾಷಿಕ ಪ್ರಶ್ನೆಗಳೂ ಸಹ ಮಹತ್ವ ಪಡೆದುಕೊಂಡವು. ಅಂಬೇಡ್ಕರ್‌ವಾದ ಮತ್ತು ಪುಲೇ ಅವರ ಚಿಂತನೆಗಳೊಂದಿಗೆ ಗಾಂಧೀಜಿ, ಲೋಹಿಯಾ ಮತ್ತು ಮಾರ್ಕ್ಸ್‌ರವರ ಆಲೋಚನೆಗಳೂ ಕೂಡಾ ಯುಕ್ತವಾಗಿ ಬೆರೆಯಲಾರಂಭಿಸಿದವು. ಇದರಿಂದ ಶುದ್ಧ ಸಾಮಾಜಿಕ ವಿಮರ್ಶೆಯ ಮಾದರಿಗಳು ಕ್ರಮೇಣ ಕಡಿಮೆಯಾಗುವ ಮೂಲಕ ಬಹುಶಿಸ್ತು ವಿಶ್ಲೇಷಣಾ ವಿಧಾನಗಳು ರೂಢಿಗೆ ಬಂದವು. ಎಲ್. ಹುನುಮಂತಯ್ಯ, ಮುನಿವೆಂಕಟಪ್ಪ ಮೊದಲಾದವರ ಸಾಮಾಜಿಕ ವಿಮರ್ಶೆಗಳ ಮಾದರಿಗಳ ಸ್ಥಾನದಲ್ಲಿ ಮಾಲಗತ್ತಿ, ಎಸ್.ಎಸ್. ಹಿರೇಮಠ, ಮೊಗಳ್ಳಿ, ಬಿ.ಎಂ. ಪುಟ್ಟಯ್ಯ ಮತ್ತು ಮ.ನ.ಜ. ಮೊದಲಾದವರ ಸಾಂಸ್ಕೃತಿಕ ವ್ಯಾಖ್ಯಾನದ ದಲಿತ ವಿಮರ್ಶೆಗಳು ಮುನ್ನಲೆಗೆ ಬಂದವು. ಇವು ಸಾಮಾಜಿಕ ಪ್ರಶ್ನೆಗಳೊಂದಿಗೆ ರಾಜಕೀಯ, ಆರ್ಥಿಕ, ಧಾರ್ಮಿಕ, ಭಾಷಿಕ ಮತ್ತು ಶೈಕ್ಷಣಿಕ ಪ್ರಶ್ನೆಗಳನ್ನು ಸಹ ಅಷ್ಟೇ ಮುಖ್ಯವೆಂದು ಭಾವಿಸಿದ ವಿಮರ್ಶೆಗಳು. ಚರಿತ್ರೆ, ವರ್ತಮಾನ ಮತ್ತು ಭವಿಷ್ಯವನ್ನು ಒಟ್ಟಾಗಿ ಭಾವಿಸುವ ಮತ್ತು ಬದುಕು ಹಾಗೂ ಸಾಹಿತ್ಯವನ್ನು ಬೇರ್ಪಡಿಸದೆ ಎರಡನ್ನು ಏಕೀಭವಿಸಿ ಆಲೋಚಿಸುವ ಮಹತ್ವಪೂರ್ಣವಾದ ವಿಮರ್ಶೆಗಳು.

೪.೮.೨ ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆ

ಪಾಶ್ಚಾತ್ಯ ಮಾರ್ಕ್ಸ್‌ವಾದ ಮತ್ತು ಅದರ ವಿವಿಧ ಆಧುನಿಕ ರೂಪಗಳ ದಟ್ಟವಾದ ಪ್ರಭಾವದಿಂದ ಎಪ್ಪತ್ತರ ದಶಕದಲ್ಲಿ ರೂಢಿಗೆ ಬಂದ ಬಂಡಾಯ ವಿಮರ್ಶೆ ಹಾಗೂ ಅದರ ವಿಭಿನ್ನ ಮಾದರಿಗಳು ಎಪ್ಪತ್ತರ ದಶಕದ ನಂತರ ತೀವ್ರವಾದ ಮಾರ್ಪಾಟು ಹೊಂದಿದವು. ಇವು ಸಾಹಿತ್ಯ ಮತ್ತು ಸಮಾಜವನ್ನು ಪರಿಭಾವಿಸುವುದಕ್ಕೆ ಸಂಬಂಧಪಟ್ಟ ತಮ್ಮ ಪ್ರತ್ಯೇಕ ಐಡಿಯಾಲಜಿಗಳ ನಿರ್ದಿಷ್ಟ ಹಾಗೂ ಪರಿಮಿತ

ಗ್ರಹಿಕೆಗಳನ್ನು ವ್ಯಾಪಕವಾಗಿ ಪರಿವರ್ತಿಸಿಕೊಂಡವು. ರಷ್ಯಾದಲ್ಲಿ ಲೆನಿನ್ ಪ್ರತಿಪಾದಿಸಿದ 'ಸಮಾಜವಾದಿ ವಾಸ್ತವತೆ', ಚೀನಾದಲ್ಲಿ ಮಾವೋ ಪ್ರತಿಪಾದಿಸಿದ 'ಸಾಂಸ್ಕೃತಿಕ ಕ್ರಾಂತಿ' ಮತ್ತು ಕ್ಯೂಬಾದಲ್ಲಿ ಫಿಡೆಲ್ ಕ್ಯಾಸ್ಟ್ರೋ ಜಾರಿಗೊಳಿಸಿದ 'ಸಮತಾವಾದ'ದ ವಿಚಾರಗಳ ನೇರವಾದ ಪ್ರಭಾವಗಳಿಂದ ಕನ್ನಡ ಬಂಡಾಯ ವಿಮರ್ಶೆಯ ರೂಪಗಳು ಕ್ರಮೇಣ ಬಿಡಿಸಿಕೊಳ್ಳಲಾರಂಭಿಸಿದವು. ಇದಕ್ಕೆ ಪಾಶ್ಚಾತ್ಯ ಸಾಂಸ್ಕೃತಿಕ ಸಿದ್ಧಾಂತಗಳು, ಮಾನವಶಾಸ್ತ್ರೀಯ ವಿಚಾರಗಳು ಹಾಗೂ ಮುಖ್ಯವಾಗಿ ಸಾಂಸ್ಕೃತಿಕ ಮಾರ್ಕ್ಸ್‌ವಾದಿ ಚಿಂತಕರ ವಿಚಾರಗಳ ಪ್ರಭಾವಗಳು ಒಂದು ಕಾರಣವಾದರೆ; ಅಂಬೇಡ್ಕರ್, ಗಾಂಧೀಜಿ, ಲೋಹಿಯಾ ಮತ್ತು ಕುವೆಂಪು ಅವರ ಚಿಂತನೆಗಳು ಉಂಟುಮಾಡಿದ ಪರಿಣಾಮಗಳು ಇನ್ನೊಂದು ಮುಖ್ಯವಾದ ಕಾರಣವಾಗಿದೆ.

ಆರ್.ವಿ. ಭಂಡಾರಿ, ಆರ್ಕೆ. ಮಣಿಪಾಲ, ವಿಷ್ಣುನಾಯ್ಕ, ಶಿವರಾಮು ಕಾಡನಕುಪ್ಪೆ, ಸಿ. ವೀರಣ್ಣ, ನಂಗಲಿ, ಕೇಶವಶರ್ಮ, ಎಸ್. ಶಿವಾನಂದ ಮತ್ತು ರಮಜಾನ ದರ್ಗಾ ಮೊದಲಾದ ಅವರ ಸಾಂಪ್ರದಾಯಕ ಮಾರ್ಕ್ಸ್‌ವಾದಿ ವಿಮರ್ಶೆ ಈ ಹಂತದಲ್ಲಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು. ಸಾಹಿತ್ಯದಲ್ಲಿ ಆರ್ಥಿಕ ನೆಲೆಯ ವರ್ಗಪ್ರಶ್ನೆಗಳ ಹಾಗೂ ವರ್ಗಹಿತಾಸಕ್ತಿಗಳ ಆಶಯಗಳು ನಿರೂಪಿತವಾಗಿರುವ ಕ್ರಮಗಳನ್ನು ಕುರಿತ ನಿರ್ದಿಷ್ಟ ಸ್ವರೂಪದ ಪೃಥಕ್ಕರಣಕ್ಕೆ ಬದಲಾಗಿ ಸಾಹಿತ್ಯದ ಸ್ವರೂಪವನ್ನು ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಶ್ನೆಗಳ ಸಮಗ್ರ ನೆಲೆಯಲ್ಲಿ ಸಾಪೇಕ್ಷವಾದ ಹಾಗೂ ಚಲನಶೀಲವಾದ ಆಯಾಮಗಳಲ್ಲಿ ಗ್ರಹಿಸುವ ವಿಧಾನಗಳು ಬಂಡಾಯ ವಿಮರ್ಶೆಗಳಲ್ಲಿ ಮುನ್ನಲೆಗೆ ಬಂದವು. ಇದರಿಂದ ಡಿ.ಆರ್. ಅವರು ತಮ್ಮ 'ಫ್ರಾಂಕ್‌ಫರ್ಟ್' ಮಾರ್ಕ್ಸ್‌ವಾದಿ ವಿಮರ್ಶೆಯನ್ನು ಕೈಬಿಟ್ಟು ದೇಶಿ ಸಂಸ್ಕೃತಿ ಶೋಧದ ವಿಮರ್ಶೆಯ ಕಡೆಗೆ ಹೊರಳಿಕೊಂಡರು.

ಜಿ. ರಾಜಶೇಖರ ಮತ್ತು ಚೆನ್ನಿ ಅವರು ಸಾಹಿತ್ಯ, ಸಂಸ್ಕೃತಿ ಮತ್ತು ಬದುಕಿನ ಜ್ವಲಂತ ಪ್ರಶ್ನೆಗಳನ್ನು ವಿಮರ್ಶೆಯಲ್ಲಿ ಅತ್ಯಂತ ಜರೂರಿನ ಪ್ರಶ್ನೆಗಳಾಗಿ ಭಾವಿಸಿದರು. ತರೀಕೆರೆ ಅವರು 'ಪ್ರತಿಸಂಸ್ಕೃತಿ'ಯಂಥ ಖಚಿತವಾದ ಹಾಗೂ ನಿರ್ದಿಷ್ಟವಾದ ಎಡಪಂಥೀಯ ಮಾರ್ಕ್ಸ್‌ವಾದಿ ಸಾಂಸ್ಕೃತಿಕ ಪರಿಕಲ್ಪನೆ ಬದಲಾಗಿ ಸಮಾಜವಾದಿ ಪ್ರಜಾಸತ್ತಾತ್ಮಕ ಸಂದರ್ಭದ ವಿಶಿಷ್ಟವಾದ ಹಾಗೂ ಅರ್ಥಪೂರ್ಣವಾದ 'ಸಂಕರ ಸಂಸ್ಕೃತಿ' ಸಾಂಸ್ಕೃತಿಕ ಪರಿಕಲ್ಪನೆಯನ್ನು ರೂಪಿಸಿಕೊಂಡರು. ಈ ಮೂಲಕ ಭಾರತೀಯ ಮತ್ತು ಕರ್ನಾಟಕ ಸಂಸ್ಕೃತಿಗಳ ಸಂದರ್ಭದಲ್ಲಿ ಹೊರ ತೋರಿಕೆಯ ಸಾಮರಸ್ಯ ಚಹರೆಯೊಳಗೆ ಇರುವ ಸಂಘರ್ಷಾತ್ಮಕ ರೂಪಗಳನ್ನು ಕುರಿತು ವಿಶ್ಲೇಷಿಸಲಾರಂಬಿಸಿದರು. ಇದು ಮಾರ್ಕ್ಸ್‌ವಾದಿ ಎಡಪಂಥೀಯ ಗ್ರಹಿಕೆಗೆ ಸಾಂಸ್ಕೃತಿಕ ವಿಮರ್ಶಾತ್ಮಕ ವಿವೇಕ ಬೆರೆತ ಪರಿ. ಕೇವಲ ಹೊರಗಿನ ಆರ್ಥಿಕ ನೆಲೆಯ ಪರಿಕಲ್ಪನೆಗಳ ಮೂಲಕ ಸಾಹಿತ್ಯ ಸಮಾಜ ಮತ್ತು ಸಂಸ್ಕೃತಿಗಳನ್ನು ವಿಶ್ಲೇಷಿಸುವುದಕ್ಕಿಂತ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಗಳಲ್ಲಿ ಆರ್ಥಿಕತೆಯ ಪ್ರಶ್ನೆಗಳು ಹೇಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಲೈಂಗಿಕ ಪ್ರಶ್ನೆಗಳ ರೂಪದಲ್ಲಿ ಹೆಣೆದುಕೊಂಡಿರುತ್ತವೆ ಎನ್ನುವುದನ್ನು ಕುರಿತ ಗಂಭೀರವಾದ ಶೋಧ ಸಮಕಾಲೀನ ಸಂದರ್ಭದ ಕನ್ನಡದ

ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆಯ ರೂಪಗಳ ಮುಖ್ಯ ಆಸಕ್ತಿಯಾಗಿದೆ. ಜಿ. ರಾಜಶೇಖರ, ಬರಗೂರು, ಆರ್ಕೆ. ಮಣಿಪಾಲ ಮತ್ತು ರಹಮತ್ ತರೀಕೆರೆ ಅವರ ವಿಮರ್ಶೆಗಳಲ್ಲಿ ಇದು ಹಲವು ಸ್ತರಗಳಲ್ಲಿ ಪ್ರಕಟವಾಗಿದೆ.

೪.೮.೩ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆ

ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆಗಳ ವಿರುದ್ಧ ಎಪ್ಪತ್ತರ ದಶಕದಲ್ಲಿ ವ್ಯಕ್ತವಾದ ತೀವ್ರವಾದ ಬಂಡಾಯದ ಹಿನ್ನೆಲೆಯಲ್ಲಿ ಸಮಾಜವಾದಿ ಚಿಂತನೆಗಳ ದಟ್ಟವಾದ ಪ್ರೇರಣೆಗಳನ್ನು ಗುರುತಿಸಬಹುದು. ಇಂಥಹ ಪ್ರೇರಣೆಗಲ್ಲಿ ಮುಖ್ಯವಾದ ಎರಡು ರೂಪಗಳಿವೆ. ಅವುಗಳೆಂದರೆ, ಅ. ಪಾಶ್ಚಾತ್ಯ ಸಮಾಜವಾದಿ ಚಿಂತನೆಗಳ ಪ್ರೇರಣೆಗಳು ಮತ್ತು ಆ. ಭಾರತೀಯ ಸಮಾಜವಾದಿ ಚಿಂತನೆಗಳ ಪ್ರೇರಣೆಗಳು. 'ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆ'ಯನ್ನು ರೂಪಿಸಿರುವುದರ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಮಾಜವಾದಿ ಚಿಂತನೆಗಳ ಪ್ರೇರಣೆಗಳು ಬೀರಿರುವ ಪ್ರಭಾವ ಹಾಗೂ ಅದರ ಸ್ವರೂಪವನ್ನು ಕುರಿತು ಈಗಾಗಲೇ ಚರ್ಚಿಸಲಾಗಿದೆ.

ನವ್ಯೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಮುಖ್ಯವಾದ ಮಾದರಿಯಾಗಿ ಬೆಳೆದ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿ ಪ್ರಧಾನವಾಗಿರುವುದು ಭಾರತೀಯ ಸಮಾಜವಾದಿ ಚಿಂತನೆಗಳ ಪ್ರೇರಣೆಗಳೇ. ಇದರ ಎಳೆಗಳನ್ನು ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆಯ ಸ್ವರೂಪ ಕುರಿತು ತೀವ್ರವಾದ ಆಕ್ರೋಶವನ್ನು ವ್ಯಕ್ತಪಡಿಸುತ್ತಾ ತೇಜಸ್ವಿ ಅವರು ಬರೆದ 'ಹೊಸದಿಗಂತದೆಡೆಗೆ' ಲೇಖನದಲ್ಲೇ ಗುರುತಿಸಬಹುದು.

ಈ ಲೇಖನವನ್ನು ಈಗಾಗಲೇ 'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ'ಯ ಮುಖ್ಯ ಘಟಕವಾಗಿರುವ 'ಸಾಂಸ್ಕೃತಿಕ ವಿಮರ್ಶೆಯ ನಿರ್ವಚನ'ದ ಸಂದರ್ಭದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಇದರಲ್ಲಿ ತೇಜಸ್ವಿ ಅವರು ಹೊಸ ಸಾಹಿತ್ಯ ಮತ್ತು ಹೊಸ ವಿಮರ್ಶೆಯ ಅಗತ್ಯ ಹಾಗೂ ಅವುಗಳ ಅರ್ಥಪೂರ್ಣ ಸ್ವರೂಪ ಕುರಿತು ಪ್ರತಿಪಾದಿಸುವಾಗ, ಅವುಗಳಿಗೆ ಅಗತ್ಯವಾಗಿರುವ ಮುಖ್ಯವಾದ ಮೂರು ಸ್ಫೂರ್ತಿ ಮೂಲಗಳಲ್ಲಿ ಒಂದಾಗಿ ಲೋಹಿಯಾ ಅವರ ಸಮಾಜವಾದ ಚಿಂತನೆಗಳನ್ನು ಗುರುತಿಸಿದ್ದರು. ತೇಜಸ್ವಿ ಅವರ ಈ ವಿಚಾರದಿಂದ ಕನ್ನಡ ಸಾಹಿತ್ಯ ಹಾಗೂ ವಿಮರ್ಶೆಗಳ ಸಂದರ್ಭದಲ್ಲಿ ಲೋಹಿಯಾ ಅವರ ಚಿಂತನೆಗಳನ್ನು ಅನುಸಂಧಾನ ಮಾಡುವ ವ್ಯಾಪಕವಾದ ಪ್ರಯತ್ನಗಳು ಹಲವು ನೆಲೆಗಳಲ್ಲಿ ತೀವ್ರವಾದ ಸ್ವರೂಪದಲ್ಲಿ ನಡೆದವು.

ಭಾರತೀಯ ಸಮಾಜ, ಸಂಸ್ಕೃತಿ, ಚರಿತ್ರೆ, ಪುರಾಣ ಭಾಷೆ ಮತ್ತು ರಾಜಕಾರಣಗಳನ್ನು ಕುರಿತ ಅತ್ಯಂತ 'ಒರಿಜಿನಲ್' ಆದ ಲೋಹಿಯಾ ಅವರ ಚಿಂತನೆಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಹಲವು ನೆಲೆಗಳಲ್ಲಿ ಹಾಗೂ ಆಯಾಮಗಳಲ್ಲಿ ಬಳಸಿಕೊಳ್ಳಲಾಯಿತು. ಸಾಹಿತ್ಯ ಕೃತಿಗಳ ಅಥವಾ ಪಠ್ಯಗಳ ವಿಶ್ಲೇಷಣೆಯ ಪರಿಕಲ್ಪನೆಗಳಾಗಿ, ಪರಿಭಾಷೆಗಳಾಗಿ, ಪರಿಕರಗಳಾಗಿ, ಸಾಧನಗಳಾಗಿ ಮತ್ತು

ವಿಧಾನಗಳಾಗಿ ಹೀಗೆ, ಇವು ಬಹುರೂಪಿ ನೆಲೆಗಳಲ್ಲಿ ಹಾಗೂ ಸ್ತರಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮುನ್ನೆಲೆಗೆ ಬಂದವು.

ಲೋಹಿಯಾ ಚಿಂತನೆಗಳೊಂದಿಗೆ ಕುವೆಂಪು ಚಿಂತನೆಗಳನ್ನು ಒಳಗೊಂಡ ರೀತಿಯಿಂದ ಹಾಗೂ ಗಾಂಧಿ, ಅಂಬೇಡ್ಕರ್ ಮತ್ತು ಮಾರ್ಕ್ಸ್ ಅವರ ವಿಚಾರಧಾರೆಗಳನ್ನು ಪುರ್ನವ್ಯಾಖ್ಯಾನಿಸಿಕೊಂಡ ವಿಶಿಷ್ಟವಾದ ಪ್ರಯತ್ನಗಳಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹೊಸ ಮಾದರಿಯಾಗಿ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿತು. ಇದಕ್ಕೆ ಈ ಕಾಲಘಟ್ಟದಲ್ಲಿ ಭಾರತದ ರಾಜಕಾರಣದ ಸಂದರ್ಭದಲ್ಲಿ ಚಾರಿತ್ರಿಕವಾಗಿ ಸಂಭವಿಸಿದ ಮಹಾನ್ ಪಲ್ಲಟಗಳು ಹಾಗೂ ಕರ್ನಾಟಕದ ಸಂದರ್ಭದಲ್ಲಿ ನಡೆದ ಸಮಾಜಿಕ, ರಾಜಕೀಯ, ಆರ್ಥಿಕ, ಭಾಷಿಕ ಮತ್ತು ಸಾಹಿತ್ಯಕ ಚಳುವಳಿಗಳು ಒಟ್ಟಿಗೆ ಕಾರಣಗಳಾಗಿವೆ.

ಈ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಯ ಮಾದರಿಗೆ ಮುಖ್ಯ ನಿದರ್ಶನಗಳಾಗಿ ತೇಜಸ್ವಿ ಅವರ "ವಿಮರ್ಶೆಯ ವಿಮರ್ಶೆ" (೨೦೦೯); ಅನಂತ ಮೂರ್ತಿ ಅವರ 'ಪ್ರಜ್ಞೆ ಮತ್ತು ಪರಿಸರ' (೧೯೭೧), 'ಪೂರ್ವಾಪರ' (೧೯೯೦), 'ಸಮಕ್ಷಮ' (೧೯೮೦) ಮತ್ತು 'ಸನ್ನಿವೇಶ' (೧೯೭೪); ಪೋಲಂಕಿ ಅವರ 'ಸೀತಾಯಣ' (೧೯೮೯) ಮತ್ತು ಇನ್ನಿತರ ವಿಮರ್ಶಾ ಬರಹಗಳು; ಡಿ.ಎಸ್. ನಾಗಭೂಷಣ ಅವರ 'ಗಮನ' (೧೯೯೦), 'ಅನೇಕ' (೨೦೦೫), 'ಬೇರು-ಬಿಳಲು' (೨೦೦೬), 'ಈ ಭೂಮಿಯಿಂದ ಆ ಆಕಾಶದವರೆಗೆ' (೨೦೦೯) ಮತ್ತು 'ಕುವೆಂಪು ಸಾಹಿತ್ಯ ದರ್ಶನ' (೨೦೧೨) ಎಸ್. ಶಿವಾನಂದ ಅವರ 'ವಿಮರ್ಶೆಯ ಸವಾಲುಗಳು' (೧೯೯೧); ನಟರಾಜ್ ಹುಳಿಯಾರ್ ಅವರ 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕ ಮತ್ತು ಪರಂಪರೆ' ಮೊದಲಾದ ಕೃತಿಗಳನ್ನು ಹೆಸರಿಸಬಹುದು. ಕನ್ನಡದ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಯ ಅತ್ಯುತ್ತಮ ಪ್ರತಿನಿಧಿಗಳಾಗಿ ತೇಜಸ್ವಿ, ಡಿ.ಎಸ್. ನಾಗಭೂಷಣ ಮತ್ತು ನಟರಾಜ್ ಹುಳಿಯಾರ್ ಅವರನ್ನು ಗುರುತಿಸಬಹುದಾಗಿದೆ.

೪.೮.೪ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆ

ಪುರುಷ ಮತ್ತು ಸ್ತ್ರೀ ಪ್ರಪಂಚಗಳನ್ನು ಎರಡು ಶಾಶ್ವತವಾದ ಪ್ರತ್ಯೇಕ ನೆಲೆಗಳೆಂದು ಭಾವಿಸುತ್ತಿದ್ದ ಆರಂಭದ ಘಟ್ಟದ ಕನ್ನಡ ಸ್ತ್ರೀವಾದಿ ವಿಮರ್ಶೆ ತನ್ನ ಚಹರೆಗಳನ್ನು ಇಂದು ಸಾಕಷ್ಟು ಪರಿವರ್ತಿಸಿಕೊಂಡಿದೆ. ಪುರುಷ ಮತ್ತು ಸ್ತ್ರೀ ಇಬ್ಬರೂ ಒಂದೇ ಸಂಸ್ಕೃತಿಯ ನಿಜವಾಸ್ತವಗಳಾದರೂ, ಪರಸ್ಪರ ಶೋಷಕ-ಶೋಷಿತ ನೆಲೆಗಳು ಏರ್ಪಡಲು ಕಾರಣವಾದ ಸನ್ನಿವೇಶಗಳನ್ನು ಇಂದು ಪಾಶ್ಚಾತ್ಯ ಸ್ತ್ರೀವಾದಿ ಸೈದ್ಧಾಂತಿಕ ಆಕೃತಿಗಳ ಚೌಕಟ್ಟಿಗೆ ಅನುಗುಣವಾಗಿ ಹುಡುಕುವುದನ್ನು ಕೈಬಿಡಲಾಗಿದೆ. ಬದಲಾಗಿ ಪಶ್ಚಿಮದ ಆ ತಿಳಿವಿನ ಬೆಳಕಿನಿಂದ ಪಡೆದ ಅರಿವಿನ ಮೂಲಕ, ನಮ್ಮ ಸಾಹಿತ್ಯ ಮತ್ತು ಪಠ್ಯಗಳನ್ನು ರೂಪಿಸಿರುವ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಹೆಸರಿನಲ್ಲಿ ಬಹುರೂಪಿ ಶೋಷಣೆಗಳಿಗೆ ಕಾರಣಗಳಾಗಿರುವ ಚರಿತ್ರೆ, ಪುರಾಣ, ಧರ್ಮ, ನೀತಿ, ಕಲೆ, ಸಾಹಿತ್ಯ ಮತ್ತು ತತ್ವಶಾಸ್ತ್ರಗಳನ್ನು ಕನ್ನಡದ ಇಂದಿನ ಸ್ತ್ರೀವಾದಿ ವಿಮರ್ಶಕಿಯರು ಹಾಗೂ ವಿಮರ್ಶಕರು

ಆಳವಾದ ಪರಿಶೀಲನೆಗೆ ಒಡ್ಡುತ್ತಿದ್ದಾರೆ. ಈ ವಿದ್ಯಮಾನವು ತೊಂಭತ್ತರ ದಶಕದ ನಂತರ ಕೇವಲ ಸ್ತ್ರೀಬದುಕಿನ ಪ್ರಶ್ನೆಯಾಗಷ್ಟೇ ಉಳಿಯದೆ ಒಟ್ಟು ಸಮಾಜ ಮತ್ತು ಸಂಸ್ಕೃತಿಯ ಶೋಧದ ಸಾಮಾಜಿಕ ಹಾಗೂ ರಾಜಕೀಯ ಪ್ರಶ್ನೆ ಕೂಡಾ ಆಗಿದೆ; ಶಿಕ್ಷಣ ಮತ್ತು ಭಾಷೆಯ ಕುರಿತ ವ್ಯಾಖ್ಯಾನ ಕೂಡಾ ಆಗಿ ಪರಿವರ್ತನೆಗೊಂಡಿದೆ.

ಸ್ತ್ರೀವಾದಿ ವಿಮರ್ಶೆಯ ಪ್ರಾರಂಭಿಕ ಘಟ್ಟದ ಎನ್. ಗಾಯತ್ರಿ, ಮನು ಚಕ್ರವರ್ತಿ, ಕೇಶವಶರ್ಮ, ಎಸ್.ವಿ. ಪ್ರಭಾವತಿ ಮತ್ತು ಎಚ್.ಎಸ್. ಶ್ರೀಮತಿ ಮೊದಲಾದವರ ಸ್ತ್ರೀವಾದಿ ಪಾಶ್ಚಾತ್ಯ ಸ್ತ್ರೀವಾದಿ ಸೈದ್ಧಾಂತಿಕತೆಯ ನೇರಾನ್ವಯ ವಿಧಾನಗಳು ಇಂದು ಪ್ರಾಮುಖ್ಯತೆ ಕಳೆದುಕೊಂಡಿವೆ. ಸುಮಿತ್ರಾಬಾಯಿ, ವಿಜಯಾದಬ್ಬೆ, ಆಶಾದೇವಿ, ತಾರಿಣಿ ಶುಭದಾಯಿನಿ ಮೊದಲಾದವರ ಸ್ತ್ರೀವಾದಿ ವಿಮರ್ಶೆ ಇಂದು ಏಕಕಾಲಕ್ಕೆ ದೇಶೀಯ ಚರಿತ್ರೆ, ಪುರಾಣ, ಸಂಸ್ಕೃತಿ, ಭಾಷೆ, ಸಾಹಿತ್ಯ, ಕಲೆ ಮತ್ತು ತತ್ವಶಾಸ್ತ್ರ ಕುರಿತ ವ್ಯಾಖ್ಯಾನ ಹಾಗೂ ಆಖ್ಯಾನಗಳೂ ಆಗಿ ಬದಲಾಗಿವೆ.

೪.೮.೫ ದೇಸಿವಾದಿ ಸಾಂಸ್ಕೃತಿಕ ವಿಮರ್ಶೆ

ಕನ್ನಡದಲ್ಲಿ ದೇಸಿವಾದಿ ಸಾಂಸ್ಕೃತಿಕ ವಿಮರ್ಶೆಯ ಬೀಸು ತುಂಬಾ ದೊಡ್ಡದು. ಇದು ಹಲವು ಮುಖ್ಯವಾದ ಉಪಧಾರೆಗಳನ್ನು ಒಳಗೊಂಡಿದೆ. 'ದೇಶಿ' ಪರಿಕಲ್ಪನೆಯನ್ನು ವ್ಯಾಖ್ಯಾನಿಸಿಕೊಳ್ಳುವ ಕ್ರಮಗಳಿಗೆ ಅನುಸಾರವಾಗಿ ಕನ್ನಡದಲ್ಲಿ ಹಲವು ಮಾದರಿಯ ದೇಶಿವಾದಿ ಸಾಂಸ್ಕೃತಿಕ ವಿಮರ್ಶಾ ರೂಪಗಳು ವಿಕಾಸಗೊಂಡಿವೆ. ಈ ಪರಿಕಲ್ಪನೆಯನ್ನು ಕುರಿತ ಪರಸ್ಪರ ವಿರುದ್ಧವಾದ ವ್ಯಾಖ್ಯಾನಗಳಿಂದ ವಿಮರ್ಶೆಯಲ್ಲಿ ಹಲವು ಗಂಭೀರವಾದ ಸಮಸ್ಯೆಗಳೂ ಕೂಡಾ ಸೃಷ್ಟಿಯಾಗಿವೆ. ಡಿ.ಆರ್, ಚೆನ್ನಿ, ಸುಬ್ಬಣ್ಣ, ಕಲ್ಗುಡಿ ಮತ್ತು ತರೀಕೆರೆ ಮೊದಲಾದವರು 'ದೇಸಿ'ಯನ್ನು ನಿರ್ವಸಾಹತೀಕರಣ ಮತ್ತು ಆಧುನಿಕೋತ್ತರ ಚಿಂತನೆಗಳ ಸಂದರ್ಭದಲ್ಲಿ ವಿಮರ್ಶಾತ್ಮಕ ಸ್ವೀಕಾರದ ಕ್ರಮದಲ್ಲಿ ವ್ಯಾಖ್ಯಾನಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ದೇಶಿಯನ್ನು 'ಪರಂಪರೆಯ ಕೊಳಕು' ಮತ್ತು 'ಆಧುನಿಕತೆಯ ವಿಕಾರ' ಈ ಎರಡೂ ರೋಗಗಳಿಗಿರುವ 'ಮದ್ದು' ಎನ್ನುವಂತೆ ಗ್ರಹಿಸಲಾಗಿರುತ್ತದೆ.

ಇದಕ್ಕೆ ಬದಲಾಗಿ ಕನ್ನಡದ ಬಹುಪಾಲು ದಲಿತ, ಜಾನಪದ ಮತ್ತು ಸಮುದಾಯವಾದಿ ಸಾಂಸ್ಕೃತಿಕ ವಿಮರ್ಶೆಗಳಲ್ಲಿ 'ದೇಸಿ' ಪರಿಕಲ್ಪನೆಯನ್ನು ಪರಂಪರೆಯ 'ಅನನ್ಯತೆ' ಮತ್ತು 'ವಿಶಿಷ್ಟತೆಗಳನ್ನು ಕುರಿತ ಹುಟುಕಾಟದ ಅಥವಾ ಅವುಗಳನ್ನು ವರ್ತಮಾನದ ಸಂದರ್ಭದಲ್ಲಿ ಪುನಾರಚಿಸಿಕೊಳ್ಳುವ ಪ್ರಯತ್ನದ ಸಾಧನವಾಗಿ ಮಾತ್ರ ಪರಿಭಾವಿಸಲಾಗುತ್ತಿದೆ. ದೇಸಿ ಪರಂಪರೆಗಳು, ದೇಸಿ ಆಚರಣೆಗಳು, ದೇಸಿ ಜೀವನ ಕ್ರಮಗಳು ಮತ್ತು ದೇಶಿ ಸಾಂಸ್ಕೃತಿಕ ಅಭಿವ್ಯಕ್ತಿಗಳು ಸಂಪೂರ್ಣವಾಗಿ ಮಾನವೀಯವಾದವುಗಳು. ಆಧುನಿಕತೆ ತಂದೊಡ್ಡುತ್ತಿರುವ ಗಂಭೀರವಾದ ಸಮಸ್ಯೆಗಳಿಗೆ ಇವುಗಳಿಂದ ಮಾತ್ರ ಸರಿಯಾದ ಪರಿಹಾರಗಳು ದೊರೆಯುತ್ತವೆ ಎನ್ನುವುದು ಇಂಥ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಇರುವ ಗಾಢವಾದ ನಂಬಿಕೆಯಾಗಿದೆ.

ಜನಪರ ಮತ್ತು ಜೀವಪರ ಸಂಸ್ಕೃತಿಯ ನಿರ್ಮಾಣದ ಉದ್ದೇಶ ಇಂಥ ಸಾಂಸ್ಕೃತಿಕ ವಿಮರ್ಶೆಗಳ ಹಿಂದಿನ ಪ್ರಧಾನವಾದ ಆಸಕ್ತಿಯಾಗಿದೆ.

ಇವುಗಳೊಂದಿಗೆ 'ದೇಸಿ'ಯನ್ನು ಇಂಥ ಕ್ರಮಗಳಿಗಿಂತ ಸಾಕಷ್ಟು ಭಿನ್ನವಾದ, ಮುಖ್ಯವಾಗಿ 'ವಿದೇಶಿ ಸಂಸ್ಕೃತಿ'ಗೆ ವಿರುದ್ಧವಾದ 'ಸ್ವದೇಶಿ ಸಂಸ್ಕೃತಿ' ಎನ್ನುವ ಅಭಿಮಾನದ ನೆಲೆಯಲ್ಲಿ ವ್ಯಾಖ್ಯಾನಿಸಿಕೊಳ್ಳುವ ಕ್ರಮಗಳು ಕೂಡಾ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಇಂದು ತೀವ್ರವಾಗಿ ಬಲಗೊಂಡಿವೆ. ಪಾಶ್ಚಾತ್ಯ ವಿದೇಶಿ ಸಂಸ್ಕೃತಿ ಭೋಗ ಪ್ರಧಾನವಾದದ್ದು, ಲೌಕಿಕವಾದದ್ದು ಮತ್ತು ಅರ್ಥಹೀನವಾದದ್ದು. ಇದಕ್ಕೆ ವಿರುದ್ಧವಾಗಿ ಸ್ವದೇಶಿ ಸಂಸ್ಕೃತಿ ಯೌಗಿಕವಾದದ್ದು, ಅಲೌಕಿಕವಾದದ್ದು ಹಾಗೂ ಅರ್ಥಪೂರ್ಣವಾದದ್ದು. ಹೀಗಾಗಿ ತಿರಸ್ಕಾರ ಅಥವಾ ಅವಗಣನೆಗೆ ಒಳಗಾಗಿರುವ 'ಸ್ವದೇಶಿ ಸಂಸ್ಕೃತಿ'ಯನ್ನು ಪಾಶ್ಚಾತ್ಯ ಸಂಸ್ಕೃತಿ ಮತ್ತು ಜೀವನ ಶೈಲಿಗಳ ದುಷ್ಟ ಪ್ರಭಾವವನ್ನು ಹತ್ತಿಕ್ಕುವುದಕ್ಕಾಗಿ ಮರುಸ್ಥಾಪಿಸಬೇಕು. ಇದು ಅತ್ಯಂತ ಶ್ರೇಷ್ಠವಾದ ಕಾರ್ಯ ಎನ್ನುವುದು ಸಾಂಸ್ಕೃತಿಕ ಪುನರುತ್ಥಾನವಾದಿ ಚಿಂತಕರು ಪ್ರತಿಪಾದಿಸುವ 'ದೇಸಿ' ಕುರಿತ ವ್ಯಾಖ್ಯಾನವಾಗಿದೆ. ಆದರೆ ಮೂಲತಃ ಇದು ಬಲಪಂಥೀಯ ರಾಜಕೀಯ ಕಾರ್ಯಸೂಚಿಯ ವ್ಯಾಖ್ಯಾನವಾಗಿರುತ್ತದೆ. ಏಕೆಂದರೆ ಇದರಲ್ಲಿ 'ಪರಂಪರೆಯ ಕೊಳಕಿನ' ರೋಗಕ್ಕೆ ಸಂಬಂಧಿಸಿದ ಮದ್ದಿನ ಯಾವುದೇ ಪ್ರಸ್ತಾಪವಿಲ್ಲ.

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಈ ಮಾದರಿಯ ವಿಮರ್ಶಾ ರೂಪಗಳೂ ಕೂಡಾ ತೀವ್ರಗೊಳ್ಳುತ್ತಿವೆ. ಜಿ.ಬಿ. ಹರೀಶ್, ಅಜಕ್ಕಳ ಗಿರೀಶ್ ಭಟ್ ಮೊದಲಾದವರು ಸಾಂಸ್ಕೃತಿಕ ವಿಮರ್ಶೆ ಹೆಸರಿನಲ್ಲಿ ವೈದಿಕ ಧರ್ಮ, ಸನಾತನ ಸಂಸ್ಕೃತಿ, ಪ್ರಾಚೀನ ಆಧ್ಯಾತ್ಮಿಕ ಪಂಥಗಳು ಮತ್ತು ತಾಂತ್ರಿಕ ಪಂಥಗಳ ಮಹತ್ವನ್ನು ಪ್ರತಿಪಾದಿಸುವ ಹಾಗೂ ಪ್ರಚುರಗೊಳಿಸುವ ಗಂಭೀರವಾದ ಪ್ರಯತ್ನಗಳನ್ನು ಮಾಡುತ್ತಿರುವುದನ್ನು ಗಮನಿಸಬಹುದು. ವೀಣಾ ಬನ್ನಂಜೆ ಅವರು ಅಕ್ಕನ ವಚನಗಳ ವ್ಯಾಖ್ಯಾನಗಳಿಗೆ ಮತ್ತು ಸತ್ಯಕಾಮರ ತಂತ್ರ ಸಾಧನೆಯಂಥ ರೋಚಕ ಕಥಾವಸ್ತುಗಳನ್ನು ಕೇಂದ್ರವಾಗುಳ್ಳ ರಂಜನೀಯ ಕಾದಂಬರಿಗಳ ವಿಶ್ಲೇಷಣೆಗೆ ಸಮಾನವಾಗಿ ಬಳಸುತ್ತಿರುವ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಯೌಗಿಕ ವಿಧಾನಗಳು ಸಹ ಇಂಥ ದೇಶಿವಾದಿ ವಿಮರ್ಶಾ ವಿಧಾನಗಳೇ ಆಗಿವೆ. ಬಹಳ ಮುಖ್ಯವಾಗಿ ಭೈರಪ್ಪ ಅವರ ಕಾದಂಬರಿಗಳನ್ನು ಕುರಿತ ವಿಮರ್ಶೆಗಳಲ್ಲಿ ಈ ಪುನರುತ್ಥಾನವಾದಿ ದೇಶಿವಾದಿ ಸಾಂಸ್ಕೃತಿಕ ವಿಮರ್ಶೆಯ ರೂಪಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ಅವರ 'ಆವರಣ' ಕಾದಂಬರಿಗೆ ಬಂದ ವಿಮರ್ಶೆಗಳು ಇದಕ್ಕೆ ನಿದರ್ಶನ. ಇಂಥ ಸಂದರ್ಭದಲ್ಲಿ ಗಾಂಧೀಜಿ ಅವರ ಚಿಂತನೆಗಳಿಂದ ಪ್ರೇರಣೆ ಪಡೆದಿರುವ ಪ್ರಸನ್ನ ಅವರ 'ದೇಶಿ ಜೀವನ ಪದ್ಧತಿ' (೨೦೦೫) ಮತ್ತು 'ಯಂತ್ರಗಳನ್ನು ಕಳಚೋಣ ಬನ್ನಿ' (೨೦೦೯) ಕೃತಿಗಳ ದೇಶಿವಾದಿ ಸಾಂಸ್ಕೃತಿಕ ವಿಮರ್ಶೆಯ ಪ್ರಯತ್ನಗಳು ಹೆಚ್ಚು ಗಮನ ಸೆಳೆಯುತ್ತಿಲ್ಲ.

ಇತ್ತೀಚಿನ ದಿನಗಳಲ್ಲಿ ನಂಗಲಿ ಅವರು ಪಾಶ್ಚಾತ್ಯ 'ಗ್ರೀನ್ ಕ್ರಿಟಿಸಿಸಂ'ಗೆ ಸಂವಾದಿಯಾಗಿ ಕನ್ನಡದ 'ಹಸಿರು ವಿಮರ್ಶೆ'ಯ ರೂಪವೊಂದನ್ನು ಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಸಾಹಿತ್ಯ ಮತ್ತು ಪಠ್ಯದಲ್ಲಿ ಪಡಿಮೂಡಿರುವ ಪ್ರಕೃತಿ ಅಥವಾ ನಿಸರ್ಗದ ಸ್ವರೂಪದ ವಿಶ್ಲೇಷಣೆಯ ನೆಲೆಯನ್ನು ದಾಟಿ ಆಧುನಿಕ ಅಭಿವೃದ್ಧಿ ಹಾಗೂ ವೈಜ್ಞಾನಿಕ ಸಾಧನೆ ಕುರಿತ ವಿಮರ್ಶೆಯಾಗಿ ಬೆಳೆದರೆ, ಕನ್ನಡದಲ್ಲಿ ದೇಶಿವಾದಿ ಸಾಂಸ್ಕೃತಿಕ ವಿಮರ್ಶೆಯ ಅರ್ಥಪೂರ್ಣವಾದ ಹೊಸ ರೂಪವೊಂದು ವಿಕಾಸವಾದಂತಾಗುತ್ತದೆ. ಈ ವಿಮರ್ಶಾ ಮಾರ್ಗವು ಡಿ.ಆರ್. ಅವರು ಕಟ್ಟಲು ಯತ್ನಿಸಿದ ನಿರ್ವಸಾಹತೀಕರಣ ಮತ್ತು ಆಧುನಿಕೋತ್ತರ ಚಿಂತನೆಯ ವಿಮರ್ಶಾತ್ಮಕ ಅನುಸಂಧಾನ; ಅನಂತಮೂರ್ತಿ ಅವರು ಆಧುನಿಕತೆಗೆ ಮುಖಾಮುಖಿಯಾಗಿ ರೂಪಿಸಲು ಯತ್ನಿಸಿದ ದೇಶಿ ಚೈತನ್ಯ ಮೂಲಗಳು; ಚೆನ್ನಿ ಹಾಗೂ ತರೀಕೆರೆ ಅವರು ನವವಸಾಹತುಶಾಹಿ ಆಕ್ರಮಣಶೀಲತೆಗೆ ಎದುರಾಗಿ ಹುಡುಕುತ್ತಿರುವ ಸ್ಥಳೀಯ ಪ್ರತಿರೋಧ ಶಕ್ತಿಗಳ ಆಯಾಮಗಳನ್ನು ಗಳಿಸಿಕೊಂಡಿದ್ದೇ ಆದರೆ, ಆಗ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ತೃತೀಯ ಜಗತ್ತಿನ ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆಯ ಒಂದು ಅತ್ಯುತ್ತಮ ದೇಸಿ ರೂಪವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

೪.೯ ಅಧ್ಯಾಯದ ಫಲಿತಗಳು

'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ'ಯಿಂದ ಕಂಡುಕೊಳ್ಳಲಾದ ಮುಖ್ಯ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವು ಆಧುನಿಕ ಕನ್ನಡ ವಿಮರ್ಶೆಯ ಸಾಮಾನ್ಯ ತಾತ್ವಿಕ ಸ್ವರೂಪಕ್ಕಿಂತ ಭಿನ್ನವಾಗಿದೆ.

ಆ. ಹಲವು ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಸಂಶ್ಲೇಷಕ ಪ್ರಭಾವದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ವಿಕಾಸಗೊಂಡಿರುತ್ತದೆ.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ರೂಪಿಸುವುದರ ಹಿನೆಲೆಯಲ್ಲಿ ಪಾಶ್ಚಾತ್ಯ ಪ್ರಭಾವ, ಪ್ರೇರಣೆಗಳಿಗಿಂತ ದೇಶೀಯ ಹಾಗೂ ಸ್ಥಳೀಯ ವಿದ್ಯಮಾನಗಳು ವಹಿಸಿರುವ ಪಾತ್ರ ಮಹತ್ತರವಾಗಿದೆ.

ಈ. ಸ್ವಾತಂತ್ರ್ಯೋತ್ತರ ಕಾಲಘಟ್ಟದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಬೆಳವಣಿಗೆಗಳ ವಿದ್ಯಮಾನಗಳಿಗೂ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣಕ್ಕೂ ನೇರವಾದ ಸಂಬಂಧವಿದೆ.

ಉ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ವಿವಿಧ ನೆಲೆಗಳನ್ನು ವಿಮರ್ಶೆಯ ಉದ್ದೇಶ, ಗುರಿ, ವಿಧಾನ ಹಾಗೂ ಕಾರ್ಯಮಾದರಿಗಳಲ್ಲಿ ಆಗಿರುವ ಪಲ್ಲಟಗಳಲ್ಲಿ ಗುರುತಿಸಬಹುದು.

ಊ. ವಿಶಿಷ್ಟವಾದ ತಾತ್ವಿಕ ಸ್ವರೂಪದ ಕಾರಣದಿಂದ 'ಕನ್ನಡ ಸಾಂಸ್ಕೃತಿಕ ವಿಮರ್ಶೆ'ಯನ್ನು ಸಾಹಿತ್ಯಿಕ ಮತ್ತು ಸಾಹಿತ್ಯೇತರ ಪಠ್ಯಗಳ ಸಾಂಸ್ಕೃತಿಕ ರಾಜಕಾರಣದ ಸ್ವರೂಪವನ್ನು ಬಹುಶಿಸ್ತುಗಳ ಸಂಶ್ಲೇಷಣಾ ವಿಧಾನದಲ್ಲಿ ಅನುಸಂಧಾನಿಸುವ ವಿಮರ್ಶಾ ವಿಧಾನ ಎಂದು ನಿರ್ವಚಿಸಿಕೊಳ್ಳಬೇಕಿದೆ.

ಋ. ಕನ್ನಡ ಸಾಂಸ್ಕೃತಿಕ ವಿಮರ್ಶೆ ತನ್ನ ಸಾಹಿತ್ಯಾನುಸಂಧಾನದ ಭಾಗವಾಗಿ ಸಮಾಜ, ಸಂಸ್ಕೃತಿ ಮತ್ತು ವಿಮರ್ಶೆಗಳಿಗಿರುವ ಪರಸ್ಪರ ಸಂಬಂಧ ಹಾಗೂ ಸಂಘರ್ಷದ ಸ್ವರೂಪವನ್ನು ವಿವಿಧ ಮೀಮಾಂಸೆಗಳನ್ನು ಕಟ್ಟುವ ಮೂಲಕ ವ್ಯಾಖ್ಯಾನಿಸುತ್ತಿದೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಾಂಸ್ಕೃತಿಕ ರಾಜಕಾರಣದ ಮಾಧ್ಯಮವಾಗಿ ಪರಿವರ್ತಿತವಾಗಿರುವುದರ ಪ್ರತೀಕವಾಗಿದೆ.

ೠ. ಸಾಮಾಜಿಕ ನ್ಯಾಯಸಾಧನೆ ಮತ್ತು ಬದುಕಿನ ಬದಲಾವಣೆಯ ಕಾಳಜಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನ ಉದ್ದೇಶಗಳಾಗಿ ಅಂಗೀಕಾರಗೊಂಡಿರುವುದರ ಹಿನ್ನೆಲೆಯಲ್ಲಿ ದಮನಿತ, ಶೋಷಿತ, ನಿರ್ಲಕ್ಷಿತ ಮತ್ತು ಅಪಮಾನಿತರ ನೋವಿನ ಚರಿತ್ರೆಗಳ ದಟ್ಟವಾದ ಒತ್ತಾಯವಿದೆ. ಸಂಘರ್ಷಾತ್ಮಕ ಅನುಸಂಧಾನವಿದೆ.

ಎ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಚಹರೆಗಳಿಗೆ ಮತ್ತು ವಿಶ್ಲೇಷಣಾ ವಿಧಾನಗಳಿಗೆ ಸಾಹಿತ್ಯ, ಸಂಸ್ಕೃತಿ ಹಾಗೂ ವಿಮರ್ಶೆ ಕುರಿತ ವಿವಿಧ ವ್ಯಾಖ್ಯಾನಗಳು ಹೇಗೋ ಹಾಗೆಯೇ, ವಿಮರ್ಶೆ ಮೂಲಕ ಸಾಧಿಸಬಯಸುತ್ತಿರುವ ಧ್ಯೆಯೋದ್ದೇಶಗಳು ಹಾಗೂ ಅನುಸರಿಸುತ್ತಿರುವ ಕಾರ್ಯಮಾದರಿಗಳೂ ಸಹ ಮುಖ್ಯವಾದ ಕಾರಣಗಳಾಗಿವೆ.

ಏ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳಿಗೆ ಪ್ರಧಾನಧಾರೆಯ ವಿಮರ್ಶಾ ರೂಪಗಳ ವಿಕಲ್ಪಗಳಲ್ಲಿ ಆದ ತೀವ್ರತರವಾದ ಪಲ್ಲಟಗಳು ಬಹುಮುಖ್ಯವಾದ ಕಾರಣಗಳಾಗಿವೆ. ಬದಲಾದ ಕಾಲಘಟ್ಟ ಒಡ್ಡಿದ ಸವಾಲುಗಳ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಬದುಕನ್ನು ನಿರ್ದಿಷ್ಟ ಜಲವಿಭಾಜಕ ಕ್ರಮದಲ್ಲಿ ಪ್ರತ್ಯೇಕಿಸಿ ನೋಡುವ ಸರಳ ಮತ್ತು ಪರಿಮಿತ ವಿಮರ್ಶಾ ವಿಧಾನಗಳಲ್ಲಿ ಉಂಟಾದ ಸ್ಥಿತ್ಯಂತರಗಳೇ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇಂಥ ಬಹುರೂಪಿ ಮಾದರಿಗಳಿಗೆ ಮೂಲ ಕಾರಣಗಳಾಗಿವೆ.

ಐ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳ ಪೈಕಿ, ಅನೇಕ ಸಲ ಒಂದು ಮಾದರಿ ಇನ್ನೊಂದು ಮಾದರಿಯ ಚಹರೆ ಹಾಗೂ ಕಾರ್ಯಮಾದರಿಗಳನ್ನು ಹಂಚಿಕೊಳ್ಳುತ್ತವೆ. ಇದಕ್ಕೆ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಗಳ ಅನುಸಂಧಾನಕ್ಕೆ ಅವು ಬಳಸುವ ಸಂಶ್ಲೇಷಕ ವಿಧಾನಗಳು ಮುಖ್ಯವಾದ ಕಾರಣಗಳಾಗಿವೆ.

ಒ. ಸಾಮಾನ್ಯವಾಗಿ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಎಲ್ಲಾ ಮಾದರಿಗಳೂ, ನವವಸಾಹತುಶಾಹಿ ಯಾಜಮಾನ್ಯತೆಯ ರೂಪಗಳಿಗೆ ತೀವ್ರವಾಗಿ ಮುಖಾಮುಖಿಯಾಗುತ್ತಿರುವುದರ

ಹಿನ್ನೆಲೆಯಲ್ಲಿ ವಿಮರ್ಶೆಯ ಮೂಲಕ ಸಾಧಿಸಬಯಸುತ್ತಿರುವ ಸಾಹಿತ್ಯೇತರ ಹೊಣೆಗಾರಿಕೆಗಳು ಬಲವಾದ ಪ್ರೇರಣೆಗಳಾಗಿವೆ.

೬. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹಲವು ಮಹತ್ವಪೂರ್ಣ ಮಾದರಿಗಳ ಅಂತಃಸತ್ವವು ವಿವೇಕಪೂರ್ಣವಾಗಿ ಸಮಾವಿಷ್ಟಗೊಳ್ಳುವ ಮೂಲಕ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ತೃತೀಯ ಜಗತ್ತಿನ ಸಾಂಸ್ಕೃತಿಕ ವಿಮರ್ಶೆಯ ಒಂದು ಅತ್ಯುತ್ತಮ ದೇಸಿರೂಪವಾಗಿ ವಿಕಾಸಗೊಳ್ಳುವ ದಟ್ಟವಾದ ಸಾಧ್ಯತೆಯಿದೆ.

೭. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಮಕಾಲೀನ ಸಂದರ್ಭದಲ್ಲಿ ಪಡೆದುಕೊಂಡಿರುವ ಬಹುರೂಪಿ ಆಯಾಮಗಳು, ಅದರ ತಾತ್ವಿಕ ಸ್ವರೂಪದ ವಿಶಿಷ್ಟ ಚಹರೆಗಳ ಅರ್ಥಪೂರ್ಣ ಬೆಳವಣಿಗೆಯನ್ನು ರುಜುವಾತುಪಡಿಸುತ್ತವೆ.

ಕೊನೆ ಟಿಪ್ಪಣಿಗಳು

೧. ಅನಂತಮೂರ್ತಿ ಯು.ಆರ್., ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ, ೧೯೭೧, ಪುಟ ೧೪೪

೨. ಪೂರ್ಣಚಂದ್ರ ತೇಜಸ್ವಿ ಕೆ. ಪಿ., ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ೨೦೦೯, ಪುಟ ೨೪

೩. ಅದೇ, ಪುಟ ೨೫

೪. ಅದೇ, ಪುಟ ೨೮

೫. ಅದೇ, ಪುಟ ೧೩

೬. ಅದೇ, ಪುಟ ೩೦

೭. ಅದೇ, ಪುಟ ೪೦

೮. ಕೃಷ್ಣಪ್ಪ ಬಿ., ಪ್ರೊ|| ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯, ಪುಟ ೨೨೪

೯. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ೨೦೦೯, ಪುಟ ೧೩

೧೦. ಅದೇ, ಪುಟ ೧೫

೧೧. ಅನಂತಮೂರ್ತಿ ಯು.ಆರ್., ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ, ೧೯೭೧, ಪುಟ ೧೪೯

೧೨. ಅದೇ, ಪುಟ ೧೫೧

೧೩. ಅದೇ, ಪುಟ ೧೬೪

೧೪. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ೨೦೦೯, ಪುಟ ೩೫

೧೫. ಕೃಷ್ಣಪ್ಪ ಬಿ., ಪ್ರೊ|| ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯, ಪುಟ ೨೨೮.

೧೬. ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಸಂಚಿಕೆ ೨೨, ೪-೧೧-೨೦೧೨, ಪುಟ ೧

೧೭. ರಾಜೇಂದ್ರ ಚೆನ್ನಿ, ನಡುಹಗಲಿನಲ್ಲಿ ಕಂದೀಲುಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೪, ಪುಟ ೧೧

೧೮. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪, ಪುಟ ೧೧೮

ಅಧ್ಯಾಯ–ಐದು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳು

೫.೧ ಪೀಠಿಕೆ

೫.೨ ಸಾಮಾಜಿಕಾನುಸಂಧಾನದ ಸ್ವರೂಪ

೫.೨.೧ ಸಾಮಾಜಿಕಾನುಸಂಧಾನದ ಸ್ಥಿತ್ಯಂತರ

೫.೩. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳು

೫.೪ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ವಿಧಾನಗಳು

೫.೪.೧ ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ

೫.೪.೨ ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನ

೫.೪.೩ ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನ

೫.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳು

೫.೫.೧ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆ ಆಯಾಮಗಳು

೫.೬ ಮಾಲಗತ್ತಿ ಅವರ ಹಳಗನ್ನಡ ಸಾಹಿತ್ಯದ ಸಾಮಾಜಿಕಾನುಸಂಧಾನದ ಸ್ವರೂಪ

೫.೬.೧ ಜೈನಧರ್ಮ ಪಾರಮ್ಯದ ಪ್ರತಿಪಾದನೆಯ ಸಾಧನಗಳಾಗಿ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ಬಳಕೆ

೫.೬.೨ ಜೈನ ಕವಿಗಳು ಮೂಲತಃ ವರ್ಣವ್ಯವಸ್ಥೆಯ ವಿರೋಧಿಗಳಲ್ಲ; ಅದರ ಪ್ರತಿಪಾದಕರು

೫.೬.೩ ಜೈನ ಕವಿಗಳು ಜಾತಿ ವಿರೋಧಿಗಳಲ್ಲ; ಅದರ ಉಪಯೋಗವಾದಿಗಳು

೫.೭ ಬರಗೂರು ಅವರ ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನದ ಸ್ವರೂಪ

೫.೭.೧ ಸಾಂಪ್ರದಾಯಕ ಮೌಲ್ಯವ್ಯವಸ್ಥೆಗೆ ಶರಣಾದ ಸೂಕ್ಷ್ಮ ಸಂವೇದನಾಶೀಲ ಪ್ರಜ್ಞೆ

೫.೭.೨ ಸಾಮಾಜಿಕ ಸಮಸ್ಯೆಗಳ ಹೃದಯಂಗಮ ಚಿತ್ರಣ

೫.೭.೩ ನೆಲದ ನೋವುಗಳಿಗೆ ಮುಗಿಲಿನ ಮುಲಾಮು

೫.೭.೪ ಸಂಪ್ರದಾಯದ ಸಂಕೋಲೆಯೊಳಗೆ ಸೆರೆಯಾದ ಸಂವೇದನಾಶೀಲತೆ

೫.೮ ಆಶಾದೇವಿ ಅವರ 'ಬಸವಣ್ಣನ ವಚನಗಳ ಸಾಮಾಜಿಕಾನುಸಂಧಾನದ ಸ್ವರೂಪ'

೫.೮.೧ ಆಧುನಿಕ ವೈಚಾರಿಕ ಪ್ರಜ್ಞೆಯ ಅಪ್ಪಟ ಸಂಪ್ರದಾಯಶೀಲ ಧೋರಣೆ ಪ್ರಧಾನ ನೆಲೆ

೫.೮.೨ ಬಸವಣ್ಣನ ವಚನಗಳ ಹೆಣ್ಣಿನ ಪರಿಕಲ್ಪನೆಯ ನೆಲೆಗಳು

೫.೯ ಹೆಚ್.ಎಸ್.ಆರ್. ಅವರ 'ಯಶೋಧರ ಚರಿತೆ'ಯ ಸಾಮಾಜಿಕಾನುಸಂಧಾನದ ಸ್ವರೂಪ

೫.೯.೧ ಆಯ್ಕೆಯ ಬದುಕಿನ ಅಚಲ ನಿಲುವಿನ ಮನೋಪ್ರಧಾನ ನೆಲೆ

೫.೯.೨ ಸಾಮಾಜಿಕಾನುಸಂಧಾನದ ಸಾಧನಗಳಾಗಿ ಸಮಾಜಶಾಸ್ತ್ರೀಯ ಪರಿಕಲ್ಪನೆಗಳ ಬಳಕೆ

೫.೧೦ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳ ಪಲ್ಲಟಗಳು

ಅಧ್ಯಾಯ – ೫: ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳು

> "ವಿಮರ್ಶೆ ಎಂದರೆ ಒಂದು ಕಲಾಕೃತಿಗೆ ಒಂದು ಪ್ರಜ್ಞೆಯ ಪ್ರತಿಕ್ರಿಯೆ ಅಲ್ಲವೆ. ಒಬ್ಬ ಒಂದು ಕವನವನ್ನೋ ಕಥೆಯನ್ನೋ ಓದಿದ ಕೂಡಲೆ ಅದರಲ್ಲಿನ ಪದಗಳು ವಾಕ್ಯ ಸಮುದಾಯಗಳು ಸಮರ್ಥವಾಗಿ ಅರ್ಥ ಮಿಡಿಯುವಂತೆ ಸಂಯೋಜನೆಗೊಂಡಿವೆಯೇ? ನೋಡುತ್ತಾನೆ. ಅನಂತರ ಅಲ್ಲಿ ಪ್ರತಿಬಿಂಬಿಸಿರುವ ಅನುಭವಗಳು ತನ್ನ ಜೀವನಾನುಭವಗಳ ಸಾದೃಶ್ಯದಲ್ಲಿ ಎಷ್ಟು ಸಹಜ ಮತ್ತು ಅರ್ಥಪೂರ್ಣ? ಎಂದು ಒರೆ ಹಚ್ಚುತ್ತಾನೆ. ಅನಂತರ ತನ್ನ ಚಾರಿತ್ರಿಕ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಇವು ಪ್ರಮುಖವೋ ಅಪ್ರಮುಖವೋ ಯೋಚಿಸುತ್ತಾನೆ. ಕೊನೆಗೆ ಇದು ಇಡೀ ಮಾನವೀಯತೆಗೆ ಏನು ಕೊಡುಗೆ ನೀಡಿದೆ ಯೋಚಿಸುತ್ತಾನೆ. ಈ ವಿವೇಚನೆಗಳು ಒಂದಲ್ಲಾ ಒಂದು ರೀತಿಯಲ್ಲಿ ಎಲ್ಲ ಸಹೃದಯರಲ್ಲೂ ಕೆಲಸ ಮಾಡಿಯೇ ಮಾಡುತ್ತವೆ. ಆದರೆ ವಿಮರ್ಶಕನಲ್ಲಿ ಇದು ಸ್ಫುಟವಾಗಿ ಉಕ್ತಿಗಮ್ಯವಾಗುತ್ತದೆ ಅಷ್ಟೆ."
>
> ಕೆ.ಪಿ. ಪೂರ್ಣಚಂದ್ರ ತೇಜಸ್ವಿ, 'ವಿಮರ್ಶೆಯ ವಿಮರ್ಶೆ' ಕೃತಿಯಿಂದ

೫.೧ ಪೀಠಿಕೆ

ಸಾಹಿತ್ಯಾನುಸಂಧಾನದಲ್ಲಿ ಚರಿತ್ರೆ ಮತ್ತು ಸಂಸ್ಕೃತಿ ಕುರಿತು ಎತ್ತಲಾಗುವ ಮೂಲಭೂತ ಪ್ರಶ್ನೆಗಳು, ಯಾವಾಗಲೂ ಆತ್ಯಂತಿಕವಾಗಿ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸುವ ಸಾಧನಗಳಾಗಿ ಪರಿವರ್ತಿತಗೊಳ್ಳುತ್ತವೆ. ಹೀಗೆ ಆಳವಾದ ನೈತಿಕ ಹಿನ್ನೆಲೆಯನ್ನು ಹೊಂದಿರುವ ಕಾರಣದಿಂದಲೇ, ಹೊರನೋಟಕ್ಕೆ ಸಾಮಾಜಿಕ ಪ್ರಶ್ನೆಗಳ ಬಹುಸಾಮಾನ್ಯ ಪರಿಕಲ್ಪನೆಗಳಷ್ಟೇ ಎನ್ನುವಂತೆ ಗೋಚರಿಸುವ 'ಸಾಮಾಜಿಕ ಪ್ರಜ್ಞೆ' ಮತ್ತು 'ಸಮಕಾಲೀನ ಪ್ರಜ್ಞೆ'ಗಳು ಸಾಹಿತ್ಯ ವಿಮರ್ಶೆಯ ಮೂಲಭೂತ ತಾತ್ವಿಕ ಸ್ವರೂಪವನ್ನು ತೀವ್ರವಾಗಿ ಪಲ್ಲಟಗೊಳಿಸುವುದಕ್ಕೆ ಸಾಧ್ಯವಾಗಿದೆ. ಈ ಪರಿಕಲ್ಪನೆಗಳು ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಗಳ ವಿಶ್ಲೇಷಣೆ ಹಾಗೂ ಮೌಲ್ಯಮಾಪನಗಳ ಸಂದರ್ಭದಲ್ಲಿ ಅತ್ಯಂತ ಶ್ರೇಷ್ಠವೆಂದು ಪ್ರತಿಪಾದಿಸಲಾಗಿದ್ದ ಬಹುತೇಕ ಪ್ರತಿಷ್ಠಿತ ಮೀಮಾಂಸೆಗಳ ವಿರುದ್ಧ ಎತ್ತಿದ ಪ್ರಶ್ನೆಗಳಿಗೆ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ಕಾರಣಗಳಿವೆ. ಹಾಗೆಯೇ, ಪರ್ಯಾಯಗಳಾಗಿ ಇವು ಪ್ರತಿಪಾದಿಸಿದ ವೈಚಾರಿಕ ಆಕೃತಿಗಳಿಗೆ ವರ್ತಮಾನದ ಬದಲಾದ ಬದುಕಿನ ಕಣ್ಣೆದುರಿನ ಪ್ರಶ್ನೆಗಳು ಮತ್ತು ಸಾಂಸ್ಕೃತಿಕ ಸನ್ನಿವೇಶಗಳು ಪ್ರಧಾನವಾದ ಪ್ರೇರಣೆಗಳಾಗಿವೆ.

೫.೨ ಸಾಮಾಜಿಕಾನುಸಂಧಾನದ ಸ್ವರೂಪ

ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳು ಮತ್ತು ವಿಧಾನಗಳು ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಸಾಹಿತ್ಯ, ಪಠ್ಯ ಹಾಗೂ ಲೇಖಕರನ್ನು ನೋಡುವ ಕ್ರಮಗಳಲ್ಲಿ ವ್ಯಾಪಕವಾದ ಪಲ್ಲಟಗಳನ್ನು ಉಂಟುಮಾಡಿವೆ. ಇದು ಹೊರನೋಟಕ್ಕೆ ಕೇವಲ ವರ್ತಮಾನದ ಸಾಮಾಜಿಕ ಪ್ರಶ್ನೆಗಳ ಮೂಲಕ ಸಾಹಿತ್ಯದ

'ವಿಶ್ಲೇಷಣೆ' ಮತ್ತು 'ಮೌಲ್ಯಮಾಪನ' ಮಾಡುವ ಪ್ರವೃತ್ತಿಯಷ್ಟೇ ಎನ್ನುವಂತೆ ಕಂಡುಬರುತ್ತದೆ. ಆದರೆ ಅದರ ಒಳರೂಪದಲ್ಲಿ ಮಾನವನ ಮನಸ್ಸಿನ ಹಾಗೂ ಪ್ರಜ್ಞೆಯ ಸಂಕೀರ್ಣ ರಚನೆಗಳಾಗಿರುವ ಸಾಹಿತ್ಯ, ಸಮಾಜ, ಸಂಸ್ಕೃತಿ, ಚರಿತ್ರೆ, ಧರ್ಮ, ರಾಜಕಾರಣ ಮತ್ತು ಭಾಷೆ ಮೊದಲಾದವುಗಳು ಒಳಗೊಂಡಿರುವ ಮೌಲ್ಯವ್ಯವಸ್ಥೆಗಳನ್ನು ಮತ್ತು ಹಿತಾಸಕ್ತಿಗಳನ್ನು ಕುರಿತ ಗಂಭೀರವಾದ ವಿಮರ್ಶೆಯೇ, ಈ ಸಾಮಾಜಿಕ ಪ್ರಶ್ನೆಗಳ ಮೂಲಕ ಸಾಹಿತ್ಯ ವಿಮರ್ಶೆ ಮಾಡಲು ಉದ್ದೇಶಿಸಿರುವ ಅನುಸಂಧಾನವಾಗಿರುತ್ತದೆ. ಈ ಪ್ರಕ್ರಿಯೆಯ ಭಾಗವಾಗಿ ಸಾಹಿತ್ಯ ವಿಮರ್ಶೆಯು, ಸಾಹಿತ್ಯದ ಸ್ವರೂಪ ಕುರಿತು ತಾಳುವ ವಿಭಿನ್ನವಾದ ನಿಲುವುಗಳು ಮತ್ತು ಸಾಹಿತ್ಯದ ಅನುಸಂಧಾನಕ್ಕಾಗಿ ರೂಪಿಸಿಕೊಳ್ಳುವ ವಿಶಿಷ್ಟವಾದ ಪರಿಕಲ್ಪನೆಗಳು, ಪರಿಭಾಷೆಗಳು, ವಿಧಾನಗಳು ಹಾಗೂ ದೃಷ್ಟಿಕೋನಗಳಿಂದ ಅಂತಿಮವಾಗಿ ಹುಟ್ಟಿಕೊಳ್ಳುವ ಅರ್ಥಪೂರ್ಣವಾದ ತಾತ್ವಿಕತೆಯು, ಸಾಹಿತ್ಯ ವಿಮರ್ಶೆಯನ್ನು ಸಾಂಸ್ಕೃತಿಕ ವಿಮರ್ಶೆಯಾಗಿ ಪರಿವರ್ತಿಸುತ್ತದೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಸಂಬಂಧಿಸಿದಂತೆ ಅತ್ಯಂತ ಸೂಕ್ತವಾದ ಮತ್ತು ಅರ್ಥಪೂರ್ಣವಾದ ವಿಚಾರವಾಗಿದೆ.

೫.೨.೧ ಸಾಮಾಜಿಕಾನುಸಂಧಾನದ ಸ್ಥಿತ್ಯಂತರ

ಕಳೆದ ಶತಮಾನದ ಎಪ್ಪತ್ತರ ದಶಕದಿಂದ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಹಲವು ಹೊಸ ಪ್ರಕಾರಗಳು ಮುನ್ನೆಲೆಗೆ ಬಂದವು. ಇವು ಸಾಹಿತ್ಯ ಕೃತಿ ಅಥವಾ ಪಠ್ಯವನ್ನು ಸಾಮಾಜಿಕ ಪ್ರಶ್ನೆಗಳ ಮೂಲಕ ವಿಶ್ಲೇಷಿಸುವ ಅಥವಾ ಪ್ರಶ್ನಿಸುವ ಅನೇಕ ಮಹತ್ವಪೂರ್ಣವಾದ ಕ್ರಮಗಳನ್ನು ರೂಢಿಗೆ ತಂದವು. ಮೊದಲು ಇದು, ಆಯಾ ವಿಮರ್ಶಾ ಪ್ರಕಾರದ ಸೈದ್ಧಾಂತಿಕ ಹಿನ್ನೆಲೆ ಮತ್ತು ತಾತ್ವಿಕ ದೃಷ್ಟಿಕೋನದ ವಿಶಿಷ್ಟತೆಗೆ ಅನುಸಾರವಾಗಿ ಸಾಮಾಜಿಕಾನುಸಂಧಾನದ ವಿಭಿನ್ನ ವಿಧಾನಗಳು ರೂಪುಗೊಳ್ಳುವ ಮೂಲಕ ಆರಂಭವಾಯಿತು. ಈ ಹಂತದಲ್ಲಿ ಸಾಹಿತ್ಯದ ಸಾಮಾಜಿಕಾನುಸಂಧಾನವು ಹಲವು ರೂಪಗಳಲ್ಲಿ ಕ್ರಿಯಾತ್ಮಕವಾಯಿತು. ಪ್ರಚಲಿತವಾಗಿರುವ ವಿಮರ್ಶಾ ಪರಿಕಲ್ಪನೆಗಳು ಮತ್ತು ಸಾಧನಗಳನ್ನು ಬಳಸಿಕೊಳ್ಳುವುದು, ನೂತನ ವೈಚಾರಿಕ ಆಕೃತಿಗಳನ್ನು ಅನ್ವಯಿಸುವುದು ಮತ್ತು ಒಂದು ನಿರ್ದಿಷ್ಟ ವಿಮರ್ಶಾ ಪ್ರಕಾರ ತನಗಿಂತ ಬಹುತೇಕ ಭಿನ್ನವಾಗಿರುವ ಇನ್ನೊಂದು ವಿಶಿಷ್ಟ ವಿಮರ್ಶಾ ಪ್ರಕಾರದ ತಿಳಿವಳಿಕೆಯ ವಿಧಾನವನ್ನು ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳುವುದು, ಹೀಗೆ ಅನೇಕ ಬಗೆಗಳಲ್ಲಿ ಇದು ವ್ಯಕ್ತವಾಯಿತು. ಹಾಗೆ ನೋಡಿದರೆ, ಈ ಎಲ್ಲಾ ಕ್ರಮಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆರಂಭಿಕ ಹಂತದ ವಿನ್ಯಾಸಗಳೂ ಹೌದು. ಆದರೆ, ಆನಂತರದ ದಿನಗಳಲ್ಲಿ ಇವು ಬದಲಾದ ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳು ಒಡ್ಡಿದ ಸವಾಲುಗಳ ಹಾಗೂ ಒತ್ತಡಗಳ ಕಾರಣದಿಂದ ಅತ್ಯಂತ ಸಂಕೀರ್ಣವಾದ ನೆಲೆಗಳನ್ನು ಪಡೆದುಕೊಂಡವು. ಇದರ ಪರಿಣಾಮವಾಗಿ, ಕನ್ನಡ ಸಾಂಸ್ಕೃತಿಕ

ವಿಮರ್ಶೆಯಲ್ಲಿ ಅರ್ಥಪೂರ್ಣವಾದ ಸ್ವವಿಶಿಷ್ಟ ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳು ಮತ್ತು ವಿಧಾನಗಳು ರೂಪುಗೊಂಡವು.

೫.೩ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳು

ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಪ್ರಧಾನವಾದ ನಾಲ್ಕು ಸಾಮಾಜಿಕ ಪರಿಕಲ್ಪನೆಗಳ ಮೂಲಕ, ಅತ್ಯಂತ ಪರಿಣಾಮಕಾರಿಯಾದ ಹಾಗೂ ಅರ್ಥಪೂರ್ಣವಾದ ಕ್ರಮಗಳಲ್ಲಿ ಅನುಸಂಧಾನ ಮಾಡಿದೆ. ಅವುಗಳೆಂದರೆ, ಅ. ವರ್ಣ ಪರಿಕಲ್ಪನೆ ಆ. ವರ್ಗ ಪರಿಕಲ್ಪನೆ ಇ. ಜಾತಿ ಪರಿಕಲ್ಪನೆ ಮತ್ತು ಈ. ಲಿಂಗ ಪರಿಕಲ್ಪನೆ.

ಈ ಪರಿಕಲ್ಪನೆಗಳು, ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ರಚನೆಗೆ ಸಂಬಂಧಿಸಿದ ಮೂಲಭೂತ ಪರಿಕಲ್ಪನೆಗಳಾಗಿವೆ. ಹೀಗಾಗಿ ಇವು ನಮ್ಮ ವ್ಯವಸ್ಥೆಕುರಿತು ಸ್ಪಷ್ಟ ಚಿತ್ರಣ ಕೊಡುತ್ತವೆ. ಅಷ್ಟೇ ಅಲ್ಲದೆ, ಅದು ಒಳಗೊಂಡಿರುವ ಅಸಮಾನತೆ ಮತ್ತು ಶೋಷಣಾ ಜಗತ್ತಿನ ಸ್ವರೂಪವನ್ನು ಪರಿಣಾಮಕಾರಿಯಾಗಿ ಗ್ರಹಿಸಲು ಇರುವ ಸಮರ್ಥವಾದ ಸಾಧನಗಳೂ ಸಹ ಆಗಿವೆ ಎನ್ನುವುದು ಈ ಪರಿಕಲ್ಪನೆಗಳನ್ನು ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆ ಹೊಂದಿರುವ ಬಹುಮುಖ್ಯವಾದ ಧೋರಣೆಯಾಗಿದೆ. ಹೀಗಾಗಿ ಇವುಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ 'ಚರ್ತುಬೇಧ'ಗಳೆಂದು ವ್ಯಾಖ್ಯಾನಿಸಿಕೊಂಡಿದೆ. ಆ ಮೂಲಕ ಇವು ಪ್ರತಿಪಾದಿಸುವ ವಿವಿಧ 'ಸ್ವಭಾವ'ಗಳು, 'ಪ್ರವೃತ್ತಿ'ಗಳು ಮತ್ತು 'ಹಿತಾಸಕ್ತಿ'ಗಳನ್ನು ಗುರುತಿಸುವ ಹಾಗೂ ವಿಶ್ಲೇಷಿಸುವ ಪ್ರಯತ್ನ ಮಾಡಿದೆ. ಹಾಗೆಯೇ, ಇವುಗಳನ್ನು ಸಮರ್ಥಿಸುವುದಕ್ಕೆ ಮತ್ತು ರಕ್ಷಿಸುವುದಕ್ಕೆ ಸಂಬಂಧಿಸಿದಂತೆ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅನುಸರಿಸಿಕೊಂಡು ಬಂದಿರುವ ಬಹುರೂಪಿ ಕಾರ್ಯತಂತ್ರಗಳನ್ನು, ಸಾಹಿತ್ಯ ಮತ್ತು ಪಠ್ಯಗಳಲ್ಲಿ ಹೇಗೆ ಪ್ರತಿಪಾದಿಸಲಾಗಿದೆ ಎನ್ನುವುದನ್ನು ಸಹ ಶೋಧಿಸುವ ಗಂಭೀರವಾದ ಪ್ರಯತ್ನಗಳನ್ನು ಮಾಡಿದೆ.

ಸಾಹಿತ್ಯದ ಸಾಮಾಜಿಕಾನುಸಂಧಾನದ ಈ ಪ್ರಕ್ರಿಯೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಪ್ರಧಾನವಾದ ಈ ನಾಲ್ಕು ಪರಿಕಲ್ಪನೆಗಳೊಂದಿಗೆ, ಇನ್ನೂ ಕೆಲವು ಅರ್ಥಪೂರ್ಣವಾದ ಹೊಸ ಪರಿಭಾಷೆಗಳು, ಪರಿಕಲ್ಪನೆಗಳು ಮತ್ತು ಪ್ರಮೇಯಗಳನ್ನು ಸಹ ಕಾಲಕಾಲಕ್ಕೆ ಸಂದರ್ಭೋಚಿತವಾಗಿ ಹಾಗೂ ಯುಕ್ತವಾಗಿ ಬಳಸುತ್ತಾ ಬಂದಿದೆ. ಇದರಿಂದ ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಪಠ್ಯಗಳನ್ನು ಕುರಿತು ಪ್ರಧಾನಧಾರೆ ವಿಮರ್ಶೆ ಹಾಗೂ ವಿವಿಧ ಪಂಥೀಯ, ಇಲ್ಲವೇ ಸೈದ್ಧಾಂತಿಕ ಬದ್ಧತೆಯ ವಿಮರ್ಶೆಗಳು ನೀಡಲು ಸಾಧ್ಯವಾಗದಿದ್ದಂಥ ಅರ್ಥಪೂರ್ಣವಾದ ಒಳನೋಟಗಳನ್ನು ಕೊಡಲು ಸಾಧ್ಯವಾಗಿದೆ. ಸಾಹಿತ್ಯಲೋಕದಲ್ಲಿ ನಿರೂಪಿತವಾಗಿರುವ ಸಮಾಜ ಮತ್ತು ಸಂಸ್ಕೃತಿಗಳು, ಎಂದಿಗೂ ನಿರ್ಜೀವ ಸ್ಥಿತಿಗಳಾಗಲೀ ಅಥವಾ ನಿಖರ ನಿಲುಬಿಂದುವಿನ ಮೂಲಕ ಕಡಿದುಹೋಗಿರುವ ಪ್ರತ್ಯೇಕ ಅವಸ್ಥೆಗಳಾಗಲೀ

ಅಲ್ಲ. ಬದಲಾಗಿ, ಸಾಹಿತ್ಯ ಲೋಕದ ನಿರೂಪಿತ ಜಗತ್ತಿನ ಹಾಗೂ ವಾಸ್ತವದ ನಿಜ ಜಗತ್ತಿನ ನಡುವೆ ಸಾವಯವತೆ ಮತ್ತು ಸಾತತ್ಯತೆ ಇದೆ. ಆದ್ದರಿಂದಲೇ, ಸಾಹಿತ್ಯ ಜಗತ್ತಿನಲ್ಲಿ ಆಕಾರ ತಳೆದಿರುವ ಸಮಾಜ ಮತ್ತು ಸಂಸ್ಕೃತಿಯ ಸ್ವರೂಪವನ್ನು ವಿಶ್ಲೇಷಿಸುವುದು ಎಂದರೆ, ಅದು ಇನ್ನೇನೂ ಆಗಿರದೆ, ವಾಸ್ತವವಾಗಿ ಸಮಕಾಲೀನ ಅಥವಾ ಸದ್ಯಕಾಲೀನ ಜಗತ್ತಿನ ಸ್ವರೂಪವನ್ನು ಅರ್ಥೈಸುವುದು ಹಾಗೂ ಬದಲಾಯಿಸುವುದೇ ಆಗಿದೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಇಟ್ಟುಕೊಂಡಿರುವ ಬಹುಮುಖ್ಯವಾದ ಧೋರಣೆಯಾಗಿದೆ.

ಸಾಹಿತ್ಯದ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿನ ಈ ಅರ್ಥಪೂರ್ಣವಾದ ಧೋರಣೆಯನ್ನು, ಕನ್ನಡ ಸಾಂಸ್ಕೃತಿಕ ವಿಮರ್ಶೆಯು 'ಕಾಲ' ಮತ್ತು 'ಚರಿತ್ರೆ'ಯ ಗತಿಶೀಲತೆ ಸ್ವರೂಪ ಕುರಿತ ಪಾಶ್ಚಾತ್ಯರ 'ಸರಳರೇಖಾತ್ಮಕ' ಹಾಗೂ ಭಾರತೀಯರ 'ಚಕ್ರಾತ್ಮಕ' ಪರಿಕಲ್ಪನೆಗಳಿಗೆ ಭಿನ್ನವಾದ 'ಸಾವಯವತೆ' ಮತ್ತು 'ಸಾತತ್ಯತೆ' ಪರಿಕಲ್ಪನೆಗಳನ್ನು ಶೋಧಿಸಿಕೊಳ್ಳುವುದರ ಮೂಲಕ ರೂಪಿಸಿಕೊಂಡಿದೆ.

ಬಹುಮುಖ್ಯವಾಗಿ, ಈ ಎರಡು ಆಧುನಿಕ ಪರಿಕಲ್ಪನೆಗಳು ಸಾಹಿತ್ಯದ ಮೂಲಕ ಸಮಾಜವನ್ನು ಮತ್ತು ಸಮಾಜದ ಮೂಲಕ ಸಾಹಿತ್ಯವನ್ನು ಅರ್ಥೈಸಿಕೊಳ್ಳುವುದಕ್ಕೆ ಹಲವು ಉಪಯುಕ್ತವಾದ ಸಾಧನಗಳನ್ನು ಕಲ್ಪಿಸಿದವು. ಆದ್ದರಿಂದಲೇ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಸ್ಪಷ್ಟರೂಪ ಪಡೆಯುವುದಕ್ಕೆ ಮೊದಲು ಸಾಹಿತ್ಯದ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಅತ್ಯಂತ ಜನಪ್ರಿಯವಾಗಿದ್ದ 'ಬೈನರಿ' ಪರಿಕಲ್ಪನೆಗಳನ್ನು ಆನಂತರ ತೀವ್ರವಾಗಿ ವಿರೋಧಿಸುವ ಪ್ರವೃತ್ತಿ ಪ್ರಾರಂಭವಾಯಿತು. ಯಾವುದೇ ಮುಲಾಜುಗಳಿಲ್ಲದೆ ಭೌತಿಕ ಪದಾರ್ಥಗಳಂತೆ ಮೌಲ್ಯವ್ಯವಸ್ಥೆ ಮತ್ತು ಬೌದ್ಧಿಕ ವಿಕಲ್ಪಗಳಂಥ ಅಭೌತಿಕ ಸಂಗತಿಗಳನ್ನು ಸಹ ಇಬ್ಭಾಗ ಮಾಡುತ್ತಿದ್ದ ಈ 'ಬೈನರಿ' ಪರಿಕಲ್ಪನೆಗಳ ವಿಶ್ಲೇಷಣಾ ಕ್ರಮವನ್ನು ತೀವ್ರವಾಗಿ ಪ್ರಶ್ನಿಸಲಾಯಿತು. ಹೀಗಾಗಿ, ಕಪ್ಪು ಮತ್ತು ಬಿಳಿ ಬಣ್ಣಗಳ ನಡುವೆ ಇರುವ 'ಬೂದುಬಣ್ಣ'ವನ್ನು ಗುರುತಿಸುವ ಪ್ರಯತ್ನ ಪ್ರಾರಂಭವಾಯಿತು. ಹಾಗೆಯೇ, ಕಪ್ಪಿನೊಳಗೆ ಬಿಳುಪೂ ಮತ್ತು ಬಿಳುಪಿನೊಳಗೆ ಕಪ್ಪೂ ಇರುವ ಸ್ಥಿತಿಯನ್ನು ಸಹ ಕುರಿತು ಆಲೋಚಿಸುವ ಪ್ರವೃತ್ತಿ ಮೊದಲಾಯಿತು. ಬಹಳ ಮುಖ್ಯವಾಗಿ, ಕಪ್ಪು ಎಂದು ತಿಳಿದದ್ದು ಬಿಳುಪಾಗಿಯೂ; ಹಾಗೆಯೇ ಬಿಳುಪು ಎಂದು ನಂಬಿದ್ದು ಕಪ್ಪಾಗಿಯೂ ಗೋಚರಿಸುವ ನಿಜದ ಹೊಸ ಸಾಧ್ಯತೆ ಬಗೆಗೂ ಗಂಭೀರವಾದ ಚಿಂತನೆಗಳು ನಡೆಯುವ ವಿದ್ಯಮಾನ ತೀವ್ರಗೊಂಡಿತು.

ಸಾಮಾಜಿಕಾನುಸಂಧಾನದ ಈ ಹೊಸ ವಿದ್ಯಮಾನದಿಂದ, ಬಹಳ ಮುಖ್ಯವಾಗಿ ಸಾಹಿತ್ಯಾಧ್ಯಯನ ದಲ್ಲಿ ಒಂದು ಹೊಸ ಆಲೋಚನೆ ಹೆಚ್ಚು ಮಹತ್ವ ಪಡೆಯಿತು. ಯಾವುದೇ ಕಾಲ, ದೇಶ ಮತ್ತು ಪರಿಸರದ ಹಿನ್ನೆಲೆಯ ಬೌದ್ಧಿಕ ಬೆಳಕು ಹಾಗೂ ನೋಟಕ್ರಮಗಳು, ಅವು ಎಷ್ಟೇ ಸತ್ವಶಾಲಿ ಅಥವಾ ಪ್ರಭಾವಶಾಲಿಗಳಾದರೂ ಸಹ, ಅಂತಿಮವಾಗಿ ಅನ್ವಯಗೊಳ್ಳುವ ದೇಶೀಯ ಅಥವಾ ಸ್ಥಳೀಯ ಪರಿಸರದಲ್ಲಿ

ಹೊಸಹುಟ್ಟು ಪಡೆಯಬೇಕು ಎನ್ನುವ ಅರ್ಥಪೂರ್ಣ ಆಲೋಚನೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನಕ್ಕೆ ಹೊಸ ತಿರುವು ಕೊಟ್ಟಿತು.

೫.೪ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ವಿಧಾನಗಳು

ಸಾಮಾಜಿಕಾನುಸಂಧಾನದ 'ಪ್ರಧಾನ' ಮತ್ತು 'ಆಧುನಿಕ' ಪರಿಕಲ್ಪನೆಗಳಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಹಿತ್ಯ, ಸಂಸ್ಕೃತಿ, ಪರಂಪರೆ ಹಾಗೂ ಪಠ್ಯಗಳ ವಿಶ್ಲೇಷಣೆ ಮತ್ತು ಮೌಲ್ಯಮಾಪನದ ಹಲವು ವಿಧಾನಗಳು ರೂಪುಗೊಂಡವು. ಇವು ಸಾಹಿತ್ಯ ಚರಿತ್ರೆ, ಕಾವ್ಯ ಮೀಮಾಂಸೆ, ಪ್ರಧಾನಧಾರೆ ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆಗಳಂಥ ಜನಪ್ರಿಯ ಹಾಗೂ ಪ್ರತಿಷ್ಠಿತ ವಿಧಾನಗಳಿಗಿಂತ ತಾತ್ವಿಕವಾಗಿ ಸಂಪೂರ್ಣ ಭಿನ್ನವಾಗಿವೆ. ಮುಖ್ಯವಾಗಿ ಜನಪ್ರಿಯ ಮತ್ತು ಪ್ರತಿಷ್ಠಿತ ವಿಧಾನಗಳು, ಸಮಗ್ರ ಕನ್ನಡ ಸಾಹಿತ್ಯ ಪರಂಪರೆಯನ್ನು ಬಹುಸ್ತರಗಳಲ್ಲಿ ಮತ್ತು ಬಹುರೂಪಿ ಆಯಾಮಗಳಲ್ಲಿ ಅನುಸಂಧಾನ ಮಾಡುವ ಸಾಮರ್ಥ್ಯವುಳ್ಳ ಪರಿಕಲ್ಪನೆಗಳ ಮೂಲಕ ರೂಪುಗೊಂಡಿರಲಿಲ್ಲ. ಹೀಗಾಗಿಯೇ, ಇವು ಕನ್ನಡ ಸಾಹಿತ್ಯವನ್ನು ಕೇವಲ ಅದರ ಬಿಡಿರೂಪಗಳಲ್ಲಿ ಅಥವಾ ಆಂಶಿಕ ನೆಲೆಗಳ ಹಾಗೂ ಪ್ರಧಾನವಾಗಿ ಬಾಹ್ಯ ಚಹರೆಗಳ ಮೂಲಕ ಗ್ರಹಿಸುವ ಪ್ರಯತ್ನ ಮಾಡಿವೆ.

ಈ ಹಿನ್ನೆಲೆಯಲ್ಲಿ ಗಮನಿಸಿ ನೋಡುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳ ಮೂಲಕ ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಪಠ್ಯಗಳನ್ನು ಸಮಗ್ರವಾಗಿ ಹಾಗೂ ಬಹಳ ಮುಖ್ಯವಾಗಿ ಅವುಗಳ ಒಳಚಹರೆಗಳ ಸಹಿತ ವಿಶ್ಲೇಷಿಸುವ ಅರ್ಥಪೂರ್ಣ ವಿಧಾನಗಳನ್ನು ಪ್ರಥಮ ಬಾರಿಗೆ ರೂಪಿಸಿತು. ಇವು ಹಲವು ಬಗೆಯ ಸಾಮಾಜಿಕ ಪ್ರಶ್ನೆಗಳು ಮತ್ತು ಸಾಮಾಜಿಕ ಸಂವೇದನೆಗಳ ಮೂಲಕ, ಸಮಗ್ರ ಕನ್ನಡ ಸಾಹಿತ್ಯ ಪರಂಪರೆಯನ್ನು ಅದರ ಆರಂಭಿಕ ಘಟ್ಟದಿಂದ ಇಂದಿನವರೆಗೆ ಬಹುಸ್ತರಗಳಲ್ಲಿ ಮತ್ತು ಬಹುರೂಪಿ ಆಯಾಮಗಳಲ್ಲಿ ಅರ್ಥಪೂರ್ಣವಾಗಿ ವಿಶ್ಲೇಷಿಸಿವೆ ಹಾಗೂ ಮೌಲ್ಯಮಾಪನ ಮಾಡಿವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನ ವಿದ್ಯಮಾನವು, ಕಳೆದ ಶತಮಾನದ ಎಪ್ಪತ್ತರ ದಶಕದಿಂದ ಇಂದಿನವರೆಗೆ ಅತ್ಯಂತ ಆಸಕ್ತಿದಾಯಕವಾದ ಹಲವು ರೂಪ ಹಾಗೂ ಸ್ತರಗಳಲ್ಲಿ ಪ್ರಕಟವಾಗಿದೆ. ಕನ್ನಡದ ಕವಿಗಳು, ಕಾವ್ಯಗಳು, ಪಠ್ಯಗಳು ಮತ್ತು ಲೇಖಕರನ್ನು ಬಹುರೂಪಿ ಆಯಾಮಗಳಲ್ಲಿ ವಿಶ್ಲೇಷಣೆಗಳಿಗೆ, ವಾಗ್ವಾದಗಳಿಗೆ ಹಾಗೂ ವ್ಯಾಖ್ಯಾನಗಳಿಗೆ ಒಳಪಡಿಸಲಾಗಿದೆ. ಇದರಿಂದ, ಕನ್ನಡ ಸಾಹಿತ್ಯ ಚಿಂತನೆ ಮತ್ತು ವಿಮರ್ಶಾ ಪರಿಸರದಲ್ಲಿ ಅತ್ಯಂತ ಮಹತ್ವಪೂರ್ಣ ಹಾಗೂ ಮೌಲಿಕವೆಂದು ಭಾವಿಸಿಕೊಳ್ಳಲಾಗಿದ್ದ ಅನೇಕ ವಿಚಾರಗಳು ಮರುಪರಿಶೀಲನೆಗೆ ಒಳಗಾದವು. ಹಾಗೆಯೇ, ಅತಿ ಬಾಲಿಶ ಹಾಗೂ ಅಪ್ರಬುದ್ಧವೆಂದು ತಿರಸ್ಕೃತವಾಗಿದ್ದ ಹಲವು ಸಂಗತಿಗಳು ಆಧುನಿಕ ಮಾನವಮತಿಗೂ ನಿಲುಕದ ಬಹುನಿಗೂಢ ಮತ್ತು ವಿಸ್ಮಯಗಳೆಂಬ ಪ್ರಶಂಸೆಗೆ ಪಾತ್ರವಾದವು. ಇದರಿಂದ, ಸಾಮಾಜಿಕಾನುಸಂಧಾನವು

ಸಹಜವಾಗಿಯೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಮಾಜಿಕ, ಸಾಹಿತ್ಯಕ, ರಾಜಕೀಯ ಮತ್ತು ಭಾಷಿಕ, ಹೀಗೆ ಹಲವು ಬಗೆಯ ವಾಗ್ವಾದಗಳನ್ನು ಹುಟ್ಟುಹಾಕಿತು. ಇದು ಕೇವಲ ಸಾಹಿತ್ಯ, ಪರಂಪರೆ, ಪಠ್ಯ ಮತ್ತು ಲೇಖಕರನ್ನು ನೋಡುವ, ಅರಿಯುವ ಹಾಗೂ ಬೆಲೆಕಟ್ಟುವ ಕ್ರಮಗಳಲ್ಲಿ ಮಾತ್ರವೇ ಅಲ್ಲದೆ, ವಿಮರ್ಶಕರ ದೃಷ್ಟಿಕೋನ ಮತ್ತು ನಿಲುವುಗಳ ನಡುವೆ ಕೂಡಾ ಪರಸ್ಪರ ತೀವ್ರವಾದ ತಾತ್ವಿಕ ಭಿನ್ನಮತಗಳನ್ನು ಹೆಚ್ಚಿಸಿತು. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹಲವು ಬಗೆಯ ತಾತ್ವಿಕ ವೈರುಧ್ಯಗಳು ಹಾಗೂ ಸಂಘರ್ಷದ ನೆಲೆಗಳು ರೂಪುಗೊಂಡವು.

ಸಾಮಾಜಿಕಾನುಸಂಧಾನದ ಆಶಯಗಳೊಳಗೆ ತಲೆದೋರಿದ ಇಂತಹ ಆಂತರಿಕ ವೈರುಧ್ಯಗಳ ಮತ್ತು ಸಂಘರ್ಷಗಳ ಕಾರಣದಿಂದ, ಸಮಾಜ ಹಾಗೂ ಸಂಸ್ಕೃತಿಯ ನಿರ್ದಿಷ್ಟ ಘಟಕಗಳ ಒಳಗೆ ಸಹ ತಾತ್ವಿಕ ಸಂಘರ್ಷಗಳು ತೀವ್ರಗೊಂಡವು. ಸಾಮಾಜಿಕ ಮತ್ತು ಸಾಂಸ್ಕೃತಿಕ ನ್ಯಾಯಗಳ ಸಮಾನ ಪಾಲುದಾರಿಕೆಯ ಅಥವಾ ಹಕ್ಕುದಾರಿಕೆಯ ಪ್ರಶ್ನೆಗಳಾಗಿರುವ ಈ ಒಳವಿರೋಧಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳನ್ನು ಇನ್ನಷ್ಟು ಸಮಸ್ಯಾತ್ಮಕಗೊಳಿಸಿವೆ ಹಾಗೂ ಸಂಕೀರ್ಣಗೊಳಿಸಿವೆ. ಹಾಗೆ ನೋಡಿದರೆ, ವಾಸ್ತವಿಕವಾಗಿ ಇದು ಸಾಹಿತ್ಯ ವಿಮರ್ಶೆಯು ಹುಟ್ಟುಹಾಕಿರುವ ಸಮಸ್ಯೆ ಅಲ್ಲ; ಬದಲಾಗಿ, ಸಾಹಿತ್ಯ ವಿಮರ್ಶೆಯ ಮೂಲಕ ಸಾಮಾಜಿಕ ನ್ಯಾಯಸಾಧನೆಯನ್ನು ಸಾಕಾರಗೊಳಿಸಲು ಮಾಡುತ್ತಿರುವ ಸಾಂಸ್ಕೃತಿಕ ರಾಜಕಾರಣದ ಒಂದು ಮುಖ್ಯವಾದ ಮಾದರಿಯಾಗಿದೆ. ಹಕ್ಕುಳ್ಳವರೆಲ್ಲರಿಗೂ ಯುಕ್ತ ಪ್ರಮಾಣದ ನ್ಯಾಯ ನೀಡಿಕೆಯೊಂದೇ ಮಾನವತಾವಾದವನ್ನು ಸಾಕಾರಗೊಳಿಸಲು ಇರುವ ಪ್ರಜಾಪ್ರಭುತ್ವವಾದಿ ಕ್ರಮ ಎನ್ನುವ ನಂಬಿಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಈ ಹೊಸ ಪ್ರವೃತ್ತಿಗಳ ಹಿನ್ನೆಲೆಯಲ್ಲಿರುವ ಬಹುಮುಖ್ಯವಾದ ಚಿಂತನೆಯಾಗಿದೆ.

ಈ ಒಟ್ಟಾರೆ ವಿದ್ಯಮಾನವನ್ನು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರುತಿಸಬಹುದು. ಅವುಗಳೆಂದರೆ, ಸಾಮಾಜಿಕಾನುಸಂಧಾನದ ಪ್ರಧಾನ ಪರಿಕಲ್ಪನೆಗಳಾದ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳಲ್ಲಿ ಹಲವು ಒಳಪ್ರಭೇಧಗಳು ಹಾಗೂ ಆಂತರಿಕ ಸಂಘರ್ಷಗಳು ಹುಟ್ಟಿಕೊಳ್ಳುವ ಮೂಲಕ ಸಮಾಜ, ಸಂಸ್ಕೃತಿ ಮತ್ತು ಪರಂಪರೆಗಳನ್ನು ತೀವ್ರವಾದ ಪ್ರಶ್ನೆಗೊಳಪಡಿಸಲಾರಂಭಿಸಿದ್ದು ಇಂತಹ ಒಂದು ನೆಲೆ. ಹಾಗೆಯೇ, ಈ ಇಡೀ ವಿದ್ಯಮಾನಕ್ಕೆ ಹೊಸ ಬಗೆಯ ಅತ್ಯಂತ ಗಂಭೀರವಾದ ಸವಾಲು ಹಾಗೂ ಆತಂಕಗಳು ತೀವ್ರವಾಗಿ ಎದುರಾಗಿದ್ದು ಇಂತಹ ನೆಲೆ. ಈ ಎರಡನೆಯ ನೆಲೆಯಲ್ಲಿ, ನವವಸಾಹತುಶಾಹಿಯ ರಾಜಕೀಯಾರ್ಥಿಕ ಪರಿಭಾಷೆಯಾಗಿರುವ ಜಾಗತೀಕರಣ ಮತ್ತು ಅದರ ವಿವಿಧ ಕಾರ್ಯತಂತ್ರಗಳು ಹಾಗೂ ಕಾರ್ಯಾಚರಣಾ ರೂಪಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಈ ಒಟ್ಟು ವಿದ್ಯಮಾನವನ್ನೇ ಸಂಪೂರ್ಣ ಅಪ್ರಸ್ತುತಗೊಳಿಸುವ ಅಥವಾ ನಿರರ್ಥಕಗೊಳಿಸುವ ಆತಂಕಮಯ ಸನ್ನಿವೇಶವನ್ನು ಸೃಷ್ಟಿಸಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲಾ ಆಂತರಿಕ ಸಂಘರ್ಷಗಳು ಪರಿಹಾರಗೊಳ್ಳುತ್ತವೆಯೋ, ಇನ್ನಷ್ಟು

ಉಲ್ಬಣಗೊಳ್ಳುತ್ತವೆಯೋ, ಅಥವಾ ನಿರ್ನಾಮಗೊಳ್ಳುತ್ತವೆಯೋ ಇಲ್ಲವೇ ಅರ್ಥಹೀನಗೊಳ್ಳುತ್ತವೆಯೋ ಎನ್ನುವುದನ್ನು ಕುರಿತು ಸದ್ಯದ ಮಟ್ಟಿಗೆ ಏನನ್ನೂ ಸ್ಪಷ್ಟವಾಗಿ ಹೇಳಲು ಸಾಧ್ಯವಾಗದಿರುವಂಥ ಬಿಕ್ಕಟ್ಟಿನ ಸನ್ನಿವೇಶ ಸೃಷ್ಟಿಯಾಗಿದೆ.

ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಪ್ರಶ್ನೆಗಳು ತಮ್ಮ ಈಗಿನ ಸ್ಥಳೀಯ ನಿರ್ದಿಷ್ಟ ಪ್ರಶ್ನೆಗಳ ಆಯಾಮವನ್ನು ಕಳೆದುಕೊಂಡು ವಿಶ್ವಾತ್ಮಕವಾದ ವಿರಾಟ್ ಪ್ರಶ್ನೆಗಳ ಆಯಾಮವನ್ನು ಅನಿವಾರ್ಯವಾಗಿ ಆವಾಹಿಸಿಕೊಳ್ಳಬೇಕಾದ ಒತ್ತಡಕ್ಕೆ ಒಳಗಾಗಿವೆ. ಕೋಮುವಾದ, ಮತೀಯವಾದ, ಮೂಲಭೂತವಾದ, ಹಿಂಸಾವಾದ ಮೊದಲಾದವು ಇಂತಹ ವಿಶ್ವಾತ್ಮಕವಾದ ವಿರಾಟ್ ಪ್ರಶ್ನೆಗಳ ಪ್ರಬಲ ಪ್ರೇರಣೆಗಳಿಂದ ರೂಪುಗೊಳ್ಳುತ್ತಿರುವ ಆಧುನಿಕ ಆತಂಕಗಳಾಗಿವೆ. ಇವುಗಳನ್ನು ಮುಖಾಮುಖಿ ಮಾಡಬೇಕಾಗಿರುವ ಅನಿವಾರ್ಯ ಒತ್ತಡದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಪ್ರಶ್ನೆಗಳು ಹೊಸ ಸ್ವರೂಪದ ಸಾಹಿತ್ಯಕ ಪ್ರಶ್ನೆಗಳಾಗಿ ರೂಪಾಂತರಗೊಳ್ಳುತ್ತಿವೆ. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳೇ ಅದರ ಇಂದಿನ ಸಾಹಿತ್ಯಕ ಆಯಾಮಗಳಾಗಿ ಪಲ್ಲಟಗೊಂಡಿವೆ.

ಈ ಚಾರಿತ್ರಿಕ ಹಿನ್ನೆಲೆಯ ಮೂಲಕ ನೋಡುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಪ್ರಧಾನವಾಗಿ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳ ಮೂಲಕ ಸಾಹಿತ್ಯದ ಸಾಮಾಜಿಕಾನುಸಂಧಾನವನ್ನು ಮಾಡಿರುವುದಾಗಿ ಕಂಡುಬರುತ್ತದೆ. ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಪಠ್ಯಗಳನ್ನು ಪರಿಭಾವಿಸುವ ದೃಷ್ಟಿಕೋನ ಹಾಗೂ ಗ್ರಹಿಕೆಯ ಸ್ವರೂಪಕ್ಕೆ ಅನುಸಾರವಾಗಿ ಈ ಅನುಸಂದಾನದಲ್ಲಿ ಪ್ರಮುಖವಾದ ಮೂರು ವಿಧಾನಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ, ಅ. ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ ಆ. ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನ ಮತ್ತು ಇ. ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳ ಸ್ವರೂಪವನ್ನು ವಿವರಿಸಿಕೊಳ್ಳುವುದಕ್ಕೆ ಪೂರ್ವಾಗತ್ಯವಾಗಿ, ಈ ವಿಧಾನಗಳ ಸ್ಥೂಲಚಹರೆಗಳನ್ನು ಕುರಿತು ವಿವೇಚಿಸುವುದು ಅತ್ಯಂತ ಉಪಯುಕ್ತವಾದುದು. ಈ ಹಿನ್ನೆಲೆಯಲ್ಲಿ, ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗಿದೆ.

೫.೪.೧ ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ

ಪ್ರಧಾನ ಸಾಮಾಜಿಕ ಪರಿಕಲ್ಪನೆಗಳಾದ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳ ಪ್ರಶ್ನೆಗಳು ಕನ್ನಡ ಸಾಹಿತ್ಯ ಪರಂಪರೆ ಹಾಗೂ ಪಠ್ಯಗಳಲ್ಲಿ ನಿರೂಪಿತವಾಗಿರುವ ಕ್ರಮ ಕುರಿತ ಶೋಧನೆಯು ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನವಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯ ರಚನೆಯ ಮೂಲಭೂತ ಘಟಕಗಳು ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಸಂರಚನಾ ಶಕ್ತಿಗಳೂ ಆಗಿರುವ ಈ ಪರಿಕಲ್ಪನೆಗಳು ಕನ್ನಡ ಸಾಹಿತ್ಯದಲ್ಲಿ ಎಲ್ಲಿ, ಹೇಗೆ ಮತ್ತು ಯಾವ ಉದ್ದೇಶದಿಂದ ಪ್ರತಿಪಾದಿತವಾಗಿವೆ ಅಥವಾ

ನಿರೂಪಿತವಾಗಿವೆ ಎನ್ನುವುದನ್ನು ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಅತ್ಯಂತ ವ್ಯಾಪಕವಾದ ಚರ್ಚೆ ನಡೆದಿವೆ.

ಪ್ರಧಾನಧಾರೆ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಇದನ್ನು ಸಾಮಾನ್ಯವಾಗಿ 'ಸಾಹಿತ್ಯೇತರ' ವಿಶ್ಲೇಷಣಾ ವಿಧಾನ ಎಂದು ಗುರುತಿಸಲಾಗಿದೆ ಮತ್ತು ಇದಕ್ಕೆ ಹೆಚ್ಚಿನ ಮಹತ್ವ ನೀಡಿರುವುದಿಲ್ಲ. ಆದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ಕ್ರಮವನ್ನು 'ಸಾಮಾಜಿಕಾನುಸಂಧಾನ'ದ ಒಂದು ಮುಖ್ಯ ವಿಧಾನವೆಂದೇ ಭಾವಿಸಲಾಗಿದೆ. ಸಾಮಾಜಿಕ ಪರಿಕಲ್ಪನೆಗಳು ಸಾಹಿತ್ಯ ಮತ್ತು ಪಠ್ಯದಲ್ಲಿ ಪ್ರತಿಪಾದಿತವಾಗಿರುವ ಅಥವಾ ನಿರೂಪಿತವಾಗಿರುವ ಸ್ವರೂಪವನ್ನು, ಯಾವ ಉದ್ದೇಶದಿಂದ ಹಾಗೂ ದೃಷ್ಟಿಕೋನದಿಂದ ಪರಿಭಾವಿಸಲಾಗುತ್ತದೆ ಎನ್ನುವುದರ ಆಧಾರದ ಮೇಲೆ ಈ ವಿಧಾನದ ಮಹತ್ವ ನಿರ್ಧಾರಗೊಳ್ಳುತ್ತದೆ. ಕೇವಲ ಮಾಹಿತಿ ಅಥವಾ ವಿವರಣಾತ್ಮಕ ಉದ್ದೇಶದಿಂದ ಸಾಹಿತ್ಯಾನುಶೀಲನೆಗೆ ತೊಡಗಿದಾಗ ಅತ್ಯಂತ ನಿರುಪಯುಕ್ತವಾಗುವ ಈ ವಿಧಾನವು ಸಾಮಾಜಿಕ, ರಾಜಕೀಯ, ಹಾಗೂ ಸಾಂಸ್ಕೃತಿಕ ರಾಜಕಾರಣದ ಉದ್ದೇಶಗಳಿಂದ ಕ್ರಿಯಾತ್ಮಕವಾದಾಗ ಅತ್ಯಂತ ಶ್ರೇಷ್ಠ ಮಟ್ಟದ ಸಾಂಸ್ಕೃತಿಕ ವಿಮರ್ಶಾ ವಿಧಾನವಾಗಿ ಹೊರಹೊಮ್ಮುತ್ತದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ಎರಡೂ ರೂಪಗಳಿಗೆ ಸಂಬಂಧಿಸಿದಂತೆ ಹೇರಳವಾದ ನಿದರ್ಶನಗಳನ್ನು ಕಾಣಬಹುದು.

೫.೪.೨ ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನ

ಪ್ರಧಾನ ಸಾಮಾಜಿಕ ಪರಿಕಲ್ಪನೆಗಳಾದ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳ ಪ್ರಶ್ನೆಗಳು ಕನ್ನಡ ಸಾಹಿತ್ಯ ಪರಂಪರೆ ಹಾಗೂ ಪಠ್ಯಗಳಲ್ಲಿ ಪ್ರತಿಪಾದಿಸಿರುವ ವಿವಿಧ ಬಗೆಯ 'ಸ್ವಭಾವ'ಗಳ, 'ಪ್ರವೃತ್ತಿ'ಗಳ ಮತ್ತು 'ಹಿತಾಸಕ್ತಿ'ಗಳ ಸ್ವರೂಪಕ್ಕೂ ಹಾಗೂ ಅವು ಹುಟ್ಟುಹಾಕುತ್ತಿರುವ ಬಹುರೂಪಿ ರಾಜಕಾರಣಗಳಿಗೂ ಇರುವ ಸಂಬಂಧದ ಸ್ವರೂಪ ಕುರಿತ ಚಿಂತನೆಯು ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನವಾಗಿದೆ. ಈ ಪರಿಕಲ್ಪನೆಗಳು ಕನ್ನಡ ಸಾಹಿತ್ಯದಲ್ಲಿ ಯಾವ ಬಗೆಯ ಮೌಲ್ಯವ್ಯವಸ್ಥೆಗಳನ್ನು ಪ್ರತಿಪಾದಿಸಿವೆ, ಇದರ ಹಿಂದಿರುವ ಉದ್ದೇಶ ಮತ್ತು ಕಾರಣಗಳೇನು, ಇವುಗಳನ್ನು ನಿರ್ದೇಶಿಸುತ್ತಿರುವ ಶಕ್ತಿಗಳು ಯಾವುವು ಎನ್ನುವುದನ್ನು ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮಹತ್ವಪೂರ್ಣವಾದ ಚರ್ಚೆಗಳು ನಡೆದಿವೆ.

ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನದಂತೆಯೇ ಈ ವಿಧಾನವನ್ನೂ ಸಹ, ಸಾಮಾನ್ಯವಾಗಿ ಪ್ರಧಾನಧಾರೆ ಸಾಹಿತ್ಯ ವಿಮರ್ಶೆ 'ಸಾಹಿತ್ಯೇತರ' ವಿಶ್ಲೇಷಣಾ ವಿಧಾನದ ಒಂದು 'ಅನ್ಯಶಿಸ್ತು' ಮಾದರಿಯಾಗಿ ಮಾತ್ರವೇ ಗುರುತಿಸಿದೆ. ಏಕೆಂದರೆ, ಇದೊಂದು ನಿರ್ದಿಷ್ಟ ಕಾರ್ಯಮಾದರಿಗಳಿಂದ ಕೂಡಿರುವ ಪರಿಮಿತಾವಕಾಶದ ವಿಶ್ಲೇಷಣಾರೂಪ ಎನ್ನುವುದು ಪ್ರಧಾನಧಾರೆ ಸಾಹಿತ್ಯ ವಿಮರ್ಶೆಯ ಈ ನಿಲುವಿನ ಹಿಂದಿರುವ ಮುಖ್ಯವಾದ ಕಾರಣವಾಗಿದೆ. ಆದರೆ, ಇದಕ್ಕೆ ವಿರುದ್ಧವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಈ

ವಿಧಾನವನ್ನು ಸಾಮಾಜಿಕಾನುಸಂಧಾನದ ಬಹುಮುಖ್ಯ ಚಹರೆಯಾಗಿರುವ ಸಂಘರ್ಷಾತ್ಮಕತೆಯನ್ನು ಒಳಗೊಂಡಿರುವಂತಹ ಒಂದು ಅರ್ಥಪೂರ್ಣ ವಿಧಾನವೆಂದು ಭಾವಿಸುತ್ತದೆ.

ಪ್ರಧಾನ ಸಾಮಾಜಿಕ ಪರಿಕಲ್ಪನೆಗಳು ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ, ಸಾಮಾನ್ಯವಾಗಿ ಪ್ರತಿಷ್ಠಿತ ಸಂಸ್ಕೃತಿಗಳ ಮೌಲ್ಯವ್ಯವಸ್ಥೆಗಳನ್ನು ಪ್ರತಿಪಾದಿಸುವ, ಸಮರ್ಥಿಸುವ ಮತ್ತು ಸಂರಕ್ಷಿಸುವ ಪ್ರಬಲವಾದ ಸಾಧನಗಳಾಗಿಯೂ, ಅದೇ ಸಮಯದಲ್ಲಿ 'ಅಪ್ರತಿಷ್ಠಿತ' ಸಂಸ್ಕೃತಿಗಳ ಮೌಲ್ಯವ್ಯವಸ್ಥೆಗಳನ್ನು ನಿರಾಕರಿಸುವ, ವಿರೋಧಿಸುವ ಹಾಗೂ ದಮನಿಸುವ ಹತ್ಯಾರಗಳಾಗಿಯೂ ಕ್ರಿಯಾತ್ಮಕವಾಗಿವೆ. ಚಾರಿತ್ರಿಕವಾಗಿ ಪ್ರತಿಷ್ಠಿತ ಸಂಸ್ಕೃತಿಗಳು ಹೊಂದಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಅಧಿಕಾರದ ಬಲದ ಕಾರಣದಿಂದ, ಅವು ಪ್ರತಿಪಾದಿಸಿದ ಮೌಲ್ಯಗಳನ್ನೇ ಸಾಮಾನ್ಯವಾಗಿ ಸಾಹಿತ್ಯದ ಸಂದರ್ಭದಲ್ಲಿ ಶ್ರೇಷ್ಠ ಸಾಂಸ್ಕೃತಿಕ ಮೌಲ್ಯಗಳೆಂದು ಪರಿಗಣಿತವಾಗಿರುತ್ತವೆ. ಹೀಗಾಗಿ, ಸಹಜವಾಗಿಯೇ ಇವು ಸಾಹಿತ್ಯದಲ್ಲಿ ಕೇಂದ್ರಸ್ಥಾನ ಪಡೆದುಕೊಳ್ಳುತ್ತವೆ. ಹಾಗೆಯೇ ಇಂತಹ ಅಧಿಕಾರದ ನಿರ್ಬಲತೆಯ ಕಾರಣದಿಂದ, ಪ್ರತಿಷ್ಠಿತವಲ್ಲದ ಬಹುಸಂಖ್ಯಾತ ಸಂಸ್ಕೃತಿಗಳ ಮೌಲ್ಯಗಳು, ವಾಸ್ತವಿಕವಾಗಿ, ಅವು ಎಷ್ಟೇ ಜನಪರ ಹಾಗೂ ಜೀವಪರವಾಗಿದ್ದರೂ ಸಹ, ಸಾಹಿತ್ಯದ ಸಂದರ್ಭದಲ್ಲಿ ಶ್ರೇಷ್ಠ ಸಾಂಸ್ಕೃತಿಕ ಮೌಲ್ಯಗಳೆಂದು ಮಾನ್ಯವಾಗಿರುವುದಿಲ್ಲ. ಆದ್ದರಿಂದಲೇ, ಇವು ಸಾಹಿತ್ಯದಲ್ಲಿ ಅಂಚಿನ ಸ್ಥಾನದಲ್ಲಿ ಉಳಿಯುತ್ತವೆ. ಆದರೆ, ಮಾನವ ಸಮಾಜ ಮತ್ತು ಸಂಸ್ಕೃತಿಗಳು ಮೂಲತಃ ಚಲನಶೀಲವೂ ಹಾಗೂ ಕ್ರಿಯಾಶೀಲವೂ ಆದವುಗಳಾಗಿವೆ. ಹೀಗಾಗಿಯೇ, ಅವುಗಳಲ್ಲಿ ಸಂಘರ್ಷಾತ್ಮಕತೆಯ ಚಹರೆಗಳು ರೂಪುಗೊಳ್ಳುತ್ತವೆ. ಇದು ಹಲವು ಸ್ತರಗಳಲ್ಲಿ ಹಾಗು ವಿನ್ಯಾಸಗಳಲ್ಲಿ ಕ್ರಿಯಾತ್ಮಕವಾಗುತ್ತದೆ. ಕ್ರಮೇಣ ಈ ಪ್ರಕ್ರಿಯೆಯು ವ್ಯಾಪಕತೆ ಹಾಗೂ ತೀವ್ರತೆಯನ್ನು ಪಡೆದುಕೊಳ್ಳುತ್ತದೆ. ಅಂತಿಮವಾಗಿ, ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘರ್ಷದ ಬಹುರೂಪಿ ಮಾದರಿಗಳಲ್ಲಿ ಸ್ಫೋಟಗೊಳ್ಳುತ್ತದೆ. ಈ ಒಟ್ಟು ವಿದ್ಯಮಾನವು ಸಾಂಸ್ಕೃತಿಕ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮಗಳಲ್ಲಿ ಒಂದಾಗಿರುವ 'ಸಾಹಿತ್ಯ'ದಲ್ಲೂ ಸಹ ಪ್ರತಿಫಲನಗೊಳ್ಳುತ್ತದೆ. ಇದಕ್ಕೆ, ಕನ್ನಡ ಸಾಹಿತ್ಯ ಪರಂಪರೆ ಸಹ ಪ್ರಮುಖವಾದ ಸಾಕ್ಷಿಯಾಗಿದೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನದ ನಿಲುವಾಗಿದೆ.

೫.೪.೩ ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನ

ಸಾಮಾಜಿಕ ಪರಿಕಲ್ಪನೆಗಳು ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳಲ್ಲಿ ಪ್ರತಿಪಾದಿಸುತ್ತಿರುವ ಸಾಂಸ್ಕೃತಿಕ ರಾಜಕಾರಣದ ಬಹುರೂಪಿ ಮಾದರಿಗಳ ಸಂಕೀರ್ಣ ಸ್ವರೂಪ ಕುರಿತ ತಾತ್ವಿಕ ವಿವೇಚನೆಯು ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನವಾಗಿದೆ. ಇದು, ಸಾಹಿತ್ಯದ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಸಮಾಜ ಹಾಗೂ ಸಂಸ್ಕೃತಿಗಳ ಸ್ವರೂಪವನ್ನು ಕುರಿತು ಪ್ರಚಲಿತದಲ್ಲಿರುವ ಜನಪ್ರಿಯ ಹಾಗೂ ರೂಢಿಗತವಾದ ಸರಳೀಕೃತ ಗ್ರಹಿಕೆಗಳನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ. ಇದಕ್ಕೆ ಬದಲಾಗಿ, ಅವುಗಳಲ್ಲಿ

ಅಂತರ್ನಿಹಿತವಾಗಿರುವ ದ್ವಂದ್ವಾತ್ಮಕ ಮತ್ತು ಸಂಘರ್ಷಾತ್ಮಕ ಚಹರೆಗಳ ಮೂಲಕ ಅರ್ಥೈಸುತ್ತದೆ. ಹೀಗಾಗಿಯೇ, ಈ ವಿಧಾನವು ಸಮಾಜ ಮತ್ತು ಸಂಸ್ಕೃತಿಗಳನ್ನು ಪ್ರಸಿದ್ಧವಾದ 'ಬೈನರಿ' ಪರಿಕಲ್ಪನೆಗಳಿಗೆ ವಿರುದ್ಧವಾದ ಬಹುನೆಲೆಯ ಹಾಗೂ ಬಹುಸ್ತರೀಯ ಅವಸ್ಥೆಗಳಲ್ಲಿ ವಿವರಿಸುತ್ತದೆ.

ಈ ವಿಧಾನವು ಕೇವಲ ಸಮಾಜ ಮತ್ತು ಸಂಸ್ಕೃತಿಗಳ ವಿಶಿಷ್ಟ ಸ್ವರೂಪ ಕುರಿತು ಮಾತ್ರವಲ್ಲದೆ, ಅವುಗಳ ನಿರಂತರವಾದ ಆಂತರಿಕ ಸಂಘರ್ಷ ಹಾಗೂ ಒಳವಿಪ್ಲವಗಳನ್ನು ಕುರಿತು ನೀಡುವ ಒಳನೋಟಗಳು ಸಾಹಿತ್ಯದ ಸಾಮಾಜಿಕಾನುಸಂಧಾನಕ್ಕೆ ಅಪೂರ್ವವಾದ ಘನತೆ ತಂದುಕೊಟ್ಟಿವೆ. ಯಾವುದೇ ಕಾಲ, ದೇಶ ಮತ್ತು ಭಾಷಿಕ ಪರಿಸರದ ಸಮಾಜ ಹಾಗೂ ಸಂಸ್ಕೃತಿಗಳು ಅವು ಎಷ್ಟೇ ಪ್ರಬಲವಾದ ಶ್ರೇಣೀಕರಣ ಮತ್ತು ತಾರತಮ್ಯ ವ್ಯವಸ್ಥೆಗಳನ್ನು ಒಳಗೊಂಡಿದ್ದರೂ ಸಹ, ತಾನು ದುರ್ಬಲ ಅಥವಾ ಅಶಕ್ತವೆಂದು ಭಾವಿಸುವ ವ್ಯವಸ್ಥೆಗಳು ಅಥವಾ ರಚನೆಗಳಿಂದ ತೀವ್ರವಾದ ವಿರೋಧ ಹಾಗೂ ಬಂಡಾಯವನ್ನು ಎದುರಿಸಬೇಕಾದ ಆತಂಕದಿಂದ ಕೂಡಿಯೇ ಇರುತ್ತವೆ. ಅಲ್ಲದೆ, ಈ ಆತಂಕವು ಯಾವುದೋ ಒಂದು ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ಬಾಹ್ಯ ಅಥವಾ ಪರಕೀಯ ರಾಜಕೀಯ ದಾಳಿಯ ಮೂಲಕ ಎದುರಾಗುವ ಮೂರ್ತರೂಪದ ಆಕ್ರಮಣಕ್ಕಿಂತ ಅತ್ಯಂತ ಪ್ರಬಲವೂ ಮತ್ತು ತೀವ್ರವೂ ಆಗಿರುತ್ತದೆ ಎನ್ನುವುದು ಈ ವಿಧಾನದ ಬಹುಮುಖ್ಯ ಗ್ರಹಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ, ಸಮಾಜ ಮತ್ತು ಸಂಸ್ಕೃತಿಗಳ ಸಂಘರ್ಷದ ಸ್ವರೂಪ ಕುರಿತು ಈ ವಿಧಾನ ಅರ್ಥಪೂರ್ಣವಾದ ಒಳನೋಟಗಳನ್ನುಳ್ಳ ವಿಶಿಷ್ಟವಾದ ಪ್ರಮೇಯವನ್ನು ಮಂಡಿಸುತ್ತದೆ. ತಮ್ಮ ವಿರುದ್ಧ ಹೂಡಲಾಗುವ ನೇರ ಬಂಡಾಯಗಳನ್ನು ಯಾಜಮಾನ್ಯ ಸಂಸ್ಕೃತಿಗಳು ಮತ್ತು ವ್ಯವಸ್ಥೆಗಳು ಅತ್ಯಂತ ಯಶಸ್ವಿಯಾಗಿ ಹತ್ತಿಕ್ಕುವ ಸಾಧ್ಯತೆ ಇರುವುದರಿಂದಲೇ, ಯಾವಾಗಲೂ ದಮನಿತ ಸಂಸ್ಕೃತಿಗಳು ಮತ್ತು ವ್ಯವಸ್ಥೆಗಳು ಅವುಗಳ ವಿರುದ್ಧ ಇಂಥ ಮಾರುವೇಷದ ಗುಪ್ತಸಂಘರ್ಷದಲ್ಲಿ ಕ್ರಿಯಾತ್ಮಕವಾಗಿರುತ್ತವೆ. ಇದು ಸಾಂಸ್ಕೃತಿಕ ಸಂಘರ್ಷ ಅಥವಾ ಸಂಸ್ಕೃತಿಗಳ ಮುಖಾಮುಖಿಯ ನಿಜವಾದ ಸ್ವರೂಪ. ಈ ಸಂಘರ್ಷವು ಸಾಹಿತ್ಯದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಭಾಷಿಕ, ಹೀಗೆ ಬಹುರೂಪಿ ನೆಲೆಗಳಲ್ಲಿ ಪ್ರಕಟಗೊಳ್ಳುತ್ತದೆ. ಇದು, ಎಲ್ಲಾ ಕಾಲ ಮತ್ತು ದೇಶದ ಸಾಹಿತ್ಯದಲ್ಲೂ ವಿವಿಧ ಆಕಾರ ಹಾಗೂ ವಿನ್ಯಾಸಗಳಲ್ಲಿ ಮೈದಳೆದಿರುತ್ತದೆ. ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪಠ್ಯಗಳಲ್ಲಿ ಇಂಥ ಬಹುದೊಡ್ಡ ಪರಂಪರೆಯೇ ರೂಪುಗೊಂಡಿದೆ ಎನ್ನುವುದು ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆಯ ವಿಧಾನದ ಬಹುಮುಖ್ಯ ವಿಚಾರವಾಗಿದೆ.

ಈ ವಿಶಿಷ್ಟ ತಾತ್ವಿಕ ಗ್ರಹಿಕೆಯ ಕಾರಣದಿಂದ, ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನವು ಸಾಹಿತ್ಯ ಮತ್ತು ಪಠ್ಯದ ವಿಶ್ಲೇಷಣೆಯಲ್ಲಿ ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ ಮತ್ತು ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನಕ್ಕಿಂತ ಭಿನ್ನವಾದ ಹಾಗೂ ಹೆಚ್ಚು ಅರ್ಥಪೂರ್ಣವಾದ ಕ್ರಮಗಳನ್ನು

ಬಳಸುತ್ತದೆ. ಸಾಹಿತ್ಯ ಜಗತ್ತಿನಲ್ಲಿ ಸಾಮಾಜಿಕ ಪರಿಕಲ್ಪನೆಗಳು ಸಾಂಸ್ಕೃತಿಕ ಮೌಲ್ಯವ್ಯವಸ್ಥೆಯ ಸಾಧನಗಳಾಗಿ ರೂಪಾಂತರಗೊಳ್ಳುತವೆ. ಹೀಗಾಗಿ, ಸಾಹಿತ್ಯ ಮತ್ತು ಪಠ್ಯಗಳಲ್ಲಿ ಹೊಸಹುಟ್ಟು ಪಡೆದುಕೊಳ್ಳುವ ಹಾಗೂ ನಿರ್ದಿಷ್ಟ ಉದ್ದೇಶ ಸಾಧನೆಯ ವಾಹಕಗಳಾಗಿ ರೂಪುಗೊಂಡಿರುವ ಸಾಮಾಜಿಕ ಪರಿಕಲ್ಪನೆಗಳನ್ನು ಒಳನೆಲೆ ಅಥವ ಹೊರನೆಲೆ ಇಲ್ಲವೇ, ಸಾಹಿತ್ಯಕ ಅಥವಾ ಸಾಹಿತ್ಯೇತರ ಎನ್ನುವ ವೈಚಾರಿಕ ಆಕೃತಿಗಳ ಮೂಲಕ ಸಮರ್ಪಕವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಈ ಎಲ್ಲಾ ವಿಕಲ್ಪಗಳ ನಿರ್ದಿಷ್ಟ ತಿಳಿವಳಿಕೆಯನ್ನು ಮೀರಿ ಅರ್ಥಪೂರ್ಣವಾದ 'ಸಂಶ್ಲೇಷಕ' ಅಥವಾ 'ಸಮಾವಿಷ್ಟನೆಲೆ'ಯ ಅನುಸಂಧಾನಕ್ರಮವನ್ನು ನಿರಂತರವಾಗಿ ಶೋಧಿಸಿಕೊಳ್ಳಬೇಕು. ಇದರಿಂದ, ಸಾಹಿತ್ಯ ಮತ್ತು ಪಠ್ಯಗಳ ಸಾಮಾಜಿಕಾನುಸಂಧಾನಕ್ಕೆ ಹೊಸಸಾಧ್ಯತೆ ದೊರೆಯುತ್ತದೆ ಎಂದು ಈ ವಿಧಾನ ಭಾವಿಸುತ್ತದೆ.

ಕಳೆದ ಶತಮಾನದ ಎಂಭತ್ತರ ದಶಕದಿಂದ ವ್ಯಾಪಕವಾಗಿ ಮುನ್ನಲೆಗೆ ಬಂದಿರುವ ಈ ವಿಧಾನವು ಸಾಹಿತ್ಯ ವಿಮರ್ಶೆಗೆ 'ಸೃಜನಶೀಲ' ಆಯಾಮ ಒದಗುವುದಕ್ಕೆ ಬಹುಮುಖ್ಯ ಕಾರಣವಾಗಿದೆ. ಏಕೆಂದರೆ ಇದು, ಸಾಹಿತ್ಯ ಮತ್ತು ಪಠ್ಯದ ಅನುಸಂಧಾನದಲ್ಲಿ ಅತ್ಯಂತ ಒರಿಜಿನಲ್ ಆದ ಹಾಗೂ ಅಷ್ಟೇ ಅರ್ಥಪೂರ್ಣವಾದ ಪರಿಕಲ್ಪನೆಗಳನ್ನು ವಿಮರ್ಶೆಯ ವಿವೇಕ ಮತ್ತು ಸೃಜನಶೀಲ ವಿನ್ಯಾಸದ ಒಪ್ಪಂದದ ಕ್ರಮದಲ್ಲಿ ಬಳಸುತ್ತದೆ. ಹೀಗಾಗಿ ಕನ್ನಡ ಸಾಹಿತ್ಯ ವಿಮರ್ಶೆ ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಪಠ್ಯಗಳ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಬದುಕಿನ ಕುರಿತಾದ ಅರ್ಥಪೂರ್ಣ ವಿಮರ್ಶೆಯಾಗಿ ಸಹ ವಿಕಾಸಗೊಂಡಿದೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳ ಬಹುಮುಖ್ಯ ಸ್ವರೂಪ ಕೂಡಾ ಆಗಿದೆ.

ಸಾಹಿತ್ಯದ ಸಾಮಾಜಿಕಾನುಸಂಧಾನವನ್ನು ಮುಖ್ಯವಾದ ಉದ್ದೇಶವಾಗಿ ಹೊಂದಿರುವ ಕನ್ನಡದ ಅತ್ಯುತ್ತಮವಾದ ಸಾಂಸ್ಕೃತಿಕ ವಿಮರ್ಶೆಯ ಬರಹಗಳ ಹಿನ್ನೆಲೆಯಲ್ಲಿ ಈ ತಾತ್ವಿಕ ಗ್ರಹಿಕೆಯ ದಟ್ಟವಾದ ಪ್ರಭಾವವಿದೆ.

ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳ ಸಾಮಾಜಿಕಾನುಸಂಧಾನದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಈಗಾಗಲೇ ಚರ್ಚಿಸಲಾಗಿರುವಂತೆ, ಹಲವು ವಿಧಾನಗಳನ್ನು ಹಾಗೂ ಪರಿಕಲ್ಪನೆಗಳನ್ನು ಬಳಸಿಕೊಂಡಿರುವುದನ್ನು ಗುರುತಿಸಲಾಗಿದೆ. ಇವುಗಳನ್ನು ಬೇರೆಬೇರೆ ವಿಮರ್ಶಕರು ತಮ್ಮ ತಮ್ಮ ಸೈದ್ಧಾಂತಿಕ ಬದ್ಧತೆ ಮತ್ತು ತಾತ್ವಿಕ ದೃಷ್ಟಿಕೋನಕ್ಕೆ ಅನುಸಾರವಾಗಿ ಸಾಹಿತ್ಯಾನುಸಂಧಾನಕ್ಕಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಆದರೆ, ಈ ಸಂದರ್ಭದಲ್ಲಿ ಗಮನಿಸಬೇಕಾಗಿರುವ ಬಹಳ ಮುಖ್ಯವಾದ ವಿಚಾರವೆಂದರೆ ಈ ವಿಧಾನಗಳನ್ನು ಹಾಗೂ ಪರಿಕಲ್ಪನೆಗಳನ್ನು ಸಮಗ್ರ ಕನ್ನಡ ಸಾಹಿತ್ಯ ಪರಂಪರೆಯ ವಿಶ್ಲೇಷಣೆಯಲ್ಲಿ ಮತ್ತು ಮೌಲ್ಯಮಾಪನದಲ್ಲಿ ಅರ್ಥಪೂರ್ಣವಾಗಿ ಬಳಸುವ ಮೂಲಕ ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ಚರಿತ್ರೆಗಳನ್ನು ಕುರಿತು ಯಾವ ಯಾವ ಹೊಸ ವಿಚಾರಗಳನ್ನು ಕಂಡುಕೊಳ್ಳಲಾಯಿತು

ಎನ್ನುವುದಷ್ಟೇ ಮುಖ್ಯವಲ್ಲ; ಇದಕ್ಕೆ ಬದಲಾಗಿ, ಹಾಗೆ ಕಂಡುಕೊಳ್ಳಲಾದ ನೂತನ ವಿಚಾರಗಳು ಸಮಕಾಲೀನ ಸಂದರ್ಭದಲ್ಲಿ ಜನತೆಯ ಬದುಕಿನ ಆಶೋತ್ತರಗಳನ್ನು ಎಷ್ಟರಮಟ್ಟಿಗೆ ಪ್ರತಿನಿಧಿಸುತ್ತವೆ ಮತ್ತು ಈಡೇರಿಸುತ್ತವೆ ಎನ್ನುವುದು ಅತ್ಯಂತ ಮಹತ್ವದ ಸಂಗತಿಯಾಗಿರುತ್ತದೆ.

ಹೀಗಾಗಿಯೇ, ಸಾಮಾಜಿಕಾನುಸಂಧಾನದ ವಿವಿಧ ವಿಧಾನಗಳು ಮತ್ತು ಪರಿಕಲ್ಪನೆಗಳು ಸಾಹಿತ್ಯದ ಸ್ವರೂಪ, ಆಶಯಗಳು, ಆಕೃತಿಗಳು ಹಾಗೂ ಮೌಲ್ಯಗಳನ್ನು ಕುರಿತು ಅತ್ಯಂತ ವೈವಿಧ್ಯಮಯವಾದ ಪ್ರಶ್ನೆಗಳನ್ನು ಎತ್ತಿವೆ. ಇವುಗಳಿಗೆ ಅತ್ಯಂತ ಸಂಕೀರ್ಣವಾದ ಚಾರಿತ್ರಿಕ ಹಿನ್ನೆಲೆಗಳ ಮತ್ತು ಸಾಂಸ್ಕೃತಿಕ ಕಾರಣಗಳ ಪ್ರಬಲವಾದ ಒತ್ತಾಸೆಯಿದೆ. ಅಲ್ಲದೆ, ವರ್ತಮಾನದ ಜ್ವಲಂತ ಸಮಸ್ಯೆಗಳು ಹಾಗೂ ಬದುಕಿನ ಪ್ರಶ್ನೆಗಳು ಇವುಗಳೊಂದಿಗೆ ತಳುಕು ಹಾಕಿಕೊಂಡಿವೆ. ಆದ್ದರಿಂದಲೇ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ಕನ್ನಡ ಸಾಮಾಜಿಕಾನುಸಂಧಾನದ ಭಾಗವಾಗಿ ಹುಟ್ಟಿಕೊಂಡಿರುವ ಪ್ರಶ್ನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ಅಗಾಧವಾಗಿ ವಿಸ್ತರಿಸಿವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು ಸಮಗ್ರ ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ವಿಶ್ಲೇಷಣೆಗಳಿಗೆ ಮತ್ತು ಮೌಲ್ಯಮಾಪನಗಳಿಗೆ ಒಳಪಡಿಸಿದೆ. ಈ ಪ್ರಕ್ರಿಯೆಯಲ್ಲಿ ಈಗಾಗಲೇ ಚರ್ಚಿಸಲಾದಂತೆ ಸಾಮಾಜಿಕಾನುಸಂಧಾನದ ವಿವಿಧ ವಿಧಾನಗಳು ಕ್ರಿಯಾತ್ಮಕವಾಗಿವೆ. ಈ ವಿದ್ಯಮಾನದಲ್ಲಿ ಸಾಮಾನ್ಯವಾಗಿ ಕನ್ನಡ ಸಾಹಿತ್ಯ ಪರಂಪರೆಯ ಮಹತ್ವದ ಕಾಲಘಟ್ಟ ಮತ್ತು ಶ್ರೇಷ್ಠ ಕವಿಗಳ ಅಥವಾ ಶ್ರೇಷ್ಠ ಲೇಖಕರ ಸಾಹಿತ್ಯವನ್ನು ಬಹುರೂಪಿಯಾದ ನೆಲೆಗಳಲ್ಲಿ ಮತ್ತು ತೀವ್ರವಾದ ಕ್ರಮಗಳಲ್ಲಿ ಅನುಸಂಧಾನ ಮಾಡಲಾಗಿರುತ್ತದೆ. ಇದು ಆಧುನಿಕಪೂರ್ವ ಮತ್ತು ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೂಡಾ ಅನ್ವಯಿಸುತ್ತದೆ.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನ ವಿದ್ಯಮಾನದ ಈ ಪ್ರವೃತ್ತಿಯನ್ನು ಆಧರಿಸಿ, ಇಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳ ಸ್ವರೂಪ ಮತ್ತು ವಿಶಿಷ್ಟತೆಯನ್ನು ಚರ್ಚಿಸಲಾಗುವುದು. ಈ ಚರ್ಚೆಯನ್ನು ಮುಖ್ಯವಾದ ಮೂರು ನೆಲೆಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಅವು ಹೀಗಿವೆ, ಅ.ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳುಆ.ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳ ಪಲ್ಲಟಗಳು ಮತ್ತು ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳ ರೂಪಾಂತರಗಳು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ, ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳ ಸಾಮಾಜಿಕಾನುಸಂಧಾನದ ಸ್ವರೂಪ ಹಾಗೂ ಅದರ ಗತಿಶೀಲತೆಯ ವಿನ್ಯಾಸಗಳನ್ನು ಗ್ರಹಿಸುವುದಕ್ಕೆ ಈ ನೆಲೆಗಳು ಅತ್ಯಂತ ಉಪಯುಕ್ತವಾದವುಗಳು ಎಂದು ಭಾವಿಸಿಕೊಳ್ಳಾಗಿದೆ. ಹೀಗಾಗಿ, ಇಲ್ಲಿ ಇವುಗಳನ್ನು ಕುರಿತು ಪ್ರತ್ಯೇಕವಾಗಿ ವಿವೇಚಿಸಲಾಗಿದೆ.

೫.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಪಠ್ಯಗಳನ್ನು ಪ್ರಧಾನ ಸಾಮಾಜಿಕ ಪರಿಕಲ್ಪನೆಗಳು ಹಾಗೂ ಆಧುನಿಕ ಸಾಂಸ್ಕೃತಿಕ ವಿಮರ್ಶಾ ಪರಿಕಲ್ಪನೆಗಳ ಮೂಲಕ ಬಹುಸ್ತರಗಳಲ್ಲಿ ಮತ್ತು ಬಹುರೂಪಿ ಮಾದರಿಗಳಲ್ಲಿ ಸಾಮಾಜಿಕಾನುಸಂಧಾನಕ್ಕೆ ಒಳಪಡಿಸಿದೆ. ಕಳೆದ ಶತಮಾನದ ಎಪ್ಪತ್ತರ ದಶಕದಿಂದ, ನಿರ್ದಿಷ್ಟವಾಗಿ ಹೇಳುವುದಾದರೆ ಕನ್ನಡ ನವ್ಯ ವಿಮರ್ಶೆಯ ಶುದ್ಧ ಸಾಹಿತ್ಯಾತ್ಮಕ ರೂಪನಿಷ್ಠ ವಿಮರ್ಶೆಗೆ ನವ್ಯೋತ್ತರ ಕಾಲಘಟ್ಟದಲ್ಲಿ ವ್ಯಕ್ತವಾದ ವಿವಿಧ ಸಾಹಿತ್ಯ ವಿಮರ್ಶಾ ರೂಪಗಳಿಂದ ಈ ವಿದ್ಯಮಾನ ಮೊದಲಾಯಿತು. ಆನಂತರ, ಎಂಭತ್ತರ ದಶಕದ ವೇಳೆಗೆ ಈ ಹೊಸ ವಿಮರ್ಶಾ ಪ್ರಕಾರಗಳಾದ ದಲಿತ ಸಾಹಿತ್ಯದ ಸಾಮಾಜಿಕ ವಿಮರ್ಶೆ, ಬಂಡಾಯ ಸಾಹಿತ್ಯದ ಎಡಪಂಥೀಯ ವಿಮರ್ಶೆ ಮತ್ತು ಲೋಹಿಯಾವಾದಿ ಚಿಂತನೆಯ ಸಮಾಜವಾದಿ ವಿಮರ್ಶೆಗಳು ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆ ಕುರಿತು ಗಳಿಸಿಕೊಂಡ ಹೊಸ ವಿವೇಕ ಹಾಗೂ ಅರ್ಥಪೂರ್ಣ ಗ್ರಹಿಕೆಗಳು ಸಾಮಾಜಿಕಾನುಸಂಧಾನದ ವಿದ್ಯಮಾನಕ್ಕೆ ಹೊಸ ಆಯಾಮಗಳನ್ನು ಕಲ್ಪಿಸಿದವು. ಇದೇ ಕಾಲಘಟ್ಟದಲ್ಲಿ ಪ್ರಧಾನವಾಗಿ ಪಾಶ್ಚಾತ್ಯ ಪ್ರಭಾವದಿಂದ ಮುನ್ನೆಲೆಗೆ ಬಂದ ಕನ್ನಡ ಸ್ತ್ರೀವಾದಿ ವಿಮರ್ಶೆ ಸಹ, ಈ ವಿದ್ಯಮಾನಕ್ಕೆ ಅತ್ಯಂತ ನೂತನವಾದ ಹಾಗೂ ಕನ್ನಡ ವಿಮರ್ಶಾ ಪರಂಪರೆಗೆ ಅಪರಿಚಿತವಾಗಿದ್ದ ಹಲವು ಆಧುನಿಕ ಅನುಸಂಧಾನ ಪರಿಕಲ್ಪನೆಗಳು ಹಾಗೂ ವಿಧಾನಗಳನ್ನು ಪರಿಚಯಿಸಿತು. ಅಂತಿಮವಾಗಿ ತೊಂಭತ್ತರ ದಶಕದ ವೇಳೆಗೆ, ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ತೀವ್ರವಾಗಿದ್ದ ಸಾಮಾಜಿಕಾನುಸಂಧಾನದ ವಿದ್ಯಮಾನದ ಮೇಲೆ, ಜಾಗತಿಕ ಅಧಿಕಾರ ಶಕ್ತಿಗಳ ನೂತನ ರಾಜಕೀಯಾರ್ಥಿಕ ಸಿದ್ಧಾಂತಗಳು ಹುಟ್ಟುಹಾಕಿದ ಕಾರ್ಯತಂತ್ರಗಳು ಮತ್ತು ಅವುಗಳ ಸಂಕೀರ್ಣವಾದ ಕಾರ್ಯಾಚರಣೆ ರೂಪಗಳು ಅತ್ಯಂತ ದಟ್ಟವಾದ ಪ್ರಭಾವಗಳನ್ನು ಬೀರಿದವು. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಸಾಮಾಜಿಕ ಆಯಾಮಗಳಿಗೆ ಸ್ಪಷ್ಟರೂಪ ದೊರೆಯಿತು.

ಈ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ಪ್ರಮುಖವಾದ ಎರಡು ರೂಪಗಳಲ್ಲಿ ಗುರುತಿಸಿಕೊಳ್ಳಬಹುದಾಗಿದೆ. ಅವುಗಳೆಂದರೆ, ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆ ಆಯಾಮಗಳು ಹಾಗೂ ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಲಿಂಗ ಪರಿಕಲ್ಪನೆ ಆಯಾಮಗಳು.

ಭಾರತೀಯ ಸಾಮಾಜಿಕ ರಚನೆಯ ಮೂಲಘಟಕಗಳು ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳೂ ಆಗಿರುವ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳನ್ನು ಹಾಗೆ ನೋಡುವುದಾದರೆ, ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಚರ್ಚೆಗಳಲ್ಲಿ ಮೊದಲಿನಿಂದಲೂ ಸಮಗ್ರತಾನೆಲೆಯಲ್ಲಿಯೇ ಪರಿಭಾವಿಸಿಕೊಂಡು ಬರಲಾಗಿದೆ. ಆದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಇವುಗಳನ್ನು

ಹೀಗೆ ಏಕೀಕೃತ ರೂಪದಲ್ಲಿ ಆಲೋಚಿಸುವುದು ಅಷ್ಟು ಉಪಯುಕ್ತವಾಗಲಾರದು. ಏಕೆಂದರೆ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ನಡುವೆ ಕಂಡುಬರುವ ಪರಸ್ಪರ ನೇರವೂ ಮತ್ತು ಪೂರಕವೂ ಆದ ಸಂಬಂಧ ಲಿಂಗ ಪರಿಕಲ್ಪನೆಯವಿಚಾರದಲ್ಲಿ ಕಂಡುಬರುವುದಿಲ್ಲ. ವರ್ಣ, ವರ್ಗ ಮತ್ತು ಜಾತಿಗಳು ತಮ್ಮೊಳಗೆ ಎಷ್ಟೇ ತೀವ್ರವಾದ ಶ್ರೇಣೀಕರಣ ಹಾಗೂ ತಾರತಮ್ಯಗಳ ಅನಿಷ್ಟ ಪದ್ಧತಿಗಳನ್ನು ಒಳಗೊಂಡಿದ್ದರೂ ಸಹ, ಲಿಂಗದ ವಿಚಾರದಲ್ಲಿ ಇವೆಲ್ಲವೂ ತಮ್ಮೆಲ್ಲಾ ಭಿನ್ನಾಭಿಪ್ರಾಯಗಳನ್ನು ಬಿಟ್ಟುಕೊಡುತ್ತವೆ. ಅಷ್ಟೇ ಅಲ್ಲದೆ, ಅತ್ಯಂತ ಆಶ್ಚರ್ಯಕರವೆನ್ನಿಸುವಷ್ಟು ರೀತಿಯಲ್ಲಿ ಪರಸ್ಪರ ಒಗ್ಗೂಡುವಮೂಲಕ ತಾರತಮ್ಯಗಳ ಬಲಿಷ್ಠವಾದ ವ್ಯೂಹಗಳನ್ನೇ ನಿರ್ಮಿಸುತ್ತವೆ. ಹೀಗಾಗಿಯೇ, ಕನ್ನಡದ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯು ಸಾಮಾಜಿಕಾನುಸಂಧಾನದಲ್ಲಿ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳನ್ನು ಸಮಗ್ರವಾಗಿ ಪ್ರಶ್ನಿಸುವ ಮೂಲಕವೇ, ಅವು ರೂಪಿಸಿರುವ ಬಹುರೂಪಿಯಾದ ಹಾಗೂ ಬಹುಸ್ತರೀಯವಾದ ಲಿಂಗ ತಾರತಮ್ಯದ ಮಾದರಿಗಳನ್ನು ಬಯಲಿಗೆಳೆಯುತ್ತಾ ಬಂದಿದೆ. ಇದು ಸಾಹಿತ್ಯ, ಸಂಸ್ಕೃತಿ, ಪರಂಪರೆ, ಚರಿತ್ರೆ, ಧರ್ಮ ಹಾಗೂ ಭಾಷೆ ಮೊದಲಾದಂಥ ಮಾನವ ಮನಸ್ಸು ಹಾಗೂ ಪ್ರಜ್ಞೆಯ ರಚನೆಗಳು ಒಳಗೊಂಡಿರುವ ಲಿಂಗ ವಿರೋಧಿ ನೆಲೆಗಳನ್ನು ಶೋಧಿಸುವ ಗಂಭೀರವಾದ ಪ್ರಯತ್ನಗಳನ್ನು ಮಾಡಿದೆ. ಇದೇ ಸಂದರ್ಭದಲ್ಲಿ, ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ ಹಾಗೂ ಮೀಮಾಂಸೆಗಳಿಗೆ ಭಿನ್ನವಾದ ಭಾರತೀಯ ಅಥವಾ ದೇಶೀಯ ಸ್ತ್ರೀವಾದಿ ರೂಪವೊಂದನ್ನು ಕಟ್ಟುವ ಪ್ರಯತ್ನಗಳನ್ನು ಕೂಡಾ ಮಾಡಲಾಗಿರುತ್ತದೆ. ಈ ಎಲ್ಲಾ ಪ್ರವೃತ್ತಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ವಿದ್ಯಮಾನದಲ್ಲಿ ಕ್ರಿಯಾತ್ಮಕವಾಗಿವೆ. ಈ ಹಿನ್ನೆಲೆಯಲ್ಲಿ, ಇಲ್ಲಿ ಈ ಎರಡು ಪ್ರಮುಖವಾದ ವರ್ಗೀಕರಣಗಳನ್ನು ಮಾಡಿಕೊಳ್ಳಲಾಗಿದೆ.

ಈ ಎರಡೂ ರೂಪಗಳು, ಸಮಗ್ರ ಕನ್ನಡ ಸಾಹಿತ್ಯ ಪರಂಪರೆ ಮತ್ತು ಮಹತ್ವದ ಪಠ್ಯಗಳನ್ನು 'ಸಾವಯವತೆ' ಮತ್ತು 'ಸಾತತ್ಯತೆ' ಪರಿಕಲ್ಪನೆಗಳ ಮೂಲಕ ಸಹ ಸಾಮಾಜಿಕಾನುಸಂಧಾನ ಮಾಡಿರುತ್ತವೆ. ಹೀಗಾಗಿ ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

೫.೫.೧ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆ ಆಯಾಮಗಳು

ಆಧುನಿಕಪೂರ್ವ ಮತ್ತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಎಂದರೆ, ಸಮಗ್ರ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅದರ ಆರಂಭಿಕ ಘಟ್ಟದಿಂದ ಇಂದಿನವರೆಗೆ ವಿವಿಧ ರೂಪಗಳಲ್ಲಿ ಪ್ರತಿಪಾದನೆಯಾಗಿರುವ ಅಥವಾ ನಿರೂಪಿತವಾಗಿರುವ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ಆಯಾಮಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಭಿನ್ನ ಮಾದರಿಗಳು ಗ್ರಹಿಸಿರುವ ಸ್ವರೂಪವನ್ನು ಕುರಿತು ಇಲ್ಲಿ ಆಲೋಚಿಸಲಾಗಿದೆ. ಈ ಗ್ರಹಿಕೆಯ ಪ್ರಮುಖ ರೂಪರೇಷೆಗಳನ್ನು ವಿಶ್ಲೇಷಿಸುವ ಮೂಲಕ ಅದು ತಾಳುವ ನಿಲುವಿಗೆ ಇರುವ ಕಾರಣಗಳು ಹಾಗೂ ಅದರ ಪ್ರಾಮುಖ್ಯತೆಯನ್ನು ಗುರುತಿಸಲಾಗುವುದು. ಹಾಗೆಯೇ, ಇಂಥ ನಿಲುವು ಒಳಗೊಂಡಿರಬಹುದಾದ ಮಿತಿಗಳನ್ನು ಸಹ ಗಮನಿಸಲಾಗುವುದು.

ಈ ಹಿನ್ನೆಲೆಯಲ್ಲಿ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ಮೂಲಕ ಆಧುನಿಕ ಪೂರ್ವ ಸಾಹಿತ್ಯವನ್ನು ಕುರಿತು, ನಿರ್ದಿಷ್ಟವಾಗಿ ಹಳಗನ್ನಡದ ಜೈನಕವಿಗಳು ಮತ್ತು ಪಠ್ಯಗಳನ್ನು ಕುರಿತು ಮಾಲಗತ್ತಿ ಅವರು ತಮ್ಮ 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೦) ಕೃತಿಯಲ್ಲಿ ಮಾಡಿರುವ ವಿಶ್ಲೇಷಣೆಗಳನ್ನು ಹಾಗೂ ತೀರ್ಮಾನಗಳನ್ನು ಚರ್ಚಿಸಲಾಗುವುದು. ಹಾಗೆಯೇ, ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಈ ಪರಿಕಲ್ಪನೆಗಳು ಮುಖ್ಯವಾಗಿ ಬೇಂದ್ರೆ ಅವರ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಸ್ವರೂಪ ಕುರಿತು ವಿವೇಚಿಸಲಾಗುವುದು. ಇದನ್ನು ಬರಗೂರು ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ('ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ', ೨೦೦೧) ಎನ್ನುವ ವಿಮರ್ಶಾ ಲೇಖನಗಳನ್ನು ವಿಶ್ಲೇಷಿಸುವ ಮೂಲಕ ಚರ್ಚಿಸಲಾಗುವುದು.

ಈ ಪ್ರಧಾನ ಆಕರಗಳಿಗೆ ಪೂರಕವಾಗಿ ತೇಜಸ್ವಿ ಅವರ 'ಪರಂಪರೆ ಮತ್ತು ಕುವೆಂಪು' ('ವಿಮರ್ಶೆಯ ವಿಮರ್ಶೆ', ೨೦೦೯); ಬಿ.ಎಂ. ಪುಟ್ಟಯ್ಯ ಅವರ 'ಕನ್ನಡ ಸಾಹಿತ್ಯ ವರ್ಣ ಮತ್ತು ಜಾತಿ ಪರಿಕಲ್ಪನೆಗಳು' ('ಕದಡು', ೨೦೦೮) ಮತ್ತು ಮಾಲಗತ್ತಿ ಅವರ 'ಬೇಂದ್ರೆಯವರ ಕಾವ್ಯ ಮತ್ತು ಸಾಮಾಜಿಕ ಪ್ರಕ್ರಿಯೆ' ಹಾಗೂ 'ಬೇಂದ್ರೆಯವರ ದೇಮವ್ವನ ಮೆರವಣಿಗೆ' ('ಸಾಹಿತ್ಯ, ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ', ೨೦೦೩) ಮೊದಲಾದ ಲೇಖನಗಳನ್ನು ವಿಶ್ಲೇಷಣೆಗೆ ಉಪಯೋಗಿಸಿಕೊಳ್ಳಲಾಗುವುದು ಹಾಗೆಯೇ, ಆಧುನಿಕ ಕನ್ನಡ ವಿಮರ್ಶೆಯ ಇತರ ವಿಮರ್ಶಕರ ಬರಹ ಮತ್ತು ವಿಚಾರಗಳನ್ನು ಸಹ ಸಾಂದರ್ಭಿಕವಾಗಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಈ ಚರ್ಚೆಯನ್ನು ಮುಂದಿನ ಕ್ರಮದಲ್ಲಿ ರೂಪಿಸಿಕೊಳ್ಳಲಾಗಿದೆ:

ಅ. ಮಾಲಗತ್ತಿ ಅವರ ಹಳಗನ್ನಡ ಸಾಹಿತ್ಯದ ಸಾಮಾಜಿಕಾನುಸಂಧಾನದ ಸ್ವರೂಪ.

ಆ. ಬರಗೂರು ಅವರ ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನದ ಸ್ವರೂಪ.

ಈ ವಿಮರ್ಶಕರು, ಸಾಮಾಜಿಕಾನುಸಂಧಾನಕ್ಕಾಗಿ ಆಯ್ಕೆಮಾಡಿಕೊಂಡಿರುವ ಸಾಹಿತ್ಯ ಮತ್ತು ಪಠ್ಯಗಳಲ್ಲಿ,ಅವುಗಳ ಕವಿಗಳು ಅಥವಾ ಲೇಖಕರು ಪ್ರತಿಪಾದಿಸಿರುವ ವರ್ಣ, ವರ್ಗ ಹಾಗೂ ಜಾತಿ ಪರಿಕಲ್ಪನೆಗಳನ್ನು ಕುರಿತು ಅತ್ಯಂತ ವಿಶಿಷ್ಟವಾದ ವಿಚಾರಗಳನ್ನು ಮಂಡಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಹಲವು ಬೇರೆಬೇರೆ ಸಂಗತಿಗಳು ಇಲ್ಲಿನ ವಿಮರ್ಶಕರ ನೋಟಕ್ರಮಗಳನ್ನು ಮತ್ತು ತಾತ್ವಿಕತೆಗಳನ್ನು ರೂಪಿಸಿವೆ. ಆದ್ದರಿಂದಲೇ, ಅವರು ಅನುಸರಿಸಿರುವ ವಿಧಾನಗಳು ಕೂಡಾ ಪರಸ್ಪರ ಬೇರೆ ಬೇರೆಯಾಗಿವೆ. ಹೀಗಾಗಿ, ಇವರ ಸಾಮಾಜಿಕಾನುಸಂಧಾನದ ಫಲಿತಗಳು ಸಹ ಪರಸ್ಪರ ಭಿನ್ನವಾಗಿವೆ ಮತ್ತು ವಿಶಿಷ್ಟವಾಗಿವೆ.

ಈ ಹಿನ್ನೆಲೆಯಲ್ಲಿ, ಈ ವಿಮರ್ಶಕರ ಸಾಮಾಜಿಕಾನುಸಂಧಾನದ ಸ್ವರೂಪವನ್ನು ಕುರಿತು ಇಲ್ಲಿ ಪ್ರತ್ಯೇಕವಾಗಿ ಪರ್ಯಾಲೋಚಿಸಲಾಗಿದೆ.

೫.೬ ಮಾಲಗತ್ತಿ ಅವರ ಹಳಗನ್ನಡ ಸಾಹಿತ್ಯದ ಸಾಮಾಜಿಕಾನುಸಂಧಾನದ ಸ್ವರೂಪ

ಕನ್ನಡ ದಲಿತ ಸಾಹಿತ್ಯದ ಸಾಮಾಜಿಕ ವಿಮರ್ಶೆಯನ್ನು ಅರ್ಥಪೂರ್ಣವಾಗಿ ಪರಿಷ್ಕರಿಸುವ ಮೂಲಕ ಅದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಮುಖ್ಯವಾದ ಮಾದರಿಯಾಗಿ ರೂಪಿಸಿದ ವಿಮರ್ಶಕರಲ್ಲಿ ಅರವಿಂದ ಮಾಲಗತ್ತಿ ಅವರು ಅತ್ಯಂತ ಪ್ರಮುಖರಾಗಿದ್ದಾರೆ. ಸಾಮಾಜಿಕ ಪರಿಕಲ್ಪನೆಗಳ ಮತ್ತು ಸಾಮಾಜಿಕ ಪ್ರಶ್ನೆಗಳ ಮೂಲಕ, ಕನ್ನಡ ಸಾಹಿತ್ಯ ಪರಂಪರೆ ಹಾಗೂ ಪಠ್ಯಗಳನ್ನು ಸಮಕಾಲೀನ ಬದುಕಿನ ಆಶೋತ್ತರಗಳ ಹಿನ್ನೆಲೆಯಲ್ಲಿ ಅನುಸಂಧಾನ ಮಾಡಿರುವ ಇವರ 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೦) ಹಾಗೂ 'ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ' (೨೦೦೩) ಕೃತಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ವ್ಯಾಪಕವಾಗಿ ವಿಸ್ತರಿಸಿರುವ ಮಹತ್ವದ ಕೃತಿಗಳಾಗಿವೆ.

ಪ್ರಸ್ತುತ, 'ದಲಿತಯುಗ ಮತ್ತು ಕನ್ನಡ ಸಾಹಿತ್ಯ' (೧೯೯೦) ಕೃತಿಯಲ್ಲಿ ಮಾಲಗತ್ತಿ ಅವರು ಹಳಗನ್ನಡ ಸಾಹಿತ್ಯವನ್ನು, ನಿರ್ದಿಷ್ಟವಾಗಿ ಜೈನಕವಿಗಳ ಸಾಹಿತ್ಯವನ್ನು ಸಾಮಾಜಿಕಾನುಸಂಧಾನ ಮಾಡಿರುವ ಸ್ವರೂಪ ಕುರಿತು ವಿಶ್ಲೇಷಿಸಲಾಗುವುದು. ಈ ಉದ್ದೇಶಕ್ಕಾಗಿ, ಈ ಕೃತಿಯ ಮುಂದಿನ ಮಹತ್ವಪೂರ್ಣವಾದ ಲೇಖನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ, ಅ.ವಡ್ಡಾರಾಧನೆ ಸಮಾನತೆ ಮತ್ತು ಪಾಪಪ್ರಜ್ಞೆ ಎಂಬ ಜ್ವಾಲೆಆ.ಪಂಪನ ಕಾವ್ಯಗಳಲ್ಲಿ ಅನಾವರಣಗೊಂಡ ವರ್ಣ-ಜಾತಿ ವ್ಯವಸ್ಥೆಯ ಜಿಜ್ಞಾಸೆಇ. ರನ್ನನ ಕಾವ್ಯಗಳಲ್ಲಿ ವರ್ಣ ವ್ಯವಸ್ಥೆಯ ವಿರೋಧದ ಸ್ವರೂಪ- ಸಂವಾದ ಮತ್ತು ಈ. ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ದಲಿತತ್ವದ ಧರ್ಮಸಿಂಧು.

ಈ ಲೇಖನಗಳಲ್ಲಿ ಮಾಲಗತ್ತಿ ಅವರು ಪ್ರಧಾನವಾಗಿ, ತಾವು ಆಯ್ಕೆ ಮಾಡಿಕೊಂಡಿರುವ ಪಠ್ಯಗಳಲ್ಲಿ ನಿರೂಪಿತವಾಗಿರುವ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ಸ್ವರೂಪವನ್ನು ವಿಶ್ಲೇಷಿಸುವ ಮೂಲಕ ಅವುಗಳ ಸಾಮಾಜಿಕಾನುಸಂಧಾನ ಮಾಡಿರುತ್ತಾರೆ. ಜೈನಕವಿಗಳು ವೈದಿಕ ಚಾತುರ್ವರ್ಣ ವ್ಯವಸ್ಥೆಯನ್ನು ಗ್ರಹಿಸುವ ಮತ್ತು ವ್ಯಾಖ್ಯಾನಿಸುವ ಬಗೆ ಏನು, ಇದರ ಮುಖ್ಯ ಕಾರಣಗಳೇನು ಎನ್ನುವುದನ್ನು ಕುರಿತ ಶೋಧನೆ ಅವರ ಪ್ರಮುಖ ಆಸಕ್ತಿಯಾಗಿದೆ. ಇದಕ್ಕೆ ಸಾಹಿತ್ಯ, ಸಂಸ್ಕೃತಿ ಮತ್ತು ಬದುಕನ್ನು ಕುರಿತ ಅವರ ನಿರ್ದಿಷ್ಟ ತಾತ್ವಿಕತೆ ಮೂಲ ಪ್ರೇರಣೆಯಾಗಿದೆ. ಹೀಗಾಗಿಯೇ, ಅವರ ವಿಮರ್ಶೆ ಕುರಿತು ಕೃತಿಯ ಪ್ರಸ್ತಾವನೆಯಲ್ಲಿ ಅವರೇ ಹೇಳಿರುವ 'ವಿಮರ್ಶೆ ಎಂದರೆ, ನೀರು ಹರಿದತ್ತ ಹರಿಯುವುದೆಂದಲ್ಲ, ಆ ನೀರನ್ನು ನಮಗೆ ಬೇಕಾದೆಡೆಗೆ ತಿರುಗಿಸಿಕೊಂಡು ಹರಿಸಿಕೊಳ್ಳುವ ಸಾಮರ್ಥ್ಯವಿರಬೇಕು' ಎನ್ನುವ ಮಾತು ಇಲ್ಲಿನ ಸಾಮಾಜಿಕಾನುಸಂಧಾನದ ವಿಧಾನವನ್ನು ರೂಪಿಸಿರುತ್ತದೆ.

೫.೬.೧ ಜೈನಧರ್ಮ ಪಾರಮ್ಯದ ಪ್ರತಿಪಾದನೆಯ ಸಾಧನಗಳಾಗಿ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳ ಬಳಕೆ

ಮಾಲಗತ್ತಿ ಅವರು ಜೈನ ಸಾಹಿತ್ಯದ ಸಾಮಾಜಿಕಾನುಸಂಧಾನಕ್ಕೆ ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ ಆಯ್ಕೆಮಾಡಿಕೊಂಡಿದ್ದಾರೆ. ಹೀಗಾಗಿಯೇ, ಅವರು ಕಾವ್ಯ ಅಥವಾ ಪಠ್ಯಗಳಲ್ಲಿ ನಿರೂಪಿತವಾಗಿರುವ ಸಾಮಾಜಿಕ ಸಂಗತಿಗಳು, ಚಿತ್ರಿತವಾಗಿರುವ ಪಾತ್ರಗಳು, ನಿರ್ವಹಿಸಲಾಗಿರುವ ಪ್ರಸಂಗಗಳು, ಕಟ್ಟಲಾಗಿರುವ ಸನ್ನಿವೇಶಗಳು ಹಾಗೂ ಪ್ರತಿಪಾದಿಸಲಾಗಿರುವ ಮೌಲ್ಯಗಳನ್ನು ಸಮಕಾಲೀನ ಸಾಮಾಜಿಕ ಅಥವಾ ಸಾಂಸ್ಕೃತಿಕ ವಾಸ್ತವಕ್ಕೆ ಕವಿ ತೋರಿಸುವ ಕಾವ್ಯಾತ್ಮಕ ಪ್ರತಿಕ್ರಿಯೆಗಳು ಎಂದು ವಿವರಿಸುತ್ತಾರೆ. ಈ ಪ್ರತಿಕ್ರಿಯೆ ಹಲವು ರೂಪಗಳಲ್ಲಿ ವ್ಯಕ್ತವಾಗಿದೆ ಎನ್ನುವುದು ಅವರ ಅಭಿಪ್ರಾಯ. ಅದು ಸಮ್ಮತಿ, ಅಸಮ್ಮತಿ, ಅಸಮಾಧಾನ, ತಾಟಸ್ಥ್ಯ ಅಥವಾ ಸಂಧಾನ ಹೀಗೆ, ಬಹುರೂಪಿಯಾಗಿ ಪ್ರಕಟಗೊಂಡಿರುವ ಬಗೆಯನ್ನು ಮಾಲಗತ್ತಿ ಅವರು ಈ ಕೃತಿಗಳ ವಿಶ್ಲೇಷಣೆಯ ಮೂಲಕ ನಿರೂಪಿಸುತ್ತಾರೆ.

ಈ ಚರ್ಚೆಯಲ್ಲಿ ಕಂಡುಬರುವ ಒಂದು ಗಮನಾರ್ಹ ವಿಚಾರವೆಂದರೆ, ಅವರು ಪಠ್ಯದ ಆಶಯಯನ್ನು ಅಥವಾ ಅದರ ಸಮಗ್ರಧ್ವನಿಯನ್ನು ಮುಖ್ಯವೆಂದು ಪರಿಗಣಿಸುವುದಕ್ಕೆ ಯಾವುದೇ ಮಹತ್ವ ನೀಡದಿರುವುದು. ಕಾವ್ಯಾಕೃತಿಗೂ ಮತ್ತು ಕಾವ್ಯಾಶಯಕ್ಕೂ ಇರುವ ವಿಶಿಷ್ಟವಾದ ಸಂಬಂಧವು ಮೂಲತಃ ಸಾಂಸ್ಕೃತಿಕ ರಚನೆಯ ಸ್ವರೂಪದಿಂದ ಹುಟ್ಟಿದ್ದಾಗಿರುತ್ತದೆ ಎನ್ನುವುದನ್ನು ಗುರುತಿಸದೆ, ಕವಿಯ ಬದುಕಿನ ಹಿನ್ನೆಲೆಗಳು ಮತ್ತು ವ್ಯಕ್ತಿತ್ವದ ಚಹರೆಗಳ ಮೂಲಕ ಕಾವ್ಯ ಘಟಕಗಳ ವಿಸ್ತೃತವಾದ ಚರ್ಚೆಯನ್ನೇ ಪ್ರಧಾನವಾದ ಆಸಕ್ತಿಯನ್ನಾಗಿ ಮಾಡಿಕೊಂಡಿರುವುದು. ಕಾವ್ಯದ ಪಾತ್ರಗಳಿಗೂ, ಪ್ರಸಂಗಗಳಿಗೂ, ಸನ್ನಿವೇಶಗಳಿಗೂ, ಸಂಭಾಷಣೆಗಳಿಗೂ, ಕೊನೆಗೆ ಹೇಳಿಕೆ ರೂಪದ ಅಭಿವ್ಯಕ್ತಿಗಳಿಗೂ ಮತ್ತು ಕವಿಯ ಬದುಕಿನ ಹಿನ್ನೆಲೆಗಳಿಗೂ ಹಾಗೂ ಬದುಕಿನ ಕುರಿತಾದ ಆತನ ದೃಷ್ಟಿಕೋನಕ್ಕೂ ಪರಸ್ಪರ ನೇರವಾದ ಸಂಬಂಧವಿದೆ ಎನ್ನುವುದನ್ನು ಸಾಮಾಜಿಕಾನುಸಂಧಾನದ ವಿಶ್ಲೇಷಣಾ ಸಾಧನವಾಗಿ ಅಳವಡಿಸಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ, ಜೈನ ಸಾಹಿತ್ಯದಲ್ಲಿ ಪ್ರತಿಪಾದಿತವಾಗಿರುವ ಮತ್ತು ನಿರೂಪಿತವಾಗಿರುವ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆಗಳನ್ನು ವಿಶ್ಲೇಷಿಸುವ ಕ್ರಮವನ್ನು ಮುಖ್ಯವಾದ ಎರಡು ದೃಷ್ಟಿಕೋನಗಳಲ್ಲಿ ಗುರುತಿಸಬಹುದು. ಅವುಗಳೆಂದರೆ, ೧. ವರ್ಣ ವ್ಯವಸ್ಥೆ ಕುರಿತ ಜೈನ ಕವಿಗಳ ದೃಷ್ಟಿಕೋನ ಮತ್ತು ೨. ಜಾತಿ ವ್ಯವಸ್ಥೆ ಕುರಿತ ಜೈನ ಕವಿಗಳ ದೃಷ್ಟಿಕೋನ.

ಈ ಎರಡೂ ದೃಷ್ಟಿಕೋನಗಳ ಸ್ವರೂಪವನ್ನು ಕುರಿತು ಚರ್ಚಿಸುತ್ತಾ ಮಾಲಗತ್ತಿ ಅವರು, ಜೈನ ಕವಿಗಳು ಮೂಲತಃ ವರ್ಣ ಮತ್ತು ಜಾತಿ ವ್ಯವಸ್ಥೆಯ ವಿರೋಧಿಗಳಲ್ಲ; ಅವರು ಈ ಎರಡೂ ವ್ಯವಸ್ಥೆಗಳನ್ನು ಒಪ್ಪಿಕೊಂಡಿದ್ದರು. ಆದರೆ, ಅವುಗಳನ್ನು ವೈದಿಕರಂತೆ ಒಪ್ಪಿಕೊಳ್ಳದೆ ಜೈನಧರ್ಮ ಪಾರಮ್ಯದ ಪ್ರತಿಪಾದನೆಯ

ಉದ್ದೇಶದಿಂದ ಪರಿಷ್ಕೃತ ರೂಪದಲ್ಲಿ ಒಪ್ಪಿಕೊಂಡಿದ್ದರು ಎಂದು ವಿವರಿಸುತ್ತಾರೆ. ಇದನ್ನು ಅವರು ವಿವರಿಸುವ ಬಗೆಯನ್ನು ಈ ಮುಂದಿನಂತೆ ಗ್ರಹಿಸಬಹುದು.

೫.೬.೨ ಜೈನ ಕವಿಗಳು ಮೂಲತಃ ವರ್ಣವ್ಯವಸ್ಥೆಯ ವಿರೋಧಿಗಳಲ್ಲ; ಅದರ ಪ್ರತಿಪಾದಕರು

ಹತ್ತನೆಯ ಶತಮಾನದ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜೈನಧರ್ಮವೇ ಅತ್ಯಂತ ಪ್ರಬಲವಾದ ಧರ್ಮವಾಗಿತ್ತು. ಇಷ್ಟಾದರೂ, ಅದು ವೈದಿಕ ಧರ್ಮದ ಚಾತುರ್ವಣ್ಯವನ್ನು ಒಪ್ಪಿಕೊಳ್ಳುವುದಕ್ಕೆ ಮತ್ತು ಪ್ರತಿಪಾದಿಸುವುದಕ್ಕೆ ಇರಬಹುದಾದ ಕಾರಣಗಳನ್ನು ಮಾಲಗತ್ತಿ ಅವರು ಕವಿಗಳ ಸಾಮಾಜಿಕ ಹಾಗೂ ಧಾರ್ಮಿಕ ಹಿನ್ನೆಲೆಗಳ ಮೂಲಕ ವಿವರಿಸುತ್ತಾರೆ. ಆದ್ದರಿಂದ, ಪಂಪ ಮತ್ತು ರನ್ನನ ಕಾವ್ಯಗಳನ್ನು ಈ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾರೆ. ಇದನ್ನು, ಈ ಕವಿಗಳ ಕಾವ್ಯದ ಪಾತ್ರ ಚಿತ್ರಣ, ಪಾತ್ರ ಸ್ವಭಾವ ಹಾಗೂ ಸನ್ನಿವೇಶ ನಿರ್ವಹಣೆಗಳ ಮೂಲಕ ವಿವರಿಸುತ್ತಾರೆ.

ಮಾಲಗತ್ತಿ ಅವರ ಈ ವಿಶ್ಲೇಷಣೆಯ ವಿಧಾನಕ್ಕೆ 'ಆದಿಪುರಾಣದ'ದ ಪ್ರಸಿದ್ಧ ಹೇಳಿಕೆಯಾದ 'ಮನುಷ್ಯ ಜಾತಿ ತಾನೊಂದೆವಲಂ' ಕುರಿತ ಅವರ ಚರ್ಚೆ ಒಂದು ಪ್ರಮುಖ ನಿದರ್ಶನ. ಈ ಹೇಳಿಕೆ ಮೂಲಕ ಪಂಪನನ್ನು 'ವಿಶ್ವಮಾನವ ಪ್ರಜ್ಞೆ'ಯ ಮಟ್ಟಕ್ಕೆ ಏರಿಸಿರುವುದಕ್ಕೆ ಅವರು ತಮ್ಮ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ ಅವರು, ಈ ಹೇಳಿಕೆಯ 'ಸಂದರ್ಭನಿಷ್ಠ' ವಿಶ್ಲೇಷಣೆ ಮಾಡುತ್ತಾ "ಈ ಪದ್ಯದ ಪ್ರಾರಂಭದ ಮುನ್ನ ಪಂಪ ದ್ವಿಜರನ್ನು 'ಬ್ರತಮಿಲ್ಲದವರ್' ಮತ್ತು 'ದೃಢವತರ್' ಎಂದು ಎರಡು ಪಂಗಡಗಳಾಗಿ ವಿಂಗಡಿಸುತ್ತಾನೆ. ಬ್ರತಮಿಲ್ಲದವರು ಎಂದರೆ ವೈದಿಕ ಬ್ರಾಹ್ಮಣರು. ದೃಢವ್ರತರ್ ಎಂದರೆ ಜೈನಬ್ರಾಹ್ಮಣರು. ತಾನು ಜೈನಧರ್ಮದ ಬ್ರಾಹ್ಮಣನೆಂದು ಬೀಗುತ್ತ ನಿಜವಾದ ಅರ್ಥದಲ್ಲಿ ತಾವೇ 'ಭೂಮಂಡಲದ ದೇವತೆ'ಗಳೆಂದು ಹೇಳುತ್ತಾ ವೈದಿಕ ಬ್ರಾಹಣರು ಭೂಸುರರಲ್ಲವೆಂದು ನಿರಾಕರಿಸುತ್ತಾನೆ. ಜೈನಧರ್ಮದ ವಿಧಿಗಳನ್ನು ಆಚರಿಸದವರು ಎಂದು ತೆಗೆದುಹಾಕುತ್ತಾನೆ. ಎಂದರೆ, ವೈದಿಕ ಧರ್ಮದ ಮೂರು ವರ್ಣದವರೊಂದಿಗೆ ಬ್ರಾಹ್ಮಣರನ್ನು ಸೇರಿಸಿ, 'ನಾಯಿ ಬಾಲಗಳೆಲ್ಲ ಡೊಂಕು' ಎನ್ನುವ ಅರ್ಥದಲ್ಲಿ ಪಂಪ 'ದ್ವಿಜರುಂತೇಂ ಬೇರುಂಟೆ ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಸಾರಿ ಬಿಡುತ್ತಾನೆ. ಈ ಮನುಷ್ಯ ಜಾತಿಯಲ್ಲಿ ಭೂಸುರರೆಂದು ಸಾರಿಕೊಳ್ಳುವ ಜೈನಬ್ರಾಹಣರನ್ನು ಸೇರಿಸುವುದಿಲ್ಲ ಎನ್ನುವುದನ್ನು ಗಮನಿಸಬೇಕು"[೧] ಎಂದು ವಿವರಿಸುತ್ತಾರೆ. ಪಂಪನ ಈ ನಿಲುವಿಗೆ ಆತ ಜೈನಬ್ರಾಹ್ಮಣನಾಗಿರುವುದೇ ಕಾರಣ ಎಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಪಂಪನ ಕಾವ್ಯದಲ್ಲಿ ಅದರಲ್ಲೂ ಮುಖ್ಯವಾಗಿ, ವಿಕ್ರಮಾರ್ಜುನ ವಿಜಯದಲ್ಲಿ ಚಿತ್ರಿತವಾಗಿರುವ ಪಾತ್ರ ಹಾಗೂ ಸನ್ನಿವೇಶಗಳ ಆಧಾರದ ಮೇಲೆ "ಪಂಪನು ವರ್ಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದರ ಜೊತೆಗೆ ವರ್ಣಸಂಕರವನ್ನು ನಿಷೇಧಿಸುವ ವಿಚಾರಕ್ಕೆ ಬದ್ಧನಾಗಿದ್ದಾನೆನ್ನುವುದು ಸ್ಪಷ್ಟವಾಗುತ್ತದೆ"[೨] ಎಂದು ನಿರ್ಣಯಾತ್ಮಕವಾಗಿ ನುಡಿಯುತ್ತಾರೆ.

ಈ ದೃಷ್ಟಿಕೋನದ ಮೂಲಕವೇ ಅವರು ರನ್ನ ಮತ್ತು ಬ್ರಹ್ಮಶಿವನ ಕಾವ್ಯಗಳನ್ನು ಸಹ ವಿಶ್ಲೇಷಿಸುತ್ತಾರೆ. ಈ ಮೂಲಕ ಜೈನರು ತಮಗೆ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತಿಸ್ಪರ್ಧಿಗಳಾಗಿದ್ದ ಬ್ರಾಹ್ಮಣ ಧರ್ಮವನ್ನು ಮಾತ್ರ ವಿರೋಧಿಸಿದರೇ ಹೊರತು, ಇಡೀ ವರ್ಣ ವ್ಯವಸ್ಥೆಯನ್ನಲ್ಲ. ಹೀಗಾಗಿ, ಅವರ ವರ್ಣ ವಿರೋಧ ಅಥವಾ ಸಂಘರ್ಷ ಕೇವಲ ಬ್ರಾಹ್ಮಣ ವರ್ಣದೊಂದಿಗೆ ಮಾತ್ರ ಎಂದು ವಾದಿಸುತ್ತಾರೆ.

೫.೬.೩ ಜೈನ ಕವಿಗಳು ಜಾತಿ ವಿರೋಧಿಗಳಲ್ಲ; ಅದರ ಉಪಯೋಗವಾದಿಗಳು

ವರ್ಣ ವ್ಯವಸ್ಥೆ ಕುರಿತಂತೆಯೇ, ಜೈನ ಕವಿಗಳು ಜಾತಿ ವ್ಯವಸ್ಥೆ ಕುರಿತು ಸಹ ಸಂಪೂರ್ಣ ವಿರೋಧವನ್ನಾಗಲೀ ಅಥವಾ ಜಾತಿ ಪದ್ಧತಿಯ ಕೆಡುಕಿನಿಂದಾಗುವ ಅವಮಾನಗಳನ್ನಾಗಲೀ ವಸ್ತುನಿಷ್ಠವಾಗಿ ನಿರೂಪಿಸುವುದಿಲ್ಲ. ಇದಕ್ಕೆ ಬದಲಾಗಿ, ಬೇರೆಬೇರೆ ಜೈನ ಕವಿಗಳು ಅದನ್ನು ಬೇರೆಬೇರೆ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದು ಮಾಲಗತ್ತಿ ಅವರ ವಾದವಾಗಿದೆ. ಅಂಥ ಕೆಲವು ಪ್ರಮುಖ ಉದ್ದೇಶಗಳನ್ನು ಅವರು ಹೀಗೆ ನಿರೂಪಿಸುತ್ತಾರೆ. ಮೊದಲನೆಯದಾಗಿ, ಜೈನಮತದ ಪಾರಮ್ಯದ ಪ್ರತಿಪಾದನೆ ಮತ್ತು ಮತಾಂತರದ ಉದ್ದೇಶ; ಎರಡನೆಯದಾಗಿ, ಜೈನ ಕವಿಗಳ ಜಾತಿ ಕೀಳರಿಮೆ ಮೀರುವಿಕೆಯ ಉದ್ದೇಶ ಮತ್ತು ಕೊನೆಯದಾಗಿ, ಸಾಮಾಜಿಕ ಉನ್ನತಿ ಸಾಧನೆಯ ಉದ್ದೇಶ. ಈ ಉದ್ದೇಶಗಳನ್ನು ಸಹ, ಜೈನ ಕವಿಗಳು ಚಿತ್ರಿಸಿರುವ ಕೆಳಜಾತಿಗಳ ಪಾತ್ರಗಳ ಸ್ವರೂಪದ ಮೂಲಕ ವಿಶ್ಲೇಷಿಸುತ್ತಾರೆ ಎನ್ನುವುದು ಆಸಕ್ತಿದಾಯಕ ವಿಷಯ. ಇದನ್ನು ಮಾಲಗತ್ತಿ ಅವರು, ವಡ್ಡಾರಾಧನೆ ಕೃತಿಯಲ್ಲಿ ಚಿತ್ರಿತವಾಗಿರುವ ಕೆಳಜಾತಿಗಳಾದ ಹೊಲೆಯರು ಮತ್ತು ಮಾದಿಗರ ಪಾತ್ರಚಿತ್ರಣದ ಸ್ವರೂಪ ಹಾಗೂ ಭವಾವಳಿಗಳಲ್ಲಿ ಈ ಕೀಳುಜಾತಿ ಪಾತ್ರಗಳಿಗೆ ಪ್ರಾಪ್ತವಾಗುವ 'ಕನಿಷ್ಠಜಾತಿ' ಪ್ರಾಣಿಗಳ ಜನ್ಮಗಳು, ರೋಗರುಜಿನಗಳ ಚಿತ್ರಣದ ಹಿಂದೆ ಪ್ರಧಾನವಾಗಿ ಜೈನಮತದ ಪಾರಮ್ಯದ ಪ್ರತಿಪಾದನೆ ಹಾಗೂ ಮತಾಂತರದ ಉದ್ದೇಶ ಅಡಗಿರುವುದನ್ನು ಗುರುತಿಸುತ್ತಾರೆ. ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲಿ ಕೂಡಾ ಇದೇ ಕ್ರಮ ಇದೆ ಎಂದು ವಿವರಿಸುತ್ತಾರೆ.

ವೈದಿಕ ವರ್ಣ ವ್ಯವಸ್ಥೆ ಕುರಿತು ಹೇಗೆ ಪಂಪ ಸೀಮಿತ ಪ್ರಮಾಣದ ಪರಿಷ್ಕಾರಕ ಧೋರಣೆಯನ್ನು ಹೊಂದಿರುತ್ತಾನೆಯೋ, ಹಾಗೆಯೇ ಜಾತಿ ವ್ಯವಸ್ಥೆ ಕುರಿತ ಅವನ ನಿಲುವು ಸಹ ಮೂಲತಃ ಇದಕ್ಕಿಂತ ಭಿನ್ನವಾಗೇನೂ ಇಲ್ಲ ಎನ್ನುವುದು ಮಾಲಗತ್ತಿ ಅವರ ಖಚಿತವಾದ ನಿಲುವು. ಇದನ್ನು ಅವರು ಕವಿಯ ವೈಯಕ್ತಿಕ ಬದುಕಿನೊಂದಿಗೆ ತಳುಕು ಹಾಕುವ ಮೂಲಕ ವಿವರಿಸುತ್ತಾರೆ. ಹೀಗಾಗಿಯೇ, "ಜೈನ ಧರ್ಮೀಯನಾದ ಪಂಪ, ವೈದಿಕ ಧರ್ಮದೊಂದಿಗೆ ಸೆಣಸುತ್ತ ಸಾಕಷ್ಟು ನೋವುಂಡ ಕವಿ. ಕರ್ಣ ಅಸ್ಪೃಶ್ಯನೆನಿಸಿಕೊಂಡು ಸ್ವಧರ್ಮೀಯರಲ್ಲಿಯೇ ಅನ್ಯವರ್ಣಗಳಿಂದ ನೋವನ್ನು ಅನುಭವಿಸಿದಂತೆ, ಪಂಪನು ಅನ್ಯಧರ್ಮೀಯರಿಂದ ನೋವನ್ನು ಅನುಭವಿಸಿದ್ದಾನೆ. ಈ ಇಬ್ಬರೂ ಅನುಭವಿಸಿದ ನೋವಿನ ಬಗೆಯಲ್ಲಿ ಅಂತರಗಳಿದ್ದಾಗಲೂ ಈ ಅನುಭವಗಳು ಸಂಪೂರ್ಣ ಭಿನ್ನವಾದ ಅನುಭವಗಳೇನಲ್ಲ. ಅದರಲ್ಲೂ ಈ

ನೋವನ್ನು ಅನುಭವಿಸುವ ಮನಸ್ಸು ಒಂದೇ ಎನ್ನುವುದನ್ನು ಲಕ್ಷಿಸಬೇಕು. ಕಾವ್ಯದಲ್ಲಿ ಪಂಪನೇ ಕರ್ಣನಾಗಿ ಎದ್ದು ನಿಲ್ಲುವ ಪ್ರಸಂಗಗಳೇ ಹೆಚ್ಚು"[೩] ಎಂದು ಕರ್ಣನ ಪಾತ್ರದೊಂದಿಗೆ ಪಂಪನನ್ನು ಸಮೀಕರಿಸಿ ವಿಶ್ಲೇಷಿಸುತ್ತಾರೆ. ಇದು, ಜಾತಿಯ ಕೀಳರಿಮೆಯನ್ನು ಮೀರಿ ಸಾಮಾಜಿಕ ಉನ್ನತಿ ಸಾಧನೆಯ ಉದ್ದೇಶಕ್ಕಾಗಿ ಚಿತ್ರಿಸಿರುವ ಕ್ರಮಕ್ಕೆ ಒಂದು ಸೂಕ್ತವಾದ ನಿದರ್ಶನವೆಂದು ವಾದಿಸುತ್ತಾರೆ.

ರನ್ನನ ಕಾವ್ಯಗಳಲ್ಲಿನ ಜಾತಿ ನಿರೂಪಣೆಯ ಸ್ವರೂಪ ಕುರಿತಮಾಲಗತ್ತಿ ಅವರ ಅಭಿಪ್ರಾಯ ಕೂಡಾ ಬಹುಪಾಲು ಇದೇ ಮಾದರಿಯದ್ದೇ ಆಗಿದೆ. ಇದನ್ನು ಅವರು "ಜಾತಿ ವಿಷಯಕ್ಕೆ ಸಂಬಂಧಿಸಿದಂತೆ ರನ್ನ, ಈ ಮೇಲೆ ಚರ್ಚಿಸಲಾದ ಎರಡೂ ಕಾವ್ಯಗಳಲ್ಲಿ ನೇರವಾಗಿ ಎಲ್ಲಿಯೂ ಹೇಳಿರುವುದು ಕಂಡುಬರುವುದಿಲ್ಲ. ಆದರೆ ಅಲ್ಲಲ್ಲಿ ಉಲ್ಲೇಖಿತವಾದ ಜಾತಿಯ ವಿಚಾರಗಳನ್ನು ಗಮನಿಸಿದರೆ, ಜಾತಿಯನ್ನು ಸಾಮಾನ್ಯೀಕರಣಗೊಳಿಸಿ ಹೇಳುವುದು ಕಂಡುಬರುತ್ತದೆ. ಐದು ಮದಗಳಲ್ಲಿ ಕುಲ ಮತ್ತು ಜಾತಿ ಇವು ಎರಡನ್ನೂ ಗುರುತಿಸುತ್ತಾನೆ. ಆದರೆ ವಿಶೇಷವಾದ ಆದ್ಯತೆಯನ್ನು ಕೊಟ್ಟು ವಿವರಿಸುವುದಕ್ಕಾಗಲೀ, ಚರ್ಚಿಸುವುದಕ್ಕಾಗಲೀ ಇಳಿಯುವುದಿಲ್ಲ. ಹೀಗಾಗಲು ಮುಖ್ಯ ಕಾರಣ, ರನ್ನ ವೈಶ್ಯ ವರ್ಣಕ್ಕೆ ಸಂಬಂಧಿಸಿರುವುದೇ ಆಗಿದೆ. ತಾನು ಸಂಪೂರ್ಣವಾಗಿ ಕೆಳವರ್ಣದವನು ಅಲ್ಲದ್ದರಿಂದ ಹಾಗೂ ಸಂಪೂರ್ಣ ಮೇಲು ವರ್ಣಕ್ಕೆ ಸಂಬಂಧಪಡದವನಾಗಿರುವುದರಿಂದ 'ಜಾತಿ' ಎನ್ನುವುದು ರನ್ನನಿಗೆ ಅಷ್ಟಾಗಿ ಕಾಡಲು ಸಾಧ್ಯವಾಗಿಲ್ಲ. ಹೀಗಾಗಿ ರನ್ನನಲ್ಲಿ ಮೇಲು ಜಾತಿಯವರೊಂದಿಗೆ ಸ್ಥಾನಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವನೆ ಕೇಂದ್ರವಾಗಿರುವುದರಿಂದ ಜಾತಿಯ ಬಗ್ಗೆ ಮಾತನಾಡದೇ ಮೌನವಾಗಿರುವುದು ಆಶ್ಚರ್ಯಕರವಾದ ವಿಷಯವೇನಲ್ಲ"[೪] ಎಂದು ದೀರ್ಘವಾಗಿ ವಿಶ್ಲೇಷಿಸುತ್ತಾರೆ. ಇದಕ್ಕಿರುವ ಅನೇಕ ಕಾರಣಗಳಲ್ಲಿ ಆತನ ಆಶ್ರಯದಾತೆಯಾದ ಅತ್ತಿಮಬ್ಬೆ ಪೂರ್ವಾಶ್ರಮದಲ್ಲಿ ಬ್ರಾಹ್ಮಣವಂಶಕ್ಕೆ ಸೇರಿದಿದ್ದುದೇ ಪ್ರಧಾನವಾದ ಕಾರಣವೆಂದು ಅಭಿಪ್ರಾಯಪಡುತ್ತಾರೆ.

ಜೈನ ಸಾಹಿತ್ಯದಲ್ಲಿ ನಿರೂಪಿತವಾಗಿರುವ ಮತ್ತು ಪ್ರತಿಪಾದಿತವಾಗಿರುವ ವರ್ಣ, ವರ್ಗ ಮತ್ತು ಜಾತಿ ಪರಿಕಲ್ಪನೆ ಸ್ವರೂಪವನ್ನು ಮಾಲಗತ್ತಿ ಅವರು ಸಾಹಿತ್ಯ ಚರಿತ್ರೆಯ ಚಾರಿತ್ರಿಕ ವಿಧಾನಕ್ಕಿಂತ ಭಿನ್ನವಾಗಿ ವಿಶ್ಲೇಷಿಸುತ್ತಾರೆ ಎನ್ನುವುದು ಗಮನಾರ್ಹವಾದ ವಿಚಾರವೇ ಆಗಿದೆ. ಆದರೆ, ಅವರು ಅನುಸರಿಸುವ ನಿಷ್ಠುರವಾದ ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನವು ವಿಶ್ಲೇಷಣಾತ್ಮಕವಾಗಿ ಎಷ್ಟೇ ಉಪಯುಕ್ತವಾಗಿದ್ದರೂ, ವೈಧಾನಿಕತೆಯಲ್ಲಿ ಅದು ನವ್ಯದ ವಸ್ತುನಿಷ್ಠ ವಿಮರ್ಶೆಗಿಂತ ವಾಸ್ತವಿಕವಾಗಿ ಎಷ್ಟರಮಟ್ಟಿಗೆ ಭಿನ್ನವಾಗುತ್ತದೆ ಎನ್ನುವ ಪ್ರಶ್ನೆ ಏಳುತ್ತದೆ. ಏಕೆಂದರೆ, ವಸ್ತುನಿಷ್ಠ ವಿಮರ್ಶೆಯಲ್ಲಿ ಕಂಡುಬರುವ ಅಪ್ಪಟ 'ಕೃತಿನಿಷ್ಠತೆ'ಯಂತೆಯೇ, ಇಲ್ಲಿನ ಶುದ್ಧ 'ಸಂದರ್ಭನಿಷ್ಠತೆ' ಕೂಡಾ ಮಹತ್ವಪೂರ್ಣವಾದ ಹೊಸ ವಿಚಾರವನ್ನೂ ಹೇಳುವುದರಲ್ಲಿ ಸಫಲವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಮಾಲಗತ್ತಿ ಅವರ 'ಮನುಷ್ಯ ಜಾತಿ ತಾನೊಂದೆವಲಂ' ಹೇಳಿಕೆಯ ವಿಶ್ಲೇಷಣೆಯನ್ನೇ ಕುರಿತು ಆಲೋಚಿಸುವುದಾದರೆ, ಏಕೆ ಈ ಹೇಳಿಕೆ ಪಠ್ಯನಿರ್ದಿಷ್ಟ ಸಂದರ್ಭವನ್ನು ಮೀರಿ ಒಂದು ಮಹಾನ್ ಸೂಕ್ತಿಯಂತೆ ಕನ್ನಡದ ಮೌಖಿಕ ಮತ್ತು ಜನಪದ ಸಂಸ್ಕೃತಿಯಲ್ಲಿ ಸ್ವತಂತ್ರಾರ್ಥ ಪಡೆದುಕೊಂಡಿದೆ ಎನ್ನುವುದರ ಬಗೆಗೆ ಅವರು ಹೆಚ್ಚು ಆಸಕ್ತಿ ತಾಳಿರುವುದಿಲ್ಲ ಎನ್ನುವುದನ್ನು ಗಮನಿಸಬಹುದು. ಇದು, ಕಾವ್ಯದ ಅಥವಾ ಪಠ್ಯದ ಒಂದು ನಿರ್ದಿಷ್ಟ ಪಾತ್ರವೋ, ಪ್ರಸಂಗವೋ ಅಥವಾ ಹೇಳಿಕೆಯೋ ತಮ್ಮ ಮೂಲದ ನಿರ್ದಿಷ್ಟ ಆವರಣವನ್ನು ಮೀರಿ, ಕಾಲಾಂತರದಲ್ಲಿ ಭಿನ್ನ ಪಠ್ಯಗಳಾಗಿ ಮತ್ತು ಸ್ವತಂತ್ರ ಪಠ್ಯಗಳಾಗಿ ರೂಪುಗೊಳ್ಳುವ ಪ್ರಕ್ರಿಯೆಗೆ ಒಂದು ಬಹು ಮುಖ್ಯವಾದ ನಿದರ್ಶನವಾಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಇಂಥ ಬೃಹತ್ ಪರಂಪರೆಯೇ ಇದೆ. ಮಾದೇಶ್ವರ, ಮಂಟೇಸ್ವಾಮಿ ಮತ್ತು ಕುಮಾರರಾಮ ಮೊದಲಾದ ಇಂಥ ಹಲವು ನಿದರ್ಶನಗಳನ್ನು ಇಲ್ಲಿ ಉಲ್ಲೇಖಿಸಬಹುದು. ಈ ಕಾರಣದಿಂದಲೇ, ಪಂಪನ 'ಮನುಷ್ಯಜಾತಿ ತಾನೊಂದೆ ವಲಂ' ಮತ್ತು ಕುವೆಂಪು ಅವರ 'ವಿಶ್ವಮಾನವಪ್ರಜ್ಞೆ'ಗಳು'ಸಾವಯವತೆ' ಮತ್ತು 'ಸಾತತ್ಯತೆ'ಪರಿಕಲ್ಪನೆಗಳ ಮೂಲಕ ಸಂಬಂಧ ಏರ್ಪಡಿಸಿಕೊಳ್ಳುತ್ತವೆ, ಸಂಸ್ಕೃತಿಯ ಆವರಣದಲ್ಲಿ.

ಮಾಲಗತ್ತಿ ಅವರ ವಿಮರ್ಶಾ ಪ್ರಜ್ಞೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಂದರ್ಭದ ಈ ವಿದ್ಯಮಾನಕ್ಕೆ ವಿಮುಖವಾಗಿರುವುದಕ್ಕೆ, ಅವರು ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನವನ್ನು ಅನುಸರಿಸಿರುವುದೇ ಮುಖ್ಯವಾದ ಕಾರಣವಾಗಿದೆ. ಇದೇ ಸಂದರ್ಭದಲ್ಲಿ ಬಿ.ಎಂ. ಪುಟ್ಟಯ್ಯ ಅವರು ತಮ್ಮ ವಿಮರ್ಶಾ ಕೃತಿಯಲ್ಲಿನ 'ಕನ್ನಡ ಸಾಹಿತ್ಯ: ವರ್ಣ ಮತ್ತು ಜಾತಿ ಪರಿಕಲ್ಪನೆಗಳು' ('ಕದಡು' ೨೦೦೮) ಲೇಖನದಲ್ಲಿ ಈ ವಿಧಾನದ ಸ್ವರೂಪ ಕುರಿತು ಚರ್ಚಿಸುತ್ತಾ, "ಇದು ಸಾಹಿತ್ಯ ಕೃತಿಗಳಲ್ಲಿ ವರ್ಣ ಮತ್ತು ಜಾತಿಯ ಅಂಶಗಳನ್ನು ಹುಡುಕುವುದರ ಜೊತೆಗೆ ಸಾಹಿತಿಯ ಸಾಮಾಜಿಕ ಹಿನ್ನೆಲೆಗೆ ಹೆಚ್ಚು ಒತ್ತು ನೀಡುತ್ತದೆ. ಸಾಹಿತ್ಯ ಕೃತಿಯಲ್ಲಿರಬಹುದಾದ ವರ್ಣ ಮತ್ತು ಜಾತಿಯ ಅಂಶಗಳು ಸಾಹಿತಿಯ ವರ್ಣ ಜಾತಿಯ ಆಯ್ಕೆಯ ಫಲಗಳು ಎಂದು ನಂಬಲಾಗಿದೆ. ಸಾಹಿತ್ಯೇತರ ಆಕರಗಳ ಮೂಲಕ ಸಾಹಿತ್ಯವನ್ನು ತಿಳಿಯಲು ಪ್ರಯತ್ನಿಸಲಾಗುತ್ತದೆ"[೫] ಎಂದು ಹೇಳಿರುವ ಅಭಿಪ್ರಾಯಗಳು ಅತ್ಯಂತ ಮುಖ್ಯವಾದವುಗಳಾಗಿವೆ.

ಈ ಹಿನ್ನೆಲೆಯಿಂದ ಹೇಳುವುದಾದರೆ, ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಯಾವಾಗಲೂ ಇಂಥ ವಿಧಾನಕ್ಕೆ ಬದಲಾಗಿ, ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನವನ್ನು ಬಳಸುವುದು ಹೆಚ್ಚು ಸಮರ್ಪಕವಾದುದು. ಈ ಸಂದರ್ಭದಲ್ಲಿ, ಕುವೆಂಪು ಅವರ ಬದುಕು ಹಾಗೂ ಸಾಹಿತ್ಯದ ನಡುವೆ ಇದೆ ಎಂದು ಗುರುತಿಸಲಾಗಿದ್ದ ಕಂದರ ಅಥವಾ ವಿಪರ್ಯಾಸವನ್ನು ಕುರಿತ ಪ್ರಶ್ನೆಗೆ ಉತ್ತರಿಸುತ್ತಾ ತೇಜಸ್ವಿ ಅವರು, ತಮ್ಮ 'ಪರಂಪರೆ ಮತ್ತು ಕುವೆಂಪು' ('ವಿಮರ್ಶೆಯ ವಿಮರ್ಶೆ', ೨೦೦೯) ಲೇಖನದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಅವರು ತಮ್ಮ ಈ ಲೇಖನದಲ್ಲಿ,

ಸಾಹಿತ್ಯಾನುಸಂಧಾನದ ಸಂದರ್ಭದಲ್ಲಿ ಬಹಳ ಮುಖ್ಯವಾಗಿ, ಒಂದು ಭಾಷೆಯಲ್ಲಿ ರೂಪುಗೊಳ್ಳುವ ಕೃತಿಗೂ ಮತ್ತು ಅದಕ್ಕೆ ಆಧಾರವಾಗಿರುವ ಸಂಸ್ಕೃತಿಗೂ ಇರುವ ಸಂಬಂಧವನ್ನು ಗ್ರಹಿಸುವುದು ಯಾವಾಗಲೂ ಅತ್ಯಂತ ಮುಖ್ಯ ಎನ್ನುವುದನ್ನು ವಿವರಿಸುತ್ತಾರೆ. ಇದರ ಸ್ವರೂಪವನ್ನು ಕುರಿತು ಚರ್ಚಿಸುತ್ತಾ ತೇಜಸ್ವಿ ಅವರು, "ಪ್ರತಿ ಬರಹಗಾರನೂ ತನ್ನ ಕಾಲ ಮತ್ತು ವ್ಯಕ್ತಿತ್ವಕ್ಕೆ ತಕ್ಕಂತೆ ತನ್ನ ಸೃಷ್ಟಿಯ ಮುಖಾಂತರ ಆ ಭಾಷೆಯನ್ನಾಡುವ ಜನಾಂಗದ ಪರಂಪರೆಯ ಬಗ್ಗೆ ತನ್ನದೇ ಆದೊಂದು ಧೋರಣೆಗಳನ್ನು ತಿಳಿವಳಿಕೆಯನ್ನೂ ಹೊಮ್ಮಿಸುತ್ತಾನೆ. ಇದು ಆ ಬರಹಗಾರ ತನ್ನ ಜನಾಂಗದ ಚರಿತ್ರೆಯ ಮತ್ತು ಪರಂಪರೆಯ ಬಗ್ಗೆ ಎಷ್ಟೇ ನಿರ್ಲಕ್ಷ್ಯ ಮತ್ತು ಉದಾಸೀನದಿಂದಿದ್ದರೂ ಅವುಗಳನ್ನೆಲ್ಲಾ ಮೀರಿ ಅಪ್ರಜ್ಞಾಪೂರ್ವಕವಾಗಿ ನಡೆಯುವ ಕ್ರಿಯೆ.

ಆದ್ದರಿಂದ, ಒಬ್ಬ ಕವಿ ಪ್ರಜ್ಞಾಪೂರ್ವಕವಾಗಿ ತಾನು ಯಾವ ಜಾತಿ, ಯಾವ ಸಂಪ್ರದಾಯಸ್ಥ ಯಾವ ಪಂಥದವನು ಎಂದು ಘೋಷಿಸಿಕೊಂಡರೂ ಅವನ ಸಾಹಿತ್ಯ ಪರಂಪರೆಯನ್ನು ವಿಶ್ಲೇಷಿಸ ಹೊರಟಾಗ ಇವೆಲ್ಲಾ ಗೌಣವಾಗುತ್ತವೆ. ಅಲ್ಲಿ ನಮಗೆ ಮುಖ್ಯವಾದುದು ಕವಿ ತನ್ನ ಕಲಾ ನಿರ್ಮಿತಿಯ ಸಂದರ್ಭದಲ್ಲಿ ವ್ಯಕ್ತಪಡಿಸುವ ಚಾರಿತ್ರಿಕ ಪ್ರಜ್ಞೆ ಮತ್ತು ಕಾರ್ಯಪ್ರವೃತ್ತವಾಗಿರುವ ಚಾರಿತ್ರಿಕ ಒತ್ತಡಗಳು"[೬] ಎಂದು ಹೇಳಿರುವ ಮಾತುಗಳಲ್ಲಿ ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನದ ಮಹತ್ವವನ್ನು ನಿರೂಪಿಸುವ ಹಲವು ಮುಖ್ಯವಾದ ವಿಚಾರಗಳಿವೆ.

ಈ ಹಿನ್ನೆಲೆಯ ಮೂಲಕ ಗಮನಿಸುವುದಾದರೆ, ಜೈನಕವಿಗಳ ಬ್ರಾಹ್ಮಣವರ್ಣನಿರ್ದಿಷ್ಟ ವರ್ಣವಿರೋಧ ಅಥವಾ ವರ್ಣ ಸಂಘರ್ಷವು ಕನ್ನಡ ಸಾಹಿತ್ಯದ ಅಂತರ್ವಾಹಿನಿಯಾಗಿಯೇ ಮುಂದುವರೆದುಕೊಂಡು ಬಂದಿದೆ ಎಂದು ತೇಜಸ್ವಿ ಅವರು ಹೇಳುವುದಕ್ಕೂ ಮತ್ತು ಇಂಥ ಬ್ರಾಹ್ಮಣ ವರ್ಣದ ಮೌಲ್ಯಪ್ರತಿಪಾದನೆಯ ಪಠ್ಯವಾದ 'ಮನು ಧರ್ಮಶಾಸ್ತ್ರ' ಒಂದನ್ನು ಮಾತ್ರವೇ ಅಂಬೇಡ್ಕರ್ ಸಾಂಕೇತಿಕವಾಗಿ ಸುಡುವುದಕ್ಕೂ ಪರಸ್ಪರ ಸಂಬಂಧಗಳಿವೆ. ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನು ಸಂಧಾನದಲ್ಲಿ ಇವೂ ಕೂಡಾ ಅತ್ಯಂತ ಮುಖ್ಯವಾದ ವಿಚಾರಗಳೇ.

೫.೭ ಬರಗೂರು ಅವರ ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನದ ಸ್ವರೂಪ

ಕನ್ನಡದ ಎಡಪಂಥೀಯ ವಿಮರ್ಶೆಯ ಚರಿತ್ರೆಯ ದೃಷ್ಟಿಯಿಂದ ಬರಗೂರು ರಾಮಚಂದ್ರಪ್ಪ ಅವರು ಅತ್ಯಂತ ಮಹತ್ವಪೂರ್ಣವಾದ ವಿಮರ್ಶಕರಾಗಿದ್ದಾರೆ. ಆರಂಭಿಕ ಹಂತದಲ್ಲಿ ಎಡಪಂಥೀಯ ವಿಮರ್ಶೆಗೆ ಅತ್ಯಗತ್ಯವಾಗಿ ಬೇಕಿದ್ದಂಥ ತಾತ್ವಿಕ ತಳಹದಿಯನ್ನು ಗಟ್ಟಿಯಾಗಿ ಕಟ್ಟುವ ವಿಚಾರದಲ್ಲಿ ಅವರು ವಹಿಸಿರುವ ಬಹುಮುಖಿಯಾದ ಶ್ರಮ ಬಹಳ ಅರ್ಥಪೂರ್ಣವಾದದ್ದಾಗಿದೆ. ನವ್ಯದ ಆಕೃತಿ ಪ್ರಧಾನ ರೂಪನಿಷ್ಠ ವಿಮರ್ಶೆಗೆ ತೀವ್ರ ವಿರೋಧ ವ್ಯಕ್ತಪಡಿಸುವ ಮೂಲಕ ನವ್ಯೋತ್ತರ ಘಟ್ಟದಲ್ಲಿ ಹಲವು ಹೊಸ ವಿಮರ್ಶಾ ಪ್ರಕಾರಗಳು ಹುಟ್ಟಿಕೊಂಡವು. ಹೀಗಾಗಿಯೇ ಇವು, ಆಶಯ ಪ್ರಧಾನ ಸಮಾಜ ನಿಷ್ಠತೆಯನ್ನು ತಮ್ಮ

ಪ್ರಮುಖ ತಾತ್ವಿಕತೆಯನ್ನಾಗಿ ಅಳವಡಿಸಿಕೊಳ್ಳಬೇಕಾದುದು ಅಂದಿನ ಐತಿಹಾಸಿಕ ಸಂದರ್ಭದ ಹಿನ್ನೆಲೆಯಲ್ಲಿ ಅತ್ಯಂತ ಸಹಜವಾದ ಸಂಗತಿಯೇ ಆಗಿತ್ತು. ಆದರೆ, ಹದ ಮೀರಿದ ಆಶಯ ಪ್ರಧಾನತೆಯು ತನ್ನ ಅಂತಿಮ ಹಂತದಲ್ಲಿ ಸಾಹಿತ್ಯ ವಿಮರ್ಶೆಯನ್ನು ಕೇವಲ ಸಾಮಾಜಿಕ ಅವಲೋಕನದ ಒಂದು ಸಾಹಿತ್ಯಕರೂಪ ಮಾತ್ರವಾಗಿ ಪರಿವರ್ತಿಸುವ ಅಪಾಯ ಸಹ ವಿಮರ್ಶೆಯಲ್ಲಿ ಯಾವಾಗಲೂ ಇದ್ದೇ ಇರುತ್ತದೆಯಷ್ಟೆ.

ಇಂಥ ಕ್ಲಿಷ್ಟಕರ ಸನ್ನಿವೇಶದಲ್ಲಿ ಸಾಹಿತ್ಯ ವಿಮರ್ಶೆಯನ್ನು, ಕೇವಲ ಸಮಾಜ ಮತ್ತು ಸಂಸ್ಕೃತಿ ಪ್ರಶ್ನೆಗಳು ಸಾಹಿತ್ಯದಲ್ಲಿ ಪ್ರತಿಬಿಂಬಿತ ಅಥವಾ ಪ್ರತಿನಿಧಿತವಾಗಿರುವ ಸ್ವರೂಪ ಕುರಿತ ವಿಶ್ಲೇಷಣೆ ಹಾಗೂ ಮೌಲ್ಯಮಾಪನಗಳ ಚಟುವಟಿಕೆ ಎನ್ನುವ ಸೀಮಿತಾರ್ಥಕ್ಕಿಂತ ವ್ಯಾಪಕವಾದ ಉನ್ನತಾರ್ಥದಲ್ಲಿ ಪರಿಭಾವಿಸಬೇಕಾಗುತ್ತದೆ. ಹಾಗೆ ನೋಡುವುದಾದರೆ ಇದು, ಚಾರಿತ್ರಿಕವಾಗಿ ವಿಮರ್ಶಕರಿಗೆ ಎದುರಾಗುವ ಅತ್ಯಂತ ಕಠಿಣವಾದ ಸವಾಲು ಮತ್ತು ಸಾಂಸ್ಕೃತಿಕ ಹೊಣೆಗಾರಿಕೆಯೂ ಹೌದು; ಹಾಗೆಯೇ ಕೇವಲ ವ್ಯಕ್ತಿಗತ ನೆಲೆಯನ್ನಷ್ಟೇ ಅಲ್ಲದೆ ಸಾಮೂಹಿಕ ನೆಲೆಯನ್ನು ಒಳಗೊಂಡಿರುವಂಥಹದೂ ಹೌದು. ಇಂಥ ಸಂಕೀರ್ಣ ಅವಸ್ಥೆಯಲ್ಲಿ ಕನ್ನಡ ಎಡಪಂಥೀಯ ವಿಮರ್ಶೆಯನ್ನು ರೂಪಿಸುವ ಜವಾಬ್ದಾರಿಯನ್ನು ಅತ್ಯಂತ ಉತ್ಸಾಹ ಮತ್ತು ಬದ್ಧತೆಯಿಂದ ಬರಗೂರು ಅವರು ನಿರ್ವಹಿಸಿರುತ್ತಾರೆ. ಇದಕ್ಕೆ ಅವರ ವಿಮರ್ಶಾ ಬರಹಗಳ ಮಹತ್ವದ ಸಂಕಲನವಾಗಿರುವ 'ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ' (೨೦೦೧) ಕೃತಿ ಒಂದು ಅತ್ಯುತ್ತಮ ನಿದರ್ಶನವಾಗಿದೆ.

೫.೭.೧ ಸಾಂಪ್ರದಾಯಕ ಮೌಲ್ಯವ್ಯವಸ್ಥೆಗೆ ಶರಣಾದ ಸೂಕ್ಷ್ಮ ಸಂವೇದನಾಶೀಲ ಪ್ರಜ್ಞೆ

ಬೇಂದ್ರೆ ಕನ್ನಡದ ಬಹು ಶ್ರೇಷ್ಠ ಕವಿ. ಇವರ ಕಾವ್ಯ ಅತ್ಯಂತ ವಿಸ್ತಾರವಾದ ಮತ್ತು ವೈವಿಧ್ಯಮಯವಾದನೆಲೆಗಳಿಂದ ಸಮೃದ್ಧವಾಗಿದೆ. ಸಹಜವಾಗಿಯೇ ಬೇಂದ್ರೆಯವರೂ ಕೂಡಾ, ನಮ್ಮ ಸಮಕಾಲೀನ ಮಹತ್ವದ ಕವಿಗಳಂತೆಯೇ ನವೋದಯ ಕಾಲಘಟ್ಟದ ಪ್ರಮುಖ ಆಶೋತ್ತರಗಳ ಕಾವ್ಯಾತ್ಮಕ ಧ್ವನಿಯಾಗಿದ್ದಾರೆ. ಆದರೆ ವಸ್ತು ವೈವಿಧ್ಯತೆ, ಗ್ರಹಿಕೆಯ ವಿಶಿಷ್ಟತೆ ಮತ್ತು ಅಭಿವ್ಯಕ್ತಿಯ ಅನನ್ಯತೆಗಳ ಕಾರಣದಿಂದ ಬೇಂದ್ರೆಯವರ ಕಾವ್ಯ ಕೇವಲ ತನ್ನ ಕಾಲಘಟ್ಟದ ಕನ್ನಡ ಕಾವ್ಯದಿಂದ ಮಾತ್ರವಲ್ಲದೆ, ಸಮಗ್ರ ಕನ್ನಡ ಕಾವ್ಯ ಪರಂಪರೆ ದೃಷ್ಟಿಯಿಂದ ಸಹ ಅತ್ಯುನ್ನತ ಸ್ಥಾನ ಗಳಿಸಿದೆ.

ಬೇಂದ್ರೆ ಕಾವ್ಯ ಜಗತ್ತಿನಲ್ಲಿ ಮುಖ್ಯವಾಗಿ ದಾಂಪತ್ಯ, ಕೌಟುಂಬಿಕ, ಆನುಭಾವಿಕ, ಕಾವ್ಯಮೀಮಾಂಸಕ ಮತ್ತು ಸಾಮಾಜಿಕ ನೆಲೆಗಳನ್ನು ಗುರುತಿಸಲಾಗಿದೆ. ಕುವೆಂಪು ಅವರನ್ನು ಹೊರತುಪಡಿಸಿದರೆ, ಬೇಂದ್ರೆ ಒಬ್ಬರೇ ಸಮಕಾಲೀನ ನವೋದಯ ಕವಿಗಳ ಪೈಕಿ ಅತ್ಯಂತ ಪ್ರಖರ ಸಾಮಾಜಿಕ ಪ್ರಜ್ಞೆಯನ್ನುಳ್ಳ ಕವಿ. ಆದರೆ, ಇವರಿಬ್ಬರ ಸಾಮಾಜಿಕ ಕವನಗಳ ಗ್ರಹಿಕೆಯ ಸ್ವರೂಪ ಅನೇಕ ಅಂಶಗಳಲ್ಲಿ ಮೂಲಭೂತವಾಗಿ ಭಿನ್ನವಾಗಿದೆ. ಇಷ್ಟಾದರೂ ಕನ್ನಡ ಸಾಹಿತ್ಯ ವಿಮರ್ಶೆ,ನವ್ಯೋತ್ತರ ಘಟ್ಟದ ದಲಿತ ಮತ್ತು ಬಂಡಾಯ ವಿಮರ್ಶೆಗಳು ರೂಪುಗೊಳ್ಳುವವರೆಗೂ ಬೇಂದ್ರೆಯವರ ಸಾಮಾಜಿಕ ಕವನಗಳ ಅರ್ಥಪೂರ್ಣ ಅನುಸಂಧಾನವನ್ನೇ

ಮಾಡಿರಲಿಲ್ಲ. ಈ ಹಿನ್ನೆಲೆಯಲ್ಲಿ, ಬರಗೂರು ಅವರ 'ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ' ('ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ', ೨೦೦೧) ಎನ್ನುವ ವಿಮರ್ಶಾ ಲೇಖನಕ್ಕೆ ಚಾರಿತ್ರಿಕವಾಗಿ ಅತ್ಯಂತ ಮಹತ್ವವಿದೆ.

ಬರಗೂರು ಅವರು, ಈ ಲೇಖನದ ಆರಂಭದಲ್ಲಿ ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನಕ್ಕೆ ಪೂರ್ವಪೀಠಿಕೆಯಾಗಿ ಸೂಕ್ತವಾದ ತಾತ್ವಿಕ ನೆಲೆಗಟ್ಟೊಂದನ್ನು ರೂಪಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅವರು ಹೇಳುವ, ಲೇಖಕ ಅಥವಾ ಸಾಹಿತಿಯೊಬ್ಬನ ಸಾಮಾಜಿಕ ಗ್ರಹಿಕೆ ಮತ್ತು ಧೋರಣೆಗಳ ಸ್ವರೂಪಕ್ಕನುಸಾರವಾಗಿ ಅವನ ಸಾಮಾಜಿಕ ನಿಲುವುಗಳು ಹಾಗೂ ಆಶಯಗಳು ರೂಪುಗೊಳ್ಳುತ್ತವೆ. ಸಾಹಿತಿಯೊಬ್ಬ ಸಮಾಜ ಕುರಿತು ಹೊಂದಿರುವ ವ್ಯಕ್ತಿಗತ ಧೋರಣೆಗೂ ಮತ್ತು ಆತನ ಸಾಮಾಜಿಕ ಸಂದರ್ಭ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಗೂ ನಿಕಟವಾದ ಸಂಬಂಧವಿದೆ. ಆದ್ದರಿಂದಲೇ, ಆತನ ಸಾಮಾಜಿಕ ಧೋರಣೆ ಸಾಂಸ್ಕೃತಿಕ ಪರಿಸರದ ಸಾಂಪ್ರದಾಯಕ ಮೌಲ್ಯವ್ಯವಸ್ಥೆಯಿಂದ ನಿರ್ಧರಿತವಾದದ್ದೋ ಅಥವಾ ವ್ಯಕ್ತಿಗತ ಆಧುನಿಕ ಮೌಲ್ಯಾನ್ವೇಷಕ ಮನೋಭಾವದಿಂದ ಪ್ರೇರೇಪಿತವಾದದ್ದೋ ಎನ್ನುವುದು ಸಾಹಿತ್ಯದ ಸಾಮಾಜಿಕಾನುಸಂಧಾನದಲ್ಲಿ ಬಹಳ ಮುಖ್ಯವಾದ ಪ್ರಶ್ನೆಯಾಗಿದೆ ಎನ್ನುವ ವಿಚಾರಗಳು ಅತ್ಯಂತ ಅರ್ಥಪೂರ್ಣವಾದವುಗಳಾಗಿವೆ.

ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನಕ್ಕೆ ಬರಗೂರು ಅವರು ಭೌತವಾದಿ ಒಳನೆಲೆ ವಿಧಾನ ಉಪಯೋಗಿಸುತ್ತಾರೆ. ಹೀಗಾಗಿಯೇ ಅವರು, ಲೇಖಕನೊಬ್ಬ ನಿರ್ದಿಷ್ಟ ಪರಿಸರದ ಸಾಮಾಜಿಕ ಸಂಗತಿಗಳು ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಸಾಹಿತ್ಯಾಭಿವ್ಯಕ್ತಿ ರೂಪ ಕೊಡುವಾಗ, ಅವುಗಳನ್ನು ಕುರಿತು ಆತ ಹೊಂದಿರುವ 'ಧೋರಣೆ'ಯ 'ಮಟ್ಟ' ಅಥವಾ 'ಸ್ತರ' ಯಾವುದು ಎನ್ನುವುದು ಬಹಳ ಪ್ರಮುಖ ಸಂಗತಿಯಾಗಿದೆ ಎಂದು ಹೇಳುತ್ತಾರೆ. ಅಂದರೆ, ಸಮಾಜ ಕುರಿತ ಆತನ ಧೋರಣೆ 'ಅರಿವಿನ' ಮಟ್ಟದ್ದೋ ಅಥವಾ 'ಪ್ರಜ್ಞೆ'ಯ ಮಟ್ಟದ್ದೋ ಎನ್ನುವುದರ ಮೇಲೆ ಸಾಹಿತಿಯೊಬ್ಬನ ಸಾಮಾಜಿಕ ಸಂವೇದನೆ ರೂಪುಗೊಳ್ಳುತ್ತದೆ. ಸಾಮಾಜಿಕ ಗ್ರಹಿಕೆ 'ಅರಿವಿನ' ಮಟ್ಟವನ್ನು ಮೀರಿ, 'ಪ್ರಜ್ಞೆ'ಯ ಮಟ್ಟದಲ್ಲಿ ಪ್ರಕಟಗೊಂಡಿರುವ ಸಾಹಿತಿಯ ಸಾಮಾಜಿಕ ರಚನೆಗಳು ಮಾತ್ರ ಅರ್ಥಪೂರ್ಣವಾದವು. ಹಾಗಿಲ್ಲದೆ ಹೋದರೆ, ಕಲಾತ್ಮಕವಾಗಿ ಅವು ಎಷ್ಟೇ ಶ್ರೇಷ್ಠ ಕೃತಿಗಳಾಗಿದ್ದರೂ ಸಹ, ಅವುಗಳಿಗೆ ಒಂದು ಭಾಷಿಕ ಪರಿಸರದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಸ್ತುತತೆ ಪ್ರಾಪ್ತವಾಗುವುದಿಲ್ಲ. ಹೀಗಾಗಿಯೇ ಕೊನೆಗೆ ಅವು, ಲೇಖಕನೊಬ್ಬ ತನ್ನ ಕಣ್ಣೆದುರಿನ ಸಾಮಾಜಿಕ ವಿಷಮತೆಗಳು ಹಾಗೂ ಅನ್ಯಾಯಗಳನ್ನು ಕುರಿತು ವ್ಯಕ್ತಪಡಿಸಿದ ಹೃದಯಂಗಮ ಭಾವಾಭಿವ್ಯಕ್ತಿ ರೂಪಗಳಾಗಿ ಮಾತ್ರವೇ ಉಳಿದುಬಿಡುತ್ತವೆ. ಸಾಹಿತಿಯ ಸಾಮಾಜಿಕ ರಚನೆಗಳು ಇಂಥ ಅಪಾಯದಿಂದ ಪಾರಾಗಬೇಕಾದರೆ, ಆತ ಸಮಾಜವನ್ನು ನೋಡುವ ಕ್ರಮದಲ್ಲಿರುವ ತೀವ್ರತೆ, ಅದನ್ನು ಪರಿಭಾವಿಸುವ ಸ್ವರೂಪದಲ್ಲಿರುವ ಪ್ರಾಮಾಣಿಕತೆ ಮತ್ತು ಅಭಿವ್ಯಕ್ತಿಸುವ ವಿಧಾನದಲ್ಲಿರುವ

ಅನನ್ಯತೆಗಳಿಗೆ ಮೂಲಾಧಾರವಾಗಿ, ಆ ವಿಷಮ ಸಮಾಜದ ಅಮಾನವೀಯ ನೆಲೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸುಧಾರಿಸುವ ಅಥವಾ ಬದಲಾಯಿಸುವ ನೈತಿಕ ಕಾಳಜಿ ಆತನ ಮುಖ್ಯವಾದ ಬೆನ್ನೆಲುಬಾಗಿರಬೇಕಾಗುತ್ತದೆ. ಆಗ ಮಾತ್ರವೇ, ಅಂಥ ಸಾಹಿತಿಯೊಬ್ಬನ ಸಾಮಾಜಿಕ ರಚನೆಗಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ ಚಾರಿತ್ರಿಕವಾಗಿ ದೊರೆಯುತ್ತದೆ ಎನ್ನುವುದು ಬರಗೂರು ಅವರ ಬಹುಮುಖ್ಯ ನಿಲುವು.

ಈ ತಾತ್ವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಬರಗೂರು ಅವರು, ಕನ್ನಡ ನವೋದಯ ಕಾಲಘಟ್ಟ ಮತ್ತು ಕನ್ನಡ ಕಾವ್ಯ ಪರಂಪರೆಯ ಶ್ರೇಷ್ಠ ಕವಿಯಾದ ಬೇಂದ್ರೆಯವರ ಕಾವ್ಯವನ್ನು ಸಾಮಾಜಿಕಾನುಸಂಧಾನಕ್ಕೆಒಳಪಡಿಸುತ್ತಾರೆ. ಬೇಂದ್ರೆಯವರ ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸಾಮಾಜಿಕ ಪ್ರಶ್ನೆಗಳು, ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಷಮತೆಗಳ ಸ್ವರೂಪವನ್ನು 'ಸಾಮಾಜಿಕ ಪ್ರಜ್ಞೆ'ಯ ಪರಿಕಲ್ಪನೆ ಮೂಲಕ ತೀವ್ರವಾದ ವಿಶ್ಲೇಷಣೆಗೆ ಗುರಿಪಡಿಸುತ್ತಾರೆ. ಬರಗೂರು ಅವರ ಈ ವಿಶ್ಲೇಷಣೆಯು ಪ್ರಧಾನವಾಗಿ, ಬೇಂದ್ರೆಯವರ ಸಾಮಾಜಿಕ ಕಾವ್ಯದ ಆಶಯಾತ್ಮಕ ನೆಲೆಯನ್ನು ಕೇಂದ್ರೀಕರಿಸಿದೆ. ಆಕೃತಿಯಾತ್ಮಕ ನೆಲೆಗೆ ಸಂಬಂಧಿಸಿದಂತೆ ಅವರಿಗೆ ಯಾವುದೇ ಗಂಭೀರವಾದ ತಕರಾರುಗಳಿಲ್ಲ.

ಬೇಂದ್ರೆಯವರ ಸಾಮಾಜಿಕ ಕಾವ್ಯದ ಆಶಯಾತ್ಮಕ ನೆಲೆಯ ವಿಶ್ಲೇಷಣೆಯಲ್ಲಿ, ಬರಗೂರು ಅವರು ಪ್ರಮುಖವಾದ ಮೂರು ಸಂಗತಿಗಳನ್ನು ಕುರಿತು ಕವಿಯ ಧೋರಣೆ ಏನಿದೆ ಎನ್ನುವುದನ್ನು ಮುಖ್ಯ ಪ್ರಶ್ನೆಯಾಗಿ ಹಾಕಿಕೊಳ್ಳುತ್ತಾರೆ. ಅವುಗಳೆಂದರೆ ಅ. ಸಾಮಾಜಿಕ ಸಮಸ್ಯೆ ಕುರಿತ ಕವಿಯ ಗ್ರಹಿಕೆ ಮತ್ತು ನಿಲುವು ಏನು. ಆ. ಈ ಸಮಸ್ಯೆಯ ಮೂಲ ಕುರಿತ ಗ್ರಹಿಕೆ ಮತ್ತು ನಿಲುವು ಏನು ಮತ್ತು ಇ. ಇದರ ಪರಿಹಾರೋಪಾಯ ಕುರಿತ ಗ್ರಹಿಕೆ ಮತ್ತು ನಿಲುವು ಏನು. ಮುಖ್ಯವಾಗಿ, ಈ ಮೂರು ಮುಖ್ಯ ಪ್ರಶ್ನೆಗಳು ಬರಗೂರು ಅವರ ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನದ ತಾತ್ವಿಕತೆಯನ್ನು ರೂಪಿಸಿವೆ.

ಬೇಂದ್ರೆ ಕಾವ್ಯದ ಸಾಮಾಜಿಕಾನುಸಂಧಾನ ಅಥವಾ ನಿರ್ದಿಷ್ಟವಾಗಿ ಹೇಳುವುದಾದರೆ, ಬೇಂದ್ರೆಯವರ ಸಾಮಾಜಿಕ ಕಾವ್ಯದ ಆಶಯಾತ್ಮಕ ವಿಶ್ಲೇಷಣೆ ಮಾಡುವಾಗ ಬರಗೂರು ಅವರು ಹಲವು ಎಚ್ಚರಿಕೆಗಳನ್ನು ವಹಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಗುರುತಿಸಿಕೊಳ್ಳುವುದಾದರೆ, ಮೊದಲನೆಯದಾಗಿ, ಬೇಂದ್ರೆಯವರು ಕಾವ್ಯ ರಚನೆ ಮಾಡುತ್ತಿದ್ದ ಕಾಲಘಟ್ಟದ ಪರಿಸರ ಹಾಗೂ ಸಂದರ್ಭ ಕುರಿತ ಪ್ರಜ್ಞಾಪೂರ್ವಕವಾದ ಎಚ್ಚರಿಕೆ ಮತ್ತು ಎರಡನೆಯದಾಗಿ, ಕವಿಯ ಕಾವ್ಯವ್ಯಕ್ತಿತ್ವವನ್ನು ರೂಪಿಸಿರುವುದರ ಹಿನ್ನೆಲೆಯಲ್ಲಿರುವ ಅವರು ಬೆಳೆದು ಬಂದ ಬದುಕಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರ ಬೀರಿರುವ ಪ್ರಭಾವ ಕುರಿತ ವಿಮರ್ಶಾತ್ಮಕ ಗ್ರಹಿಕೆ. ಈ ಕಾರಣದಿಂದಾಗಿಯೇ ಬರಗೂರು ಅವರು, ಬೇಂದ್ರೆಯವರ ಸಾಮಾಜಿಕ ಕಾವ್ಯದ ತೀಕ್ಷ್ಣವಾದ ವಿಮರ್ಶೆ ಮಾಡುವಾಗಲೂ ಸಹ, ಕವಿ ಪ್ರತಿಯೊಂದು ಪದ್ಯದಲ್ಲೂ ತಾನೇ ಪ್ರತಿಭಟನಕಾರನಾಗಿ ಬರಬೇಕಾಗಿತ್ತು ಎಂದಾಗಲೀ ಅಥವಾ ನಿರ್ದಿಷ್ಟ

ಪರಿಹಾರೋಪಾಯವನ್ನು ಕಡ್ಡಾಯವಾಗಿ ಸೂಚಿಸಬೇಕಾಗಿತ್ತು ಎಂದಾಗಲೀ ಹೇಳುವುದಿಲ್ಲ. ಎಂದರೆ, ಕವಿಯನ್ನು ಸಾಮಾಜಿಕ ಕ್ರಾಂತಿಕಾರಿಯೆಂದೋ ಅಥವಾ ಸಮಾಜ ಸುಧಾರಕನೆಂದೋ ಭಾವಿಸುವುದಿಲ್ಲ. ಆದರೆ, ಸಾಮಾಜಿಕ ಕಾವ್ಯವನ್ನು ರಚಿಸುವ ಸೂಕ್ಷ್ಮ ಸಂವೇದನಾಶೀಲತೆ ಹಾಗೂ ಪ್ರಖರ ಚಿಕಿತ್ಸಕ ಪ್ರಜ್ಞೆಯುಳ್ಳ ಕವಿ ಕಾವ್ಯಾಂತ್ಯದಲ್ಲಿ ತಾಳುವ ನಿಲುವಿನ ಸ್ವರೂಪ ಮತ್ತು ಅದಕ್ಕೆ ಕಾರಣವಾಗಿರುವ ಸಂಗತಿಗಳ ತೀವ್ರವಾದ ಹಿಡಿತ ಕುರಿತು ಆಲೋಚಿಸುವಾಗ, ಕವಿಯನ್ನು ಕುರಿತು ಬರಗೂರು ಅವರು ಎತ್ತುವ ಪ್ರಶ್ನೆಗಳಿಗೆ ಗಂಭೀರವಾದ ಸಾಂಸ್ಕೃತಿಕವಾದ ಆಯಾಮಗಳಿವೆ.

ಈ ಕಾರಣದಿಂದಾಗಿಯೇ, ಬರಗೂರು ಅವರ ಈ ಲೇಖನ ಕನ್ನಡ ಎಡಪಂಥೀಯ ಸಾಂಸ್ಕೃತಿಕ ವಿಮರ್ಶಾ ಮಾದರಿಯ ಒಂದು ಅತ್ಯುತ್ತಮ ಬರಹವಾಗಿದೆ.

ಬರಗೂರು ಅವರು, ಬೇಂದ್ರೆಯವರ ಸಾಮಾಜಿಕ ಕಾವ್ಯದ ಬಹುಜನಪ್ರಿಯವಾದ ಹಾಗೂ ಅತ್ಯುತ್ತಮವಾದ ಕವನಗಳನ್ನು ಸಾಮಾಜಿಕಾನುಸಂಧಾನಕ್ಕಾಗಿ ಆಯ್ಕೆಮಾಡಿಕೊಳ್ಳುತ್ತಾರೆ. ಈ ಎಲ್ಲಾ ಕವನಗಳಲ್ಲೂ, ಸಾಮಾಜಿಕ ಸಮಸ್ಯೆಗಳು ಮತ್ತು ವಿಷಮತೆಗಳನ್ನು ಕುರಿತು ಬೇಂದ್ರೆಯವರು ಪ್ರಖರವಾದ ಪ್ರಶ್ನೆಗಳನ್ನು ಎನ್ನುತ್ತಾರೆ ಎನ್ನುವುದಷ್ಟೇ ಇವುಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಇರುವ ಮುಖ್ಯ ಕಾರಣವಾಗಿಲ್ಲ. ಬದಲಾಗಿ ಇವುಗಳಲ್ಲಿ ಸಾಮಾಜಿಕ ಸಮಸ್ಯೆಗಳು, ವಿಷಮತೆಗಳು ಮತ್ತು ಅನ್ಯಾಯಗಳು ಮೊದಲಾದವುಗಳನ್ನು, ಕೇವಲ ವಸ್ತುವೈವಿಧ್ಯತೆಯ ರೂಪಗಳಾಗಿ ಮಾತ್ರ ಭಾವಿಸಲಾಗಿದೆಯೇ, ಅದ್ಭುತ ನಿರ್ವಹಣಾ ಕುಶಲತೆಯ ಮೂಲಕ ವಸ್ತುವಿನ ಮನೋಜ್ಞ ಚಿತ್ರ ನಿರ್ಮಾಣವನ್ನಷ್ಟೇ ಮುಖ್ಯವೆಂದು ತಿಳಿಯಲಾಗಿದೆಯೇ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ಇಂಥ ಕವನಗಳ ಸಾಂಪ್ರದಾಯಕ ಮೌಲ್ಯಪ್ರತಿಪಾದನೆಯ ಏಕರೂಪಿ ಮುಕ್ತಾಯ ಕ್ರಮವು, ಸಾಮಾಜಿಕ ಯಥಾಸ್ಥಿತಿವಾದದ ಪ್ರತಿಪಾದನೆಯ ಸಾಧನವಾಗಿ ಬಳಕೆಯಾಗಿದೆಯೇ, ಇವೇ ಮೊದಲಾದಂಥ ಅರ್ಥಪೂರ್ಣವಾದ ಪ್ರಶ್ನೆಗಳ ಮೂಲಕ ಬೇಂದ್ರೆಯವರ ಸಾಮಾಜಿಕ ಕಾವ್ಯದ ಬಹುರೂಪಿ ಅನುಸಂಧಾನ ಮಾಡುವುದು ಈ ಆಯ್ಕೆ ಹಿಂದಿರುವ ಮಹತ್ವದ ಉದ್ದೇಶವಾಗಿದೆ.

ಈ ಅನುಸಂಧಾನದ ಮೂಲಕ, ಬರಗೂರು ಅವರು ತಮ್ಮ ಸಾಮಾಜಿಕ ಕಾವ್ಯದಲ್ಲಿ ಬೇಂದ್ರೆಯವರು ವ್ಯಕ್ತಪಡಿಸುವ ಸಾಮಾಜಿಕ ಧೋರಣೆಯನ್ನು ರೂಪಿಸಿರುವ ಸಾಂಸ್ಕೃತಿಕ ವ್ಯವಸ್ಥೆ ಮತ್ತು ಅದರ ಮೌಲ್ಯವ್ಯವಸ್ಥೆಯ ಸ್ವರೂಪ ಕುರಿತು ಅತ್ಯಂತ ಮಹತ್ವಪೂರ್ಣವಾದ ವಿಚಾರಗಳನ್ನು ಮಂಡಿಸುತ್ತಾರೆ. ಹೀಗಾಗಿಯೇ ಅವರು, ಕಾವ್ಯದಲ್ಲಿ ವ್ಯಕ್ತಪಡಿಸುವ ವ್ಯಕ್ತಿಗತ ನಿಲುವಿಗೆ ಕವಿಯನ್ನು ಆಪಾದಿತನನ್ನಾಗಿಯೋ ಅಥವಾ ಹೊಣೆಗಾರನನ್ನಾಗಿಯೋ ಮಾಡುವುದಿಲ್ಲ. ಆದರೆ, ಪರಂಪರಾಗತ ಮೌಲ್ಯವ್ಯವಸ್ಥೆಯ ಪ್ರತಿಗಾಮಿ ನಿಲುವುಗಳ ಬಲಿಷ್ಠ ಹಿಡಿತದಿಂದ ಬಿಡಿಸಿಕೊಳ್ಳುವ ಪ್ರಜ್ಞಾಪೂರ್ವಕ ಎಚ್ಚರಿಕೆ ಮತ್ತು ವಿವೇಕ ಕವಿಗೆ ಅತ್ಯಗತ್ಯವಾಗಿ ಇರಬೇಕಾಗುತ್ತದೆ. ಇಲ್ಲದಿದ್ದರೆ, ಆತ ಒಂದು ಭಾಷೆಯ ಕಾವ್ಯಚರಿತ್ರೆ ಕಂಡಂಥ ಅಪ್ರತಿಮ

ಪ್ರತಿಭಾಶಾಲಿಯಾಗಿಯೇ ಆಗಿದ್ದರೂ ಸಹ, ಕೊನೆಗೆ ತನ್ನ ಕಾವ್ಯದಲ್ಲಿ ಜಡಸಂಪ್ರದಾಯಗಳ ಸಮರ್ಥಕನಾಗಬೇಕಾದ ಅನಿವಾರ್ಯತೆಗೆ ಸಿಲುಕಬೇಕಾಗುತ್ತದೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಮಾನವೀಯ ವ್ಯವಸ್ಥೆಯ ಪರವಾದ ನಿಲುವನ್ನು ತಾಳಬೇಕಾದ ದುರಂತಕ್ಕೆ ಒಳಗಾಗಬೇಕಾಗುತ್ತದೆ. ಇದು, ಸಾಹಿತ್ಯದಲ್ಲಿ ವ್ಯಕ್ತವಾಗುವ, ವ್ಯವಸ್ಥೆಯ ಪರಂಪರಾಗತವಾದ ಪಟ್ಟಭದ್ರ ಹಿತಾಸಕ್ತಿ ರೂಪಿಸುವ ವರ್ಗಸ್ವಭಾವದ ಸ್ವರೂಪಕ್ಕೆ ಹಾಗೂ ಅದಕ್ಕೆ ಸಂವೇದನಾಶೀಲ ಸಾಹಿತಿಯೊಬ್ಬ ಸಂರಕ್ಷಕನಾಗಿ ನಿಲ್ಲುವ ಕ್ರಮಕ್ಕೆ ಅತ್ಯುತ್ತಮವಾದ ನಿದರ್ಶನವಾಗಿದೆ ಎನ್ನುವ ಅತ್ಯಂತ ಮಹತ್ವಪೂರ್ಣವಾದ ಒಳನೋಟವನ್ನು ಬರಗೂರು ಅವರು ನೀಡುತ್ತಾರೆ.

ಈ ಹಿನ್ನೆಲೆಯಲ್ಲಿ, ಬರಗೂರು ಅವರು ಬೇಂದ್ರೆಯವರ ಸಾಮಾಜಿಕ ಕಾವ್ಯದ ಕೆಲವು ಪ್ರಖ್ಯಾತ ಕವನಗಳನ್ನು ವಿಶ್ಲೇಷಣೆಗೆ ಎತ್ತಿಕೊಳ್ಳುತ್ತಾರೆ. ಇವುಗಳಲ್ಲಿ ಪ್ರತಿಪಾದಿತವಾಗಿರುವ ಸಾಮಾಜಿಕ ಧೋರಣೆಯ ಸ್ವರೂಪ ಮತ್ತು ಅದನ್ನು ನಿಯಂತ್ರಿಸುತ್ತಿರುವ ಸಾಂಪ್ರದಾಯಕ ಮೌಲ್ಯವ್ಯವಸ್ಥೆಯ ಸ್ವಭಾವ ಏನು ಎನ್ನುವುದು ಈ ಚರ್ಚೆಯ ಪ್ರಧಾನವಾದ ಆಸಕ್ತಿ. ಈ ಚರ್ಚೆಯಲ್ಲಿ, ಬರಗೂರು ಅವರು ಈ ಎಲ್ಲಾ ಕವನಗಳಲ್ಲೂ ಸಾಮಾನ್ಯವಾಗಿ ಮೂರು ಮುಖ್ಯ ನೆಲೆಗಳಿರುವುದನ್ನು ಗುರುತಿಸುತ್ತಾರೆ. ಅವುಗಳೆಂದರೆ,ಅ.ಸಾಮಾಜಿಕ ಸಮಸ್ಯೆಗಳ ಹೃದಯಂಗಮ ಚಿತ್ರಣ ಆ. ನೆಲದ ನೋವುಗಳಿಗೆ ಮುಗಿಲಿನ ಮುಲಾಮುಇ.ಸಂಪ್ರದಾಯದ ಸಂಕೋಲೆಯೊಳಗೆ ಸೆರೆಯಾದ ಸಂವೇದನಾಶೀಲತೆ.

ಈ ಪ್ರತಿಯೊಂದು ನೆಲೆಯೂ, ಬೇಂದ್ರೆಯವರ ಸಾಮಾಜಿಕ ಕಾವ್ಯದ ಸಾಮಾಜಿಕ ಧೋರಣೆಯ ಸ್ವರೂಪವನ್ನು ಸಮರ್ಥವಾಗಿ ಗ್ರಹಿಸುವುದಕ್ಕೆ ಅತ್ಯಂತ ಉಪಯುಕವಾದಸಾಧನ ಕೂಡಾ ಆಗಿದೆ. ಹೀಗಾಗಿ, ಇಲ್ಲಿ ಇವುಗಳನ್ನು ಕುರಿತು ಸ್ಥೂಲವಾದ ವಿಶ್ಲೇಷಣೆ ಮಾಡಲಾಗಿದೆ.

೫.೭.೨ ಸಾಮಾಜಿಕ ಸಮಸ್ಯೆಗಳ ಹೃದಯಂಗಮ ಚಿತ್ರಣ

ಯಾವುದೇ ಬಗೆಯ ಸಾಮಾಜಿಕ ಸಮಸ್ಯೆಯಾದರೂ ಸರಿ, ಅದು ಓದುಗನ ಮನಸ್ಸು ಮತ್ತು ಹೃದಯವನ್ನು ಆಳವಾಗಿ ಕಲಕಿ ಗಾಢ ವಿಷಾದ ಅವನನ್ನು ಮುತ್ತಿಕೊಳ್ಳುವಂತೆ ಚಿತ್ರಿಸುವುದರಲ್ಲಿ ಬೇಂದ್ರೆ ಸಿದ್ಧಹಸ್ತರು. ಹೆಣ್ಣಿನ ಶೋಷಣೆ, ಬಡತನ, ಹಸಿವು ಮತ್ತು ಆರ್ಥಿಕ ಅಸಮಾನತೆ ನಮ್ಮ ಸಮಾಜದ ಯಾವತ್ತಿನ ಭೀಕರ ಸಮಸ್ಯೆಗಳು. ಇವು ಬೇಂದ್ರೆಯವರ ಸಾಮಾಜಿಕ ಕಾವ್ಯದ ಪ್ರಧಾನ ಕಾಳಜಿಗಳೂ ಹೌದು.

ಹೆಣ್ಣಿನ ಬದುಕಿನ ಸಮಸ್ಯೆಗಳಲ್ಲೆಲ್ಲಾ ಅತ್ಯಂತ ಕ್ರೂರವಾದದ್ದು ವಿಧವಾ ಸಮಸ್ಯೆ. ಇದು ಇವತ್ತು ಮೊದಲಿನ ಹಾಗೆ ಭೀಕರ ಸಮಸ್ಯೆಯಾಗಿ ಉಳಿದಿಲ್ಲ. ಆದರೆ, ಬಹು ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದ ಮೇಲುಹಂತದ ವರ್ಗಗಳಲ್ಲಿ, ಅದರಲ್ಲೂ ಬ್ರಾಹ್ಮಣ ವರ್ಗದಲ್ಲಿ ಹೆಚ್ಚು ಕ್ರೂರವಾದ ಸಮಸ್ಯೆಯೆಂದರೆ ವಿಧವಾ ಸಮಸ್ಯೆಯೇ ಎನ್ನುವಂಥ ಸನ್ನಿವೇಶವಿತ್ತು. ಇದಕ್ಕೆ ಭದ್ರವಾದ ಧಾಮಿಕ ಬೆಂಬಲ ಕೂಡಾ ಹಿನ್ನೆಲೆಯಲ್ಲಿತ್ತು. ಕವಿ ಮೂಲತಃ ಇದೇ ವರ್ಗಕ್ಕೆ ಸೇರಿರುವ ಕಾರಣದಿಂದ ಮತ್ತು ಈ ಸಮಸ್ಯೆಯ

ದಾರುಣತೆಯ ಅರಿವು ಹೊಂದಿರುವುದರಿಂದ, ಇದನ್ನು ವಸ್ತುವಾಗುಳ್ಳ 'ಪುಟ್ಟ ವಿಧವೆ' ಮತ್ತು 'ಹೆಣದ ಹಿಂದೆ' ಕವನಗಳಲ್ಲಿ ಈ ಸಮಸ್ಯೆಯ ಜೀವಂತ ಚಿತ್ರಣವನ್ನು ಹೃದಯ ತಟ್ಟುವಂತೆ ನಿರ್ಮಿಸಿದ್ದಾರೆ. ಈ ಕವನಗಳಲ್ಲಿ ಕಟ್ಟಲಾಗಿರುವ ಇಬ್ಬರು ವಿಧವೆಯರ ದಾರುಣ ಚಿತ್ರಗಳು, ಕನ್ನಡ ಕಾವ್ಯ ಪರಂಪರೆಯಲ್ಲಿ ಸಾಮಾಜಿಕ ಸಮಸ್ಯೆಯನ್ನು ಸಜೀವ ನೆಲೆಯಲ್ಲಿ ಕಟ್ಟಿಕೊಟ್ಟಿರುವುದಕ್ಕೆ ಸಂಬಂಧಿಸಿದಂತೆ ನಿರ್ಮಿಸಲಾಗಿರುವ ಎರಡು ಶ್ರೇಷ್ಠ ಪ್ರತಿಮಗಳೇ ಆಗಿವೆ.

ಬರಗೂರು ಅವರು, ಈ ಕವನಗಳಲ್ಲಿ ಕವಿ ಸಾಧಿಸಿರುವ ಚಿತ್ರಕಶಕ್ತಿಯನ್ನು ಅಪಾರವಾಗಿ ಶ್ಲಾಘಿಸುತ್ತಾರೆ. ಎಳವೆಯಲ್ಲೆ ವಿಧವೆಯಾಗಿ ಧರ್ಮಶ್ರವಣಕ್ಕೆ ಬರುವ ಬಾಲವಿಧವೆ ಕಂಡು ದೇವರು ಹಾಗೂ ಪೂಜಾರಿ ಇಬ್ಬರಿಗೂ ಆವರಿಸುವ ಮಂಕು ಬೇಂದ್ರೆಯವರ ಕಾವ್ಯದ ಚಿತ್ರ ನಿರ್ಮಾಣಶಕ್ತಿಯ ಉತ್ಕೃಷ್ಟತೆಗೆ ಸಾಕ್ಷಿ. ಹಾಗೆಯೇ, ವಯಸ್ಕಳಾದರೂ ಭವಿಷ್ಯದ ಬದುಕಿನ ದಾರುಣತೆ ಕುರಿತು ಚಿಂತಿತಳಾದ ಅನಾಥ ವಿಧವೆಯ ರೂಪವನ್ನು ಹೃದಯಸ್ಪರ್ಶಿಯಾಗಿ ಕಟ್ಟಿಕೊಡುವ 'ಹೆಣದ ಹಿಂದೆ' ಕವನದ ಬಂಧದ ಬಗೆಗೂ ಬರಗೂರು ಅವರು ಮುಕ್ತವಾಗಿ ಪ್ರಶಂಸಿಸುತ್ತಾರೆ.

ಬಡತನದ ದಾರುಣತೆಯ ಭೀಕರ ಸ್ವರೂಪವನ್ನು, ಅನ್ನದಾತನ ಜೀವಂತ ಶವ ಸ್ವರೂಪಿ ಶರೀರದ ಚಿತ್ರಣದ ಮೂಲಕ ನಿರೂಪಿಸುವ 'ಭೂಮಿತಾಯಿಯ ಚೊಚ್ಚಿಲ ಮಗ' ಕವನ, ಹಸಿವಿನ ಭೀಕರತೆಯನ್ನು ಮನೋಜ್ಞವಾಗಿ ಕಟ್ಟಿಕೊಡುವ 'ಅನ್ನಾವತಾರ' ಮತ್ತು 'ತುತ್ತಿನ ಚೀಲ' ಕವನಗಳು ಹಾಗೂ ಶ್ರೀಮಂತಿಕೆಯ ಕರಾಳ ನರ್ತನವನ್ನು ಗೊಂದಲಿಗರ ಮೇಳದ ಪ್ರತಿಮಾ ವಿಧಾನದಲ್ಲಿ ಕಣ್ಣೆದುರು ನಿಲ್ಲಿಸುವ 'ಕುರುಡು ಕಾಂಚಾಣ' ಕವನ, ಮೊದಲಾದವುಗಳಲ್ಲಿ ಕವಿ ಸಾಮಾಜಿಕ ಸಮಸ್ಯೆಗಳಿಗೆ ಭೌತಿಕ ರೂಪ ಕೊಟ್ಟು ಜೀವ ಮೂಡಿಸುವಂತೆ ಚಿತ್ರಿಸುವುದರಲ್ಲಿ ಸಾಧಿಸಿರುವ ನೈಪುಣ್ಯತೆ ಕುರಿತು ಬರಗೂರು ಅವರು ತಮ್ಮ ಅತೀವವಾದ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. 'ದರಿದ್ರ ನಾರಾಯಣ', 'ಕೆಲಸವಿಲ್ಲದವರ ಹಾಡು' 'ನರಬಲಿ', ಮೂವತ್ತು ಮೂರು ಕೋಟಿ' ಮತ್ತು 'ಯಜ್ಞ' ಕವನಗಳೂ ಕೂಡಾ ಇದೇ ಮಟ್ಟದ ಶ್ರೇಷ್ಠ ರಚನೆಗಳು ಎಂದೇ ಅಭಿಪ್ರಾಯಪಡುತ್ತಾರೆ.

೫.೭.೩ ನೆಲದ ನೋವುಗಳಿಗೆ ಮುಗಿಲಿನ ಮುಲಾಮು

ದುರಂತವೆಂದರೆ, ಕಣ್ಣೆದುರಿನ ಭೀಕರವೂ ಮತ್ತು ಅಮಾನವೀಯವೂ ಆದ ಈ ಸಮಸ್ಯೆಗಳಿಗೆ ಕಾರಣ ಹುಡುಕುವಾಗ ಮಾತ್ರ ಕವಿ ತೀವ್ರವಾದ ನಿರಾಶೆ ಉಂಟುಮಾಡುತ್ತಾರೆ ಎಂದು ಬರಗೂರು ಅಭಿಪ್ರಾಯಪಡುತ್ತಾರೆ. ಸಾವಿರಾರು ವರ್ಷಗಳಿಂದ ನಿರಂತರವಾಗಿ ಮುಂದುವರೆದುಕೊಂಡು ಬಂದಿರುವ ಈ ಸಮಸ್ಯೆಗಳಿಗೆ ಮೂಲ ಕಾರಣಗಳನ್ನು ಗುರುತಿಸುವಾಗ ಕವಿ ಸಂಪೂರ್ಣವಾಗಿ ಅವಾಸ್ತವವಾದಿಯಾಗಿಬಿಡುತ್ತಾರೆ. ಸಮಸ್ಯೆಗಳು ಮತ್ತು ಅವುಗಳ ಭೀಕರ ಸ್ವರೂಪವನ್ನು ಚಿತ್ರಿಸುವಾಗ ಇರುವ

ಮಣ್ಣಿನ ಸ್ಪರ್ಶ ಹಾಗೂ ನೆಲಮೂಲದ ಸಂವೇದನೆಗಳ ಗುಣಗಳು ಈಗ ಸಂಪೂರ್ಣ ಕಾಣೆಯಾಗುತ್ತದೆ. ಸಮಸ್ಯೆಗಳ ಕಾರಣಗಳನ್ನು ಅಮೂರ್ತವಾದ ವಿಧಿ ಮತ್ತು ಅತೀತವಾದ ದೈವಿಕತೆಯಲ್ಲಿ ಹುಡುಕುವುದರಿಂದ ಪರಿಹಾರ ಕ್ರಮಗಳೂ ಸಹ ಅಲ್ಲಿಂದಲೇ ಪ್ರಾಪ್ತವಾಗಬೇಕು. ಅಲ್ಲಿವರೆಗೂ ತಾಳ್ಮೆಯಿಂದ ಕಾಯಬೇಕು ಮತ್ತು ಬಂದದ್ದನ್ನು ಪ್ರತಿಭಟಿಸದೆ ಒಪ್ಪಿಕೊಳ್ಳಬೇಕು ಎನ್ನುವ ಅಪ್ಪಟ ಸನಾತನವಾದಿ ನಿಲುವು ತಾಳುತ್ತಾರೆ. ಇದು ಬೇಂದ್ರೆಯವರ ಸಾಮಾಜಿಕ ಕಾವ್ಯದ ಬಹುದೊಡ್ಡ ಮಿತಿ ಅಥವಾ ಕೊರತೆ ಎಂದು ಬರಗೂರು ಅವರು ಪ್ರತಿಪಾದಿಸುತ್ತಾರೆ.

ಅವರು ತಮ್ಮ ಈ ನಿಲುವಿಗೆ ಬೇಂದ್ರೆಯವರ ಕವನಗಳಿಂದ ಸೂಕ್ತ ಆಧಾರಗಳನ್ನಿಟ್ಟು ಸಮರ್ಥಿಸುತ್ತಾರೆ. 'ಪುಟ್ಟವಿಧವೆ'ಯ ಕರುಳು ಹಿಂಡುವ ದೃಶ್ಯವನ್ನು ಅದು 'ಕುರುಡು ಧರ್ಮಕ್ಕೆ ಸ್ಮಾರಕವಿದ್ದ'ಂತಿತ್ತು ಎಂದು ಹೇಳುವ ಮಾತಿನಲ್ಲಿ, ಕವಿಗೆ ಧರ್ಮದ ಕುರುಡುತನ ಬಗ್ಗೆ ವಿಷಾದವಿದೆಯೇ ಹೊರತು ಅದರ ವಿರುದ್ಧ ಕ್ರೋಧವಾಗಲೀ ಅಥವಾ ತಿರಸ್ಕಾರವಾಗಲೀ ಇಲ್ಲ. ಹಾಗೆಯೇ, 'ಹೆಣದ ಹಿಂದೆ' ಕವಿತೆಯ ಅನಾಥ ವಿಧವೆ ತನ್ನ ಬಾಳಿನ ದಾರುಣತೆಗೆ ಮೂಲ ಕಾರಣವಾದ ವ್ಯವಸ್ಥೆ ವಿರುದ್ಧ ಕ್ರೋಧತಾಳಿ, ಮಾನಸಿಕವಾಗಿ ಬಂಡೇಳಲು ಸಿದ್ಧಳಾದಾಗ ಕವಿ, ಆಕೆಗೆ ಬಂದದ್ದನ್ನೆಲ್ಲಾ ತಾಳ್ಮೆಯಿಂದ ಸಹಿಸುವುದೇ ಸ್ತ್ರೀ ಸಹಜ ಧರ್ಮ ಎಂದು ಭೋಧಿಸುತ್ತಾರೆ. ಹೀಗೆ ನಿರ್ಣಾಯಕ ಘಟ್ಟದಲ್ಲಿ, ಕವಿ ತನ್ನ ಪ್ರಗತಿಪರ ಹಾಗೂ ಮಾನವೀಯ ಸಂವೇದನೆಗಳನ್ನು ಸಂಪ್ರದಾಯಶೀಲ ಮನೋಧರ್ಮಕ್ಕೆ ಒಪ್ಪಿಸಿ ಯಥಾಸ್ಥಿತಿವಾದಿಯಾಗಿ ಬಿಡುತ್ತಾರೆ. ಇದು ಧರ್ಮ, ಸಂಸ್ಕೃತಿ ಮತ್ತು ಭವ್ಯ ಪರಂಪರೆಗಳ ಸಾಂಪ್ರದಾಯಕ ಮೌಲ್ಯ ವ್ಯವಸ್ಥೆಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಕ್ರೂರ ಸಾಮಾಜಿಕ ಸಮಸ್ಯೆಯ ಭೀಕರ ರೂಪಗಳನ್ನು ಕುರಿತ ಕವಿಯ ನಿಲುವು.

ಧಾರ್ಮಿಕ ಮೂಲದ ಸಾಮಾಜಿಕ ಸಮಸ್ಯೆಗಳಂತೆಯೇ, ಆರ್ಥಿಕ ಮೂಲದ ಸಾಮಾಜಿಕ ಸಮಸ್ಯೆಗಳ ಕುರಿತ ಕವಿಯ ಧೋರಣೆ ನಿಲುವೂ ಸಹ ಮೂಲತಃ ತಾತ್ವಿಕವಾಗಿ ಇದಕ್ಕಿಂತ ಬೇರೆಯೇನೂ ಆಗಿಲ್ಲ. 'ಭೂಮಿ ತಾಯಿಯ ಚೊಚ್ಚಿಲ ಮಗ' ಕವನದಲ್ಲಿ, ಕವಿ ಬದುಕಿಯೂ ಸತ್ತಂತಿರುವ ಅನ್ನದಾತನಿಗೆ 'ಸಾವನ್ನೇ ಪರಿಹಾರ'ವೆಂದು ಸೂಚಿಸುವ ಚೋದ್ಯಕ್ಕೆ ತೀವ್ರವಾದ ವಿಷಾದ ವ್ಯಕ್ತಪಡಿಸುತ್ತಾರೆ ಬರಗೂರು. ಇದನ್ನು ಕುರಿತು ವಿಶ್ಲೇಷಿಸುತ್ತಾ ಅವರು ಹೇಳುವ, "ಈ ರೈತನ ಜೀವಜಂತು ಬೇಂದ್ರೆಯವರೆ ಹೇಳುವಂತೆ 'ಜನುಮವೆಂಬುವಾ ಕತ್ತಲೆಯಲ್ಲಿ' ಬಿದ್ದಿರುವುದೇನೊ ನಿಜ. ಕತ್ತಲನ್ನು ಸೀಳುವ ಬೆಳಕು ಬರಬೇಕಾದ್ದೂ ಸರಿ ಹಾಗೂ ಅತ್ಯಗತ್ಯ. ಆದರೆ ಆ ಬೆಳಕು ಯಾವುದಾಗಿರಬೇಕು ಎಂಬುದು ಮುಖ್ಯ. ಭೂಮಿತಾಯಿಯ ಚೊಚ್ಚಲ ಮಗ ಇಂಥ ದಾರುಣ ಸ್ಥಿತಿಯಲ್ಲಿರುವಾಗ, ಯಾವುದು ದುಡಿಮೆಗೆ ತಕ್ಕ ನ್ಯಾಯ ದೊರಕಿಸಿ ಭೂಮಿಯ ಮೇಲೆ ಬದುಕುವ ಅವಕಾಶ ಕಲ್ಪಿಸಿ ಅವನನ್ನು ಅರ್ಥಪೂರ್ಣ ಚೊಚ್ಚಿಲ ಮಗನನ್ನಾಗಿ ಮಾಡುತ್ತದೆಯೊ ಅದೇ ಅವನಿಗೆ ಬೆಳಕು. ಆದರೆ ಇಲ್ಲಿ ಸಂಕಷ್ಟ ಸ್ಥಿತಿಯಲ್ಲಿರುವಾಗ ಸಾವನ್ನು ಬೆಳಕೆಂದು ಹೇಳುವ

ತತ್ವಜ್ಞಾನಾಭಾಸವೇ ಮುಖ್ಯವಾಗಿದೆ. ಆಗಲೇ ಹೇಳಿದಂತೆ ಸಾವು ವೈಭವೀಕೃತಗೊಂಡಿದೆ. ಹೀಗಾಗಿ ಇದು ಅನುಕಂಪ ಹಡೆಯುವಷ್ಟಕ್ಕೆ ನಿಲ್ಲುವ, ನಿಲ್ಲಿಸುವ ಕವನವಾಗಿ ಬಿಟ್ಟಿದೆ"[೭] ಎನ್ನುವ ಮಾತುಗಳು ಆರ್ಥಿಕ ಮೂಲದ ಸಾಮಾಜಿಕ ಸಮಸ್ಯೆ ಕುರಿತು ಕವಿ ಅವಾಸ್ತವವಾದಿ ಪರಿಹಾರ ಸೂಚಿಸುವುದರ ಕುರಿತು ವ್ಯಕ್ತಪಡಿಸಿರುವ ತೀವ್ರವಾದ ಖಂಡನೆಯಾಗಿದೆ.

ಬಡತನದಂತೆಯೇ ಹಸಿವೂ ಕೂಡಾ, ಆರ್ಥಿಕ ಮೂಲದಿಂದ ಹುಟ್ಟಿರುವ ದಾರುಣವಾದ ಸಾಮಾಜಿಕ ಸಮಸ್ಯೆ. ಹಾಗೆ ನೋಡುವುದಾದರೆ, ಆರ್ಥಿಕ ಅಸಮಾನತೆ ಹಾಗೂ ಶೋಷಣೆಯ ಪರಿಣಾಮ ಬಡತನವಾದರೆ; ಅದರ ಪ್ರತಿಫಲವೇ ಹಸಿವು. ಮನುಷ್ಯನ ಭೌತಿಕ ಇರುವಿಕೆಗೆ ಮೂಲಭೂತ ಅವಶ್ಯಕತೆಯಾದ ಅನ್ನದ ಕೊರತೆಯೇ ಹಸಿವಿನ ಮೂಲ. ಇದನ್ನು ಕುರಿತ ಬೇಂದ್ರೆಯವರ 'ಅನ್ನಾವತಾರ' ಮತ್ತು 'ತುತ್ತಿನ ಚೀಲ' ಕವನಗಳು ಯಾವುದೇ ಒಂದು ಭಾಷೆಯ ಕಾವ್ಯರಚನಾ ಕ್ರಿಯೆಯ ಉತ್ಕಷ್ಟ ಸಾಧನೆಗಳೇ ಸರಿ. ಆದರೆ, ಪ್ರತಿಕಾತ್ಮಕ ಮತ್ತು ಪ್ರತಿಮಾತ್ಮಕ ಸಾಧನೆಯು ಆಶಯಾತ್ಮಕ ನೆಲೆಯಲ್ಲಿ ಮಹತ್ವದ ಹಂತವನ್ನು ಮುಟ್ಟುವಲ್ಲಿ ಸೋತು ಹೋಗುತ್ತದೆ. ಇದಕ್ಕೆ, ಎಂದಿನಂತೆ ಕವಿಯ ಸಂಪ್ರದಾಯಶೀಲ ಮನೋಧರ್ಮವೇ ಮುಖ್ಯ ಕಾರಣ. ಹೀಗಾಗಿಯೇ, ಇವೂ ಸಹ ಅತ್ಯುತ್ತಮ ಸಾಮಾಜಿಕ ಪ್ರತಿಭಟನಾ ಕಾವ್ಯವಾಗುವ ಸಾಧ್ಯತೆಯಿಂದ ವಂಚಿತವಾಗಿ ಕೇವಲ ಸಾಮಾಜಿಕ ಸಂವೇದನೆಯ ಸ್ಪಂದನಶೀಲ ಕವಿತೆಗಳಾಗಿ ಮಾತ್ರ ನಿಂತುಬಿಡುತ್ತವೆ.

ಈ ಪದ್ಯಗಳ ವಿವೇಚನೆಗೆ ಬರಗೂರು ಅವರುಬಳಸುವ ಭೌತವಾದಿ ಒಳನೆಲೆ ವಿಶ್ಲೇಷಣಾ ವಿಧಾನವು ಕವಿಯ ಸಾಮಾಜಿಕ ಧೋರಣೆ ಕುರಿತು ಅರ್ಥಪೂರ್ಣವಾದ ವಿಮರ್ಶೆ ಮಾಡುವುದಕ್ಕೆ ಅತ್ಯಂತ ಉಪಯುಕ್ತವಾಗಿರುತ್ತದೆ. ಬಡವರ ಹಸಿವಿನ ಸಮಸ್ಯೆಗೆ 'ಬಿಡುಗಣ್ಣರು' ಕುರುಡಾಗಿದ್ದಾರೆ ಮತ್ತು ಇದಕ್ಕಾಗಿ 'ಅನ್ನಾವತಾರ' ಆಗಬೇಕು ಎನ್ನುವ ನಿಲುವನ್ನು ಬರಗೂರು ಇಲ್ಲಿ ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಈ ಬಗ್ಗೆ ಅವರು ಹೇಳುವ "ಹಸಿವು ಮೂಲಭೂತವಾಗಿ ಒಂದು ಆರ್ಥಿಕ ಸಮಸ್ಯೆ. ಆದ್ದರಿಂದ ನಾವು ಇದರ ಕಾರಣ, ಪರಿಹಾರಗಳನ್ನು ಆರ್ಥಿಕ ಕ್ಷೇತ್ರ ಮತ್ತು ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳನ್ನೂ ಒಳಗೊಳ್ಳುವ ರಾಜಕೀಯ ವ್ಯವಸ್ಥೆಯಲ್ಲಿ ಕಾಣಬೇಕಾಗುತ್ತದೆ. ಇಲ್ಲಿ ಬೇಂದ್ರೆಯವರು ಆರ್ಥಿಕ ಸಮಸ್ಯೆಯೊಂದನ್ನು ಎತ್ತಿಕೊಂಡು ಅದಕ್ಕೆ ಧಾರ್ಮಿಕ ಸ್ವರೂಪ ಕೊಟ್ಟಿದ್ದಾರೆ"[೮] ಎನ್ನುವ ಮಾತುಗಳು ಸಾಮಾಜಿಕ ಸಮಸ್ಯೆಯ ಗ್ರಹಿಕೆ ಮತ್ತು ಅಭಿವ್ಯಕ್ತಿಗಳು ಒಳಗೊಳ್ಳಬೇಕಾದ ಭೌತವಾದಿ ದೃಷ್ಟಿಕೋನದ ಅಗತ್ಯತೆ ಕುರಿತ ಪ್ರತಿಪಾದನೆಯಾಗಿದೆ.

ಆರ್ಥಿಕ ಸಮಸ್ಯೆಯ ಭೀಕರ ಕ್ರೌರ್ಯ ಮತ್ತು ಅಮಾನುಷತೆಯ ಮತ್ತೊಂದು ರೂಪವೇ ಸಂಪತ್ತಿನ ಅಟ್ಟಹಾಸ ಅಥವಾ ಧನಿಕರ ದರ್ಬಾರು. ಇದನ್ನು ಕುರಿತು ಬೇಂದ್ರೆಯವರು ಅತ್ಯಂತ ಮೂರ್ತವಾದ ಭೌತಿಕ ವಿವರಗಳಲ್ಲಿ ಸೃಷ್ಟಿಸಿರುವ ಪ್ರತಿಮಾಸೃಷ್ಟಿ 'ಕುರುಡು ಕಾಂಚಾಣ' ಕವನ. ಈ ಕವನದಲ್ಲಿ ಶ್ರೀಮಂತಿಕೆಯ

ರಾಕ್ಷಸೀ ಪಾಶವೀ ನರ್ತನ ಮತ್ತು ದಮನಿತರ ಅಸಹಾಯಕತೆಯ ರೋದನ, ಈ ಎರಡನ್ನೂ ಕವಿ ಕಾವ್ಯದಲ್ಲಿ ದೇಹಪ್ರಾಣಗಳ ಬೆಸುಗೆ ರೂಪದಲ್ಲಿ ಚಿತ್ರಿಸಿರುವ ಬಗ್ಗೆ ಬರಗೂರು ಅವರು ಅಪಾರವಾದ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅಲ್ಲದೆ ಬೇಂದ್ರೆ ಪ್ರತಿಭೆಯ ಸೃಷ್ಟಿಶೀಲತೆಯ ನಿಗೂಢತೆ ಕುರಿತು ಮುಕ್ತವಾಗಿ ಪ್ರಶಂಸಿಸುತ್ತಾರೆ. ಆದರೆ ಇದೇ ಸಮಯದಲ್ಲಿ, ಇಂಥ ಮಹೋನ್ನತ ರೂಪಕಮಾಲೆಯ ಪ್ರತಿಮಾ ಕಾವ್ಯವೊಂದು ಅಂತಿಮವಾಗಿ ತನ್ನ ಆಶಯಾತ್ಮಕ ನೆಲೆಯಲ್ಲಿ ಕುಬ್ಜವಾಗುವುದನ್ನು ಅತ್ಯಂತ ಸಮರ್ಥವಾಗಿ ಗುರುತಿಸುತ್ತಾರೆ. ಕಾವ್ಯಂತ್ಯದಲ್ಲಿ ಕವಿ ತಾಳುವ, ಶೋಷಣಾ ವ್ಯವಸ್ಥೆ ಹೇಗೆ ಹೇಗೋ ಕುಣಿದು, ತಾನಾಗೆ ಬೀಳುತ್ತದೆ ಎನ್ನುವ ನಿಲುವಿಗೆ ಬರಗೂರು ಅವರು ತಮ್ಮ ತೀವ್ರವಾದ ಭಿನ್ನಮತ ವ್ಯಕ್ತಪಡಿಸುತ್ತಾ, "ಬೇಂದ್ರೆಯವರೇ ಚಿತ್ರಿಸಿದಂತೆ ಶೋಷಣೆಯ ಕ್ರೌರ್ಯ ಎಷ್ಟೆಂದು ನೋಡಬಹುದು. ಯಾರನ್ನು ಯಾವಾಗ ಹೇಗೆ ಸುಲಿಯಬೇಕೆಂಬ ಬಗ್ಗೆ ಜಾಗ್ರತ ಜಾಲವೇ ಇರುವ ಉನ್ಮತ್ತ ಶೋಷಕ ಶಕ್ತಿ ತಾನಾಗಿಯೇ ಬೀಳುವುದು ಬಹುಪಾಲು ಅಸಂಭವ ಬೇಂದ್ರೆಯವರಿಗೆ ಕಾಯುವುದರಲ್ಲೇ ಹೆಚ್ಚು ವಿಶ್ವಾಸ" ಎಂದು ವಿವರಿಸುತ್ತಾರೆ. ಬರಗೂರು ಅವರ ಈ ಮಾತು ಬೇಂದ್ರೆಯವರ ಸಾಮಾಜಿಕ ಕಾವ್ಯದ ತಾತ್ವಿಕ ಸ್ವರೂಪ ಕುರಿತ ಮುಖ್ಯವಾದ ವಿಚಾರ ಕೂಡಾ ಆಗಿದೆ.

೫.೭.೪ ಸಂಪ್ರದಾಯದ ಸಂಕೋಲೆಯೊಳಗೆ ಸೆರೆಯಾದ ಸಂವೇದನಾಶೀಲತೆ

ತನ್ನ ಕಾಲ ಮತ್ತು ಸಮಾಜದ ದಾರುಣ ಸಾಮಾಜಿಕ ಸಮಸ್ಯೆಗಳಿಗೆ ತೀವ್ರವಾಗಿ ಹಾಗೂ ಮಾನವೀಯವಾಗಿ ಸಂವೇದಿಸುವ ಪ್ರಜ್ಞೆಯೊಂದು, ಯಾಕೆ ಕೊನೆಗೂ ಯಥಾಸ್ಥಿತಿವಾದಿ ಧೋರಣೆಯಲ್ಲಿ ಬಂದು ನಿಲ್ಲುತ್ತದೆ ಎನ್ನುವುದು ಈ ಸಂದರ್ಭದಲ್ಲಿ ಬರಗೂರು ಕೇಳಿಕೊಳ್ಳುವ ಮುಖ್ಯ ಪ್ರಶ್ನೆ. ಇದನ್ನು ಈಗಾಗಲೇ ಗುರುತಿಸಲಾದಂತೆ ಅವರು ಮುಖ್ಯವಾಗಿ ಎರಡು ಸಂಗತಿಗಳ ಮೂಲಕ ವಿವರಿಸುತ್ತಾರೆ. ಅವುಗಳೆಂದರೆ, ಮೊದಲನೆಯದಾಗಿ, ಕವಿಯ ಕಾಲಘಟ್ಟದ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಿಸರ ರೂಪಿಸುವ ಸಮಷ್ಟಿ ಪ್ರಜ್ಞೆ ಮತ್ತು ಎರಡನೆಯದಾಗಿ, ಆತನ ಬದುಕಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯವ್ಯವಸ್ಥೆಗಳು ರೂಪಿಸುವ ವ್ಯಷ್ಟಿ ಪ್ರಜ್ಞೆ.

ಈ ಎರಡೂ ಸಂಗತಿಗಳ ದ್ವಂದ್ವಾತ್ಮಕ ಪ್ರಭಾವದ ಸಂಘರ್ಷದಲ್ಲಿ ಸಾಹಿತಿ ವ್ಯಕ್ತಿ ವಿಶಿಷ್ಟ ನೆಲೆಯಲ್ಲಿ ರೂಪಿಸಿಕೊಳ್ಳುವ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯು ಆತನ ಸಾಹಿತ್ಯಕ ನಿಲುವುಗಳ ಹಿನ್ನೆಲೆಯಲ್ಲಿ ಸದಾ ಜಾಗೃತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ನವೋದಯ ಕಾಲಘಟ್ಟದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸನ್ನಿವೇಶದ ಪ್ರಭಾವ ಉಳಿದವರಂತೆ ಬೇಂದ್ರೆಯವರೂ ಮೇಲೂ ಗಾಢವಾದ ಪ್ರಭಾವ ಬೀರಿವೆ. ಅದು ಬೇಂದ್ರೆಯವರ ಸಾಮಾಜಿಕ ಪ್ರಜ್ಞೆ ಹಾಗೂ ಸಾಹಿತ್ಯಕ ಧೋರಣೆಯನ್ನು ನಿರ್ಧರಿಸಿರುವ ಒಂದು ಬಹುಮುಖ್ಯವಾದ ಸಂಗತಿಯಾಗಿದೆ. ಇದನ್ನು ಕುರಿತು ಚರ್ಚಿಸುತ್ತಾ ಬರಗೂರು ಅವರು, "ನವೋದಯ ಕಾವ್ಯದ ಸಂದರ್ಭದಲ್ಲಿ ಆಧ್ಯಾತ್ಮಿಕತೆ, ದೇಶಪ್ರೇಮ, ಭಾಷಾಪ್ರೇಮ, ಬಡತನ,

ನಿಸರ್ಗಪ್ರಿಯತೆ ಮುಂತಾದ ವಸ್ತುಗಳು ಪ್ರಧಾನವಾಗಿದ್ದು, ಇವೆಲ್ಲವೂ ಅಂದಿನ ಸಾಮಾಜಿಕ ಅರಿವಿನ ಭಾಗಗಳಾಗಿದ್ದವು. ಆರ್ಥಿಕ, ಸಾಮಾಜಿಕ ಅಸಮಾನತೆಗೆ ಮೂಲ ಕಾರಣಗಳ ಶೋಧನೆಗಿಂತ, ಅಸಮಾನತೆ ಇರಬಾರದೆಂಬ ಪ್ರತಿಕ್ರಿಯೆಯಮಟ್ಟಿಗೆ ಇವರ ಪ್ರತಿಭಟನೆ ಸೀಮಿತಗೊಂಡಿತು; ಸಮಾಜ ಬದಲಾವಣೆ ಸಾಹಿತ್ಯದ ಪ್ರಮುಖ ಪ್ರೇರಣೆಯಾಗಿರದಿದ್ದಾಗ ಇದು ಸಹಜ. ಇಂಥ ಸಂದರ್ಭದಲ್ಲಿ ಪ್ರಗತಿಪರತೆ ಪರಿಷ್ಕರಣವಾದದಲ್ಲಿ ಪ್ರಕಟವಾಗುತ್ತದೆ"[೧೦]ಎಂದು ಹೇಳುವ ಮಾತುಗಳು ಬೇಂದ್ರೆಯವರ ಸಾಮಾಜಿಕ ಕಾವ್ಯವನ್ನು ಕವಿಯ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂದರ್ಭದ ಹಿನ್ನೆಲೆಯಿಂದ ಮಾಡಿರುವ ವಿಮರ್ಶಾ ವಿಶ್ಲೇಷಣೆಯ ಒಂದು ಮುಖ್ಯವಾದ ರೂಪವಾಗಿದೆ.

ಇಷ್ಟಾದರೂ, ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಯಾವುದೇ ವಿಶಿಷ್ಟ ಸಂದರ್ಭವಿದ್ದರೂ, ಸೃಜನಶೀಲ ಲೇಖಕನೊಬ್ಬ ವ್ಯಕ್ತಿಗತವಾಗಿ ರೂಪಿಸಿಕೊಳ್ಳಬೇಕಾದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಕುರಿತೂ ಬರಗೂರು ಅವರು ಇಲ್ಲಿ ಸೂಕ್ಷ್ಮವಾಗಿ ಚಿಂತಿಸುತ್ತಾರೆ. ಎಂದರೆ, ಭಾರತೀಯ ಸಾಮಾಜಿಕ ಪರಿಸರದಲ್ಲಿ ನಿರ್ದಿಷ್ಟ ಜಾತಿ ಮತ್ತು ವರ್ಗದ ಆವರಣದಲ್ಲಿ ಹುಟ್ಟುವ ಬರಹಗಾರನೊಬ್ಬ ತನ್ನ ಮೂಲ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದಲ್ಲಿ ಸಹಜವಾಗಿಯೇ ಆಳವಾದ ಬೇರುಗಳನ್ನು ಬಿಟ್ಟಿರುತ್ತಾನೆ. ಹೀಗಾಗಿಯೇ, ಆತ ತನ್ನ ಆ ಮೂಲ ಪರಿಸರದ ಅಧಿಕೃತವಾದ ವಿಮರ್ಶಕನೂ ಕೂಡಾ ಆಗುವ ಸಾಧ್ಯತೆ ಇತರರಿಗಿಂತ ಆತನಿಗೇ ಹೆಚ್ಚು ಸಹಜವಾಗಿರುತ್ತದೆ. ಇದನ್ನು ಬರಹಗಾರನೊಬ್ಬ ತಾನು ಬರೆಯುತ್ತಿರುವ ಹಾಗೂ ಬದುಕುತ್ತಿರುವ ಎರಡೂ ವಿಭಿನ್ನ ಪರಿಸರಗಳ ದ್ವಂದ್ವಾತ್ಮಕ ಪ್ರಭಾವದ ಸಂಘರ್ಷದಿಂದ ಪ್ರಜ್ಞಾಪೂರ್ವಕವಾಗಿ ರೂಪಿಸಿಕೊಳ್ಳಬೇಕಾದ ಅರಿವು ಮತ್ತು ಎಚ್ಚರ ಎಂದು ವಿವರಿಸುತ್ತಾರೆ.

ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ವರ್ಗಸ್ವಭಾವ ಮತ್ತು ವರ್ಗ ಹಿತಾಸಕ್ತಿ ಕುರಿತ ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾದ ವೈಜ್ಞಾನಿಕ ಪ್ರಜ್ಞಾರೂಪವೆಂದು ವ್ಯಾಖ್ಯಾನಿಸುತ್ತಾರೆ. ಬರಗೂರು ಇದರ ಸ್ವರೂಪವನ್ನು ಅವರು, "ಬೇಂದ್ರೆಯವರು ಕಡೆಗೆ ತಳೆಯುವ ನಿಲುವು ಕೇವಲ ವೈಯಕ್ತಿಕವಲ್ಲ ಎಂಬುದಿಲ್ಲಿ ಮುಖ್ಯ. ಒಂದು ಸಮಾಜದಲ್ಲಿ ಯಾರಾದರೂ ತೀರ ವೈಯಕ್ತಿಕವಾದ ಅಭಿಪ್ರಾಯ, ನಿಲುವುಗಳನ್ನು ತಳೆದಿದ್ದರೆ ಅದು ಬೇರೆ ಮಾತು; ತಾನು ತಳೆಯುವ ನಿಲುವು ಈಗಾಗಲೇ ಪ್ರಸಿದ್ಧವಾದ ವಿಚಾರಧಾರೆಯ ಬೇರಿನಿಂದ ಬಂದಿದ್ದರೆ ಅಥವಾ ಅಂಥ ವಿಚಾರಧಾರೆಯಲ್ಲಿ ಅರ್ಥ ಕಂಡುಕೊಂಡಿದ್ದರೆ ಆಗ ಅದು ವೈಯಕ್ತಿಕ ಧೋರಣೆಯಲ್ಲ; ಆ ವಿಚಾರಧಾರೆಯನ್ನು ನಂಬಿ ನಡೆಯುವ ಅನೇಕ ಜನರ ಅಂದರೆ ಒಂದು ವರ್ಗದ ಧೋರಣೆ, ಕೃತಿಯಲ್ಲಿ ಒಂದು ವರ್ಗದ ಧೋರಣೆ ಚಾಚೂ ತಪ್ಪದೆ ಪ್ರಕಟವಾಗದಿದ್ದರೂ, ಅದರ ಆಶಯಕ್ಕೆ ಪೂರಕವಾಗುವಂತೆ ಪ್ರಕಟವಾಗಬಹುದು. ಶೋಷಣೆಯನ್ನು ಒಪ್ಪುವುದಿಲ್ಲವೆಂದು ಸಾರುವವರು ಖಚಿತ ವೈಜ್ಞಾನಿಕ ಆಲೋಚನೆಯ ಮೂಲಕ ವಾಸ್ತವ ಸ್ಥಿತಿಯನ್ನು ಅರ್ಥೈಸಿಕೊಳ್ಳದಿದ್ದಾಗ ರೂಪುಗೊಳ್ಳುವ ಧೋರಣೆಯಲ್ಲಿ ವೈರುಧ್ಯಗಳು ಕಾಣಿಸಿಕೊಳ್ಳುತ್ತವೆ. ಈಗಾಗಲೇ ಚರ್ಚೆ ಮಾಡಿರುವಂತೆ ಬೇಂದ್ರೆಯವರ

ಧೋರಣೆ ಈ ಮಾತಿಗೆ ಸಿಕ್ಕುವಂಥದು. ಈ ಕಾರಣದಿಂದ ಬೇಂದ್ರೆಯವರು ತಲುಪುವ ನಿಲುವು ನಿರ್ದಿಷ್ಟ ಮೌಲ್ಯಪದ್ಧತಿಯ ಆಶಯಕ್ಕನುಗುಣವಾಗಿ ಎನ್ನಬಹುದು. ಆದ್ದರಿಂದ ಬೇಂದ್ರೆ ಕಾವ್ಯದ ಸಾಮಾಜಿಕ ಪ್ರಜ್ಞೆಯ ಇತಿಮಿತಿಗಳು ವ್ಯಕ್ತಿ ಬೇಂದ್ರೆಯ ಇತಿಮಿತಿಗಳಷ್ಟೇ ಆಗದೆ ವರ್ಗದ–ವರ್ಗ ಸಮಾಜದ ಇತಿಮಿತಿಗಳೂ ಆಗುತ್ತವೆ. ಇದು ವರ್ಗ ಸಮಾಜದ ಅಭಿವ್ಯಕ್ತಿ ಸ್ವರೂಪವೊಂದರ ವಿಶ್ಲೇಷಣೆಯೂ ಆಗುತ್ತದೆ"[೧೧] ಎನ್ನುವ ಖಚಿತವಾದ ಮಾತುಗಳ ಮೂಲಕ ಪ್ರತಿಪಾದಿಸುತ್ತಾರೆ.

ಬರಗೂರು ಅವರ ಈ ಲೇಖನಕ್ಕೆ ಮಾಲಗತ್ತಿ ಅವರು ತಮ್ಮ 'ಬೇಂದ್ರೆಯವರ ಕಾವ್ಯ ಮತ್ತು ಸಾಮಾಜಿಕ ಪ್ರಕ್ರಿಯೆ' ('ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ', ೨೦೦೩) ಎನ್ನುವ ಲೇಖನದಲ್ಲಿ ತೀವ್ರವಾದ ವಿರೋಧ ವ್ಯಕ್ತಪಡಿಸಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಇದರಲ್ಲಿ ಮಾಲಗತ್ತಿ ಅವರು, ಹೆಚ್ಚು ಕಡಿಮೆ ಬರಗೂರು ಅವರ ವಿಮರ್ಶೆಯ ಪರಿಭಾಷೆ, ಪರಿಕಲ್ಪನೆ, ದೃಷ್ಟಿಕೋನ ಹಾಗೂ ವಿಶ್ಲೇಷಣಾ ವಿಧಾನ, ಹೀಗೆ, ಎಲ್ಲ ರೂಪಗಳಿಗೂ ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ.

ಬರಗೂರು ಅವರ 'ಸಾಮಾಜಿಕ ಪ್ರಜ್ಞೆ'ಯ ಪರಿಕಲ್ಪನೆಯನ್ನೇ ಮಾಲಗತ್ತಿ ಅವರು ಅದೊಂದು 'ಅಪ್ರಬುದ್ಧ ಚಿಂತನಾ ಕ್ರಮದ ಕೂಸು', 'ಭ್ರಮಾತ್ಮಕವಾದದ್ದು' ಮತ್ತು 'ಅಮೂರ್ತವಾದದ್ದು' ಎಂದು ಖಂಡಿಸುತ್ತಾರೆ. ಹಾಗೆಯೇ 'ವರ್ಗ' ಪರಿಕಲ್ಪನೆಯನ್ನು ನಿರಾಕರಿಸುತ್ತಾ, ' ಈ ನೆಲದ ಜನತೆ ಕಪ್ಪುಬಿಳುಪಿನ ಬದುಕುಳ್ಳವರಲ್ಲ. ಹೀಗಾಗಿ ಇಲ್ಲಿ ವರ್ಗ ಪರಿಕಲ್ಪನೆ ಇಲ್ಲ' ಎಂದು ವಾದಿಸುತ್ತಾರೆ.

ಮಾಲಗತ್ತಿ ಅವರು 'ಸಾಮಾಜಿಕ ಪ್ರಜ್ಞೆ' ಪರಿಕಲ್ಪನೆಗೆ ಬದಲಾಗಿ, 'ಸಾಮಾಜಿಕ ಸತ್ಯಗಳ' ಪರಿಕಲ್ಪನೆ ಮಂಡಿಸುತ್ತಾರೆ. ಹಾಗೆಯೇ ಇಲ್ಲಿನ 'ಜಾತಿ, ಮತ ಮತ್ತು ಪಂಗಡಗಳೇ ವರ್ಗಗಳೂ ಆಗಿವೆ' ಎಂದೂ ಹೇಳುತ್ತಾರೆ. 'ಸಾಮಾಜಿಕ ಸ್ಥಿತಿಗಳು', 'ಸಾಮಾಜಿಕ ಪ್ರಕ್ರಿಯೆ' ಮೊದಲಾದ ಪರಿಭಾಷೆ ಹಾಗೂ ಪರಿಕಲ್ಪನೆ ಮೂಲಕ ಬೇಂದ್ರೆ ಕಾವ್ಯದ ಸಾಮಾಜಿಕ ವಿಶ್ಲೇಷಣೆ ಮಾಡುತ್ತಾರೆ. ಆದರೆ, ವಿಶ್ಲೇಷಣೆಗೆ ಬಹುಪಾಲು ಬರಗೂರು ಅವರು ಆಯ್ಕೆ ಮಾಡಿಕೊಂಡ ಕವನಗಳನ್ನೂ ಇನ್ನಿತರ ಕೆಲವು ಕವನಗಳೊಂದಿಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ, ವಿಶ್ಲೇಷಣೆ ಒಂದು ಹಂತ ದಾಟಿದ ನಂತರ ಕ್ರಮೇಣ ಬರಗೂರು ಅವರ ಭೌತವಾದಿ ಒಳನೆಲೆ ವಿಧಾನದ ಸ್ವರೂಪಕ್ಕೆ ಹತ್ತಿರವಾಗುತ್ತಾ ಹೋಗುತ್ತದೆ. ಹೀಗಾಗಿ, ಅವರ ವಿರೋಧ ಪ್ರಜ್ಞಾಪೂರ್ವಕವಾದ ತಾತ್ವಿಕ ವಿರೋಧವೆನಿಸದೆ, ವ್ಯಕ್ತಿಗತ ಅಥವಾ ಭಿನ್ನ ಸಾಹಿತ್ಯಕ ಚಳವಳಿಗಳ ವಿಮರ್ಶಾ ಪ್ರಕಾರದ ಪಕ್ಷಪಾತ ಅಥವಾ ನಿಷ್ಠತೆ ಮೂಲದಿಂದ ಹುಟ್ಟಿರಬಹುದಾದ ವಿರೋಧವಾಗಿ ಮಾರ್ಪಡುತ್ತದೆ. ಅಲ್ಲದೆ, ಕೆಲವೊಮ್ಮೆ ಇದರಲ್ಲಿ ಪೂರ್ವಾಗ್ರಹದ ಲಕ್ಷಣಗಳೂ ಕಾಣಿಸಿಕೊಳ್ಳುತ್ತವೆ. ಆದರೆ, ಇನ್ನೊಂದು ಆಯಾಮದಲ್ಲಿ ಇಂಥ ವಿದ್ಯಮಾನಗಳೇ ಕನ್ನಡ ವಿಮರ್ಶೆಯಲ್ಲಿ ಅರ್ಥಪೂರ್ಣವಾದ ವಾಗ್ವಾದಗಳನ್ನು ಸಹ ಹುಟ್ಟುಹಾಕಿರುತ್ತವೆ. ಆ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆ ಸ್ಪಷ್ಟವಾಗಿ ರೂಪುಗೊಳ್ಳುವುದಕ್ಕೆ ಬಹುಮುಖ್ಯವಾದ ಕಾರಣಗಳೂ ಆಗಿರುತ್ತವೆ.

ಆಶ್ಚರ್ಯಕರ ಸಂಗತಿಯೆಂದರೆ, ಮಾಲಗತ್ತಿ ಅವರು ತಮ್ಮ 'ಬೇಂದ್ರೆಯವರ ದೇಮವ್ವನ ಮೆರವಣಿಗೆ' ('ಸಾಹಿತ್ಯ, ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ', ೨೦೦೩) ಮತ್ತು 'ಬೇಂದ್ರೆಯವರ ಕಾವ್ಯದಲ್ಲಿ ಪಂಚಮರ ಪಥ ಪರೀಕ್ಷೆ' ('ದಲಿತ ಯುಗ ಮತ್ತು ಕನ್ನಡ ಸಾಹಿತ್ಯ', ೧೯೯೯)ಎನ್ನುವ ಲೇಖನಗಳಲ್ಲಿ ಬರಗೂರು ಅವರ ವಿಶ್ಲೇಷಣಾವಿಧಾನ ಮತ್ತು ನೋಟಕ್ರಮಗಳ ಮಾದರಿಯಲ್ಲೇ ಬೇಂದ್ರೆ ಅವರ ಸಾಮಾಜಿಕ ಕಾವ್ಯದ ಅರ್ಥಪೂರ್ಣವಾದ ಸಾಂಸ್ಕೃತಿಕ ಅನುಸಂಧಾನ ಮಾಡುತ್ತಾರೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರವೇನೆಂದರೆ, ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ವ್ಯಾಪಕವಾಗಿ ಮುನ್ನೆಲೆಗೆ ಬಂದ ಸಾಮಾಜಿಕಾನುಸಂಧಾನ ವಿಧಾನದ 'ಸಾಮಾಜಿಕ ಪ್ರಜ್ಞೆ' ಪರಿಕಲ್ಪನೆಯು ಕನ್ನಡದ ಮಹತ್ವದ ನವ್ಯ ಹಾಗೂ ಅಸ್ತಿತ್ವವಾದಿ ಲೇಖಕರಾದ ಯಶವಂತ ಚಿತ್ತಾಲರಂಥವರನ್ನು ಸಹ ತೀವ್ರವಾಗಿ ಆಲೋಚಿಸುವಂತೆ ಮಾಡಿರುವುದು. ಇದಕ್ಕೆ ಅವರ 'ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ' ('ಸಾಹಿತ್ಯ ಸೃಜನಶೀಲತೆ ಮತ್ತು ನಾನು', ೨೦೦೫) ಲೇಖನ ಬಹುಮುಖ್ಯ ಉದಾಹರಣೆ. ಇದರಲ್ಲಿ ಚಿತ್ತಾಲರು, 'ಸಾಮಾಜಿಕ ಪ್ರಜ್ಞೆ' ಪರಿಕಲ್ಪನೆಯನ್ನು ವಿರೋಧಿಸಿ, 'ಭಾಷಿಕ ಪ್ರಜ್ಞೆ' ಹಾಗೂ 'ಸುಪ್ತಪ್ರಜ್ಞೆ'ಯ ಪರಿಕಲ್ಪನೆಗಳ ಪ್ರಾಮುಖ್ಯತೆಯನ್ನು ಪ್ರತಿಪಾದಿಸಲು ತೀವ್ರವಾಗಿ ಪ್ರಯತ್ನಿಸುವುದನ್ನು ಕಾಣಬಹುದು. ಆದರೆ, ಕ್ರಮೇಣ ಅವರ ಈ ವಿರೋಧ ಹೆಚ್ಚಾಗುತ್ತಾ ಹೋದಂತೆಲ್ಲಾ, ಕೊನೆಗೆ 'ಸಾಮಾಜಿಕ ಪ್ರಜ್ಞೆ'ಯ ಮಹತ್ವ ಹಾಗೂ ಪ್ರಸ್ತುತತೆಯನ್ನೂ ಕೂಡಾ ತನಗರಿವಿಲ್ಲದಂತೆಯೇ ಮಂಡಿಸಿಬಿಡುತ್ತದೆ.

೫.೮ ಆಶಾದೇವಿ ಅವರ 'ಬಸವಣ್ಣನ ವಚನಗಳ ಸಾಮಾಜಿಕಾನುಸಂಧಾನದ ಸ್ವರೂಪ

ಸಮಕಾಲೀನ ಕನ್ನಡ ವಿಮರ್ಶಾ ಸಂದರ್ಭದಲ್ಲಿ ಸಾಹಿತ್ಯ ಪರಂಪರೆ ಮತ್ತು ಪಠ್ಯದ ಅನುಸಂಧಾನದಲ್ಲಿ ಸಾಹಿತ್ಯಕ ಹಾಗೂ ಸಾಹಿತ್ಯೇತರ ವಿಧಾನಗಳನ್ನು ಅರ್ಥಪೂರ್ಣವಾಗಿ ಸಮಾವಿಷ್ಟಗೊಳಿಸಿ ಬಳಸುತ್ತಿರುವ ಕೆಲವೇ ಕೆಲವು ವಿಮರ್ಶಕರಲ್ಲಿ ಎಂ.ಎಸ್. ಆಶಾದೇವಿ ಅವರು ಬಹಳ ಮುಖ್ಯರು. ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ ಮತ್ತು ವಿಮರ್ಶಾ ಪ್ರಜ್ಞೆಯನ್ನು ಕನ್ನಡ ವಿಮರ್ಶಾ ವಿವೇಕದೊಂದಿಗೆ ಸಮನ್ವಯೀಕರಿಸುವ ಹಾಗೂ ಸಂಯೋಜಿಸುವ ಮೂಲಕ ಪಠ್ಯಗಳನ್ನು ವಿಶ್ಲೇಷಿಸುವುದು ಆಶಾದೇವಿ ಅವರ ವಿಮರ್ಶಾ ವಿಧಾನವಾಗಿದೆ. ಅದರಲ್ಲೂ ಸಮಾಜ, ಸಂಸ್ಕೃತಿ, ಧರ್ಮ, ರಾಜಕಾರಣ ಮತ್ತು ಕೋಮುವಾದಗಳಂಥ ಸಾಹಿತ್ಯೇತರ ಸಂಗತಿಗಳನ್ನು, ಪಠ್ಯದ ವಿಶ್ಲೇಷಣೆಯ ಸಂದರ್ಭದಲ್ಲಿ ಬಳಸುವಾಗ ಇವರು ತೋರಿಸುವ ಕಾಳಜಿ ಹಾಗೂ ವಹಿಸುವ ಎಚ್ಚರಿಕೆಗಳು ಇಂದಿನ ಆಧುನಿಕೋತ್ತರ ಕಾಲಘಟ್ಟದ ಸಂದರ್ಭದ ದೃಷ್ಟಿಯಿಂದ ಬಹುಮುಖ್ಯ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ, ಇವರ 'ಸ್ತ್ರೀ ಮತವನುತ್ತರಿಸಲಾಗದೆ?' (೨೦೦೬) ಮತ್ತು 'ನಡುವೆ ಸುಳಿವ ಆತ್ಮ' (೨೦೧೧) ವಿಮರ್ಶಾ ಕೃತಿಗಳು ಕನ್ನಡ ಮಹಿಳಾ ಸಾಹಿತ್ಯ ವಿಮರ್ಶೆಯ ಸ್ವರೂಪ ಹಾಗೂ ಸಾಧ್ಯತೆಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸುವ ಕೆಲವು ಮುಖ್ಯ ಬರಹಗಳನ್ನು ಒಳಗೊಂಡಿವೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯ ದೃಷ್ಟಿಯಿಂದ ಹನ್ನೆರಡನೆಯ ಶತಮಾನ ಬಹುಮುಖ್ಯವಾದ ಕಾಲಘಟ್ಟ. ಸಾಮಾಜಿಕ, ಆರ್ಥಿಕ, ಸಾಹಿತ್ಯಕ, ರಾಜಕೀಯ ಮತ್ತು ಮಾನವತಾವಾದಿ ಪ್ರಶ್ನೆಗಳನ್ನು ಆಧ್ಯಾತ್ಮಿಕ ಅಥವಾ ಅನುಭಾವಿಕ ಅನ್ವೇಷಣೆಯ ಪ್ರಶ್ನೆಗಳೊಂದಿಗೆ ಅತ್ಯಂತ ಮುಖ್ಯ ವಿಚಾರಗಳಾಗಿ ಪರಿಗಣಿಸಿದ್ದು ಈ ಕಾಲಘಟ್ಟದ ಶಿವಶರಣರ ವಚನ ಚಳವಳಿಯ ಒಂದು ವಿಶೇಷವಾದ ಸಂಗತಿ. ಈ ದೃಷ್ಟಿಯಿಂದ ಪ್ರಪಂಚದ ಯಾವುದೇ ಒಂದು ಆಧ್ಯಾತ್ಮಿಕ ಅಥವಾ ಚಳವಳಿಯೂ ಕೂಡಾ ವಚನ ಚಳವಳಿಯ ಎಲ್ಲ ಆಯಾಮಗಳನ್ನು ಒಳಗೊಂಡಿಲ್ಲವೆದು ಗುರುತಿಸಿರುವುದು ಸೂಕ್ತವೇ ಆಗಿದೆ.

ಬಸವಣ್ಣ ಈ ಚಳವಳಿಯ ಮುಂದಾಳಾಗಿರುವುದಲ್ಲದೆ, ಅದರ ಪ್ರಮುಖ ರೂಪುರೇಷೆಗಳ ಹಿಂದಿನ ಬಹು ಮುಖ್ಯವಾದ ಪ್ರಜ್ಞೆ ಕೂಡಾ ಆಗಿದ್ದಾನೆ. ಏಕಕಾಲಕ್ಕೆ ಲೌಕಿಕ ಮತ್ತು ಅಲೌಕಿಕ ಸಂಗತಿಗಳೆರಡನ್ನೂ ಮುಖ್ಯವೆಂದು ಪರಿಗಣಿಸುವುದು, ಆಧ್ಯಾತ್ಮಿಕ ಸಾಧನೆಯಷ್ಟೇ ಸಮಾಜದ ಬದಲಾವಣೆಗೂ ಪ್ರಾಮುಖ್ಯತೆ ನೀಡುವುದು ಈತನ ವಿಶಿಷ್ಟತೆ. ಹೀಗಾಗಿಯೇ, ಸಹಜವಾಗಿ ಬಸವಣ್ಣನ ವಚನಗಳು ದ್ವಂದ್ವರೂಪಿಯಾದ ಚಹರೆಗಳನ್ನು ಒಳಗೊಂಡಿವೆ. ಹಲವು ನೆಲೆಗಳಿಂದ ಇಂದಿಗೂ ಕ್ರಾಂತಿಕಾರವೆಂದು ಮತ್ತು ಆಧುನಿಕವೆಂದು ಕರೆಯಬಹುದಾದ ಚಿಂತನೆಗಳಿಂದಕೂಡಿರುವಂತೆಯೇ, ಕೆಲವು ಅಪ್ಪಟ ಸಂಪ್ರದಾಯಶೀಲವಾದ ಹಾಗೂ ಪ್ರತಿಗಾಮಿಯಾದ ಆಲೋಚನೆಗಳೂ ಸಹ ಅವಕಾಶ ಪಡೆದಿವೆ. ಹೀಗಾಗಿ, ಬಸವಣ್ಣನ ವಚನಗಳನ್ನು ಇಂದಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ, ಅವು ಒಳಗೊಂಡಿರುವ ದ್ವಂದ್ವ ಅಥವಾ ವಿಸಂಗತ ವಿಚಾರಗಳ ಸ್ವರೂಪ ಕುರಿತ ವಿಶ್ಲೇಷಣೆ ಹಾಗೂ ಅದರ ಕಾರಣಾನ್ವೇಷಣೆ ಕ್ರಮದಲ್ಲಿ ಮರುಚಿಂತನೆಗೆ ಒಳಪಡಿಸಲಾಗುತ್ತಿದೆ.

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ನವ್ಯೋತ್ತರ ಕಾಲಘಟ್ಟದಲ್ಲಿ ಮುನ್ನೆಲೆಗೆ ಬಂದ ಸ್ತ್ರೀವಾದಿ ವಿಮರ್ಶೆ ಬಸವಣ್ಣನ ವಚನಗಳನ್ನು ಮಹಿಳಾ ದೃಷ್ಟಿಕೋನದಿಂದ ಹಲವು ಸ್ತರಗಳಲ್ಲಿ ಮತ್ತು ಆಯಾಮಗಳಲ್ಲಿ ತೀವ್ರವಾದ ಪರಿಶೀಲನೆಗೆ ಒಳಪಡಿಸಿದೆ. ಇದಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೃಷ್ಟಿಕೋನ ಹಾಗೂ ವಿಶ್ಲೇಷಣಾ ವಿಧಾನಗಳೂ ಸಹ ಉಪಯುಕ್ತ ಪರಿಕರಗಳನ್ನು ಒದಗಿಸಿದವು. ಇಂಥ, ದೃಷ್ಟಿಕೋನ ಹಾಗೂ ವಿಶ್ಲೇಷಣಾ ವಿಧಾನಗಳು ಹದವಾಗಿ ಬೆರೆತಿರುವ ಒಂದು ಉತ್ತಮ ಬರವಣಿಗೆ ಆಶಾದೇವಿ ಅವರ 'ಮಹಿಳೆ ಬಸವಣ್ಣನ ನಿಲುವುಗಳು' ('ಸ್ತ್ರೀಮತವನುತ್ತರಿಸಲಾಗದೆ?', ೨೦೦೬) ಎನ್ನುವ ವಿಮರ್ಶಾ ಲೇಖನ.

೫.೮.೧ ಆಧುನಿಕ ವೈಚಾರಿಕ ಪ್ರಜ್ಞೆಯ ಅಪ್ಪಟ ಸಂಪ್ರದಾಯಶೀಲ ಧೋರಣೆ ಪ್ರಧಾನ ನೆಲೆ

ಹಾಗೆ ನೋಡಿದರೆ, ಭಕ್ತಿಗೂ ಮತ್ತು ವೈಚಾರಿಕ ಪ್ರಜ್ಞೆಗೂ ನೇರವಾದ ಸಂಬಂಧವೇ ಇಲ್ಲ. ಅಮೂರ್ತವಾದ ವಿಚಾರಗಳು, ಸಂಗತಿಗಳು ಹಾಗೂ ರೂಪಗಳನ್ನು ತುಂಬು ಶ್ರದ್ಧೆಯಿಂದ ಒಪ್ಪಿ ಪಾಲಿಸುವುದು 'ಭಕ್ತಿ'ಯ ಸಾಮಾನ್ಯ ಲಕ್ಷಣ. ಆದರೆ ಇದಕ್ಕೆ ವಿರುದ್ಧವಾಗಿ ಮೂರ್ತರೂಪದ ವಸ್ತುಸಂಗತಿಗಳು, ಸ್ಥಿತಿಗಳು ಹಾಗೂ ವಿವರಗಳನ್ನು ವಿಚಾರಶೀಲ ಮನೋಧರ್ಮದಿಂದ ಪರಿಭಾವಿಸುವುದು

'ವೈಚಾರಿಕ ಪ್ರಜ್ಞೆ'ಯ ಸಹಜ ಸ್ವರೂಪ. ಭಕ್ತಿಗೆ ಅಲೌಕಿಕ ಜಗತ್ತಿನ ನೆಲೆ ಮುಖ್ಯ; ವೈಚಾರಿಕ ಪ್ರಜ್ಞೆಗೆ ಲೌಕಿಕ ಜಗತ್ತಿನ ನೆಲೆ ಪ್ರಧಾನ. ಆದರೆ, ಈ ಎರಡೂ ನೆಲೆಗಳು ಏಕಕಾಲದಲ್ಲಿ ಮುಖ್ಯವಷ್ಟೇ ಅಲ್ಲ; ತನ್ನ ಆತ್ಮೋನ್ನತಿ ಹಾಗೂ ಸಮಾಜೋನ್ನತಿಗಳ ನಡುವೆ ಮೂಲತಃ ಭಿನ್ನತೆಯಿರದೆ ಅವೆರಡೂ ದೇಹಪ್ರಾಣಗಳಂತೆ ಪರಸ್ಪರ ಹೆಣೆದುಕೊಂಡಿವೆ ಎಂದು ಗ್ರಹಿಸಿದ್ದೇ ಬಸವಣ್ಣನ ಈ ವಿಶಿಷ್ಟನೆಲೆಯ ಸ್ವರೂಪ.

ಈ ಗ್ರಹಿಕೆಯೇ ಆತನ ವಚನಗಳಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಆಧ್ಯಾತ್ಮಿಕ ಪ್ರಶ್ನೆಗಳು ಸಹಯೋಗ ಮತ್ತು ಸಂಯೋಗ ಸಾಧಿಸಲು ಕಾರಣವಾಗಿದೆ. ಈ ದೃಷ್ಟಿಯಿಂದ ಬಸವಣ್ಣನದು ಆಧುನಿಕವಾದ ಕ್ರಾಂತಿಕಾರಕ ವ್ಯಕ್ತಿತ್ವವೇ ಹೌದು ಎನ್ನುವುದು ಆಶಾದೇವಿ ಅವರು ತಮ್ಮ ಲೇಖನದ ಪ್ರಾರಂಭದಲ್ಲೇ ಒಪ್ಪುವ ಹಾಗೂ ಮೆಚ್ಚುವ ವಿಚಾರ.

ವರ್ಣ, ವರ್ಗ, ಮತ್ತು ಜಾತಿಗಳ ಶ್ರೇಣೀಕರಣ ಹಾಗೂ ತಾರತಮ್ಯಗಳಿಂದ ಛಿದ್ರವಾಗಿ ಕತ್ತರಿಸಿ ಹೋಗಿರುವ ಸಮಾಜವನ್ನು ಮಾನವತಾವಾದದ ಸರ್ವಸಮಾನತಾ ನೆಲೆಯಲ್ಲಿ ಹೊಸದಾಗಿ ಕಟ್ಟಲು ಶಕ್ತಿಮೀರಿ ದುಡಿದವನು ಬಸವಣ್ಣ. ಆದರೆ, ಇದಕ್ಕಾಗಿ ಕಲ್ಪಿಸಲಾಗಿರುವ ಮತ್ತು ಬಸವಣ್ಣ ಪ್ರಶ್ನಾತೀತವಾಗಿ ಪ್ರತಿಪಾದಿಸುವ 'ಭಕ್ತ' ಮತ್ತು 'ಭವಿ' ಎನ್ನುವ ಎರಡು ನೂತನ ಆಧ್ಯಾತ್ಮಿಕ ವಿಭಜನಾ ತತ್ವಗಳು, ಅವನು ಉಳಿದೆಲ್ಲಾ ಸಂಗತಿಗಳ ಸುಧಾರಣೆಯಲ್ಲಿ ಮಹತ್ವದ ಸಾಧನೆ ಮಾಡಿದ್ದರೂ, ಹೆಣ್ಣಿನ ಬದುಕಿನ ಕುರಿತಂತೆ ಯಾವುದೇ ಆಧುನಿಕವಾದ ಪರಿವರ್ತನೆಯನ್ನು ತರುವುದಕ್ಕೆ ಬಿಡಲಿಲ್ಲ. ಅಷ್ಟೇ ಅಲ್ಲದೆ, ಆತ ಈ ಕುರಿತು ರೂಢಿಯಲ್ಲಿರುವ ಪರಂಪರಾಗತವಾದ ನಿಕೃಷ್ಟವೂ ಮತ್ತು ಕ್ರೂರವೂ ಆದ ಸ್ಥಾಪಿತ ನಿಲುವುಗಳನ್ನು ಅಚಲವಾಗಿ ಒಪ್ಪಿ ಪ್ರತಿಪಾದಿಸಿದ್ದು ಮಾತ್ರ ಅತ್ಯಂತ ವಿರೋಧಾಭಾಸದ ಸಂಗತಿಯೇ ಸರಿ. ಹೀಗಾಗಿ, ಹೆಣ್ಣಿನ ಕುರಿತ ಬಸವಣ್ಣನ ನಿಲುವು ಸಂಪ್ರದಾಯಶೀಲವೂ ಹಾಗೂ ಅಮಾನವೀಯವೂ ಆಗಿದೆ ಎನ್ನುವುದು ಆಶಾದೇವಿ ಅವರ ಪ್ರಮುಖವಾದ ಪ್ರತಿಪಾದನೆ.

ವಿಮರ್ಶಕಿ, ಮುಖ್ಯವಾಗಿ ತಮ್ಮ ಈ ವಿಶ್ಲೇಷಣೆಗೆ ಬಸವಣ್ಣನ ವಚನಗಳನ್ನೇ ಏಕೈಕ ಆಕರಗಳಾಗಿ ಮಾಡಿಕೊಂಡಿದ್ದಾರೆ. ನೇರ ವಿಶ್ಲೇಷಣಾ ವಿಧಾನ ಬಳಸಿದ್ದಾರೆ. ಹೀಗಾಗಿ, ಆತನ ಕಾಲದ ಮಹಿಳಾ ವಚನಕಾರ್ತಿಯರು ಬಸವಣ್ಣನ ಬಗ್ಗೆ ಏನನ್ನು ಹೇಳಿದ್ದಾರೆ ಎನ್ನುವುದು ಅವರಿಗೆ ಮುಖ್ಯವಾದ ವಿಚಾರವಾಗಿ ಕಂಡಿಲ್ಲ. ಏಕೆಂದರೆ, 'ಶರಣಪತಿ ಲಿಂಗಪತಿ' ಭಾವದ ಅವನ ವಚನಗಳಲ್ಲೂ ಸಹ ಇದೇ ಧೋರಣೆಯ, ಆದರೆ ಸೂಕ್ಷ್ಮರೂಪದ ನವಿರು ದಾಟಿಯ ವಿಚಾರಗಳೇ ಇವೆ ಎನ್ನುವುದು ಅವರ ಈ ಧೋರಣೆಗೆ ಮುಖ್ಯ ಸಾಧನವಾಗಿದೆ. ಹೀಗಾಗಿ ಆತನ ಮಹಿಳಾ ನಿಲುವು ಕುರಿತ ತಮ್ಮ ಧೋರಣೆಗೆ ಆತನ ವಚನಗಳ ವಿಚಾರಗಳೇ ಪ್ರಮುಖವಾದ ಪುರಾವೆಗಳಾಗಿವೆ ಎನ್ನುವುದು ಆಶಾದೇವಿ ಅವರ ಮುಖ್ಯವಾದ ಪ್ರತಿಪಾದನೆ.

ಈ ಸಂದರ್ಭದಲ್ಲಿ, ಹೆಣ್ಣಿನ ಕುರಿತ ವಿಚಾರದಲ್ಲಿ ವಚನಕಾರರು ಸಾಮೂಹಿಕವಾಗಿ 'ಗ್ರಹಿಕೆ'ಯ ನೆಲೆಯಲ್ಲಿ ಗೆದ್ದು; 'ಸಂವೇದನೆ'ಯ ನೆಲೆಯಲ್ಲಿ ಸೋಲುತ್ತಾರೆ. ಆದರೆ, ಬಸವಣ್ಣನೋ ಈ ಎರಡೂ

ನೆಲೆಗಳಲ್ಲಿ ಸಂಪೂರ್ಣ ವಿಫಲನಾಗುತ್ತಾನೆ. ಇಷ್ಟೇ ಅಲ್ಲದೆ, ಹೆಣ್ಣಿನ ಕುರಿತ ಅವನ ನಿಲುವುಗಳು ಎಷ್ಟೋ ವೇಳೆ ಅಮಾನವೀಯ ಮಾತ್ರವಲ್ಲ; ನಿಕೃಷ್ಟವೂ ಹಾಗೂ ಕ್ರೂರವೂ ಆಗಿವೆ. ಇವು, ಕೇವಲ ಹೀನೋಪಮೆ ಅಥವಾ ಕೀಳು ದೃಷ್ಟಾಂತಗಳ ಮೂಲಕ ಅಭಿವ್ಯಕ್ತವಾಗಿವೆ ಎನ್ನುವುದಷ್ಟೇ ಆಗಿರದೆ, ಆತನ ವ್ಯಕ್ತಿತ್ವವನ್ನು ರೂಪಿಸಿರುವ ಪರಂಪರಾಗತ ಮೌಲ್ಯವ್ಯವಸ್ಥೆಯ ದ್ಯೋತಕಗಳಾಗಿವೆ ಎನ್ನುವುದು ಆಶಾದೇವಿ ಅವರ ಬಹುಮುಖ್ಯವಾದ ಪ್ರತಿಪಾದನೆಯಾಗಿದೆ. ಇದನ್ನು ಅವರು ಹೆಣ್ಣಿನ ಕುರಿತ ಬಸವಣ್ಣನ ಪರಿಕಲ್ಪನೆಯ ವಿವಿಧ ನೆಲೆಗಳನ್ನು ಗುರುತಿಸುವುದರ ಮೂಲಕ ವಿವರಿಸುತ್ತಾರೆ.

೫.೮.೨ ಬಸವಣ್ಣನ ವಚನಗಳ ಹೆಣ್ಣಿನ ಪರಿಕಲ್ಪನೆಯ ನೆಲೆಗಳು

ಬಸವಣ್ಣನ ವಚನಗಳನ್ನು ಆಶಾದೇವಿ ಅವರು 'ಷಟ್‌ಸ್ಥಲ'ದ ಧಾರ್ಮಿಕ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಗಮನಿಸಿವುದಿಲ್ಲ. ಒಂದೊಮ್ಮೆ ಹಾಗೆ ಗಮನಿಸಿದರೂ ಅವರ ನಿಲುವಿನಲ್ಲಿ ಮಹತ್ತರವಾದ ಯಾವುದೇ ಬದಲಾವಣೆಯಾಗುವ ಸಾಧ್ಯತೆ ಇಲ್ಲ. ಆದ್ದರಿಂದ, ಈಗಾಗಲೇ ಗುರುತಿಸಲಾದಂತೆ ಸ್ತ್ರೀವಾದಿ ಪ್ರಜ್ಞೆಯಿಂದ ರೂಪುಗೊಂಡಿರುವ ಹೆಣ್ಣಿನ ಸಮಕಾಲೀನ 'ಪ್ರಶ್ನೆಗಳು' ಹಾಗೂ 'ಸಾರ್ವಕಾಲೀನ ಸ್ಥಿತಿ'ಗಳ ಹಿನ್ನೆಲೆಯಲ್ಲಿ ಕಟ್ಟಿಕೊಳ್ಳಲಾಗಿರುವ "ಮನೋಧರ್ಮ"ದ ಮೂಲಕ ವಿಶ್ಲೇಷಿಸುವುದು ಇಲ್ಲಿನ ಉದ್ದೇಶವೆಂದು ಹೇಳುತ್ತಾರೆ. 'ಕಾಲಾತೀತ ಪಠ್ಯದ ಕಾಲಬದ್ಧ ವಿಚಾರಗಳು ಹಾಗೂ ಕಾಲಬದ್ಧ ಪಠ್ಯದ ಕಾಲಾತೀತ ವಿಚಾರಗಳು' ಎರಡೂ ಸಹ ಈ "ಮನೋಧರ್ಮ"ದ ಮೂಲಕ ಪರಿಶೀಲನೆಗೆ ಅರ್ಹವಾದವುಗಳೇ ಆಗಿವೆ ಎನ್ನುವುದು ಅವರ ಅಭಿಪ್ರಾಯವಾಗಿದೆ. ಹೀಗಾಗಿ, ಸ್ಥಾಪಿತ ಮೌಲ್ಯ ಹಾಗೂ ಗ್ರಹೀತಗಳನ್ನು ಮರುಚಿಂತನೆಗೆ ಒಳಪಡಿಸುವುದು, ಸಮಕಾಲೀನ ಸಂವೇದನೆಯ ಹಾಗೂ ಸಾಂಸ್ಕೃತಿಕ ಪ್ರಜ್ಞೆಯ ಓದಿನ ಬಹುಮುಖ್ಯವಾದ ಉದ್ದೇಶ ಕೂಡಾ ಆಗಿದೆ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ.

ಇಂಥ ಖಚಿತ ತಾತ್ವಿಕ ಗ್ರಹಿಕೆಯಿಂದ ಕಟ್ಟಿಕೊಳ್ಳಲಾದ ನೇರ ಮುಖಾಮುಖಿ ವಿಧಾನದ ಮೂಲಕಆಶಾದೇವಿ ಅವರು ಬಸವಣ್ಣನ ವಚನಗಳಲ್ಲಿ ರೂಪಿತವಾಗಿರುವ ಹೆಣ್ಣಿನ ಪರಿಕಲ್ಪನೆಯ ಮುಖ್ಯವಾದನೆಲೆಗಳನ್ನು ಗುರುತಿಸುತ್ತಾರೆ, ಅವುಗಳೆಂದರೆ, ಅ. ಹೆಣ್ಣಿನ ಸಮಗ್ರ ನಿರಾಕರಣೆ ನೆಲೆಆ. ಆದರ್ಶ ಹೆಣ್ಣಿನ ಪ್ರತಿಪಾದನೆ ನೆಲೆಇ. ಪತೀವ್ರತಾ ಹೆಣ್ಣಿನ ಪ್ರತಿಪಾದನೆ ನೆಲೆಈ. ಪುರಷಾನುಕೂಲ ಸತಿ ಚಿತ್ರಣ ನೆಲೆಉ. ಭಕ್ತಿಸಾಧನಾಮಾರ್ಗದ ಮಹಾವಿಘ್ನದ ನೆಲೆ ಮತ್ತು ಊ. 'ಸೂಳೆ' ಕುರಿತ ಕಠೋರ ಮನಸ್ಸಿನ ನೆಲೆ.

ಈ ಎಲ್ಲಾ ನೆಲೆಗಳಿಗೆ ಸಂಬಂಧಿಸಿದಂತೆ, ವಿಮರ್ಶಕಿ ಬಸವಣ್ಣನ ಸೂಕ್ತ ವಚನಗಳನ್ನು ವಿಶ್ಲೇಷಣೆ ಮಾಡುವ ಮೂಲಕ, ಹೆಣ್ಣಿನ ಕುರಿತ ಆತನ ನಿಲುವುಗಳ ಸ್ವರೂಪ, ಅದರ ಮಿತಿಗಳು ಹಾಗೂ ಅದಕ್ಕಿರುವ ಕಾರಣಗಳನ್ನು ಶೋಧಿಸುತ್ತಾರೆ. ಇದರ ಭಾಗವಾಗಿ ಆಶಾದೇವಿ ಅವರು, ಬಸವಣ್ಣನ 'ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ' ವಚನ ಕುರಿತು ಮಾಡುವ ವಿಶ್ಲೇಷಣೆಯು, ಅವರ ಪ್ರತಿಪಾದನೆಯ ಮಹತ್ವವನ್ನು ಹಾಗೂ ಬಸವಣ್ಣನ ಸ್ತ್ರೀ ಕುರಿತ ಧೋರಣೆಯ ಸ್ವರೂಪವನ್ನು ಚೆನ್ನಾಗಿ ಮನದಟ್ಟು

ಮಾಡುತ್ತದೆ. ಈ ಸಂದರ್ಭದಲ್ಲಿ ವಿಮರ್ಶಕಿ “ಹೆಣ್ಣೊಬ್ಬಳು ಸೂಳೆತನವನ್ನು ಇಲ್ಲಿ ಆಶಿಸಿಯಲ್ಲ ತಾನು ಜೀವಿಸಬೇಕಾದ, ಮಗುವನ್ನು ಪೊರೆಯಬೇಕಾದ ಅನಿವಾರ್ಯತೆಯಲ್ಲಿ ಒಪ್ಪಿಕೊಂಡಿರುವುದು ಈ ವಚನದಲ್ಲಿಯೇ ಸ್ಪಷ್ಟವಾಗಿದೆ. ಹೀಗಿದ್ದೂ ಅವಳದು ಧನದಾಸೆ ಎಂದು ಹೇಳುವ ಬಸವಣ್ಣ ಇಲ್ಲಿ ಕ್ರೂರಿಯಾಗಿ ಕಾಣಿಸುತ್ತಾನೆ. ಅವಳ ಇಕ್ಕಟ್ಟು, ತಳಮಳ, ನೋವು ಬಸವಣ್ಣನಂತಹವರಿಗೂ ಅರ್ಥವಾಗಲಿಲ್ಲವೆಂದರೆ ಅದಕ್ಕಿಂತ ದುರಂತ ಇನ್ನೊಂದಿರಲಾರದು. ಮೊದಲ ಮೂರು ಸಾಲುಗಳಲ್ಲಿ ಅಪ್ರತಿಮ ಮಾನವತಾವಾದಿಯ ಹಾಗೆ ಕಾಣಿಸುವ ಬಸವಣ್ಣ ಕೊನೆಯ ಸಾಲಿಗೆ ಬರುವ ಹೊತ್ತಿಗೆ ಎಂಥ ಕ್ರೂರವಾದ ತೀರ್ಮಾನಕ್ಕೆ ಬಂದುಬಿಡುತ್ತಾನೆ. ನಮ್ಮ ನಿರೀಕ್ಷೆಗೆ ವಿರುದ್ಧವಾಗಿ ಅವಳ ವ್ಯಕ್ತಿತ್ವವನ್ನು ಹೀನೈಸಿ ಧನದಾಸೆಯ ವ್ಯಕ್ತಿ ಎನ್ನುವ ತೀರ್ಮಾನ ಕೊಟ್ಟುಬಿಡುತ್ತಾನೆ. ಬಸವಣ್ಣನ ಇಂತಹ ನಿಲುವಿನ ಹಿಂದೆ ಭಕ್ತ, ಭವಿಗಳ ಕಲ್ಪನೆಗಳೂ ಕೆಲಸ ಮಾಡುತ್ತಿರಬೇಕು”[೧೨] ಎಂದು ಅಭಿಪ್ರಾಯಪಡುತ್ತಾರೆ. ಇದೇ ವಚನ ಕುರಿತು ತಮ್ಮ ‘ವಚನಗಳಲ್ಲಿ ಮಹಿಳಾ ದೃಷ್ಟಿಕೋನ’ (‘ಸರಹದ್ದುಗಳ ಆಚೆ–ಈಚೆ’, ೨೦೦೯) ಎನ್ನುವ ಲೇಖನದಲ್ಲಿ ಬಿ.ಎನ್. ಸುಮಿತ್ರಾಬಾಯಿ ಅವರೂ ಸಹ, “ವಾಸ್ತವದಲ್ಲಿ ಎಳೆಗೂಸಿನ ತಾಯಿಯಾದ ಸೂಳೆಯ ಇಬ್ಬಂದಿತನ, ಕೂಸನ್ನೂ ವಿಟನನ್ನೂ ಒಟ್ಟೊಟ್ಟಿಗೇ ನಿಭಾಯಿಸಬೇಕಾದ ಸ್ಥಿತಿ, ಆಕೆಯ ಆರ್ಥಿಕ ದುರವಸ್ಥೆಯ ಮೂಲದ್ದು. ಅದು ಅವಳ ಬದುಕಿನ ದುರಂತವಾಗಿದೆ. ಆದರೆ ಅದನ್ನು ಚಿತ್ರಿಸುವಲ್ಲಿ ಬಸವಣ್ಣ ಗುರುತಿಸುವುದು ಆಕೆಯ ‘ಧನದಾಸೆ’ ಮಾತ್ರ. ಧನದಾಸೆ ಮನುಷ್ಯನನ್ನು ಹೇಗೆ ತೊಳಲಾಡಿಸುತ್ತದೆಂಬುದಕ್ಕೆ ಆಕೆಯ ಸ್ಥಿತಿ ಒಂದು ಉಪಮಾನವಷ್ಟೇ ಆಗಿ ಇಲ್ಲಿ ಕಂಡಿದೆ. ಈ ರೀತಿಯಲ್ಲಿ ವಚನಗಳಲ್ಲಿ ಭಕ್ತೆಯಾದ ಮಹಿಳೆಯ ಬಗ್ಗೆ ತೋರುವ ದೃಷ್ಟಿಗೂ, ವೀರಶೈವ ಧಾರ್ಮಿಕ ಪರಿಧಿಯ ಆಚೆಯಲ್ಲಿ ಅಸ್ತಿತ್ವದಲ್ಲಿರಬಹುದಾದ ಸ್ತ್ರೀಸಂಕಷ್ಟಗಳನ್ನು ಕುರಿತು ವ್ಯಕ್ತವಾಗುವ ದೃಷ್ಟಿಗೂ ವ್ಯತ್ಯಾಸಗಳನ್ನು ಕಾಣಬಹುದಾಗಿದೆ”[೧೩] ಎಂದು ವಿಶ್ಲೇಷಿಸುವುದನ್ನು ಇಲ್ಲಿ ಗಮನಿಸಬಹುದು.

ಈ ಉಲ್ಲೇಖಗಳು ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಮತ್ತು ‘ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಗಳು’ ಸಾಂಸ್ಕೃತಿಕ ವಿಮರ್ಶೆಯ ದೃಷ್ಟಿಕೋನವನ್ನು ಪಡೆದುಕೊಳ್ಳುವ ಮೂಲಕ, ಹೇಗೆ ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶಾ ರೂಪವೊಂದನ್ನು ‘ದೇಶಿ’ ಕ್ರಮದಲ್ಲಿ ಕಟ್ಟುವ ಪ್ರಯತ್ನ ಮಾಡಿವೆ ಎನ್ನುವುದನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ. ಇದನ್ನು, ಆಶಾದೇವಿ ಅವರು ಹೆಣ್ಣಿನ ಕುರಿತ ಬಸವಣ್ಣನ ಜಡವೂ ಸಾಂಪ್ರದಾಯಕವೂ ಹಾಗೂ ಪ್ರತಿಗಾಮಿಯೂ ಆದ ನಿಲುವುಗಳ ಮೂಲವನ್ನು ಹುಡುಕುವಾಗ ನೀಡುವ ವಿಶ್ಲೇಷಣೆ ಸಹ ರುಜುವಾತುಪಡಿಸುತ್ತದೆ. ಹಾಗೆಯೇ, ಸಮಕಾಲೀನ ಸಂವೇದನೆಯ ಪರಿಕಲ್ಪನೆ ಮೂಲಕ ಪಠ್ಯದ ವಿಶ್ಲೇಷಣೆ ಮಾಡುವಾಗ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ವಿವಿಧ ಧಾರೆಗಳು ತಳೆದಿರುವ ನಿಲುವನ್ನೇ ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ಸಹ ಅಳವಡಿಸಿಕೊಂಡಿರುತ್ತದೆ ಎನ್ನುವುದಕ್ಕೆ, “ಕಾಲದಲ್ಲಿ ಹಿಂದಿನದಾಗಿರುವ ಕೃತಿಯೊಂದನ್ನು ಇಂದಿನವಳಾದ ನಾನು ಯಾಕಾಗಿ ಮತ್ತು ಹೇಗೆ ಓದಬೇಕು? (ರಸಾನುಭವದ ಆಚೆಗೆ

ಕಾವ್ಯದ ಓದಿಲ್ಲವೆ? ರಸಾನುಭವವಾದರೂ ಈ ಅಂಶಗಳ ಆಚೆಗೇ ನಿಲ್ಲವಂಥದ್ದೆ?) ಸಾಹಿತ್ಯ ಕೃತಿಯೊಂದನ್ನು ನನ್ನದಾಗಿಸಿಕೊಳ್ಳುವ ಪ್ರಯತ್ನದಲ್ಲಿರುವ ನಾನು ಈ ಕಾಲದವಳೇ ಆಗಿರುತ್ತೇನಲ್ಲ. ಈ ಕಾಲದ ಆಶಯಗಳ, ನಿರೀಕ್ಷೆಗಳ ಹಿನ್ನೆಲೆಯಲ್ಲೇ ನಾನು ಆ ಹಿಂದಿನ ಸಾಹಿತ್ಯ ಕೃತಿಯೊಂದರ ಜೊತೆ ಅನುಸಂಧಾನ ನಡೆಸುತ್ತಿರುತ್ತೇನೆ. ಈ ಹುಡುಕಾಟದಲ್ಲಿರುವಾಗ ಆ ಕಾಲದ ಸಂದರ್ಭ, ಒತ್ತಡಗಳನ್ನು ನಾನು ಮರೆಯಬಾರದು ಎನ್ನುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಎಂದರೆ,ನಾನು ನನ್ನ ಕಾಲದ ಪ್ರಶ್ನೆಗಳಿಗೆ ಬಸವಣ್ಣನಲ್ಲಿ ಉತ್ತರಗಳನ್ನು ಹುಡುಕುತ್ತಿಲ್ಲ, ಉತ್ತರವನ್ನು ಬಸವಣ್ಣ ಕೊಡಬೇಕೆನ್ನುವ ನಿರೀಕ್ಷೆಯೂ ನನಗಿಲ್ಲ. ಯಾಕೆಂದರೆ ಇದನ್ನು ಶುದ್ಧಾಂಗವಾಗಿ ಬಸವಣ್ಣನ ಮಿತಿ ಎಂದು ಕರೆಯುವುದು ಸಾಧ್ಯವಿಲ್ಲ. ವ್ಯವಸ್ಥೆ ಎಷ್ಟು ಬಲಿಷ್ಠವಾಗಿ ಬಸವಣ್ಣನಂತಹ ವೈಚಾರಿಕನನ್ನು ತನ್ನ ಮುಷ್ಠಿಯೊಳಗೆ ಇರಿಸಿಕೊಳ್ಳುತ್ತದೆ ಎನ್ನುವುದರ ಜೊತೆಗೆ ಅದು ಸ್ವತಃ ಬಸವಣ್ಣನಿಗೂ ಬೇಡದ ವಿಚಾರವಾಗಿತ್ತೇ ಎನ್ನುವ ಪ್ರಶ್ನೆಯನ್ನು ಮಾತ್ರ ಎತ್ತುತ್ತಿದ್ದೇನೆ. ಮಿಕ್ಕ ವಿಚಾರಗಳಲ್ಲಿ ಅಷ್ಟು ಆಧುನಿಕವಾದ ಸೂಕ್ಷ್ಮಸಂವೇದನೆಗಳ ಬಸವಣ್ಣ ಈ ನಿಟ್ಟಿನಲ್ಲಿ ಅದನ್ನು ಸಾಧಿಸದೇ ಹೋದದ್ದರ ಬಗ್ಗೆ ನನಗಾಗುತ್ತಿರುವ ನಿರಾಶೆ, ನೋವನ್ನು ಮಾತ್ರ ಇಲ್ಲಿ ದಾಖಲಿಸುತ್ತಿದ್ದೇನೆ"[೧೪] ಎನ್ನುವ ಆಶಾದೇವಿ ಅವರ ಮಾತುಗಳು ಅತ್ಯುತ್ತಮವಾದ ನಿದರ್ಶನವಾಗಿದೆ.

ಹೀಗಾಗಿ, ಈ ಮಾತುಗಳನ್ನು ಬಸವಣ್ಣನ ವಚನಗಳನ್ನು ಲಿಂಗ ಪರಿಕಲ್ಪನೆ ಮೂಲಕ ಸಾಮಾಜಿಕಾನುಸಂಧಾನ ಮಾಡುವ ವಿಮರ್ಶಕಿಯ ಉದ್ದೇಶ ಮತ್ತು ಅಂಥ ಅನುಸಂಧಾನದಿಂದ ತಲುಪಿದ ತೀರ್ಮಾನಗಳ ಬಗೆಗಿನ ಸಮಜಾಯಿಷಿಗಳು ಎಂದೇನೂ ಭಾವಿಸಬೇಕಿಲ್ಲ. ಬದಲಾಗಿ,ಸಾಹಿತ್ಯ ಮತ್ತು ಪಠಗಳ ಅನುಸಂಧಾನದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇನ್ನಿತರ ಮಾದರಿಗಳು ರೂಪಿಸಿಕೊಂಡಿರುವ ವಿಧಾನ ಮತ್ತು ತಾತ್ವಿಕ ದೃಷ್ಟಿಕೋನಗಳಿಗೆ ಅನುರೂಪವಾದ ಕ್ರಮಗಳನ್ನು ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆ ಸಹ ಕಟ್ಟಿಕೊಳ್ಳುವ ಪ್ರಯತ್ನಗಳನ್ನು ಮಾಡಿರುತ್ತದೆ ಎನ್ನುವುದು ಅವರ ಈ ಮಾತುಗಳಿಂದ ರುಜುವಾತಾಗುತ್ತದೆ.

೫.೯ ಹೆಚ್.ಎಸ್.ಆರ್. ಅವರ 'ಯಶೋಧರ ಚರಿತೆ'ಯ ಸಾಮಾಜಿಕಾನುಸಂಧಾನದ ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಒಂದು ಮುಖ್ಯ ಪರಂಪರೆಯಾಗಿ ರೂಪಿಸುವುದರಲ್ಲಿ ಕನ್ನಡ ನವ್ಯ ವಿಮರ್ಶೆ ವಹಿಸಿರುವ ಪಾತ್ರ ಮಹತ್ತರವಾದದ್ದು. ಈ ಮಾತನ್ನು ಹೇಳುವಾಗ ಕನ್ನಡ ನವ್ಯ ವಿಮರ್ಶೆ, ಪಾಶ್ಚಾತ್ಯ 'ನ್ಯೂಕ್ರಿಟಿಸಿಸಂ'ನ ಪರಿಭಾಷೆ, ಪರಿಕಲ್ಪನೆ ಮತ್ತು ವಿಧಾನಗಳ ಎರವಲು ರೂಪಗಳನ್ನು ಕನ್ನಡ ಸಾಹಿತ್ಯ ಹಾಗೂ ಪಠ್ಯಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಯಥಾರ್ಥವಾಗಿ ಅನ್ವಯಿಸಿದ್ದನ್ನು ಮರೆತಿಲ್ಲ. ಹಾಗೆಯೇ, ಬಹುತೇಕ ನವ್ಯ ವಿಮರ್ಶಕರು ಪಠ್ಯಗಳ ವಸ್ತುನಿಷ್ಠ ಮತ್ತು ಪ್ರಾಯೋಗಿಕ ವಿಶ್ಲೇಷಣಾ ಕ್ರಮಗಳಲ್ಲಿ ಏಕರೂಪೀ ಮಾದರಿಗಳನ್ನು ಜಾರಿಗೆ ತರುವ ಮೂಲಕ ಸಾಹಿತ್ಯ ವಿಮರ್ಶೆಯನ್ನು ಕೃತಕವಾದ ಬೌದ್ಧಿಕ ಚಟುವಟಿಕೆಯಾಗಿ ಪರಿವರ್ತಿಸಿದ್ದನ್ನು ಸಹ ನಿರಾಕರಿಸುತ್ತಿಲ್ಲ. ಆದರೆ, ಸಾಹಿತ್ಯ ಕೃತಿ ಅಥವಾ ಪಠ್ಯವನ್ನು ಅದರ ಬಿಡಿ ಘಟಕಗಳ ಸಮಗ್ರ ವಿವರಗಳು ರೂಪಿಸಿರುವ ಒಟ್ಟು

ಆದರೆ, ಸಾಹಿತ್ಯ ಕೃತಿ ಅಥವಾ ಪಠ್ಯವನ್ನು ಅದರ ಬಿಡಿ ಘಟಕಗಳ ಸಮಗ್ರ ವಿವರಗಳು ರೂಪಿಸಿರುವ ಒಟ್ಟು ವಿನ್ಯಾಸದಲ್ಲಿ ಗ್ರಹಿಸಬೇಕು, ಹಾಗೆಯೇ, ಸಾಹಿತ್ಯ ಕೃತಿಯೊಂದನ್ನು ಶ್ರೇಷ್ಠ ಕಲಾಕೃತಿ ಎಂದು ಕರೆಯಬೇಕಾದರೆ, ಮುಖ್ಯವಾಗಿ ಅದು ಭಾಷಿಕವಾಗಿ ಉತ್ಕೃಷ್ಟವಾದ ರಚನೆಯಾಗಿರಬೇಕು ಎಂದು ಪ್ರತಿಪಾದಿಸಿದ ನವ್ಯ ವಿಮರ್ಶೆಯ ವಿಚಾರಗಳು ನವೋದಯದ 'ರಸನಿಷ್ಠ' ಅಥವಾ 'ಸಹೃದಯ' ವಿಮರ್ಶೆಯ ವಿಚಾರಗಳಿಗೆ ಹೋಲಿಸಿದಾಗ ಕನ್ನಡ ವಿಮರ್ಶಾ ಪರಂಪರೆಯ ಬೆಳವಣಿಗೆ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ವಿಚಾರಗಳಾಗಿವೆ ಎನ್ನುವುದನ್ನು ಸರಳವಾಗಿ ನಿರಾಕರಿಸಲು ಕೂಡಾ ಸಾಧ್ಯವಿಲ್ಲ.

ಕನ್ನಡ ನವ್ಯ ವಿಮರ್ಶೆ ಮುಖ್ಯವಾಗಿ ಎರಡು ಮಾದರಿಯ ವಿಮರ್ಶಕರನ್ನುಸೃಷ್ಟಿಸಿತು. ಅವರುಗಳೆಂದರೆ;ಅ. ಪ್ರಕಾರ ಸ್ವೀಕೃತಿ ವಿಮರ್ಶಕರು ಮತ್ತು ಆ. ಪ್ರಜ್ಞಾ ಸ್ವೀಕೃತಿ ವಿಮರ್ಶಕರು. 'ಪ್ರಕಾರ ಸ್ವೀಕೃತಿ ವಿಮರ್ಶಕರು' ಇಂದಿಗೂ ಕೂಡ ಸಾಹಿತ್ಯ ಕುರಿತ ನವ್ಯ ವಿಮರ್ಶೆಯ ಪ್ರಧಾನವಾದ ತಾತ್ವಿಕತೆ ಮತ್ತು ವಿಶ್ಲೇಷಣಾ ವಿಧಾನಗಳನ್ನು ಯಾವುದೇ ಮೂಲಭೂತ ಬದಲಾವಣೆಗಳಿಲ್ಲದೆ ಶ್ರದ್ಧಾಪೂರ್ವಕವಾಗಿ ಅನುಸರಿಸಿಕೊಂಡು ಬರುತ್ತಿರುವವರು.ಇವರ ವಿಮರ್ಶೆಗಳಲ್ಲಿ, ಇಂದಿನ ನವವಸಾಹತುಶಾಹಿಯ ಆಧುನಿಕೋತ್ತರ ಯುಗದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಎದುರಾಗಿರುವ ಬಿಕ್ಕಟ್ಟುಗಳನ್ನು ಕುರಿತ ಯಾವುದೇ ಗಂಭೀರವಾದ ಪ್ರಶ್ನೆಗಳು ಮುಖ್ಯವಾಗಿರುವುದಿಲ್ಲ. ಹೀಗಾಗಿಯೇ, ಪಠ್ಯದ ಸಾಹಿತ್ಯಾತ್ಮಕ ವಿಶ್ಲೇಷಣೆ ಮತ್ತು ಮೌಲ್ಯಮಾಪನದ ವಿಧಾನವನ್ನೇ ಇಂದಿಗೂ ಮುಖ್ಯ ಆಸಕ್ತಿಯಾಗಿ ಉಳಿಸಿಕೊಂಡಿದ್ದಾರೆ. ಜಿ.ಎಸ್. ಆಮೂರ, ಟಿ.ಪಿ. ಅಶೋಕ, ಗಿರಡ್ಡಿಗೋವಿಂದರಾಜ ಮತ್ತು ನರಹಳ್ಳಿ ಬಾಲಸುಬ್ರಹ್ಮಣ್ಯ ಮೊದಲಾದವರು ಇಂಥ ಕೆಲವು ಪ್ರಮುಖ ವಿಮರ್ಶಕರು ಆದರೆ, 'ಪ್ರಜ್ಞಾ ಸ್ವೀಕೃತಿ ವಿಮರ್ಶಕರು' ಸಾಹಿತ್ಯ ಕುರಿತ ನವ್ಯ ವಿಮರ್ಶೆಯ ತಾತ್ವಿಕ ಪ್ರಜ್ಞೆಯನ್ನು ಕಾಲಕಾಲಕ್ಕೆ ಬದಲಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕಪ್ರಶ್ನೆಗಳ ಆಶೋತ್ತರಗಳಿಗನುಸಾರವಾಗಿ ಪರೀಕ್ಷೆಗೊಳಪಡಿಸಿಕೊಳ್ಳುತ್ತಾ ಹೊಸದಾಗಿ ರಚಿಸಿಕೊಂಡವರು. ನವ್ಯ ವಿಮರ್ಶಾ ಪರಿಕರಗಳು ಮತ್ತು ವಿಧಾನಗಳನ್ನು ಸಾಹಿತ್ಯಕ ಮತ್ತು ಸಾಹಿತ್ಯೇತರ ಸಂಗತಿಗಳ ಅನುಸಂಧಾನಕ್ಕೆ ಸೂಕ್ತವಾಗಿ ಅನ್ವಯವಾಗುವಂತೆ ಇನ್ನಿತರ ತಿಳಿವಳಿಕೆಗಳೊಂದಿಗೆ ಸಂಯೋಜಿಸಿಕೊಂಡವರು. ಇಂಥಹವರಲ್ಲಿ ಎಚ್.ಎಸ್. ರಾಘವೇಂದ್ರರಾವ್, ರಾಜೇಂದ್ರ ಚೆನ್ನಿ ಮತ್ತು ಯು.ಆರ್. ಅನಂತಮೂರ್ತಿ ಬಹಳ ಮುಖ್ಯರು.

ಈ ನೆಲೆಯಿಂದ ಹೆಚ್.ಎಸ್.ಆರ್. ಅವರ 'ವಿಶ್ಲೇಷಣೆ' (೧೯೮೧) 'ನಿಲುವು' (೧೯೮೯), ಮತ್ತು 'ಹಾಡೆ ಹಾದಿಯ ತೋರಿತು' (೧೯೯೫) ಮೊದಲಾದ ವಿಮರ್ಶಾ ಕೃತಿಗಳು ಹಾಗೂ ಅವರು ಸಂಪಾದಿಸಿರುವ 'ಶತಮಾನದ ಸಾಹಿತ್ಯ ವಿಮರ್ಶೆ' (೨೦೦೧) ಕೃತಿಯ ಪ್ರಸ್ತಾವನೆಯು ಕನ್ನಡ ಸಾಹಿತ್ಯ ವಿಮರ್ಶಾ ಪರಂಪರೆಯ ಗತಿಶೀಲ ಸ್ವರೂಪಕ್ಕೆ ಸೂಕ್ತ ನಿದರ್ಶನವಾಗಿದೆ.

೫.೯.೧ ಆಯ್ಕೆಯ ಬದುಕಿನ ಅಚಲ ನಿಲುವಿನ ಮನೋಪ್ರಧಾನ ನೆಲೆ

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶಾ ಪರಂಪರೆಯ ಆರಂಭಿಕ ಘಟ್ಟದ ನವೋದಯ ವಿಮರ್ಶೆಯಿಂದ ಇಂದಿನ ಆಧುನಿಕೋತ್ತರ ಘಟ್ಟದ ಸಾಂಸ್ಕೃತಿಕ ವಿಮರ್ಶೆಯವರೆಗೂ, ಆಧುನಿಕಪೂರ್ವ ಕನ್ನಡ ಸಾಹಿತ್ಯದ ಮಹತ್ವದ ಕವಿಯಾದ ಜನ್ನನ ಕಾವ್ಯಗಳನ್ನು ನಿರಂತರವಾಗಿ ವಿಶ್ಲೇಷಣೆಗೆ ಒಳಪಡಿಸುತ್ತಾ ಬರಲಾಗಿದೆ. ಕನ್ನಡ ಸಾಹಿತ್ಯ ವಿಮರ್ಶೆಯ ಪ್ರಮುಖ ಘಟ್ಟಗಳಾಗಬಹುದು ಅಥವಾ ಕನ್ನಡ ವಿಮರ್ಶೆಯಲ್ಲಿ ಆಯಾ ಘಟ್ಟಗಳ ಕಾಲದಲ್ಲಿ ಪ್ರಸಿದ್ಧಿಗೆ ಬಂದ ವಿವಿಧ ವಿಮರ್ಶಾ ರೂಪಗಳಾಗಿರಬಹುದು ಇವೆಲ್ಲವುಗಳಿಗೂ ಅತ್ಯಂತ ಕುತೂಹಲಕಾರಿಯಾದ, ನಿಗೂಢವಾದ ಮತ್ತು ಬಿಡಿಸಲಾದ ಒಗಟಾದವನೆಂದರೆ 'ಜನ್ನ'ನೊಬ್ಬನೇ ಎನ್ನಬಹುದು. ಈ ಯಾವುದೇ ವಿಮರ್ಶಾ ಘಟ್ಟವಾಗಲೀ, ವಿಮರ್ಶಾ ರೂಪವಾಗಲಿ ಅಥವಾ ವಿಮರ್ಶಾ ವಿಧಾನವಾಗಲೀ ಸಮಾನವಾಗಿ ಒಪ್ಪಿಕೊಳ್ಳುವ ಸಂಗತಿಯೆಂದರೆ, ಜನ್ನನ ಕಾವ್ಯಗಳಲ್ಲಿ ಎತ್ತಿರುವ 'ಸಾಂಸ್ಥಿಕ ಧರ್ಮ' ಮತ್ತು ಮನುಷ್ಯನ 'ಸ್ವಭಾವ ಧರ್ಮ'ಗಳ ನಡುವಿನ ಸಂಘರ್ಷವನ್ನು ಕುರಿತ ಪ್ರಶ್ನೆಗಳು ಅತ್ಯಂತ ಸಂಕೀರ್ಣವಾದವು ಹಾಗೂ ಸಮಗ್ರವಾಗಿ ವಿವರಿಸಲು ಸಾಧ್ಯವಿಲ್ಲದವು ಎನ್ನುವುದು.

ಜನ್ನನ ಕಾವ್ಯಗಳನ್ನು ಅದರಲ್ಲೂ, ಅವನ 'ಯಶೋಧರ ಚರಿತೆ'ಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ಬಹುಸ್ತರೀಯ ಮತ್ತು ಬಹುರೂಪೀಯ ನೆಲೆಗಳಲ್ಲಿ ವ್ಯಾಪಕವಾದ ಅನುಸಂಧಾನಕ್ಕೆ ಒಳಪಡಿಸಿವೆ. ಮುಖ್ಯವಾಗಿ, ನವ್ಯೋತ್ತರ ಕಾಲಘಟ್ಟದ ಸಾಮಾಜಿಕಾನುಸಂಧಾನದ ಪ್ರಮುಖ ವಿಮರ್ಶಾ ಪ್ರಕಾರವಾದ ಸ್ತ್ರೀವಾದಿ ವಿಮರ್ಶೆಯು 'ಯಶೋಧರ ಚರಿತೆ'ಯನ್ನು ಲಿಂಗ ಪರಿಕಲ್ಪನೆಯ ಬಹುರೂಪಿ ಪ್ರಶ್ನೆಗಳ ಮೂಲಕ ವಿಶ್ಲೇಷಣೆಗೊಳಪಡಿಸಿದೆ. ಈ ಸಂದರ್ಭದಲ್ಲಿ ಇದು 'ಯಶೋಧರ ಚರಿತೆ'ಯನ್ನು ಪ್ರಧಾನವಾಗಿ, ಸ್ತ್ರೀವಾದಿ ಮೀಮಾಂಸೆಯ ಅನ್ವಯಿಕ ವಿಧಾನದ ಮೂಲಕ ಅನುಸಂಧಾನ ಮಾಡಿರುತ್ತದೆ. ಸ್ತ್ರೀವಾದಿ ಚಿಂತನೆಯ ಪ್ರಮುಖ 'ಪರಿಕಲ್ಪನೆ'ಗಳು ಮತ್ತು 'ಐಡಿಯಾಲಜಿ' ರೂಪಿಸಿರುವ ತಾತ್ವಿಕತೆಯ ಮೂಲಕ ಪಠ್ಯದೊಳಗಿನ ಪಾತ್ರಗಳು, ಪ್ರಸಂಗಗಳು, ಸನ್ನಿವೇಶಗಳು ಮತ್ತು ಉಕ್ತಿರೂಪಗಳನ್ನು ವಿಶ್ಲೇಷಿಸುವುದು, ಇವುಗಳ ಮೇಲೆ ಕವಿಯ ಕೃತಿ ರಚನಾ ಕಾಲಘಟ್ಟದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭ ಎಷ್ಟರಮಟ್ಟಿಗೆ ಪ್ರಭಾವಬೀರಿದೆ ಎನ್ನುವುದನ್ನು ಪರಿಶೀಲಿಸುವುದು, ಈ ಕುರಿತು ಸ್ವತಃ ಕವಿಯ ದೃಷ್ಟಿಕೋನ ಏನು ಎನ್ನುವುದನ್ನು ಚರ್ಚಿಸುವುದು ಹಾಗೂ ಅಂತಿಮವಾಗಿ ಕಾವ್ಯದಲ್ಲಿ ನಿರೂಪಿತವಾಗಿರುವ 'ಹೆಣ್ಣಿನ ಪರಿಕಲ್ಪನೆ'ಯ ಸ್ವರೂಪ ಕುರಿತು ವ್ಯಾಖ್ಯಾನಿಸುವುದು ಈ ವಿಧಾನದ ಸಾಮಾನ್ಯ ಸ್ವರೂಪವಾಗಿದೆ. ಹೀಗಾಗಿ, ಇಂಥ ಕಡೆಗಳಲ್ಲಿ ಸಾಹಿತ್ಯಕ ಮತ್ತು ಸಾಹಿತ್ಯೇತರ ವಿಶ್ಲೇಷಣಾ ವಿಧಾನಗಳ ಸಂಯೋಜಕ ರೂಪವಾದ ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನವಾಗಲೀ ಅಥವಾ ಪಠ್ಯಾಂತರ್ಗತ ವಿವರಗಳ ಮೂಲಕ ಕಟ್ಟಲಾಗುವ ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನವಾಗಲೀ ಬಳಕೆಯಾಗುವುದಿಲ್ಲ. ಹೀಗಾಗಿಯೇ ಇದೊಂದು, ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನದ ಪರಿಷ್ಕೃತ ರೂಪವಾಗಿರುತ್ತದೆ.

ಆದ್ದರಿಂದ, ಇಂಥ ಅನ್ವಯಿಕ ವಿಶ್ಲೇಷಣಾ ವಿಧಾನಗಳು ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಸಾಮಾನ್ಯವಾಗಿ ಅಪೇಕ್ಷಿತ ಅಥವಾ ನಿರೀಕ್ಷಿತ ಸತ್ಯಗಳನ್ನಷ್ಟೇ ಕಾಣಿಸುತ್ತವೆ. ಏಕೆಂದರೆ ಪಠ್ಯ, ಸಮಾಜ ಮತ್ತು ಸಂಸ್ಕೃತಿಗಳ ಸಮಾವಿಷ್ಟನೆಲೆಯ ಅನುಸಂಧಾನ ವಿಧಾನ ಮಾತ್ರ ಅನಿರೀಕ್ಷಿತವಾದ ಸಂಕೀರ್ಣ ಸತ್ಯಸ್ಥಿತಿಗಳನ್ನು ಶೋಧಿಸುವ ಸಾಧ್ಯತೆ ಹೊಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಹೆಚ್.ಎಸ್.ಆರ್. ಅವರ 'ಸಾಂಸ್ಕೃತಿಕ ಪಠ್ಯವಾಗಿ "ಯಶೋಧರ ಚರಿತೆ" ('ಜನ್ನ', ಸಂ. ಗಿರಡ್ಡಿ ಗೋವಿಂದರಾಜ, ೨೦೦೮) ಲೇಖನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಅತ್ಯಂತ ಮಹತ್ವಪೂರ್ಣವಾದ ಬರವಣಿಗೆಯಾಗಿದೆ. ಇದರಲ್ಲಿ ಅವರು, 'ಯಶೋಧರ ಚರಿತೆ'ಯ ಸಾಂಸ್ಕೃತಿಕಾನುಸಂಧಾನದ ಭಾಗವಾಗಿ ಮಾಡುವ ಸಾಮಾಜಿಕಾನುಸಂಧಾನವು 'ಲಿಂಗ ಪರಿಕಲ್ಪನೆ'ಯ ಮೂಲಕ ಪಠ್ಯವನ್ನು ನೇರವಾಗಿ ಅನುಸಂಧಾನ ಮಾಡುವ ವಿಧಾನಗಳಿಗಿಂತ ಹೆಚ್ಚು ಅರ್ಥಪೂರ್ಣವಾದ ಫಲಿತಗಳನ್ನು ಒದಗಿಸಿದೆ. ಇದು, ಸಮಾಜ ಮತ್ತು ಸಂಸ್ಕೃತಿಗಳ ಸ್ಥಿತ್ಯಂತರೀಕರಣದ ಸ್ವರೂಪವು, ವ್ಯಕ್ತಿಗಳ ಸ್ವಭಾವ ಹಾಗೂ ಆಲೋಚನಾಕ್ರಮಗಳ ಮೇಲೆ ಉಂಟು ಮಾಡುವ ಪರಿಣಾಮದಿಂದ ವ್ಯಕ್ತಿಗಳ ಬದುಕಿನಲ್ಲಾಗುವ ಅನಿರೀಕ್ಷಿತ ಪಲ್ಲಟಗಳನ್ನು ಅದ್ಭುತವಾಗಿ ವಿವರಿಸುತ್ತದೆ. ಹಾಗೆಯೇ, ವ್ಯಕ್ತಿಗಳ ಸ್ವಭಾವ ಮತ್ತು ವರ್ತನೆಗಳಲ್ಲಾಗುವ ಪಲ್ಲಟವು, ಸಮಾಜ ಹಾಗೂ ಸಂಸ್ಕೃತಿಗಳ ಚಲನಶೀಲ ಸ್ವರೂಪದ ಮೇಲೆ ಬೀರುವ ಗಾಢವಾದ ಪ್ರಭಾವವನ್ನು ಸಹ ಅಷ್ಟೇ ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ. ಅದರಲ್ಲೂ, ಇಂಥ ಸ್ಥಿತ್ಯಂತರೀಕರಣವು ವ್ಯಕ್ತರೂಪದಲ್ಲಿರುವುದಕ್ಕಿಂತ ಸುಪ್ತಾವಸ್ಥೆಯಲ್ಲಿದ್ದಾಗ ಉಂಟು ಮಾಡುವ ಪರಿಣಾಮಗಳು ಮತ್ತು ಪಲ್ಲಟಗಳು ಅತ್ಯಂತ ಸಂಕೀರ್ಣವಾದವುಗಳು ಎನ್ನುವುದು ಅವರ ವಿಶ್ಲೇಷಣೆಯಾಗಿದೆ. ಹಾಗೆ ನೋಡಿದರೆ ಇದು, ವ್ಯಕ್ತಿಯ ವ್ಯಕ್ತಿತ್ವ ಮತ್ತು ಬದುಕಿನ ಮೇಲೆ ಬಲಿಷ್ಠ ನಿಯಂತ್ರಣಾಧಿಕಾರವನ್ನುಳ್ಳ ಎಲ್ಲ ಯಾಜಮಾನ್ಯ ವ್ಯವಸ್ಥೆಗಳಿಗೆ ವ್ಯಕ್ತಿ ತೋರಿಸುವ ತೀವ್ರವಾದ ಬಂಡಾಯವೇ ಆಗಿದೆ. ಸಾಮಾನ್ಯವಾಗಿ ಇಂಥ ಸನ್ನಿವೇಶ ಅಥವಾ ನಿರ್ಣಯವನ್ನು ಎದುರಿಸಲಾಗದ ಸಾಂಸ್ಥಿಕ ವ್ಯವಸ್ಥೆಗಳು ಇವುಗಳನ್ನು 'ಅಸಹಜ', 'ಅನೀತಿ', 'ವಿಕೃತಿ' ಮತ್ತು 'ವೈಪರಿತ್ಯ' ಮೊದಲಾದ ರೂಪಗಳಲ್ಲಿ ಗುರುತಿಸುತ್ತದೆ. ಆ ಮೂಲಕ ಸಮಷ್ಟಿ ವಿರುದ್ಧದ ಇಂಥ ವಿಶಿಷ್ಟವಾದ ವ್ಯಷ್ಟಿರೂಪದ ಸಂಘರ್ಷಾತ್ಮಕ ಪ್ರತಿರೋಧಗಳನ್ನು ಅಮಾನ್ಯೀಕರಿಸುವ ಮೂಲಕ ದಮನಿಸುತ್ತದೆ ಎನ್ನುವುದು ವಿಮರ್ಶಕರು 'ಯಶೋಧರ ಚರಿತೆ'ಯ ಸಾಂಸ್ಕೃತಿಕಾನುಸಂಧಾನದ ಸಂದರ್ಭದಲ್ಲಿ ಮಾಡುವ ಸಾಮಾಜಿಕಾನುಸಂಧಾನದ ವಿಶ್ಲೇಷಣೆಯ ಮುಖ್ಯ ಗ್ರಹಿಕೆಯಾಗಿದೆ. ಇದು, 'ಯಶೋಧರ ಚರಿತೆ'ಯ ಪಠ್ಯ ಮತ್ತು ಅದರ ಪ್ರಮುಖ ಪಾತ್ರವಾದ 'ಅಮೃತಮತಿ' ಕುರಿತು ಕನ್ನಡದ ಬಹುತೇಕ ಲಿಂಗ ಪರಿಕಲ್ಪನಾ ಪ್ರಧಾನ ನೇರ ಸಾಮಾಜಿಕಾನುಸಂಧಾನ ಅಥವಾ ಅನ್ವಯಿಕ ವಿಶ್ಲೇಷಣಾ ವಿಧಾನದ ಗ್ರಹಿಕೆಗಳಿಗಿಂತ ಸಂಪೂರ್ಣ ಭಿನ್ನವಾದ ಹಾಗೂ ಅತ್ಯಂತ ಅರ್ಥಪೂರ್ಣವಾದ ಗ್ರಹಿಕೆಯಾಗಿದೆ.

೫.೯.೨ ಸಾಮಾಜಿಕಾನುಸಂಧಾನದ ಸಾಧನಗಳಾಗಿ ಸಮಾಜಶಾಸ್ತ್ರೀಯ ಪರಿಕಲ್ಪನೆಗಳ ಬಳಕೆ

ಹೆಚ್.ಎಸ್.ಆರ್. ಅವರು ಈ ಲೇಖನದಲ್ಲಿ ಪ್ರಧಾನವಾಗಿ ಸಾಂಸ್ಕೃತಿಕ ಸಮಾಜಶಾಸ್ತ್ರದ ಜ್ಞಾನವನ್ನು ವಿಶ್ಲೇಷಣಾ ಸಾಧನವಾಗಿ ಬಳಸಿಕೊಂಡಿದ್ದಾರೆ. ಅದರಲ್ಲೂ, ಮೇರಿ ಡಗ್ಲಾಸ್ ಎಂಬ ಸಮಾಜಶಾಸ್ತ್ರಜ್ಞೆಯ ಸಂಸ್ಕೃತಿ ವಿಶ್ಲೇಷಣೆಯ ವಿಚಾರಗಳು ಮತ್ತು ಪರಿಕಲ್ಪನೆಗಳನ್ನು ಪ್ರಮುಖ ಸಾಧನಗಳಾಗಿ ಉಪಯೋಗಿಸಿಕೊಳ್ಳುತ್ತಾರೆ. ಆಕೆ, ಒಂದು ಸಮಾಜದ ಸಾಂಸ್ಕೃತಿಕ ರಚನೆಗಳು ವ್ಯಕ್ತಿಯ ಬದುಕಿನ ಮೇಲೆ ವಿಧಿಸಿರುವ ನಡವಳಿಕೆಯ ಪರಿಮಿತಿಯ ಸ್ವರೂಪವನ್ನು ಕುರಿತು ವಿವರಿಸುವುದಕ್ಕಾಗಿ ಬಳಸಿರುವ 'ಸಾಂಸ್ಕೃತಿಕ ಗಡಿರೇಖೆಗಳು' (cultural Boundaries) ಎನ್ನುವ ಪರಿಕಲ್ಪನೆಯನ್ನು ಮತ್ತು ಅವುಗಳನ್ನು ವ್ಯಕ್ತಿ ಉಲ್ಲಂಘಿಸಿದಾಗ ಪಡೆಯುವ ವಿಶಿಷ್ಟಾನುಭವದ ಸ್ವರೂಪವನ್ನು ನಿರೂಪಿಸುವುದಕ್ಕಾಗಿ ಬಳಸಿರುವ 'ಮಾರ್ಗಪಲ್ಲಟ' (Deveance) ಎನ್ನುವ ಪರಿಕಲ್ಪನೆಯನ್ನು ವಿಮರ್ಶಕರು ಇಲ್ಲಿ ಪಠ್ಯ ಮತ್ತು ಪಾತ್ರಗಳ ಸ್ವಭಾವದ ವಿಶ್ಲೇಷಣೆಗೆ ಮುಖ್ಯ ಪರಿಕರಗಳಾಗಿ ಅನ್ವಯಿಸುತ್ತಾರೆ. ಸಾಮಾನ್ಯವಾಗಿ, ಇಂಥ ಉಲ್ಲಂಘನೆಯು ಲೈಂಗಿಕ ನೈತಿಕತೆಯ ಕಟ್ಟುಪಾಡನ್ನು ಸೀಮೋಲ್ಲಂಘಿಸಿ ಪಡೆಯುವ ಹೊಸಹುಟ್ಟಿಗೆ ಸಂಬಂಧಿಸಿದ್ದಾಗಿರುತ್ತದೆ. ನೂತನ ಬದುಕಿನ ಆಯ್ಕೆಯ ಸಾಹಸವಾಗಿರುತ್ತದೆ. ಅಮೃತಮತಿಯದೂ ಕೂಡಾ ಇಂಥ ಸೀಮೋಲ್ಲಂಘನೆ ಮೂಲಕ ನವಬದುಕಿನ ನಿರ್ಮಾಣಕ್ಕಾಗಿ ಮಾಡಿದ ವ್ಯಕ್ತಿರೂಪೀ ಬಂಡಾಯವೇ. ಇದನ್ನು ಹೆಚ್.ಎಸ್.ಆರ್ ಹೀಗೆ ನೋಡಿದಾಗ, "ನೋಡುವ ಕಣ್ಣಳಸಿರಿ, ಕೂಡುವ ತೋಳ್ಗಳ ಪುಣ್ಯ, ಮಾತಾಡುವ ಬಾಯ್ಗಳ ರಸಾಯನ"ವಾದ ಕುವರ ವಿದ್ಯಾಧರನ ರೂಪವು ಯಾಕೆ ಅಮೃತಮತಿಗೆ ಹಿಡಿಸಲಿಲ್ಲವೆಂಬ ಪ್ರಶ್ನೆಯು ಸಹಜವಾಗಿಯೇ ಮೂಡುತ್ತದೆ. ಅಷ್ಟಾವಂಕನ ಕುರೂಪ, ಯಶೋಮತಿಯ ಕ್ರೌರ್ಯ, ಮತ್ತು ಅಮೃತಮತಿಯ ಇಂದ್ರಿಯಾನುಭವಲೀಲತೆಗಳನ್ನು ಮಾರ್ಗಪಲ್ಲಟದ ಗಡಿರೇಖೆಗಳೆಂದೇ ನೋಡುವ ಸಾಧ್ಯತೆ ಇದೆ" [೧೫]ಎಂದು ವಿಶಿಷ್ಟವಾಗಿ ವಿಶ್ಲೇಷಿಸುತ್ತಾರೆ.

ಈ ಪರಿಕಲ್ಪನೆಗಳ ಜೊತೆಗೆ ವಿಮರ್ಶಕರು, ಒಂದು ಸಮಾಜ ಜಗತ್ತನ್ನು ಗ್ರಹಿಸುವುದಕ್ಕಾಗಿ ರೂಪಿಸಿಕೊಳ್ಳುವ 'ಪ್ರತೀಕಗಳೇ' ಸ್ವಯಂ ಸೃಷ್ಟಿಸುವ 'ಪ್ರತಿಜಗತ್ತು' ಮತ್ತು ಅದರ 'ಸರಹದ್ದಿ'ನ ಸ್ವರೂಪವನ್ನು ವಿವರಿಸುವುದಕ್ಕಾಗಿ ಬಳಸಿರುವ 'ಪ್ರತೀಕಾತ್ಮಕ ಗಡಿರೇಖೆಗಳು' ಎನ್ನುವ ಪರಿಕಲ್ಪನೆಯನ್ನು (Symbolic boundaries) ಹಾಗೂ ಇಂಥ 'ಪ್ರತಿಜಗತ್ತು'ಗಳ ನಡುವೆ ಉಂಟಾಗುವ ಅಂತರದಿಂದ ಸಾಂಸ್ಕೃತಿಕವಾಗಿ ಏರ್ಪಡುವ ಪ್ರತ್ಯೇಕತೆಯ ಅವಸ್ಥೆಯ ಸ್ವರೂಪವನ್ನು ನಿರೂಪಿಸುವುದಕ್ಕಗಿ ಬಳಸಿರುವ 'ಸಾಂಸ್ಕೃತಿಕ ಅಂತರ' (cultural lags) ಎನ್ನುವ ಪರಿಕಲ್ಪನೆಯನ್ನು ತಮ್ಮ ವಿಶ್ಲೇಷಣೆಯ ಇನ್ನೆರಡು ಪರಿಕರಗಳಾಗಿ ಬಳಸುತ್ತಾರೆ. ಸಾಂಸ್ಕೃತಿಕ ಅಂತರವು, ಎರಡು ಭಿನ್ನ ಸಮುದಾಯಗಳು ಅಥವಾ ವ್ಯಕ್ತಿಗಳ ನಡುವೆ ಮಾತ್ರವೇ ಉಂಟಾಗುವುದಿಲ್ಲ. ಒಂದೇ ಕುಟುಂಬದೊಳಗೆ ಅಥವಾ ಗಂಡ-ಹೆಂಡತಿ ಮಧ್ಯೆ ಕೂಡಾ ಇದು

ಏರ್ಪಡಬಹುದು. ಇದನ್ನು, ಅವರು "ಈ ಕಾವ್ಯದಲ್ಲಿ ಯಶೋಧರ–ಚಂದ್ರಮತಿ, ಯಶೋಧರ–ಅಮೃತಮತಿ, ಮಾರಿದತ್ತ–ಅಭಯರುಚಿ/ಅಭಯಮತಿ ಮುಂತಾದ ಜೋಡಿಗಳ ನಡುವೆ ಉಂಟಾಗಿರುವ ಅಂತರವನ್ನು ಹೀಗೆಯೇ ಗ್ರಹಿಸಬೇಕು. ಏಕೆಂದರೆ ಇವು ಕೇವಲ ಆ ವ್ಯಕ್ತಿಗಳಿಗೆ ಸಂಬಂಧಿಸಿದ ವಾಸ್ತವವಾಗದೆ ಅವರು ಪ್ರತಿನಿಧಿಸಬಹುದಾದ ವಿಭಿನ್ನ ಸಮುದಾಯಗಳ ಜೀವನಕ್ರಮಕ್ಕೆ ಕನ್ನಡಿ ಹಿಡಿಯುತ್ತವೆ. ಈ ಅಂತರಗಳು ವೈಯಕ್ತಿಕವಾಗದೆ, ಆಯಾ ಪಾತ್ರಗಳು ಮೂಡಿಬಂದಿರಬಹುದಾದ ಸಮುದಾಯಗಳ ಫಲಿತಗಳೇ ಆಗಿರುತ್ತವೆಂದು ಈಗಾಗಲೇ ಕಂಡುಕೊಂಡಿದ್ದೇವೆ"[೧೬] ಎಂದು ವಿಶ್ಲೇಷಿಸುತ್ತಾರೆ.

ಸಮುದಾಯಗಳ ಪ್ರತೀಕಾತ್ಮಕ ಜಗತ್ತುಗಳು ಸೃಷ್ಟಿಸುವ ಸಾಂಸ್ಕೃತಿಕ ಅಂತರದಿಂದ, ಯಾಜಮಾನ್ಯ ಸಮುದಾಯಗಳ ಪ್ರತೀಕಾತ್ಮಕ ಜಗತ್ತುಗಳಿಗೆ ಪರ್ಯಾಯವಾಗಿ ಕೆಳ ಅಥವಾ ದಮನಿತ ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಬಗೆಯ ಪ್ರತೀಕಾತ್ಮಕ ಜಗತ್ತುಗಳನ್ನು ಕಟ್ಟಿಕೊಳ್ಳುತ್ತವೆ. ಇವು ಮುಖ್ಯವಾಗಿ ಆಚರಣೆಗಳು, ವಿಧಿಕ್ರಿಯೆಗಳು ಮತ್ತು ನಂಬಿಕೆಯ ಲೋಕಗಳ ರೂಪದಲ್ಲಿ ಆವೃತ್ತವಾಗಿರುತ್ತವೆ. ಎರಡು ಪ್ರತೀಕಾತ್ಮಕ ಜಗತ್ತುಗಳ ನಡುವಿನ ಈ ಪ್ರತ್ಯೇಕ ಅಸ್ತಿತ್ವವು, ಯಾವಾಗ ಯಾಜಮಾನ್ಯ ಜಗತ್ತು ತನ್ನ ಕೆಳ ಅಥವಾ ಅಧೀನ ಜಗತ್ತಿನ ಮೇಲೆ ಹೊಂದಿರುವ ನಿಯಂತ್ರಣವನ್ನು ಇನ್ನಷ್ಟು ಬಿಗಿಗೊಳಿಸಿಸುವುದೋ ಅಥವಾ ತೀವ್ರಗೊಳಿಸುವುದೋ ಆಗ ಅದು ಸಾಂಸ್ಕೃತಿಕ ಸಂಘರ್ಷದ ಬಹುರೂಪಿ ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಸಮುದಾಯಗಳ ಸಾಂಸ್ಕೃತಿಕ ಗಡಿರೇಖೆಗಳ ಉಲ್ಲಂಘನೆಯ ರೂಪವಾದ ಸಾಂಸ್ಕೃತಿಕ ಸಂಘರ್ಷವು, ಯಾವಾಗಲೂ ಸಾಮಾನ್ಯವಾಗಿ ಪಠ್ಯದ ಪ್ರಧಾನ ಪಾತ್ರಗಳ ಅಥವಾ ಪ್ರಮುಖ ಪಾತ್ರಗಳ ಸ್ವಭಾವ ಚಿತ್ರಣದ ಮೂಲಕ ಮೈದಾಳುತ್ತದೆ.

ಜನ್ನನ 'ಯಶೋಧರ ಚರಿತೆ' ಹಾಗೂ ಅದರ ಮುಖ್ಯ ಪಾತ್ರಗಳು ಈ ಸಾಂಸ್ಕೃತಿಕ ಸಂಘರ್ಷದ ಅತ್ಯುತ್ತಮ ಮಾದರಿಗಳಾಗಿವೆ. ಅದರಲ್ಲೂ "ಈ ಗಡಿರೇಖೆಯನ್ನು ದಾಟಿದ ಅಮೃತಮತಿಯು ನವಜನ್ಮವನ್ನು ಪಡೆಯುತ್ತಾಳೆ. ಹೀಗೆ ಆದಾಗ ಅವಳು ಬದುಕುವ ರೀತಿಯೇ ಬದಲಾಗುತ್ತದೆ. ಕುತೂಹಲದ ಸಂಗತಿಯೆಂದರೆ, ಇದರ ಸಂಗಡವೇ ಅವಳ ಪ್ರತೀಕಾತ್ಮಕ ವಾಸ್ತವತೆಯೂ ಜೊತೆ ಜೊತೆಗೆ ಬದಲಾಗುತ್ತಾ ಹೋಗುತ್ತದೆ. ಇಲ್ಲಿ ಬದಲಾವಣೆ ಎನ್ನುವುದು ಯಶೋಧರನನ್ನು ಬಿಟ್ಟು ಅಷ್ಟಾವಂಕನನ್ನು ಸ್ವೀಕರಿಸಿದ್ದು ಮಾತ್ರವಲ್ಲ, ವಿವರಗಳನ್ನು ಗಮನಿಸಿದಾಗ ಅದು ಜೀವನಕ್ರಮದ ಹಾಗೂ ವಾಸ್ತವವನ್ನು ಗ್ರಹಿಸುವ ರೀತಿಯ ಬದಲಾವಣೆಯೂ ಆಗಿರುತ್ತದೆ. ಆದ್ದರಿಂದಲೇ ಮೊದಲು ತಾನು ಇಷ್ಟಪಟ್ಟ ವ್ಯಕ್ತಿಯು ಕುರೂಪಿಯೆಂದು ಗೊತ್ತಾದಾಗ ಒಂದು ಕ್ಷಣ ಆತಂಕದ ಗೆರೆಗಳು ಕಾಣಿಸಿಕೊಂಡರೂ ಮರುಕ್ಷಣವೇ ಮತ್ತೆ ಸಮಾಧಾನ ಪಡೆಯುತ್ತಾಳೆ. ಕೆಲವರು ಹೇಳುವ ಹಾಗೆ ಅದು ಕ್ಷಣದಲ್ಲಿ ಸಂಭವಿಸಿದ ಆಕಸ್ಮಿಕವಾದ ಘಟನೆಯಲ್ಲ. ಅವಳದು ಬುದ್ಧಿಪೂರ್ವಕ ಆಯ್ಕೆಯೇ ವಿನಾ ಅನಿವಾರ್ಯ ಆಕಸ್ಮಿಕವಲ್ಲ. ಏಕೆಂದರೆ ಅದು ಆ ಕ್ಷಣಕ್ಕೆ, ಆ ದಿನಕ್ಕೆ ಸೀಮಿತವಾದ ಆಯ್ಕೆಯಲ್ಲ. ಅವಳು ತನ್ನ ಬದುಕಿನ ಕೊನೆಯ ನಿಮಿಷದವರೆಗೆ ಆ ಪ್ರಣಯವನ್ನು

ಮುಂದುವರಿಸುವಳೆಂಬ ಸಂಗತಿಯನ್ನು ಗಮನಿಸಿದರೆ ಅದು ಎಷ್ಟರಮಟ್ಟಿಗೆ ಅನಿವಾರ್ಯ ನಿಯತಿಯೋ ಅಷ್ಟರಮಟ್ಟಿಗೆ ಬುದ್ಧಿಪೂರ್ವಕ ಆಯ್ಕೆಯೂ ಆಗಿತ್ತೆಂಬ ಅಂಶವು ಮನದಟ್ಟಾಗುತ್ತದೆ. ಆದರೆ ಅವಳ ವರ್ತನೆಗೆ ವಿರುದ್ಧವಾಗಿ ಯಶೋಧರನದು ದುರ್ಬಲವಾದ ಒತ್ತಾಯ-ಒತ್ತಡಗಳಿಂದ ನಿಯಂತ್ರಿತವಾದ ಚಲನೆ. ಅವನದು ಒಂದು ಕಡೆ ಆತ್ಮವಂಚನೆ, ಇನ್ನೊಂದು ಕಡೆ ವಿನಾಶಮುಖಿಯಾದ ಚಲನೆ. ಅಮೃತಮತಿಯಲ್ಲಿ ಪಶ್ಚಾತ್ತಾಪದ ಅಗತ್ಯವಾಗಲೀ, ಸೂಚನೆಯಾಗಲಿ ಇಲ್ಲ. ಯಶೋಧರನದು ಇಬ್ಬಂದಿಯಾದ ಸ್ಥಿತಿ"[೧೭] ಎಂದು ವಿಮರ್ಶಕರು 'ಯಶೋಧರ ಚರಿತೆ'ಯ ಪ್ರಧಾನ ಪಾತ್ರಗಳ ತೌಲನಿಕ ವಿಶ್ಲೇಷಣೆ ಮೂಲಕ ಈ ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನು ವಿಶ್ಲೇಷಿಸುತ್ತಾರೆ.

ಇದು ಸಾಹಿತ್ಯ ಪಠ್ಯವನ್ನು, ಸಾಹಿತ್ಯೇತರ ಪರಿಕಲ್ಪನೆಗಳ ಮೂಲಕ ಮಾಡಿರುವ ಸಾಂಸ್ಕೃತಿಕ ವಿಮರ್ಶೆಯ ವಿಶ್ಲೇಷಣಾ ಕ್ರಮಕ್ಕೆ ಹಾಗೂ ಅದರಿಂದ ಕಂಡುಕೊಳ್ಳಬಹುದಾದ ತೀರ್ಮಾನಗಳಿಗೆ ಒಂದು ಅತ್ಯುತ್ತಮವಾದ ಮಾದರಿಯಾಗಿದೆ. ಆದ್ದರಿಂದಲೇ, ಇಲ್ಲಿನ ಸಾಮಾಜಿಕಾನುಸಂಧಾನವು ಸಾಹಿತ್ಯಾತ್ಮಕ ವಿಶ್ಲೇಷಣಾ ವಿಧಾನಗಳ ಹಲವು ತೀರ್ಮಾನಗಳು ಹಾಗೂ ಸಾಹಿತ್ಯೇತರ ಲಿಂಗ ಪರಿಕಲ್ಪನೆಯ ನೇರಾನ್ವಯ ವಿಶ್ಲೇಷಣಾ ವಿಧಾನಗಳ ಸರಳೀಕೃತ ಗ್ರಹಿಕೆಗಳಿಗಿಂತ ಬಹುತೇಕ ಭಿನ್ನವಾಗಿದೆ. ಹೀಗಾಗಿಯೇ, ಕನ್ನಡ ಸಾಹಿತ್ಯ ವಿಮರ್ಶೆಯ ವಿವಿಧ ಮಾದರಿಗಳು ಅಮೃತಮತಿಯನ್ನು 'ನೈತಿಕ ಅಧಃಪತನದ ಸಂಕೇತ' ('ದ್ರೌಪದಿಯ ಶ್ರೀಮುಡಿ', ೧೯೬೦, ಕುವೆಂಪು ಮತ್ತು 'ಸಮಗ್ರ ಗದ್ಯ', ೨೦೦೬, ತೀನಂಶ್ರೀ) 'ಲೈಂಗಿಕ ವಿಕೃತ ಮನಸ್ಸಿನ ಪ್ರತೀಕ' ('ಸಮನ್ವಿತ', ೧೯೯೪, ಶಾಲೀನಿ ರಘುನಾಥ), 'ತರ್ಕಾತೀತ ಸುಪ್ತಪ್ರಜ್ಞೆಯ ಸಂಕೀರ್ಣ ಸ್ವರೂಪ' ('ಜನ್ನ', ೨೦೦೮, ಸಂ. ಗಿರಿಡ್ಡಿ ಗೋವಿಂದರಾಜ, ಲೇ.ರಾಜೇಂದ್ರ ಚೆನ್ನಿ), 'ಆಯ್ಕೆ ಸ್ವಾತಂತ್ರ್ಯರಾಹಿತ್ಯ ವಿವಾಹ ವ್ಯವಸ್ಥೆಯ ಉಲ್ಲಂಘನೆಯ ಪ್ರತಿನಿಧಿ' ('ಜನ್ನ', ೨೦೦೮, ಸಂ. ಗಿರಡ್ಡಿ ಗೋವಿಂದರಾಜ, ಲೇ. ಸಬೀಹಾ ಭೂಮಿಗೌಡ) ಮತ್ತು 'ಬದುಕಿನ ಆಯ್ಕೆಯ ಸ್ವಾತಂತ್ರ್ಯ ಮತ್ತು ಬದ್ಧತೆಗೆ ಮಾದರಿ' ('ಕನ್ನಡ ವಿಮರ್ಶಾ ವಿವೇಕ', ೨೦೦೪, ಸಂ. ಲಕ್ಷ್ಮಣ ಕೊಡಸೆ, ಲೇ. ಜಿ. ರಾಜಶೇಖರ) ಮೊದಲಾದಂಥ ಸ್ಪಷ್ಟವಾದ ಹಾಗೂ ಸರಳವಾದ ನೆಲೆಗಳಲ್ಲಿ ಗುರುತಿಸಿರುವುದಕ್ಕಿಂತ ಸಂಪೂರ್ಣ ಭಿನ್ನವಾದ ಕ್ರಮದಲ್ಲಿ ಗ್ರಹಿಸುವುದಕ್ಕೆ ಸಾಧ್ಯವಾಗಿದೆ. ಸಾಂಸ್ಕೃತಿಕ ವ್ಯವಸ್ಥೆಯ ಅರ್ಥಹೀನವಾದ ಹಾಗೂ ಮನುಷ್ಯವಿರೋಧಿಯಾದ ಮೌಲ್ಯವ್ಯವಸ್ಥೆಗಳ ವಿರುದ್ಧ ಯಾವತ್ತೂ ಸ್ವತಂತ್ರ ಮನೋಧರ್ಮದ ವ್ಯಕ್ತಿ ವೈಯಕ್ತಿಕವಾಗಿ ಹೂಡುವ ಬಂಡಾಯಕ್ಕೆ ಶ್ರೇಷ್ಠವಾದ ಪ್ರತಿಮೆಯಾಗಿ ವಿಮರ್ಶಕರು ಇಲ್ಲಿ ಅಮೃತಮತಿಯ ಪಾತ್ರವನ್ನು ಗುರುತಿಸುತ್ತಾರೆ. ಇಂಥ ಬಂಡಾಯಗಾರರು ಸಾಮಾನ್ಯವಾಗಿ, ತಮ್ಮ ವೈಯಕ್ತಿಕ ಬದುಕಿಗೆ, ಅದರಲ್ಲೂ ಲೈಂಗಿಕ ವಿಚಾರದ ಆಯ್ಕೆಗೆ ಸಂಬಂಧಿಸಿದಂತೆ ಕೈಗೊಳ್ಳುವ ಅನಿರೀಕ್ಷಿತವಾದ, ಅನೂಹ್ಯವಾದ ಹಾಗೂ ದಿಗ್ಭ್ರಾಂತಿಕಾರಕವಾದ ನಿರ್ಣಯದ ಮೂಲಕ ಜಡ ಮನುಷ್ಯ ವಿರೋಧಿ ಸಾಂಸ್ಕೃತಿಕ ವ್ಯವಸ್ಥೆಗೆ ಬಲವಾದ ಕೊಡಲಿ ಪೆಟ್ಟು ಕೊಡುತ್ತಾರೆ ಎಂದು ವಿಶ್ಲೇಷಿಸುತ್ತಾರೆ. ಆ ಮೂಲಕ ಸಾಂಸ್ಕೃತಿಕ ಮೌಲ್ಯವ್ಯವಸ್ಥೆಗಳ ಮಾನವೀಕರಣದ

ನಿಜವಾದ ರೂವಾರಿಗಳೂ ಆಗುತ್ತಾರೆ. ಈ ಅರ್ಥದಲ್ಲಿ ಅಮೃತಮತಿಯ ಪಾತ್ರ ಸಮಾಜ, ಧರ್ಮ, ಸಂಸ್ಕೃತಿ ಮತ್ತು ರಾಜಕಾರಣ ಮೊದಲಾದ ಸಾಂಸ್ಥಿಕ ರಚನೆಗಳ ಅರ್ಥಹೀನ ಮತ್ತು ಮನುಷ್ಯವಿರೋಧಿ ಮೌಲ್ಯವ್ಯವಸ್ಥೆಗಳ ಮಾನವೀಕರಣದ ಉದಾತ್ತ ಆಶಯವನ್ನು ಗುರಿಯಾಗಿ ಹೊಂದಿರುವ ಒಂದು ಅತ್ಯಂತ ಅಪರೂಪದ ಹಾಗೂ ಅಷ್ಟೇ ಅರ್ಥಪೂರ್ಣವಾದ ಪ್ರತಿಮಾಸೃಷ್ಟಿ ಎಂದು ಹೆಚ್.ಎಸ್.ಆರ್. ಅವರು ಪ್ರತಿಪಾದಿಸುತ್ತಾರೆ.

ಇದು ಬಹುಮುಖ್ಯವಾಗಿ, ವಿಮರ್ಶಕರು ಸಾಂಸ್ಕೃತಿಕಾಧ್ಯಯನ ಅಥವಾ ಸಾಂಸ್ಕೃತಿಕ ವಿಮರ್ಶಾ ವಿಧಾನವನ್ನು ಗ್ರಹಿಸುವುದಕ್ಕೆ ಹಾಗೂ ವ್ಯಾಖ್ಯಾನಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ರೂಪಿಸಿಕೊಂಡಿರುವ ಅರ್ಥಪೂರ್ಣವಾದ ಕ್ರಮದಲ್ಲಿರುವ ವಿಶಿಷ್ಟತೆಗೆ ಮುಖ್ಯ ಕಾರಣವಾಗಿದೆ. ಇದನ್ನು ಅವರ "ಅಂತಿಮವಾಗಿ ಯಾವುದೇ 'ಸಾಂಸ್ಕೃತಿಕ ಪಠ್ಯ'ದ ವಿಶ್ಲೇಷಣೆಯು ನಮ್ಮ ಕಾಲದ ಅಗತ್ಯತೆಗಳಿಂದಲೇ ರೂಪಿತವಾಗಿರುತ್ತದೆ ಅಥವಾ ನಮ್ಮ ಕಾಲದ ಬೇರೆ ಬೇರೆ ರಾಜಕೀಯ ನಿಲುವುಗಳು ಒಂದೇ ಪಠ್ಯವನ್ನು ತಮ್ಮ ಅಜೆಂಡಾಗಳಿಗೆ ಅನುಗುಣವಾಗಿ ಕಟ್ಟಿರುವ ಸಾಧ್ಯತೆಯಿದೆ. ಜನ್ನನ "ಯಶೋಧರ ಚರಿತೆ"ಯ ವಿಮರ್ಶೆಯ ಇತಿಹಾಸ ಕೂಡಾ ಈ ಮಾತಿಗೆ ಸಾಕ್ಷಿಯಾಗಿದೆ. ಹಾಗಲ್ಲದೆ ಸಾಂಸ್ಕೃತಿಕ ಅರ್ಥವಂತಿಕೆಯು ರಾಜಕೀಯದಿಂದ ಅಲಾಯಿದವಾದ ಸ್ವಯಂಭೂ ಪರಿಕಲ್ಪನೆಯೆಂದು ತಿಳಿಯುವ ಅಗತ್ಯವಿಲ್ಲ. ಈ ರೀತಿಯ ಓದು ಸಾಹಿತ್ಯ ಕೃತಿಯ ಸೂಕ್ಷ್ಮ ಓದನ್ನು (ಕ್ಲೋಸ್ ರೀಡಿಂಗ್) ನಿರಾಕರಿಸುವುದೆಂದು ತಿಳಿಯಲು ಯಾವ ಕಾರಣವೂ ಇಲ್ಲ. ಬದಲಾಗಿ ಕೃತಿಯನ್ನು ಅರ್ಥ, ಭಾಷೆ, ಸಾಂಕೇತಿಕತೆ, ಡಿಸ್‌ಕೋರ್ಸ್ ಮುಂತಾದ ಹಲವು ನೆಲೆಗಳಲ್ಲಿ ನೋಡುವ ಪ್ರಯತ್ನವು ಖಂಡಿತವಾಗಿಯೂ ಸಾಂಸ್ಕೃತಿಕವಾದ ಒಳನೋಟಗಳನ್ನೇ ನೀಡುತ್ತದೆ"[೧೮] ಎನ್ನುವ ಮಾತುಗಳು ದೃಢಪಡಿಸುತ್ತದೆ.

ಹೀಗಾಗಿಯೇ, ಇಲ್ಲಿನ ಸಾಮಾಜಿಕಾನುಸಂಧಾನವು ಏಕಕಾಲಕ್ಕೆ ಹಲವು ಓದುಗಳ ಸಾಧ್ಯತೆಯನ್ನುಳ್ಳ ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆಯ ವಿಧಾನದಿಂದ ರೂಪುಗೊಂಡಿದೆ. ಇದು, ಪಠ್ಯದ ವಿಶ್ಲೇಷಣೆಗೆ ಸಾಹಿತ್ಯೇತರ ಪರಿಕರಗಳು ಮತ್ತು ವಿಧಾನಗಳನ್ನು ಬಳಸಿದ್ದರೂ ಅದರ ಸಾಹಿತ್ಯಕ ಆಯಾಮವನ್ನು ಎಲ್ಲಿಯೂ ನಿರಾಕರಿಸಿಲ್ಲ. ಹಾಗೆಯೇ ಅನುಸಂಧಾನದ ಕಾಲದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಶೋತ್ತರಗಳಿಂದ ಪ್ರಭಾವಿತವಾಗಿದ್ದರೂ ಸಹ, ಕವಿಯ ಕೃತಿ ರಚನಾಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಹಿತ್ಯಕ ಧೋರಣೆಗಳನ್ನು ಕಡೆಗಣಿಸಿಲ್ಲ. ಈ ಕಾರಣದಿಂದ, ಹೆಚ್.ಎಸ್.ಆರ್. ಅವರ ಈ ಲೇಖನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳನ್ನು ಅರ್ಥಪೂರ್ಣವಾಗಿ ಬೆಳೆಸಿರುವ ಒಂದು ಅತ್ಯಂತ ಮಹತ್ವದ ರಚನೆಯಾಗಿದೆ.

ಇಲ್ಲಿ ವಿಸ್ತಾರವಾಗಿ ಚರ್ಚಿಸಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಲಿಂಗಪರಿಕಲ್ಪನೆಯ ನೆಲೆಗಳನ್ನೂ ಒಳಗೊಂಡಂತೆ ಬೇರೆ ಬಗೆಯ ಇನ್ನೂ ಕೆಲವು ಮಹತ್ವದ ನೆಲೆಗಳನ್ನು

ಸಹ ಗುರುತಿಸಲು ಸಾಧ್ಯವಿದೆ. ಕನ್ನಡದ ಶ್ರೇಷ್ಠ ಅನುಭಾವಿ ಕವಯತ್ರಿಯಾದ ಅಕ್ಕನ ಬದುಕು ಹಾಗೂ ವಚನಗಳನ್ನು ಅನುಸಂಧಾನ ಮಾಡಿರುವ ಲಿಂಗ ಪರಿಕಲ್ಪನೆಯ ನೆಲೆಗಳನ್ನು 'ಸಂಘರ್ಷಾತ್ಮಕ ದ್ವಂದ್ವಗಳ ಸಾಮರಸ್ಯ ಸಾಧನಾ ನೆಲೆ'ಯಲ್ಲಿ ಗುರುತಿಸಬಹುದಾಗಿದೆ ('ಅಕ್ಕಮಹಾದೇವಿ ವಚನಗಳ ಸಾಂಸ್ಕೃತಿಕ ಮುಖಾಮುಖಿ' ೨೦೦೫, ಸಂ. ರಹಮತ್ ತರೀಕೆರೆ ಹಾಗೂ 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ', ೧೯೯೩, ವಿವಿಧ ಲೇಖಕರು). ಹಾಗೆಯೇ, ಕನ್ನಡದ ಶಿಷ್ಟ ಹಾಗೂ ಜನಪದ ಸಾಹಿತ್ಯ ಪರಂಪರೆ ನಿರ್ಮಿಸಿರುವ ಹೆಣ್ಣಿನ ಪರಿಕಲ್ಪನೆಯ ವಿವಿಧ ನೆಲೆಗಳನ್ನು ಲಿಂಗಪರಿಕಲ್ಪನೆಯ ವಿಶಿಷ್ಟ ಆಯಾಮದಲ್ಲಿ ಗುರುತಿಸಿರುವ ಮಹತ್ವದ ಪ್ರಯತ್ನವನ್ನು, 'ಸ್ತ್ರೀಚೈತನ್ಯದ ಹೊಸಹುಟ್ಟಿನ ನೆಲೆ'ಯ ಮೂಲಕ ('ಮರದೊಳಗಣ ಕಿಚ್ಚು', ೧೯೯೬, ರಹಮತ್ ತರೀಕೆರೆ') ಗ್ರಹಿಸಲು ಸಾಧ್ಯವಿದೆ. ಆದರೆ, ಈ ಚರ್ಚೆಯು ಇನ್ನಷ್ಟು ವಿಸ್ತಾರಗೊಳ್ಳುವ ಕಾರಣದಿಂದ ಇಲ್ಲಿ ಅಂಥ ನೆಲೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿರುವುದಿಲ್ಲ.

೫.೧೦ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳ ಪಲ್ಲಟಗಳು

ಸುಮಾರು ಎರಡು ದಶಕಗಳ ಕಾಲ ಕನ್ನಡ ಸಾಹಿತ್ಯ ಪರಂಪರೆ, ಪಠ್ಯಗಳು ಹಾಗೂ ಲೇಖಕರನ್ನು ಬಹುನೆಲೆಗಳಲ್ಲಿ ಹಾಗೂ ಬಹುಸ್ತರಗಳಲ್ಲಿ ಸಾಮಾಜಿಕಾನುಸಂಧಾನಕ್ಕೆ ಒಳಪಡಿಸಿದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳು ತೊಂಭತ್ತರ ದಶಕದ ವೇಳೆಗೆ ತೀವ್ರವಾದ ಪಲ್ಲಟಗಳಿಗೆ ಒಳಗಾಗಲಾರಂಭಿಸಿದವು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು ಪಠ್ಯದ ವಿಶ್ಲೇಷಣೆಯಲ್ಲಿ ಪ್ರಚುರಗೊಳಿಸಿದ ಹಲವು ಹೊಸ ಪರಿಭಾಷೆಗಳು ಮತ್ತು ಪರಿಕಲ್ಪನೆಗಳನ್ನು ಕುರಿತು ಈಗ ತೀವ್ರವಾದ ಪ್ರಶ್ನೆಗಳನ್ನು ಎತ್ತಲಾಯಿತು. ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜ ಕುರಿತು ಕಟ್ಟಿದ ಕೆಲವು ನಂಬಿಕೆಗಳನ್ನು ಮತ್ತು ಧೋರಣೆಗಳನ್ನು ಮರುವಿಮರ್ಶೆಗೆ ಒಳಪಡಿಸಲಾಯಿತು.

ಈಗಾಗಲೇ ಚರ್ಚಿಸಿರುವಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಮಾಜಿಕಾನುಸಂಧಾನದ ಎರಡು ಮುಖ್ಯವಾದ ರೂಪಗಳು ಹೆಚ್ಚು ಜನಪ್ರಿಯವಾಗಿದ್ದವು. ಇವು ಕನ್ನಡ ಸಾಹಿತ್ಯ ಪರಂಪರೆ, ಪಠ್ಯಗಳು ಹಾಗೂ ಲೇಖಕರನ್ನು ಕುರಿತ ವಿಶ್ಲೇಷಣೆಗಳ ಸಂದರ್ಭದಲ್ಲಿ ಬಹುಮುಖ್ಯವಾಗಿ 'ವೈದಿಕ ವಿರೋಧಿ ಪ್ರಜ್ಞೆ' ಮತ್ತು 'ಪಿತೃ ಪ್ರಧಾನತಾ ವಿರೋಧಿ ಪ್ರಜ್ಞೆ'ಯ ಧೋರಣೆಗಳನ್ನು ಪ್ರಮುಖ ದೃಷ್ಟಿಕೋನಗಳನ್ನಾಗಿ ಹೊಂದಿದ್ದವು. ಇವು, ಈಗಾಗಲೇ ವಿವರಿಸಿರುವಂತೆ 'ಬ್ರಾಹ್ಮಣ ಮತ್ತು ಶೂದ್ರ ಪರಿಕಲ್ಪನೆ', 'ವೈದಿಕ ಮತ್ತು ಅವೈದಿಕ ಪರಿಕಲ್ಪನೆ', 'ಪಿತೃಪ್ರಧಾನ ಮತ್ತು ಮಹಿಳಾಪ್ರಧಾನ ಪರಿಕಲ್ಪನೆ', 'ಶೂದ್ರ ಮತ್ತು ದಲಿತ ಪರಿಕಲ್ಪನೆ', 'ಯಾಜಮಾನ್ಯ ಮತ್ತು ಪರಾಧೀನ ಪರಿಕಲ್ಪನೆ' ಮೊದಲಾದಂಥ ಹಲವು ಬೈನರಿ ಪರಿಕಲ್ಪನೆಗಳ ಮೂಲಕ ಸಾಹಿತ್ಯದ ಸಾಮಾಜಿಕಾನುಸಂಧಾನ ಮಾಡಿದವು. ಈ ಅನುಸಂಧಾನದ ಹಿನ್ನಲೆಯಲ್ಲಿ ಸಾಮಾಜಿಕ ನ್ಯಾಯ ಸಾಧನೆ, ಸಮಾನಾವಕಾಶ ಗಳಿಕೆ, ಪ್ರಜಾಪ್ರಭುತ್ವವಾದಿ ಪರಿಸರ ನಿರ್ಮಾಣ ಹಾಗೂ ಮಾನವತಾವಾದಿ ಮೌಲ್ಯ ರೂಪೀಕರಣಗಳಂಥ ಉನ್ನತೋದ್ದೇಶಗಳು ಮುಖ್ಯವಾದ ಪ್ರೇರಣೆಗಳಾಗಿದ್ದವು. ಸಾಹಿತ್ಯದ

ಸಾಮಾಜಿಕಾನುಸಂಧಾನದ ಮೂಲಕ ನಮ್ಮ ಸಮಾಜ, ಚರಿತ್ರೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಮಾತ್ರವಲ್ಲದೆ ವರ್ತಮಾನವನ್ನು ಸಹ ಬದಲಾಯಿಸುವ ಕಾಳಜಿಗಳು ಪ್ರಮುಖವಾದ ಗುರಿಗಳಾಗಿದ್ದವು.

ಇಂಥ ಮಹತ್ವಪೂರ್ಣ ಉದ್ದೇಶಗಳಿಂದ ಕೂಡಿದ್ದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪರಿಕಲ್ಪನೆಗಳು ಸಹ, ಕ್ರಮೇಣ ಸಾಹಿತ್ಯ ಹಾಗೂ ಸಂಸ್ಕೃತಿಗಳ ಸ್ವರೂಪವನ್ನು ಕೇವಲ ಕಪ್ಪು-ಬಿಳಿಪಿನ ಎರಡೇ ಬಣ್ಣದ ರೂಪಗಳಲ್ಲಿ ಪರಿಭಾವಿಸುವಂಥ ಸರಳೀಕೃತ ಗ್ರಹಿಕೆಗಳ ಕಡೆಗೆ ತೀವ್ರವಾಗಿ ವಾಲತೊಡಗಿದವು. ಹೀಗಾಗಿ, ಸಾಹಿತ್ಯದ ಸಾಮಾಜಿಕಾನುಸಂಧಾನವು ಯಾವುದೇ ಹೊಸನೋಟ ಮತ್ತು ಸೂಕ್ಷ್ಮ ಗ್ರಹಿಕೆಗಳಿಲ್ಲದಿರುವ, ಸಾಮಾಜಿಕ ಅವಲೋಕನದ ಒಂದು ಕೃತಕ ಕ್ರಿಯೆಯಾಗತೊಡಗಿತು. ಆಗ, ಈ ಪ್ರವೃತ್ತಿಯ ವಿರುದ್ಧ ಕನ್ನಡ ಸಾಂಸ್ಕೃತಿಕ ವಿಮರ್ಶಾ ಪರಿಸರದಿಂದ ತೀವ್ರವಾದ ವಿರೋಧಗಳು ಹಾಗೂ ಭಿನ್ನಮತಗಳು ವ್ಯಕ್ತವಾಗತೊಡಗಿದವು. ಈ ವಿದ್ಯಮಾನಕ್ಕೆ ಅತ್ಯಂತ ಪ್ರಮುಖವಾದ ಚಾರಿತ್ರಿಕ ಹಿನ್ನೆಲೆ ಹಾಗೂ ಸಾಂಸ್ಕೃತಿಕ ಕಾರಣಗಳಿವೆ.

ಈ ಎಲ್ಲ ಬೆಳವಣಿಗೆಗಳ ಪರಿಣಾಮವಾಗಿ, ಸಾಮಾಜಿಕಾನುಸಂಧಾನದ ವೈದಿಕ ವಿರೋಧಿ ಪರಿಕಲ್ಪನೆಯನ್ನು ಮತ್ತು ಪಿತೃಪ್ರಧಾನತಾ ಪರಿಕಲ್ಪನೆಯನ್ನು ಮರುವಿಮರ್ಶೆಗೆ ಒಳಪಡಿಸುವ ಮೂಲಕ ಅರ್ಥಪೂರ್ಣವಾದ ಪರ್ಯಾಯ ನೆಲೆಗಳನ್ನು ಶೋಧಿಸುವಂಥ ಗಂಭೀರವಾದ ಪ್ರಯತ್ನಗಳು ನಡೆಯಲಾರಂಭಿಸಿದವು. ಆ ಮೂಲಕ ಸಾಮಾಜಿಕಾನುಸಂಧಾನದ ಆಯಾಮಗಳಿಗೆ ಹೊಸ ರೂಪಗಳನ್ನು ಕೊಡಲಾಯಿತು. ಈ ಸಂದರ್ಭದಲ್ಲಿ ಅನಂತಮೂರ್ತಿಯವರು ಸಾಹಿತ್ಯದ ಭಾಷಾಭಿವ್ಯಕ್ತಿಯ ಸ್ವರೂಪ ಕುರಿತು 'ಸಾಹಿತ್ಯದಲ್ಲಿ ಬ್ರಾಹ್ಮಣ ಮತ್ತು ಶೂದ್ರ ಪರಿಕಲ್ಪನೆ' ('ಪ್ರಜ್ಞೆ ಮತ್ತು ಪರಿಸರ', ೧೯೭೧)ಯನ್ನು ಪ್ರಚುರಗೊಳಿಸುವ ಮೂಲಕ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ 'ಬ್ರಾಹ್ಮಣ ವಿರೋಧಿ ಮತ್ತು ಶೂದ್ರವಾದಿ' ಪರಿಕಲ್ಪನೆಯನ್ನು ಕಲ್ಪನಾ ಅರ್ಥಾಂತರೀಕರಣ ಮಾಡಲು ಪ್ರಯತ್ನಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆ ತೋರಿಸಿದ ಸಾಂಸ್ಕೃತಿಕ ಹೊಣೆಗಾರಿಕೆಯ ವಿವೇಕ ಅತ್ಯಂತ ಅರ್ಥಪೂರ್ಣವಾದುದು. ಇದರ ಪ್ರಮುಖ ರೂಪಗಳನ್ನು ತರೀಕೆರೆ ಅವರ 'ವೈದಿಕ ವಿರೋಧದ ಸಮಸ್ಯೆ' ('ಕನ್ನಡ ಸಂಶೋಧನೆಯ ತಾತ್ವಿಕ ವಿಚಾರ', ೨೦೦೭, ಹಾಗೂ 'ಸ್ತ್ರೀಚೈತನ್ಯದ ನೆಲೆ'ಗಳಂಥ ('ಮರದೊಳಗಣ ಕಿಚ್ಚು', ೧೯೯೬) ಮತ್ತು ವಿಜಯಾದಬ್ಬೆ ಅವರ 'ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಸ್ತ್ರೀದನಿ' ಹಾಗೂ 'ಜನಪದ ಸಾಹಿತ್ಯದ ಸ್ತ್ರೀಜನ ಒಂದು ನಾರೀನೋಟ' ('ನಾರಿ-ದಾರಿ-ದಿಗಂತ', ೧೯೯೭), ಮೊದಲಾದಂಥ ಬರಹಗಳಲ್ಲಿ ವ್ಯಕ್ತವಾಗಿರುವ ಪಲ್ಲಟಗಳಲ್ಲಿ ಗುರುತಿಸಬಹುದು.

ಈ ಪ್ರಕ್ರಿಯೆ ತಾರ್ಕಿಕವಾಗಿ ಇನ್ನೂ ಒಂದು ಸ್ಪಷ್ಟವಾದ ರೂಪು ಪಡೆಯುವ ಮೊದಲೇ ಜಾಗತೀಕರಣದ ಹೆಸರಿನಲ್ಲಿ ಭಾರತೀಯ ಸಮಾಜ ಹಾಗೂ ಸಂಸ್ಕೃತಿಗಳ ಮೇಲೆ ರಾಜಕೀಯಾರ್ಥಿಕ ನೀತಿಯ ರೂಪದಲ್ಲಿ ಎರಗಿದ ನವವಸಾಹತುಶಾಹಿಯು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ

ಸಾಮಾಜಿಕಾನುಸಂಧಾನದ ಪಲ್ಲಟಗಳನ್ನು ಬಹುರೂಪಿ ನೆಲೆಗಳಲ್ಲಿ ಹಾಗೂ ಬಹುಸ್ತರಗಳಲ್ಲಿ ತೀವ್ರವಾಗಿ ಮಾರ್ಪಾಟುಗೊಳಿಸಿತು. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪಲ್ಲಟೀಕರಣವು ತ್ವರಿತಗತಿಯಲ್ಲಿ ರೂಪಾಂತರೀಕರಣಗೊಳ್ಳತೊಡಗಿತು. ಇದನ್ನು ಆಧುನಿಕೋತ್ತರ ಹಾಗೂ ವಸಾಹತೋತ್ತರ ಚಿಂತನೆಗಳ ದ್ವಂದ್ವಾತ್ಮಕ ಪ್ರಭಾವ ಇನ್ನಷ್ಟು ಸಂಕೀರ್ಣಗೊಳಿಸಿತ್ತು.

೫.೧೧ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಆಯಾಮಗಳ ರೂಪಾಂತರಗಳು

ಕಳೆದ ಶತಮಾನದ ತೊಂಭತ್ತರ ದಶಕದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು ರೂಪಾಂತರೀಕರಣಕ್ಕೆ ಒಳಪಟ್ಟಿತು. ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣಗಳನ್ನು ಹೊರನೋಟಕ್ಕೆ ಕೇವಲ ಆರ್ಥಿಕ ಕ್ಷೇತ್ರದ ಕಾರ್ಯನೀತಿಗಳೆನ್ನುವಂತೆ ಪ್ರತಿವಾದಿಸಿದರೂ, ವಾಸ್ತವವಾಗಿ ಅವು ನವಸಾಮ್ರಾಜ್ಯಶಾಹಿಯ ನೂತನ ರಾಜಕೀಯಾಳ್ವಿಕೆಯ ಪರೋಕ್ಷ ವಿಧಾನಗಳೇ ಆಗಿದ್ದವು. ಹೀಗಾಗಿಯೇ, ಇವು ವ್ಯಾಪಕವಾಗಿ ಜಾರಿಗೊಳಿಸಿದ 'ಸರಕು ಸಂಸ್ಕೃತಿ' ಹಾಗೂ 'ವಾಣಿಜ್ಯ ಸಂಸ್ಕೃತಿ'ಗಳ ವಿವಿಧ ವಿನ್ಯಾಸಗಳು ಬಹುಬೇಗನೆ ನಮ್ಮ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹೀಗೆ ಒಟ್ಟಾರೆ ಮಾನವ ಬದುಕಿನ ಎಲ್ಲಾ ಪ್ರಮುಖ ಕ್ಷೇತ್ರಗಳ ಮೇಲೂ ತಮ್ಮ ದಟ್ಟವಾದ ಪ್ರಭಾವ ಬೀರತೊಡಗಿದವು.

ಈ ವಿದ್ಯಮಾನದಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಹಿತ್ಯದ ಸ್ವರೂಪವನ್ನು ಹೊಸ ಕ್ರಮಗಳಲ್ಲಿ ಪರಿಭಾವಿಸುವ ಪ್ರವೃತ್ತಿಗಳು ಪ್ರಾರಂಭವಾದವು. ಹಾಗೆಯೇ, ಸಾಮಾಜಿಕಾನುಸಂಧಾನದಲ್ಲಿ ಸಹ, ಚಾರಿತ್ರಿಕವಾಗಿ ಎದುರಾದ ಅತ್ಯಂತ ಗಂಭೀರವಾದ ಹಾಗೂ ಅಷ್ಟೇ ಸಂಕೀರ್ಣವಾದ ಆಧುನಿಕ ಸಮಸ್ಯೆಗಳನ್ನು ಅಥವಾ ಆತಂಕಗಳನ್ನು ಮುಖಾಮುಖಿಯಾಗುವುದಕ್ಕಾಗಿ, ಹಲವು ಹೊಸ ಪರಿಕಲ್ಪನೆಗಳು ಮತ್ತು ದೃಷ್ಟಿಕೋನಗಳು ಮುನ್ನೆಲೆಗೆ ಬಂದವು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು ಹಲವು ಹೊಸ ಪ್ರಶ್ನೆಗಳ ಸಂಕೀರ್ಣ ಪಾತಳಿಗೆ ಹೊರಳಿಕೊಂಡಿತು. ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯಸಾಧನೆಯನ್ನು ಪ್ರಧಾನವಾದ ತಾತ್ವಿಕ ಪ್ರಶ್ನೆಯಾಗಿ ಹೊಂದಿದ್ದ ದಲಿತ ಸಾಂಸ್ಕೃತಿಕ ವಿಮರ್ಶೆಯೊಳಗೆ, ಈಗ 'ಎಡಗೈ–ಬಲಗೈ'ನಂಥ ಹಳೆಯ ಪ್ರಶ್ನೆಗಳು ಸಾಮಾಜಿಕಾನುಸಂಧಾನದ ಪ್ರಶ್ನೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದವು. ಖಾಸಗಿ ವಲಯದಲ್ಲಿನ ಮೀಸಲಾತಿಯ ಪ್ರಶ್ನೆ ಕೂಡಾ ಇದರ ಅಂಗ ಘಟಕವೇ ಆಗಿದೆ. ಹಾಗೆಯೇ, ಪಿತೃಪ್ರಧಾನ ರಾಜಕಾರಣದ ಕಾರ್ಯಮಾದರಿಯನ್ನು ಮುಖ್ಯವಾದ ತಾತ್ವಿಕ ಪ್ರಶ್ನೆಯಾಗಿ ಹೊಂದಿದ್ದ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯ ಪ್ರಶ್ನೆಗಳಿಗೆ, ಜಾಗತೀಕರಣದ ಸಂದರ್ಭದಲ್ಲಿ ಈಗ ಹೊಸದಾಗಿ ಹುಟ್ಟಿಕೊಂಡ 'ಸರಕು ಸಂಸ್ಕೃತಿ ಮತ್ತು ಮಹಿಳಾ ಪ್ರಶ್ನೆಗಳು' ಹಾಗೂ 'ಕೋಮುವಾದ ಮತ್ತು ಮಹಿಳಾ ಪ್ರಶ್ನೆಗಳು' ಮೊದಲಾದಂಥ ಸಮಕಾಲೀನ ಆತಂಕಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದಲ್ಲಿ ಅವಕಾಶ ಪಡೆದವು. ಈ ಒಟ್ಟು ಸನ್ನಿವೇಶವು, 'ದೇಶಿ ಸಂಸ್ಕೃತಿ' ಶೋಧದ

ಪ್ರಯತ್ನಕ್ಕೆ ಹಾಗೂ ದೇಶಿ ಚಿಂತನೆಯ ಮರುವ್ಯಾಖ್ಯಾನಕ್ಕೆ ಬಲವಾದ ಪ್ರಚೋದನೆ ನೀಡಿದೆ. ಇಂಥ ಪ್ರಶ್ನೆಗಳನ್ನು 'ಜಾಗತೀಕರಣದ ಚರ್ಚೆ: ಸಂಸ್ಕೃತಿ ನುಡಿಗಟ್ಟಿನಲ್ಲಿ' ('ಕನ್ನಡ ಸಂಶೋಧನೆ ತಾತ್ವಿಕ ವಿಚಾರ', ೨೦೦೭ ರಹಮತ್ ತರೀಕೆರೆ) 'ಜಾಗತೀಕರಣ ಮತ್ತು ಸಂಸ್ಕೃತಿ ಚರ್ಚೆ' ('ಕಾಲ್ನಡಿಗೆ', ೧೯೯೯ ಬಿ.ಎಂ. ಪುಟ್ಟಯ್ಯ), 'ದಲಿತರು ಮತ್ತು ಜಾಗತೀಕರಣ' ('ದಲಿತರು ಮತ್ತು ಜಾಗತೀಕರಣ', ೧೯೯೯ ಮೊಗಳ್ಳಿ ಗಣೇಶ್), 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು' ('ನಿರಂತರ, ೨೦೦೯, ಸಂ.ಮಂ. ಕೋಚೆ ಮತ್ತು ಇತರರು), 'ಆಧುನಿಕ ಕನ್ನಡ ಸಾಹಿತ್ಯ ವಿಮೋಚನೆಯನ್ನು ನಿರ್ವಹಿಸಿದ ಬಗೆ' ('ನಿರಂತರ' ೨೦೦೯, ಸಂ.ಮಂ. ಕೋಚೆ ಮತ್ತು ಇತರರು) 'ಉತ್ತಮ ಸರಕಿದು ಅತಿಲಾಭ ತರುವಂಥ...' ಮತ್ತು 'ಸಂಸ್ಕೃತಿ ಮತ್ತು ಕೋಮುವಾದ' (ಸ್ತ್ರೀಮತವನುತ್ತರಿಸಲಾಗದೆ'?, ೨೦೦೬ ಎಂ.ಎಸ್. ಆಶಾದೇವಿ) ಮೊದಲಾದ ಬರಹಗಳಲ್ಲಿ ಗುರುತಿಸಬಹುದು. ಇಂಥ ಕಡೆಗಳಲ್ಲಿ, ಸಾಹಿತ್ಯ ಮತ್ತು ಬದುಕಿನ ಪ್ರಶ್ನೆಗಳನ್ನು ಬೇರ್ಪಡಿಸಲಾಗದಂತೆ ಪರಿಭಾವಿಸಲಾಗುವ ಪ್ರವೃತ್ತಿ ಹೆಚ್ಚು ಮನ್ನಣೆ ಪಡೆದುಕೊಂಡಿತು. ತೊಂಭತ್ತರ ದಶಕದಿಂದ ತೀವ್ರವಾದ ಈ ಪ್ರವೃತ್ತಿ ಇಪ್ಪತ್ತೊಂದನೆಯ ಶತಮಾನದ ಆರಂಭದ ವೇಳೆಗೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳಲ್ಲಿ ರೂಢಮೂಲವಾದ ಪಲ್ಲಟಗಳನ್ನು ತಂದಿತು. ಪರಿಣಾಮವಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳು ಮತ್ತು ಭಾಷಿಕ ಆಯಾಮಗಳು ಖಚಿತ ಆಕಾರಗಳನ್ನು ಪಡೆದುಕೊಳ್ಳುವುದಕ್ಕೆ ಕಾರಣವಾದ ಬಹುಮುಖ್ಯವಾದ ತಾತ್ವಿಕ ಪ್ರೇರಣೆಗಳನ್ನು ಒದಗಿಸಿದವು.

೫.೧೨ ಅಧ್ಯಾಯದ ಫಲಿತಗಳು

'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳ' ಚರ್ಚೆಯಿಂದ ಕಂಡುಕೊಂಡ ಮುಖ್ಯವಾದ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು, ಹೊರನೋಟಕ್ಕೆ ವರ್ತಮಾನದ ಸಾಮಾಜಿಕ ಪ್ರಶ್ನೆಗಳ ಮೂಲಕ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳ ವಿಶ್ಲೇಷಣೆ ಹಾಗೂ ಮೌಲ್ಯಮಾಪನ ಮಾಡುವುದರಲ್ಲಿ ತೊಡಗಿರುವಂತೆ ಕಾಣುತ್ತದೆ. ಆದರೆ, ವಾಸ್ತವವಾಗಿ ಸಾಹಿತ್ಯ, ಸಮಾಜ, ಸಂಸ್ಕೃತಿ, ಚರಿತ್ರೆ, ಧರ್ಮ, ರಾಜಕಾರಣ ಮತ್ತು ಭಾಷೆ ಮೊದಲಾದಂಥ ಮಾನವನ ಮನಸ್ಸಿನ ಹಾಗೂ ಪ್ರಜ್ಞೆಯ ರಚನೆಗಳ ಹಿಂದೆ ಇರುವ ಮೌಲ್ಯವ್ಯವಸ್ಥೆಗಳ ಹಾಗೂ ಹಿತಾಸಕ್ತಿಗಳ ವಿಮರ್ಶೆಯೇ ಕನ್ನಡ ಸಾಂಸ್ಕೃತಿಕ ವಿಮರ್ಶೆ ಇಂಥ ಸಾಮಾಜಿಕ ಪ್ರಶ್ನೆಗಳ ಮೂಲಕ ಮಾಡುತ್ತಿರುವ ಅನುಸಂಧಾನವಾಗಿದೆ.

ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳನ್ನು ಸಾಹಿತ್ಯದ ಸಾಮಾಜಿಕಾನುಸಂಧಾನದ ಪ್ರಮುಖ ಪರಿಕಲ್ಪನೆಗಳಾಗಿ ಪರಿಗಣಿಸಿರುವುದಕ್ಕೆ, ಅವು ನಮ್ಮ ಸಾಮಾಜಿಕ

ವ್ಯವಸ್ಥೆಯ ಮೂಲಭೂತ ಘಟಕಗಳಾಗಿರುವುದಷ್ಟೇ ಅಲ್ಲ; ಮುಖ್ಯವಾಗಿ ನಮ್ಮ ಎಲ್ಲಾ ಗಂಭೀರವಾದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳಿಗೆ ಮೂಲಾಧಾರಕ ಘಟಕಗಳೂ ಹಾಗೂ ರೂವಾರಿಶಕ್ತಿಗಳೂ ಆಗಿವೆ ಎನ್ನುವುದೇ ನಿಜವಾದ ಕಾರಣವಾಗಿದೆ.

ಇ. ಕಾಲಕಾಲಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಪ್ರಧಾನ ಪರಿಕಲ್ಪನೆಗಳೊಂದಿಗೆ ಅನೇಕ ಹೊಸ ಪರಿಭಾಷೆಗಳು, ಪರಿಕಲ್ಪನೆಗಳು ಮತ್ತು ಪ್ರಮೇಯಗಳನ್ನು ಸಾಮಾಜಿಕಾನುಸಂಧಾನದ ಸಾಧನಗಳಾಗಿ ಬಳಸುವುದಕ್ಕೆ ಸಾಹಿತ್ಯ, ಸಮಾಜ ಹಾಗೂ ಸಂಸ್ಕೃತಿ ಸ್ವರೂಪ ಕುರಿತ ಗ್ರಹಿಕೆಗಳಲ್ಲಿ ಆಗಿರುವ ಬದಲಾವಣೆ ಮತ್ತು ಬೆಳವಣಿಗೆಗಳು ಮುಖ್ಯವಾದ ಕಾರಣಗಳಾಗಿವೆ.

ಈ. ಸಾಹಿತ್ಯಲೋಕದ ನಿರೂಪಿತ ಜಗತ್ತು ಮತ್ತು ವಾಸ್ತವದ ನಿಜ ಜಗತ್ತುಗಳ ನಡುವೆ ಇರುವ ಸಂಬಂಧದ ಸ್ವರೂಪವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆ 'ಸಾವಯವತೆ' ಮತ್ತು 'ಸಾತತ್ಯತೆ' ಎನ್ನುವ ವಿಶಿಷ್ಟವಾದ ಪರಿಕಲ್ಪನೆಗಳ ಮೂಲಕ ಪರಿಭಾವಿಸಿಕೊಂಡಿದೆ.

ಉ. ಸಾಹಿತ್ಯ ಜಗತ್ತಿನಲ್ಲಿ ಆಕಾರ ತಳೆದಿರುವ ಸಮಾಜ ಹಾಗೂ ಸಂಸ್ಕೃತಿಯ ಸ್ವರೂಪವನ್ನು ವಿಶ್ಲೇಷಿಸುವುದು ಎಂದರೆ, ಅದು ಇನ್ನೇನೂ ಆಗಿರದೆ ವಾಸ್ತವವಾಗಿ ಸಮಕಾಲೀನ ಅಥವಾ ಸದ್ಯಕಾಲೀನ ಜಗತ್ತಿನ ಸ್ವರೂಪವನ್ನು ಅರ್ಥೈಸುವ ಹಾಗೂ ಬದಲಾಯಿಸುವ ಗಂಭೀರವಾದ ಕ್ರಿಯಾರೂಪವಾಗಿರುತ್ತದೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನು ಸಂಧಾನದ ಪ್ರಧಾನ ತಾತ್ವಿಕತೆಯಾಗಿದೆ.

ಊ. ಯಾವುದೇ ಕಾಲ, ದೇಶ ಮತ್ತು ಪರಿಸರದ ಹಿನ್ನೆಲೆಯ ಬೌದ್ಧಿಕ ಬೆಳಕು ಹಾಗೂ ನೋಟಕ್ರಮಗಳು ಅವು ಎಷ್ಟೇ ಸತ್ವಶಾಲಿ ಅಥವಾ ಪ್ರಭಾವಶಾಲಿಗಳಾದರೂ ಸಹ, ಅಂತಿಮವಾಗಿ ಅವು ಅನ್ವಯಗೊಳ್ಳುವ ದೇಶಿ ಪರಿಸರದಲ್ಲಿ ಹೊಸಹುಟ್ಟು ಪಡೆಯಬೇಕು ಎನ್ನುವ ಅರ್ಥಪೂರ್ಣ ಆಲೋಚನೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನಕ್ಕೆ ಹೊಸ ತಿರುವು ಕೊಟ್ಟಿದೆ.

ಋ. ಸಾಮಾಜಿಕಾನುಸಂಧಾನವು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಮಾಜಿಕ, ಸಾಹಿತ್ಯಕ, ರಾಜಕೀಯಾತ್ಮಕ ಮತ್ತು ಭಾಷಿಕ ಹೀಗೆ, ಹಲವು ಬಗೆಯ ವಾಗ್ವಾದಗಳನ್ನು ಹುಟ್ಟುಹಾಕಿದೆ. ಇದು ಕೇವಲ ಸಾಹಿತ್ಯ, ಪರಂಪರೆ, ಪಠ್ಯ ಮತ್ತು ಲೇಖಕರನ್ನು ನೋಡುವ, ಅರಿಯುವ ಹಾಗೂ ಬೆಲೆಕಟ್ಟುವ ಕ್ರಮಗಳಲ್ಲಿ ಮಾತ್ರವೇ ಅಲ್ಲದೆ, ಪರಸ್ಪರ ವಿಮರ್ಶಕರ ದೃಷ್ಟಿಕೋನ ಮತ್ತು ನಿಲುವುಗಳಲ್ಲಿ ಕೂಡಾ ತೀವ್ರವಾದ ತಾತ್ವಿಕ ಭಿನ್ನಮತಗಳನ್ನು ಉಂಟುಮಾಡಿದೆ. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹಲವು ತಾತ್ವಿಕ ವೈರುಧ್ಯದ ಮತ್ತು ಸಂಘರ್ಷದ ನೆಲೆಗಳು ರೂಪುಗೊಂಡಿವೆ.

ಋ. ಜಾಗತೀಕರಣ ಮತ್ತು ಅದರ ವಿವಿಧ ಕಾರ್ಯತಂತ್ರ ಹಾಗೂ ಕಾರ್ಯಾಚರಣಾ ರೂಪಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಪ್ರಮುಖ ವಿದ್ಯಮಾನವನ್ನೇ ಸಂಪೂರ್ಣ ಅಪ್ರಸ್ತುತಗೊಳಿಸುವ ಅಥವಾ ನಿರರ್ಥಕಗೊಳಿಸುವ ಆತಂಕಮಯ ಸನ್ನಿವೇಶವನ್ನು ಸೃಷ್ಟಿಸಿದೆ. ಇಂಥ ಸಂದಿಗ್ಧಮಯ ಪರಿಸ್ಥಿತಿಯಲ್ಲಿ ಈಗಿನ ಆಂತರಿಕ ಸಂಘರ್ಷಗಳು ಪರಿಹಾರಗೊಳ್ಳುತ್ತವೆಯೋ, ಉಲ್ಬಣಗೊಳ್ಳುತ್ತವೆಯೋ, ನಿರ್ನಾಮಗೊಳ್ಳುತ್ತವೆಯೋ ಅಥವಾ ಅರ್ಥಹೀನಗೊಳ್ಳುತ್ತವೆಯೋ ಎನ್ನುವುದರ ಕುರಿತು ಸದ್ಯದ ಮಟ್ಟಿಗೆ ಏನನ್ನೂ ಸ್ಪಷ್ಟವಾಗಿ ಹೇಳಲು ಸಾಧ್ಯವಾಗದಿರುವಂಥ ಬಿಕ್ಕಟ್ಟಿನ ಸನ್ನಿವೇಶ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನಕ್ಕೆ ಎದುರಾಗಿದೆ.

ಎ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಸಾಹಿತ್ಯದ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಎತ್ತಲಾಗುತ್ತಿರುವ ಸ್ಥಳೀಯ ಸಾಮಾಜಿಕ ಪ್ರಶ್ನೆಗಳ ಸ್ಥಾನದಲ್ಲಿ, ಜಾಗತೀಕರಣವು ಸಂಕೀರ್ಣವಾದ ವಿಶ್ವಾತ್ಮಕ ಸ್ವರೂಪದ ವಿರಾಟ್ ಪ್ರಶ್ನೆಗಳ ಸವಾಲನ್ನು ತಂದೊಡ್ಡಿದೆ. ಹೀಗಾಗಿ ಕೋಮುವಾದ, ಮತೀಯವಾದ, ಮೂಲಭೂತವಾದ ಹಾಗೂ ಹಿಂಸಾವಾದ ಮೊದಲಾದಂಥ ಹಲವು ವಿಶ್ವಾತ್ಮಕ ಸ್ವರೂಪದ ವಿರಾಟ್ ಪ್ರಶ್ನೆಗಳನ್ನು ಮುಖಾಮುಖಿ ಮಾಡಬೇಕಿರುವ ಚಾರಿತ್ರಿಕವಾದ ಹಾಗೂ ಸಾಂಸ್ಕೃತಿಕವಾದ ಅನಿವಾರ್ಯ ಒತ್ತಡ ನಿರ್ಮಾಣವಾಗಿದೆ. ಈ ವಿದ್ಯಮಾನದ ಪರಿಣಾಮವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಪ್ರಶ್ನೆಗಳು ಹೊಸ ಸ್ವರೂಪದ ಸಾಹಿತ್ಯಕ, ರಾಜಕೀಯಾತ್ಮಕ ಆರ್ಥಿಕ, ಧಾರ್ಮಿಕ ಮತ್ತು ಭಾಷಿಕ ಪ್ರಶ್ನೆಗಳಾಗಿ ರೂಪಾಂತರಗೊಂಡಿವೆ. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳೇ ಅದರ ಇಂದಿನ ಸಾಹಿತ್ಯಕ, ರಾಜಕಾರಣ ಮತ್ತು ಭಾಷಿಕ ಆಯಾಮಗಳಾಗಿ ರೂಪಾಂತರೀಕರಣಗೊಂಡಿವೆ.

ಏ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯ, ಪರಂಪರೆ, ಪಠ್ಯ ಮತ್ತು ಲೇಖಕರನ್ನು ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ, ಭೌತವಾದಿ ವಿಶ್ಲೇಷಣೆಯ ಒಳನೆಲೆ ವಿಧಾನ ಮತ್ತು ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನ ಎನ್ನುವ ಮುಖ್ಯವಾದ ಮೂರು ವಿಧಾನಗಳ ಮೂಲಕ ಸಾಮಾಜಿಕಾನುಸಂಧಾನ ಮಾಡಿದೆ.

ಐ. ಮೊದಲ ಎರಡು ವಿಧಾನಗಳಿಗಿಂತ ಸಾಮಾಜಿಕಾನುಸಂಧಾನದ ಸಮಾವಿಷ್ಟನೆಲೆ ವಿಧಾನವು ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಅರ್ಥಪೂರ್ಣವಾದ ಹಾಗೂ ಅತ್ಯಂತ ಉಪಯುಕ್ತವಾದ ವಿಧಾನವಾಗಿದೆ. ಸಮಾಜ ಮತ್ತು ಸಂಸ್ಕೃತಿಗಳ ಸ್ವರೂಪವನ್ನು ಕುರಿತ ಜನಪ್ರಿಯವಾದ ಹಾಗೂ ರೂಢಿಗತವಾದ ಸರಳೀಕೃತ ಗ್ರಹಿಕೆಗಳನ್ನು ಸಂಪೂರ್ಣವಾಗಿ ನಿರಾಕರಿಸುವುದು ಈ ವಿಧಾನದ ಸ್ವರೂಪವಾಗಿದೆ. ಹಾಗೆಯೇ, ಸಮಾಜ ಹಾಗೂ ಸಂಸ್ಕೃತಿಗಳಲ್ಲಿರುವ ದ್ವಂದ್ವಾತ್ಮಕ ಮತ್ತು

ಸಂಘರ್ಷಾತ್ಮಕ ಆಯಾಮಗಳು ಪಠ್ಯದೊಳಗೆ ರೂಪಿತವಾಗಿರುವ ವಿನ್ಯಾಸವನ್ನು ಬಹುನೆಲೆಗಳಲ್ಲಿ ಹಾಗೂ ಬಹುಸ್ತರಗಳಲ್ಲಿ ಸೃಜನಶೀಲ ಕ್ರಮದಲ್ಲಿ ವಿಶ್ಲೇಷಿಸುವುದು ಇದರ ವೈಶಿಷ್ಟ್ಯವಾಗಿದೆ.

೭. ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಪಠ್ಯಗಳ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳನ್ನು ಸಾಂಸ್ಕೃತಿಕ ಸಂಘರ್ಷದ ಪ್ರಭಾವಶಾಲಿಯಾದ ಸಾಧನಗಳಾಗಿ ನಿರ್ವಚಿಸಿಕೊಂಡಿದೆ.

೮. ಸಾಂಸ್ಕೃತಿಕ ಸಂಘರ್ಷವು, ನಿರಂತರವಾಗಿ ಸುಪ್ತಾಭಿವ್ಯಕ್ತಿಯ ಅಥವಾ ಛದ್ಮವೇಷಾಭಿವ್ಯಕ್ತಿಯ ರೂಪದಲ್ಲಿ ಪ್ರಕಟಗೊಂಡಿರುವುದು ಕನ್ನಡ ಸಾಹಿತ್ಯ ಪರಂಪರೆಯ ಒಂದು ಪ್ರಮುಖವಾದ ಚಹರೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಬಹುಮುಖ್ಯವಾದ ಪ್ರತಿಪಾದನೆಯಾಗಿದೆ.

೯. ಕನ್ನಡ ಜೈನ ಕವಿಗಳು ವರ್ಣ ವ್ಯವಸ್ಥೆಯ ವಿರೋಧಿಗಳಲ್ಲ; ಬದಲಾಗಿ, ಅದರ ಪರಿಷ್ಕಾರರೂಪಿ ಪ್ರತಿಪಾದಕರು. ಹಾಗೆಯೇ, ಅವರು ಜಾತಿವ್ಯವಸ್ಥೆಯ ವಿರೋಧಿಗಳಲ್ಲ; ಬದಲಾಗಿ, ಅದರ ಉಪಯೋಗವಾದಿಗಳು ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಜೈನ ಕವಿಗಳ ಪಠ್ಯಗಳ ಸಾಮಾಜಿಕಾನುಸಂಧಾನದ ಮೂಲಕ ಕಂಡುಕೊಂಡಿರುವ ಪ್ರಮುಖ ಒಳನೋಟವಾಗಿದೆ.

೧೦. ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಸಾಮಾಜಿಕಾನುಸಂಧಾನದ ಭಾಗವಾಗಿ ಲೇಖಕರ ಸಾಹಿತ್ಯಕ ನಿಲುವುಗಳು ಅಥವಾ ಧೋರಣೆಗಳನ್ನು ಬೆಲೆಕಟ್ಟುವಾಗ, ಆತನ ವ್ಯಕ್ತಿಗತ ಬದುಕಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹಾಗೂ ಆತನ ಸಾಹಿತ್ಯ ರಚನಾ ಕಾಲಘಟ್ಟದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭ ಎರಡನ್ನೂ ಅತ್ಯಂತ ಮುಖ್ಯ ಸಂಗತಿಗಳಾಗಿ ಪರಿಗಣಿಸುತ್ತದೆ. ಇವುಗಳ ದ್ವಂದ್ವಾತ್ಮಕವಾದ ಪ್ರಭಾವವನ್ನು ಆತ ತನ್ನ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಯನ್ನು ರೂಪಿಸಿಕೊಳ್ಳುವಾಗ ಹೇಗೆ ಪರಿಭಾವಿಸಿಕೊಂಡಿದ್ದಾನೆ ಎನ್ನುವುದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನವು ಬೇರೆಲ್ಲ ಸಂಗತಿಗಳಿಗಿಂತ ಅತ್ಯಂತ ಮಹತ್ವದ ವಿಚಾರವಾಗಿ ಪರಿಗಣಿಸುತ್ತದೆ.

೧೧. ಭಾರತೀಯ ಸಾಮಾಜಿಕ ಪರಿಸರದಲ್ಲಿ, ಒಂದು ನಿರ್ದಿಷ್ಟ ಜಾತಿ, ಸಮುದಾಯ ಹಾಗೂ ವರ್ಗದ ನಿಜ ವಾಸ್ತವದ ಆವರಣದಲ್ಲಿ ಹುಟ್ಟುವ ಒಬ್ಬ ಬರಹಗಾರ ಆ ಕಾರಣದಿಂದಲೇ ತನ್ನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರದ ಆಳವಾದ ಬೇರುಗಳನ್ನು ಹೊಂದಿರುತ್ತಾನೆ. ಹೀಗಾಗಿಯೇ, ಆತನಿಗೆ ಇಂಥ ಪರಿಸರದ ಅಧಿಕೃತ ವಿಮರ್ಶಕನಾಗುವ ಸಾಧ್ಯತೆ ಇತರರಿಗಿಂತ ಅತ್ಯಂತ ಸುಲಭವೂ ಹೌದು; ಕಠಿಣವೂ ಹೌದು. ಆದರೆ, ಇದು ಆತ ತಾನು ಬರೆಯುತ್ತಿರುವ ಹಾಗೂ ಬದುಕುತ್ತಿರುವ ಎರಡೂ ಭಿನ್ನ ಪರಿಸರಗಳ ದ್ವಂದ್ವಾತ್ಮಕ ಪ್ರಭಾವದ ಸಂಘರ್ಷದಿಂದ ಪ್ರಜ್ಞಾಪೂರ್ವಕವಾಗಿ

ರೂಪಿಸಿಕೊಳ್ಳಬೇಕಾದ ಅರಿವು ಅಥವಾ ಎಚ್ಚರಿಕೆಯ ಮೇಲೆ ನಿರ್ಧರಿತವಾಗುತ್ತದೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಬಹುಮುಖ್ಯವಾದ ಗ್ರಹಿಕೆಯಾಗಿದೆ.

ಕ. ಸಾಮಾಜಿಕ ಕವನಗಳ ಮುಕ್ತಾಯದ ನಿರ್ಣಾಯಕ ಘಟ್ಟದಲ್ಲಿ ಸಂಪ್ರದಾಯವಾದಿಯಾಗುವ ಬೇಂದ್ರೆ, ಮಹಿಳೆ ಕುರಿತು ಕಠೋರವಾದ ಪ್ರತಿಗಾಮಿ ನಿಲುವು ತಾಳುವ ಬಸವಣ್ಣ ಮೊದಲಾದವರ ಹಿನ್ನೆಲೆಯಲ್ಲಿರುವುದು ಕೇವಲ ವ್ಯಕ್ತಿಗತವಾದ ಧೋರಣೆಯಲ್ಲ; ಬದಲಾಗಿ, ಅವರ ಪ್ರಜ್ಞೆಯನ್ನು ಬಲಿಷ್ಠವಾಗಿ ಬಂಧಿಸಿಟ್ಟಿರುವ ಸಾಂಪ್ರದಾಯಕ ಪಟ್ಟಭದ್ರ ಮೌಲ್ಯವ್ಯವಸ್ಥೆಗಳ ಉಗ್ರವಾದ ಹಿಡಿತ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಇಂಥ ಬರಹಗಾರರ ರಚನೆಗಳ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಕಂಡುಕೊಂಡಿರುವ ಮಹತ್ವದ ವಿಚಾರವಾಗಿದೆ.

ಖ. ಕನ್ನಡ ಸಾಹಿತ್ಯದ ಶ್ರೇಷ್ಠ ಲೇಖಕರನ್ನು ಮತ್ತು ಮಹತ್ವದ ಪಠ್ಯಗಳನ್ನು ಕುರಿತು ಪ್ರಚಲಿತದಲ್ಲಿರುವ ಪ್ರತಿಷ್ಠಿತ ಗ್ರಹಿಕೆಗಳನ್ನು, ಒಲವುಗಳನ್ನು ಮತ್ತು ಒಪ್ಪಿತ ಸತ್ಯಗಳನ್ನು ಕುರಿತ ಮರುಚಿಂತಿಸುವುದು, ಭಿನ್ನಮತಗಳನ್ನು ವ್ಯಕ್ತಪಡಿಸುವುದು. ಹಾಗೆಯೇ, ಹೊಸ ಸತ್ಯಗಳನ್ನು ಮತ್ತು ಸತ್ಯದ ಹೊಸ ನೆಲೆಗಳನ್ನು ಶೋಧಿಸುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಒಂದು ಪ್ರಮುಖ ಸಾಧನೆಯಾಗಿದೆ.

ಗ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೆಣ್ಣಿನ ಪರಿಕಲ್ಪನೆ ಕುರಿತ ಬಹುರೂಪಿ ನೆಲೆಗಳ ಶೋಧವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಲಿಂಗಪರಿಕಲ್ಪನೆ ಆಯಾಮಗಳ ವಿಶಿಷ್ಟವಾದ ಸಾಧನೆಯಾಗಿದೆ.

ಘ. ಸಾಹಿತ್ಯದ ಸಾಮಾಜಿಕಾನುಸಂಧಾನ ಎನ್ನುವುದು ಏಕಕಾಲಕ್ಕೆ ಸಾಹಿತ್ಯಕ, ಆರ್ಥಿಕ, ಧಾರ್ಮಿಕ ಭಾಷಿಕ ಹಾಗೂ ರಾಜಕೀಯ ಎಂದರೆ, ಸಮಗ್ರವಾದ ಅರ್ಥದಲ್ಲಿ ಸಂಸ್ಕೃತಿ ಕುರಿತ ಅನುಸಂಧಾನವೆನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯವಾದ ನಿಲುವಾಗಿದೆ.

ಕೊನೆ ಟಿಪ್ಪಣಿಗಳು

೧. ಅರವಿಂದ ಮಾಲಗತ್ತಿ, ದಲಿತ ಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು, ೧೯೯೯, ಪುಟ ೨೮

೨. ಅದೇ, ಪುಟ ೨೮

೩. ಅದೇ, ಪುಟ ೩೭

೪. ಅದೇ, ಪುಟ ೫೨

೫. ಬಿ.ಎಂ. ಪುಟ್ಟಯ್ಯ, ಕದಡು, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಬಳ್ಳಾರಿ, ೨೦೦೮ ಪುಟ ೬೯.

೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು ೨೦೦೯, ಪುಟ ೩೮.

೭. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೧ ಪುಟ ೨೭೪

೮. ಅದೇ, ಪುಟ ೨೭೬

೯. ಅದೇ, ಪುಟ ೨೭೫

೧೦. ಅದೇ, ಪುಟ ೨೭೧

೧೧. ಅದೇ, ಪುಟ ೨೭೯

೧೨. ಆಶಾದೇವಿ ಎಂ.ಎಸ್., 'ಸ್ತ್ರೀಮತವನುತ್ತರಿಸಲಾಗದೆ?', ಅಕ್ಷರ ಪ್ರಕಾಶನ, ಸಾಗರ, ೨೦೦೬, ಪುಟ ೩೫

೧೩. ಸುಮಿತ್ರಾಬಾಯಿ ಬಿ.ಎನ್., ಸರಹದ್ದುಗಳ ಆಚೆ-ಈಚೆ, ಇಳಾ ಪ್ರಕಾಶನ, ಬೆಂಗಳೂರು ೨೦೦೯, ಪುಟ ೨೪

೧೪. ಆಶಾದೇವಿ ಎಂ.ಎಸ್., 'ಸ್ತ್ರೀಮತವನುತ್ತರಿಸಲಾಗದೆ?', ಅಕ್ಷರ ಪ್ರಕಾಶನ, ಸಾಗರ, ೨೦೦೫, ಪುಟ ೩೭

೧೫. ಗಿರಡ್ಡಿ ಗೋವಿಂದರಾಜ (ಸಂ), ಜನ್ನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮, ಪುಟ ೧೫೧

೧೬. ಅದೇ, ಪುಟ ೧೫೩

೧೭. ಅದೇ, ಪುಟ ೧೫೬

೧೮. ಅದೇ, ಪುಟ ೧೪೭

ಅಧ್ಯಾಯ-ಆರು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು

೬.೧ ಪೀಠಿಕೆ

೬.೧.೧ ಸಂಧಿಕಾಲದ ಅನುಸಂಧಾನ

೬.೧.೨ ಸ್ವಂತಿಕೆಯ ಹುಡುಕಾಟ ಮತ್ತು ರಕ್ಷಣೆಯ ಪ್ರಶ್ನೆಗಳು

೬.೨ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು

೬.೩ ಮೊಗಳ್ಳಿ ಅವರ 'ಕೆರೆಗೆ ಹಾರ' ಕಾವ್ಯದ ಸಾಹಿತ್ಯಾನುಸಂಧಾನದ ಸ್ವರೂಪ

೬.೩.೧ ಊಳಿಗಮಾನ್ಯಶಾಹಿಯ ಸಾಂಸ್ಕೃತಿಕ ರಾಜಕಾರಣದ ರೂಪಕ

೬.೩.೨ ಆಶಯ ಕುರಿತ ಪ್ರಶ್ನೆಗಳು ಹಾಗೂ ಸಾಹಿತ್ಯಕ ಆಯಾಮಗಳ ಹೊಸ ಸಾಧ್ಯತೆಗಳು

೬.೪ ಕಿ.ರಂ. ಅವರ 'ಅನುಭಾವ ಸಾಹಿತ್ಯ'ದ ಸಾಹಿತ್ಯಾನುಸಂಧಾನದ ಸ್ವರೂಪ

೬.೪.೧ ಇಹಪರಾನುಸಂಧಾನದ ಸಂಕೀರ್ಣ ಸಾಂಸ್ಕೃತಿಕ ಪಠ್ಯಗಳು

೬.೪.೨ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಸಾಹಿತ್ಯ

೬.೪.೩ ಅನುಭಾವ ಸಾಹಿತ್ಯದ ಸಂಕೀರ್ಣ ಸ್ವರೂಪ

೬.೪.೪ ಅನುಭಾವ ಸಾಹಿತ್ಯದ ವ್ಯಾಪ್ತಿಯ ಸಂಕೀರ್ಣ ಸ್ವರೂಪ

೬.೪.೫ ಅನುಭಾವ ಕಾವ್ಯದ ತಾತ್ವಿಕತೆಯ ಸಂಕೀರ್ಣ ಸ್ವರೂಪ

೬.೪.೬ ಅನುಭಾವ ಕಾವ್ಯದ ಅಭಿವ್ಯಕ್ತಿ ವಿಧಾನದ ಸಂಕೀರ್ಣ ಸ್ವರೂಪ

೬.೪.೭ ಅನುಭಾವ ಕಾವ್ಯದ ಪ್ರತಿಭಟನಾ ಸ್ವರೂಪ

೬.೪.೮ ಹೊಸ ಸಾಹಿತ್ಯ ವಿಮರ್ಶಾ ವಿಧಾನದ ಅಗತ್ಯತೆ

೬.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ನೆಲೆಗಳು

೬.೫.೧ ಸಾಹಿತ್ಯ, ಚರಿತ್ರೆ ಮತ್ತು ಪುರಾಣಗಳ ಸಂಬಂಧಾಂತರಗಳ ಸಂಕೀರ್ಣ ಸ್ವರೂಪ

೬.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು

೬.೭ ಸೀಮಂತಿನಿ ನಿರಂಜನ ಅವರ 'ಜನಪ್ರಿಯ ಸಾಹಿತ್ಯ'ದ ಸಾಹಿತ್ಯಾನುಸಂಧಾನದ ಸ್ವರೂಪ

೬.೭.೧ ದೈನಿಕ ಜಗತ್ತಿನ ಕಥನದಿಂದ ಅನಾವರಣಗೊಂಡಿರುವ ಸಾಮಾಜಿಕ ಸಂಕಥನ

೬.೭.೨ ಸಮುದಾಯಜನ್ಯ ಲೋಕದೃಷ್ಟಿಯ ಸಾಹಿತ್ಯಾನುಸಂಧಾನದ ವಿನ್ಯಾಸಗಳು

೬.೭.೩ ಸ್ತ್ರೀತ್ವದ ಹುಡುಕಾಟದ ಆರಂಭಿಕ ಹೆಜ್ಜೆಗಳು

೬.೮ ಡಿ.ಆರ್. ಅವರ 'ಜನಪ್ರಿಯ ಸಿನಿಮಾಗಳ' ಸಾಹಿತ್ಯಾನುಸಂಧಾನದ ಸ್ವರೂಪ

೬.೮.೧ ಸಾಹಿತ್ಯ ವಿಮರ್ಶೆಯ ಸಿನಿಮಾನುಸಂಧಾನದ ಸ್ವರೂಪ ಮತ್ತು ಸಾಧ್ಯತೆ

೬.೮.೨ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಪರಿಭಾಷೆಗಳ ಮೂಲಕ ಸಿನಿಮಾ ಎನ್ನುವ ಪಠ್ಯದ ಸಾಂಸ್ಕೃತಿಕಾನುಸಂಧಾನ

೬.೮.೩ ಸಿನಿಮಾ ಎನ್ನುವ ಹೊಸ ಪಠ್ಯದಿಂದ ವಿಸ್ತರಣೆಗೊಂಡ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು

೬.೯ ಸಾಹಿತ್ಯಾನುಸಂಧಾನದ ಆಯಾಮಗಳ ರಾಜಕೀಯಾನುಸಂಧಾನದ ಸ್ವರೂಪ

೬.೧೦ ಅಧ್ಯಾಯದ ಫಲಿತಗಳು

ಕೊನೆ ಟಿಪ್ಪಣಿಗಳು

ಅಧ್ಯಾಯ - ೬: ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು

> "ಹಳೆಯ ವಿಕಲ್ಪಗಳಿಂದ ಬಿಡುಗಡೆಯ ಆಸೆ... ಒಂದು ಶತಮಾನದ ವೈಚಾರಿಕ ವಿಕಲ್ಪಗಳ ಹಿಡಿತದಿಂದ ಇಲ್ಲಿ ಪಾರಾಗಲು ಪ್ರಯತ್ನಿಸುತ್ತಿದ್ದೇನೆ. ಒಂದು: ಪಾಶ್ಚಿಮಾತ್ಯ ನಾಗರೀಕತೆಯೇ ಮಾನವ ಪ್ರಗತಿಯ ಶ್ರೇಷ್ಠ ರೂಪ ಎಂಬ ನಂಬಿಕೆ. ಮಾನವ ಪ್ರಗತಿಯ ಅಂತಿಮ ಅಳತೆಗೋಲು ಪಶ್ಚಿಮವೇ ಎಂಬ ನಂಬಿಕೆ ನಮ್ಮಲ್ಲಿ ಇನ್ನೂ ಭದ್ರವಾಗಿ ಕೂತಿರುವುದು ಮಾತ್ರವಲ್ಲ, ಅದು ಬೆಳೆಯುತ್ತಲೇ ಇದೆ... ಎರಡು: ಶೂದ್ರಾತಿಶೂದ್ರರಿಗೆ ಸ್ವಂತ ಸಾಂಸ್ಕೃತಿಕ ಬದುಕೇ ಇರಲಿಲ್ಲ ಎಂಬ ವಿಕಲ್ಪವೂ ನೂರು ವರ್ಷಗಳಷ್ಟು ಹಳೆಯದು. ಕೆಲವು ಬಗೆಯ ಅಧಿಕಾರ, ಯಾಜಮಾನಿಕೆ, ಆತ್ಮವಿಕಾಸಗಳ ಪರಿಕಲ್ಪನೆಗಳಿಂದ ರೂಪುಗೊಂಡ ಕೀಳರಿಮೆ ಇದು... ಮೂರು: ಶಿಷ್ಟ ಮತ್ತು ಜನಪ್ರಿಯಗಳೆಂಬ ವ್ಯತ್ಯಾಸಗಳು ಸದೃಢ ಮತ್ತು ಸಾರ್ವಕಾಲಿಕ ಎಂಬ ಇನ್ನೊಂದು ವಿಕಲ್ಪವೂ ಕನ್ನಡ ಪ್ರತಿಭೆಗೆ ಸಾಕಷ್ಟು ಹಾನಿ ಮಾಡಿದೆ... ಇದಕ್ಕಿಂತ ಹೆಚ್ಚಾಗಿ, ಕನ್ನಡ ಚಿಂತನೆಯನ್ನು ಸೀಮಿತಗೊಳಿಸಿರುವ ಸಂಗತಿ ಎಂದರೆ ಆಧುನಿಕರಲ್ಲಿ ಜನಪ್ರಿಯ ಕಲಾರೂಪಗಳ ಬಗ್ಗೆ ಬೇರೂರಿರುವ ತಾತ್ಸಾರ... ನಮ್ಮ ಸಾಂಸ್ಕೃತಿಕ ಅಧ್ಯಯನದಲ್ಲಿ ಎಲ್ಲ ಬಗೆಯ ದ್ವೈತೀಯ ಕಲ್ಪನೆಗಳಿಂದ ಮುಕ್ತವಾಗಬೇಕಿದೆ."
>
> ಡಿ.ಆರ್. ನಾಗರಾಜ್, 'ಸಾಹಿತ್ಯ ಕಥನ' ಕೃತಿಯಿಂದ

೬.೧ ಪೀಠಿಕೆ

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣ ಹಂತದ ಒಂದು ಮುಖ್ಯ ಪ್ರವೃತ್ತಿ ಎಂದರೆ ಬಹುರೂಪಿ ಸಾಹಿತ್ಯ ಮೀಮಾಂಸೆಗಳ ಪ್ರತಿಪಾದನೆ. ನವ್ಯೋತ್ತರ ಕಾಲಘಟ್ಟದಲ್ಲಿ ಮುನ್ನೆಲೆಗೆ ಬಂದ ಎಲ್ಲಾ ಹೊಸ ವಿಮರ್ಶಾ ರೂಪಗಳು ತಮ್ಮದೇ ಆದ ವಿಶಿಷ್ಟ ಸಾಹಿತ್ಯ ಮೀಮಾಂಸೆಗಳನ್ನು ಮಂಡಿಸಿದವು. ಸಾಹಿತ್ಯದ ಸ್ವರೂಪ, ಉದ್ದೇಶ ಮತ್ತು ಅದರ ಕಾರ್ಯಮಾದರಿಗಳನ್ನು ಕುರಿತ ವಿಶ್ಲೇಷಣೆ ಹಾಗೂ ವ್ಯಾಖ್ಯಾನ ಈ ಮೀಮಾಂಸೆಗಳ ಪ್ರಧಾನ ಉದ್ದೇಶವಾಗಿದೆ. ಹಾಗೆ ನೋಡಿದರೆ, ಕನ್ನಡದ ಪ್ರಧಾನಧಾರೆ ವಿಮರ್ಶೆ ಸಹ ಈ ಉದ್ದೇಶದಿಂದ ವಿಮುಖವಾಗೇನೂ ಇರಲಿಲ್ಲ. ಅದೂ ಸಹ ಕಾಲಕಾಲಕ್ಕೆ ಇಂಥ ಕ್ರಿಯೆಯನ್ನು ನಿರ್ವಹಿಸಿಕೊಂಡೇ ಬಂದಿದೆ. ಆದರೆ, ಈ ವಿಷಯದಲ್ಲಿ ಪ್ರಧಾನಧಾರೆ ಸಾಹಿತ್ಯ ವಿಮರ್ಶೆಯು ತಳೆಯುವ ನಿಲುವು ಹಾಗೂ ವಿಮರ್ಶಾಪೂರ್ವದ ಕಾವ್ಯ ಮೀಮಾಂಸೆಯು ಕಾವ್ಯಾಕೃತಿ ಮತ್ತು ಕಾವ್ಯಾನುಭವ ಸ್ವರೂಪ ಕುರಿತ ಚರ್ಚೆಯ ಸಂದರ್ಭದಲ್ಲಿ ತಳೆಯುವ ನಿಲುವುಗಳ ನಡುವೆ ಎದ್ದುಕಾಣುವಂಥ ಯಾವುದೇ ಗುಣಾತ್ಮಕವಾದ ವ್ಯತ್ಯಾಸ ಇರುವುದಿಲ್ಲ. ಏಕೆಂದರೆ ಮುಖ್ಯವಾಗಿ ಎರಡೂ ಸಹ ಈಸ್ತೆಟಿಕ್ ಆದ ಧೋರಣೆಗಳೇ ಆಗಿವೆ. ಹೀಗಾಗಿ ಸಾಹಿತ್ಯದ ಸ್ವರೂಪ, ಉದ್ದೇಶ ಮತ್ತು ಕಾರ್ಯಮಾದರಿಗಳನ್ನು ಇಂಥ

ಸೌಂದರ್ಯವಾದಿ ಧೋರಣೆಗಿಂತ ಭಿನ್ನವಾಗಿ ನಿರ್ವಚಿಸಿಕೊಳ್ಳಬೇಕಿದೆ ಎನ್ನುವುದಷ್ಟೇ, ನೂತನ ಸಾಹಿತ್ಯ ಮೀಮಾಂಸೆಗಳ ಮುಖ್ಯೋದ್ದೇಶವಾಗಿದೆಯೇ ಅಥವಾ ಇದರ ಹಿನ್ನೆಲೆಯಲ್ಲಿ ಬೇರೆ ಯಾವುದಾದರೂ ಮಹತ್ವದ ಕಾರಣಗಳು ಇವೆಯೇ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಸಂದರ್ಭದಲ್ಲಿ ಕೇಳಿಕೊಳ್ಳಬೇಕಾಗಿರುವ ಬಹುಮುಖ್ಯವಾದ ಪ್ರಶ್ನೆಯಾಗಿದೆ.

೬.೧.೧ ಸಂಧಿಕಾಲದ ಅನುಸಂಧಾನ

ಸಾಹಿತ್ಯ ಮೀಮಾಂಸೆಗಳು ಕನ್ನಡ ಭಾಷಿಕ ಪರಿಸರದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶದ ಸ್ಥಿತ್ಯಂತರೀಕರಣದ ಫಲಗಳು ಅಥವಾ ಪರಿಣಾಮಗಳು. ಈ ಕಾಲಘಟ್ಟವು ರಾಜಕೀಯವಾಗಿ ಸಮಾಜವಾದಿ ಪ್ರಜಾಸತ್ತಾತ್ಮಕ, ಭಾರತೀಯ ಸಮಾಜವಾದಿ ಹಾಗೂ ಎಡಪಂಥೀಯ ಸಮತಾವಾದಿ ಸೈದ್ಧಾಂತಿಕ ದೃಷ್ಟಿಕೋನಗಳ ನಡುವಿನ ತೀವ್ರವಾದ ತಾತ್ವಿಕ ಸಂಘರ್ಷದ ಅವಧಿ. ಇದು ಸಾಮಾಜಿಕವಾಗಿ, ಭಾರತ ಸಂವಿಧಾನದ ಆಶೋತ್ತರಗಳ ಅನುಷ್ಠಾನ ರೂಪವಾದ 'ಸೋಶಿಯಲ್ ಎಂಜಿನಿಯರಿಂಗ್' ಉಪಕ್ರಮಗಳ ವಿರುದ್ಧ ಪರಂಪರಾಗತ ಶ್ರೇಣೀಕೃತ ವ್ಯವಸ್ಥೆಯ ಹಿತಾಸಕ್ತಿಗಳು ತೀವ್ರವಾದ ಸುಪ್ತಸಂಘರ್ಷದ ಪ್ರತಿರೋಧಗಳನ್ನು ರೂಪಿಸಲಾರಂಭಿಸಿದ ಕಾಲ. ಸಾಂಸ್ಕೃತಿಕವಾಗಿ, ವಸಾಹತುಶಾಹಿ ದುಷ್ಪರಿಣಾಮಗಳ ವಿಮೋಚನಾ ರೂಪವಾದ ನಿರ್ವಸಾಹತೀಕರಣ ಪ್ರಕ್ರಿಯೆ ತೀವ್ರವಾದ ಚಾಲನೆಯನ್ನು ಪಡೆದುಕೊಂಡ ಘಟ್ಟ. ಈ ಪ್ರವೃತ್ತಿಗಳು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಸಮಾಜ, ಸಾಹಿತ್ಯ, ಸಂಸ್ಕೃತಿ, ರಾಜಕಾರಣ ಮತ್ತು ಕಲಾಭಿವ್ಯಕ್ತಿ ರೂಪಗಳ ಕ್ಷೇತ್ರದಲ್ಲಿ ಬಹುಮುಖ್ಯವಾದ ಹಾಗೂ ಅಷ್ಟೇ ಸಂಕೀರ್ಣವಾದ ಪ್ರಶ್ನೆಗಳನ್ನು ಹುಟ್ಟುಹಾಕಿದವು. ವಾಗ್ವಾದಗಳನ್ನು ಸೃಷ್ಟಿಸಿದವು. ಸಂಘರ್ಷದ ಹೊಸ ರೂಪಗಳನ್ನು ಕಟ್ಟತೊಡಗಿದವು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯ ಮೀಮಾಂಸೆಗಳು ನಿರ್ದಿಷ್ಟವಾಗಿ ಈ ಸಂಧಿಕಾಲದ ಅನುಸಂಧಾನದ ಫಲಗಳು. ಏಕೆಂದರೆ, ಇವು ಕನ್ನಡ ಸಾಹಿತ್ಯ ಪರಂಪರೆ, ಪಠ್ಯಗಳು ಮತ್ತು ಲೇಖಕರನ್ನು ಮುಖ್ಯವಾಗಿ ಬದಲಾದ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಭಾಷಿಕ ಪ್ರಶ್ನೆಗಳ ಮೂಲಕ ಮುಖಾಮುಖಿ ಮಾಡಿದವು. ಇದರಿಂದ ಸಾಹಿತ್ಯದ ಸ್ವರೂಪ, ಉದ್ದೇಶ ಮತ್ತು ಕಾರ್ಯಮಾದರಿಗಳನ್ನು ಸಹ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭಾಷಿಕ ಪ್ರಶ್ನೆಗಳ ಹಿನ್ನೆಲೆಯಲ್ಲಿ ಹೊಸ ಸ್ವರೂಪಗಳಲ್ಲಿ ವ್ಯಾಖ್ಯಾನಿಸಲಾಯಿತು. ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ರೂಪುಗೊಳ್ಳಲಾರಂಭಿಸಿದರ ಹಿನ್ನೆಲೆಯಲ್ಲಿರುವ ಚಾರಿತ್ರಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಾಗಿದೆ.

೬.೧.೨ ಸ್ವಂತಿಕೆಯ ಹುಡುಕಾಟ ಮತ್ತು ರಕ್ಷಣೆಯ ಪ್ರಶ್ನೆಗಳು

ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ, 'ಸಾಹಿತ್ಯೇತರ ಅಭಿವ್ಯಕ್ತಿ ರೂಪಗಳೂ ಸಹ 'ಸಾಹಿತ್ಯ'ದ ವ್ಯಾಪ್ತಿಯಲ್ಲೇ ಬರುತ್ತವೆ. ಹೀಗಾಗಿ, ಯಾವುದೇ ಅಭಿವ್ಯಕ್ತಿ ರೂಪದ ಕಲಾಕೃತಿಗಳೂ ಕೂಡಾ 'ಪಠ್ಯ'ಗಳೇ ಆಗಿವೆ. ಆದ್ದರಿಂದ, ಸಾಹಿತ್ಯ ಕೃತಿಗಳು ಹಾಗೂ ಸಾಹಿತ್ಯೇತರ ಪಠ್ಯಗಳು ಎರಡನ್ನೂ ಸಹ ಸಾಹಿತ್ಯೇತರ

ಪ್ರಶ್ನೆಗಳ ಮೂಲಕ ಅನುಸಂಧಾನ ಮಾಡುವುದು ಇಂದು ಅತ್ಯಂತ ಅಗತ್ಯ ಮಾತ್ರವಲ್ಲದೆ, ಅಷ್ಟೇ ಅರ್ಥಪೂರ್ಣವಾದ ಕ್ರಿಯೆ ಕೂಡಾ ಆಗಿದೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯದ ಸ್ವರೂಪ ಕುರಿತ ತಳೆದ ಬಹುಮುಖ್ಯವಾದ ನಿಲುವು. ಈ ನಿಲುವೇ ಮುಂದೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ರೂಪುಗೊಳ್ಳಲು ಪ್ರಮುಖವಾದ ಕಾರಣ ಕೂಡಾ ಆಯಿತು. ಇದರಿಂದ, ಸಾಹಿತ್ಯ ವಿಮರ್ಶೆಯಲ್ಲಿ ಪರಂಪರಾಗತವಾಗಿ ರೂಢಿಯಲ್ಲಿ ಬಂದಿದ್ದ ಸಾಹಿತ್ಯ ಕುರಿತ 'ದ್ವಿರೂಪಿ' ಪರಿಕಲ್ಪನೆಗಳನ್ನು ಸಂಪೂರ್ಣವಾಗಿ ಕೈಬಿಡಲಾಯಿತು. ಸಾಹಿತ್ಯಾಧ್ಯಯನದ ಅನುಕೂಲಕ್ಕಾಗಿ ಮಾಡಿಕೊಳ್ಳಲಾಗಿದ್ದ ಸಾಹಿತ್ಯದ ವಿವಿಧ ಬಗೆಯ ಘಟ್ಟಗಳನ್ನು ಮೀರಿ ಸಮಗ್ರತಾನೆಲೆಯಲ್ಲಿ ಸಾಹಿತ್ಯಾನುಸಂಧಾನ ಮಾಡುವ ಪ್ರವೃತ್ತಿ ಮುನ್ನೆಲೆಗೆ ಬಂದಿತು. ಏಕಶಿಸ್ತು ನೆಲೆಗೆ ಬದಲಾಗಿ ಬಹುಶಿಸ್ತು ನೆಲೆಗಳ ಮೂಲಕ ವಿಶ್ಲೇಷಣೆ ಮಾಡುವ ಕ್ರಮ ಮಹತ್ವ ಪಡೆಯಿತು. ಕಾಲಾತೀತ ಪ್ರಶ್ನೆಗಳೂ ಕೂಡಾ ಕಾಲಬದ್ಧ ಆವರಣದೊಳಗೇ ಹುಟ್ಟುತ್ತವೆ. ಹಾಗೆಯೇ, ಸಾರ್ವಕಾಲಿಕ ಸಂಗತಿಗಳು ಸಹ ಸಮಕಾಲೀನ ಸನ್ನಿವೇಶಗಳ ಫಲವಾಗಿಯೇ ರೂಪುಗೊಳ್ಳುತ್ತವೆ ಎನ್ನುವ ಅರ್ಥಪೂರ್ಣವಾದ ಚಿಂತನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈಗ ಸಾಹಿತ್ಯದ ಸ್ವರೂಪ ಕುರಿತು ಮನ್ನಣೆ ಪಡೆದುಕೊಂಡವು.

ಈ ವಿದ್ಯಮಾನದಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳನ್ನು ಪರಸ್ಪರ ಎರಡು ಬೇರೆಯವೇ ಆದ ಪ್ರಕಾರಗಳು ಎನ್ನುವ ಸರಳೀಕೃತ ವಿಂಗಡಣೆಗೆ ಬದಲಾಗಿ ಸಂಕೀರ್ಣವಾದ ಏಕತ್ರ ಸ್ವರೂಪದಲ್ಲಿ ಪರಿಭಾವಿಸಲಾರಂಭಿಸಿತು. ಇವೆರಡರ ಒಳರೂಪದಲ್ಲಿ ಪರಸ್ಪರ ಸಮಾನವಾಗಿರುವ ಅನೇಕ ಮುಖ್ಯವಾದ ಪ್ರಶ್ನೆಗಳಿವೆ. ಇವು ಅನೇಕ ವಿಚಾರಗಳಲ್ಲಿ ಒಂದಕ್ಕೊಂದು ಪೂರಕವಾಗಿವೆ. ಹಾಗೆಯೇ, ಇವುಗಳ ನಡುವೆ ಬಹುಸ್ತರೀಯ ನೆಲೆಗಳಲ್ಲಿ ಕೊಡುಕೊಳ್ಳುವಿಕೆ ಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ ಎನ್ನುವುದನ್ನು ಕುರಿತು ವಿವೇಚಿಸುವ ಪ್ರವೃತ್ತಿ ಹೆಚ್ಚಾಯಿತು. ಕನ್ನಡ ಸಾಹಿತ್ಯವನ್ನು ಭಾಷಾನಿಷ್ಠ, ಮತನಿಷ್ಠ, ಪ್ರಕಾರನಿಷ್ಠ, ಯುಗಧರ್ಮನಿಷ್ಠ ಮತ್ತು ಶ್ರೇಷ್ಠ ಕವಿನಿಷ್ಠ ಕ್ರಮಗಳಲ್ಲಿ ವಿಭಜಿಸಿ ಅಭ್ಯಸಿಸುವುದಕ್ಕಿಂತ ಭಿನ್ನವಾದ ಪ್ರಶ್ನೆಗಳ ಮೂಲಕ ಅನುಸಂಧಾನ ಮಾಡುವ ಮಾದರಿಗಳು ರೂಪುಗೊಂಡವು. ಕನ್ನಡ ಸಾಹಿತ್ಯ ಪರಂಪರೆಯ ಎರಡು ಪರಸ್ಪರ ಪ್ರತ್ಯೇಕ ವೈಲಕ್ಷ್ಯಣ್ಯಗಳು ಎಂದೇ ಬಲವಾಗಿ ಪ್ರತಿಪಾದಿಸಿಕೊಂಡು ಬರಲಾಗಿದ್ದ 'ಮಾರ್ಗ ಮತ್ತು ದೇಸಿ', 'ವಸ್ತುಕ ಮತ್ತು ವರ್ಣಕ' ಮೊದಲಾದಂಥ ಪರಿಕಲ್ಪನೆಗಳನ್ನು ಈಗ ಹೊಸ ಸ್ವರೂಪದಲ್ಲಿ ಚರ್ಚಿಸಲಾಯಿತು.

ಸಾಹಿತ್ಯಾಧ್ಯಯನದಲ್ಲಿ ಪ್ರತಿಪಾದಿಸಲಾಗಿದ್ದ, ಅಂಗೀಕರಿಸಲಾಗಿದ್ದ ಹಾಗೂ ಅನುಸರಿಸಲಾಗುತ್ತಿದ್ದ ಇಂಥ 'ದ್ವಿರೂಪಿ' ಪರಿಕಲ್ಪನೆಗಳಿಗೆ ಇರುವ ಕಾರಣಗಳನ್ನು ಈಗ ಗುರುತಿಸಲಾಯಿತು. ಪರಸ್ಪರ ಭಿನ್ನವೂ ಮತ್ತು ಪ್ರತ್ಯೇಕವೂ ಎಂದು ಹೇಳಲಾಗಿದ್ದ ಲಕ್ಷಣಗಳಾಗಲೀ ಅಥವಾ ಅವಸ್ಥೆಗಳಾಗಲೀ, ವಾಸ್ತವದಲ್ಲಿ ಹಾಗೇನೂ ತುಂಡರಿಸಿದಂತೆ ಇರುವುದಿಲ್ಲ. ಅವುಗಳ ನಡುವೆ ಪರಸ್ಪರ ಸಾಹಚರ್ಯಾತ್ಮಕತೆ, ಸಂಘರ್ಷಾತ್ಮಕತೆ

ಮತ್ತು ಸಂಯೋಗಾತ್ಮಕತೆ ಇದ್ದೇ ಇರುತ್ತದೆ. ಹಾಗೆಂದರೆ ಇವುಗಳ ನಡುವೆ ದ್ವಂದ್ವವೇ ಇಲ್ಲವೆಂದೇನೂ ಅರ್ಥವಲ್ಲ. ಇವೆಲ್ಲವುಗಳನ್ನು ಒಳಗೊಂಡೇ ಇವುಗಳು ಅಸ್ತಿತ್ವ ಪಡೆದಿರುತ್ತವೆ. ಆದರೆ ಸಾಹಿತ್ಯ, ಸಂಸ್ಕೃತಿ ಚಿಂತನೆ ಹಾಗೂ ವಿಮರ್ಶಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿರುವ ಸಾಂಸ್ಕೃತಿಕ ರಾಜಕಾರಣ ಮತ್ತು ವಸಾಹತುಶಾಹಿ ರೂಪಿಸಿದ ಪೌರ್ವಾತ್ಯವಾದಿ ಚಿಂತನೆಗಳು ಇಂಥ ಸತ್ಯದ ನಿಜ ಸ್ಥಿತಿಗಳನ್ನು ಶಾಶ್ವತವಾಗಿ ಕತ್ತಲೆಯಲ್ಲಿಡುವ ಹುನ್ನಾರಗಳನ್ನು ರೂಪಿಸುತ್ತಿರುತ್ತವೆ. ಇಂಥ ಹುನ್ನಾರಗಳ ವಿರುದ್ಧ ಮೂಲಭೂತವಾದ ಪ್ರಶ್ನೆಗಳನ್ನು ಎತ್ತುವ ಮೂಲಕ ವಾಸ್ತವ ಸತ್ಯದ ಹುಡುಕಾಟ ಮಾಡಬೇಕು. ಇದರಿಂದ ಮಾತ್ರ ನಮ್ಮನ್ನು ನಾವು ಅರಿಯುವುದಕ್ಕೆ ಹಾಗೂ ನಮ್ಮತನವನ್ನು ಅರ್ಥಪೂರ್ಣವಾಗಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯ ಎನ್ನುವ ವಾದವನ್ನು ಮಂಡಿಸಲಾಯಿತು. ಈ ವಾದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾಧ್ಯಯನದಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿತು. ನಿರ್ವಸಾಹತೀಕರಣ ಪ್ರಕ್ರಿಯೆಯ ಭಾಗವಾದ ದೇಶಿ ಸಂಸ್ಕೃತಿ ಶೋಧ ಇದರ ಹಿನ್ನೆಲೆಯಲ್ಲಿರುವ ಬಹುಮುಖ್ಯವಾದ ಒಂದು ಪ್ರೇರಣೆ. ಹೀಗಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಜಾನಪದ, ಚರಿತ್ರೆ, ಪುರಾಣಗಳು, ಸಂಸ್ಕೃತಿಗಳು, ಆಚರಣೆಗಳು ಮತ್ತು ಧಾರ್ಮಿಕ ನಂಬಿಕೆಗಳ ಸಂಗತಿಗಳನ್ನು ಸಾಹಿತ್ಯಾನುಸಂಧಾನದ ಕಕ್ಷೆಯಲ್ಲಿ ಅತ್ಯಂತ ಮಹತ್ವದ ಸಂಗತಿಗಳೆಂದು ಪರಿಗಣಿಸಿತು.

ಕಳೆದ ಶತಮಾನದ ಎಪ್ಪತ್ತರ ಮತ್ತು ಎಂಭತ್ತರ ದಶಕದ ಈ ದೇಶಿ ಸಂಸ್ಕೃತಿ ಶೋಧದ 'ನಮ್ಮ ಸಂಸ್ಕೃತಿ'ಯ ಅಥವಾ 'ನಮ್ಮತನ'ದ ಹುಡುಕಾಟದ ಪ್ರಶ್ನೆಗಳು ತೊಂಭತ್ತರರ ದಶಕದ ವೇಳೆಗೆ ಬಹುದೊಡ್ಡದಾದ ಹಾಗೂ ಸಂಕೀರ್ಣವಾದ ಸವಾಲುಗಳಿಗೆ ಮುಖಾಮುಖಿಯಾದವು. ತೊಂಭತ್ತರ ದಶಕದಿಂದ ಜಾರಿಗೆ ಬಂದ ಜಾಗತೀಕರಣ ಮತ್ತು ಅದರ ಫಲವಾಗಿ ಸಮಾಜ, ಆರ್ಥಿಕತೆ, ಧರ್ಮ ಮತ್ತು ರಾಜಕಾರಣದಲ್ಲಿ ಮುನ್ನೆಲೆಗೆ ಬಂದ ಹೊಸ ಸ್ವರೂಪದ ಪ್ರಶ್ನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನದ ಕ್ರಮಗಳನ್ನು ತೀವ್ರವಾಗಿ ಹಾಗೂ ವ್ಯಾಪಕವಾಗಿ ಪಲ್ಲಟಗೊಳಿಸಿದವು. ಕೋಮುವಾದ, ಮತೀಯವಾದ, ಹಿಂಸಾವಾದ, ಪರಿಸರವಾದ ಭಯೋತ್ಪಾದನೆ, ವಾಣಿಜ್ಯ ಸಂಸ್ಕೃತಿ ಮತ್ತು ಸರಕು ಸಂಸ್ಕೃತಿ, ಮೊದಲಾದವುಗಳ ಮೂಲಕ ಹುಟ್ಟಿಕೊಂಡ ಅತ್ಯಂತ ಗಂಭೀರವಾದ ಪ್ರಶ್ನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನದಲ್ಲಿ ಮುಂಚೂಣಿಗೆ ಬಂದವು. ಹಿಂದಿನ ದಶಕದಲ್ಲಿ ಯಾವುದು ನಮ್ಮ ಸಂಸ್ಕೃತಿಯ ಹುಡುಕಾಟ ಮತ್ತು ಸಂಸ್ಕೃತಿಯ ಮರುರಚನೆಯ ಪ್ರಶ್ನೆಯಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನವನ್ನು ರೂಪಿಸಿತ್ತೊ, ಅದರ ಜಾಗದಲ್ಲಿ ಈಗ ಸಂಸ್ಕೃತಿಯ ರಕ್ಷಣೆಯ ಪ್ರಶ್ನೆ ಸ್ಥಾನ ಪಡೆಯಿತು. ದೇಶಿ ಸಂಸ್ಕೃತಿ ಶೋಧದ ಹುಡುಕಾಟದ ಪ್ರಯತ್ನ ಪೂರ್ಣಗೊಳ್ಳುವ ಮೊದಲೇ, ಇದೇ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದ ಸವಾಲುಗಳು ಎದುರಾದದ್ದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾಧ್ಯಯನ ಸಂದರ್ಭದ ಒಂದು ಚಾರಿತ್ರಿಕ ವಿಪರ್ಯಾಸ. ಅಲ್ಲದೆ, ಇದು ಏಕಕಾಲಕ್ಕೆ ಒಂದು ವಿರೋಧಾಭಾಸದ ಸ್ಥಿತಿಯೂ ಹೌದು; ಹಾಗೆಯೇ ಅಪ್ಪಟ ವಾಸ್ತವದ ಸನ್ನಿವೇಶವೂ ಹೌದು. ಆದ್ದರಿಂದಲೇ,

ಇದೊಂದು ಸಂದಿಗ್ಧಾತ್ಮಕ ಅಥವಾ ಸಂಕೀರ್ಣಾತ್ಮಕ ವಾಸ್ತವವಾಗಿದೆ. ಏಕೆಂದರೆ, ಇದು ಬಹುಮುಖ್ಯವಾಗಿ ವಿಶ್ವಸ್ಥ ನೆಲೆಯ ಅಧಿಕಾರಶಕ್ತಿಯ ನವವಸಾಹತುಶಾಹಿ ಜಾಗತಿಕ ಏಕರೂಪೀಕರಣ ಸಂಸ್ಕೃತಿ ನಿರ್ಮಾಣದ ದೇಶಿ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಸ್ಥಳೀಯ ನೆಲೆಯ ಬೌದ್ಧಿಕ ಹಾಗೂ ಸಾಂಸ್ಕೃತಿಕ ಪ್ರಯತ್ನವಾಗಿದೆ. ಈ ಪ್ರಯತ್ನವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾಧ್ಯಯನಕ್ಕೆ ಇನ್ನಷ್ಟು ಹೊಸ ಅನುಸಂಧಾನ ವಿಧಾನಗಳನ್ನು, ಪರಿಕರಗಳನ್ನು ಹಾಗೂ ಸಾಧನಗಳನ್ನು ಸೇರ್ಪಡೆಗೊಳಿಸಿತು. ಇದರಿಂದ ಮುಖ್ಯವಾಗಿ, ಈಗ ಶಿಷ್ಟ ಮತ್ತು ಜನಪ್ರಿಯ ಎನ್ನುವ ಸಾಹಿತ್ಯಕ ವರ್ಗೀಕರಣವನ್ನು ಸಂಪೂರ್ಣವಾಗಿ ಕೈಬಿಡಲಾಯಿತು. ಸಾಹಿತ್ಯಕ ಮತ್ತು ಸಾಹಿತ್ಯೇತರ ಎನ್ನುವ ವಿಭಜನೆ ಬಹುತೇಕ ನಿರಾಕರಣೆಗೊಳಗಾಯಿತು. ಸಾಹಿತ್ಯ ಮತ್ತು ಸಾಹಿತ್ಯೇತರ, ಲಿಖಿತ ಮತ್ತು ಅಲಿಖಿತ, ಶಾಬ್ದಿಕ ಮತ್ತು ಅಶಾಬ್ದಿಕ, ದೃಶ್ಯಾತ್ಮಕ ಮತ್ತು ಶ್ರವ್ಯಾತ್ಮಕ ಮೊದಲಾದ ಮಾನವಾಭಿವ್ಯಕ್ತಿಯ ಜ್ಞಾನರೂಪಗಳನ್ನು 'ಪಠ್ಯಗಳೆ'ಂಬ ಪರಿಭಾಷೆ ಮೂಲಕ ಸಮಾನವಾಗಿ ಪರಿಗಣಿಸಲಾಯಿತು. ಪಠ್ಯಗಳನ್ನು ಸಮಕಾಲೀನ ಬದುಕಿನ ಬಹುರೂಪಿ ಪ್ರಶ್ನೆಗಳ ಮೂಲಕ ವಿಶ್ಲೇಷಿಸುವ ಹಾಗೂ ಅರ್ಥೈಸುವ ಪ್ರವೃತ್ತಿ ಹೆಚ್ಚು ಮಹತ್ವ ಪಡೆದುಕೊಂಡಿತು. ಸಾಹಿತ್ಯದ ಓದು ಏಕಕಾಲಕ್ಕೆ ಸಾಮಾಜಿಕ ವಿಶ್ಲೇಷಣೆ, ರಾಜಕೀಯ ಚಿಂತನೆ ಮತ್ತು ಸಂಸ್ಕೃತಿಯ ವಿಮರ್ಶೆಯಾಗಿ ವಿಕಾಸವಾಯಿತು. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನದಲ್ಲಿ ಜನಪ್ರಿಯ ಸಾಹಿತ್ಯ, ಜನಪ್ರಿಯ ಕಲಾರೂಪಗಳು, ಜನಪ್ರಿಯ ಮಾಧ್ಯಮ ಪ್ರಕಾರಗಳು, ಸಮಕಾಲೀನ ಬದುಕಿನ ಆತಂಕಗಳು, ಪರಿಸರದ ಪ್ರಶ್ನೆಗಳು ಮತ್ತು ವಿಜ್ಞಾನದ ಕುರಿತ ವಿಮರ್ಶೆ ಮೊದಲಾದವುಗಳು ಹೊಸ ಪಠ್ಯ ರೂಪಗಳಾದವು.

ಹೀಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ಅಗಾಧವಾದ ಪ್ರಮಾಣದಲ್ಲಿ ವಿಸ್ತರಣೆಗೊಂಡವು. ಸಾಹಿತ್ಯಾನುಸಂಧಾನಕ್ಕೆ 'ಎಲ್ಲವೂ ಮುಖ್ಯ; ಯಾವುದೂ ಅಮುಖ್ಯವಲ್ಲ' ಎನ್ನುವ ಚಿಂತನೆಗೆ ಅತೀವವಾದ ಪ್ರಾಮುಖ್ಯತೆ ದೊರೆಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವ್ಯಾಪಕವಾದ ವಿಸ್ತರಣೆಯ ಸ್ವರೂಪವನ್ನು, ಬಹಳ ಮುಖ್ಯವಾಗಿ ನಿರ್ವಸಾಹತೀಕರಣ ಹಾಗೂ ನವವಸಾಹತುಶಾಹಿ ವಿದ್ಯಮಾನಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಇದನ್ನು ನಿಖರವಾಗಿ ವಿವರಿಸುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಎರಡು ಪ್ರಮುಖ ಚಿಂತನೆಗಳ ಮೂಲಕ ಸಾಹಿತ್ಯಾನುಸಂಧಾನ ಮಾಡಿರುವ ಕ್ರಮದಲ್ಲಿ ಅದರ ಸಾಹಿತ್ಯಕ ಆಯಾಮಗಳು ಸ್ಪಷ್ಟವಾದ ಆಕಾರ ಪಡೆದುಕೊಂಡಿವೆ ಎಂದು ಹೇಳಬಹುದು. ಅವುಗಳೆಂದರೆ, ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು ಮತ್ತು ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು.

ದೇಶಿವಾದಿ ಚಿಂತನೆಯು ಈಗಾಗಲೇ ಚರ್ಚಿಸಿರುವಂತೆ, ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ನಿರ್ವಸಾಹತೀಕರಣ ಅಥವಾ ವಸಾಹತೋತ್ತರ ಚಿಂತನೆಯ ಭಾಗವಾಗಿ ಹುಟ್ಟಿಕೊಂಡ ಸಾಹಿತ್ಯಕ ಮತ್ತು

ಸಾಂಸ್ಕೃತಿಕ ಪ್ರಸ್ಥಾನ. ಅದೇ ರೀತಿ, ಆಧುನಿಕೋತ್ತರವಾದಿ ಚಿಂತನೆಯು ನವವಸಾಹತುಶಾಹಿಯ ರಾಜಕೀಯಾರ್ಥಿಕ ಕಾರ್ಯತಂತ್ರ ಹಾಗೂ ಕಾರ್ಯಾಚರಣೆ ರೂಪಗಳಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಸಮರ್ಥನೆಗಾಗಿ ಪ್ರಥಮ ಜಗತ್ತು ಪ್ರತಿಪಾದಿಸಿರುವ ಒಂದು ಚಿಂತನೆಯಲ್ಲದ ಚಿಂತನೆ; ಪ್ರಸ್ಥಾನವಲ್ಲದ ಪ್ರಸ್ಥಾನ. ಏಕಕಾಲಕ್ಕೆ ಇದು ಒಂದು ವಿಚಾರವೂ, ವಿಶ್ಲೇಷಣೆಯೂ, ಸಿದ್ಧಾಂತವೂ ಮತ್ತು ದೃಷ್ಟಿಕೋನವೂ ಆಗಿರುವಂತೆ ತೋರುವ; ಆದರೆ, ನಿರ್ದಿಷ್ಟವಾಗಿ ಇಂಥದೇ ಎಂದು ಸುಲಭವಾಗಿ ಗುರುತಿಸಲಾಗದ ಒಂದು ವಿಕಲ್ಪ. ಇದು ಆಧುನಿಕತೆಯ ಪ್ರಮುಖ ಕೊಡುಗೆಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ವಿಜ್ಞಾನಗಳನ್ನು ನಿರಾಕರಿಸುತ್ತದೆ. ಆಧುನಿಕಯುಗದ ವೈಜ್ಞಾನಿಕ ಮನೋಭಾವಕ್ಕೆ ವಿರುದ್ಧವಾಗಿ ಆಧುನಿಕಪೂರ್ವ ಅಥವಾ ಮಧ್ಯಕಾಲೀನ ಯುಗದ ಕಲ್ಪಕತೆಯನ್ನು ಮುಖ್ಯವೆಂದು ಪ್ರತಿಪಾದಿಸುತ್ತದೆ. ಮಾನವಮತಿ ರಚಿತ ಅಥವಾ ಪ್ರತಿಪಾದಿತ ಯಾವುದೇ ಕೃತಿಗಳು, ವಿಚಾರಗಳು, ತತ್ವಗಳು, ಸಿದ್ಧಾಂತಳು ಹಾಗೂ ವಾದಗಳು ಸಹ ಶ್ರೇಷ್ಠವಲ್ಲ; ಎಲ್ಲವೂ ಒಂದೇ ಅಥವಾ ಸಮಾನ. ಇವುಗಳಲ್ಲಿ ಯಾವುದೇ ಒಂದು ಮೇಲೂ ಅಲ್ಲ ಅಥವಾ ಕೀಳೂ ಅಲ್ಲ. ಯಾವುದೇ ಒಂದು ಮುಖ್ಯವೂ ಅಲ್ಲ ಅಥವಾ ಅಮುಖ್ಯವೂ ಅಲ್ಲ. ಹೀಗಾಗಿ, ಯಾವುದಕ್ಕೆ ಆಗಲಿ ವಿಶಿಷ್ಟವಾದ ಅರ್ಥವಾಗಲೀ ಅಥವಾ ಮಹತ್ವವಾಗಲೀ ಇಲ್ಲ ಎನ್ನುವಂಥ ಆಧುನಿಕ ಅದ್ವೈತವಾದವನ್ನು ಅಥವಾ ಹೊಸ ಸಮತಾವಾದವನ್ನು ಮಂಡಿಸುತ್ತದೆ. ಕಳೆದ ಶತಮಾನದ ಎಪ್ಪತ್ತರ ಮತ್ತು ಎಂಭತ್ತರ ದಶಕದಿಂದ ಉತ್ತರ ಅಮೇರಿಕಾ ಹಾಗೂ ಪಶ್ಚಿಮ ಯುರೋಪಿನಲ್ಲಿ ಪ್ರವರ್ಧಮಾನಕ್ಕೆ ಬಂದು, ಆನಂತರ ವಿಶ್ವಾದ್ಯಂತ ಪಸರಿಸಿಕೊಂಡ ಈ ಚಿಂತನೆಯು ಜಾಗತಿಕ ಬೌದ್ಧಿಕ ಕ್ಷೇತ್ರದಲ್ಲಿ ವ್ಯಾಪಕವಾದ ಪ್ರಭಾವವನ್ನು ಉಂಟುಮಾಡಿದೆ.

ಈ ಚಿಂತನೆಯು, ತೊಂಭತ್ತರ ದಶಕದಿಂದ ಕನ್ನಡ ಬೌದ್ಧಿಕ ವಲಯದಲ್ಲಿ ಸಾಕಷ್ಟು ಚರ್ಚೆಗಳನ್ನು ಹುಟ್ಟುಹಾಕಿದೆ. ಇಂಥ ಸನ್ನಿವೇಶದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಈ ಚಿಂತನೆಯನ್ನು ಅರ್ಥಪೂರ್ಣವಾದ ವಿಮರ್ಶಾತ್ಮಕವಾದ ಕ್ರಮದಲ್ಲಿ ಸ್ವೀಕರಿಸುವ ವಿವೇಕ ತೋರಿಸಿದೆ. ನಿರ್ದಿಷ್ಟವಾಗಿ ಯಾವುದೇ ರೀತಿಯ ಪರ್ಯಾಯಗಳನ್ನು ಪ್ರತಿಪಾದಿಸದಿರುವ ಇದರ ಸಮಗ್ರ ನಿರಾಕರಣಾವಾದ ಕ್ರಮದಲ್ಲಿ ಹಾಗೂ ಯಾವುದೇ ಬಗೆಯ ಅರ್ಥಪೂರ್ಣ ವಿವೇಚನೆಗೂ ಅವಕಾಶವಿಲ್ಲದಿರುವ ಇದರ ಸರ್ವ ಮಾನ್ಯೀಕರಣದ ಆಕರ್ಷಕ ಜಾಣವಾದಗಳನ್ನು ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ತನ್ನ ತೀವ್ರವಾದ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. ಅದರಲ್ಲೂ ಈ ಚಿಂತನೆ ಬಲವಾಗಿ ವಿರೋಧಿಸುವ ಆಧುನಿಕ ಪ್ರಜಾಪ್ರಭುತ್ವ, ಜಾತ್ಯತೀತತೆ ಅಥವಾ ಧರ್ಮನಿರಪೇಕ್ಷತೆ, ಆಧುನಿಕ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನಗಳು ತೃತೀಯ ಜಗತ್ತಿನ ಸಾಮಾಜಿಕ ವ್ಯವಸ್ಥೆಯ ಅಧೀನ ನೆಲೆಯಲ್ಲಿರುವ ಸಮಾಜಗಳು, ಸಮುದಾಯಗಳು ಹಾಗೂ ವ್ಯಕ್ತಿಗಳಿಗೆ ವಿಮೋಚನೆಯ ಹಲವು ಅರ್ಥಪೂರ್ಣ ಸಾಧ್ಯತೆಗಳನ್ನು ತಂದುಕೊಟ್ಟಿವೆ. ಆದರೆ, ಇವುಗಳ ಅನ್ವಯಕತೆಯ ಮತ್ತು ಬಳಕೆಯ ಉದ್ದೇಶಗಳಲ್ಲಿ, ವಿಧಾನಗಳಲ್ಲಿ ಹಾಗೂ ದೃಷ್ಟಿಕೋನಗಳಲ್ಲಿ

ಆಗಿರಬಹುದಾದ ತಪ್ಪುಗಳನ್ನು ಕುರಿತು ವಿಮರ್ಶೆ ಮಾಡುವ ಬದಲಾಗಿ, ಈ ಜ್ಞಾನರೂಪಗಳನ್ನೇ ಸಾರಾಸಗಟಾಗಿ ನಿರಾಕರಿಸುವುದು ಸಮರ್ಥನೀಯವಲ್ಲ. ಹೀಗಾಗಿ, ಈ ಚಿಂತನೆಯ ಇಂಥ ಕಠೋರ ನಿಲುವಿನ ಹಿನ್ನೆಲೆಯಲ್ಲಿ ಬೇರೆಯೇ ಆದ ಬಹಳ ಪ್ರಬಲವಾದ ಗುಪ್ತಕಾರ್ಯಸೂಚಿಗಳಿರುತ್ತವೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಆಧುನಿಕೋತ್ತರ ಚಿಂತನೆಯ ತಾತ್ವಿಕ ವಿಚಾರಗಳನ್ನು ಕುರಿತು ತಳೆದಿರುವ ಅತ್ಯಂತ ಅರ್ಥಪೂರ್ಣವಾದ ನಿಲುವು.

ಈ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮುಖ್ಯವಾದ ಈ ಎರಡು ಸಾಹಿತ್ಯಕ ಆಯಾಮಗಳ ಸ್ವರೂಪವನ್ನು ಕುರಿತು ಇಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

೬.೨ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ವಸಾಹತೋತ್ತರ ಚಿಂತನೆಯ ಎಳೆಗಳು, ನಿರ್ದಿಷ್ಟವಾಗಿ ಕಳೆದ ಶತಮಾನದ ಎಪ್ಪತ್ತರ ಮತ್ತು ಎಂಭತ್ತರ ದಶಕಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡವು. ಈ ವೇಳೆಗೆ ಬಹುತೇಕ ವಸಾಹತು ರಾಷ್ಟ್ರಗಳು, ವಸಾಹತುಶಾಹಿ ರಾಷ್ಟ್ರಗಳ ರಾಜಕೀಯ ಆಳ್ವಿಕೆಯಿಂದ ಮುಕ್ತವಾಗಿದ್ದವು. ಆದರೆ, ಅವುಗಳ ಸಾಂಸ್ಕೃತಿಕ ಆಳ್ವಿಕೆಯಿಂದೇನೂ ಮುಕ್ತವಾಗಿರಲಿಲ್ಲ. ಏಕೆಂದರೆ, ಸುಮಾರು ಎರಡು ಶತಮಾನಗಳ ಕಾಲ ವಸಾಹತುಶಾಹಿ ರಾಷ್ಟ್ರಗಳು ಅಧೀನ ವಸಾಹತು ರಾಷ್ಟ್ರಗಳ ಬಹುತೇಕ ಎಲ್ಲ ಕ್ಷೇತ್ರಗಳ ಮೇಲೂ ತಮ್ಮ ಪ್ರಭಾವವನ್ನು ದಟ್ಟವಾಗಿ ಮೂಡಿಸಿದ್ದವು. ಅದರಲ್ಲೂ, 'ಮೆಕಾಲೆಯ ಮಕ್ಕಳಾ'ದ ವಸಾಹತೋತ್ತರ ಭಾರತೀಯರು ಸಾಂಸ್ಕೃತಿಕವಾಗಿ ತೀವ್ರವಾದ ವಿಸ್ಮೃತಿಗೆ ಒಳಗಾಗಿದ್ದರು. ಈಗ ಯುರೋಪಿಯನ್ನರ, ಅದರಲ್ಲೂ ಬ್ರಿಟಿಷರ ಭೌತಿಕ ಆಳ್ವಿಕೆಗೆ ಬದಲಾಗಿ, ಅವರ ಪ್ರಜ್ಞೆಯ ಮೂಲಕ ನಮ್ಮನ್ನು ನಾವು ಆಳಿಕೊಳ್ಳುವಂತಹ ಸಾಂಸ್ಕೃತಿಕ ಮನೋವೈಪರಿತ್ಯದ ಅವಸ್ಥೆ ಉಂಟಾಯಿತು. ಆದರೆ ಇದೇ ಸಂದರ್ಭದಲ್ಲಿ, ವಸಾಹತುಶಾಹಿಯು ಭಾರತೀಯ ಶೋಷಿತ, ದಮನಿತ ಮತ್ತು ಹಿಂದುಳಿದ ಸಮಾಜಗಳು, ಸಮುದಾಯಗಳು ಹಾಗೂ ವ್ಯಕ್ತಿಗಳಿಗೆ ಸಮಾನತೆಯ ಹಲವು ದಾರಿಗಳನ್ನು ಸಹ ತೆರೆಯಿತು. ಇಂಥ ದ್ವಂದ್ವರೂಪಿ ಅವಸ್ಥೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ನಿರ್ವಸಾಹತೀಕರಣದ ರೂಪವಾಗಿ 'ದೇಶಿವಾದಿ ಚಿಂತನೆ'ಯ ಮೂಲಕ 'ಕರ್ನಾಟಕ ಸಂಸ್ಕೃತಿಗಳ'ನ್ನು, 'ಕನ್ನಡ ಸಾಹಿತ್ಯ ಪರಂಪರೆಗಳ'ನ್ನು ಮತ್ತು 'ಕನ್ನಡ ಪಠ್ಯಗಳ'ನ್ನು ಅನುಸಂಧಾನ ಮಾಡುವ ಪ್ರಯತ್ನವನ್ನು ಬಹುಸ್ತರೀಯ ನೆಲೆಗಳಲ್ಲಿ ಕೈಗೊಂಡಿತು. ಈ ಸಾಹಿತ್ಯಾನುಸಂಧಾನದ ನಮ್ಮ ಸ್ವಂತಿಕೆಯ ಹುಡುಕಾಟಕ್ಕೆ ಅನ್ಯಭಾಷಾ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಿಚಾರಾಕೃತಿಗಳು ಬೇಡ; ನಮ್ಮ ಪರಂಪರೆಯ ಒಳಗಿನಿಂದಲೇ ನಮ್ಮ ಮಾನದಂಡಗಳನ್ನು ರೂಪಿಸಿಕೊಳ್ಳೋಣ. ಆದ್ದರಿಂದ, 'ಕನ್ನಡಿಗಳು ಇನ್ನು ಸಾಕು' ಎಂದು ಕೆ.ವಿ.ಎನ್. ಅವರು ಎಲಿಯಟ್ ಮತ್ತು ಕನ್ನಡ ಸಾಹಿತ್ಯ ವಿಮರ್ಶೆ ಅಥವಾ ಕನ್ನಡಿಗಳು ಇನ್ನು ಸಾಕು' ('ಬೇರು ಕಾಂಡ ಚಿಗುರು, ೧೯೯೭) ಲೇಖನದ ಮೂಲಕ ಪ್ರತಿಪಾದಿಸಿದರು. ಇದಕ್ಕೆ ಭಿನ್ನವಾಗಿ, ನಮ್ಮತನದ ಹುಡುಕಾಟವೆನ್ನುವುದು ಅತ್ಯಂತ

ಸಂಕೀರ್ಣವಾದ ಕ್ರಿಯೆ. ಅಷ್ಟೇ ಅಲ್ಲ ಅದೊಂದು ಬಹುಮುಖ್ಯವಾದ ಸಾಂಸ್ಕೃತಿಕ ಹೊಣೆಗಾರಿಕೆ. ಹೀಗಾಗಿ, ಇದರಲ್ಲಿ ನಮ್ಮದಲ್ಲದ ವಿಚಾರಾಕೃತಿಗಳೂ ಕೂಡಾ ಬಹಳ ಮುಖ್ಯ. ಆದರೆ, ಇವು 'ಕನ್ನಡಿಗಳೋ ಅಥವಾ ದೀಪಗಳೋ' ಆದಾಗ ನಮಗೆ ಏನನ್ನು ತೋರಿಸುತ್ತವೆ ಎನ್ನುವುದಷ್ಟೇ ಮುಖ್ಯವಲ್ಲ. ಇವುಗಳನ್ನು ಹಿಡಿದುಕೊಂಡಿರುವ ನಾವು ನೋಡಬೇಕು ಎಂದುಕೊಂಡಿರುವುದನ್ನು ನೋಡುತ್ತೇವೆಯೇ; ಹಾಗೆಯೇ, ನೋಡಬೇಕಾದ ರೀತಿಯಲ್ಲಿಯೇ ನೋಡುತ್ತೇವೆಯೇ ಎನ್ನುವುದೇ ಯಾವಾಗಲೂ ಅತ್ಯಂತ ಹೆಚ್ಚು ಮುಖ್ಯವಾಗಿರುವ ಪ್ರಶ್ನೆ ಎಂದು ಡಿ.ಆರ್. ತಮ್ಮ ಪ್ರತಿವಾದ ಮಂಡಿಸಿದರು ('ಅಕ್ಷರ ಚಿಂತನಾ ಮಾಲಿಕೆಯ ವಿಸ್ಮೃತಿ' ಪರಿಕಲ್ಪನೆಯ ಮುನ್ನುಡಿ' ೧೯೯೩).

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನ ಈ ಎರಡು ಮುಖ್ಯವಾದ ಮಾದರಿಗಳಲ್ಲಿ ನಡೆದಿದೆ. ಕನ್ನಡ ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ ಅನುಭಾವ ಸಾಹಿತ್ಯ, ಚರಿತ್ರೆ, ಧರ್ಮ, ಸಂಸ್ಕೃತಿ, ಪರಂಪರೆ ಹಾಗೂ ಭಾಷೆ ಮೊದಲಾದವುಗಳನ್ನು ಈ ವಿಧಾನಗಳ ಮೂಲಕ ಅನುಸಂಧಾನ ಮಾಡಲಾಗಿದೆ. ಈ ಅನುಸಂಧಾನದಲ್ಲಿ ಚರಿತ್ರೆ ಹಾಗೂ ಪುರಾಣದ ಪರಿಕಲ್ಪನೆಗಳನ್ನು ಪುನರ್‌ವ್ಯಾಖ್ಯಾನ ಮಾಡಲಾಗಿದೆ. ವಸಾಹತುಶಾಹಿಗೆ ಕನ್ನಡ ಸಾಹಿತ್ಯದ ವಿವಿಧ ಲೋಕಗಳು ಪ್ರತಿಕ್ರಿಯಿಸಿರುವ ಹಾಗೂ ಪ್ರತಿರೋಧಿಸಿರುವ ನೆಲೆಗಳ ಸ್ವರೂಪ ಕುರಿತು ಬಹುರೂಪಿ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಆಧುನಿಕತೆ ತಂದಂಥ ಪರಿವರ್ತನೆಗಳ ಹಾಗೂ ಪಲ್ಲಟಗಳ ಪರಿಣಾಮ ಸ್ವರೂಪ ಕುರಿತು ಆಲೋಚಿಸಲಾಗಿದೆ. ಆಧುನಿಕತೆಗೆ ಪರ್ಯಾಯವಾಗಿ ಪ್ರತಿಪಾದಿಸಲಾಗಿರುವ ದೇಶಿ ಸಂಸ್ಕೃತಿ ಸ್ವರೂಪಕ್ಕೂ ಹಾಗೂ ಊಳಿಗಮಾನ್ಯಶಾಹಿ ವ್ಯವಸ್ಥೆಗೂ ಇರುವ ಸಂಬಂಧಾಂತರಗಳನ್ನು ಕುರಿತು ವಿವೇಚಿಸಲಾಗಿದೆ. 'ಶಿಷ್ಟ'ಕ್ಕೆ ಎದುರಾಗಿ ಮಂಡಿಸಲಾದ 'ಪರಿಶಿಷ್ಟ'ಗಳ ಒಳಗಿರುವ ವೈರುಧ್ಯಗಳನ್ನು ಹಾಗೂ ಬಿಕ್ಕಟ್ಟುಗಳನ್ನು ಕುರಿತು ಚಿಂತಿಸಲಾಗಿದೆ. ಬಹಳ ಮುಖ್ಯವಾಗಿ, ಜಾನಪದ ಮತ್ತು ದೇಶಿಯನ್ನು, ಜನಪರ ಹಾಗೂ ಮಾನವೀಯ ಮೌಲ್ಯಗಳ ತವನಿಧಿ ಎಂದು ಭಾವಿಸುವ ಮುಗ್ಧ ಗ್ರಹಿಕೆಗೆ ಬದಲಾಗಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಊಳಿಗಮಾನ್ಯ ಆಳುವ ವ್ಯವಸ್ಥೆಯ ಸಾಂಸ್ಕೃತಿಕ ರಾಜಕಾರಣದ ಸಾಧನವಾಗಿ ಜಾನಪದದ ಬಳಕೆಯಾಗಿರುವ ನೆಲೆಗಳನ್ನು ಕುರಿತು 'ಜಾನಪದವೆಲ್ಲ ಜನಪರವಲ್ಲ' ಎನ್ನುವ ಪ್ರಮೇಯವನ್ನು ಪ್ರತಿಪಾದಿಸಲಾಗಿದೆ.

ಈ ತಾತ್ವಿಕ ಗ್ರಹಿಕೆಗಳ ಹಿನ್ನೆಲೆಯಲ್ಲಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳನ್ನು ಕುರಿತು ಇಲ್ಲಿ ಮಹತ್ವಪೂರ್ಣವಾದ ಕೆಲವು ಲೇಖನಗಳ ಮೂಲಕ ವಿವೇಚಿಸಲಾಗುವುದು. ಈ ವಿಧಾನವು ಕನ್ನಡದ ಶಿಷ್ಟ, ಜಾನಪದ ಮತ್ತು ಅನುಭಾವ ಸಾಹಿತ್ಯದ ಪಠ್ಯಗಳನ್ನು ಅನುಸಂಧಾನ ಮಾಡುವ ಸಂದರ್ಭದಲ್ಲಿ ಅವುಗಳ ಸಾಹಿತ್ಯಕ ನೆಲೆಗಳ ಸ್ವರೂಪವನ್ನು ಗ್ರಹಿಸಿರುವ ಕ್ರಮಗಳನ್ನು ಕುರಿತು ಆಲೋಚಿಸಲಾಗುವುದು.

ಈ ಚರ್ಚೆಯಲ್ಲಿ, ಮೊಗಳ್ಳಿ ಅವರ 'ಕೆರೆಗೆ ಹಾರ' ಜನಪದಗೀತೆ ಕುರಿತ 'ಊಳಿಗ ಮಾನ್ಯ ಕಥನ' ಮತ್ತು 'ಸತ್ತವರ ನೆರಳು ಬೆಳಕಾಗುವ ಬಗೆ' ('ಅಗ್ನಿಪತ್ರಿಕೆ', ೨೦೧೧), ಮತ್ತು ಕಿ.ರಂ. ಅವರ 'ಹದಿನೇಳು ಮತ್ತು ಹದಿನೆಂಟನೆಯ ಶತಮಾನದ ಅನುಭಾವ ಸಾಹಿತ್ಯ' ('ತೆರೆದ ಪಠ್ಯ', ೨೦೧೨) ಲೇಖನಗಳನ್ನು ಪ್ರಧಾನ ಆಕರಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಇವುಗಳೊಂದಿಗೆ, ಚರ್ಚೆಯ ಪೂರಕ ಆಕರಗಳಾಗಿ ಹಲವು ಸಂಗತ ಲೇಖನಗಳನ್ನು ಆಯ್ದುಕೊಳ್ಳಲಾಗಿದೆ. ಅವುಗಳೆಂದರೆ: ತೀ.ನಂ.ಶ್ರೀ ಅವರ 'ಕೆರೆಗೆ ಹಾರ' ('ತೀ.ನಂ.ಶ್ರೀ ಸಮಗ್ರ ಗದ್ಯ', ೨೦೦೬) ಕುರ್ತುಕೋಟಿ ಅವರ 'ಗೋವಿನ ಕಥೆ ಮತ್ತು ಕೆರೆಗೆ ಹಾರ' ('ಕನ್ನಡ ಸಾಹಿತ್ಯ ಸಂಗಾತಿ', ೨೦೧೦), ಸುಬ್ಬಣ್ಣ ಅವರ 'ಕನ್ನಡವು ದಕ್ಕಿಸಿಕೊಂಡ ಅರಿವು ಮತ್ತು ಎಚ್ಚರ' ('ಅರೆ ಶತಮಾನದ ಅಲೆ ಬರಹಗಳು', ೨೦೦೪) , ಶಿವರಾಮಯ್ಯ ಅವರ 'ಕೆರೆಗೆ ಹಾರ' ('ಇಮ್ಮಾವು', ೨೦೦೩), ಎಚ್.ಎಸ್. ಶಿವಪ್ರಕಾಶ್ ಅವರ 'ಎಲ್ಲ ಜಾತಿಯ ಮರಗಳು ಕಾಡು: ತತ್ವಪದಕಾರರು' ('ಮೊದಲ ಕಟ್ಟಿನ ಗದ್ಯ', ೧೯೯೫), ಹಾಗೂ 'ಲಕ್ಷ್ಮೀಪತಿ ಕೋಲಾರ ಅವರ 'ತತ್ವಪದಕಾರರ ನಿರ್ವಸಾಹತೀಕರಣ ಚಿಂತನೆ' ('ಕಾಲುದಾರಿ', ೨೦೦೧) ಲೇಖನಗಳು. ಇದರೊಂದಿಗೆ, ಚರ್ಚೆಯ ಅಗತ್ಯತೆಗನುಸಾರವಾಗಿ ಕನ್ನಡ ಬರಹಗಾರರ ಹಾಗೂ ಚಿಂತಕರ ಉಪಯುಕ್ತವಾದ ವಿಚಾರಗಳನ್ನು ಸಹ ಪರಿಶೀಲಿಸಲಾಗುವುದು.

ಈ ಚರ್ಚೆಯನ್ನು ಮುಂದಿನ ಕ್ರಮದಲ್ಲಿ ರೂಪಿಸಿಕೊಳ್ಳಲಾಗಿದೆ.

ಅ. ಮೊಗಳ್ಳಿ ಅವರ 'ಕೆರೆಗೆ ಹಾರ' ಕಾವ್ಯದ ಸಾಹಿತ್ಯಾನುಸಂಧಾನದ ಸ್ವರೂಪ

ಆ. ಕಿ.ರಂ. ಅವರ 'ಅನುಭಾವ ಸಾಹಿತ್ಯದ ಸಾಹಿತ್ಯಾನುಸಂಧಾನದ ಸ್ವರೂಪ

ಈ ವಿಮರ್ಶಕರು, ಪಠ್ಯದ ಅನುಸಂಧಾನದ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಶೋಧಿಸಿರುವ ಹಾಗೂ ವಿಸ್ತರಿಸಿರುವ ಸ್ವರೂಪ ಕುರಿತು ಇಲ್ಲಿ ವಿವೇಚಿಸಲಾಗಿದೆ.

೬.೩ ಮೊಗಳ್ಳಿ ಅವರ 'ಕೆರೆಗೆ ಹಾರ' ಕಾವ್ಯದ ಸಾಹಿತ್ಯಾನುಸಂಧಾನದ ಸ್ವರೂಪ

ಮೊಗಳ್ಳಿ ಕನ್ನಡ ದಲಿತ ಸಾಂಸ್ಕೃತಿಕ ವಿಮರ್ಶಾ ಮಾದರಿಯ ಒಬ್ಬ ಮಹತ್ವದ ವಿಮರ್ಶಕ ಹಾಗೂ ಚಿಂತಕ. ಕನ್ನಡ ದಲಿತ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಂಸ್ಕೃತಿ ಮತ್ತು ರಾಜಕೀಯ ಪ್ರಶ್ನೆಗಳನ್ನು ಕೇಂದ್ರಕ್ಕೆ ತಂದವರಲ್ಲಿ ಮೊಗಳ್ಳಿ ಬಹಳ ಮುಖ್ಯವಾದವರು. ಸಾಹಿತ್ಯದ ಸಾಮಾಜಿಕಾನುಸಂಧಾನ ಎನ್ನುವುದು, ಸಾಹಿತ್ಯದಲ್ಲಿ ಸಾಮಾಜಿಕ ಪರಿಕಲ್ಪನೆಗಳ ಮತ್ತು ಸಾಮಾಜಿಕ ಸಂಗತಿಗಳ ಪ್ರತಿಫಲನದ ಅವಲೋಕನ ಎನ್ನುವ ತೆಳು ಗ್ರಹಿಕೆಯನ್ನು ಮೀರಲು ಇವರ ವಿಮರ್ಶೆ ಸದಾ ಪ್ರಯತ್ನಿಸುತ್ತದೆ. ಹೀಗಾಗಿ, ಮೊಗಳ್ಳಿ ಅವರು ಪಠ್ಯದ ಅನುಸಂಧಾನಕ್ಕೆ ಬಹುಶಿಸ್ತೀಯ ವಿಶ್ಲೇಷಣಾತ್ಮಕ ವಿಧಾನವನ್ನು ಮುಖ್ಯ ಸಾಧನವನ್ನಾಗಿ

ಅಳವಡಿಸಿಕೊಳ್ಳುತ್ತಾರೆ. ಆದ್ದರಿಂದಲೇ, ಇವರ ಸಾಂಸ್ಕೃತಿಕ ವಿಮರ್ಶೆಯು ಸಂಸ್ಕೃತಿ ವಿಶ್ಲೇಷಣಾತ್ಮಕ ಚಹರೆ ಪಡೆದುಕೊಳ್ಳುತ್ತದೆ.

ಮೊಗಳ್ಳಿ ಅವರ ವಿಮರ್ಶೆಯು ಮುಖ್ಯವಾಗಿ, ಸಾಹಿತ್ಯೇತರ ಜ್ಞಾನಶಿಸ್ತುಗಳ ಮೂಲಕ ಸಾಹಿತ್ಯ ಲೋಕಕ್ಕೆ ಮತ್ತು ಸಾಹಿತ್ಯದಿಂದಾಚೆಗಿನ ಜಗತ್ತಿಗೆ ಸೇರಿದ ಪ್ರಶ್ನೆಗಳನ್ನು ಸಮಾನವಾಗಿ ಬಹುಸ್ತರೀಯ ನೆಲೆಗಳ ವಿಶ್ಲೇಷಣೆಗೆ ಒಳಪಡಿಸುತ್ತದೆ. ಪಠ್ಯದ ಸಮಕಾಲೀನ ಆಶಯಗಳನ್ನು ಮತ್ತು ಆಶೋತ್ತರಗಳನ್ನು ಅತ್ಯಂತ ಮುಖ್ಯವಾದ ವಿಚಾರಗಳೆಂದು ಭಾವಿಸುವುದು ಅವರ ಸಂಸ್ಕೃತಿ ವಿಮರ್ಶೆಯ ವಿಶಿಷ್ಟತೆಯಾಗಿದೆ. ಹೀಗಾಗಿಯೇ, ಇದು ಪಠ್ಯದ ಸಾಹಿತ್ಯಾತ್ಮಕ ಹಾಗೂ ಆಕೃತಿಯಾತ್ಮಕ ಪ್ರಶ್ನೆಗಳನ್ನು ಸಂಸ್ಕೃತಿ ವಿಮರ್ಶೆಯ ಚರ್ಚೆಯಲ್ಲಿ ಆತ್ಯಂತಿಕ ಸಂಗತಿಗಳೆಂದು ಪರಿಗಣಿಸದಿರುವುದಕ್ಕೆ ಇರುವ ಮುಖ್ಯವಾದ ಕಾರಣವಾಗಿದೆ. ಆದ್ದರಿಂದ, ಆಶಯ ಪ್ರಧಾನ ಸಂಸ್ಕೃತಿ ವಿಮರ್ಶೆಯ ಸಂದರ್ಭದಲ್ಲಿ ಮೊಗಳ್ಳಿ ಅವರು ಕೆಲವೊಮ್ಮೆ ಅವಸರದ ಹಾಗೂ ಅಪೂರ್ಣ ಸ್ವರೂಪದ ತೀರ್ಮಾನಗಳಿಗೂ ಬಂದುಬಿಡುವುದನ್ನು ಗಮನಿಸಬಹುದು. ಇಷ್ಟಾದರೂ, ಸಂಘರ್ಷಾತ್ಮಕತೆಯನ್ನು ಸ್ಥಾಯಿ ಚಹರೆಯಾಗಿ ಹೊಂದಿರುವ ಮೊಗಳ್ಳಿ ಅವರ ಸಾಂಸ್ಕೃತಿಕ ವಿಮರ್ಶೆಯು ತನ್ನ ಬಿಡಿಯಾದ ರೂಪಗಳಲ್ಲಿ ನೀಡುವ ಒಳನೋಟಗಳು ಸಾಕಷ್ಟು ಅರ್ಥಪೂರ್ಣವಾಗಿರುವುದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ. ಹೀಗಾಗಿಯೇ, ಮೊಗಳ್ಳಿ ಅವರ ಸಾಂಸ್ಕೃತಿಕ ವಿಮರ್ಶೆಯ ಬರಹಗಳಲ್ಲಿ ಸಂಘರ್ಷಾತ್ಮಕ ಚಿಂತನಾವಿಧಾನವೊಂದರ ಗಟ್ಟಿಯಾದ ಎಳೆಗಳಿವೆ.

೬.೩.೧ ಊಳಿಗಮಾನ್ಯಶಾಹಿಯ ಸಾಂಸ್ಕೃತಿಕ ರಾಜಕಾರಣದ ರೂಪಕ

'ಗೋವಿನ ಹಾಡು' ಮತ್ತು 'ಕೆರೆಗೆ ಹಾರ' ಜನಪದ ಕಥನ ಕಾವ್ಯಗಳನ್ನು ಕಳೆದ ಶತಮಾನದ ಮಧ್ಯಭಾಗದಿಂದ ಕನ್ನಡ ಸಾಹಿತ್ಯದ ಹಾಗೂ ಕರ್ನಾಟಕ ಸಂಸ್ಕೃತಿಯ ಎರಡು ಶ್ರೇಷ್ಠ ರಚನೆಗಳು ಎಂದು ಪ್ರತಿಪಾದಿಸಿಕೊಂಡು ಬರಲಾಗಿದೆ. ಈ ಪಠ್ಯಗಳನ್ನು ರಚಿಸಿದ ಅನಾಮಧೇಯ ಜಾನಪದ ಕವಿಗಳನ್ನು ಕರ್ನಾಟಕ ಸಂಸ್ಕೃತಿಯ ಮಹತ್ವದ ಪ್ರತಿಭೆಗಳೆಂದು ಪರಿಗಣಿಸಲಾಗಿದೆ. ಈ ಎರಡೂ ಪಠ್ಯಗಳನ್ನು ಸಾಹಿತ್ಯಕ, ಸಾಮಾಜಿಕ, ನೈತಿಕ ಹಾಗೂ ಸಾಂಸ್ಕೃತಿಕ ಪ್ರಶ್ನೆಗಳ ಮೂಲಕ ಬಹುಸ್ತರೀಯ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಒಂದನ್ನು 'ಸತ್ಯವಾಕ್ಯ ಪರಿಪಾಲನೆ' ಮೌಲ್ಯದ ಪ್ರತಿಪಾದನೆಗೆ ಸಂಬಂಧಿಸಿದ ಶ್ರೇಷ್ಠ ರೂಪಕವೆಂದು ಹಾಗೂ ಇನ್ನೊಂದನ್ನು ಕರ್ನಾಟಕ ಸಂಸ್ಕೃತಿಯ 'ತ್ಯಾಗಬಲಿದಾನದ' ಮೌಲ್ಯಕ್ಕೆ ಸಂಬಂಧಿಸಿದ ಮಹತ್ವದ ಪ್ರತೀಕವೆಂದು ವ್ಯಾಖ್ಯಾನಿಸಲಾಗಿದೆ.

'ಗೋವಿನ ಹಾಡು' ದಕ್ಷಿಣ ಕರ್ನಾಟಕದ ಪ್ರದೇಶದ ಕತೆಯನ್ನು ಹಾಗೂ 'ಕೆರೆಗೆ ಹಾರ' ಉತ್ತರ ಕರ್ನಾಟಕ ಪ್ರದೇಶದ ಕತೆಯನ್ನು ವಸ್ತುವಾಗಿ ಹೊಂದಿವೆ. ಆದರೆ, ಇವು ಈ ಪ್ರಾದೇಶಿಕ ವಿಭಜನೆಯನ್ನು ಮೀರಿರುವ ಅಖಂಡ ಕರ್ನಾಟಕ ಸಂಸ್ಕೃತಿಯ ಮೌಲ್ಯಾದರ್ಶಗಳ ರೂಪಕಗಳಾಗಿ ಪರಿಗಣಿತವಾಗಿವೆ. 'ಗೋವಿನ ಹಾಡು' ಮನುಷ್ಯ ಹಾಗೂ ಪ್ರಾಣಿ ಪ್ರಪಂಚದ ಜೀವನಮೌಲ್ಯಗಳ ನಡುವಿನ ಸಂಘರ್ಷದ

ಮೂಲಕ ಆದರ್ಶೀಕೃತ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. 'ಕೆರೆಗೆ ಹಾರ'ವು, ಸಮಷ್ಟಿ ಹಿತಕ್ಕಾಗಿ ವ್ಯಷ್ಟಿ ಮಾಡಬೇಕಾದ ತ್ಯಾಗದ ಅನಿವಾರ್ಯತೆಯನ್ನು ಮಂಡಿಸುತ್ತದೆ. 'ಗೋವಿನ ಹಾಡಿ'ನಲ್ಲಿ ಒಳಿತು ಹಾಗೂ ಕೆಡುಕಿನ ನಡುವಿನ ಸಂಘರ್ಷದಲ್ಲಿ ಕೇಡು ಸಂಪೂರ್ಣವಾಗಿ ಪರಿವರ್ತನೆಯಾಗುವ ಧ್ವನಿಯಿದೆ. 'ಕೆರೆಗೆ ಹಾರ'ದಲ್ಲಿ ಸಮಷ್ಟಿಯ ಬಲಿಷ್ಠತೆಯ ಎದುರು ವ್ಯಷ್ಟಿ ನಿರ್ಬಲವಾಗುವ ದುರಂತವಾಸ್ತವದ ನಿರೂಪಣೆಯಿದೆ. ಹೀಗೆ, ಕನ್ನಡ ಸಾಹಿತ್ಯ ವಿಮರ್ಶೆ ಹಾಗೂ ಸಂಸ್ಕೃತಿ ಚಿಂತನೆಗಳ ಸಂದರ್ಭದಲ್ಲಿ ಈ ಪಠ್ಯಗಳನ್ನು ಸುಮಾರು ಮುಕ್ಕಾಲು ಶತಮಾನದಿಂದ ಕಾಲಕಾಲಕ್ಕೆ ಬಹುರೂಪಿ ನೆಲೆಗಳಲ್ಲಿ ವಿಶ್ಲೇಷಿಸಿಕೊಂಡು ಬರಲಾಗಿದೆ. ಇವುಗಳ ರಚನೆ, ತಂತ್ರ, ನಿರೂಪಣೆ ಮತ್ತು ಸಂವಿಧಾನಗಳನ್ನು ಕುರಿತೂ ಸಹ ಅನೇಕ ನೆಲೆಗಳಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಬಹುಮಟ್ಟಿಗೆ ಇವೆರಡನ್ನೂ 'ಯುಗಳ ಪಠ್ಯ'ಗಳಾಗಿಯೇ ಗಮನಿಸಲಾಗಿದೆ.

ಮೊಗಳ್ಳಿ ಅವರ 'ಕೆರೆಗೆ ಹಾರ' ಕಾವ್ಯಾನುಸಂಧಾನವು ಪೂರ್ವಪರಂಪರೆಯ ಈ ಎಲ್ಲಾ ವಿಶ್ಲೇಷಣೆಗಳಿಗಿಂತ ಸಂಪೂರ್ಣ ಭಿನ್ನವಾಗಿದೆ. ಅಲ್ಲದೆ ಅವರು, ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಈ ಎಲ್ಲ ಪಠ್ಯಗಳನ್ನು ಅಕ್ಕಪಕ್ಕದಲ್ಲಿಟ್ಟು ವಿಶ್ಲೇಷಿಸುವ ಕ್ರಮವನ್ನು ಇಲ್ಲಿ ಅನುಸರಿಸುವುದಿಲ್ಲ. 'ಗೋವಿನ ಹಾಡು', 'ಪ್ರಕೃತಿ'ಯನ್ನು 'ಸಂಸ್ಕೃತಿ'ಯಾಗಿ ಪರಿವರ್ತಿಸುವ ಸಾಂಸ್ಕೃತಿಕ ರಾಜಕಾರಣದ ಪ್ರತೀಕ. ಇದನ್ನು ಈ ಕಾವ್ಯದಲ್ಲಿ 'ರಮ್ಯ ಕಥಾನಕ'ದ ಅಥವಾ 'ಫ್ಯಾಂಟಸಿ'ಯ ನಿರೂಪಣಾ ತಂತ್ರದ ಮೂಲಕ 'ಆತ್ಮಹತ್ಯೆ'' ಅಥವಾ 'ಸ್ವಹತ್ಯೆ'ಯ ಕಾರ್ಯತಂತ್ರದ ಮೂಲಕ ಸಾಧಿಸಲಾಗಿದೆ. ಆದರೆ 'ಕೆರೆಗೆ ಹಾರ' ಕಾವ್ಯವು, 'ಸಮಷ್ಟಿ'ಯು 'ವ್ಯಷ್ಟಿ'ಯನ್ನು ಆಧುನಿಕೀಕರಿಸಿಕೊಳ್ಳುವ ಸಾಂಸ್ಕೃತಿಕ ಕ್ರಿಯೆಯ ದ್ಯೋತಕ ಇದನ್ನು ಈ ಕಾವ್ಯದಲ್ಲಿ ಅಪ್ಪಟ 'ವಾಸ್ತವವಾದಿ' ಅಥವಾ 'ರಿಯಲಿಸ್ಟಿಕ್' ನಿರೂಪಣಾ ವಿಧಾನದ ಮೂಲಕ 'ಹಾರ' ಅಥವಾ 'ಅರ್ಪಣೆ'ಯ ಕಾರ್ಯತಂತ್ರದ ಮೂಲಕ ಸಾಧಿಸಲಾಗಿದೆ.

ಮೊಗಳ್ಳಿ ಅವರು ಇಲ್ಲಿ 'ರಮ್ಯ ಕಥಾನಕ'ದ ಪ್ರಾಣಿ ಪ್ರಪಂಚದ 'ಅನ್ಯೋಕ್ತಿ' ವಿಧಾನದ ಕಾವ್ಯಕ್ಕೆ ಬದಲಾಗಿ 'ವಾಸ್ತವವಾದಿ' ಕಥಾನಕದ ಮನುಷ್ಯ ಪ್ರಪಂಚದ 'ಸ್ವಭಾವೋಕ್ತಿ' ವಿಧಾನದ ಕಾವ್ಯವನ್ನು ವಿಶ್ಲೇಷಣೆಗೆ ಆಯ್ದುಕೊಂಡಿದ್ದಾರೆ. ಇದಕ್ಕೆ ಬಹುಮುಖ್ಯವಾದ ಕಾರಣವಿದೆ. ಏಕೆಂದರೆ, ಅವರು ಹೀಗೆ ಮಾಡುವ ಮೂಲಕ ಈ ಪಠ್ಯದ ಜೊತೆಗೆ ತ್ಯಾಗಬಲಿದಾನಗಳಂಥ ಸಾಮುದಾಯಿಕ ಮೌಲ್ಯಗಳ ಸಲುವಾಗಿ ಹಲವು ರೂಪಗಳಲ್ಲಿ 'ಬಲಿ'ಯಾದವರ ಕಥನಗಳನ್ನುಳ್ಳ ಸಮಗ್ರ ದುರಂತ ಕಥನಗೀತ ಪರಂಪರೆಯೊಂದಿಗೆ 'ಕೆರೆಗೆ ಹಾರ'ವನ್ನು ಜೋಡಿಸುತ್ತಾರೆ. ಇಂಥ ಕಥನಗೀತಗಳನ್ನು ಸಮಾಜದ ತಳವರ್ಗದ ದಮನಿತ ಸಮುದಾಯಗಳ ಹೆಂಗಸರು ಜೀವತುಂಬಿ ಹಾಡುವುದನ್ನು ತಮ್ಮ ವಿಶ್ಲೇಷಣೆಯ ಸಂದರ್ಭದಲ್ಲಿ ಮುಖ್ಯವಾದ ವಿಚಾರವಾಗಿ ಪರಿಗಣಿಸುತ್ತಾರೆ. 'ಕೆರೆಗೆ ಹಾರ' ಮೂಲತಃ ಕೋಲಾಟದ ಪದವಾದರೂ, ಅವರು ಈ ಗೀತೆಯನ್ನು ಬಲಿದಾನ ಕಥನಗೀತಗಳ ಸಮಗ್ರ ಪರಂಪರೆಯ ಒಂದು ಮಹತ್ವದ ಭಾಗವಾಗಿ ಪರಿಗಣಿಸುತ್ತಾರೆ.

ಈ ಮೂಲಕ ಮೊಗಳ್ಳಿ ಅವರು ಈ ಪಠ್ಯದ ಸಾಹಿತ್ಯಕ ನೆಲೆ ಹಾಗೂ ಆವರಣವನ್ನು ಕನ್ನಡ ಜಾನಪದ ಹಾಗೂ ಸಂಸ್ಕೃತಿ ಚರಿತ್ರೆಯ ಒಟ್ಟು ಆವರಣಕ್ಕೆ ಹೊರಳಿಸುತ್ತಾರೆ. ಹೀಗಾಗಿಯೇ ಅವರು ತೀ.ನಂ.ಶ್ರೀ ಅವರಂತೆ, ಈ ಕಾವ್ಯದ ರಸಾಸ್ವಾದನ ವಿಮರ್ಶೆ ಮಾಡುವುದಿಲ್ಲ. ಕುರ್ತುಕೋಟಿಯವರಂತೆ ಕತೆಯ ವಸ್ತುವಿನ ಘನತೆ ಮತ್ತು ಪಾತ್ರಗಳ ಅಸ್ಮಿತೆ ಕುರಿತು ವಿವೇಚಿಸುವುದಿಲ್ಲ. ಸುಬ್ಬಣ್ಣ ಅವರಂತೆ ಜಾನಪದ ಸಾಹಿತ್ಯಲೋಕದ ಈ ಪಠ್ಯವನ್ನು, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ ಪರಂಪರೆಯ ಸಹಸ್ವರೂಪಿ ಪಠ್ಯಗಳ, ಪ್ರಸಂಗಗಳ, ವಿವರಗಳ ಹಾಗೂ ನಿರೂಪಣಾ ತಂತ್ರಗಳ ಜೊತೆಗಿಟ್ಟು ವಿಶಿಷ್ಟ ಸ್ವರೂಪದ ಪಠ್ಯಾತ್ಮಕ ವಿಶ್ಲೇಷಣೆ ಮಾಡುವುದಿಲ್ಲ. ಅಲ್ಲದೆ ಸುಬ್ಬಣ್ಣ ಅವರು, 'ಕೆರೆ' ಮತ್ತು ಅದಕ್ಕೆ 'ಹಾರ'ವಾದ ಸಂಗತಿಗಳನ್ನು ಆಧುನಿಕ ಅಭಿವೃದ್ಧಿಯ ನೂತನ 'ಕೆರೆ'ಗಳಾದ 'ಜಲಾಶಯಗಳು' ಹಾಗೂ ಅದಕ್ಕೆ ಬಲಿಯಾದ 'ನಿರ್ವಸತಿಗರ ಪ್ರಶ್ನೆಯಾಗಿ ನೋಡುವುದಿಲ್ಲ. ಇವೆಲ್ಲ ಕ್ರಮಗಳಿಗಿಂತ ಭಿನ್ನವಾಗಿ ಮೊಗಳ್ಳಿ ಅವರು ಪಠ್ಯ ತನ್ನ ಒಡಲಲ್ಲಿ ಹುದುಗಿಸಿಟ್ಟುಕೊಂಡಿರುವ ಜ್ವಲಂತ ಈ ಪ್ರಶ್ನೆಗಳನ್ನು ಕುರಿತು ಅರ್ಥಪೂರ್ಣವಾಗಿ ವಿಶ್ಲೇಷಿಸುತ್ತಾರೆ. ಹೀಗಾಗಿಯೇ ಅವರು ಈ ಕಾವ್ಯವನ್ನು ಒಂದು ಪೂರ್ಣಗೊಂಡ ಪಠ್ಯವೆಂದಾಗಲೀ ಅಥವಾ 'ಮುಚ್ಚಿದ ಪಠ್ಯ'ವೆಂದಾಗಲೀ ನೋಡುವುದಿಲ್ಲ. ಎಂದೆಂದಿಗೂ ಅಪೂರ್ಣವಾಗಿರುವ ಅದರಲ್ಲೂ, ಅದರ ಆಶಯಗಳ ನೆಲೆಯಿಂದ ಪೂರ್ಣಗೊಂಡ ಪಠ್ಯವೆಂದು ಭಾವಿಸಲು ಸಾಧ್ಯವೇ ಇಲ್ಲದಿರುವ, ಒಂದು ಮಹತ್ವಪೂರ್ಣವಾದ 'ತೆರೆದ ಪಠ್ಯ'ವೆಂದೇ ಈ ಕಾವ್ಯವನ್ನು ಪರಿಭಾವಿಸುತ್ತಾರೆ. ಆದ್ದರಿಂದಲೇ, ಪರಿಪೂರ್ಣವಾದ ಮತ್ತು ಸಮಗ್ರವಾದ ಪಠ್ಯವೆಂದು ಭಾವಿಸಿ ಮಾಡಿರುವ ವಸ್ತುನಿಷ್ಠ, ಸಂಗತಿನಿಷ್ಠ ಹಾಗೂ ಸ್ವರೂಪನಿಷ್ಠ ವಿಶ್ಲೇಷಣೆಗಳೆಲ್ಲವನ್ನು ನಿರಾಕರಿಸುತ್ತಾರೆ. ಹೀಗಾಗಿಯೇ, ಈ ಪಠ್ಯದ ಸಾಹಿತ್ಯಕ ನೆಲೆಗಳನ್ನು ಸಾಹಿತ್ಯದ ಪರಿಧಿಯನ್ನು ಮೀರಿ ಸಂಸ್ಕೃತಿಯ ಆವರಣಕ್ಕೆ ವಿಸ್ತರಿಸುತ್ತಾರೆ.. ಇವುಗಳ ಸ್ವರೂಪವನ್ನು ಸಮಕಾಲೀನ ಸಮಾಜದ ಗ್ರಾಮೀಣ ಪರಿಸರದ ಹಳ್ಳಿಯ ಆವರಣದಿಂದ ಆರಂಭಿಸಿ ಮಧ್ಯಕಾಲೀನ ಕರ್ನಾಟಕದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ರೂಪುಗೊಂಡ ಕರ್ನಾಟಕದ ಊಳಿಗಮಾನ್ಯಶಾಹಿ ಸಂಸ್ಕೃತಿಯ ಮುಂದುವರಿಕೆಯ ಆಯಾಮದಲ್ಲಿ ಗುರುತಿಸುತ್ತಾರೆ. ಸಮಕಾಲೀನ ಕರ್ನಾಟಕದ ಸಾಮಾಜಿಕ ಹಾಗೂ ರಾಜಕೀಯ ಪರಿಸರದಲ್ಲಿ ಅದರ ಮಾರುವೇಷದ ಅಸಂಖ್ಯ 'ಹಾರ' ಅಥವಾ 'ಬಲಿ'ಗಳನ್ನು ವಿವರಿಸುತ್ತಾರೆ. ಇವುಗಳು ಬಲಿಗಳಲ್ಲ; ಹತ್ಯೆಗಳು ಎನ್ನುವ ನಿರ್ಣಯಾತ್ಮಕ ವ್ಯಾಖ್ಯಾನ ಮಾಡುತ್ತಾರೆ.

೬.೩.೨ ಆಶಯ ಕುರಿತ ಪ್ರಶ್ನೆಗಳು ಹಾಗೂ ಸಾಹಿತ್ಯಕ ಆಯಾಮಗಳ ಹೊಸ ಸಾಧ್ಯತೆಗಳು

ಮೊಗಳ್ಳಿ ಅವರು ಪೂರ್ವನಿರ್ಧರಿತ ನಿಲುವಿನ ಮೂಲಕ ಕೆರೆಗೆ ಹಾರ ಪಠ್ಯದ ವಿಶ್ಲೇಷಣೆಗೆ ತೊಡಗುತ್ತಾರೆ. ಈ ನಿಲುವು, ಈ ಪಠ್ಯವನ್ನು ಕುರಿತು ಈಗಾಗಲೇ ಕನ್ನಡ ವಿಮರ್ಶೆ ಹಾಗೂ ಸಂಸ್ಕೃತಿ ಚಿಂತನೆ ಪರಂಪರೆಗಳು ತಾಳಿರುವ ನಿಲುವುಗಳಿಗಿಂತ ಸಂಪೂರ್ಣ ಭಿನ್ನವಾಗಿರುವ ಸ್ವರೂಪದಿಂದ ಕೂಡಿದೆ ಎನ್ನುವುದನ್ನು ಲೇಖನದ ಆರಂಭದ ಸಾಲುಗಳಲ್ಲೇ ಖಚಿತಪಡಿಸುತ್ತಾರೆ. ಇದು ಮೊಗಳ್ಳಿ ಸಾಂಸ್ಕೃತಿಕ

ವಿಮರ್ಶೆಯ ಸಾಮಾನ್ಯ ವಿಧಾನವೂ ಹೌದು; ಹಾಗೆಯೇ, ನಿರ್ಣಯಾತ್ಮಕ ಹೇಳಿಕೆ ಅಥವಾ ಸುನಿಶ್ಚಿತ ನಿಲುವಿನ ಮೂಲಕ ವಿಶ್ಲೇಷಣೆಯನ್ನು ಪ್ರಾರಂಭಿಸುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂಘರ್ಷಾತ್ಮಕ ಮಾದರಿಯ ಒಂದು ಸಾಮಾನ್ಯ ಚಹರೆಯೂ ಹೌದು. ಆರಂಭದಲ್ಲಿ ಬರುವ ಘೋಷಿತ ನಿಲುವು ಅಥವಾ ಪ್ರತಿಪಾದಿತ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಪಠ್ಯದ ಒಳಗಿನ ಹಾಗೂ ಹೊರಗಿನ ವಿಚಾರಗಳನ್ನು ಪರಸ್ಪರ ಅನುಸಂಧಾನ ಮಾಡುವ ಈ ಕ್ರಮವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ 'ಸಾಂಸ್ಕೃತಿಕ ಸಂಘರ್ಷ', 'ಸಾಂಸ್ಕೃತಿಕ ಮುಖಾಮುಖಿ' ಮತ್ತು 'ಸಾಂಸ್ಕೃತಿಕ ಪ್ರತಿರೋಧ' ಮೊದಲಾದ ಪರಿಕಲ್ಪನೆಗಳ ಮೂಲಕ ಗುರುತಿಸಲಾಗಿದೆ. ಈ ವಿಧಾನದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಭಾಷಿಕ ಹಾಗೂ ಲಿಂಗಾಧಾರಿತ ಪ್ರಶ್ನೆಗಳು ಮುಖ್ಯವಾಗಿರುತ್ತವೆ. ಖಚಿತ ಉತ್ತರ ಮಂಡನೆಗಿಂತಲೂ ಪ್ರಶ್ನೆಗಳನ್ನು ಎತ್ತುವುದು, ಒಪ್ಪಿತ ಸತ್ಯ ಅಥವಾ ಅಂಗೀಕೃತ ನಿಲುವುಗಳ ಹಿಂದಿರುವ ಸಾಂಸ್ಕೃತಿಕ ರಾಜಕಾರಣದ ಸೂಕ್ಷ್ಮ ಸ್ವರೂಪದ ವಿನ್ಯಾಸಗಳನ್ನು ಹೊರಗೆಳೆಯುವುದು ಇಂಥ ಪ್ರಶ್ನೆ ಪ್ರಧಾನ ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯವಾದ ಉದ್ದೇಶವಾಗಿದೆ.

ಮೊಗಳ್ಳಿ ಅವರ "ಕೆರೆಗೆ ಹಾರ"ದ ಈ ಮುಖಾಮುಖಿ ಆರಂಭವಾಗುವುದೇ ಹೀಗೆ ನಿರ್ಣಯಾತ್ಮಕ ಹೇಳಿಕೆ ಮತ್ತು ಅದನ್ನನುಸರಿಸಿ ಬರುವ ಪ್ರಶ್ನೆಗಳ ಸರಮಾಲೆ ಮೂಲಕ. ಇದನ್ನು "ಕೆರೆಗೆ ಹಾರವಾದ ಭಾಗೀರಥಿಯ ಕಥನ ಊಳಿಗಮಾನ್ಯ ಪುರುಷ ಪ್ರಭುತ್ವದ ದಿಗ್ವಿಜಯವನ್ನು ಹಾಡುವ, ಸಮರ್ಥಿಸುವ ಒಂದು ಕಥನ: ಹತ್ಯೆಗೂ ತ್ಯಾಗಕ್ಕೂ ವ್ಯತ್ಯಾಸವನ್ನೇ ಮಾಡದ ಊಳಿಗಮಾನ್ಯ ಸಮಾಜದ ಮೌಲ್ಯಗಳು ಈಗಲೂ ಬೇರೆ ಬೇರೆ ಸ್ವರೂಪಗಳಲ್ಲಿ ಹಳ್ಳಿಗಾಡಿನಲ್ಲಿ ಮುಂದುವರೆದಿವೆ. ತ್ಯಾಗ ಎಂದರೆ ಎಲ್ಲರ ಹಿತಕ್ಕಾಗಿ ಪ್ರಾಣಾರ್ಪಣೆ ಮಾಡುವುದು ಎಂದಾದರೆ ಈ ತ್ಯಾಗವನ್ನು ಕಿರಿಸೊಸೆಯರೇ ಯಾಕೆ ಮಾಡಬೇಕು? ಈ ಕಿರಿಸೊಸೆ ಎಂದರೆ ಯಾರು? ನೇರ ಸೊಸೆಯೋ? ಪರೋಕ್ಷ ಸೊಸೆಯೋ? ಊರ ಸೊಸೆಯೋ? ಜೀತದ ಮಕ್ಕಳ ಹೆಂಡಿರೊ ...ಯಾರು ಈ ಸೊಸೆಯರು. ಹಿರಿ ಸೊಸೆ ಯಾಕೆ ಯಾವಾಗಲೂ ಇಂತಹ ಬಲಿದಾನದ ವೇಳೆ ಸುಲಭವಾಗಿ ತಪ್ಪಿಸಿಕೊಳ್ಳುವಳು ... ಕೆರೆಗೆ ಹಾರವಾದ ಭಾಗೀರಥಿಯ ಜನಪದ ಕಥನಗೀತೆ ಒಂದರ ಸಲುವಾಗಿ ಇಷ್ಟೆಲ್ಲ ಪ್ರಶ್ನೆಗಳನ್ನು ಕೇಳುವ ಅಗತ್ಯವಿದೆಯೇ ಎಂದು ಅನೇಕರಿಗೆ ಅನಿಸಬಹುದಾದರೂ ಇದಕ್ಕಿಂತಲೂ ಇನ್ನೂ ಅಧಿಕವಾದ ಪ್ರಶ್ನೆಗಳನ್ನು ಎತ್ತಬಹುದು. ಭಾಗೀರಥೀಯ ಕಥನ ಕೇವಲ ಒಂದು ಬಿಡಿಯಾದ ಹಾಡಲ್ಲ. ಒಬ್ಬ ಅಮಾಯಕ ಹೆಣ್ಣುಮಗಳ ದುರಂತವಲ್ಲ. ಅದು ಪುರುಷ ಸಮಾಜದ ದುರಂತವೂ ಹೌದು; ಹಾಗೆಯೇ ನಮ್ಮ ಸಮಾಜದ ನಡತೆಯ ವೈಫಲ್ಯವೂ ಹೌದು ಈ ಕಿರಿ ಸೊಸೆಯ ರೂಪದಲ್ಲಿ ಅನೇಕರ ಮುಖಗಳು ಅನಾವರಣಗೊಳ್ಳುತ್ತವೆ"[7] ಎಂದು ಅವರು ಕೇಳುವ ಪ್ರಶ್ನೆಗಳು ಹಾಗೂ ಅವುಗಳಿಗೆ ಕೊಡುವ ಉತ್ತರಗಳ ಮೂಲಕವೇ, ಈ ಪಠ್ಯದ ಸಾಹಿತ್ಯಕ ಆಯಾಮಗಳ ಸಾಧ್ಯತೆಗಳನ್ನು ಬೆಳೆಸುತ್ತಾರೆ.

'ಕೆರೆಗೆ ಹಾರ' ಒಂದು ಬಿಡಿಯಾದ ಹಾಡಲ್ಲ; ಇಂಥ ಮಹಾಪರಂಪರೆಯ ಒಂದು ಕಿರು ರೂಪ. ಭಾಗೀರಥಿ ಏಕೈಕ ದುರಂತ ವ್ಯಕ್ತಿಯಲ್ಲ; ಅಂಥ ಅವ್ಯಾಹತ ಪರಂಪರೆಯ ಪ್ರತಿನಿಧಿ. ಇದು ಸಮಾಜದ ಶ್ರೇಷ್ಠ ಮೌಲ್ಯಗಳನ್ನು ಎತ್ತಿಹಿಡಿಯುವ ಪಠ್ಯವಲ್ಲ; ಸಮಾಜದ ಮನುಷ್ಯ ವಿರೋಧಿ ಮೌಲ್ಯಗಳ ವಿರುದ್ಧ ಕರುಣೆ, ಅನುಕಂಪ ಹಾಗೂ ವಿಷಾದದ ವಿನ್ಯಾಸಗಳ ಮೂಲಕ ಬಂಡಾಯ ಪ್ರಜ್ಞೆಯನ್ನು ಮೊಳೆಯಿಸುವ ಒಂದು ವಿಶಿಷ್ಟ ಸ್ವರೂಪದ ಕಲಾಕೃತಿ ಎಂದು ವಿವರಿಸುತ್ತಾರೆ.

'ಕೆರೆಗೆ ಹಾರ' ಕಾವ್ಯವನ್ನು ಮೊಗಳ್ಳಿ ಅವರು ಇದುವರೆಗಿನ ಕನ್ನಡ ವಿಮರ್ಶೆ ಪ್ರಧಾನವಾಗಿ ಸಾಹಿತ್ಯಕ ಪಠ್ಯವಾಗಿ ಮಾತ್ರ ಗಮನಿಸಿರುವುದಕ್ಕಿಂತ ಭಿನ್ನವಾಗಿ, ಮಹತ್ವಪೂರ್ಣವಾದ ಒಂದು 'ಸಂಸ್ಕೃತಿ ಪಠ್ಯ'ವಾಗಿ ಗುರುತಿಸುತ್ತಾರೆ. ಸಾಹಿತ್ಯಕ ಅಧ್ಯಯನಗಳ 'ಪಠ್ಯಕೇಂದ್ರಿತ' ಮತ್ತು 'ಪಠ್ಯಾಧಾರಿತ' ವಿಶ್ಲೇಷಣೆಗಳ ಬದಲಾಗಿ ಅಂತರ್‌ಪಠ್ಯ, ಬಹುಪಠ್ಯ ಹಾಗೂ ಪಠ್ಯಪರಂಪರೆಗಳ ಜೊತೆಗಿನ ತೌಲನಿಕ ವಿಶ್ಲೇಷಣಾ ಕ್ರಮದಲ್ಲಿ ವಿವೇಚಿಸುತ್ತಾರೆ. ಹೀಗಾಗಿಯೇ, ಈ ಕಥನಗೀತವನ್ನು 'ಸತಿಗೀತೆಗಳು', 'ಬಲಿದಾನದ ಕಥನಗಳು', 'ವೀರಮರಣದ ಶಾಸನಗಳು', 'ಐತಿಹ್ಯಗಳು' ಹಾಗೂ 'ಪುರಾಣಗಳ' ಪರಂಪರೆಯೊಂದಿಗೆ ಗ್ರಹಿಸಬೇಕು ಎನ್ನುತ್ತಾರೆ. ಈ ರೀತಿಯ ಆಶಯಾತ್ಮಕ ನೆಲೆಯ ಸಮಾನಪಠ್ಯಗಳ ಸಮಗ್ರಾನುಸಂಧಾನ ಹಾಗೂ ತೌಲನಿಕಾನುಸಂಧಾನದಿಂದ ಪಠ್ಯದ ಕುರಿತು ಅರ್ಥಪೂರ್ಣವಾದ ಹೊಸ ವಿಚಾರಗಳು ಗೋಚರವಾಗುತ್ತದೆ. ಅಷ್ಟೇ ಅಲ್ಲದೆ, ಪಠ್ಯದ ಸಾಹಿತ್ಯಕ ಆಯಾಮಗಳು ತಮ್ಮ ಸೀಮಿತತೆಯನ್ನು ಮೀರಿ ಹೊಸ ವಿಸ್ತಾರ ಪಡೆದುಕೊಳ್ಳುತ್ತವೆ. ಹೀಗಾಗಿಯೇ, ಇಲ್ಲಿ ಮೊಗಳ್ಳಿ ಅವರು 'ಕೆರೆಗೆ ಹಾರ'ವನ್ನು ಸಂಸ್ಕೃತಿ ಪಠ್ಯವಾಗಿ ಗ್ರಹಿಸುತ್ತಾರೆ.

ನಿರ್ದಿಷ್ಟವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳ ಆವರಣದಲ್ಲಿ ಸಂಸ್ಕೃತಿ ಪಠ್ಯವೊಂದು ರೂಪುಗೊಳ್ಳುವ ಕ್ರಿಯೆಯ ಹಿನ್ನೆಲೆಯಲ್ಲಿ ಅವುಗಳ ಒಟ್ಟು ಕಾಲಮಾನದ ಸೃಷ್ಟಿಯ ಮೊತ್ತವಾಗಿರುವ 'ಸಾಂಸ್ಕೃತಿಕ ಜಗತ್ತು' ವಹಿಸುವ ಪಾತ್ರ ಬಹಳ ಮಹತ್ವದ್ದು ಎನ್ನುವುದು ಮೊಗಳ್ಳಿ ಅವರ ಮುಖ್ಯ ವಾದವಾಗಿದೆ. ಪ್ರತಿಯೊಂದು ಕಾಲಘಟ್ಟದಲ್ಲೂ ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳೇ ಸಾಂಸ್ಕೃತಿಕ ಮೌಲ್ಯಗಳನ್ನು ಸೃಷ್ಟಿಸುತ್ತವೆ. ಅವುಗಳನ್ನು ಸಮಾಜ ಹಾಗೂ ಸಮುದಾಯಗಳ ನೆಲೆಗಳಲ್ಲಿ ಗಟ್ಟಿಯಾಗಿ ಬೇರೂರಿಸುವುದಕ್ಕಾಗಿ ಬಹುರೂಪಿಯಾದ ಆಚರಣೆಗಳು, ವಿಧಿಕ್ರಿಯೆಗಳು, ನಂಬಿಕೆಗಳು, ಪವಾಡಗಳು, ಮೊದಲಾದವುಗಳನ್ನು ರೂಪಿಸಿ ಪ್ರಸಾರಗೊಳಿಸಲಾಗುತ್ತದೆ. ಹೀಗಾಗಿ, ವಾಸ್ತವವಾಗಿ ಇವು ಪಟ್ಟಭದ್ರ ಆಳುವ ವರ್ಗಗಳ ಸಾಂಸ್ಕೃತಿಕ ರಾಜಕಾರಣದ ಸಾಧನಗಳಾಗಿರುತ್ತವೆ. ಆದರೆ, ಇದಕ್ಕೆ ವಿರುದ್ಧವಾಗಿ ಇವುಗಳನ್ನು ಅಲೌಕಿಕಾರ್ಥ ಸಾಧನೆಯ ಉತ್ಕೃಷ್ಟ ಮಾರ್ಗಗಳೆಂದು ನಂಬಿಸಲಾಗುತ್ತದೆ. ಯಜಮಾನ್ಯಶಕ್ತಿಯ ಇಂಥ ಸಾಂಸ್ಕೃತಿಕ ರಾಜಕಾರಣದ ಕ್ರಿಯೆಯ ವಿರುದ್ಧ ವಿಷಾದದ ನೆಲೆಯಲ್ಲಿ ತಣ್ಣಗಿನ ಬಂಡಾಯವನ್ನು

ವ್ಯಕ್ತಪಡಿಸುವುದು 'ಕೆರೆಗೆ ಹಾರ' ಸಾಂಸ್ಕೃತಿಕ ಪಠ್ಯದ ವಿಶಿಷ್ಟತೆ ಎನ್ನುವುದು ಮೊಗಳ್ಳಿ ಅವರ ಮುಖ್ಯವಾದ ಪ್ರತಿಪಾದನೆಯಾಗಿದೆ.

ಇಂಥ ಪಠ್ಯಗಳು, ಪ್ರಧಾನವಾಗಿ ಮಧ್ಯಕಾಲೀನ ಕರ್ನಾಟಕದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ವಿಜಯನಗರ ಸಾಮ್ರಾಜ್ಯದ ಕಾಲದಿಂದ ಅಸ್ತಿತ್ವಕ್ಕೆ ಬಂದ ಊಳಿಗಮಾನ್ಯಶಾಹಿ ಸಾಂಸ್ಕೃತಿಕ ರಾಜಕಾರಣದ ಕಥನಗಳು. ಅಷ್ಟೇ ಅಲ್ಲದೆ, ಅವು ಇಂಥ ಸಂಸ್ಕೃತಿಗೆ ಪ್ರತಿರೋಧ ತೋರುತ್ತಿರುವ ಸಂಕಥನದ ರೂಪಗಳೂ ಹೌದು. ಏಕೆಂದರೆ, ಕರ್ನಾಟಕದಲ್ಲಿ ಬೌದ್ಧಧರ್ಮ ಮತ್ತು ಜೈನಧರ್ಮಗಳ ಅವನತಿಗೂ, ಹಿಂದೂಧರ್ಮದ ಏಳಿಗೆಗೂ, ಊಳಿಗಮಾನ್ಯಶಾಹಿಯ ಸಂವರ್ಧನೆಗೂ ಹಾಗೂ ಇಂಥ ತ್ಯಾಗಬಲಿದಾನ ಸಂಕೀರ್ತನ ಪಠ್ಯಗಳ ಸಂಗೋಪನೆಗೂ ನೇರವಾದ ಸಂಬಂಧವಿದೆ. ಹೀಗಾಗಿಯೇ ಇಂಥ ಏಕಕಾಲಕ್ಕೆ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಹಿತ್ಯಕ ನೆಲೆಗಳಿರುವ ಸಾಂಸ್ಕೃತಿಕ ಪಠ್ಯಗಳನ್ನು ಕೇವಲ ಸಾಹಿತ್ಯಕ ಕ್ರಮದಿಂದ ಅರ್ಥೈಸುವುದು ತಪ್ಪು ಎಂದು ವಾದಿಸುತ್ತಾರೆ ಮೊಗಳ್ಳಿ. ಇದನ್ನು ಅವರು, "ಇಂತಹ ಕಥನಗೀತೆಗಳು ಕಟ್ಟುವ ಚಿತ್ರಗಳು ಹೃದ್ಯವಾಗಿ ಮಾರ್ಮಿಕವಾಗಿರುವ ಕ್ರಮದಲ್ಲಿ ರಮ್ಯ ಪ್ರತಿರೋಧದ ಪ್ರತಿಭಟನೆ ಇದೆ. ಈ ಬಗೆ ಪ್ರತಿರೋಧ ಪುರುಷ ವ್ಯವಸ್ಥೆಯ ಅಧ್ಯಯನಕಾರರಿಗೆ ಗಾಢವಾಗಿ ತಟ್ಟಿದೆಯೊ ಇಲ್ಲವೊ ಎಂಬ ಸಂಶಯ ಈಗಲೂ ಇದೆ. ಒಬ್ಬ ಅಮಾಯಕ ಕಿರಿ ಸೊಸೆ ಇಂತಹ ದೀನಸ್ಥಿತಿಗೆ ತಲುಪಿದ್ದಾಳೆ ಎಂದಾದರೆ ಇದಕ್ಕೆ ಯಾರು ಹೊಣೆ. ಈ ಬಗೆಯ ಸಂಗತಿಗಳನ್ನು ಕೇವಲ ಸಾಹಿತ್ಯ ಕ್ರಮದಿಂದಲೇ ಆಸ್ವಾದಿಸುವುದಾದರೆ ನಮ್ಮ ಮೌಲ್ಯ ಪ್ರಜ್ಞೆ ಯಾವ ಕಾಲದ ಮೌಲ್ಯಗಳಲ್ಲೇ ಉಳಿದಿದೆ"[೨] ಎಂದು ಪ್ರಶ್ನಿಸುತ್ತಾರೆ.

ಈ ಪಠ್ಯದ ಕಥಾವಿವರ ಮತ್ತು ಸಂಗತಿಗಳಿಗೆ ಸಂಬಂಧಿಸಿದಂತೆ ಮೊಗಳ್ಳಿ ಅವರು ಕೆಲವೊಮ್ಮೆ ಅತಿದೂರಾನ್ವಯದ ಊಹೆಗಳನ್ನು ಸಾಧ್ಯತೆ ರೂಪದಲ್ಲಿ ಮಂಡಿಸುತ್ತಾರೆ. ಆದರೆ ಅದಕ್ಕೆ ಸಾಕಷ್ಟು ಆಧಾರಗಳನ್ನು ಕೊಡುವುದಿಲ್ಲ. ಹಾಗೆ ಕೊಡಬೇಕು ಎನ್ನುವ ಉದ್ದೇಶವೂ ಅವರಿಗಿಲ್ಲ. ಸಾಂಸ್ಕೃತಿಕ ಸಂಘರ್ಷದ ಓದಿನ ವಿಧಾನವಾಗಿ ಸಾಂಸ್ಕೃತಿಕ ಪಠ್ಯವೊಂದಕ್ಕೆ ಊಹಾತ್ಮಕ ಪ್ರಮೇಯಗಳನ್ನು ಮಂಡಿಸುವುದು ಬಹಳ ಎಚ್ಚರಿಕೆಯಿಂದ ಮಾಡಬೇಕಾದ ಕೆಲಸವಾಗಿರುತ್ತದೆ. ಒಂದು ಆರೋಗ್ಯಕರ ಗೆರೆ ದಾಟಿದರೆ ಇಂಥ ಊಹೆಗಳೆಲ್ಲಾ ಟೊಳ್ಳು ಕಲ್ಪನೆಗಳಾಗಿ ಉಳಿದುಬಿಡುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ, ಮೊಗಳ್ಳಿ ಅವರು ತಮ್ಮ ಈ ಊಹಾತ್ಮಕ ಗ್ರಹಿಕೆಗೆ ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಆಧಾರ ನೀಡುವ ಪ್ರಯತ್ನ ಮಾಡಿದ್ದಾರೆ. ಆದರೆ ಅದಿನ್ನೂ ಗಟ್ಟಿಯಾದ ತಾತ್ವಿಕ ಹಿನ್ನೆಲೆ ಮತ್ತು ಸಮರ್ಥನಾಂಶಗಳಿಂದ ಕೂಡಿರಬೇಕಾದ ಸ್ವರೂಪದ್ದಾಗಿದೆ.

ಈ ಮುಖ್ಯವಾದ ಪರಿಮಿತಿಯ ಒಳಗೂ, ಮೊಗಳ್ಳಿ ಅವರು 'ಕೆರೆಗೆ ಹಾರ'ವನ್ನು ಕನ್ನಡ ಸಾಹಿತ್ಯದ ಶ್ರೇಷ್ಠ ರತ್ನ ಮತ್ತು ಮತ್ತು ಕರ್ನಾಟಕ ಸಂಸ್ಕೃತಿಯ ಮೌಲ್ಯಾದರ್ಶದ ಚಿನ್ನದ ಕಳಸ ಎನ್ನುವಂಥ ಅಭಿಪ್ರಾಯಗಳಿಗೆ ವಿರುದ್ಧವಾಗಿ, ಪ್ರತಿಷ್ಠಿತ ಯಾಜಮಾನ್ಯಶಕ್ತಿಗಳ ಸಾಂಸ್ಕೃತಿಕ ರಾಜಕಾರಣಕ್ಕೆ ಜನಪದ

ಸಂಸ್ಕೃತಿ ತೋರಿಸಿರುವ ವಿಷಾದರೂಪಿ ಬಂಡಾಯ ಪ್ರಜ್ಞೆಯ ಒಂದು ಮಹತ್ವದ 'ಸಾಂಸ್ಕೃತಿಕ ಪಠ್ಯ' ಎಂದು ಪ್ರತಿಪಾದಿಸಿರುವುದು ಬಹಳ ಅರ್ಥಪೂರ್ಣ ವಿಚಾರವಾಗಿದೆ.

ಕನ್ನಡದ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಹಾಗೂ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಗಳು 'ಕೆರೆಗೆ ಹಾರ' ಪಠ್ಯವನ್ನು ಗಂಭೀರವಾದ ವಿಶ್ಲೇಷಣೆಗೆ ಒಳಪಡಿಸದೆ ಇರುವಂಥ ಸಂದರ್ಭದ ಹಿನ್ನೆಲೆಯಲ್ಲಿ ಮೊಗಳ್ಳಿ ಅವರ ಈ ಸಾಹಿತ್ಯಾನುಸಂಧಾನಕ್ಕೆ ಚಾರಿತ್ರಿಕವಾದ ಮಹತ್ವವಿದೆ.

೬.೪ ಕಿ.ರಂ. ಅವರ 'ಅನುಭಾವ ಸಾಹಿತ್ಯ'ದ ಸಾಹಿತ್ಯಾನುಸಂಧಾನದ ಸ್ವರೂಪ

ಸಾಹಿತ್ಯ ವಿಮರ್ಶಕರಾಗಿ ಕಿ.ರಂ. ಅವರು ಕನ್ನಡದ ಪ್ರಧಾನಧಾರೆಯ ಹಲವು ವಿಮರ್ಶಕರಿಗಿಂತ ತುಂಬಾ ಭಿನ್ನರಾಗಿದ್ದಾರೆ. ಇದಕ್ಕೆ ಅನೇಕ ಕಾರಣಗಳಿವೆ. ಅಂಥ ಕೆಲವು ಮುಖ್ಯ ಕಾರಣಗಳನ್ನು ಗುರುತಿಸಲು ಸಾಧ್ಯವಿದೆ. ಅವುಗಳೆಂದರೆ, ಮೊದಲನೆಯದಾಗಿ ಕಿ.ರಂ. ಅವರ 'ಸಾಹಿತ್ಯ' ಕುರಿತ ದೃಷ್ಟಿಕೋನ. ಎರಡನೆಯದಾಗಿ, 'ಸಾಹಿತ್ಯ ವಿಮರ್ಶೆ' ಕುರಿತ ದೃಷ್ಟಿಕೋನ ಮತ್ತು ಮೂರನೆಯದಾಗಿ, 'ಮನುಷ್ಯನ ಬದುಕಿ'ನ ಕುರಿತ ದೃಷ್ಟಿಕೋನ. ಇವುಗಳನ್ನು ಕುರಿತ ಗ್ರಹಿಕೆಗಳ ಹಾಗೂ ಧೋರಣೆಗಳ ವಿಷಯದಲ್ಲಿ ಕಿ.ರಂ. ಅವರಿಗೂ ಮತ್ತು ಉಳಿದ ಪ್ರಧಾನಧಾರೆಯ ವಿಮರ್ಶಕರಿಗೂ ಇರುವ ಮೂಲಭೂತವಾದ ತಾತ್ವಿಕ ವ್ಯತ್ಯಾಸಗಳೇ ಅವರು ಹೀಗೆ ಭಿನ್ನರಾಗುವುದಕ್ಕೆ ಇರುವ ಮುಖ್ಯವಾದ ಕಾರಣ. ಅಷ್ಟೇ ಅಲ್ಲದೆ, ಕಿ.ರಂ. ಸಾಹಿತ್ಯ ವಿಮರ್ಶೆಯ ಅರ್ಥಪೂರ್ಣತೆಗೂ ಸಹ ಇದೇ ಪ್ರಮುಖವಾದ ಕಾರಣ.

ಹಾಗಾದರೆ, ಈ ವ್ಯತ್ಯಾಸದ ಸ್ವರೂಪವೇನು ಹಾಗೂ ಇದರ ಪರಿಣಾಮವೇನು ಎಂದು ಆಲೋಚಿಸಿದರೆ, ಕಿ.ರಂ. ಸಾಹಿತ್ಯ ವಿಮರ್ಶೆಯು ಹೇಗೆ ಇಪ್ಪತ್ತನೆಯ ಶತಮಾನದ ಆಧುನಿಕ ಕನ್ನಡ ವಿಮರ್ಶೆಯ ಒಟ್ಟು ಸಂದರ್ಭದಲ್ಲಿ ಎಷ್ಟು ಮುಖ್ಯವಾದುದು ಎನ್ನುವುದು ಸ್ಪಷ್ಟವಾಗುತ್ತದೆ. ಈ ವ್ಯತ್ಯಾಸವು ಮುಖ್ಯವಾಗಿ ಕಿ.ರಂ ಅವರು 'ಸಾಹಿತ್ಯ', 'ವಿಮರ್ಶೆ' ಮತ್ತು 'ಮನುಷ್ಯನ ಬದುಕ'ನ್ನು ಉಳಿದವರಂತೆ ಪ್ರತ್ಯೇಕ ರೂಪಗಳಾಗಿ ನೋಡದೆ 'ಒಟ್ಟಂದ'ದಲ್ಲಿ ಪರಿಭಾವಿಸುವ ಕ್ರಮದಲ್ಲಿ ಇದೆ. ಇದು ಯಾವುದೇ ದೇಶ, ಕಾಲ ಹಾಗೂ ಭಾಷೆಯ ಸಾಹಿತ್ಯವೇ ಆದರೂ, ಅದು ತನ್ನ ಪೂರ್ವ ಪರಂಪರೆಯೊಂದಿಗೆ ದ್ವಂದ್ವಾತ್ಮಕವಾದ ಸಂಬಂಧ ಹೊಂದಿರುತ್ತದೆ ಮತ್ತು ಸಂಘರ್ಷಾತ್ಮಕವಾದ ಸಹಯೋಗದಿಂದ ಕೂಡಿರುತ್ತದೆ ಎನ್ನುವ ತಾತ್ವಿಕ ತಿಳಿವಳಿಕೆಯಿಂದ ರೂಪುಗೊಂಡಿದೆ. ಇದರ ಮುಖ್ಯವಾದ ಪರಿಣಾಮವೆಂದರೆ, ಅವರು ಸಾಹಿತ್ಯ ವಿಮರ್ಶೆಯನ್ನು ಸ್ವಪ್ರಜ್ಞೆಯ ಸಂಸ್ಕೃತಿ ಸಂಕಥನವಾಗಿ ಪರಿಭಾವಿಸುವುದು. ಇಲ್ಲಿ 'ಸ್ವಪ್ರಜ್ಞೆ' ಎಂದರೆ ಸಾಹಿತ್ಯ, ವಿಮರ್ಶೆ, ಸಮಾಜ, ಸಂಸ್ಕೃತಿ, ರಾಜಕಾರಣ ಮತ್ತು ಭಾಷೆ ಮೊದಲಾದಂಥ ಮಾನವನ ಬುದ್ಧಿಭಾವಗಳ ಅಭಿವ್ಯಕ್ತಿ ರೂಪಗಳನ್ನು ಅವುಗಳು ಇರುವ ಸ್ಥಿತಿಯಲ್ಲೇ, ಕಾಣುವ ಸ್ವರೂಪದಲ್ಲೇ ಒಪ್ಪಿಕೊಳ್ಳದೆ ಅವುಗಳ ಪೂರ್ವಾಪರ ಕುರಿತು ಪ್ರಶ್ನಿಸುವ ಹಾಗೂ ಸಮಗ್ರ ಪರಿಪ್ರೇಕ್ಷ್ಯದ ಮೂಲಕ ಸಾಧ್ಯವಾದಷ್ಟು ಸಮರ್ಪಕವಾದ ಉತ್ತರವನ್ನು ಕಂಡುಕೊಳ್ಳುವ ಬೌದ್ಧಿಕ ವಿವೇಕವಾಗಿದೆ. ವಿವರಿಸಿ ಹೇಳುವುದಾದರೆ, ಒಂದು ಸಮಸ್ಯೆಗೆ

ಸೂಕ್ತವಾದ ಪರಿಹಾರ ಕೊಡುವ ಬದಲು, ಅದರ ಸ್ವರೂಪವನ್ನು ಇನ್ನಷ್ಟು ಸಮಸ್ಯೀಕರಿಸಿ ನೋಡುವುದು. ಆ ಮೂಲಕ ಸಮಸ್ಯೆಯೊಂದನ್ನು ಸಂಸ್ಕೃತಿಯ ಸಂಕಥನವಾಗಿ ಪರಿಭಾವಿಸುವ ಮೂಲಕ ಒಂದು ಭಾಷಿಕ ಪರಿಸರದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಕ ಹಾಗೂ ಭಾಷಿಕ ಮೊದಲಾದಂಥ ಪ್ರಶ್ನೆಗಳನ್ನು ಒಟ್ಟಂದದ ವಿನ್ಯಾಸದಲ್ಲಿ ಅನುಸಂಧಾನ ಮಾಡುವುದು ಕಿ.ರಂ. ವಿಮರ್ಶೆಯ ಸಾಮಾನ್ಯ ಸ್ವರೂಪ.

ಈ ಹಿನ್ನೆಲೆಯಲ್ಲಿ, ಕಿ.ರಂ. ವಿಮರ್ಶೆ ಅನೇಕ ಸಲ ವ್ಯವಸ್ಥಿತ ಚೌಕಟ್ಟಿನ ವಿನ್ಯಾಸದಲ್ಲಿ ಇಲ್ಲದಿರಬಹುದು, ಆಲೋಚನೆಗಳು ಹಾಗೂ ಅಭಿವ್ಯಕ್ತಿಗಳು ಒಂದಕ್ಕೊಂದು ಹದಗೊಂಡು ಸ್ಫಟಿಕತ್ವ ಪಡೆದುಕೊಳ್ಳದಿರಬಹುದು. ಹೀಗಾಗಿ, ಒಂದು ಓದಿಗೆ ಸಂವಹನಗೊಳ್ಳದ 'ಪೆಡಸು ರಚನೆ'ಗಳಾಗಿ ತೋರಬಹುದು. ಇದಕ್ಕೆಲ್ಲಾ ಈಗಾಗಲೇ ಹೇಳಿದಂತೆ, ಅವರು 'ಸ್ವಪ್ರಜ್ಞೆ'ಯ ಸಂಸ್ಕೃತಿ ಸಂಕಥನವಾಗಿ ಸಾಹಿತ್ಯ ವಿಮರ್ಶೆಯನ್ನು ಕಟ್ಟಲು ಮಾಡುವ ಪ್ರಯತ್ನವೇ ಮುಖ್ಯ ಕಾರಣವಾಗಿದೆ. ಸಿದ್ಧ ಪರಿಭಾಷೆಗಳು, ಪರಿಕಲ್ಪನೆಗಳು ಮತ್ತು ವಿಧಾನಗಳನ್ನು ನಿರಾಕರಿಸುವ ಮೂಲಕ ಸಾಹಿತ್ಯ, ವಿಮರ್ಶೆ ಹಾಗೂ ಮನುಷ್ಯ ಬದುಕಿನ ಕುರಿತ ರೂಢಿಗತ ಗ್ರಹಿಕೆಗಳನ್ನು ಒಡೆಯುವುದು ಈ ವಿಮರ್ಶೆಯ ಒಂದು ಮುಖ್ಯವಾದ ನೆಲೆಯಾಗಿದೆ. ಹಾಗೆಯೇ, ಇವೆಲ್ಲವುಗಳನ್ನು ವಿಸ್ತರಿಸುವುದು ಅಂಥ ಇನ್ನೊಂದು ಪ್ರಮುಖವಾದ ನೆಲೆಯಾಗಿದೆ. ಈ ದೃಷ್ಟಿಯಿಂದ ಕಿ.ರಂ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಬ್ಬ ಅಪರೂಪದ ಹಾಗೂ ಅರ್ಥಪೂರ್ಣವಾದ ವಿಮರ್ಶಕರಾಗಿದ್ದಾರೆ. ಇದಕ್ಕೆ ಅವರ ಆಯ್ದ ವಿಮರ್ಶಾ ಬರಹಗಳ ಸಂಕಲನವಾದ 'ತೆರೆದ ಪಠ್ಯ' (೨೦೧೨) ಒಂದು ಮಹತ್ವಪೂರ್ಣವಾದ ನಿದರ್ಶನ. ಅಲ್ಲದೆ, ಇದರಲ್ಲಿ ಸೇರಿಲ್ಲದಿರುವ ಅವರ ಹಲವಾರು ವಿಮರ್ಶಾ ಬರಹಗಳು ಹಾಗೂ ಅಕ್ಷರರೂಪಕ್ಕೆ ತರಲಾಗಿಲ್ಲದಿರುವ ಸಾಹಿತ್ಯ ಮತ್ತು ಸಂಸ್ಕೃತಿ ವಿಶ್ಲೇಷಣೆ ಕುರಿತ ನೂರಾರು ಉಪನ್ಯಾಸಗಳು ಕೂಡಾ ಈ ಮಾತಿಗೆ ಪ್ರಮುಖವಾದ ಆಧಾರಗಳು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಆಯಾಮಗಳ ರೂಪೀಕರಣದ ಹಿನ್ನೆಲೆಯಲ್ಲಿ 'ಕಿ.ರಂ. ವಿದ್ಯಮಾನ'ದ ಪ್ರಭಾವ ಬಹಳ ದೊಡ್ಡದು ಹಾಗೂ ಅಷ್ಟೇ ಅರ್ಥಪೂರ್ಣವಾದುದು.

೬.೪.೧ ಇಹಪರಾನುಸಂಧಾನದ ಸಂಕೀರ್ಣ ಸಾಂಸ್ಕೃತಿಕ ಪಠ್ಯಗಳು

ಅತ್ಯಂತ ಆಶ್ಚರ್ಯದ ಆದರೆ ಅಷ್ಟೇ ವಾಸ್ತವದ ವಿಚಾರವೆಂದರೆ, ಆಧುನಿಕ ಕನ್ನಡ ವಿಮರ್ಶೆಯ ಎರಡೂ 'ಮಾರ್ಗ'ಗಳು ಸಹ ಕನ್ನಡ 'ಅನುಭಾವ ಸಾಹಿತ್ಯ'ದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತಾಳಿರುವುದು. ನವೋದಯ ವಿಮರ್ಶೆ 'ವಚನ ಸಾಹಿತ್ಯ'ದ ಬಗೆಗೂ ಇದೇ ಧೋರಣೆ ಹೊಂದಿತ್ತು. ಆದರೆ ನವ್ಯ ವಿಮರ್ಶೆ ವಚನಗಳನ್ನು ಕನ್ನಡ ಕಾವ್ಯದ ಶ್ರೇಷ್ಠ ರಚನೆಗಳಾಗಿ ಭಾವಿಸಿತು. ಇದಕ್ಕೆ ನವ್ಯ ವಿಮರ್ಶೆಯ ರೂಪನಿಷ್ಠ ಮಾನದಂಡ ಮುಖ್ಯವಾದ ಕಾರಣ. ಆದರೆ, ನವ್ಯ ವಿಮರ್ಶೆಯ ಎರಡು ಪ್ರಮುಖ ಕಾವ್ಯ ಲಕ್ಷಣಗಳಾದ

'ಮಣ್ಣಿನ ವಾಸನೆ' ಹಾಗೂ 'ಸಾವಯವ ಶಿಲ್ಪದ ಸಮಗ್ರೀಕರಣದ ಬಲ' ವಚನಗಳಂತೆ 'ಅನುಭಾವ ಸಾಹಿತ್ಯ'ದ ಮಹತ್ವಪೂರ್ಣವಾದ ಗೀತರಚನೆಗಳಲ್ಲೂ ಇತ್ತು.

ಇಷ್ಟಾದರೂ, ಇವು ನವ್ಯ ವಿಮರ್ಶಕರಿಗೆ ಮುಖ್ಯವೆಂದು ಕಾಣದಿರುವುದಕ್ಕೆ ಅವುಗಳ ಸಂಗೀತಾತ್ಮಕ ರಾಚನಿಕ ಚಹರೆಗಳೇ ಪ್ರಮುಖ ಕಾರಣವೇ ಅಥವಾ ಬೇರೇನಾದರೂ ಸಂಗತಿಗಳು ಕಾರಣವೇ ಎನ್ನುವುದು ಚಿಂತನಶೀಲ ವಿಚಾರವಾಗಿದೆ. ಪ್ರಾಯಶಃ ನವ್ಯ ವಿಮರ್ಶೆ ಯಾವುದನ್ನು ಕಾವ್ಯದಲ್ಲಿ ಅನಗತ್ಯ ಸಂಗತಿಗಳೆಂದು ಪ್ರತಿಪಾದಿಸುತ್ತಿತ್ತೋ, ಅಂಥ ವಿಚಾರಗಳನ್ನು ಈ ಅನುಭಾವಿಕ ರಚನೆಗಳು ತಮ್ಮ ಜೀವಂತ ಲಕ್ಷಣಗಳಾಗಿ ಹೊಂದಿದ್ದದ್ದು ಮುಖ್ಯವಾದ ಕಾರಣವಿರಬಹುದೆಂದು ಕಂಡುಬರುತ್ತದೆ. ಅವುಗಳೆಂದರೆ ಮೊದಲನೆಯದಾಗಿ, ಅನುಭಾವಿಕ ರಚನೆಗಳು ಸಂಗೀತಾತ್ಮಕ ರಚನೆಗಳಾಗಿರುವುದು. ಎರಡನೆಯದಾಗಿ, ಗೇಯ ಪ್ರಧಾನವಾದ ಭಾವಗೀತಾತ್ಮಕ ಚಹರೆಗಳನ್ನು ಹೊಂದಿರುವುದು ಮತ್ತು ಮೂರನೆಯದಾಗಿ, ಸಮುದಾಯನಿಷ್ಠ ಆಚರಣಾತ್ಮಕ ಆಯಾಮಗಳಿಂದ ಕೂಡಿರುವುದು. ಹೀಗಾಗಿಯೇ, ವಚನಗಳನ್ನು ಉತ್ಕೃಷ್ಟ ಕಾವ್ಯಮಾದರಿಯಾಗಿ ಗುರುತಿಸಿದ ನವ್ಯ ವಿಮರ್ಶೆಯು ತತ್ವಪದಗಳನ್ನು ಶ್ರೇಷ್ಠ ಕಾವ್ಯವೆಂದು ಭಾವಿಸಲಿಲ್ಲ. ಇದು, ಸಾಹಿತ್ಯ ವಿಮರ್ಶೆಯ ಮಾನದಂಡಗಳು ಯಾವ ಭಾಷಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳಿಂದ ರೂಪಿತವಾಗಿರುತ್ತವೆಯೋ, ಅದೇ ಕ್ರಮದಲ್ಲಿ ಇನ್ನೊಂದು ಪರಿಸರದ ಸಾಹಿತ್ಯಕ್ಕೆ ಅನ್ವಯಿಸಲಾಗದು ಎನ್ನುವುದಕ್ಕೆ ಒಂದು ಸೂಕ್ತವಾದ ನಿದರ್ಶನವೂ ಹೌದು; ಹಾಗೆಯೇ, ಅನ್ಯ ದೇಶಭಾಷಾ ಹಿನ್ನೆಲೆಯ ವಿಮರ್ಶಾ ವಿವೇಕವನ್ನು ಸ್ಥಳೀಯ ಸಾಹಿತ್ಯ ಹಾಗೂ ಸಂಸ್ಕೃತಿ ವಿಶ್ಲೇಷಣೆಯ ಅವಶ್ಯಕತೆಗಳಿಗೆ ತಕ್ಕಂತೆ ಮರುರಚಿಸಿಕೊಳ್ಳಬೇಕು ಎನ್ನುವುದಕ್ಕೆ ಸಂಬಂಧಿಸಿದ ಪ್ರಮುಖವಾದ ಪಾಠವೂ ಹೌದು, ಹೀಗಾಗಿಯೇ, ಕನ್ನಡದಲ್ಲಿ ಪ್ರಧಾನಧಾರೆಯ ಸಾಹಿತ್ಯ ವಿಮರ್ಶೆಯ ಮತ್ತು ವಿವಿಧ ಪಂಥೀಯ ಅಥವಾ ಸೈದ್ಧಾಂತಿಕ ವಿಮರ್ಶೆಯ ಹಲವು ಪ್ರಕಾರಗಳಿಗಿಂತ ಭಿನ್ನವಾದ ಹಾಗೂ ಅರ್ಥಪೂರ್ಣವಾದ ಸಾಂಸ್ಕೃತಿಕ ವಿಮರ್ಶಾ ವಿಧಾನ ರೂಪುಗೊಂಡಿತು.

ಪ್ರಧಾನಧಾರೆಯ ಮತ್ತು ವಿವಿಧ ಪಂಥೀಯ ವಿಮರ್ಶಾವಿಧಾನಗಳ ಪ್ರಮುಖ ಪರಿಮಿತಿಗಳಿಂದ ಮುಕ್ತವಾಗಿರುವುದು, ಸಿದ್ಧ ವಿಮರ್ಶಾ ಪರಿಕರಗಳ ಯಾಂತ್ರಿಕಾನ್ವಯ ಮಾಡದಿರುವುದು ಹಾಗೂ ಜನಪ್ರಿಯ ವಿಮರ್ಶಾಕೃತಿಗಳ ಪ್ರಶ್ನಾತ್ಮಕ ಪರಿಶೀಲನೆ ಮಾಡುವುದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕೆಲವು ಪ್ರಮುಖ ಚಹರೆಗಳೆಂದು ಗುರುತಿಸಬಹುದು. ಹಾಗೆಯೇ, ಕನ್ನಡ ಹಾಗೂ ಪಾಶ್ಚಾತ್ಯ ವಿಮರ್ಶಾ ಪರಂಪರೆಗಳ ಅರ್ಥಪೂರ್ಣ ವಿವೇಕವನ್ನು ಪಠ್ಯಗಳ ಅನುಸಂಧಾನದ ಸಂದರ್ಭದ ಮಹತ್ವದ ತಿಳಿವಳಿಕೆಯಾಗಿ ಅಳವಡಿಸಿಕೊಂಡಿರುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಒಂದು ಪ್ರಮುಖವಾದ ವಿಚಾರವಾಗಿದೆ. ಈ ಒಟ್ಟು ವಿನ್ಯಾಸವನ್ನು ಅನಂತಮೂರ್ತಿ ಅವರ ಪ್ರಸಿದ್ಧವಾದ 'ಪ್ರಜ್ಞೆ ಮತ್ತು ಪರಿಸರ'ದ ಪರಿಕಲ್ಪನೆಯ ಮೂಲಕ ವಿವರಿಸಬಹುದು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ

ವಿನ್ಯಾಸದ ಜೊತೆಗೆ ಈಗಾಗಲೇ ಗುರುತಿಸಲಾಗಿರುವ 'ಸ್ವಪ್ರಜ್ಞೆ'ಯನ್ನು ಹೊಂದಿರುವ ವಿಮರ್ಶಕ ಅಥವಾ ವಿಮರ್ಶೆ ಮಾತ್ರ ಕನ್ನಡ 'ಅನುಭಾವ ಸಾಹಿತ್ಯ'ದ ವಿಶಿಷ್ಟವಾದ ಹಾಗೂ ಅರ್ಥಪೂರ್ಣವಾದ ದೇಶಿ ಅನುಸಂಧಾನ ಸ್ವರೂಪದ ಮಹತ್ವವನ್ನು ಗುರುತಿಸಲು ಸಾಧ್ಯ.

ಕಿ.ರಂ. ಇಂಥ ವಿಶಿಷ್ಟ ಸಾಮರ್ಥ್ಯವುಳ್ಳ ವಿಮರ್ಶಕರು. ಆದ್ದರಿಂದಲೇ, ಅವರು ತಮ್ಮ 'ಹದಿನೇಳು ಮತ್ತು ಹದಿನೆಂಟನೆಯ ಶತಮಾನದ ಅನುಭಾವ ಸಾಹಿತ್ಯ' ('ತೆರೆದ ಪಠ್ಯ' ೨೦೧೨) ಲೇಖನದಲ್ಲಿ ಕನ್ನಡದ ಅನುಭಾವಿ ಸಂತರನ್ನು ಶ್ರೇಷ್ಠ ಕವಿಗಳೆಂದು ಗುರುತಿಸುತ್ತಾರೆ. ಅವರ ರಚನೆಗಳನ್ನು ವಿಶಿಷ್ಟ ಬಗೆಯ 'ಸಾಂಸ್ಕೃತಿಕ ಪಠ್ಯ'ಗಳೆಂದು ಪ್ರತಿಪಾದಿಸುತ್ತಾರೆ. ಅಷ್ಟೇ ಅಲ್ಲದೆ, ಯಾವ ಪಾಶ್ಚಾತ್ಯ ಸಾಹಿತ್ಯ ಚರಿತ್ರಾ ರಚನಾ ಪ್ರಜ್ಞೆಯು, ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟುವಾಗ ಹದಿನೇಳು ಮತ್ತು ಹದಿನೆಂಟನೆಯ ಶತಮಾನವನ್ನು ಕನ್ನಡ ಸಾಹಿತ್ಯದ ಸಿದ್ಧಿ ಸಾಧನೆಗಳ ದೃಷ್ಟಿಯಿಂದ ನಿಸ್ತೇಜದ ಕಾಲ ಹಾಗೂ ಅವನತಿಯ ಕಾಲ ಎಂದು ಗುರುತಿಸಿದೆಯೋ ಅದು ಶುದ್ಧ ತಪ್ಪು ತಿಳುವಳಿಕೆಯಾಗಿದೆ ಎನ್ನುವುದನ್ನು ನಿರೂಪಿಸುತ್ತಾರೆ. ಈ ಸಂದರ್ಭದಲ್ಲಿ ಕಿ.ರಂ. ಅವರು, ಸಾಹಿತ್ಯ ಚರಿತ್ರೆಯ ರಚನೆ ಹಾಗೂ ವಿಶ್ಲೇಷಣೆಯನ್ನು ಪಾಶ್ಚಾತ್ಯ ದೃಷ್ಟಿಕೋನಕ್ಕಿಂತ ಭಿನ್ನವಾಗಿ, ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಪರಂಪರೆಗಳ ಮಧ್ಯೆ ನಡೆದಿರುವ ಕೊಡುಕೊಳ್ಳುವಿಕೆಯ ದ್ವಂದ್ವಾತ್ಮಕ ವಿನ್ಯಾಸದಲ್ಲಿ ಗ್ರಹಿಸಬೇಕು ಎಂದು ಪ್ರತಿಪಾದಿಸುತ್ತಾರೆ. ಸಾಹಿತ್ಯ ಯಾವಾಗಲೂ ಸಂಸ್ಕೃತಿ ಸ್ಪಂದನವನ್ನು ಸಿದ್ಧ ಮಾದರಿಗಳಲ್ಲಿ ವ್ಯಕ್ತಪಡಿಸುವುದಿಲ್ಲ. ಇದನ್ನು ಸಮಕಾಲೀನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ನೈತಿಕ ವಿಚಾರಗಳ ಆಗುಹೋಗುಗಳಿಗೆ ಸ್ಪಂದಿಸುವ, ಪ್ರತಿಕ್ರಿಯಿಸುವ ಹಾಗೂ ವಾಗ್ವಾದಿಸುವ ವಿಶಿಷ್ಟ ವಿನ್ಯಾಸಗಳಲ್ಲಿ ನಿರ್ವಹಿಸುತ್ತದೆ. ಈ ಕ್ರಿಯೆಯಲ್ಲಿ, ಸಂಸ್ಕೃತಿ ಸ್ವರೂಪ ಕುರಿತ ಗ್ರಹಿಕೆಯಷ್ಟನ್ನು ಮಾತ್ರವೇ ಪಡೆದುಕೊಳ್ಳದೆ, ಸಂಸ್ಕೃತಿಯ ಪರಿವರ್ತನಶೀಲತೆಯಲ್ಲಿರುವ ಕೆಡುಕಿನ ಅಥವಾ ಹಾನಿಕಾರಕ ವಿಚಾರಗಳನ್ನು ಕುರಿತ ತನ್ನ ತೀವ್ರವಾದ ಪ್ರತಿರೋಧವನ್ನು ಕೂಡಾ ಸಾಹಿತ್ಯ ವ್ಯಕ್ತಪಡಿಸುತ್ತದೆ. ಹೀಗಾಗಿಯೇ, ಸಾಹಿತ್ಯದ ರೂಪ ಹಾಗೂ ಸ್ವರೂಪಗಳು ಹೊಸ ಅವಸ್ಥೆಗಳನ್ನು ಪಡೆದುಕೊಳ್ಳುತ್ತವೆ. ಹಾಗೆಯೇ ಸಾಹಿತಿಗಳು ಹಾಗೂ ಲೇಖಕರು ಕೂಡಾ ಕಾಲ ಕಾಲಕ್ಕೆ ಹೊಸ ರೂಪಗಳಲ್ಲಿ ಮೂಡಿಬರುತ್ತಾರೆ. ಇದನ್ನು ಸಾಧ್ಯವಾಗಿಸುವುದೇ ಸಾಹಿತ್ಯ ಹಾಗೂ ಸಂಸ್ಕೃತಿ ಸ್ಪಂದನದ ದ್ವಂದ್ವಾತ್ಮಕ ವಿದ್ಯಮಾನ ಎನ್ನುವ ಅರ್ಥಪೂರ್ಣವಾದ ಪ್ರಮೇಯವನ್ನು ಕಿ.ರಂ. ಪ್ರತಿಪಾದಿಸುತ್ತಾರೆ. ಹೀಗಾಗಿ, ಈ ಕಾಲಘಟ್ಟದ ಅನುಭಾವಿ ಸಂತರನ್ನು ಮತ್ತು ಅವರ ರಚನೆಗಳನ್ನು ಮಧ್ಯಕಾಲೀನ ಕರ್ನಾಟಕ ಸಂಸ್ಕೃತಿಯ ಕೊನೆಯ ಹಂತದಲ್ಲಿ ಹಾಗೂ ಆಧುನಿಕ ಕರ್ನಾಟಕ ಸಂಸ್ಕೃತಿಯ ಆರಂಭಿಕ ಹಂತದಲ್ಲಿ ಕನ್ನಡ ಸಾಹಿತ್ಯ, ಕರ್ನಾಟಕ ಸಂಸ್ಕೃತಿ ಮತ್ತು ಜನಜೀವನ ಸ್ವರೂಪದ ಪಲ್ಲಟಗಳನ್ನು ತೀವ್ರವಾಗಿ ಪರಿಭಾವಿಸಿದ 'ಸಾಂಸ್ಕೃತಿಕ ಚೇತನಗಳು ಹಾಗೂ ಸಾಂಸ್ಕೃತಿಕ ಪಠ್ಯಗಳು' ಎಂದು ವಿಶ್ಲೇಷಿಸುತ್ತಾರೆ. ಹಾಗೆಯೇ, ಆಧುನಿಕ ಕನ್ನಡ ಸಾಹಿತ್ಯವು ಇಪ್ಪತ್ತನೆಯ ಶತಮಾನದ 'ಇಂಗ್ಲಿಷ್ ಗೀತ'ಗಳ ಪ್ರಕಟಣೆಗಿಂತ ಬಹಳ ಹಿಂದೆಯೇ, ತನ್ನ

'ಸಂವೇದನೆ' ಹಾಗೂ 'ಪ್ರಜ್ಞಾಲಯಗಳ' ವಿನ್ಯಾಸದ ದೃಷ್ಟಿಯಿಂದ ಈ ತತ್ವಪದಕಾರರ ರಚನೆಗಳ ಮೂಲಕ ಪ್ರಕಟಗೊಂಡಿದೆ ಎಂದೂ ವ್ಯಾಖ್ಯಾನಿಸುತ್ತಾರೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಚರ್ಚೆಯ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದ ವಿಚಾರವಾಗಿದೆ.

ಅಸಂಖ್ಯ ಅನುಭಾವಿಗಳ ಅಗಾಧ ಪ್ರಮಾಣದ ಕಾವ್ಯ ಸೃಷ್ಟಿಯನ್ನು ವಿಶ್ಲೇಷಿಸುವುದು ನಿಜಕ್ಕೂ ತುಂಬಾ ಸವಾಲಿನ ಕೆಲಸ. ಅದರಲ್ಲೂ, ಇಂಥ ಅಭಿವ್ಯಕ್ತಿಗಳನ್ನು ಯಾರೂ ಸಹ ಗಂಭೀರವಾದ ಸಾಹಿತ್ಯವೆಂದು ಪರಿಗಣಿಸದೇ ಇರುವಂಥ ಸಂದರ್ಭದಲ್ಲಿ ಇದು ಇನ್ನಷ್ಟು ತೊಡಕಿನ ಕೆಲಸ ಕೂಡಾ. ಏಕೆಂದರೆ, ಇಂಥ ಸಂದರ್ಭದಲ್ಲಿ ವಿಮರ್ಶಕನಾದವನಿಗೆ ಎರಡು ಬಗೆಯ ಮಹತ್ವದ ಹೊಣೆಗಾರಿಕೆಗಳು ಇರುತ್ತವೆ. ಅವುಗಳೆಂದರೆ, ಅ. ಇಂಥ ನಿರ್ಲಕ್ಷ್ಯಿತ ಅಥವಾ ಅಲಕ್ಷ್ಯಿತ ಸಾಹಿತ್ಯವನ್ನು ಅರ್ಥಪೂರ್ಣವಾದ ಸಾಹಿತ್ಯವೆಂದು ಪ್ರತಿಪಾದಿಸುವ ಮೂಲಕ ಅದನ್ನು ಪ್ರಧಾನ ಸಾಹಿತ್ಯ ಪರಂಪರೆಯ ಜೊತೆ ಜೋಡಿಸುವುದು ಮತ್ತು ಆ. ಇದಕ್ಕಾಗಿ ವಿಶಿಷ್ಟವಾದ ಹೊಸ ವಿಮರ್ಶಾ ವಿಧಾನವೊಂದನ್ನು ರೂಪಿಸಿಕೊಳ್ಳುವುದು. ಈ ಎರಡೂ ಕಾರ್ಯಗಳನ್ನು ಕಿ.ರಂ. ಇಲ್ಲಿ ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾರೆ. ಆ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವಿಸ್ತರಣೆಗೂ ಕೂಡಾ ಮಹತ್ವದ ಕೊಡುಗೆ ನೀಡಿದ್ದಾರೆ. ಬಹಳ ಮುಖ್ಯವಾಗಿ ಈ ಕಾರ್ಯಗಳನ್ನು ಕಿ.ರಂ. ಇಲ್ಲಿ ಪ್ರತ್ಯೇಕವಾಗಲ್ಲದೆ ಒಪ್ಪಂದದ ಕ್ರಮದಲ್ಲಿ ನಿರ್ವಹಿಸುತ್ತಾರೆ ಎನ್ನುವುದು ಅತ್ಯಂತ ಮಹತ್ವದ ವಿಚಾರವಾಗಿದೆ.

ಕನ್ನಡದ ಪ್ರಧಾನಧಾರೆಯ ಸಾಹಿತ್ಯ ಮೀಮಾಂಸೆಗಳು ಹಾಗೂ ವಿಮರ್ಶಾ ಪರಂಪರೆಗಳು ಹೀಗೆ ಒಟ್ಟಾಗಿ ನಿರ್ಲಕ್ಷ್ಯಿಸಿರುವ ಅನುಭಾವ ಸಾಹಿತ್ಯವನ್ನು ಗ್ರಹಿಸುವುದಕ್ಕೆ ಬಹುಮುಖ್ಯವಾಗಿ ಬೇಕಿರುವುದು ಚರಿತ್ರೆ ಮತ್ತು ಸಂಸ್ಕೃತಿಯ ಸಂಘರ್ಷದ ಸ್ವರೂಪ ಕುರಿತ ಸರಿಯಾದ ತಿಳಿವಳಿಕೆ. ಇದಕ್ಕೆ ಯಾವ ಕಾಲಮಾನದ ಯುಗಧರ್ಮದ ಹಿನ್ನೆಲೆಯಲ್ಲಿ ಎಂಥ ಸಾಹಿತ್ಯ ಹುಟ್ಟುತ್ತದೆ ಎನ್ನುವಂಥ ಸರಳವಾದ ಗ್ರಹಿಕೆಯಷ್ಟೇ ಸಾಲದು. ಹಾಗೆ ಹುಟ್ಟುವ ಸಾಹಿತ್ಯದ ಸ್ವರೂಪವನ್ನು ಈ ಸಾಂಸ್ಕೃತಿಕ ಪಲ್ಲಟತ್ವ ಹಾಗೂ ಸಾಂಸ್ಕೃತಿಕ ಸಂಘರ್ಷಾತ್ಮಕತೆಗಳು ಹೇಗೆ ರೂಪಿಸಬಯಸಿವೆ, ಹಾಗೆಯೇ, ಇಂಥ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಅಂಥ ಸಾಹಿತ್ಯ ಹೇಗೆ ಭಿನ್ನವಾದ ರೂಪ–ಸ್ವರೂಪಗಳಲ್ಲಿ ಪ್ರಕಟಗೊಳ್ಳಲು ಹವಣಿಸುತ್ತಿದೆ, ಇದಕ್ಕಿರುವ ಮುಖ್ಯವಾದ ಕಾರಣಗಳೇನು ಹಾಗೂ ಅಂತಿಮವಾಗಿ ಇಂಥ ಸಾಹಿತ್ಯಕ ಸಂಘರ್ಷಾತ್ಮಕತೆಯ ನಿಜವಾದ ಮಹತ್ವ ಏನು ಎನ್ನುವುದು ವಿಮರ್ಶಕನ ದೃಷ್ಟಿಕೋನಕ್ಕೆ ಸಂಬಂಧಿಸಿದ ಅತ್ಯಂತ ಮಹತ್ವದ ಪ್ರಶ್ನೆಗಳಾಗಬೇಕಿರುತ್ತದೆ. ಕಿ.ರಂ. ಅವರು ಈ ಎಲ್ಲಾ ಪ್ರಶ್ನೆಗಳ ಹಿನ್ನೆಲೆಯಲ್ಲಿ. ಈ ಎರಡು ಶತಮಾನಗಳ ಅನುಭಾವಿ ಕವಿಗಳ ಮನೋಧರ್ಮ ಹಾಗೂ ಅವರ ಸಾಹಿತ್ಯದ ವಿಶಿಷ್ಟ ಸ್ವರೂಪವನ್ನು ಚರ್ಚಿಸುತ್ತಾರೆ.

ಈ ಹಿನ್ನೆಲೆಯಿಂದ ನೋಡುವುದಾದರೆ, 'ಅನುಭಾವ ಸಾಹಿತ್ಯ'ದ ವಿಶಿಷ್ಟವಾದ ಸ್ವರೂಪ ಹಾಗೂ ಅದರ ಮಹತ್ವದ ಚಹರೆಗಳು ಏನು ಎಂದು ಗುರುತಿಸುವ ಕ್ರಮದಲ್ಲಿಯೇ, ಕಿ.ರಂ. ಕನ್ನಡ ಸಾಂಸ್ಕೃತಿಕ

ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನೂ ಸಹ ಬೆಳೆಸಿದ್ದಾರೆ. ಹೀಗಾಗಿ, ಅವರ ಈ ವಿಶ್ಲೇಷಣೆಯ ಮುಖ್ಯ ನೆಲೆಗಳನ್ನು ಇಲ್ಲಿ ವಿವೇಚಿಸುವುದು ಅತ್ಯಂತ ಸೂಕ್ತವಾದ ವಿಚಾರವಾಗಿದೆ. ಇವು, ಕನ್ನಡದ ಸಂಕೀರ್ಣ ಸಾಂಸ್ಕೃತಿಕ ಪಠ್ಯಗಳಾದ ಅನುಭಾವಿಕ ರಚನೆಗಳ ವಿಶಿಷ್ಟ ಸ್ವರೂಪದ ಪ್ರಮುಖ ಚಹರೆಗಳನ್ನು ಕುರಿತ ಅರ್ಥಪೂರ್ಣವಾದ ಚಿಂತನೆಗಳನ್ನು ಒಳಗೊಂಡಿರುತ್ತವೆ. ಅವು ಇಂತಿವೆ:

೬.೪.೨ ಕನ್ನಡ ಸಾಹಿತ್ಯ ಪರಂಪರೆ ಮತ್ತು ಅನುಭಾವ ಸಾಹಿತ್ಯ

ಹದಿನೇಳು ಮತ್ತು ಹದಿನಂಟನೆಯ ಶತಮಾನದ ಕನ್ನಡ ಅನುಭಾವ ಸಾಹಿತ್ಯವು, ಸಮಕಾಲೀನ ಚರಿತ್ರೆಯ ಹಾಗೂ ಸಂಸ್ಕೃತಿಯ ಅವಸ್ಥಾಂತರದ ದ್ವಂದ್ವಾತ್ಮಕವಾದ ಮತ್ತು ಸಂಘರ್ಷಾತ್ಮಕವಾದ ಅಭಿವ್ಯಕ್ತಿಗಳು ಎನ್ನುವುದು ಕಿ.ರಂ. ಅವರ ವಿಶ್ಲೇಷಣೆಯ ಬಹುಮುಖ್ಯವಾದ ವಿಚಾರವಾಗಿದೆ. ಹೀಗೆಂದ ಮಾತ್ರಕ್ಕೆ ಇವು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಅಥವಾ ಪರಂಪರೆಯ ಜೊತೆ ಕೊಂಡಿಗಳನ್ನು ಕಳಚಿಕೊಂಡಿರುತ್ತವೆ ಎಂದೇನೂ ಅರ್ಥವಲ್ಲ. ಏಕೆಂದರೆ, ಇವು ಬಹು ಮುಖ್ಯವಾಗಿ ಹನ್ನೆರಡನೆಯ ಶತಮಾನದ ವಚನ ಚಳವಳಿ ಮತ್ತು ಹದಿನಾರನೆಯ ಶತಮಾನದ ಹರಿದಾಸ ಚಳವಳಿಗಳ ಜೊತೆ ತಾತ್ವಿಕ ಸಂಬಂಧ ಹೊಂದಿವೆ. ಹಾಗೆಯೇ ಕನ್ನಡ ಭಕ್ತಿ ಪರಂಪರೆ ಮತ್ತು ವಿರಕ್ತ ಪರಂಪರೆಗಳ ಜೊತೆ ಕೂಡ ನಂಟು ಹೊಂದಿವೆ. ಇಷ್ಟಾದರೂ, ಇವು ಇನ್ನಿತರ ಹಲವು ಮುಖ್ಯ ಸಂಗತಿಗಳ ದೃಷ್ಟಿಯಿಂದ ಕನ್ನಡದ ಅತ್ಯಂತ ವಿಶಿಷ್ಟವಾದ ಹಾಗೂ ಅರ್ಥಪೂರ್ಣವಾದ ಸಾಂಸ್ಕೃತಿಕ ಪಠ್ಯಗಳೂ ಸಹ ಆಗಿವೆ.

೬.೪.೩ ಅನುಭಾವ ಸಾಹಿತ್ಯದ ಸಂಕೀರ್ಣ ಸ್ವರೂಪ

ಸ್ಥೂಲವಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬಂದರೂ, ಸಾಮಾನ್ಯವಾಗಿ ಅನುಭಾವಿಗಳು ಸಮಗ್ರ ಕರ್ನಾಟಕದಾದ್ಯಂತ ವ್ಯಾಪಿಸಿದ್ದಾರೆ. ಮೂಲತಃ ಅವರು ಹಿಂದೂ ಮತ್ತು ಮುಸ್ಲಿಂ ಧರ್ಮಕ್ಕೆ ಸೇರಿದ್ದರೂ, ಈ ಸಾಂಸ್ಥಿಕ ಧರ್ಮದ ಹಂಗನ್ನು ಸ್ಪಷ್ಟವಾಗಿ ತೊರೆದವರು. ಹೊಸ ಧರ್ಮಸ್ವರೂಪದ ಹುಡುಕಾಟ ಮಾಡುವುದು ಈ ಅನುಭಾವಿಗಳ ಬಹುಮುಖ್ಯವಾದ ಗುರಿ. ತಾವು ಹುಟ್ಟಿರುವ, ಪ್ರತಿನಿಧಿಸುತ್ತಿರುವ ಮೂಲ ಧರ್ಮದ ವಿಕಾರ ವಿಕೃತಿಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುತ್ತಿದ್ದರೂ ಕೂಡಾ, ಆ ಸಾಂಸ್ಥಿಕ ಧರ್ಮದ ಪರಿಷ್ಕಾರ ಮಾಡಿ ಅದರ ಉನ್ನತಿ ಸಾಧಿಸುವುದು ಅವರ ಕಾಳಜಿಯೇನಲ್ಲ. ಇದಕ್ಕೆ ಬದಲಾಗಿ ಮೌಲ್ಯಕೇಂದ್ರಿತವಾದ ಮತ್ತು ಜೀವಪರವಾದ ಆದರ್ಶಸ್ವರೂಪದ 'ನವ ಮಾನವಧರ್ಮ' ಒಂದರ ಹುಡುಕಾಟ, ಆ ಮೂಲಕ ಆತ್ಮೋನ್ನತಿಯ ಸಾಧನೆ ಸಾಮಾನ್ಯವಾಗಿ ಈ ಎಲ್ಲ ಅನುಭಾವಿಗಳ ಶೋಧನೆಯ ಆತ್ಯಂತಿಕ ಗುರಿ. ಹೀಗಾಗಿ, ಇವರ ರಚನೆಗಳು ಧಾರ್ಮಿಕ ಅಥವಾ ಧರ್ಮಕೇಂದ್ರಿತ ರಚನೆಗಳಲ್ಲ. ಬದಲಾಗಿ, ಇವರು ಸಚರಾಚರಗಳ ಸ್ವರೂಪದ ಜಿಜ್ಞಾಸೆ ಕೇಂದ್ರವಾಗುಳ್ಳ 'ಧ್ಯಾನಶೀಲ ಕವಿಗಳು'. ಇದರ ಸ್ವರೂಪವನ್ನು ಕಿ.ರಂ. ವಿವರಿಸುವ ಕ್ರಮವೇ ಅತ್ಯಂತ ವಿಶಿಷ್ಟವಾದದು. ಇದನ್ನು, "ಅನುಭಾವದ ಅಭಿವ್ಯಕ್ತಿ ತೀವ್ರವಾದ ಸ್ವಪ್ರಜ್ಞೆಯಿಂದ ಕೂಡಿದ ಅಭಿವ್ಯಕ್ತಿ. ಮನುಷ್ಯ ಸ್ವಭಾವಕ್ಕೂ ಆದ್ಯಂತಿಕ ವಾಸ್ತವಕ್ಕೂ

ನಡುವೆ ತರ್ಕವನ್ನು ಹುಡುಕುವ, ಕಾರಣಗಳನ್ನು ಅನ್ವೇಷಿಸುವ ಕಡೆಗೆ ಈ ಅಭಿವ್ಯಕ್ತಿ ವಿಶೇಷ ಆಸಕ್ತಿಯನ್ನು ತೋರುತ್ತದೆ. ಸಂವಾದದ ಧಾಟಿ–ಧೋರಣೆಯ ಮೂಲಕ ಧ್ಯಾನಶೀಲ ಆಶಯವನ್ನು ಪ್ರಕಟಿಸುವ ಕ್ರಿಯೆಯನ್ನು ಇಲ್ಲಿ ನಿಚ್ಚಳವಾಗಿ ಗುರುತಿಸಲು ಸಾಧ್ಯವಿದೆ. ಧ್ಯಾನಶೀಲ ಅಭಿವ್ಯಕ್ತಿಯ ಸಂಕೇತ ವಿಧಾನ, ರೂಪಕ ನಿರ್ಮಿತಿಗಳು ಸಾಂಪ್ರದಾಯಕ ಕಾವ್ಯ ಪ್ರತಿಮೆಗಳಿಗಿಂತ ಭಿನ್ನ ಸ್ವರೂಪದ್ದಾಗಿರುತ್ತವೆ. ಈ ಪ್ರತಿಮೆಗಳು ಮನುಷ್ಯನ ಅನುಭವಗಳ ವಲಯಗಳಿಂದ ಆರಿಸಿಕೊಂಡವುಗಳು; ದೇವರು, ಪಂಚಭೂತಗಳಿಂದ ಹಿಡಿದು ಸಂತ, ಸೂಜಿ, ತಿಗಣೆ, ಹೆಣ್ಣುಗಳ ತನಕ ವ್ಯಾಪ್ತಿಯನ್ನು ಪಡೆದುಕೊಂಡಿರುವಂಥವು. ಈ ಎಲ್ಲ ರಚನೆಗಳೂ ಬೌದ್ಧಿಕವಾಗಿ ಸರಣಿಯನ್ನು ಹೊಂದಿರುತ್ತವೆ. ತೀವ್ರವಾದ ವಿಸಂಗತಿಯು ವಿಷಾದ ಮತ್ತು ಆಳವಾದ ನೋವಿನಿಂದ ಹೊರಟದ್ದಾಗಿರುತ್ತದೆ. ಬಹುತೇಕ ಧ್ಯಾನಶೀಲ ಕವಿಗಳು ಈ ಗುಂಪಿಗೆ ಸೇರಿದವರಾಗಿರುತ್ತಾರೆ. ಇದನ್ನೇ ಒಂದು ಸಾಹಿತ್ಯಕ ಗುಂಪು (cult) ಎಂದು ಸೀಮಿತ ಅರ್ಥದಲ್ಲಿ ನಿರ್ದೇಶಿಸಬಹುದು"[೩] ಎನ್ನುವ ಅವರ ವಿಶ್ಲೇಷಣೆ ಚೆನ್ನಾಗಿ ಸ್ಪಷ್ಟಪಡಿಸುತ್ತದೆ.

೬.೪.೪ ಅನುಭಾವ ಸಾಹಿತ್ಯದ ವ್ಯಾಪ್ತಿಯ ಸಂಕೀರ್ಣ ಸ್ವರೂಪ

ಕನ್ನಡದ ಅನುಭಾವ ಸಾಹಿತ್ಯ ಏಕಸ್ತರೀಯವಲ್ಲ; ಬಹುಸ್ತರೀಯವಾದದ್ದು. ಈ ಸ್ವರೂಪಕ್ಕೆ, ಅನುಭಾವಿಯ ಅನುಭವವನ್ನು ಪ್ರಧಾನ ವಸ್ತುವಾಗುಳ್ಳ ಸಾಹಿತ್ಯ ಹಾಗೂ ಅಂಥ ಸಾಹಿತ್ಯ ಕುರಿತು ವ್ಯಕ್ತವಾಗಿರುವ ವಿವಿಧ ಪ್ರತಿಕ್ರಿಯಾತ್ಮಕ ಅನುಭಾವ ಸಾಹಿತ್ಯಗಳ ನಡುವೆ ಮೂಲಭೂತ ವ್ಯತ್ಯಾಸವಿರುವುದೇ ಮುಖ್ಯವಾದ ಕಾರಣವಾಗಿದೆ. ಕಿ.ರಂ. ಇಲ್ಲಿ ಕನ್ನಡ ಅನುಭಾವ ಸಾಹಿತ್ಯದ ಸ್ತರರೂಪಗಳನ್ನು ಅನುಭಾವಿಗಳ ಧರ್ಮ, ಮತ ಅಥವಾ ಅಭಿವ್ಯಕ್ತಿ ವಿಧಾನಗಳು ಕಟ್ಟಿಕೊಟ್ಟಿರುವ ವ್ಯಾಪ್ತಿಯ ಮೇಲೆ ಗುರುತಿಸುವುದಿಲ್ಲ. ಬದಲಾಗಿ, ಮೂಲ ಅನುಭಾವ ಸಾಹಿತ್ಯ ಮತ್ತು ಪ್ರತಿಕ್ರಿಯಾತ್ಮಕ ಅನುಭಾವ ಸಾಹಿತ್ಯ ಎನ್ನುವ ವಿಬೇಧದ ಮೂಲಕ ಗುರುತಿಸುತ್ತಾರೆ. ಈ ಪರಿಕಲ್ಪನೆಯನ್ನು ಸಡಿಲವಾದ ಅರ್ಥದಲ್ಲಿ ಬಳಸುವುದನ್ನು ಕುರಿತು ಚರ್ಚಿಸುತ್ತಾ, ಅವರು ಹೇಳುವ ಮಾತುಗಳು ಕನ್ನಡ ಅನುಭಾವ ಸಾಹಿತ್ಯದ ವ್ಯಾಪ್ತಿಯ ಸಂಕೀರ್ಣ ನೆಲೆಗಳನ್ನು ಅರ್ಥಪೂರ್ಣವಾದ ಕ್ರಮದಲ್ಲಿ ಅನಾವರಣಗೊಳಿಸುತ್ತವೆ. ಈ ಕುರಿತು ಕಿ.ರಂ. ಅವರು, "ಈ ಅನುಭಾವ ಸಾಹಿತ್ಯದ ವ್ಯಾಪ್ತಿ ಅನೇಕ ಸ್ತರಗಳನ್ನೇ ಹೊಂದಿದೆ. ಅನುಭಾವಿ ಎಂಬ ಪದ ವ್ಯಕ್ತಿಯು ಯಾವ ಪ್ರಭಾವ, ಪರಿಣಾಮಗಳಿಗೂ ಬದ್ಧನಾಗದೆ ತನಗೆ ತಾನೇ ಪಡೆದ ಅನುಭಾವದ ಅನುಭವವನ್ನು ಒಳಗೊಳ್ಳುತ್ತದೆ..... ಅನುಭಾವಿ ಎಂಬ ಪದವನ್ನು ಹೆಚ್ಚು ನಿರ್ದಿಷ್ಟವಾಗಿ ಬಳಸಿದಂತೆಲ್ಲ ಸಮಸ್ಯೆ ಜಟಿಲವಾಗುತ್ತ ಬರುತ್ತದೆ. ಅನುಭಾವದ ಬಗೆಗೆ ಸಹಜವಾದ ಸಹಾನುಭೂತಿಯನ್ನು ತೋರುವವರು, ಅದರ ಅನುಭವವನ್ನು ಸಂವಹನಿಸಬೇಕೆಂದು ಅಭಿವ್ಯಕ್ತಿಕಾರರು ಮತ್ತು ಅನುಭಾವದ ಸಾಧ್ಯತೆಗಳತ್ತ ವಿಶೇಷ ಆಸಕ್ತಿಯನ್ನು ಕ್ರಿಯಾತ್ಮಕವಾಗಿ ತೋರುವವರು ಮತ್ತು ಕೇವಲ ಉತ್ಸಾಹಿತರಾಗಿರುವವರೂ ಸೇರಿದಂತೆ ಅನೇಕ ವಲಯಗಳನ್ನು ನಾವು ಈ ಅನುಭಾವದ ವಲಯದ ಸುತ್ತ ಕಾಣುತ್ತೇವೆ. ಆದರೆ ಈ ಎಲ್ಲ ನೆಲೆಗಳನ್ನು

ಅನುಭಾವ ಎಂದು ಕರೆಯಲು ಸಾಧ್ಯವಿದೆಯೆ? ಅನುಭಾವದ ವಿಚಾರವನ್ನು ಕುರಿತು ಅಭ್ಯಾಸ ಮಾತ್ರದ ಚಿಂತನೆಗಳನ್ನು ನಡೆಸಿದವರು ಮತ್ತು ಅನುಭಾವದ ಅನುಭವವನ್ನು ಪಡೆದವರು ಎಂಬ ವರ್ಗೀಕರಣ ಇಲ್ಲಿ ಅನಿವಾರ್ಯವಾಗುತ್ತದೆ ಆದರೆ ಇಂಥ ವರ್ಗೀಕರಣವು ಪ್ರಶ್ನಾರ್ಹವೆಂದು ನಾನು ತಿಳಿದಿದ್ದೇನೆ"[೬] ಎಂದು ವಿಶ್ಲೇಷಿಸುತ್ತಾರೆ.

೬.೪.೫ ಅನುಭಾವ ಕಾವ್ಯದ ತಾತ್ವಿಕತೆಯ ಸಂಕೀರ್ಣ ಸ್ವರೂಪ

ಇಹದ ಬದುಕಿನ ಸಮಗ್ರ ನಿರಾಕರಣೆ ಹಾಗೂ ಪರಲೋಕದ ಅವಿಶ್ರಾಂತ ಸಾಧನೆಯೇ ಕನ್ನಡ ಅನುಭಾವ ಕಾವ್ಯದ ಪ್ರಧಾನ ತಾತ್ವಿಕತೆಯಲ್ಲ. ಈ ಕಾಲಘಟ್ಟದಲ್ಲಿ ಆಧುನಿಕ ಕನ್ನಡ ಕಾವ್ಯ ಪ್ರಕಾರವೊಂದು ರೂಪುಗೊಂಡಿದ್ದರೆ ಏನೆಲ್ಲಾ ತವಕ ತಲ್ಲಣಗಳನ್ನು ತನ್ನ ತಾತ್ವಿಕ ಭಿತ್ತಿಯಾಗಿ ಒಳಗೊಳ್ಳಬಹುದಿತ್ತೋ, ಅವೆಲ್ಲವೂ ಈ ಕಾಲದ ಅನುಭಾವ ಕಾವ್ಯದ ತಾತ್ವಿಕತೆಯನ್ನು ರೂಪಿಸಿವೆ ಎನ್ನುವುದು ಕಿ.ರಂ. ಅವರ ವಿಶ್ಲೇಷಣೆಯ ಬಹುಮುಖ್ಯವಾದ ವಿಚಾರ. ಇದನ್ನು ಅವರು ಗುರುತಿಸಿರುವ ಮತ್ತು ವಿಶ್ಲೇಷಿಸಿರುವ ಕ್ರಮವಂತೂ, ಕನ್ನಡ ಅನುಭಾವ ಸಾಹಿತ್ಯ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಅರ್ಥಪೂರ್ಣವಾದ ವಿಕಾಸವೇ ಆಗಿದೆ. ಇದನ್ನು ಅವರ ಮಾತುಗಳಲ್ಲೇ ನಿರೂಪಿಸುವುದೇ ಹೆಚ್ಚು ಸೂಕ್ತ. ಈ ಕಾಲದ ಅನುಭಾವಿಗಳು ವಿಜ್ಞಾನದೊಂದಿಗೆ ಸಂವಾದಿಸಿರುವ ಸ್ವರೂಪವನ್ನು ಶರೀಫನ ಕಾವ್ಯದ ಮೂಲಕ ಗುರುತಿಸುತ್ತಾ, "ಈ ಕಾಲಮಾನದಲ್ಲಿ ಭಾರತ ದೇಶದಲ್ಲಿ ಹಬ್ಬುತ್ತಿದ್ದ ವೈಜ್ಞಾನಿಕ ಬೆಳವಣಿಗೆ ತತ್ತ್ವಪದಗಳ ಆಲೋಚನೆಯನ್ನು ತುಂಬಾ ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಆವರಿಸಿಕೊಂಡಿದೆ. ಶಿಶುನಾಳ ಶರೀಫರಂತಹ ಕವಿಗಳಲ್ಲಿ ವೈಜ್ಞಾನಿಕ ಬೆಳವಣಿಗೆಯ ಚಿತ್ರಗಳು ಬಳಕೆಯಾಗಿವೆ. ವಿಜ್ಞಾನಾತ್ಮಕ ದೈವವಾದ (physico-thelogy) ನಮ್ಮ ಸಂಸ್ಕೃತಿಯ ಭಾಗವಾಗುತ್ತಿರುವ ಕ್ರಿಯೆಯನ್ನು ಅವರ ಅನೇಕ ಪದಗಳಲ್ಲಿ ಕಾಣಬಹುದು. ಪಾರಂಪರಿಕ ಜ್ಞಾನವಾಹಿನಿಗಳೊಂದಿಗೆ ಹೊಸ ಸತ್ವವನ್ನು ಕ್ರಿಯಾಶೀಲಗೊಳಿಸುವ ಕಾರಣಕ್ಕಾಗಿ ಬಳಸುವ ಈ ಸಾಧನೆ ನವೋದಯ ಕಾವ್ಯದ ತಾತ್ವಿಕ ಚಿಂತನೆಗೆ ಸ್ಪಷ್ಟ ಹಿನ್ನೆಲೆಯನ್ನು ಒದಗಿಸುತ್ತದೆ. ಪ್ರಕೃತಿಯ ಎಲ್ಲ ವಿನ್ಯಾಸಗಳು ದೇವರ ಜ್ಞಾನದ ಬೇರೆ ಬೇರೆ ನೆಲೆಗಳ ಅನ್ವೇಷಣೆಯ ಕೇಂದ್ರವೆಂದು ಭಾವಿಸುವ ಈ ನಿಲುವು ಕನ್ನಡ ಕಾವ್ಯಮಾರ್ಗದ ಅವಸ್ಥಾಂತರಗಳ ಸರಣಿಯೊಂದಿಗೆ ನಿಕಟ ಸಂಬಂಧವನ್ನು ಪಡೆದುಕೊಳ್ಳುತ್ತದೆ ..... ವೈಜ್ಞಾನಿಕ ಬೆಳವಣಿಗೆಯ ಎದುರುಗಡೆ ಮನುಷ್ಯನ ಎಣೆಯಿಲ್ಲದ ನಿರಂತರ ಸಮಸ್ಯೆಗಳನ್ನು ಬಿತ್ತರಿಸುವ ಧೋರಣೆಗೆ ಈ ಪದಗಳು ಭಿತ್ತಿಯನ್ನು ಒದಗಿಸುತ್ತವೆ. ಇದು ಆಧುನಿಕ ವಿಜ್ಞಾನದ ಸಂಶೋಧನೆಗಳು ಕನ್ನಡ ಗ್ರಾಮೀಣ ಪರಿಸರದಲ್ಲಿ ವಿಸ್ಮಯವಾಗಿ, ನಾಟಕೀಯವಾಗಿ ಕಾಣಿಸಿಕೊಂಡ ಸಂದರ್ಭದ ದಾಖಲೆಯೂ ಆಗಿದೆ"[೫] ಎಂದು ಅತ್ಯಂತ ಅರ್ಥಪೂರ್ಣವಾಗಿ ವಿಶ್ಲೇಷಿಸುತ್ತಾರೆ.

೬.೪.೬ ಅನುಭಾವ ಕಾವ್ಯದ ಅಭಿವ್ಯಕ್ತಿ ವಿಧಾನದ ಸಂಕೀರ್ಣ ಸ್ವರೂಪ

ಕಾವ್ಯದ ರೂಪ ಸಂಬಂಧಿತ ವಿಷಯದಲ್ಲಿ ಅನುಭಾವ ಕವಿತೆಗಳು ಪರಂಪರೆಯಿಂದ ಅನೇಕ ಪರಿಕರಗಳನ್ನು ಪಡೆದುಕೊಂಡಿವೆ. ಛಂದೋವಿಧಾನ, ಸಂಗೀತಾತ್ಮಕತೆ, ಗೇಯಪ್ರಧಾನತೆ ಮತ್ತು ಚಿತ್ರಕ ಶಕ್ತಿಗಳು, ಇವೇ ಮೊದಲಾದವು ಇಂಥ ಸಾಂಪ್ರದಾಯಕ ಸಂಗತಿಗಳು. ಆದರೆ, ಈ ಕಾಲದ ಅನುಭಾವಿ ರಚನೆಗಳು ಸಮಕಾಲೀನ ಜ್ಞಾನವಿಜ್ಞಾನದ ಹಾಗೂ ತಂತ್ರಜ್ಞಾನದ ಪರಿಭಾಷೆಗಳು ಮತ್ತು ಪರಿಕಲ್ಪನೆಗಳನ್ನೂ ಸಹ ಅನುಭಾವದ ಅನುಭವ ಅಥವಾ ಅನುಭೂತಿಯ ಅಭಿವ್ಯಕ್ತಿಯ ಪರಿಕರಗಳಾಗಿ ಬಳಸಿರುವ ಕ್ರಮ ಅತ್ಯಂತ ಆಶ್ಚರ್ಯಕರವಾದದ್ದು. ಇದು ನಿಜಕ್ಕೂ ಕಾವ್ಯಭಾಷೆ ಹಾಗೂ ಸಂಸ್ಕೃತಿಯ ಚಲನಶೀಲತೆ ನಡುವೆ ಏರ್ಪಡುವ ಸಂಬಂಧದ ಸ್ವರೂಪ ಕುರಿತ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಹೀಗಾಗಿ, ಕನ್ನಡ ಅನುಭಾವ ಕಾವ್ಯದ ಭಾಷೆ ಹಾಗೂ ಅಭಿವ್ಯಕ್ತಿ ವಿನ್ಯಾಸಗಳು ಕನ್ನಡ ಸಾಹಿತ್ಯದ ವಿಶಿಷ್ಟವಾದ ಚಹರೆಗಳೇ ಆಗಿವೆ. ಇವು ನಿರ್ದಿಷ್ಟ ಧರ್ಮ, ಮತ ಹಾಗೂ ಪಂಥದ ಪರಿಭಾಷೆಗಳನ್ನು ಒಳಗೊಂಡಿರುವ ಸ್ವರೂಪದಲ್ಲೇ, ಅಭಿವ್ಯಕ್ತಿ ವಿಧಾನದ ವಿಷಯದಲ್ಲಿ ಕೂಡಾ ಸಮಕಾಲೀನ ಸಂದರ್ಭದ ಆಧುನಿಕ ವಿಚಾರಗಳೊಂದಿಗೆ ಸಾಧಿಸಿರುವ ಸಂಕರಶೀಲತೆ ಅತ್ಯಂತ ಅನನ್ಯವಾದದ್ದು ಎನ್ನುವುದು ಕಿ.ರಂ. ಅವರ ಬಹುಮುಖ್ಯವಾದ ವಿಶ್ಲೇಷಣೆಯಾಗಿದೆ.

ಕಿ.ರಂ. ಅವರು, ಈ ವಿಚಾರದಲ್ಲಿ ಶರೀಫನ ರಚನೆಗಳು ಆಧುನಿಕ ಕನ್ನಡ ಕಾವ್ಯ ಪರಂಪರೆಯ ಪೂರ್ವಪೀಠಿಕೆಯನ್ನು ಅತ್ಯಂತ ಗಟ್ಟಿಯಾಗಿ ನಿರ್ಮಿಸಿದವು ಎಂದು ಹೇಳುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಅವರು, ಶರೀಫನ 'ಸ್ನೇಹ ಮಾಡಬೇಕಿಂಥವಳ' ರಚನೆಯಲ್ಲಿನ ಭಾವಗೀತಾತ್ಮಕತೆಯ ಉಜ್ವಲತೆಯಲ್ಲಿ ಆಧುನಿಕ ಭಾವಗೀತೆಗಳ ಉಗಮದ ಮೂಲವಿದೆ ಎನ್ನುತ್ತಾರೆ. ಲೈಂಗಿಕ ಪ್ರತೀಕಗಳನ್ನು ಯೌಗಿಕ ಸಾಧನೆಯ ಪ್ರತೀಕಗಳಾಗಿ ಬಳಸಿರುವುದರಲ್ಲಿ ಶರೀಫನೇ ಮೊದಲಿಗ ಮತ್ತು ಅನನ್ಯನಾದ ಕವಿ ಎನ್ನುವುದು ಕಿ.ರಂ ಅವರ ನಿಲುವು. ಆತನ 'ಹಾದರ ಮಾಡಿದೆನೇ ನಾನೊಂದು ಹಾದರ ಮಾಡಿದೆನೆ' ಹಾಗೂ 'ಎಲ್ಲರಂಥನವನಲ್ಲ ನನ್ನ ಗಂಡ' ರಚನೆಗಳ ರತಿ ಪ್ರತಿಮಾತ್ಮಕ ಸ್ವರೂಪ ಕುರಿತು "ಶರೀಫನ ಈ ರಚನೆಗಳು ಲೈಂಗಿಕ ಪ್ರತೀಕಗಳನ್ನು ಅದರ ಎಲ್ಲ ಸಾಧ್ಯತೆಗಳೊಂದಿಗೆ ಗ್ರಹಿಸುವ ರೀತಿ ಗಮನಾರ್ಹವಾಗಿದೆ. ಇವು ಲೋಕಾನುಭವವನ್ನು ಮತ್ತು ವೈಯಕ್ತಿಕ ಅನುಭವಗಳನ್ನು ಸ್ವಕೀಯ ಶೋಧನೆಗೆ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ರೀತಿ ಕನ್ನಡ ಸಾಹಿತ್ಯದ ಈ ಶತಮಾನದ ಮುಖ್ಯ ಸತ್ವಗಳಲ್ಲಿ ಒಂದಾಗಿದೆ. ಶರೀಫ ತನ್ನ ಜೀವಂತ ಸತ್ವವನ್ನು ಇಪ್ಪತ್ತನೆಯ ಶತಮಾನದ ಕಾವ್ಯಕ್ಕೆ ಹರಿಸುವುದಕ್ಕೆ ತಕ್ಕ ಹದವನ್ನು ನಿರ್ಮಾಣ ಮಾಡಿರುವುದನ್ನು ಇಂಥ ರಚನೆಗಳು ಖಚಿತಪಡಿಸುತ್ತವೆ"[೬] ಎಂದು ಪ್ರತಿಪಾದಿಸುತ್ತಾರೆ.

೬.೪.೭ ಅನುಭಾವ ಕಾವ್ಯದ ಪ್ರತಿಭಟನಾ ಸ್ವರೂಪ

ಸಮಕಾಲೀನ ಸಂದರ್ಭದ ಜನವಿರೋಧಿ ಕ್ರಮಗಳು ಹಾಗೂ ದಬ್ಬಾಳಿಕೆಯ ರೂಪಗಳ ವಿರುದ್ಧ ಖಚಿತ ಪ್ರತಿಭಟನೆಯ ಧ್ವನಿಗಳು ಕನ್ನಡದ ಈ ಅನುಭಾವ ಕಾವ್ಯದ ರಚನೆಗಳಲ್ಲಿವೆ. ಈ ಅರ್ಥದಲ್ಲಿ ಕನ್ನಡ ಅನುಭಾವ ಕಾವ್ಯಕ್ಕೆ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಪ್ರತಿಭಟನಾತ್ಮಕ ಆಯಾಮವಿದೆ. ಇದೊಂದು ಬಹುಮುಖ್ಯ ವಿಚಾರ ಎನ್ನುತ್ತಾರೆ. ಕಿ.ರಂ. ಅವರ ಈ ಗ್ರಹಿಕೆಯು ಕೇವಲ ಅನುಭಾವ ಕಾವ್ಯದ ಸಾಹಿತ್ಯಕ ಸ್ವರೂಪದ ವಿಶಿಷ್ಟವಾದ ಸ್ತರಗಳನ್ನಷ್ಟೇ ಹೇಳುವುದಿಲ್ಲ. ಏಕೆಂದರೆ, ಇಂಥ ಅರ್ಥಪೂರ್ಣವಾದ ಒಳನೋಟಗಳನ್ನು ಕೊಡುವ ಮೂಲಕವೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ವಿಕಾಸಗೊಳ್ಳುವ ಪರಿಯನ್ನೂ ಸ್ಪಷ್ಟೀಕರಿಸುತ್ತಾರೆ. ಈ ದೃಷ್ಟಿಯಿಂದ ಕೂಡಾ ಕಿ.ರಂ. ಅವರಿಗೆ ಶರೀಫನೇ ಶ್ರೇಷ್ಠ ನಿದರ್ಶನ. ಅಲ್ಲದೆ, ಇದು ಎಲ್ಲ ಅನುಭಾವಿ ಕವಿಗಳಲ್ಲೂ ಕೂಡಾ ಬೇರೆ ಬೇರೆ ರೂಪಗಳಲ್ಲಿ ವ್ಯಕ್ತವಾಗುವ ವಿಚಾರವೂ ಸಹ ಆಗಿದೆ ಎಂದು ವಿವರಿಸುತ್ತಾರೆ. ಇದನ್ನು ಕಿ.ರಂ. ಅವರು ಈ ಅನುಭಾವಿಗಳು ಚರಿತ್ರೆಯ ಸ್ವರೂಪವನ್ನು ಗಮನಿಸಿರುವ ಹಾಗೂ ಅದಕ್ಕೆ ಪ್ರತಿಕ್ರಿಯಿಸಿರುವ ಪ್ರಾಮಾಣಿಕತೆಯ ಸ್ವರೂಪದಲ್ಲಿ ಗುರುತಿಸುತ್ತಾರೆ. ಆದರೆ ಅವರು ಪರ್ಯಾಯಗಳನ್ನು ಹುಡುಕುವುದಕ್ಕಿಂತ ಅದರ ಅವಸ್ಥೆಯನ್ನು ಪರಿಣಾಮಕಾರಿಯಾಗಿ ನಿರೂಪಿಸಿರುವುದು ಸಾಂಸ್ಕೃತಿಕವಾಗಿ ಮುಖ್ಯ ವಿಚಾರ ಎಂದು ವಿಶ್ಲೇಷಿಸುತ್ತಾರೆ. ಇದನ್ನು ಅವರ, "ಈ ಬಗೆಯ ಕವಿಗಳು ಜನ ಸಮುದಾಯದ ಪ್ರತಿಭಟನೆಯ ಸ್ವರೂಪವನ್ನು ಗಮನಿಸಿ ಅದಕ್ಕೆ ಮಾತು ಕೊಡುವವರೂ ಆಗಿ ಪರಿಣಮಿಸಿದ್ದಾರೆ. ವ್ಯಾಪಾರ ವಹಿವಾಟು, ಗ್ರಾಮಾಡಳಿತ, ರಾಜಕೀಯ ಕೋಲಾಹಲ, ಗಣ್ಯವ್ಯಕ್ತಿಗಳು ಮತ್ತು ಭೂ-ಯಜಮಾನರಿಂದ ಆಗುತ್ತಿದ್ದ ಸುಲಿಗೆ, ಕ್ರೂರ ಶಾಸನಗಳು ಅಂದಿನ ಸಮುದಾಯವನ್ನು ತಲ್ಲಣಗೊಳಿಸಿವೆ. ಏಕೆಂದರೆ ಈ ಅವಧಿ ಸಾಮ್ರಾಜ್ಯಶಾಹಿಯ ಚಾಚುನಾಲಿಗೆ ನಮ್ಮಸತ್ವಗಳನ್ನು ಬರಿದು ಮಾಡಲು ಸನ್ನದ್ಧವಾಗುತ್ತಿದ್ದ ಕಾಲ. ಅದು ನಮ್ಮ ಭೌತಿಕ ಮತ್ತು ಮಾನಸಿಕ ಮೂಲಚೂಲಗಳನ್ನೇ ಆವರಿಸುವ, ನಿಂತ ನೆಲೆಯೇ ಪರಕೀಯವಾಗುತ್ತಿದ್ದ ಸ್ಥಿತಿ ಕೂಡ. ರಾಜಪ್ರಭುತ್ವ ಮತ್ತು ಸಾಮ್ರಾಜ್ಯಶಾಹಿಗಳ ಒಳಒಪ್ಪಂದ ಮತ್ತು ದೇಶೀಯ ಸತ್ವದ ಉಳಿವಿಗಾಗಿ ತಮ್ಮ ಪರಿಮಿತ ಸಾಧನಗಳ ಮೂಲಕ ಹೋರಾಡಿ ಸಮುದಾಯದ ಒಳದನಿಗೆ ದನಿನೀಡುವ ಕೆಲಸವನ್ನು ಈ ಕವಿಗಳು ಮಾಡಿದರು ... ಸಾಮ್ರಾಜ್ಯಶಾಹಿ ಆರ್ಥಿಕ ಯೋಜನೆಗಳು ಪಟ್ಟಣಗಳ ಬೆಳೆಸುವಿಕೆಯ ಕಡೆಗೆ ಹೊರಟು, ಗ್ರಾಮೀಣ ಬದುಕಿನ ವಿಘಟನೆಗೆ ದಾರಿ ಮಾಡಿಕೊಟ್ಟವು. ಪಟ್ಟಣದ ಬದುಕು ಮತ್ತು ಗ್ರಾಮೀಣ ಸ್ಥಿತಿಗತಿಗಳು ವಿಲಕ್ಷಣ ಸ್ಥಿತಿಯನ್ನು ಸೃಷ್ಟಿಸಿ ಮೈ-ಮನಸ್ಸುಗಳ ಜಾಗೃತ ಅವಸ್ಥೆಯೇ ತೀವ್ರ ತಳಮಳಕ್ಕೆ ಗುರಿಯಾಯಿತು"[೭] ಎನ್ನುವ ವಿಶ್ಲೇಷಣೆ ಅತ್ಯಂತ ಪರಿಣಾಮಕಾರಿಯಾಗಿ ವಿವರಿಸುತ್ತದೆ.

೬.೪.೮ ಹೊಸ ಸಾಹಿತ್ಯ ವಿಮರ್ಶಾ ವಿಧಾನದ ಅಗತ್ಯತೆ

ಕನ್ನಡ ಅನುಭಾವ ಸಾಹಿತ್ಯ ಇಂಥ ವಿಶಿಷ್ಟವಾದ ತಾತ್ವಿಕ ಸ್ವರೂಪದಿಂದ ಕೂಡಿದೆ. ಇದು ಕೇವಲ ಅನುಭಾವಿಕ ಆಯಾಮವನ್ನು ಮಾತ್ರವಲ್ಲದೆ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಪ್ರಶ್ನೆಗಳ ಆಯಾಮಗಳನ್ನು ಸಹ ಹೊಂದಿದೆ. ಆದರೆ ಇಂದಿನ ಕಾವ್ಯಮೀಮಾಂಸೆ ಮತ್ತು ಪ್ರಧಾನ ಧಾರೆಯ ಸಾಹಿತ್ಯ ವಿಮರ್ಶೆಗಳು ಸಾಹಿತ್ಯ ಚಿಂತನೆ, ಪಠ್ಯ ವಿಶ್ಲೇಷಣೆ ಹಾಗೂ ಮೌಲ್ಯಮಾಪನಗಳಂಥ ತಮ್ಮ ನಿರ್ದಿಷ್ಟ ಕಾರ್ಯ ಚೌಕಟ್ಟಿನಿಂದಾಚೆಗೆ ಅರ್ಥಪೂರ್ಣವಾದ ಯಾವುದೇ ಹೊರಚಾಚುಗಳನ್ನು ಹೊಂದಿಲ್ಲ. ಹೀಗಾಗಿ, ಇಂಥ ಸಂಕೀರ್ಣ ಸ್ವರೂಪದ ಹಾಗೂ ಬಹುರೂಪಿ ಆಯಾಮಗಳ ಸಾಂಸ್ಕೃತಿಕ ಪಠ್ಯಗಳ ಅನುಸಂಧಾನಕ್ಕೆ ಸಂಶ್ಲೇಷಣಾತ್ಮಕವಾದ ಹೊಸ ವಿಮರ್ಶಾ ವಿಧಾನವೊಂದನ್ನು ಕಟ್ಟಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ. ಕಿ.ರಂ ಇದರ ಸ್ವರೂಪವನ್ನು ಕುರಿತು ಆಲೋಚಿಸುತ್ತಾ, "ಭಾಷೆ ಸಂಸ್ಕೃತಿ ಮತ್ತು ಪರಂಪರೆಯ ವಾಹಕ. ಅಲ್ಲದೆ ಈ ರಚನೆಗಳು ಕನ್ನಡ ಸಂಸ್ಕೃತಿಯ ಸಂದರ್ಭದೊಂದಿಗೆ ಅಭಿನ್ನವಾದ ಸಂಬಂಧವನ್ನು ಪಡೆದಿವೆಯೆನ್ನುವುದು ಸ್ವಯಂಸಿದ್ಧ. ಈ ಹೊತ್ತಿನ ವಿಮರ್ಶೆಯ ಮಾನದಂಡಗಳನ್ನು ಸ್ಥೂಲರೂಪದಲ್ಲಿ ಈ ಧ್ಯಾನಶೀಲ ಅಭಿವ್ಯಕ್ತಿಗಳ ಮೇಲೆ ಪ್ರಯೋಗಿಸಿದರೆ, ಇಲ್ಲಿ ಅನೇಕ ವಿಕಲ್ಪಿತ ವಿವರಣೆಗಳು ದೊರೆಯಬಹುದು. ಹೀಗಾಗಿ ನವೋದಯಪೂರ್ವದ ಕನ್ನಡ ಸಂಸ್ಕೃತಿಯ ಸಮಸ್ಯೆಗಳು ಇಲ್ಲಿ ಪ್ರಮುಖವಾಗಿ ಪ್ರಕಟಗೊಂಡಿವೆ"[೮] ಎಂದು ಹೇಳುವ ಮಾತುಗಳಲ್ಲಿ ಕಿ.ರಂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಅಗತ್ಯದ ಬಗ್ಗೆ ಖಚಿತವಾಗಿ ಪ್ರಸ್ತಾಪಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಅವರ ಈ ಲೇಖನವು ಚಾರಿತ್ರಿಕವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಅತ್ಯಂತ ಮಹತ್ವಪೂರ್ಣವಾದ ಬರಹವಾಗಿದೆ. ಏಕೆಂದರೆ, ಈ ಲೇಖನ ರಚನೆಯಾದ ಕಾಲಘಟ್ಟದ ನಂತರದಿಂದ ಕನ್ನಡ ಅನುಭಾವ ಸಾಹಿತ್ಯವನ್ನು ಅಧ್ಯಯನ ಮಾಡುವ, ಅನುಸಂಧಾನ ಮಾಡುವ ಕ್ರಮಗಳಲ್ಲಿ ಅರ್ಥಪೂರ್ಣವಾದ ಸಾಕಷ್ಟು ಬೆಳವಣಿಗೆಗಳಾದವು. ಅಷ್ಟೇ ಅಲ್ಲದೆ, ಅನುಭಾವ ಸಾಹಿತ್ಯದ ವಿಭಿನ್ನ ರೂಪಗಳನ್ನು ಕುರಿತ ವ್ಯಾಪಕವಾದ ಅಧ್ಯಯನಗಳಿಗೆ ಕೂಡಾ ಈ ಲೇಖನ ಗಾಢವಾದ ಪ್ರೇರಣೆಗಳನ್ನು ನೀಡಿತು. ಈ ಒಟ್ಟಾರೆ ವಿದ್ಯಮಾನದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ವ್ಯಾಪಕವಾದ ಸ್ವರೂಪದಲ್ಲಿ, ಅರ್ಥಪೂರ್ಣವಾದ ಕ್ರಮಗಳಲ್ಲಿ ಬೆಳವಣಿಗೆ ಹೊಂದಿದವು. ಕನ್ನಡ ಅನುಭಾವ ಸಾಹಿತ್ಯದ ಸ್ವರೂಪ ಕುರಿತು ಎಚ್.ಎಸ್. ಶಿವಪ್ರಕಾಶ ಅವರ 'ಎಲ್ಲ ಜಾತಿಯ ಮರಗಳ ಕಾಡು; 'ತತ್ವಪದಕಾರರು' ('ಮೊದಲ ಕಟ್ಟಿನ ಗದ್ಯ',೧೯೯೫) ಮತ್ತು ಲಕ್ಷ್ಮೀಪತಿ ಕೋಲಾರ ಅವರ 'ತತ್ವಪದಕಾರರ ನಿರ್ವಸಾಹತೀಕರಣ ಚಿಂತನೆ' (೨೦೦೧) ಬರಹಗಳನ್ನು ಗಮನಿಸಿದರೆ ಕಿ.ರಂ. ಅವರ ಈ ಲೇಖನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವಿಸ್ತರಣಾ ಕ್ರಿಯೆಯಲ್ಲಿ ವಹಿಸಿರುವ ಅರ್ಥಪೂರ್ಣವಾದ ಪ್ರಭಾವದ ಸ್ವರೂಪ ಸ್ಪಷ್ಟವಾಗುತ್ತದೆ.

೬.೫ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ನೆಲೆಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳ ಸ್ವರೂಪವನ್ನು ಮುಖ್ಯವಾದ ಎರಡು ನೆಲೆಗಳಲ್ಲಿ ಗುರುತಿಸಬಹುದು. ಅವುಗಳಲ್ಲಿ, ಜಾನಪದ ಸಾಹಿತ್ಯವನ್ನು ಹೀಗೆ ಹೊಸದಾಗಿ ಅರ್ಥೈಸುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಯ ಸ್ವರೂಪ ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸುವುದು ಇಂಥ ಒಂದು ನೆಲೆಯಾಗಿದೆ. ಸಾಹಿತ್ಯೇತರವೆಂದು ನಿರಾಕರಿಸಲಾಗಿದ್ದ ಅಭಿವ್ಯಕ್ತಿ ರೂಪಗಳನ್ನು, ಸಾಹಿತ್ಯಕ ಪಠ್ಯಗಳಿಗೆ ಸಮಾನವೆಂದು ಪರಿಗಣಿಸುವ ಮೂಲಕ, ಕನ್ನಡ ಸಾಹಿತ್ಯ ಪರಂಪರೆಗೆ ಹೊಸಧಾರೆಗಳನ್ನು ಸೇರಿಸುವುದು ಇಂಥ ಇನ್ನೊಂದು ನೆಲೆಯಾಗಿದೆ. ತತ್ವಪದಗಳು ಮತ್ತು ಸೂಫಿ ಸಾಹಿತ್ಯ ರಚನೆಗಳನ್ನು, ಹೀಗೆ ಕನ್ನಡದ ಮಹತ್ವದ ಪಠ್ಯಗಳೆಂದು ಪರಿಗಣಿಸುವ ಮೂಲಕ, ಕನ್ನಡ ಸಾಹಿತ್ಯ ಪರಂಪರೆಗೆ ಅನನ್ಯವಾದ ಹೊಸಧಾರೆಗಳನ್ನು ಜೋಡಿಸಲಾಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದ ಸಾಹಿತ್ಯಾನುಸಂಧಾನದ ಭಾಗವಾಗಿ ಈ ಎರಡೂ ಕಾರ್ಯಮಾದರಿಗಳನ್ನು ಅತ್ಯಂತ ವ್ಯಾಪಕವಾದ ಪ್ರಮಾಣದಲ್ಲಿ ಹಾಗೂ ಅರ್ಥಪೂರ್ಣವಾದ ಕ್ರಮಗಳಲ್ಲಿ ನಿರ್ವಹಿಸುವ ವಿಫುಲವಾದ ಅವಕಾಶ ಮತ್ತು ಸಾಧ್ಯತೆಗಳಿವೆ. ಇವು, ಕೇವಲ ಸಾಹಿತ್ಯಕ ಆಯಾಮಗಳ ದೃಷ್ಟಿಯಿಂದ ಮಾತ್ರವಲ್ಲದೆ, ಸಾಂಸ್ಕೃತಿಕ ಆಯಾಮಗಳ ದೃಷ್ಟಿಯಿಂದಲೂ ಅತ್ಯಂತ ಮಹತ್ವಪೂರ್ಣವಾದ ಕಾರ್ಯಮಾದರಿಗಳು. ಅಲ್ಲದೆ, ಅತ್ಯಂತ ಸಂಕೀರ್ಣವಾದ ಹೊಣೆಗಾರಿಕೆ ಸ್ವರೂಪದ ಕಾರ್ಯಮಾದರಿಗಳೂ ಕೂಡಾ ಆಗಿವೆ. ಆದ್ದರಿಂದ ಇಂಥ ಕಠಿಣ ಸವಾಲಿನ ಕಾರ್ಯಕ್ಕೆ ಬದಲಾಗಿ, ಬಹಳಷ್ಟು ಸಂದರ್ಭಗಳಲ್ಲಿ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ಹೊಸ ಅಧ್ಯಯನ ಪರಿಕರಗಳು ಹಾಗೂ ವಿಧಾನಗಳ ಬೆಳಕಿನಲ್ಲಿ ಅರ್ಥೈಸುವ ಕೆಲಸವನ್ನು ಮಾತ್ರ ಮಾಡಲಾಗಿರುತ್ತದೆ. ಹೀಗಾಗಿ, ಇವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳಾಗಿ ಬೆಳೆಯದೆ ಕೇವಲ ಸಾಹಿತ್ಯಕ ನೆಲೆಗಳ ಹಂತದಲ್ಲಿ ಮಾತ್ರ ಉಳಿದಿರುತ್ತವೆ. ಸಾಂಸ್ಕೃತಿಕ ಹೊಣೆಗಾರಿಕೆ ಸ್ವರೂಪದ ಕಾರ್ಯಮಾದರಿಗಳು ಅಧ್ಯಯನ ವಿಧಾನದಲ್ಲಿ ಮುನ್ನೆಲೆಗೆ ಬರುವ ಮೂಲಕ ಈ ನೆಲೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯವಾದ ಆಯಾಮಗಳಾಗಿ ವಿಕಾಸಗೊಳ್ಳುವ ಅವಕಾಶ ಮತ್ತು ಸಾಧ್ಯತೆ ಕೂಡಾ ಇದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ನೆಲೆಗಳನ್ನು ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳಲ್ಲಿ ಪ್ರತಿಫಲಿತವಾಗಿರುವ ಅಥವಾ ಪ್ರತಿನಿಧಿತವಾಗಿರುವ 'ಚರಿತ್ರೆ' ಹಾಗೂ 'ಪುರಾಣ ಪ್ರಜ್ಞೆ' ಯ ಸ್ವರೂಪ ಕುರಿತ ಅನುಸಂಧಾನ ವಿಧಾನದ ಫಲಿತಗಳು ಎಂದು ಗುರುತಿಸಬಹುದು.

೬.೫.೧ ಸಾಹಿತ್ಯ, ಚರಿತ್ರೆ ಮತ್ತು ಪುರಾಣಗಳ ಸಂಬಂಧಾಂತರಗಳ ಸಂಕೀರ್ಣ ಸ್ವರೂಪ

ಸಾಹಿತ್ಯ, ಚರಿತ್ರೆ ಮತ್ತು ಪುರಾಣಗಳ ಸಂಬಂಧವು ಹಲವು ಸ್ತರಗಳಿಂದ ಕೂಡಿರುವ ಒಂದು ಸಂಕೀರ್ಣ ಸ್ಥಿತಿ. ಕನ್ನಡ ಸಾಹಿತ್ಯದಲ್ಲಿ ಆರಂಭಿಕ ಹಂತದಿಂದ ಆಧುನಿಕ ಹಂತದವರೆಗೂ, ಈ ಮೂರೂ ಜ್ಞಾನಶಿಸ್ತುಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ವಿವಿಧ ಪ್ರಮಾಣ ಹಾಗೂ ಸ್ವರೂಪದಲ್ಲಿ ಕೊಡುಕೊಳ್ಳುವಿಕೆ ನಡೆಸಿವೆ. ಈ ಕ್ರಿಯೆ ದ್ವಂದ್ವಾತ್ಮಕವಾಗಿದೆ, ಸಂಘರ್ಷಾತ್ಮಕವಾಗಿದೆ ಮತ್ತು ಸಂಕೀರ್ಣತೆಯಿಂದ ಕೂಡಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಇದರ ವಿವಿಧ ವಿನ್ಯಾಸಗಳನ್ನು ಕುರಿತು ಅಧ್ಯಯನ ಮಾಡಿರುವ ಕ್ರಮವನ್ನು ಇಲ್ಲಿ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ನೆಲೆ ಎಂದು ಭಾವಿಸಿಕೊಳ್ಳಲಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಕನ್ನಡದ ಲೇಖಕರು, ಅವರು ಆಧುನಿಕ ಪೂರ್ವದವರಾಗಿರಲೀ ಅಥವಾ ಆಧುನಿಕ ಕಾಲದವರಾಗಿರಲೀ, ಚರಿತ್ರೆ ಮತ್ತು ಪುರಾಣಗಳನ್ನು ತಮ್ಮ ಸಮಕಾಲೀನ ಆಶೋತ್ತರಗಳ ಸಾಧನಗಳಾಗಿ ಹೊಸ ಸ್ವರೂಪದಲ್ಲಿ ಪುನರ್‌ರಚಿಸಿಕೊಂಡಿರುವ ಕ್ರಮಗಳನ್ನು ಕುರಿತು ಆಲೋಚಿಸಿರುವುದನ್ನು ವಿವೇಚಿಸಲಾಗಿದೆ. ಚರಿತ್ರೆ ಮತ್ತು ಪುರಾಣಗಳನ್ನು ಹೊಸ ಕಾಲದ ಆಶಯಗಳ ರೂಪಗಳಾಗಿ ಕನ್ನಡ ಸೃಷ್ಟಿಶೀಲ ಪರಂಪರೆ ನಿರ್ವಚಿಸಿಕೊಂಡಿರುವ ಹಾಗೂ ನಿರೂಪಿಸಿರುವ ವಿನ್ಯಾಸಗಳನ್ನು ಮುಖ್ಯವಾಗಿ ಚರ್ಚಿಸಲಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯು ಪಂಪನ ಕಾವ್ಯಗಳು, ವಚನ ಸಾಹಿತ್ಯ, ನವೋದಯ ಸಾಹಿತ್ಯ, ನವ್ಯ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಕನ್ನಡ ಮಹಿಳಾ ಕಾವ್ಯ ಹಾಗೂ ಕಾರ್ನಾಡ್ ಮತ್ತು ಕಂಬಾರರ ಸಾಹಿತ್ಯವನ್ನು ಅನುಸಂಧಾನ ಮಾಡಿರುವ ಕ್ರಮಗಳಲ್ಲಿ ಇಂಥ ಮುಖ್ಯವಾದ ನೆಲೆಗಳಿವೆ.

ತಾತ್ವಿಕವಾಗಿ ಹೇಳುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಕನ್ನಡ ಚರಿತ್ರೆಯನ್ನಾಗಲೀ ಅಥವಾ ಪುರಾಣಗಳನ್ನಾಗಲೀ 'ಪಠ್ಯ'ವೆಂದು ಭಾವಿಸಿ ಅನುಸಂಧಾನ ಮಾಡಿಲ್ಲ. ಶಂಬಾ ಜೋಷಿಯವರ 'ಚರಿತ್ರೆ' ಮತ್ತು 'ಪುರಾಣ'ಗಳನ್ನು ಕುರಿತ ಅಧ್ಯಯನಗಳನ್ನು 'ಸಾಂಸ್ಕೃತಿಕ ಅಧ್ಯಯನದ' ನಿರ್ದಿಷ್ಟ ಚೌಕಟ್ಟಿನಿಂದಾಚೆಗೆ ಗ್ರಹಿಸಿದ್ದೇ ಆದಲ್ಲಿ, ಆಗ 'ಚರಿತ್ರೆ' ಮತ್ತು 'ಪುರಾಣ'ಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಶಿವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಮಹತ್ವದ ಪಠ್ಯಗಳಾಗಿ ಅನುಸಂಧಾನ ಮಾಡುವ ಅಪೂರ್ವವಾದ ಅವಕಾಶ ಹಾಗೂ ಸಾಧ್ಯತೆಗಳಿವೆ. ರಾಜಾರಾಂ ಹೆಗ್ಗಡೆ ಅವರ 'ಗತಕಥನ' (೨೦೦೫) ಮತ್ತು 'ಲೌಕಿಕ-ಅಲೌಕಿಕ' ಇಂಥ ಕೆಲವು ಪ್ರಯತ್ನಗಳೆನ್ನಬಹುದು. ಆದರೆ, ಈ ರೀತಿಯ ಅಧ್ಯಯನಗಳು ಕನ್ನಡ ಸಾಂಸ್ಕೃತಿಕ ಅಧ್ಯಯನದ ಒಂದು ಪ್ರಮುಖ ಧಾರೆಯಾಗಿರುವ ಚಾರಿತ್ರಿಕ ಪುನಾರಚನಾವಾದಿ ಅಥವಾ ಪುನರುತ್ಥಾನವಾದಿ ವಿಧಾನಕ್ಕೆ ಬದಲಾದ ಹೊಸ ಸ್ವರೂಪದ ಅಧ್ಯಯನಗಳಾಗಬೇಕಾದುದು ಬಹಳ ಮುಖ್ಯ. ಈ ದಿಸೆಯಲ್ಲಿ ಕೆ. ರಾಮಯ್ಯ ಅವರ 'ಸಿಂಧ್ ಮಾದಿಗರ

ಸಂಸ್ಕೃತಿ'(೧೯೯೩) ಮತ್ತು ಲಕ್ಷ್ಮೀಪತಿ ಕೋಲಾರ ಅವರ 'ಮಾಸ್ತಿಕರ ಸಂಸ್ಕೃತಿ' (೧೯೯೩) ಕೃತಿಯ ಅಧ್ಯಯನ ವಿಧಾನಗಳು ಒಂದು ಹೊಸ ರೀತಿಯ ದಾರಿಗಳನ್ನು ತೋರಿಸಿವೆ. ಇವುಗಳಲ್ಲಿ ಅನುಸರಿಸಿರುವ ಸಾಂಸ್ಕೃತಿಕ ಗತಿಶೀಲತೆಯೊಳಗಿನ ಸಂಘರ್ಷಾತ್ಮಕತೆಯ ಸ್ವರೂಪ ಕುರಿತ ಶೋಧನೆಯ ವಿಧಾನವು, 'ಚರಿತ್ರೆ' ಮತ್ತು 'ಪುರಾಣ'ಗಳನ್ನು ಪಠ್ಯಗಳಾಗಿ ಸಾಹಿತ್ಯಾನುಸಂಧಾನ ಮಾಡುವುದಕ್ಕೆ ಸಂಬಂಧಿಸಿದಂತೆ ಕಲ್ಪಿಸಿರುವ ಒಂದು ಅರ್ಥಪೂರ್ಣವಾದ ಕ್ರಮವಾಗಿದೆ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ 'ಚರಿತ್ರೆ' ಮತ್ತು 'ಪುರಾಣ'ಗಳಂಥ ಪಠ್ಯ ಅನುಸಂಧಾನಕ್ಕೆ ಇಂಥ ಹೊಸ ಅರ್ಥಪೂರ್ಣ ವಿಧಾನಗಳನ್ನು ಕಟ್ಟಿಕೊಳ್ಳುವುದು ಅತ್ಯಂತ ಅಗತ್ಯ ಕೂಡ.

೬.೬ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರವಾದಿ ಚಿಂತನೆಯ ಸಾಹಿತ್ಯಾನುಸಂಧಾನದ ಆಯಾಮಗಳು

ಈಗಾಗಲೇ ಚರ್ಚಿಸಿರುವಂತೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ನಿರ್ವಸಾಹತೀಕರಣ ವಿದ್ಯಮಾನವು ಕನ್ನಡ ಸಾಹಿತ್ಯ ಪರಂಪರೆಯನ್ನು ಹೊಸದಾಗಿ ಅರ್ಥೈಸುವ ಮತ್ತು ವ್ಯಾಖ್ಯಾನಿಸುವ ಮೂಲಕ ಅದರ ವ್ಯಾಪ್ತಿಯನ್ನು ಹಿಗ್ಗಿಸಿತು. ಹಾಗೆಯೇ, ಹೊಸ ಸಾಹಿತ್ಯ ರೂಪಗಳು ಅಥವಾ ಧಾರೆಗಳನ್ನು ಜೋಡಿಸುವ ಮೂಲಕ ಅದನ್ನು ವಿಸ್ತಾರಗೊಳಿಸಿತು. ಇವೆರಡೂ ಸಹ, ಬಹಳ ಮುಖ್ಯವಾಗಿ ದೇಶಿ ಸಂಸ್ಕೃತಿಯ ಹುಡುಕಾಟದ ಭಾಗವಾಗಿ ಆದಂಥ ಬೆಳವಣಿಗೆಗಳು. ಆದರೆ ಇದಕ್ಕೆ ಭಿನ್ನವಾಗಿ, ಎಂದರೆ ದೇಶಿ ಸಂಸ್ಕೃತಿ ಶೋಧದ ಹುಡುಕಾಟದ ಪ್ರಯತ್ನವನ್ನು ಬಿಟ್ಟುಕೊಡದೆ, ಹಾಗೆ ನೋಡಿದರೆ ಈ ಪ್ರಯತ್ನವನ್ನು ಇನ್ನಷ್ಟು ತೀವ್ರಗತಿಯಲ್ಲಿ ಹಾಗೂ ಭಿನ್ನವಾದ ಕ್ರಮದಲ್ಲಿ ನಿರ್ವಹಿಸುತ್ತಲೇ ನಮ್ಮ ಸದ್ಯದ ಸಂಸ್ಕೃತಿ ಸ್ವರೂಪವನ್ನು ರಕ್ಷಿಸಿಕೊಳ್ಳುವ ಹೊಸ ಸ್ವರೂಪದ ಸಾಂಸ್ಕೃತಿಕ ಹೊಣೆಗಾರಿಕೆಯು ತೊಂಭತ್ತರ ದಶಕದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮುನ್ನೆಲೆಗೆ ಬಂದಿತು. ಇದು ಕೇವಲ ಸಾಹಿತ್ಯಕವಾಗಿ ಮಾತ್ರ ಸಂದಿಗ್ಧವಾದ ಮತ್ತು ಸಮಸ್ಯಾತ್ಮಕವಾದ ಸನ್ನಿವೇಶವಷ್ಟೇ ಆಗಿರಲಿಲ್ಲ. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಎದುರಾದ ಬಹುದೊಡ್ಡ ಸವಾಲು ಅಥವಾ ಬಿಕ್ಕಟ್ಟು ಕೂಡಾ ಆಗಿತ್ತು.

ಹೀಗಾಗಿ, ತೊಂಭತ್ತರ ದಶಕದಿಂದ ಕರ್ನಾಟಕವೂ ಸೇರಿದಂತೆ ಇಡೀ ದೇಶದ ಸಮಾಜ ಹಾಗೂ ಸಂಸ್ಕೃತಿಗಳು ಪಾಶ್ಚಿಮಾತ್ಯ ನವವಸಾಹತುಶಾಹಿಯ ಪ್ರಭಾವಕ್ಕೆ ಮುಖಾಮುಖಿಯಾದವು. ಕನ್ನಡ ಬೌದ್ಧಿಕ ಜಗತ್ತು ಈ ಮುಖಾಮುಖಿಯನ್ನು ಅನೇಕ ಕ್ರಮಗಳಲ್ಲಿ ನಿರ್ವಹಿಸುವ ಪ್ರಯತ್ನ ಮಾಡತೊಡಗಿತು. ಕನ್ನಡ ಬೌದ್ಧಿಕ ಪ್ರಪಂಚದ ಬಹುಮುಖ್ಯ ರೂಪವಾದ ಕನ್ನಡ ಸಾಂಸ್ಕೃತಿಕ ವಿಮರ್ಶೆ ಈ ಹೊಸ ಸನ್ನಿವೇಶವನ್ನು ಅತ್ಯಂತ ಹುಷಾರಾಗಿ ಅನುಸಂಧಾನ ಮಾಡುವ ಪ್ರಯತ್ನಗಳನ್ನು ಮಾಡಲಾರಂಭಿಸಿತು. ಈ ಹಿಂದೆ ವಸಾಹತುಶಾಹಿ ಕಾಲಘಟ್ಟದಲ್ಲಿ ವಸಾಹತು ರಾಷ್ಟ್ರಗಳಲ್ಲಿ 'ಓರಿಯಂಟಲಿಸಂ' ಅನ್ನು ಪ್ರಚುರಗೊಳಿಸುವ ಮೂಲಕ ವಸಾಹತುಶಾಹಿ ರಾಷ್ಟ್ರಗಳು ತಮ್ಮ ಅಧಿಕಾರವನ್ನು ಸ್ಥಾಪಿಸುವ ಹಾಗೂ ಅದನ್ನು ಅಬಾಧಿತವಾಗಿ

ಮುಂದುವರಿಸುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದ್ದವು. ಅದೇ ಶಕ್ತಿಗಳು ಈಗ ನವವಸಾಹತುಶಾಹಿ ಕಾಲಘಟ್ಟದಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಆಧುನಿಕೋತ್ತರವಾದಿ ಚಿಂತನೆಯನ್ನು ಹರಡುವ ಮೂಲಕ ಆ ರಾಷ್ಟ್ರಗಳನ್ನು ಪರೋಕ್ಷವಾಗಿ ತಮ್ಮ ಅಧೀನಕ್ಕೆ ಒಳಪಡಿಸಿಕೊಳ್ಳುವ ಹಾಗೂ ಅದನ್ನು ಶಾಶ್ವತವಾಗಿ ನಿಯಂತ್ರಣದಲ್ಲಿಟ್ಟುಕೊಳ್ಳುವ ಕೆಲಸವನ್ನು ನಾಜೂಕಿನ ಹೊಸ ವಿಧಾನದಲ್ಲಿ ಮಾಡತೊಡಗಿದವು. ಈ ಹಿನ್ನೆಲೆಯ ಮೂಲಕ ನೋಡುವುದಾದರೆ, ಅನೇಕ ಪಾಶ್ಚಾತ್ಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳು ಬಂಡವಾಳಶಾಹಿ, ಸಾಮ್ರಾಜ್ಯಶಾಹಿ, ವಸಾಹತುಶಾಹಿ ಮತ್ತು ನವವಸಾಹತುಶಾಹಿಯ ರಾಜಕೀಯಾರ್ಥಿಕ ಆಳ್ವಿಕೆಯನ್ನು ನೆಲೆಗೊಳಿಸುವ ಕಾರ್ಯತಂತ್ರಾತ್ಮಕವಾದ ಸಾಂಸ್ಕೃತಿಕ ನೀತಿ ನಿರೂಪಣೆಗಳಾಗಿಯೇ ಪ್ರತಿಪಾದಿತವಾಗಿವೆ ಎನ್ನುವುದು ಚಾರಿತ್ರಿಕವಾದ ಸಂಗತಿಯಾಗಿದೆ. ಇದು ಈ ಕಾಲಘಟ್ಟದ ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಈಗಾಗಲೇ ಚೆನ್ನಾಗಿ ಮನದಟ್ಟಾಗಿದ್ದ ಸಂಗತಿಯೇ ಆಗಿತ್ತು. ಹೀಗಾಗಿಯೇ, ಕನ್ನಡದಲ್ಲಿ ಆಧುನಿಕೋತ್ತರ ಚಿಂತನೆಯನ್ನು ವಿಮರ್ಶಾತ್ಮಕವಾಗಿ ಸ್ವೀಕರಿಸುವ ವಿವೇಕ ವ್ಯಕ್ತವಾಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ಎಚ್ಚರ, ಇದೇ ಕಾಲಘಟ್ಟದ ಭಾರತದ ಪ್ರಖ್ಯಾತ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತಕರಾದ ಆಶಿಸ್‌ನಂದಿ ಅವರ ಆಧುನಿಕತಾ ಚಿಂತನೆಗೆ ಅಥವಾ ಆಧುನಿಕತೆಯ ವಿರೋಧಿ ಚಿಂತನೆಗೆ ಬಹುತೇಕ ವಿರುದ್ಧವಾದ ಗ್ರಹಿಕೆಯಾಗಿದೆ. ಒಂದರ್ಥದಲ್ಲಿ, ಸಾಹಿತ್ಯ ಮೀಮಾಂಸೆ ಸಂದರ್ಭದಲ್ಲಿ ಜಿ.ಎನ್. ದೇವಿ ಯಾವ ವಿಚಾರವನ್ನು ತಮ್ಮ 'ಆಫ್ಟರ್ ಅಮ್ನೇಶಿಯಾ' ಪರಿಕಲ್ಪನೆ ಮೂಲಕ ಹೇಳ ಹೊರಟರೋ, ಅದಕ್ಕಿಂತ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ವಿವೇಕವು ಸಾಕಷ್ಟು ವ್ಯಾಪಕವಾದ ಹಾಗೂ ಅರ್ಥಪೂರ್ಣವಾದ ಚಿಂತನೆಯಾಗಿದೆ. ಏಕೆಂದರೆ, ಈ ಎಚ್ಚರವು ಕೇವಲ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಿಗೆ ಸಂಬಂಧಿಸಿದ ಬೌದ್ಧಿಕ ಚಿಂತನೆ ಮಾತ್ರವಾಗಿರಲಿಲ್ಲ. ಬದಲಾಗಿ ಸಾಹಿತ್ಯ, ಸಂಸ್ಕೃತಿ, ಕಲೆ, ರಾಜಕಾರಣ, ಧರ್ಮ, ಆರ್ಥಿಕ ಪ್ರಶ್ನೆಗಳು ಮೊದಲಾದವುಗಳನ್ನು ಮಾನವನ ಬದುಕಿನ ಒಟ್ಟು ಸಂದರ್ಭದಲ್ಲಿನ ಬಹುಮುಖ್ಯವಾದ ಪ್ರಶ್ನೆಗಳಾಗಿ ಪರಿಭಾವಿಸಿದ ಆಲೋಚನೆಯಾಗಿತ್ತು. ಹೀಗಾಗಿಯೇ, ಆಶಿಸ್‌ನಂದಿ ಅವರನ್ನು ತಮ್ಮ 'ಗುರು' ಎಂದು ಗೌರವಿಸುತ್ತಲೇ, ಅವರ ಆಧುನಿಕತಾಚಿಂತನೆ ಅಥವಾ ಆಧುನಿಕತೆಯ ವಿರೋಧಿ ಚಿಂತನೆಯು ತೃತೀಯ ಜಗತ್ತಿನ ರಾಷ್ಟ್ರಗಳು ಮತ್ತು ಸಮಾಜಗಳಿಗೆ ಅಪಾಯಕಾರಿಯಾಗಬಹುದಾದ ಸಾಧ್ಯತೆ ಕುರಿತು ಡಿ.ಆರ್ ಮಾತನಾಡುವುದು ('ಸಾಹಿತ್ಯ ಕಥನ', ೧೯೯೬). ಬದಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಪಠ್ಯಗಳನ್ನು ಪರಿಭಾವಿಸಬೇಕಾದ ಕ್ರಮಗಳಲ್ಲೂ ಕೂಡಾ ಬದಲಾವಣೆಗಳಾಗಬೇಕಾದ ಅಗತ್ಯವನ್ನು ಕುರಿತು ಕಲ್ಗುಡಿ ಅವರು ಪ್ರತಿಪಾದಿಸುವುದು ('ಅನುಭಾವ ಸಾಹಿತ್ಯ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟದ'ದ ಮರು ಮುದ್ರಣದ ಮುನ್ನುಡಿ ೧೯೯೭).

ಈ ವಿದ್ಯಮಾನವು, ಪಾಶ್ಚಾತ್ಯ ಸಾಂಸ್ಕೃತಿಕ ಸಿದ್ಧಾಂತವೊಂದನ್ನು ಎಷ್ಟರಮಟ್ಟಿಗೆ ಮತ್ತು ಹೇಗೆ ಅನುಸಂಧಾನದ ಸಾಧನವಾಗಿ ಸ್ವೀಕರಿಸಬೇಕು ಎನ್ನುವುದನ್ನು ಕುರಿತು ತೊಂಭತ್ತರ ದಶಕದಲ್ಲಿ ಕನ್ನಡ

ಸಾಂಸ್ಕೃತಿಕ ವಿಮರ್ಶೆಯ ತಳೆದ ವಿಮರ್ಶಾತ್ಮಕ ಎಚ್ಚರವನ್ನು ತೋರಿಸುತ್ತದೆ. ಹಾಗೆಯೇ, ಪಾಶ್ಚಾತ್ಯ ವೈಚಾರಿಕ ಆಕೃತಿಯನ್ನು ಸಮಗ್ರವಾಗಿ ಸ್ವೀಕರಿಸುವ ಅಥವಾ ನಿರಾಕರಿಸುವ ಸರಳ ಧೋರಣೆಗೆ ಬದಲಾಗಿ, ಪರಿಷ್ಕಾರಾತ್ಮಕ ಸ್ವೀಕಾರ ಕ್ರಮವನ್ನು ರೂಪಿಸಿಕೊಂಡಿದೆ ಎನ್ನುವುದನ್ನು ರುಜುವಾತುಪಡಿಸುತ್ತದೆ.

ಈ ರೀತಿಯ ಪರಿಷ್ಕಾರಾತ್ಮಕ ಮತ್ತು ವಿಮರ್ಶಾತ್ಮಕ ಸ್ವೀಕಾರ ಕ್ರಮವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇನ್ನಿತರ ಆಯಾಮಗಳಿಗಿಂತ ಹೆಚ್ಚಾಗಿ ಅಥವಾ ಕರಾರುವಕ್ಕಾಗಿ ಹೇಳುವುದಾದರೆ, ಮೂಲಭೂತವಾಗಿ ಅದರ ಸಾಹಿತ್ಯಕ ಆಯಾಮಗಳನ್ನು ಮೊದಲು ವ್ಯಾಪಕವಾಗಿ ವಿಸ್ತರಿಸಿತು. ಕನ್ನಡ ಸಾಹಿತ್ಯ ಪರಂಪರೆಯ ಕ್ಷಿತಿಜವನ್ನು ಸಹ ಅಗಾಧವಾಗಿ ಹಿಗ್ಗಿಸಿತು. ಹೊಸ ಪಠ್ಯಗಳನ್ನು ಗುರುತಿಸಿತು. ಪಠ್ಯಗಳ ಹೊಸ ನೆಲೆಗಳನ್ನು ಶೋಧಿಸಿತು. ಸಾಹಿತ್ಯ ಕೃತಿಗಳು ಎನ್ನುವುದಕ್ಕಿಂತ ಕೇವಲ 'ಪಠ್ಯ' ಎನ್ನುವ ಪರಿಕಲ್ಪನೆಗೆ ಹೆಚ್ಚು ಗುರುತ್ವ ಬಂದಿತು. ಸಾಹಿತ್ಯೇತರ ಹಲವು ಅಭಿವ್ಯಕ್ತಿ ರೂಪಗಳು ಸಹ ಮಹತ್ವದ ಪಠ್ಯಗಳಾದವು. ಇವೂ ಕೂಡಾ ತಮ್ಮದೇ ಆದ ಬಹುದೊಡ್ಡ ಪರಂಪರೆ ಹೊಂದಿವೆ. ಭಾರತೀಯ ಮತ್ತು ಕರ್ನಾಟಕದ ಸಮಾಜಗಳ ಚಲನಶೀಲತೆಯ ಸ್ವರೂಪವನ್ನು ಅದರ ದ್ವಂದ್ವ ಹಾಗೂ ಸಂಕೀರ್ಣತೆಯ ವಿವಿಧ ಕೋನಗಳಲ್ಲಿ ಹಿಡಿಯುವ, ದಾಖಲಿಸುವ, ಪ್ರತೀಕೀಕರಿಸುವ ಮತ್ತು ಪ್ರತಿಮಿಸುವ ಬಹುದೊಡ್ಡ ಪ್ರಯತ್ನಗಳು ನಡೆದವು. ಇವೆಲ್ಲವುಗಳನ್ನು ದೂರತಳ್ಳಿ ಅಥವಾ ಕೀಳಾಗಿ ಕಂಡು ಕೇವಲ ಸಾಹಿತ್ಯ ರಚನೆಗಳನ್ನು ಮಾತ್ರವೇ 'ಶ್ರೇಷ್ಠ', 'ಗಂಭೀರ' ಹಾಗೂ 'ಕಲಾತ್ಮಕ' ಪಠ್ಯಗಳೆಂದು ಪರಿಭಾವಿಸುವ ಪ್ರತಿಷ್ಠಿತ ಧೋರಣೆಯನ್ನು ಕೈಬಿಡಲಾಯಿತು. ಮಾನವಾಭಿವ್ಯಕ್ತಿಯ ಹಲವು ರೂಪಗಳ ವಿವಿಧ ಬಗೆಯ ರಚನೆಗಳನ್ನು ಸಹ ಮಹತ್ವದ 'ಪಠ್ಯ'ಗಳೆಂದು ಭಾವಿಸಲಾಯಿತು. ಸಾಹಿತ್ಯವೂ ಸೇರಿದಂತೆ ಎಲ್ಲ ಅಭಿವ್ಯಕ್ತಿರೂಪಗಳ ರಚನೆಗಳನ್ನು 'ಸಾಂಸ್ಕೃತಿಕ ಪಠ್ಯ'ಗಳೆಂದು ಪರಿಗಣಿಸಲಾಯಿತು.

ಕಳೆದ ಶತಮಾನದ ಕೊನೆಯ ದಶಕದ ಈ ವಿದ್ಯಮಾನದಿಂದ ಕನ್ನಡ ಸಾಹಿತ್ಯ ಪರಂಪರೆಗೆ ಇನ್ನಷ್ಟು ಹೊಸ ಧಾರೆಗಳು ಬಂದು ಸೇರಿಕೊಳ್ಳತೊಡಗಿದವು. ಇದರಿಂದ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಸಾಹಿತ್ಯಾತ್ಮಕ ಮೂಲಭೂತ ಲಕ್ಷಣಕ್ಕೆ ಹಾನಿಯಾಯಿತೆ ಎನ್ನುವ ಆತಂಕ ಅಷ್ಟು ಮುಖ್ಯವಾಗಲಿಲ್ಲ. ಬದಲಾಗಿ ಇವು ಹೇಗೆ ಕನ್ನಡ ಭಾಷಿಕ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ ಮೊದಲಾದ ಪ್ರಶ್ನೆಗಳನ್ನು, ಮನುಷ್ಯನ ಬದುಕಿನ ಮುಖ್ಯ ಪ್ರಶ್ನೆಗಳಾಗಿ ಕಂಡಿವೆ ಎನ್ನುವ ಪ್ರಶ್ನೆಗೆ ಅತ್ಯಂತ ಹೆಚ್ಚಿನ ಮಹತ್ವ ದೊರೆಯಿತು. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಅದರ ಆಯಾಮಗಳ ವಿಕಾಸದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ವಿಚಾರವಾಗಿದೆ.

ಈ ಹಿನ್ನೆಲೆಯಿಂದ ನೋಡಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರವಾದಿ ಚಿಂತನೆಯ ಸಾಹಿತ್ಯಾನುಸಂಧಾನವು ಅದರ ಇನ್ನಿತರ ಆಯಾಮಗಳಾದ ರಾಜಕಾರಣ, ಭಾಷಿಕ ಮತ್ತು ಸಾಮಾಜಿಕ ಆಯಾಮಗಳಿಗಿಂತ ಮೂಲಭೂತವಾಗಿ ಸಾಹಿತ್ಯಕ ಆಯಾಮಗಳನ್ನು ವ್ಯಾಪಕವಾಗಿ ವಿಸ್ತರಿಸಿದೆ.

ಇದನ್ನು, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ನಿರ್ಲಕ್ಷ್ಯಕ್ಕೆ ಒಳಗಾಗಿದ್ದ 'ಜನಪ್ರಿಯ ಸಾಹಿತ್ಯ'ವನ್ನು 'ಶ್ರೇಷ್ಠ' ಅಥವಾ 'ಗಂಭೀರ' ಸಾಹಿತ್ಯಕ್ಕೆ ಸಮಾನವಾಗಿ ಕಾಣಲು ಮಾಡಿರುವ ಪ್ರಯತ್ನದಲ್ಲಿ ಗುರುತಿಸಬಹುದು. ಹಾಗೆಯೇ, ಕನ್ನಡ ಸಾಹಿತ್ಯ ಪರಂಪರೆಯಷ್ಟೇ ಗಟ್ಟಿಯಾದ ಪರಂಪರೆಯುಳ್ಳ, ಕನ್ನಡ ಚಲನಚಿತ್ರ ಪರಂಪರೆಯನ್ನು ಚರ್ಚಿಸಲು ಮಾಡಿದ ಪ್ರಯತ್ನದಲ್ಲಿ ಕಾಣಬಹುದು. ಆಧುನಿಕ ಪ್ರಸಾರ ಮಾಧ್ಯಮವಾದ ದೂರದರ್ಶನ, ಆಧುನಿಕ ವಿಜ್ಞಾನ, ಆಧುನಿಕ ಪರಿಸರ ಚಿಂತನೆ ಮೊದಲಾದ ರೂಪಗಳನ್ನು ಸಾಹಿತ್ಯದಷ್ಟೇ ಮಹತ್ವದ ಅಭಿವ್ಯಕ್ತಿ ಪ್ರಕಾರಗಳೆಂದು ಪರಿಗಣಿಸಿ ವಿಶ್ಲೇಷಿಸಲು ಮಾಡಿರುವ ಪ್ರಯತ್ನದಲ್ಲಿ ಗುರುತಿಸಬಹುದು. ಹೀಗಾಗಿ, ಇವೆಲ್ಲವೂ ಕನ್ನಡದ ಹೊಸ ಸಾಂಸ್ಕೃತಿಕ ಪಠ್ಯಗಳಾದವು.

ಇದರೊಂದಿಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನದ ದೃಷ್ಟಿಕೋನಕ್ಕೆ ಅಥವಾ ನೋಟಕ್ರಮಕ್ಕೆ ಚಿಂತನೆಯಾಗಿ, ಲೋಕದೃಷ್ಟಿಯಾಗಿ ಮತ್ತು ಐಡಿಯಾಲಜಿಗಳಾಗಿ ಅನೇಕ ವಿಚಾರಗಳು ಒದಗಿ ಬಂದವು. ಕೋಮುವಾದ, ಮತೀಯವಾದ, ಮೂಲಭೂತವಾದ, ಹಿಂಸಾವಾದ, ವಾಣಿಜ್ಯವಾದ ಮತ್ತು ಜಾಗತೀಕರಣಗಳಂಥ ಪರಿದೃಷ್ಟಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನ, ಸಾಹಿತ್ಯಾನುಸಂಧಾನ, ರಾಜಕೀಯಾನುಸಂಧಾನ ಮತ್ತು ಭಾಷಿಕಾನುಸಂಧಾನದ ಮುಖ್ಯ ಪ್ರಶ್ನೆಗಳನ್ನು ರೂಪಿಸಿದವು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ಮುಖ್ಯವಾಗಿ ಇಂಥ ವ್ಯಾಪಕವಾದ ಮತ್ತು ಸಂಕೀರ್ಣವಾದ ಕ್ರಮಗಳ ರೂಪದಲ್ಲಿ ಆಧುನಿಕೋತ್ತರ ಚಿಂತನೆಯ ಸಾಹಿತ್ಯಾನುಸಂಧಾನದ ಭಾಗವಾಗಿ ಮೂಡಿವೆ. ಇಂಥ ಅನೇಕ ಆಯಾಮಗಳಲ್ಲಿ ಇಲ್ಲಿ ಮುಖ್ಯವಾದ ಎರಡು ಆಯಾಮಗಳನ್ನು ಕುರಿತು ಚರ್ಚಿಸಲಾಗಿದೆ. ಅವುಗಳೆಂದರೆ. ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಜನಪ್ರಿಯ ಸಾಹಿತ್ಯಾನುಸಂಧಾನದ ಆಯಾಮಗಳು ಮತ್ತು ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಜನಪ್ರಿಯ ಕಲಾರೂಪವಾದ ಚಲನಚಿತ್ರ ಕುರಿತ ಸಾಹಿತ್ಯಾನುಸಂಧಾನದ ಆಯಾಮಗಳು. ಈ ಅಭಿವ್ಯಕ್ತಿ ರೂಪಗಳನ್ನು ಇಲ್ಲಿ 'ಸಾಹಿತ್ಯ ಪಠ್ಯ'ಗಳು ಎನ್ನುವುದಕ್ಕೆ ಬದಲಾಗಿ 'ಸಾಂಸ್ಕೃತಿಕ ಪಠ್ಯ'ಗಳು ಎನ್ನುವ ಸೃಷ್ಟ್ಯಾತ್ಮಕ ನೆಲೆಯಲ್ಲಿ ಗ್ರಹಿಸಲಾಗಿದೆ. ಆದರೆ, ಇವುಗಳನ್ನು ಸಾಹಿತ್ಯಕ ಪರಿಜ್ಞಾನ ಮತ್ತು ಪರಿಭಾಷೆಯ ಮೂಲಕ ವಿಶ್ಲೇಷಿಸಿರುವ ಕಾರಣದಿಂದ 'ಸಾಹಿತ್ಯಾನುಸಂಧಾನ' ಎನ್ನುವ ಪರಿಕಲ್ಪನೆಯನ್ನು ಬಳಸಲಾಗಿದೆ. ಹಾಗೆಂದ ಮಾತ್ರಕ್ಕೆ ಸಾಹಿತ್ಯಾನುಸಂಧಾನವು, ಸಾಂಸ್ಕೃತಿಕಾನುಸಂಧಾನದ ಚಹರೆಗಳನ್ನು ಒಳಗೊಂಡಿರುವುದಿಲ್ಲ ಎಂದೇನೂ ಅರ್ಥವಲ್ಲ. ಅವೂ ಸಹ ಸಾಹಿತ್ಯಕ ಪರಿಜ್ಞಾನ ಮತ್ತು ಪರಿಭಾಷೆಗಳ ಬೆನ್ನೆಲುಬುಗಳಾಗಿ ಇವೆ.

ಈ ಚರ್ಚೆಯಲ್ಲಿ ಸೀಮಂತಿ ನಿರಂಜನ ಅವರ 'ಜನಪ್ರಿಯ ಸಾಹಿತ್ಯದಲ್ಲಿ ಸ್ತ್ರೀತ್ವತ್ವದ ಪ್ರತಿಬಿಂಬ – ತ್ರಿವೇಣಿಯವರ ಕೆಲವು ಕಾದಂಬರಿಗಳು' ('ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ೧೯೯೪) ಮತ್ತು ಡಿ.ಆರ್. ಅವರ 'ಅಧಿಕಾರ ವಿಘಟನೆಯ ಆತಂಕಮಯ ಮತ್ತು ಹಾಸ್ಯಮಯ ರೂಪಗಳು ಜನಪ್ರಿಯ ಸಿನಿಮಾಗಳ

ಕಲಾಮೀಮಾಂಸೆ' ('ಸಾಹಿತ್ಯ ಕಥನ', ೧೯೯೬) ಲೇಖನಗಳನ್ನು ಪ್ರಧಾನ ಆಕರಗಳಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರೊಂದಿಗೆ ಎಂ. ಉಷಾ ಅವರ 'ಮಹಿಳಾ ಸಾಹಿತ್ಯದಲ್ಲಿ ಜನಪ್ರಿಯ ಗಂಭೀರ ಪರಿಕಲ್ಪನೆಗಳು' ('ಸುರುಚಿ', ೨೦೦೪) ಮತ್ತು ಬರಗೂರು ಅವರ 'ಕನ್ನಡ ಸಾಹಿತ್ಯ–ಸಿನಿಮಾ ಮತ್ತು ಉಪಧಾರೆ' (ಸಂಸ್ಕೃತಿ: ಶ್ರಮ ಮತ್ತು ಸೃಜನಶಿಲತೆ, ೨೦೦೧) ಲೇಖನಗಳನ್ನು ಪೂರಕ ಸಾಮಗ್ರಿಯಾಗಿ ತೆಗೆದುಕೊಳ್ಳಲಾಗಿದೆ. ಉಳಿದಂತೆ, ಚರ್ಚೆಯ ಅಗತ್ಯತೆಗನುಸಾರವಾಗಿ ಇನ್ನಿತರ ಲೇಖನ ಅಥವಾ ಚಿಂತನೆಗಳನ್ನು ಪರಿಶೀಲಿಸಲಾಗುವುದು.

ಈ ಚರ್ಚೆಯನ್ನು ಮುಂದಿನ ಕ್ರಮದಲ್ಲಿ ರೂಪಿಸಿಕೊಳ್ಳಲಾಗಿದೆ.

ಅ. ಸೀಮಂತಿನಿ ನಿರಂಜನ ಅವರ 'ಜನಪ್ರಿಯ ಸಾಹಿತ್ಯ'ದ ಸಾಹಿತ್ಯಾನುಸಂಧಾನದ ಸ್ವರೂಪ

ಆ. ಡಿ.ಆರ್. ಅವರ 'ಜನಪ್ರಿಯ ಸಿನಿಮಾಗಳ' ಸಾಹಿತ್ಯಾನುಸಂಧಾನದ ಸ್ವರೂಪ

ಈ ವಿಮರ್ಶಕರು 'ಪಠ್ಯ' ವಿಶ್ಲೇಷಣೆಯ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಶೋಧಿಸುವ, ಕಟ್ಟುವ ಮತ್ತು ವ್ಯಾಖ್ಯಾನಿಸುವ ಸ್ವರೂಪವನ್ನು ಗುರುತಿಸುವ ಉದ್ದೇಶದಿಂದ ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

೬.೭ ಸೀಮಂತಿನಿ ನಿರಂಜನ ಅವರ 'ಜನಪ್ರಿಯ ಸಾಹಿತ್ಯ'ದ ಸಾಹಿತ್ಯಾನುಸಂಧಾನದ ಸ್ವರೂಪ

ಕನ್ನಡ ಸ್ತ್ರೀವಾದಿ ವಿಮರ್ಶೆಯೊಂದನ್ನು ಕಟ್ಟುವ ಪ್ರಯತ್ನ ಹಲವು ನೆಲೆಗಳಲ್ಲಿ ನಡೆದಿದೆ. ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿಯರ ಮತ್ತು ಚಿಂತಕರ ವಿಚಾರ ಧಾರೆಯನ್ನು ಪರಿಚಯಿಸುವುದು ('ಸ್ತ್ರೀವಾದಿ ಪ್ರವೇಶಿಕೆ' ೧೯೯೫, ಸಂ. ಬಿ.ಎನ್ ಸುಮಿತ್ರಾಬಾಯಿ ಮತ್ತು ಎನ್. ಗಾಯತ್ರಿ), ಸ್ತ್ರೀವಾದಿ ವಿಮರ್ಶಾ ವಿಧಾನದ ತಾತ್ವಿಕ ಸ್ವರೂಪವನ್ನು ತತ್ವ ಮತ್ತು ಪ್ರಯೋಗದ ಕ್ರಮದಲ್ಲಿ ಮಂಡಿಸುವುದು ('ಭಾರತೀಯ ಸ್ತ್ರೀವಾದ' ೧೯೯೩, ಮನುಚಕ್ರವರ್ತಿ), ಪ್ರಸಿದ್ಧ ಸ್ತ್ರೀವಾದಿ ಚಿಂತಕಿಯರ ಮತ್ತು ವಿಮರ್ಶಕಿಯರ ಕೃತಿಗಳ ಕನ್ನಡಾನುವಾದ (ಸೀಮನ್ ದ ಬುವಾಳ 'ಸೆಕೆಂಡ್ ಸೆಕ್ಸ್', ಎಚ್.ಎಸ್. ಶ್ರೀಮತಿ) ಮತ್ತು ಸ್ತ್ರೀವಾದದ ಮೂಲಕ ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ವಿಶ್ಲೇಷಿಸುವುದು ('ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ', ೧೯೯೩, ವಿವಿಧ ಲೇಖಕರು) ಹೀಗೆ ಹಲವು ಮಾದರಿಗಳಿವೆ. ಇವು ಸಮಕಾಲೀನ ಕನ್ನಡ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆ ಸಂದರ್ಭದಲ್ಲಿ ಹಲವು ಸ್ವರೂಪಗಳಲ್ಲಿ ಕ್ರಿಯಾತ್ಮಕವಾಗಿ ಆದರೆ ಕನ್ನಡ ಸ್ತ್ರೀವಾದಿ ಚಿಂತನೆಯ ಮತ್ತು ಸ್ತ್ರೀವಾದಿ ವಿಮರ್ಶೆಯ ಪರಂಪರೆಯನ್ನು ಚಾರಿತ್ರಿಕ ನೆಲೆಯಿಂದ ಅವಲೋಕಿಸಿದ್ದೇ ಆದರೆ, ತೇಜಸ್ವಿನಿ ನಿರಂಜನ ಮತ್ತು ಸೀಮಂತನಿ ನಿರಂಜನ ಅವರು ಸಂಪಾದಿಸಿದ 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' (೧೯೯೪) ಕೃತಿ ಎಷ್ಟು ಮಹತ್ವಪೂರ್ಣ ಪ್ರಯತ್ನವಾಗಿದೆ ಎನ್ನುವುದು ಅರಿವಾಗುತ್ತದೆ. ಏಕಕಾಲಕ್ಕೆ ಪಾಶ್ಚಾತ್ಯ ಸ್ತ್ರೀವಾದಿ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಪರಿಚಯಿಸುವುದು ಮತ್ತು ಅದನ್ನು ಭಾರತೀಯ

ಹಾಗೂ ಕನ್ನಡ ಸಾಹಿತ್ಯ ಪಠ್ಯಗಳ ಅನುಸಂಧಾನಕ್ಕೆ ಸಮರ್ಥವಾಗಿ ಅನ್ವಯಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ಈ ಕೃತಿಯ ಒಂದು ಭಾಗವಾಗಿರುವ ಸೀಮಂತಿನಿ ಅವರ ಇಂಗ್ಲಿಷ್ ಮೂಲದ ಅನುವಾದಿತ ಲೇಖನವಾದ 'ಜನಪ್ರಿಯ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿಬಿಂಬ – ತ್ರಿವೇಣಿಯವರ ಕೆಲವು ಕಾದಂಬರಿಗಳು' (೧೯೮೯) ಎನ್ನುವ ಬರಹವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಹಲವು ನೆಲೆಗಳಿಂದ ಬಹುಮುಖ್ಯವಾದ ಲೇಖನವಾಗಿದೆ.

೬.೭.೧ ದೈನಿಕ ಜಗತ್ತಿನ ಕಥನದಿಂದ ಅನಾವರಣಗೊಂಡಿರುವ ಸಾಮಾಜಿಕ ಸಂಕಥನ

ಕನ್ನಡ ಮಹಿಳಾ ಸಾಹಿತ್ಯದ ಜನಪ್ರಿಯ ಲೇಖಕಿ ತ್ರಿವೇಣಿ. ಹಾಗೆ ನೋಡಿದರೆ, ಮಹಿಳಾ ಸಾಹಿತ್ಯವನ್ನು ಕನ್ನಡದ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ರೂಪಿಸಿದ ಬಹು ದೊಡ್ಡ ಲೇಖಕಿ ಕೂಡಾ. ಕನ್ನಡದಲ್ಲಿ ಇಂದು ಮಹಿಳಾ ಕಾದಂಬರಿ ಪ್ರಕಾರ ಎನ್ನುವುದು ಒಂದು ವಿಸ್ತಾರವಾದ ಪರಂಪರೆಯಾಗಿ ಬೆಳೆದಿದೆ. ಈ ಬೆಳವಣಿಗೆಯ ಹಿಂದೆ ತ್ರಿವೇಣಿಯವರ ಕೊಡುಗೆ ಅಪಾರವಾಗಿದೆ. ಆದರೆ, ತ್ರಿವೇಣಿಯವರು ಮಧ್ಯಮವರ್ಗದ ಮಹಿಳಾ ಓದುಗ ವಲಯದಿಂದಾಚೆಗಿನ ಓದಿನ ವಲಯಕ್ಕೆ ಒಳಪಟ್ಟಿದ್ದಾಗಲೀ ಅಥವಾ ಗಂಭೀರವಾದ ವಿಮರ್ಶೆಗೆ ಗ್ರಾಸವಾದದ್ದಾಗಲಿ ತುಂಬಾ ತಡವಾಗಿ. ಇದಕ್ಕೆ ಬಹುಮುಖ್ಯವಾದ ಕಾರಣ ಕನ್ನಡದ ನವ್ಯ ಸಾಹಿತ್ಯ ಪ್ರತಿಪಾದಿಸಿದ ಸಾಹಿತ್ಯ ಮೀಮಾಂಸೆ ಹಾಗೂ ಸಾಹಿತ್ಯ ವಿಮರ್ಶೆ ಎಂದು ಕಂಡುಬರುತ್ತದೆ. ನವ್ಯ ಸಾಹಿತ್ಯದ 'ಶ್ರೇಷ್ಠತೆಯ ವ್ಯಸನ'ದ ವಿರುದ್ಧ ಎಪ್ಪತ್ತರ ದಶಕದಿಂದ ಕನ್ನಡ ಸಾಹಿತ್ಯದ ಸ್ಥಳೀಯ ಪರಿಸರದ ಚಿಂತನೆಯ ಮೂಲಕ ಪ್ರಬಲವಾದ ವಿರೋಧ ವ್ಯಕ್ತವಾಯಿತು. ಇದರ ಫಲವಾಗಿ ಸಾಮಾಜಿಕ ಪ್ರಶ್ನೆಗಳ, ಆರ್ಥಿಕ ಪ್ರಶ್ನೆಗಳ ಮತ್ತು ರಾಜಕೀಯ ಪ್ರಶ್ನೆಗಳ ಮೂಲಕ ಪಠ್ಯಗಳನ್ನು ವಿಶ್ಲೇಷಿಸುವ ಹಾಗೂ ಅರ್ಥೈಸುವ ವಿಮರ್ಶಾ ವಿಧಾನಗಳು ಮುನ್ನೆಲೆಗೆ ಬಂದವು. ಆದರೆ, ದಲಿತ ಮತ್ತು ಬಂಡಾಯ ವಿಮರ್ಶೆಗಳೂ ಕೂಡಾ ಏಕೆ ಇಂಥ ಮಹಿಳಾ ಸಾಹಿತ್ಯವನ್ನು ವಿಮರ್ಶೆಗೆ ಮುಖ್ಯವೆಂದು ಪರಿಗಣಿಸಲಿಲ್ಲ ಎನ್ನುವುದನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಪ್ರಾಯಶಃ ಲೇಖಕಿಯರು ಬಹುತೇಕ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿದ್ದು, ಅವರ ಸಾಹಿತ್ಯದಲ್ಲಿ ಈ ನಿರ್ದಿಷ್ಟ ಸಮುದಾಯದ ಅಥವ ಸಮಾಜದ ಜೀವನ ವಿವರಗಳೇ ಪ್ರಧಾನ ಭಿತ್ತಿಯಲ್ಲಿ ಇದ್ದುದ್ದು ಕಾರಣವೇ ಅಥವಾ ಬೇರೇನಾದರೂ ಮಹತ್ವದ ಕಾರಣಗಳಿವೆಯೇ ಎನ್ನುವುದು ಚಿಂತಿಸಬೇಕಾದ ವಿಚಾರವಾಗಿದೆ. ಈ ಹಿನ್ನೆಲೆಯಿಂದ ಗಮನಿಸಿದರೆ, ನವ್ಯ ಸಾಹಿತ್ಯದಲ್ಲೂ ಕೂಡಾ ಬ್ರಾಹ್ಮಣ ಸಮಾಜ ಮತ್ತು ಸಂಸ್ಕೃತಿಯ ವಿವರಗಳು ವಸ್ತು, ಅಭಿವ್ಯಕ್ತಿ ವಿಧಾನ ಹಾಗೂ ದೃಷ್ಟಿಕೋನ ಹೀಗೆ, ಹಲವು ರೂಪಗಳಲ್ಲಿ ವ್ಯಕ್ತವಾಗಿದ್ದುದು ಒಂದು ಪ್ರಮುಖ ಕಾರಣವೆನ್ನುವಂತೆ ಕಂಡು ಬರುತ್ತದೆ. ಹಾಗೆಯೇ, ಈ ಕಾಲಘಟ್ಟದ ಮಾರ್ಕ್ಸ್‌ವಾದಿ ಮತ್ತು ಸಮಾಜವಾದಿ ವಿಮರ್ಶೆಗಳು ಪ್ರತಿಪಾದಿಸಿದ 'ವೈದಿಕ ವಿರೋಧಿ ಪ್ರಜ್ಞೆ' ಅಥವಾ 'ಬ್ರಾಹ್ಮಣ ವಿರೋಧಿ ಪ್ರಜ್ಞೆ' ಸಹ ಕನ್ನಡದ ಇಂಥ ಮಹಿಳಾ

ಸಾಹಿತ್ಯವನ್ನು ಮುಖ್ಯವೆಂದು ಪರಿಗಣಿಸದಿರುವುದಕ್ಕೆ ಇರುವ ಇನ್ನೊಂದು ಪ್ರಮುಖ ಕಾರಣವೆಂದು ತೋರುತ್ತದೆ. ಇದು ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂದರ್ಭದಲ್ಲಿ ಹುಟ್ಟುವ ಪ್ರತಿರೋಧಾತ್ಮಕ ಅಥವಾ ಸಂಘರ್ಷಾತ್ಮಕ ಚಿಂತನೆಗಳ ಒಡಲಿನೊಳಗೇ ಇರುವ ಒಂದು ಮುಖ್ಯವಾದ ಮಿತಿ ಎನ್ನುವಂತೆ ಕೂಡಾ ಗೋಚರಿಸುತ್ತದೆ. ಈ ಹಿನ್ನೆಲೆಯಲ್ಲಿ, ಈ ಕಾಲಘಟ್ಟದಲ್ಲಿ ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯ ಮತ್ತು ವಿಮರ್ಶೆಯ ದಟ್ಟವಾದ ಪ್ರಭಾವದಿಂದ ರೂಪಗೊಂಡ ಕನ್ನಡ ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆಯನ್ನು ಕೇವಲ ಸಾಹಿತ್ಯಕವಷ್ಟೇ ಅಲ್ಲದೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪ್ರಶ್ನೆಗಳು ರೂಪಿಸಿರುವುದು ಅತ್ಯಂತ ಅರ್ಥಪೂರ್ಣವಾದ ವಿಚಾರವಾಗಿದೆ.

೬.೭.೨ ಸಮುದಾಯಜನ್ಯ ಲೋಕದೃಷ್ಟಿಯ ಸಾಹಿತ್ಯಾನುಸಂಧಾನದ ವಿನ್ಯಾಸಗಳು

ತ್ರಿವೇಣಿ ಅವರ ಸಾಹಿತ್ಯ, ನಿರ್ದಿಷ್ಟವಾಗಿ ಬ್ರಾಹ್ಮಣ ಸಮುದಾಯದ ಬದುಕಿನ ವಿವರಗಳನ್ನು ಆಧರಿಸಿ ರೂಪಿತವಾದದ್ದು. ವಸ್ತುಗಳು, ಪಾತ್ರಗಳು, ಸಮಸ್ಯೆಗಳು, ಸನ್ನಿವೇಶಗಳು ಎಲ್ಲವೂ ಕೂಡಾ ಈ ಸಮಾಜದ ಒಳಪ್ರಪಂಚಕ್ಕೆ ಸೇರಿದವು. ಇದು ಒಂದು ದೋಷವೇ ಎನ್ನುವುದು ಸೀಮಂತಿನಿ ಅವರ ಮುಖ್ಯ ಪ್ರಶ್ನೆಯೇನೂ ಅಲ್ಲ. ಆದರೆ, ಇದರಿಂದ ರೂಪಿತವಾಗಿರುವ ಲೋಕದೃಷ್ಟಿಯ ಸ್ವರೂಪ ಏನು, ಇದರ ಮೂಲಕ ಲೇಖಕಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಸ್ವರೂಪವನ್ನು ಹೇಗೆ ಗ್ರಹಿಸುತ್ತಿದ್ದಾರೆ, ಅದು ಪ್ರತಿನಿಧೀಕರಿಸುತ್ತಿರುವ ನೆಲೆಗಳು ಯಾವುವು, ಬಹುಮುಖ್ಯವಾಗಿ ಲೇಖಕಿಯ ಈ ನಿರ್ವಚಿತ ಲೋಕದೃಷ್ಟಿಯು ಜಗತ್ತಿನ ಲೋಕದೃಷ್ಟಿಯ ಮೇಲೆ ಯಾವುದೇ ರೀತಿಯಲ್ಲಿ ತನ್ನ ಪ್ರಭಾವ ಬೀರುತ್ತಿದೆಯೇ ಮತ್ತು ಹಾಗೆ ಪ್ರಭಾವಿಸುವಷ್ಟು ಶಕ್ತವಾಗಿದೆಯೇ ಎನ್ನುವುದು ವಿಮರ್ಶಕಿಯ ಮುಖ್ಯವಾದ ಆಸಕ್ತಿಯಾಗಿದೆ.

ಹೀಗಾಗಿಯೇ ವಿಮರ್ಶಕಿ ಇಲ್ಲಿ, ಮಹಿಳಾ ಸಾಹಿತ್ಯವನ್ನು ರೂಪಿಸಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಶಕ್ತಿಗಳ ಸ್ವರೂಪವನ್ನು ಮೊದಲು ಅರ್ಥೈಸಿಕೊಳ್ಳಬೇಕು. ಹಾಗೆ ಮಾಡಿದಾಗ ಮಾತ್ರವೇ, ಯಾವುದನ್ನು 'ಜನಪ್ರಿಯ' ಅಥವಾ 'ಲಘು' ಸಾಹಿತ್ಯವೆಂದು ಕರೆಯುತ್ತೇವೆಯೋ ಅದರೊಳಗಿರುವ 'ಸಾಮಾಜೀಕರಣ' ಮತ್ತು 'ಸಂಸ್ಕೃತೀಕರಣ'ದ ಸ್ವರೂಪ ಗೋಚರವಾಗುತ್ತದೆ. ಇದಕ್ಕಾಗಿ ನಾವು ಸೂಕ್ತ ಮತ್ತು ವೈಜ್ಞಾನಿಕ ಎನ್ನಬಹುದಾದ ಅರ್ಥಪೂರ್ಣ 'ಲೋಕದೃಷ್ಟಿ'ಯೊಂದನ್ನು ಕಟ್ಟಿಕೊಳ್ಳಬೇಕು ಎನ್ನುತ್ತಾರೆ. ಇದನ್ನು ಅವರ ಲೇಖನೋದ್ದೇಶವನ್ನು ನಿರೂಪಿಸುವಾಗ ಪ್ರತಿಪಾದಿಸುವ "ಸಾಹಿತ್ಯಕ ಕಥನಗಳನ್ನು ಸಾಮಾಜಿಕ ರೂಢಿ ನಡವಳಿಕೆಗಳನ್ನಾಗಿ (social practices) ಪ್ರತಿನಿಧಿಸಿದಾಗ ಸ್ಫುಟಿಸುವ ವಿವಿಧ ಅರ್ಥಗಳು ಮೋಹಕವಾದವು. ಈ ಕಥನಗಳ ಮೂಲಕ ಸಿದ್ಧವಾಗುವ ಸ್ತ್ರೀತ್ವದ ಪರಿಕಲ್ಪನೆಯ ಆಯಾಮಗಳನ್ನು ಗುರುತಿಸುತ್ತಾ, ಜನರು ಆ ಕಲ್ಪನೆಯನ್ನು ಮೂರ್ತವಾಗಿಸಿ, ಆ ವಿಚಾರಧಾರೆಯನ್ನು ಭದ್ರಿಸುವ ಬಗೆಯನ್ನೂ ಪ್ರಸ್ತಾಪಿಸಬಯಸುತ್ತೇನೆ. ಈ ಪ್ರಕ್ರಿಯೆಯ ರೂಪುರೇಷೆಗಳನ್ನು ಕಾಣಲು, ಮಹಿಳಾ ಬರವಣಿಗೆಯ ಸಾಹಿತ್ಯಕ ಸ್ವರೂಪಕ್ಕಿಂತ ಅದರ ಸಾಂಸ್ಕೃತಿಕ ರೂಪ(ಣೆ)ಯನ್ನು ಪ್ರವೇಶಿಸುವುದು ಅಗತ್ಯ.

ಸಾಹಿತ್ಯವನ್ನು ಓದುವಾಗ ಸಾಹಿತ್ಯಕ ಮಾನದಂಡಗಳನ್ನಷ್ಟೇ ಬಳಸುವುದಕ್ಕಿಂತ ಸಾಹಿತ್ಯ ಕ್ಷೇತ್ರದಲ್ಲಿ ಸಮಾಜ ಮತ್ತು ಸಂಸ್ಕೃತಿಗಳು ರೂಪುಗೊಂಡು, ವಿಮರ್ಶೆಗೊಳಗಾಗಿ, ಪುನಃಸೃಷ್ಟಿಗೊಳ್ಳುವ ರೀತಿಯನ್ನು ಅಧ್ಯಯನ ಮಾಡುವುದು ಮುಖ್ಯ" ಎನ್ನುವ ಮಾತುಗಳು ಮಹಿಳಾ ಜನಪ್ರಿಯ ಸಾಹಿತ್ಯದ ಸ್ವರೂಪವನ್ನು ಅರ್ಥೈಸಿಕೊಳ್ಳುವುದಕ್ಕೆ ಅಗತ್ಯವಿರುವ ಅರ್ಥಪೂರ್ಣವಾದ ಹೊಸ ವಿಮರ್ಶಾ ವಿಧಾನದ ಅಗತ್ಯವನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತವೆ.

೬.೭.೩ ಸ್ತ್ರೀತ್ವದ ಹುಡುಕಾಟದ ಆರಂಭಿಕ ಹೆಜ್ಜೆಗಳು

ಆಧುನಿಕ ಸ್ತ್ರೀವಾದ ಲಿಂಗ ರಾಜಕಾರಣದ ಮುಖ್ಯ ಕಾರ್ಯಮಾದರಿಗಳಾಗಿ ಗುರುತಿಸುವ ಪಿತೃಪ್ರಧಾನತೆ ಮತ್ತು ಮಹಿಳಾ ಅಸ್ಮಿತೆಗಳು, ಅದೇ ಅರ್ಥದಲ್ಲಿ ತ್ರಿವೇಣಿಯವರ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಹಾಗೆ ನೋಡಿದರೆ, ತ್ರಿವೇಣಿ ಅವರು ಆಧುನಿಕ ಸ್ತ್ರೀವಾದಿ ತಾತ್ವಿಕತೆಯಿಂದ ಪ್ರಭಾವಿತರಾದವರೂ ಅಲ್ಲ. ಅಲ್ಲದೆ, ಅವರ ಸೃಜನಶೀಲತೆಯ ಕಾಲಘಟ್ಟದಲ್ಲಿ ಸ್ತ್ರೀವಾದವು ಕನ್ನಡದ ಸಂದರ್ಭದಲ್ಲಿ ಒಂದು ಪ್ರಭಾವಶಾಲಿಯಾದ ಚಿಂತನೆಯಾಗಿ ಮುಂಚೂಣಿಗೆ ಬಂದಿರಲಿಲ್ಲ. ಆದರೆ, ಆಧುನಿಕ ವಿದ್ಯಾಭ್ಯಾಸ ಮತ್ತು ಅದು ಜಾಗ್ರತಗೊಳಿಸಿರುವ ಉದಾರವಾದಿ ಆಲೋಚನಾ ದೃಷ್ಟಿ ತ್ರಿವೇಣಿ ಅವರ ಬಹುಮುಖ್ಯವಾದ ಸಾಹಿತ್ಯಕ ಪ್ರೇರಣೆಯಾಗಿದೆ. ಹೀಗಾಗಿಯೇ, ಅವರ ಅನೇಕ ಕಾದಂಬರಿಗಳಲ್ಲಿ ಮಹಿಳಾ ಸಮಸ್ಯೆಗಳು, ಮುಖ್ಯವಾಗಿ ಬ್ರಾಹ್ಮಣ ಸಮುದಾಯದ ಹೆಣ್ಣಿನ ಸಮಸ್ಯೆಗಳು ಪ್ರಧಾನ ವಸ್ತುಗಳಾಗಿವೆ. ವಿವಾಹ, ಕುಟುಂಬ, ಲೈಂಗಿಕತೆ, ತಾಯ್ತನ, ವೈಧವ್ಯ, ವಿಧವಾ ವಿವಾಹ ಮತ್ತು ದುಡಿಮೆಯ ಪ್ರಶ್ನೆಗಳು ಅವರ ಕಥನದ ಪ್ರಮುಖವಾದ ತಾತ್ವಿಕತೆಯನ್ನು ರೂಪಿಸುತ್ತವೆ. ಆದರೆ, ವಿಪರ್ಯಾಸವೆಂದರೆ ಅವರು ಅಂತಿಮವಾಗಿ ಪಿತೃಪ್ರಧಾನ ವ್ಯವಸ್ಥೆ ರೂಪಿಸಿರುವ ಪುರುಷಶಾಹಿ ಮೌಲ್ಯವ್ಯವಸ್ಥೆಯನ್ನು 'ಪರಂಪರೆಯ ಶ್ರೇಷ್ಠತೆ'ಯ ಹೆಸರಿನಲ್ಲಿ ಒಪ್ಪಿಕೊಳ್ಳುತ್ತಾರೆ. ಹೀಗಾಗಿ, ಅವರ ಕಾದಂಬರಿಗಳಲ್ಲಿ ಕಂಡುಬರುವ ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ ಕ್ರಿಯಾತ್ಮಕವಾದ ಆಯಾಮ ಪಡೆದುಕೊಳ್ಳುವುದಿಲ್ಲ. ಹೆಣ್ಣಿನ ಬದುಕಿನ ಆಯ್ಕೆ, ಲೈಂಗಿಕತೆ, ವಿವಾಹ ಮತ್ತು ತಾಯ್ತನದ ಪ್ರಶ್ನೆಗಳು ಕೃತಿಗಳಲ್ಲಿ ಚರ್ಚೆ ಮತ್ತು ಸಮಸ್ಯೆಗಳನ್ನು ಹುಟ್ಟುಹಾಕುತ್ತವೆ ಎನ್ನುವುದು ನಿಜ. ಆದರೆ, ಅವು ಯಾವುವೂ ಸಮಸ್ಯೀಕರಣಗೊಳ್ಳುವುದಿಲ್ಲ. ಇಲ್ಲವೇ, ಸಂಘರ್ಷಾತ್ಮಕ ಆಯಾಮ ಪಡೆದುಕೊಳ್ಳುವುದಿಲ್ಲ. ಲೈಂಗಿಕತೆ ಮತ್ತು ತಾಯ್ತನ ಕುರಿತ ಬಹುಮುಖ್ಯವಾದ ಪ್ರಶ್ನೆಗಳು ಅಂತಿಮವಾಗಿ ಕ್ಷೀಣದನಿಗಳಾಗಿ ಪರಿವರ್ತಿತಗೊಳ್ಳುತ್ತವೆ. ಇಷ್ಟಾದರೂ, ತ್ರಿವೇಣಿ ಅವರ ಕಾದಂಬರಿಗಳ ಮಹತ್ವವಿರುವುದು ಹೆಣ್ಣಿನ ಬದುಕಿನ ಮಹತ್ವದ ಪ್ರಶ್ನೆಗಳನ್ನು ಸಾಹಿತ್ಯ ಮತ್ತು ಸಂಸ್ಕೃತಿಗಳ ಜಗತ್ತಿನ ಕೇಂದ್ರಕ್ಕೆ ತಂದು ಒಂದು ಮಟ್ಟದ ವಾಗ್ವಾದ ಹುಟ್ಟು ಹಾಕುವುದರಲ್ಲಿ ಪಡೆಯುವ ಯಶಸ್ಸಿನಲ್ಲಿ ಎನ್ನುವ ಅರ್ಥಪೂರ್ಣವಾದ ಒಳನೋಟವನ್ನು ಕಟ್ಟಿಕೊಡುತ್ತಾರೆ ಸೀಮಂತಿನಿ.

ಈ ಹಿನ್ನೆಲೆಯಲ್ಲಿ ತ್ರಿವೇಣಿ ಅವರ ಕಾದಂಬರಿಗಳನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡ ಮಹಿಳಾ ಸಾಹಿತ್ಯವನ್ನು ಕುರಿತು ಅವರು ಮಾಡುವ ವಿಶ್ಲೇಷಣೆ ಬಹಳ ಮುಖ್ಯವಾದದ್ದು. ಇದನ್ನು ಅವರ "ತ್ರಿವೇಣಿಯವರ ಕೆಲವು ಕಾದಂಬರಿಗಳ ಮೂಲಕ ನಾವು ಕಂಡಂತೆ, ಮಹಿಳಾ ಸಾಹಿತ್ಯವೂ ಅಷ್ಟೊಂದು ಪರಿಣಾಮಕಾರಿಯಾಗಲು ಅದು ಬಿಂಬಿಸುವ ದೈನಂದಿನ ಜಗತ್ತಿನ ಚಿತ್ರವೇ ಕಾರಣ. ದಿನನಿತ್ಯದ ಬದುಕನ್ನು ಬಿರುಕಿಸುವ ಕ್ಲೇಶ-ವೈರುಧ್ಯಗಳು ಇಲ್ಲಿ ಇದ್ದು ಇಲ್ಲವಾಗುತ್ತವೆ. ನಮ್ಮ ಓದುವ ತಂತ್ರಗಳನ್ನು ಹೆಚ್ಚು ಪ್ರಜ್ಞಾಪೂರ್ವಕ ಹಾಗೂ ವಿಮರ್ಶಾತ್ಮಕವಾಗಿಸಿದಾಗ ಮಾತ್ರ ಕಥಾನಕದ ಧಾಟಿ, ಭಾಷೆ, ಗ್ರಹಿಕೆಗಳಲ್ಲಿ ಅಡಗಿರುವ ಅರ್ಥಗಳನ್ನು ಕಾಣಲು ಸಾಧ್ಯ; ಹೆಣ್ತನದ ಸ್ತ್ರೀತ್ವದ ಬಗೆಗಿನ ವಿಚಾರಗಳ ರೂಪರೇಷೆಯನ್ನಷ್ಟೇ ಈಗ ಗುರುತಿಸಲು ಸಾಧ್ಯವಾಗಿದ್ದರೂ, ಅಲ್ಲಿ ಬರುವ ಪ್ರತೀಕಗಳು ಪ್ರತಿನಿಧೀಕರಣಗೊಂಡು, ಸಾಮಾಜಿಕ ಜೀವನದಲ್ಲಿ ಪ್ರಾಬಲ್ಯ, ನಿಯಂತ್ರಣ, ಅಧೀನತೆಗಳಾಗಿ ಪವಡಿಸುವುದನ್ನು ಸೂಚಿಸಬಹುದು. ಮಹಿಳಾ ಸಾಹಿತ್ಯ ಅಷ್ಟೊಂದು ಪರಿಣಾಮಕಾರಿ ಮಾಧ್ಯಮವಾಗಲು ಕಾರಣ ಅದರ ವಸ್ತುನಿಷ್ಠತೆ ಹಾಗೂ ವೈಚಾರಿಕ ನಿಖರತೆ; ಹೆಣ್ಣು ಜೀವಗಳ ರೂಪಣೆಯಲ್ಲೂ, ಸಾಮಾಜಿಕ ರಚನೆಗಳು, ಲೋಕರೂಢಿಗಳು ಪುನಃಸೃಷ್ಟಿಗೊಳ್ಳುವುದರಲ್ಲೂ ಇದು ಮುಖ್ಯ ಪಾತ್ರ ವಹಿಸಿದೆ"[೧೦] ಎನ್ನುವ ಮಾತುಗಳು ಸ್ಪಷ್ಟಪಡಿಸುತ್ತವೆ. ಈ ನೆಲೆಯಿಂದ ಸೀಮಂತಿನಿ ಅವರ ಈ ಲೇಖನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸಿರುವ ಮಹತ್ವದ ಬರಹ ಕೂಡಾ ಆಗಿದೆ.

೬.೮ ಡಿ.ಆರ್. ಅವರ 'ಜನಪ್ರಿಯ ಸಿನಿಮಾಗಳ' ಸಾಹಿತ್ಯಾನುಸಂಧಾನದ ಸ್ವರೂಪ

'ಅಮೃತ ಮತ್ತು ಗರುಡ'ದಿಂದ (೧೯೮೩) 'ಸಾಹಿತ್ಯ ಕಥನ'ದವರೆಗಿನ (೧೯೯೬), ಡಿ.ಆರ್. ವಿಮರ್ಶೆಯ ತಾತ್ವಿಕ ಸ್ವರೂಪದ ವಿಕಾಸವನ್ನು ಹಲವು ನೆಲೆಗಳಲ್ಲಿ ಗುರುತಿಸಬಹುದು. ಅವುಗಳನ್ನು, ಸಾಹಿತ್ಯ ಸ್ವರೂಪ ಕುರಿತ ಗ್ರಹಿಕೆಯ ವಿಕಾಸದ ನೆಲೆ, ವಿಮರ್ಶೆಯ ಸ್ವರೂಪ ಕುರಿತ ಗ್ರಹಿಕೆಯ ವಿಕಾಸದ ನೆಲೆ ಮತ್ತು ಸಂಸ್ಕೃತಿ ಸ್ವರೂಪ ಕುರಿತ ಗ್ರಹಿಕೆಯ ವಿಕಾಸದ ನೆಲೆ ಎಂದು ಸ್ಥೂಲವಾಗಿ ಮೂರು ರೀತಿಯಲ್ಲಿ ಗುರುತಿಸಿಕೊಳ್ಳಬಹುದು. ಆದರೆ, ಇವು ಹಾಗೆ ಬೇರ್ಪಡಿಸಲು ಸಾಧ್ಯವಿಲ್ಲದಂತೆ ಸಮಾವಿಷ್ಟೀಕರಣ ಗೊಂಡಿರುವುದೇ ಡಿ.ಆರ್. ಸಾಹಿತ್ಯ ವಿಮರ್ಶೆಯ ನಿಜವಾದ ತಾತ್ವಿಕ ಸ್ವರೂಪವಾಗಿದೆ. ಇದು 'ಕಥನ'ವನ್ನು 'ಸಂಕಥನದ ಬಹುಮುಖ್ಯ ಮಾಧ್ಯಮವಾಗಿ ಸ್ವೀಕರಿಸಿರುವ ಕ್ರಮದಲ್ಲಿ ಮತ್ತು ಆ ಮೂಲಕ ಸಾಹಿತ್ಯ ವಿಮರ್ಶೆಯನ್ನು 'ಸಂಸ್ಕೃತಿ ಸಂಕಥನ'ವಾಗಿ ಬೆಳೆಸಿರುವುದರಲ್ಲಿ ತನ್ನ ಆಯಾಮಗಳನ್ನು ವಿಸ್ತರಿಸಿಕೊಂಡಿದೆ. ಇದನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಡಿ.ಆರ್. ಮೊದಲು ಸಾಹಿತ್ಯೇತರ ಜ್ಞಾನರೂಪಗಳ ಬೆಳಕನ್ನು ಸಾಹಿತ್ಯದ ವಿಮರ್ಶೆಗೆ ಬಳಸುತ್ತಿದ್ದ ಕ್ರಮವನ್ನು ಕೈಬಿಟ್ಟು, ಆನಂತರ ಸಾಹಿತ್ಯವೆನ್ನುವ ವಿಶಿಷ್ಟ ಜ್ಞಾನರೂಪದ ಬೆಳಕನ್ನು ಸಾಹಿತ್ಯೇತರ ಜ್ಞಾನರೂಪಗಳ ವಿಮರ್ಶೆಗೂ ಕೂಡಾ ಸಮರ್ಥವಾಗಿ ಬಳಸಲು ಸಾಧ್ಯವೆನ್ನುವುದನ್ನು ಅರ್ಥಪೂರ್ಣವಾಗಿ ನಿರೂಪಿಸಿರುವುದರಲ್ಲಿ ಅವರ ಸಾಂಸ್ಕೃತಿಕ ವಿಮರ್ಶೆಯ ವಿಶಿಷ್ಟತೆ ಇರುತ್ತದೆ. ಈ

ಅರ್ಥದಲ್ಲಿ ಡಿ.ಆರ್. ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಹೊಸ ತಾತ್ವಿಕ ಆಯಾಮವನ್ನು ದೊರಕಿಸಿಕೊಟ್ಟ ಶ್ರೇಷ್ಠ ಸಂಸ್ಕೃತಿ ವಿಮರ್ಶಕ.

ಯಾವುದನ್ನು ಡಿ.ಆರ್. ತಮ್ಮ ವಿಮರ್ಶೆಯ ನಡುವಂತರದ ಕಾಲದಲ್ಲಿ 'ಸಾಹಿತ್ಯ ಸಂಸ್ಕೃತಿ' ಎನ್ನುವ ಪರಿಭಾಷೆ ಮೂಲಕ ವಿವರಿಸುತ್ತಿದ್ದರೋ, ಅದು ಅವರ ವಿಮರ್ಶೆಯ ಉನ್ನತ ಹಂತದ ವೇಳೆಗೆ ಹೀಗೆ ಕೇವಲ ಒಂದು 'ಪರಿಭಾಷೆ' ಅಥವಾ 'ಪರಿಕಲ್ಪನೆ' ಮಾತ್ರವೇ ಆಗಿ ಉಳಿಯಲಿಲ್ಲ. ಬದಲಾಗಿ ಸಾಹಿತ್ಯ, ಸಂಸ್ಕೃತಿ ಮತ್ತು ಮನುಷ್ಯನ ಬದುಕಿನ ಮುಖ್ಯ ಪ್ರಶ್ನೆಗಳನ್ನು ಸಮರ್ಥವಾಗಿ ವಿಶ್ಲೇಷಿಸುವ ಹಾಗೂ ವ್ಯಾಖ್ಯಾನಿಸುವ ದೃಷ್ಟಿಕೋನವಾಗಿ ವಿಕಾಸವಾಯಿತು. ಮಾನವನ ಮನಸ್ಸು, ಬುದ್ಧಿ, ಭಾವನೆ, ಮತ್ತು ಪ್ರಜ್ಞೆಯ ವಿವಿಧ ಅಭಿವ್ಯಕ್ತಿ ಪ್ರಕಾರದ ಸೃಷ್ಟ್ಯಾತ್ಮಕ ರಚನೆಗಳನ್ನು 'ಪಠ್ಯ'ಗಳೆಂದು ಪರಿಭಾವಿಸುವ ಮೂಲಕ ಅವುಗಳನ್ನು ಸಮರ್ಥವಾಗಿ ವಿಮರ್ಶಿಸಲು ಸಾಧ್ಯ ಎನ್ನುವ 'ಚಿಂತನೆ'ಯಾಗಿ ಅದು ಬೆಳೆಯಿತು. ಹೀಗಾಗಿಯೇ, ಡಿ.ಆರ್. ಕಲೆ, ಧರ್ಮ, ವಿಜ್ಞಾನ, ರಾಜಕಾರಣ, ಪರಿಸರ ಮತ್ತು ಸಂಸ್ಕೃತಿ ಮೊದಲಾದವುಗಳನ್ನು ಮಹತ್ವದ ಪಠ್ಯಗಳೆಂದು ಪರಿಗಣಿಸಿದರು. ಇವುಗಳನ್ನು ಸಾಹಿತ್ಯದ ಪರಿಜ್ಞಾನ ಮತ್ತು ಪರಿಪ್ರೇಕ್ಷ್ಯದ ಮೂಲಕ ಅನುಸಂಧಾನ ಮಾಡುವ ಹಲವು ಅರ್ಥಪೂರ್ಣವಾದ ಸಾಧ್ಯತೆಗಳನ್ನು ಶೋಧಿಸಿದರು.

ಈ ವಿದ್ಯಮಾನ ಈಗಾಗಲೇ ಗುರುತಿಸಿರುವಂತೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಅದರ ಆಯಾಮಗಳನ್ನು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಿಂತ ಭಿನ್ನವಾದ ಹಾಗೂ ಅರ್ಥಪೂರ್ಣವಾದ ಕ್ರಮಗಳಲ್ಲಿ ಬೆಳೆಸಿತು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಹೀಗೆ ಡಿ.ಆರ್. ರೀತಿಯಲ್ಲಿ ಅಗಾಧವಾಗಿ ಮತ್ತು ಅರ್ಥಪೂರ್ಣವಾಗಿ ವಿಸ್ತರಿಸಿದ ಆಧುನಿಕ ಕನ್ನಡ ಸಾಂಸ್ಕೃತಿಕ ವಿಮರ್ಶಕರ ಸಂಖ್ಯೆ ಬಹಳ ಕಡಿಮೆ.

೬.೮.೧ ಸಾಹಿತ್ಯ ವಿಮರ್ಶೆಯ ಸಿನಿಮಾನುಸಂಧಾನದ ಸ್ವರೂಪ ಮತ್ತು ಸಾಧ್ಯತೆ

ಕನ್ನಡ ಸಾಹಿತ್ಯ ವಿಮರ್ಶೆಯ ತಿಳಿವಳಿಕೆಯನ್ನು ಕನ್ನಡ ಸಿನಿಮಾಗಳ ವಿಶ್ಲೇಷಣೆಗೆ ಈ ಹಿಂದೆ ಕೂಡಾ ಬಳಸಲಾಗುತ್ತಿತ್ತು. ಇದಕ್ಕೆ ಒಂದು ಮುಖ್ಯ ಉದಾಹರಣೆ ಬರಗೂರು ಅವರ 'ಕನ್ನಡ ಸಾಹಿತ್ಯ-ಸಿನಿಮಾ ಮತ್ತು ಉಪಧಾರೆ' ('ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ', ೨೦೦೧) ಎನ್ನುವ ಲೇಖನ. ಇದರಲ್ಲಿ ಬರಗೂರು ಅವರು, ಕನ್ನಡ ಕಾದಂಬರಿಗಳು, ಕತೆಗಳು ಹಾಗೂ ಕವನಗಳನ್ನು ಕನ್ನಡ ಸಿನಿಮಾರಂಗವು ಬಳಸಿಕೊಂಡಿರುವ ಕ್ರಮಗಳನ್ನು ಕುರಿತು ಆಲೋಚಿಸುತ್ತಾರೆ. ಕನ್ನಡ ಸಿನಿಮಾಗಳ ಆರಂಭಿಕ ಹಂತದ ಕಾಲು ಶತಮಾನದಲ್ಲಿ, ಭಾರತೀಯ ಸಂಸ್ಕೃತಿ ಪರಂಪರೆಯ ಮುಖ್ಯಧಾರೆಗೆ ಬದಲಾಗಿ, ಉಪಧಾರೆಯ ಆಕರಗಳನ್ನು ಚಿತ್ರಕತೆಯ ವಸ್ತುವಾಗಿ ಬಳಸಿರುವ ಕ್ರಮವನ್ನು ಬರಗೂರು ಇಲ್ಲಿ ಚರ್ಚಿಸುತ್ತಾರೆ. ಇದೊಂದು ಕನ್ನಡ ಸಿನಿಮಾರಂಗದ ಪರ್ಯಾಯ ಚಿಂತನಾವಿಧಾನವೆಂದು ನಿರೂಪಿಸುತ್ತಾರೆ.

ಆದರೆ, ಈ ಬರಹಕ್ಕೆ ಇರುವ ಈ ನಿರ್ದಿಷ್ಟತೆಯೇ ಅದರ ಪರಿಮಿತಿ ಕೂಡಾ ಆಗಿದೆ. ಹೀಗಾಗಿ ಇಲ್ಲಿ ಬರಗೂರು ಅವರಿಗೆ, ಕನ್ನಡ ಸಿನಿಮಾಗಳು ಅಥವಾ ಕನ್ನಡ ಸಿನಿಮಾ ಪರಂಪರೆ ಸಮಾಜ ಮತ್ತು ಸಂಸ್ಕೃತಿಯೊಂದಿಗೆ ಅನುಸಂಧಾನ ಮಾಡಿರುವ ಸ್ವರೂಪ ಕುರಿತು ಚರ್ಚಿಸಲು ಹೆಚ್ಚು ಅವಕಾಶವಿಲ್ಲ.

ಈ ದೃಷ್ಟಿಯಿಂದ ಗಮನಿಸಿದರೆ ಡಿ.ಆರ್. ಅವರ ‘ಅಧಿಕಾರ ವಿಘಟನೆಯ ಆತಂಕಮಯ ಮತ್ತು ಹಾಸ್ಯಮಯ ರೂಪಗಳು ಜನಪ್ರಿಯ ಸಿನಿಮಾಗಳ ಕಲಾಮೀಮಾಂಸೆ’ (‘ಸಾಹಿತ್ಯ ಕಥನ, ೧೯೯೫) ಲೇಖನವು ಹಲವು ನೆಲೆಗಳಿಂದ ಬಹುಮುಖ್ಯವಾದ ಬರಹವಾಗಿದೆ. ಇದು, ಕನ್ನಡ ಸಿನಿಮಾ ರಂಗದ ಪರಂಪರೆಯನ್ನು, ಅದರ ರೂಪ ಮತ್ತು ಆಶಯಗಳಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳ ಮೂಲಕ ವಿಶ್ಲೇಷಿಸುತ್ತದೆ ಮತ್ತು ವ್ಯಾಖ್ಯಾನಿಸುತ್ತದೆ. ಈ ಪ್ರಯತ್ನದಲ್ಲಿ ಡಿ.ಆರ್ ಹಿಂದಿ ಮತ್ತು ದಕ್ಷಿಣ ಭಾರತದ ಚಲನಚಿತ್ರ ರಂಗದ ತೌಲನಿಕ ವಿಶ್ಲೇಷಣೆಯನ್ನು ಸಹ ಮಾಡುತ್ತಾರೆ. ಆದರೆ, ಇದಿಷ್ಟೇ ಆಗಿದ್ದರೆ ಈ ಬರಹಕ್ಕೆ ಅಂಥ ಯಾವುದೇ ಮಹತ್ವ ದೊರೆಯುತ್ತಿರಲಿಲ್ಲ. ಆದರೆ ಡಿ.ಆರ್ ತಮ್ಮ ಈ ಒಟ್ಟು ವಿಶ್ಲೇಷಣೆಯ ಸಂದರ್ಭದಲ್ಲಿ ತೌಲನಿಕ ಚರ್ಚೆಯ ಭಾಗವಾಗಿ ಬಹಳ ಮುಖ್ಯವಾಗಿ ಕನ್ನಡ, ತಮಿಳು, ತೆಲುಗು ಮತ್ತು ಹಿಂದಿ ಸಿನಿಮಾರಂಗದ ಶ್ರೇಷ್ಠ ನಿರ್ದೇಶಕರು ಹಾಗೂ ಸಿನಿಮಾಗಳನ್ನು ಸಹ ಪಠ್ಯಗಳಾಗಿ ಅಥವಾ ಬಹು ಪಠ್ಯಗಳಾಗಿ ಬಳಸಿಕೊಳ್ಳುವ ಕ್ರಮ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವೈಧಾನಿಕತೆಯ ದೃಷ್ಟಿಯಿಂದ ಅತ್ಯಂತ ಅಪೂರ್ವವಾದದ್ದು ಹಾಗೂ ಅಷ್ಟೇ ಅರ್ಥಪೂರ್ಣವಾದದ್ದು. ಕನ್ನಡ ಸಾಹಿತ್ಯ ಪರಂಪರೆ ಮತ್ತು ವಿಮರ್ಶಾ ಚರಿತ್ರೆಯಿಂದ ಪಡೆದುಕೊಂಡ ವಿವೇಕವನ್ನು ಡಿ.ಆರ್. ಅರ್ಥಪೂರ್ಣವಾಗಿ ಪ್ರಯೋಗಿಸಿರುವ ಸ್ವರೂಪ ಮತ್ತು ಸಾಧ್ಯತೆಯಿಂದ ಅವರ ಈ ಲೇಖನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಶ್ರೇಷ್ಠ ಬರಹವಾಗಿ ರೂಪುಗೊಂಡಿದೆ.

೬.೮.೨ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಪರಿಭಾಷೆಗಳ ಮೂಲಕ ಸಿನಿಮಾ ಎನ್ನುವ ಪಠ್ಯದ ಸಾಂಸ್ಕೃತಿಕಾನುಸಂಧಾನ

ಡಿ.ಆರ್. ಕನ್ನಡ ಸಿನಿಮಾ ಪರಂಪರೆಯನ್ನು ಅದರ ರೂಪ ಮತ್ತು ಆಶಯಗಳ ವಿಶ್ಲೇಷಣೆಗಾಗಿ ಆಯ್ದುಕೊಂಡರೂ ಸಹ, ಚರ್ಚೆಯಲ್ಲಿ ಎಲ್ಲಿಯೂ ‘ಸಿನಿಮಾದ ಭಾಷೆ’ಯನ್ನಾಗಲೀ ಅಥವಾ ‘ಸಿನಿಮಾದ ವ್ಯಾಕರಣ’ವನ್ನಾಗಲೀ ಬಳಸುವುದಿಲ್ಲ. ಕನ್ನಡ ಸಿನಿಮಾ ಪರಂಪರೆಯ ಅರವತ್ತರ ಮತ್ತು ಎಂಭತ್ತರ ದಶಕಗಳಲ್ಲಿ ಸಮಾಜ ಮತ್ತು ಸಂಸ್ಕೃತಿಯ ಪರಿವರ್ತನೆಯ ಅಥವಾ ಪಲ್ಲಟದ ಸ್ವರೂಪ ನಿರೂಪಿತವಾಗಿರುವ ಕ್ರಮವನ್ನು, ಡಿ.ಆರ್ ಜೈನಧರ್ಮದ ಪಾರಿಭಾಷಿಕ ಪದಗಳನ್ನು ಬಳಸುವ ಮೂಲಕ ವಿಶ್ಲೇಷಿಸುತ್ತಾರೆ. ಜೈನಧರ್ಮವು ಕಾಲಕಾಲಕ್ಕೆ ಬದುಕಿನ ಮೌಲ್ಯಗಳಲ್ಲಾಗುವ ಪಲ್ಲಟದ ಸ್ವರೂಪವನ್ನು ಕುರಿತು ವಿವರಿಸುವಾಗ ‘ಉತ್ಸರ್ಪಿಣಿ’ ಮತ್ತು ‘ಅವಸರ್ಪಿಣಿ’ ಎನ್ನುವ ಎರಡು ಪರಿಭಾಷೆಗಳನ್ನು ಬಳಸುತ್ತದೆ. ಇವುಗಳನ್ನು ಡಿ.ಆರ್. ‘ಉತ್ಕರ್ಷಿಣಿ’ ಮತ್ತು ಅವಸರ್ಪಿಣಿ’ ಎನ್ನುವ ಅತ್ಯಲ್ಪವಾದ ರೂಪ ವ್ಯತ್ಯಾಸ ಮಾಡುವ ಮೂಲಕ

ಉಪಯೋಗಿಸುತ್ತಾರೆ. ಇಲ್ಲಿ 'ಉತ್ಕರ್ಷಿಣಿ' ಎಂದರೆ ಕಲಾಚರಿತ್ರೆ ಸಂದರ್ಭದಲ್ಲಿ ವಸ್ತು ಮತ್ತು ಮೌಲ್ಯಗಳ 'ಏರುಗತಿ'ಗೆ ಹಾಗೂ 'ಅವಸರ್ಪಿಣಿ' ಎಂದರೆ ಇವುಗಳ 'ಅವನತಶೀಲತೆ'ಗೆ ಸಂವಾದಿಯಾಗಿ ಕಲ್ಪಿಸಿಕೊಳ್ಳುತ್ತಾರೆ.

ಕನ್ನಡ ಸಿನಿಮಾದ ಈ ಎರಡು ಕಾಲಘಟ್ಟಗಳಲ್ಲಿ ಅರವತ್ತರ ದಶಕವನ್ನು 'ಉತ್ಕರ್ಷಿಣಿ' ಘಟ್ಟವೆಂದು ಮತ್ತು ಎಂಭತ್ತರ ದಶಕವನ್ನು 'ಅವಸರ್ಪಿಣಿ' ಘಟ್ಟವೆಂದು ಗುರುತಿಸುತ್ತಾರೆ. 'ಉತ್ಕರ್ಷಿಣಿ' ಕಾಲಘಟ್ಟವು 'ರಮ್ಯಪ್ರೇಮ'ದ ಉಗಮ ಹಾಗೂ 'ಪಿತೃಪ್ರೇಮದ ಕಣ್ಮರೆ'ಯ ಕಾಲ. ಇದರ ಶ್ರೇಷ್ಠ ಕಲಾಕೃತಿ ಬಿ.ಆರ್. ಪಂತುಲು ಅವರ 'ಸ್ಕೂಲ್ ಮಾಸ್ಟರ್' ಚಲನಚಿತ್ರ. ಹಾಗೆಯೇ, ಎಂಭತ್ತರ ದಶಕ 'ಅವಸರ್ಪಿಣಿ ಘಟ್ಟ'. ಇದು 'ನವಹಾಸ್ಯ' ಸಿನಿಮಾಗಳ ಉಚ್ಛ್ರಾಯಘಟ್ಟ. ಈ ಘಟ್ಟವು 'ರಮ್ಯಪ್ರೇಮದ ಕಣ್ಮರೆ' ಮತ್ತು 'ಪಿತೃಪ್ರೇಮ'ದಂಥ ಮೌಲ್ಯಗಳೂ ಕೂಡಾ ಸಮಸ್ಯೀಕರಣಗೊಂಡ ಘಟ್ಟ. ಆದರೆ, ಕನ್ನಡದಲ್ಲಿ ನವಹಾಸ್ಯದ ಸಿನಿಮಾಗಳ ಆರಂಭವೇನಿದೆ ಅದು ಕನ್ನಡ ಸಿನಿಮಾ ಪರಂಪರೆ, ಸಿನಿಮಾದ ಕ್ಲೀಷಾತ್ಮಕ ವ್ಯಾಕರಣ, ನಿಷ್ಕ್ರಿಯ ದೃಷ್ಟಿಕೋನ ಎಲ್ಲವನ್ನೂ ಆಂತರಿಕವಾಗಿ ವಿಮರ್ಶೆಗೊಳಪಡಿಸಿದ ಅವಧಿ. ಈ ಘಟ್ಟಕ್ಕೆ 'ಗೌರಿಗಣೇಶ' ಸಿನಿಮಾ ಒಂದು ಶ್ರೇಷ್ಠವಾದ ಮಾದರಿ ಎಂದು ಡಿ.ಆರ್. ವಿಶ್ಲೇಷಿಸುತ್ತಾರೆ.

'ಸ್ಕೂಲ್ ಮಾಸ್ಟರ್' ಚಿತ್ರ ಮತ್ತು 'ಗೌರಿ-ಗಣೇಶ' ಚಿತ್ರ ಎರಡೂ ಕೂಡಾ ಸಮಾಜದ ಅಧಿಕಾರ ಸಂಸ್ಥೆಗಳು ಹಾಗೂ ರಚನೆಗಳು ವಿಘಟಿತಗೊಳ್ಳುವ ಕಥನಗಳಾಗಿವೆ. ಆದರೆ ಇದನ್ನು ನಿರೂಪಿಸುವ ಕ್ರಮದಲ್ಲಿ 'ಸ್ಕೂಲ್ ಮಾಸ್ಟರ್' ಆತಂಕಿತ ನಿಲುವನ್ನು ಅನುಸರಿಸುತ್ತದೆ. 'ಗೌರಿಗಣೇಶ' ಹಾಸ್ಯಮಯ ನಿಲುವು ತಾಳುತ್ತದೆ. 'ಸ್ಕೂಲ್ ಮಾಸ್ಟರ್' ನಿರ್ದೇಶಕ ಪಂತುಲು ಅವರು ಇದೇ ಕಾಲಘಟ್ಟದ ಹಿಂದಿ ಚಲನಚಿತ್ರರಂಗದ ಬಹುದೊಡ್ಡ ನಿರ್ದೇಶಕ ರಾಜ್‌ಕಪೂರ್ ಅವರಿಗಿಂತ ಹೇಗೆ ಭಿನ್ನರಾಗುತ್ತಾರೆ ಎನ್ನುವುದನ್ನು ಕುರಿತು ಡಿ.ಆರ್. ತೌಲನಿಕವಾಗಿ ವಿಶ್ಲೇಷಿಸುತ್ತಾ, "ಸ್ಕೂಲ್ ಮಾಸ್ಟರ್ ಕನ್ನಡದ ಮೊದಲ ಮಹಾವಿಘಟನೆಯ ವಸ್ತುವಿನ ಚಿತ್ರ. ಮೂಲತಃ ಅದು, ನಾನು ಈ ಮೊದಲೇ ಸೂಚಿಸಿದಂತೆ, ರಮ್ಯಪ್ರೇಮದ ಉಗಮವನ್ನು ಕುರಿತ ಚಿತ್ರ. ಆದರೆ, ರಾಜ್‌ಕಪೂರ್ ಮತ್ತು ಪಂತುಲು ನಡುವೆ ಈ ಕುರಿತು ತುಂಬ ಸೂಕ್ಷ್ಮವಾದ ವ್ಯತ್ಯಾಸಗಳಿವೆ ಎಂಬ ಅಂಶವೂ ಇಲ್ಲಿ ಮುಖ್ಯ. ರಾಜ್‌ಕಪೂರ್ ಗಮನ ಮತ್ತು ಅನುಮೋದನೆ ಇರುವುದು ಮೋಹಕ ಮತ್ತು ಮಧುರಪೂರ್ಣ ಹಾಡು, ಹಾಗೂ ಭಾವುಕ ಮತ್ತು ಸನ್ನಿವೇಶಗಳಿಗೆ ಕಾರಣವಾಗುವ ನಾಯಕ ನಾಯಕಿಯರ ಬಗ್ಗೆ. ಆತ ಯುವ ನಾಯಕ ನಾಯಕಿ-ನಾಯಕಿಯರ ಜತೆಗೆ ತನ್ನನ್ನೂ ತಾನು ಗುರುತಿಸಿಕೊಂಡು ತನ್ಮಯನಾಗುತ್ತಾನೆ. ತಾರುಣ್ಯದ ಮುಗ್ಧತೆ ಅದು. ಆದರೆ ಪಂತುಲು ವಿಶೇಷವೆಂದರೆ, ಈ ತಾರುಣ್ಯದ ರಮ್ಯ ಮುಗ್ಧತೆಯ ಆಳಗಳಲ್ಲಿ ನಿಂತೂ, ಅದನ್ನು ಸುಂದರ ಹಾಡುಗಳಲ್ಲಿ ಸ್ತುತಿಸಿಯೂ, ಅದರಾಚೆಗೆ ಹೋಗಲು ಪ್ರಯತ್ನಿಸುತ್ತಾರೆ. ಸರಳವಾಗಿ ಹೇಳುವುದಾದರೆ, ಉದಾರವಾದಿ ಸಾಂಸಾರಿಕನ ದೃಷ್ಟಿಕೋನದಿಂದ ಹೇಳುವ ಕಥೆ ಅದು. ರಾಜ್‌ಕಪೂರ್‌ದು ಆಧುನಿಕ ಮಧ್ಯಮವರ್ಗದ ಪ್ರೇಮಿಯ ದೃಷ್ಟಿಕೋನದಿಂದ ಹೇಳುವ ಕಥೆ. ಈ

ಮುಖ್ಯ ವ್ಯತ್ಯಾಸ ಕನ್ನಡ-ಹಿಂದಿ ಸಿನಿಮಾಗಳ ಚಾರಿತ್ರಿಕ ಬೆಳವಣಿಗೆ ಮತ್ತು ಭಾವನೆಗಳ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳ ಬಗೆಗೂ ವಿಶೇಷ ಬೆಳಕು ಬೀರಬಲ್ಲದು ಎಂದು ಕಾಣುತ್ತದೆ."[೧೧]ಎಂದು ಅಭಿಪ್ರಾಯಪಡುತ್ತಾರೆ. ಈ ಮಾತುಗಳು ಸಿನಿಮಾ ನಿರ್ದೇಶಕರ ದೃಷ್ಟಿಕೋನವನ್ನು ವಿಶ್ಲೇಷಿಸುತ್ತಲೇ, ಭಿನ್ನ ಭಾಷಿಕ ಪರಿಸರಗಳ ಪ್ರಭಾವಶಾಲಿ ಅಭಿವ್ಯಕ್ತಿ ಮಾಧ್ಯಮಗಳು, ತಮ್ಮ ಕಾಲಘಟ್ಟದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪಲ್ಲಟಗಳು, ವಿಘಟನೆಗಳು ಮತ್ತು ವಿದ್ರೋಹಗಳನ್ನು ಗ್ರಹಿಸಿರುವುದರ ಕುರಿತ ಮುಖ್ಯವಾದ ಒಳನೋಟಗಳೂ ಆಗಿವೆ.

ಇದೇ ಬಗೆಯ ತೌಲನಿಕ ವಿಶ್ಲೇಷಣೆಯನ್ನು ಡಿ.ಆರ್. 'ಗೌರಿಗಣೇಶ' ಮತ್ತು ಇದೇ ಕಾಲಘಟ್ಟದ ದಕ್ಷಿಣ ಭಾರತದ ತಮಿಳು ಹಾಗೂ ತೆಲುಗು ಸಿನಿಮಾರಂಗದ ಹಾಸ್ಯ ಚಿತ್ರಗಳ ಕುರಿತೂ ಮಾಡುತ್ತಾರೆ. ಅಧಿಕಾರ ಕೇಂದ್ರಗಳ ಶಕ್ತಿ ಮತ್ತು ಪ್ರಭಾವಗಳು ಬಲಿಷ್ಠವಾದಾಗ ಕಾಮಿಡಿ ಚಿತ್ರಗಳು ರೂಪುಗೊಳ್ಳುತ್ತವೆ. ಕನ್ನಡದಲ್ಲಿ ಎಂಭತ್ತರ ದಶಕದವರೆಗೂ ಬೆರಳೆಣಿಕೆಯ 'ಹಾಸ್ಯಪ್ರಧಾನ' ಚಿತ್ರಗಳಿದ್ದವು. ಎಂಭತ್ತರ ದಶಕದಿಂದ 'ನವಕಾಮಿಡಿ' ಚಿತ್ರಗಳು ಹೆಚ್ಚು ಸೃಷ್ಟಿಯಾದವು. ಇದಕ್ಕೆ ಪ್ರಭಾವಶಾಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಬಲಾಢ್ಯೀಕರಣ ಮತ್ತು ಇದಕ್ಕೆ ಸಾರ್ವಜನಿಕ ಪ್ರಜ್ಞೆಯಲ್ಲಿ ಹುಟ್ಟಿಕೊಂಡ ಪ್ರತಿರೋಧಗಳು ಪ್ರಮುಖ ಕಾರಣ. ಈ ನವಕಾಮಿಡಿಗಳನ್ನು ಸಿನಿಮಾ ಮಾಧ್ಯಮ ಹೊಸ ಅಭಿವ್ಯಕ್ತಿ ಕ್ರಮದಲ್ಲಿ ಮಂಡಿಸಿತು ಎನ್ನುವುದನ್ನು ಡಿ.ಆರ್. "ಎಂಭತ್ತರ ದಶಕದಾಚೆಗಿನ 'ನವಕಾಮಿಡಿ'ಯ ಯುಗದಲ್ಲಿ ಇವೆಲ್ಲ ಬದಲಾದವು. ಕಾಮಿಡಿ ಹೆಚ್ಚು ಮಹತ್ವಾಕಾಂಕ್ಷಿಯಾಗತೊಡಗಿತು. ದಕ್ಷಿಣ ಭಾರತದ ಬೇರೆ ಭಾಷೆಗಳಲ್ಲಿ ಈ ರೀತಿಯ ಪ್ರಯತ್ನಗಳು ಹೆಚ್ಚು ವ್ಯಾಪಕವಾಗಿ ಜನಪ್ರಿಯವಾದದ್ದು ಇದಕ್ಕೆ ಕಾರಣವಿರಬೇಕು. ಅದರಲ್ಲೂ ತೆಲುಗು-ತಮಿಳಿನ ಕೆಲವು ಕಾಮಿಡಿಗಳು ಎಂಥ ಅಬೇಧ್ಯವಾದ ಅಧಿಕಾರ ಕೇಂದ್ರಗಳನ್ನೂ ತಮಾಷೆ, ವಿಡಂಬನೆಯಲ್ಲಿ ಕೊಚ್ಚಿಹಾಕಿದವು. ಅದರಲ್ಲೂ, ಸಾಯಿಬಾಬಾನಂಥ ಅತ್ಯಂತ ಶಕ್ತಿಶಾಲೀ ಅಧಿಕಾರ ಕೇಂದ್ರವನ್ನೇ ಗೇಲಿಮಾಡಿ ಪೂರ್ಣಪ್ರಮಾಣದ ಕಥನ ಚಿತ್ರ ತೆಗೆದ ಮೇಲೆ ಈ ರೀತಿಯ ಪ್ರಯತ್ನಗಳಿಗೆ ಧೈರ್ಯ ಬಂತು. ಕಾಮಿಡಿಗಳ ಮೂಲಕ ಹೊಸದೊಂದು ರಾಜಕೀಯ ಪ್ರಜ್ಞೆ ವ್ಯಾಪಕವಾಗಿ ಹಬ್ಬತೊಡಗಿತು.

ಆದರೆ, ಕನ್ನಡ ಕಾಮಿಡಿಯ ಮಹತ್ವಾಕಾಂಕ್ಷೆ ತಮಿಳು-ತೆಲುಗಿನ ಕಾಮಿಡಿಗಳಿಗಿಂತ ಕೊಂಚ ಭಿನ್ನ ರೂಪದ್ದಾಗಿತ್ತು. ಧರ್ಮದ ಅಧಿಕಾರ ಕೇಂದ್ರವನ್ನು ಗೇಲಿ ಮಾಡುವ ಪೂರ್ಣ ಪ್ರಮಾಣದ ಕಥನ ಕಾಮಿಡಿಗಳೇ ಕನ್ನಡ ಸಿನಿಮಾದಲ್ಲಿ ಬರಲಿಲ್ಲ. ಅಧಿಕಾರಕೇಂದ್ರ ದಟ್ಟವಾದಷ್ಟೂ, ಜನಪ್ರಿಯವಾದಷ್ಟೂ ಅದು ಗೇಲಿಯನ್ನು ಆಹ್ವಾನಿಸುತ್ತದೆ. ಅಧಿಕಾರದ ಅತಿರೇಕದಲ್ಲಿ ವಿಡಂಬನೆ ಹುಟ್ಟಿದೆ. ಅಂದರೆ, ಅಧಿಕಾರ ತುಟ್ಟತುದಿಗೆ ಹೋದಾಗ ಅದು ವಿಡಂಬನೆಯ ಮೂಲಕ ತನ್ನನ್ನು ತಾನು ವಿಸರ್ಜಿಸಿಕೊಳ್ಳುತ್ತದೆ. ಹೀಗಾಗಿ, ಕಾಮಿಡಿಗಳ ಹುಟ್ಟಿನ ಹಿನ್ನೆಲೆಯಲ್ಲಿ ಕಲಾಚರಿತ್ರೆ ಮತ್ತು ಸಾರ್ವಜನಿಕ ಮೌಲ್ಯಗಳ ನಡುವೆ ಒಂದು ರೀತಿಯ

ವಿಶಿಷ್ಟ ಸಂಬಂಧವಿದೆ"[೧೨] ಎಂದು ವಿಶ್ಲೇಷಿಸುತ್ತಾ ಮಾಡುವ ತಾತ್ವಿಕ ವ್ಯಾಖ್ಯಾನ ಸಿನಿಮಾ ಮತ್ತು ಕಲೆಯ ಆವರಣವನ್ನು ಮೀರಿ ಸಾಂಸ್ಕೃತಿಕ ವಿಮರ್ಶೆಯಾಗಿ ಪ್ರಕಟವಾಗುತ್ತದೆ.

ಡಿ.ಆರ್. ಅವರ ಈ ಲೇಖನದ ನಿಜವಾದ ಮಹತ್ವ ಇರುವುದು ಅದು, ದಕ್ಷಿಣಭಾರತದಲ್ಲಿ ಸಿನಿಮಾ ನಾಯಕರನ್ನು ಆರಾಧಿಸುವ ಮನೋಭಾವದ ಹಿಂದಿರುವ ಕಾರಣವನ್ನು ಗುರುತಿಸುವುದರಲ್ಲಿ ಮತ್ತು ಭಾರತೀಯ ಸಿನಿಮಾಗಳ ಹಾಡುಗಳು ಹೇಗೆ ಭಾರತೀಯ ಸಮಾಜದ ಅಧಿಕಾರ ವ್ಯವಸ್ಥೆಯನ್ನು ಸಾಂಕೇತಿಕವಾಗಿ ಉಲ್ಲಂಘಿಸುವ ಬಂಡಾಯದ ವಿಧಾನವಾಗಿದೆ ಎಂದು ಅರ್ಥಪೂರ್ಣವಾಗಿ ವಿಶ್ಲೇಷಿಸುವ ಕ್ರಮದಲ್ಲಿ. ಹಾಗೆಯೇ, ಭಾರತೀಯ ಜನಪ್ರಿಯ ಸಿನಿಮಾಗಳು ಪಾಶ್ಚಾತ್ಯ ಸಿನಿಮಾಗಳಿಗಿಂತ ಭಿನ್ನವಾಗಿ ದ್ವಿರೂಪಿ ಪಠ್ಯಗಳನ್ನು ಹೊಂದಿರುವುದನ್ನು ಕುರಿತು ನೀಡುವ ಒಳನೋಟ ಅತ್ಯಂತ ಉನ್ನತವಾದದ್ದು. 'ಪ್ರಕಟಿತ ಪಠ್ಯ' ಮತ್ತು 'ಸುಪ್ತಪಠ್ಯ'ಗಳು ಭಾರತೀಯ ಜನಪ್ರಿಯ ಸಿನಿಮಾಗಳ ರೂಪ ಮತ್ತು ಆಶಯಗಳನ್ನು ಪ್ರೇಕ್ಷಕ ಅಥವಾ ಸಾಮಾಜಿಕರಿಗೆ ಮುಟ್ಟಿಸುವ ಕ್ರಮವನ್ನು ವಿವರಿಸುವಾಗ ಡಿ.ಆರ್. ಬಳಸುವ 'ಭಾರತೀಯ ಕಾವ್ಯ ಮೀಮಾಂಸೆ'ಯ 'ಸ್ಥಾಯಿ' ಮತ್ತು 'ಸಂಚಾರಿಭಾವ' ಪರಿಕಲ್ಪನೆ ಅತ್ಯಂತ ಅರ್ಥಪೂರ್ಣವಾಗಿದೆ. ಇದನ್ನು ಡಿ.ಆರ್. "ಹೀಗೆ, ಸಾರ್ವಜನಿಕ–ಪ್ರೇಕ್ಷಕನನ್ನು ಎರಡಾಗಿ ಒಡೆಯ ಬಯಸುವ ಚಿತ್ರಗಳು ಒಂದು ನಿರ್ದಿಷ್ಟ ರೂಪವನ್ನು ಅನುಸರಿಸುತ್ತವೆ. ಇವುಗಳನ್ನು ಸ್ಥಾಯಿ ಮತ್ತು ಸಂಚಾರಿಭಾವಗಳ ಒಂದು ಬಗೆಯ ನಿರ್ದಿಷ್ಟ ವ್ಯವಸ್ಥೀಕರಣ ಎಂದರೂ ಸಲ್ಲುತ್ತದೆ. ಇಲ್ಲಿ ಸ್ಥಾಯಿ ಎನ್ನುವುದೇ ಮೂಲ. ಅಥವಾ ಭಾರತೀಯ ಕಾವ್ಯಮೀಮಾಂಸೆಯ ಒಂದು ಉಪಮೆಯವನ್ನು ಬಳಸಿ ಹೇಳುವುದಾದರೆ, ಸ್ಥಾಯಿ ಎಂಬ ಸಮುದ್ರದ ಮೇಲೆ ಸಂಚರಿಸುವ ಅಲೆಗಳು ಸಂಚಾರಿ ಭಾವಗಳು. ಹೀಗಾಗಿ, ಸಂಚಾರಿ ಭಾವಗಳು ಎಷ್ಟೇ ದೈತ್ಯವಾಗಿ ಅಬ್ಬರಿಸಿದಂತೆ ಕಂಡರೂ ಅವು ಮತ್ತೆ ಸಮುದ್ರಕ್ಕೆ ವಾಪಸಾಗಲೇಬೇಕು. ಇಲ್ಲಿ ಸ್ಥಾಯಿ ಎನ್ನುವುದು ಈ ವೈರುಧ್ಯಗಳ ಸಮತೋಲನದ ಕಲ್ಪನೆಯೇ. ಎತ್ತ ಕಡೆಯೂ ಭಾಗದ ಹಾಗೆ ನಿಲ್ಲತಕ್ಕ ಒಂದು ಸಮಚಿತ್ತ ಸ್ಥಿತಿ ಇದು. ಇಡೀ ದೇಶ ಯಾ ಸಮಾಜ ಯಾ ಜನಾಂಗ ಒಡೆದು ಹೋಗಿರುವ ಕಡೆ ಈ ಸ್ಥಾಯಿಯೇ ಒಂದು ಬಗೆಯ ಆತಂಕ ಮತ್ತು ಸಮಾಧಾನ ಎರಡಕ್ಕೂ ಕಾರಣವಾಗುತ್ತದೆ"[೧೩] ಎಂದು ವಿಶ್ಲೇಷಿಸುತ್ತಾರೆ.

ಈ ವೈರುಧ್ಯಗಳ ಸಮತೋಲನ ಸ್ಥಿತಿಯು ಹೇಗೆ ಭಾರತೀಯ ಪ್ರೇಕ್ಷಕ ಮತ್ತು ಸಾಮಾಜಿಕನನ್ನು ನಿಯಂತ್ರಿಸಿದೆ ಅಥವಾ ನಿರ್ದೇಶಿಸುತ್ತದೆ ಎನ್ನುವುದನ್ನು 'ಬಾಂಬೆ' ಮತ್ತು 'ರೋಜಾ' ಚಿತ್ರಗಳ ತೌಲನಿಕ ವಿಶ್ಲೇಷಣೆ ಮೂಲಕ ಸ್ಪಷ್ಟಪಡಿಸುತ್ತಾರೆ. ಸಾರ್ವಜನಿಕ ಸಂಗತಿಗಳು ಮತ್ತು ಮಾಹಿತಿಗಳು ಜನಪ್ರಿಯ ಚಿತ್ರಗಳಲ್ಲಿ ಸಂಕೇತ ಅಥವಾ ಪ್ರತಿಮೆಗಳಾಗಿ ರೂಪುಗೊಳ್ಳುವ ಕ್ರಮ ಕುರಿತ ಡಿ.ಆರ್. ಅವರ ವಿಶ್ಲೇಷಣೆ ಬಹಳ ಮನೋಜ್ಞವಾದದ್ದು. ಬಾಂಬೆ ಚಿತ್ರದ ಬೆಂಕಿ ಕುರಿತು ಡಿ.ಆರ್. ಹೇಳುವುದು ಹೀಗೆ: "ಬಾಂಬೆ ಚಿತ್ರದಲ್ಲಿ ಬೆಂಕಿ ಹಾಗೆ ಬಹುರೂಪೀ ಸಂಕೇತವಾಗಿ ಪರಿವರ್ತನೆಯಾಗುತ್ತದೆ. ಚಿತ್ರದ ಮೂಲ ಸಿದ್ಧಾಂತವಾದ ಚಾರಿತ್ರಿಕ ಸ್ಥಿತಿಗಳ ಮಾನವೀಕರಣ, ಮೂಲಭೂತೀಕರಣ ಪ್ರಕ್ರಿಯೆಗೆ ಇದು ತುಂಬ ಸೂಕ್ತವಾದ

ಪ್ರತಿಮೆಯಾಗಿಯೂ ಒದಗಿ ಬರುತ್ತದೆ. ಈ ಬೆಂಕಿ ಕಡೇ ಪಕ್ಷ ಮೂರು ರೀತಿಯ ಅರ್ಥಗಳನ್ನು ಹೊತ್ತೊಯ್ಯುತ್ತದೆ. ಅನುರಾಗದ ಬೆಂಕಿ 'ಹಮ್ಮ ಹಮ್ಮ' ಹಾಡಿನಲ್ಲಿ ಸ್ಪಷ್ಟವಾಗಿಯೇ ಪ್ರಕಟವಾಗುತ್ತದೆ. ನಂತರ, ದ್ವೇಷದ ಬೆಂಕಿ, ಮೂರು, ಆಹುತಾತ್ಮಕ ಬೆಂಕಿ. ಹೀಗೆ ಹಿಂಸೆಯನ್ನು ಅನಿರ್ದಿಷ್ಟೀಕರಿಸಿ ಮೂಲಭೂತೀಕರಿಸುವುದೇ ಈ ರೂಪದ ಪ್ರಮುಖ ಗುಣ ಎನ್ನುವುದನ್ನು ಹಿಂದೆಯೇ ಹೇಳಲಾಗಿದೆ. ಹೀಗಾಗಿ, ಹಿಂಸೆಯ ಬಗೆಗೆ ಒಂದು ಆಧ್ಯಾತ್ಮಿಕತಾ ದೃಷ್ಟಿಕೋನ ಸೃಷ್ಟಿಯಾಗುತ್ತದೆ. ಮಾಹಿತಿಗಳನ್ನು ಮೂಲಭೂತ ಸಂಕೇತಗಳನ್ನಾಗಿ ಪರಿವರ್ತಿಸುವ ಕೆಲಸಕ್ಕೆ ಕೈಹಾಕಿದಾಗ, ಕೆಲವು ವೈಚಾರಿಕ ಆಕೃತಿಗಳ ಬಂದು ಕಲಾವಿದನನ್ನು ಹಿಡಿಯುತ್ತವೆ ಎನ್ನುವುದಕ್ಕೆ 'ಬಾಂಬೆ' ಚಿತ್ರದ ಬೆಂಕಿ ಸಾಕ್ಷಿ"[೧೪] ಎನ್ನುವ ಮಾತುಗಳು ಸಾಂಸ್ಕೃತಿಕ ವಿಮರ್ಶೆಯ ಗ್ರಹಿಕೆಯಿಂದ ಹುಟ್ಟಿದವು. ಇದನ್ನೇ ಡಿ.ಆರ್ ಭಾರತೀಯ ಸಾಮಾಜಿಕ ಮನಸ್ಸು ಸಂಘರ್ಷದ ಎದುರಾಗಿ ಸಾಮರಸ್ಯವನ್ನು ಆಯ್ಕೆಮಾಡಿಕೊಳ್ಳುವ ಕ್ರಮ ಕುರಿತು "ಈ ಸಾಮರಸ್ಯ ಎಂಬ ಅಧಿಕಾರಯುಕ್ತ ಮೌಲ್ಯ ಮೊದಲು ಭಾರತೀಯ ಸಾಮಾಜಿಕ ಜೀವನದ, ಆಧುನಿಕಪೂರ್ವ ಸಾಮಾಜಿಕ ಜೀವನದ ಸರ್ವಸಾಮಾನ್ಯ ಸತ್ಯವಲ್ಲದಿದ್ದರೂ ಬಹುಮಟ್ಟಿಗೆ ಸತ್ಯ ಎನ್ನುವುದಂತೂ ಖಚಿತ. ಈ ಅಂಶವನ್ನು ಎಡಪಂಥೀಯರೂ ಒತ್ತಿ ಹೇಳುತ್ತಾರೆ, ಆಶಿಸ್‌ನಂದಿ ಮುಂತಾದ ಆಧುನಿಕತಾ ವಿರೋಧಿಗಳೂ ಎತ್ತಿ ಹೇಳುತ್ತಾರೆ. ಹೀಗೆ ಆಧುನಿಕ ಪೂರ್ವದ ಜೀವನದ ಸಾಮಾಜಿಕ ಸತ್ಯವಾದ ಸಾಮರಸ್ಯ ಆಧುನಿಕ ಭಾರತದ ರಾಷ್ಟ್ರೀಯ ಪ್ರಭುತ್ವದ ಮೂಲಕ ರಾಷ್ಟ್ರೀಯ ನಿರ್ಮಾಣದ ರಾಜಕೀಯ ಆದರ್ಶವಾಗಿ ಭಾಷಾಂತರವಾಯಿತು"[೧೫] ಎಂದು ವಿಶ್ಲೇಷಿಸುತ್ತಾರೆ. ಈ ವಿಶ್ಲೇಷಣೆಯು ಮೂಲತಃ ಭಾರತೀಯ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ ಕುರಿತ ವಿಶ್ಲೇಷಣೆಯೇ ಆಗಿದೆ.

ಡಿ.ಆರ್. ಅವರ ಈ ಬರಹದ ಪ್ರಧಾನ ಉದ್ದೇಶ, ಕನ್ನಡ ಸಿನಿಮಾದ ರೂಪ ಮತ್ತು ಆಶಯಗಳು ಕಾಲಕಾಲಕ್ಕೆ ಹೊಂದಿದ ಅವಸ್ಥಾಂತರಗಳು ಹಾಗೂ ಅದರ ಹಿಂದಿನ ಒತ್ತಡಗಳನ್ನು ಕುರಿತು ವಿಶ್ಲೇಷಿಸುವುದು. ಇದರ ಭಾಗವಾಗಿ ಭಾರತೀಯ ಹಿಂದಿ ಚಿತ್ರರಂಗ ಮತ್ತು ದಕ್ಷಿಣ ಭಾರತದ ಚಿತ್ರಗಳು, ಈ ಸಂಗತಿಗಳನ್ನು ನಿರ್ವಹಿಸಿರುವ ಕ್ರಮಗಳನ್ನು ಕುರಿತೂ ಸಹ ವಿಶ್ಲೇಷಣೆ ಮಾಡುತ್ತದೆ. ಭಾರತೀಯ ಚಲನ ಚಿತ್ರಗಳು ಪಾಶ್ಚಾತ್ಯ ಚಲನಚಿತ್ರಗಳಿಗಿಂತ ಭಿನ್ನವಾಗಿರುವ ವಿಶಿಷ್ಟ ಸ್ವರೂಪ ಕುರಿತು ವಿವರಿಸುತ್ತದೆ. ಹಾಗೆಯೇ, ಭಾರತೀಯ ಇತಿಹಾಸ, ಸಂಸ್ಕೃತಿ ಮತ್ತು ವರ್ತಮಾನದ ಸಂಗತಿಗಳು ಚಲನಚಿತ್ರಗಳಲ್ಲಿ ಪಡೆದುಕೊಳ್ಳುವ ಸುವರ್ಣಮಾಧ್ಯಮ ಸಮತೋಲನ ಸ್ವರೂಪ ಕುರಿತು ವ್ಯಾಖ್ಯಾನಿಸುತ್ತದೆ. ಇದನ್ನು ಡಿ.ಆರ್ ಅವರ, "ಭಾರತೀಯ ಜನಪ್ರಿಯ ಸಂಸ್ಕೃತಿಯ ರೂಪ ಅಡಗಿರುವುದೇ ಈ ಬಗೆಯ ವೈರುಧ್ಯಗಳ ಸಮತೋಲನದ ಸ್ಥಿತಿಯಲ್ಲಿ. ಪ್ರಗತಿಪರತೆ ಮತ್ತು ಸಂಪ್ರದಾಯಶರಣತೆಗಳ ನಡುವಣ ಸಮತೋಲನ ಅದು. ಆಧುನಿಕತೆ ಅನಾಧುನಿಕತೆಗಳ ನಡುವಣ ಸಮತೋಲನ ಅದು. ಉನ್ಮತ್ತತೆ ಮತ್ತು ವ್ಯವಸ್ಥೆಗಳ ನಡುವಣ ಸಮತೋಲನ ಅದು ... ಈ ಸಂಘರ್ಷಗಳ ಸಮತೋಲನ ಮತ್ತು ಸಮ್ಮತಾಭಿಪ್ರಾಯದ ಅಕ್ಷದ ಮೇಲೆಯೇ ಸಾರ್ವಜನಿಕ

ಕ್ಷೇತ್ರದ ಜನಪ್ರಿಯ ರೂಪಗಳು ನಡೆಯುತ್ತವೆ"[೯೬] ಎನ್ನುವ ವಿಶ್ಲೇಷಣೆಯು ರುಜುವಾತುಪಡಿಸುತ್ತದೆ. ಅಲ್ಲದೆ ಇದು ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳ ವರ್ತನಾ ಸ್ವರೂಪವನ್ನು ಕುರಿತು ಲೇಖನದ ಪ್ರಾರಂಭದಲ್ಲಿ ಹೇಳಿರುವ ಕನ್ನಡ ಸಿನಿಮಾದ ರೂಪ ಮತ್ತು ಆಶಯಗಳನ್ನು ಕೇವಲ 'ಶುದ್ಧ ಸಮಾಜಶಾಸ್ತ್ರೀಯ, ಮನಃಶಾಸ್ತ್ರೀಯ ಕಾರಣಗಳ' ಮೂಲಕ ಗುರುತಿಸಲು ಸಾಧ್ಯವಿಲ್ಲ, ಸಂಶ್ಲೇಷಕವಾಗಿ ಗ್ರಹಿಸಬೇಕು ಎನ್ನುವ ಮಾತಿಗೆ ಕೊಟ್ಟಿರುವ ಸಮರ್ಥನೆಯೂ ಸಹ ಆಗಿದೆ.

೬.೮.೩ ಸಿನಿಮಾ ಎನ್ನುವ ಹೊಸ ಪಠ್ಯದಿಂದ ವಿಸ್ತರಣೆಗೊಂಡ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು

ಸಿನಿಮಾ ಆಧುನಿಕ ಕಾಲಘಟ್ಟದ ಪ್ರಭಾವಶಾಲಿ ಮಾಧ್ಯಮ. ಇದು ಸಾರ್ವಜನಿಕವಾಗಿ ಬೀರುವ ಪ್ರಭಾವ ಮತ್ತು ಪರಿಣಾಮಗಳು ಬಹುರೂಪಿಯಾದವು. ರಂಗಭೂಮಿ ಪ್ರಜ್ಞಾವಂತ ಬೌದ್ಧಿಕ ಪ್ರೇಕ್ಷಕರ ಮಾಧ್ಯಮವಾದರೆ ಸಿನಿಮಾ ಸಾಮಾನ್ಯ ಜನರ ಮಾಧ್ಯಮ. ಸಾಮಾನ್ಯ ಜನರ ಆಸೆ, ಕನಸು, ಭ್ರಮೆಗಳನ್ನು ಈ ಮಾಧ್ಯಮದಷ್ಟು ವೈವಿಧ್ಯಮಯವಾಗಿ ಕಟ್ಟಿಕೊಟ್ಟಿರುವ ಇನ್ನೊಂದು ಮಾಧ್ಯಮ ಇಲ್ಲ. ಹಾಗೆಯೇ, ಮಾನವ ಬದುಕಿನ ಉದ್ದೇಶ ಮತ್ತು ಅರ್ಥವನ್ನು ಶೋಧಿಸುವ ಗಂಭೀರ ಹೊಣೆಗಾರಿಕೆಯನ್ನು ಕೂಡಾ ಈ ಮಾಧ್ಯಮದ ಒಂದು ಧಾರೆ ನಿರ್ವಹಿಸಿಕೊಂಡು ಬಂದಿದೆ. ಆಧುನಿಕ ಮನುಷ್ಯನ ಬದುಕಿನ ಸಂಕೀರ್ಣ ವಾಸ್ತವವನ್ನು ಜನಪ್ರಿಯ, ಗಂಭೀರ, ಹಾಸ್ಯ, ಕಲಾತ್ಮಕ, ಪ್ರಯೋಗಾತ್ಮಕ, ಮೇಲೋಡ್ರಾಮ ಮತ್ತು ಫ್ಯಾಂಟಸಿ ಹೀಗೆ, ಹಲವು ಕ್ರಮಗಳಲ್ಲಿ ಸಿನಿಮಾ ಮಾಧ್ಯಮ ಶೋಧಿಸಿದೆ. ಮನುಷ್ಯನ ಚರಿತ್ರೆ ಮತ್ತು ನಾಗರಿಕತೆಯ ಕುರಿತಾದ ಬಹುರೂಪಿ ಸಂಕಥನಗಳನ್ನು, ವಾಗ್ವಾದಗಳನ್ನು ಕೂಡಾ ಮಂಡಿಸಿದೆ. ಸಾಹಿತ್ಯ ಮತ್ತು ಸಿನಿಮಾಗಳ ಸಂಬಂಧದ ಸ್ವರೂಪ ಕುರಿತು ಪಾಶ್ಚಾತ್ಯ ಬೌದ್ಧಿಕ ವಲಯದಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಅನೇಕ ತಾಂತ್ರಿಕ, ಸಾಮಾಜಿಕ ಮತ್ತು ಜನಪ್ರಿಯ ಸಿನಿಮಾಗಳು ಹುಟ್ಟುಹಾಕುವ ವಾಗ್ವಾದಗಳನ್ನು ಅಲ್ಲಿನ 'ಜನಪ್ರಿಯ ಸಂಸ್ಕೃತಿ' ಮತ್ತು 'ಸಮೂಹ ಸಂಸ್ಕೃತಿ'ಯ ಅಧ್ಯಯನಗಳು ಗಂಭೀರವಾಗಿ ಚರ್ಚಿಸಿವೆ, ಸಿನಿಮಾವನ್ನು ಸಂಸ್ಕೃತಿ ಪಠ್ಯದ ಒಂದು ಮುಖ್ಯ ರೂಪವಾಗಿ ಪರಿಗಣಿಸಿವೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆ ಸಂದರ್ಭದಲ್ಲಿ ಹೀಗೆ ಸಿನಿಮಾವನ್ನು ಪಠ್ಯವಾಗಿ ಪರಿಗಣಿಸಿರುವ ನಿದರ್ಶನ ಬಹಳ ಕಡಿಮೆ. ಸಾಹಿತ್ಯ ಮತ್ತು ಸಿನಿಮಾಗಳ ಸಂಬಂಧವನ್ನು ಹಲವು ನೆಲೆಗಳಲ್ಲಿ ಪರಿಶೀಲಿಸಲಾಗಿದೆ. ಆದರೆ, ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯ ಕೃತಿ ಅಥವಾ ಸಾಹಿತ್ಯ ಪರಂಪರೆ ರೀತಿ, ಸಿನಿಮಾ ಅಥವಾ ಸಿನಿಮಾ ಪರಂಪರೆಯನ್ನು ಪಠ್ಯವಾಗಿ ಭಾವಿಸಿಲ್ಲ. ಈ ದೃಷ್ಟಿಯಿಂದ ಡಿ.ಆರ್. ಅವರ ಈ ಲೇಖನ ಸಿನಿಮಾವನ್ನು ಪಠ್ಯವೆಂದು ಭಾವಿಸಿದೆ. ಹಾಗೆ, ಭಾವಿಸಿಕೊಳ್ಳುವಾಗ ಸಿನಿಮಾವನ್ನು ಸಂಸ್ಕೃತಿಯ ಆಶೋತ್ತರಗಳು ಪ್ರಕಟಗೊಂಡಿರುವ ಜೀವಂತ ಪಠ್ಯವೆಂದು ಪರಿಗಣಿಸಿರುವುದು ಬಹುಮುಖ್ಯವಾದ ಸಂಗತಿ. ಈ ಪಠ್ಯವು ರೂಪುಗೊಳ್ಳುವುದಕ್ಕೆ ಆಧಾರವಾಗಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ರೂಪ

ಹಾಗೂ ಆಶಯಗಳ ನಿರ್ಮಾಣದ ನೆಲೆಯಲ್ಲಿ ಹೇಗೆ ಪ್ರತಿಫಲಿಸಿದೆ; ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಮೌಲ್ಯಪಲ್ಲಟೀಕರಣವನ್ನು ಹೇಗೆ ಗ್ರಹಿಸಿದೆ ಮತ್ತು ಇವುಗಳನ್ನು ಅಭಿವ್ಯಕ್ತಿಸುವ ಕ್ರಮದಲ್ಲಿ ಹೇಗೆ ತನ್ನನ್ನು ತಾನು ರೂಪ ಹಾಗೂ ಆಶಯಾತ್ಮಕ ಆಯಾಮಗಳಲ್ಲಿ ಪರಿವರ್ತಿಸಿಕೊಂಡಿದೆ ಎನ್ನುವುದನ್ನು ಕುರಿತು ಚರ್ಚಿಸುವಾಗ ಡಿ.ಆರ್. ಸಿನಿಮಾ ಎನ್ನುವ ಪಠ್ಯವೊಂದಕ್ಕೇ ಅಂಟಿಕೊಳ್ಳುವುದಿಲ್ಲ. ಈ ಪಠ್ಯದ ಮೂಲಕ ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಧರ್ಮ ಮತ್ತು ಸಮಾಜ ಮೊದಲಾದವುಗಳ ಒಳಗಿನ ಸಂಕೀರ್ಣ ಸ್ವರೂಪದ ನೆಲೆಗಳನ್ನು ಸಹ ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತಾರೆ. ಇಷ್ಟೇ ಅಲ್ಲದೆ, ಈ ವಿಶ್ಲೇಷಣೆಯ ಮೂಲಕ ತಾತ್ವಿಕ ವ್ಯಾಖ್ಯಾನ ಮಾಡುತ್ತಾರೆ. ಇದು ಸಿನಿಮಾ ಎನ್ನುವ ಪಠ್ಯದ ಮೂಲಕವೇ ಅದಕ್ಕೆ ಭಿತ್ತಿಯಾಗಿರುವ ಸಮಾಜ ಮತ್ತು ಸಂಸ್ಕೃತಿಗಳೆನ್ನುವ ಮೂಲ ಪಠ್ಯಗಳನ್ನು ಕುರಿತು ಮಾಡಿದ ವ್ಯಾಖ್ಯಾನವೂ ಕೂಡಾ ಆಗಿಬಿಡುತ್ತದೆ.

ಈ ಹಿನ್ನೆಲೆಯಲ್ಲಿ ಡಿ.ಆರ್. ತಮ್ಮ ವಿಶಿಷ್ಟವಾದ 'ಸಾಹಿತ್ಯ ಸಂಸ್ಕೃತಿ' ಪರಿಕಲ್ಪನೆಯ ಮೂಲಕ, 'ಸಂಸ್ಕೃತಿಯ ಪಠ್ಯಗಳು' ಮತ್ತು 'ಸಂಸ್ಕೃತಿ ಪಠ್ಯ' ಎರಡನ್ನು ದ್ವಂದ್ವಾತ್ಮಕವಾಗಿ ಮತ್ತು ಸಂಶ್ಲೇಷಣಾತ್ಮಕವಾಗಿ ವಿಮರ್ಶಿಸುವ ಕ್ರಮದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ವಿಸ್ತರಿಸುತ್ತಾರೆ. ಇದನ್ನೇ ತಮ್ಮ 'ಆಧುನಿಕ ವಿಜ್ಞಾನದ ಸ್ವರೂಪ' , 'ನವಮೌಖಿಕತೆ ಮತ್ತು ಕಾವ್ಯ' ಹಾಗೂ 'ಆಧುನಿಕ ಭಾರತೀಯ ಪ್ರಭುತ್ವ ಮತ್ತು ವಿಜ್ಞಾನ ಸಂದೇಹಿಯಾಗಿ ಸಾಹಿತ್ಯ' ('ಸಾಹಿತ್ಯಕಥನ', ೧೯೯೬) ಇಂಥ ಲೇಖನಗಳಲ್ಲೂ ಸಹ ಭಿನ್ನವಾದ ಕ್ರಮಗಳಲ್ಲಿ ಮಾಡುತ್ತಾರೆ.

೬.೯ ಸಾಹಿತ್ಯಾನುಸಂಧಾನದ ಆಯಾಮಗಳ ರಾಜಕೀಯಾನುಸಂಧಾನದ ಸ್ವರೂಪ

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರ ಚಿಂತನೆಯ ಅನುಸಂಧಾನದ ಫಲವಾಗಿ ಜಾನಪದ ಸಾಹಿತ್ಯ, ಅನುಭಾವ ಸಾಹಿತ್ಯ, ಜನಪ್ರಿಯ ಸಾಹಿತ್ಯ ಮತ್ತು ಜನಪ್ರಿಯ ಕಲಾರೂಪಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳಾಗಿ ಪ್ರಕಟಗೊಂಡವು. ಈ ಪ್ರಕಾರಗಳ ವಿವಿಧ ಸ್ವರೂಪದ ಅಭಿವ್ಯಕ್ತಿಗಳನ್ನು ಹಾಗೂ ರಚನೆಗಳನ್ನು, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪಠ್ಯಗಳಾಗಿ ಪರಿಗಣಿಸಿ ವಿಶ್ಲೇಷಿಸಿರುವ ಹಾಗೂ ಚರ್ಚಿಸಿರುವ ಮಾದರಿಗಳನ್ನು ಈಗಾಗಲೇ ವಿವೇಚಿಸಲಾಗಿದೆ. ಆದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರವಾದಿ ಚಿಂತನೆಯ ಇನ್ನೂ ಕೆಲವು ಪರಿಕಲ್ಪನೆಗಳು, ಗ್ರಹಿಕೆಗಳು, ಚಿಂತನಾ ವಿಧಾನಗಳು ಅಥವಾ ನೋಟಕ್ರಮಗಳು ಹೀಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹೊಸ ಸಾಹಿತ್ಯಕ ಆಯಾಮಗಳನ್ನು ವಿಕಾಸಗೊಳಿಸಿಲ್ಲ. ಆದರೆ, ಇವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನ ಮತ್ತು ಸಾಹಿತ್ಯಾನುಸಂಧಾನದ ಪ್ರಧಾನ ಪ್ರಜ್ಞೆಯನ್ನು ಒಪ್ಪಂದದಲ್ಲಿ ಕಟ್ಟಿಕೊಡುತ್ತಿರುವ ಮುಖ್ಯ ಪ್ರೇರಣೆಗಳಾಗಿ, ಒತ್ತಡಗಳಾಗಿ ಹಾಗೂ ಒತ್ತಾಸೆಗಳಾಗಿ ಕೆಲಸ ಮಾಡುತ್ತಿವೆ. ಇದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ರಾಜಕೀಯ ಪ್ರಜ್ಞೆ' ಅಥವಾ 'ರಾಜಕಾರಣದ ಸ್ವರೂಪ' ಎಂದು

ವಿವರಿಸಬಹುದು. ಜಾಗತೀಕರಣ, ಕೋಮುವಾದ, ಮತೀಯವಾದ, ಹಿಂಸಾವಾದ ಮತ್ತು ಪರಿಸರವಾದ ಮೊದಲಾದವು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಆಧುನಿಕೋತ್ತರವಾದಿ ಚಿಂತನೆಯ ಫಲವಾಗಿ ಮುನ್ನೆಲೆಗೆ ಬಂದಿರುವ ಇಂಥ ಕೆಲವು ಮಹತ್ವದ ಅನುಸಂಧಾನದ ವಿಧಾನಗಳು. ಇವು ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳ ಅನುಸಂಧಾನದ ಸಂದರ್ಭದಲ್ಲಿ ಬಹುಮುಖ್ಯವಾದ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಇವು ಸಾಂಸ್ಕೃತಿಕ ಸಂಘರ್ಷವನ್ನು ತಮ್ಮ ಪ್ರಧಾನವಾದ ಗುರಿಯನ್ನಾಗಿ ಹೊಂದಿರುವಂತೆ ಕಂಡುಬರುತ್ತವೆ. ಆದರೆ, ಸಾಂಸ್ಕೃತಿಕ ಸಾಮರಸ್ಯದ ಸಾಧನೆ ಇವುಗಳ ನಿಜವಾದ ಗುರಿಯಾಗಿದೆ. ಇಂಥ ಮಹತ್ವಪೂರ್ಣವಾದ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ತಮ್ಮ ಕಾರ್ಯಮಾದರಿಗಳ ಪ್ರಮುಖ ತಾತ್ವಿಕತೆಯನ್ನಾಗಿ ಸ್ವೀಕರಿಸಿರುವ ಕಾರಣದಿಂದ ಈ ಕಾಲಘಟ್ಟದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ತೀವ್ರವಾದ ಪಲ್ಲಟಕ್ಕೆ ಒಳಗಾಗಿರುತ್ತದೆ.

ಈ ಪ್ರವೃತ್ತಿಯನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳ ವಿನ್ಯಾಸದಲ್ಲಿ ಗುರುತಿಸಬಹುದು.

೬.೧೦ ಅಧ್ಯಾಯದ ಫಲಿತಗಳು

'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ' ಚರ್ಚೆಯಿಂದ ಕಂಡುಕೊಂಡ ಮುಖ್ಯವಾದ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಸ್ವಾತಂತ್ರ್ಯೋತ್ತರ ಕಾಲಘಟ್ಟದ ಸಂಧಿಕಾಲದ ಅನುಸಂಧಾನದ ಫಲಗಳಾಗಿ ಕನ್ನಡ ನವ್ಯೋತ್ತರ ಕಾಲಘಟ್ಟದಲ್ಲಿ ವಿವಿಧ ಸಾಹಿತ್ಯದ ಮೀಮಾಂಸೆಗಳು ಪ್ರತಿಪಾದನೆಯಾದವು. ಇವು ಸಾಹಿತ್ಯಕ ಸ್ವರೂಪ, ಉದ್ದೇಶ ಮತ್ತು ಕಾರ್ಯಮಾದರಿ ಮೊದಲಾದವುಗಳನ್ನು ಕುರಿತ ಎತ್ತಿದ ಪ್ರಶ್ನೆಗಳು ಹಾಗೂ ಅವುಗಳಿಗೆ ನೀಡಲಾದ ಹೊಸ ಸ್ವರೂಪದ ಉತ್ತರಗಳ ವಿದ್ಯಮಾನವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ರೂಪುಗೊಳ್ಳುವುದರ ಹಿನ್ನೆಲೆಯಲ್ಲಿ ಇರುವ ಚಾರಿತ್ರಿಕ ಹಿನ್ನೆಲೆಯಾಗಿದೆ.

ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯಾನುಸಂಧಾನದಲ್ಲಿ ಸಾಹಿತ್ಯೇತರ ಅಭಿವ್ಯಕ್ತಿ ರಚನೆಗಳನ್ನು ಸಹ 'ಸಾಂಸ್ಕೃತಿಕ ಪಠ್ಯ'ಗಳೆಂದು ಪರಿಗಣಿಸಿದೆ. ಹಾಗೆಯೇ, ಸಾಹಿತ್ಯಕ ಮತ್ತು ಸಾಹಿತ್ಯೇತರ ಮಾನದಂಡಗಳ ಸಂಶ್ಲೇಷಣಾತ್ಮಕ ವಿಶ್ಲೇಷಣಾ ವಿಧಾನ ರೂಪಿಸಿಕೊಂಡಿದೆ. ಇವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವಿಕಾಸದ ಹಿಂದಿರುವ ಅತ್ಯಂತ ಮುಖ್ಯವಾದ ಎರಡು ಕಾರಣಗಳಾಗಿವೆ.

ಇ. ಸ್ವಾಂತಂತ್ರ್ಯೋತ್ತರ ಕಾಲಘಟ್ಟದ ನಿರ್ವಸಾಹತೀಕರಣ ಚಿಂತನೆಯ 'ದೇಸಿ ಸಂಸ್ಕೃತಿ ಶೋಧ' ಪರಿಕಲ್ಪನೆ ಹಾಗೂ ನವವಸಾಹತುಶಾಹಿಯ ಜಾಗತೀಕರಣದ ವಿರುದ್ಧದ ಪ್ರತಿರೋಧದ ಚಿಂತನೆಯ 'ದೇಸಿ ಸಂಸ್ಕೃತಿ ಸಂರಕ್ಷಣೆ' ಪರಿಕಲ್ಪನೆಗಳ ದ್ವಂದ್ವಾತ್ಮಕ ಪ್ರಯತ್ನಗಳ ಫಲರೂಪಿಗಳಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ರೂಪುಗೊಂಡಿವೆ.

ಈ. 'ದೇಸಿ ಸಂಸ್ಕೃತಿ ಶೋಧ'ದ ಪರಿಕಲ್ಪನೆಯ ಭಾಗವಾಗಿ, ಜಾನಪದ ಹಾಗೂ ಅನುಭಾವ ಸಾಹಿತ್ಯಗಳನ್ನು ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಧಾರೆಗಳಾಗಿ ಪ್ರತಿಪಾದಿಸಲಾಯಿತು. ಹೀಗಾಗಿ, ಇಂದು ಜಾನಪದ ಮತ್ತು ಅನುಭಾವಿಕ ರಚನೆಗಳನ್ನು ಕನ್ನಡದ ಮಹತ್ವದ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪಠ್ಯಗಳೆಂದು ಪರಿಭಾವಿಸಿ ಅನುಸಂಧಾನ ಮಾಡಲಾಗುತ್ತಿದೆ. ಸಮಕಾಲೀನ ಸಂದರ್ಭದ ಅತ್ಯಂತ ಗಂಭೀರವಾದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಮಸ್ಯೆಗಳಿಗೆ ಈ ಪಠ್ಯಗಳನ್ನು ಹೊಸದಾಗಿ ಅರ್ಥೈಸುವ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿರುತ್ತದೆ. ಇದನ್ನು 'ದೇಶೀ ಸಂಸ್ಕೃತಿ ಸಂರಕ್ಷಣೆ'ಯ ಬಹುಮುಖ್ಯವಾದ ವಿಧಾನವೆಂದು ಭಾವಿಸಲಾಗಿದೆ.

ಉ. 'ದೇಸಿ ಸಂಸ್ಕೃತಿ' ಎಂದರೆ, ಅದೊಂದು ಆದರ್ಶಾತ್ಮಕವಾದ ಯುಟೋಪಿಯನ್ ಸ್ಥಿತಿ ಎನ್ನುವ ಗ್ರಹಿಕೆಯ ಬದಲು, ಸಂಕೀರ್ಣವಾದ ಹಾಗೂ ದ್ವಂದ್ವಾತ್ಮಕವಾದ ವಾಸ್ತವ ಸ್ಥಿತಿಯೆಂದು ಗ್ರಹಿಸಿಕೊಳ್ಳಲಾಗಿದೆ. ಹೀಗಾಗಿಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ಸಂಸ್ಕೃತಿಯ ಪುನಾರಚನಾವಾದಿ ಅಥವಾ ಪುನರುತ್ಥಾನವಾದಿ ಧೋರಣೆಗಳ ಬದಲಾಗಿ, ಸಂಸ್ಕೃತಿಗಳನ್ನು ವಿಮರ್ಶಾತ್ಮಕ ನೆಲೆಯಲ್ಲಿ ಅರ್ಥೈಸಿಕೊಳ್ಳುವ ಕ್ರಮದಲ್ಲಿ ಆಕಾರ ಪಡೆದುಕೊಂಡಿವೆ.

ಊ. 'ದೇಸಿ ಸಂಸ್ಕೃತಿಯ ಸಂರಕ್ಷಣೆ'ಯ ಭಾಗವಾಗಿ ಜನಪ್ರಿಯ ಸಾಹಿತ್ಯ, ಜನಪ್ರಿಯ ಕಲಾರೂಪಗಳು, ಜನಪ್ರಿಯ ಮಾಧ್ಯಮಗಳು, ಆಧುನಿಕ ವಿಜ್ಞಾನ ಮತ್ತು ಪರಿಸರ ಮೊದಲಾದ ಅಭಿವ್ಯಕ್ತಿ ರೂಪಗಳು ಹಾಗೂ ಜ್ಞಾನ ರೂಪಗಳು ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಪಠ್ಯಗಳಾಗಿ ಸೇರಿಕೊಂಡಿವೆ. ಕನ್ನಡ ಸಾಹಿತ್ಯ ಪರಂಪರೆಯ ಹಾಗೂ ಸಾಹಿತ್ಯ ಚಿಂತನೆಯ ಚರಿತ್ರೆಯಲ್ಲಿ ವಿಶಿಷ್ಟವಾದ ವರ್ಣಾಶ್ರಮ ವ್ಯವಸ್ಥೆಯ ರೂಪದಲ್ಲಿದ್ದ ಶ್ರೇಷ್ಠ-ಕನಿಷ್ಠ, ಉಚ್ಚ-ನೀಚ ಹಾಗೂ ಪ್ರಧಾನ-ಅಧೀನ ಮೊದಲಾದಂಥ ತಾರತಮ್ಯಾಧಾರಿತ ಪರಿಕಲ್ಪನೆಗಳು ಹುಟ್ಟುಹಾಕಿದ್ದ ಹಲವು ಸ್ವರೂಪದ ವಿಭಜನೆಗಳನ್ನು ಈ ಹೊಸ ಪಠ್ಯಗಳ ಸ್ವೀಕಾರ ಪ್ರಕ್ರಿಯೆ ಒಡೆದುಹಾಕಿತು. ಈ ಆಧುನಿಕ ಪಠ್ಯಗಳನ್ನು ಸಹ ಶ್ರೇಷ್ಠ ಮಟ್ಟದ ಸಾಹಿತ್ಯಕ ಪಠ್ಯಗಳಂತೆಯೇ ಪರಿಗಣಿಸಿದ್ದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಅರ್ಥಪೂರ್ಣ ಕ್ರಮಗಳಲ್ಲಿ ವಿಸ್ತರಿಸಿತು.

ಋ. ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಆಧುನಿಕೋತ್ತರ ಚಿಂತನೆಯನ್ನು ಸಾಹಿತ್ಯಾನುಸಂಧಾನದ ವಿವೇಕವಾಗಿ ಬಳಸುವ ಸಂದರ್ಭದಲ್ಲಿ ಈಗಾಗಲೇ 'ಓರಿಯಂಟಲಿಸಂ'ನಿಂದ ಸಾಕಷ್ಟು ಪಾಠ ಕಲಿತಿದ್ದರ ಹಿನ್ನೆಲೆಯಲ್ಲಿ, ಅದನ್ನು ತೃತೀಯ ಜಗತ್ತಿನ ಸಮಾಜ ಹಾಗೂ ಸಂಸ್ಕೃತಿಗಳ ಸಂದರ್ಭಕ್ಕನುಸಾರವಾಗಿ ವಿಮರ್ಶಾತ್ಮಕವಾಗಿ ಸ್ವೀಕರಿಸುವ ಅರ್ಥಪೂರ್ಣವಾದ ವಿವೇಕವನ್ನು ತೋರಿಸಿದೆ. ಈ ವಿವೇಕವೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಹಿತ್ಯಕ ಪಠ್ಯಗಳನ್ನು ಹಾಗೂ ಸಾಂಸ್ಕೃತಿಕ ಪಠ್ಯಗಳನ್ನು ಮರುವ್ಯಾಖ್ಯಾನಿಸಿಕೊಳ್ಳುವ ಸಂದರ್ಭದಲ್ಲಿ ನವಬಂಡವಾಳಶಾಹಿ ತೋಡುವ ಹಳ್ಳಕ್ಕೆ ಬೀಳದಂತೆ ಪೊರೆದಿದೆ. ಹಾಗೆಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಚರಿತ್ರೆ, ವಿಜ್ಞಾನ ಮತ್ತು ಪರಿಸರದ ಪ್ರಶ್ನೆಗಳನ್ನು 'ಪಠ್ಯ'ಗಳಾಗಿ ಪರಿಭಾವಿಸುವಾಗ ಅಳವಡಿಸಿಕೊಂಡ ಎಚ್ಚರ ಸಹ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ಅರ್ಥಪೂರ್ಣ ಕ್ರಮಗಳಲ್ಲಿ ವಿಕಾಸಗೊಳಿಸಿದೆ.

ೠ. ಜಾನಪದವೆಲ್ಲವೂ ಜನಪರವಲ್ಲ; ಹಾಗೆಯೇ ಅನುಭಾವವೆಲ್ಲವೂ ಅಸಮಕಾಲೀನ ಹಾಗೂ ಅಚಾರಿತ್ರಿಕವಲ್ಲ. ಇವೆರಡೂ ರೂಪಗಳೂ ಸಹ ಸಾಂಸ್ಕೃತಿಕ ರಾಜಕಾರಣದ ಫಲಗಳೂ ಹೌದು; ಹಾಗೆಯೇ ಸಾಂಸ್ಕೃತಿಕ ಸಂಕಥನದ ಮಾಧ್ಯಮಗಳೂ ಹೌದು ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಜಾನಪದ ಹಾಗೂ ಅನುಭಾವ ಸಾಹಿತ್ಯ ಕುರಿತ ಸಾಹಿತ್ಯಕ ಆಯಾಮಗಳಾಗಿವೆ.

ಎ. ದೈನಿಕ ಬದುಕಿನ ಸಾಮಾನ್ಯ ವಿವರಗಳ ಚಿತ್ರಣ ಕೂಡಾ 'ಲೋಕದೃಷ್ಟಿ'ಯನ್ನು ಅಥವಾ 'ಐಡಿಯಾಲಜಿ'ಯನ್ನು ಕಟ್ಟುವ ಒಂದು ಅತ್ಯುತ್ತಮ ವಿಧಾನವೇ ಆಗಿದೆ ಎನ್ನುವುದನ್ನು ಕನ್ನಡದ ಜನಪ್ರಿಯ ಮಹಿಳಾ ಸಾಹಿತ್ಯ ಸಮರ್ಪಕವಾಗಿ ನಿರೂಪಿಸಿದೆ ಎನ್ನುವ ತಾತ್ವಿಕ ವ್ಯಾಖ್ಯಾನವು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳಲ್ಲಿ ಜನಪ್ರಿಯ ಸಾಹಿತ್ಯ ಪ್ರಮುಖವಾದ ಸ್ಥಾನ ಪಡೆಯಲು ಮುಖ್ಯ ಕಾರಣವಾಗಿದೆ. ನಿರ್ದಿಷ್ಟ ಸಮಾಜ ಅಥವಾ ಸಮುದಾಯಜನ್ಯ ಲೋಕದೃಷ್ಟಿಯು ತನ್ನ ಭಾಷಿಕ ಸಾಂಕೇತಿಕತೆ ಮತ್ತು ಪ್ರತಿಮಾತ್ಮಕತೆ ವಿಧಾನಗಳ ಮೂಲಕ ಸಾಮಾಜೀಕರಣ ಹಾಗೂ ಸಂಸ್ಕೃತೀಕರಣಗಳ ವಿನ್ಯಾಸಗಳನ್ನು ಪ್ರತಿಪಾದಿಸುತ್ತದೆ. ಇದಕ್ಕೆ ಕನ್ನಡ ಮಹಿಳಾ ಸಾಹಿತ್ಯದ ಆರಂಭಿಕ ಹಂತದಲ್ಲೇ ಗಟ್ಟಿಯಾದ ನಿದರ್ಶನವಿದೆ ಎನ್ನುವ ಚಿಂತನೆಯು ಕನ್ನಡ ಮಹಿಳಾ ಸಾಹಿತ್ಯವನ್ನು ಸಾಂಸ್ಕೃತಿಕ ಸಂಕಥನದ ಗಂಭೀರ ರೂಪವಾಗಿ ಪ್ರತಿಪಾದಿಸಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಬೆಳವಣಿಗೆಯಲ್ಲಿ ಇದೊಂದು ಮಹತ್ವದ ಮೆಟ್ಟಿಲು.

ಐ. ಜನಪ್ರಿಯ ಸಿನಿಮಾಗಳು ಯುಗಧರ್ಮದ ಅಧಿಕಾರ ಸಂಸ್ಥೆಗಳ ರಚನೆಯ ಶಿಥಿಲೀಕರಣವನ್ನು ಮತ್ತು ಮೌಲ್ಯವ್ಯವಸ್ಥೆಗಳ ಪಲ್ಲಟೀಕರಣವನ್ನು ತಮ್ಮದೇ ಆದ ವಿಶಿಷ್ಟ ಕ್ರಮಗಳಲ್ಲಿ ಮಂಡಿಸುತ್ತವೆ ಎನ್ನುವ ವ್ಯಾಖ್ಯಾನವು, ಕನ್ನಡ ಅಥವಾ ಯಾವುದೇ ಭಾಷೆಯ ಚಿತ್ರಗಳನ್ನು 'ಸಾಂಸ್ಕೃತಿಕ ಪಠ್ಯ'ಗಳೆಂದು ಪ್ರತಿಪಾದಿಸಿತು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಈ ನವೀನ ಸಾಂಸ್ಕೃತಿಕ ಪಠ್ಯಗಳು ಕೇವಲ ವಿಮರ್ಶೆಯ ಆಕರಗಳಷ್ಟೇ ಆಗದೆ, ಕನ್ನಡ ಸಾಹಿತ್ಯ ಪರಂಪರೆಗಳ ಜೊತೆ ಸಖ್ಯ ಬೆಳೆಸಿದವು. ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವಿಸ್ತರಣೆಯ ಒಂದು ಮಹತ್ವದ ವಿದ್ಯಮಾನವಾಗಿದೆ.

ಐ. ಸಾಹಿತ್ಯಕ ಪಠ್ಯಗಳ ಜೊತೆ ಸಾಹಿತ್ಯೇತರ ಪಠ್ಯಗಳ ಸಮಾನ ಪರಿಗಣನೆ ಮತ್ತು ಎಲ್ಲ ಪಠ್ಯಗಳೂ ಸಾಂಸ್ಕೃತಿಕ ಪಠ್ಯಗಳೆಂಬ ಸಮತಾವಾದಿ ಗ್ರಹಿಕೆಯು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ವಿಕಾಸದ ಹಿನ್ನೆಲೆಯಲ್ಲಿರುವ ಪ್ರಮುಖ ಪ್ರೇರಣೆಯಾಗಿದೆ. ಪಠ್ಯಗಳ ಸೌಂದರ್ಯ ಮೀಮಾಂಸಕ ನೆಲೆಯ ಬದಲಾಗಿ, ಅವುಗಳ ಸಾಂಸ್ಕೃತಿಕ ಸಂಕಥನದ ಆಯಾಮಕ್ಕೂ ಕೊಟ್ಟ ಮನ್ನಣೆಯು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಒಂದು ವಿಶಿಷ್ಟವಾದ ಚಹರೆಯಾಗಿದೆ.

ಒ. ಕೃತಿಗಳ ಪ್ರಾಯೋಗಿಕ ವಿಶ್ಲೇಷಣೆ, ವಸ್ತುನಿಷ್ಠ ವಿಶ್ಲೇಷಣೆ, ಮೌಲ್ಯಮಾಪನ ಹಾಗೂ ಸಾಹಿತ್ಯಕ ಶ್ರೇಷ್ಠತೆಯ ಶ್ರೇಣಿನೀಡಿಕೆಗಳಂಥ ಸಾಂಪ್ರದಾಯಕ ವಿಧಾನಗಳ ಬದಲಾಗಿ, ಪಠ್ಯಗಳ ವಿಶ್ಲೇಷಣೆಗೆ 'ಕಥನ' ಮತ್ತು 'ಸಂಕಥನ' ವಿಧಾನಗಳನ್ನು ಅಳವಡಿಸಿಕೊಂಡಿದ್ದರಿಂದ ಸಾಂಸ್ಕೃತಿಕ ಪಠ್ಯಗಳ ಬಹುರೂಪಿ ಆಯಾಮಗಳ ಚರ್ಚೆ ಸಾಧ್ಯವಾಯಿತು. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಒಂದು ವಿಶಿಷ್ಟ ಚಹರೆಯಾಗಿದೆ.

ಓ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ರೂಪಗಳು ಕೇವಲ ತಮ್ಮ ವಿಶಿಷ್ಟವಾದ ಸಾಹಿತ್ಯ ಮೀಮಾಂಸೆಗಳನ್ನು ಮಂಡಿಸಿ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಆ ಮೀಮಾಂಸೆಗಳ ಪ್ರಾಯೋಗಿಕ ರೂಪವಾದ ಹೊಸ ವಿಮರ್ಶಾ ಪರಿಭಾಷೆಗಳು, ಪರಿಕರಗಳು ಮತ್ತು ಸಾಧನಗಳನ್ನು ಸಹ ರೂಪಿಸಿದವು. ಇವು ಸಾಹಿತ್ಯ ವಿಮರ್ಶಾ ವಿಧಾನಗಳ ಸಾಮಾನ್ಯ ಸ್ವರೂಪಕ್ಕಿಂತ ಸಾಕಷ್ಟು ಭಿನ್ನವಾದ ಹಾಗೂ ತಮ್ಮ ಸ್ವವಿಶಿಷ್ಟ ಸಾಹಿತ್ಯ ಮೀಮಾಂಸೆಯ ತಾತ್ವಿಕ ಗ್ರಹಿಕೆಗಳಿಗೆ ಅನುರೂಪವಾದ ಹೊಸ ಅರ್ಥಪೂರ್ಣ ವಿಶ್ಲೇಷಣಾ ವಿಧಾನಗಳಾಗಿದ್ದವು. ಇಂಥ 'ನೂತನ' ವಿಮರ್ಶಾ ವಿಧಾನಗಳು 'ಆಧುನಿಕ ಸಾಹಿತ್ಯ ರೂಪಗಳನ್ನು' ಹಾಗೂ 'ಪಠ್ಯ'ಗಳನ್ನು ಹೊಸ ಬಗೆಯ ಶೋಧಗಳಿಗೆ

ಒಳಪಡಿಸಿದವು ಹಾಗೂ ವ್ಯಾಖ್ಯಾನಿಸಿದವು. ಈ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ವ್ಯಾಪಕವಾದ ನೆಲೆಗಳನ್ನು ಪಡೆದುಕೊಂಡವು.

೯. ಸಾಹಿತ್ಯ ವಿಮರ್ಶೆಯಲ್ಲಿ ಸಾಹಿತ್ಯೇತರ ವೈಚಾರಿಕ ಅಥವಾ ಸೈದ್ಧಾಂತಿಕ ಆಕೃತಿಗಳನ್ನು ಬಳಸುತ್ತಿದ್ದ ಕ್ರಮಕ್ಕೆ ಬದಲಾಗಿ, 'ಸಾಹಿತ್ಯ ಸಂಸ್ಕೃತಿ' ಅಥವಾ 'ಸಾಹಿತ್ಯಕ ಜ್ಞಾನ-ಪರಿಜ್ಞಾನ-ಪರಿಭಾಷೆ'ಯನ್ನು ಎಲ್ಲಾ ಸ್ವರೂಪದ ಹಾಗೂ ಎಲ್ಲಾ ಪ್ರಕಾರದ ಪಠ್ಯಗಳ ಅನುಸಂಧಾನಕ್ಕೂ ಸಮರ್ಥವಾಗಿ ಬಳಸಲಾಯಿತು. ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಅದ್ವಿತೀಯವಾದ ಸಾಧನೆ. ಇದರಿಂದಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳು ಅನೂಹ್ಯ ಪ್ರಮಾಣದಲ್ಲಿ ಮತ್ತು ಅರ್ಥಪೂರ್ಣ ಸ್ತರಗಳಲ್ಲಿ ವಿಕಾಸಗೊಂಡವು.

೧೦. ಪಠ್ಯಾನುಸಂಧಾನದಲ್ಲಿ ಪ್ರಚುರಕ್ಕೆ ಬಂದ 'ಭಿನ್ನಪಠ್ಯ', 'ಬಹುಪಠ್ಯ', 'ವ್ಯಕ್ತ ಪಠ್ಯ', 'ಸುಪ್ತ ಪಠ್ಯ' ಮತ್ತು 'ಅಂತರ್‌ಪಠ್ಯ' ಮೊದಲಾದಂಥ ವಿಧಾನಗಳು ಒಂದು ಭಾಷಿಕ ಪರಿಸರದ ನಿರ್ದಿಷ್ಟ ಕಾಲ ಹಾಗೂ ಸಂಸ್ಕೃತಿ ಸನ್ನಿವೇಶದಲ್ಲಿ ರೂಪುಗೊಂಡಿರುವ ಪಠ್ಯದ ವಿಶ್ಲೇಷಣೆಗೆ ಹೊಸ ಸಾಧ್ಯತೆಗಳನ್ನು ಕಲ್ಪಿಸಿದವು. ಇದರಿಂದ ಸಮಕಾಲೀನ ಆಶೋತ್ತರಗಳ ಹಿನ್ನೆಲೆಯಲ್ಲಿ ಪಠ್ಯಾನುಸಂಧಾನ ಮಾಡುವಂಥ ಅರ್ಥಪೂರ್ಣವಾದ ಹೊಸ ವಿಧಾನ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ವಿದ್ಯಮಾನವು ಸಮಾಜ, ಚರಿತ್ರೆ, ರಾಜಕಾರಣ, ಭಾಷೆ ಮೊದಲಾದ ರಚನೆಗಳನ್ನು ಹೊಸದಾಗಿ ಅರ್ಥೈಸಿಕೊಳ್ಳುವುದಕ್ಕೆ ಸಂಬಂಧಿಸಿದ ಹಲವು ದಾರಿಗಳನ್ನು ತೆರೆಯಿತು. ಆತ್ಯಂತಿಕವಾಗಿ ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳನ್ನು ವ್ಯಾಪಕವಾದ ಪ್ರಮಾಣದಲ್ಲಿ ವಿಸ್ತರಿಸಿತು.

ಕೊನೆ ಟಿಪ್ಪಣಿಗಳು

೧. ರಾಜಶೇಖರ ಹತಗುಂದಿ (ಸಂ), ಅಗ್ನಿ ವಾರ ಪತ್ರಿಕೆ, ಬೆಂಗಳೂರು, ೮ನೇ ಡಿಸೆಂಬರ್ ೨೦೧೧, ಪುಟ ೧೨.

೨. ಅದೇ, ಪುಟ ೧೨.

೩. ನಟರಾಜ್ ಹುಳಿಯಾರ್ (ಸಂ), ತೆರೆದ ಪಠ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೊದಲ ಮುದ್ರಣ, ೨೦೧೨ ಪುಟ ೨೧೦.

೪. ಅದೇ, ಪುಟ ೨೧೧.

೫. ಅದೇ, ಪುಟ ೨೧೨.

೬. ಅದೇ, ಪುಟ ೨೨೧.

೭. ಅದೇ, ಪುಟ ೨೨೧.

೮. ಅದೇ, ಪುಟ ೨೧೬.

೯. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (ಸಂ), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೪, ಪುಟ ೧೯೮.

೧೦. ಅದೇ, ಪುಟ ೨೧೦.

೧೧. ನಾಗರಾಜ್ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಸಾಗರ, ೧೯೯೬, ಪುಟ ೩೩

೧೨. ಅದೇ, ಪುಟ ೪೪

೧೩. ಅದೇ, ಪುಟ ೬೨

೧೪. ಅದೇ, ಪುಟ ೬೪

೧೫. ಅದೇ, ಪುಟ ೬೬

೧೬. ಅದೇ, ಪುಟ ೫೯

ಅಧ್ಯಾಯ–ಏಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳು

ಅಧ್ಯಾಯ–೭: ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳು

ನಾನು ಗ್ರಹಿಸಿದಂತೆ ನಮ್ಮ ಸಾಂಸ್ಕೃತಿಕಲೋಕವು 'ಸ್ಥೂಲ'ವಾಗಿ ಮೂರು ವಲಯಗಳಲ್ಲಿ ಧ್ರುವೀಕರಣಗೊಳ್ಳುತ್ತಿದೆ. ಸಾಂಸ್ಕೃತಿಕ ಧ್ರುವೀಕರಣದ ಮೂರು ವಲಯಗಳನ್ನು ಮುಂದಿನಂತೆ ವಿವರಿಸುತ್ತೇನೆ:

೧. ಜಾತಿವಾದ ಮತ್ತು ಕೋಮುವಾದ ಪ್ರಧಾನ ವಲಯವೊಂದು ಗಟ್ಟಿಗೊಳ್ಳುತ್ತಿರುವ ಎಲ್ಲ ಲಕ್ಷಣಗಳೂ ಸ್ಪಷ್ಟವಾಗಿವೆ. ಜಾತಿವಾದ ಮತ್ತು ಕೋಮುವಾದವನ್ನು ಮೊದಮೊದಲು ಮಗುಮ್ಮಾಗಿ ಇಟ್ಟುಕೊಂಡಿದ್ದವರು ಸಹ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಸ್ಪಷ್ಟವಾಗಿ ಬಯಲಾಗುತ್ತಿದ್ದಾರೆ...ಈ ವಲಯಕ್ಕೆ ಮುಖವಾಡಗಳಿಲ್ಲ ನಿಜಮುಖದ ಎರಡು ಕಣ್ಣುಗಳಾಗಿ ಜಾತಿವಾದ ಮತ್ತು ಕೋಮುವಾದಗಳಿರುವುದರಿಂದ ಅದರ ನೋಟವೂ ಸ್ಪಷ್ಟ; ನಮ್ಮ ನೋಟವೂ ಸ್ಪಷ್ಟ. ಹೀಗಾಗಿ ಇವರ ಸಾಂಸ್ಕೃತಿಕ 'ಆವರಣ'ಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ.

೨. ಜಾತಿವಾದ ಮತ್ತು ಕೋಮುವಾದದ ಪರವಾಗಿ ಇಲ್ಲವೆಂಬ ಭಾವನೆ ಮೂಡಿಸುತ್ತಲೇ ಮೇಲ್ವರ್ಣ ಮತ್ತು ಮೇಲ್ವರ್ಗಗಳ ಸಂವೇದನಾ ಸೂಕ್ಷ್ಮತೆಗಳನ್ನು ಪ್ರಧಾನವಾಗಿರಿಸಿಕೊಂಡಿರುವ ಇನ್ನೊಂದು ವಲಯವು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಕಟವಾಗುತ್ತಿದೆ... ಕಲಾತ್ಮಕತೆ ಮತ್ತು ಶ್ರೇಷ್ಠತೆಗಳ ಗುತ್ತಿಗೆ ಪಡೆದ ವಲಯವೇ ಈ ಮಧ್ಯಮಮಾರ್ಗ ವಲಯ; ದ್ವಿಪಾತ್ರಾಭಿನಯನವನ್ನೂ ಏಕಪಾತ್ರಾಭಿನಯಕ್ಕೆ ತಿರುಗಿಸುವ ಛಾತಿಯುಳ್ಳ ಮತ್ತು ಸಾಂಸ್ಕೃತಿಕ ವಲಯವು 'ಸಾಂಸ್ಕೃತಿಕ ಸುಪ್ರೀಂಕೋರ್ಟ್' ಆಗುವ ಹವಣಿಕೆಯಿಂದ ಕೂಡಿದೆ. ಇದು ಹವಣಿಕೆಯ ಹಂತವನ್ನು ದಾಟಿ ಅಧಿಕಾರದ ಹಂತಕ್ಕೆ ಬರುತ್ತಿರುವುದೇ ಇಂದಿನ ಅಪಾಯ.

೩. ಇನ್ನೊಂದು ಸಾಂಸ್ಕೃತಿಕ ವಲಯ ಎಲ್ಲ ಪ್ರಗತಿಪರರನ್ನು ಒಳಗೊಂಡಿದ್ದೆಂದು ಹೇಳಬಹುದು. ಸಾಮಾಜಿಕ ಪ್ರಜ್ಞೆ, ಕಾಳಜಿ ಮತ್ತು ಬದ್ಧತೆಯ ಪ್ರತಿಪಾದಕರಾದ ಪ್ರಗತಿಪರರು ಒಂದೇ ಚಿಂತನಧಾರೆಯನ್ನು ಹೊಂದಿದವರಲ್ಲ. ಗಾಂಧಿ, ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್, ಮಾವೋ, ಲೆನಿನ್ – ಹೀಗೆ ವಿವಿಧ ಚಿಂತನಧಾರೆಗಳನ್ನು ಪ್ರಧಾನವಾಗಿ ನಂಬಿದವರು ಈ ವಲಯದಲ್ಲಿದ್ದಾರೆ.. ..ನಿಜವಾದ ಸಮಸ್ಯೆಯಿರುವುದು ನಿಜವಾದ ಸಾಂಸ್ಕೃತಿಕ ವಿರೋಧಿಯನ್ನು ಗುರುತಿಸುವಲ್ಲಿ. ಜಾತಿ ಮತ್ತು ಕೋಮುವಾದದ ಪರವಾಗಿ ಸ್ಪಷ್ಟವಾಗಿ ಗೋಚರಿಸುವ ವಲಯವನ್ನು ವಿರೋಧಿಯೆಂದು ಗುರುತಿಸಿಕೊಳ್ಳುವುದು ಸುಲಭ. ಹಾಗೆ ನೋಡಿದರೆ, ಅವರು ಅಪಾಯಕಾರಿ ಪ್ರಾಮಾಣಿಕರು ಮುಚ್ಚುಮರೆಯಿಲ್ಲದ್ದರಿಂದ ತಮ್ಮ ವಿಚಾರದ ವಿಷಯದಲ್ಲಿ ಪ್ರಾಮಾಣಿಕರು; ಆದರೆ ಮಧ್ಯಮಮಾರ್ಗಿ ಸಾಂಸ್ಕೃತಿಕ ವಲಯಕ್ಕೆ ಈ ಮಾತನ್ನು ಹೇಳುವಂತಿಲ್ಲ.

ಬರಗೂರು ರಾಮಚಂದ್ರಪ್ಪ, "ದೇಶವಿದೇನಹಾ! ಕಾಲವಿದೇನಹಾ!" ಕೃತಿಯಿಂದ.

೭.೧ ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ರೂಪುಗೊಳ್ಳುವಿಕೆಯ ಹಿನ್ನೆಲೆಯಲ್ಲಿರುವ ಹಲವು ಮುಖ್ಯವಾದ ಕಾರಣಗಳಲ್ಲಿ 'ರಾಜಕಾರಣ' ಕೂಡಾ ಒಂದು. ಹಾಗೆ ನೋಡಿದರೆ, ಇದೇ ಅತ್ಯಂತ ಮಹತ್ವದ ಕಾರಣವೆಂದು ಹೇಳಿದರೂ ಪ್ರಾಯಶ: ತಪ್ಪಾಗಲಾರದು. ಈ ಸಂದರ್ಭದಲ್ಲಿ ನಾವು

ಸ್ಪಷ್ಟಪಡಿಸಿಕೊಳ್ಳಬೇಕಾಗಿರುವ ಮುಖ್ಯವಾದ ವಿಚಾರವೆಂದರೆ, ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಬಳಸುವ 'ರಾಜಕಾರಣ' ಎನ್ನುವ ಪರಿಭಾಷೆ ಮತ್ತು ಇದರಾಚೆಗೆ ಬಳಸುವ ಪರಿಭಾಷೆಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ ಹಾಗೂ ಮೂಲಭೂತವಾದ ಭಿನ್ನತೆಯಿದೆ. ಆದರೆ, ಹೀಗೆ ಹೇಳಿದ ಮಾತ್ರಕ್ಕೆ, ಇವೆರಡೂ ಪರಸ್ಪರ ಒಂದಕ್ಕೊಂದು ಸಂಬಂಧವಿಲ್ಲದಿರುವ ಮತ್ತು ಸಂಪೂರ್ಣವಾಗಿ ಪ್ರತ್ಯೇಕವಾಗಿರುವ ವಿಚಾರಗಳು ಎಂದೇನೂ ಅರ್ಥವಲ್ಲ. ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಬಳಸುವ ರಾಜಕಾರಣದ ಪರಿಭಾಷೆ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಬಳಸುವ 'ರಾಜಕಾರಣ'ದ ಪರಿಭಾಷೆಗಳ ಮಧ್ಯೆ ನೇರವಾದ ಸಂಬಂಧವಿದೆ. ಆದರೆ ಈ ಸಂಬಂಧ ಪರಸ್ಪರ ದ್ವಂದ್ವಾತ್ಮಕವಾಗಿದೆ ಹಾಗೂ ಸಂಘರ್ಷಾತ್ಮಕವಾಗಿದೆ. ಹೀಗಾಗಿಯೇ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಉಪಯೋಗಿಸುವ 'ರಾಜಕಾರಣ'ದ ಪರಿಭಾಷೆಯ ಸ್ವರೂಪ ಹೆಚ್ಚು ಸಂಕೀರ್ಣತೆಯಿಂದ ಕೂಡಿದೆ.

೭.೧.೧ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ರಾಜಕಾರಣದ ನೆಲೆಗಳ ಸ್ವರೂಪ

ರಾಜಕಾರಣದ 'ಪರಿಭಾಷೆ'ಯು ಆಧುನಿಕ ಕನ್ನಡ ವಿಮರ್ಶೆಯ ಸಂದರ್ಭದಲ್ಲಿ ಹಲವು ನೆಲೆಗಳಲ್ಲಿ ಪ್ರಕಟವಾಗುತ್ತಾ ಬಂದಿದೆ. ಕೆಲವೊಮ್ಮೆ ಇದು ಸಾಹಿತ್ಯ, ಸಂಸ್ಕೃತಿ, ಭಾಷೆ, ನೆಲ, ಜಲ, ಮೊದಲಾದ 'ನಾಡು-ನುಡಿ'ಯ ಪ್ರಶ್ನೆಗಳ ರೂಪದಲ್ಲಿ ಪ್ರಕಟವಾಗಿದೆ. ಮುಖ್ಯವಾಗಿ ನವೋದಯ ಸಾಹಿತ್ಯ ವಿಮರ್ಶೆಯು 'ರಾಷ್ಟ್ರೀಯತೆ'ಯ ಪರಿಕಲ್ಪನೆಗೆ ಅಭಿಮುಖವಾಗಿ, 'ಉಪರಾಷ್ಟ್ರೀಯತೆ'ಯ ಅಸ್ತಿತ್ವ ಹಾಗೂ ಅನನ್ಯತೆಗಳನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಕನ್ನಡ ವಿಮರ್ಶೆಯ 'ರಾಜಕಾರಣ' ಆಕಾರ ಪಡೆದುಕೊಂಡಿದ್ದು ಇದೇ ಕ್ರಮದಲ್ಲಿ. ಹೀಗಾಗಿಯೇ ಈ ಕಾಲಘಟ್ಟದ ಯಾರೇ ಮುಖ್ಯ ವಿಮರ್ಶಕರ ಬರವಣಿಗೆಯ ಹಿನ್ನೆಲೆಯಲ್ಲಿರುವುದು ಕೇವಲ ಸಾಹಿತ್ಯ ಸಂಸ್ಕಾರ ಹಾಗೂ ಅಭಿರುಚಿ ನಿರ್ಮಾಣದ ಸಹೃದಯ ದೃಷ್ಟಿಕೋನವಷ್ಟೇ ಇರುವುದಿಲ್ಲ. ಇದಕ್ಕಿಂತ ಮುಖ್ಯವಾಗಿ, 'ಕವಿರಾಜ ಮಾರ್ಗ' ಕಾಲದಿಂದ ಕನ್ನಡ ಮನಸ್ಸು ಹಾಗೂ ಪ್ರಜ್ಞೆ ಪ್ರತಿಪಾದಿಸಿಕೊಂಡು ಬಂದಿರುವ 'ಭಾವಿಸಿದ ಜನಪದ' ಮತ್ತು 'ವಸುಧಾವಲಯವಿಲೀನ ವಿಶೇಷ'ವಾಗಿರುವ ಕರ್ನಾಟಕ 'ರಾಜ್ಯ' ಅಥವಾ 'ರಾಷ್ಟ್ರ'ವನ್ನು ಪ್ರಾದೇಶಿಕವಾಗಿ, ಭಾಷಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಿರ್ವಚಿಸುವ ರಾಜಕಾರಣ ಮುಖ್ಯವಾದ ತಾತ್ವಿಕ ಭಿತ್ತಿಯಾಗಿ ಇರುತ್ತದೆ. ಇದನ್ನು ಕರ್ನಾಟಕ ರಾಜ್ಯ ಹಾಗೂ ಕರ್ನಾಟಕ ಸಂಸ್ಕೃತಿ ಸ್ವರೂಪವನ್ನು ಕೇವಲ ಭೌಗೋಳಿಕ ನೆಲೆಯಲ್ಲಿ ಅಥವಾ ಪ್ರಾದೇಶಿಕ ನಕ್ಷೆಯಲ್ಲಿ ಕಟ್ಟಲು ಹೊರಟ ಈ ಕಾಲಘಟ್ಟದ ಕನ್ನಡದ ಪ್ರಸಿದ್ಧ ಸಂಸ್ಕೃತಿ ಚಿಂತಕರಿಗಿಂತ ಭಿನ್ನವಾಗಿ, ಇವುಗಳನ್ನು 'ನಿರ್ಭೌಗೋಳಿಕ' ಮತ್ತು 'ನಿಸ್ಸೀಮೆ'ಯ ವಿನ್ಯಾಸದಲ್ಲಿ ನವೋದಯ ವಿಮರ್ಶೆ ವ್ಯಾಖ್ಯಾನಿಸಿಕೊಂಡಿರುವ ಅರ್ಥಪೂರ್ಣವಾದ ಕ್ರಮದಲ್ಲಿ ಗುರುತಿಸಬಹುದು.

ಚರಿತ್ರೆಯಲ್ಲಿ ಒಂದು ಸಮಾಜ ಅಥವಾ ಸಂಸ್ಕೃತಿಗೆ ಹೊರಗಿನ ಪ್ರಬಲವಾದ ಶಕ್ತಿಯೊಂದು ಶತ್ರುವಿನೋಪಾದಿಯಲ್ಲಿ ಎದುರಾದಾಗ ಈ ರೀತಿಯ ರಾಜಕಾರಣ ಹೆಚ್ಚು ಮಹತ್ವ ಪಡೆದುಕೊಳ್ಳುತ್ತದೆ. ಆದರೆ

ಅದೇ ಸಮಾಜ ಅಥವಾ ಸಂಸ್ಕೃತಿಯಲ್ಲಿರುವ ಹಲವು ಪ್ರತಿಷ್ಠಿತ ಯಾಜಮಾನ್ಯಶಕ್ತಿಗಳು ತಮ್ಮದೇ ಪರಿಸರದ ಇನ್ನುಳಿದ ಸಮಾಜಗಳ, ಸಂಸ್ಕೃತಿಗಳ, ಸಮುದಾಯಗಳ, ಗುಂಪುಗಳ ಮತ್ತು ವ್ಯಕ್ತಿಗಳ ಪಾಲಿಗೆ 'ಹೊರ ಶತ್ರು'ವಿನ ರೀತಿಯಲ್ಲಿಯೇ ಹತ್ತಿಕ್ಕುವ 'ಒಳ ಶತ್ರು'ವಾಗಿ ಮಾರ್ಪಟ್ಟಾಗ ಸಹ, ಹೊಸ ಸ್ವರೂಪದ ರಾಜಕಾರಣದ ಪರಿಭಾಷೆಗಳು ಹುಟ್ಟಿಕೊಳ್ಳುತ್ತವೆ. ಇದು ಈಗಾಗಲೇ ಇದ್ದ 'ಒಳ ಶತ್ರು'ವಿನ ಸ್ವರೂಪವನ್ನು ಹೊಸದಾಗಿ 'ಗುರುತಿಸಿಕೊಳ್ಳುವ' ಕ್ರಮದಲ್ಲಿ ರೂಪುಗೊಳ್ಳುವುದು ಒಂದು ಬಗೆ. ಹಾಗೆಯೇ ಇಂಥ ಶತ್ರು ಹೊಸದಾಗಿ ಹುಟ್ಟಿಕೊಳ್ಳುವ ಸನ್ನಿವೇಶಗಳ ಸ್ವರೂಪವನ್ನು 'ಕಂಡುಕೊಳ್ಳುವ' ಬಗೆಯಲ್ಲಿ ರೂಪುಗೊಳ್ಳುವುದು ಇನ್ನೊಂದು ಬಗೆ.

ಇದಕ್ಕೆ ನವ್ಯೋತ್ತರ ವಿಮರ್ಶೆಯ ಸಂದರ್ಭದ ಹಲವು ವಿಮರ್ಶಾ ಪ್ರಕಾರಗಳು 'ರಾಜಕಾರಣ'ದ ಪರಿಭಾಷೆಯನ್ನು ನಿರ್ವಚಿಸಿಕೊಂಡ ಕ್ರಮಗಳು ಸೂಕ್ತವಾದ ನಿದರ್ಶನಗಳಾಗಿವೆ. ಶತ್ರುವಿನ ಅಸಲೀ ಸ್ವರೂಪಕ್ಕೆ 'ಮುಖಾಮುಖಿ'ಯಾಗಿರುವ ಕ್ರಮದಲ್ಲಿಯೇ ದಲಿತ ಹಾಗೂ ಬಂಡಾಯ ವಿಮರ್ಶೆಗಳ ರಾಜಕಾರಣದ ನೆಲೆ ಪ್ರಕಟವಾಗಿದೆ. ಸಾಮಾಜಿಕ ನ್ಯಾಯಸಾಧನೆ, ಆರ್ಥಿಕ ಅಸಮಾನತೆಯ ನಿವಾರಣೆ ಮತ್ತು ಸಮಾನ ಹಕ್ಕು ಹಾಗೂ ಅವಕಾಶಗಳ ಪ್ರತಿಪಾದನೆಯ ಪ್ರಶ್ನೆಗಳು ಸಾಹಿತ್ಯ ವಿಮರ್ಶೆಯಲ್ಲಿ ಸ್ಥಾನ ಪಡೆದುಕೊಂಡಿರುವುದು ಸರಳವಾದ ಮೇಲ್ಪದರದ ಸಂಗತಿಯಲ್ಲ. ಈ ವಿಮರ್ಶಾ ಪ್ರಕಾರಗಳು ರಾಷ್ಟ್ರದ ಚರಿತ್ರೆ, ಪುರಾಣ, ಸಂಸ್ಕೃತಿ, ಧರ್ಮ, ಭಾಷೆ, ನೀತಿ ಹಾಗೂ ತತ್ವ ಪರಂಪರೆಗಳ ಒಳಹೊರಗನ್ನು ಬಹುರೂಪಿ ನೆಲೆಗಳಲ್ಲಿ ಅನುಸಂಧಾನ ಮಾಡಿರುವುದುದರ ಫಲವಾಗಿ ಅವುಗಳ ರಾಜಕಾರಣದ ನೆಲೆಗಳ ಮುಖ್ಯ ಚಹರೆಗಳು ಪ್ರಕಟವಾಗಿವೆ. ಈ ಚಹರೆಗಳು ಮೇಲ್ನೋಟಕ್ಕೆ ಅವು ಇರುವ ರೀತಿಯಲ್ಲಿಯೇ ಗೋಚರವಾಗುತ್ತವೆ.

ಇದರೊಂದಿಗೆ ಒಂದು ಭಾಷಿಕ ಪರಿಸರದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಹೊಸ ಸ್ವರೂಪದ ಶತ್ರುಗಳು ಹುಟ್ಟಿಕೊಳ್ಳುವಾಗ ಒಂದು ವಿಶಿಷ್ಟವಾದ ರಾಜಕೀಯ ಚಟುವಟಿಕೆ ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ರಾಜಕೀಯ ಚಟುವಟಿಕೆಗಳ ಸಂಕೀರ್ಣ ವಿದ್ಯಮಾನವೇ ನಡೆದು ಹೋಗುತ್ತದೆ. ಅಂಥ ಸಂದರ್ಭದಲ್ಲಿ ಪರಂಪರಾಗತ ಹಳೆಯ ಪಟ್ಟಭದ್ರ ಯಾಜಮಾನ್ಯ ಶಕ್ತಿಗಳು ನವರೂಪಧಾರಣೆ ಮಾಡಬಹುದು; ತನಗಿಂತ ಪ್ರಬಲವಾದ ಹೊಸ ಶಕ್ತಿರೂಪದೊಂದಿಗೆ ಸಮೀಕರಣಗೊಳ್ಳಬಹುದು ಅಥವಾ ನೂತನ ಯಾಜಮಾನ್ಯಶಕ್ತಿರೂಪವನ್ನು ಸಮರ್ಥಿಸುವ ಬಹುರೂಪಿ ಕ್ರಿಯೆಗಳಲ್ಲಿ ನಿರತವಾಗಬಹುದು. ಇದು ಕೇವಲ ಸಾಹಿತ್ಯಕವಾಗಿ ಮಾತ್ರವಲ್ಲದೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಹೀಗೆ ಹಲವು ರೂಪಗಳಲ್ಲಿ, ನೆಲೆಗಳಲ್ಲಿ ಅಥವಾ ಸ್ತರಗಳಲ್ಲಿ ಪ್ರಕಟವಾಗಬಹುದು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂವರ್ಧನೆಯ ಉದ್ದೇಶವುಳ್ಳ ಸರ್ಕಾರೇತರ ಸಂಘಸಂಸ್ಥೆಗಳ ರಚನೆ, ಪೋಷಣೆ ಹಾಗೂ ನಿರ್ವಹಣೆಗಳ ಮೂಲಕ ನಡೆಯಬಹುದು. ಬಹುಮುಖ್ಯವಾಗಿ ಮಧ್ಯಮವರ್ಗದ ಜನ ಪ್ರಜ್ಞೆಯ ಆಧುನಿಕ ತರಬೇತಿ ಸಾಧನಗಳಾದ ಪ್ರಸಾರ-ಪ್ರಚಾರ ಮಾಧ್ಯಮಗಳ ಮೂಲಕ ಜರುಗಬಹುದು. ಇಂಥ ವಿಶಿಷ್ಟ ವಿದ್ಯಮಾನವನ್ನು

ಒಟ್ಟಾರೆಯಾಗಿ 'ಸಾಂಸ್ಕೃತಿಕ ರಾಜಕಾರಣ' ಎಂದು ಕರೆಯಬಹುದು. ಇದು ಪಕ್ಷಗಳು, ಸಂಘಟನೆಗಳು ಮತ್ತು ಸರ್ಕಾರದ ವ್ಯವಸ್ಥೆಗಳನ್ನು ಮೀರಿದ ಅತ್ಯಂತ ವ್ಯಾಪಕವಾದ ರಾಜಕಾರಣ. ಸೂಕ್ಷ್ಮ ಸ್ವರೂಪದ ರಾಜಕಾರಣ. ಆದರೆ ಅತ್ಯಂತ ಪ್ರಭಾವಶಾಲಿಯಾದ ರಾಜಕಾರಣ. ಇಂಥ ರಾಜಕಾರಣವು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಮುಖ್ಯವಾಗಿ ಕಳೆದ ಶತಮಾನದ ಎಂಭತ್ತರ ದಶಕದಿಂದ ಹೆಚ್ಚು ತೀವ್ರವಾಗಿ ನಡೆಯುತ್ತಿದೆ. ಹಾಗೆ ನೋಡಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಖಚಿತ ರೂಪ ಪಡೆದುಕೊಳ್ಳುವುದಕ್ಕೆ ಹಾಗೂ ಅದರ ಬಹುರೂಪಿ ಆಯಾಮಗಳು ಅರ್ಥಪೂರ್ಣ ವಿಸ್ತಾರ ಪಡೆದುಕೊಳ್ಳುವುದಕ್ಕೆ ಅದು ಇಂಥ ಸಾಂಸ್ಕೃತಿಕ ರಾಜಕಾರಣವನ್ನು ಅನುಸಂಧಾನ ಮಾಡಿರುವುದು ಬಹುಮುಖ್ಯವಾದ ಕಾರಣವಾಗಿದೆ. ಈ ಅನುಸಂಧಾನವು ಹಲವು ರೂಪಗಳಲ್ಲಿ, ನೆಲೆಗಳಲ್ಲಿ ಹಾಗೂ ಸ್ತರಗಳಲ್ಲಿ ಪ್ರಕಟವಾಗಿದೆ. ಆದ್ದರಿಂದಲೇ ಇದರ ಚಹರೆಗಳು, ಗುಣಲಕ್ಷಣಗಳು, ಉದ್ದೇಶಗಳು ಮತ್ತು ಕಾರ್ಯಮಾದರಿಗಳು ಕೂಡಾ ಬಹುರೂಪಿ ಸ್ವರೂಪದವುಗಳಾಗಿವೆ.

ಚಾರಿತ್ರಿಕ ಆಯಾಮದಿಂದ ನೋಡುವುದಾದರೆ, ಕನ್ನಡ ಸಾಹಿತ್ಯ ವಿಮರ್ಶೆಯು ಸಾಂಸ್ಕೃತಿಕ ವಿಮರ್ಶೆಯಾಗಿ ಸ್ಥಿತ್ಯಂತರಗೊಳ್ಳಲು ತೊಡಗಿದ ಸಂದರ್ಭದಿಂದ, ಸಾಹಿತ್ಯ ವಿಮರ್ಶೆಯ 'ರಾಜಕಾರಣದ ಪ್ರಶ್ನೆ'ಗಳು 'ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆ'ಗಳಾಗಿ ಮಾರ್ಪಾಟುಗೊಳ್ಳಲಾರಂಭಿಸಿದವು. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕನ್ನಡ ಸಾಹಿತ್ಯ ವಿಮರ್ಶೆಯ 'ರಾಜಕೀಯ ಪ್ರಶ್ನೆ'ಗಳು 'ಸಾಂಸ್ಕೃತಿಕ ರಾಜಕಾರಣದ ನೆಲೆ'ಗಳನ್ನು ವ್ಯಾಪಕವಾದ ಹಾಗೂ ತೀವ್ರವಾದ ಸ್ವರೂಪದಲ್ಲಿ ಒಳಗೊಳ್ಳುವುದು ಆರಂಭವಾದಾಗಿನಿಂದ 'ಕನ್ನಡ ಸಾಹಿತ್ಯ ವಿಮರ್ಶೆ'ಯು 'ಸಾಂಸ್ಕೃತಿಕ ವಿಮರ್ಶೆ'ಯಾಗಿ ಪಲ್ಲಟಗೊಳ್ಳತೊಡಗಿತು.

ಹೀಗಾಗಿ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇರುವುದು ಕೇವಲ ಸರಳವಾದ ರಾಜಕೀಯ ಪ್ರಶ್ನೆಗಳಲ್ಲ. ಬದಲಾಗಿ ದ್ವಂದ್ವಾತ್ಮಕವಾದ ಹಾಗೂ ಸಂಕೀರ್ಣಾತ್ಮಕವಾದ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆಗಳು. ಇವು ತಾನು ಶತ್ರುವೆಂದೂ ಭಾವಿಸಿರುವ ಯಾಜಮಾನ್ಯಶಕ್ತಿಯ ವಿರುದ್ಧ ತೀವ್ರವಾದ ಪ್ರಶ್ನೆಗಳನ್ನು ಎತ್ತಿರುವಂತೆಯೇ; ತನ್ನನ್ನು ಕೂಡಾ 'ಶತ್ರುವಿನ ರೂಪವೆಂದು' ಭಾವಿಸಿಕೊಂಡಿರುವ 'ಅಂಚಿನ' ಅಥವಾ 'ಅಧೀನ' ವ್ಯವಸ್ಥೆಗಳಿಂದ ತೀವ್ರವಾಗಿ ಪ್ರಶ್ನೆಗೊಳಗಾಗುತ್ತಿವೆ. ಇದು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳ ವಿದ್ಯಮಾನದ ಸಾಮಾನ್ಯ ಸ್ವರೂಪವಾಗಿದೆ.

೭.೧.೨ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಸಾಂಸ್ಕೃತಿಕ ರಾಜಕಾರಣದ ನೆಲೆಗಳ ಸ್ವರೂಪ

ಹಾಗೆ ನೋಡಿದರೆ ಸಾಂಸ್ಕೃತಿಕ ರಾಜಕಾರಣ ಎಂದರೇನು ಎನ್ನುವ ಪ್ರಶ್ನೆಗೆ ನಿರ್ದಿಷ್ಟವಾದ, ಕರಾರುವಕ್ಕಾದ ಮತ್ತು ಸರ್ವಸಮ್ಮತವಾದ ಉತ್ತರ ಕೊಡುವುದು ಕಠಿಣವೇ ಸರಿ. ಒಂದು ದೃಷ್ಟಿಯಿಂದ ಇದು ಅನಗತ್ಯ ಹಾಗೂ ನಿರುಪಯುಕ್ತ ಕೂಡಾ. ಇದರ ಬದಲಾಗಿ ಸಾಂಸ್ಕೃತಿಕ ರಾಜಕಾರಣದ ಸ್ವರೂಪ, ಚಹರೆಗಳು, ಕಾರ್ಯಮಾದರಿಗಳು, ಮತ್ತು ಅದರ ವಿವಿಧ ಕ್ರಿಯಾತ್ಮಕ ರೂಪಗಳನ್ನು ಗುರುತಿಸಬಹುದು

ಅಥವಾ ವಿವರಿಸಬಹುದು. ಅಲ್ಲದೆ ಇದು ಸೂಕ್ತವಾದ ಮತ್ತು ಉಪಯುಕ್ತವಾದ ಕ್ರಮ ಕೂಡಾ. ಆದರೆ ಈ ಪ್ರಯತ್ನವು ವಿಸ್ತೃತವಾದ ಹಾಗೂ ಅರ್ಥಪೂರ್ಣವಾದ ತಾತ್ವಿಕ ಸ್ವರೂಪದ ಪೂರ್ವ ಪೀಠಿಕೆಯನ್ನು ನಿರೀಕ್ಷಿಸುವ ಸ್ವರೂಪದ್ದಾಗಿದೆ.

ಭಾರತವು ಮೂಲತಃ ಜಾತಿ ಹಾಗೂ ಉಪ ಜಾತಿ ಪ್ರಧಾನವಾಗಿರುವ ರಾಷ್ಟ್ರ. ಪಿತೃಪ್ರಧಾನತೆ ಭಾರತೀಯ ಸಾಮಾಜಿಕ ರಚನೆಯ ಪ್ರಧಾನ ಸ್ವರೂಪ. ಬಹುಧರ್ಮಗಳು, ಬಹುಸಂಸ್ಕೃತಿಗಳು, ಬಹುಭಾಷೆಗಳು ಹಾಗೂ ಉಪ ಭಾಷೆಗಳಿಂದ ಕೂಡಿರುವ ಒಂದು ವಿಶಿಷ್ಟ ವಾಸ್ತವ ಅಥವಾ ಸನ್ನಿವೇಶ. ನಿರ್ದಿಷ್ಟವಾಗಿ ಯಾವುದೇ ಒಂದು ಧರ್ಮವನ್ನು ರಾಷ್ಟ್ರ ಧರ್ಮವೆಂದು, ಒಂದು ಧರ್ಮ ಗ್ರಂಥವನ್ನು ರಾಷ್ಟ್ರೀಯ ಧರ್ಮ ಗ್ರಂಥವೆಂದು ಮತ್ತು ಒಂದು ಭಾಷೆಯನ್ನು ರಾಷ್ಟ್ರ ಭಾಷೆಯೆಂದು ಸಂವಿಧಾನದ ಉಪಬಂಧಗಳಲ್ಲಿ ಘೋಷಣೆ ಮಾಡದಿರುವಂಥ ರಾಷ್ಟ್ರ. ಭಾರತದ ಸಂವಿಧಾನದ ಪ್ರಕಾರ 'ಧರ್ಮ ನಿರಪೇಕ್ಷ' ಅಥವಾ 'ಸೆಕ್ಯುಲರ್' ರಾಷ್ಟ್ರ. ಈ ಸ್ವರೂಪವನ್ನು 'ಸರ್ವಧರ್ಮ ಸಮಭಾವ'ವೆಂದು ವಿವರಿಸಲಾಗಿದೆ. ಯಾವೊಂದು ಧರ್ಮವನ್ನು ರಾಷ್ಟ್ರೀಯ ಧರ್ಮವೆಂದು ಘೋಷಿಸಿಲ್ಲದಿರುವುದರಿಂದ ಎಲ್ಲ ಧರ್ಮಗಳು ಮತ್ತು ಅವುಗಳ ಆಚರಣೆಗಳನ್ನು ಸಮಾನವಾಗಿ ಪರಿಗಣಿಸಲಾಗುವುದು ಎನ್ನುವುದು ಸುಸ್ಪಷ್ಟವಾದ ವಿಚಾರವಾಗಿದೆ.

ಹಾಗೆಯೇ ಅಲ್ಪಸಂಖ್ಯಾತರು, ಹಿಂದುಳಿದವರು, ಅಸ್ಪೃಶ್ಯರು, ಮಹಿಳೆಯರು ಮೊದಲಾದಂಥ ಚಾರಿತ್ರಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಹೀಗೆ ಹಲವು ನೆಲೆಗಳಲ್ಲಿ ದಮನಕ್ಕೊಳಗಾದವರಿಗೆ ಅನೇಕ ರೀತಿಯ ಸಂವಿಧಾನಾತ್ಮಕ ಸುರಕ್ಷತಾ ಕ್ರಮಗಳ ಉಪಬಂಧಗಳನ್ನು ಕಲ್ಪಿಸಲಾಗಿದೆ. ಮಾನವ ಹಕ್ಕುಗಳು ಹಾಗೂ ನ್ಯಾಯನೀಡಿಕೆಯಗಳಂಥ ವಿಚಾರದಲ್ಲಿ ಸಮಾನತೆಯ ತತ್ವಗಳನ್ನು ಒದಗಿಸಲಾಗಿದೆ ಮುಖ್ಯವಾಗಿ, ಕ್ರಿಮಿನಲ್ ಅಪರಾಧಗಳಂತಹ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸುವಾಗ ದೇಶದ ಎಲ್ಲ ಪ್ರಜೆಗಳ ಮಧ್ಯೆ ಯಾವುದೇ ಬೇಧಭಾವ ಮಾಡುವುದಿಲ್ಲ. ಇದರೊಂದಿಗೆ ಶಿಕ್ಷಣ, ಸರ್ಕಾರಿ ಸೇವೆ ಮೊದಲಾದಂಥ ವಿಷಯಗಳಲ್ಲಿ ಪ್ರಧಾನವಾಗಿ ಹಿಂದೂ ಧರ್ಮದ ಇತರ ಹಿಂದುಳಿದ ವರ್ಗಗಳ ಪ್ರಜೆಗಳಿಗೆ 'ಕೆನೆಪದರ ಸಹಿತ' ಮೀಸಲಾತಿ ಕಲ್ಪಿಸಲಾಗಿದೆ. ದಲಿತ ಅಸ್ಪೃಶ್ಯ ಜನಾಂಗದ ವ್ಯಕ್ತಿಗಳಿಗೆ ಸರ್ಕಾರಿ ಸೇವೆಯಲ್ಲಿ 'ಕೆನೆಪದರ ರಹಿತ' ಮೀಸಲಾತಿ ಹಾಗೂ ಬಡ್ತಿ ಮೀಸಲಾತಿ ಸೌಲಭ್ಯಗಳನ್ನು ನೀಡಲಾಗಿದೆ. ಮುಸ್ಲಿಂ ಧಾರ್ಮಿಕ ಅಲ್ಪಸಂಖ್ಯಾತರಿಗೆ ವಿವಾಹ ವಿಚ್ಛೇದನ ಮತ್ತು ಉತ್ತರಾಧಿಕಾರಗಳಂಥ ಕೆಲವು ವಿಷಯಗಳಲ್ಲಿ ಇತರ ಧರ್ಮೀಯರಿಗಿಂತ ಹೆಚ್ಚು ಸ್ವಾತಂತ್ರ್ಯ ಕೊಡಲಾಗಿದೆ. ಹಾಗೆಯೇ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ಸಂಬಂಧದಲ್ಲಿ ಎಲ್ಲ ಭಾಷಿಕ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೂ ಕೆಲವು ವಿಶೇಷ ಹಕ್ಕುಗಳನ್ನು ಕಲ್ಪಿಸಲಾಗಿದೆ. ಎಲ್ಲಕಿಂತ ಮುಖ್ಯವಾಗಿ ಭಾರತೀಯ ಪೌರರೆಲ್ಲರಿಗೂ ಸಮಾನ 'ಮೂಲಭೂತ ಹಕ್ಕುಗಳನ್ನು' ನೀಡಲಾಗಿದೆ. ಇವುಗಳ ಉಲ್ಲಂಘನೆ ಮತ್ತು ಪ್ರತಿಬಂಧಗಳ ವಿರುದ್ಧ 'ರಿಟ್' ರೂಪದ 'ಸಂವಿಧಾನಾತ್ಮಕ

ಪರಿಹಾರ ಹಕ್ಕು'ಗಳನ್ನು ಕಲ್ಪಿಸಲಾಗಿದೆ. ಈ ಉಪಬಂಧವನ್ನು ಅಂಬೇಡ್ಕರ್ ಅವರು 'ಭಾರತ ಸಂವಿಧಾನದ ಆತ್ಮ' ಎಂದು ಕರೆದಿದ್ದಾರೆ.

ಭಾರತ ಸಂವಿಧಾನ ತನ್ನ ಪ್ರಜೆಗಳಿಗೆ ಕೊಟ್ಟಿರುವ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಮಾನವ ಹಕ್ಕುಗಳ ಈ ಸೌಲಭ್ಯಗಳು, ಸವಲತ್ತುಗಳು ಹಾಗೂ ವಿಶೇಷ ಅನುಕೂಲಗಳನ್ನು ಇಲ್ಲಿ ವಿವರವಾಗಿ ಪ್ರಸ್ತಾಪಿಸುವುದಕ್ಕೆ ನಿರ್ದಿಷ್ಟವಾದ ಉದ್ದೇಶವಿದೆ. ಏಕೆಂದರೆ ಸ್ವಾತಂತ್ರ್ಯೋತ್ತರ ಕಾಲಘಟ್ಟದ ಭಾರತೀಯ ಸಂದರ್ಭದ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಹಾಗೂ ಭಾಷಿಕ ಮೊದಲಾದಂಥ ಸಂಕಥನಗಳ ಹುಟ್ಟಿಗೆ ಇವು ಒಂದಲ್ಲ ಒಂದು ರೀತಿಯಲ್ಲಿ ಪ್ರೇರಣೆಗಳೋ ಅಥವಾ ಕಾರಣಗಳೋ ಆಗಿವೆ. ಅನೇಕ ವಿಧವಾದ ಚರ್ಚೆ, ವಾಗ್ವಾದ ಮತ್ತು ಸಂಘರ್ಷಗಳಿಗೆ ಮೂಲಗಳಾಗಿವೆ. ಈ ಅವಧಿಯಲ್ಲಿ ನಡೆದಿರುವ ಚಾರಿತ್ರಿಕವಾದ ಕೆಲವು 'ಅಹಿತಕರ ಘಟನೆ' ಹಾಗೂ 'ಚಾರಿತ್ರಿಕ ತಪ್ಪು'ಗಳಿಗೆ ಕೂಡಾ ಒಂದಲ್ಲ ಒಂದು ರೀತಿಯಲ್ಲಿ ಇವುಗಳನ್ನು ಬಳಸಿಕೊಳ್ಳಲಾಗಿದೆ.

ಭಾರತೀಯ ಪ್ರಜೆಗಳೆಲ್ಲರ ವರ್ತಮಾನದ ಬದುಕಿನ ಸುಧಾರಣೆ ಮತ್ತು ಭವಿಷ್ಯದ ಬದುಕಿನ ಉನ್ನತಿಗಳನ್ನು ಸಾಧಿಸುವ ಸದುದ್ದೇಶ ಹಾಗೂ ಸದಾಶಯಗಳನ್ನುಳ್ಳ ಈ ಸಂವಿಧಾನಾತ್ಮಕ ಕ್ರಮಗಳನ್ನು, ಅವುಗಳ ತದ್ವಿರುದ್ಧದ ಉದ್ದೇಶಕ್ಕಾಗಿ ಬಳಸಲು ಮಾಡಿರುವ ಪ್ರಯತ್ನಗಳಲ್ಲಿ ಸಾಂಸ್ಕೃತಿಕ ರಾಜಕಾರಣದ ಹುಟ್ಟಿನ ಮೂಲವಿದೆ. ಚಾರಿತ್ರಿಕವಾಗಿ ಯಾವ ವರ್ಗ ಅಥವಾ ಸಮುದಾಯಗಳು, ಸ್ವಾತಂತ್ರ್ಯೋತ್ತರ ಕಾಲಘಟ್ಟದ ಈ 'ಸೋಶಿಯಲ್ ಇಂಜಿನಿಯರಿಂಗ್' ಅಥವಾ 'ಪೊಲಿಟಿಕಲ್ ಕರೆಕ್ಟ್' ಉಪಕ್ರಮಗಳು ಅನುಷ್ಠಾನಗೊಳ್ಳುವವರೆಗೂ ಯಾವ ಸವಲತ್ತುಗಳು ಹಾಗೂ ಅನುಕೂಲಗಳನ್ನು ಚಾರಿತ್ರಿಕವಾಗಿ ಅಬಾಧಿತರೂಪದಲ್ಲಿ ಹೊಂದಿದ್ದವೋ ಅವುಗಳಿಗೆಲ್ಲಾ ಈ ಉಪಕ್ರಮಗಳಿಂದ ತೀವ್ರವಾದ ಹೊಡೆತ ಬಿತ್ತೆಂದು ಬಲವಾಗಿ ಭಾವಿಸಿಕೊಂಡವು. ಅಷ್ಟೇ ಅಲ್ಲದೆ, ಇದರ ವಿರುದ್ಧವಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿಭಾಷೆಯ ಪ್ರತಿರೋಧಾತ್ಮಕ ಕ್ರಮಗಳನ್ನು ರೂಪಿಸತೊಡಗಿದವು. ಇದರ ಭಾಗವಾಗಿ ಭಾರತದ ಚರಿತ್ರೆಯನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಭಾಷೆಯಲ್ಲಿ ವ್ಯಾಖ್ಯಾನ ಮಾಡಿತೊಡಗಿದವು. ದೇಶದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ 'ಓರಿಯಂಟಲ್ ಅಥವಾ ಕಲೋನಿಯಲ್ ಇತಿಹಾಸ ರಚನಾಶಾಸ್ತ್ರ'ಕ್ಕೆ ವಿರುದ್ಧವಾಗಿ ಕಟ್ಟಲಾದ 'ರಾಷ್ಟ್ರೀಯವಾದಿ ಇತಿಹಾಸ ರಚನಾಶಾಸ್ತ್ರ'ದ ಪರಿಷ್ಕೃತ ರೂಪದ ಹಲವು ಆಧುನಿಕ ಸಂಕಥನ ಮಾದರಿಗಳನ್ನು ಹುಟ್ಟುಹಾಕಿದವು.

ಇದರಲ್ಲಿ ಭಾರತದ 'ಸಾಂಸ್ಕೃತಿಕ ರಾಷ್ಟ್ರೀಯತೆಯ ಇತಿಹಾಸ ರಚನಾಶಾಸ್ತ್ರ' ಅಂಥ ಒಂದು ಮುಖ್ಯವಾದ ಸಂಕಥನ ಮಾದರಿ. ಇದರ ಮುಖ್ಯ ಉದ್ದೇಶ 'ಚರಿತ್ರೆಯ ವರ್ತಮಾನೀಕರಣ' ಹಾಗೂ 'ವರ್ತಮಾನದ ಚರಿತ್ರೀಕರಣ'. ಪ್ರಾಚೀನ ಭಾರತದ ಅವಾಸ್ತವಿಕ ಹಾಗೂ ಕಲ್ಪಿತಸ್ಥಿತಿಯಾದ 'ಆದರ್ಶಯುಗ'ವೊಂದನ್ನು ವರ್ತಮಾನದ ಭಾರತದ ಸನ್ನಿವೇಶಕ್ಕೆ ಸಂವಾದಿಯಾಗಿ ಪ್ರತಿಪಾದಿಸುವುದೇ

‘ಚರಿತ್ರೆಯ ವರ್ತಮಾನೀಕರಣ’. ಹಾಗೆಯೇ ಮಧ್ಯಕಾಲೀನ ಭಾರತದಲ್ಲಿ ಆಗಿರುವ ‘ಹಲವು ತಪ್ಪು’ಗಳ ಜೀವಂತ ಸಾಕ್ಷಿಗಳಾಗಿ ಸಮಕಾಲೀನ ಭಾರತದಲ್ಲಿರುವ ‘ವಿವಿಧ ರೂಪ’ಗಳನ್ನು ಹಾಗೂ ಅವುಗಳ ‘ಸ್ವರೂಪ’ಗಳನ್ನು ಮೂಲಸ್ಥಿತಿಗೆ ಬದಲಾಯಿಸಬೇಕು ಎನ್ನುವ ವಾದವೇ ‘ವರ್ತಮಾನದ ಚರಿತ್ರೀಕರಣ’. ಈ ವಿದ್ಯಮಾನ ಸೃಜನಶೀಲ ಅಭಿವ್ಯಕ್ತಿಯ ಹಲವು ಪ್ರಕಾರಗಳು ಹಾಗೂ ಸಂಶೋಧನೆಯಂಥ ಬೌದ್ಧಿಕ ಚಟುವಟಿಕೆಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಅದರಲ್ಲೂ ಚರಿತ್ರೆ ಹಾಗೂ ಸಾಹಿತ್ಯಗಳಂಥ ಶಿಸ್ತುಗಳಲ್ಲಿ, ಇದನ್ನು ‘ಸತ್ಯಶೋಧನೆ’ ಮತ್ತು ‘ಸತ್ಯದ ಪ್ರತಿಪಾದನೆ’ ಎನ್ನುವ ಪ್ರಭಾವಶಾಲಿಯಾದ ‘ಪರಿಭಾಷೆ’ಯ ಮೂಲಕ ಮಂಡಿಸಲಾಗುತ್ತಿದೆ. ಹಿಂದೆ ಇದ್ದು ಈಗ ಇಲ್ಲವಾಗಿರುವ ಅಥವಾ ವಿಕೃತಗೊಂಡ ರೂಪದಲ್ಲಿರುವ ‘ಸತ್ಯ’ದ ‘ನಿಜರೂಪ’ದ ಶೋಧವೇ ಇದರ ಪ್ರಧಾನ ಉದ್ದೇಶ. ಆ ಮೂಲಕ ಚರಿತ್ರೆಯನ್ನು ‘ಸತ್ಯದ’ದ ಆಧಾರದ ಮೇಲೆ ಸರಿಪಡಿಸುವುದೇ ಇದರ ಮುಖ್ಯ ಕಾಳಜಿ. ಇದೊಂದು ನೈತಿಕ ಜವಾಬ್ದಾರಿ ಕೂಡಾ ಎಂದು ಈ ಸಂಕಥನ ಮಂಡಿಸುತ್ತದೆ, ಈಗ ಇದೊಂದು ಅತ್ಯಂತ ಪ್ರಭಾವಶಾಲಿಯಾದ ‘ಸಿದ್ಧಾಂತ’ವಾಗಿ ಕೂಡಾ ಬೆಳೆದಿದೆ. ಅಲ್ಲದೆ ಪಾಶ್ಚಾತ್ಯ ಆಧುನಿಕೋತ್ತರ ಚಿಂತನೆಯೊಂದಿಗೆ ತೀವ್ರವಾದ ಹೊಂದಾಣಿಕೆ ಹಾಗೂ ಸಖ್ಯ ಬೆಳೆಸಿಕೊಂಡಿದೆ.

ಇದು ತನ್ನನ್ನು ‘ರಾಷ್ಟ್ರೀಯವಾದಿ ಇತಿಹಾಸ’ ಮತ್ತು ‘ಸಾಂಸ್ಕೃತಿಕ ರಾಷ್ಟ್ರೀಯತೆ’ ಎನ್ನುವ ಆಕರ್ಷಕ ಪರಿಭಾಷೆಗಳ ಮೂಲಕ ಕರೆದುಕೊಳ್ಳುತ್ತದೆ. ಆದರೆ ಇದರ ವಿರೋಧಿಗಳು ಇದನ್ನು ‘ಚಾರಿತ್ರಿಕ ಪುನಾರಚನವಾದ’, ಮತ್ತು ‘ಚಾರಿತ್ರಿಕ ಪುನರುತ್ಥಾನವಾದ’ ಎನ್ನುವ ಪರಿಭಾಷೆಗಳ ಮೂಲಕ ಗುರುತಿಸುತ್ತಾರೆ. ಹಾಗೆಯೇ, ಅದು ಪ್ರತಿಪಾದಿಸುವ ಚಿಂತನೆಗಳ ಪ್ರಯೋಗಾತ್ಮಕ ಕಾರ್ಯಾಚರಣೆತಂತ್ರಗಳ ಸ್ವರೂಪವನ್ನು ‘ವೈದಿಕಶಾಹಿವಾದ’, ‘ಹಿಂದುತ್ವವಾದ’, ‘ಹಿಂದೂ ಕೋಮುವಾದ’ ಮತ್ತು ‘ಬಲಪಂಥೀಯವಾದ’ ಮೊದಲಾದ ಪರಿಕಲ್ಪನೆಗಳ ಮೂಲಕ ವಿವರಿಸುತ್ತಾರೆ. ಇದರ ಹುಟ್ಟನ್ನು ಮುಖ್ಯವಾಗಿ ಬ್ರಿಟಿಷ್ ‘ಒರಿಯಂಟಲ್’ ಅಥವಾ ‘ಕಲೋನಿಯಲ್ ಇತಿಹಾಸ ರಚನಾ ಶಾಸ್ತ್ರ’ಕ್ಕೆ ಬದಲಾಗಿ ‘ರಾಷ್ಟ್ರೀಯವಾದಿ ಇತಿಹಾಸ ರಚನಾಶಾಸ್ತ್ರ’ದ ಕಟ್ಟುವಿಕೆಯ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. ಹಾಗೆಯೇ ಗಾಂಧೀಜಿ, ಅಂಬೇಡ್ಕರ್ ಮತ್ತು ಮಹಮದಾಲಿ ಜಿನ್ನಾ ಇವರ ಸ್ವಾತಂತ್ರ್ಯ ಹೋರಾಟ ಕ್ರಮಗಳಿಗೆ ವ್ಯಕ್ತಪಡಿಸಿದ ವಿರೋಧ ಹಾಗೂ ಅದಕ್ಕೆ ಎದುರಾದ ಪ್ರತಿರೋಧಗಳ ದ್ವಂದ್ವಾತ್ಮಕ ಸಂಘರ್ಷದಲ್ಲಿ ಇದರ ಐತಿಹಾಸಿಕ ಬೆಳವಣಿಗೆಯನ್ನು ವಿವರಿಸುತ್ತಾರೆ. ಮಹಾತ್ಮ ಗಾಂಧಿಯವರ ಹತ್ಯೆ ಹಾಗೂ ಬಾಬರಿ ಮಸೀದಿ ಧ್ವಂಸ ಪ್ರಕರಣಗಳಲ್ಲಿ ಈ ಸಂಘರ್ಷದ ಕಾರ್ಯಾಚರಣೆ ರೂಪದ ನೇರ ಕ್ರಿಯೆಗಳನ್ನು ರುಜುವಾತುಪಡಿಸುತ್ತಾರೆ. ‘ಮಂಡಲ್ ಅಯೋಗದ ವರದಿ’ ಮತ್ತು ಈಗೀನ ‘ಸಾಚಾರ್ ವರದಿ’ಗೆ ವ್ಯಕ್ತವಾಗಿರುವ ವಿರೋಧಗಳಲ್ಲಿ ಇದರ ಉದ್ದೇಶಗಳ ಐತಿಹಾಸಿಕ ಮುಂದುವರಿಕೆಯನ್ನು ನಿರೂಪಿಸುತ್ತಾರೆ. ಈ ವಿದ್ಯಮಾನದ ಒಟ್ಟು ರೂಪವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ

'ಬಲಪಂಥೀಯ ರಾಜಕಾರಣ' ಅಥವಾ 'ಬಲಪಂಥೀಯ ಸಾಂಸ್ಕೃತಿಕ ರಾಜಕಾರಣ' ಎನ್ನುವ ಪರಿಭಾಷೆಯ ಮೂಲಕ ಗುರುತಿಸಬಹುದಾಗಿದೆ.

ಇದಕ್ಕೆ ವಿರುದ್ಧವಾಗಿ, ಚರಿತ್ರೆ ಮತ್ತು ಸಂಸ್ಕೃತಿಗಳನ್ನು ಅರ್ಥೈಸುವ ಹಾಗೂ ವ್ಯಾಖ್ಯಾನಿಸುವ ಹಲವು ಚಿಂತನಾಕ್ರಮಗಳಿವೆ. ಇವುಗಳಲ್ಲಿ ಉತ್ಪಾದನಾ ಸಾಧನ ಹಾಗೂ ಉತ್ಪಾದನಾ ಸಂಬಂಧಗಳ ಅಸಮಾನ ರೂಪದ ಒಡೆತನ, ಅದರ ಪ್ರತಿಫಲವಾದ ಹೆಚ್ಚುವರಿ ಮೌಲ್ಯದ ಕೇಂದ್ರೀಕರಣ ಮತ್ತು ಅದರ ಪರಿಣಾಮವಾದ ವರ್ಗ ಸಂಘರ್ಷದ ಭಿತ್ತಿಯಾಗಿ ವಿವರಿಸುವ 'ಮಾರ್ಕ್ಸ್‌ವಾದ'; 'ತಳರಚನೆ ಮತ್ತು ತುದಿರಚನೆ'ಗಳ ಸರಳ ಸಂಬಂಧದ ಬದಲಾಗಿ, ಇವುಗಳ ದ್ವಂದ್ವಾತ್ಮಕ ಸ್ವರೂಪದಲ್ಲಿ ವ್ಯಾಖ್ಯಾನಿಸುವ 'ಆಧುನಿಕ ಮಾರ್ಕ್ಸ್‌ವಾದ'; ಭೌತಿಕ ಸಂಪತ್ತು ಮತ್ತು ಆಸ್ತಿಗಳ ಸಮಾನ ಹಂಚಿಕೆ ಹಾಗೂ ಆಸ್ತಿಯ ಖಾಸಗಿ ಒಡೆತನದ ಸಮಗ್ರ ನಿರ್ಮೂಲನೆಗಳ ಮೂಲಕ ಹೊಸ ಸಮಾಜದ ರಚನೆಯ ಅಗತ್ಯವನ್ನು ಪ್ರತಿಪಾದಿಸುವ 'ಸಮತಾವಾದ'; ವರ್ಗ, ಲಿಂಗ ಮತ್ತು ಜಾತಿರಹಿತವಾಗಿರುವ, ಮನುಷ್ಯನ ಆತ್ಮಗೌರವ ಹಾಗೂ ಮಾನವೀಯ ಸಂಬಂಧಗಳೇ ಅಡಿಪಾಯಗಳಾಗಿರುವ ಹೊಸ ಸಮಾಜ ಮತ್ತು ಚರಿತ್ರೆಯ ರಚನೆಯ ಆಶಯದ 'ಭಾರತೀಯ ಸಮಾಜವಾದ' ಅಥವಾ 'ಲೋಹಿಯಾವಾದ'; ದಲಿತ, ಶೂದ್ರ ಮತ್ತು ಮಹಿಳಾ ಸಮುದಾಯಗಳ ಸಮಾನ ಪಾಲುದಾರಿಕೆ ಹಾಗೂ ಪ್ರಾಧಾನ್ಯತೆಗಳ ಮೂಲಕ ಆಧುನಿಕ ಭಾರತದ ಸಮಾಜ ರೂಪುಗೊಳ್ಳಬೇಕೆನ್ನುವ 'ಅಂಬೇಡ್ಕರ್‌ವಾದ' ಮತ್ತು ಮಾನವ ನಾಗರಿಕತೆಯ ಮುಖ್ಯ ಮೆಟ್ಟಿಲಾದ ಕೃಷಿ ಹಾಗೂ ಕೃಷಿಸಂಬಂಧಿತ ಉತ್ಪಾದನಾ ಚಟುವಟಿಕೆಗಳ ಶೋಧನೆಯ ಮೂಲಕ ನೆಲೆನಿಂತ ಸಮಾಜವನ್ನು ರೂಪಿಸಿದ ಮತ್ತು ಜನಸಂಖ್ಯೆಯ ಅರ್ಧದಷ್ಟು ಪ್ರಮಾಣದಲ್ಲಿರುವ ಮಹಿಳೆಯು ಎಲ್ಲ ವಿಷಯಗಳಲ್ಲೂ ಪುರುಷನಿಗೆ ಸರ್ವಸಮಾನವಾಗಿರುವಂಥ 'ಲಿಂಗ ನ್ಯಾಯಾಧಾರಿತ'ವಾದ ಅರ್ಥಪೂರ್ಣ ಸಮಾಜವನ್ನು ಕಟ್ಟಬೇಕೆನ್ನುವ 'ಸ್ತ್ರೀವಾದ'ಗಳು ಇಂಥ ಬಹುಮುಖ್ಯವಾದ ಚಿಂತನಾಕ್ರಮಗಳಾಗಿವೆ. ಇವು ಬಲಪಂಥೀಯ ರಾಜಕಾರಣ ಚಿಂತನೆಯು ದೇಶದ ಸಮಾಜ, ಸಂಸ್ಕೃತಿ ಮತ್ತು ಬದುಕಿನ ಐಕ್ಯತೆಯನ್ನು ಭಂಗಗೊಳಿಸುವ ವಿಭಜನಾವಾದಿ ಮತ್ತು ತುಷ್ಟೀಕರಣವಾದಿ ಚಿಂತನೆಗಳಾಗಿವೆ. ಹೀಗಾಗಿ ಬಲಿಷ್ಠ ರಾಷ್ಟ್ರ ನಿರ್ಮಾಣದ ಉದ್ದೇಶಕ್ಕೆ ಎದುರಾಗಿರುವ ದೊಡ್ಡ ಆತಂಕಗಳು ಎಂದು ವ್ಯಾಖ್ಯಾನಿಸುತ್ತಿದೆ. ದೇಶದ ಸಾರ್ವಜನಿಕ ವಲಯದಲ್ಲಿನ ದಕ್ಷತೆಗೆ, ಸಾಮಾಜಿಕ ಸಹಬಾಳ್ವೆಯ ಲಯಕ್ಕೆ ಹಾಗೂ ಸಾಂಸ್ಕೃತಿಕ ಸಾಮರಸ್ಯಕ್ಕೆ ಎದುರಾಗಿರುವ ಎಲ್ಲ ಅನಿಷ್ಟಕಾರಿ ಪ್ರವೃತ್ತಿಗಳ ಹುಟ್ಟಿಗೆ ಇವುಗಳೇ ಒಂದಲ್ಲ ಒಂದು ರೀತಿಯಲ್ಲಿ ಮುಖ್ಯವಾದ ಕಾರಣಗಳು ಎಂದು ಪ್ರತಿಪಾದಿಸುತ್ತಿದೆ. ಕಮ್ಯುನಿಸಂ, ಸೋಶಿಯಲಿಸಂ, ಸೆಕ್ಯುಲರಿಸಂ ರ್‍ಯಾಡಿಕಲಿಸಂ, ಫೆಮಿನಿಸಂ, ಮತ್ತು ಡೆಮಾಕ್ರಸಿಗಳಿಗೂ ಹಾಗೂ ಟೆರರಿಸಂ, ಕ್ಯಾಸ್ಟಿಸಮ್ ಮತ್ತು ನಕ್ಸಲಿಸಮ್‌ಗಳಿಗೂ ನೇರ ಅಥವಾ ಪೂರಕ ಸಂಬಂಧವಿದೆ ಎಂದು ಬಲಪಂಥೀಯ ಸಾಂಸ್ಕೃತಿಕವಾದ ಪ್ರತಿಪಾದಿಸುತ್ತಿದೆ. ಇವುಗಳನ್ನು ಎಡಪಂಥೀಯ ಸಾಂಸ್ಕೃತಿಕವಾದದ ವಿಕೃತರೂಪಗಳೆಂದು ಮಂಡಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಆಧುನಿಕೋತ್ತರ ಕಾಲಘಟ್ಟದ ಅವಧಿಯಲ್ಲಿ ಭಾರತದ ರಾಜಕೀಯ ಹಾಗೂ ಸಾಂಸ್ಕೃತಿ ಸಂದರ್ಭದಲ್ಲಿ ಕೇಂದ್ರ ಸ್ಥಾನಕ್ಕೆ ಬಂದಿರುವ ಪ್ರತಿಗಾಮಿ ಧೋರಣೆಯ ಬಲಪಂಥೀಯ ವಿಚಾರಧಾರೆಯನ್ನು ವಿವಿಧ ನೆಲೆಗಳಲ್ಲಿ ಮುಖಾಮುಖಿ ಮಾಡುತ್ತಿರುವ ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಅಂಬೇಡ್ಕರ್‌ವಾದಿ ಮತ್ತು ಸ್ತ್ರೀವಾದಿ ಚಿಂತನೆಗಳ ಬಹುರೂಪಿಯಾದ ವಾಗ್ವಾದಗಳ, ಸಂಘರ್ಷಗಳ ಹಾಗೂ ಸಂಕಥನಗಳ ವಿದ್ಯಮಾನದ ಒಟ್ಟು ರೂಪವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ 'ಎಡಪಂಥೀಯ ರಾಜಕಾರಣ' ಅಥವಾ 'ಎಡಪಂಥೀಯ ಸಾಂಸ್ಕೃತಿಕ ರಾಜಕಾರಣ' ಎನ್ನುವ ಪರಿಭಾಷೆಯ ಮೂಲಕ ಗುರುತಿಸಬಹುದಾಗಿದೆ.

ಸಾಂಸ್ಕೃತಿಕ ರಾಜಕಾರಣವು ಕನ್ನಡ ಸಾಹಿತ್ಯ, ಸಂಶೋಧನೆ, ಸಂಸ್ಕೃತಿ ಚಿಂತನೆ ಹಾಗೂ ಸಾಹಿತ್ಯ ವಿಮರ್ಶೆಗಳಲ್ಲಿ ಮುಖ್ಯವಾದ ಭೂಮಿಕೆಯಲ್ಲಿದೆ. ಇದು ಸೃಷ್ಟಿಶೀಲ ಅಭಿವ್ಯಕ್ತಿಯ ಪ್ರಮುಖ ರೂಪಗಳಾದ ಕಾವ್ಯ, ನಾಟಕ, ಕತೆ ಹಾಗೂ ಕಾದಂಬರಿಗಳಲ್ಲಿ ವಿವಿಧ ವಿನ್ಯಾಸಗಳಲ್ಲಿ ಪ್ರಕಟವಾಗಿದೆ. ಲೇಖಕರ ವರ್ಗ, ಜಾತಿ ಹಾಗೂ ಪಿತೃಪ್ರಧಾನ ಹಿತಾಸಕ್ತಿಗಳ ಮೌಲ್ಯ ಪ್ರತಿಪಾದನಾ ಕ್ರಮದಲ್ಲಿ ಮಂಡನೆಯಾಗಿರುವುದು ಇಂಥ ಒಂದು ಮುಖ್ಯ ವಿನ್ಯಾಸ. ಸಾಮಾನ್ಯವಾಗಿ ಇದು ಮೇಲ್ವರ್ಣ, ಮೇಲ್ವರ್ಗ ಹಾಗೂ ಮೇಲ್ಜಾತಿಗಳ ಹಿನ್ನೆಲೆಯ ಲೇಖಕರು ಪರಂಪರೆ ಹಾಗೂ ಸಂಸ್ಕೃತಿ ಕುರಿತು ಹೊಂದಿರುವ ಅವಿಮರ್ಶಾತ್ಮಕವಾದ ಗಾಢಶ್ರದ್ಧೆಯ ಮನೋಧರ್ಮದಿಂದ ರೂಪುಗೊಂಡಿರುತ್ತದೆ. ಆದರೆ, ಕೆಲವೊಮ್ಮೆ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಆಗುತ್ತಿರುವ ಒಪ್ಪಿತವಲ್ಲದ ಅಥವಾ ಸ್ವವರ್ಗ ಹಾಗೂ ಸ್ವಜಾತಿ ವಿರೋಧಿಯಾದ ವಿದ್ಯಮಾನಗಳಿಗೆ ಪ್ರಜ್ಞಾಪೂರ್ವಕವಾಗಿ ವ್ಯಕ್ತಪಡಿಸುತ್ತಿರುವ ವಿರೋಧ ಇಲ್ಲವೇ ತಿರಸ್ಕಾರದಿಂದ ಹುಟ್ಟಿಕೊಂಡಿರುತ್ತದೆ. ಸ್ವಾತಂತ್ರ್ಯಾನಂತರ ರಚನೆಯಾಗಿರುವ 'ವೈದಿಕ ಪ್ರಜ್ಞೆ'ಯ ಕನ್ನಡ ಲೇಖಕರ ಬರಹಗಳಲ್ಲಿ ಇಂಥ ಮಾದರಿಗಳಿವೆ. ಹಾಗೆಯೇ ಕನ್ನಡದ ನವೋದಯ ಕಾಲಘಟ್ಟದ ಹೆಸರಾಂತ ಸಂಸ್ಕೃತಿ ಚಿಂತನೆಯ ಕೃತಿಗಳಲ್ಲಿ ಇಂಥ ಪ್ರಯತ್ನಗಳಿವೆ. ಅದೇ ರೀತಿ, ಸತ್ಯಶೋಧನೆಯ ಉದ್ದೇಶದ ಚಾರಿತ್ರಿಕ ಪುನಾರಚನಾವಾದಿ ಹಾಗೂ ಪುನರುತ್ಥಾನವಾಗಿ ಸಂಶೋಧಕರ ಬರಹಗಳಲ್ಲಿ ಕೂಡಾ ಇವುಗಳ ರೂಪಗಳಿವೆ. ಕನ್ನಡದಲ್ಲಿ ಅಸಾಮಾಜಿಕವಾದ ಮತ್ತು ಅಚಾರಿತ್ರಿಕವಾದ ವಸ್ತುನಿಷ್ಠ ಅಥವಾ ಕೃತಿನಿಷ್ಠ ಸಾಹಿತ್ಯ ವಿಮರ್ಶೆ ರಚಿಸಿರುವ ಕೆಲವು ವಿಮರ್ಶಕರಲ್ಲಿ ಮತ್ತು ಅಂಥ ವಿಮರ್ಶೆಯ ಕೆಲವು ವಿಧಾನಗಳಲ್ಲಿ ಕೂಡಾ ವರ್ಗ, ವರ್ಣ ಹಾಗೂ ಜಾತಿ ಹಿತಾಸಕ್ತಿಗಳ ಮೌಲ್ಯ ಪ್ರತಿಪಾದನೆಯ ಹಲವು ಮಾದರಿಗಳಿವೆ.

ಇಂಥ ಮೇಲ್ವರ್ಣ, ಮೇಲ್ವರ್ಗ, ಮೇಲ್ಜಾತಿ ಮತ್ತು ಪುರುಷಪರ ಹಿತಾಸಕ್ತಿಗಳ ಮೌಲ್ಯ ಪ್ರತಿಪಾದನೆಯ ವಿರುದ್ಧ ಕನ್ನಡ ಸಾಹಿತ್ಯ, ಸಂಶೋಧನೆ, ಸಂಸ್ಕೃತಿ ಚಿಂತನೆ ಹಾಗೂ ಸಾಹಿತ್ಯ ವಿಮರ್ಶೆಗಳಲ್ಲಿ ತೀವ್ರವಾದ ಭಿನ್ನಮತಗಳು ಮತ್ತು ಪ್ರತಿರೋಧಗಳು ವ್ಯಕ್ತವಾಗಿವೆ. ಇದು ದಮನಿತ, ಶೋಷಿತ ಮತ್ತು ಅಪಮಾನಿತ ಸಮುದಾಯಗಳು ಹಾಗೂ ವರ್ಗಗಳು ಪ್ರಧಾನ ಸಂಸ್ಕೃತಿಯ ಮೌಲ್ಯಗಳ ಶ್ರೇಣೀಕೃತತೆ ವಿರುದ್ಧ

ಎತ್ತಿರುವ ಹಲವು ಗಂಭೀರವಾದ ಪ್ರಶ್ನೆಗಳು, ಪರಿಕಲ್ಪನೆಗಳು ಮತ್ತು ವಾಗ್ವಾದಗಳ ರೂಪದಲ್ಲಿ ಪ್ರಕಟವಾಗಿವೆ. ಭಾರತದ ಚರಿತ್ರೆ ಮತ್ತು ಪುರಾಣಗಳನ್ನು ವಿಮರ್ಶಾತ್ಮಕವಾಗಿ ಅನುಸಂಧಾನ ಮಾಡಿರುವ ಕ್ರಮದಲ್ಲಿ ರೂಪಗೊಂಡಿವೆ. ಧರ್ಮಗಳನ್ನು, ಮತಗಳನ್ನು, ಪಂಥಗಳನ್ನು ಹಾಗೂ ತತ್ವ ಪರಂಪರೆಗಳನ್ನು ಸಂಘರ್ಷಾತ್ಮಕವಾಗಿ ಅನುಸಂಧಾನ ಮಾಡುತ್ತಿರುವ ವಿನ್ಯಾಸದಲ್ಲಿ ಆಕಾರ ಪಡೆದಿವೆ. ಹಾಗೆಯೇ ಪರ್ಯಾಯ ಚರಿತ್ರೆ, ಪರ್ಯಾಯ ರಾಜಕಾರಣ ಹಾಗೂ ಪರ್ಯಾಯ ಸಂಸ್ಕೃತಿ ಅಥವಾ ಪ್ರತಿಸಂಸ್ಕೃತಿಗಳ ರಚನೆಯ ಆಶಯದಿಂದ ಕ್ರಿಯಾತ್ಮಕವಾಗಿವೆ.

ಕಳೆದ ಶತಮಾನದ ಎಂಭತ್ತರ ದಶಕದಿಂದ ಕನ್ನಡ ಸಾಹಿತ್ಯ ವಿಮರ್ಶೆಯ ವಿವಿಧ ರೂಪಗಳಲ್ಲಿ ಈ ಪ್ರಶ್ನೆಗಳು ಮುನ್ನೆಲೆಗೆ ಬಂದವು. ಆರಂಭದಲ್ಲಿ ಈ ಪ್ರವೃತ್ತಿಯು, ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ಅವು ಪ್ರತಿಪಾದಿಸಿರುವ ಧರ್ಮ, ಮತ, ವರ್ಣ, ವರ್ಗ, ಜಾತಿ ಹಾಗೂ ಪಿತೃಪ್ರಧಾನ ಮೌಲ್ಯಗಳ ಅಥವಾ ಹಿತಾಸಕ್ತಿಗಳ ಹಿಂದಿರುವ 'ರಾಜಕಾರಣ'ದ ಸ್ವರೂಪವನ್ನು ಗುರುತಿಸುವ, ವಿವರಿಸುವ ಮತ್ತು ವ್ಯಾಖ್ಯಾನಿಸುವ ಕ್ರಮದಲ್ಲಿ ಪ್ರಾರಂಭವಾಯಿತು. ಆನಂತರ ಕನ್ನಡ ಸಾಹಿತ್ಯ ಪರಂಪರೆ, ಪಠ್ಯಗಳು ಮತ್ತು ಲೇಖಕರನ್ನು ರೂಪಿಸುತ್ತಿರುವುದರ ಹಿನ್ನೆಲೆಯಲ್ಲಿರುವ ಚರಿತ್ರೆ, ಸಂಸ್ಕೃತಿ ಹಾಗೂ ಧರ್ಮಗಳನ್ನು ಕುರಿತ ವಿಮರ್ಶೆಯಾಗಿ ಅವಸ್ಥಾಂತರಗೊಂಡಿತು. ಹೀಗೆ ಸಾಹಿತ್ಯ ವಿಮರ್ಶೆಯ ವಿವೇಕವು ಏಕಕಾಲಕ್ಕೆ, ರೂಪಗೊಂಡಿರುವ ಸಾಹಿತ್ಯ ಮತ್ತು ಅದನ್ನು ರೂಪಿಸುತ್ತಿರುವ ಸಮಾಜ, ಸಂಸ್ಕೃತಿ ಹಾಗೂ ಚರಿತ್ರೆಗಳು ಒಳಗೊಂಡಿರುವ ರಾಜಕಾರಣದ ಸಂಕೀರ್ಣ ನೆಲೆಗಳನ್ನು ಕುರಿತ ಅನುಸಂಧಾನವನ್ನು ಮುಖ್ಯ ಪ್ರಶ್ನೆಗಳಾಗಿ ಒಳಗೊಂಡಿದ್ದೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹುಟ್ಟಿಗೆ, ಅದರ ತಾತ್ವಿಕ ಸ್ವರೂಪದ ಪ್ರಕಟತ್ವಕ್ಕೆ ಹಾಗೂ ಬಹುರೂಪಿ ಆಯಾಮಗಳ ವಿಕಾಸಕ್ಕೆ ಪ್ರಮುಖ ಕಾರಣವಾಯಿತು. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಆಯಾಮಗಳ ಹಿನ್ನೆಲೆಯಲ್ಲಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭಿತ್ತಿ.

ಹೀಗೆ ಎಂಭತ್ತರ ದಶಕದಿಂದ ಮೊದಲಾಗಿ ಬಹುಬೇಗನೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣಕ್ಕೆ ಮತ್ತು ಅದರ ರಾಜಕಾರಣ ಆಯಾಮಗಳ ವಿಕಾಸಕ್ಕೆ ಕಾರಣಗಳಾದ ಪ್ರಶ್ನೆಗಳು ತೊಂಭತ್ತರ ದಶಕದ ವೇಳೆಗೆ ಬೇರೆಯದೇ ಆದ ಹೊಸ ಆಯಾಮಗಳನ್ನು ಪಡೆದುಕೊಂಡವು. ನಿರ್ವಹಣಾತೀಕರಣದ ದೇಸಿ ಸಂಸ್ಕೃತಿ ಶೋಧದ ರಾಜಕೀಯ ಪ್ರಶ್ನೆಗಳಿಗೆ, ನವವಸಾಹತುಶಾಹೀಕರಣದ ಜಾಗತಿಕ ಗ್ರಾಮ ಸಂಸ್ಕೃತಿಯ ಏಕರೂಪೀಕರಣದ ಪ್ರಶ್ನೆಗಳು ಒಡ್ಡಿದ ಸವಾಲುಗಳನ್ನು ಇವು ಅನಿವಾರ್ಯವಾಗಿ ಮುಖಾಮುಖಿ ಮಾಡಬೇಕಾಯಿತು. ಈ ಪ್ರಶ್ನೆಗಳು ರಾಜಕೀಯ ಪ್ರಶ್ನೆಗಳ ಸ್ವರೂಪಗಳ ಬದಲಾಗಿ ಅಭಿವೃದ್ಧಿ ಅರ್ಥಶಾಸ್ತ್ರ, ದಕ್ಷ ಆಡಳಿತ, ಬೌದ್ಧಿಕ ಹಕ್ಕುಗಳ ರಕ್ಷಣೆ, ಸಮಾನ ಸ್ಪರ್ಧೆ, ಗುಣಮಟ್ಟ, ಪ್ರಾವೀಣ್ಯತೆಗೆ ಮನ್ನಣೆ ಮೊದಲಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ವಾಣಿಜ್ಯ ಪ್ರಶ್ನೆಗಳ ಸ್ವರೂಪದಲ್ಲಿ ಎದುರಾದವು. ಹಾಗೆಯೇ, ನವವಸಾಹತುಶಾಹಿಯ ರಾಜಕೀಯಾಡಳಿತ ಉದ್ದೇಶದ ಆರ್ಥಿಕ ನೀತಿ ಸಿದ್ಧಾಂತವು ಪರೋಕ್ಷವಾಗಿ

ಹರಿಯಬಿಟ್ಟ ಆಧುನಿಕೋತ್ತರ ಚಿಂತನೆಯು, ರಾಜಕೀಯ ಪ್ರಶ್ನೆಗಳ ಕಾವು ಮತ್ತು ಮೊನಚನ್ನು ತಗ್ಗಿಸುವಂಥ ವಿರಾಟ್ ಕಥನಗಳ ನಿರಾಕರಣೆಯ ಬಹುರೂಪಿ ಕಿರುಕಥನಗಳನ್ನು ಮಂಡಿಸಿತು. ಇದು ಇಪ್ಪತ್ತನೆಯ ಶತಮಾನದ ತೃತೀಯ ಜಗತ್ತಿನ ರಾಷ್ಟ್ರಗಳ ಗತಿಚಕ್ರವನ್ನು ನಾನೂರು-ಐನೂರು ವರ್ಷಗಳ ಹಿಂದಕ್ಕೆ ತಿರುಗಿಸುವ ಉದ್ದೇಶದ ಮಾರುವೇಷದ ಸಾಂಸ್ಕೃತಿಕ ರಾಜಕೀಯ. ಈ ಚಿಂತನೆಯು ತೊಂಭತ್ತರ ದಶಕದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ರಾಜಕೀಯ ಪ್ರಶ್ನೆಗಳನ್ನು ಕೇಳುವ ಕ್ರಮಗಳಲ್ಲಿ ತೀವ್ರವಾದ ಬದಲಾವಣೆಗಳನ್ನು ತಂದಿದೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಆಧುನಿಕೋತ್ತರ ಚಿಂತನೆಯನ್ನು ವಿಮರ್ಶಾತ್ಮಕವಾಗಿ ಹಾಗೂ ಪರಿಷ್ಕಾರಪೂರ್ವಕವಾಗಿ ಸ್ವೀಕರಿಸುವ ಎಚ್ಚರದ ಕ್ರಮದ ಜೊತೆಗೆ, ಅದರ ಯಥಾರ್ಥ ಸ್ವರೂಪದಲ್ಲಿ ಸ್ವೀಕರಿಸುತ್ತಿರುವ ಹಾಗೂ ಅನ್ವಯಿಸುತ್ತಿರುವ ಪ್ರಜ್ಞಾಪೂರ್ವಕ ಪ್ರವೃತ್ತಿಗಳು ಸಹ ಹೆಚ್ಚಾಗುತ್ತಿವೆ. ಇದು ಬಹುಮುಖ್ಯವಾಗಿ ರಾಜಕೀಯ ಉದ್ದೇಶವುಳ್ಳ ನಡೆಯಾಗಿದೆ.

ಇದರೊಂದಿಗೆ ಆಧುನಿಕೋತ್ತರ ಚಿಂತನೆಯ ದೃಷ್ಟಿಕೋನದ ಮೂಲಕ ಕನ್ನಡ ಸಾಹಿತ್ಯ ಪರಂಪರೆ, ಪಠ್ಯಗಳು ಹಾಗೂ ಸಂಸ್ಕೃತಿ ವಿಚಾರಗಳನ್ನು ವಿಶ್ಲೇಷಿಸುವ ಸಮಾಜಶಾಸ್ತ್ರೀಯ ಅಧ್ಯಯನಗಳು ತೀವ್ರವಾಗಿವೆ. ಇದಕ್ಕಾಗಿ ವಿಶ್ವವಿದ್ಯಾಲಯಗಳಲ್ಲಿ 'ಹೊಸ ಸಾಂಸ್ಕೃತಿಕ ಅಧ್ಯಯನ' ಪೀಠಗಳು ಮತ್ತು ಅಧ್ಯಯನ ವಿಭಾಗಗಳು ಪ್ರಾರಂಭವಾಗಿವೆ. ಇದಕ್ಕೆ ಯೂರೋಪಿನ ರಾಷ್ಟ್ರಗಳು ಮತ್ತು ಅಮೇರಿಕಾದಿಂದ ಹಲವು ರೂಪದ ನೆರವುಗಳು ಲಭ್ಯವಾಗುತ್ತಿವೆ. ಇದೇ ಮಾದರಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಪಠ್ಯಗಳನ್ನು ವಿಶ್ಲೇಷಿಸುವ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ವಿಧಾನದ ಸಂಸ್ಕೃತಿ ವಿಮರ್ಶೆ ಕೂಡಾ ವೇಗ ಪಡೆದುಕೊಂಡಿದೆ. ಇದು ದೇವುಡು, ಮಾಸ್ತಿ ಮತ್ತು ಡಿ.ವಿ.ಜಿ ಅವರ 'ಸಂಸ್ಕೃತಿ ಅಧ್ಯಯನ'ಕ್ಕಿಂತ ತಾತ್ವಿಕವಾಗಿ ಭಿನ್ನವಾಗಿಲ್ಲ; ಬದಲಾಗಿ ಇನ್ನಷ್ಟು ಹೆಚ್ಚಿನ ರಾಜಕೀಯ ಉದ್ದೇಶದಿಂದ ಕೂಡಿರುವ ಸ್ವರೂಪದ್ದಾಗಿದೆ. ಈ ಮೂಲಕ ಮಾರ್ಕ್ಸವಾದಿ ಮತ್ತು ಎಡಪಂಥೀಯ ಚಿಂತನೆಯ ರಾಜಕೀಯ ಪ್ರಶ್ನೆಗಳ ತೀವ್ರತೆಯನ್ನು ಹಾಗೂ ಜರೂರನ್ನು ತಗ್ಗಿಸುವ ಗುಪ್ತಕಾರ್ಯಸೂಚಿಯೆಂದು ಹೇಳಲಾಗುವ ಆಧುನಿಕೋತ್ತರ ಚಿಂತನೆಯು ಪ್ರಸ್ತುತ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಸ್ಪಷ್ಟವಾದ ರೂಪ ಪಡೆದುಕೊಳ್ಳುತ್ತಿದೆ. ಇದೇ ಸಂದರ್ಭದಲ್ಲಿ ದಲಿತ ಮತ್ತು ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯ ರಾಜಕೀಯ ಪ್ರಶ್ನೆಗಳೂ ಕೂಡಾ ಅನೇಕ ಬಾಹ್ಯ ಒತ್ತಡಗಳು ಹಾಗೂ ಆಂತರಿಕ ವಿರೋಧಗಳಿಗೆ ಒಳಗಾಗಿವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಂಸ್ಕೃತಿಕ ರಾಜಕಾರಣದ ಈ ಒಟ್ಟು ಸ್ವರೂಪವನ್ನು ಮುಖ್ಯವಾದ ಎರಡು ಆಯಾಮಗಳಲ್ಲಿ ಗುರುತಿಸಿಕೊಳ್ಳಬಹುದು. ಅವುಗಳೆಂದರೆ, ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರತಿಗಾಮಿ ರಾಜಕೀಯಾನುಸಂಧಾನದ ಆಯಾಮಗಳು ಮತ್ತು ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಗತಿಪರ ರಾಜಕೀಯಾನುಸಂಧಾನದ ಆಯಾಮಗಳು.

ಈ ಆಯಾಮಗಳನ್ನು ಕುರಿತ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ಒಂದು ಮುಖ್ಯ ಸಂಗತಿಯನ್ನು ಇಲ್ಲಿಯೇ ಸ್ಪಷ್ಟೀಕರಿಸಿಕೊಳ್ಳಬೇಕಿದೆ. ಅದು ಏನೆಂದರೆ, ಈ ಅಧ್ಯಯನದ ಉದ್ದೇಶಕ್ಕಾಗಿ ವ್ಯಾಖ್ಯಾನಿಸಿಕೊಂಡಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ಬಹುರೂಪಿ ಮಾದರಿಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ವಿಮರ್ಶೆಯ ಹಲವು ಮಾದರಿಗಳು ಕೂಡಾ ಕನ್ನಡದಲ್ಲಿ ಬಳಕೆಯಲ್ಲಿ ಇವೆ ಎನ್ನುವುದು. ಹಾಗೆ ನೋಡಿದರೆ ಕನ್ನಡದ ಇಂದಿನ ಅನೇಕ ಬರಹಗಾರರು ತಮ್ಮ ವಿಮರ್ಶೆಗಳನ್ನು 'ಸಾಂಸ್ಕೃತಿಕ ವಿಮರ್ಶೆ' ಅಥವಾ 'ಸಂಸ್ಕೃತಿ ವಿಮರ್ಶೆ'ಯೆಂದು ಕರೆದುಕೊಳ್ಳುವುದನ್ನು ಸಹ ಗಮನಿಸಬಹುದು. ಆದರೆ ಅವು ನಿಜವಾಗಿಯೂ ಎಷ್ಟರಮಟ್ಟಿಗೆ ಸಾಂಸ್ಕೃತಿಕ ವಿಮರ್ಶೆಗಳಾಗಿವೆ ಎನ್ನುವುದು ಬೇರೆ ಮಾತು. ಆದರೆ ಹಾಗೇನೂ ಕರೆದುಕೊಳ್ಳದೆಯೂ ಒಳ್ಳೆಯ ಸಾಂಸ್ಕೃತಿಕ ವಿಮರ್ಶೆಯನ್ನು ರಚಿಸುತ್ತಿರುವುದನ್ನು ಮತ್ತು ಹಾಗೆ ಕರೆದುಕೊಂಡರೂ ಕೂಡಾ ಸಾಂಸ್ಕೃತಿಕ ವಿಮರ್ಶೆಯಲ್ಲದ ಸಾಮಾನ್ಯ ಸಾಹಿತ್ಯ ಪರಿಶೀಲನೆಯಂಥ ಬರವಣಿಗೆಯನ್ನು ಯಥೇಚ್ಛ ಪ್ರಮಾಣದಲ್ಲಿ ಸೃಷ್ಟಿಸುತ್ತಿರುವುದನ್ನು ನೋಡಬಹುದಾಗಿದೆ.

ಇಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಿರುವುದು, ಈ ಅಧ್ಯಯನದ ಉದ್ದೇಶಕ್ಕಾಗಿ ರೂಪಿಸಿಕೊಂಡ ವ್ಯಾಖ್ಯೆಯ ಹೊರತಾದ ಸಾಂಸ್ಕೃತಿಕ ವಿಮರ್ಶೆಯ ಮಾದರಿಗಳು ಕನ್ನಡದ ಇಂದಿನ ವಿಮರ್ಶಾ ಸಂದರ್ಭದಲ್ಲಿ ಇವೆ ಎನ್ನುವ ಒಂದೇ ಕಾರಣಕ್ಕಾಗಿ ಅಲ್ಲ; ಇದಕ್ಕೆ ಇನ್ನಿತರ ಮುಖ್ಯವಾದ ಉದ್ದೇಶಗಳೂ ಸಹ ಇವೆ ಎನ್ನುವುದನ್ನು ಗುರುತಿಸುವ ಕಾರಣಕ್ಕಾಗಿ. ಏಕೆಂದರೆ, ಈ ರೀತಿಯ ಸಾಂಸ್ಕೃತಿಕ ವಿಮರ್ಶೆಗಳು ಮೇಲ್ನೋಟಕ್ಕೆ ಸಾಂಸ್ಕೃತಿಕ ವಿಮರ್ಶೆ ಎಂದು ಸುಲಭವಾಗಿ ಗೊತ್ತಾಗದಿರುವಂಥ ಚಟುವಟಿಕೆಗಳಾಗಿವೆ. ಇವು ಸಾಹಿತ್ಯದ ವಸ್ತುನಿಷ್ಠ ವಿಶ್ಲೇಷಣೆ, ಸಾಹಿತ್ಯದ ಶ್ರೇಷ್ಠತೆ ಮತ್ತು ಕಲಾತ್ಮಕತೆ ಗುಣಧರ್ಮಗಳ ಪ್ರಾಮುಖ್ಯತೆಯ ಪ್ರತಿಪಾದನೆ, ಪಂಥಾತೀತ ಸ್ವರೂಪದ ಅಭಿಜಾತ ಸಾಹಿತ್ಯದ ಪ್ರತಿಪಾದನೆ, ಸಾಹಿತ್ಯದಲ್ಲಿ ಸತ್ಯ ಮತ್ತು ಸೌಂದರ್ಯಗಳಂಥ ಪರಮೋಚ್ಚ ಮೌಲ್ಯಗಳ ಪ್ರತಿಪಾದನೆ, ಸಾಹಿತ್ಯದ ಸಾರ್ವಕಾಲೀನತೆ ಮತ್ತು ವಿಶ್ವಾತ್ಮಕತೆಯಂಥ ಆಯಾಮಗಳ ಪ್ರತಿಪಾದನೆ ಮೊದಲಾದ ಕಾರ್ಯಮಾದರಿಗಳ ಮೂಲಕ ಕ್ರಿಯಾತ್ಮಕವಾಗಿವೆ. ಆದರೆ ಇವು ಹೊರರೂಪಕ್ಕೆ ಸುಲಭವಾಗಿ ಗೋಚರವಾಗದಂಥ ಸೂಕ್ಷ್ಮ ಸ್ವರೂಪದಲ್ಲಿ ಸಾಂಸ್ಕೃತಿಕ ವಿಮರ್ಶೆಯ ಪರಿಭಾಷೆ ಮತ್ತು ವಿಧಾನಗಳನ್ನು ಬಳಸುತ್ತಿರುತ್ತವೆ.

ಹೀಗಾಗಿ, ಯಾವುದನ್ನು ನವ್ಯ ಸಾಹಿತ್ಯ ವಿಮರ್ಶೆ ಸಾಹಿತ್ಯದಲ್ಲಿ 'ಶ್ರೇಷ್ಠತೆ' ಎಂದು ಪ್ರತಿಪಾದಿಸುತ್ತಿತ್ತೋ, ಅದನ್ನೇ ಈಗಲೂ ಸಹ ಬೇರೆ ರೂಪಗಳಲ್ಲಿ ಹಾಗೂ ವಿನ್ಯಾಸಗಳಲ್ಲಿ ಪ್ರತಿಪಾದಿಸುತ್ತಿವೆಯೇನೋ ಎಂದು ಭಾವಿಸಿಕೊಳ್ಳಬಹುದಾದ ರೀತಿಯಲ್ಲಿ ಈ ಪ್ರವೃತ್ತಿಗಳು ಕಂಡುಬರುತ್ತವೆ. ಆದರೆ, ಇದು ಕನ್ನಡ ನವ್ಯ ವಿಮರ್ಶೆಯು ಪ್ರತಿಪಾದಿಸಿದ್ದ ಯೂರೋಅಮೇರಿಕನ್ ನವ್ಯ ವಿಮರ್ಶಾ ಪರಿಕರ–ಪರಿದೃಷ್ಟಿ–ಪರಿಜ್ಞಾನಕ್ಕಿಂತ ತಾತ್ವಿಕವಾಗಿ ಬೇರೆಯಾಗಿರುವ ಸಾಹಿತ್ಯದ ಶ್ರೇಷ್ಠತೆಯ ಸ್ವರೂಪ. ಮುಖ್ಯವಾಗಿ ಇದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಕ್ಷೀಣದನಿಯ ರೂಪದಲ್ಲಿ ಹುತ್ತದಿಂದ ಹಾವು

ಆಗಾಗ ತಲೆಹಾಕುವಂತೆ ಹೊರಚಾಚುತ್ತಿದ್ದ, 'ವೈದಿಕಶಾಹಿ' ಅಥವಾ 'ಪುರೋಹಿತಶಾಹಿ'ಯ ಪ್ರತಿಗಾಮಿ ರಾಜಕಾರಣದ ಉದ್ದೇಶದ ಸಾಹಿತ್ಯಕ್ಕೆ, ಆಧುನಿಕೋತ್ತರ ನವವಸಾಹತುಶಾಹಿ ಕಾಲಘಟ್ಟದಲ್ಲಿ ಪ್ರತಿಪಾದಿತವಾಗಿರುವ ಜಾಗತಿಕ ಗ್ರಾಮ ಪರಿಕಲ್ಪನೆಯ ವಿಶ್ವಾತ್ಮಕ ವಿರಾಟ್ ಕಥನಗಳ ಇಂಬು ನೀಡುವ ಮೂಲಕ ವ್ಯಾಪಕ ಮಾನ್ಯತೆ ದೊರಕಿಸಿಕೊಡುವ ರಾಜಕೀಯಾತ್ಮಕವಾದ ಪ್ರಯತ್ನ. ಇದನ್ನು ಇನ್ನಷ್ಟು ಖಚಿತವಾದ ಕ್ರಮದಲ್ಲಿ ಹೇಳುವುದಾದರೆ, ನವ ಬಂಡವಾಳಶಾಹಿಯ ಜಾಗತೀಕರಣದ ಮತ್ತು ಖಾಸಗೀಕರಣದ ಕಾರ್ಪೊರೇಟ್ ಸಂಸ್ಕೃತಿಯ ಪ್ರಯೋಜನಗಳನ್ನು ವ್ಯಾಪಕವಾಗಿ ಪಡೆದುಕೊಳ್ಳುತ್ತಿರುವ ಪುರೋಹಿತಶಾಹಿಯು ತನ್ನ ಸೈದ್ಧಾಂತಿಕ ವಿಚಾರಧಾರೆಯನ್ನು ಪ್ರಚುರಗೊಳಿಸುವುದಕ್ಕೆ ಅನುವಾಗಂತೆ ಕನ್ನಡದಲ್ಲಿ ಬಲಪಂಥೀಯ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸುವುದೇ ಇಂಥ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ಹೆಸರಿನ 'ಸಾಂಸ್ಕೃತಿಕ ವಿಮರ್ಶೆ'ಯ ಗುಪ್ತ ಉದ್ದೇಶವಾಗಿದೆ. ಇದು ಬಲಪಂಥೀಯ ವಿಚಾರಧಾರೆಯ ಎಳೆಗಳನ್ನು ಎಂದರೆ 'ವೈದಿಕಶಾಹಿ', 'ಬ್ರಾಹ್ಮಣಶಾಹಿ', 'ಪುರೋಹಿತಶಾಹಿ' ಮತ್ತು 'ಹಿಂದುತ್ವ'ದ ಪ್ರತಿಪಾದನೆ ಮೊದಲಾದವುಗಳನ್ನು ತಮ್ಮ ಬರವಣಿಗೆಯ ಮುಖ್ಯ ನೆಲೆಗಳಾಗಿ ಹೊಂದಿರುವ ಕನ್ನಡದ ಪೂರ್ವಪರಂಪರೆಯ ಲೇಖಕರ ಕೃತಿಗಳ ವಿಮರ್ಶೆ, ಸಂಪಾದನೆ ಮತ್ತು ಪ್ರಕಟಣೆಗಳನ್ನು ಮಾಡುವುದು, ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಬ್ಲಾಗ್‌ಗಳಲ್ಲಿ ಇಂಥ ಸಾಹಿತ್ಯದ ಚರ್ಚೆ ಮತ್ತು ವಿಶ್ಲೇಷಣೆಗೆ ಪ್ರಾಧಾನ್ಯತೆ ಕೊಡುವುದು, ಪ್ರಶಸ್ತಿ ಹಾಗೂ ಪುರಸ್ಕಾರಗಳನ್ನು ಪ್ರದಾನ ಮಾಡುವುದು, ಹೀಗೆ ಹಲವು ರೂಪಗಳಲ್ಲಿ ನಡೆಯುತ್ತಿದೆ.

ಇಷ್ಟೇ ಅಲ್ಲದೆ, ಈ ಹೊಸ ಸ್ವರೂಪದ ಸಾಂಸ್ಕೃತಿಕ ಅಧ್ಯಯನವು ಇಂಥ ಮನೋಧರ್ಮಕ್ಕೆ ಪೂರಕವಾಗಿರುವ ದಿನಪತ್ರಿಕೆಗಳು, ವಾರಪತ್ರಿಕೆಗಳು ಹಾಗೂ ವಿವಿಧ ನಿಯತಕಾಲಿಕಗಳಲ್ಲಿ ಕೂಡಾ ಬೇರೆಬೇರೆ ಸ್ವರೂಪಗಳಲ್ಲಿ ನಡೆಯುತ್ತಿದೆ. ಇದಕ್ಕೆ ಅತ್ಯಂತ ಸೂಕ್ತವಾದ ಎರಡು ನಿದರ್ಶನಗಳೆಂದರೆ 'ದೇಶಕಾಲ ಪತ್ರಿಕೆ'ಯಲ್ಲಿ (೨೦೧೦) ಪ್ರಕಟವಾಗುತ್ತಿದ್ದ ಬರಹಗಳನ್ನು ಆಯ್ಕೆ ಮಾಡುವುದಕ್ಕಾಗಿ ಅನುಸರಿಸುತ್ತಿದ್ದ ಮಾನದಂಡಗಳನ್ನು ಮತ್ತು ಆ ಪತ್ರಿಕೆ ಮಾಡಿದ ಇಪ್ಪತ್ತೊಂದನೆಯ ಶತಮಾನದ ಸಂದರ್ಭದ ಕನ್ನಡದ ಶ್ರೇಷ್ಠ ಲೇಖಕರ ಪಟ್ಟಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಅನುಸರಿಸಲಾದ ಸಾಹಿತ್ಯದ ಶ್ರೇಷ್ಠತೆ ಪರಿಕಲ್ಪನೆಯ ಮಾನದಂಡ ಕುರಿತು ನಡೆದ ವಾಗ್ವಾದ. ಹಾಗೆಯೇ ಆಧುನಿಕೋತ್ತರ ಚಿಂತನೆಯ ಸಾಂಸ್ಕೃತಿಕ ಅಧ್ಯಯನಕಾರರಾದ ಬಾಲಗಂಗಾಧರ ಅವರ 'ಪೂರ್ವಾವಲೋಕನ' (೨೦೧೦) ಮತ್ತು ಮನು. ವಿ. ದೇವದೇವಗನ್ ಅವರ 'ಪೃಥ್ವಿಯೊಳಗಿನ ಘಟವು ಕರ್ನಾಟಕದ ನಿನ್ನೆಗಳನ್ನು ಕುರಿತು' ಕೃತಿಗಳು ರೂಪಿಸಲೆತ್ನಿಸುತ್ತಿರುವ ಕರ್ನಾಟಕ ಸಂಸ್ಕೃತಿ ಅಧ್ಯಯನ ಮತ್ತು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮಾದರಿಯನ್ನು ಇಲ್ಲಿ ಗಮನಿಸಬಹುದು. ಬಾಲಗಂಗಾಧರ ಅವರ ಸಂಶೋಧನಾ ವಿದ್ಯಾರ್ಥಿ ಡಂಕಿನ್ ಝಳಕಿ ಅವರು ಕನ್ನಡ ವಚನ ಸಾಹಿತ್ಯಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳನ್ನು

ಸಂಪೂರ್ಣ ತೆಗೆದುಬಿಸಾಕಿ ವಚನಗಳನ್ನು 'ಕೇವಲ ಆಧ್ಯಾತ್ಮಿಕ ರಚನೆ'ಗಳು, ವಚನಕಾರರಲ್ಲಿ ಜಾತಿ ವಿರೋಧದ ಪ್ರಶ್ನೆಗಳೇ ಇಲ್ಲ; ಏಕೆಂದರೆ ಜಾತಿ ಎನ್ನುವುದೇ ಭಾರತದಲ್ಲಿ ಬ್ರಿಟಿಷರು ಹುಟ್ಟುಹಾಕಿದ ಅಪಕಲ್ಪನೆ, ಹೀಗೆ ಪ್ರತಿಪಾದಿಸುವ ಮೂಲಕ ಸಾಧಿಸಲು ಹೊರಟಿರುವುದು ಭಾರತದ ಪ್ರಾಚೀನ ಕಲ್ಪಿತ ಅವಾಸ್ತವಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭದ ಪುನರುತ್ಥಾನವೇ ಆಗಿದೆ.

ಇದು ಕೇವಲ ಸಮಾಜಶಾಸ್ತ್ರೀಯ ಅಥವಾ ಸಂಸ್ಕೃತಿ ಅಧ್ಯಯನದ ಶಿಸ್ತಿನ ವಿಚಾರವಷ್ಟೇ ಅಲ್ಲ, ಇತ್ತೀಚಿನ ಹೊಸ ತಲೆಮಾರಿನ ವಿಮರ್ಶಕರಾದ ಜಿ.ಬಿ. ಹರೀಶ್, ಅಜಕ್ಕಳ ಗಿರೀಶ್ ಭಟ್ ಮೊದಲಾದವರು ಭೈರಪ್ಪ, ಚಿದಾನಂದಮೂರ್ತಿ ಮೊದಲಾದವರ ಸಾಹಿತ್ಯ ಮತ್ತು ಸಂಶೋಧನೆಗಳನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಕನ್ನಡದ ಆಧುನಿಕ ಚಿಂತನೆ ಹಾಗೂ ವೈಚಾರಿಕ ಆಕೃತಿಗಳನ್ನೆಲ್ಲಾ ಬುಡಸಮೇತ ಕಿತ್ತುಹಾಕುವ ರೀತಿಯಲ್ಲಿ ಮಾತಾನ್ನಾಡುವ ಅನೇಕ ಪ್ರಸಂಗಗಳು ಕನ್ನಡ ಸಾಂಸ್ಕೃತಿ ವಿಮರ್ಶೆಯ ಹೆಸರಿನಲ್ಲೇ ನಡೆಯುತ್ತಿವೆ. ಜಿ.ಬಿ.ಹರೀಶ್ ಅವರು ಡಿ.ಆರ್ ವಿಮರ್ಶೆಯ ಸ್ವರೂಪ ಕುರಿತು ಚರ್ಚಿಸುತ್ತಾ, 'ಡಿ.ಆರ್ ಪಿತ್ರಾರ್ಜಿತವಾದದ್ದನ್ನೆಲ್ಲಾ ಸ್ವಯಾರ್ಜಿತವಾದದ್ದೆಂದು' ಹೇಳಿಕೊಂಡರು ('ಬೆಳಕಿನಾಟ ೨೦೦೫') ಎಂದು ಬರೆಯುವುದರ ಹಿಂದಿರುವ ಮರ್ಮ ಇದೇ ಆಗಿದೆ. ಹಾಗೆಯೇ ಸತ್ಯಕಾಮರಂಥ 'ತಾಂತ್ರಿಕ ಪಂಥದ' ವಸ್ತುವಿವರಗಳ ಕಥನಕಾರರನ್ನು ಕನ್ನಡದ ಶ್ರೇಷ್ಠ ಜೀವನಾರ್ಥ ಶೋಧದ ತತ್ವಾನ್ವೇಷಕ ಬರಹಗಾರ ಎನ್ನುವಂತೆ ನಿರೂಪಿಸುವುದರ ಹಿಂದಿನ ಉದ್ದೇಶ ಕೂಡಾ ಇದೇ ಬಗೆಯದಾಗಿದೆ. ಇದೊಂದು 'ಮಾಧ್ಯಮಮಾರ್ಗಿ' ಸ್ವರೂಪದ ಬಲಪಂಥೀಯ ಸಾಹಿತ್ಯದ ಮತ್ತು ವಿಚಾರವಾದದ ಮಂಡನೆಯ ಸಾಂಸ್ಕೃತಿಕ ವಿಮರ್ಶಾ ಕ್ರಮವಲ್ಲದೆ ಬೇರೇನೂ ಅಲ್ಲ.

ಈ ಹಿನ್ನೆಲೆಯಲ್ಲಿ, ಈಗಾಗಲೇ ಗುರುತಿಸಲಾಗಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಂಸ್ಕೃತಿಕ ರಾಜಕಾರಣದ ಆಯಾಮಗಳನ್ನು ಇಲ್ಲಿ ಪ್ರತ್ಯೇಕವಾಗಿ ಚರ್ಚಿಸುವುದು ಸೂಕ್ತವಾದ ಕ್ರಮವೆಂದು ಭಾವಿಸಿಕೊಳ್ಳಲಾಗಿದೆ.

೭.೨ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರತಿಗಾಮಿ ರಾಜಕೀಯಾನುಸಂಧಾನದ ಆಯಾಮಗಳು

ಪ್ರತಿಗಾಮಿ ರಾಜಕೀಯ ಎಂದರೆ, ಸ್ವಯಂಸ್ಪಷ್ಟವಾಗುವಂತೆ ಪ್ರಗತಿಪರ ರಾಜಕೀಯಕ್ಕೆ ವಿರುದ್ಧವಾದುದು. ಆದರೆ ಇಲ್ಲಿ ರಾಜಕೀಯ ಎಂದರೇನು ಮತ್ತು ಅದರ ಅನುಸಂಧಾನ ಎಂದರೇನು ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳಬೇಕಿರುವುದೆ. 'ರಾಜಕೀಯ' ಎಂದರೆ, ಅಧಿಕಾರ ಮತ್ತು ಅಧಿಕಾರ ಸ್ಥಾನ ಗಳಿಸಲು ವ್ಯಕ್ತಿ, ಪಕ್ಷ ಮತ್ತು ಸಂಘಟನೆಗಳು ಮಾಡುವ ಹೋರಾಟವಲ್ಲ. ಹಾಗೆ ನೋಡಿದರೆ ಇದು 'ರಾಜಕಾರಣ' ಕುರಿತ ಅತ್ಯಂತ ಪರಿಮಿತ ವ್ಯಾಖ್ಯೆಯಷ್ಟೆ. 'ರಾಜಕೀಯ' ಎನ್ನುವ ಪರಿಭಾಷೆಯ ಸಂದರ್ಭದಲ್ಲಿ ಈ ಪರಿಸ್ಥಿತಿ ಒಂದು ತೃಣ ಸ್ವರೂಪಿ. ಹಾಗಾದರೆ ನಿಜವಾಗಿಯೂ 'ರಾಜಕೀಯ' ಎಂದರೇನು ಎಂದರೆ, ನಿರ್ದಿಷ್ಟ ಅಧಿಕಾರ ಸಿಗಲಿ ಅಥವಾ ಸಿಗದಿರಲಿ, ನಿರಂತರವಾದ ರೀತಿಯಲ್ಲಿ ಉಳಿದೆಲ್ಲದರ ಅಥವಾ

ಉಳಿದವರೆಲ್ಲರ ಮೇಲೆ ಶಾಶ್ವತವಾದ ಮತ್ತು ಪ್ರಬಲವಾದ ನಿಯಂತ್ರಣ ಹೊಂದಲು ಮಾಡುವ ವ್ಯವಸ್ಥಿತ ಪ್ರಯತ್ನ. ಇದು ಪ್ರಧಾನವಾದದ್ದೊಂದು ಉಳಿದದ್ದೆನ್ನೆಲ್ಲಾ ತನ್ನ ಅಧೀನವಾಗಿಸಿಕೊಳ್ಳಲು ನಡೆಸುವ ಸಂಘಟಿತ ಕ್ರಿಯೆ. ತಾನೇ ಬಲಿಷ್ಠ ಶಕ್ತಿಯಾಗಿ ರೂಪುಗೊಳ್ಳಲು ಮತ್ತು ನಿರಂತರವಾಗಿ ಮುಂದುವರಿಯಲು ಅನುಸರಿಸುವ ಕಾರ್ಯತಂತ್ರಗಳ ಹಾಗೂ ಕಾರ್ಯಾಚರಣೆಗಳ ಮೊತ್ತ. ಹಾಗೆಯೇ ಇವೆಲ್ಲವುಗಳ ವಿರುದ್ಧ ಅಧೀನ ರಚನೆಗಳು ತಮ್ಮ ಅಸ್ತಿತ್ವ, ಹಕ್ಕುಗಳು ಮತ್ತು ಅನನ್ಯತೆಗಳ ಸಲುವಾಗಿ ನಿರಂತರವಾಗಿ ವ್ಯಕ್ತಪಡಿಸುವ ಪ್ರತಿರೋಧ ಹಾಗೂ ಪ್ರತಿಭಟನೆಯ ಪ್ರಯತ್ನಗಳ ನಿರಂತರವಾದ ವಿದ್ಯಮಾನ.

ರಾಜಕೀಯಾನುಸಂಧಾನ ಎಂದರೆ, ಹಾಗೆ ಅಧಿಕಾರ ಪಡೆಯುವ ಮೂಲಕ ರೂಪುಗೊಂಡ ಯಾಜಮಾನ್ಯಶಕ್ತಿಯು ತನ್ನ ಅಧೀನ ಅಥವಾ ಅಂಚಿನ ವ್ಯಕ್ತಿಗಳ, ಗುಂಪುಗಳ ಹಾಗೂ ಸಮುದಾಯಗಳ ಮೇಲೆ ಶಾಶ್ವತ ನಿಯಂತ್ರಣ ಸಾಧಿಸುವುದಕ್ಕಾಗಿ ರೂಪಿಸುವ ಬಹುರೂಪಿ ಕಾರ್ಯತಂತ್ರಗಳ ಹಾಗೂ ಕಾರ್ಯಾಚರಣೆಗಳ ವಿಧಾನ. ಹಾಗೆಯೇ ಇಂಥ ವಿಧಾನಕ್ಕೆ ವಿರುದ್ಧವಾಗಿ, ಅಂಚಿನ ಅಥವಾ ದಮನಿತ ರಚನೆಗಳು ಹಾಗೂ ವ್ಯವಸ್ಥೆಗಳು ರೂಪಿಸುವ ಪ್ರತಿರೋಧಾತ್ಮಕ ಕಾರ್ಯತಂತ್ರ ಮತ್ತು ಕಾರ್ಯಾಚರಣೆಯ ಪ್ರತಿಪ್ರಯತ್ನಗಳ ನಿರಂತವಾದ ವಿದ್ಯಮಾನ. ಈ ಎರಡೂ ವಿದ್ಯಮಾನಗಳನ್ನು ಕನ್ನಡದ ಒಂದೇ ಕಾದಂಬರಿಗೆ ಪ್ರತಿಕ್ರಿಯೆಯಾಗಿ ಬಂದಿರುವ ಎರಡು ವಿಮರ್ಶೆಗಳ ವಿಶ್ಲೇಷಣೆಯ ಮೂಲಕ ಇಲ್ಲಿ ಚರ್ಚಿಸಲಾಗಿದೆ.

ಇವುಗಳಲ್ಲಿ ಒಂದು ಬರಹ 'ರಾಜಕೀಯ ಕ್ರಿಯೆ'ಗೆ ನಿದರ್ಶನವಾಗಿದೆ. ಇನ್ನೊಂದು 'ರಾಜಕೀಯಾನುಸಂಧಾನ'ಕ್ಕೆ ಉದಾಹರಣೆಯಾಗಿದೆ. ಹೀಗೆ 'ರಾಜಕೀಯ ಕ್ರಿಯೆ' ಮತ್ತು 'ರಾಜಕೀಯಾನು ಸಂಧಾನ' ಎರಡಕ್ಕೂ ಆಕರವಾಗಿರುವುದು ಭೈರಪ್ಪನವರ 'ಆವರಣ' ಕಾದಂಬರಿ. ಅಜಕ್ಕಳ ಗಿರೀಶ್ ಭಟ್ ಅವರ 'ರಾಜಕೀಯ ಕ್ರಿಯೆ'ಯ ಸ್ವರೂಪದ ಬರಹವಾದ 'ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ' (೨೦೦೭) ಕೃತಿಯು 'ಆವರಣ' ಕಾದಂಬರಿಗೆ ಮೇಲೆ ಬಂದ ವಿಮರ್ಶೆ ಹಾಗೂ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುವ ನೆಪದಲ್ಲಿ ಸಮಕಾಲೀನ ಕನ್ನಡ ಹಾಗೂ ಭಾರತೀಯ ಸಂದರ್ಭದ ಬೌದ್ಧಿಕ ಸಂಕಥನಗಳ ಸ್ವರೂಪವನ್ನು ವಿಮರ್ಶಿಸುವ ಉದ್ದೇಶದಿಂದ ರಚಿತವಾಗಿದೆ. ಆದರೆ ತರೀಕೆರೆ ಅವರ ಬರಹ ಪ್ರಧಾನವಾಗಿ 'ಆವರಣ' ಕಾದಂಬರಿಯನ್ನು ವಿವಿಧ ಮಗ್ಗುಲುಗಳಿಂದ ವಿಮರ್ಶಿಸುತ್ತ, ಹೇಗೆ ಈ ಕಾದಂಬರಿಯು ಬಲಪಂಥೀಯ ಸಾಂಸ್ಕೃತಿಕ ರಾಜಕಾರಣವನ್ನು ಪ್ರತಿಪಾದಿಸುತ್ತದೆ ಎನ್ನುವುದನ್ನು ನಿರೂಪಿಸುತ್ತದೆ. ಇದೇ ಸಂದರ್ಭದಲ್ಲಿ, 'ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ' (೨೦೦೭)ದ ಕೃತಿಯನ್ನು ಸೂಚ್ಯವಾಗಿ ಪರಿಶೀಲಿಸುತ್ತದೆ. ಗಿರೀಶ್ ಭಟ್ ಅವರಿಗೆ ಆವರಣ ಕಾದಂಬರಿ ಒಂದು ನೆಪಮಾತ್ರ. ಹೀಗಾಗಿ ಅವರು ಕಾದಂಬರಿಯನ್ನು ವಿಮರ್ಶಿಸುವ ಬದಲು, ಈಗಾಗಲೇ ಆ ಕಾದಂಬರಿಯನ್ನು ಹಲವು ಮಗ್ಗುಲುಗಳಿಂದ ವಿಮರ್ಶಿಸುವ ಮೂಲಕ ಹೇಗೆ ಅದೊಂದು 'ಬ್ಯಾಡ್ ಫೇಯ್ತ್' ಕೃತಿಯಾಗಿದೆ ಎಂದು ನಿರೂಪಿಸಿರುವ ವಿಮರ್ಶಕರ ವಿಚಾರಗಳನ್ನು ಖಂಡಿಸುವ ಮತ್ತು ಅವುಗಳಿಗೆ ವಿರುದ್ಧವಾಗಿ ತಮ್ಮ ವಿಚಾರಗಳನ್ನು

ಮಂಡಿಸುವ 'ತರ್ಕಶಾಸ್ತ್ರ'ಯ ಕೆಲಸ ಮಾಡುತ್ತಾರೆ. ಆದರೆ, ತರೀಕೆರೆ ಅವರಿಗೆ ಕಾದಂಬರಿ ಮತ್ತು ಅದು ಪ್ರತಿಪಾದಿಸುವ ವಿಚಾರಗಳ ವಿಶ್ಲೇಷಣೆಯೇ ಪ್ರಧಾನವಾದ ಉದ್ದೇಶ. ಹಾಗೆಯೇ, ಅದು ಹೇಳದೆ ಬಿಟ್ಟಿರುವ ಅನೇಕ ವಿಚಾರಗಳನ್ನು ಕುರಿತು ಪರಿಶೀಲಿಸುವುದು ಕೂಡ ಅಷ್ಟೇ ಮುಖ್ಯವಾದ ಆಸಕ್ತಿಯಾಗಿದೆ. ಹೀಗಾಗಿ, ಕಾದಂಬರಿ ಏನನ್ನು ಹೇಳುತ್ತಿದೆ ಎನ್ನುವುದರೊಂದಿಗೆ ಹೇಗೆ ಹೇಳುತ್ತಿದೆ ಮತ್ತು ಹಾಗೆ ಹೇಳುವುದಕ್ಕೆ ಇರುವ ಮುಖ್ಯವಾದ ಕಾರಣಗಳೇನು ಎನ್ನುವುದು ಅವರ ವಿಶ್ಲೇಷಣೆಯ ಒಂದು ಪ್ರಮುಖವಾದ ನೆಲೆ. ಹಾಗೆಯೇ ಅದು ಏನೆಲ್ಲಾ ಸಂಗತಿಗಳನ್ನು ಹೇಳುತ್ತಿಲ್ಲ ಮತ್ತು ಹಾಗೆ ಹೇಳದೆ ಮುಚ್ಚಿಡುತ್ತಿರುವುದಕ್ಕೆ ಇರುವ ಮಹತ್ವದ ಕಾರಣಗಳೇನು ಎನ್ನುವುದನ್ನು ಕುರಿತು ಚಿಂತನೆ ಅಂಥ ಇನ್ನೊಂದು ಮುಖ್ಯವಾದ ನೆಲೆ. ಅಲ್ಲದೆ ಕೆಲವೊಂದು ವಿಚಾರಗಳನ್ನು ಹೇಳುವಾಗ ಹೊಸದೊಂದು ವಿಶಿಷ್ಟವಾದ ಕ್ರಮವನ್ನು ಅನುಸರಿಸಲಾಗಿದೆಯಲ್ಲಾ ಅದರ ಉದ್ದೇಶವೇನು ಎನ್ನುವುದನ್ನು ಕುರಿತ ವಿವೇಚನೆ ಈ ಚರ್ಚೆಯ ಮತ್ತೊಂದು ಮುಖ್ಯವಾದ ನೆಲೆ. ಹೀಗೆ ತರೀಕೆರೆ ಅವರು 'ಆವರಣ' ಕಾದಂಬರಿಯನ್ನು ಮುಖ್ಯವಾದ ಬಹುನೆಲೆಗಳ ಹಾಗೂ ಬಹುಸ್ತರಗಳ ವಿಧಾನದಲ್ಲಿ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಆ ಮೂಲಕ 'ಆವರಣ'ದ ಹಿಂದಿರುವ ಗುಪ್ತ ಕಾರ್ಯಸೂಚಿಯ ವಿವಿಧ ಮುಖಗಳನ್ನು 'ಅನಾವರಣ'ಗೊಳಿಸುತ್ತಾರೆ.

ಈ ಸಂದರ್ಭದಲ್ಲಿ ಮೊದಲಿಗೆ ರಾಜಕೀಯ ಕ್ರಿಯೋದ್ದೇಶದ ಗಿರೀಶ್ ಭಟ್ ಅವರ ಬರವಣಿಗೆಯ ಸ್ವರೂಪ ಕುರಿತು ಪರಿಶೀಲಿಸುವುದು ಸೂಕ್ತವಾದುದು. ಇದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರತಿಗಾಮಿ ರಾಜಕೀಯಾನುಸಂಧಾನದ ಆಯಾಮಗಳ ಸ್ವರೂಪ ಹೆಚ್ಚು ಸ್ಪಷ್ಟವಾಗುತ್ತದೆ.

೭.೨.೧ ಬಲಪಂಥೀಯ 'ರಾಜಕೀಯ ಕ್ರಿಯೆ'ಯ ಸಮರ್ಥನೆಯ ಮತ್ತು ಪ್ರತಿಪಾದನೆಯ 'ಆಧುನಿಕ ತರ್ಕಶಾಸ್ತ್ರ'

ಮೊದಲಿಗೆ, ಕೃತಿಯ 'ಪೀಠಿಕೆ'ಯಲ್ಲಿ ಗಿರೀಶ್ ಭಟ್ ತಮ್ಮ ಬರವಣಿಗೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ. ಈ ಕುರಿತು ಪ್ರಸ್ತಾಪಿಸುತ್ತಾ ಅವರು, "ಇದು ಕೇವಲ ಭೈರಪ್ಪನವರ ಆವರಣ ಕಾದಂಬರಿ ಬಗ್ಗೆ ಮಾತ್ರ ಚರ್ಚಿಸುವ ಬರವಣಿಗೆಯಲ್ಲ. ಕೆಲವು ನಿರ್ದಿಷ್ಟ ವಿಚಾರಗಳಿಗೆ ಸಂಬಂಧಿಸಿದಂತೆ, ನಮ್ಮ ದೇಶದ ಅಥವಾ ಕನ್ನಡ ವಿದ್ವತ್‌ವಲಯದಲ್ಲಿ ಚಾಲ್ತಿಯಲ್ಲಿರುವ ಸಂಕಥನವನ್ನು ಜಿಜ್ಞಾಸೆಯ ದೃಷ್ಟಿಯಿಂದ ನೋಡುವುದು ಈ ಪುಸ್ತಕದ ಮುಖ್ಯ ಉದ್ದೇಶ. ಹಾಗೆಯೇ ಇದು, ವಿವಿಧ ವಿಚಾರಗಳ ಸುತ್ತ ನಾವು ನಿರ್ಮಿಸುವ ಬೇರೆ ಬೇರೆ 'ಆವರಣ ಗೋಡೆ'ಗಳ ಜಿಜ್ಞಾಸೆಯೂ ಹೌದು. ಭೈರಪ್ಪನವರು ರಚಿಸಿದ 'ಆವರಣ' ಅದಕ್ಕೊಂದು ಸಂದರ್ಭ ಒದಗಿಸಿದೆ ಎನ್ನಬಹುದು"[೧] ಎಂದು ಹೇಳುತ್ತಾರೆ. ಆದರೆ, 'ಆವರಣ' ಮತ್ತು 'ಆವರಣ ಗೋಡೆ'ಗಳನ್ನು ಕುರಿತ ಅವರ ಈ ಬರವಣಿಗೆ ಒಂದು ರೀತಿಯಲ್ಲಿ ಬಲಪಂಥೀಯ ಸಾಂಸ್ಕೃತಿಕ ರಾಜಕಾರಣದ 'ಆಧುನಿಕ ತರ್ಕಶಾಸ್ತ್ರ'ದ ಮಾದರಿಯೇ ಆಗಿದೆ. ಬಲಪಂಥೀಯ ಸೈದ್ಧಾಂತಿಕತೆ ಮತ್ತು ತಾತ್ವಿಕತೆಯನ್ನು ಅತ್ಯಂತ ಯೋಜಿತ ಕ್ರಮದಲ್ಲಿ ಪರಿಣಾಮಕಾರಿ ಪರಿಭಾಷೆಯ ಮೂಲಕ ಮಂಡಿಸಲಾಗಿದೆ.

ಇದಕ್ಕಾಗಿ ಗಿರೀಶ್ ಭಟ್ ಆಧುನಿಕೋತ್ತರ ಚಿಂತನೆಯ ಪ್ರಮುಖ ಪರಿಕಲ್ಪನೆಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಾರೆ.

ಈ ಕೃತಿಯ ಆಧುನಿಕ ತರ್ಕಶಾಸ್ತ್ರದ ಸ್ವರೂಪ ವ್ಯಕ್ತವಾಗುವುದು ಅದರ 'ಮಧ್ಯಮ ಮಾರ್ಗದ ವಿಧಾನ'ದ ಮೂಲಕ ಬಲಪಂಥೀಯ ಸೈದ್ಧಾಂತಿಕತೆ ಮತ್ತು ತಾತ್ವಿಕತೆಯನ್ನು ಮಂಡಿಸುವ ಕ್ರಮದಲ್ಲಿ. ಆ ಮೂಲಕ ಎಡಪಂಥೀಯವೂ ಸೇರಿದಂತೆ ಉಳಿದೆಲ್ಲ ಪ್ರಗತಿಪರ ಚಿಂತನೆಗಳು ಹಾಗೂ ವಿಚಾರಧಾರೆಗಳ ವಿಶಿಷ್ಟತೆಯನ್ನು ನಿರಾಕರಿಸುವುದಕ್ಕಾಗಿ ಅನುಸರಿಸುವ ತಂತ್ರದಲ್ಲಿ. ಇದರ ಒಟ್ಟು ಸ್ವರೂಪವನ್ನು ಹೀಗೆ ಗುರುತಿಸಬಹುದು. ಮೊದಲನೆಯದಾಗಿ, 'ಆವರಣ' ಕಾದಂಬರಿ ಕುರಿತು ಬಂದಿರುವ ವಿರೋಧಗಳಿಗೆ ಇದನ್ನು 'ಐತಿಹಾಸಿಕ' ಕಾದಂಬರಿ ಎಂದು ತಪ್ಪಾಗಿ ಗ್ರಹಿಸಿರುವುದು ಕಾರಣವಾಗಿದೆ. ಏಕೆಂದರೆ ಅದು ಹಾಗೆ ಐತಿಹಾಸಿಕ ಕಾದಂಬರಿ ಅಲ್ಲ. ಅದರ ಕೇಂದ್ರ ಪ್ರಜ್ಞೆ ವರ್ತಮಾನದ ಬದುಕಿನಲ್ಲಿರುವ ವಿಕಲ್ಪ ಹಾಗೂ ವೈಚಾರಿಕ ವಿಕೃತಿಗಳನ್ನು ತೊಡೆದು ಹಾಕುವುದು. ಆ ಮೂಲಕ 'ದೋಷರಹಿತ' ಭವಿಷ್ಯದ ನಿರ್ಮಾಣ ಮಾಡುವುದು. ಹೀಗಾಗಿ ಇದು ಚರಿತ್ರೆಯನ್ನು ವಿಮರ್ಶಿಸುವ ಅಥವಾ ಅನುಸಂಧಾನ ಮಾಡುವ ಒಂದು ವಿಶಿಷ್ಟವಾದ ಕಲಾಕೃತಿ. ಎರಡನೆಯದಾಗಿ, ಭೈರಪ್ಪನವರ ಸಾಹಿತ್ಯದ ಏಕೈಕ ಮತ್ತು ಆತ್ಯಂತಿಕವಾದ ತಾತ್ವಿಕತೆ ಎಂದರೆ ಸತ್ಯಶೋಧನೆ ಹಾಗೂ ಸತ್ಯದ ಪ್ರತಿಪಾದನೆ. ಹಾಗೆ ನೋಡಿದರೆ ಉಪನಿಷತ್ತಿನ 'ಸತ್ಯಂ, ಶಿವಂ ಮತ್ತು ಸುಂದರಂ' ತತ್ವದ ಪರಿಕಲ್ಪನೆಗಳಲ್ಲಿ 'ಸತ್ಯ'ವೇ ಮೊದಲು ಹಾಗೂ ಅದೇ ಕೊನೆ. 'ಶಿವಂ' ಮತ್ತು 'ಸುಂದರಂ' ಕೂಡಾ 'ಸತ್ಯಾಧೀನ' ಮತ್ತು 'ಸತ್ಯಪೂರಕ' ಪರಿಕಲ್ಪನೆಗಳು. ಈ ತಾತ್ವಿಕ ಗ್ರಹಿಕೆಯ ಕೊರತೆಯೇ, ಭೈರಪ್ಪನವರ ಸಾಹಿತ್ಯಕ್ಕೆ ಮೊದಲಿನಿಂದಲೂ ವ್ಯಕ್ತವಾಗುತ್ತಿರುವ ಎಲ್ಲ ರೀತಿಯ ವಿರೋಧಗಳಿಗೆ ಇರುವ ಮುಖ್ಯವಾದ ಕಾರಣ. ಮೂರನೆಯದಾಗಿ, ಭೈರಪ್ಪನವರು ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯ ಅದರಲ್ಲೂ, ಸ್ವತಂತ್ರ ಬೌದ್ಧಿಕ ಸ್ವಾತಂತ್ರ್ಯದ ಮಹಾನ್ ಪ್ರತಿಪಾದಕರು. ಇದಕ್ಕಾಗಿಯೇ ಅವರ ಸತ್ಯಾನ್ವೇಷಕ ಕರ್ಮಕ್ಕೆ ಎದುರಾಗುವ ಯಾವುದೇ ಟೀಕೆ ಅಥವಾ ಆಕ್ಷೇಪಣೆಗಳಿಗೂ ಅವರು ಅಧೀರರಾಗುವುದಿಲ್ಲ. ಇದು ಗಿರೀಶ್ ಭಟ್ ಅವರ ವಾದದ ಒಂದು ಮುಖ್ಯವಾದ ಉದ್ದೇಶ.

ಹಾಗೆಯೇ, ಆಧುನಿಕ ಕರ್ನಾಟಕದ ಮತ್ತು ಭಾರತದ ಸಂದರ್ಭದ ಹಲವು ಸಾಹಿತ್ಯೇತರ ಸಂಗತಿಗಳು, ವಿಚಾರಗಳು ಹಾಗೂ ವಿದ್ಯಮಾನಗಳನ್ನು ಕುರಿತ ವಿಶ್ಲೇಷಣೆ ಮತ್ತು ಅವು ಒಳಗೊಂಡಿವೆ ಎನ್ನಲಾದ 'ಪೊಳ್ಳುತನ'ವನ್ನು ಹೊರಗೆಳೆಯುವುದು ಅವರ ವಾದದ ಇನ್ನೊಂದು ಮುಖ್ಯವಾದ ಉದ್ದೇಶ. ಹಾಗೆ ನೋಡಿದರೆ, ಮೊದಲಿನ ಉದ್ದೇಶವಾದ ಭೈರಪ್ಪನವರ ಸಾಹಿತ್ಯ ಮತ್ತು ಅದರ ತಾತ್ವಿಕತೆಯ ಸಮರ್ಥನೆಗೂ ಹಾಗೂ ಎರಡನೆಯ ಉದ್ದೇಶಕ್ಕೂ ಪರಸ್ಪರ ನೇರವಾದ ಸಂಬಂಧವಿದೆ. ಹಾಗೆಯೇ ಈ ಎರಡೂ ಉದ್ದೇಶಗಳು ಮೂರನೆಯದಾದ, ಮತ್ತೊಂದು ಅತ್ಯಂತ ಮಹತ್ವಪೂರ್ಣ ಉದ್ದೇಶಕ್ಕಾಗಿ

ಯೋಜಿತವಾಗಿವೆ ಹಾಗೂ ನಿಯೋಜಿತವಾಗಿವೆ. ಅದೇ, 'ವೈದಿಕ ಧರ್ಮ' ಅಥವಾ 'ಹಿಂದೂಧರ್ಮ'ದ ಪ್ರತಿಪಾದನೆಯ ಮತ್ತು ಸಮರ್ಥನೆಯ ಗುಪ್ತ ಉದ್ದೇಶ.

ಎರಡನೆಯ ಉದ್ದೇಶವಾದ ಆಧುನಿಕ ವಿಚಾರಗಳು, ವಿದ್ಯಮಾನಗಳು ಮತ್ತು ವೈಚಾರಿಕ ಆಕೃತಿಗಳನ್ನು ಕುರಿತ ಖಂಡನೆ ಹಾಗೂ ಹಿಂದೂಧರ್ಮದ ಪ್ರಾಮುಖ್ಯತೆಯ ಮಂಡನೆಯನ್ನು ನಿರ್ವಹಿಸಿರುವ ಕ್ರಮವನ್ನು ಹೀಗೆ ಗುರುತಿಸಬಹುದು. ಮೊದಲನೆಯದಾಗಿ, ಸ್ವಾತಂತ್ರ್ಯೋತ್ತರ ಆಧುನಿಕ ಕಾಲಘಟ್ಟದಲ್ಲಿ ಹಿಂದೂ ಧರ್ಮ 'ಪ್ರಾಂಜಲ ತಪ್ಪೊಪ್ಪಿಗೆ ಹಾಗೂ ತಿದ್ದಿಕೊಳ್ಳುವಿಕೆ'ಯ ಮೂಲಕ ತನ್ನನ್ನು ಸುಧಾರಣೆ ಮಾಡಿಕೊಂಡಿದೆ. ಆದರೆ ಇಸ್ಲಾಂ ಧರ್ಮ ಹಾಗೆ ಮಾಡಿಲ್ಲ. ಅದಕ್ಕೆ ಕಾರಣ ಮುಸ್ಲಿಂ ಧರ್ಮಾನುಯಾಯಿಗಳೇ ಹೊರತು ಅನ್ಯರಲ್ಲ. ಏಕೆಂದರೆ ಮುಸ್ಲಿಂ ಧರ್ಮ ಸುಧಾರಣೆಗೆ ಮತ್ತು ಆಧುನಿಕತೆಗೆ ವಿರೋಧಿ. ಎರಡನೆಯದಾಗಿ, ಭಾರತದ ಇಂದಿನ ಬಹುತೇಕ ಗಂಭೀರವಾದ ಸಮಸ್ಯೆಗಳಿಗೆ 'ಎಡ'ಬಿಡಂಗಿಗಳಾದ ಬುದ್ಧಿಜೀವಿಗಳೇ ಕಾರಣ. ಇವರು ಭಾರತೀಯವಲ್ಲದ ಮತ್ತು ಭಾರತೀಯ ಚರಿತ್ರೆಯ ಹಾಗೂ ಸಂಸ್ಕೃತಿಯ ಸನ್ನಿವೇಶಕ್ಕೆ ಅನುರೂಪವಲ್ಲದ ಪಾಶ್ಚಾತ್ಯ ಪರಿಕಲ್ಪನೆಗಳನ್ನು ಪ್ರತಿಪಾದಿಸುತ್ತಿರುವುದೇ ದೇಶದ ಇಂದಿನ ಇಂಥ ದುರಂತಗಳಿಗೆ ಮುಖ್ಯವಾದ ಕಾರಣ. ಕೋಮುವಾದದ ಹುಟ್ಟಿನ ಮೂಲವಿರುವುದೇ ಇಂಥ ಚಿಂತನೆಗಳ ವಿಸಂಗತತೆಯಲ್ಲಿ. ಮೂರನೆಯದಾಗಿ, 'ಅಲ್ಪಸಂಖ್ಯಾತ' ಮತ್ತು 'ಬಹುಸಂಖ್ಯಾತ' ಪರಿಕಲ್ಪನೆಗಳ ಈಗಿನ ವ್ಯಾಖ್ಯಾನವೇ ಅಪಕಲ್ಪನೆ ಹಾಗೂ ಅಸತ್ಯಗಳಿಂದ ಸೃಷ್ಟಿಯಾಗಿರುವ ಒಂದು ಮಿಥ್ಯಾಸ್ಥಿತಿ. ಹೀಗಾಗಿ ಆಧುನಿಕ ಸಾಮಾಜಿಕ ಸುಧಾರಣಾ ಉಪಕ್ರಮಗಳಾದ ದಲಿತರ ಮತ್ತು ಹಿಂದುಳಿದವರ ಮೀಸಲಾತಿ, 'ಭಾಷಿಕ' ಮತ್ತು 'ಧಾರ್ಮಿಕ' ಅಲ್ಪಸಂಖ್ಯಾತರು ಎಂದು ಗುರುತಿಸುವುದಕ್ಕೆ ಹಾಗೂ ವಿವರಿಸುವುದಕ್ಕೆ ಸಂಬಂಧಪಟ್ಟಂತೆ ರೂಪಿಸಿಕೊಂಡಿರುವ 'ಅಲ್ಪಸಂಖ್ಯಾತ' ಎನ್ನುವ ಪರಿಕಲ್ಪನೆಗೆ ಈಗ ಕೊಟ್ಟಿರುವ ವ್ಯಾಖ್ಯಾನ ಹಾಗೂ ಹಿಂದುಳಿದ ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಸಂಬಂಧಪಟ್ಟ 'ಸಾಚಾರ್ ಸಮಿತಿ'ಯ ವರದಿ ಇವೆಲ್ಲವೂ ಆಮೂಲಾಗ್ರವಾದ ವಿಮರ್ಶೆಗೆ ಒಳಗಾಗಬೇಕು. ಆ ಮೂಲಕ ಹೊಸದಾಗಿ ಪರಿಷ್ಕಾರಗೊಳ್ಳಬೇಕು ಎನ್ನುವುದು ಗಿರೀಶ್ ಭಟ್ ಅವರ ಪ್ರಮುಖ ಪ್ರತಿಪಾದನೆ.

ಇದರಲ್ಲಿ ಆಶ್ಚರ್ಯಕರವೆಂದು ಕಂಡುಬರುವ ಆದರೆ, ಸರಿಯಾಗಿ ನೋಡಿದರೆ ಲೇಖಕರ ಗುಪ್ತ ರಾಜಕಾರಣದ ಭಾಗವಾಗಿ ಬಂದಿರುವ ಒಂದು ಮುಖ್ಯವಾದ ಕಾರ್ಯತಂತ್ರವಿದೆ. ಅದೇನೆಂದರೆ, ಭೈರಪ್ಪನವರ ಸಾಹಿತ್ಯ ಕುರಿತ ಅನೇಕ ತೀವ್ರವಾದ ಮತ್ತು ವಾಸ್ತವಿಕವಾದ ವಿರೋಧವನ್ನು ಮೇಲ್ನೋಟಕ್ಕೆ ಒಪ್ಪಿಕೊಳ್ಳುವಂತೆ ತೋರಿಸುವುದು; ಆದರೆ, ಪರೋಕ್ಷವಾದ ಬಳಸು ತಂತ್ರದಲ್ಲಿ ಅದನ್ನು ಸಂಪೂರ್ಣವಾಗಿ ನಿರಾಕರಿಸುವುದು. ಇದಕ್ಕಾಗಿ ದೊಡ್ಡ ತಾತ್ವಿಕ ಹಾಗೂ ತಾರ್ಕಿಕ ಬಲೆಯನ್ನು ಹೆಣೆಯುವುದು. ದೇಸಿ ಮತ್ತು ವಿದೇಶಿ ವಿದ್ವಾಂಸರ ಹೇಳಿಕೆಗಳು ಮತ್ತು ಚಿಂತನೆಗಳನ್ನು ವಾದ-ಪ್ರತಿವಾದದ ಪಾಯಿಂಟ್‌ಗಳಾಗಿ ಮಂಡಿಸುವುದು. ಈ ಕಾರ್ಯತಂತ್ರವನ್ನು ಭೈರಪ್ಪನವರ ಕೃತಿಗಳ ಜನಪ್ರಿಯತೆ, ಮಾರಾಟ, ಸರಳ ಗ್ರಹಿಕೆ,

ಅತಿರಂಜಕತೆ ಮತ್ತು ಇತಿಹಾಸ ಕುರಿತ ಆಯ್ಕೆ ಹಾಗೂ ನಿರಾಕರಣ ದೃಷ್ಟಿಕೋನ ಮೊದಲಾದ ಎಲ್ಲ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕೂಡಾ ವ್ಯವಸ್ಥಿತವಾಗಿ ಯೋಜಿಸಲಾಗಿದೆ.

ಇದಕ್ಕೆ ಒಂದು ಸೂಕ್ತ ನಿದರ್ಶನವನ್ನು ಕೊಟ್ಟು ವಿವರಿಸಬಹುದು. ಗಿರೀಶ್ ಭಟ್ ಅವರು, ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ಇತಿಹಾಸದ ಪಾರ್ಶ್ವಿಕ ಚಿತ್ರಣ ನೀಡುತ್ತಾರೆ ಎನ್ನುವ ಆಕ್ಷೇಪಣೆ ಕುರಿತು ವಿಶ್ಲೇಷಿಸುತ್ತಾ, "ಭೈರಪ್ಪನವರು ಚಿತ್ರಿಸಿದ ಇತಿಹಾಸವು ಒಂದು ಮಗ್ಗುಲನ್ನು ಮಾತ್ರ ತೋರಿಸುತ್ತದೆ ಎಂಬ ಅನೇಕ ವಿಮರ್ಶಕರ ಅಭಿಪ್ರಾಯವನ್ನು ಒಪ್ಪಿಕೊಂಡೇ ನಾನು ಈ ಬರವಣಿಗೆಗೆ ತೊಡಗಿದ್ದೇನೆ. ಹಾಗೆಯೇ ಸಂಘಪರಿವಾರವು ಹೇಳುವ ಇತಿಹಾಸವನ್ನೇ ಭೈರಪ್ಪನವರು ಹೇಳುತ್ತಾರೆಂಬ ವಾದವನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ. ಅದರಲ್ಲಿರುವ ಇತಿಹಾಸದ ಚಿತ್ರಣ 'ಮುಸ್ಲಿಂ' ಸಮುದಾಯವನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸುತ್ತದೆಂಬ ಬಹುತೇಕ ಬುದ್ಧಿಜೀವಿಗಳ ಆರೋಪವನ್ನು ಒಪ್ಪಿಕೊಳ್ಳಬೇಕು. ಅದೇ ಹೊತ್ತಿಗೆ ಈ ಕೃತಿ ಹೀಗೆಯೇ ರೂಪುಗೊಳ್ಳಲು ಇದ್ದ ಪ್ರೇರಣೆಗಳೇನು? ಸಾವಿರಾರು ಓದುಗರು ಅದನ್ನು ಓದಿ ಮೆಚ್ಚಿಕೊಳ್ಳಲು ಕಾರಣವೇನು? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಸೆಕ್ಸ್ ಪುಸ್ತಕಗಳೂ ಹೆಚ್ಚು ಸಂಖ್ಯೆಯಲ್ಲಿ ಮಾರಾಟವಾಗಿವೆ ಎಂದೆಲ್ಲಾ ವಾದಿಸುವುದಾಗಲೀ, ಸಂಘಪರಿವಾರದವರೇ ಓದಿದ್ದು ಎಂದು ಅಂದುಕೊಳ್ಳುವುದಾಗಲೀ ತುಂಬ ಸರಳ ನಿಲುವುಗಳಾಗುತ್ತವೆ; ಸರಿಯಾದ ಕಾರಣ ಕಂಡುಕೊಳ್ಳಲಾರದವರ ಅಥವಾ ಕಂಡುಕೊಂಡರೂ ಒಪ್ಪಿಕೊಳ್ಳಲಾಗದವರ ಉಡಾಫೆಯಾಗುತ್ತದೆ. ಇಂತಹ ಸರಳ ತೀರ್ಮಾನಗಳಿಗೆ ಬರುವವರೇ ಭಾರತದಂತಹ ಸಂಕೀರ್ಣ ಸಂಸ್ಕೃತಿಯುಳ್ಳ ದೇಶದಲ್ಲಿರುವ ಕೋಮುವಾದವೆಂಬ ವಿದ್ಯಮಾನವನ್ನು ತೀರಾ ಸರಳಗೊಳಿಸಿ, ಕೋಮುವಾದ ಎಂದರೆ ಹಿಂದುತ್ವವಾದ ಎಂದರೆ ಮನುವಾದ ಎಂದರೆ ಬ್ರಾಹ್ಮಣವಾದ ಎಂದರೆ ಬಂಡವಾಳಶಾಹಿವಾದ ಎಂಬ ವ್ಯಾಖ್ಯಾನಗಳನ್ನು ಮಾಡುವವರು. ಕೋಮುವಾದದ ಬಗ್ಗೆ ಹೀಗೆ ವ್ಯಾಖ್ಯಾನಿಸುವವರ ವಿಶ್ಲೇಷಣೆ ಬಹಳ ಬಾರಿ ಅಯೋಧ್ಯೆಯ ಕುರಿತ ಚಳುವಳಿಯೊಂದಿಗೆ ಆರಂಭವಾಗುತ್ತದೆ. ಹೆಚ್ಚೆಂದರೆ ಆರ್.ಎಸ್.ಎಸ್. ಹುಟ್ಟಿನೊಂದಿಗೆ ಆರಂಭವಾಗುತ್ತದೆ. ಇನ್ನೂ ಹಿಂದೆ ಹೋದರೆ, ತಿಲಕರ ರಾಷ್ಟ್ರೀಯವಾದ ಹಿಂದೂ ರಾಷ್ಟ್ರೀಯವಾದ ಎನ್ನುವುದನ್ನು ನೆನಪು ಮಾಡಿಕೊಳ್ಳುತ್ತದೆ. ತಿಲಕರು ೧೮೯೩ರಲ್ಲಿ ಸಾರ್ವಜನಿಕ ಗಣೇಶೋತ್ಸವ ಆಚರಿಸಿದ್ದನ್ನು ನೆನಪು ಮಾಡಿಕೊಳ್ಳುತ್ತದೆ. ಭಾರತದ ಚರಿತ್ರೆಯಲ್ಲಿ ಸರ್ ಸಯ್ಯದ್ ಅಹಮದ್‌ಖಾನ್‌ರವರು ೧೮೯೫ರ ನಂತರ ಧಾರ್ಮಿಕ ನೆಲೆಯಲ್ಲಿ ಮುಂದಿಟ್ಟ ಪ್ರತ್ಯೇಕತಾವಾದಗಳಂಥ ವಿದ್ಯಮಾನಗಳು ನೆನಪೇ ಆಗುವುದಿಲ್ಲ"[೨] ಎಂದು ಇವತ್ತಿನ ಹಿಂದು ಕೋಮುವಾದಕ್ಕೆ ಮೂಲ ಸರ್ ಸಯ್ಯದ್ ಅಹಮದ್‌ಖಾನ್ ಅವರ ಪ್ರತ್ಯೇಕತಾವಾದಿ ಹೆಜ್ಜೆ ಎಂದು ಗಿರೀಶ್ ಭಟ್ ವಿಶ್ಲೇಷಿಸುತ್ತಾರೆ.

ಚರಿತ್ರೆಯನ್ನು ಭೈರಪ್ಪ ಅವರು ತಮ್ಮ ಮೂಗಿನ ನೇರಕ್ಕೆ ಅನುಗುಣವಾಗಿ ನೋಡುತ್ತಾರೆ ಮತ್ತು ಪಾರ್ಶ್ವಿಕ ನೆಲೆಯಲ್ಲಿ ಬಳಸಿಕೊಳ್ಳುತ್ತಾರೆ ಎನ್ನುವ ಆರೋಪಕ್ಕೆ ಉತ್ತರ ಕೊಡಲು ಹೊರಟ ಗಿರೀಶ್ ಭಟ್

ಕೂಡಾ ಇಲ್ಲಿ ಅದೇ ಕೆಲಸವನ್ನೇ ಮಾಡುತ್ತಾರೆ! ಒಂದು ನಿರ್ದಿಷ್ಟ ಘಟನೆ ಅಥವಾ ಚಿಂತನೆಯನ್ನು ಚಾರಿತ್ರಿಕ 'ಆವರಣ'ದಿಂದ ಬೇರ್ಪಡಿಸಿ ಪ್ರತ್ಯೇಕಗೊಳಿಸಿ ಉಲ್ಲೇಖಿಸುವುದು ವಕೀಲಗಾರಿಕೆಯ ಲಕ್ಷಣವಲ್ಲದೆ ಬೇರೇನೂ ಅಲ್ಲ. ಇಂಥ ಕಡೆಗಳಲ್ಲಿ ಚರಿತ್ರೆ ರಚನಾಶಾಸ್ತ್ರ (Historiography) ಅಥವಾ ಚರಿತ್ರೆಯ ಅಧ್ಯಯನದ ಮೂಲಭೂತ ತತ್ವದ ಅನುಪಾಲನೆ ಮಾಡಲು ಸಾಧ್ಯವೇ ಇರುವುದಿಲ್ಲ. ಗಿರೀಶ್‌ಭಟ್ ಅವರಿಗೆ ಇದೇನೂ ಗೊತ್ತಿಲ್ಲವೆಂದಲ್ಲ. ಆದರೆ, ಉದ್ದೇಶಪೂರ್ವಕವಾಗಿಯೇ ಇತಿಹಾಸದ ತುಣುಕು ಸತ್ಯಗಳನ್ನು ಅಖಂಡ ಸತ್ಯವೆಂದು ವಾದಿಸುವುದು ಸಾಮಾನ್ಯವಾಗಿ ಬಲಪಂಥೀಯ ಸೈದ್ಧಾಂತಿಕ ಹಾಗೂ ತಾತ್ವಿಕತೆಯ ಮುಖ್ಯ ಲಕ್ಷಣ. ಗಿರೀಶ್ ಭಟ್ ಕೂಡಾ ಅದನ್ನೇ ಇಲ್ಲಿ ಮಾಡುತ್ತಾರಷ್ಟೆ.

ಭಾರತದಲ್ಲಿ ಕೋಮುವಾದದ ಹುಟ್ಟು ಮತ್ತು ಬೆಳವಣಿಗೆಯನ್ನು ಗುರುತಿಸುವಾಗ ವಸ್ತುನಿಷ್ಠ ದೃಷ್ಟಿಕೋನದ ಇತಿಹಾಸಕಾರರು ಸರ್ ಸಯ್ಯದ್ ಅಹಮದ್‌ಖಾನ್ ನಡವಳಿಕೆಗೆ ಕಾರಣವನ್ನು ಸಹ ಗುರುತಿಸುತ್ತಾರೆ. ಹೀಗಾಗಿ ಅವರು ಕೋಮುವಾದದ ಉಗಮವನ್ನು ಬ್ರಿಟಿಷರ 'ಒಡೆದು–ಆಳುವ' ನೀತಿಯಲ್ಲಿ ಕಾಣುತ್ತಾರೆ. ೧೮೫೭ರ ಸಿಪಾಯಿದಂಗೆಯಲ್ಲಿ ಹಿಂದೂ–ಮುಸ್ಲಿಮರ ಮಧ್ಯೆ ಏರ್ಪಟ್ಟ ಐಕ್ಯತೆ ಮತ್ತು ಅನ್ಯೋನ್ಯತೆಗಳು ಬ್ರಿಟಿಷರನ್ನು ದಂಗುಬಡಿಸಿತಷ್ಟೆ. ಹಿಂದೂ ಚಳುವಳಿಕಾರರೂ ಸಹ ಒಮ್ಮತದಿಂದ ಭಾರತದ ದೊರೆಯಾಗಿ ಬಹದ್ದೂರ್‌ಷಾನನ್ನು ಆಯ್ಕೆ ಮಾಡಿದ್ದು ಬ್ರಿಟಿಷರಲ್ಲಿ ಭಾರತೀಯರ ಬಗೆಗಿನ ದೃಷ್ಟಿಕೋನವನ್ನೇ ಬದಲಾಯಿಸಿತು. ಇದೇ ಸಂದರ್ಭದಲ್ಲಿ, ಭಾರತೀಯ ಹಿಂದೂ ಸಮಾಜ ಸುಧಾರಣಾ ಚಳವಳಿಗಳ ಮಾದರಿಯಲ್ಲೇ ಹಾಗೆ ಮುಸ್ಲಿಂ ಸಮಾಜ ಸುಧಾರಣಾ ಚಳುವಳಿಯನ್ನು ಮುಖ್ಯವಾಗಿ, ಶೈಕ್ಷಣಿಕ ಸುಧಾರಣಾ ಪ್ರಯತ್ನದ ಮೂಲಕ ಅಹಮದ್ ಖಾನ್ ಆರಂಭಿಸಿದ್ದರು. ಇದಕ್ಕೆ ರಾಜಾರಾಂ ಮೋಹನ್ ರಾಯ್ ಅವರು ಕೈಗೊಂಡ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸುಧಾರಣಾ ಚಟುವಟಿಕೆಗಳು ಸಹ ಮುಖ್ಯವಾದ ಪ್ರೇರಣೆಗಳಾಗಿದ್ದವು. ಅವರು ಬ್ರಿಟಿಷರೊಡನೆ ವ್ಯವಹರಿಸಿದ ಕ್ರಮಗಳೂ ಕೂಡಾ ಅಹಮದ್ ಖಾನ್ ಅವರಿಗೆ ಚೆನ್ನಾಗಿ ತಿಳಿದಿದ್ದವು. ಇಂಥ ಪ್ರಯತ್ನದಲ್ಲೇ ತೊಡಗಿದ್ದ ಅಹಮದ್ ಖಾನ್ ಅವರನ್ನು ಬ್ರಿಟಿಷ್ ವಸಾಹತುಶಾಹಿ ತಮ್ಮ 'ಒಡೆದು–ಆಳುವ ನೀತಿ'ಗೆ ಸಮರ್ಥವಾಗಿ ಬಳಸಿಕೊಂಡರು. 'ಸರ್' ಪದವಿಯನ್ನು ಬ್ರಿಟಿಷರು ಅಹಮದ್‌ಖಾನರಿಗೆ ಸುಖಾಸುಮ್ಮನೆ ಕೊಡಲಿಲ್ಲ. ಅದರ ಹಿಂದೆ ವಸಾಹತುಶಾಹಿ ಕುಟಿಲ ರಾಜನೀತಿ ಸಾಧಿಸಿದ ಬಹುದೊಡ್ಡ ಯಶಸ್ಸು ಅಡಗಿದೆ. ಆದರೆ ಈ ವಿಚಾರವನ್ನು ಗಿರೀಶ್ ಭಟ್ ಬೇಕೇಂದೇ ಮರೆತು ಚಾರಿತ್ರಿಕ ವಿದ್ಯಮಾನದ ವಿಶ್ಲೇಷಣೆಯ ಬದಲು ಚರಿತ್ರೆಯ ಘಟನೆಯ ಪಾರ್ಶ್ವಿಕ ಉಲ್ಲೇಖ ಮಾತ್ರ ಕೊಡುತ್ತಾರೆ.

ಇಂಥ ಅನೇಕ ಉಲ್ಲೇಖಗಳು, ವಿಶ್ಲೇಷಣೆಗಳು ಮತ್ತು ಚರ್ಚೆಗಳು ಈ ಕೃತಿಯ ಭಿತ್ತಿಯಾಗಿವೆ. ಆದರೆ ಇವು ವಿಸಂಗತಿ, ವಿತರ್ಕ ಮತ್ತು ಕುತರ್ಕಗಳೆಂದು ಸುಲಭಗೋಚರವಾಗದ ಕ್ರಮದಲ್ಲಿ ಕಟ್ಟಲ್ಪಟ್ಟಿವೆ. ಸ್ವಾತಂತ್ರೋತ್ತರ ಕಾಲಘಟ್ಟದ ಬಹುಮುಖ್ಯ ವೈಚಾರಿಕ ಆಕೃತಿಗಳು, ವಿದ್ಯಮಾನಗಳು ಮಾತ್ರವಲ್ಲದೆ

'ಬುದ್ಧಿಜೀವಿ' ವರ್ಗವೇ ಇಲ್ಲಿ ನಿರಾಕರಣೆಗೆ, ಖಂಡನೆಗೆ ಒಳಗಾಗಿದೆ. ಈ ದೃಷ್ಟಿಯಿಂದ ಅಜಕ್ಕಳ ಗಿರೀಶ್ ಭಟ್ ಅವರ 'ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ' ಕೃತಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದ ಬಲಪಂಥೀಯ ಸಾಂಸ್ಕೃತಿಕ ರಾಜಕಾರಣದ 'ರಾಜಕೀಯ ಕ್ರಿಯೆ'ಯ ಒಂದು ಪ್ರಾತಿನಿಧಿಕ ಕೃತಿಯಾಗಿದೆ.

ಈಗ ಈ ಪ್ರತಿಪಾದನೆಯನ್ನು, ಭೈರಪ್ಪನವರ ಇದೇ ಕಾದಂಬರಿ ಕುರಿತ ತರೀಕೆರೆ ಅವರ ವಿಮರ್ಶಾ ಬರಹವನ್ನು ವಿಶ್ಲೇಷಿಸುವ ಮೂಲಕ ಒಂದು ಪ್ರಮೇಯವಾಗಿ ಮಂಡಿಸುವ ಪ್ರಯತ್ನ ಮಾಡಲಾಗಿದೆ. ಈಗಾಗಲೇ ಹೇಳಿರುವಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಲಪಂಥೀಯ ಪ್ರತಿಗಾಮಿ ರಾಜಕೀಯಾನುಸಂಧಾನದ ಮುಖಾಮುಖಿಗೆ ತರೀಕೆರೆ ಅವರ ಈ ಬರಹ ಒಂದು ಮುಖ್ಯವಾದ ನಿದರ್ಶನ. ಪ್ರತಿಗಾಮಿ ಬಲಪಂಥೀಯ ಸಾಂಸ್ಕೃತಿಕ ರಾಜಕಾರಣದ 'ರಾಜಕೀಯ ಕ್ರಿಯೆ'ಯ ಬಹುರೂಪಿ ಮತ್ತು ಸಂಕೀರ್ಣ ಸ್ವರೂಪಿ ಹುನ್ನಾರಗಳನ್ನು ಮುಖಾಮುಖಿಯಾಗುವುದು ಈ ರಾಜಕೀಯಾನುಸಂಧಾನದ ಪ್ರಮುಖ ತಾತ್ವಿಕತೆ. ತರೀಕೆರೆ ಅವರು ತಮ್ಮ ಈ ಬರಹದಲ್ಲಿ 'ಆವರಣ' ಕಾದಂಬರಿಯನ್ನು ಹಲವು ನೆಲೆಗಳಿಂದ ವಿಶ್ಲೇಷಿಸುವ ಮೂಲಕ ಇದನ್ನು ಸಮರ್ಥವಾಗಿ ಮಾಡುತ್ತಾರೆ. ಹಾಗೆಯೇ ಗಿರೀಶ್ ಭಟ್ ಅವರ ಕೃತಿಯಲ್ಲಿರುವ ಸೂಕ್ಷ್ಮವಾದ ಸಾಂಸ್ಕೃತಿಕ ರಾಜಕಾರಣವನ್ನು ಕೆಲವೇ ಕೆಲವು ಪರಿಣಾಮಕಾರಿಯಾದ ಪ್ರತಿಕ್ರಿಯೆಗಳಿಂದ ಜಾಹೀರುಗೊಳಿಸುತ್ತಾರೆ.

ಈ ಎರಡೂ ಕ್ರಿಯೆಯಲ್ಲಿ ಅವರು ಬಳಸುವುದು ಪ್ರಧಾನವಾಗಿ ಕನ್ನಡ 'ಸಾಹಿತ್ಯ ಸಂಸ್ಕೃತಿ' ಕಟ್ಟಿರುವ 'ಜೀವಪರ ಮಾನವತಾವಾದ'ದ ಪರಿಕಲ್ಪನೆ ಎನ್ನುವುದು ಬಹುಮುಖ್ಯವಾದ ವಿಚಾರ.

೬.೨.೨ ಕನ್ನಡ ಸಾಹಿತ್ಯದ ಮಾನವತಾವಾದಿ ಪರಂಪರೆಯ ಮೂಲಕ ಬಲಪಂಥೀಯ ಸಾಂಸ್ಕೃತಿಕ ರಾಜಕಾರಣದ ವಿರುದ್ಧದ ಅರ್ಥಪೂರ್ಣ ಮುಖಾಮುಖಿ.

ತರೀಕೆರೆ ಅವರ ಈ ಪುಟ್ಟ ವಿಮರ್ಶಾ ಬರಹದ ಅರ್ಥಪೂರ್ಣತೆ ಇರುವುದು ಕನ್ನಡ ಸಾಹಿತ್ಯ ಪರಂಪರೆಯ ಅಂತಃಚೈತನ್ಯದ ಮೂಲಕ ಬಲಪಂಥೀಯ ಸಾಂಸ್ಕೃತಿಕ ರಾಜಕಾರಣವನ್ನು ಪರಿಣಾಮಕಾರಿಯಾಗಿ ಮುಖಾಮುಖಿಯಾಗುವ ಕ್ರಮದಲ್ಲಿ. ಸಮಕಾಲೀನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಂದರ್ಭದಲ್ಲಿ ತೀವ್ರ ವೇಗ ಪಡೆದುಕೊಳ್ಳುತ್ತಿರುವ ಬಲಪಂಥೀಯ ವಿಚಾರಧಾರೆಯ ಸೃಜನಶೀಲತೆಯ ಬೇರುಗಳನ್ನು ಗುರುತಿಸುವುದರಲ್ಲಿ ಮತ್ತು ಅವುಗಳನ್ನು ಕನ್ನಡ ಮನಸ್ಸು ಹಾಗೂ ಪ್ರಜ್ಞೆ ಜತನದಿಂದ ಕಾಪಿಟ್ಟು ಪೊರೆಯುತ್ತಿರುವ ಮಾನವೀಯ ಮೌಲ್ಯವ್ಯವಸ್ಥೆಯ ಪರಂಪರೆಯ ತಿಳುವಳಿಕೆ ಮೂಲಕ ಕಿತ್ತುಹಾಕುವುದರಲ್ಲಿ. ಹೀಗಾಗಿ ಅವರು ಅಜಕ್ಕಳ ಗಿರೀಶ್ ಭಟ್ ಅವರಂತೆ ದೇಶೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ವಾಂಸರ, ಪ್ರಾಜ್ಞರ, ನ್ಯಾಯಾಧೀಶರ ಅಥವಾ ಚಿಂತಕರ ವಿಚಾರಧಾರೆಯನ್ನಾಗಲೀ ಅಥವಾ ಥಿಯರಿಗಳನ್ನಾಗಲೀ ತಮ್ಮ ಅಭಿಪ್ರಾಯದ ಸಮರ್ಥನೆಗೆ ಪೂರಕವಾದ ಸಾಕ್ಷಿಗಳಾಗಿ ಮಂಡಿಸುವುದಿಲ್ಲ ಅಥವಾ ಖಂಡಿಸುವುದಿಲ್ಲ. ಏಕೆಂದರೆ, ಕನ್ನಡ ಸಾಹಿತ್ಯ ಪರಂಪರೆ ತನ್ನ ಆರಂಭಿಕ ಘಟ್ಟದಿಂದ ಸಮಕಾಲೀನ

ಘಟ್ಟದವರೆಗೆ ರೂಪಿಸಿಕೊಂಡು ಬಂದಿರುವ ಮಾನವೀಯ ವಿವೇಕದದ ವಿಶಿಷ್ಟ ರೂಪವಾದ 'ಸಾಹಿತ್ಯ ಸಂಸ್ಕೃತಿ' ಪ್ರಜ್ಞೆಯ ಮೂಲಕವೇ, ಅವರು ಬಲಪಂಥೀಯ ಸಾಂಸ್ಕೃತಿಕ ರಾಜಕಾರಣದ ಪ್ರತಿಪಾದನೆಯ 'ಕೈಪಿಡಿ'ಯಾದ 'ಆವರಣ'ವನ್ನು ಸಮರ್ಥವಾಗಿ ಅನಾವರಣಗೊಳಿಸುತ್ತಾರೆ.

ತರೀಕೆರೆ ಅವರು ಕೃತಿ ವಿಶ್ಲೇಷಣೆ ಮಾಡುತ್ತಲೇ, ಸಂಸ್ಕೃತಿಯ ವಿಶ್ಲೇಷಣೆ ಸಹ ಮಾಡುವುದು ಬಹುಮುಖ್ಯವಾದ ವಿಚಾರವಾಗಿದೆ. ಕೃತಿಯೊಂದರ ವಿಶ್ಲೇಷಣೆಯಲ್ಲಿ ಸಂಸ್ಕೃತಿ ವಿಶ್ಲೇಷಣೆ ಎರಡು ಕಾರಣಗಳಿಂದ ಮುಖ್ಯವಾಗುತ್ತವೆ. ಕೃತಿಯೊಂದನ್ನು ಕಟ್ಟುವುದಕ್ಕೆ ಮೂಲಾಧಾರವಾಗಿರುವ ಸಂಸ್ಕೃತಿಯ ಒಟ್ಟು ಸ್ವರೂಪವೇನು ಎನ್ನುವುದನ್ನು ತಿಳಿಯುವುದಕ್ಕೆ ಇಂಥ ವಿಶ್ಲೇಷಣೆ ಅಗತ್ಯ. ಹಾಗೆಯೇ ಅಂಥ ಕೃತಿ ಪ್ರತಿಪಾದಿಸುತ್ತಿರುವ ಕೃತಿಸಂಸ್ಕೃತಿಯು, ತನ್ನ ಭಾಷಿಕ ಪರಿಸರದ ಆಧಾರಭೂತವಾಗಿರುವ ಜನ ಸಂಸ್ಕೃತಿಯನ್ನು ಹೇಗೆ ಪ್ರತಿಫಲಿಸಿದೆ ಮತ್ತು ಹೇಗೆ ಭಿನ್ನವಾಗಿ ಪ್ರತಿಪಾದಿಸುತ್ತಿದೆ ಎನ್ನುವ ಕಾರಣದಿಂದ ಕೂಡಾ ಇಂಥ ವಿಶ್ಲೇಷಣೆಯ ಅಗತ್ಯವಿದೆ. ಅದರಲ್ಲೂ ಚಾರಿತ್ರಿಕ ವಸ್ತುವಿಷಯ ಅಥವಾ ವಿವರಗಳನ್ನು ಬಳಸಿಕೊಳ್ಳುವ ಕೃತಿಗಳ ಸಂದರ್ಭದಲ್ಲಿ ಇವುಗಳಿಗೆ ಹೆಚ್ಚು ಮಹತ್ವವಿದ್ದೇ ಇರುತ್ತದೆ.

ಈ ದೃಷ್ಟಿಯಿಂದ ನೋಡುವುದಾದರೆ, ವಿಮರ್ಶಕರು ಭೈರಪ್ಪನವರ ಕಾದಂಬರಿಯನ್ನು ಒಂದು ಕಲಾಕೃತಿ ಎಂದು ಒಪ್ಪುವುದಿಲ್ಲ. ಇದು ಸೂಕ್ತವಾದ ನಿಲುವೂ ಕೂಡಾ. ಏಕೆಂದರೆ, ಇದೊಂದು ಐತಿಹಾಸಿಕವೂ ಅಲ್ಲದ ಸಮಕಾಲೀನ ವಾಸ್ತವವಾದಿ ಪ್ರಕಾರಕ್ಕೂ ಸೇರದ ಅಥವಾ ಕಲ್ಪಿತ ಕಥಾವಸ್ತುವೂ ಅಲ್ಲದ ಸಂಪೂರ್ಣ ಕಲಬೆರಕೆ ರೂಪದ ರಚನೆ. ಇದನ್ನು ಅವರು ಸರಿಯಾಗಿಯೇ "ಆವರಣ"ವನ್ನು ಒಂದು ಕಾದಂಬರಿಯಾಗಿ ನೋಡುವುದರಲ್ಲಿ ಕೆಲವು ಮೂಲಭೂತ ಸಮಸ್ಯೆಗಳಿವೆ. ಕಾರಣ, ಅದು ಬದುಕಿನ ಅನುಭವ ಶೋಧಿಸುವ ವಿಧಾನದಲ್ಲಿ ಹುಟ್ಟಿದ ಕೃತಿಯಲ್ಲ. ಬದಲಿಗೆ ಒಂದು ರಾಜಕೀಯ ಸಿದ್ಧಾಂತಕ್ಕೆ ಪೂರಕವಾಗಿ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಬೇಕಾದ್ದನ್ನು ಹೆಕ್ಕಿ ಕಾದಂಬರಿಯ ವೇಷದಲ್ಲಿ ಕಟ್ಟಿರುವ ರಚನೆ....... ಈ ಕಾದಂಬರಿ ಕೊಡುವ ಜೀವಾನುಭವ ಅಥವಾ ಮೌಲ್ಯಜಗತ್ತು ಮಾತ್ರ ಕುಬ್ಜವಾದುದು. ಸತ್ಯವನ್ನು ಬಹು ಆಯಾಮದಲ್ಲಿ ಮಂಡಿಸುವಂತೆ ತೋರಿಕೆ ಮಾಡುತ್ತ, ಆಳದಲ್ಲಿ ಏಕರೂಪೀ ಸತ್ಯವನ್ನು ಒಪ್ಪಿಸುವ ನಿಲುವಿನಿಂದಾಗಿ ಇದು ಒಂದು ಥೀಸಿಸ್ ಆಗಿದೆ. ಈ ಥೀಸಿಸ್ಸಾದರೂ ಯಾವುದು? ೨೦ನೇ ಶತಮಾನದಲ್ಲಿ ಉಚ್ಚ ಜಾತಿಗಳು, ತಮ್ಮ ಹಿಡಿತವನ್ನು ಮೀರಿಕೊಂಡು ಹೊರಬರುತ್ತಿರುವ ಸಮಾಜದ ಬೇರೆ ಬೇರೆ ವರ್ಗಗಳನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಹಾಗೂ ಭಾರತದ ಊಳಿಗಮಾನ್ಯ ಪದ್ಧತಿಯನ್ನು ರಕ್ಷಿಸಲು ಹುಟ್ಟಿಸಿದ ಮತೀಯ ರಾಜಕಾರಣದ್ದು"[೩] ಎಂದು ವಿಶ್ಲೇಷಿಸುತ್ತಾರೆ.

ಇದೇ 'ಥೀಸಿಸ್'ನ ಪರಿಕಲ್ಪನೆ ಬಳಸಿದರೂ, ಗಿರೀಶ್ ಭಟ್ ಅದನ್ನು ಚಾರಿತ್ರಿಕ ವಿವರ ಮತ್ತು ಸಂಗತಿಗಳ ಅನುಸಂಧಾನದಿಂದ ಸತ್ಯಶೋಧಿಸುವುದಕ್ಕಾಗಿ ಕಟ್ಟುವ ಪ್ರಯತ್ನವೆಂದು ಹೇಳುವುದು ಎಷ್ಟು

ಸುಳ್ಳೆಂದು ಮನವರಿಕೆಯಾಗುತ್ತದೆ. ಹಾಗೆ ನೋಡಿದರೆ ಒಂದು ವಿಚಾರದಲ್ಲಿ ಮಾತ್ರ ಇಬ್ಬರೂ ವಿಮರ್ಶಕರಲ್ಲಿ ಸಹಮತವಿದೆ. ಅದೇನೆಂದರೆ ಈ ಥೀಸಿಸ್ಸಿನ ವ್ಯಾಖ್ಯೆ ಬೇರೆ ಬೇರೆಯಾದರೂ ಭೈರಪ್ಪನವರ ಒಟ್ಟು ಸಾಹಿತ್ಯ ರಚನೆಯ ತಾತ್ವಿಕ ಸ್ವರೂಪ ಈ 'ಥೀಸಿಸ್' ಎನ್ನುವುದು. ಇದನ್ನು ಭೈರಪ್ಪನವರು ತಮ್ಮ ಬೇರೆ ಬೇರೆ ಕಾದಂಬರಿಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಮಂಡಿಸುತ್ತಾರೆ. ಇದರ ಸ್ವರೂಪವನ್ನು ತರೀಕೆರೆ ಅವರು, "ಅವರ ಸಾಹಿತ್ಯ ಓದುತ್ತ ಬಂದವರಿಗೆ 'ಆವರಣ' ಕಾದಂಬರಿಯು ಆಘಾತ ಕೊಡಬಾರದು. ಯಾಕೆಂದರೆ, ಅವರು ಈ ಯತ್ನ ಮಾಡಿರುವುದು ಇದೇ ಮೊದಲಲ್ಲ. ಅವರ ಪ್ರಥಮ ಕಾದಂಬರಿ 'ಧರ್ಮಶ್ರೀ'ಯಲ್ಲೇ ಇದಿದೆ. ನಂತರ 'ತಬ್ಬಲಿಯು ನೀನಾದೆ ಮಗನೆ', 'ದಾಟು', 'ಸಾರ್ಥ'ಗಳಲ್ಲಿ ಇದೇ ರಾಜಕೀಯ ಸಿದ್ಧಾಂತದ ವಿಭಿನ್ನ ಆವೃತ್ತಿಗಳನ್ನು ಅವರು ಪ್ರಕಟಿಸಿದರು. ಸಾವರ್ಕರ್ ತಮ್ಮ ಹಿಂದುತ್ವದ ಚರ್ಚೆಯಲ್ಲಿ ಬೌದ್ಧ ಧರ್ಮದ ಮೇಲೆ ಮಾಡುವ ಕಟು ವಿಮರ್ಶೆಯ ಹಿನ್ನೆಲೆಯೊಳಗೆ, 'ಸಾರ್ಥ' ಕಾದಂಬರಿಯನ್ನು ಗಮನಿಸಬಹುದು. 'ಮುಸ್ಲಿಮರು ಕ್ರೈಸ್ತರು ಕಮ್ಯುನಿಸ್ಟರು ನಮ್ಮ ಶತ್ರುಗಳು ಎಂಬ ಗೋಲ್ವಾಳ್ಕರರ ಹೇಳಿಕೆಯ ಹಿನ್ನೆಲೆಯಲ್ಲಿ 'ಆವರಣ'ವನ್ನು ಗಮನಿಸಬಹುದು"[೪] ಎಂದು ವಿವರಿಸುತ್ತಾರೆ. ಹೀಗಾಗಿ, ತಮ್ಮ ಉದ್ದೇಶ ಮತ್ತು ಅಭಿವ್ಯಕ್ತಿಯ ವಿಚಾರದಲ್ಲಿ 'ಪ್ರಾಮಾಣಿಕ'ರಾದ ಭೈರಪ್ಪ ಅವರ ಸಾಹಿತ್ಯದ ತಾತ್ವಿಕತೆ ಮಾತ್ರ ಅವರು ಹೇಳಿಕೊಳ್ಳುವಂತೆ ಪ್ರಾಮಾಣಿಕವಾದುದ್ದಲ್ಲ. ಅದು ಮಾನವ ಮತ್ತು ಮಾನವತಾವಾದ ಎರಡಕ್ಕೂ ಅತ್ಯಂತ ಅಪಾಯಕಾರಿಯಾದುದು. ಆದ್ದರಿಂದಲೇ, ಅದು ಕನ್ನಡ ಸಾಹಿತ್ಯ ಪರಂಪರೆ ಮತ್ತು ಸಂಸ್ಕೃತಿ ಚರಿತ್ರೆಯು ಸಾಧಿಸಿರುವ ಜೀವಪರ ಸಂಸ್ಕೃತಿಗೆ ಸಂಪೂರ್ಣವಾಗಿ ವಿರುದ್ಧವಾದುದು. ಇದು ಕನ್ನಡ 'ಸಾಹಿತ್ಯ ಸಂಸ್ಕೃತಿ'ಯ 'ವಿವೇಕ'ದಿಂದ ರೂಪುಗೊಂಡಿಲ್ಲ; ಅಲ್ಲದೆ, ಕನ್ನಡ 'ಸಾಹಿತ್ಯ ಸಂಸ್ಕೃತಿ'ಯ ವಿವೇಕವನ್ನು ಬೆಳೆಸುವಂತಹದ್ದೂ ಕೂಡಾ ಆಗಿಲ್ಲ. ಏಕೆಂದರೆ ಯಾವುದೇ ದೇಶ ಕಾಲದ ಚರಿತ್ರೆಯಾಗಲೀ, ಸಂಸ್ಕೃತಿಯಾಗಲೀ ಕಪ್ಪು ಬಿಳುಪಿನ ಎರಡೇ ಬಣ್ಣದಿಂದ ಕೂಡಿರುವುದಿಲ್ಲ. ಚಾರಿತ್ರಿಕ ಕಾಲಘಟ್ಟದಲ್ಲಿ ರಾಜರು ನಡೆದುಕೊಳ್ಳುವ ರೀತಿಗೆ ಅವರ ಧರ್ಮ, ಮತ ಮತ್ತು ಜನಾಂಗದ ಹಿನ್ನೆಲೆ ಹಾಗೂ ಹಿತಾಸಕ್ತಿಗಳಷ್ಟೇ ಕಾರಣವಲ್ಲ. ರಾಜಕೀಯ ಮಹತ್ವಾಕಾಂಕ್ಷೆ, ಒತ್ತಡಗಳು ಮತ್ತು ಪ್ರತಿರೋಧಾತ್ಮಕ ಶಕ್ತಿಗಳೂ ಕೂಡಾ ಅಷ್ಟೇ ಮುಖ್ಯವಾದ ಕಾರಣಗಳಾಗಿರುತ್ತವೆ. ಹಾಗೆಯೇ ಒಂದೇ ಧರ್ಮದ ವಿವಿಧ ಮತಗಳ ನಡುವೆ ನಡೆಯುವ ಸಂಘರ್ಷ ಕೂಡಾ, ಎರಡು ಪ್ರತ್ಯೇಕ ಧರ್ಮಗಳ ನಡುವಿನ ಸಂಘರ್ಷಕ್ಕಿಂತ ತೀವ್ರವೂ, ಘೋರವೂ ಆಗಿರುತ್ತವೆ. ಇವು ಜಾಗತಿಕ ಕ್ರುಸೇಡ್ಸ್, ಜಿಹಾದ್ ಮೊದಲಾದ ಸಂಗತಿಗಳಂತೆ ಕ್ಯಾಥೋಲಿಕ್, ಪ್ರಾಟಸ್ಟೆಂಟ್, ಜಿಂಗ್ವಿಲಿಸ್ಟ್, ಕಾಲ್ವಿನಿಸ್ಟ್, ಸೆವೆಂತ್ ಡೆ ಅಡ್ವೆಂಟಿಸ್ಟ್, ಷಿಯಾ–ಸುನ್ನಿ, ಹೀನಯಾನ–ಮಹಾಯಾನ, ಹೀಗೆಯೇ ಜೈನ–ಹಿಂದೂ, ಜೈನ–ಶೈವ, ಹಿಂದೂ–ಬೌದ್ಧ, ಶೈವ–ವೈಷ್ಣವ ಇಂಥ ಬಹು ದೊಡ್ಡ ಧಾರ್ಮಿಕ ಸಂಘರ್ಷಗಳ ಸಂಕೀರ್ಣ ಪರಂಪರೆಯೇ ನಮ್ಮ ಕಣ್ಣೆದುರು ಇದೆ. ಹಾಗೆಯೇ 'ಅನುಭಾವ, ಅವಧೂತ, ಸೂಫಿ ಪರಂಪರೆಯೂ ಇದೆ. ಚರಿತ್ರೆ ಮತ್ತು ನಾಗರಿಕತೆ ಎಂದರೆ, ಸಂಘರ್ಷ ಮತ್ತು ಸಾಮರಸ್ಯಗಳ ನಡುವೆ

ನಡೆದಿರುವ ನಿರಂತರ ಹೋರಾಟವೇ ಆಗಿದೆ. ತರೀಕೆರೆ ಅವರ ವಿಮರ್ಶೆಯ ಘನತೆ ಇರುವುದು ಇಂಥ ದ್ವಂದ್ವ ರೂಪದ ಸಂಸ್ಕೃತಿ ಸ್ವರೂಪದ ವಿನ್ಯಾಸ ಕುರಿತ ಗ್ರಹಿಕೆಯಲ್ಲಿ. ಇದು ಗಿರೀಶ್ ಭಟ್ ಅವರಲ್ಲಿ ಸಂಪೂರ್ಣ ಕಾಣೆಯಾದ ಜಗತ್ತು. ಹೀಗಾಗಿಯೇ, ಕನ್ನಡ ಸಾಹಿತ್ಯದ ಅಂತಃಚೈತನ್ಯ ಗಿರೀಶ್ ಭಟ್ ಅವರ ವಿಮರ್ಶೆ ಅಥವಾ ವಿಶ್ಲೇಷಣೆಯಲ್ಲಿ ಸ್ಥಾನ ಪಡೆದಿಲ್ಲ.

ತರೀಕೆರೆ ಅವರ ವಿಮರ್ಶೆ ಮುಖ್ಯವಾಗಿ ಎತ್ತುವುದು ಇದೇ ಪ್ರಶ್ನೆಯನ್ನು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಕ್ಷೀಣ ಅಥವಾ ಕೀರಲು ದನಿಯ ರೂಪದಲ್ಲಿರುವ ಈ ಬಲಪಂಥೀಯ ರಾಜಕಾರಣ ಭೈರಪ್ಪನವರಲ್ಲಿ ಮಾತ್ರ ಬಹುದೊಡ್ಡ ಘೋಷದ ರೂಪದಲ್ಲಿದೆ. ಪ್ರಾಯಶಃ ಇದಕ್ಕೆ ಸಾಹಿತ್ಯೇತರ ಉದ್ದೇಶವೇ ಮುಖ್ಯವಾದ ಪ್ರಚೋದನೆ. ಏಕೆಂದರೆ, ಭೈರಪ್ಪನವರು ಕನ್ನಡ ಸಾಹಿತ್ಯದ ಪರಂಪರೆಯಿಂದ ಮತ್ತು ತಮ್ಮ ವಾರಿಗೆಯ ಶ್ರೇಷ್ಠ ಲೇಖಕರಿಂದ ಭಿನ್ನರಾಗಿ ದೂರ ನಿಲ್ಲುವಂತೆ ಮಾಡಿರುವುದು ಈ ಅಸಾಹಿತ್ಯಕ ಪ್ರಚೋದನೆಯೇ. ಇದರಿಂದ ಅವರು 'ಜನಪ್ರಿಯ' ಅಥವಾ ಅತ್ಯಧಿಕ ಮಾರಾಟದ 'ಬೆಸ್ಟ್ ಸೆಲ್ಲರ್' ಲೇಖಕರಾಗಬಹುದೇ ಹೊರತು, ಅರ್ಥಪೂರ್ಣವಾದ ಕನ್ನಡ ಕಲಾಕೃತಿಯನ್ನು ಸೃಷ್ಟಿಸಲಾರರು ಎನ್ನುವುದು ತರೀಕೆರೆ ಅವರ ಖಚಿತವಾದ ಪ್ರತಿಪಾದನೆ. ಇದನ್ನು "ಇಂತಹ ಯುದ್ಧತಂತ್ರಗಳಿಂದ ರಾಜಕೀಯ ಸೈದ್ಧಾಂತಿಕ ಯುದ್ಧಗಳನ್ನು ಗೆಲ್ಲಬಹುದು. ಆದರೆ ಅರ್ಥಪೂರ್ಣ ಕಲಾಕೃತಿಯನ್ನು ನಿರ್ಮಿಸಲು ಅಥವಾ ಆರೋಗ್ಯಕರ ಸಮಾಜವನ್ನು ಕಟ್ಟಲು ಆಗದು. ಕುವೆಂಪು, ಕಾರಂತ, ಬೇಂದ್ರೆ, ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರು ಮುಂತಾದವರು ಕನ್ನಡದ ದೊಡ್ಡ ಲೇಖಕರಾಗಿರುವುದು ತಮ್ಮ ಕೃತಿಗಳ ಸಂಖ್ಯೆಯಿಂದಲ್ಲ, ಜನಪ್ರಿಯತೆಯಿಂದಲೂ ಅಲ್ಲ. ಬದುಕನ್ನು ಕುರಿತ ತಮ್ಮ ಮಾನವೀಯತೆ ಮತ್ತು ದಾರ್ಶನಿಕತೆಯಿಂದ"[೫] ಎನ್ನುವ ಮಹತ್ವದ ದೃಷ್ಟಿಕೋನದ ಮೂಲಕ ವಿವರಿಸುತ್ತಾರೆ.

ಭೈರಪ್ಪನವರ ಬಲಪಂಥೀಯ ರಾಜಕಾರಣವು, ಕಾದಂಬರಿಯ ವಸ್ತುವಿನ ಆಯ್ಕೆಯಿಂದ ಆರಂಭವಾಗಿ ಅದರ ಸಂವಿಧಾನ, ಪಾತ್ರಚಿತ್ರಣ, ಮೌಲ್ಯಪ್ರತಿಪಾದನೆ ಮತ್ತು ಆಶಯ ಮಂಡನೆ ಹೀಗೆ ಪ್ರಮುಖವಾದ ಎಲ್ಲ ನೆಲೆಗಳಲ್ಲೂ ಪ್ರಕಟವಾಗುತ್ತದೆ. ಇದನ್ನು ಚರಿತ್ರೆ ಕುರಿತ ಪೂರ್ವಾಗ್ರಹ ಪೀಡಿತ ಆಂಶಿಕ ಗ್ರಹಿಕೆ ಮತ್ತು ಸಾಂಸ್ಕೃತಿಕ ರಾಷ್ಟ್ರೀಯತೆಯ ಸೈದ್ಧಾಂತಿಕ ಧೋರಣೆಗಳು ರೂಪಿಸಿವೆ. ಇದನ್ನು ಅನೇಕ ಕುಟಿಲೋಪಾಯದ ತಂತ್ರಗಳ ಮೂಲಕ ನಿರ್ವಹಿಸಲಾಗಿದೆ ಎಂದು ಹೇಳುತ್ತಾ ವಿಮರ್ಶಕರು ಅಂಥ ಎರಡು ರೂಪಗಳನ್ನು ವಿವರಿಸುತ್ತಾರೆ. ಇವುಗಳೆರಡೂ ಕೂಡಾ ಮಾನವ ಮತ್ತು ಮಾನವತಾವಾದದ ವಿರೋಧಿಯಾಗಿವೆ. ಇವು ವೈದಿಕ ಪುರಾಣಗಳು ರಾಕ್ಷಸರ ಚಿತ್ರಣದಲ್ಲಿ ಬಳಸಿರುವ 'ರಾಕ್ಷಸೀಕರಣ' ತಂತ್ರಕ್ಕೆ ಸಂವಾದಿಯಾದವು ಎಂದು ಗುರುತಿಸುತ್ತಾರೆ. ಧರ್ಮವನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸುವುದು ಮೂಲತಃ 'ಧಾರ್ಮಿಕ ಪ್ರಜ್ಞೆ'ಯಿಂದ ರೂಪುಗೊಂಡದ್ದೇನಲ್ಲ. ಕೋಮುವಾದಿ ಅಜೆಂಡಾದಿಂದ ಕಟ್ಟಿರುವಂಥಹದ್ದು. ಇದರ ಸ್ವರೂಪವನ್ನು ಕುರಿತು ಚರ್ಚಿಸುತ್ತಾ ವಿಮರ್ಶಕರು ಹೇಳುವ, "ಜನರನ್ನು ಅವರು

ಹುಟ್ಟಿದ ಗುರುತಿನ ಕಾರಣಕ್ಕಾಗಿಯೇ ದ್ವೇಷಿಸುವ ಅಜೆಂಡ ಇಟ್ಟುಕೊಂಡು ಬರೆದ ಯಾರೂ ತಾನೇ ಶ್ರೇಷ್ಠ ಲೇಖಕರಾಗಿದ್ದಾರೆ? ಭಾಗವತ ಪ್ರಜ್ಞೆಯ ಕೃಷ್ಣಭಕ್ತಿಯ ಪು.ತಿ.ನ. ಅವರಲ್ಲಿ ಕೂಡ 'ಹಿಂದೂ' ಧರ್ಮದ ಆಯಾಮವಿದೆ. ಆದರದು ಸಮುದಾಯಗಳ ಅನುಭವ ಹಾಗೂ ಸಂವೇದನೆಗಳ ಭಾಗವಾಗಿದೆ. 'ಆವರಣ'ದಲ್ಲಿರುವಂತೆ ಹಿಂದುತ್ವದ ಭಾಗವಾಗಿಲ್ಲ. ಕೆಟ್ಟ ಮನಸ್ಸಿನಿಂದ ಹುಟ್ಟಿದ ಆವರಣವನ್ನು ಓದುವಾಗ ಧಾರ್ಮಿಕ ಶ್ರದ್ಧೆಯ ಲೇಖಕರಾದ ಪು.ತಿ.ನ ಸಾಹಿತ್ಯ ಎಷ್ಟು ಮುಖ್ಯವೆಂದು ಮನವರಿಕೆಯಾಗುತ್ತದೆ; ಸಮುದಾಯಗಳ ಭಕ್ತಿಯ ಭಾಗವಾಗಿರುವ 'ಹಿಂದು' ಧರ್ಮವನ್ನು ೨೦ನೇ ಶತಮಾನದಲ್ಲಿ ಹುಟ್ಟಿದ ಒಂದು ರಾಜಕೀಯ ಸಿದ್ಧಾಂತವಾದ ಹಿಂದುತ್ವವನ್ನೂ ಬೇರೆಮಾಡಿ ನೋಡಬೇಕಾದದ್ದು ಇಲ್ಲೇ; ಮತ್ತೊಂದು ಧರ್ಮದ ಬಗ್ಗೆ ಸಹನೆಯಿಲ್ಲದ ಇಸ್ಲಾಮಿಕ್ ಪುರೋಹಿತಶಾಹಿಯ ಮತಾಂಧತೆಯನ್ನೂ ಜನಸಾಮಾನ್ಯರ ಬದುಕಿನ ಭಾಗವಾಗಿರುವ ಇಸ್ಲಾಮನ್ನೂ ವಿಂಗಡಿಸಿ ನೋಡಬೇಕಿರುವುದೂ ಇಲ್ಲೇ; ಆಯಾ ಧರ್ಮಗಳಲ್ಲಿ ಉಚ್ಚ ವರ್ಗಗಳ ಹಿತಕಾಯುವ ರಾಜಕಾರಣದ ಭಾಗವಾಗಿರುವ ಹಿಂದುತ್ವ ಅಥವಾ ಇಸ್ಲಾಮಿಸಂ ಈ ಎರಡನ್ನೂ ಈ ಹೊತ್ತು ತಿರಸ್ಕರಿಸಿದೆ ಬೇರೆ ದಾರಿಯಿಲ್ಲವೆಂದು ತೋರುತ್ತದೆ"[೬] ಎನ್ನುವ ಮಾತುಗಳು ಕೇವಲ ಹಿಂದೂ ಕೋಮುವಾದ ಮತ್ತು ಬಲಪಂಥೀಯವಾದದ ಕುರಿತ ವಿಮರ್ಶೆಯಾಗದೆ ಇಸ್ಲಾಮಿಕ್ ಮೂಲಭೂತವಾದ ಹಾಗೂ ಅದರ ವಿಕೃತ ರೂಪವಾದ ಹಿಂಸಾವಾದ ಕುರಿತ ಕಟು ವಿಮರ್ಶೆಯೂ ಆಗಿದೆ.

ಈ ಹಿನ್ನೆಲೆಯಲ್ಲಿ ತರೀಕೆರೆ ಅವರ ಲೇಖನವು ಕನ್ನಡದ ಬಲಪಂಥೀಯ ಪ್ರತಿಗಾಮಿ 'ರಾಜಕೀಯ ಪ್ರಜ್ಞೆ'ಯನ್ನು ಕನ್ನಡ ಸಾಹಿತ್ಯ ಪರಂಪರೆಯ ಮಾನವತಾವಾದಿ ಪರಂಪರೆ ಹಾಗೂ ಆತ್ಮಶೋಧಕ ಧಾರ್ಮಿಕ ಪ್ರಜ್ಞೆಯ ಜೀವಪರ ನೆಲೆಗಳಿಂದ ಅರ್ಥಪೂರ್ಣವಾಗಿ ಅನುಸಂಧಾನ ಮಾಡುತ್ತದೆ. ಕನ್ನಡ ಸಂಸ್ಕೃತಿಯ ಮಹೋನ್ನತ ಕಾಣ್ಕೆಯಾದ 'ವಿಶ್ವಮಾನವ ಪ್ರಜ್ಞೆ' ಪರಿಕಲ್ಪನೆಯ ಮೂಲಕ ಜೀವವಿರೋಧಿಯಾದ ಕೋಮುವಾದಿ ಮತ್ತು ಮತೀಯವಾದಿ ರಾಜಕಾರಣಗಳನ್ನು ಅನುಸಂಧಾನ ಮಾಡುತ್ತದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಲಪಂಥೀಯ ಪ್ರತಿಗಾಮಿ ಸಾಂಸ್ಕೃತಿಕ ರಾಜಕಾರಣದ 'ರಾಜಕೀಯ ಕ್ರಿಯೆ'ಯನ್ನು ಕನ್ನಡ ಸಾಹಿತ್ಯ ಪರಂಪರೆಯ ಮಾನವತಾವಾದಿ ಧೋರಣೆಯ ಮೂಲಕ 'ರಾಜಕೀಯಾನುಸಂಧಾನ'ದ ಮಾಡಿರುವ ಒಂದು ಮಹತ್ವಪೂರ್ಣವಾದ ಬರಹವಾಗಿದೆ.

೭.೩ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಗತಿಪರ ರಾಜಕೀಯಾನುಸಂಧಾನದ ಆಯಾಮಗಳು

ಸಾಮಾನ್ಯವಾಗಿ 'ಪ್ರಗತಿಪರ' ಎನ್ನುವದನ್ನು 'ಪ್ರತಿಗಾಮಿ' ಎನ್ನುವುದಕ್ಕೆ ವಿರುದ್ಧವಾದ ಅರ್ಥದಲ್ಲಿ ಬಳಸಲಾಗುತ್ತದೆ. ಆದರೆ, ನಿಜವಾಗಿಯೂ 'ಪ್ರಗತಿಪರ' ಎಂದರೇನು ಮತ್ತು ಇದಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಯಾವೆಲ್ಲಾ ಅರ್ಥ ಸಾಧ್ಯತೆಗಳು ರೂಢಿಯಲ್ಲಿವೆ ಎನ್ನುವುದನ್ನು ಕುರಿತು ಇಲ್ಲಿಯೇ ಸ್ಪಷ್ಟಪಡಿಸಿಕೊಳ್ಳುವುದು ಸೂಕ್ತವಾದುದು. ಏಕೆಂದರೆ, ಇದು ಮುಂದಿನ ಚರ್ಚೆಯ ಸಂದರ್ಭದಲ್ಲಿ ಎದುರಾಗಬಹುದಾದ ವಿರೋಧಾಭಾಸಗಳ ಅಥವಾ ತೊಡಕುಗಳ ನಿವಾರಣೆ ದೃಷ್ಟಿಯಿಂದ ಅತ್ಯಂತ

ಉಪಯುಕ್ತವಾದ ಕ್ರಮವಾಗಿದೆ. 'ಪ್ರಗತಿಪರ' ಎನ್ನುವುದಕ್ಕೆ ಸಂಪ್ರದಾಯಬದ್ಧ ಅಥವಾ ಪರಂಪರಾಗತವಾದ ಅಂಧಶ್ರದ್ಧೆಗೆ ವಿರುದ್ಧವಾದ 'ಆಧುನಿಕ ದೃಷ್ಟಿಕೋನ' ಎನ್ನುವ ವ್ಯಾಖ್ಯಾನ ಕೂಡಾ ಇದೆ. ಆದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ 'ಪ್ರಗತಿಪರ' ಎನ್ನುವ ಪರಿಕಲ್ಪನೆಗೆ 'ಆಧುನಿಕ ಮನೋಧರ್ಮ' ಮತ್ತು 'ವೈಜ್ಞಾನಿಕ ಮನೋಧರ್ಮ'ಗಳ ಅರ್ಥವೂ ಒಳಗೊಂಡಂತೆ ಇನ್ನೂ ಹಲವು ಅರ್ಥರೂಪಗಳಿವೆ.

ಈ ಅರ್ಥವೈವಿಧ್ಯತಾ ರೂಪಗಳು ಅನೇಕ ಮಹಾನ್ ದಾರ್ಶನಿಕರ, ಚಿಂತಕರ ಹಾಗೂ ವಿಚಾರವಾದಿಗಳ ವಿಶಿಷ್ಟವಾದ ಚಿಂತನೆಗಳ ಪ್ರೇರಣೆಯಿಂದ ರೂಪುಗೊಂಡಿವೆ. ಇಂಥಹವರಲ್ಲಿ ಪ್ರಾಚೀನ ಭಾರತದ ಬುದ್ಧ, ಮಧ್ಯಕಾಲೀನ ಕರ್ನಾಟಕದ ಬಸವ, ಆಧುನಿಕ ಭಾರತದ ರಾಜಾರಾಂ ಮೋಹನ್‌ರಾಯ್, ಗಾಂಧೀಜಿ, ಅಂಬೇಡ್ಕರ್, ಜ್ಯೋತಿ ಬಾಪುಲೆ, ಪೆರಿಯಾರ್ ಮೊದಲಾದ ದೇಶಿ ದಾರ್ಶನಿಕರ ಹಾಗೂ ಚಿಂತಕರ ವಿಚಾರಗಳು ಒಂದು ಧಾರೆ. ಹಾಗೆಯೇ ಚಾರ್ಲ್ಸ್ ಡಾರ್ವಿನ್, ಸಿಗ್ಮಂಡ್ ಫ್ರಾಯ್ಡ್, ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಏಜಂಲ್ಸ್, ಲೆನಿನ್, ಮಾವೋತ್ಸೆ ತುಂಗ್ ಹಾಗೂ ಸೀಮನ್ ದಿ ಬುವಾ ಮೊದಲಾದ ಪಾಶ್ಚಾತ್ಯ ಚಿಂತಕರ ಚಿಂತನೆಗಳು ಇನ್ನೊಂದು ಧಾರೆ. ಈ ದೇಶಿ ಮತ್ತು ವಿದೇಶಿ ವಿಚಾರ ಧಾರೆಗಳ ಸಂಗಮ, ಪೃಥಕ್ಕರಣೆ ಮತ್ತು ಪರಿಷ್ಕರಣೆಯ ಸಂಕೀರ್ಣ ಪ್ರಕ್ರಿಯೆಯ ಫಲವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಪ್ರಗತಿಪರ ಪರಿಕಲ್ಪನೆಗೆ ಸಂಬಂಧಿಸಿದ ಬಹುರೂಪಿ ಅರ್ಥಗಳು ರೂಪುಗೊಂಡಿವೆ. ಕೆಲವು ಸಂದರ್ಭಗಳಲ್ಲಿ ಈ ವೈವಿಧ್ಯಮಯ ರೂಪಗಳ ನಡುವೆ ಸಾಮ್ಯತೆ ಮತ್ತು ಸಮಾನತೆಯ ಅಂಶಗಳಿರುವಂತೆಯೇ, ಅನೇಕ ಬಾರಿ ಭಿನ್ನತೆ ಹಾಗೂ ಪ್ರತ್ಯೇಕತೆಯ ಚಹರೆಗಳೂ ಸಹ ಕಂಡುಬರುತ್ತವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಮಾದರಿಗಳಾದ ದಲಿತ ಸಾಂಸ್ಕೃತಿಕ ವಿಮರ್ಶೆ, ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆ, ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆ ಹಾಗೂ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಗಳು ಪರಿಭಾವಿಸಿಕೊಂಡಿರುವ ಪ್ರಗತಿಪರ ಪರಿಕಲ್ಪನೆಯ ಅರ್ಥಗಳ ನಡುವೆ ಕಂಡುಬರುವ ಇಂಥ ಭಿನ್ನತೆಗಳಿಗೆ ಹಾಗೂ ವೈವಿಧ್ಯತೆಗಳಿಗೆ ಅವುಗಳ ಪ್ರೇರಣಾ ಮೀಮಾಂಸೆಯ ಮೂಲಗಳಾಗಿರುವ ಚಿಂತನಾಧಾರೆಗಳಲ್ಲಿರುವ ಭಿನ್ನತೆಗಳು ಮತ್ತು ವೈವಿಧ್ಯತೆಗಳೇ ಮುಖ್ಯವಾದ ಕಾರಣಗಳಾಗಿವೆ. ಹೀಗಾಗಿ ದಲಿತ ಸಾಂಸ್ಕೃತಿಕ ವಿಮರ್ಶೆಯ 'ಪ್ರಗತಿಪರ' ಪರಿಕಲ್ಪನೆಯ ಅರ್ಥವು ಅಂಬೇಡ್ಕರ್, ಫುಲೆ, ಪೆರಿಯಾರ್ ಚಿಂತನೆಗಳ ಸ್ವೀಕರಣೆ ಹಾಗೂ ಮಾರ್ಕ್ಸ್‌ವಾದಿ ಚಿಂತನೆಯ ಪರಿಷ್ಕರಣೆಯಿಂದ ರೂಪುಗೊಂಡಿರುವ ಸ್ವರೂಪದ್ದಾಗಿದೆ. ಆದ್ದರಿಂದ ಇದು, ದಲಿತ–ಶೋಷಿತ–ದಮನಿತರ 'ಸರ್ವಾಂಗೀಣ ವಿಕಾಸ' ಎನ್ನುವ ಅರ್ಥ ಪಡೆದುಕೊಂಡಿದೆ. ಹಾಗೆಯೇ, ಎಡಪಂಥೀಯ ಮತ್ತು ಸಮಾಜವಾದಿ ಸಾಂಸ್ಕೃತಿಕ ವಿಮರ್ಶಾ ರೂಪಗಳ ಮೇಲೆ ದಟ್ಟ ಪ್ರಭಾವ ಬೀರಿರುವ ಕಾರ್ಲ್‌ಮಾರ್ಕ್ಸ್, ಗಾಂಧೀಜಿ, ಲೋಹಿಯಾ ಹಾಗೂ ನೆಹರೂ ಅವರ ಸೆಕ್ಯುಲರ್ ಚಿಂತನೆಗಳ ಕಾರಣದಿಂದ ಪ್ರಗತಿಪರ ಎಂದರೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ

ಯಾಜಮಾನ್ಯ ಸಂಕೋಲೆಗಳಿಂದ ಮುಕ್ತವಾದ ಅರ್ಥಪೂರ್ಣ 'ಸಾಮಾಜಿಕ–ಸಾಂಸ್ಕೃತಿಕ ವಿಕಾಸ' ಎನ್ನುವ ಅರ್ಥವಿದೆ. ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯಿಂದ ಪ್ರಭಾವಿತವಾಗಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ 'ಪ್ರಗತಿಪರ' ಎನ್ನುವ ಪರಿಕಲ್ಪನೆಗೆ 'ಗಂಡು ಮತ್ತು ಹೆಣ್ಣಿನ ಸಮಾನ ಆತ್ಮಗೌರವದ ಬದುಕಿನ ಸ್ಥಿತಿ' ಎನ್ನುವ ಅರ್ಥವಿದೆ. ಆದರೆ, ವಾಸ್ತವವಾಗಿ ಇವೆಲ್ಲವೂ ಸಾಧಿತವಾಗಬೇಕಿರುವ ಆಶಯಗಳ ಸೂಚಕಗಳೂ ಹೌದು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸದ್ಯಕ್ಕೆ ರೂಢಿಯಲ್ಲಿರುವ 'ಪ್ರಗತಿಪರ' ಪರಿಕಲ್ಪನೆಯ ಈ ಎಲ್ಲಾ ಅರ್ಥರೂಪಗಳೂ ಕೂಡಾ ಸಾಧಿತವಾಗಬೇಕಿರುವ ವ್ಯಕ್ತಿ, ಸಮಾಜ ಹಾಗೂ ಬದುಕಿನ ಸ್ಥಿತಿಯೊಂದರ ಸೂಚಕಗಳೂ ಹೌದು; ಸಂಕೇತಗಳೂ ಹೌದು.

ಇಂಥ 'ಉದ್ದೇಶಿತ' ಮತ್ತು 'ಭಾವಿತ' ಸ್ಥಿತಿಗಳನ್ನು ಪ್ರಯತ್ನಪೂರ್ವಕವಾಗಿ ಕಟ್ಟಬೇಕಿದೆ. ಇದೇನೂ ಸರಳವಾದ ಕ್ರಿಯೆಯಲ್ಲ. ಚರಿತ್ರೆ ಮತ್ತು ಪರಂಪರೆಗಳು ರೂಪಿಸಿರುವ ಸಾಮಾಜಿಕ, ರಾಜಕೀಯ, ಧಾರ್ಮಿಕ, ನೈತಿಕ ಹಾಗೂ ಆರ್ಥಿಕ ನಿಯಮಗಳ ಉಕ್ಕಿನಕೋಟೆಯನ್ನು ಮುರಿದೇ ಇದನ್ನು ಸಾಧಿಸಬೇಕಿದೆ. ಹೀಗಾಗಿ ಈ ಕಟ್ಟುವ ಕ್ರಿಯೆ ಕೇವಲ ಒಂದು 'ಸ್ಥಿತಿ'ಯಾಗದೆ, ಆ ಕ್ರಿಯೆಗೆ ಸಂಬಂಧಿಸಿದ ಹಲವು ಸಾಧ್ಯತೆಗಳ ಹಾಗೂ ಅಸಾಧ್ಯತೆಗಳ ನಡುವಿನ ಸಂಕೀರ್ಣ ಸಂಘರ್ಷವಾಗಿದೆ. ಈ ವಿದ್ಯಮಾನವನ್ನೇ ಇಲ್ಲಿ 'ಪ್ರಗತಿಪರ ರಾಜಕೀಯನುಸಂಧಾನ' ಎಂದು ಕರೆಯಲಾಗಿದೆ. ಇದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ರೂಪಗಳು ನಿರ್ವಹಿಸುತ್ತಿರುವುದರ ಸ್ವರೂಪವೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರಗತಿಪರ ರಾಜಕೀಯಾನುಸಂಧಾನ'ದ ಆಯಾಮಗಳಾಗಿವೆ.

ಹಾಗೆ ನೋಡಿದರೆ ಈ ವಿದ್ಯಮಾನಕ್ಕೆ ಬಹುದೀರ್ಘವಾದ ಚರಿತ್ರೆ ಇದೆ. ಹಾಗೆಯೇ ಸಮಕಾಲೀನ ಪ್ರಶ್ನೆಗಳ ಸವಾಲು ಸಹ ಇದೆ. ಹೀಗಾಗಿ ಇದು ಸರಳವಾಗಿರದೆ ಸಂಕೀರ್ಣವಾದ ವಿದ್ಯಮಾನವಾಗಿದೆ. ಅಖಂಡ ಅಥವಾ ಸ್ವಾಯತ್ತವಾಗಿರದೆ ಆಂತರಿಕ ಪ್ರಶ್ನೆಗಳು ಹಾಗೂ ಭಿನ್ನಮತಗಳಿಂದ ಕೂಡಿರುವ ಸ್ವರೂಪದ್ದಾಗಿದೆ. ಅಲ್ಲದೆ, ಹೊರಗಿನ ಬಲಾಢ್ಯ ಶಕ್ತಿಗಳು ಹುಟ್ಟಿಸಿರುವ ಆತಂಕಗಳಿಂದ ತಲ್ಲಣಕ್ಕೆ ಒಳಗಾಗಿದೆ. ಇದರ ಒಟ್ಟು ಸ್ವರೂಪವನ್ನು ಇಲ್ಲಿ ಕೆಲವು ಮುಖ್ಯವಾದ ವಿಮರ್ಶಾ ಲೇಖನಗಳ ಚರ್ಚೆಯ ಮೂಲಕ ಗುರುತಿಸಲಾಗಿದೆ. ಅವು ಇಂತಿವೆ: ಮೊಗಳ್ಳಿ ಅವರ 'ಜಾತ್ಯಾತೀತ ರಾಜಕಾರಣ ಮತ್ತು ಸಾಹಿತ್ಯ' ('ತಕರಾರು', ೨೦೦೮) ಹಾಗೂ 'ದಲಿತ ರಾಜಕಾರಣದ ತಾತ್ವಿಕತೆ' ('ದಲಿತ ಕಥನ', ೨೦೦೬); ನಿಂಗಪ್ಪ ಮುದೇನೂರು ಅವರ 'ಮಾದೇಶ್ವರ ಮಂಟೇಸ್ವಾಮಿ ಕಾವ್ಯ, ಎಡ–ಬಲ ಸಂಘರ್ಷಗಳ ಕಥಾನಕ' ('ಸಂಸ್ಕೃತಿ ದರ್ಶನ', ೨೦೦೫); ಎಚ್.ಎಸ್. ಶ್ರೀಮತಿ ಅವರ 'ವಿಮೋಚನೆಗಾಗಿ ಸ್ತ್ರೀವಾದಿ ರಾಜಕಾರಣ' (ಸ್ತ್ರೀವಾದಿ', ೨೦೦೩); ಎಂ.ಉಷಾ ಅವರ 'ಮಹಿಳಾ ಸಂಸ್ಕೃತಿ ಸಂಕಥನ: ಒಂದು ಪ್ರತಿಕ್ರಿಯೆ' (ಸುರುಚಿ, ೨೦೦೪); ಮಾಲಗತ್ತಿ ಅವರ 'ಸ್ತ್ರೀವಾದ ದಲಿತವಾದದಿಂದ ದಲಿತ ಸ್ತ್ರೀವಾದದೆಡೆಗೆ' ('ವಿಮರ್ಶೆಯ ಮಾರ್ಗ', ೨೦೦೪); ಆಶಾದೇವಿ ಅವರ 'ಉತ್ತಮ ಸರಕಿದು ಅತಿಲಾಭ ತರುವಂಥ ... ಜಾಗತೀಕರಣ ಮತ್ತು ಆತಂಕಿತ ಮಹಿಳೆ'

ಹಾಗೂ 'ಸಂಸ್ಕೃತಿ ಮತ್ತು ಕೋಮುವಾದ' (ಸ್ತ್ರೀಮತವನುತ್ತರಿಸಲಾದೆ?, ೨೦೦೬), ಮತ್ತು ಸುಮಿತ್ರಾಬಾಯಿ ಅವರ 'ಆಧುನಿಕ ಕನ್ನಡ ಸಾಹಿತ್ಯ ವಿಮೋಚನೆಯ ಪ್ರಶ್ನೆಯನ್ನು ನಿರ್ವಹಿಸಿದ ಬಗೆ' ಹಾಗೂ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು' ('ನಿರಂತರ', ೨೦೦೯).

ಈ ಆಕರಗಳ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಗತಿಪರ ರಾಜಕೀಯಾನುಸಂಧಾನದ ಚಾರಿತ್ರಿಕ ಹಾಗೂ ಸಮಕಾಲೀನ ಚಹರೆಗಳ ಸ್ವರೂಪವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

೭.೩.೧ ರಾಜಕಾರಣದ ವಿರುದ್ಧದ ರಾಜಕಾರಣ ಅರ್ಥಾತ್ 'ರಾಜಕಾರಣದ ಮಾನವೀಕರಣ'

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಯಾವುದೇ ರೂಪವಾಗಿರಲಿ, ಮುಖ್ಯವಾಗಿ ಅದು ಮಂಡಿಸುವುದು ರಾಜಕಾರಣದ ವಿರುದ್ಧದ ರಾಜಕಾರಣವನ್ನು. ರಾಜಕಾರಣದ ವಿರುದ್ಧದ ರಾಜಕಾರಣ ಎಂದರೆ, ಸಮಕಾಲೀನ ಸಂದರ್ಭದ ಪ್ರಧಾನ ಧಾರೆಯ ಅಥವಾ ಯಾಜಮಾನ್ಯ ರಾಜಕಾರಣದಲ್ಲಿರುವ ದಲಿತ, ಹಿಂದುಳಿದ, ಮಹಿಳಾ ವಿರೋಧಿ ನೆಲೆಗಳ ವಿರುದ್ಧ ಮಾಡುವ ರಾಜಕಾರಣ. ಧರ್ಮ, ಜಾತಿ, ಲಿಂಗ, ಮತ ಹಾಗೂ ಜನಾಂಗವಾದಿ ಪ್ರಜ್ಞೆಗಳು ಆಳವಾಗಿ ಬೇರುಬಿಟ್ಟಿರುವ ಸಮಕಾಲೀನ ಪ್ರಧಾನಧಾರೆಯ ರಾಜಕಾರಣವು, ಭಾರತದ ಪ್ರಾಚೀನ ಪುರೋಹಿತಶಾಹಿಯ ಹಾಗೂ ಊಳಿಗಮಾನ್ಯಶಾಹಿಯ ಪರಿಷ್ಕೃತ ರೂಪವಾಗಿದೆ. ಪ್ರಜಾಪ್ರಭುತ್ವದ ಮತ್ತು ಸಂವಿಧಾನದ ಆಶಯಗಳನ್ನು ತನ್ನ ಆಶೋತ್ತರಗಳನ್ನಾಗಿ ಕಟ್ಟಿಕೊಳ್ಳುವುದಕ್ಕೆ ಒಪ್ಪದ ರಾಜಕಾರಣ ಇದು. ಹೀಗಾಗಿಯೇ, ಸಂವಿಧಾನದ ಆಶಯಗಳನ್ನು ಪ್ರಜಾಪ್ರಭುತ್ವವಾದಿ ಕ್ರಮಗಳಲ್ಲಿ ಅನುಷ್ಠಾನಗೂಳಿಸುವ ವಿಷಯದಲ್ಲಿ ಬಹುದೊಡ್ಡ ವಿಸಂಗತಿಯೇ ಏರ್ಪಟ್ಟಿದೆ. ಪ್ರಾಚೀನ ಶ್ರೇಣೀಕೃತ ವರ್ಣವ್ಯವಸ್ಥೆ, ಊಳಿಗಮಾನ್ಯಶಾಹಿ ಜಾತಿ ಮತ್ತು ಲಿಂಗವಿರೋಧಿ ವ್ಯವಸ್ಥೆ ಹಾಗೂ ಆಧುನಿಕ ವರ್ಗವ್ಯವಸ್ಥೆಗಳು ಸ್ವಾತಂತ್ರ್ಯೋತ್ತರ ಭಾರತದ ಯಾಜಮಾನ್ಯ ರಾಜಕಾರಣದ ಪ್ರಮುಖ ಲಕ್ಷಣಗಳಾಗಿವೆ.

ಹೀಗಾಗಿ, ಭಾರತದ ಪ್ರಧಾನಧಾರೆಯ ರಾಜಕಾರಣ ಎನ್ನುವುದು ನಿಜವಾದ ಅರ್ಥದಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಹಾಗೂ ಬಂಡವಾಳಶಾಹಿ ಆರ್ಥಿಕವ್ಯವಸ್ಥೆಗಳೆರಡೂ ಪರಸ್ಪರ ಕೈಜೋಡಿಸಿರುವ ವಿಶಿಷ್ಟ ವಾಸ್ತವವಾಗಿದೆ. ಇಂಥ ರಾಜಕಾರಣದ ವಿರುದ್ಧ ಮಾಡಬೇಕಿರುವ ರಾಜಕಾರಣವೇ ಅರ್ಥಾತ್ ರಾಜಕಾರಣದ ಮಾನವೀಕರಣವೇ ಕನ್ನಡದ ಎಲ್ಲ 'ಪ್ರಗತಿಪರ ರಾಜಕೀಯಾನುಸಂಧಾನ'ದ ಮುಖ್ಯ ಉದ್ದೇಶವಾಗಿದೆ. ಈ ಕುರಿತು ವಿಸ್ತೃತವಾಗಿ ಆಲೋಚಿಸುವ ಮೊಗಳ್ಳಿ ಅವರು ಹಿಂದೂ ಮತೀಯವಾದಿ, ಕೋಮುವಾದಿ, ಜಾತಿವಾದಿ ಮತ್ತು ಮಹಿಳಾ ವಿರೋಧಿ ರಾಜಕಾರಣದ ವಿರುದ್ಧ ಅರ್ಥಪೂರ್ಣವಾದ ಸೆಕ್ಯುಲರ್ ರಾಜಕಾರಣದ ಸಂಕಥನವನ್ನು ರೂಪಿಸಬೇಕು ಎಂದು ಪ್ರತಿಪಾದಿಸುತ್ತಾರೆ. ಈ ಸಂದರ್ಭದಲ್ಲಿ ಅವರು 'ವೈದಿಕ ರಾಜಕಾರಣ'ಕ್ಕೆ ಪ್ರತಿಯಾಗಿ 'ದಲಿತ ರಾಜಕಾರಣ'ವನ್ನು ಮಂಡಿಸುತ್ತಾರೆ. ಆದರೆ ಬಿ.ಎಸ್.ಪಿ.ಯ 'ಮಾಯಾವತಿ' ಅವರ ದಲಿತ ರಾಜಕಾರಣ ಕೂಡಾ ತನ್ನ ಸ್ವರೂಪದಲ್ಲಿ ವೈದಿಕ

ರಾಜಕಾರಣವೇ ಆಗಿದೆ. ಹೀಗಾಗಿ, ನಿಜವಾದ 'ದಲಿತ ರಾಜಕಾರಣ' ಅಥವಾ 'ಸೆಕ್ಯುಲರ್ ರಾಜಕಾರಣ' ಎನ್ನುವುದು ಬುದ್ಧ, ಅಂಬೇಡ್ಕರ್, ಗಾಂಧೀಜಿ ಅವರ ತತ್ವಗಳು ಹಾಗೂ ಚಿಂತನೆಗಳು ಸಮರಸವಾಗಿ ಬೆರತ ರಾಜಕಾರಣವಾಗಬೇಕು ಎಂದು ವಿವರಿಸುತ್ತಾರೆ. ಇದರ ಸ್ವರೂಪವನ್ನು ಕುರಿತು ಮೊಗಳ್ಳಿ ಅವರು. "ಅಂಬೇಡ್ಕರ್ ಮತ್ತು ಗಾಂಧಿ ಇವರಿಬ್ಬರ ಅರಿವು ಸಮಕಾಲೀನ ಸಮಾಜದ ರಾಜಕಾರಣದ ಮೂಲ ಮಂತ್ರವಾಗಿರಬೇಕಾಗಿದೆ. ಅಹಿಂಸಾ ರಾಜಕಾರಣವೂ, ಸಾಮಾಜಿಕ ನ್ಯಾಯದ ರಾಜಕಾರಣವೂ ಸರ್ವೋದಯದ ತತ್ವವೂ ಇವರಿಬ್ಬರ ಆತ್ಯಂತಿಕ ಕಳಕಳಿಯಾಗಿತ್ತು. ಈ ಇಬ್ಬರಿಗೂ ರಾಜಕಾರಣದ ತಾಯ್ತನ ಗೊತ್ತಿತ್ತು. ಆದರೆ ಧರ್ಮ ಮತ್ತು ಜಾತಿಗಳೆರಡೂ ಕೂಡಿದರೆ ಎಂತಹ ತಾಯ್ತನದ ರಾಜಕಾರಣವೂ ಮೂಲೆಗುಂಪಾಗುತ್ತದೆ. ನಾಳೆ ಹೀಗಾಗಬಹುದು ಎಂಬುದರಿಂದಲೇ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಮಹಿಳಾ ರಾಜಕಾರಣದ ಅಗತ್ಯವನ್ನು ಪ್ರತಿಪಾದಿಸಿದ್ದರು"[೭] ಎಂದು ವಿಶ್ಲೇಷಿಸುತ್ತಾರೆ. ಆದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸ್ತ್ರೀವಾದಿ ಮಹಿಳಾ ರಾಜಕಾರಣವು ಸಹ ರಾಜಕಾರಣದ ವಿರುದ್ಧದ ರಾಜಕಾರಣ ಅರ್ಥಾತ್ ರಾಜಕಾರಣದ ಮಾನವೀಕರಣವನ್ನು ಪ್ರತಿಪಾದಿಸುವಂತಹದ್ದೇ ಆಗಿದೆ. ಆದರೆ, ಕನ್ನಡದ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯ ಮಹಿಳಾ ರಾಜಕಾರಣವು ಮೊಗಳ್ಳಿ ಅವರು ಹೇಳುವ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಮಹಿಳಾ ರಾಜಕಾರಣದಿಂದ, ಚಾರಿತ್ರಿಕವಾಗಿ ಅದರ ಆರಂಭಿಕ ಘಟ್ಟದಲ್ಲಾಗಲೀ ಅಥವಾ ಅದರ ಉಚ್ಛ್ರಾಯದ ಘಟ್ಟದಲ್ಲಾಗಲೀ ಗಾಢವಾದ ಪ್ರೇರಣೆಯನ್ನೇನೂ ಪಡೆದುಕೊಂಡಿಲ್ಲ.

ಇದಕ್ಕೆ ಕನ್ನಡ ಸ್ತ್ರೀವಾದವು ಪಾಶ್ಚಾತ್ಯ 'ಸಾಂಪ್ರದಾಯಕ ಸ್ತ್ರೀವಾದ' ಮತ್ತು 'ರ್‍ಯಾಡಿಕಲ್ ಸ್ತ್ರೀವಾದ'ಗಳಿಂದ ತಾತ್ವಿಕವಾಗಿ ಹೆಚ್ಚು ಪ್ರಭಾವಿತವಾದದ್ದೇ ಮುಖ್ಯ ಕಾರಣವೆಂದು ತೋರುತ್ತದೆ. ಹೀಗಾಗಿಯೇ, ಮಹಿಳೆಯನ್ನು ಪುರುಷನಿಗೆ ಸಮಾನಳಲ್ಲದ ಮತ್ತು ಆತ್ಯಂತಿಕ ಪ್ರಜೆಯಾದ ಪುರಷನಿಂದ ಬೇರೆಯಾದ 'ಎರಡನೆ ಪ್ರಜೆ' (Second Sex) ಯಾಗಿ ರೂಪಿಸಲ್ಪಟ್ಟಿರುವ 'ಅವಸ್ಥೆ'ಯನ್ನು ಏಕೈಕ ಘಟಕವಾಗಿ ಮಾತ್ರ ಪರಿಭಾವಿಸಿಕೊಳ್ಳಲಾಗಿದೆ. ಹೀಗಾಗಿಯೇ, ಜಾಗತಿಕವಾದ ಏಕರೂಪಿ ಪರಿಭಾಷೆಯನ್ನೇ ಕನ್ನಡದ ಸಂದರ್ಭದಲ್ಲೂ ಬಳಸಲಾಗಿದೆ. ಇದನ್ನು ಎಚ್.ಎಸ್. ಶ್ರೀಮತಿ ಅವರ "ಮಹಿಳಾ ಬದುಕಿನ ಒಟ್ಟಾರೆ ಅಭ್ಯುದಯಕ್ಕಾಗಿ, ಪ್ರಗತಿಗಾಗಿ, ಅದಕ್ಕಿಂತಲೂ ಪ್ರಾಥಮಿಕ ಹಂತದ ಗುರಿಯಾದ ಸಾಮಾಜಿಕ ಬಿಗಿ ಸರಪಣಿಗಳ ಬಂಧನದಿಂದ ವಿಮೋಚನೆಗಾಗಿ, ಹಾದಿಗಳನ್ನು ಶೋಧಿಸಬೇಕೆಂಬುದನ್ನೇ, 'ಮಹಿಳಾ ರಾಜಕಾರಣ' ಎನ್ನಬಹುದು. ಈ ಮಾತು ಪ್ರತಿಏಟು, ಪ್ರತಿವಾದ, ಪ್ರತಿತಂತ್ರ ಎಂಬ ಘರ್ಷಣೆಯ ಚಟುವಟಿಕೆಗಳನ್ನೇ ಹೇಳುತ್ತಿದೆ ಎನಿಸಬಹುದು. ಆದರೆ, ಇದನ್ನು ಹೀಗೆ ನಕಾರಾತ್ಮಕವಾಗಿ ವ್ಯಾಖ್ಯಾನಿಸುವುದಕ್ಕಿಂತ, ಮಹಿಳಾ ಬದುಕಿನ ಅಳಿವು ಉಳಿವಿನ ಪ್ರಶ್ನೆ ಎಂದು ಪರಿಗಣಿಸುವ ಅಗತ್ಯವಿದೆ"[೮] ಎನ್ನುವ ಮಾತುಗಳು ಖಚಿತಪಡಿಸುತ್ತವೆ.

ದಲಿತ ರಾಜಕಾರಣವಾಗಲೀ ಅಥವಾ ಮಹಿಳಾ ರಾಜಕಾರಣವಾಗಲೀ ಎಡಪಂಥೀಯ ಹಾಗೂ ಸಮಾಜವಾದಿ ಸಾಂಸ್ಕೃತಿಕ ವಿಮರ್ಶಾ ರೂಪಗಳು ಪ್ರತಿಪಾದಿಸುವ ರಾಜಕಾರಣದ ಅರ್ಥಪೂರ್ಣವಾದ ಹೊಸಸಾಧ್ಯತೆಯ ರೂಪಗಳೇ ಆಗಿವೆ. ಪರಿಭಾಷೆ ಮತ್ತು ಪ್ರತಿಪಾದನಾ ಕ್ರಮಗಳು ಮಾತ್ರ ಬೇರೆಯಾಗಿರುವಂತೆ ಕಂಡು ಬರುತ್ತದೆ. ಇಷ್ಟಾದರೂ, ಇವೆಲ್ಲವೂ ಪ್ರಧಾನಧಾರೆಯ ರಾಜಕಾರಣಕ್ಕೆ ಪ್ರತಿಯಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಪ್ರತಿಪಾದಿಸಿದ ಬಹುಮುಖ್ಯವಾದ ಪರ್ಯಾಯ ರಾಜಕಾರಣದ ರೂಪಗಳಾಗಿವೆ ಎನ್ನುವುದು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಮುಖ್ಯವಾದ ಸಂಗತಿ.

೭.೩.೨ ಪರ್ಯಾಯ ರಾಜಕಾರಣಗಳ ಸಮಕಾಲೀನ ಸಮಸ್ಯೆಗಳ ಸಂಕೀರ್ಣ ನೆಲೆಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಪ್ರಕಾರಗಳು ಪ್ರತಿಪಾದಿಸಿರುವ ಬಹುತೇಕವಾದ ಪರ್ಯಾಯ ರಾಜಕಾರಣಗಳೂ ಕೂಡಾ ಸಂಕೀರ್ಣವಾದ ಸಮಸ್ಯೆಗಳನ್ನು ಎದುರಿಸುತ್ತಿವೆ. ಇದರಿಂದ ಒಂದು ರೀತಿಯ ಸಂದಿಗ್ಧವಾದ ಸನ್ನಿವೇಶ ನಿರ್ಮಾಣವಾಗಿದೆ. ಪ್ರಧಾನಧಾರೆಯ ರಾಜಕಾರಣ ಮತ್ತು ಅದನ್ನು ಪೋಷಿಸುತ್ತಿರುವ ಪ್ರತಿಷ್ಠಿತ ಯಾಜಮಾನ್ಯಶಕ್ತಿಗಳಿಗೆ ಇದರಿಂದ ಹೆಚ್ಚು ಪ್ರಯೋಜನ ದೊರೆಯುತ್ತಿದೆ. ಇದರಿಂದ ಯಾವ ಬಹುಮುಖ್ಯವಾದ ಉದ್ದೇಶದಿಂದ ಪರ್ಯಾಯ ರಾಜಕಾರಣವನ್ನು ಪ್ರತಿಪಾದಿಸಲಾಗಿತ್ತೋ ಆ ಉದ್ದೇಶ ತೀವ್ರವಾದ ಹಿನ್ನಡೆಗೆ ಒಳಗಾಗುತ್ತಿದೆ.

ಸಮಕಾಲೀನ ಪರ್ಯಾಯ ರಾಜಕಾರಣಗಳ ಇಂಥ ಸಂಕೀರ್ಣ ಸಮಸ್ಯೆಗಳ ಸ್ವರೂಪವನ್ನು ಮುಖ್ಯವಾದ ಎರಡು ನೆಲೆಯಲ್ಲಿ ಗುರುತಿಸಬಹುದು. ಅವುಗಳೆಂದರೆ, ಅ. ಆಂತರಿಕ ನೆಲೆಯ ಸಮಸ್ಯೆಗಳು ಮತ್ತು ಆ. ಬಾಹ್ಯ ನೆಲೆಯ ಸಮಸ್ಯೆಗಳು. ಆಂತರಿಕ ನೆಲೆಯ ಸಮಸ್ಯೆಗಳು ದೇಶಿ ಮೂಲದ ಸಮಸ್ಯೆಗಳು. ಬಾಹ್ಯ ನೆಲೆಯ ಸಮಸ್ಯೆಗಳು ವಿದೇಶಿ ಮೂಲದವು. ಆಂತರಿಕ ನೆಲೆಯ ಸಮಸ್ಯೆಗಳು ಅವು ಹೇಗಾದರೂ ಹುಟ್ಟಿರಲಿ, ಅವುಗಳನ್ನು ಯಾವುದೋ ಒಂದು ಬೇರೆ ಹಿತಾಸಕ್ತಿಯೇ ಹುಟ್ಟುಹಾಕಿರಲಿ, ಅವುಗಳಿಗೂ ಸಹ ದೀರ್ಘವಾದ ಚರಿತ್ರೆ ಹಾಗೂ ಪರಂಪರೆಗಳಿವೆ. ಇಂಥ ಪ್ರಶ್ನೆಗಳ ಹಿಂದೆ ಸಾಮಾಜಿಕ ನ್ಯಾಯ ಮತ್ತು ಆ ನ್ಯಾಯದ ರೂಪದಲ್ಲಿ ದೊರೆಯುತ್ತಿರುವ ಪರಿಹಾರವನ್ನು ಸಮರ್ಪಕವಾಗಿ ಹಂಚಬೇಕು ಎನ್ನುವ ಆಗ್ರಹವಿದೆ. ಆದರೆ, ವಿದೇಶಿ ನೆಲೆಯಿಂದ ಎದುರಾಗುತ್ತಿರುವ ಸಮಸ್ಯೆಗಳ ಸ್ವರೂಪ ಇದಕ್ಕಿಂತ ಭಿನ್ನವಾಗಿದೆ. ಇವು ಯಾವ ಒಂದು ಮುಖ್ಯವಾದ ಉದ್ದೇಶವನ್ನು ಪರ್ಯಾಯ ರಾಜಕಾರಣದ ಮೂಲಕ ಪ್ರಜಾಸತ್ತಾತ್ಮಕ ಹಾಗೂ ಸಮಾಜವಾದಿ ವಿಧಾನಗಳಲ್ಲಿ ಸಾಧಿಸಲು ಉದ್ದೇಶಿಸಲಾಗಿತ್ತೋ ಆ ಉದ್ದೇಶವನ್ನು ಸಂಪೂರ್ಣವಾಗಿ ನಿರರ್ಥಕಗೊಳಿಸುವ ಸ್ವರೂಪದ್ದಾಗಿವೆ. ಆಧುನಿಕೋತ್ತರ ಸಂದರ್ಭದ ಖಾಸಗಿ ಬಂಡವಾಳಶಾಹಿ ಹಾಗೂ ನವವಸಾಹತುಶಾಹಿಗಳು ಈ ಬಾಹ್ಯ ನೆಲೆಯ ಸಮಸ್ಯೆಗಳ ಸೃಷ್ಟಿಶಕ್ತಿಗಳಾಗಿವೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದ ದಲಿತ ಪರ್ಯಾಯ ರಾಜಕಾರಣವು, ಹಕ್ಕುಗಳು ಮತ್ತು ಅವಕಾಶಗಳ ವಿಷಯದಲ್ಲಿ ಚಾರಿತ್ರಿಕವಾಗಿ ತಮಗೆ ಆಗಿರುವ ಅನ್ಯಾಯಕ್ಕೆ ಸಮನಾಗಿ ಅವುಗಳನ್ನು ಯುಕ್ತ

ಪ್ರಾತಿನಿಧ್ಯೀಕರಣದ ಕ್ರಮದಲ್ಲಿ ಪಡೆದುಕೊಳ್ಳಬೇಕು ಎನ್ನುವ ಹೋರಾಟವನ್ನು ವ್ಯವಸ್ಥೆಯ ವಿರುದ್ಧ ರೂಪಿಸಿತು. ಈ ಹೋರಾಟದಲ್ಲಿ ತನ್ನ ಗುರಿಸಾಧಿಸುವ ಮೊದಲೇ ಎದುರಾಗಿರುವ ಎಡಗೈ-ಬಲಗೈ ಆಂತರಿಕ ಸಂಘರ್ಷ ದಲಿತ ಪರ್ಯಾಯ ರಾಜಕಾರಣಕ್ಕೆ ಬಹು ದೊಡ್ಡ ಸವಾಲಾಗಿ ಎದುರಾಗಿದೆ. ದಲಿತ ರಾಜಕಾರಣವು ಪ್ರಧಾನಧಾರೆ ರಾಜಕಾರಣದ ವಿರುದ್ಧ ಪ್ರತಿಪಾದಿಸಿದ ಸಾಮಾಜಿಕ ನ್ಯಾಯಾಗ್ರಹದ ಜನಸಂಖ್ಯಾ ಪ್ರಮಾಣವಾದರು ತತ್ವವನ್ನೇ ಈಗ ಬಲಗೈ ಪಂಗಡದ ವಿರುದ್ಧ ಎಡಗೈ ಪಂಗಡ ಬಲವಾಗಿ ಪ್ರತಿಪಾದಿಸುತ್ತಿದೆ. ತನ್ನ ಈ ಪ್ರತಿಪಾದನೆಗೆ ಅದು, ದಲಿತ ಅಸ್ಪಶ್ಯ ಪರಂಪರೆಯ ಒಳಗಡೆಯೇ ಎರಡು ಭಿನ್ನ ಪರಂಪರೆಗಳಿವೆ. ಅವುಗಳಲ್ಲಿ ಈ 'ಅತ್ಯಂತ ಪ್ರಾಚೀನ'ವಾದ ಅಥವಾ 'ಆದಿಮ'ವಾದ ಪರಂಪರೆಯನ್ನು ಅದರಷ್ಟು ಪ್ರಾಚೀನವಲ್ಲದ ಪರಂಪರೆಯು ಸಾಂಸ್ಕೃತಿಕ ರಾಜಕಾರಣದ ಮೂಲಕ ಅಧೀನವರ್ತಿಯಾಗಿ ಮಾಡಿಕೊಂಡಿದೆ. ಹೀಗಾಗಿ, ನಮ್ಮ ಅಸ್ಮಿತೆ ಮತ್ತು ಹಕ್ಕುಗಳನ್ನು ಮರುರಚಿಸಿಕೊಳ್ಳಬೇಕು ಎನ್ನುವ ವಾದ ಮಂಡಿಸುತ್ತಿದೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದಲಿತ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿರುವ ಪರ್ಯಾಯ ರಾಜಕಾರಣದ ಒಂದು ಮುಖ್ಯವಾದ ವಿದ್ಯಮಾನವಾಗಿದೆ. ಅಷ್ಟೇ ಅಲ್ಲದೆ ಎಡಗೈ ಪರಂಪರೆಯ ಅಸ್ಮಿತೆಯ ಹುಡುಕಾಟವನ್ನು ಜನಪದ ಕಾವ್ಯಗಳಾದ ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳ ಸಾಂಸ್ಕೃತಿಕ-ಜನಾಂಗಿಕ ಅಧ್ಯಯನಗಳ ಮೂಲಕ ನಿರೂಪಿಸುವುದು; ಎಡಗೈ ಪರಂಪರೆಯ ಅಂತಃಸತ್ವ ಮತ್ತು ಚೈತನ್ಯವನ್ನು ಮುಖ್ಯ ಧಾರೆಯಾಗಿ ಉಳ್ಳ ಸೃಜನಶೀಲ ಕೃತಿಗಳನ್ನು ಕಾವ್ಯ, ಕಥನ ಮತ್ತು ಕಥನೇತರ ಪ್ರಕಾರಗಳ ಮೂಲಕ ಕಟ್ಟುವುದು ಮೊದಲಾದ ಕ್ರಮಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಕೆ. ರಾಮಯ್ಯ ಅವರ 'ಸಿಂಧ್ ಮಾದಿಗರ ಸಂಸ್ಕೃತಿ'(೧೯೯೩), ಲಕ್ಷ್ಮೀಪತಿ ಕೋಲಾರ ಅವರ 'ಮಾಸ್ಟಿಕರ ಸಂಸ್ಕೃತಿ'(೧೯೯೩), ಕೆ.ಬಿ. ಸಿದ್ಧಯ್ಯ ಅವರ 'ಬಕಾಲ'(೧೯೮೮), 'ದಕ್ಲದೇವಿ ಕಥಾಕಾವ್ಯ'(೧೯೯೯), ಮತ್ತು 'ಗಲ್ಲೇಬಾನಿ'(೨೦೦೯), ಹಾಗೂ ವಡ್ಡಗೆರೆ ನಾಗರಾಜಯ್ಯ ಅವರ 'ಆಸಾದಿ'(೨೦೦೦), 'ಗೋಸಂಗಿ'(೨೦೧೧) ಮೊದಲಾದವು ಇಂಥ ಆಂತರಿಕ ಸಾಂಸ್ಕೃತಿಕ ರಾಜಕಾರಣದ ಫಲವಾದ ರಚನೆಗಳಾಗಿವೆ.

ಈ ವಿದ್ಯಮಾನವನ್ನು ದಲಿತರಿಗೆ ಮೀಸಲಾತಿ ಮತ್ತು ಕೆಲವು ಹಕ್ಕುಗಳಿಗೆ ಸಂಬಂಧಿಸಿದಂತೆ ಸಿಗುತ್ತಿರುವ ಪ್ರಯೋಜನಗಳಲ್ಲಿ ಪಾಲು ಪಡೆಯುವ ಪ್ರಯತ್ನ ಎಂದು ಬಲಗೈ ಪಂಗಡ ಪ್ರತಿವಾದಿಸುತ್ತಿದೆ. ಆದರೆ ಇದು ಅಷ್ಟು ಸರಳವಾದ ಪ್ರಶ್ನೆಯಲ್ಲ. ಬದಲಾಗಿ ಇದು ದೇಶಿ ಸಂಸ್ಕೃತಿ ನಿರ್ಮಾಣದ ಆದಿಮ ಮಾನವೀಯ ಪರಂಪರೆಯೊಂದು ಸಾಂಸ್ಕೃತಿಕವಾಗಿ ದಮನಿತವಾಗಿರುವುದರ ವಿರುದ್ಧ ಅಸ್ಮಿತೆಗಾಗಿ ನಡೆಸುತ್ತಿರುವ ಆಂತರಿಕ ಹೋರಾಟವೆಂದು ಎಡಗೈ ಪಂಗಡ ತನ್ನ ವಾದವನ್ನು ಸಮರ್ಥಿಸಿಕೊಳ್ಳುತ್ತಿದೆ.

ಇದೇ ರೀತಿ, ಕನ್ನಡ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆ ಪ್ರತಿಪಾದಿಸುತ್ತಿರುವ ಮಹಿಳಾ ವಿಮೋಚನೆಯ ರಾಜಕಾರಣ ಮತ್ತು ಪರ್ಯಾಯ ರಾಜಕಾರಣಗಳು ಕೂಡಾ, ದಲಿತ ಸ್ತ್ರೀವಾದಿ ಚಿಂತನೆಯ ಮೂಲಕ

ಪ್ರತಿರೋಧಕ್ಕೆ ಒಳಗಾಗಿವೆ. ರ್‍ಯಾಡಿಕಲ್ ಸ್ತ್ರೀವಾದಗಳನ್ನು ಯುರೋಪಿನ 'ಮಧ್ಯಮವರ್ಗದ ಬಿಳಿ ಹೆಂಗಸರ ಪ್ರಲಾಪ' ಎಂದು ಕಪ್ಪು ಸ್ತ್ರೀವಾದ ಪ್ರಶ್ನಿಸಿತೋ, ಹಾಗೆಯೇ ಭಾರತೀಯ ಸ್ತ್ರೀವಾದಿ ಚಿಂತನೆಯನ್ನು ದಲಿತ ಸ್ತ್ರೀವಾದಿ ವಿಮರ್ಶೆ ಪ್ರಶ್ನಿಸುತ್ತಿದೆ. ದಲಿತ ಮಹಿಳೆಯರ ಪ್ರಶ್ನೆಗಳನ್ನು ಬಿಟ್ಟುಕೊಟ್ಟು 'ಕಟ್ಟಲಾಗುವ ಭಾರತೀಯ ಸ್ತ್ರೀವಾದ ಅಪೂರ್ಣವಷ್ಟೇ ಅಲ್ಲ'; ಅದು ಅರ್ಥಹೀನವಾದ ಪ್ರಯತ್ನವೂ ಹೌದು ಎಂದು ಇದು ವಾದಿಸುತ್ತಿದೆ. ದಲಿತ ಮಹಿಳೆಯರ ಸಮಸ್ಯೆಗಳೇ ನಿಜವಾದ ಸಾಮಾಜಿಕ-ಸಾಂಸ್ಕೃತಿಕ ಸಮಸ್ಯೆಗಳು. ಏಕೆಂದರೆ, ದಲಿತೇತರ ಮಹಿಳೆಯರ ಸಾಮಾಜಿಕ ಸಮಸ್ಯೆಗಳು ಪ್ರಧಾನವಾಗಿ ಲೈಂಗಿಕ ಮೂಲದ ಸಮಸ್ಯೆಗಳು. ಅವು ಕನ್ನಡ, ಅಸ್ಪೃಶ್ಯತೆ ಮತ್ತು ಬದುಕಿನ ಆತ್ಮಗೌರವಕ್ಕೆ ಸಂಬಂಧಿಸಿದ ಸಂಪೂರ್ಣ ನಿರಾಕರಣೆಯ ಹಾಗೂ ಅಪಮಾನದ ಪ್ರಶ್ನೆಗಳಷ್ಟು ತೀವ್ರವಾದವುಗಳ ಎನ್ನುವುದು ದಲಿತ ಸ್ತ್ರೀವಾದ ಮುಖ್ಯವಾದ ಮಂಡನೆ. ಇದರ ಸ್ವರೂಪವನ್ನು ಮಾಲಗತ್ತಿ ಅವರ "ಇಂದಿನ ಸಾಂಸ್ಕೃತಿಕ ಸಂದರ್ಭದಲ್ಲಿ ದಲಿತ ಮಹಿಳೆ, ಸ್ತ್ರೀವಾದವನ್ನು, ದಲಿತ ನೆಲೆಯಿಂದ ಪರಿಶೀಲಿಸಿ ಅದಕ್ಕೆ ದಲಿತ ಮಹಿಳಾ ವಾದದ ಸ್ಪರ್ಶವನ್ನು ಕೊಡಬೇಕಾಗಿದೆ. ದಲಿತ ಮಹಿಳೆ ಕೇವಲ ದಲಿತ ಮಹಿಳೆಯಾಗಿ ರೂಪುಗೊಂಡರೆ, ತನ್ನ ಸಮಾಧಿಯನ್ನೂ ಮತ್ತು ತನ್ನ ಸಮಾಜದ ಸಮಾಧಿಯನ್ನು ತಾನೇ ತೋಡಿಕೊಂಡಂತಾಗುತ್ತದೆ. ಆದ್ದರಿಂದ ದಲಿತ ಮಹಿಳಾವಾದವನ್ನು ದೇಶಿ ಸ್ತ್ರೀವಾದವನ್ನಾಗಿ ಪರಿವರ್ತಿಸಿ ಸಮಗ್ರ ನಾರಿನೆಲೆಗಳನ್ನು ಕಂಡುಕೊಳ್ಳುವಂತಾಗಬೇಕು ಎಂದರೆ ದಲಿತ ಮಹಿಳಾವಾದವನ್ನು ಆಂತರಿಕವಾಗಿ ಅರಗಿಸಿಕೊಂಡು ಅದನ್ನೂ ಮೀರಿ ನಿಲ್ಲುವಂತಾಗಬೇಕು ಹಾಗೆಯೇ ಸ್ತ್ರೀವಾದಿಗಳು ದಲಿತ ಸ್ತ್ರೀವಾದದ ಸ್ಪರ್ಶದಿಂದ ಭಾರತೀಕರಣಗೊಳ್ಳುವುದರೊಂದಿಗೆ ಸ್ವತಂತ್ರ ಅಸ್ತಿತ್ವ ಪಡೆದುಕೊಳ್ಳಬೇಕಾಗಿದೆ"[೯] ಎನ್ನುವ ಮಾತುಗಳು ಸ್ಪಷ್ಟವಾಗಿ ಕಟ್ಟಿಕೊಡುತ್ತವೆ. ಈ ದಿಶೆಯಲ್ಲಿ ಭಾರತೀಯ ಸ್ತ್ರೀವಾದಿ ವಿಮರ್ಶೆ ಅಂಬೇಡ್ಕರ್ ಚಿಂತನೆಗಳನ್ನು ತನ್ನ ಚಿಂತನೆಯ ಮುಖ್ಯ ತಾತ್ವಿಕ ನೋಟವಾಗಿ ಮಾಡಿಕೊಳ್ಳಬೇಕು ಎನ್ನುತ್ತಾರೆ ಮಾಲಗತ್ತಿ.

ಈ ಸಂದರ್ಭದಲ್ಲಿ ಎಂ.ಉಷಾ ಅವರು ಸ್ತ್ರೀವಾದ ಕುರಿತು ಹೇಳುವ ಮಾತುಗಳನ್ನು, ಸ್ತ್ರೀವಾದಿ ಪರ್ಯಾಯ ರಾಜಕಾರಣ ಮತ್ತು ಅದು ಎದುರಿಸುತ್ತಿರುವ ಆಂತರಿಕ ಬಿಕ್ಕಟ್ಟಿನ ಸ್ವರೂಪವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಇಲ್ಲಿ ಗಮನಿಸಬಹುದಾಗಿದೆ. ಉಷಾ ಅವರು ಸ್ತ್ರೀವಾದದ ಸ್ವರೂಪವನ್ನು, "ಸ್ತ್ರೀವಾದವು ತನ್ನ ಚಿಂತಾನಾಕ್ರಮದ ಮೂಲಕ, ಬೇರುಬಿಟ್ಟಿರುವ ಲಿಂಗತಾರತಮ್ಯಾಧಾರಿತ ಸಾಂಸ್ಕೃತಿಕ ಸಂದರ್ಭವನ್ನು ವಿದ್ರೋಹಗೊಳಿಸಲು ಪ್ರಯತ್ನಿಸುತ್ತಿದ್ದಂತೆಯೇ ಇನ್ನೊಂದೆಡೆ ಲಿಂಗ ಸಮಾನತೆಯ ಪರ್ಯಾಯ ಸಂಸ್ಕೃತಿಯೊಂದನ್ನು ನಿರ್ಮಿಸುವ ಕನಸನ್ನೂ ಕಾಣುತ್ತದೆ. ಈ ದಿಕ್ಕಿನಲ್ಲಿ ಸಾಂಸ್ಕೃತಿಕ ಸ್ತ್ರೀವಾದವೆಂಬ ಒಂದು ಪಂಥವೇ ಹುಟ್ಟಿಕೊಂಡಿದ್ದು ಅದು ಮರೆಯಾಗಿರುವ, ನಾಶವಾಗಿರುವ, ನಿರ್ಲಕ್ಷ್ಯಕ್ಕೊಳಗಾಗಿರುವ ಮಹಿಳಾ ಸಾಂಸ್ಕೃತಿಕ ಅಂಶಗಳನ್ನು ಹೆಕ್ಕಿ ಪುನರ್‌ರಚಿಸುತ್ತ, ಅದರ ಸಹಯೋಗದೊಂದಿಗೆ ರೂಪುಗೊಳ್ಳುವ ಹೊಸ ಸಾಂಸ್ಕೃತಿಕ ಸಂದರ್ಭಕ್ಕಾಗಿ ಒತ್ತಾಯಿಸುತ್ತದೆ"[೧೦] ಎಂದು

ನಿರೂಪಿಸುತ್ತಾರೆ. ಹಾಗೆಯೇ, ಸಾಂಪ್ರದಾಯಕ ಸ್ತ್ರೀವಾದ ಮತ್ತು ತೀವ್ರವಾದಿ ಸ್ತ್ರೀವಾದಗಳೆರಡರಿಂದಲೂ ಭಿನ್ನವಾದ ಸಾಂಸ್ಕೃತಿಕ ಸ್ತ್ರೀವಾದವು 'ತಾಯ್ತನ' ಹಾಗೂ ಹೆಣ್ಣಿನ ಜೈವಿಕ ವಿಬೇಧವನ್ನೇ ತನ್ನ ಪ್ರಧಾನ ತಾತ್ವಿಕತೆಯನ್ನಾಗಿ ಮಾಡಿಕೊಂಡಿದ್ದನ್ನು ಕುರಿತು ಚರ್ಚಿಸುತ್ತಾರೆ. ಎಂಭತ್ತರ ದಶಕದಿಂದ ದೇಶಿ ಪ್ರೇರಣೆಯ ಮೂಲಕ ಪಾಶ್ಚಾತ್ಯ ಸ್ತ್ರೀವಾದಕ್ಕೆ ಭಿನ್ನವಾಗಿ ರೂಪುಗೊಂಡ ದಲಿತ ಸ್ತ್ರೀವಾದದ ಮಹತ್ವವನ್ನು ಪ್ರಸ್ತಾಪಿಸುತ್ತಾರೆ. ಮೂಲತಃ ಮಹಾರಾಷ್ಟ್ರದಲ್ಲಿ ಪುಲೆ, ಪಂಡಿತ್ ರಮಾಬಾಯಿ ಇವರನ್ನು ಸ್ಫೂರ್ತಿಯಾಗಿ ಸ್ವೀಕರಿಸುವ ಮೂಲಕ ಮೈತಳೆದ ಈ ವಾದವು, "ಕಪ್ಪು ಸ್ತ್ರೀವಾದವು ಪಿತೃಪ್ರಧಾನತೆಯ ಪ್ರಶ್ನೆಯನ್ನು ಜನಾಂಗಬೇಧದೊಂದಿಗೆ ಜೋಡಿಸಿಕೊಂಡಂತೆ ಭಾರತದ ಪಿತೃಪ್ರಧಾನತೆಯ ಪ್ರಶ್ನೆಯನ್ನು ಜಾತಿಬೇಧದೊಂದಿಗೆ ಬೆಸೆಯುತ್ತದೆ. ಸ್ತ್ರೀ ಮತ್ತು ಸ್ತ್ರೀವಾದಗಳೆರಡೂ ಪುರುಷ ಅನ್ಯರಾಜಕಾರಣದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆಯನ್ನು ಶೋಧಿಸುತ್ತ ಸ್ತ್ರೀವಾದದ ಸಾಂಸ್ಕೃತಿಕ ನೆಲೆಗಿಂತ ರಾಜಕೀಯ ನೆಲೆಯನ್ನು ಮುಂಚೂಣಿಗೆ ತರುತ್ತದೆ. ಹಾಗಾಗಿ ಇದು ಮೇಲೆ ಹೇಳಿದಂತೆ ಭಾರತೀಯ ಸ್ತ್ರೀವಾದದಲ್ಲಾದ ಭಿನ್ನ ಉದಾಹರಣೆಯ ಪಲ್ಲಟವಲ್ಲ. ಬದಲಿಗೆ ಸೈದ್ಧಾಂತಿಕ ಖಚಿತತೆ, ಸ್ತ್ರೀವಾದದ ಸೈದ್ಧಾಂತಿಕತೆಯೊಂದನ್ನು ಭಾರತದ ಸಂದರ್ಭದಲ್ಲಿ ಕಟ್ಟಿಕೊಳ್ಳುವುದಾದರೆ ಅದರ ಸ್ಟ್ಯಾಂಡ್‌ಪಾಯಿಂಟ್ ಏನಾಗಿರಬೇಕು ಎಂಬ ಸೈದ್ಧಾಂತಿಕ ಎಚ್ಚರದ ನೆಲೆ"[೧೧] ಯಾಗಿದೆ ಎಂದು ಇದರ ವಿಶಿಷ್ಟ ಸ್ವರೂಪವನ್ನು ವಿವರಿಸುತ್ತಾರೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರ್ಯಾಯ ರಾಜಕಾರಣದ ಪ್ರಯತ್ನಗಳ ಈ ಆಂತರಿಕ ಸಂಘರ್ಷದ ಸಂಕೀರ್ಣ ಸನ್ನಿವೇಶಕ್ಕೆ ಎದುರಾಗಿರುವ ಜಾಗತೀಕರಣ ಹಾಗೂ ಅದರ ಅನುಚರ ವಿದ್ಯಮಾನವಾದ ಕೋಮುವಾದ ತಂದೊಡ್ಡುತ್ತಿರುವ ತೀವ್ರವಾದ ಪರಿಣಾಮಗಳನ್ನು ಕುರಿತು ಸಹ ಇಲ್ಲಿಯೇ ವಿವೇಚಿಸಬಹುದು.

ಜಾಗತೀಕರಣ ಮತ್ತು ಆಧುನಿಕೋತ್ತರ ಚಿಂತನೆಗಳು ಪ್ರತಿಪಾದಿಸುತ್ತಿರುವ ಹಲವು ಬೌದ್ಧಿಕ ಪರಿಕಲ್ಪನೆಗಳು ಜಾಗತಿಕ ಏಕರೂಪೀಕರಣ ಕ್ರಮಗಳನ್ನು ಮಂಡಿಸುತ್ತಿವೆ. ಹಾಗೆ ನೋಡುವುದಾದರೆ, ಜಾಗತೀಕರಣದ ಐಡಿಯಾಲಜಿಯಾದ ಆಧುನಿಕೋತ್ತರ ಚಿಂತನೆ ತೃತೀಯ ರಾಷ್ಟ್ರಗಳಲ್ಲಿ ಮೂಡುತ್ತಿರುವಂಥ ಪರ್ಯಾಯ ರಾಜಕಾರಣದ ಸಾಧ್ಯತೆಗಳನ್ನು ಚಿವುಟಿ ಹಾಕುವ ಗುಪ್ತವಾದ ಉದ್ದೇಶವನ್ನು ಕೂಡಾ ಹೊಂದಿದೆ. ಜಾಗತೀಕರಣದ ವಿದ್ಯಮಾನಗಳಾದ ಸರಕು ಸಂಸ್ಕೃತಿ, ವಾಣಿಜ್ಯ ಸಂಸ್ಕೃತಿ ಮತ್ತು ಇಂಗ್ಲಿಷ್ ಶಿಕ್ಷಣ ಕ್ರಮಗಳಂಥ ವಿಚಾರಗಳು ಸ್ಥಳೀಯ ಸಾಂಸ್ಕೃತಿಕ ಪರಂಪರೆಗಳು ಹಾಗೂ ಜೀವನ ಕ್ರಮಗಳು ಒಳಗೊಂಡಿದ ವೈವಿಧ್ಯತೆಗಳನ್ನು ನಾಶಗೊಳಿಸುತ್ತಿವೆ. ಆರ್ಥಿಕ ಪರಿಭಾಷೆಗಳು ಮತ್ತು ಅಭಿವೃದ್ಧಿ ಪರಿಭಾಷೆಗಳು, ಒಂದು ಭೌಗೋಳಿಕ ಹಾಗೂ ಭಾಷಿಕ ಪರಿಸರದ ಬಹು ಸಂಸ್ಕೃತಿಗಳ ಅನೇಕ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯವಾದ ಚಹರೆಗಳನ್ನು ನಾಶಪಡಿಸುವ ಮೂಲಕ ಏಕರೂಪಿ ಸಂಸ್ಕೃತಿ ಸನ್ನಿವೇಶವನ್ನು ನಿರ್ಮಿಸುವ ಪರಿಭಾಷೆಗಳಾಗಿ ಕ್ರಿಯಾತ್ಮಕವಾಗಿವೆ. ಇವುಗಳನ್ನು ಕುರಿತ ಆಳವಾದ

ಚಿಂತನೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಗತಿಪರ ರಾಜಕೀಯಾನುಸಂಧಾನದಲ್ಲಿ ಹೆಚ್ಚು ಮುನ್ನೆಲೆಗೆ ಬರುತ್ತಿದೆ. ಇದು ಕನ್ನಡದ ದಲಿತ ರಾಜಕಾರಣ, ಸೆಕ್ಯಲರ್ ರಾಜಕಾರಣ ಮತ್ತು ಸ್ತ್ರೀವಾದಿ ರಾಜಕಾರಣಗಳ ಮೂಲ ತಾತ್ವಿಕತೆಯಾದ ರಾಜಕಾರಣದ ಮಾನವೀಕರಣದ ಪರಿಭಾಷೆಯ ಮೂಲಕ ಪ್ರತಿಪಾದಿತವಾಗಿದೆ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರ್ಯಾಯ ರಾಜಕಾರಣದ ವಿವಿಧ ಪ್ರಯತ್ನಗಳು ಇದನ್ನು ಬೇರೆಬೇರೆ ಕ್ರಮಗಳಲ್ಲಿ ಅನುಸಂಧಾನ ಮಾಡುತ್ತಿವೆ. ಇದು ಮುಖ್ಯವಾದ ಎರಡು ನೆಲೆಗಳಲ್ಲಿ ಪ್ರಕಟವಾಗಿದೆ. ಅವುಗಳೆಂದರೆ, ಅ. ಆತಂಕಿತ ನೆಲೆ ಮತ್ತು ಆ. ಎಚ್ಚರದ ನೆಲೆ.

ಇವುಗಳ ಸ್ವರೂಪವನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕೆಲವು ಮಹತ್ವದ ಬರವಣಿಗೆಗಳ ಚಿಂತನೆಗಳು ಒಳಗೊಂಡಿರುವ ನೈತಿಕ ಕಾಳಜಿಗಳನ್ನು ಗಮನಿಸುವ ಮೂಲಕ ಗುರುತಿಸಬಹುದು.

೭.೪ ಆತಂಕಿತ ನೆಲೆ

ಕನ್ನಡ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯು, ಕಳೆದ ಶತಮಾನದ ಕೊನೆಯ ದಶಕದಿಂದ ಆಧುನಿಕೋತ್ತರ ಚಿಂತನೆ ಮತ್ತು ಅದು ಪ್ರತಿಪಾದಿಸಿ ಸಮರ್ಥಿಸುತ್ತಿರುವ ಜಾಗತೀಕರಣ ವಿದ್ಯಮಾನ ಕುರಿತು ತೀವ್ರವಾಗಿ ಪ್ರತಿಕ್ರಿಯಿಸುತ್ತಿದೆ. ಇದು, ವ್ಯಾಪಕ ಸ್ವರೂಪದಲ್ಲಿ ಪಲ್ಲಟೀಕರಣಗೊಳ್ಳುತ್ತಿರುವ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಶ್ನೆಗಳ ಸಂದರ್ಭದಲ್ಲಿ ಮಹಿಳೆ, ಸಾಹಿತ್ಯ, ಸಂಸ್ಕೃತಿ ಹಾಗೂ ಜನ ಸಾಮಾನ್ಯರ ಬದುಕಿನ ಅಸ್ತಿತ್ವದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಕುರಿತ ಪ್ರಾಮಾಣಿಕವಾದ ತಲ್ಲಣಗಳಿಂದ ಹುಟ್ಟಿದೆ. ಮುಂದಿನ ಎರಡು ಉಲ್ಲೇಖಗಳು ಇದರ ಸ್ವರೂಪವನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ.

ಅ. "ಸಮಾಜದ ಅತ್ಯಂತ ಕೆಳಗಿನ ನೆಲೆಯವರೂ ಸೇರಿದಂತೆ ಎಲ್ಲರಿಗೂ ನ್ಯಾಯ, ಸ್ವಾತಂತ್ರ್ಯ, ಸಮಬಾಳು ಬಾಳುವ ಅವಕಾಶ, ಸವಲತ್ತುಗಳು ದೊರಕಬೇಕೆಂಬ ಆದರ್ಶವೇ ಕನ್ನಡದ ಸಾಹಿತ್ಯ ಚಳವಳಿಗಳ ಬೆನ್ನೆಲುಬು. ಸೀಮಾಂತದ ಜನರ ಬದುಕಿನ ಅನುಭವಗಳಿಗೆ ಸಾಹಿತ್ಯವು ಮಾಧ್ಯಮವಾಗುತ್ತ ಬಂದಂತೆ ಈ ಹೊಸದಾದ ಅದುವರೆಗೆ ಅಪರಿಚಿತವಾದದ್ದರಿಂದಲೇ ರೋಚಕವೂ ಆಗುತ್ತ ಬಂದ ಅನುಭವ ವರ್ಣನೆಗಳ ನಡುವೆ ಯಾಜಮಾನ್ಯ ಬಂಡವಾಳಶಾಹಿ ಪುರೋಹಿತಶಾಹಿಗಳ ವಿರುದ್ಧವಾದ ಪ್ರತಿಭಟನೆಯ ಕಾವು ಕುಗ್ಗಿದೆ, ಸಾಮ್ರಾಜ್ಯಶಾಹಿಯನ್ನು ಪ್ರತಿರೋಧಿಸುವಾಗಲೂ ಜಾಗತೀಕರಣ ಪ್ರಕ್ರಿಯೆಯ ಕಬಂಧ ಬಾಹು ಕತ್ತರಿಸಿಹೋಗಿಲ್ಲ. ವಿಮೋಚನೆಯ ಪ್ರಶ್ನೆ ಹೊಸ ಬಗೆಯಿಂದ ಈಗ ಮತ್ತೆ ಕೇಳಿಕೊಳ್ಳ ಬೇಕಾದದ್ದಾಗಿದೆ".

– ಬಿ.ಎನ್. ಸುಮಿತ್ರಾಬಾಯಿ', 'ನಿರಂತರ' ಕೃತಿಯಿಂದ

ಆ. "ಬಂಡವಾಳಶಾಹಿ ಆರ್ಥಿಕ ನೀತಿಯ ಒಂದು ಭಾಗವಾಗಿ ವ್ಯಾಪಿಸುತ್ತಿರುವ ಕೋಮುವಾದ ಹೆಣ್ಣನ್ನು ಕೋಮಿನ ಆಸ್ತಿ ಮತ್ತು ಗುರುತು ಎಂದು ತಿಳಿಯುತ್ತದೆ. ಮತೀಯವಾದ ಮತ್ತು

ರಾಜಕಾರಣ ಒಂದಾಗಿ ಸಾಮಾನ್ಯರ ಸಂವೇದನೆಯನ್ನು ಹತ್ತಿಕ್ಕುತ್ತಿದೆ. ಎಲ್ಲ ಜನಪರ ಚಳವಳಿಗಳಂತೆ ಮಹಿಳಾ ಚಳವಳಿಗಳೂ ಈ ಕೊನೆಯ ದಶಕಗಳಲ್ಲಿ ಛಿದ್ರಗೊಂಡವು. ಮತೀಯವಾದ, ಜಾತಿ ರಾಜಕಾರಣ ಮತ್ತು ಕೊಳ್ಳುಬಾಕ ಸಂಸ್ಕೃತಿಗಳು ಮಹಿಳೆಯನ್ನು ಬೇರೆ ಬೇರೆ ಬ್ಯಾನರ್‌ಗಳಡಿ ಹಂಚಿಡುವ ಪ್ರಯತ್ನ ಮಾಡುತ್ತವೆ. ಪಿತೃವ್ಯವಸ್ಥೆಯೊಳಗಿನ ಮೌಲ್ಯಗಳಿಂದ ಇಡಿಯಾಗಿ ಹೊರಬರದ ಮಹಿಳಾ ಸಂವೇದನೆಯನ್ನು ಬಹಳ ತೀವ್ರವಾಗಿ ಪುರುಷಪ್ರಧಾನ ಕೋಮುವಾದ ತನ್ನ ಹಿಡಿತದಲ್ಲಿ ತೆಗೆದುಕೊಳ್ಳುತ್ತಿದೆ. ಇಂತಹ ಅಸ್ವಸ್ಥ ಸಮಾಜವನ್ನು ಮುಖಾಮುಖಿಗೊಳಿಸಿಕೊಳ್ಳುವ ಬಹುದೊಡ್ಡ ಜವಾಬ್ದಾರಿಯನ್ನು ಮಹಿಳಾ ಅಭಿವ್ಯಕ್ತಿ ನಿರ್ವಹಿಸಬೇಕಿದೆ".

– ವಿನಯಾ, 'ನಿರಂತರ' ಕೃತಿಯಿಂದ

೭.೫ ಎಚ್ಚರದ ನೆಲೆ

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕೀಯಾನುಸಂಧಾನವು ಆಧುನಿಕೋತ್ತರ ಚಿಂತನೆಯ ಸ್ವರೂಪವನ್ನು ಮತ್ತು ಅದರ ಸಮರ್ಥನೆಯ ರಾಜಕಾರಣವನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿದೆ. ಅಷ್ಟೇ ಅಲ್ಲದೆ ಅದನ್ನು ಹೇಗೆ ಅನುಸಂಧಾನ ಮಾಡಬೇಕು ಎನ್ನುವ ಎಚ್ಚರವನ್ನು ಸಹ ಗಳಿಸಿಕೊಳ್ಳುತ್ತಿದೆ. ಈ ಎಚ್ಚರವು ಜಾಗತಿಕರಣ, ಕೋಮುವಾದ ಮತ್ತು ಮತೀಯ ರಾಜಕಾರಣದ ಶಕ್ತಿಗಳ ನಡೆಯನ್ನು ಹಾಗೂ ಭಾಷೆಯನ್ನು ಖಚಿತವಾಗಿ ಗುರುತಿಸುವ ಮೂಲಕ ಹುಟ್ಟಿರುವ ಪ್ರಜ್ಞೆಯಾಗಿದೆ. ಮುಂದಿನ ಎರಡು ಉಲ್ಲೇಖಗಳು ಇದನ್ನು ಸ್ಪಷ್ಟವಾಗಿ ವಿವರಿಸುತ್ತವೆ.

ಅ. "ವಸಾಹತುಶಾಹಿ ಕಾಲಘಟ್ಟದಲ್ಲಿ ಯಾವ ಯಾವ ಸ್ವರೂಪದಲ್ಲಿ ಪ್ರತಿರೋಧಗಳು ಬಂದಿದ್ದವು ಎಂಬುದರ ಗಂಭೀರವಾದ ಗುಣಪಾಠ ಇಂದಿನ ನವವಸಾಹತುಶಾಹಿಯಾಗಿದೆ. ಆ ಚಾರಿತ್ರಿಕ ಅನುಭವದ ಶ್ರೀಮಂತ ಹಿನ್ನೆಲೆಯನ್ನು ಸರಿಯಾಗಿ ದುರುಪಯೋಗ/ ಸದುಪಯೋಗಪಡಿಸಿಕೊಳ್ಳುವುದರ ಮೂಲಕ ನವವಸಾಹತುಶಾಹಿ ಇಂದು ಮುಂದುವರಿಯುತ್ತಿದೆ. ಇದನ್ನು ವಿರೋಧಿಸುವವರು, ವಿರೋಧಿಸಲು ಬೇಕಾದ ಹತಾರಗಳನ್ನು ತಮ್ಮ ಕುಲುಮೆಯಿಂದಲೇ ತಯಾರಿಸಿಕೊಳ್ಳುತ್ತಿದ್ದೇವೆ ಎಂದು ನಂಬಿದ್ದಾರೆ ಅಥವಾ ಹಾಗೆ ನಂಬಿಸಲಾಗಿದೆ. ಆದರೆ ವ್ಯಂಗ್ಯವೇನೆಂದರೆ, ನವವಸಾಹತುಶಾಹಿ ತಾನೇ ಮುಂದಾಗಿ, ತನ್ನನ್ನು ವಿರೋಧಿಸಲು ಬೇಕಾದ ಹತಾರಗಳನ್ನು ತಾನೇ ಸೃಷ್ಟಿಸಿ ಕೊಡುತ್ತಿದೆ. ನವವಸಾಹತುಶಾಹಿ ಲೂಟಿಯ ಸಂಕೀರ್ಣ ಜಾಲದಿಂದ ಕೇವಲ 'ಜಾಗತೀಕರಣ' ಒಂದನ್ನು ಪ್ರತ್ಯೇಕಿಸಿ ಚರ್ಚೆ ನಡೆಸುತ್ತಿರುವುದು ಇಂಥದರಲ್ಲಿ ಒಂದಾಗಿದೆ".

– ಬಿ.ಎಂ. ಪುಟ್ಟಯ್ಯ, 'ಕಾಲ್ನಡಿಗೆ' ಕೃತಿಯಿಂದ

ಆ. "... ಒಂದು ವೈರುಧ್ಯದ ವಿಚಿತ್ರ ಸನ್ನಿವೇಶದಲ್ಲಿ ನಾವು ಭಾರತೀಯರು ಬದುಕುತ್ತಿದ್ದೇವೆ. ಕಾಸ್ಮೋಪಾಲಿಟನ್ ಅಥವಾ ಗ್ಲೋಬಲ್ ವಿಲೇಜ್ ಎನ್ನುವ ವಿಶ್ವ ಸಂಸ್ಕೃತಿಯೊಂದು ರೂಪುಗೊಳ್ಳುತ್ತಿದೆ. ಅದು ಸಂಸ್ಕೃತಿಗಳ ಅನನ್ಯತೆಯನ್ನು ನಾಶ ಮಾಡುತ್ತಿದೆ ಎನ್ನುವ ಚರ್ಚೆಗಳು

ಇಂದು ನಡೆಯುತ್ತಿವೆ. ಜಾಗತೀಕರಣದ ಮಾನಸ ಪುತ್ರರಾದ ಬಹುರಾಷ್ಟ್ರೀಯ ಕಂಪನಿಗಳು ಇಂಥ ಸಮವಸ್ತ್ರ ಸಂಸ್ಕೃತಿಯ ವಾಹಕಗಳು ಎನ್ನುವ ಅಭಿಪ್ರಾಯ ದಟ್ಟವಾಗಿ ನೆಲೆಗೊಳ್ಳುತ್ತಿದೆ. ಸಂಸ್ಕೃತಿಯ ವಿಶಿಷ್ಟ ಅಂಶಗಳನ್ನು ಆಳವಾಗಿ ಅಧ್ಯಯನ ದೇಸಿ ಸಂಸ್ಕೃತಿಗಳ ಸ್ವರೂಪಗಳನ್ನು ಗುರುತಿಸುವ ಶೈಕ್ಷಣಿಕ ಉದ್ದೇಶದ್ದು ಮಾತ್ರವಲ್ಲ ಅದು ಈ ಕಾಲದ ಅಗತ್ಯ ಎನ್ನುವ ನಿಲುವು ಸಾಕಷ್ಟು ಪ್ರಚಲಿತಗೊಳ್ಳುತ್ತಿದೆ.

ಇದಕ್ಕೆ ವಿರುದ್ಧವಾಗಿ ಭಾರತೀಯ ಸಂಸ್ಕೃತಿಯ, ಸಮುದಾಯದ ವಿಶಿಷ್ಟ ಅಂಶಗಳನ್ನು ರಕ್ಷಿಸುವುದೇ ಮುಖ್ಯ ಉದ್ದೇಶ ಎನ್ನುವ ಮುಖವಾಡ ಹಾಕಿಕೊಂಡ ಕೋಮುವಾದ ಶಕ್ತಿಗಳು ತಮ್ಮ ವಿನಾಶಕಾರಿ ಶಕ್ತಿಯ ವಿರಾಟ್ ಪ್ರದರ್ಶನ ಮಾಡುತ್ತಿವೆ. ಇಲ್ಲಿನ ದುರಂತ ಹಾಗೂ ವಿರೋಧಾಭಾಸದ ಸಂಗತಿಯೆಂದರೆ ಸಂಸ್ಕೃತಿ ಚಿಂತಕರು ಬಳಸುವ ಪರಿಕಲ್ಪನೆಗಳನ್ನೇ ಈ ಕೋಮುವಾದಿ ಶಕ್ತಿಗಳು ಬಳಸುತ್ತಿವೆ ಎನ್ನುವುದು. ಶುದ್ಧಾಂಗವಾಗಿ ಸಂಸ್ಕೃತಿಯ ಅಂತಃಸತ್ವಕ್ಕೆ ಸಂಬಂಧಪಟ್ಟ ದೇಸಿ ಪರಿಕಲ್ಪನೆಯನ್ನು ಇಂದು ದುಷ್ಟಶಕ್ತಿಗಳು ಸ್ವದೇಶಿ, ದೇಶಭಕ್ತಿ ಈ ಎಲ್ಲ ಹೆಸರುಗಳಲ್ಲಿ ಬಳಸುತ್ತಾ ಹೋಗುತ್ತಾರೆ".

– ಎಂ.ಎಸ್. ಆಶಾದೇವಿ, 'ಸ್ತ್ರೀಮತವನುತ್ತರಿಸಲಾಗದೆ?' ಕೃತಿಯಿಂದ

೭.೬ ಅಧ್ಯಾಯದ ಫಲಿತಗಳು

'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣ ಆಯಾಮಗಳ' ಚರ್ಚೆಯಿಂದ ಕಂಡುಕೊಂಡ ಮುಖ್ಯವಾದ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಸಾಹಿತ್ಯ ವಿಮರ್ಶೆ ಸಂದರ್ಭದಲ್ಲಿ ಬಳಸುವ 'ರಾಜಕಾರಣ'ದ ಪರಿಭಾಷೆ ಮತ್ತು ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳ ಸಂದರ್ಭಗಳಲ್ಲಿ ಬಳಸುವ 'ರಾಜಕಾರಣ'ದ ಪರಿಭಾಷೆಗಳ ಅರ್ಥಗಳ ನಡುವೆ ಮೂಲಭೂತವಾದ ವ್ಯತ್ಯಾಸ ಮತ್ತು ಭಿನ್ನತೆಗಳಿವೆ. ಹಾಗೆಯೇ ಪರಸ್ಪರ ದ್ವಂದ್ವಾತ್ಮಕವಾದ ಸಂಬಂಧ ಸಹ ಇದೆ.

ಆ. ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ 'ರಾಜಕಾರಣ'ವು ಮುಖ್ಯವಾದ ಎರಡು ರೂಪಗಳಲ್ಲಿ ಹುಟ್ಟುತ್ತದೆ. ಒಂದು ಭಾಷಿಕ ಸಂಸ್ಕೃತಿಯ ಮೇಲೆ ಹೊರಗಿನ ಶತ್ರುವೊಂದು ಆಕ್ರಮಣ ಮಾಡಿದಾಗ ಸಂಸ್ಕೃತಿ ರಕ್ಷಣೆಯ ಪ್ರಶ್ನೆಯ ರೂಪದಲ್ಲಿ ಹುಟ್ಟುವ 'ರಾಜಕಾರಣ' ಅಂಥ ಒಂದು ರೂಪ. ಹಾಗೆಯೇ, ಅದೇ ಭಾಷಿಕ ಸಂಸ್ಕೃತಿಯ ಪ್ರತಿಷ್ಠಿತ ಯಾಜಮಾನ್ಯಶಕ್ತಿಗಳು ಅಂಚಿನ ಹಾಗೂ ಅಧೀನ ರಚನೆಗಳ ಮೇಲೆ ಯಾಜಮಾನ್ಯ ಸಾಧಿಸಲು ಮಾಡುವ ಪ್ರಯತ್ನಗಳಿಗೆ ಅವು ಪ್ರತಿರೋಧ ತೋರಿಸುವ ರೂಪದಲ್ಲಿ ಹುಟ್ಟುವ ರಾಜಕಾರಣ ಅಂಥ ಇನ್ನೊಂದು ರೂಪ. ಸಾಮಾನ್ಯವಾಗಿ ಈ ಎರಡು ರೂಪಗಳು ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಮುಖ್ಯವಾದ ರಾಜಕೀಯ ಪ್ರಶ್ನೆಗಳನ್ನು ರೂಪಿಸುತ್ತವೆ.

ಇ. ನವ್ಯೋತ್ತರ ಸಂದರ್ಭದಲ್ಲಿ ಮುನ್ನೆಲೆಗೆ ಬಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪುಗೊಳ್ಳುವಿಕೆಯ ಹಿನ್ನೆಲೆಯಲ್ಲಿ ಇರುವ ಹಲವು ಮುಖ್ಯವಾದ ಕಾರಣಗಳಲ್ಲಿ 'ರಾಜಕಾರಣ' ಸಹ ಒಂದು ಪ್ರಮುಖ ಕಾರಣವಾಗಿದೆ. ಅಷ್ಟೇ ಅಲ್ಲದೆ ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಂದು ಪ್ರಮುಖ 'ಆಯಾಮ'ವಾಗಿ ಸಹ ವಿಕಾಸಗೊಂಡಿದೆ.

ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಆಯಾಮದ ಸಂದರ್ಭದಲ್ಲಿ 'ರಾಜಕೀಯ' ಎನ್ನುವ ಪರಿಭಾಷೆಗೆ ವ್ಯಾಪಕವಾದ ಅರ್ಥಸ್ತರವಿದೆ. 'ರಾಜಕೀಯ' ಎನ್ನುವುದು, ನಿರ್ದಿಷ್ಟ ಅಧಿಕಾರ ಸಿಗಲಿ ಅಥವಾ ಸಿಗದಿರಲಿ ನಿರಂತವಾಗಿ ಉಳಿದೆಲ್ಲದ್ದರ ಅಥವಾ ಉಳಿದವರೆಲ್ಲರ ಮೇಲೆ ಶಾಶ್ವತವಾದ ಮತ್ತು ಪ್ರಬಲವಾದ ನಿಯಂತ್ರಣ ಹೊಂದಲು ಮಾಡುವ ವ್ಯವಸ್ಥಿತ ಪ್ರಯತ್ನವಾಗಿರುತ್ತದೆ. ಇದು ಪ್ರಧಾನವಾದ್ದೊಂದು ಉಳಿದದ್ದನ್ನೆಲ್ಲಾ ತನ್ನ ಅಧೀನವನ್ನಾಗಿಸಿಕೊಳ್ಳಲು ನಡೆಸುವ ಸಂಘಟಿತ ಕ್ರಿಯೆ. ತಾನೇ ಬಲಿಷ್ಠ ಶಕ್ತಿಯಾಗಿ ರೂಪುಗೊಳ್ಳಲು ಮತ್ತು ನಿರಂತರವಾಗಿ ಹಾಗೆಯೇ ಮುಂದುವರಿಯಲು ಅನುಸರಿಸುವ ಕಾರ್ಯತಂತ್ರಗಳ ಹಾಗೂ ಕಾರ್ಯಾಚರಣೆಗಳ ಮೊತ್ತ. ಹಾಗೆಯೇ ಇವೆಲ್ಲವುಗಳ ವಿರುದ್ಧ ಅಧೀನ ರಚನೆಗಳು ತಮ್ಮ ಅಸ್ತಿತ್ವ, ಹಕ್ಕುಗಳು ಮತ್ತು ಅನನ್ಯತೆಗಳ ಸಲುವಾಗಿ ನಿರಂತರವಾಗಿ ವ್ಯಕ್ತಪಡಿಸುವ ಪ್ರತಿರೋಧಗಳ ಹಾಗೂ ಪ್ರತಿಭಟನೆಗಳ ನಿರಂತರವಾದ ವಿದ್ಯಮಾನ.

ಉ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ರಾಜಕಾರಣದ ಆಯಾಮದ' ಸಂದರ್ಭದಲ್ಲಿ 'ರಾಜಕೀಯಾನುಸಂಧಾನ' ಎನ್ನುವ ಪರಿಭಾಷೆಗೆ ನಿರ್ದಿಷ್ಟವಾದ ಅರ್ಥವಲಯವಿದೆ. 'ರಾಜಕೀಯಾನುಸಂಧಾನ' ಎನ್ನುವುದು 'ರಾಜಕೀಯ ಕ್ರಿಯೆ'ಯ ಮೂಲಕ ಅಧಿಕಾರ ಪಡೆಯುವುದಲ್ಲಿ ಯಶಸ್ವಿಯಾದ ಯಾಜಮಾನ್ಯಶಕ್ತಿಯು ತನ್ನ ಅಧೀನ ಅಥವಾ ಅಂಚಿನ ವ್ಯಕ್ತಿಗಳ, ಗುಂಪುಗಳ ಹಾಗೂ ಸಮುದಾಯಗಳ ಮೇಲೆ ಶಾಶ್ವತ ನಿಯಂತ್ರಣ ಸಾಧಿಸುವುದಕ್ಕಾಗಿ ರೂಪಿಸುವ ಬಹುರೂಪಿ ಕಾರ್ಯತಂತ್ರಗಳ ಮತ್ತು ಕಾರ್ಯಾಚರಣೆಗಳ ವಿಧಾನ. ಹಾಗೆಯೇ ಇಂಥ ವಿಧಾನಕ್ಕೆ ವಿರುದ್ಧವಾಗಿ ಅಂಚಿನ ಅಥವಾ ದಮನಿತ ರಚನೆಗಳು ಹಾಗೂ ವ್ಯವಸ್ಥೆಗಳು ಪ್ರತಿಯಾಗಿ ರೂಪಿಸುವ ಪ್ರತಿರೋಧಾತ್ಮಕ ಕಾರ್ಯತಂತ್ರಗಳ ಮತ್ತು ಕಾರ್ಯಾಚರಣೆಗಳ ಪ್ರತಿವಿಧಾನಗಳ ರೂಪದ ನಿರಂತವಾದ ವಿದ್ಯಮಾನ.

ಊ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ರಾಜಕಾರಣ' ಆಯಾಮದ ಸಂದರ್ಭದ 'ರಾಜಕೀಯ ಕ್ರಿಯೆ' ಹಾಗೂ 'ರಾಜಕೀಯಾನುಸಂಧಾನ'ದ ವಿದ್ಯಮಾನಗಳ ಒಟ್ಟು ರೂಪವು, ಕನ್ನಡ ಸಾಂಸ್ಕೃತಿಯ ವಿಮರ್ಶೆಯ 'ಸಾಂಸ್ಕೃತಿಕ ರಾಜಕಾರಣದ ವಿದ್ಯಮಾನ'ವಾಗಿದೆ. ಸಾಂಸ್ಕೃತಿಕ ರಾಜಕಾರಣವು ಸಾಹಿತ್ಯ

ವಿಮರ್ಶೆ ಸಂದರ್ಭದ ರಾಜಕೀಯ ಪ್ರಶ್ನೆಗಳನ್ನು ಸಂಸ್ಕೃತಿ ಸಂದರ್ಭದ ದ್ವಂದ್ವಾತ್ಮಕವಾದ ಹಾಗೂ ಸಂಕೀರ್ಣಾತ್ಮಕವಾದ ಪ್ರಶ್ನೆಗಳನ್ನಾಗಿ ಪರಿವರ್ತಿಸಿದೆ.

ಋ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಂಸ್ಕೃತಿಕ ರಾಜಕಾರಣವು ಮುಖ್ಯವಾದ ಎರಡು ಆಯಾಮಗಳಲ್ಲಿ ಪ್ರಕಟವಾಗಿದೆ. ಬಲಪಂಥೀಯ ಸೈದ್ಧಾಂತಿಕ ವಿಚಾರಧಾರೆಯ 'ಪ್ರತಿಗಾಮಿ ರಾಜಕೀಯಾನುಸಂಧಾನ' ಅಂಥ ಒಂದು ಆಯಾಮ. ಕನ್ನಡ ಸಾಹಿತ್ಯದ ಮಾನವತಾವಾದಿ ಪರಂಪರೆಯ 'ಪ್ರಗತಿಪರ ರಾಜಕೀಯಾನುಸಂಧಾನ' ಅಂಥ ಇನ್ನೊಂದು ಆಯಾಮ.

ೠ. ಚಾರಿತ್ರಿಕವಾಗಿ, ಕಳೆದ ಶತಮಾನದ ತೊಂಭತ್ತರ ದಶಕದ ದೇಶದ ರಾಜಕೀಯ, ಆರ್ಥಿಕ ಮತ್ತು ಮತೀಯ ವಿದ್ಯಮಾನಗಳಿಗೂ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರತಿಗಾಮಿ ರಾಜಕೀಯಾನು ಸಂಧಾನ'ದ ಆಯಾಮಕ್ಕೂ ನೇರವಾದ ಸಂಬಂಧವಿದೆ. ತಾತ್ವಿಕವಾಗಿ, ಸಮಕಾಲೀನ ಸಂದರ್ಭದ ದೇಶದ ಬಹುಮುಖ್ಯ ಸಮಸ್ಯೆಗಳಾದ ಕೋಮುವಾದ, ಮತೀಯವಾದ, ಮೂಲಭೂತವಾದ ಮತ್ತು ಹಿಂಸಾವಾದಗಳಿಗೂ ಹಾಗೂ ನವವಸಾಹತುಶಾಹಿಯ ಆಧುನಿಕೋತ್ತರ ಚಿಂತನೆಯ ಪರಿಕಲ್ಪನೆಗಳಿಗೂ ನೇರವಾದ ಸಂಬಂಧವಿದೆ. ಇಂದಿನ, ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ಬೌದ್ಧಿಕ ಚಟುವಟಿಕೆ ಈ ಪ್ರಸ್ಥಾನದ ಪರಿಕಲ್ಪನೆಗಳ ಬಳುವಳಿ. ಇದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರತಿಗಾಮಿ ರಾಜಕೀಯಾನುಸಂಧಾನ' ಹೆಚ್ಚು ವ್ಯಾಪಕತೆ ಹಾಗೂ ತೀವ್ರತೆ ಪಡೆದುಕೊಳ್ಳುತ್ತಿರುವುದರ ಕುರಿತ ಮುಖ್ಯವಾದ ನಿದರ್ಶನವಾಗಿದೆ.

ಎ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರತಿಗಾಮಿ ರಾಜಕೀಯಾನುಸಂಧಾನ'ದ ಆಯಾಮವು, 'ಚರಿತ್ರೆಯ ವರ್ತಮಾನೀಕರಣ' ಹಾಗೂ 'ವರ್ತಮಾನದ ಚರಿತ್ರೀಕರಣ'ದ ಪರಿಕಲ್ಪನೆಗಳ ಮೂಲಕ ಕನ್ನಡ ಸಾಹಿತ್ಯ, ಪರಂಪರೆ ಮತ್ತು ಪಠ್ಯಗಳನ್ನು ವಿಶ್ಲೇಷಿಸುವ ಮತ್ತು ಮತೀಯ ರಾಜಕಾರಣದ ಉದ್ದೇಶದ ಕೃತಿಗಳನ್ನು ಸಮರ್ಥಿಸುವ ಬಲಪಂಥೀಯ ರಾಜಕಾರಣದಲ್ಲಿ ನಿರತವಾಗಿದೆ.

ಏ. ಚಾರಿತ್ರಿಕವಾಗಿ ಕಳೆದ ಶತಮಾನದ ಎಪ್ಪತ್ತರ ದಶಕದ ಸಂದರ್ಭದ ಕರ್ನಾಟಕದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಹಿತ್ಯದ ಚಳವಳಿಗಳ ವಿದ್ಯಮಾನಗಳಿಗೂ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರಗತಿಪರ ರಾಜಕೀಯಾನುಸಂಧಾನ'ದ ಆಯಾಮಕ್ಕೂ ನೇರವಾದ ಸಂಬಂಧವಿದೆ. ತಾತ್ವಿಕವಾಗಿ ಜಾತಿವಾದ, ಲಿಂಗಬೇಧವಾದ, ಕೋಮುವಾದ, ಮತೀಯವಾದ, ಮೂಲಭೂತವಾದ, ಹಿಂಸಾವಾದಗಳಿಗೂ ಹಾಗೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪರ್ಯಾಯ ಚಿಂತನೆಗಳ ಪರಿಕಲ್ಪನೆಗಳಿಗೂ ನೇರವಾದ ಸಂಬಂಧವಿದೆ. ಇಂದಿನ, ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಕುರಿತ ಬಹುರೂಪಿ ಪರ್ಯಾಯ ಅಧ್ಯಯನಗಳು ಈ ಚಿಂತನೆಗಳ ಪರಿಕಲ್ಪನೆಗಳ

ಕೊಡುಗೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರಗತಿಪರ ರಾಜಕೀಯಾನುಸಂಧಾನ' ಅರ್ಥಪೂರ್ಣ ವಿಸ್ತಾರ ಹಾಗೂ ವ್ಯಾಪಕತೆ ಪಡೆದುಕೊಳ್ಳುತ್ತಿರುವುದರ ಕುರಿತ ಮಹತ್ವದ ನಿದರ್ಶನವಾಗಿದೆ.

ಐ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಗತಿಪರ ರಾಜಕೀಯಾನುಸಂಧಾನದ ಆಯಾಮವು ವರ್ಗ, ಜಾತಿ, ಮತ ಹಾಗೂ ಲಿಂಗಬೇಧರಹಿತ ಸಮಸಮಾಜದ ನಿರ್ಮಾಣದ ಆಶಯವನ್ನು 'ರಾಜಕಾರಣ'ದ ಮಾನವೀಕರಣ ಮತ್ತು 'ಪರ್ಯಾಯ ರಾಜಕಾರಣದ ನೆಲೆಗಳ' ಶೋಧದ ಪರಿಕಲ್ಪನೆಗಳ ಮೂಲಕ ಸಾಧಿಸಲು ಪ್ರಯತ್ನಿಸುತ್ತಿದೆ. ಈ ಪರಿಕಲ್ಪನೆಗಳ ಮೂಲಕ ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ವಿಶ್ಲೇಷಿಸುವ ಹಾಗೂ ಮತೀಯ ರಾಜಕಾರಣದ ಉದ್ದೇಶದ ಕೃತಿಗಳನ್ನು ವಿರೋಧಿಸುವ ಸೆಕ್ಯುಲರ್ ರಾಜಕಾರಣದಲ್ಲಿ ನಿರತವಾಗಿದೆ.

ಒ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಸೆಕ್ಯುಲರ್ ರಾಜಕಾರಣ'ವು ಪ್ರಧಾನವಾಗಿ ಸಾಹಿತ್ಯೇತರ ದಾರ್ಶನಿಕರ ಮತ್ತು ಚಿಂತಕರ ವಿಚಾರಧಾರೆಗಳಿಂದ ಹಾಗೂ ಕನ್ನಡ ಸಾಹಿತ್ಯದ ಮಾನವತಾವಾದಿ ಪರಂಪರೆಯಿಂದ ರೂಪಗೊಂಡಿದೆ. ಹೀಗಾಗಿಯೇ ಇದರಲ್ಲಿ ಬಹುರೂಪಿ ಮಾದರಿಗಳಿವೆ. ಪ್ರಜಾಸತ್ತಾತ್ಮಕ ಸಮಾಜವಾದಿ ರಾಜಕಾರಣ, ಸಮಾಜವಾದಿ ರಾಜಕಾರಣ, ಎಡಪಂಥೀಯ ರಾಜಕಾರಣ, ಮಹಿಳಾ ರಾಜಕಾರಣ, ದಲಿತ ರಾಜಕಾರಣ ಮೊದಲಾದವು ಇಂಥ ಪ್ರಮುಖ ಮಾದರಿಗಳು. ಆದರೆ ಇವೆಲ್ಲವುಗಳ ಒಟ್ಟು ಆಶಯ ಒಂದೇ ಅದು 'ರಾಜಕಾರಣದ ಮಾನವೀಕರಣ'.

ಓ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸೆಕ್ಯುಲರ್ ರಾಜಕಾರಣದ ಬಹುರೂಪಿ ಮಾದರಿಗಳು ರಾಜಕಾರಣದ ಮಾನವೀಕರಣವನ್ನು ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ತಮ್ಮ ಅರ್ಥಪೂರ್ಣವಾದ ತಾತ್ವಿಕ ವಿಚಾರಗಳ ಬೆಳಕಿನಲ್ಲಿ ವಿಶ್ಲೇಷಿಸುವ ಮೂಲಕ ಸಾಧಿಸಬಯಸುತ್ತವೆ. ಪಟ್ಟಭದ್ರ ಹಿತಾಶಕ್ತಿಗಳ ಮತ್ತು ಬಲಪಂಥೀಯ ಸೈದ್ಧಾಂತಿಕತೆಯ ಸಾಂಸ್ಕೃತಿಕ ರಾಜಕಾರಣದ ಧರ್ಮ, ಮತ, ಜಾತಿ ಮತ್ತು ಲಿಂಗ ಬೇಧಗಳ ಚಿಂತನೆಗಳಲ್ಲಿ ಇರುವ ಮನುಷ್ಯ ವಿರೋಧಿ ಹಾಗೂ ಅಲ್ಪಸಂಖ್ಯಾತರ ವಿರೋಧಿ ಧೋರಣೆಗಳನ್ನು ದಿಟ್ಟವಾಗಿ ಬಯಲಿಗೆಳೆಯುವ ಮೂಲಕ ಮತ್ತು ಅರ್ಥಪೂರ್ಣ ಪರ್ಯಾಯಗಳನ್ನು ನಿರೂಪಿಸುವ ಮೂಲಕ ನಿರ್ವಹಿಸುತ್ತಿವೆ.

ಔ. ಬಹಳ ಮುಖ್ಯವಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಪ್ರಗತಿಪರ ರಾಜಕೀಯಾನುಸಂಧಾನ'ದ ಸೆಕ್ಯುಲರ್ ರಾಜಕಾರಣದ ಮಾದರಿಗಳು ಸಮಕಾಲೀನ ಆಧುನಿಕೋತ್ತರ ಚಿಂತನೆಯ ವಿಕಲ್ಪಗಳು ಹಾಗೂ ವಿಕಾರಗಳ ವಿರುದ್ಧ ಆತಂಕ ಹಾಗೂ ಎಚ್ಚರದ ನೆಲೆಗಳನ್ನು ಹೊಂದಿವೆ. ಆದರೆ ಈ ನೆಲೆಗಳ ಪ್ರತಿರೋಧದ ಹಾಗೂ ಪರ್ಯಾಯ ಸಾಧ್ಯತೆಗಳ ಹುಡುಕಾಟ ಇನ್ನಷ್ಟು ವ್ಯಾಪಕತೆ

ತೀವ್ರತೆಗಳನ್ನು ಪಡೆಯಬೇಕಿದೆ. ಅಂಥ ಪ್ರಯತ್ನಗಳು ಅರ್ಥಪೂರ್ಣವಾಗಿ ನಡೆಯುತ್ತಿವೆ ಎನ್ನುವುದು ಆಶಾದಾಯಕವಾದ ವಿಚಾರವಾಗಿದೆ.

ಕೊನೆ ಟಿಪ್ಪಣಿಗಳು

೧. ಅಜಕ್ಕಳ ಗಿರೀಶ್ ಭಟ್, ಬುದ್ಧಿಜೀವಿ ವರ್ಸ್‌ಸ್ ಬೌದ್ಧಿಕ ಸ್ವಾತಂತ್ರ್ಯ, ಚಿಂತನ ಬಯಲು ಪ್ರಕಾಶನ, ದಕ್ಷಿಣ ಕನ್ನಡ, ೨೦೦೭, ಪುಟ ೫.

೨. ಅದೇ, ಪುಟ ೧೫.

೩. ರಹಮತ್ ತರೀಕೆರೆ, ಧರ್ಮ ಪರೀಕ್ಷೆ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೨೦೦೮, ಪುಟ ೧೦೭

೪. ಅದೇ, ಪುಟ ೧೦೮.

೫. ಅದೇ, ೧೧೬.

೬. ಅದೇ, ೧೧೯.

೭. ಮೊಗಳ್ಳಿ ಗಣೇಶ್, 'ತಕರಾರು', ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೮, ಪುಟ ೨೦೨.

೮. ಶ್ರೀಮತಿ ಎಚ್.ಎಸ್., ಸ್ತ್ರೀವಾದ, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ಬಳ್ಳಾರಿ, ೨೦೦೩, ಪುಟ ೧೨೭.

೯. ಅರವಿಂದ ಮಾಲಗತ್ತಿ (ಸಂ), ವಿಮರ್ಶೆಯ ಮಾರ್ಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೪, ಪುಟ ೧೨೮.

೧೦. ಉಷಾ ಎಂ., ಸುರುಚಿ, ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೪, ಪುಟ ೧೧೫.

೧೧. ಅದೇ, ಪುಟ ೧೨೬.

ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳ ತೌಲನಿಕ ಪರಿಶೀಲನೆ

ಅಧ್ಯಾಯ – ೮: ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳ ತೌಲನಿಕ ಪರಿಶೀಲನೆ

> "ಈ ಶತಮಾನದ ಕನ್ನಡ ನವೋದಯದ ಸಂದರ್ಭದಲ್ಲಿ ನಾವು ಪಶ್ಚಿಮದ ಆಧುನಿಕ ಸಾಹಿತ್ಯ ಪ್ರಕಾರಗಳನ್ನು ಕಂಡು ಮೆಚ್ಚಿ ಅವನ್ನು ನಮ್ಮಲ್ಲಿ ತಂದುಕೊಂಡೆವು; ಹಾಗೇ ಸಾಹಿತ್ಯ ವಿಮರ್ಶೆಯೆಂಬುದನ್ನೂ ತಂದುಕೊಂಡೆವು. ಅಲ್ಲಿಂದ ಶತಮಾನದುದ್ದವೂ ನಮ್ಮ ಕನ್ನಡ ವಿಮರ್ಶೆಯ ಪ್ರಧಾನ ಧಾರೆಯು ಬಹುಮಟ್ಟಿಗೆ ಪಶ್ಚಿಮದ ವಿಮರ್ಶಾಧಾರೆಯ ಜೊತೆ ಸಂವಾದ ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಲೇ ಬೆಳೆದುಕೊಂಡಿದೆ. ಇನ್ನು, ಪಶ್ಚಿಮದ ವಿಮರ್ಶೆಯ ಇತಿಹಾಸವನ್ನು ಸ್ಥೂಲವಾಗಿ ನೋಡಿದರೆ, ಅದು ಶತಮಾನದ ಪೂರ್ವಾರ್ಧದಲ್ಲಿ ಹೆಚ್ಚಾಗಿ ಸಾಹಿತ್ಯ ಮತ್ತು ಸಾಹಿತ್ಯಾಂಶ ಕೇಂದ್ರಿತವಾಗಿದ್ದು ಉತ್ತರಾರ್ಧದಲ್ಲಿ, ಇತಿಹಾಸ–ರಾಜ್ಯಶಾಸ್ತ್ರ–ಅರ್ಥಶಾಸ್ತ್ರಗಳಿಂದಲೇ ಮಾತ್ರವಲ್ಲದೆ ಭಾಷಾಶಾಸ್ತ್ರ–ಮಾನವಶಾಸ್ತ್ರ–ಸಮಾಜಶಾಸ್ತ್ರ–ತತ್ವಶಾಸ್ತ್ರ ಮುಂತಾದ ಹಲವು ಶಾಸ್ತ್ರಗಳ ಪ್ರಖರ ಚಿಂತನೆಗಳಿಂದ ಗಾಢವಾಗಿ ಪ್ರಭಾವಗೊಂಡಿತು; ಸಾಹಿತ್ಯ ವಿಮರ್ಶೆಯನ್ನುವುದು ವ್ಯಾಪಕವಾದ ಅರ್ಥದಲ್ಲಿ ಸಾಂಸ್ಕೃತಿಕ ವಿಮರ್ಶೆಯಾಗಿ, ಎಂದರೆ, ಮನುಷ್ಯ ಭಾಷೆ ಮನುಷ್ಯ ಚರಿತಗಳ ವಿಮರ್ಶೆಯಾಗಿ ಬೆಳೆಯತೊಡಗಿತು. ಈ ಬೆಳವಣಿಗೆಯಿಂದಾಗಿ, ಸಾಹಿತ್ಯ ಅಥವಾ ಸಾಂಸ್ಕೃತಿಕ ವಿಮರ್ಶೆಯು ಬರೀ ಸಾಹಿತ್ಯಾಸ್ವಾದದ ಮೀಮಾಂಸೆಯಾಗದೆ ಹೊಸ ಆಶಯ–ಆಕೃತಿಗಳ ನಿರ್ಮಾಣದ್ರವ್ಯವಾಗಿ ಪರಿಗಣಿತ ವಾಗತೊಡಗಿತು.
>
> ಪಶ್ಚಿಮದ ವಿಮರ್ಶೆಯ ಎರಡನೆಯ ಘಟ್ಟವು ಅನೇಕಾನೇಕ ವಾದ–ವಿವಾದ–ಸಿದ್ಧಾಂತ–ಪ್ರಸ್ತಾನಗಳಿಂದ ದಟ್ಟವಾಗಿ ಬೆಳೆದಿದೆ; ಬೌದ್ಧಿಕ ಸಾಹಸಗಳ ಬಲು ರೋಚಕವಾದ ಒಂದು ಪಥ್ಯ ಪರಂಪರೆಯನ್ನೇ ಸೃಷ್ಟಿಸಿದೆ. ಈ ಘಟ್ಟದ ಚಿಂತನೆಗಳು ಕನ್ನಡದಲ್ಲಿ ಇನ್ನೂ ಅಷ್ಟಾಗಿ ಪಡಿಮೂಡಿಬಂದಿಲ್ಲ"
>
> ಕೆ.ವಿ.ಸುಬ್ಬಣ್ಣ, 'ಅರೆ ಶತಮಾನದ ಅಲೆ ಬರಹಗಳು,' ಕೃತಿಯಿಂದ

೮.೧ ಪೀಠಿಕೆ

ಚಾರಿತ್ರಿಕವಾಗಿ ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ ಎರಡೂ ಸಹ ಬಹುತೇಕ ಒಂದೇ ಕಾಲಘಟ್ಟದಲ್ಲಿ ರೂಪುಗೊಂಡಿವೆ. ಆದರೂ, ಇವುಗಳ ತಾತ್ವಿಕ ಸ್ವರೂಪದಲ್ಲಿ ಕೆಲವು ಮೂಲಭೂತವಾದ ಭಿನ್ನತೆಗಳಿವೆ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಹಲವು ನೆಲೆಗಳಲ್ಲಿ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯನ್ನು ಮೀರಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ಇದು ಬಹುಮುಖ್ಯವಾಗಿ ಸಾಹಿತ್ಯ, ಸಮಾಜ, ಸಂಸ್ಕೃತಿ, ಧರ್ಮ, ರಾಜಕಾರಣ, ಆರ್ಥಿಕ ಮತ್ತು ಭಾಷಿಕ ಪ್ರಶ್ನೆಗಳನ್ನು ಪರಿಭಾವಿಸುವ ಹಾಗೂ ಅವುಗಳನ್ನು ಸಾಹಿತ್ಯಾನುಸಂಧಾನದಲ್ಲಿ ಎದುರುಗೊಳ್ಳುವ ಕ್ರಮಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಪಡೆದುಕೊಳ್ಳುತ್ತಿರುವ ಹಲವು ಅರ್ಥಪೂರ್ಣ ಆಯಾಮಗಳಿಂದ ಸಾಧ್ಯವಾಗಿದೆ.

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗೆ ಸಾಧ್ಯವಾಗದಿರುವ ಅತ್ಯಂತ ಮಹತ್ವದ ತಾತ್ವಿಕ ಅವಸ್ಥೆಯೊಂದನ್ನು ತನ್ನದಾಗಿಸಿಕೊಂಡಿದೆ. ಹಾಗೆ ನೋಡಿದರೆ ಇದು, ಆಧುನಿಕ ಪಾಶ್ಚಾತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಯಾವುದೇ ರೂಪಗಳಿಗೂ ಇದುವರೆಗೂ ಸಾಧ್ಯವಾಗದಿದ್ದ ಒಂದು ವಿಶೇಷ ಚಹರೆ ಎಂದೇ ಕರೆಯಬಹುದು. ಇದನ್ನು, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಏಕಕಾಲಕ್ಕೆ ಹಲವು ವಿಮರ್ಶಾ ವಿಧಾನಗಳ ಆಯಾಮವನ್ನು ಪಡೆದುಕೊಂಡಿರುವ ಸ್ವರೂಪದಲ್ಲಿ ಗುರುತಿಸಬಹುದು. ಹೀಗಾಗಿ, ಇಂದಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಬಹು ವಿಮರ್ಶಾ ವಿಧಾನಗಳ ಏಕಾತ್ಮಕ ರೂಪ ಎಂದು ವಿವರಿಸಿಕೊಳ್ಳಬಹುದು. ಹಾಗೆಯೇ, ಇದು ಬಹುರೂಪಿ ಮಾದರಿಗಳನ್ನು ಒಳಗೊಂಡಿರುವ ಒಂದು ವಿಮರ್ಶಾ ಪ್ರಸ್ಥಾನ ಕೂಡ ಆಗಿದೆ.

ಇಂದು ಕನ್ನಡ ಸಾಂಸ್ಕೃತಿಕ ವಿಮರ್ಶೆ ಏಕಕಾಲಕ್ಕೆ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಭಾಷಿಕ ಹಾಗೂ ಕಲಾಮೀಮಾಂಸಕ ವಿಮರ್ಶೆಯಾಗಿ ಕೂಡಾ ಕ್ರಿಯಾತ್ಮಕವಾಗಿದೆ. ಬಹುಮುಖ್ಯವಾಗಿ, ದೇಸಿ ಮತ್ತು ಸ್ಥಳೀಯ ಪ್ರಶ್ನೆಗಳ ಪರ್ಯಾಲೋಚನೆ ಮೂಲಕವೇ ವಿಶ್ವ ವಿದ್ಯಮಾನಗಳ ನಿಜ ಚಹರೆ ಹಾಗೂ ಸಂಕೀರ್ಣ ನೆಲೆಗಳ ವಿಶ್ಲೇಷಣಾ ವಿಧಾನವಾಗಿ ಕೂಡಾ ಪರಿವರ್ತನೆಯಾಗಿದೆ. ಜಾಗತಿಕ ವಿರಾಟ್ ಕಥನಗಳು ವಿಶ್ವಾದ್ಯಂತ ಸ್ಥಳೀಯ ಸಮಾಜ, ಸಂಸ್ಕೃತಿ ಮತ್ತು ಬದುಕಿನ ವಿಧಾನಗಳನ್ನು ಕುರಿತು ಹುಟ್ಟುಹಾಕುತ್ತಿರುವ ವಿಕಲ್ಪಗಳ ಮೂಲೋದ್ದೇಶ ಕುರಿತು ತೀವ್ರವಾದ ವಾಗ್ವಾದ ಹಾಗೂ ಪ್ರತಿರೋಧಗಳನ್ನು ಮಂಡಿಸುತ್ತಿದೆ. ಹಾಗೆಯೇ, ಪರ್ಯಾಯ ಜೀವನ ಪದ್ಧತಿಗಳು, ಅರ್ಥಪೂರ್ಣವಾದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಮೌಲ್ಯವ್ಯವಸ್ಥೆಗಳ ಹುಡುಕಾಟ ಹಾಗೂ ಕಟ್ಟುವಿಕೆಯನ್ನು ತನ್ನ ಕಾರ್ಯಮಾದರಿಗಳ ನೈತಿಕ ಹೊಣೆಗಾರಿಕೆಯಾಗಿ ಭಾವಿಸಿದೆ.

೮.೨ ಬಹುರೂಪಿ ಭಿನ್ನತೆಗಳು

ಈ ಎಲ್ಲ ತಾತ್ವಿಕ ವಿಚಾರಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಿಂತ ಹೆಚ್ಚು ವ್ಯಾಪಕವಾದ ಮತ್ತು ಅರ್ಥಪೂರ್ಣವಾದ ಕ್ರಮದಲ್ಲಿ ರೂಪಿಸಿವೆ. ಇದರಿಂದ, ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶಾ ಮಾರ್ಗಗಳ ನಡುವೆ ಹಲವು ನೆಲೆಗಳಲ್ಲಿ ಮೂಲಭೂತವಾದ ಭಿನ್ನತೆಗಳು ಹುಟ್ಟಿಕೊಂಡಿವೆ. ಇದು ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ವಿಮರ್ಶೆ ಕುರಿತ ಗ್ರಹಿಕೆಗಳಿಂದ ಮೊದಲಾಗಿ ವಿಮರ್ಶೆಯ ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಕಾರ್ಯಮಾದರಿಗಳವರೆಗೂ ವ್ಯಾಪಿಸಿದೆ.

ಈ ಹಿನ್ನೆಲೆಯಲ್ಲಿ, ಈ ಭಿನ್ನತೆಗಳ ಸ್ವರೂಪವನ್ನು ಇಲ್ಲಿ ಸ್ಥೂಲವಾಗಿ ಪರಿಶೀಲನೆ ಮಾಡಲಾಗಿದೆ. ಮುಖ್ಯವಾದ ಎಂಟು ರೀತಿಯ ಭಿನ್ನತೆಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಅ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಲ್ಲಿನ ಭಿನ್ನತೆ ಆ. ಪ್ರೇರಣೆ ಮತ್ತು ಪ್ರಭಾವಗಳಲ್ಲಿನ ಭಿನ್ನತೆ ಇ. ಸಾಹಿತ್ಯ ಸ್ವರೂಪದ ಗ್ರಹಿಕೆಯಲ್ಲಿನ ಭಿನ್ನತೆ ಈ. ಸಮಾಜ ಮತ್ತು ಸಂಸ್ಕೃತಿ ಸ್ವರೂಪದ ಗ್ರಹಿಕೆಯಲ್ಲಿನ ಭಿನ್ನತೆ ಉ. ತಾತ್ವಿಕ

ಚಹರೆಗಳಲ್ಲಿನ ಭಿನ್ನತೆ ಊ. ವೈಧಾನಿಕ ರೂಪಗಳಲ್ಲಿನ ಭಿನ್ನತೆ ಋ. ವಿಮರ್ಶಾ ಕಾರ್ಯಮಾದರಿಗಳಲ್ಲಿನ ಭಿನ್ನತೆ ಮತ್ತು ೠ. ವಿಮರ್ಶಾ ಮಾದರಿಗಳಲ್ಲಿನ ಭಿನ್ನತೆ.

ಇವು, ಈ ಎರಡೂ ಮಾರ್ಗಗಳು ಒಂದು ಇನ್ನೊಂದರ ಪಡಿನೆಳಲೋ ಅಥವಾ ಪ್ರತಿರೂಪವೋ ಆಗದಂತೆ ಸ್ವತಂತ್ರ ರೂಪಗಳಾಗಿ ರಚಿಸಿವೆ. ನಿರ್ದಿಷ್ಟ ಕಾಲ, ದೇಶ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ರೂಪುಗೊಳ್ಳುವ ವಿಮರ್ಶಾ ವಿಧಾನವು ಮತ್ತೊಂದು ಭಿನ್ನ ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪರಿಸರದ ಮೇಲೆ ತನ್ನ ದಟ್ಟವಾದ ಪ್ರಭಾವ ಬೀರುವುದು ಎಷ್ಟು ವಾಸ್ತವವೋ, ಹಾಗೇಯೇ ಆ ಹೊಸ ಪರಿಸರದಲ್ಲಿ ನೂತನ ಹುಟ್ಟು ಪಡೆದುಕೊಳ್ಳುತ್ತದೆ ಎನ್ನುವುದೂ ಕೂಡಾ ಅಷ್ಟೇ ನಿಜ. ಆ ಮೂಲಕ ವಿಮರ್ಶೆಯ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಗುಣ ಎನ್ನುವುದು ಪಲ್ಲಟ ಹಾಗೂ ಸ್ಥಿತ್ಯಂತರಕ್ಕೆ ಒಳಗಾಗುತ್ತದೆ. ವಿಶ್ವಾತ್ಮಕವಾದದ್ದು ಸ್ಥಳೀಯಾತ್ಮಕವಾಗುತ್ತದೆ. ಹಾಗೆಯೇ, ಸತ್ವಃಶಾಲಿಯಾದ ಸ್ಥಳೀಯಾತ್ಮಕ ಗುಣ ಆ ಕಾರಣದಿಂದಲೇ ವಿಶ್ವಾತ್ಮಕವೂ ಆಗುತ್ತದೆ ಎನ್ನುವುದು ಈ ಮಾರ್ಗಗಳ ನಡುವಿನ ಮುಖ್ಯವಾದ ಭಿನ್ನತೆಗಳ ಚರ್ಚೆಯಿಂದ ಸ್ಪಷ್ಟವಾಗುವ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ, ಈ ಭಿನ್ನತೆಗಳ ರೂಪರೇಷೆಗಳನ್ನು ಕುರಿತು ಇಲ್ಲಿ ಸ್ಥೂಲವಾಗಿ ಆಲೋಚಿಸಲಾಗಿದೆ.

೮.೨.೧ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಲ್ಲಿನ ಭಿನ್ನತೆ

ಈಗಾಗಲೇ ಚರ್ಚಿಸಲಾಗಿರುವಂತೆ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಬಹಳ ಮುಖ್ಯವಾಗಿ ಕಳೆದ ಶತಮಾನದ ಉತ್ತರಾರ್ಧದಲ್ಲಿ ಮುನ್ನೆಲೆಗೆ ಬಂದ ಸಾಹಿತ್ಯಕ ವಿದ್ಯಮಾನ. ಎಪ್ಪತ್ತರ ಮತ್ತು ಎಂಭತ್ತರ ದಶಕದ ಕರ್ನಾಟಕದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ಈ ಸಾಹಿತ್ಯಕ ವಿದ್ಯಮಾನದ ಪ್ರಬಲ ಪ್ರೇರಕ ಶಕ್ತಿಗಳು. ಹಾಗೆಯೇ, ತೊಂಭತ್ತರ ದಶಕದ ರಾಜಕೀಯಾರ್ಥಿಕ ಬೆಳವಣಿಗೆಗಳು ಇದರ ನಿರ್ಧರಣಾತ್ಮಕ ಶಕ್ತಿಗಳು ಎಂದು ಗುರುತಿಸಬಹುದು. ಆದರೂ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಕೇವಲ ಈ ಕಾಲಘಟ್ಟದಲ್ಲಿ ಹಾಗೂ ಇಷ್ಟೇ ಸಂಗತಿಗಳಿಂದ ಒಮ್ಮೆಗೇ ಪೂರ್ಣಾಕಾರ ಪಡೆದುಕೊಂಡದ್ದಲ್ಲ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯ ಮೊದಲ ಘಟ್ಟವಾದ ನವೋದಯ ವಿಮರ್ಶೆ ಹಾಗೂ ಆಧುನಿಕ ಕನ್ನಡ ಸಂಸ್ಕೃತಿ ಚಿಂತನೆಯ ಆದಿಮ ಹಂತವಾದ ನವೋದಯ ಸಂಸ್ಕೃತಿ ಚಿಂತನೆಯಲ್ಲಿಯೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕೆಲವು ಮುಖ್ಯವಾದ ಎಳೆಗಳಿವೆ.

ನವೋದಯ ವಿಮರ್ಶೆ ಮತ್ತು ನವೋದಯ ಸಂಸ್ಕೃತಿ ಚಿಂತನೆ ಎರಡೂ ಕೂಡಾ ರಾಷ್ಟ್ರ ಹಾಗೂ ರಾಜ್ಯವೊಂದರ ರಾಜಕೀಯ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಅವುಗಳ ಅನನ್ಯತೆ ಮತ್ತು ಸ್ವಂತಿಕೆಯ ಹುಡುಕಾಟದ ಭಾಗವಾಗಿ ನಡೆದಿವೆ. ಆದ್ದರಿಂದ ಇವು ರಾಷ್ಟ್ರೀಯತೆ, ಪರಂಪರೆ, ಚರಿತ್ರೆ, ಸಂಸ್ಕೃತಿ ಮತ್ತು ಭಾಷೆಯ ಪ್ರಶ್ನೆಗಳನ್ನು ವಿರಾಟ್ ಕಥನಗಳಲ್ಲಿ ಪರಿಭಾವಿಸಿದವು. ಒಂದು ರಾಷ್ಟ್ರ ಮತ್ತು ಅದರ ಪ್ರಾದೇಶಿಕ ರೂಪಗಳು ಹೀಗೆ ಪ್ರಬಲ ಶತ್ರುವೊಂದನ್ನು ಗುರುತಿಸಿಕೊಂಡು ಸಾಂಸ್ಕೃತಿಕ ಕದನ

ಮಾಡುವಾಗ ತನ್ನ ಮೂಲರಚನೆಯ ದೋಷಗಳು ಹಾಗೂ ಅಸಂಬದ್ಧತೆಗಳನ್ನು ಅಷ್ಟು ಮುಖ್ಯವೆಂದು ಭಾವಿಸುವುದಿಲ್ಲ ಅಥವಾ ಅವುಗಳನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸಲಾಗುತ್ತದೆ. ಹೀಗಾಗಿಯೇ ವರ್ಣ, ವರ್ಗ, ಜಾತಿ, ಲಿಂಗ, ಆರ್ಥಿಕ ಮತ್ತು ಭಾಷಿಕ ತಾರತಮ್ಯಗಳು ಅಂಚಿಗೆ ತಳ್ಳಲ್ಪಡುತ್ತವೆ; ಇಲ್ಲವೇ ಅವು ರಾಷ್ಟ್ರೀಯತೆ ಮತ್ತು ಪರಂಪರೆಯ ವಿರಾಟ್ ಕಥನಗಳ ಜೀವಕೋಶಗಳಾಗಿ ಪರಿಗಣಿಸಲ್ಪಡುತ್ತವೆ. ನವೋದಯ ವಿಮರ್ಶೆ ಹಾಗೂ ಸಂಸ್ಕೃತಿ ಚಿಂತನೆಯಲ್ಲಿ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಡೆದದ್ದು ಇದೇ ಪ್ರಕ್ರಿಯಾ ಮೀಮಾಂಸೆಯೇ.

ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ಚರಿತ್ರೆ ಕುರಿತ ಅತ್ಯಂತ ಸೈದ್ಧಾಂತಿಕ ಹಾಗೂ ಜನಪರ ಬದ್ಧತೆಯ ಸಾಹಿತ್ಯ ಚಳವಳಿಯಾದ ಪ್ರಗತಿಶೀಲ ಸಾಹಿತ್ಯವು ನಿಜವಾದ ಅರ್ಥದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಕಟ್ಟಬಹುದಾಗಿತ್ತು. ಆದರೆ ಯಾವುದೇ ಸಾಹಿತ್ಯ ಅಥವಾ ವಿಮರ್ಶಾ ರೂಪಗಳ ಹುಟ್ಟಿಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಂತೆಯೇ, ಲೇಖಕರ ಅಥವಾ ವಿಮರ್ಶಕರ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವ್ಯಕ್ತಿತ್ವ ಕೂಡಾ ಮಹತ್ವದ ಕಾರಣಗಳಾಗುತ್ತವೆ ಎನ್ನುವುದಕ್ಕೆ ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯ ಚಳವಳಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ನೆಲೆಗಳನ್ನು ರೂಪಿಸದಿರುವುದಕ್ಕೆ ಇರುವ ನಿಜವಾದ ಕಾರಣವೆಂದು ತೋರುತ್ತದೆ.

ಸ್ವಾತಂತ್ರ್ಯಾನಂತರದ ಎಪ್ಪತ್ತರ ದಶಕದಿಂದ ಒಟ್ಟು ಶತಮಾನದ ಚಾರಿತ್ರಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಹಾಗೂ ಅನುಭವಗಳ ತೀವ್ರವಾದ ಅನುಸಂಧಾನ ಆರಂಭವಾಯಿತು. ಸಮಾಜ, ಸಂಸ್ಕೃತಿ, ರಾಜಕಾರಣ, ಕಲೆ, ಸಾಹಿತ್ಯ ವಿಮರ್ಶೆ, ಮೊದಲಾದವು ಮೇಲ್ನೋಟಕ್ಕೆ ತೋರುವಂತೆ ಪ್ರತ್ಯೇಕವಾದ ವ್ಯವಸ್ಥೆಗಳಾಗಿರದೆ, ರಾಷ್ಟ್ರದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯವ್ಯವಸ್ಥೆಗಳ ಸಾವಯವಾತ್ಮಕ ಅವಸ್ಥೆಗಳಾಗಿವೆ. ಇವುಗಳನ್ನು ಕೇವಲ ವರ್ತಮಾನದ ಬದುಕಿನ ಪ್ರತಿಫಲನ ರೂಪಗಳು ಎಂದಷ್ಟೇ ಭಾವಿಸಿಕೊಳ್ಳದೆ, ಭವಿಷ್ಯದ ಬದುಕಿನ ರೂವಾರಿ ಶಕ್ತಿಗಳೂ ಎಂದು ಕನ್ನಡ ವಿಮರ್ಶೆಯಲ್ಲಿ ವ್ಯಾಖ್ಯಾನಿಸಿಕೊಳ್ಳಲಾಯಿತು. ಹೀಗೆ, ಎಪ್ಪತ್ತರ ದಶಕದಿಂದ ಮನುಷ್ಯ ಕೇಂದ್ರಿತ, ಜೀವಕೇಂದ್ರಿತ ಮತ್ತು ಜೀವನ ಕೇಂದ್ರಿತ ನೆಲೆಗಳಲ್ಲಿ ಈ ಎಲ್ಲಾ ವಿದ್ಯಮಾನಗಳನ್ನು ಅನುಸಂಧಾನ ಮಾಡುವ ಪ್ರವೃತ್ತಿ ಪ್ರಾರಂಭವಾಯಿತು. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಸ್ವರೂಪವಾಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗೆ ಇಂಥ ವಿಸ್ತಾರವಾದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಇದ್ದಂತೆ ತೋರುವುದಿಲ್ಲ. ಆಧುನಿಕ ಪಾಶ್ಚಾತ್ಯ ವಿಮರ್ಶೆ 'ಆಧುನಿಕತೆ'ಯನ್ನು ಮುಖಾಮುಖಿಗೊಳ್ಳುವ ಕ್ರಮದಲ್ಲಿ ಪ್ರಾಯಶಃ ತನ್ನ ಆಶಯಕ್ಕೆ ವಿರುದ್ಧವಾದ ಕಾರ್ಯಮಾದರಿಗಳನ್ನು ಅಳವಡಿಸಿಕೊಂಡತೇ ಎನ್ನುವ ಪ್ರಶ್ನೆ ಏಳುತ್ತದೆ. ಏಕೆಂದರೆ, ವರ್ಗನಿಷ್ಠ ಸಮಾಜದಲ್ಲಿ

'ಆಧುನಿಕತೆ' ತಂದ ವಿದ್ರೋಹಗಳನ್ನು ವಿರೋಧಿಸುವುದು ಎಂದರೆ, ವರ್ಗಾಧಾರಿತ ತಾರತಮ್ಯಗಳನ್ನು ಹಾಗೂ ಸೂಕ್ಷ್ಮ ಸ್ವರೂಪದ ಹಿಂಸೆಗಳನ್ನು ನಿರ್ಮೂಲನ ಮಾಡುವುದೇ ಆಗಿರುತ್ತದೆ. ಆದರೆ ಚಾರಿತ್ರಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮಾಡಿದ್ದಾದರೂ ಏನು ಎಂದರೆ, ಹತ್ತೊಂಭತ್ತನೆಯ ಶತಮಾನದ ಅಂತ್ಯದಲ್ಲಿ ರಷ್ಯಾದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಭಾಷಿಕ ರೂಪನಿಷ್ಠ ವಿಮರ್ಶಾ ಪ್ರಸ್ಥಾನದ ವಿಮರ್ಶಕರಾದ ರೋಮನ್ ಯಾಕೂಬ್‌ಸನ್, ಬೋರಿಸ್ ಐಕೆನ್‌ಬಾಮ್ ಮತ್ತು ವಿಕ್ಟರ್ ಶ್ಲೋವ್‌ಸ್ಕಿ ಮೊದಲಾದವರ ಚಿಂತನೆಗಳ ತೀವ್ರ ಪ್ರಭಾವದಿಂದ ಇಂಗ್ಲೆಂಡ್ ಹಾಗೂ ಅಮೇರಿಕಾದ ಎರಡು 'ನವ್ಯ' ಅಥವಾ 'ರೂಪನಿಷ್ಠ' ವಿಮರ್ಶಾ ಪ್ರಬೇಧಗಳನ್ನು ರೂಪಿಸಿಕೊಂಡಿತು. ಇದರ ಫಲವಾಗಿಯೇ ಎಫ್.ಆರ್. ಲಿವೀಸ್‌ನ 'ಉದಾರ ಮಾನವತಾವಾದ' ಹಾಗೂ ಟಿ.ಎಸ್.ಎಲಿಯಟ್ಟನ 'ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆ'ಯ ದೃಷ್ಟಿಕೋನಗಳು ವಿಮರ್ಶೆಯಲ್ಲಿ ಪೊಸಿಟಿವಿಸ್ಟ್ ಇಲ್ಲವೇ ಕ್ಯಾಥೋಲಿಕ್ ಧರ್ಮ ಪ್ರಜ್ಞೆಯ ಕಲಾಮೀಮಾಂಸಕ ಧೋರಣೆಗಳನ್ನು ಮುಖ್ಯವೆಂದು ಭಾವಿಸಿಕೊಳ್ಳಬೇಕಾಯಿತು.

ಯುದ್ಧೋತರ ಮತ್ತು ಆಧುನಿಕೋತ್ತರ ಕಾಲಘಟ್ಟದ ಭೀಕರ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿನಾಶ ಅಥವಾ ದೈತ್ಯ ಯಾಂತ್ರಿಕ ರೋಬೋಟಿಕ್ ಸಂಸ್ಕೃತಿ ಕುರಿತು ಯಾಕೆ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ವಾಗ್ವಾದ ಮಾಡುವುದಿಲ್ಲ ಎಂದರೆ, ಅದು ಯಾವತ್ತೂ ವರ್ಗ ನಿರ್ಮೂಲನೆಯ ಪರವಾಗಿರದೆ ಬಂಡವಾಳಶಾಹಿ ಮಾರುಕಟ್ಟೆ ಮೌಲ್ಯದ ಸಂಸ್ಕೃತಿಯೊಂದಿಗೆ ಗುಪ್ತವಾಗಿ ಕೂಡಾವಳಿ ಮಾಡಿಕೊಂಡಿರುವುದೇ ನಿಜವಾದ ಕಾರಣವೆಂದು ತೋರುತ್ತದೆ. ಶೀತಲ ಸಮರದ ಪತನ ಹಾಗೂ ಕಮ್ಯುನಿಸ್ಟ್ ರಾಷ್ಟ್ರಗಳ ಮೇಲೆ ಯುರೋಪಿನ ಬಂಡವಾಳಶಾಹಿಯ ತೀವ್ರವಾದ ಆಕ್ರಮಣತ್ವ ಶುರುವಾದ ನಂತರ ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಮಾರ್ಕ್ಸ್‌ನ ವರ್ಗ ನಿರ್ಮೂಲನೆಯ ಚಿಂತನೆಗಳು ಪ್ರಾಮುಖ್ಯತೆ ಪಡೆದುಕೊಂಡವು. ಫ್ರಾಯ್ಡ್ ಹಾಗೂ ಲಕಾನ್‌ನ ಮನೋವಿಶ್ಲೇಷಣೆಗಳು ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳಲ್ಲಿ 'ಥಿಯರಿ'ಗಳನ್ನು ಹುಟ್ಟುಹಾಕಿದವು. ಈ ಹಂತದಲ್ಲಿ ಪೂರ್ವ ಮತ್ತು ಮಧ್ಯ ಏಷ್ಯಾದ ಪೌರ್ವಾತವಾದಿ ಚಿಂತನೆಗಳು, ಆಫ್ರಿಕಾದ ನಿರ್ವಸಾಹತೀಕರಣ ಹೋರಾಟಗಳು ಪಶ್ಚಿಮದ ಬೌದ್ಧಿಕ ಆಸಕ್ತಿಗಳ ಮೇಲೆ ಸಣ್ಣ ಪ್ರಮಾಣದ ಪ್ರಭಾವ ಬೀರಿದವು. ಇದರಿಂದ ಭಾಷಿಕ ರೂಪನಿಷ್ಠತೆ ಬದಲು, ಸಾಂಸ್ಕೃತಿಕ ವಿರಚನೆಯ ದಿಕ್ಕಿಗೆ ಚಿಂತನಾ ಮೀಮಾಂಸೆ ಹೊರಳಿಕೊಂಡಿತು. ಆದ್ದರಿಂದ, ಇಂಗ್ಲೆಂಡಿನಲ್ಲಿ ಐ.ಎ. ರಿಚರ್ಡ್ಸ್, ರಾಬರ್ಟ್ ಹೊಗಾರ್ಟ್, ಕ್ಲಾಡ್ ಲೆವಿಸ್ಟ್ರಾಸ್ ಮತ್ತು ಅಮೇರಿಕಾದಲ್ಲಿ ಸ್ಟ್ರೀಫನ್ ಗ್ರಿನ್‌ಬ್ಲಾಟ್, ಲೂಯಿಸ್ ಮಾಂಟ್ರೋಸ್ ಮೊದಲಾದವರು ಚರಿತ್ರೆ ಮತ್ತು ಸಂಸ್ಕೃತಿ ಕುರಿತ ಹೊಸ ಅಧ್ಯಯನ ಪಂಥಗಳನ್ನು ರೂಪಿಸಿದರು. ಇದೇ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿರುವ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಸ್ವರೂಪ.

ತಾತ್ವರ್ಯವೆಂದರೆ ವರ್ಣ, ವರ್ಗ, ಲಿಂಗ ಮತ್ತು ಜಾತಿ ಆಧರಿತ ಭಾರತೀಯ ಸಮಾಜದಲ್ಲಿ ಇವೆಲ್ಲವುಗಳ ವಿರುದ್ಧದ ಆಂದೋಲನಾ ಮೀಮಾಂಸೆಯಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ವಿಕಾಸವಾಗಿದೆ.

ಆದರೆ, ಬಂಡವಾಳಶಾಹಿ ಹಾಗೂ ನವಬಂಡವಾಳಶಾಹಿಯ ಪಾಶ್ಚಾತ್ಯ ಜಗತ್ತಿನಲ್ಲಿ ಸಾಂಸ್ಕೃತಿಕ ವಿಮರ್ಶೆ ಪ್ರಧಾನವಾಗಿ ಒಂದು ಬೌದ್ಧಿಕ ಅಧ್ಯಯನ ವಿಧಾನ ಅಥವಾ ಜ್ಞಾನಶಿಸ್ತಾಗಿ ಹುಟ್ಟಿಕೊಂಡಿದೆ.

೮.೨.೨ ಪ್ರೇರಣೆ ಮತ್ತು ಪ್ರಭಾವಗಳಲ್ಲಿನ ಭಿನ್ನತೆ

ಪ್ರಭಾವ ಮತ್ತು ಪ್ರೇರಣೆಗಳು ಸ್ಫೂರ್ತಿಮೂಲಗಳಾಗಿ ಬಂದಿವೆಯೋ, ಬೌದ್ಧಿಕ ಆಸಕ್ತಿಗಳ ಭಾಗವಾಗಿ ಬಂದಿವೆಯೋ ಅಥವಾ ಬದುಕಿನ ಕುರಿತ ನಿಷ್ಠುರ ಪ್ರಶ್ನೆಗಳ ರೂಪವಾಗಿ ಬಂದಿವೆಯೋ ಎನ್ನುವುದನ್ನು ಗಮನಿಸಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇವು ಕೊನೆಯಲ್ಲಿ ಹೇಳಿದ ಆಯಾಮದಲ್ಲಿ ವ್ಯಕ್ತವಾಗಿವೆ ಎಂದು ಕಂಡು ಬರುತ್ತದೆ. ಹಾಗೆ ನೋಡಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿರುವ ಪ್ರಭಾವ ಮತ್ತು ಪ್ರೇರಣೆಗಳ ಹರಹು ತುಂಬಾ ದೊಡ್ಡದು ಮತ್ತು ವೈವಿಧ್ಯಮಯವಾದದ್ದು. ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ, ರಾಜಕಿಯಾತ್ಮಕ ಮತ್ತು ಶೈಕ್ಷಣಿಕ ಹೀಗೆ ಹಲವು ವೈವಿಧ್ಯಮಯ ಪ್ರೇರಣೆ ಹಾಗೂ ಪ್ರಭಾವಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹುಟ್ಟನ್ನು ರೂಪಿಸಿವೆ ಹಾಗೂ ತಾತ್ವಿಕ ಚಹರೆಗಳನ್ನು ನಿರ್ಧರಿಸಿವೆ. ವ್ಯಕ್ತಿಗಳು, ಸಿದ್ಧಾಂತಗಳು, ತತ್ವಗಳು, ಚಿಂತನೆಗಳು, ಚಳವಳಿಗಳು, ಆಂದೋಲನಗಳು ಹಾಗೂ ಹೋರಾಟಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹಿಂದಿನ ಮುಖ್ಯ ಪ್ರೇರಣೆಗಳಾಗಿವೆ. ಇವು ರಾಷ್ಟ್ರೀಯ, ದೇಶೀಯ ಹಾಗೂ ಜಾಗತಿಕ ನೆಲೆಗಳಿಂದ ಕೂಡಿವೆ. ಹೀಗಾಗಿ, ಇವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ರೂಪಗಳನ್ನು ಅಥವಾ ಮಾದರಿಗಳನ್ನು ನಿರ್ಮಿಸುವುದರ ಹಿನ್ನೆಲೆಯಲ್ಲಿ ಅತ್ಯಂತ ಮಹತ್ತರ ಪಾತ್ರ ವಹಿಸಿವೆ.

ದಲಿತ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿರುವ ಅಂಬೇಡ್ಕರ್, ಪೆರಿಯಾರ್, ಫುಲೆ ಮತ್ತು ಮಾರ್ಕ್ಸ್ ವಿಚಾರಧಾರೆಯಾಗಲೀ, ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಹಿನ್ನೆಲೆಯಲ್ಲಿರುವ ಸ್ತ್ರೀವಾದಿ ಚಿಂತಕಿಯರ ಹಾಗೂ ಮಹಿಳಾ ಹೋರಾಟಗಳ ತಾತ್ವಿಕ ವಿಚಾರಗಳಾಗಲೀ, ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಯ ಹಿನ್ನೆಲೆಯಲ್ಲಿರುವ ಲೋಹಿಯಾ, ಕುವೆಂಪು, ಗಾಂಧೀಜಿ ಮತ್ತು ಬಸವಣ್ಣನವರ ಚಿಂತನೆಗಳಾಗಲೀ, ಕೇವಲ ಸ್ಫೂರ್ತಿಮೂಲಗಳೋ ಅಥವಾ ಬೌದ್ಧಿಕ ಆಸಕ್ತಿಯ ಫಲಗಳೋ ಆಗಿರದೆ, ಬದುಕಿನ ಕುರಿತ ನಿಷ್ಠುರ ಪ್ರಶ್ನೆಗಳ ತಾತ್ವಿಕ ಗ್ರಹಿಕೆಯನ್ನು ರೂಪಿಸಿವೆ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿಶಿಷ್ಟ ಸ್ವರೂಪವಾಗಿದೆ. ಪ್ರಭಾವ ಮತ್ತು ಪ್ರೇರಣೆಗಳು ಚರಿತ್ರೆ, ಸಂಸ್ಕೃತಿ, ಸಮಾಜ, ಧರ್ಮ, ಭಾಷೆ ಹಾಗೂ ರಾಜಕಾರಣ ಕುರಿತ ವ್ಯಾಖ್ಯಾನಗಳಾಗಿ, ವರ್ತಮಾನದ ಬದುಕಿನ ವಿಶ್ಲೇಷಣಾ ವಿಧಾನಗಳಾಗಿ ಮತ್ತು ಭವಿಷ್ಯದ ಭರವಸೆಯ ಬದುಕಿನ ಮಾರ್ಗಸೂಚಿಗಳಾಗಿ, ಹೀಗೆ ಬಹುಮುಖಿ ಆಯಾಮಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ರೂಪಿಸಿವೆ.

ಈ ದೃಷ್ಟಿಯಿಂದ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಪ್ರಭಾವ ಮತ್ತು ಪ್ರೇರಣೆಗಳು ಹೆಚ್ಚಾಗಿ ಸ್ಫೂರ್ತಿಮೂಲಗಳಾಗಿ, ಇಲ್ಲವೇ ಬೌದ್ಧಿಕ ಆಸಕ್ತಿಯ ಫಲಗಳಾಗಿ ಮಾತ್ರ ವ್ಯಕ್ತವಾಗಿರುವಂತೆ ತೋರುತ್ತದೆ.

ಪಾಶ್ಚಾತ್ಯ ಆಧುನಿಕ ತತ್ವಶಾಸ್ತ್ರದ 'ಡೆಕಾರ್ಟಿಸಂ' ಬೇಕನ್‌ನ 'ರ್‍ಯಾಷನಲಿಸಂ'ಗೆ ಪ್ರತಿಚಿಂತನೆಯಾಗಿ ಹುಟ್ಟಿಕೊಂಡ ರೀತಿಯಲ್ಲಿ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯ ಪ್ರೇರಣೆಗಳಾದ ಸಂರಚನೋತ್ತರವಾದ, ವಿರಚನವಾದ, ಡಿಸ್ಕೋರ್ಸ್‌ವಾದ ಹಾಗೂ ಅಧುನಿಕೋತ್ತರವಾದಗಳು ಮಾರ್ಕ್ಸ್‌ವಾದಕ್ಕೆ ಪ್ರತಿಚಿಂತನೆಗಳಾಗಿ ಹುಟ್ಟಿಕೊಂಡಂತೆ ತೋರುತ್ತವೆ. ಇದು, ಇವೆಲ್ಲವೂ ಕೇವಲ ವಿಶ್ವವಿದ್ಯಾಲಯಗಳ ವಿಭಾಗಗಳಲ್ಲಿ ಮತ್ತು ಕ್ಯಾಂಪಸ್‌ಗಳಲ್ಲಿ ಹುಟ್ಟಿದವು ಎನ್ನುವುದಕ್ಕೆ ಸಂಬಂಧಿಸಿದ ತಕರಾರು ಅಲ್ಲ; ಬದಲಾಗಿ ಅವುಗಳು ಪ್ರಸ್ತುತಗೊಳ್ಳುವ ಹಾಗೂ ಅನ್ವಯಗೊಳ್ಳುವ ಸ್ವರೂಪಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಈ ದೃಷ್ಟಿಯಿಂದ ಮಾರ್ಕ್ಸ್‌ವಾದವಾಗಲೀ, ಫ್ರಾಯ್ಡ್‌ವಾದವಾಗಲೀ ಅಥವಾ ಆಧುನಿಕ ಸ್ತ್ರೀವಾದದ ಹಲವು ಅರ್ಥಪೂರ್ಣ ರೂಪಗಳಾಗಲೀ, ಹೀಗೆ ಬೌದ್ಧಿಕ ಸ್ವರೂಪದ ಸಾಂಸ್ಥಿಕ ಆವರಣದಿಂದ ಹುಟ್ಟಿದ್ದರೂ, ವಾಸ್ತವವಾಗಿ ಬೌದ್ಧಿಕ ಜಗತ್ತಿಗೂ ಹಾಗೂ ಮಾನವನ ಸಾಮಾನ್ಯ ಲೋಕಕ್ಕೂ ಸಮಾನವಾಗಿ ಪ್ರಸ್ತುತವಾಗುವ ಚಿಂತನೆಗಳಾಗಿವೆ. ಹೀಗಾಗಿಯೇ, ಇವು ಮನುಷ್ಯನ ಮನೋಲೋಕವನ್ನು ಒಳಗೊಂಡು ಭೌತಿಕ ಹಾಗೂ ವಾಸ್ತವಲೋಕದ ವ್ಯಾಖ್ಯಾನಗಳೂ ಆಗುತ್ತವೆ. ಆದ್ದರಿಂದಲೇ, ಇವು ಬದುಕನ್ನೂ, ಚರಿತ್ರೆಯನ್ನೂ ಮತ್ತು ಸಂಸ್ಕೃತಿಗಳನ್ನೂ ಕುರಿತು ಪ್ರಶ್ನಿಸುತ್ತವೆ, ಜಗಳವಾಡುತ್ತವೆ ಹಾಗೂ ಆಂದೋಲನ ಕಟ್ಟುತ್ತವೆ. ಈ ಮೂಲಕ ಸಮಾಜವನ್ನು ಕುರಿತು ನಿಷ್ಠುರವಾದ ಪ್ರಶ್ನೆಗಳನ್ನು ಕೇಳುತ್ತವೆ.

ಆದರೆ, ಇವು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಗಳಿಸಬಹುದಾದಷ್ಟು ಪ್ರಾಮುಖ್ಯತೆ ಗಳಿಸಿದವೇ ಅಥವಾ ಬೀರಬಹುದಾದಷ್ಟು ದಟ್ಟವಾದ ಪ್ರಭಾವವನ್ನು ಬೀರಿದವೇ ಎಂದರೆ ನಿರಾಶಾದಾಯಕ ಚಿತ್ರಣ ಎದುರಾಗುತ್ತದೆ. ಸಮಕಾಲೀನ ಆಧುನಿಕೋತ್ತರ ಕಾಲಘಟ್ಟದಲ್ಲಿ ಮಾರ್ಕ್ಸ್ ಅಥವಾ ಫ್ರಾಯ್ಡ್ ಇಲ್ಲವೇ, ಸೀಮನ್ ದ ಬುವಾ ಅವರ ಅಪ್ರತಿಮ ವಿಚಾರಧಾರೆಗಳನ್ನು ಯಾಕೆ ಪಶ್ಚಿಮದ ವಿಮರ್ಶಾ ಜಗತ್ತು ಸಂಸ್ಕೃತಿಯ ಸಂಕೀರ್ಣ ಪ್ರಶ್ನೆಗಳನ್ನು ಅನುಸಂಧಾನ ಮಾಡಿಕೊಳ್ಳಲು ಆಸಕ್ತಿ ತೋರುತ್ತಿಲ್ಲ ಎಂದರೆ, ಇಡೀ ಪಶ್ಚಿಮವು ತಾನು ಹೇಳುತ್ತಿರುವ ಕಿರುಕಥನಗಳಿಗೆ ವಿರುದ್ಧವಾದ ವಿರಾಟ್‌ಕಥನವನ್ನು ಏಕರೂಪೀಕರಣದ ಆಯಾಮದಲ್ಲಿ ಶ್ರುತಪಡಿಸುತ್ತಿರುವುದೇ ಆಗಿದೆ. ಇಂಥ ರಾಜಕಾರಣದ ಸಂದರ್ಭದಲ್ಲಿ ಸಮಾಜ ಹಾಗೂ ಸಂಸ್ಕೃತಿಯ ಮೂಲರಚನೆಗಳನ್ನು ಪ್ರಶ್ನಿಸುವ ಚಿಂತನೆಗಳು ಮುಖ್ಯವಾಗುವುದಿಲ್ಲ. ಬದಲಾಗಿ ಇವುಗಳನ್ನು ಬಲಪಡಿಸುವ ಪ್ರಸ್ಥಾನಗಳು ಹೆಚ್ಚು ಮುಖ್ಯವಾಗುತ್ತವೆ. ಹೀಗಾಗಿಯೇ ಪಾಶ್ಚಾತ್ಯ ಜಗತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ತನ್ನ ಯಾಜಮಾನ್ಯತೆಯನ್ನು ಪ್ರಶ್ನಿಸದಂತೆ ಮಾಡುವುದಕ್ಕಾಗಿ ಎನ್.ಜಿ.ಓ ಹಾಗೂ ಕಾರ್ಪೋರೇಟ್ ಧನಸಹಾಯ ಸಂಸ್ಥೆಗಳನ್ನು ತೃತೀಯ ಜಗತ್ತಿನಲ್ಲಿ ಸ್ಥಾಪಿಸುತ್ತಿರುವುದಕ್ಕೂ, ಆಧುನಿಕೋತ್ತರ ಚಿಂತನಾ ಪ್ರಸ್ಥಾನವನ್ನು ನೆಲೆಗೊಳಿಸುತ್ತಿರುವುದಕ್ಕೂ ಮತ್ತು ಮಾರ್ಕ್ಸ್‌ವಾದ ಹಾಗೂ ರ್‍ಯಾಡಿಕಲ್ ಸ್ತ್ರೀವಾದಿ ಮೀಮಾಂಸೆಗಳು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ

ಸಂಘರ್ಷಾತ್ಮಕ ಹೋರಾಟದ ಪ್ರೇರಣಾ ಸಾಮರ್ಥ್ಯ ಕಳೆದುಕೊಂಡು ಕೇವಲ ಜ್ಞಾನ ಮೀಮಾಂಸೆಯ ರೂಪಗಳಾಗುತ್ತಿರುವುದಕ್ಕೂ ಪರಸ್ಪರ ನೇರವಾದ ಸಂಬಂಧವಿದೆ.

ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಮತ್ತು ಸಮಕಾಲೀನ ಪ್ರೇರಣೆಗಳು ಹಾಗೂ ಪ್ರಭಾವಗಳು ಹೀಗೆ ಪ್ರಧಾನವಾಗಿ ಸ್ಫೂರ್ತಿಮೂಲ ಅಥವಾ ಬೌದ್ಧಿಕ ಆಸಕ್ತಿ ಫಲಗಳಾಗಿರುವಂತೆ ತೋರುತ್ತದೆ.

೮.೨.೩ ಸಾಹಿತ್ಯ ಸ್ವರೂಪದ ಗ್ರಹಿಕೆಯಲ್ಲಿನ ಭಿನ್ನತೆ

ಸಾಹಿತ್ಯದ ಸ್ವರೂಪವನ್ನು ವಿವರಿಸುವ 'ಸಾಹಿತ್ಯ ಮೀಮಾಂಸೆ'ಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಒಂದು ಪ್ರಮುಖ ಚಹರೆಯಾಗಿದೆ. ಆರ್ಥಿಕ ಪ್ರಶ್ನೆಯಾಧರಿತ 'ಬಂಡಾಯ ಸಾಹಿತ್ಯ ಮೀಮಾಂಸೆ', ಸಾಮಾಜಿಕ ಪ್ರಶ್ನೆಯಾಧರಿತ 'ದಲಿತ ಸಾಹಿತ್ಯ ಮೀಮಾಂಸೆ', ಲಿಂಗ ರಾಜಕಾರಣ ಪ್ರಶ್ನೆಯಾಧರಿತ 'ಸ್ತ್ರೀವಾದಿ ಸಾಹಿತ್ಯ ಮೀಮಾಂಸೆ' ಹಾಗೂ ಜನಪರ ಸಂಸ್ಕತಿಯಾಧರಿತ 'ಜನಪದ ಸಾಹಿತ್ಯ ಮೀಮಾಂಸೆ' ಮೊದಲಾದವು ಇಂಥ ಕೆಲವು ಪ್ರಮುಖ ಮಾದರಿಗಳು. ಇವು ಸಾಹಿತ್ಯವನ್ನು ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪ್ರಧಾನಧಾರೆಯ ಸಾಹಿತ್ಯ ವಿಮರ್ಶೆ ಹಾಗೂ ಅದರ ವಿವಿಧ ರೂಪಗಳಿಗಿಂತ ಭಿನ್ನ ಕ್ರಮಗಳಲ್ಲಿ ಅರ್ಥೈಸುವ ಪ್ರಯತ್ನಗಳು. ಆದರೆ ಇಲ್ಲಿ ಎದುರಾಗುವ ಮುಖ್ಯ ಪ್ರಶ್ನೆಯೆಂದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಪ್ರಧಾನವಾಗಿ ಲಿಖಿತ ಮತ್ತು ಶಿಷ್ಟ ಪಠ್ಯಗಳನ್ನು ಮಾತ್ರವೇ ಹೆಚ್ಚಾಗಿ ಅನುಲಕ್ಷಿಸಲಾಗುತ್ತಿದ್ದು ಅಲಿಖಿತ ಅಥವಾ ಮೌಖಿಕ ಪಠ್ಯಗಳನ್ನು ಅನುಸಂಧಾನ ಮಾಡಬಹುದಾದಷ್ಟು ಪ್ರಮಾಣದಲ್ಲಿ ಹಾಗೂ ಸ್ವರೂಪದಲ್ಲಿ ವಿಶ್ಲೇಷಿಸುತ್ತಿಲ್ಲ. ಇದು, ಮಾನವಶಾಸ್ತ್ರೀಯ ನೆಲೆಯ ಜಾನಪದ ಅಧ್ಯಯನ ಅಥವಾ ಸಾಂಸ್ಕೃತಿಕ ಅಧ್ಯಯನಗಳನ್ನೇ ಸಾಂಸ್ಕೃತಿಕ ವಿಮರ್ಶೆ ಎಂದು ಕರೆಯುವ ವಿಧಾನದಲ್ಲಿ ನಡೆಯುತ್ತಿದೆ. ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ 'ಸಾಹಿತ್ಯ ಮತ್ತು ಸಾಹಿತ್ಯೇತರ' ಅಥವಾ 'ಸೃಜನಶೀಲ ಅಥವಾ ಸೃಜನೇತರ' ಇಲ್ಲವೇ 'ಶಾಬ್ದಿಕ ಅಥವಾ ಅಶಾಬ್ದಿಕ' ಮೊದಲಾದ ಬೈನರಿ ವರ್ಗೀಕರಣಗಳನ್ನು ತೊಡೆದು ಹಾಕುವ ಪ್ರಯತ್ನಗಳು ಇನ್ನೂ ಹೆಚ್ಚಾಗಬೇಕಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆ ಇಂದಿಗೂ ಸಾಹಿತ್ಯ ಅಥವಾ ಪಠ್ಯ ಎಂದರೆ, ಕ್ಲಾಸಿಕ್ಸ್ ಮತ್ತು ಉತ್ಕೃಷ್ಟ ಪರಂಪರೆ ಎಂದು ಭಾವಿಸಿದಂತೆ ತೋರುತ್ತದೆ. ಇವುಗಳನ್ನು, ಅವುಗಳಲ್ಲಿ ವ್ಯಕ್ತವಾಗಿರುವ ಅಥವಾ ಪ್ರತಿನಿಧಿತವಾಗಿರುವ ಸಮಾಜ ಮತ್ತು ಸಂಸ್ಕೃತಿ ಸ್ವರೂಪವನ್ನು ವಿಶ್ಲೇಷಿಸುವುದಕ್ಕೆ ಇರುವ ಆಕರಗಳೆಂದು ಭಾವಿಸುತ್ತಿರುವುದು ಸಾಹಿತ್ಯದ ಸ್ವರೂಪ ಕುರಿತ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಗ್ರಹಿಕೆಯಾಗಿರುವಂತೆ ಕಂಡುಬರುತ್ತದೆ. ಪಠ್ಯಗಳು ಸಮಾಜ ಮತ್ತು ಸಂಸ್ಕೃತಿಯ ಉತ್ಪನ್ನಗಳಾಗಿರುವಂತೆ, ಅವೂ ಕೂಡಾ ಸಂಸ್ಕೃತಿ ರೂಪಗಳೂ ಆಗಿವೆ. ಹೀಗಾಗಿ, ಸಂಸ್ಕೃತಿಯೇ ಪಠ್ಯವಾಗಿರುವುದು ಅಥವಾ ಪಠ್ಯವೇ ಸಂಸ್ಕೃತಿಯಾಗಿರುವುದು

ಸಾಹಿತ್ಯದ ನಿಜವಾದ ಸ್ವರೂಪವಾಗಿದೆ ಎನ್ನುವುದನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆ ಇನ್ನೂ ಮನದಟ್ಟು ಮಾಡಿಕೊಳ್ಳಬೇಕಿದೆ.

ಇಂದಿಗೂ ಕೂಡಾ ಮತ, ಧರ್ಮ, ಆಚರಣೆ, ಸಂಪ್ರದಾಯ ಮತ್ತು ಕಲೆಗಳಂತೆಯೇ ಜನಪ್ರಿಯ ಮನೋರಂಜನಾ ಮಾಧ್ಯಮಗಳಾದ ಚಲನಚಿತ್ರ, ದೂರದರ್ಶನಗಳಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳು, ರಿಯಾಲಿಟಿ ಶೋಗಳು, ಅಪರಾಧ ವರದಿ ಕಾರ್ಯಕ್ರಮಗಳು, ಜ್ಯೋತಿಷ್ಯ ಕಾರ್ಯಕ್ರಮಗಳು ಮತ್ತು ಜಾಹೀರಾತುಗಳು ಮೊದಲಾದವುಗಳನ್ನು ಪಠ್ಯಗಳಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಪರಿಗಣಿಸುತ್ತಿಲ್ಲ. ಕೆಲವೇ ಕೆಲವು ವಿಮರ್ಶಕರ ಪ್ರಯೋಗಾತ್ಮಕ ಕುತೂಹಲಗಳಾಗಿ ಮಾತ್ರ ಇವುಗಳನ್ನು ಅಧ್ಯಯನ ಮಾಡಿರುವುದು ಕಂಡಬರುತ್ತದೆ. ಹಾಗೆ ನೋಡಿದರೆ, ಇವು ಇಂದಿನ ಸಮಕಾಲೀನ ಸಂಸ್ಕೃತಿಯ ಮಹತ್ವದ ಪಠ್ಯಗಳೇ ಆಗಿವೆ.

ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ 'ಸಾಹಿತ್ಯ ಮತ್ತು ಸಾಹಿತ್ಯೇತರ' ಅಥವಾ 'ಸೃಜನಶೀಲ ಮತ್ತು ಸೃಜನೇತರ' ಎನ್ನುವ ದ್ವಿಮಾನ ವರ್ಗೀಕರಣ ಬಹುತೇಕ ಬಿಟ್ಟುಹೋಗಿದೆ. ಎಲ್ಲವನ್ನು ಪ್ರಧಾನವಾಗಿ 'ಪಠ್ಯ'ಗಳೆಂದು ಪರಿಗಣಿಸಲಾಗುತ್ತಿದೆ. ಅವುಗಳಲ್ಲಿರುವ 'ಸಾಹಿತ್ಯತನ' ಅಥವಾ 'ಸಾಹಿತ್ಯಾತ್ಮಕತೆ'ಗೆ ಒತ್ತು ನೀಡಲಾಗುತ್ತದೆ. ಅಂತರ್‌ಪಠ್ಯೀಯತೆ ಮತ್ತು ಬಹುಪಠ್ಯೀಯತೆಗಳ ಚರ್ಚೆಗಳಲ್ಲಿ ಕೂಡಾ ಇದೇ ಪ್ರವೃತ್ತಿ ಕಂಡುಬರುತ್ತದೆ. ಪಠ್ಯದಿಂದೀಚೆಗಿನ ಮತ್ತು ಪಠ್ಯದಿಂದಾಚೆಗಿನ ಸಂಬಂಧಗಳ ವಿಶ್ಲೇಷಣೆ ಕೂಡಾ ಮುಖ್ಯವಾಗಿ ಪರಿಗಣಿತವಾಗಿದೆ. ಅಂದರೆ, ಪಠ್ಯನಿಷ್ಠಾತ್ಮಕವಾದ ಚರ್ಚೆಗಳಿಗಿಂತ ಪಠ್ಯಗಳು ಹುಟ್ಟುವ, ಪ್ರಸಾರಗೊಳ್ಳುವ ಹಾಗೂ ಸ್ವೀಕಾರಗೊಳ್ಳುವ ಚಟುವಟಿಕೆಗಳನ್ನು ನಿರೂಪಿಸುವ, ನಿಯಂತ್ರಿಸುವ ಹಾಗೂ ನಿರ್ದೇಶಿಸುವ ಹಿತಾಸಕ್ತಿಗಳು ಸಾಹಿತ್ಯಾತ್ಮಕತೆಯ ಚರ್ಚೆಯಲ್ಲಿ ಮುಖ್ಯವಾಗುತ್ತಿವೆ. ಪಾಶ್ಚಾತ್ಯ 'ಭೌತವಾದಿ' ಅಥವಾ 'ವಸ್ತುವಾದಿ' ಸಾಂಸ್ಕೃತಿಕ ವಿಮರ್ಶೆಯ ಕೊಡುಗೆ ಈ ದೃಷ್ಟಿಯಿಂದ ಮಹತ್ವಪೂರ್ಣವಾದದ್ದಾಗಿದೆ.

೮.೨.೪ ಸಮಾಜ ಮತ್ತು ಸಂಸ್ಕೃತಿ ಸ್ವರೂಪದ ಗ್ರಹಿಕೆಯಲ್ಲಿನ ಭಿನ್ನತೆ

ಅಸ್ತಿತ್ವದಲ್ಲಿರುವ ಸಮಾಜ ಮತ್ತು ಸಂಸ್ಕೃತಿಗಳು ಸಾಂಸ್ಕೃತಿಕ ವಿಮರ್ಶೆಯ ಪ್ರೇರಕ ಶಕ್ತಿಗಳು ಹೇಗೋ ಹಾಗೆ, ಇಂಥ ಸಾಮಾಜಿಕ ಹಾಗೂ ಸಾಂಸ್ಕೃತಿಕ ರಚನೆಗಳ ಸ್ವರೂಪವನ್ನು ಸಾಂಸ್ಕೃತಿಕ ವಿಮರ್ಶೆ ಬಹುಮುಖಿ ಆಯಾಮಗಳಲ್ಲಿ ನಿಷ್ಠುರವಾದ ವಿಮರ್ಶೆಗೊಳಪಡಿಸುತ್ತದೆ ಎನ್ನುವುದೂ ಕೂಡಾ ಅತ್ಯಂತ ಮುಖ್ಯವಾದ ವಿಚಾರವಾಗಿದೆ. ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯ ಕಾರ್ಯಮಾದರಿಯೇ ಆಗಿರುವ ಈ ವಿದ್ಯಮಾನಕ್ಕೆ, ಅದು ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ವಿವಿಧ ಸ್ತರಗಳಲ್ಲಿ ಹಾಗೂ ವಿಭಿನ್ನ ನೆಲೆಗಳಲ್ಲಿ ಗ್ರಹಿಸುವುದೇ ಮುಖ್ಯವಾದ ಕಾರಣವಾಗಿರುತ್ತದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಏಕಕಾಲಕ್ಕೆ, ಹಲವು ನೆಲೆಗಳಲ್ಲಿ, ಅನೇಕ ಸ್ತರಗಳಲ್ಲಿ ಹಾಗೂ ಬಹುರೂಪಗಳಲ್ಲಿ ಗ್ರಹಿಸುತ್ತದೆ. ಇವುಗಳಲ್ಲಿ ಏಕಕಾಲಕ್ಕೆ, ಕರ್ನಾಟಕ ಹಾಗೂ ಭಾರತೀಯ ಎರಡೂ ಅವಸ್ಥೆಗಳಲ್ಲಿ ಕೂಡುವ ಮತ್ತು ಬೇರ್ಪಡುವ ನೆಲೆ, ಪ್ರಾಚೀನವೂ ಮತ್ತು ಆಧುನಿಕವೂ ಆಗಿರುವ ನೆಲೆ, ಪ್ರಗತಿಪರವೂ ಮತ್ತು ಪ್ರತಿಗಾಮಿಯೂ ಆಗಿರುವ ನೆಲೆ,

ಉದಾತ್ತ ಆಶಯಗಳೂ ಮತ್ತು ಅಮಾನವೀಯ ಆಚರಣೆಗಳೂ ಬೆರೆತಿರುವ ನೆಲೆ, ಹೀಗೆ ಅನೇಕ ವೈರುಧ್ಯಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳಲ್ಲಿವೆ ಎಂದು ಕನ್ನಡ ಸಾಂಸ್ಕೃತಿಕ ವಿಮರ್ಶೆ ಭಾವಿಸುತ್ತದೆ.

ಭಾರತೀಯ ಹಾಗೂ ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಪ್ರಧಾನವಾಗಿ ಶ್ರೇಣೀಕೃತ ತಾರತಮ್ಯ ಹಾಗೂ ಮನುಷ್ಯ ವಿರೋಧಿ ಮೌಲ್ಯಾದರ್ಶಗಳನ್ನು ಪ್ರತಿಪಾದಿಸುವ ಸಾಮಾಜಿಕ ತತ್ವಗಳಿಂದ ರೂಪಿತವಾಗಿವೆ. ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಆದಿಮ ಹಂತದ 'ಈಗಲೇಟೇರಿಯನ್' ಸ್ಥಿತಿಯನ್ನು ನಿರ್ನಾಮಗೊಳಿಸಿದ ವರ್ಣ, ವರ್ಗ, ಲಿಂಗ ಮತ್ತು ಜಾತಿ ವ್ಯವಸ್ಥೆಗಳು ಎಂದಿಗೂ ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳನ್ನು ಒಗ್ಗೂಡಿದ ರಚನೆಯಾಗಿ ಉಳಿಸಲಿಲ್ಲ. ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಶ್ರೇಣೀಕೃತ ಘಟಕಗಳು ಮೂಲತಃ ಹುಟ್ಟು ಮತ್ತು ವೃತ್ತಿಯಾಧರಿತ ವಿಭಜನೆಗಳಾದ ಕಾರಣದಿಂದ ಅವು ಎಂದೂ ದೇಶದ ಸಮಗ್ರ ಸಮಾಜದ ಸುಗಮ ನಿರ್ವಹಣೆಯನ್ನು ಉದ್ದೇಶಿಸಿ ರೂಪುಗೊಂಡವುಗಳಾಗಿರಲಿಲ್ಲ. ಬದಲಾಗಿ, ಶ್ರೇಣೀಕೃತ ಪಿರಮಿಡ್ಡಿನ ಮೇಲಿನ ಸ್ತರದವರ ಸ್ಥಾನ ಭದ್ರತೆಗಾಗಿ ರೂಪಿಸಿದ ಗುಪ್ತ ಕಾರ್ಯಸೂಚಿಗಳಾಗಿದ್ದವು. ಇವು ಕಾಲಾನಂತರ ಹಲವು ಕಾರಣಗಳಿಂದ ಚಾರಿತ್ರಿಕವಾಗಿ ಪಡೆದುಕೊಂಡ ಪ್ರತ್ಯೇಕವಾದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಈಗ ಕರೆಯಲಾಗುತ್ತಿರುವ 'ಸಾಮಾಜಿಕ ವೈವಿಧ್ಯತೆ' ಅಥವಾ ' ಸಾಂಸ್ಕೃತಿಕ ಬಹುತ್ವ' ಎನ್ನುವ ನುಣುಪು ಪರಿಭಾಷೆಗಳಲ್ಲಿ ವಿವರಿಸುವುದು ಕೂಡಾ ಇನ್ನೊಂದು ರೀತಿಯಲ್ಲಿ ಪುರಾತನವಾದಿ ಚಿಂತನೆಗಳನ್ನು ಒಪ್ಪಿಕೊಳ್ಳುವ ಸ್ವರೂಪದ್ದಾಗಿದೆ. ಆದರೆ, ಸದ್ಯದ ಮಟ್ಟಿಗೆ ಈ ಸಮಸ್ಯೆಗೆ ಯಾವುದೇ ಸಮರ್ಪಕ ಪರ್ಯಾಯ ಸುಲಭವಾಗಿ ಗೋಚರಿಸುತ್ತಿಲ್ಲ ಎನ್ನುವುದು ವಾಸ್ತವವೂ ಹೌದು; ಹಾಗೆಯೇ ಬಿಕ್ಕಟ್ಟಿನ ಸ್ಥಿತಿಯೂ ಹೌದು. ಹೀಗಾಗಿ, ಈ 'ವೈವಿಧ್ಯತೆ' ಮತ್ತು 'ಬಹುತ್ವಗಳ' ವಾಸ್ತವ ಸ್ವರೂಪದ ಆಳಸ್ತರದಲ್ಲಿರುವ ಭಾರತೀಯ ಪ್ರಧಾನಧಾರೆಯ ಅಮಾನವೀಯ ಹಾಗೂ ಮನುಷ್ಯವಿರೋಧಿ ನೆಲೆಗಳಿವೆ. ಇವುಗಳನ್ನು ಪ್ರತಿಷ್ಠಿತ ಶಕ್ತಿಗಳ ವಿರುದ್ಧದ ಪ್ರತಿರೋಧ ಮತ್ತು ಬಂಡಾಯದ ಸಂದರ್ಭದಲ್ಲಿ ಗುರುತಿಸಬೇಕು ಮತ್ತು ವಿಶ್ಲೇಷಿಸಬೇಕು ಎನ್ನುವುದು ಸಮಾಜ ಹಾಗೂ ಸಂಸ್ಕೃತಿಗಳ ಸ್ವರೂಪ ಕುರಿತ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಅರ್ಥಪೂರ್ಣವಾದ ಗ್ರಹಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ವರ್ಣ ಮತ್ತು ವರ್ಗಕ್ಕಿಂತ ಜಾತಿ, ಉಪಜಾತಿ, ಲಿಂಗ, ಮತ, ಪಂಥ ಮೊದಲಾದವುಗಳನ್ನು ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ನಿಜವಾಸ್ತವಗಳೆಂದು ಭಾವಿಸಲಾಗುತ್ತಿದೆ.

ಆದರೆ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇದಕ್ಕೆ ಭಿನ್ನವಾದ ನೆಲೆಗಳಲ್ಲಿ ಸಮಾಜ ಹಾಗೂ ಸಂಸ್ಕೃತಿಗಳ ಸ್ವರೂಪವನ್ನು ಗ್ರಹಿಸುವ ಕ್ರಮಗಳು ರೂಢಿಯಲ್ಲಿದೆ. ಇವು, ಪ್ರಧಾನವಾಗಿ ಯುರೋಪಿನ ಹಾಗೂ ಅಮೇರಿಕಾದ ಸಮಾಜವನ್ನು ಒಂದು ಧರ್ಮಾಧಾರಿತವಾದ ಅಥವಾ ಆರ್ಥಿಕ

ಸ್ವರೂಪಾಧಾರಿತವಾದ ನೆಲೆಗಳಲ್ಲಿ ವರ್ಗೀಕರಿಸುತ್ತವೆ. ಅವುಗಳನ್ನು ಮುಖ್ಯವಾಗಿ ಕ್ರಿಶ್ಚಿಯನ್ ಧರ್ಮದ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಪಂಥಗಳ ಸಮಾಜ ಹಾಗೂ ಸಂಸ್ಕೃತಿಗಳಾಗಿ; ಆರ್ಥಿಕ ಸ್ಥಾನಮಾನಾಧರಿತವಾದ ಮೇಲ್ವರ್ಗ, ಮಧ್ಯಮವರ್ಗ ಮತ್ತು ಕೆಳವರ್ಗದ ಸಾಮಾಜಿಕ ಘಟಕಗಳಾಗಿ ಗ್ರಹಿಸಲಾಗುತ್ತಿದೆ. ಈ ಘಟಕಗಳ ವಿಭಜನೆಗಳನ್ನು ಆಧರಿಸಿದ ರೀತಿಯಲ್ಲಿಯೇ ಅವುಗಳ ಸಂಸ್ಕೃತಿ ಸ್ವರೂಪವನ್ನು 'ಉಚ್ಚ ಸಂಸ್ಕೃತಿ ಅಥವಾ ಕುಲೀನ ಸಂಸ್ಕೃತಿ', 'ಪ್ರಧಾನ ಸಂಸ್ಕೃತಿ ಅಥವಾ ಶ್ರೇಷ್ಠ ಸಂಸ್ಕೃತಿ' ಮತ್ತು 'ಕೆಳ ಸಂಸ್ಕೃತಿ ಅಥವಾ ನೀಚ ಸಂಸ್ಕೃತಿ' ಮೊದಲಾದ 'ದ್ವಿಮಾನ'ರೂಪದ ಸಂಸ್ಕೃತಿ ಘಟಕಗಳ ನೆಲೆಗಳಲ್ಲಿ ಪರಿಭಾವಿಸಲಾಗುತ್ತಿದೆ. 'ಶ್ರಮಿಕರ ಸಂಸ್ಕೃತಿ', 'ಜನಸಂಸ್ಕೃತಿ', 'ದುಡಿಯುವವರ ಸಂಸ್ಕೃತಿ' ಮತ್ತು 'ಕಾರ್ಮಿಕರ ಸಂಸ್ಕೃತಿ' ಮೊದಲಾದ ಪ್ರತಿಸಂಸ್ಕೃತಿ, ಇಲ್ಲವೇ ಪರ್ಯಾಯ ಸಂಸ್ಕೃತಿಗಳೂ ಕೂಡಾ ಈ ರಿಲಿಜಿಯನ್ ಮತ್ತು ಕ್ಯಾಪಿಟಲಿಸ್ಟ್ ಪರಿಕಲ್ಪನೆಗಳಿಂದ ಸಂಪೂರ್ಣವಾಗಿ ಹೊರತಾಗಿಲ್ಲ.

ಸಮಕಾಲೀನ ವಸಾಹತ್ತೋತರ ಸಾಂಸ್ಕೃತಿಕ ವಿಮರ್ಶೆಗಳನ್ನು, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನಧಾರೆ ವಿಮರ್ಶೆಗಳಿಗಿಂತ ಭಿನ್ನವಾದವು ಎಂದು ಭಾವಿಸುವುದಾದರೆ, ಏಕೆಂದರೆ ಅವು ವಸಾಹತು ರಾಷ್ಟ್ರಗಳ ನಿರ್ವಸಾಹತೀಕರಣದ ಪ್ರಕ್ರಿಯೆಯ ಭಾಗವಾಗಿ ರೂಪುಗೊಂಡಿರುವುದರಿಂದ, ಆಗ ಬೇರೆ ರೀತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಗ್ರಹಿಕೆಗಳು ಕಂಡುಬರುತ್ತವೆ. ಅವು ವರ್ಗ, ಜನಾಂಗ, ರಾಷ್ಟ್ರ, ಲಿಂಗ ಮತ್ತು ವಲಸೆ ಕುರಿತ ಘಟಕಗಳ ರೂಪದಲ್ಲಿ ಕಂಡುಬರುತ್ತವೆ. ಇವು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನಧಾರೆಯ ಗ್ರಹಿಕೆಗಳಿಗಿಂತ ಹೆಚ್ಚಾಗಿ ತೃತೀಯ ಜಗತ್ತಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ದೇಸಿರೂಪಕ್ಕೆ ಹತ್ತಿರವಾದ ಪರಿಕಲ್ಪನೆಗಳಾಗುತ್ತವೆ.

೮.೨.೫ ತಾತ್ವಿಕ ಚಹರೆಗಳಲ್ಲಿನ ಭಿನ್ನತೆ

ವಿಮರ್ಶೆಯ ಉದ್ದೇಶ ಮತ್ತು ಕಾರ್ಯಮಾದರಿಗಳಿಂದ ವಿಮರ್ಶೆಯ ತಾತ್ವಿಕತೆಯಲ್ಲಿ ಬಹುರೂಪಿ ಚಹರೆಗಳು ತಲೆದೋರುತ್ತವೆ. ಉದ್ದೇಶದ ವ್ಯಾಪಕತೆ ಹಾಗೂ ಕಾರ್ಯಮಾದರಿಗಳ ಹಿಂದಿನ ಹೊಣೆಗಾರಿಕೆಗಳ ಸ್ವರೂಪವು ತಾತ್ವಿಕ ಚಹರೆಗಳು ಸಾಹಿತ್ಯ, ಸಮಾಜ, ಸಂಸ್ಕೃತಿ, ಚರಿತ್ರೆ, ಧರ್ಮ, ರಾಜಕಾರಣ, ಭಾಷೆ ಮತ್ತು ಕಲೆಯ ಪ್ರಶ್ನೆಗಳನ್ನು ನೋಡುವ ಬಗೆಯನ್ನು ಸಂಕೀರ್ಣಗೊಳಿಸುತ್ತವೆ ಹಾಗೂ ಸಮಸ್ಯಾತ್ಮಕಗೊಳಿಸುತ್ತವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಉದ್ದೇಶ ಅತ್ಯಂತ ವ್ಯಾಪಕವೂ ಹಾಗೂ ಕಾರ್ಯಮಾದರಿಗಳ ಹಿಂದಿನ ಹೊಣೆಗಾರಿಕೆಗಳು ಅತ್ಯಂತ ಸಂಕೀರ್ಣ ಸ್ವರೂಪವೂ ಅಗಿವೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಭಾರತೀಯ ಮತ್ತು ಕರ್ನಾಟಕದ ಚರಿತ್ರೆ, ಸಂಸ್ಕೃತಿ, ಸಾಹಿತ್ಯ, ಭಾಷೆ ಮತ್ತು ಬದುಕಿನ ಪ್ರಶ್ನೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಇವುಗಳ ವಿಮರ್ಶಾತ್ಮಕ ವಿಶ್ಲೇಷಣೆ ಮೂಲಕ ಸಮಾನತಾವಾದಿ ಸಮಾಜದ ನಿರ್ಮಾಣ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನ ತಾತ್ವಿಕತೆಯಾಗಿ ಮಾರ್ಪಟ್ಟಿದೆ. ಹೀಗಾಗಿಯೇ,

ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಮಾಜವಾದಿ ಮತ್ತು ಅಖಂಡ ಮಾನವತಾವಾದಿ ಸಂಸ್ಕೃತಿ ನಿರ್ಮಾಣದ ಉದ್ದೇಶದ ಚಹರೆಗಳು, ನಿರ್ವಸಾಹತೀಕರಣದ ದೇಶಿ ಸಂಸ್ಕೃತಿ ಶೋಧದ ಚಹರೆಗಳು, ಸಾಂಸ್ಕೃತಿಕ ರಾಜಕಾರಣದ ಹಲವು ರೂಪಗಳ ಚಹರೆಗಳು, ಆಧುನಿಕೋತ್ತರ ಚಿಂತನೆಯ ವಿಮರ್ಶಾತ್ಮಕ ಸ್ವೀಕಾರದ ಚಹರೆಗಳು, ನವವಸಾಹತುಶಾಹಿ ಯಾಜಮಾನ್ಯದ ಪ್ರತಿರೋಧಾತ್ಮಕ ಚಹರೆಗಳು ಮತ್ತು ತೃತೀಯ ಜಗತ್ತಿನ ಹಾಗೂ ಕನ್ನಡ ಜಗತ್ತಿನ ನಿರ್ವಚನದ ಚಹರೆಗಳು ವ್ಯಾಪಕವಾಗಿ ಕಂಡುಬರುತ್ತವೆ. ಕೋಮುವಾದ ಮತ್ತು ಭಯೋತ್ಪಾದನೆ ವಿರುದ್ಧದ ಬಹುರೂಪಿ ಅನುಸಂಧಾನ, ಪರಿಸರ ಪ್ರಶ್ನೆಗಳ ಜಿಜ್ಞಾಸೆ, ಮೊದಲಾದವು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ವರ್ತಮಾನ ಬದುಕಿನ ಬಹುಮುಖ್ಯವಾದ ಪ್ರಶ್ನೆಗಳಾಗಿ ಮಾರ್ಪಟ್ಟಿರುವುದಕ್ಕೆ ಇದೇ ನಿಜವಾದ ಕಾರಣವಾಗಿದೆ.

ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಗಿರುವ ಬಹುರೂಪಿ ಹಾಗೂ ವೈವಿಧ್ಯಮಯ ಚಹರೆಗಳಿಲ್ಲ. ಇದಕ್ಕೆ ಚಾರಿತ್ರಿಕವಾದ ಮತ್ತು ಸಮಕಾಲೀನವಾದ ಹಲವು ಕಾರಣಗಳಿವೆ. ಮುಖ್ಯವಾಗಿ, ಪ್ರಧಾನಧಾರೆಯ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ ಮೂಲತಃ ಬಂಡವಾಳಶಾಹಿ ಮತ್ತು ನವಬಂಡವಾಳಶಾಹಿ ರಾಷ್ಟ್ರಗಳ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ವಿದ್ಯಮಾನವಾಗಿದೆ. ಇಡೀ ಪಾಶ್ಚಾತ್ಯ ಪ್ರಧಾನಧಾರೆಯ ಸಾಹಿತ್ಯಕ ಮತ್ತು ವೈಜ್ಞಾನಿಕ ಸಂಶೋಧನೆಗಳು ಪ್ರಧಾನವಾಗಿ ಬಂಡವಾಳಶಾಹಿ ಹಿತಾಸಕ್ತಿಯ ಆಸಕ್ತಿಗಳಿಂದ ನಿರೂಪಣೆ, ನಿಯಂತ್ರಣ ಹಾಗೂ ನಿರ್ದೇಶನಗೊಳ್ಳುತ್ತಾ ಬಂದಿರುವುದು ಸೋಜಿಗವೇನಲ್ಲ. ಇದಕ್ಕಿರುವ ಕೆಲವೇ ಕೆಲವು ಅಪವಾದಗಳು ಸಹ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬಹುಬೇಗ ಮಾರ್ಕ್ಸ್‌ವಾದಿ ಚಿಂತನೆಗಳಿಂದ ವಿಮುಖವಾದವು. ಹೀಗಾಗಿಯೇ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯು ಕನ್ನಡ ಸಾಂಸ್ಕೃತಿಕ ವಿಮರ್ಶೆ ಅಥವಾ ಇತರ ತೃತೀಯ ಜಗತ್ತಿನ ಸಾಂಸ್ಕೃತಿಕ ವಿಮರ್ಶೆಗಳಿಗೆ ಹೋಲಿಸಿದರೆ ಆರಂಭಿಕ ಕಾಲಘಟ್ಟದ ಆಧುನಿಕ ಪಾಶ್ಚಾತ್ಯ ವಿಮರ್ಶೆಯ ತಾತ್ವಿಕ ಸ್ವರೂಪಕ್ಕಿಂತ ಸಂಪೂರ್ಣ ಭಿನ್ನವಾದ ತಾತ್ವಿಕ ಚಹರೆಗಳನ್ನು ಪಡೆದುಕೊಳ್ಳುವಲ್ಲಿ ಸೋತಿದೆ.

ಮೂಲತಃ ವಸಾಹತು ರಾಷ್ಟ್ರವಾದ ಇಂಗ್ಲೆಂಡ್ ಆಗಲಿ ಅಥವಾ ನವವಸಾಹತುಶಾಹಿಯಾದ ಅಮೇರಿಕಾವಾಗಲಿ, ಸಾಂಸ್ಕೃತಿಕ ವಿಮರ್ಶೆಯಲ್ಲಿ ಹೇಗೆ ತಾನೆ ವಸಾಹತುಶಾಹಿ ವಿರೋಧಿ ಪ್ರಜ್ಞೆಯನ್ನು ತಾತ್ವಿಕ ಚಹರೆಯಾಗಿ ಹೊಂದಲು ಸಾಧ್ಯವಿದೆ. ಹೀಗಾಗಿಯೇ, ನಿರ್ವಸಾಹತೀಕರಣದಂಥ ಜ್ವಲಂತ ಪ್ರಶ್ನೆಗಳು ಈ ವಿಮರ್ಶಾ ರೂಪಗಳ ತಾತ್ವಿಕ ಚಹರೆಗಳಾಗಲು ಸಾಧ್ಯವಿಲ್ಲ. ಮಧ್ಯಯುಗದ ನಂತರದಿಂದ ಪ್ರಧಾನವಾಗಿ ವಸಾಹತುಶಾಹಿ ಚರಿತ್ರೆಯನ್ನು ಹೊಂದಿರುವ ಇಂಗ್ಲೆಂಡ್ ಮತ್ತು ಆಧುನಿಕ ಕಾಲದ ಆರಂಭದವರೆಗೂ ಚರಿತ್ರೆಯ ಇತಿಹಾಸವೇ ಇಲ್ಲದಿರುವ ಅಮೇರಿಕಾ ರಾಷ್ಟ್ರಗಳು ಆಧುನಿಕೋತ್ತರ ಕಾಲಘಟ್ಟದಲ್ಲಿ ಜಗತ್ತಿನ ಪ್ರಥಮ ಹಾಗೂ ದ್ವಿತೀಯ ರಾಷ್ಟ್ರಗಳಾಗಿ ಬೆಳೆದ ಕಾರಣದಿಂದ ಈ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶೆಗೆ ಕನ್ನಡದಂಥ ತೃತೀಯ ಜಗತ್ತಿನ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಹರೆಗಳು ರೂಪುಗೊಳ್ಳುವುದು ಸಾಧ್ಯವೇ

ಇಲ್ಲ. ಆದರೆ, ಇದೇನೂ ಈ ಸಾಂಸ್ಕೃತಿಕ ವಿಮರ್ಶೆಗಳ ಪರವಾದ ಗುಣಾತ್ಮಕ ದೃಷ್ಟಿಕೋನವೆಂದು ಭಾವಿಸಬೇಕಿಲ್ಲ. ಏಕೆಂದರೆ, ದ್ವಂದ್ವಾತ್ಮಕ ಭೌತವಾದದ ಮಾರ್ಕ್ಸ್‌ವಾದಿ ಚಾರಿತ್ರಿಕ ಪ್ರಜ್ಞೆ, ಸ್ತ್ರೀವಾದದ ಲಿಂಗಾಧಾರಿತ ಸಮಾಜೋ-ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಗಳನ್ನು ಆಧುನಿಕೋತ್ತರ ಚಿಂತನೆ ತನ್ನ ಜಾಣ ತರ್ಕದ ಮೂಲಕ ಈ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶೆಯಲ್ಲಿ ಅಪ್ರಸ್ತುತಗೊಳಿಸಿದೆ. ಆ ಮೂಲಕ ನವವಸಾಹತುಶಾಹಿ ಹಾಗೂ ಆಧುನಿಕೋತ್ತರ ಚಿಂತನೆಯ ಚಹರೆಗಳನ್ನು ಈ ವಿಮರ್ಶಾ ರೂಪಗಳ ಪ್ರಮುಖ ತಾತ್ವಿಕ ಚಹರೆಗಳಾಗಿ ಪ್ರತಿಷ್ಠಾಪಿಸಿದೆ. ಹೀಗಾಗಿ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸ್ಟುವರ್ಟ್ ಹಾಲ್, ಮ್ಯಾಕ್ ಆನ್, ಫ್ರೆಡರಿಕ್ ಜೇಮ್ಸ್‌ನ್ ಮೊದಲಾದ ಕೆಲವೇ ಕೆಲವು ವಿಮರ್ಶಕರನ್ನು ಹೊರತುಪಡಿಸಿದರೆ, ಜಾಗತೀಕರಣ ವಿರೋಧಿ ಪ್ರತಿರೋಧ ಅಥವಾ ಪ್ರತಿಕ್ರಿಯೆ ಕಂಡುಬರುವುದಿಲ್ಲ. ಹೀಗಾಗಿಯೇ ಪರಿಸರ, ಭಾಷೆ, ಸಮುದಾಯಕ ಐಡೆಂಟಿಟಿಗಳು ಮೊದಲಾದವು ಈ ವಿಮರ್ಶೆಯಲ್ಲಿ ಬದುಕಿನ ಪ್ರಶ್ನೆಯ ತಾತ್ವಿಕ ಚಹರೆಗಳಾಗಿ ಅಳವಡುತ್ತಿಲ್ಲ.

೮.೨.೬ ವೈಧಾನಿಕ ರೂಪಗಳಲ್ಲಿನ ಭಿನ್ನತೆ

ವಿಮರ್ಶೆಯ ತಾತ್ವಿಕತೆ ಅದರ ವೈಧಾನಿಕತೆಯನ್ನು ರೂಪಿಸುತ್ತದೆ ಎನ್ನುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬಹುರೂಪಿ ವೈಧಾನಿಕ ನೆಲೆಗಳಿವೆ. ಹಾಗೆಯೇ, ವಿಮರ್ಶೆಯ ಗುರಿ ಮತ್ತು ಕಾರ್ಯಮಾದರಿಗಳು ವೈಧಾನಿಕ ನೆಲೆಗಳಿಗೆ ಸ್ಪಷ್ಟತೆ ಮತ್ತು ಅನನ್ಯತೆ ತಂದುಕೊಡುತ್ತವೆ ಎನ್ನುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇಂಥ ಅನನ್ಯವಾದ ವೈಧಾನಿಕ ರೂಪಗಳು ಏರ್ಪಟ್ಟಿವೆ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬೇರೆ ಬೇರೆ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ಇಂಥ ಒಂದೋ ಅಥವಾ ಹಲವೋ ವೈಧಾನಿಕ ರೂಪಗಳನ್ನು ಬಳಸುತ್ತಿವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆ ಸದ್ಯದಲ್ಲಿ ಸಾಹಿತ್ಯ ವಿಮರ್ಶೆ, ಸಂಸ್ಕೃತಿ ಚಿಂತನೆ, ಸಾಹಿತ್ಯ ಸಂಶೋಧನೆ, ಸಾಂಸ್ಕೃತಿಕ ಅಧ್ಯಯನ ಮತ್ತು ಸಾಮಾಜಿಕ ವಿಶ್ಲೇಷಣೆ, ಹೀಗೆ ಹಲವು ಸ್ತರಗಳಲ್ಲಿ ನಡೆಯುತ್ತಿದೆ. ಹೀಗಾಗಿ ಅಧ್ಯಯನದ ಉದ್ದೇಶ, ಗುರಿ ಮತ್ತು ದೃಷ್ಟಿಕೋನಗಳು ಕನ್ನಡದಲ್ಲಿ ಬಹುರೂಪಿ ವೈಧಾನಿಕತೆಗಳನ್ನು ನಿರ್ಮಿಸಿವೆ. ಅದು ಬಹುಶಿಸ್ತು ಅಧ್ಯಯನ ವಿಧಾನವೋ, ವಾಗ್ವಾದಾತ್ಮಕ ವಿಧಾನವೋ, ಸಂಶ್ಲೇಷಣಾತ್ಮಕ ವಿಧಾನವೋ, ಸಂಘರ್ಷಾತ್ಮಕ ವಿಧಾನವೋ, ಸಂಕಥನಾತ್ಮಕ ವಿಧಾನವೋ ಅಥವಾ ವ್ಯಾಖ್ಯಾನಾತ್ಮಕ ವಿಧಾನವೋ, ಹೀಗೆ ಯಾವುದೇ ವಿಧಾನವಾಗಿದ್ದರೂ ಸಹ ವಿಮರ್ಶೆಯ ಸಾಂಪ್ರದಾಯಕ ಲಕ್ಷಣಗಳಾದ ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳನ್ನು ಮೀರಿದ ಸಾಮಾಜಿಕ, ರಾಜಕೀಯ, ಆರ್ಥಿಕ ಪ್ರಶ್ನೆಗಳು ಸಾಹಿತ್ಯ ಹಾಗೂ ಪಠ್ಯದ ಅನುಸಂಧಾನದಲ್ಲಿ ಕ್ರಿಯಾತ್ಮಕವಾಗಿವೆ. ಚರಿತ್ರೆ ಮತ್ತು ವರ್ತಮಾನದ ಹಲವು ಅನ್ಯಾಯಗಳ ವಿರುದ್ಧದ ನ್ಯಾಯಸಾಧನೆಯ ಪ್ರಶ್ನೆಯನ್ನು ಎತ್ತುವ ಮೂಲಕ ಬದುಕಿನ ಬದಲಾವಣೆಯಂಥ ಮುಖ್ಯೋದ್ದೇಶದ ಸಾಧನೆಯಲ್ಲಿ ಆಸಕ್ತವಾಗಿವೆ.

ಈ ದೃಷ್ಟಿಯಿಂದ, ಸಾಮಾಜಿಕ ನ್ಯಾಯಸಾಧನೆ ಮತ್ತು ರಾಜಕೀಯ ಕಾಳಜಿಗಳು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯನ್ನು ರೂಪಿಸುವುದರಲ್ಲಿ ಮಹತ್ತರವೂ ಹಾಗೂ ಬಹುಮುಖಿಯೂ ಆದ ಪಾತ್ರವನ್ನು ವಹಿಸಿಲ್ಲ. ಆದ್ದರಿಂದ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬದುಕಿನ ಬದಲಾವಣೆಯ ಆಶಯಗಳು ಬಹುರೂಪಿಯಾದ ವಿಮರ್ಶಾ ಗುರಿಗಳನ್ನು ಅಥವಾ ಕಾರ್ಯಮಾದರಿಗಳನ್ನು ರೂಪಿಸಿಲ್ಲ. ಹೀಗಾಗಿಯೇ, ಸಹಜವಾಗಿ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ನಿರ್ದಿಷ್ಟವಾಗಿ ಹೇಳುವುದಾದರೆ, ಆಧುನಿಕ ಯುರೋಪು ಹಾಗೂ ಅಮೇರಿಕಾದ ಸಾಂಸ್ಕೃತಿಕ ವಿಮರ್ಶೆಗಳಲ್ಲಿ ಕೆಲವೇ ಕೆಲವು ವೈಧಾನಿಕ ನೆಲೆಗಳು ಕಂಡು ಬರುತ್ತವೆ. ಇವೆಲ್ಲವೂ ಕೂಡಾ ಪಾಶ್ಚಾತ್ಯ ಆಧುನಿಕ ತತ್ವಶಾಸ್ತ್ರದ 'ರೀಸನಿಸಂ' ಮತ್ತು 'ರ್‍ಯಾಷನಲಿಸಂ' ತತ್ವಚಿಂತನಾ ಪ್ರಸ್ಥಾನಗಳ ಸಮಾವಿಷ್ಟ ಸ್ವರೂಪದಲ್ಲಿ ಸಂಯೋಜಿತವಾಗಿರುವಂತೆ ತೋರುತ್ತದೆ. ಇನ್ನೂ ಖಚಿತವಾಗಿ ನಿರೂಪಿಸುವುದಾದರೆ, ಆಧುನಿಕ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳು 'ಥಿಯರಿ' ಅಥವಾ ತತ್ವವಾದಾತ್ಮಕ ವೈಧಾನಿಕ ರೂಪವನ್ನು ಪ್ರಧಾನವಾಗಿ ಬಳಸುತ್ತವೆ. ಅವು ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳ ನೆಲೆಗಳನ್ನು ಮೀರಿದ್ದರೂ ತತ್ವಶಾಸ್ತ್ರೀಯ ಆಯಾಮವನ್ನು ತೀವ್ರವಾಗಿ ಪಡೆದುಕೊಂಡಿರುತ್ತವೆ. ಫುಕೋನ ವಿಮರ್ಶೆಯಂತೂ ಸಾಹಿತ್ಯ ವಿಮರ್ಶೆ ಅಥವಾ ಸಾಂಸ್ಕೃತಿಕ, ವಿಶ್ಲೇಷಣೆಗಿಂತ ಉನ್ನತವಾದ 'ಎಪಿಸ್ಟಮಾಲಜಿ'ಯಾಗಿ ಬೆಳೆದಿದೆ. ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮಾರ್ಕ್ಸ್‌ವಾದದ ಪ್ರಭಾವದ ಇಳಿಗತಿ ಹಾಗೂ ಆಧುನಿಕೋತ್ತರ ಚಿಂತನೆಯ ಏರುಗತಿಯು, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗೆ ಐಡಿಯಾಲಜಿಕಲ್ ದೃಷ್ಟಿಕೋನವನ್ನು ಅಪ್ರಸ್ತುತಗೊಳಿಸಿದ್ದರಿಂದ ವಿಮರ್ಶೆಯ ತಾತ್ವಿಕ ಚಹರೆಗಳು, ಗುರಿ ಮತ್ತು ಕಾರ್ಯಮಾದರಿಗಳು ಅತ್ಯಂತ ಪರಿಮಿತವಾಗಿ ವಿಮರ್ಶೆಯನ್ನು, ಜಗತ್ತನ್ನು ಕುರಿತ ಪ್ರೌಢ ತಾತ್ವಿಕ ಚಿಂತನೆಯಾಗಿ ಮಾರ್ಪಡಿಸಿದಂತೆ ತೋರುತ್ತದೆ. ವಿಮೋಚಿತ ವಸಾಹತು ರಾಷ್ಟ್ರಗಳಾದ ಮಧ್ಯಏಷ್ಯಾ, ದಕ್ಷಿಣಏಷ್ಯಾ, ಆಫ್ರಿಕಾ ಹಾಗೂ ಕೆರಿಬಿಯನ್ ರಾಷ್ಟ್ರಗಳ ಸಾಂಸ್ಕೃತಿಕ ವಿಮರ್ಶೆಗಳಲ್ಲಿ 'ಥಿಯರಿ'ಯ ವೈಧಾನಿಕತೆಯನ್ನು ವ್ಯಾಪಕವಾಗಿ ನಿರಾಕರಿಸಲಾಗಿದೆ. ಇತ್ತೀಚಿಗೆ, ಪಾಶ್ಚಾತ್ಯ ಪ್ರಧಾನಧಾರೆಯ ಸಾಂಸ್ಕೃತಿಕ ವಿಮರ್ಶೆಯಲ್ಲೂ ಕೂಡಾ 'ಎಗೆನೆಸ್ಟ್ ಥಿಯರಿ' ಪ್ರವೃತ್ತಿ ಮೂಡಿದ್ದರೂ ಸಹ, ಎಲ್ಲಿಯವರೆಗೆ ವಿಮರ್ಶೆಯ ಗುರಿ ಹಾಗೂ ಕಾರ್ಯಮಾದರಿಗಳಲ್ಲಿ ಸಾಮಾಜಿಕ, ರಾಜಕೀಯ ಜರೂರು ಅಥವಾ ತುರ್ತು, ಪ್ರಮುಖ ಪ್ರಶ್ನೆಯಗುವುದಿಲ್ಲವೋ ಅಲ್ಲಿಯವರೆಗೆ ಬಹುರೂಪಿ ವೈಧಾನಿಕತೆಗಳು ಹುಟ್ಟಲಾರವು.

೮.೨.೭ ವಿಮರ್ಶಾ ಮಾದರಿಗಳಲ್ಲಿನ ಭಿನ್ನತೆ

ಈಗಾಗಲೇ ಚರ್ಚಿಸಲಾದಂತೆ, ವಿಮರ್ಶೆಯ ಬಹುರೂಪಿ ಮಾದರಿಗಳಿಗೆ ಇರುವುದು ಕೇವಲ ಸಾಹಿತ್ಯಕ ಅಥವಾ ವಿಮರ್ಶಾತ್ಮಕ ಬೌದ್ಧಿಕ ಕಾರಣಗಳಲ್ಲ ಎನ್ನುವುದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಿಂದ ಸ್ಪಷ್ಟವಾಗುತ್ತದೆ. ವಿಮರ್ಶೆಯ ಉದ್ದೇಶ, ಗುರಿ ಹಾಗೂ ಕಾರ್ಯಮಾದರಿಗಳು ಸಾಹಿತ್ಯಾತ್ಮಕತೆಯನ್ನು ಮೀರಿ ಸಮಾಜ, ಸಂಸ್ಕೃತಿ, ರಾಜಕಾರಣ, ಆರ್ಥಿಕತೆ, ಧರ್ಮ ಮತ್ತು ಭಾಷೆ

ಮೊದಲಾದವುಗಳ ಆವರಣಕ್ಕೆ ವ್ಯಾಪಕವಾದ ಪ್ರಮಾಣದಲ್ಲಿ ಜಿಗಿದಿವೆ. ಭಾರತೀಯ ಸಮಾಜ ಮತ್ತು ಸಂಸ್ಕೃತಿಯು ದೀರ್ಘಾವಧಿಯಲ್ಲಿ ಬಹುರೂಪಿಯಾಗಿ ಸೃಷ್ಟಿಸಿರುವ ವಿಕೃತಿಗಳು, ವಿರೂಪಗಳು ಮತ್ತು ಕ್ರೌರ್ಯಗಳನ್ನು ನಿವಾರಣೆ ಮಾಡುವ ದರ್ದು ಈಗ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹಲವು ಮಾದರಿಗಳನ್ನು ರೂಪಿಸಿದೆ. ಹೀಗಾಗಿ, ಸಾಮಾಜಿಕ ಸಮಾನತೆ, ಧಾರ್ಮಿಕ ಸಮಾನತೆ, ಆರ್ಥಿಕ ಸಮಾನತೆ, ರಾಜಕೀಯ ಸಮಾನತೆ, ಸಾಂಸ್ಕೃತಿಕ ಸಮಾನತೆ ಮತ್ತು ವ್ಯಕ್ತಿಗೌರವ ಸಾಧನೆಯಂಥ ಸಮೂಹ ಹಾಗೂ ವ್ಯಕ್ತಿನಿಷ್ಠ ಅಭೀಪ್ಸೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳಿಗೆ ಕಾರಣವಾಗಿವೆ. ಇದರಲ್ಲಿ ಮತ್ತೆ ಅನೇಕ ಒಳಮಾದರಿಗಳು ರಚನೆಯಾಗಲು ಸಹ ಇದೇ ಕಾರಣಗಳು ಬಲವಾದ ಒತ್ತಡಗಳೋಪಾದಿಯಲ್ಲಿ ಕ್ರಿಯಾತ್ಮಕವಾಗಿರುವುದನ್ನು ಕಾಣಬಹುದು. ಎಡಪಂಥೀಯ ವಿಮರ್ಶೆ, ಸಮಾಜವಾದಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ದಲಿತ ವಿಮರ್ಶೆಯಲ್ಲಿ ಒಳ ಪ್ರಭೇಧಗಳು ರೂಪುಗೊಳ್ಳುವುದಕ್ಕೆ ಐತಿಹಾಸಿಕವಾದ ಹಾಗೂ ಸಮಕಾಲೀನವಾದ ಒತ್ತಡಗಳಿವೆ. 'ದಲಿತ ಸ್ತ್ರೀವಾದಿ ವಿಮರ್ಶೆ'ಯಂತೆಯೇ ಮುಸ್ಲಿಂ ಸ್ತ್ರೀವಾದಿ ವಿಮರ್ಶೆಯೋ ಅಥವಾ ಆದಿವಾಸಿ ಅಥವಾ ಅಲೆಮಾರಿ ಸ್ತ್ರೀವಾದಿ ವಿಮರ್ಶೆಗಳೋ ರೂಪುಗೊಳ್ಳುವುದು ಇಲ್ಲಿನ ಸಹಜ ವಿದ್ಯಮಾನವೇ ಆಗಿದೆ.

ಈ ಹಿನ್ನೆಲೆಯಿಂದ ಕೂಡಾ ಪಾಶ್ಚಾತ್ಯ ಪ್ರಧಾನಧಾರೆಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಎಂದರೆ, ಯುರೋ ಅಮೇರಿಕನ್ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬಹುರೂಪಿ ಮಾದರಿಗಳು ಅಥವಾ ಅವುಗಳ ಒಳ ಪ್ರಭೇಧಗಳು ಬಹಳ ಕಡಿಮೆ. ಪಾಶ್ಚಾತ್ಯ ಕಾರ್ಮಿಕ ಅಥವಾ ದುಡಿವ ಜನರ ಸಂಸ್ಕೃತಿ ಸಂರಚನೆಯೇ ಇದೀಗ ಕಾರ್ಪೋರೇಟ್ ಸಂಸ್ಕೃತಿಯ ಏಕರೂಪೀಕರಣ ಪ್ರಭೇಧವಾಗಿ ಮಾರ್ಪಟ್ಟಿದೆ. ಅಲ್ಲದೆ ಈ ನವೀನ ವರ್ಗಕ್ಕೆ ಸಾಂಸ್ಕೃತಿಕ ಸಂಘರ್ಷವಾಗಲೀ, ಸಾಮಾಜಿಕ ಪ್ರತಿರೋಧವಾಗಲೀ, ಸುರಕ್ಷಿತ ಆರ್ಥಿಕ ಸಂಸ್ಕೃತಿಯ ಎದುರು ಕಿಂಚಿತ್ತೂ ಮಹತ್ವ ಹೊಂದಿವೆ ಎನಿಸುತ್ತಿಲ್ಲ. ಬಹಳ ಮುಖ್ಯವಾಗಿ ಈಗ ಕಾರ್ಮಿಕರು ಅಥವಾ ಶ್ರಮಿಕರ ವ್ಯಾಖ್ಯಾನವೇ ನುಣುಪು ರೂಪ ಪಡೆದುಕೊಂಡು ನಿರ್ದಿಷ್ಟ ಭೌತಿಕ ಪ್ರದೇಶದಿಂದ ಜಾಗತಿಕ ಜಾಲಕ್ಕೆ ಚದುರಿ ಹೋಗುತ್ತಿರುವಾಗ, ಸಮಾಜ ಹಾಗೂ ಸಂಸ್ಕೃತಿಗಳ ವ್ಯಾಖ್ಯಾನಗಳೂ ಸಹ ಇದೇ ಬಗೆಯ ಹೊಸ ವ್ಯಾಖ್ಯಾನ ಪಡೆದುಕೊಳ್ಳುತ್ತಿರುವಾಗ, ಇವುಗಳನ್ನು ಜಾಗತಿಕವಾಗಿ ಸಾಧಿಸುತ್ತಿರುವ ಆಧುನಿಕೋತ್ತರ ಚಿಂತನೆಯೇ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇಂಥ ಸಂಶ್ಲಿಷ್ಟ ಮಾದರಿಗಳು ಹುಟ್ಟಿಕೊಳ್ಳುವುದಕ್ಕೆ ಪ್ರಬಲ ಪ್ರತಿರೋಧ ಶಕ್ತಿಯಾಗಿ ರೂಪುಗೊಂಡಿದೆ. ಈ ದೃಷ್ಟಿಯಿಂದ ತೃತೀಯ ಜಗತ್ತಿನ ಸಾಂಸ್ಕೃತಿಕ ವಿಮರ್ಶೆಗಳಿಗಿಂತ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆ ನಿರ್ದಿಷ್ಟ ಮತ್ತು ಪರಿಮಿತ ಸ್ವರೂಪದ್ದಾಗಿದೆ.

೮.೨.೮ ವಿಮರ್ಶಾ ಕಾರ್ಯಮಾದರಿಗಳಲ್ಲಿನ ಭಿನ್ನತೆ

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕಾರ್ಯಮಾದರಿಗಳು ಪ್ರಧಾನಧಾರೆಯ ಸಾಹಿತ್ಯ ವಿಮರ್ಶೆಯಿಂದ ಸಂಪೂರ್ಣ ಭಿನ್ನವೂ ಹಾಗೂ ವ್ಯಾಪಕವೂ ಆಗಿದೆ. ಸಾಹಿತ್ಯ ಮತ್ತು ಪಠ್ಯಗಳ ವಿಶ್ಲೇಷಣೆ, ತುಲನೆ,

ಮೌಲ್ಯಮಾಪನ ಹಾಗೂ ಸಾಮಾನ್ಯ ತತ್ವಪ್ರತಿಪಾದನೆ ಎನ್ನುವ ಸ್ಥಾಪಿತ ಕಾರ್ಯಮಾದರಿಗೆ ಈಗ ಅಷ್ಟೇನೂ ಮಹತ್ವವಿಲ್ಲ. ಸಾಹಿತ್ಯ ಮತ್ತು ಸಾಹಿತ್ಯೇತರ ಆಸಕ್ತಿಗಳು, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮೊದಲಾದ ನ್ಯಾಯಸಾಧನೆಗಳ ಸಾಂಸ್ಕೃತಿಕ ರಾಜಕಾರಣಗಳು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕಾರ್ಯಮಾದರಿಗಳ ಸಾಮಾನ್ಯ ಸ್ವರೂಪವೆಂದು ಗುರುತಿಸಬಹುದು. ಇಂದು ಸಾಂಸ್ಕೃತಿಕ ವಿಮರ್ಶೆಯನ್ನು ವರ್ಗ, ಜಾತಿ, ಉಪಜಾತಿ, ಸಮುದಾಯ ಮತ್ತು ವ್ಯಕ್ತಿಮಟ್ಟದ ಬಹುಸ್ತರೀಯ ನ್ಯಾಯಸಾಧನೆಯ ಒಂದು ಪ್ರಜಾಸತ್ತಾತ್ಮಕ ರೂಪವೆಂದು ಭಾವಿಸಲ್ಪಟ್ಟಿರುವುದರಿಂದ ಅದರ ಕಾರ್ಯಮಾದರಿಗಳೂ ಕೂಡಾ ಬಹುಸ್ತರೀಯವಾಗಿವೆ ಹಾಗೂ ಸಂಕೀರ್ಣವಾಗಿವೆ.

ಪ್ರಸ್ತುತ, ವರ್ತಮಾನದ ಬದುಕಿನ ಬಹುರೂಪಿ ಸಮಸ್ಯೆಗಳಾದ ಕೋಮುವಾದ, ಭಯೋತ್ಪಾದನೆ, ಮತೀಯವಾದ, ಪರಿಸರ ಸಮಸ್ಯೆ, ಪರಮಾಣು ಮತ್ತು ನ್ಯೂಕ್ಲಿಯರ್ ಕದನಗಳು, ಜನಾಂಗವಾದ ಹಾಗೂ ಹಿಂಸಾವಾದಗಳ ವಿರುದ್ಧದ ಅಭಿಪ್ರಾಯ ರೂಪೀಕರಣ ಮತ್ತು ಪ್ರತಿರೋಧಾತ್ಮಕತೆ ಕೂಡಾ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಕಾರ್ಯಮಾದರಿಗಳಾಗಿ ಪರಿಗಣಿತವಾಗಿವೆ.

ಈ ರೀತಿಯ ವೈವಿಧ್ಯಮಯವಾದ ಹೊಣೆಗಾರಿಕೆಗಳು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಕಾರ್ಯಮಾದರಿಗಳಾಗಿರುವುದಿಲ್ಲ. ಅಲ್ಲದೆ, ಇಂದಿನ ಜಾಗತಿಕವಾದ ಗಂಭೀರ ಆತಂಕ ಹಾಗೂ ಸಮಸ್ಯೆಗಳಿಗೆ ಬಹುಪಾಲು ನವವಸಾಹತುಶಾಹಿ ರಾಷ್ಟ್ರಗಳ ವಿದೇಶಾಂಗ ನೀತಿಯೋ ಅಥವಾ ಅದರ ರಾಜಕೀಯಾರ್ಥಿಕ ಕಾರ್ಯಾಚರಣೆ ರೂಪಗಳೋ ಕಾರಣವಾಗಿರುವಂಥ ಸಮಕಾಲೀನ ಸನ್ನಿವೇಶದಲ್ಲಿ, ನೋಮ್‌ಚಾಮ್‌ಸ್ಕಿ ಅಂಥ ಭಾಷಾ ವಿಜ್ಞಾನಿ ಹಾಗೂ ಪ್ರಜಾಪ್ರಭುತ್ವವಾದಿ ಹೋರಾಟಗಾರನನ್ನು ಹೊರತುಪಡಿಸಿದರೆ, ಯಾರೇ ಅಂಥ ಇನ್ನಿತರ ಮಹತ್ವದ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶಕ ಕೂಡಾ ಇಂಥ ಅಗ್ನಿದಿವ್ಯದ ಕಾರ್ಯಮಾದರಿಗಳನ್ನು ಜೀಸಸ್‌ನ ಹೆಗಲಿಗೇರಿದ ಶಿಲುಬೆಯನ್ನಾಗಿ ಮಾಡಿಕೊಂಡಿಲ್ಲ. ಹಾಗೆಯೇ, ಇಂಥ ರಾಷ್ಟ್ರಗಳ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿರುವ ಯುರೋಅಮೇರಿಕನ್ ಅಲ್ಲದ ಮತ್ತು ತೃತೀಯ ಜಗತ್ತಿಗೆ ಸೇರಿದ ಅಥವಾ ಪ್ರಥಮ ಜಗತ್ತಿನ ತಾತ್ವಿಕ ವಿರೋಧಿ ನೆಲೆಯ ವಿಮರ್ಶಕರ ಚಿಂತನೆ ಹಾಗೂ ವಿಮರ್ಶೆಗಳಲ್ಲಿ ಈ ತುರ್ತಿನ ಪ್ರಶ್ನೆಗಳು ಸಮುದಾಯ ಅಥವಾ ಬೀದಿಯ ಆವರಣಕ್ಕೆ ಇಳಿಯುವಲ್ಲಿ ಸೋಲುತ್ತಿವೆ.

೮.೩ ಅಧ್ಯಾಯದ ಫಲಿತಗಳು

'ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ತೌಲನಿಕ ಪರಿಶೀಲನೆ'ಯಿಂದ ಕಂಡುಕೊಂಡ ಪ್ರಮುಖ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಚಾರಿತ್ರಿಕವಾಗಿ ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳು ಒಂದೇ ಕಾಲಘಟ್ಟದ ವಿದ್ಯಮಾನಗಳಾದರೂ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿಗಳ ಸ್ವರೂಪವನ್ನು ಕುರಿತ ವೈವಿಧ್ಯಮಯ ಹಾಗೂ

ಸಂಕೀರ್ಣವಾದ ಗ್ರಹಿಕೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಿಂತ ವ್ಯಾಪಕವಾದ ತಾತ್ವಿಕತೆಯನ್ನು ರೂಪಿಸಿವೆ.

ಆ. ತಾತ್ವಿಕತೆಯ ವ್ಯಾಪಕತೆಯು ವಿಮರ್ಶೆಯ ಗುರಿ ಹಾಗೂ ಕಾರ್ಯಮಾದರಿಗಳ ಸಾಮಾನ್ಯ ಸ್ವರೂಪವನ್ನು ರೂಢಮೂಲವಾಗಿ ಪಲ್ಲಟಗೊಳಿಸುವ ಮೂಲಕ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಬಹು ವಿಮರ್ಶಾ ವಿಧಾನಗಳ ಏಕಾತ್ಮಕ ರೂಪವಾಗಿ ವಿಕಾಸಗೊಳಿಸಿದೆ. ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ನಿರ್ದಿಷ್ಟ ತಾತ್ವಿಕತೆಯು ಅದರ ಇಂಥಹ ವಿಕಾಸದ ಸಾಧ್ಯತೆಯನ್ನು ಪ್ರತಿಬಂಧಿಸಿದೆ.

ಇ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಆರಂಭಿಕ ಘಟ್ಟದಲ್ಲೇ ಸಾಂಸ್ಕೃತಿಕ ವಿಮರ್ಶೆಯ ಕೆಲವು ಸ್ಥೂಲ ಚಹರೆಗಳು ಬೇರೆ ಬೇರೆ ಸ್ತರ ಹಾಗೂ ನೆಲೆಗಳಲ್ಲಿ ಪ್ರಕಟಗೊಳ್ಳಲು ವಿಮರ್ಶೆಯು, ಸಮಾಜ ಹಾಗೂ ಸಂಸ್ಕೃತಿ ಪ್ರಶ್ನೆಗಳನ್ನು ಸಾಹಿತ್ಯದ ಚರ್ಚೆಯಲ್ಲಿ ಪ್ರಸ್ತುತವೆಂದು ಪರಿಗಣಿಸಿದ್ದೇ ಮುಖ್ಯ ಕಾರಣವಾಗಿದೆ. ಈ ಪರಿಗಣನೆಯು ಪರಿಭಾವಿಸುವ ಕ್ರಮ, ವಿಧಾನ ಮತ್ತು ದೃಷ್ಟಿಕೋನವಾಗಿ ಬೆಳೆಯುವ ಸ್ವರೂಪಕ್ಕನುಸಾರವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪಗಳು ಸ್ಪಷ್ಟಗೊಳುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಭಿತ್ತಿ ಹಾಗೂ ವ್ಯಾಪಿ ಚಿಕ್ಕದು.

ಈ. ಸಮಾಜ ಮತ್ತು ಸಂಸ್ಕೃತಿಗಳ ಸ್ವರೂಪವನ್ನು ವಿವರಿಸುವುದು ಅಥವಾ ವಿಶ್ಲೇಷಿಸುವುದಕ್ಕಿಂತ ಅವುಗಳನ್ನು ಬದಲಾಯಿಸುವುದು ಮುಖ್ಯವೆಂದು ಭಾವಿಸಿದ್ದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವೈಧಾನಿಕತೆಯಲ್ಲಿ ಸಂಘರ್ಷಾತ್ಮಕ ಆಯಾಮ ರೂಪುಗೊಂಡಿತು. ಇದರ ಬದಲು ಅವುಗಳ ವಿಶ್ಲೇಷಣೆಯೇ ಪ್ರಧಾನವೆಂದು ಭಾವಿಸಿದ್ದರಿಂದ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಂಕಥನಾತ್ಮಕ ಆಯಾಮ ಹುಟ್ಟು ಪಡೆಯಿತು.

ಉ. ಬದುಕಿನ ಬದಲಾವಣೆಯ ಕಾಳಜಿಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಭಾವ ಹಾಗೂ ಪ್ರೇರಣೆಗಳಾಗಿರುವುದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಸಾಂಸ್ಕೃತಿಕ ರಾಜಕಾರಣದ ಬೌದ್ಧಿಕ ರೂಪವಾಗಿ ವಿಕಾಸವಾಯಿತು. ಇಂಥ ಕಾಳಜಿಗಳೇನೂ ಇಲ್ಲದ ಪ್ರಧಾನಧಾರೆಯ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯು ಪಾಶ್ಚಾತ್ಯ ತತ್ವಶಾಸ್ತ್ರದ ಆಧುನಿಕ ರೂಪವಾದ ಜ್ಞಾನಮೀಮಾಂಸೆಯ ಮಹತ್ವದ ಕವಲಾಗಿ ಬೆಳೆಯಿತು.

ಊ. ವರ್ಣ, ವರ್ಗ, ಲಿಂಗ, ಜಾತಿ, ಮತ ಮತ್ತು ಧರ್ಮ ಮೊದಲಾದವುಗಳ ಅಸಮಾನತೆಯನ್ನು ನಿವಾರಿಸಿ ಸಮಾನತಾವಾದಿ ಹಾಗೂ ಮಾನವತಾವಾದಿ ಸಮಾಜ ನಿರ್ಮಿಸುವ ಮಹತ್ತರ ಉದ್ದೇಶವೇ ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಮಾಜ, ಸಂಸ್ಕೃತಿ ಮತ್ತು ಧರ್ಮಗಳನ್ನು ಬಿಡಿ ಬಿಡಿಯಾದ ಆಕೃತಿಗಳಲ್ಲಿ ಗ್ರಹಿಸಲು ಇರುವ ಮುಖ್ಯ ಕಾರಣವಾಗಿದೆ. ಆದರೆ ಏಕರೂಪೀಕರಣವನ್ನು ಪ್ರತಿಪಾದಿಸುವ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಆಧುನಿಕೋತ್ತರ ಚಿಂತನೆ ಪ್ರತಿಪಾದಿಸುತ್ತಿರುವ ಬಿಡಿ ಬಿಡಿಯಾದ ಆಕೃತಿಗಳ ಹಿನ್ನಲೆಯಲ್ಲಿ ಇಂಥ ಯಾವುದೇ ಮಹತ್ತರವಾದ ಉದ್ದೇಶಗಳನ್ನು ಹೊಂದಿಲ್ಲ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ

ತತ್ವ ಮತ್ತು ಪ್ರಯೋಗಗಳ ನಡುವಿನ ಬೆಸುಗೆಗೆ ಕಾರಣವಾದರೆ, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ಅವುಗಳ ವಿಘಟನೆಗೆ ಅಥವಾ ವಿರೋಧಾಭಾಸಕ್ಕೆ ಕಾರಣವಾಗಿದೆ.

ಋ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಹಾಗೂ ಅದರ ವಿವಿಧ ರೂಪಗಳಿಗೂ, ವಸಾಹತೋತ್ತರ ಅಥವಾ ನಿರ್ವಸಾಹತೀಕರಣದ ಸಾಂಸ್ಕೃತಿಕ ವಿಮರ್ಶೆಗಳಿಗೂ ತಾತ್ವಿಕತೆಯಲ್ಲಿರುವ ಸಾಮ್ಯತೆಯೇ ಅವುಗಳನ್ನು ತೃತೀಯ ಜಗತ್ತಿನ ವಿಮರ್ಶಾ ರೂಪಗಳಾಗಿ ರೂಪಿಸಿದೆ. ವಸಾಹತುಶಾಹಿಯ ಕರಾಳ ವಿಸ್ತೃತಿಯಿಂದ ಬಿಡುಗಡೆಯಾಗುವ ಹಾಗೂ ನವವಸಾಹತುಶಾಹಿಯ ಮೋಹಪಾಶದಿಂದ ಪಾರಾಗುವ ಸಂಕೀರ್ಣ ಹೋರಾಟವು ಕನ್ನಡದಂಥ ತೃತೀಯ ಜಗತ್ತಿನ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕತೆಯನ್ನು ರೂಪಿಸುವಾಗ, ಅದು ದೇಶಿ ಸಾಂಸ್ಕೃತಿಕ ಯಾಜಮಾನ್ಯದ ಪ್ರತಿರೋಧವನ್ನು ತನ್ನ ಮುಖ್ಯವಾದ ತಾತ್ವಿಕತೆಯಾಗಿ ಮಾಡಿಕೊಂಡಿದೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಬಹುರೂಪಿ ಮಾದರಿಗಳು ಹಾಗೂ ಅವುಗಳ ಒಳಮಾದರಿಗಳು ಹುಟ್ಟಲು ಕಾರಣವಾಗಿದೆ. ಈ ವಿದ್ಯಮಾನವು, ಏಕಕಾಲಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು, ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಪ್ರಧಾನಧಾರೆಯಿಂದ ಹಾಗೂ ಇನ್ನಿತರ ಉಪಧಾರೆಗಳಿಂದ ಪ್ರತ್ಯೇಕವಾದ ಒಂದು ವಿಶಿಷ್ಟವಾದ ಮಾರ್ಗವಾಗಿಸಿದೆ.

ೠ. ಏಕಕಾಲಕ್ಕೆ, ಚಾರಿತ್ರಿಕವಾಗಿ ಸಂಕೀರ್ಣವಾಗಿರುವ ದೇಶಿ ಯಾಜಮಾನ್ಯ ರೂಪಗಳೂ ಮತ್ತು ವಿದೇಶಿ ಜಟಿಲ ಸವಾಲುಗಳ ಮಾದರಿಗಳೊಂದಿಗೆ ಒಟ್ಟಿಗೆ ಸೆಣೆಸಬೇಕಾಗಿರುವುದೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಪ್ರಶ್ನೆಗಳಲ್ಲಿ ಘರ್ಷಣೆಯ ಮುಖ್ಯ ಪ್ರಶ್ನೆಗಳು ಹುಟ್ಟಲು ಕಾರಣವಾಗಿದೆ.

ಎ. ಒಂದು ಸಮಾಜ ಹಾಗೂ ಸಂಸ್ಕೃತಿಯ ರಚನೆಯ ವೈವಿಧ್ಯತೆಗಳಿಂದಲೇ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳು ಹಾಗೂ ಒಳರೂಪಗಳು ಹುಟ್ಟುವುದಿಲ್ಲ. ಬದಲಾಗಿ, ಅಧೀನ ರಚನೆಗಳು ಪ್ರಧಾನ ರಚನೆಗಳ ವಿರುದ್ಧ ಹೂಡುವ ಬಂಡಾಯ ಹಾಗೂ ಅವುಗಳನ್ನು ಪ್ರಧಾನ ರಚನೆಗಳು ಹತ್ತಿಕ್ಕಲು ನಡೆಸುವ ಘರ್ಷಣೆಯಲ್ಲಿ ಇಂಥ ರೂಪಗಳು ಹುಟ್ಟುತ್ತವೆ ಎನ್ನುವುದಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಅತ್ಯುತ್ತಮ ಉದಾಹರಣೆಯಾಗಿದೆ. ಈ ಪ್ರಕ್ರಿಯೆ ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಲ್ಲಿ ವರ್ಗಸಂಘರ್ಷದ ಚಹರೆ ಮರೆಯಾದಂದಿನಿಂದ ತೀವ್ರತೆ ಕಳೆದುಕೊಂಡಿದೆ.

ಏ. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮಾರ್ಕ್ಸ್‌ವಾದಿ ವಿಚಾರಧಾರೆಯು ಒಂದು ಚಿಂತನೆಯಾಗಿ, ಆಲೋಚನೆಯಾಗಿ, ದೃಷ್ಟಿಕೋನವಾಗಿ ಮತ್ತು ವಿಧಾನವಾಗಿ ಹೊಸಹುಟ್ಟು ಪಡೆದುಕೊಳ್ಳಲು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮಾದರಿಗಳು, ಬಹುರೂಪಿ ಮಾದರಿಗಳು ಮುಖ್ಯವಾದ ಕಾರಣಗಳಾಗಿವೆ. ಇದು ವಿಮರ್ಶೆಯ ಮಾದರಿಗಳು ಸೈದ್ಧಾಂತಿಕ ಪ್ರೇರಣೆಗಳನ್ನು ಪರಿಷ್ಕರಿಸುವ ಹಾಗೂ ಬೆಳೆಸುವ ವಿಧಾನಗಳೂ ಆಗಿರುತ್ತವೆ ಎನ್ನುವುದಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕೊಟ್ಟಿರುವ ಸಮರ್ಥವಾದ ಆಧಾರವೂ ಆಗಿದೆ.

ಅಧ್ಯಾಯ-ಒಂಭತ್ತು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳು

ಅಧ್ಯಾಯ - ೯: ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳು

> "ಆದರೆ ಇಷ್ಟು ದೀರ್ಘಕಾಲದ ಬಳಿಕವೂ ಸಾಂಸ್ಕೃತಿಕ ಅಧ್ಯಯನಗಳ ಸ್ವರೂಪ ಖಚಿತತೆ ಪಡೆದಿಲ್ಲ. ಖಚಿತತೆಯಿಲ್ಲ ಎನ್ನುವುದನ್ನು ಬರಿ ದೋಷವಾಗಿ ನೋಡಬೇಕಿಲ್ಲ. ತಾತ್ವಿಕ ಖಚಿತತೆ ಎನ್ನುವುದು ಒಮ್ಮೆಗೆ ಸರ್ವಮಾನ್ಯವಾದ ಒಂದು ಖಾಯಂ ವ್ಯಾಖ್ಯಾನ ಪಡೆದುಕೊಳ್ಳುವ ರೂಪಸಿದ್ಧಿಯಲ್ಲ. ಅದು ನಿರಂತರ ಬದಲಾಗುತ್ತಿರುವ ಜಾಗತಿಕ ಹಾಗೂ ಸ್ಥಳೀಯ ಸನ್ನಿವೇಶಗಳನ್ನು ಬೆನ್ನಟ್ಟುತ್ತ, ಬದಲಾಗುತ್ತಿರುವ ಬದುಕನ್ನು ಅರಿಯುವುದಕ್ಕಾಗಿ ಪಡೆದುಕೊಳ್ಳಬೇಕಾದ ಅರಿವಾಗಿದೆ. ಇದು ವರ್ತಮಾನದ ವಿದ್ಯಮಾನಗಳಿಗೆ ಜೀವಂತವಾಗಿ ನಿರಂತರವಾಗಿ ಸ್ಪಂದಿಸುವ ಪ್ರಕ್ರಿಯೆಯಲ್ಲಿ ದಕ್ಕುವಂತಹುದು. ಕನ್ನಡದಲ್ಲಿ ಈ ಬಗೆಯ ತಾತ್ವಿಕ ಪರಿಣತಿ ಪಡೆಯುವುದು ಕಷ್ಟವಾಗಿದೆ. ಇದಕ್ಕೆ ಕಾರಣಗಳು ಹಲವು.
>
> ತಾತ್ವಿಕ ಪರಿಣತಿ ಎಂದರೆ, ಯಾಕಾಗಿ ಅಧ್ಯಯನ ಮಾಡಬೇಕು ಎಂಬ ಸೈದ್ಧಾಂತಿಕ ಆಶಯವು, ಏನನ್ನು ಅಧ್ಯಯನ ಮಾಡಬೇಕು ಎಂಬ ವಸ್ತುವಿನ ಆಯ್ಕೆಯೂ, ಹೇಗೆ ಮಾಡಬೇಕೆಂಬ ಅಧ್ಯಯನ ವಿಧಾನವೂ ಅರ್ಥಪೂರ್ಣವಾಗಿ ಏಕೀಭವಿಸುವುದು. ಅನುಭವ ಸಮೃದ್ಧಿ ಮತ್ತು ಶ್ರಮಪಡುವಿಕೆ ಇರುವ ನಮ್ಮ ಅಧ್ಯಯನಕಾರರು ಈ ತಾತ್ವಿಕ ಪರಿಣತಿಯನ್ನು ಪಡೆದುಕೊಳ್ಳುವ ಹಾದಿಯಲ್ಲಿದ್ದಾರೆ."
>
> ರಹಮತ್ ತರೀಕೆರೆ, 'ಸಾಂಸ್ಕೃತಿಕ ಅಧ್ಯಯನ' ಕೃತಿಯಿಂದ.

೯.೧ ಪೀಠಿಕೆ

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವು ಸಮಸ್ಯೆಗಳಿಂದ ಸಂಪೂರ್ಣ ಮುಕ್ತವಾಗಿರುವ 'ಆದರ್ಶ' ಸ್ಥಿತಿ ಅಥವಾ 'ಪರಿಪೂರ್ಣ' ಅವಸ್ಥೆಯೇನಲ್ಲ. ಹಾಗೆ ನೋಡುವುದಾದರೆ ಯಾವುದೇ ಕಾಲ, ದೇಶ ಮತ್ತು ಸಂದರ್ಭದ ಸಾಹಿತ್ಯ ವಿಮರ್ಶೆಯೂ ಸಹ ಸಮಸ್ಯೆಗಳಿಂದ ಸಮಗ್ರವಾಗಿ ಹೊರತಾಗಿರುವುದು ಸಾಧ್ಯವೇ ಇಲ್ಲ. ಅದರಲ್ಲೂ, ಒಂದು ನಿರ್ದಿಷ್ಟ ಸಾಹಿತ್ಯ ವಿಮರ್ಶಾ ಪ್ರಕಾರದ ಪ್ರಮುಖ ಸಮಸ್ಯೆಗಳು ಮತ್ತು ದೋಷಗಳ ವಿರುದ್ಧ ತೀವ್ರವಾದ ತಾತ್ವಿಕ ವಿರೋಧ ವ್ಯಕ್ತಪಡಿಸುವ ಮೂಲಕ ಹುಟ್ಟಿಕೊಳ್ಳುವ ವಿಮರ್ಶಾ ಪ್ರಕಾರಗಳೂ ಕೂಡಾ ಅನೇಕ ಸಮಸ್ಯೆಗಳನ್ನು ತಮ್ಮ ಒಡಲಿನೊಳಗೆ ಇಟ್ಟುಕೊಂಡೇ ಇರುತ್ತವೆ. ಸಾಹಿತ್ಯಕ ಅಥವಾ ಸಾಂಸ್ಕೃತಿಕ ಸಿದ್ಧಾಂತಗಳ ತತ್ವಪ್ರಣಾಲಿಯನ್ನು ತಮ್ಮ ಆಶಯ ಹಾಗೂ ಆಶೋತ್ತರಗಳಾಗಿ ಹೊಂದಿರುವ ವಿಮರ್ಶಾ ಪ್ರಕಾರಗಳಲ್ಲಿ ಅವುಗಳ ವಿಶಿಷ್ಟ ಶಕ್ತಿಗಳು ಮತ್ತು ಸಮಸ್ಯೆಗಳು ಒಟ್ಟೊಟ್ಟಿಗೆ ರೂಪುಗೊಳ್ಳುತ್ತವೆ. ಇದಕ್ಕೆ ಹಲವು ಸಂಕೀರ್ಣವಾದ ಕಾರಣಗಳಿವೆ. ಅಲ್ಲದೆ, ಇವುಗಳ ಬೇರುಗಳು ಬಹಳ ವಿಸ್ತಾರವಾಗಿ ಹಬ್ಬಿರುವುದು ಮಾತ್ರವಲ್ಲದೆ; ಬಹಳ ಆಳದವರೆಗೂ ಚಾಚಿರುತ್ತವೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲೂ ಈ ವಿಚಾರಗಳು ಅಷ್ಟೇ ವಾಸ್ತವವಾದವುಗಳು.

೯.೨ ಬಹುರೂಪಿ ಸಮಸ್ಯೆಗಳು

ವಿಮರ್ಶೆಯ ಸಮಸ್ಯೆಗಳು ಸಾಹಿತ್ಯದ ಸಮಸ್ಯೆಗಳಿಗಿಂತ ಭಿನ್ನವಾದ ಸ್ವರೂಪದವುಗಳು. ಇನ್ನೂ ಮುಖ್ಯವಾದ ವಿಚಾರವೆಂದರೆ, 'ಸಾಹಿತ್ಯದ ಸಮಸ್ಯೆ'ಗಳನ್ನು ಅರಿಯ ಹೊರಡುವ ವಿಮರ್ಶೆಗೆ, ಅವುಗಳೇ ಕ್ರಮೇಣ 'ವಿಮರ್ಶೆಯ ಸಮಸ್ಯೆ'ಗಳಾಗಿ ಮಾರ್ಪಾಡಾಗುವ ವಿಶಿಷ್ಟ ಅವಸ್ಥೆಯನ್ನು ಸಾಹಿತ್ಯ ವಿಮರ್ಶೆ ಒಳಗೊಂಡಿರುವುದು. ಹೀಗಾಗಿ, ವಿಮರ್ಶೆಯ ಸಮಸ್ಯೆಗಳು ಸಾಹಿತ್ಯದ ಸಮಸ್ಯೆಗಳೂ ಹೌದು; ವಿಮರ್ಶೆಯ ಸಮಸ್ಯೆಗಳು ಹೌದು. ಏಕಕಾಲಕ್ಕೆ ಸಾಹಿತ್ಯದ ಸಮಸ್ಯೆಗಳು ಮತ್ತು ವಿಮರ್ಶೆಯ ಸಮಸ್ಯೆಗಳು ಒಗ್ಗೂಡುವ ಮೂಲಕ ರೂಪುಗೊಳ್ಳುವ ವಿಶಿಷ್ಟ ಸ್ವರೂಪದ ಸಮಸ್ಯೆಗಳು. ಆದ್ದರಿಂದಲೇ, ಅವು ನಿಜವಾದ ಅರ್ಥದಲ್ಲಿ ಸಮಾಜದ ಸಮಸ್ಯೆಗಳೂ ಹೌದು ಮತ್ತು ಸಂಸ್ಕೃತಿಯ ಸಮಸ್ಯೆಗಳೂ ಹೌದು.

ಈ ಹಿನ್ನೆಲೆಯಿಂದ ನೋಡುವುದಾದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳು ಕೇವಲ ಬಹುರೂಪಿಯಾದವುಗಳು ಮಾತ್ರವೆ ಅಲ್ಲ; ಅತ್ಯಂತ ಸಂಕೀರ್ಣವಾದವುಗಳೂ ಮತ್ತು ದ್ವಂದ್ವಾತ್ಮಕವಾದವುಗಳೂ ಆಗಿವೆ. ಹೀಗಾಗಿಯೇ ಅವು ಸಮಸ್ಯಾತ್ಮಕವಾದವುಗಳೂ ಆಗಿವೆ.

ಇದಕ್ಕೆ ಈಗಾಗಲೇ ಪ್ರಸ್ತಾಪಿಸಲಾಗಿರುವಂತೆ ಹಲವು ಮಹತ್ವದ ಕಾರಣಗಳಿವೆ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಾಹಿತ್ಯಾಸಕ್ತ ಧೋರಣೆಗೆ ವಿರುದ್ಧವಾಗಿ ಸಾಹಿತ್ಯೇತರ ಆಸಕ್ತಿಗಳನ್ನು ತನ್ನ ಮುಖ್ಯ ಧೋರಣೆಯಾಗಿ ಹೊಂದಿರುವುದು; ಸಾಹಿತ್ಯ ಮತ್ತು ವಿಮರ್ಶೆಯ ಸ್ವರೂಪ, ಅರ್ಥ, ಉದ್ದೇಶ ಹಾಗೂ ಕಾರ್ಯಮಾದರಿಗಳನ್ನು ಭಿನ್ನ ಕ್ರಮಗಳಲ್ಲಿ ವಿವರಿಸಿಕೊಂಡಿರುವುದು; ಸಮಾಜ, ಸಂಸ್ಕೃತಿ, ರಾಜಕಾರಣ, ಧರ್ಮ, ಭಾಷೆ ಮತ್ತು ಆರ್ಥಿಕ ಪ್ರಶ್ನೆಗಳು ಮೊದಲಾದವುಗಳನ್ನು 'ಪಠ್ಯಾನುಸಂಧಾನ'ದ ಮುಖ್ಯ ಪ್ರಶ್ನೆಗಳಾಗಿ ಪರಿಭಾವಿಸಿಕೊಳ್ಳುವುದು ಅಥವಾ ಸ್ವತಃ ಅವುಗಳನ್ನೇ ಮಹತ್ವದ 'ಪಠ್ಯ'ಗಳಾಗಿ ಅಂಗೀಕರಿಸಿರುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಈ ಎಲ್ಲಾ ಉದ್ದೇಶ ಮತ್ತು ಕ್ರಿಯೆಗಳನ್ನು ಸಮಕಾಲೀನ ಸಮಾಜದ ಮನುಷ್ಯನ ಬದುಕಿನ ಬದಲಾವಣೆಯ ಆಶಯಗಳು ಹಾಗೂ ಆಶೋತ್ತರಗಳ ಭಾಗವಾಗಿ ನಿರ್ವಹಿಸುವುದು, ಇಂಥ ಕೆಲವು ಮುಖ್ಯವಾದ ಕಾರಣಗಳಾಗಿವೆ.

ಹೀಗಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳನ್ನು ಕೇವಲ ಸಾಹಿತ್ಯಕ ಮಾತ್ರವಲ್ಲದೆ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಭಾಷಿಕ ಸಮಸ್ಯೆಗಳ ಭಾಗವಾಗಿ ಅಥವಾ ಅವುಗಳ ರೂಪವಾಗಿ ವಿಶಿಷ್ಟ ಕ್ರಮದಲ್ಲಿ ಗ್ರಹಿಸಬೇಕಿದೆ ಹಾಗೂ ಅರ್ಥೈಸಬೇಕಿದೆ. ಹಾಗೆಂದ ಮಾತ್ರಕ್ಕೆ, ಈ ಸಮಸ್ಯೆಗಳನ್ನು ಕುರಿತು ಮೃದು ಧೋರಣೆಯನ್ನು ತಳೆಯಬೇಕೆಂದಾಗಲೀ ಅಥವಾ ಅವುಗಳನ್ನು ತಳ್ಳಿಹಾಕಬೇಕೆಂದಾಗಲೀ ಅರ್ಥವಲ್ಲ. ಇದರ ಬದಲಾಗಿ, ಸಾಧ್ಯವಾದಷ್ಟು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಪರಿಜ್ಞಾನದೊಂದಿಗೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳನ್ನು ಗ್ರಹಿಸಬೇಕಿದೆ ಎನ್ನುವ ಎಚ್ಚರವನ್ನು ಇಟ್ಟುಕೊಳ್ಳಬೇಕಿದೆ.

ಈ ವಿಶಾಲ ಭಿತ್ತಿಯ ಹಿನ್ನೆಲೆಯಲ್ಲಿ ನೋಡಿದಾಗ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದಲ್ಲಿ ಕೆಲವು ಮುಖ್ಯವಾದ ಸಮಸ್ಯೆಗಳನ್ನು ಗುರುತಿಸಬಹುದು. ಅವುಗಳೆಂದರೆ, ಅ. ತಾತ್ವಿಕ ಪರಿಕಲ್ಪನೆಯ ಗ್ರಹಿಕೆಯಲ್ಲಿನ ಸಮಸ್ಯೆಗಳು ಆ. ಉದ್ದೇಶಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು ಇ. ವೈಧಾನಿಕತೆಯ ಗ್ರಹಿಕೆಯಲ್ಲಿನ ಸಮಸ್ಯೆಗಳು ಈ. ಕಾರ್ಯಮಾದರಿಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು ಉ. ಪರಿಭಾಷೆ ಮತ್ತು ಪರಿಕಲ್ಪನೆಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು ಊ. ಆಯಾಮಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು ಮತ್ತು ಋ. ಆಶಯ ಹಾಗೂ ಆಶೋತ್ತರಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು.

ಈ ಸಮಸ್ಯೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ಪ್ರಮುಖ ಮಾದರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸ್ವರೂಪವಾಗಿದೆ. ಇವು ಎಲ್ಲಾ ಮಾದರಿಗಳಲ್ಲಿ ಒಂದೇ ಪ್ರಮಾಣ ಹಾಗೂ ಸ್ವರೂಪದಲ್ಲಿ ಇವೆ ಎಂದೇನೂ ಅಲ್ಲ. ಒಂದೊಂದು ಮಾದರಿಯಲ್ಲಿ ಒಂದೊಂದು ಸಮಸ್ಯೆ ಪ್ರಧಾನವಾಗಿಯೋ ಅಥವಾ ಅಪ್ರಧಾನವಾಗಿಯೋ ಇರಬಹುದು. ಒಂದು ಸಂದರ್ಭದಲ್ಲಿ ಕೇಂದ್ರಸ್ಥಾನದಲ್ಲಿರುವ ಸಮಸ್ಯೆ ಇನ್ನೊಂದು ಸಂದರ್ಭದಲ್ಲಿ ಅಂಚಿಗೆ ಸರಿದಿರಬಹುದು. ಹೀಗೆ ಅವುಗಳ ಪ್ರಮಾಣ, ಸ್ಥಾನ ಮತ್ತು ತೀವ್ರತೆಗಳು ವ್ಯತ್ಯಾಸಾತ್ಮಕ ಕ್ರಮಗಳಲ್ಲಿ ಪ್ರಕಟವಾಗಿರಬಹುದು. ಇಷ್ಟಾದರೂ, ಇವುಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಸಾಮಾನ್ಯ ಸಮಸ್ಯೆಗಳೆಂದು ಗುರುತಿಸಲಾಗಿದೆ.

ಹೀಗಾಗಿ, ಇಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

೯.೨.೧ ತಾತ್ವಿಕ ಪರಿಕಲ್ಪನೆಯ ಗ್ರಹಿಕೆಯಲ್ಲಿನ ಸಮಸ್ಯೆಗಳು

ಸಾಹಿತ್ಯ ಮತ್ತು ವಿಮರ್ಶೆಯ ಅರ್ಥ, ಉದ್ದೇಶ, ಕಾರ್ಯಮಾದರಿಗಳು ಹಾಗೂ ಪ್ರಯೋಜನಗಳು ಮೊದಲಾದವುಗಳನ್ನು ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ತಮ್ಮದೇ ಆದ ತಾತ್ವಿಕ ಪರಿಕಲ್ಪನೆಗಳನ್ನು ರೂಢಿಸಿಕೊಂಡವಷ್ಟೇ. ಇವುಗಳನ್ನು ಆ ವಿಮರ್ಶಾ ಮಾದರಿಗಳು ಹೊಸದಾಗಿ ಕಟ್ಟಿಕೊಂಡ ಸಾಹಿತ್ಯ ಮೀಮಾಂಸೆಗಳ ಮತ್ತು ವಿಮರ್ಶಾಮೀಮಾಂಸೆಗಳ ಗ್ರಹಿಕೆಗಳ ಹಾಗೂ ತಿಳಿವಳಿಕೆಗಳ ಭಾಗವಾಗಿ ರೂಪಿಸಿಕೊಂಡವು ಎನ್ನುವುದೂ ಸ್ಪಷ್ಟವಾದ ವಿಚಾರವೇ ಆಗಿದೆ. ಹಾಗೆಯೇ, ಇವುಗಳು ಹಾಗೆ ರೂಪಿಸಿಕೊಂಡ ತಾತ್ವಿಕ ಪರಿಕಲ್ಪನೆಗಳ ಸ್ವರೂಪಗಳೂ, ಒಂದೊಂದು ವಿಮರ್ಶಾ ಮಾದರಿಗೆ ಸಂಬಂಧಪಟ್ಟಂತೆ ವಿಶಿಷ್ಟವೂ ಹಾಗೂ ಅನನ್ಯವೂ ಆದವುಗಳಾಗಿರುತ್ತವೆ. ಹೀಗಾಗಿಯೇ, ಇವುಗಳು ಒಂದು ಮಾದರಿಯಿಂದ ಇನ್ನೊಂದು ಮಾದರಿಗೆ ಸಹಜವಾಗಿಯೇ ಭಿನ್ನವಾಗಿಯೂ ಇರುತ್ತವೆ. ಆದರೆ, ಇದೇನೂ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಒಟ್ಟಾರೆಯಾದ ತಾತ್ವಿಕ ಸ್ವರೂಪದ ಸಂದರ್ಭದಲ್ಲಿ ಯಾವುದೇ ಬಿಕ್ಕಟ್ಟನ್ನಾಗಲೀ ಅಥವಾ ತೊಡಕನ್ನಾಗಲೀ ಉಂಟುಮಾಡಿಲ್ಲ. ಆದರೆ ನಿಜವಾದ ಸಮಸ್ಯೆ ಎಂದರೆ, ಈ ವಿಮರ್ಶಾ ಮಾದರಿಗಳು ರೂಪಿಸಿಕೊಂಡಂಥ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಮೂಲಭೂತ ತಾತ್ವಿಕ

ಪರಿಕಲ್ಪನೆಗಳು ಒಳಗೊಂಡಿರುವ ಕೆಲವು ಗಂಭೀರವಾದ ಮಿತಿಗಳು ಸೃಷಿಸುತ್ತಿರುವ ಗೊಂದಲಗಳು ಹಾಗೂ ದ್ವಂದ್ವಗಳು.

ದಲಿತ, ಮಹಿಳಾ, ಎಡಪಂಥೀಯ ಮತ್ತು ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆಗಳು ತಮ್ಮ ಸಾಹಿತ್ಯಮೀಮಾಸಂಸೆಗಳು ಹಾಗೂ ವಿಮರ್ಶಾಮೀಮಾಂಸೆಗಳನ್ನು, ಪ್ರಧಾನವಾಗಿ ಭಾರತೀಯ ಕಾವ್ಯಮೀಮಾಂಸೆ ಮತ್ತು ಕನ್ನಡ ಪ್ರಧಾನಧಾರೆಯ ಸಾಹಿತ್ಯಮೀಮಾಂಸೆಗಳ ತಾತ್ವಿಕ ಗ್ರಹಿಕೆಗಳಿಗೆ ವಿರುದ್ಧವಾಗಿ ಸೃಷ್ಟಿಸಿಕೊಂಡವು ಎನ್ನುವುದು ತಿಳಿದಿರುವ ವಿಚಾರವೇ ಆಗಿದೆ. ಹೀಗಾಗಿಯೇ, ಇವು ಸಾಹಿತ್ಯವನ್ನು 'ಸೌಂದರ್ಯವಾದಿ' ಮತ್ತು 'ಅಭಿಜಾತವಾದಿ' ಪರಿಕಲ್ಪನೆಗಳಿಗಿಂತ ಭಿನ್ನವಾದ ಸಾಮಾಜಿಕ ಪ್ರಕ್ರಿಯೆ ಮತ್ತು ಸಾಂಸ್ಕೃತಿಕ ಸಂಕಥನ ಪರಿಕಲ್ಪನೆಗಳ ಮೂಲಕ ವ್ಯಾಖ್ಯಾನಿಸಿಕೊಂಡವು. ಆದರೆ ಇಂಥ ಪರಿಕಲ್ಪನೆಗಳ ಕಾರಣದಿಂದ ಬಹಳಷ್ಟು ಸಲ, ಸಾಹಿತ್ಯವನ್ನು ಒಂದು 'ಸಂಸ್ಥೆ'ಯೆಂದು ಮತ್ತು ಸಾಹಿತ್ಯ ಕೃತಿಗಳು ಅಥವಾ ಪಠ್ಯಗಳನ್ನು ಆ ಸಂಸ್ಥೆಯ 'ದಾಖಲೆ'ಗಳು ಅಥವಾ 'ದಸ್ತಾವೇಜು'ಗಳೆಂದು ಭಾವಿಸುವುದನ್ನು ಕಾಣಬಹುದು. ಈ ಗ್ರಹಿಕೆಯು, ಯಾವ ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆಯನ್ನು ಈ ಎಲ್ಲಾ ವಿಮರ್ಶಾ ಮಾದರಿಗಳು, ಅದರ ಸಾಹಿತ್ಯ ಹಾಗೂ ವಿಮರ್ಶೆ ಕುರಿತ ಇಂಥ 'ಸಾಂಸ್ಥಿಕ' ಹಾಗೂ 'ತಾಂತ್ರಿಕ' ಗ್ರಹಿಕೆಯ ಕಾರಣಕ್ಕಾಗಿ ವಿರೋಧಿಸಿದ್ದವೋ, ಅದಕ್ಕಿಂತ ತಾತ್ವಿಕವಾಗಿ ಹೇಗೆ ಭಿನ್ನ ಎನ್ನುವುದು ಇಲ್ಲಿನ ಸಮಸ್ಯೆಯ ಸೂಕ್ಷ್ಮ ಸ್ವರೂಪವಾಗಿದೆ. ಏಕೆಂದರೆ, ಸಾಹಿತ್ಯ ಸ್ವರೂಪ ಕುರಿತ ಈ 'ಸಾಂಸ್ಥಿಕ' ಪರಿಕಲ್ಪನೆಯು ನವ್ಯದ 'ಸ್ವಾಯತ್ತ' ಅಥವಾ 'ತಾಂತ್ರಿಕ ರಚನೆ' ಪರಿಕಲ್ಪನೆಗಿಂತ ಆಳದಲ್ಲಿ ತುಂಬಾ ಭಿನ್ನವೇನೂ ಅಲ್ಲ.

ಹೀಗಾಗಿಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ಮಾದರಿಗಳು ಕೆಲವೊಮ್ಮೆ ಸಾಹಿತ್ಯವನ್ನು ಅದೊಂದು ಉಳಿದ ಸೃಜನಶೀಲ ಅಭಿವ್ಯಕ್ತಿ ಪ್ರಕಾರಗಳಂತೆ ಒಂದು ಮಟ್ಟದಲ್ಲಿ ಸ್ವಾಯತ್ತತೆಯನ್ನು, ಕಲಾತ್ಮಕತೆಯನ್ನು ಹಾಗೂ ಶ್ರೇಷ್ಠತೆಯನ್ನು ತನ್ನ ಜೀವದ್ರವ್ಯದ ಚಹರೆಗಳಾಗಿ ಹೊಂದಿರುವ ಅಭಿವ್ಯಕ್ತಿ ರೂಪ ಎನ್ನುವುದನ್ನೇ ಮರೆತುಬಿಡುತ್ತವೆ. ಎಲ್ಲ ಕಲಾಪ್ರಕಾರದ ಅಭಿವ್ಯಕ್ತಿ ರೂಪಗಳು, ಅವು ಎಷ್ಟೇ ಪ್ರಗತಿಪರ ಹಾಗೂ ಜೀವಪರ ಆಶಯಗಳನ್ನು ಇಟ್ಟುಕೊಂಡಿದ್ದರೂ, ಮೂಲತಃ ಅವು ಒಂದು ಸೃಜನಶೀಲ ಅಭಿವ್ಯಕ್ತಿ ಪ್ರಕಾರದ ಮಾಧ್ಯಮದಲ್ಲೇ, ಅದರಲ್ಲೂ ಕಲಾಪ್ರಕಾರದ ವ್ಯಾಕರಣಾಂಶಗಳನ್ನು ಒಳಗೊಂಡು ಹುಟ್ಟಿದಾಗಲೇ, ಅದು ಒಳ್ಳೆಯ ಪ್ರಗತಿಪರ ಆಶಯದ ಅಭಿವ್ಯಕ್ತಿ ಪ್ರಕಾರವಾಗಿ ರೂಪಗೊಳ್ಳಲು ಸಾಧ್ಯವಾಗುತ್ತದೆ. ಇದು ಕನ್ನಡದ ಅತ್ಯುತ್ತಮವಾದ ದಲಿತ ಹಾಗೂ ಬಂಡಾಯ ಸಾಹಿತ್ಯದ ಕೃತಿಗಳ ಸಂದರ್ಭದಲ್ಲೀ ರುಜುವಾತಾಗಿರುವ ವಿಷಯವೇ ಆಗಿದೆ. ಅದರಲ್ಲೂ, ಸಾಹಿತ್ಯದಂಥ ಭಾಷಿಕ ಹಾಗೂ ಶಾಬ್ದಿಕ ಪ್ರಕಾರದಲ್ಲಿ ಈ ಮಾತು ಇನ್ನಷ್ಟು ಸತ್ಯ. ಇದಕ್ಕೆ ಕನ್ನಡದ ಪಂಪನಿಂದ ಕುವೆಂಪುವರೆಗೆ ಮಾತ್ರವಲ್ಲ, ಇಂದಿನ ಹೊಸ ತಲೆಮಾರಿನ ಪ್ರತಿಭಾವಂತ ಯುವ ಲೇಖಕರವರೆಗೂ ದೊಡ್ಡ ಚರಿತ್ರೆಯೇ ಇದೆ.

ಆದ್ದರಿಂದ ದಲಿತ, ಎಡಪಂಥೀಯ, ಸ್ತ್ರೀವಾದಿ ಮತ್ತು ಸಮಾಜವಾದಿ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ಸಾಹಿತ್ಯದ ಒಂದುಮಟ್ಟದ ಸ್ವಾಯತ್ತತೆಯ, ಕಲಾತ್ಮಕತೆಯ ಮತ್ತು ಅಂತಃಸ್ಥ ಗುಣಧರ್ಮವನ್ನು ನಿರಾಕರಿಸುವುದಾಗಲೀ ಅಥವಾ ಅಮುಖ್ಯವೆಂದು ಭಾವಿಸುವುದಾಗಲೀ, ಕೊನೆಯಲ್ಲಿ ಬಹು ದೊಡ್ಡಮಟ್ಟದ ಹಾನಿಯನ್ನು ಸಾಹಿತ್ಯಪ್ರಜ್ಞೆ ಮತ್ತು ವಿಮರ್ಶೆಯ ವಿವೇಕ ಎರಡಕ್ಕೂ ಕೂಡಾ ಉಂಟುಮಾಡಬಹುದು. ಏಕೆಂದರೆ, ಯಾವುದೇ ಕಾಲದ ಮಹತ್ವಪೂರ್ಣವಾದ ವಿಮರ್ಶೆ ತನ್ನ ಇಂಥ ನೈತಿಕ ಹೊಣೆಗಾರಿಕೆ ಹಾಗೂ ಕಾರ್ಯಮಾದರಿಗಳ ಕಾರಣದಿಂದಲೇ ಆ ಭಾಷಿಕ ಹಾಗೂ ಸಾಂಸ್ಕೃತಿಕ ಪರಿಸರದ ಸಾಹಿತ್ಯಸೃಷ್ಟಿಯ, ಗ್ರಹಿಕೆಯ ಮತ್ತು ಅಭಿವ್ಯಕ್ತಿಯ ವಿನ್ಯಾಸಗಳ ಮೇಲೆ ಬಹುಮುಖ್ಯವಾದ ಪ್ರಭಾವವನ್ನು ಬೀರುತ್ತಿರುತ್ತದೆ. ಇದು ಕೇವಲ 'ಅಭಿರುಚಿ ನಿರ್ಮಾಣ' ಹಾಗೂ 'ಸಹೃದಯ ಸಂಸ್ಕಾರ'ದ ಕರ್ತವ್ಯಕ್ಕಿಂತ ಮಿಗಿಲಾದ ಹೊಣೆಗಾರಿಕೆ. ಬಹು ಮುಖ್ಯವಾಗಿ, ಒಂದು ಭಾಷಿಕ ಪರಿಸರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಗ್ರಹಿಕೆ, ಸಂವೇದನೆ, ಅಭಿವ್ಯಕ್ತಿ ಮತ್ತು ಆಲೋಚನೆಗಳನ್ನು ತಿದ್ದುವ, ರೂಪಿಸುವ ಸಾಂಸ್ಕೃತಿಕ ಕ್ರಾಂತಿ ಸ್ವರೂಪದ ಮಹತ್ತರವಾದ ಚಟುವಟಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ಈ ಉದಾತ್ತ ಚಿಂತನೆ ಹಾಗೂ ಕಾಣ್ಕೆಯ ಸಾಂಸ್ಕೃತಿಕ ವಿಮರ್ಶಾ ಬರಹಗಳು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇನ್ನೂ ಹೆಚ್ಚಾಗಿ ರೂಪುಗೊಳ್ಳಬೇಕಿದೆ. ಕೆಲವೇ ಕೆಲವು ವಿಮರ್ಶಕರು ಈಗಾಗಲೇ ಇಂಥ ಸಾಧನೆ ಮಾಡಿದ್ದರೂ, ಇಂದಿನ ಆಧುನಿಕೋತ್ತರ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಎಲ್ಲಾ ಮಾದರಿಗಳೂ ಇಂಥ ಹೊಸ ತಾತ್ವಿಕ ಸ್ವರೂಪವನ್ನು ಪಡೆಯಬೇಕಿದೆ. ಇದು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಯೂ ಹೌದು; ಸವಾಲೂ ಹೌದು.

೯.೨.೨ ಉದ್ದೇಶಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು

ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಯ ಉದ್ದೇಶಗಳನ್ನು ಕೆಲವೊಮ್ಮೆ ಅತ್ಯಂತ ಸಂಕುಚಿತ ಅರ್ಥದಲ್ಲಿ ಇಲ್ಲವೇ ಸೀಮಿತ ಸ್ವರೂಪದಲ್ಲಿ ಗ್ರಹಿಸುತ್ತಿರುವುದರಿಂದ ಕನ್ನಡದ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಹಲವು ಸಮಸ್ಯೆಗಳು ಸೃಷ್ಟಿಯಾಗಿವೆ. ಅದರಲ್ಲೂ ಸಮಕಾಲೀನ ಕನ್ನಡ ಸಾಂಸ್ಕೃತಿಕ ಸಂದರ್ಭದ ಒಂದು ಮುಖ್ಯವಾದ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಇವು ರೂಪುಗೊಂಡಿರುವುದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಇದು ಎರಡು ಅಲಗಿನ ಕತ್ತಿಯಾಗಿ ಮಾರ್ಪಟ್ಟಿರುತ್ತವೆ. ಇವುಗಳಲ್ಲಿ, ಪ್ರಗತಿಪರ ಆಶಯಗಳ ಸೈದ್ಧಾಂತಿಕ ಧೋರಣೆಯ ಕನ್ನಡ ಸಾಂಸ್ಕೃತಿಕ ವಿಮರ್ಶಾ ಮಾದರಿಗಳ ಸಾಹಿತ್ಯ ಮತ್ತು ವಿಮರ್ಶೆ ಕುರಿತ ಗ್ರಹಿಕೆಯ ಮಿತಿಗಳ ನೆಲೆಗಳದು ಒಂದು ರೀತಿಯ ಸಮಸ್ಯೆ. ಹಾಗೆಯೇ ಪ್ರಗತಿವಿರೋಧಿ ಸೈದ್ಧಾಂತಿಕ ಧೋರಣೆಯ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮಾದರಿಗಳದು ಇನ್ನೊಂದು ರೀತಿಯ ಸಮಸ್ಯೆ. ಇವುಗಳಲ್ಲಿ ಮೊದಲನೆಯ ಸಮಸ್ಯೆ, ಕನ್ನಡ ಭಾಷಿಕ ಸಂಸ್ಕೃತಿ ಸಂದರ್ಭದಲ್ಲಿ ಅಷ್ಟು ದೊಡ್ಡಮಟ್ಟದ ಅಪಾಯಕಾರಿ

ಶಕ್ತಿಯಾಗಿ ಕಂಡುಬರುವುದಿಲ್ಲ. ಆದರೆ ಇದರಿಂದ ಸಾಹಿತ್ಯ, ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆಯ ಸೂಕ್ಷ್ಮವಿನ್ಯಾಸಗಳು, ಸೆಲೆಗಳು ಕ್ರಮೇಣ ಮೊಂಡಾಗುವ ಅಥವಾ ಬತ್ತಿಹೋಗುವ ಅಪಾಯವಂತೂ ಇದ್ದೇ ಇರುತ್ತದೆ.

ಇದಕ್ಕೆ ಹೋಲಿಸಿದರೆ, ಎರಡನೆಯ ಸಮಸ್ಯೆ ಬಹುದೊಡ್ಡ ಅನಾಹುತಕಾರಿ ಸಮಸ್ಯೆಯೇ ಹೌದು. ಅಲ್ಲದೆ, ಇದು ಇಡೀ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚರಿತ್ರೆಯ ಹಿನ್ನೆಲೆಯಲ್ಲಿರುವ ಕನ್ನಡದ ಶ್ರೇಷ್ಠ ಮನಸ್ಸು ಹಾಗೂ ಪ್ರಜ್ಞೆಯನ್ನು ನಾಶಗೊಳಿಸುವ ಉದ್ದೇಶದಿಂದ ಕೂಡಿರುವಂಥಹದ್ದೂ ಹೌದು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶಾ ಸಂದರ್ಭದ ಬಲಪಂಥೀಯ ಸೈದ್ಧಾಂತಿಕ ವಿಮರ್ಶಾ ರೂಪಗಳು, ಸಾಹಿತ್ಯ ಹಾಗೂ ವಿಮರ್ಶೆಯನ್ನು ಸೀಮಿತ ಮತ್ತು ಸಂಕುಚಿತ ಅರ್ಥದಲ್ಲಿ ಗ್ರಹಿಸುತ್ತಿರುವುದರ ಹಿನ್ನಲೆಯಲ್ಲಿ ಬಹು ದೊಡ್ಡಮಟ್ಟದ ಸಾಂಸ್ಕೃತಿಕ ರಾಜಕಾರಣವಿದೆ. ಇದು ಬಲಪಂಥೀಯ ರಾಜಕಾರಣವಾಗಿರುವುದು ಬಹು ಅಪಾಯಕಾರಿ.

ಆದ್ದರಿಂದ ಕನ್ನಡದ ಇಂದಿನ ಎಲ್ಲಾ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ಸಾಹಿತ್ಯ, ವಿಮರ್ಶೆ ಮತ್ತು ಸಂಸ್ಕೃತಿ ಕುರಿತ ಗ್ರಹಿಕೆಗಳನ್ನು ತಮ್ಮ ಸೈದ್ಧಾಂತಿಕ ಧೋರಣೆಯ ಹಿನ್ನೆಲೆಯಲ್ಲಿ ಗ್ರಹಿಸುವಾಗ, ಅತ್ಯಂತ ಎಚ್ಚರಿಕೆಯನ್ನು ಹಾಗೂ ವಿವೇಕವನ್ನು ಇಟ್ಟುಕೊಳ್ಳಬೇಕಿದೆ. ಆಧುನಿಕೋತ್ತರ ಚಿಂತನೆಯ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ಸಂದರ್ಭದಲ್ಲಿ, ಕನ್ನಡದ ಈ ಪ್ರಗತಿಪರ ಆಶಯದ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು ಇಂಥ ಅಪೇಕ್ಷಿತ ಪಲ್ಲಟವನ್ನು ಹೊಂದಬೇಕಿರುವುದು ಅನಿವಾರ್ಯವೂ ಆಗಿದೆ.

೯.೨.೩ ವೈಧಾನಿಕತೆಯ ಗ್ರಹಿಕೆಯಲ್ಲಿನ ಸಮಸ್ಯೆಗಳು

ಇಪ್ಪತ್ತೊಂದನೆಯ ಶತಮಾನದ ಈ ಆಧುನಿಕೋತ್ತರ ಕಾಲಘಟ್ಟದ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಅತ್ಯಂತ ಮುಖ್ಯವಾದ ಸಮಸ್ಯೆ ಎಂದರೆ, ಅದರ ವೈಧಾನಿಕತೆಯ ಗ್ರಹಿಕೆಯಲ್ಲಿನ ಸಮಸ್ಯೆ ಎಂದು ಹೇಳಬಹುದು. ಯಾವುದೇ ಸಾಹಿತ್ಯ ವಿಮರ್ಶೆಯ ಮಹತ್ವ ಹಾಗೂ ಯಶಸ್ಸು ನಿಂತಿರುವುದು ಅದು ಯಾವ ಅರ್ಥಪೂರ್ಣ ವಿಧಾನಗಳನ್ನು ಸಾಹಿತ್ಯ ಮತ್ತು ಪಠ್ಯಗಳ ವಿಶ್ಲೇಷಣೆಯಲ್ಲಿ ಅನುಸರಿಸುತ್ತದೆ ಎನ್ನುವುದರಲ್ಲಿ. ಸಾಮಾನ್ಯವಾಗಿ ವಿಮರ್ಶೆಯ ವಿಧಾನಗಳು ಸರಳವಾಗಿದ್ದಷ್ಟು ವಿಮರ್ಶೆಯು ಎದುರಿಸಬೇಕಾದ ಬಿಕ್ಕಟ್ಟುಗಳು ಅಥವಾ ತೊಡಕುಗಳ ಪ್ರಮಾಣ ಹಾಗೂ ಸ್ವರೂಪ ಸಂಕೀರ್ಣವಾಗಿರುತ್ತದೆ, ತೀವ್ರವಾಗಿರುತ್ತದೆ. ಏಕೆಂದರೆ, ಇದು ಕೇವಲ, ವಿಮರ್ಶೆಯು ಯಾವುದೋ ಒಂದು ಸರಳ ವಿಧಾನವನ್ನು ಆಯ್ಕೆಮಾಡಿಕೊಳ್ಳುತ್ತದೆ ಎನ್ನುವಷ್ಟರಿಂದಲೇ ಹುಟ್ಟುವ ಸಮಸ್ಯೆಯಲ್ಲ; ಬದಲಾಗಿ, ವಿಮರ್ಶೆಯ ನೋಟಕ್ರಮ, ದೃಷ್ಟಿಕೋನ ಹಾಗೂ ತಾತ್ವಿಕ ಸ್ಪಷ್ಟತೆಗೆ ಸಂಬಂಧಪಟ್ಟ ಪ್ರಶ್ನೆಯಾಗಿರುತ್ತದೆ. ಇವು ಹೇಗೆ ರೂಪುಗೊಂಡಿವೆ ಮತ್ತು ಇವುಗಳ ಉದ್ದೇಶವೇನಿದೆ ಎನ್ನುವ ವಿಚಾರಗಳಿಗೆ ಲಗತ್ತಾಗಿರುವ ಪ್ರಶ್ನೆಯಾಗಿರುತ್ತದೆ.

ಹಾಗೆ ನೋಡಿದರೆ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ವೈಧಾನಿಕತೆಯ ಪ್ರಶ್ನೆಯನ್ನು ಗಂಭೀರವಾದ ಸಾಂಸ್ಕೃತಿಕ ಪ್ರಶ್ನೆಯೆಂದು ಪರಿಗಣಿಸಿರುವ ಪ್ರಮಾಣ ಬಹಳ ಕಡಿಮೆ ಎಂದೇ ಹೇಳಬೇಕು. ಅದು ದಲಿತ, ಎಡಪಂಥೀಯ, ಸ್ತ್ರೀವಾದಿ, ಅಥವಾ ದೇಶಿವಾದಿ ಯಾವುದೇ ಮಾದರಿಯಾದರೂ ಸಹ, ವೈಧಾನಿಕತೆಯ ಕುರಿತು ಹೊಂದಿರುವ ಗ್ರಹಿಕೆ ಬಹುತೇಕ ಮೇಲ್ಮಟ್ಟದ್ದಾಗಿದೆ. ಈ ಎಲ್ಲಾ ಪ್ರಕಾರಗಳಲ್ಲೂ ಇದಕ್ಕೆ ಅಪವಾದ ಎನ್ನುವ ವಿಮರ್ಶಕರು ಇದ್ದಾರೆ ಎನ್ನುವುದು ಸುಳ್ಳಲ್ಲ. ಆದರೆ, ಇಂಥವರ ಸಂಖ್ಯೆ ಬಹಳ ಕಡಿಮೆ ಮತ್ತು ಇವರೆಲ್ಲಾ ಬಹುತೇಕ ಹಿಂದಿನ ತಲೆಮಾರಿಗೆ ಸೇರಿದ ವಿಮರ್ಶಕರು. ಈಗ ಯಾರನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹೊಸ ತಲೆಮಾರಿನ ವಿಮರ್ಶಕರು ಎಂದು ಗುರುತಿಸುತ್ತಿವೆಯೋ, ಅವರು ಡಿ.ಆರ್. ಚೆನ್ನಿ, ಕುರ್ತುಕೋಟಿ, ಕೆ.ವಿ.ಎನ್. ಕಿ.ರಂ. ನಾಗರಾಜ, ಕಲ್ಗುಡಿ ಹಾಗೂ ತರೀಕೆರೆ ಇವರಂತೆ ವೈಧಾನಿಕತೆಯ ಪ್ರಶ್ನೆಗಳನ್ನು ಮಹತ್ವದ ಪ್ರಶ್ನೆಗಳೆಂದು ಪರಿಭಾವಿಸುತ್ತಿರುವುದು ಬಹಳ ಕಡಿಮೆ. ಹೊಸ ತಲೆಮಾರಿನ ಇಂಥ ಕೆಲವೇ ಕೆಲವು ಸಾಂಸ್ಕೃತಿಕ ವಿಮರ್ಶಕರು ಕಂಡುಬರುತ್ತಾರೆ.

ಅನ್ಯಶಿಸ್ತು ಹಾಗೂ ಬಹುಶಿಸ್ತು ವಿಶ್ಲೇಷಣಾ ವಿಧಾನಗಳನ್ನು ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಬಳಸುವುದು ಯಾವತ್ತೂ ಅತ್ಯಂತ ಉಪಯುಕ್ತವಾದ ವಿಧಾನವೇ ಆಗಿದೆ. ಆದರೆ, ಇದು ಸುಲಭವಾದ ಕ್ರಿಯೆಯಲ್ಲ; ಹಾಗೆಯೇ, ಅಸಾಧ್ಯವಾದದ್ದೂ ಅಲ್ಲ. ಎಷ್ಟೇ ಪ್ರಯತ್ನಿಸಿದರೂ ಮೂಲಜ್ಞಾನ ಶಿಸ್ತಿನ ಪ್ರಾಜ್ಞರು ಪಡೆಯುವಂಥ ಪ್ರೌಢಿಮೆಯನ್ನು ಪಡೆಯುವುದು ಕಷ್ಟವೇ. ಆದರೂ, ಸಾಂಸ್ಕೃತಿಕ ವಿಮರ್ಶಕನೊಬ್ಬನಿಗೆ ಇದರ ಹೊರತಾದ ಬೇರೆ ದಾರಿಗಳಿಲ್ಲ ಎನ್ನುವುದೂ ಸಹ ಅಷ್ಟೇ ನಿಜ. ಹಾಗೆಯೇ, ವಿಮರ್ಶೆ ಎನ್ನುವುದೇ ಈಗ ಏಕಶಿಸ್ತು ವಿಧಾನವನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿರುವಾಗ, ಸಂಸ್ಕೃತಿ ವಿಮರ್ಶಕನಿಗೆ ಇದರ ಹೊರತಾಗಿ ಬೇರೆ ದಾರಿಗಳೂ ಇಲ್ಲ. ಸಾಂಸ್ಕೃತಿಕ ವಿಮರ್ಶೆ ಸಂಶ್ಲೇಷಕ, ವಾಗ್ವಾದ, ವ್ಯಾಖ್ಯಾನ ಅಥವಾ ಸಂಕಥನ ಹೀಗೆ ಯಾವುದೇ ವಿಧಾನವನ್ನು ಸಾಹಿತ್ಯ ಮತ್ತು ಪಠ್ಯಗಳ ಅನುಸಂಧಾನಕ್ಕೆ ಆಯ್ಕೆಮಾಡಿಕೊಂಡರೂ ಅದರ ಭಾಗವಾಗಿ ಅನ್ಯಶಿಸ್ತು ಹಾಗೂ ಬಹುಶಿಸ್ತು ವಿಧಾನಗಳು ಇರಲೇಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸುವುದಾದರೆ, ಇಂದಿನ ಬಹುತೇಕ ಸಾಂಸ್ಕೃತಿಕ ವಿಮರ್ಶೆಗಳು 'ಕೊಲಾಜ್' ಮಾದರಿಯ ಸಾಹಿತ್ಯ ಮತ್ತು ಸಂಸ್ಕೃತಿ ವಿಶ್ಲೇಷಣೆಗಳಾಗುತ್ತಿವೆ. ಅದರಲ್ಲೂ ಪರಂಪರೆ, ಸಮುದಾಯ ಮತ್ತು ಜನಾಂಗಗಳ ಆಚರಣಾ ಲೋಕಗಳ ಅಧ್ಯಯನದ ರೂಪಗಳಾಗಿ ರಚನೆಯಾಗುತ್ತಿರುವ ಸಾಂಸ್ಕೃತಿಕ ವಿಮರ್ಶೆಗಳು ಇಂಥ ಮುಖ್ಯವಾದ ಸಮಸ್ಯೆಗಳನ್ನು ಒಳಗೊಂಡಿವೆ. ಹೀಗಾಗಿ, ಇವು ಸಾಂಸ್ಕೃತಿಕ ವಿಮರ್ಶೆಯನ್ನು ವ್ಯಾಖ್ಯಾನಾತ್ಮಕ ಹಾಗೂ ಸಂಕಥನಾತ್ಮಕ ವಿಮರ್ಶೆಯಾಗಿ ಕಟ್ಟುವುದರಲ್ಲಿ ಬಹುತೇಕ ಸೋಲುತ್ತಿವೆ. ಪಾಶ್ಚಾತ್ಯ ಸಾಂಸ್ಕೃತಿಕ ಅಧ್ಯಯನ ವಿಧಾನಗಳ ಮುಖ್ಯ ರೂಪಗಳಾದ ಸಮಾಜಶಾಸ್ತ್ರೀಯ ಹಾಗೂ ಮಾನವಶಾಸ್ತ್ರೀಯ ಅಧ್ಯಯನ ಮಾದರಿಗಳಿಂದ ಬಿಡುಗಡೆ ಹೊಂದಬೇಕಿರುವುದು ಎಷ್ಟು

ಮುಖ್ಯವೋ; ಹಾಗೆಯೇ ನಮ್ಮ 'ಸ್ವಂತ' ಅಥವಾ 'ವಿಶಿಷ್ಟ' ಎನ್ನುವ ಪರಂಪರೆಗಳು, ಕುಲಗಳು, ಸಮುದಾಯಗಳು ಹಾಗೂ ಸಂಸ್ಕೃತಿಗಳಲ್ಲಿರುವ ಮನುಷ್ಯ ವಿರೋಧಿ ಅಥವಾ ಜೀವ ವಿರೋಧಿ ಸಂಗತಿಗಳ ಬಗ್ಗೆ 'ವಿಮರ್ಶಾತ್ಮಕ ಪ್ರಜ್ಞೆ' ಇಟ್ಟುಕೊಳ್ಳುವುದು ಅಷ್ಟೇ ಮುಖ್ಯ. ಜೀವಪರ ಮತ್ತು ಮಾನವಪರ ಸಮಾಜ ಹಾಗೂ ಸಂಸ್ಕೃತಿ ನಿರ್ಮಿಸುವುದು ಸಾಂಸ್ಕೃತಿಕ ವಿಮರ್ಶೆಯ ಪ್ರಧಾನ ಉದ್ದೇಶ ಎನ್ನುವುದಾದರೆ, ಇಂಥ 'ಕ್ರಿಟಿಕಲ್ ಇನ್‌ಸೈಡರ್' ಧೋರಣೆ ಸಾಂಸ್ಕೃತಿಕ ವಿಮರ್ಶೆಯ ಅಧ್ಯಯನ ವಿಧಾನಗಳ ಅನಿವಾರ್ಯ ಪ್ರಜ್ಞೆಯಾಗಬೇಕಿರುತ್ತದೆ.

೯.೨.೪ ಕಾರ್ಯಮಾದರಿಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು

ಶುದ್ಧ ಸಾಹಿತ್ಯಾಸಕ್ತ ವಿಮರ್ಶಾ ವಿಧಾನಗಳ ಮತ್ತು ಪಂಥೀಯ ಅಥವಾ ಸೈದ್ಧಾಂತಿಕ ವಿಮರ್ಶಾ ವಿಧಾನಗಳ ಕಾರ್ಯಮಾದರಿಗಳಿಗಿಂತ, ಭಿನ್ನವೂ ಹಾಗೂ ಅರ್ಥಪೂರ್ಣವೂ ಎಂದು ತಮ್ಮ ಕಾರ್ಯಮಾದರಿಗಳನ್ನು ವ್ಯಾಖ್ಯಾನಿಸಿಕೊಂಡ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು, ನಿಜವಾಗಿಯೂ ಈ ಉದ್ದೇಶಗಳನ್ನು ಸಾಧಿಸಿವೆಯೇ ಎಂದು ಆಲೋಚಿಸಿದರೆ ಸಾಕಷ್ಟು ನಿರಾಶೆಯ ಚಿತ್ರಣ ದೊರೆಯುತ್ತದೆ. ಇದು ಅವು ವಿವರಿಸಿಕೊಂಡ ಅಥವಾ ಒಪ್ಪಿಕೊಂಡ ಕಾರ್ಯಮಾದರಿಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ಇರುವ ಸಮಸ್ಯೆಯಲ್ಲ; ಬದಲಾಗಿ, ಹಾಗೆ ವಿವರಿಸಿಕೊಳ್ಳುವಾಗ ಮತ್ತು ಒಪ್ಪಿಕೊಳ್ಳುವಾಗ ತೋರಿಸಿದ ಉತ್ಸಾಹ ಮತ್ತು ಬದ್ಧತೆಗಳನ್ನು ಎಂದರೆ, ತಮ್ಮ ಸ್ವವಿಶಿಷ್ಟ ಸಾಹಿತ್ಯ ಮತ್ತು ವಿಮರ್ಶಾ ಮೀಮಾಂಸೆಗಳನ್ನು ಕಟ್ಟುವ ಮೂಲಕ ವ್ಯಕ್ತಪಡಿಸಿದ್ದನ್ನು, ಕಾರ್ಯತಃ ಸಾಧಿಸಿವೆಯೇ ಎನ್ನುವುದಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಇಪ್ಪತ್ತೊಂದನೆಯ ಶತಮಾನದ ಆಧುನಿಕೋತ್ತರ ಸಂದರ್ಭದ ಅತ್ಯಂತ ಸಂಕೀರ್ಣ ಹಾಗೂ ಸಮಸ್ಯಾತ್ಮಕ ಸನ್ನಿವೇಶದಲ್ಲಿ ನಿಂತು ಪುನರಾಲೋಕನ ಮಾಡಿದರೆ, ಕನ್ನಡದ ಪ್ರಮುಖ ಸಾಂಸ್ಕೃತಿಕ ವಿಮರ್ಶಾ ಮಾದರಿಗಳ ಕಾರ್ಯಮಾದರಿಗಳು ಹಾಕಿಕೊಳ್ಳಬೇಕಾದಷ್ಟು ದೊಡ್ಡ ಜವಾಬ್ದಾರಿ ಹಾಗೂ ಹೊಣೆಗಾರಿಕೆಗಳನ್ನು ಹಾಕಿಕೊಳ್ಳುತ್ತಿಲ್ಲವೇನೋ ಎನಿಸುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ, ಇವು ತಮ್ಮ ಕಾರ್ಯಮಾದರಿಗಳಿಂದ ಸಂಪೂರ್ಣ ವಿಮುಖವಾಗಿವೆ ಎಂದೇನೂ ಅರ್ಥವಲ್ಲ; ಬದಲಾಗಿ, ಅವುಗಳ ಕಾರ್ಯಮಾದರಿಗಳ ಹಿನ್ನೆಲೆಯಲ್ಲಿರುವ ಒತ್ತಾಯ ಹಾಗೂ ತೀವ್ರವಾದ ತುಡಿತಗಳಿಗೆ ಸಂಬಂಧಿಸಿದಂತೆ ಎತ್ತುತ್ತಿರುವ ಆಕ್ಷೇಪಣೆಯಾಗಿದೆ. ಇಲ್ಲದೆ ಹೋದರೆ ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಮಕಾಲೀನ ಆಧುನಿಕೋತ್ತರ ಸಂದರ್ಭದ ಸಂಕೀರ್ಣ ಸಾಂಸ್ಕೃತಿಕ ಸನ್ನಿವೇಶವನ್ನು ಮುಖಾಮುಖಿಯಾಗುವ ಮತ್ತು ಪ್ರತಿರೋಧಿಸುವ ತನ್ನ ಪ್ರಧಾನ ಉದ್ದೇಶದಲ್ಲಿ ಸೋತುಹೋಗಬೇಕಾದ ಸಂದರ್ಭ ಬರಬಹುದಾದ ಸಾಧ್ಯತೆಯಿರುತ್ತದೆ. ಸಾಂಸ್ಕೃತಿಕ ವಿಮರ್ಶೆ ಎನ್ನುವುದು ರೂಪಿತ ಸಂಸ್ಕೃತಿಯ ವಿಮರ್ಶೆಯಷ್ಟೇ ಅಲ್ಲದೆ, ರೂಪುಗೊಳ್ಳಬೇಕಿರುವ ಸಂಸ್ಕೃತಿಯನ್ನು ನಿರೂಪಿಸುವ ಹಾಗೂ ನಿರ್ಮಿಸುವ ಹೊಣೆಗಾರಿಕೆಯನ್ನು ಸಹ

ಹೊಂದಿರುವುದರಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮುಖ್ಯ ಮಾದರಿಗಳು ಈ ನೈತಿಕ ಜವಾಬ್ದಾರಿಯನ್ನು ಸಮರ್ಥವಾಗಿ ಮತ್ತು ದಿಟ್ಟವಾಗಿ ನಿರ್ವಹಿಸಬೇಕಾದ ಚಾರಿತ್ರಿಕ ಸನ್ನಿವೇಶ ಈಗ ಎದುರಾಗಿದೆ.

೯.೨.೫ ಪರಿಭಾಷೆ ಮತ್ತು ಪರಿಕಲ್ಪನೆಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು

ಇವತ್ತಿನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಸಾಂಸ್ಕೃತಿಕ ವಿಮರ್ಶೆಯ ಕೆಲವು ಮುಖ್ಯವಾದ ಪರಿಭಾಷೆಗಳು ಹಾಗೂ ಪರಿಕಲ್ಪನೆಗಳನ್ನು ಕುರಿತು ಸಾಕಷ್ಟು ಚರ್ಚೆ ಹಾಗೂ ವಾಗ್ವಾದಗಳು ನಡೆಯುತ್ತಿವೆ. ಜಾಗತೀಕರಣ ಹುಟ್ಟುಹಾಕುತ್ತಿರುವ ಏಕರೂಪೀಕರಣ ಸಂಸ್ಕೃತಿಗೆ ಪ್ರತಿರೋಧಾತ್ಮಕ ಹಾಗೂ ಪರ್ಯಾಯಾತ್ಮಕ ರೂಪದಲ್ಲಿ ಮಂಡಿಸುತ್ತಿರುವ ಅನೇಕ ಇಂಥ ಪರಿಕಲ್ಪನೆಗಳನ್ನು ಹಾಗೂ ಪರಿಭಾಷೆಗಳನ್ನು ಕುರಿತು ಪ್ರಮುಖವಾದ ಪ್ರಶ್ನೆಗಳನ್ನು ಎತ್ತಲಾಗುತ್ತಿದೆ. ಮುಖ್ಯವಾಗಿ ' ಸಾಂಸ್ಕೃತಿಕ ಬಹುತ್ವ' ಅಥವಾ 'ಬಹು ಸಂಸ್ಕೃತಿಗಳ ಮಾನ್ಯೀಕರಣ' ಎಂದರೆ, ಈಗಿರುವ ಎಲ್ಲಾ ತಾರತಮ್ಯಾಧಾರಿತ ಶ್ರೇಣೀಕರಣಗಳ 'ಮಾನ್ಯೀಕರಣ'ವೇ ಆಗುತ್ತದೆ ಅಲ್ಲವೇ ಎನ್ನುವುದು ಇಂಥ ಮುಖ್ಯವಾದ ತಕರಾರು. ಹಾಗೆ ನೋಡಿದರೆ, ಇದು ಒಂದು ಮಟ್ಟದಲ್ಲಿ ಎಂದರೆ, ಅದರ 'ಆಶಯ'ದ ಮಟ್ಟವನ್ನಷ್ಟೇ ತೆಗೆದುಕೊಂಡರೆ ನಿಜವೂ ಹೌದು; ಆದರೆ, 'ಆಶಯ'ವನ್ನು ಮೀರಿದ 'ಆಶೋತ್ತರ'ದ ಮಟ್ಟದಲ್ಲಿ ನಿಂತು ಆಲೋಚಿಸಿದರೆ, ಇದೊಂದು ಪರಿಕಲ್ಪನೆಯಷ್ಟೇ ಅಲ್ಲ 'ಪರಿಪ್ರೇಕ್ಷ್ಯ' ಹಾಗೂ 'ಪರಿದೃಷ್ಟಿ' ಎನ್ನುವುದು ವ್ಯಕ್ತವಾಗುತ್ತದೆ.

ಯಾವುದೇ ಸೂಕ್ತ ಅಥವಾ ಆತ್ಯಂತಿಕ ಎನ್ನಬಹುದಾದ ಅರ್ಥಪೂರ್ಣ ಪರ್ಯಾಯಗಳಿಲ್ಲದಿರುವಾಗ ಇಂಥ 'ಪರಿಪ್ರೇಕ್ಷ' ಹಾಗೂ 'ಪರಿದೃಷ್ಟಿ'ಗಳು ಪ್ರಜಾಸತ್ತಾತ್ಮಕವಾದ ಪರ್ಯಾಯ ರೂಪಗಳೇ ಆಗುತ್ತವೆ. ಹಾಗೆ ನೋಡಿದರೆ, 'ಪ್ರಜಾಪ್ರಭುತ್ವ' ಪರಿಕಲ್ಪನೆಯೂ ಒಂದು ಮುಖ್ಯ ಪರ್ಯಾಯ ರೂಪವೇ ಆಗಿದೆ. ಆದ್ದರಿಂದಲೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದ ಬಲಪಂಥೀಯ ಸಾಂಸ್ಕೃತಿಕ ವಿಮರ್ಶಾ ಮಾದರಿಗಳು 'ಪ್ರಜಾಪ್ರಭುತ್ವ' 'ಸೆಕ್ಯುಲರಿಸ್', 'ವಿಜ್ಞಾನ' ಮೊದಲಾದವುಗಳನ್ನು ವಿರೋಧಿಸುವಾಗ, ಪ್ರಗತಿಪರ ಸೈದ್ಧಾಂತಿಕ ಆಶಯಗಳ ಸಾಂಸ್ಕೃತಿಕ ವಿಮರ್ಶೆಗಳು ತೋರಿಸುವ ಸಕಾರಣ ವಿರೋಧವನ್ನು, ತಾವು ವಿರೋಧಿಸುವ ಅಥವಾ ಅನುಮಾನಿಸುವ ಪರಿಕಲ್ಪನೆಗಳ ಸಂದರ್ಭದಲ್ಲೂ ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಬೆಂಕಿಯನ್ನು ಆರಿಸಲು ಗಾಳಿ ಬಳಸಿದಂತಾಗುತ್ತದೆ.

ಹಾಗೆಯೇ, ಈ ಹಿಂದೆ ಡಿ.ಆರ್. ಅವರ 'ವಿಸ್ಮೃತಿ' ಪರಿಕಲ್ಪನೆ ಸಂದರ್ಭದಲ್ಲಿ ನಡೆದ ವಾಗ್ವಾದವನ್ನು ಬದಲಾದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿ ಮತ್ತೆ ಹೊಸ ರೀತಿಯಲ್ಲಿ ಎತ್ತಬೇಕಾಗಿದೆ. ವಸಾಹತುಶಾಹಿ ಕಾಲದಲ್ಲಿ ಕೇವಲ 'ಅಧಿಕಾರ ಸ್ಥಾನ'ಗಳಿಗೆ ಮತ್ತು 'ಅಧಿಕಾರ ಕೇಂದ್ರ'ಗಳಿಗೆ ಮಾತ್ರ ಕವಿದಿದ್ದ 'ವಿಸ್ಮೃತಿ' ಈಗ ಮರೆಯಾಗಿದೆ. ಆದರೆ, ಅದೇ 'ವಿಸ್ಮೃತಿ' ಈಗ ಅಧಿಕಾರ ರಹಿತ ಜನಪದಗಳು, ಜನಸಮುದಾಯ ಮತ್ತು ಸಂಸ್ಕೃತಿಗಳಿಗೆ ತೀವ್ರವಾಗಿ ಕವಿಯಲಾರಂಭಿಸಿದೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಈಗ ಈ 'ಸ್ಮೃತಿ–ವಿಸ್ಮೃತಿ' ಪರಿಕಲ್ಪನೆಯ ಚರ್ಚೆಯು 'ಸಂಸ್ಕೃತಿಗಳ

ಮುಖಾಮುಖಿ' ಮತ್ತು ' ಸಾಂಸ್ಕೃತಿಕ ಸಂಘರ್ಷದ' ಭಾಗವಾಗಿ ಹೊಸ ರೂಪಗಳಲ್ಲಿ ಹಾಗೂ ವಿಧಾನಗಳಲ್ಲಿ ನಡೆಯಬೇಕಿದೆ. ಹಾಗೆಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳೂ ತಮಗೆ ಕವಿಯುತ್ತಿರುವ ಇಂಥ ಕೆಲವು ಮುಖ್ಯವಾದ ವಿಸ್ಮೃತಿಗಳಿಂದ ಮುಕ್ತವಾಗಬೇಕಿದೆ.

೯.೨.೬ ಆಯಾಮಗಳ ಗ್ರಹಿಕೆಯಲ್ಲಿನ ಸಮಸ್ಯೆಗಳು

ವಿಮರ್ಶೆಯ ಬಹುರೂಪಿ ಆಯಾಮಗಳೇ ಅದರ ಶ್ರೇಷ್ಠತೆ ಮತ್ತು ಮಹತ್ವಕ್ಕೆ ಹಿಡಿದ ಕನ್ನಡಿಗಳೇನಲ್ಲ. ಬದಲಾಗಿ, ಅಂಥ ಆಯಾಮಗಳು ಆ ವಿಮರ್ಶೆಯ ಯಾವ ನೈತಿಕ, ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಉದ್ದೇಶಗಳು ಹಾಗೂ ಕಾರ್ಯಮಾದರಿಗಳ ಅರ್ಥಪೂರ್ಣ ಈಡೇರಿಕೆಯ ಸಾಧನಗಳಾಗಿ ಪಡಿಮೂಡಿವೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಹಾಗೆ ನೋಡಿದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ, ರಾಜಕಾರಣ, ಸಾಹಿತ್ಯಕ ಮತ್ತು ಭೌತಿಕ ಆಯಾಮಗಳು ಪ್ರಬುದ್ಧವಾದ ಮಟ್ಟದಲ್ಲಿ ವಿಕಾಸಗೊಂಡಿವೆ. ಆದರೂ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ತಾತ್ವಿಕ ಸ್ವರೂಪದ ಒಟ್ಟು ಚಿತ್ರಣದ ಹಿನ್ನೆಲೆಯಲ್ಲಿ ನೋಡಿದರೆ, ಈ ಆಯಾಮಗಳಲ್ಲಿ ಕೆಲವು ಮೂಲಭೂತವಾದ ಸಮಸ್ಯೆಗಳಿರುವುದು ಕಂಡುಬರುತ್ತದೆ. ಇವು ಈಗಾಗಲೇ ಚರ್ಚೆ ಮಾಡಿರುವ ವಿವಿಧ ಸಮಸ್ಯೆಗಳ ಫಲಗಳಾಗಿ ಅಥವಾ ಪರಿಣಾಮಗಳಾಗಿಯೇ ಹುಟ್ಟಿರುವ ಸಮಸ್ಯೆಗಳಾಗಿವೆ.

ಇಲ್ಲಿ ಅಂಥ ಮುಖ್ಯವಾದ ಮೂರು ಸಮಸ್ಯೆಗಳನ್ನು ಕುರಿತು ವಿವೇಚಿಸಬಹುದು. ಅವುಗಳೆಂದರೆ, ಅ. ಭಾಷಿಕ ಆಯಾಮಗಳ ಸಮಸ್ಯೆಗಳು ಆ. ಸೃಜನಶೀಲ ಆಯಾಮಗಳ ಸಮಸ್ಯೆಗಳು ಮತ್ತು ಇ. ಮೀಮಾಂಸೆಯ ಆಯಾಮಗಳ ಸಮಸ್ಯೆಗಳು.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ಆಯಾಮಗಳು ಪರಸ್ಪರ ಒಂದಕ್ಕೊಂದು ಅರ್ಥಪೂರ್ಣವಾದ ಅವಿನಾಭಾವ ಸಂಬಂಧ ಹೊಂದಿವೆ. ಕೆಲವು ಶ್ರೇಷ್ಠ ವಿಮರ್ಶಕರಲ್ಲಿ ಇವು ಮೂರೂ ಹದವಾಗಿ ಬೆರೆತಿವೆ. ಇನ್ನು ಕೆಲವು ವಿಮರ್ಶಕರಲ್ಲಿ ಇವು ಬಿಡಿ ಬಿಡಿಯಾಗಿ ಅಥವಾ ಒಟ್ಟು ರೂಪದಲ್ಲಿ ಸಂಯೋಜಿತಗೊಂಡಿವೆ. ಡಿ.ಆರ್, ಕುರ್ತಕೋಟಿ, ಕೆ.ವಿ.ಎನ್. ಚೆನ್ನಿ ಮತ್ತು ತರೀಕೆರೆ ಅವರಲ್ಲಿ ಇವು ವಿವಿಧ ರೂಪ ಹಾಗೂ ಸ್ವರೂಪಗಳಲ್ಲಿ ಪ್ರಕಟವಾಗಿವೆ.

ಇಷ್ಟಾದರೂ ಇಂಥ ವಿಮರ್ಶಕರ ಸಂಖ್ಯೆ ಬಹಳ ಕಡಿಮೆ. ಹೊಸ ತಲೆಮಾರಿನ ದಲಿತ, ಸ್ತ್ರೀವಾದಿ, ಸಮಾಜವಾದಿ, ಎಡಪಂಥೀಯ ಹಾಗೂ ದೇಶಿವಾದಿ ಸಾಂಸ್ಕೃತಿಕ ವಿಮರ್ಶಕರಲ್ಲಿ ಇಂಥ ಸಿದ್ಧಿ ಇನ್ನೂ ಸಾಧಿತವಾಗಬೇಕಿದೆ. ಇಂಥ ಕೆಲವು ವಿಮರ್ಶಕರು ಈ ತಲೆಮಾರಿನಲ್ಲಿ ರೂಪುಗೊಳ್ಳುತ್ತಿದ್ದಾರೆ ಎನ್ನುವುದು ನಿಜವೇ ಹೌದು. ಆದರೆ, ಡಿ.ಆರ್. ತಮ್ಮ 'ರೂಪಕಾತ್ಮಕ ತರ್ಕ ವಿಧಾನ'ದ ಮೂಲಕ; ಕುರ್ತಕೋಟಿ ಅವರು ತಮ್ಮ 'ಪ್ರಜ್ಞೆಯ ಅವಗಾಹನಾ' ವಿಧಾನದ ಮೂಲಕ; ಕೆ.ವಿ.ಎನ್ ತಮ್ಮ 'ತಾತ್ವಿಕ ಜಿಜ್ಞಾಸೆಯ' ವಿಧಾನದ ಮೂಲಕ; ಚೆನ್ನಿ ತಮ್ಮ 'ಸಾರ್ವಕಾಲೀನತೆ–ಸಮಕಾಲೀನತೆ–ಸದ್ಯಕಾಲೀನತೆ'ಗಳನ್ನು ಏಕಬಿಂದುವಿನಲ್ಲಿ

ಐಕ್ಯಗೊಳಿಸಿ ಅನುಸಂಧಾನ ಮಾಡುವ' ವಿಧಾನದ ಮೂಲಕ; ಕಲ್ಗುಡಿ ಅವರು 'ಸಾಹಿತ್ಯ-ಸಮಾಜ-ಸಂಸ್ಕೃತಿ'ಗಳನ್ನು ಸಮಾವಿಷ್ಟೀಕರಿಸಿ ಚಿಂತಿಸುವ' ವಿಧಾನದ ಮೂಲಕ ಮತ್ತು ರಹಮತ್ ತರೀಕೆರೆ ಅವರು 'ಸಾಹಿತ್ಯ-ಸಾಹಿತ್ಯೇತರ-ಶಿಷ್ಟ-ಪರಿಶಿಷ್ಟ-ಆಚರಣೆ-ಅನುಭವಗಳನ್ನು ಸಂಶ್ಲೇಷಿಸಿ ಪರಿಶೋಧಿಸುವ' ವಿಧಾನದ ಮೂಲಕ ಸಾಧಿಸುವ ಭಾಷಿಕ, ಸೃಜನಶೀಲ ಮತ್ತು ಮೀಮಾಂಸೆಯ ಆಯಾಮಗಳನ್ನು ಇಂದಿನ ಹೊಸ ತಲೆಮಾರಿನ ಸಾಂಸ್ಕೃತಿಕ ವಿಮರ್ಶಕರು ಅರ್ಥಪೂರ್ಣವಾಗಿ ಮುಂದುವರಿಸಬೇಕಿದೆ ಅಥವಾ ತಮ್ಮದೇ ಆದ ಹೊಸ ದಾರಿಗಳನ್ನು ಅನ್ವೇಷಿಸಿಕೊಳ್ಳಬೇಕಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಈ ಮೂರು ಆಯಾಮಗಳು ಸರಳವಾದ ನೋಟಕ್ರಮದಿಂದ ಅಥವಾ ವಿಮರ್ಶಕರ ಪ್ರಯೋಗಶೀಲ ದೃಷ್ಟಿಕೋನದಿಂದ ಹುಟ್ಟಿದವುಗಳಲ್ಲ; ಬದಲಾಗಿ, ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ಬದುಕನ್ನು ಪರಸ್ಪರ ಒಟ್ಟಂದದಲ್ಲಿ ಹಾಗೂ ಒಂದಕ್ಕೊಂದು ಮುಖಾಮುಖಿಯಾಗಿ ಗ್ರಹಿಸಬೇಕೆನ್ನುವ ಸಾಂಸ್ಕೃತಿಕ ಹೊಣೆಗಾರಿಕೆಯಿಂದ ಹುಟ್ಟಿದವು. ಈ ಹಿನ್ನೆಲೆಯಲ್ಲಿ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ಸಂದರ್ಭದಲ್ಲಿ ಸಾಮಾನ್ಯವಾಗಿ ಪರಿಭಾವಿಸುತ್ತಿರುವಂತೆ, ವಿಮರ್ಶೆ ಎನ್ನುವುದು ಸಾಹಿತ್ಯ ಕೃತಿಯ ವಿಶ್ಲೇಷಣೆ ಮೂಲಕ ಇನ್ನೊಂದು ಕೃತಿಯನ್ನು ಹುಟ್ಟಿಸುವುದಾಗಲೀ ಅಥವಾ ಶಾಬ್ದಿಕವಾದ ಆಕರ್ಷಕ ಪದ, ವಾಕ್ಯ ಮತ್ತು ಪರಿಭಾಷೆಗಳ ವಿನ್ಯಾಸದಲ್ಲಿ ಸಂಯೋಜಿಸುವುದಾಗಲಿ ಅಲ್ಲ. ವಿಮರ್ಶೆಯ ಭಾಷೆಯಾಗಲೀ ಸೃಜನಶೀಲ ಆಯಾಮವಾಗಲೀ ಮತ್ತು ಮೀಮಾಂಸೆಯ ಚಹರೆಯಾಗಲೀ ಒಂದು ಭಾಷಿಕ ಪರಿಸರದ ಸಾಹಿತ್ಯ, ಸಮಾಜ, ಸಂಸ್ಕೃತಿ ಮತ್ತು ಬದುಕಿನ ಕುರಿತ ಪ್ರಶ್ನೆಗಳನ್ನು ಏಕೀಭವಿಸಿ ಆಲೋಚಿಸುವ, ಅನುಸಂಧಾನಿಸುವ ವಿಮರ್ಶಕನ ದೃಷ್ಟಿಕೋನ ಮತ್ತು ಬದ್ಧತೆಯಿಂದ ಹುಟ್ಟುತ್ತವೆ. ಹೀಗಾಗಿಯೇ, ಓದುಗ ಒಂದು ಅತ್ಯುತ್ತಮ ಸಾಂಸ್ಕೃತಿಕ ವಿಮರ್ಶೆಯ ಬರಹವನ್ನು ಓದಿದಾಗ, ಕೇವಲ ಮೂಲ ಸಾಹಿತ್ಯ ಕೃತಿಯನ್ನು ಮಾತ್ರವಲ್ಲದೆ ಆ ಕೃತಿಗೆ ಭಿತ್ತಿಯಾಗಿರುವ ಸಮಾಜ, ಸಂಸ್ಕೃತಿ, ಭಾಷೆ, ಧರ್ಮ, ರಾಜಕಾರಣ ಮತ್ತು ಆರ್ಥಿಕ ಪ್ರಶ್ನೆಗಳು ಮೊದಲಾದವುಗಳ ರಚನೆಯ ಹಿಂದಿರುವ ಸಾಂಸ್ಕೃತಿಕ ರಾಜಕಾರಣವನ್ನು ಕುರಿತು ಚಿಂತಿಸುವ 'ಕಥನ' ಮತ್ತು 'ಸಂಕಥನ' ಎರಡೂ ಆಗಿರಬೇಕಾಗುತ್ತದೆ.

ಇಂಥ 'ಕಥನ' ಮತ್ತು 'ಸಂಕಥನ' ಸ್ವರೂಪದ ಸಾಂಸ್ಕೃತಿಕ ವಿಮರ್ಶೆಯ ಪ್ರಮಾಣ ಹಾಗೂ ಸ್ವರೂಪ ಸಮಕಾಲೀನ ಸಂದರ್ಭದಲ್ಲಿ ಬಹಳ ಕಡಿಮೆ ಇದೆ. ಆದರೆ, ಈ ರೀತಿಯ ಸಾಂಸ್ಕೃತಿಕ ವಿಮರ್ಶೆ ರಚಿಸುವ ಬದ್ಧತೆ ಹಾಗೂ ಶಕ್ತಿ ಇರುವ ಪ್ರತಿಭಾವಂತರು ಸಹ ಕಡಿಮೆ ಪ್ರಮಾಣದಲ್ಲಿ ಇದ್ದರೂ ಸಹ, ಉತ್ತಮವಾದ ಸಾಂಸ್ಕೃತಿಕ ವಿಮರ್ಶೆ ರಚಿಸುತ್ತಿದ್ದಾರೆ.

೯.೩ ಸಮಸ್ಯೆಗಳ ಸಮಸ್ಯೀಕರಣ

ಕನ್ನಡ ಸಾಂಸ್ಕೃತಿಕ ವಿಮರ್ಶೆಯು ತನ್ನ ಸಮಕಾಲೀನ ಸಮಸ್ಯೆಗಳಿಂದ ಮುಕ್ತವಾಗಬೇಕಾದರೆ, ಇರುವ ಒಂದೇ ಒಂದು ದಾರಿ ಅದು ತನ್ನೆಲ್ಲಾ 'ಸಮಸ್ಯೆಗಳನ್ನು ಸಮಸ್ಯೀಕರಿಸಿ'ಕೊಳ್ಳುವುದು. ಇದು, ಸಾಹಿತ್ಯ ಮತ್ತು ವಿಮರ್ಶೆಗೆ ಸಂಬಂಧಿಸಿದ ಸಮಸ್ಯೆಗಳಾಗಿರಬಹುದು ಅಥವಾ ಸಮಾಜ, ಸಂಸ್ಕೃತಿ, ಧರ್ಮ, ರಾಜಕಾರಣ, ಭಾಷೆ, ಬದುಕು ಹೀಗೆ, ಯಾವುದೇ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳಾಗಿರಬಹುದು. ಅವುಗಳನ್ನು 'ಸಮಸ್ಯೀಕರಿಸಿಕೊಳ್ಳುವುದೊಂದೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಇಪ್ಪತ್ತೊಂದನೆಯ ಆಧುನಿಕೋತ್ತರ ಸಂದರ್ಭದಲ್ಲಿ ಅರ್ಥಪೂರ್ಣವಾದ ಸಾಂಸ್ಕೃತಿಕ ವಿಮರ್ಶೆಯಾಗಿ ವಿಕಾಸಗೊಳ್ಳುವುದಕ್ಕೆ ಇರುವ ಏಕೈಕ ದಾರಿ.

ಇದಕ್ಕಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರತಿಯೊಂದು ಮಾದರಿಯೂ ಕಣ್ಣೆದುರಿನ ಸಮಸ್ಯೆಗಳಿಗೆ ಪರಿಹಾರವನ್ನು ಅಥವಾ ಕಾರಣಗಳನ್ನು ಶೋಧಿಸುವುದಷ್ಟೇ ಅಲ್ಲದೆ, ಇವೆಲ್ಲವುಗಳ ಹಿನ್ನೆಲೆಯಲ್ಲಿ ಇರಬಹುದಾದ ಮೂಲ ಶಕ್ತಿಗಳು. ಅವುಗಳ ಆಸಕ್ತಿಗಳು ಮತ್ತು ಹಿತಾಸಕ್ತಿಗಳು ಯಾವುವು; ಇವು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೇಗೆ ಮುಂದುವರೆದುಕೊಂಡು ಬಂದಿವೆ ಹಾಗೂ ಹೊಸ ಕಾಲದಲ್ಲಿ, ಯಾವ ರೂಪ–ಸ್ವರೂಪಗಳನ್ನು ಪಡೆದಿವೆ ಎನ್ನುವುದನ್ನು ಕುರಿತ ಆಳಚಿಂತನೆಯನ್ನು ಅಥವಾ 'ಡಿಸ್ಕೋರ್ಸ್'ಅನ್ನು ತಮ್ಮ ತಾತ್ವಿಕ ಉದ್ದೇಶವಾಗಿ ಮಾಡಿಕೊಳ್ಳಬೇಕು. ಹಾಗೆಯೇ, ವಿಮರ್ಶೆಯೂ ಸಹ ಇಂಥ ಒಂದು ಪ್ರಮುಖ ಡಿಸ್ಕೋರ್ಸ್ ಎಂದು ಪರಿಭಾವಿಸುವ ಮೂಲಕ, ತಮ್ಮ ವಿಶ್ಲೇಷಣೆಗಳಲ್ಲಿ ಹಾಗೂ ನಿಲುವುಗಳಲ್ಲಿ ಸರಳೀಕೃತ ಧೋರಣೆಗಳು, ಪೂರ್ವಾಗ್ರಹಗಳು ಮತ್ತು ಪಕ್ಷಪಾತಗಳು ತಲೆದೋರದಂತೆ ಒಳವಿರೋಧ ಮತ್ತು ಸ್ವಯಂ ಪ್ರಶ್ನೆಗಳನ್ನು ಹಾಕಿಕೊಳ್ಳುವ ಮೂಲಕ ತಮ್ಮ ಪ್ರಮುಖ ಮಿತಿಗಳನ್ನು ಮೀರಬೇಕು.

ಇದರಿಂದ ಇಪ್ಪತೊಂದನೆಯ ಶತಮಾನದ ಈಗಿನ ಆಧುನಿಕೋತ್ತರ ಸಂದರ್ಭದ ಸಾಹಿತ್ಯಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಭಾಷಿಕ ಹಾಗೂ ಧಾರ್ಮಿಕ ಸಮಸ್ಯೆಗಳು ಮತ್ತು ಆತಂಕಗಳನ್ನು ಸಮರ್ಥವಾಗಿ ಮುಖಾಮುಖಿ ಮಾಡಬಲ್ಲ ಅರ್ಥಪೂರ್ಣವಾದ ಕನ್ನಡ ಸಾಂಸ್ಕೃತಿಕ ವಿಮರ್ಶೆ ಭದ್ರವಾಗಿ ಬೇರೂರಲು ಸಾಧ್ಯವಾಗುತ್ತದೆ.

೯.೪ ಅಧ್ಯಾಯದ ಫಲಿತಗಳು

'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳ ವಿಶ್ಲೇಷಣೆ'ಯಿಂದ ಕಂಡುಕೊಂಡ ಪ್ರಮುಖ ಫಲಿತಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವು ಸಮಸ್ಯೆಗಳಿಂದ ಮುಕ್ತವಾಗಿರುವ 'ಆದರ್ಶ ಅವಸ್ಥೆ' ಅಥವಾ 'ಪರಿಪೂರ್ಣ ಸ್ಥಿತಿ'ಯೇನಲ್ಲ. ಎಲ್ಲ ದೇಶ, ಕಾಲ ಮತ್ತು ಸಂದರ್ಭದ ಸಾಹಿತ್ಯ

ವಿಮರ್ಶಾ ಪ್ರಕಾರಗಳಂತೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯೂ ಹಲವು ಸಂಕೀರ್ಣ ಕಾರಣಗಳಿಂದ ಕೆಲವು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ.

ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳ ಕಾರಣಗಳು ಬಹುರೂಪಿ ಮತ್ತು ಸಂಕೀರ್ಣ ಸ್ವರೂಪಿದವುಗಳಾಗಿವೆ. ಹೀಗಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳೂ ಸಹ ಸಹಜವಾಗಿಯೇ ಬಹುರೂಪಿ ಹಾಗೂ ಸಂಕೀರ್ಣ ಸ್ವರೂಪಿಗಳಾಗಿವೆ. ಇವು ಸಾಹಿತ್ಯ ವಿಮರ್ಶೆಯ ಸಾಮಾನ್ಯ ಸಮಸ್ಯೆಗಳಿಗಿಂತ ಹೆಚ್ಚು ಸಮಸ್ಯಾತ್ಮಕವಾಗಿವೆ ಹಾಗೂ ಸಂದಿಗ್ಧಾತ್ಮಕವಾಗಿವೆ.

ಇ. ಸಾಹಿತ್ಯದ ಸಮಸ್ಯೆಗಳು ಸಾಹಿತ್ಯ ವಿಮರ್ಶೆಯ ಸಮಸ್ಯೆಗಳಾಗಿ ಮಾರ್ಪಡುತ್ತವೆ ಎನ್ನುವುದು ಸಾಮಾನ್ಯವಾದ ವಿದ್ಯಮಾನವೇ ಹೌದು. ಆದರೆ, ಸಾಂಸ್ಕೃತಿಕ ವಿಮರ್ಶೆಯ ಸಮಸ್ಯೆಗಳು ಹೀಗೆ ಸಾಹಿತ್ಯಕ ಸಮಸ್ಯೆಗಳು ಮಾರ್ಪಾಟಾಗುವ ಅಥವಾ ರೂಪಾಂತರಗೊಳ್ಳುವ ಮೂಲಕವಷ್ಟೇ ಹುಟ್ಟುವುದಿಲ್ಲ. ಇದರ ಬೇರುಗಳು ಸಾಹಿತ್ಯ ಮತ್ತು ವಿಮರ್ಶೆಯ ವಲಯಗಳನ್ನು ಮೀರಿ ಹಬ್ಬಿರುತ್ತವೆ ಹಾಗೂ ಆಳವಾಗಿ ಚಾಚಿಕೊಂಡಿರುತ್ತವೆ. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳಿಗೂ ಅನ್ವಯಿಸುವ ಮಾತೂ ಆಗಿದೆ.

ಈ. ಕೇವಲ ವಿಮರ್ಶೆಯ ಸಮಸ್ಯೆಗಳಷ್ಟೇ ಆಗಿರದೆ ಸಾಹಿತ್ಯ, ಸಮಾಜ, ಭಾಷೆ, ರಾಜಕಾರಣ, ಧರ್ಮ ಮತ್ತು ಆರ್ಥಿಕ ವಿಚಾರಗಳ ಸಮಸ್ಯೆಗಳೂ ಆಗಿರುವುದು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳ ಸಾಮಾನ್ಯ ಸ್ವರೂಪ. ಇವು ಸಾಹಿತ್ಯ ಮತ್ತು ಸಾಹಿತ್ಯೇತರ ಸಂಗತಿಗಳ ಸಮಾವಿಷ್ಟ ಅನುಸಂಧಾನದಿಂದ ಅಥವಾ ಸಂಶ್ಲೇಷಕ ಶೋಧಕ್ರಮದಿಂದ ಮಾತ್ರ ಹುಟ್ಟಿದ ಸಮಸ್ಯೆಗಳಲ್ಲ. ಸಾಹಿತ್ಯೇತರ ಸಂಗತಿಗಳು ಸಾಹಿತ್ಯ ಹಾಗೂ ವಿಮರ್ಶೆಯ ಸಮಸ್ಯೆಗಳನ್ನು ಹುಟ್ಟುಹಾಕುವ ವಿಷಯದಲ್ಲಿ ಅನುಸರಿಸುತ್ತಿರುವ ಸಾಂಸ್ಕೃತಿಕ ರಾಜಕಾರಣವನ್ನು ಮುಖಾಮುಖಿ ಮಾಡುವ ಜರೂರಿನಿಂದ ಹಾಗೂ ನೈತಿಕ ಕಾಳಜಿಯಿಂದ ಹುಟ್ಟಿರುತ್ತವೆ.

ಉ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ವಿವಿಧ ಮಾದರಿಗಳ ಬಹುರೂಪಿ ಸಾಂಸ್ಕೃತಿಕ ರಾಜಕಾರಣಗಳೂ ಕೂಡಾ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಇಂದಿನ ಕೆಲವು ಮುಖ್ಯವಾದ ಸಮಸ್ಯೆಗಳ ಮೂಲಗಳಾಗಿವೆ.

ಊ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬೇರೆಬೇರೆ ಮಾದರಿಗಳು ಸಾಹಿತ್ಯ, ವಿಮರ್ಶೆ, ಸಮಾಜ, ಸಂಸ್ಕೃತಿ, ರಾಜಕಾರಣ, ಧರ್ಮ, ಭಾಷೆ ಮತ್ತು ಆರ್ಥಿಕ ವಿಚಾರಗಳು ಹಾಗೂ ವಿದ್ಯಮಾನಗಳನ್ನು ವಿವರಿಸಿಕೊಳ್ಳುತ್ತಿರುವ ಕ್ರಮಗಳು; ವಿಶ್ಲೇಷಣೆಗೆ ಅನುಸರಿಸುತ್ತಿರುವ ವಿಧಾನಗಳು ಮತ್ತು ರೂಪಿಸಿಕೊಂಡಿರುವ ನೋಟಕ್ರಮಗಳು ಮೊದಲಾದವುಗಳಲ್ಲಿರುವ ದ್ವಂದ್ವ ಹಾಗೂ ವೈರುಧ್ಯಗಳೂ

ಕೂಡಾ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳ ಸ್ವರೂಪವನ್ನು ಇನ್ನಷ್ಟು ಸಂಕೀರ್ಣಗೊಳಿಸಿವೆ.

ಋ. ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಪರಿಕಲ್ಪನೆಗಳು, ಉದ್ದೇಶಗಳು, ಕಾರ್ಯಮಾದರಿಗಳು, ಪರಿಭಾಷೆ ಮತ್ತು ಪರಿಕಲ್ಪನೆಗಳು ಹಾಗೂ ವೈಧಾನಿಕತೆಗಳು ಮೊದಲಾದವುಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ಕೆಲವೊಂದು ಮುಖ್ಯ ಸಂದರ್ಭದಲ್ಲಿ ವಹಿಸಬೇಕಾದ ಎಚ್ಚರವನ್ನು ವಹಿಸದಿರುವುದರಿಂದ ಅನೇಕ ಪರಿಕಲ್ಪನಾತ್ಮಕ ಮತ್ತು ವೈಧಾನಿಕ ಬಿಕ್ಕಟ್ಟುಗಳು ಉಂಟಾಗಿವೆ.

ೠ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳು ತಮ್ಮ ಮಾದರಿವಿಶಿಷ್ಟ ಚಹರೆಗಳ ಮೂಲಗಳಿರುವುದು ಎಲ್ಲಿ ಎನ್ನುವುದನ್ನು ಸೂಕ್ತವಾಗಿ ಗುರುತಿಸಿಕೊಳ್ಳದಿರುವುದು, ಅಂಥ ವಿಮರ್ಶಾ ಮಾದರಿಗಳ ಆಯಾಮಗಳು ಅರ್ಥಪೂರ್ಣವಾಗಿ ವಿಕಾಸಗೊಳ್ಳುವುದಕ್ಕೆ ಇರುವ ಮುಖ್ಯವಾದ ತೊಡಕಾಗಿದೆ. ಕನ್ನಡದ ಶ್ರೇಷ್ಠ ಸಾಂಸ್ಕೃತಿಕ ವಿಮರ್ಶಕರು, ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ಭಾಷಿಕ', 'ಸೃಜನಶೀಲ' ಮತ್ತು 'ಮೀಮಾಂಸೆ'ಯ ಆಯಾಮಗಳನ್ನು ಅರ್ಥಪೂರ್ಣವಾಗಿ ವಿಕಾಸಗೊಳಿಸುವ ಮೂಲಕ, ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ತೃತೀಯ ಜಗತ್ತಿನ ಸಂದರ್ಭದ ದೇಶಿ ವಿಮರ್ಶಾ ರೂಪವಾಗಿ ಬೆಳೆಸಿರುವುದಕ್ಕೆ, ಹೀಗೆ ಸಾಂಸ್ಕೃತಿಕ ವಿಮರ್ಶೆಯ ಚಹರೆಗಳನ್ನು ಅರ್ಥಪೂರ್ಣ ಆಯಾಮಗಳಾಗಿ ಬೆಳೆಸಿರುವುದೇ ಕಾರಣ.

ಎ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ವಿವಿಧ ಮಾದರಿಗಳ ಅತ್ಯಂತ ಪ್ರಮುಖ ಆಯಾಮಗಳು ಅರ್ಥಪೂರ್ಣವಾಗಿ ವಿಕಾಸಗೊಳ್ಳದಿದ್ದ ಪಕ್ಷದಲ್ಲಿ, ಅದರಿಂದ ಕನ್ನಡ ಭಾಷಿಕ ಸಂದರ್ಭದ ಸಾಹಿತ್ಯ, ಸಮಾಜ ಮತ್ತು ಸಂಸ್ಕೃತಿ ಕುರಿತ ಸಂವೇದನಾಶೀಲ ಗ್ರಹಿಕೆ ಮತ್ತು ವಿಮರ್ಶಾತ್ಮಕ ಪ್ರಜ್ಞೆಗಳ ವಿಕಾಸಕ್ಕೆ ಬಹುದೊಡ್ಡ ಹಾನಿಯನ್ನು ಉಂಟುಮಾಡಿದಂತಾಗುತ್ತದೆ. ಇದು, ಕೇವಲ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಭವಿಷ್ಯಕ್ಕೆ ಮಾತ್ರವಲ್ಲದೆ, ಕನ್ನಡದ ಅರ್ಥಪೂರ್ಣ ಪ್ರಜ್ಞೆ ಹಾಗೂ ವಿವೇಕದ ಭವಿತವ್ಯಕ್ಕೆ ಆಗುವ ಬಹುದೊಡ್ಡ ತೊಂದರೆಯೇ ಸರಿ.

ಏ. ಇಂಥ ಬಹುದೊಡ್ಡ ಸಾಂಸ್ಕೃತಿಕ ನಷ್ಟದಿಂದ ಪಾರಾಗುವುದಕ್ಕೆ ಇರುವ ಏಕೈಕ ದಾರಿಯೆಂದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳನ್ನು ಸಮಸ್ಯೀಕರಿಸಿಕೊಳ್ಳುವುದು ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಹಿತ್ಯಕ ಪ್ರಶ್ನೆಗಳು ಹಾಗೂ ಸಮಸ್ಯೆಗಳಿಗೆ ವಿಮರ್ಶೆಯ ಮೂಲಕ ಸರಳ ಮತ್ತು ಸಮಾಧಾನಕರ ಪರಿಹಾರೋಪಾಯಗಳನ್ನು ನೀಡುವ ಕ್ರಮಗಳನ್ನು ತ್ಯಜಿಸುವುದು. ಯಾವುದೇ ಅಥವಾ ಎಲ್ಲ ಸಮಸ್ಯೆಗಳಿಗೂ ವಿಮರ್ಶೆ ಉತ್ತರ ಕೊಡಬೇಕು ಎನ್ನುವ ಆಲೋಚನೆ ಮತ್ತು ಧೋರಣೆಗಳನ್ನು ಕೈಬಿಟ್ಟು, ಅರ್ಥಪೂರ್ಣ ಉತ್ತರಗಳ

ಶೋಧ ಅಥವಾ ಹುಡುಕಾಟವನ್ನು ವಿಮರ್ಶೆಯ ನೈತಿಕ ಹೊಣೆಗಾರಿಕೆ ಮತ್ತು ಕಾರ್ಯಮಾದರಿಯಾಗಿ ಒಪ್ಪಿಕೊಳ್ಳುವುದು. ತಮ್ಮ ಸೈದ್ಧಾಂತಿಕತೆ ಮತ್ತು ಬದ್ಧತೆಗಳಿಗೆ ಅನುಗುಣವಾದ ಹಾಗೂ ಅನುರೂಪವಾದ ಪರಿಹಾರೋಪಾಯಗಳು ಅಥವಾ ಮಾರ್ಗೋಪಾಯಗಳನ್ನು ಮಂಡಿಸುವ ವಿಧಾನಗಳನ್ನು ಬಿಟ್ಟುಕೊಟ್ಟು, ತಮ್ಮ ನಿಲುವುಗಳು ಮತ್ತು ತೀರ್ಮಾನಗಳಿಗೆ ಒಳಪ್ರಶ್ನೆಗಳನ್ನು ಅಥವಾ ಆಂತರಿಕ ವಿರೋಧಗಳನ್ನು ಹಾಕಿಕೊಳ್ಳುವುದು ಬಹಳ ಮುಖ್ಯವಾದ ಕ್ರಮವಾಗಿದೆ. ತೆಳು ಅಥವಾ ಮೇಲ್ಪದರದ ಉತ್ತರಕ್ಕಿಂತ ಅರ್ಥಪೂರ್ಣವಾದ ದಿಟ್ಟವಾದ ಹಾಗೂ ಪ್ರಾಮಾಣಿಕವಾದ ಉತ್ತರದ ಹುಡುಕಾಟ ಯಾವತ್ತೂ ಬಹಳ ಮುಖ್ಯ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ.

೭. ಇಂಥ 'ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ'ದ ಭಾಗವಾಗಿ, ಸಮಕಾಲೀನ ಸಮಸ್ಯೆಗಳನ್ನು 'ಸಮಸ್ಯೀಕರಿಸಿ'ಕೊಳ್ಳಬೇಕಿರುವುದು ಇಂದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಮುಂದೆ ಇರುವ ಬಹುದೊಡ್ಡ ಸವಾಲು ಹಾಗೂ ಜವಾಬ್ದಾರಿ. ಇವುಗಳನ್ನು ನೈತಿಕ ಹೊಣೆಗಾರಿಕೆಯ ಕಾರ್ಯಮಾದರಿಯಾಗಿ ಸ್ವೀಕರಿಸುವ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಇಪ್ಪತ್ತೊಂದನೆಯ ಶತಮಾನದ ಇಂದಿನ ಆಧುನಿಕೋತ್ತರ ಸಂದರ್ಭದಲ್ಲಿ 'ತೃತೀಯ ಜಗತ್ತಿ'ನ ದೇಶಿ ವಿಮರ್ಶಾ ಪ್ರಸ್ಥಾನವಾಗಿ ರೂಪುಗೊಳ್ಳಬೇಕಿದೆ.

ಇಂಥ ಎಲ್ಲ ಅವಕಾಶ, ಸಾಧ್ಯತೆ ಮತ್ತು ಶಕ್ತಿ ಕನ್ನಡ ಸಾಂಸ್ಕೃತಿಕ ವಿಮರ್ಶೆಗೆ ಇದೆ.

ಅಧ್ಯಾಯ-ಹತ್ತು

ಅಧ್ಯಯನದ ಪ್ರಮುಖ ಫಲಿತಗಳು ಮತ್ತು ಅಧ್ಯಯನದಹೊಸ ಸಾಧ್ಯತೆಗಳು

೧೦.೧ ಪೀಠಿಕೆ

೧೦.೨ ಅಧ್ಯಯನದ ಪ್ರಮುಖ ಫಲಿತಗಳು

೧೦.೩ ಅಧ್ಯಯನದ ತೊಡಕುಗಳು ಮತ್ತು ಅವುಗಳನ್ನು ಬಿಡಿಸಿಕೊಂಡ ಬಗೆ

೧೦.೪ ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ – ೧೦ : ಅಧ್ಯಯನದ ಪ್ರಮುಖ ಫಲಿತಗಳು ಮತ್ತು ಅಧ್ಯಯನದ ಹೊಸ ಸಾಧ್ಯತೆಗಳು

೧೦.೧ ಪೀಠಿಕೆ

ನವ್ಯೋತ್ತರ ಕಾಲಘಟ್ಟದಿಂದ ಮುನ್ನೆಲೆಗೆ ಬಂದಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ತಾತ್ವಿಕ ಸ್ವರೂಪ'ವನ್ನು ಅಭ್ಯಸಿಸುವುದು ಈ ಅಧ್ಯಯನದ ಪ್ರಧಾನ ಉದ್ದೇಶವಾಗಿತ್ತು. ವಾಸ್ತವವಾಗಿ 'ತಾತ್ವಿಕ ಸ್ವರೂಪ' ಎನ್ನುವ ಪರಿಕಲ್ಪನೆಯು ಚಾರಿತ್ರಿಕ, ಸಾಮಾಜಿಕ, ರಾಜಕೀಯಾತ್ಮಕ, ಸಾಹಿತ್ಯಕ ಮತ್ತು ಭಾಷಿಕ ಆಯಾಮಗಳನ್ನು ಒಳಗೊಂಡಿರುವ ಒಂದು ವಿಶಿಷ್ಟವಾದ ಪರಿಕಲ್ಪನೆಯಾಗಿದೆ. ಹಾಗೆಯೇ, ಇದು ಕೇವಲ ಸಾಹಿತ್ಯ ವಿಮರ್ಶೆಗೆ ಮಾತ್ರವಲ್ಲದೆ ಸಂಸ್ಕೃತಿ ಚಿಂತನೆಗೆ ಸಂಬಂಧಿಸಿದ ಬಹುಮುಖ್ಯವಾದ ಪರಿಕಲ್ಪನೆ ಕೂಡಾ ಆಗಿದೆ. ಹೀಗಾಗಿ, ಈ ಅಧ್ಯಯನದ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ತಾತ್ವಿಕ ಸ್ವರೂಪ'ವನ್ನು ಬಹುರೂಪಿ ನೆಲೆಗಳಲ್ಲಿ, ಸ್ತರಗಳಲ್ಲಿ ಹಾಗೂ ಆಯಾಮಗಳಲ್ಲಿ ಚರ್ಚಿಸಲಾಗಿದೆ. ಇವುಗಳಲ್ಲಿ ಮುಖ್ಯವಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳ ಪರಿಶೀಲನೆ; ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಕಾರ್ಯಮಾದರಿಗಳ, ಚಹರೆಗಳ, ಅನುಸಂಧಾನ ವಿಧಾನಗಳ ಮತ್ತು ಆಯಾಮಗಳ ವಿಶ್ಲೇಷಣೆ; ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಿವಿಧ ಮಾದರಿಗಳ ವಿವೇಚನೆ; ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳ ಪರ್ಯಾಲೋಚನೆ ಹಾಗೂ ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳ ತೌಲನಿಕ ಚರ್ಚೆಗಳು ಸೇರಿವೆ.

ಈ ಹಿನ್ನೆಲೆಯಲ್ಲಿ, ನವ್ಯೋತ್ತರ ಘಟ್ಟದಿಂದ ಸಮಕಾಲೀನ ಆಧುನಿಕೋತ್ತರ ಘಟ್ಟದವರೆಗಿನ ದೀರ್ಘವಾದ ಕಾಲವ್ಯಾಪ್ತಿಯನ್ನು ಹೊಂದಿರುವ ಈ 'ಪ್ರಕಾರ ಶೋಧಕ' ಸ್ವರೂಪದ ಅಧ್ಯಯನವು ಸಾಕಷ್ಟು ವ್ಯಾಪಕವಾದ ಹಾಗೂ ಅರ್ಥಪೂರ್ಣವಾದ ಅಧ್ಯಯನವಾಗಿದೆ ಎಂದು ಭಾವಿಸಲಾಗಿದೆ. ಇದನ್ನು ಈ ಅಧ್ಯಯನದಿಂದ ಕಂಡುಕೊಂಡಿರುವ ಫಲಿತಗಳು ಸಮರ್ಥವಾಗಿ ರುಜುವಾತುಪಡಿಸುತ್ತವೆ.

೧೦.೨ ಅಧ್ಯಯನದ ಪ್ರಮುಖ ಫಲಿತಗಳು

ಈ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳಲ್ಲಿ ಅತ್ಯಂತ ಮುಖ್ಯವೆಂದು ಭಾವಿಸಲಾದವುಗಳನ್ನು ಮುಂದೆ ನಿರೂಪಿಸಲಾಗಿದೆ. ಅವು ಇಂತಿವೆ.

ಅ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಎನ್ನುವುದು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಪ್ರಭಾವ ಮತ್ತು ಪ್ರೇರಣೆಯಿಂದ ಹುಟ್ಟಿಕೊಂಡಿರುವ ಪ್ರಕಾರವೇನಲ್ಲ. ಇಂಗ್ಲೆಡಿನ ರೇಮಂಡ್ ವಿಲಿಯಮ್ಸ್‌ನ 'ದ್ವಂದ್ವಮಾನಭೌತವಾದ' ಮತ್ತು ಅಮೇರಿಕಾದ ಸ್ಟೀಫನ್ ಗ್ರಿನ್‌ಬ್ಲಾಟ್‌ನ 'ನವಚಾರಿತ್ರಿಕವಾದ'ಗಳು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯ ಎರಡು ಪ್ರಭಾವಶಾಲಿ ಪ್ರಕಾರಗಳು. ಕಳೆದ ಶತಮಾನದ

ಉತ್ತರಾರ್ಧದಿಂದ ಇವು ಜಾಗತಿಕವಾಗಿ ಸಾಕಷ್ಟು ಪ್ರಭಾವ ಬೀರಿದ್ದರೂ ಸಹ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣದ ಹಿನ್ನೆಲೆಯ ಪ್ರಮುಖ ಚಾರಿತ್ರಿಕ ಸಂಗತಿಗಳಾಗಿ ಇವು ಕ್ರಿಯಾತ್ಮಕವಾಗಿಲ್ಲ. ಆದರೆ, ಇವುಗಳಲ್ಲಿ ರೇಮಂಡ್ ವಿಲಿಯಮ್ಸ್‌ನ ಸಂಸ್ಕೃತಿ ಚಿಂತನೆಗಳು, ವಿಮರ್ಶಾ ಪರಿಕಲ್ಪನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಗ್ರಹಿಕೆ ಮತ್ತು ತಾತ್ವಿಕ ಸ್ವರೂಪವನ್ನು ದೊಡ್ಡಮಟ್ಟದಲ್ಲಿ ಪ್ರಭಾವಿಸಿವೆ. ಇದೇ ಸಂದರ್ಭದಲ್ಲಿ ರೇಮಂಡ್ ವಿಲಿಯಮ್ಸ್‌ಪ್ರಭಾವಕ್ಕಿಂತ ಕಾರ್ಲ್‌ಮಾರ್ಕ್ಸ್‌ನ ಮಾರ್ಕ್ಸ್‌ವಾದದ ಪ್ರಭಾವ, ಅಂಬೇಡ್ಕರ್ ಹಾಗೂ ಲೋಹಿಯಾ ಚಿಂತನೆಗಳ ಪ್ರಭಾವ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣದ ಹಿನ್ನೆಲೆಯಲ್ಲಿರುವ ಪ್ರಮುಖ ಪ್ರೇರಣೆಗಳಾಗಿವೆ.

ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪೀಕರಣದ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗಿರುವ ಹಲವು ಸಂಗತಿಗಳನ್ನು ಗುರುತಿಸಬಹುದು. ಅವುಗಳೆಂದರೆ, ಕಳೆದ ಶತಮಾನದ ಎಪ್ಪತ್ತರ ದಶಕದ ವೇಳೆಗೆ ಕನ್ನಡ ನವ್ಯ ಸಾಹಿತ್ಯ ಮತ್ತು ನವ್ಯ ವಿಮರ್ಶೆಗೆ ವ್ಯಕ್ತವಾದ ತೀವ್ರವಾದ ವಿರೋಧ; ಅದರ ಭಾಗವಾಗಿ ಹುಟ್ಟಿಕೊಂಡ ಹೊಸ ಸಾಹಿತ್ಯ ಚಳವಳಿಗಳು; ಅವು ಸಾಹಿತ್ಯದ ಚರ್ಚೆಯಲ್ಲಿ ಸಮಾಜ, ಸಂಸ್ಕೃತಿ ಮತ್ತು ರಾಜಕಾರಣದ ಪ್ರಶ್ನೆಗಳನ್ನು ಮುಖ್ಯವೆಂದು ಪರಿಗಣಿಸಿದ ವಿದ್ಯಮಾನ; ಇವೆಲ್ಲವುಗಳ ಒಟ್ಟು ಪ್ರಯತ್ನವಾಗಿ ಪ್ರತಿಪಾದಿಸಲಾದ ಹೊಸ ಸಾಹಿತ್ಯ ಮೀಮಾಂಸೆಗಳು ಹಾಗೂ ಹೊಸ ಸಾಹಿತ್ಯ ವಿಮರ್ಶಾ ಪ್ರಕಾರಗಳು; ಕರ್ನಾಟಕ ಸಂಸ್ಕೃತಿ ಸ್ವರೂಪ ಕುರಿತು ನಡೆದ ಬಹುರೂಪಿಯಾದ ವಾಗ್ವಾದಗಳು; ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನ್ಯಾಯ ಸಾಧನೆಗಾಗಿ ಸಾಹಿತ್ಯ ಹಾಗೂ ಸಂಸ್ಕೃತಿ ಪಠ್ಯಗಳನ್ನು ಬಹುರೂಪಿ ವಿಧಾನಗಳಲ್ಲಿ ಅನುಸಂಧಾನ ಮಾಡಿದ ಕ್ರಮಗಳು ಸಂಶ್ಲೇಷಾತ್ಮಕ ನೆಲೆಯಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ರೂಪಿಸಿವೆ.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆರಂಭಿಕ ಹಂತವಾದ ನವೋದಯ ವಿಮರ್ಶೆಯಲ್ಲಿಯೇ ಸಾಂಸ್ಕೃತಿಕ ಪ್ರಶ್ನೆಗಳು ಇದ್ದವು. ಆದರೆ ಅವು ಅಂದಿನ ಚಾರಿತ್ರಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಕ್ಕೆ ಅನುಸಾರವಾಗಿ ರಾಷ್ಟ್ರೀಯತೆ, ಉಪರಾಷ್ಟ್ರೀಯತೆ, ನಾಡು ಮತ್ತು ನುಡಿಯ ಅನನ್ಯತೆ ಹಾಗೂ ಐಕ್ಯತೆಯ ಆಶಯಗಳ ಸಾಧನಗಳಾಗಿ ಕ್ರಿಯಾತ್ಮಕವಾಗಿದ್ದವು. ಸಾಹಿತ್ಯ ವಿಮರ್ಶೆಯನ್ನೇ ರೂಪಿಸದ ಪ್ರಗತಿಶೀಲ ಸಾಹಿತ್ಯ ಚಳವಳಿ ಮತ್ತು ಪಾಶ್ಚಾತ್ಯ ನವ್ಯ ವಿಮರ್ಶೆಯ 'ಪಡಿಯಚ್ಚಿ'ನ ರೂಪವಾದ ಕನ್ನಡ ನವ್ಯ ವಿಮರ್ಶೆಗಳ ಸಂದರ್ಭದಲ್ಲಿ ಮಾತ್ರ ಕನ್ನಡ ವಿಮರ್ಶೆಯು ಸಂಸ್ಕೃತಿಯ ಪ್ರಶ್ನೆಗಳನ್ನು ನಿರ್ಲಕ್ಷ್ಯಿಸಿದೆ. ದಲಿತ, ಬಂಡಾಯ ಮತ್ತು ಸ್ತ್ರೀವಾದಿ ಚಳವಳಿಗಳ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆಯು ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಭಾಷಿಕ ಪ್ರಶ್ನೆಗಳನ್ನು ತೀವ್ರವಾಗಿ ಹಾಗೂ ವ್ಯಾಪಕ ಪ್ರಮಾಣದಲ್ಲಿ ಎತ್ತಿದೆ. ಆದರೆ ಆರಂಭದಲ್ಲಿ ಇವು, ಸಾಹಿತ್ಯ ಮತ್ತು ಪಠ್ಯಗಳ

ವಿಶಿಷ್ಟ ಅಂತಸ್ಥಸ್ವರೂಪದ ಆಯಾಮವನ್ನು ನಿರಾಕರಿಸಿದವು. ಹೀಗಾಗಿ ಇವು ಎತ್ತಿದ ಸಾಮಾಜಿಕ, ರಾಜಕೀಯ, ಆರ್ಥಿಕ ಪ್ರಶ್ನೆಗಳು ಎಂಭತ್ತರ ಮತ್ತು ತೊಂಭತ್ತರ ದಶಕಗಳಲ್ಲಿ ದೇಶಿ ಸಂಸ್ಕೃತಿ ಶೋಧ ಹಾಗೂ ದೇಸಿ ಸಂಸ್ಕೃತಿ ರಕ್ಷಣೆಯ ತೀವ್ರವಾದ ಪ್ರಶ್ನೆಗಳೊಂದಿಗೆ ಮುಖಾಮುಖಿ ಮಾಡಿದಾಗ ಕನ್ನಡದಲ್ಲಿ ನಿಜವಾದ ಸಾಂಸ್ಕೃತಿಕ ವಿಮರ್ಶೆ ರೂಪುಗೊಳ್ಳತೊಡಗಿತು.

ಈ. ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆಯನ್ನು ನಿಸ್ಸಂಶಯವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಅದರ ವಿಭಿನ್ನ ರೂಪಗಳು ಎಂದು ಕರೆಯಬಹುದಾಗಿದೆ. ಏಕೆಂದರೆ, ಪ್ರಸ್ತುತ ಕ್ರಿಯಾತ್ಮಕವಾಗಿರುವ ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಹಿಂದಿನ ಪ್ರಧಾನಧಾರೆ ಅಥವಾ ವಿವಿಧ ಸೈದ್ಧಾಂತಿಕ ವಿಮರ್ಶಾ ಪ್ರಕಾರಗಳಿಗಿಂತ ತಾತ್ವಿಕವಾಗಿ ತುಂಬಾ ಭಿನ್ನವಾಗಿದೆ. ಅಷ್ಟೇ ಅಲ್ಲದೆ, ಸಾಹಿತ್ಯ ಹಾಗೂ ಸಂಸ್ಕೃತಿ ಗ್ರಹಿಕೆ ಕುರಿತ ಸಂಗತಿಗಳಲ್ಲಿ ಹೆಚ್ಚು ಅರ್ಥಪೂರ್ಣತೆ ಸಾಧಿಸಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆ ತನ್ನದೇ ಆದ ವಿಶಿಷ್ಟ ಚಹರೆಗಳನ್ನು, ವಿಶ್ಲೇಷಣಾ ವಿಧಾನಗಳನ್ನು ಮತ್ತು ಅನುಸಂಧಾನ ಕ್ರಮಗಳನ್ನು ರೂಪಿಸಿಕೊಂಡಿದೆ.

ಉ. ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಹ ಏಕರೂಪಿ ಅಥವಾ ಅಖಂಡ ಅವಸ್ಥೆಯೇನಲ್ಲ. ಇದರಲ್ಲೂ ಸಹ ಹಲವು ಪ್ರಮುಖ ಮಾದರಿಗಳಿವೆ. ಇವು ಈ ಹಿಂದೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಮುಖ್ಯ ಆಸಕ್ತಿಯಾಗಿ ಹೊಂದಿದ್ದ ವಿಮರ್ಶಾ ಪ್ರಕಾರಗಳು ತಮ್ಮ ಮಿತಿಗಳಿಂದ ಹೊರಬಂದು ಅರ್ಥಪೂರ್ಣವಾದ ಪರಿಷ್ಕಾರರೂಪ ಪಡೆಯುವ ಮೂಲಕ ವಿಕಾಸಗೊಂಡಿವೆ. ದಲಿತ ಸಾಂಸ್ಕೃತಿಕ ವಿಮರ್ಶೆ, ಎಡಪಂಥೀಯ ಸಾಂಸ್ಕೃತಿಕ ವಿಮರ್ಶೆ, ಹಾಗೂ ಸಮಾಜವಾದಿ ಸಾಂಸ್ಕೃತಿಕ ವಿಮರ್ಶೆ ಇಂಥ ಕೆಲವು ಮುಖ್ಯ ಮಾದರಿಗಳು. ಹಾಗೆಯೇ, ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಯನ್ನು ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಕ್ಕೆ ಮರುವ್ಯಾಖ್ಯಾನಿಸಿಕೊಳ್ಳುವ ಮೂಲಕ ಇಂಥ ಪರಿಷ್ಕಾರರೂಪ ಪಡೆದಿದೆ. ದೇಶಿವಾದಿ ಸಾಂಸ್ಕೃತಿಕ ವಿಮರ್ಶೆ ಮತ್ತು ಪರಿಸರವಾದಿ ಸಾಂಸ್ಕೃತಿಕ ವಿಮರ್ಶೆ ಮೊದಲಾದವು ತೃತೀಯ ಜಗತ್ತಿನ ಸಮಕಾಲೀನ ಆತಂಕಗಳಿಗೆ ಮುಖಾಮುಖಿಯಾಗುವ ಪ್ರತಿರೋಧದ ಕ್ರಮದಿಂದ ಮುನ್ನೆಲೆಗೆ ಬಂದಿವೆ.

ಊ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನ, ಸಾಹಿತ್ಯಾನುಸಂಧಾನ ಮತ್ತು ರಾಜಕೀಯಾನುಸಂಧಾನಗಳ ಆಸಕ್ತಿ ಹಾಗೂ ಉದ್ದೇಶಗಳಿಗನುಸಾರವಾಗಿ ಸಾಹಿತ್ಯ ಅಥವಾ ಪಠ್ಯಗಳನ್ನು ಬೇರೆ ಬೇರೆ ಕ್ರಮದಲ್ಲಿ ಪರಿಭಾವಿಸಲಾಗುತ್ತಿದೆ. ಹೀಗಾಗಿ, ಸಾಹಿತ್ಯವನ್ನು ಸಾಮಾಜಿಕ ಸಂಗತಿಗಳು ಹಾಗೂ ಸಾಮಾಜಿಕ ಪ್ರಶ್ನೆಗಳ ಪ್ರತಿಫಲನದ ಆಕರ, ರಾಜಕೀಯ ಪ್ರಶ್ನೆಗಳಿಗೆ ಮೂಲ ಆಧಾರವಾದ ದಸ್ತಾವೇಜು ಅಥವಾ ಸಾಂಸ್ಕೃತಿಕ ಆಚರಣೆ ಹಾಗೂ

ಪರಂಪರೆಗಳ ಪ್ರತಿನಿಧೀಕರಣದ ಸಾಮಗ್ರಿ ಎಂದು ಭಾವಿಸುವ ಪ್ರವೃತ್ತಿ ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿವೆ. ಇದರಿಂದ ಸಾಹಿತ್ಯವನ್ನು ಒಂದು ವಿಶಿಷ್ಟ ಕಲಾ ಪ್ರಕಾರ ಹಾಗೂ ಅದು ತನ್ನದೇ ಆದ ಅಂತಃಸ್ಥ ಗುಣಧರ್ಮ ಹೊಂದಿರುವ ಅಭಿವ್ಯಕ್ತಿ ರೂಪ ಎನ್ನುವ ಪ್ರಶ್ನೆ ನಿರ್ಲಕ್ಷ್ಯಕ್ಕೆ ಒಳಗಾಗಿರುವುದಕ್ಕೆ ಹೇರಳವಾದ ನಿದರ್ಶನವಿದೆ.

ಖು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳ ವ್ಯಾಪ್ತಿ ಅತ್ಯಂತ ದೊಡ್ಡ ಹರವು ಹೊಂದಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಅಯಾಮಗಳಲ್ಲಿ ವರ್ಣ, ವರ್ಗ, ಜಾತಿ ಮತ್ತು ಲಿಂಗ ಪ್ರಶ್ನೆಗಳ ಸಂಕೀರ್ಣವಾದ ಆಯಾಮಗಳಿವೆ. ಸಾಮಾಜಿಕ ನ್ಯಾಯ ಸಾಧನೆ ಮತ್ತು ಬದುಕಿನ ಬದಲಾವಣೆಯಂಥ ಗಂಭೀರ ಉದ್ದೇಶಗಳನ್ನು ಇವು ಒಳಗೊಂಡಿರುವ ಕಾರಣದಿಂದ ಸಂಘರ್ಷಾತ್ಮಕತೆಯನ್ನು ಮುಖ್ಯ ಚಹರೆಯಾಗಿ ಹೊಂದಿವೆ. ಪ್ರಧಾನವಾಗಿ ಶೋಷಿತ, ದಮನಿತ ಮತ್ತು ಅಪಮಾನಿತ ಹಿನ್ನೆಲೆಯ ವಿಮರ್ಶಕರು ಸಾಹಿತ್ಯದ ಸಾಮಾಜಿಕಾನುಸಂಧಾನವನ್ನು ಸಾಂಸ್ಕೃತಿಕ ರಾಜಕಾರಣದ ಒಂದು ಪ್ರಮುಖ ಮಾದರಿಯಾಗಿ ಭಾವಿಸಿಕೊಂಡಿದ್ದಾರೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನಕ್ಕೆ ಒಂದು ವಿಶಿಷ್ಟವಾದ ಆಯಾಮ ದೊರೆತಿದೆ. ಹೊರನೋಟಕ್ಕೆ ವರ್ತಮಾನದ ಸಾಮಾಜಿಕ ಪ್ರಶ್ನೆಗಳ ಮೂಲಕ ಸಾಹಿತ್ಯದ ವಿಶ್ಲೇಷಣೆ ಹಾಗೂ ಮೌಲ್ಯಮಾಪನ ಮಾಡುತ್ತಿರುವಂತೆ ಕಂಡರೂ ಸಾಹಿತ್ಯ, ಸಮಾಜ, ಸಂಸ್ಕೃತಿ, ಚರಿತ್ರೆ, ಧರ್ಮ, ರಾಜಕಾರಣ ಮತ್ತು ಭಾಷೆ ಮೊದಲಾದ ಮಾನವ ಮನಸ್ಸು ಹಾಗೂ ಪ್ರಜ್ಞೆಯ ರಚನೆಗಳ ಹಿಂದಿರುವ ಮೌಲ್ಯವ್ಯವಸ್ಥೆಗಳ ಹಾಗೂ ಹಿತಾಸಕ್ತಿಗಳ ವಿಮರ್ಶೆಯೇ ಈ ಸಾಮಾಜಿಕ ಪ್ರಶ್ನೆಗಳ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆ ಮಾಡುತ್ತಿರುವ ಮಹತ್ವದ ಅನುಸಂಧಾನವಾಗಿದೆ.

ಖೂ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದ ಬಹುಮುಖ್ಯ ವಿಧಾನಗಳಲ್ಲಿ 'ಸಮಾವಿಷ್ಟ ನೆಲೆ' ಅಥವಾ 'ಸಾಂಸ್ಕೃತಿಕಾನುಸಂಧಾನದ ಸಮಾವಿಷ್ಟ ನೆಲೆ' ವಿಧಾನ ಅತ್ಯಂತ ಮಹತ್ವಪೂರ್ಣವಾದುದು. ಈ ವಿಧಾನವು ಸಾಹಿತ್ಯದ ಸಾಮಾಜಿಕಾನುಸಂಧಾನದ ಸಂದರ್ಭದಲ್ಲಿ ಸಮಾಜ ಮತ್ತು ಸಂಸ್ಕೃತಿಗಳ ಸ್ವರೂಪ ಕುರಿತ ಜನಪ್ರಿಯ ಹಾಗೂ ರೂಢಿಗತವಾದ ಸರಳೀಕೃತ ಗ್ರಹಿಕೆಗಳನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ. ಇವುಗಳನ್ನು ದ್ವಂದ್ವರೂಪಿ ಮತ್ತು ಸಂಕೀರ್ಣಸ್ಥಿತಿಯ ಮೂಲಕ ಗ್ರಹಿಸುತ್ತದೆ. ಆದ್ದರಿಂದಲೇ, ಸಾಮಾಜಿಕಾನುಸಂಧಾನದ ಭಾಗವಾಗಿ ಲೇಖಕರ ಸಾಹಿತ್ಯಕ ನಿಲುವು ಅಥವಾ ಧೋರಣೆಗಳನ್ನು ಬೆಲೆಕಟ್ಟುವಾಗ ಆ ಲೇಖಕನ ಸಾಹಿತ್ಯ ರಚನಾ ಕಾಲಘಟ್ಟದ ಸಾಮಾಜಿಕ ಸಂದರ್ಭ; ಮತ್ತು ವ್ಯಕ್ತಿಗತವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಎರಡನ್ನೂ ಮುಖ್ಯವೆಂದು ಪರಿಗಣಿಸುತ್ತದೆ. ಆದ್ದರಿಂದಲೇ, ಲೇಖಕನ ಸಾಮಾಜಿಕ ನಿಲುವನ್ನು ಕುರಿತ ವಿಶ್ಲೇಷಣೆಯಲ್ಲಿ ಆತನನ್ನಾಗಲೀ ಅಥವಾ ಆಕೆಯನ್ನಾಗಲೀ

ವ್ಯಕ್ತಿಗತವಾಗಿ ಹೊಣೆಗಾರರನ್ನಾಗಿ ಮಾಡದೆ ಅವರ ಪ್ರಜ್ಞೆ ಹಾಗೂ ಸಂವೇದನೆಗಳನ್ನು ರೂಪಿಸಿರುವ ಮೌಲ್ಯವ್ಯವಸ್ಥೆಗಳ ಸ್ವರೂಪದ ವಿಶ್ಲೇಷಣೆಯ ಮೂಲಕ ವಿವರಿಸುತ್ತದೆ.

ಏ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕಾನುಸಂಧಾನದಲ್ಲಿ ಸಾಹಿತ್ಯಕ ಹಾಗೂ ಸಾಹಿತ್ಯೇತರ ಮಾನದಂಡಗಳ 'ಸಂಯೋಗಾತ್ಮಕ ವಿಧಾನ' ರೂಪಿಸಿಕೊಳ್ಳಲಾಗಿದೆ. ಇದರಿಂದಾಗಿ, ಎಲ್ಲ ಬಗೆಯ ಅಭಿವ್ಯಕ್ತಿರೂಪಗಳನ್ನು 'ಪಠ್ಯ'ವೆಂದು ಪರಿಗಣಿಸಿ ವಿಶ್ಲೇಷಿಸುವುದು ಹೆಚ್ಚು ಮಹತ್ವ ಪಡೆದುಕೊಂಡಿದೆ. ಸಾಹಿತ್ಯ ಹಾಗೂ ಸಾಹಿತ್ಯೇತರ ಪಠ್ಯಗಳನ್ನು ಅವುಗಳ ಪಠ್ಯೀಯತೆ, ಪಠ್ಯಾತ್ಮಕತೆ, ಅಂತರ್‌ಪಠ್ಯಾತ್ಮಕತೆ ಮತ್ತು ಬಹುಪಠ್ಯಾತ್ಮಕತೆ ವಿಧಾನಗಳಲ್ಲಿ ಅನುಸಂಧಾನ ಮಾಡಲಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನದಲ್ಲಿ ಪಠ್ಯದ ವಸ್ತುನಿಷ್ಠ ಮತ್ತು ನಿರಪೇಕ್ಷ ಕ್ರಮಕ್ಕೆ ಬದಲಾಗಿ ಸಮಾಜ, ಸಂಸ್ಕೃತಿ ಹಾಗೂ ಸಮಕಾಲೀನ ಆಶೋತ್ತರಗಳ ವಿದ್ಯಮಾನಗಳ ಮೂಲಕ ಅನುಸಂಧಾನ ಮಾಡುವುದು ಮಹತ್ವ ಪಡೆದುಕೊಂಡಿದೆ.

ಐ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಾನುಸಂಧಾನವು ಮುಖ್ಯವಾದ ಎರಡು ಆಯಾಮಗಳಲ್ಲಿ ವ್ಯಕ್ತವಾಗಿದೆ. ಸ್ವಾತಂತ್ರ್ಯೋತ್ತರ ಕಾಲಘಟ್ಟದ ನಿರ್ವಸಾಹತೀಕರಣ ಚಿಂತನೆಯ 'ದೇಸಿ ಸಂಸ್ಕೃತಿ ಶೋಧ'ಮತ್ತು ನವವಸಾಹತುಶಾಹಿ ಸಂದರ್ಭದ 'ದೇಸಿ ಸಂಸ್ಕೃತಿ ಸಂರಕ್ಷಣೆ'ಗಳೇ ಆ ಎರಡು ಆಯಾಮಗಳು. 'ದೇಸಿ ಸಂಸ್ಕೃತಿ ಶೋಧ'ದ ಆಯಾಮವು ಕನ್ನಡ ಜಾನಪದ ಮತ್ತು ಅನುಭಾವ ಸಾಹಿತ್ಯ ರಚನೆಗಳನ್ನು 'ಪಠ್ಯ'ಗಳಾಗಿ ಪರಿಗಣಿಸಿದೆ. ಇವುಗಳ ಅನುಸಂಧಾನದ ಮೂಲಕ ಸಮಕಾಲೀನ ಸಂದರ್ಭದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಹುಡುಕುವ ಪ್ರಯತ್ನಗಳನ್ನು ಮಾಡಲಾಗಿದೆ. 'ದೇಸಿ ಸಂಸ್ಕೃತಿ ಸಂರಕ್ಷಣೆ'ಯ ಆಯಾಮವು ಜನಪ್ರಿಯ ಸಾಹಿತ್ಯ, ಜನಪ್ರಿಯ ಕಲಾರೂಪಗಳು, ಆಧುನಿಕ ವಿಜ್ಞಾನ ಮತ್ತು ಪರಿಸರದ ಪ್ರಶ್ನೆಗಳನ್ನು 'ಪಠ್ಯ'ಗಳಾಗಿ ಪರಿಗಣಿಸಿದೆ. ಹಾಗೆಯೇ ಕೋಮುವಾದ, ಮತೀಯವಾದ, ಹಿಂಸಾವಾದ ಮತ್ತು ಜಾಗತೀಕರಣದ ಮಾನವ ವಿರೋಧಿಯಾದ ವಾಣೀಜ್ಯಕರಣವಾದದ ವಿರುದ್ಧ ಜೀವಪರ ಹಾಗೂ ಮಾನವಪರ ಸಂಸ್ಕೃತಿ ನೆಲೆಗಳನ್ನು ಮರುಶೋಧಿಸುವ ಪ್ರಯತ್ನ ಮಾಡುತ್ತಿದೆ.

ಐ. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಸಾಹಿತ್ಯೇತರ ವೈಚಾರಿಕ ಅಥವಾ ಸೈದ್ಧಾಂತಿಕ ಆಕೃತಿಗಳನ್ನು ವಿಶ್ಲೇಷಣಾ ಸಾಧನಗಳಾಗಿ ಬಳಸುತ್ತಿದ್ದ ಕ್ರಮಕ್ಕೆ ಬದಲಾಗಿ, 'ಸಾಹಿತ್ಯ ಸಂಸ್ಕೃತಿ' ಅಥವಾ 'ಸಾಹಿತ್ಯ ಜ್ಞಾನ – ಪರಿಜ್ಞಾನ –ಪರಿಭಾಷೆ'ಯನ್ನು ಎಲ್ಲಾ ಸ್ವರೂಪದ ಮತ್ತು ಪ್ರಕಾರದ ಪಠ್ಯಗಳ ಅನುಸಂಧಾನಕ್ಕೆ ಸಮರ್ಥವಾಗಿ ಬಳಸುವ ಹೊಸ ವಿಧಾನ ಮುನ್ನೆಲೆಗೆ ಬಂದಿದೆ. ಕನ್ನಡದ ಶ್ರೇಷ್ಠ

ಸಾಂಸ್ಕೃತಿಕ ವಿಮರ್ಶಕರಾದ ಡಿ.ಆರ್. ಅವರ 'ಸಾಹಿತ್ಯ ಕಥನ' (೧೯೯೬), ಹಾಗೂ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' (೧೯೯೯) ಕೃತಿಗಳು ಇಂಥ ಅರ್ಥಪೂರ್ಣ ವಿಧಾನವನ್ನು ಶಕ್ತವಾಗಿ ರೂಪಿಸಿವೆ. ಹಾಗೆ ನೋಡಿದರೆ ಈ ವಿಧಾನವು, ಕನ್ನಡ ಸಾಂಸ್ಕೃತಿಕ ವಿಮರ್ಶೆ ತನ್ನ 'ದೇಶೀ ಸಂಸ್ಕೃತಿ ಶೋಧ'ದ ಉದ್ದೇಶದ ಹಿನ್ನೆಲೆಯಲ್ಲಿ ಪಠ್ಯಗಳ ಅನುಸಂಧಾನಕ್ಕಾಗಿ ರೂಪಿಸಿಕೊಂಡಿರುವ ಒಂದು ಅತ್ಯಂತ ಅರ್ಥಪೂರ್ಣವಾದ ವಿಧಾನವಾಗಿದೆ. 'ಕನ್ನಡ ಜಗತ್ತಿ'ನ ಪರಿಕಲ್ಪನೆ ದೃಷ್ಟಿಯಿಂದ ಈ ವಿಧಾನಕ್ಕೆ ವಿಶೇಷ ಮಹತ್ವವಿದೆ.

೫. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಆಯಾಮದ ಭಿತ್ತಿ ಅತ್ಯಂತ ವಿಸ್ತಾರವಾದದ್ದು ಮತ್ತು ಸಂಕೀರ್ಣವಾದ ಹೊಣೆಗಾರಿಕೆಗಳಿಂದ ಕೂಡಿರುವ ಸ್ವರೂಪದ್ದು. ಅಷ್ಟೇ ಅಲ್ಲದೆ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಸಾಂಸ್ಕೃತಿಕ ರಾಜಕಾರಣವನ್ನು ತನ್ನ ಉದ್ದೇಶವಾಗಿ ಮಾಡಿಕೊಂಡಿರುವುದು ಒಂದು ಆಯಾಮವಾದರೆ, ಸಾಂಸ್ಕೃತಿಕ ರಾಜಕಾರಣ ಸಹಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನೇ ತನ್ನ ಮಾಧ್ಯಮವಾಗಿ ಕೂಡಾ ಮಾಡಿಕೊಂಡಿರುವುದು ಇನ್ನೊಂದು ಆಯಾಮವಾಗಿದೆ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಆಯಾಮಗಳಲ್ಲಿ ಅತ್ಯಂತ ಜಟಿಲವಾದ ದ್ವಂದ್ವಾತ್ಮಕ ಮತ್ತು ವೈರುಧ್ಯಾತ್ಮಕ ಸ್ವರೂಪದ ಸ್ತರಗಳಿವೆ.

೬. ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ರಾಜಕಾರಣದ ಆಯಾಮ ಹುಟ್ಟುವುದಕ್ಕೆ ಚಾರಿತ್ರಿಕವಾಗಿ ಮುಖ್ಯವಾದ ಎರಡು ಕಾರಣಗಳಿವೆ. ಕನ್ನಡ ಭಾಷಿಕ ಸಂಸ್ಕೃತಿ ಮೇಲೆ ಹೊರಗಿನ ಪ್ರಬಲ ಸಾಂಸ್ಕೃತಿಕ ಮತ್ತು ರಾಜಕೀಯ ಯಾಜಮಾನ್ಯಶಕ್ತಿ ಆಕ್ರಮಣ ಮಾಡಿರುವುದು ಇಂಥ ಒಂದು ಕಾರಣ. ಇದು ಜಾಗತೀಕರಣ ವಿದ್ಯಮಾನದ ಮೂಲಕ ಎರಗಿದೆ. ಹಾಗೆಯೇ, ಇದೇ ಭಾಷಿಕ ಸಂಸ್ಕೃತಿಯ ಒಳಗಿನ ಪ್ರತಿಷ್ಠಿತ ಯಾಜಮಾನ್ಯ ಶಕ್ತಿಗಳು ಅಂಚಿನ ಹಾಗೂ ಅಧೀನ ರಚನೆಗಳ ಮೇಲೆ ತಮ್ಮ ನಿಯಂತ್ರಣ ಸಾಧಿಸಲು ಮಾಡುತ್ತಿರುವ ಹುನ್ನಾರಗಳ ರೂಪದಲ್ಲಿ ಆಕ್ರಮಿಸುತ್ತಿರುವುದು ಇಂಥ ಇನ್ನೊಂದು ಕಾರಣ. ಇದು ಜಾತಿ, ಧರ್ಮ, ಭಾಷೆ ಮತ್ತು ಅಚರಣಾ ಕ್ರಿಯೆಗಳ ಹಿಂದಿರುವ ವಿಧಿ-ನಿಷೇಧಗಳ ರೂಪದಲ್ಲಿ ವ್ಯಕ್ತವಾಗಿರುತ್ತದೆ. ಈ ಎರಡೂ ಬಗೆಯ ಯಾಜಮಾನ್ಯಶಕ್ತಿಗಳ ಪ್ರತಿರೋಧದ ರೂಪದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಆಯಾಮಗಳು ಪ್ರಕಟವಾಗಿವೆ.

೭. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಭಾರತೀಯ ಸಮಾಜದ ವರ್ತಮಾನದ ಬದುಕಿನ ಬದಲಾವಣೆ ಹಾಗೂ ಭವಿಷ್ಯದ ಸುಂದರ ಬದುಕಿನ ನಿರ್ಮಾಣದ ಉದ್ದೇಶದಿಂದ ಆರಂಭವಾದ ಸಂವಿಧಾನಾತ್ಮಕ ಉಪಕ್ರಮಗಳ ವಿರುದ್ಧದ ಗುಪ್ತ ಕಾರ್ಯತಂತ್ರದ ಭಾಗವಾಗಿ ಬಲಪಂಥೀಯ ರಾಜಕಾರಣ ಹುಟ್ಟಿತು. ಇದು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ತೊಂಭತ್ತರ ದಶಕದ ನಂತರದಿಂದ,

ಅದರಲ್ಲೂ ಮುಖ್ಯವಾಗಿ ಜಾಗತೀಕರಣ ಹಾಗೂ ಕೋಮುವಾದದ ಬೆಳವಣಿಗೆಯೊಂದಿಗೆ ತೀವ್ರವಾಗಿ ಮುನ್ನೆಲೆಗೆ ಬರುತ್ತಿದೆ. ವರ್ಣ, ಜಾತಿ ಮತ್ತು ಲಿಂಗ ತಾರತಮ್ಯ ಪ್ರಧಾನ ಸನಾತನ ಭಾರತೀಯ ಸಂಸ್ಕೃತಿಯ ಪ್ರತಿಪಾದನೆ ಈ ಬಲಪಂಥೀಯ ರಾಜಕಾರಣದ ಹುನ್ನಾರ. ಇದಕ್ಕೆ ವಿರುದ್ಧವಾಗಿ ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಅಂಬೇಡ್ಕರ್‌ವಾದಿ, ಸ್ತ್ರೀವಾದಿ ಮತ್ತು ಕುವೆಂಪು ಸಾಹಿತ್ಯ ಚಿಂತನೆಗಳ ಪ್ರಭಾವದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಪ್ರಗತಿಪರ ರಾಜಕಾರಣದ ವಿವಿಧ ಪರ್ಯಾಯ ಮೀಮಾಂಸೆಗಳು ರೂಪುಗೊಂಡಿವೆ. ಸಮಸಮಾಜ, ಸರ್ವೋದಯ ಮತ್ತು ಸಮಬಾಳು ಈ ಮೀಮಾಂಸೆ ಪ್ರತಿಪಾದಿಸುತ್ತಿರುವ ಆದರ್ಶ ಮತ್ತು ತತ್ವಗಳು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಬಲಪಂಥೀಯ ಸಾಂಸ್ಕೃತಿಕ ಗುಪ್ತ ರಾಜಕಾರಣದ ಹುನ್ನಾರಗಳ ವಿರುದ್ಧ, ಪ್ರಗತಿಪರ ಸಾಂಸ್ಕೃತಿಕ ರಾಜಕಾರಣ ರೂಪಿಸುತ್ತಿರುವ ಅರ್ಥಪೂರ್ಣ ಸಾಂಸ್ಕೃತಿಕ ರಾಜಕಾರಣದ ಒಂದು ಪ್ರಭಾವಶಾಲಿ ರೂಪವಾಗಿ ವಿಕಾಸವಾಗಿದೆ.

೨೦. ಸಮಕಾಲೀನ ಸಂದರ್ಭದಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಜಾಗತಿಕ ಸ್ವರೂಪದ ಕೋಮುವಾದ, ಮತೀಯವಾದ, ಮೂಲಭೂತವಾದ ಮತ್ತು ಹಿಂಸಾವಾದಗಳಿಗೂ; ಹಾಗೆಯೇ, ಜಾಗತಿಕವಾಗಿ ವ್ಯಾಪಿಸುತ್ತಿರುವ ಆಧುನಿಕೋತ್ತರ ಚಿಂತನೆಯ ಪ್ರಸ್ಥಾನದ ಪರಿಕಲ್ಪನೆಗಳಿಗೂ ಸೈದ್ಧಾಂತಿಕವಾದ ಹಾಗೂ ತಾತ್ವಿಕವಾದ ನೇರ ಸಂಬಂಧವಿದೆ. ಇದನ್ನು, ಇಂದಿನ ಕರ್ನಾಟಕದ ಸಂದರ್ಭದಲ್ಲಿ ಮುನ್ನೆಲೆಗೆ ಬರುತ್ತಿರುವ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ಮೂಲಕ ಗುರುತಿಸಬಹುದು. ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹೆಸರಿನಲ್ಲಿ ತೀವ್ರಗೊಳ್ಳುತ್ತಿರುವ ಪ್ರಗತಿ ವಿರೋಧಿ, ಜೀವ ವಿರೋಧಿ ಮತ್ತು ಮಾನವತಾ ವಿರೋಧಿ ಚಿಂತನೆಗಳ ಹಿಂದಿನ ಬಹುಮುಖ್ಯ ಪ್ರೇರಣೆಯಾಗಿದೆ. ಜಾತ್ಯತೀತತೆ, ಪ್ರಜಾಪ್ರಭುತ್ವ, ವಿಜ್ಞಾನ, ತಂತ್ರಜ್ಞಾನ ಮತ್ತು ಧರ್ಮನಿರಪೇಕ್ಷತೆಯಂಥ ಆಧುನಿಕ ಪ್ರಜ್ಞೆಯ ಚಿಂತನೆಗಳ ಎಲ್ಲ ಆಕೃತಿಗಳನ್ನು ಸಾರಾಸಗಟಾಗಿ ನಿರಾಕರಿಸಿ, ಕೇವಲ ಆಧುನಿಕಪೂರ್ವ ಧಾರ್ಮಿಕ ಹಾಗೂ ಮತೀಯ ಸಾಮರಸ್ಯವೊಂದನ್ನೇ ಏಕಮಾತ್ರ ಪರ್ಯಾಯವಾಗಿ ಪ್ರತಿಪಾದಿಸುವ ಈ ಪ್ರಸ್ಥಾನದ ಚಿಂತನೆಗಳು ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರೂಪದಲ್ಲಿ ತೀವ್ರವಾಗುತ್ತಿವೆ.

೨೫. ಇದೇ ಸಂದರ್ಭದಲ್ಲಿ, ಪಾಶ್ಚಾತ್ಯ ಓರಿಯಂಟಲಿಸಂ ಪ್ರಸ್ಥಾನದ ಹುನ್ನಾರಗಳನ್ನು ಕನ್ನಡ ಸಾಂಸ್ಕೃತಿಕ ವಿಮರ್ಶೆ ಅರ್ಥೈಸಿಕೊಂಡಿರುವ ಚಾರಿತ್ರಿಕ ಪಾಠದಿಂದ, ಈ ಆಧುನಿಕೋತ್ತರ ಚಿಂತನೆಯ ಹುನ್ನಾರಗಳ ಬಗ್ಗೆ ವಿಮರ್ಶಾತ್ಮಕ ಸ್ವೀಕಾರದ ಪ್ರಜ್ಞೆ ಕೂಡಾ ಮೂಡಿದೆ. ಆಧುನಿಕೋತ್ತರ ಚಿಂತನೆಯ ತೀವ್ರ ಕೋಪ ಮತ್ತು ತಿರಸ್ಕಾರಕ್ಕೆ ಕಾರಣವಾದ ಸಂಗತಿಗಳು ಇಪ್ಪತ್ತನೆಯ ಶತಮಾನದಲ್ಲಿ ತೃತೀಯ ಜಗತ್ತಿನ ಸಮಾಜಗಳ ಬಹು ದೊಡ್ಡ ಬೆಳಕಿನ ಮೂಲಗಳಾಗಿ,

ದಮನಿತರ ವಿಮೋಚನೆಯ ಪ್ರಬಲ ಸಾಧನಗಳಾಗಿ ಹಾಗೂ ಶೋಷಿತರ ಬದುಕಿನ ಸದೃಢತೆಯ ಹಾದಿಗಳಾಗಿ ಅರ್ಥವಂತಿಕೆರುವುದನ್ನು ಪಡೆದಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಗುರುತಿಸಲಾಗಿದೆ.

ಕ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ವಿಚಾರಧಾರೆಯು ಒಂದು ಮಹತ್ವದ ಚಿಂತನೆಯಾಗಿ, ಆಲೋಚನೆಯಾಗಿ ಮತ್ತು ದೃಷ್ಟಿಕೋನವಾಗಿ ಹೊಸಹುಟ್ಟು ಪಡೆದುಕೊಳ್ಳಲು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ಮಾದರಿಗಳು ಮುಖ್ಯವಾದ ಕಾರಣಗಳಾಗಿವೆ. ಇದು ವಿಮರ್ಶೆಯ ಮಾದರಿಗಳು ಸೈದ್ಧಾಂತಿಕ ಪ್ರೇರಣೆಗಳನ್ನು ಪರಿಷ್ಕರಿಸುವ ಹಾಗೂ ಬೆಳೆಸುವ ವಿಧಾನಗಳೂ ಆಗಿರುತ್ತವೆ ಎನ್ನುವುದಕ್ಕೆ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕೊಟ್ಟಿರುವ ಸಮರ್ಥವಾದ ಆಧಾರವೂ ಸಹ ಆಗಿದೆ.

ಖ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವು ಹಲವು ಗಂಭೀರವಾದ ಸಮಸ್ಯೆಗಳು ಮತ್ತು ತೊಡಕುಗಳಿಂದ ಕೂಡಿರುವ ಅವಸ್ಥೆಯಾಗಿದೆ. ಇದಕ್ಕೆ ಅನೇಕ ಸಂಕೀರ್ಣವಾದ ಕಾರಣಗಳಿವೆ. ಇವು ಕೇವಲ ಸಾಹಿತ್ಯಕವಾದವುಗಳು ಮಾತ್ರವೇ ಆಗಿರದೆ, ಸಾಹಿತ್ಯೇತರವಾದವುಗಳೂ ಆಗಿವೆ. ಹೀಗಾಗಿಯೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳು ಏಕಕಾಲಕ್ಕೆ ಸಾಹಿತ್ಯಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಭಾಷಿಕ ಆಯಾಮಗಳಿಂದ ಕೂಡಿರುವ ವಿಶಿಷ್ಟ ಸ್ವರೂಪದವುಗಳಾಗಿವೆ. ಆದ್ದರಿಂದಲೇ, ಇವು ಅತ್ಯಂತ ದ್ವಂದ್ವಾತ್ಮಕವೂ ಹಾಗೂ ಸಮಸ್ಯಾತ್ಮಕವೂ ಆದವುಗಳಾಗಿವೆ.

ಗ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಮಕಾಲೀನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಿರುವುದು ಎರಡು ಕಾರಣಗಳಿಂದ ಅತ್ಯಂತ ಮುಖ್ಯವಾದ ವಿಚಾರವಾಗಿದೆ. ಇದರಿಂದ ಕನ್ನಡ ಭಾಷಿಕ ಪರಿಸರದ ಸಾಹಿತ್ಯಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಗ್ರಹಿಕೆ ಹಾಗೂ ಸಂವೇದನೆಯ ಅರ್ಥಪೂರ್ಣವಾದ ಚರಿತ್ರೆಯನ್ನು ಮುಂದಿನ ದಿನಗಳಿಗೆ ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ ಎನ್ನುವುದು ಇಂಥ ಒಂದು ಮುಖ್ಯವಾದ ವಿಚಾರ. ಹಾಗೆಯೇ, ಇಪ್ಪತ್ತೊಂದನೆಯ ಶತಮಾನದ ಆರಂಭಿಕ ಘಟ್ಟದ ಇಂದಿನ ಆಧುನಿಕೋತ್ತರ ಯುಗದಲ್ಲಿ ಎದುರಾಗುತ್ತಿರುವ ಗಂಭೀರವಾದ ಸವಾಲುಗಳು ಹಾಗೂ ಆತಂಕಗಳನ್ನು ಎದುರಿಸಲು ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ಸಮರ್ಥವಾದ ಮಾಧ್ಯಮವಾಗಿ ರೂಪಿಸಲು ಸಾಧ್ಯವಾಗುತ್ತದೆ ಎನ್ನುವುದು ಇಂಥ ಇನ್ನೊಂದು ಮುಖ್ಯವಾದ ವಿಚಾರ. ಈ ವಿದ್ಯಮಾನವನ್ನು 'ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ' ಎಂದು ವಿವರಿಸಿಕೊಂಡ, ಕನ್ನಡದ ಶ್ರೇಷ್ಠ ಸಾಂಸ್ಕೃತಿಕ ವಿಮರ್ಶಕರ ರೀತಿಯಲ್ಲಿಯೇ, ಈ ಸಮಸ್ಯೆಗಳನ್ನು 'ಸಮಸ್ಯೀಕರಿಸಿ'ಕೊಳ್ಳುವ ಮೂಲಕ, ಇಂದಿನ ಹೊಸ ತಲೆಮಾರಿನ ವಿಮರ್ಶಕರೂ ಸಹ ಇವುಗಳನ್ನು

ಮೀರುವ ತಮ್ಮದೇ ಆದ ಅರ್ಥಪೂರ್ಣ ದಾರಿಗಳನ್ನು ಕಂಡುಕೊಳ್ಳುತ್ತಿದ್ದಾರೆ ಎನ್ನುವುದು ಬಹುಮುಖ್ಯವಾದ ವಿಚಾರವಾಗಿದೆ.

೧೦.೩ ಅಧ್ಯಯನದ ತೊಡಕುಗಳು ಮತ್ತು ಅವುಗಳನ್ನು ಬಿಡಿಸಿಕೊಂಡ ಬಗೆ

ಈ ಅಧ್ಯಯನದ ಸಂದರ್ಭದಲ್ಲಿ ಹಲವು ರೀತಿಯ ತೊಡಕುಗಳು ಎದುರಾದವು. ಅವುಗಳನ್ನು ಬಿಡಿಸಿಕೊಳ್ಳುವ ಮೂಲಕ ಅಧ್ಯಯನಕ್ಕೆ ಸೂಕ್ತವಾದ ಚೌಕಟ್ಟನ್ನು ಕಟ್ಟಿಕೊಳ್ಳಲಾಯಿತು. ಅಂಥ ಪ್ರಮುಖ ತೊಡಕುಗಳು ಮತ್ತು ಅವುಗಳನ್ನು ನಿವಾರಿಸಿಕೊಂಡ ಕ್ರಮ ಈ ಮುಂದಿನಂತಿದೆ:

ಅ. ಅಧ್ಯಯನದ ಆರಂಭದಲ್ಲೇ ಕನ್ನಡ ಸಾಂಸ್ಕೃತಿಕ ವಿಮರ್ಶೆ ಎಂದರೆ ಯಾವುದು, ನಿರ್ದಿಷ್ಟವಾಗಿ ಇದು ಕನ್ನಡ ಸಾಂಸ್ಕೃತಿಕ ವಿಮರ್ಶೆ ಎನ್ನುವುದಾದರೆ; ಉಳಿದ್ದದ್ದೆಲ್ಲಾ ಕನ್ನಡ ಅಸಾಂಸ್ಕೃತಿಕ ವಿಮರ್ಶೆಯೇ ಎನ್ನುವ ಗಂಭೀರ ತೊಡಕು ಎದುರಾಯಿತು. ಇದನ್ನು ಸೂಕ್ತ ರೀತಿಯಲ್ಲಿ ಬಿಡಿಸಿಕೊಳ್ಳಲಾಯಿತು. 'ಕನ್ನಡ ಸಾಂಸ್ಕೃತಿಕ ವಿಮರ್ಶೆ ಎಂದರೇನು' ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುವ ಮತ್ತು ಅದಕ್ಕೆ ಸಮರ್ಪಕವಾದ ಉತ್ತರವನ್ನು ಕಂಡುಕೊಳ್ಳುವ ವಿಧಾನವನ್ನು ಅನುಸರಿಸುವ ಮೂಲಕ ಈ ತೊಡಕನ್ನು ಅರ್ಥಪೂರ್ಣವಾಗಿ ಬಿಡಿಸಿ ಕೊಳ್ಳಲಾಯಿತು.ಇದಕ್ಕಾಗಿ ಅಧ್ಯಯನದ ಸಂದರ್ಭದಲ್ಲಿ 'ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಚಿಂತನೆ' ಎನ್ನುವ ಒಂದು ಪ್ರತ್ಯೇಕವಾದ ಅಧ್ಯಯನವನ್ನು ರೂಪಿಸಿಕೊಳ್ಳಲಾಯಿತು. ಈ ಅಧ್ಯಾಯದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತು ಒಂದು ನಿರ್ದಿಷ್ಟ ಕಾರ್ಯಾನುಕೂಲ ವ್ಯಾಖ್ಯೆ (WorkingDefnition)ಯನ್ನು ರೂಪಿಸಿಕೊಳ್ಳಲಾಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಪ್ರಮುಖ ಚಹರೆಗಳು, ಅದರ ವಿಶ್ಲೇಷಣಾ ವಿಧಾನಗಳು ಹಾಗೂ ಅದರ ಕೆಲವು ಮಾದರಿಗಳನ್ನು ಗುರುತಿಸಲಾಯಿತು.

ಈ ಎಲ್ಲ ನೆಲೆಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಹೇಗೆ ಕನ್ನಡದ ಪ್ರಧಾನಧಾರೆ ವಿಮರ್ಶೆ ಮತ್ತು ವಿವಿಧ ಪಂಥೀಯ ಅಥವಾ ಸೈದ್ಧಾಂತಿಕ ವಿಮರ್ಶಾ ಪ್ರಕಾರಗಳಿಗಿಂತ ತಾತ್ವಿಕವಾಗಿ ಭಿನ್ನವಾಗಿದೆ ಎಂದು ವಿವರಿಸಿಕೊಳ್ಳುವ ಮೂಲಕ ಈ ತೊಡಕನ್ನು ನಿವಾರಿಸಿಕೊಳ್ಳಲಾಯಿತು. ಹೀಗಾಗಿ, ನಿರ್ದಿಷ್ಟವಾಗಿ 'ಇದು' ಕನ್ನಡ ಸಾಂಸ್ಕೃತಿಕ ವಿಮರ್ಶೆ ಎಂದು ಹೇಳುವ ಸಂದರ್ಭದಲ್ಲಿ, ಇದರ ಹೊರತಾದ ಉಳಿದ ಕನ್ನಡ ವಿಮರ್ಶೆ 'ಅಸಾಂಸ್ಕೃತಿಕ ವಿಮರ್ಶೆ' ಅಲ್ಲ ಎನ್ನುವುದನ್ನು ಸಹ ಖಚಿತವಾಗಿ ಹೇಳಲು ಸಾಧ್ಯವಾಯಿತು.

ಆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ಕುರಿತು ಅಧ್ಯಯನ ಮಾಡುವುದು ಈ ಸಂಶೋಧನೆಯ ಪ್ರಧಾನವಾದ ಉದ್ದೇಶ. ಆದ್ದರಿಂದ, ಈ ಉದ್ದೇಶಕ್ಕೆ ಪೂರಕ ಭಿತ್ತಿಯಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚರಿತ್ರೆ ಕುರಿತು ಒಂದು ಪ್ರತ್ಯೇಕ ಅಧ್ಯಾಯ ರಚಿಸಬೇಕೇ ಮತ್ತು ಹಾಗೆ ರಚಿಸುವುದಾದರೆ, ಅದರ ಸ್ವರೂಪ ಹೇಗಿರಬೇಕು ಎನ್ನುವ ತೊಡಕು ಎದುರಾಯಿತು.

ಅಧ್ಯಯನದ ಸಂದರ್ಭದಲ್ಲಿ ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕಂಡುಕೊಳ್ಳಲಾಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಯಂತೆ ನಿರ್ದಿಷ್ಟವಾಗಿ ಒಬ್ಬ ವಿಮರ್ಶಕ ಮತ್ತು ಒಂದು ಪ್ರಸ್ಥಾನದ ರೀತಿಯಲ್ಲಿ ಪ್ರತಿಪಾದನೆಯಾಗಿರುವ ಸ್ವರೂಪದಲ್ಲಿ ಇಲ್ಲ. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಐತಿಹಾಸಿಕವಾಗಿ ಒಬ್ಬ ವಿಮರ್ಶಕ, ಒಂದು ಕೃತಿ ಅಥವಾ ಒಂದು ಪ್ರಸ್ಥಾನದಮೂಲಕ ಆರಂಭವಾಗಿಲ್ಲ. ಹಾಗೆಯೇ, ಯಾವುದೇ ಘೋಷಿತ ಪ್ರಣಾಲಿಯ ಆಶಯ ಮತ್ತು ಧೋರಣೆಗಳಿಗನುಸಾರವಾಗಿ ವಿಕಾಸವಾಗಿಲ್ಲ. ಆದ್ದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚರಿತ್ರೆಯ ಅಧ್ಯಾಯ ರೂಪಿಸುವುದು ಕಷ್ಟಕರ ಮತ್ತು ಹೆಚ್ಚು ಉಪಯುಕ್ತ ಕ್ರಮವಲ್ಲ ಎಂದು ಭಾವಿಸಿಕೊಳ್ಳಲಾಯಿತು. ಹೀಗಾಗಿ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಅದರ ಆಯಾಮಗಳನ್ನು ಕುರಿತ ಅಧ್ಯಯನಕ್ಕಾಗಿ ರೂಪಿಸಿಕೊಂಡಿರುವ ಅಧ್ಯಾಯಗಳ ಆಕರಗಳನ್ನು ಆಯ್ಕೆ ಮಾಡಿಕೊಳ್ಳುವ ಕ್ರಮದಲ್ಲೇ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಸ್ವರೂಪ ಕೂಡಾ ಪ್ರಕಟಗೊಳ್ಳುವಂತೆ ಈ ತೊಡಕನ್ನು ಪರಿಹರಿಸಿಕೊಳ್ಳಲಾಯಿತು.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಅದರ ಆಯಾಮಗಳ ವಿನ್ಯಾಸದ ವಿಶ್ಲೇಷಣಾತ್ಮಕ ಹಾಗೂ ವ್ಯಾಖ್ಯಾನಾತ್ಮಕ ಅಧ್ಯಯನ ಈ ಸಂಶೋಧನೆಯ ಇನ್ನೊಂದು ಮಹತ್ವದ ಉದ್ದೇಶವಾಗಿದೆ. ಹೀಗಾಗಿ, ಈ ಉದ್ದೇಶವನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ನಿರ್ದಿಷ್ಟ ಕಾಲವ್ಯಾಪ್ತಿಯ ಚೌಕಟ್ಟಿನೊಳಗೇ ಸಾಧಿಸಬೇಕೇ ಅಥವಾ ಸಾಪೇಕ್ಷ ಕಾಲವ್ಯಾಪ್ತಿ ವಿಧಾನವನ್ನು ಅನುಸರಿಸಬೇಕೇ ಎನ್ನುವ ಸಮಸ್ಯೆ ಎದುರಾಯಿತು. ನವ್ಯೋತ್ತರ ಕನ್ನಡ ಸಾಹಿತ್ಯ ವಿಮರ್ಶೆಯ ಆರಂಭದಿಂದ ಸಮಕಾಲೀನ ಆಧುನಿಕೋತ್ತರ ಕನ್ನಡ ಸಾಹಿತ್ಯ ವಿಮರ್ಶೆಯ ಘಟ್ಟದವರೆಗಿನ ಸುಮಾರು ಐವತ್ತು ವರ್ಷಗಳಷ್ಟು ಅವಧಿಯನ್ನು ಕಾಲವ್ಯಾಪ್ತಿಯಾಗಿ ಆಯ್ಕೆಮಾಡಿಕೊಳ್ಳಲಾಯಿತು. ತಾಂತ್ರಿಕವಾಗಿ ಈ ವ್ಯಾಪ್ತಿಯ ಆರಂಭ ಮತ್ತು ಅಂತ್ಯದ ಗಡಿರೇಖೆಗಳನ್ನು ಗುರುತಿಸಿಕೊಳ್ಳಲಾಯಿತು. ಈ ನಿರ್ದಿಷ್ಟ ಕಾಲವ್ಯಾಪ್ತಿಯೊಳಗೆ ಅಧ್ಯಯನದ ವಿಷಯ ಮತ್ತು ಅದರ ಸ್ವರೂಪ ಪ್ರಧಾನವಾಗಿ ರೂಪುಗೊಂಡಿದೆ ಎನ್ನುವುದು ಈ ಕ್ರಮದ ಹಿನ್ನೆಲೆಯಲ್ಲಿರುವ ಮುಖ್ಯವಾದ ಕಾರಣ.

ಇಷ್ಟಾದರೂ, ಅನೇಕ ಸಂದರ್ಭದಲ್ಲಿ ಅಧ್ಯಯನದ ಉದ್ದೇಶ ಸಾಧನೆಗೆ ಅಗತ್ಯ ಮತ್ತು ಅರ್ಥಪೂರ್ಣ ಎನ್ನುವ ಕಡೆಗಳಲ್ಲಿ ಈ ಕಾಲವ್ಯಾಪ್ತಿತ್ವ ಚೌಕಟ್ಟನ್ನು 'ವಿಧಿನಿಯಮ' ಎಂದೇನೂ ಅನುಸರಿಸಿಲ್ಲ. ಅಧ್ಯಯನದ ಉದ್ದೇಶ ಸಾಧನೆಯ ದೃಷ್ಟಿಯಿಂದ ಎಲ್ಲೆಲ್ಲಿ ನಿಜವಾಗಿಯೂ ಅರ್ಥಪೂರ್ಣ ಎಂದು ಕಂಡುಬಂದಿದೆಯೋ, ಅಲ್ಲೆಲ್ಲಾ ಈ ಸ್ವಯಂವಿಧಿತ ಷರತ್ತನ್ನು ಸಡಿಲಿಸಿಕೊಳ್ಳುವ ಸಾಪೇಕ್ಷ ವಿಧಾನವನ್ನು ಅನುಸರಿಸಲಾಗಿದೆ. ಆದರೆ, ಈ ಸಡಿಲಿಕೆಯು

ಅಧ್ಯಯನದ ಆರಂಭಿಕ ಮತ್ತು ಅಂತ್ಯದ ಗಡಿರೇಖೆಗಳಿಂದ ಬಹಳ ಹಿಂದಕ್ಕೆ ಅಥವಾ ಬಹಳ ಮುಂದಕ್ಕೆ ಹೋಗಿ, ಆಯ್ಕೆ ಮಾಡಿಕೊಂಡಿರುವ ಕಾಲವ್ಯಾಪ್ತಿತ್ವದ ಚೌಕಟ್ಟನ್ನು ಭಂಗಪಡಿಸದಂತೆ ಎಚ್ಚರಿಕೆ ವಹಿಸಲಾಗಿದೆ. ಒಂದೊಮ್ಮೆ ಹಾಗೆ ದೂರಾನ್ವಯಮಾಡಬೇಕಾದ ಸಂದರ್ಭದಲ್ಲಿ ಅಂಥ ಆಕರ ಅಥವಾ ಸಂಗತಿಗಳನ್ನು ಅಧ್ಯಯನದ ಪ್ರಧಾನ ಆಕರಗಳ ಚರ್ಚೆಗೆ ಪೂರಕ ಆಕರ ಸಾಮಗ್ರಿಯಾಗಿ ಬಳಸಿಕೊಳ್ಳುವ ತಂತ್ರ ಅನುಸರಿಸಲಾಗಿದೆ. ತಾತ್ವಿಕ ವ್ಯಾಖ್ಯಾನ ಮಾಡುವಾಗ ಇಂಥ ಪೂರಕ ಆಕರಗಳ ಮಾಹಿತಿ ಅಥವಾ ವಿವೇಕವನ್ನು ಹಿನ್ನೆಲೆಯ ಭಿತ್ತಿಯಲ್ಲಿ ಇರುವಂತೆ ಯೋಜಿಸಿಕೊಳ್ಳಲಾಗಿದೆ. ಹೀಗೆ ಈ ತೊಡಕನ್ನು ಬಗೆಹರಿಸಿಕೊಳ್ಳಲಾಯಿತು.

ಈ. ಈ ಅಧ್ಯಯನದ ಮುಖ್ಯ ತಿರುಳಿನ ಭಾಗವಾದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪವನ್ನು ರೂಪಿಸುವಾಗ ನಿರ್ದಿಷ್ಟವಾಗಿ ಯಾವ ವಿಧಾನ ಅನುಸರಿಸಬೇಕು ಎನ್ನುವ ಮುಖ್ಯವಾದ ತೊಡಕು ಎದುರಾಯಿತು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಯ್ಕೆಯ ಕಾಲವ್ಯಾಪ್ತಿಯೊಳಗೆ ಬರುವ ಪ್ರಮುಖ ವಿಮರ್ಶಾ ಕೃತಿಗಳು, ಕನ್ನಡದ ಶ್ರೇಷ್ಠ ಸಂಸ್ಕೃತಿ ಚಿಂತಕರು ಅಥವಾ ಮಹತ್ವದ ಸಾಂಸ್ಕೃತಿಕ ವಿಮರ್ಶಕರುಗಳನ್ನು ಅಧ್ಯಯನದ ತಿರುಳಿಗೆ ಸಂಬಂಧಿಸಿದ ಅಧ್ಯಾಯಗಳಾಗಿ ಪರಿಗಣಿಸಬೇಕೇ ಎನ್ನುವ ತೊಡಕು ಎದುರಾಯಿತು. ಆದರೆ, ಈ ಅವಧಿಯೊಳಗೆ ಅನೇಕ ಮಹತ್ವದ ವಿಮರ್ಶಾ ಕೃತಿಗಳು, ಹಲವು ಶ್ರೇಷ್ಠ ಸಂಸ್ಕೃತಿ ಚಿಂತಕರು ಮತ್ತು ಸಾಂಸ್ಕೃತಿಕ ವಿಮರ್ಶಕರು ಇರುವುದರಿಂದ ಕೃತಿ ಕೇಂದ್ರಿತ ಅಥವಾ ವಿಮರ್ಶಕ ಕೇಂದ್ರಿತ ಅಧ್ಯಾಯ ರೂಪೀಕರಣ ವಿಧಾನವನ್ನು ಬಿಟ್ಟುಕೊಡಲಾಯಿತು. ಇದಕ್ಕೆ ಬದಲಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಪ್ರಕಟವಾಗಿರುವ ಮುಖ್ಯ ಪ್ರವೃತ್ತಿ ಅಥವಾ ಒಲವುಗಳನ್ನು ಗುರುತಿಸಿಕೊಳ್ಳುವುದು ಮತ್ತು ಇವು ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಆಯಾಮಗಳಾಗಿ ವಿಕಾಸಗೊಂಡಿವೆಯೇ ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳುವುದು, ಆ ಮೂಲಕ ಅಧ್ಯಯನದ ತಿರುಳಿಗೆಸಂಬಂಧಿಸಿದ ಮುಖ್ಯ ಅಧ್ಯಾಯಗಳನ್ನು ರೂಪಿಸಿಕೊಳ್ಳುವ ವಿಧಾನವನ್ನು ಶೋಧಿಸಿಕೊಳ್ಳಲಾಯಿತು.

ಈ ವಿಧಾನದ ಮೂಲಕ ಈ ಅಧ್ಯಯನದ ಕಾಲವ್ಯಾಪ್ತಿಯೊಳಗೆ ಬರುವ ಅತ್ಯಂತ ಸೂಕ್ತವಾದ ಮತ್ತು ಅಧ್ಯಾಯಕ್ಕೆ ಸಂಗತವಾದ ಮಹತ್ವದ ವಿಮರ್ಶಾ ಲೇಖನಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಹೀಗೆ ಮಾಡುವಾಗ, ಅಧ್ಯಯನದ ಚೌಕಟ್ಟಿನ ಹೊರಗೆ ನಿಂತು ನೋಡಿದಾಗ ಕನ್ನಡದ ಶ್ರೇಷ್ಠ ಸಾಂಸ್ಕೃತಿಕ ವಿಮರ್ಶಕರೆಂದು ಸಾಮಾನ್ಯವಾಗಿ ಹೇಳಬಹುದಾದ ಅನೇಕ ವಿಮರ್ಶಕರನ್ನು ಮತ್ತು ಅಂಥ ಹಲವು ಲೇಖನಗಳನ್ನು ಈ ಅಧ್ಯಯನದಲ್ಲಿ ಒಳಗು ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ, ಅಧ್ಯಯನಕ್ಕಾಗಿ ರೂಪಿಸಿಕೊಂಡಿರುವ

ಅಧ್ಯಾಯಗಳು ಯಾವ ಆಕರ ಸಾಮಗ್ರಿಯನ್ನು ಅಪೇಕ್ಷಿಸುತ್ತವೆಯೋ ಅವುಗಳಿಗೆ ಆದ್ಯತೆ ಕೊಟ್ಟಿರುವುದೇ ಆಗಿದೆ. ಇದರಿಂದ ಅಧ್ಯಯನವು ಮಾಹಿತಿ ಪ್ರಧಾನ ಮತ್ತು ವಿವರಣ ಪ್ರಧಾನವಾದ ಆಕರ ಗ್ರಂಥವಾಗದಂತೆ ನೋಡಿಕೊಳ್ಳಲಾಗಿದೆ. 'ಸರ್ವರ ಸಮ್ಮತಿ ಸಂತೆಯ ಹಾದಿ' ಎನ್ನುವ ವಿವೇಕದ ಮೂಲಕ ಅಧ್ಯಯನ ತಾನೇ ಅಪೇಕ್ಷಿಸುವ ಆಕರಗಳಿಗೆ ಇಲ್ಲಿ ಆದ್ಯತೆ ಕೊಡಲಾಗಿದೆ. ಹೀಗೆ ಈ ತೊಡಕನ್ನು ಬಿಡಿಸಿಕೊಳ್ಳಲಾಯಿತು.

ಉ. ಈ ಅಧ್ಯಯನದ ಸಂದರ್ಭದಲ್ಲಿ ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳನ್ನು ಹೇಗೆ ತೌಲನಿಕವಾಗಿ ವಿವೇಚಿಸಬೇಕು ಎನ್ನುವ ತೊಡಕು ಎದುರಾಯಿತು. ಈ ವಿವೇಚನೆಯನ್ನು ಅಧ್ಯಯನದ 'ಪರಿಕಲ್ಪನಾತ್ಮಕ ತಾತ್ವಿಕ ಚರ್ಚೆ'ಯ ಒಂದು ಭಾಗವಾಗಿ ಮಾಡಬೇಕೇ ಅಥವಾ ಅಧ್ಯಯನದ ಮುಖ್ಯ ತಿರುಳಿನ ಭಾಗವಾಗಿರುವ ಅಧ್ಯಾಯಗಳ ಸಂದರ್ಭದಲ್ಲಿ 'ಆಂತರಿಕ ತೌಲನಿಕ ವಿಧಾನ'ವಾಗಿ ನಿರ್ವಹಿಸಬೇಕೇ ಎನ್ನುವ ಸಮಸ್ಯೆ ಎದುರಾದವು.

ಆದರೆ ಈ ಯಾವುದೇ ವಿಧಾನವನ್ನು ಅನುಸರಿಸುವ ಬದಲಾಗಿ, ಅಧ್ಯಯನದ ಕೊನೆಯ ಹಂತದಲ್ಲಿ ಒಂದು ಸ್ವತಂತ್ರ ಅಧ್ಯಾಯ ರೂಪಿಸುವುದು ಹೆಚ್ಚು ಸೂಕ್ತವೆಂದು ಭಾವಿಸಿಕೊಳ್ಳಲಾಯಿತು. ಏಕೆಂದರೆ, ಅಧ್ಯಯನದ ಆರಂಭದಲ್ಲೇ ಇಂಥ ಅಧ್ಯಾಯ ರಚಿಸುವುದರಿಂದ, ತಾಂತ್ರಿಕವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ತಿರುಳಿನ ಭಾಗವನ್ನೇ ಇನ್ನೂ ರೂಪಿಸಿಲ್ಲದಿರುವಾಗ ಈ ಪ್ರಯತ್ನ ಅಸಂಗತವಾಗುತ್ತದೆ. ಹಾಗೆಯೇ, ಪ್ರತಿಯೊಂದು ಅಧ್ಯಾಯದಲ್ಲೂ ಈ ತೌಲನಿಕ ವಿಧಾನವನ್ನು ಅಡಿಗಡಿಗೂ ಅನುಸರಿಸಿದರೆ ಒಟ್ಟಾರೆ ಈ ಅಧ್ಯಯನವೇ 'ತೌಲನಿಕ ಅಧ್ಯಯನ'ವಾಗಿ ಮಾರ್ಪಡುವ ಸಾಧ್ಯತೆ ಹಾಗೂ ಅಪಾಯವಿದೆ. ಹೀಗಾಗಿ, ಅಧ್ಯಯನದ ಸಂದರ್ಭದಲ್ಲಿ ಅಗತ್ಯಕ್ಕನುಸಾರವಾಗಿ ಸಾಧ್ಯವಾದಷ್ಟು ಮಿತಪ್ರಮಾಣದ ಉಲ್ಲೇಖಗಳನ್ನಷ್ಟೇ ಮಾಡುವುದು ಹಾಗೂ ತಿರುಳಿನ ಭಾಗದ ನಂತರ ಒಂದು ಸಂಕ್ಷಿಪ್ತವಾದ ಸ್ವತಂತ್ರ ಅಧ್ಯಾಯವನ್ನು ಕಟ್ಟುವುದು ಎಂದು ಈ ತೊಡಕನ್ನು ನಿವಾರಿಸಿಕೊಳ್ಳಲಾಯಿತು.

ಊ. ಈ ಪ್ರೌಢಪ್ರಬಂಧದಲ್ಲಿ ಅನೇಕ ಸಂದರ್ಭಗಳಲ್ಲಿ ಮಾಹಿತಿ, ವಿವರಣೆ ಮತ್ತು ಚರ್ಚೆಗಳು ಪುನರಾವರ್ತನೆಯಾಗಿರುವುದನ್ನು ಗಮನಿಸಬಹುದು. ಪ್ರಧಾನವಾಗಿ ಈ ಅಧ್ಯಯನ ಕನ್ನಡ ವಿಮರ್ಶೆಯ ಒಂದು ಶತಮಾನದ ಪರಂಪರೆಯ ವಿಶಾಲಭಿತ್ತಿಯೊಳಗೆ ರೂಪುಗೊಂಡಿರುವ ವಿಶಿಷ್ಟವಾದ ಒಂದು ಹೊಸ ವಿಮರ್ಶಾ ಪ್ರಕಾರದ ತಾತ್ವಿಕ ಸ್ವರೂಪವನ್ನು ಕಟ್ಟುವ ಹೊಸ ಸ್ವರೂಪದ ಅಧ್ಯಯನ. ಬಹುಮುಖ್ಯವಾಗಿ 'ವಿಮರ್ಶೆಯ ವಿಮರ್ಶೆ' ಸ್ವರೂಪದ ಅಧ್ಯಯನ.

ಇದು ಪ್ರಧಾನವಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತ ವಿಶ್ಲೇಷಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಸ್ವರೂಪದ ಅಧ್ಯಯನವಾದರೂ, 'ಚಾರಿತ್ರಿಕ ಹಾಗೂ

ಸಾಂಸ್ಕೃತಿಕ ಅಧ್ಯಯನ'ದ ಆಯಾಮಗಳನ್ನೂ ಸಹ ಒಳಗೊಂಡಿದೆ. ಹಾಗೆಯೇ 'ತೌಲನಿಕ ಅಧ್ಯಯನ'ದ ಆಯಾಮವನ್ನು ಸಹ ಹೊಂದಿದೆ. ಏಕೆಂದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಆರಂಭದಲ್ಲಿ ಒಂದು ನೋಟಕ್ರಮವಾಗಿ, ದೃಷ್ಟಿಕೋನವಾಗಿ, ಗ್ರಹಿಕೆಯ ವಿಧಾನವಾಗಿ ಗೋಚರವಾಗಿದೆ. ಆನಂತರ, ಕನ್ನಡದ ಹಲವು ವಿಭಿನ್ನ ವಿಮರ್ಶಾಪ್ರಕಾರಗಳ ತಾತ್ವಿಕ ಸ್ವರೂಪದಲ್ಲಾಗಿರುವ ತೀವ್ರ ಸ್ಥಿತ್ಯಂತರದ ಮೂಲಕ ವ್ಯಕ್ತವಾಗಿದೆ. ಕೊನೆಯ ಘಟ್ಟದಲ್ಲಿ ಆ ವಿಮರ್ಶಾ ಪ್ರಕಾರಗಳು ವಿಶಿಷ್ಟವಾದ ಕನ್ನಡ ಸಾಂಸ್ಕೃತಿಕ ವಿಮರ್ಶಾ ಮಾದರಿಗಳಾಗಿ ವಿಕಾಸಗೊಂಡಿವೆ ಹಾಗೂ ಅದೇ ಕಾಲದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾನ್ಯ ಪ್ರಕಾರವೊಂದನ್ನು ಸಹ ಕಟ್ಟಿವೆ. ಇಂಥ ಸಂಕೀರ್ಣ ಆಯಾಮಗಳಿರುವ ಕಾರಣದಿಂದ ಇಂಥ ಪುನರಾವರ್ತನೆ ಇಲ್ಲಿ ಅನಿವಾರ್ಯವಾಗಿ ಉಂಟಾಗಿದೆ. ಆದರೆ ಪುನರಾವರ್ತನೆಯು ಅಧ್ಯಯನಕ್ಕೆ ಭಾದಕವಾಗದಂತೆ ನೋಡಿಕೊಳ್ಳಲಾಗಿದೆ.

ಈ ಅಧ್ಯಯನದ ಸಂದರ್ಭದಲ್ಲಿ ಎದುರಾದ ಇಂಥ ಕೆಲವು ತೊಡಕುಗಳ ಒಂದು ಸಂಕ್ಷಿಪ್ತ ನಿರೂಪಣೆ ಇದು. ಅಧ್ಯಯನದ ಸಂದರ್ಭದಲ್ಲಿ ಯಾವುದೇ ರೀತಿಯ ತೊಡಕುಗಳು ಎದುರಾಗಲಿಲ್ಲ ಎನ್ನುವುದು ಅಧ್ಯಯನದ ಪ್ರಾಮಾಣಿಕತೆಗೆ ಎರವಾದ ಸಂಗತಿ. ಅಧ್ಯಯನಕ್ಕೆ ಎದುರಾದ ತೊಡಕುಗಳನ್ನು 'ತೊಡಕುಗಳೆ'ಂದು ಗುರುತಿಸಿಕೊಳ್ಳುವುದು ಮತ್ತು ಅವುಗಳಿಗೆ ಸೂಕ್ತವಾದ' ಉತ್ತರ'ಗಳನ್ನು ಕಂಡುಕೊಳ್ಳುವುದರ ಮೂಲಕ ಅಧ್ಯಯನವನ್ನು ಅರ್ಥಪೂರ್ಣವಾಗಿ ಮಾಡಲು ಸಾಧ್ಯ ಎನ್ನುವ ನಂಬಿಕೆಯಿಂದ ಮೂಲಕ ಇಲ್ಲಿ 'ತೊಡಕು'ಗಳನ್ನು ಮತ್ತು ಅವುಗಳನ್ನು 'ಬಿಡಿಸಿಕೊಂಡ ಬಗೆ'ಯನ್ನು ಕುರಿತ ಈ ಘಟಕವನ್ನು ಕಟ್ಟಿಕೊಳ್ಳಲಾಗಿದೆ.

೧೦.೪ ಅಧ್ಯಯನದ ಹೊಸ ಸಾಧ್ಯತೆಗಳು

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಮತ್ತು ಅದರ ವಿವಿಧ ಆಯಾಮಗಳ ವಿನ್ಯಾಸವನ್ನು ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಣೆ ಹಾಗೂ ವ್ಯಾಖ್ಯಾನಾತ್ಮಕ ನೆಲೆಯಲ್ಲಿ ಚರ್ಚೆ ಮಾಡಲಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ ಕುರಿತು ಇದರಿಂದ ಒಂದು ಸ್ಪಷ್ಟ ಚಿತ್ರಣ ಸಾಧ್ಯವಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆ ಪಾಶ್ಚಾತ್ಯ ಯುರೋಅಮೇರಿಕನ್ ಸಾಂಸ್ಕೃತಿಕ ವಿಮರ್ಶಾ ರೂಪಗಳ ಪ್ರಭಾವ ಮತ್ತು ಪ್ರೇರಣೆಯ ಫಲವಾಗಿ ರೂಪುಗೊಂಡಿಲ್ಲ ಎನ್ನುವುದು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಹಾಗೆಯೇ 'ಕನ್ನಡ ಸಾಹಿತ್ಯ ವಿಮರ್ಶೆ' ಎನ್ನುವುದೇ 'ಸಾಂಸ್ಕೃತಿಕ ವಿಮರ್ಶೆ' ಯಾಗಿರುತ್ತದೆ ಎನ್ನುವ ಸಾಮಾನ್ಯ ಗ್ರಹಿಕೆಯ ಸರಳೀಕೃತ ಅಭಿಪ್ರಾಯಗಳನ್ನು ಪ್ರಶ್ನಿಸುವ ಮತ್ತು ನಿರಾಕರಿಸುವ ಮೂಲಕ ಕನ್ನಡ ಸಾಂಸ್ಕೃತಿಕ ವಿಮರ್ಶೆಯ 'ನಿಜವಾದ ಸ್ವರೂಪ'ವನ್ನು ಶೋಧಿಸಲಾಗಿದೆ. ಹೀಗಾಗಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಚಾರಿತ್ರಿಕ ಅಧ್ಯಯನ ಕೂಡಾ ಇದರಿಂದ ಸಾಧ್ಯವಾಗಿದೆ. ಹಾಗೆಯೇ, ಕನ್ನಡ

ಸಾಂಸ್ಕೃತಿಕ ವಿಮರ್ಶೆಯ ವಿಶಿಷ್ಟ ಚಹರೆಗಳು, ವಿವಿಧ ವಿಧಾನಗಳು ಮತ್ತು ಬೇರೆ ಬೇರೆ ಮಾದರಿಗಳನ್ನು ಕುರಿತು ಸಾಕಷ್ಟು ಪ್ರೌಢವಾದ ಚರ್ಚೆ ಮಾಡಲಾಗಿದೆ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪದ ಬಹುರೂಪಿ ಆಯಾಮಗಳು ಹಾಗೂ ಅವುಗಳ ವಿನ್ಯಾಸದ ಚಹರೆಗಳನ್ನು ಸಾಧ್ಯವಾದಷ್ಟು ಸಮಗ್ರತಾ ನೆಲೆಯಲ್ಲಿ ವಿವೇಚಿಸಲಾಗಿದೆ. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆ ಕುರಿತು ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿ ಚಿಂತನೆ ಸಂದರ್ಭದಲ್ಲಿ ಇದ್ದ ಅನೇಕ ಅಸ್ಪಷ್ಟ ವಿಚಾರಗಳು, ಗೊಂದಲಕಾರಿಯಾದ ಹೇಳಿಕೆಗಳು ಮತ್ತು ಅಪರಿಪೂರ್ಣವಾದ ಚಿಂತನೆಗಳು ಒಳಗೊಂಡಿದ್ದ ಪ್ರಮುಖ ಸಮಸ್ಯೆಗಳನ್ನು ಈ ಅಧ್ಯಯನವು ಬಹುತೇಕ ಹೊಗಲಾಡಿಸುವಷ್ಟು ಸಮರ್ಥವಾಗಿದೆ.

ಈ ಹಿನ್ನೆಲೆಯಲ್ಲಿ, ಪ್ರಸ್ತುತ ಅಧ್ಯಯನವು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಂಶೋಧನಾ ಕ್ಷೇತ್ರದ ಸಂದರ್ಭದ ಒಂದು ಮಹತ್ವದ ಸಂಶೋಧನೆಯಾಗಿದೆ ಎನ್ನುವುದು ಅಧ್ಯಯನಕಾರನ ನಂಬಿಕೆಯಾಗಿದೆ.

ಇದರೊಂದಿಗೆ, ಈ ಅಧ್ಯಯನವು ಹಲವು ಹೊಸ ಸ್ವರೂಪದ ಅಧ್ಯಯನಗಳಿಗೆ ಅತ್ಯಂತ ಸೂಕ್ತವಾದ ಅವಕಾಶಗಳನ್ನು ಹಾಗೂ ಸಾಧ್ಯತೆಗಳನ್ನು ಸಹ ಒಳಗೊಂಡಿದೆ ಎನ್ನುವ ಸಂಗತಿಯು ಈ ಅಧ್ಯಯನ ಪೂರ್ಣಗೊಳ್ಳುವ ವೇಳೆಗೆ ಕಂಡುಬಂದಿದೆ. ಅಂಥ ಪ್ರಮುಖ ಸಾಧ್ಯತೆಗಳನ್ನು ಈ ಮುಂದೆ ನಿರೂಪಿಸಲಾಗಿದೆ.

ಅ. ಈ ಅಧ್ಯಯನದಲ್ಲಿ ಕನ್ನಡ ಮತ್ತು ಪಾಶ್ಚಾತ್ಯ ಸಾಂಸ್ಕೃತಿಕ ವಿಮರ್ಶೆಗಳ ಚಾರಿತ್ರಿಕ ಹಾಗೂ ತಾತ್ವಿಕ ಸ್ವರೂಪ ಕುರಿತು ಸಂಕ್ಷಿಪ್ತ ಅವಲೋಕನ ಮಾಡಲಾಗಿದೆ. ಎರಡೂ ವಿಮರ್ಶಾ ಪ್ರಕಾರಗಳ ಮುಖ್ಯ ವ್ಯತ್ಯಾಸಗಳನ್ನು ಮತ್ತು ಭಿನ್ನತೆಗಳನ್ನು ಪರಸ್ಪರ ಸಾದೃಶ್ಯಗಳ ಹಾಗೂ ವೈದೃಶ್ಯಗಳ ನೆಲೆಯಲ್ಲಿ ವಿವೇಚಿಸಲಾಗಿದೆ. ಆದರೆ, ಈ ಪ್ರಯತ್ನವನ್ನು ಒಂದು ಪೂರ್ಣ ಪ್ರಮಾಣದ ಪ್ರೌಢಪ್ರಬಂಧದ ವಸ್ತುವಾಗಿ ತೆಗೆದುಕೊಂಡು ಗಂಭೀರವಾದ ಅಧ್ಯಯನ ಮಾಡಲು ಉತ್ತಮ ಅವಕಾಶವಿದೆ. ಹಾಗೆ ನೋಡಿದರೆ ಕನ್ನಡದಲ್ಲಿ ಅನೇಕ ವಿಧವಾದ ತೌಲನಿಕ ಅಧ್ಯಯನಗಳ ಪರಂಪರೆಯೇ ಇದೆ. ಪಾಶ್ಚಾತ್ಯ, ಭಾರತೀಯ ಮತ್ತು ಕನ್ನಡದ ಕೃತಿಗಳು, ಲೇಖಕರು ಹಾಗೂ ಸಾಹಿತ್ಯ ಪ್ರಕಾರಗಳನ್ನು ಕುರಿತು ಸಾಕಷ್ಟು ತೌಲನಿಕ ಅಧ್ಯಯನಗಳಾಗಿವೆ. ಆದರೆ ವಿಮರ್ಶೆಯ ಕ್ಷೇತ್ರದಲ್ಲಿ ಇಂಥ ಪ್ರಯತ್ನಗಳು ಬಹಳ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಅದರಲ್ಲೂ ಸಂಶೋಧನೆ ಎನ್ನುವುದು ಇದುವರೆಗೂ ನಡೆಯದಿರುವ ಮತ್ತು ಅಧ್ಯಯನದ ಮೂಲಕ ಹೊಸ ಸಂಗತಿಗಳನ್ನು ಬೆಳಕಿಗೆ ತರುವಂಥ ಕ್ರಿಯೆಯಾಗಿರುವ ಕಾರಣದಿಂದ ಕೂಡಾ ಈ ರೀತಿಯ ಅಧ್ಯಯನಕ್ಕೆ ಹೆಚ್ಚು ಸೂಕ್ತವಾದ ಅವಕಾಶ ಹಾಗೂ ಮಹತ್ವವಿದೆ.

ಆ. ಈ ತೌಲನಿಕ ಅಧ್ಯಯನವನ್ನು ಇನ್ನಷ್ಟು ನಿರ್ದಿಷ್ಟ ಮತ್ತು ಖಚಿತ ಕ್ರಮದಲ್ಲಿ ಸಹ ಮಾಡುವುದಕ್ಕೆ ಸಾಧ್ಯವಿದೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಸಂದರ್ಭದಲ್ಲಿ ರೇಮಂಡ್ ವಿಲಿಯಮ್ಸ್ ತನ್ನ ವಿಮರ್ಶಾ ವ್ಯವಸಾಯದ ಆರಂಭಿಕ ಘಟ್ಟದಲ್ಲಿ ಅಪ್ಪಟ ಮಾರ್ಕ್ಸ್‌ವಾದಿಯಾಗಿದ್ದವನು ಆನಂತರ

ಸಾಂಪ್ರದಾಯಕ ಮಾರ್ಕ್ಸ್‌ವಾದಕ್ಕೆ ಭಿನ್ನವಾಗಿ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಶ್ನೆಗಳನ್ನು ವರ್ಗಪ್ರಶ್ನೆಗಳನ್ನು ಮೀರಿದ ನೆಲೆಯಲ್ಲಿ ಅರ್ಥೈಸಿದನು. ಆ ಮೂಲಕ ಆಧುನಿಕ ಮಾರ್ಕ್ಸ್‌ವಾದಿ ವಿಮರ್ಶಕ ಮತ್ತು ಸಂಸ್ಕೃತಿ ವಿಮರ್ಶಕ ಎಂದೇ ಪ್ರಖ್ಯಾತನಾದನು. ಇಂಗ್ಲೆಡಿನಲ್ಲಿ 'ದ್ವಂದ್ವಮಾನಭೌತವಾದ' ಎನ್ನುವ ಹೊಸ ಸಾಂಸ್ಕೃತಿಕ ವಿಮರ್ಶಾ ಪ್ರಸ್ಥಾನದ ಪ್ರವರ್ತಕ ಕೂಡಾ ಆದನು. ಹಾಗೆಯೇ, ಕನ್ನಡದ ಸಂದರ್ಭದಲ್ಲಿ ಡಿ.ಆರ್. ಸಹ ತಮ್ಮ ಬರವಣಿಗೆಯ ಆರಂಭಿಕ ಘಟ್ಟದಲ್ಲಿ 'ಫ್ರಾಂಕ್‌ಫರ್ಟ್ ಪಂಥ'ದ ಮಾರ್ಕ್ಸ್‌ವಾದಿ ಆಗಿದ್ದವರು. ಆನಂತರ ತಮ್ಮ ಈ ವಿಮರ್ಶಾಕ್ರಮದ ವಿರುದ್ಧ ಸ್ವಯಂ ಪ್ರತಿರೋಧ ತಾಳಿದವರು. 'ಸಾಹಿತ್ಯ ಸಂಸ್ಕೃತಿ' ಎನ್ನುವ ವಿಶಿಷ್ಟ ಪರಿಕಲ್ಪನೆ ಮಂಡಿಸಿದವರು. ಆನಂತರ ಇದನ್ನು 'ಸಂಸ್ಕೃತಿ ಕಥನ' ಮತ್ತು 'ಸಾಹಿತ್ಯ ಕಥನ' ಎನ್ನುವ ಅರ್ಥಪೂರ್ಣವಾದ ಹೊಸ ಪರಿಕಲ್ಪನೆಗಳ ಮೂಲಕ ಪರಿಷ್ಕರಿಸಿದವರು. ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಮತ್ತು ಸಂಸ್ಕೃತಿಯ ಮೂಲಕ ಸಾಹಿತ್ಯವನ್ನು ವಿಶ್ಲೇಷಿಸುವ ಸರಳೀಕೃತ ವಿಧಾನಗಳಿಗೆ ಬದಲಾಗಿ, ಇವೆರಡರ ದ್ವಂದ್ವಾತ್ಮಕ ಮತ್ತು ಸಂಕೀರ್ಣಾತ್ಮಕ ಸ್ವರೂಪವನ್ನು 'ಸಾಹಿತ್ಯ ಸಂಸ್ಕೃತಿ' ಎನ್ನುವ ಆಧುನಿಕ ಪರಿಕಲ್ಪನೆ ಮೂಲಕ ಅನುಸಂಧಾನ ಮಾಡುವ ಅರ್ಥಪೂರ್ಣವಾದ ಹೊಸ ಬಗೆಯ ಸಾಂಸ್ಕೃತಿಕ ವಿಮರ್ಶೆಯನ್ನು ಕಟ್ಟಿದವರು. ಈ ಕಾರಣದಿಂದ ಈ ಇಬ್ಬರು ಶ್ರೇಷ್ಠ ವಿಮರ್ಶಕರನ್ನು ಕುರಿತು ಅತ್ಯಂತ ಮಹತ್ವಪೂರ್ಣವಾದ ತೌಲನಿಕ ಅಧ್ಯಯನ ಮಾಡಬಹುದು.

ಇ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಹುಟ್ಟು ಮತ್ತು ಬೆಳವಣಿಗೆ ಅತ್ಯಂತ ಕುತೂಹಲಕರವಾದ ಸಂಗತಿ ಎನ್ನುವುದು ಈ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಮಹತ್ವದ ವಿಚಾರವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಕಾಲಕಾಲಕ್ಕೆ ಸಾಂಸ್ಕೃತಿಕ ಪ್ರಶ್ನೆಗಳು ಹಾಗೂ ಸಾಂಸ್ಕೃತಿಕ ಹೊಣೆಗಾರಿಕೆಗಳು ಮಹತ್ವ ಪಡೆದುಕೊಳ್ಳುತ್ತಲೇ ಬಂದಿವೆ. ನವೋದಯದಿಂದ ಆರಂಭವಾಗಿ ನವವಸಾಹತುಶಾಹಿ ಕಾಲಘಟ್ಟದವರೆಗೂ ಇದು ನಿಜ. ಆದರೆ, ನಿರ್ದಿಷ್ಟವಾಗಿ ನವ್ಯೋತ್ತರ ಘಟ್ಟದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿತು. ಇದಕ್ಕಿರುವ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂಸಾಹಿತ್ಯಕ ಕಾರಣಗಳನ್ನು ಕುರಿತು ಆಳವಾದ ಅಧ್ಯಯನ ಮಾಡಬಹುದಾಗಿದೆ. ಈ ಕಾರಣಗಳ ಹಿಂದಿರುವ ಪ್ರೇರಣೆಗಳು ಮತ್ತು ಒತ್ತಡಗಳು ಕೇವಲ ಸರಳವಾದ ಸಾಹಿತ್ಯಕ ನೆಲೆ ಮಾತ್ರವಲ್ಲದೆ, ಸಂಕೀರ್ಣವಾದ ಸಾಹಿತ್ಯೇತರ ಸಂಕೀರ್ಣ ನೆಲೆಗಳನ್ನು ಸಹ ಹೊಂದಿವೆ. ಹೀಗಾಗಿ, ಇಂಥ ಅಧ್ಯಯನದಿಂದ ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಸಂಸ್ಕೃತಿಯ ಸ್ಥಿತ್ಯಂತರದ ಸ್ವರೂಪ ಕುರಿತು ಉತ್ಕೃಷ್ಟವಾದ ಹೊಳಹುಗಳು ದೊರೆಯುತ್ತವೆ.

ಈ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಅನೇಕ ಶ್ರೇಷ್ಠಮಟ್ಟದ ಸಂಸ್ಕೃತಿ ಚಿಂತಕರು ಮತ್ತು ಸಾಂಸ್ಕೃತಿಕ ವಿಮರ್ಶಕರ ಒಂದು ದೊಡ್ಡ ಪರಂಪರೆಯೇ ರೂಪುಗೊಂಡಿದೆ. ಕುರ್ತಕೋಟಿ,

ಕೆ.ವಿ.ಎನ್. ಕಿ.ರಂ. ಡಿ.ಆರ್. ಕಲ್ಲುಗಡಿ, ಚೆನ್ನಿ, ತರೀಕೆರೆ, ಜಿ. ರಾಜಶೇಖರ್, ಸುಮಿತ್ರಾಬಾಯಿ, ಆಶಾದೇವಿ, ಆರ್ಕೆ. ಮಣಿಪಾಲ, ಬಿ.ಎಂ. ಪುಟ್ಟಯ್ಯ, ನಂಗಲಿ, ಅನಂತಮೂರ್ತಿ, ಸುಬ್ಬಣ್ಣ ಮತ್ತು ತೇಜಸ್ವಿ ಹೀಗೆ ಇನ್ನೂ ಸಾಕಷ್ಟು ವಿಮರ್ಶಕರನ್ನು ಇಲ್ಲಿ ಹೆಸರಿಸಬಹುದು. ಇವರ ಸಾಂಸ್ಕೃತಿಕ ವಿಮರ್ಶೆ ಪರಸ್ಪರ ಒಬ್ಬರಿಂದ ಇನ್ನೊಬ್ಬರಿಗೆ ಸಾಕಷ್ಟು ಭಿನ್ನವಾಗಿದೆ.ಈ ಭಿನ್ನತೆಗೆ ನಿರ್ದಿಷ್ಟವಾದ ಸಾಹಿತ್ಯಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಗ್ರಹಿಕೆಗಳು ಹಾಗೂ ವಿಮರ್ಶಾತ್ಮಕ ಧೋರಣೆಗಳು ಕಾರಣಗಳಾಗಿವೆ. ಹೀಗಾಗಿ ಇಂಥ ಏಕ ವಿಮರ್ಶಕ ಕೇಂದ್ರಿತ ಅಥವಾ ಅನೇಕ ವಿಮರ್ಶಕ ಕೇಂದ್ರಿತ ಅಧ್ಯಯನ ಮಾಡಬಹುದು. ಇದರಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುರೂಪಿ ವಿಧಾನಗಳು ಮತ್ತು ಮಾದರಿಗಳ ಕುರಿತು ಅರ್ಥಪೂರ್ಣವಾದ ಅಧ್ಯಯನ ಸಾಧ್ಯವಾಗುತ್ತದೆ.

ಉ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಂದರ್ಭದಲ್ಲಿ ಪಾಶ್ಚಾತ್ಯ ಸ್ತ್ರೀವಾದಿ ವಿಮರ್ಶೆ ಬಹುಮುಖ್ಯವಾದ ಪಲ್ಲಟಕ್ಕೆ ಒಳಗಾಗಿರುವುದನ್ನು ಗಮನಿಸಲಾಗಿದೆ. ಆರಂಭಿಕ ಹಂತದಲ್ಲಿ ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ ಮತ್ತು ವಿಮರ್ಶೆಯ ತಾತ್ವಿಕ ಘಟಕಗಳನ್ನು ನೇರವಾಗಿ ಕನ್ನಡ ಪಠ್ಯಗಳ ವಿಶ್ಲೇಷಣೆಗೆ ಬಳಸುತ್ತಿದ್ದ ಕನ್ನಡ ಸ್ತ್ರೀವಾದಿ ವಿಮರ್ಶೆಯು ಕ್ರಮೇಣ 'ಭಾರತೀಯ ಸ್ತ್ರೀವಾದಿ ವಿಮರ್ಶೆ'ಯಾಗಿ ವಿಕಾಸಗೊಂಡಿದೆ. ಆನಂತರ, ಸ್ತ್ರೀವಾದಿ ವಿಮರ್ಶೆಯಲ್ಲಿ 'ದಲಿತ ಸ್ತ್ರೀವಾದಿ ವಿಮರ್ಶೆ' ಎನ್ನುವ ಹೊಸ ಪ್ರಕಾರವೊಂದರ ಅಗತ್ಯವನ್ನು ಪ್ರತಿಪಾದಿಸಲಾಗಿದೆ. ಹಾಗೆ ಪ್ರತಿಪಾದಿಸುವಾಗ ಪಾಶ್ಚಾತ್ಯ ಮತ್ತು ಕನ್ನಡ ಸ್ತ್ರೀವಾದಿ ವಿಮರ್ಶೆಯ ಮೂಲ ಪ್ರೇರಣೆಗಳು, ಮುಖ್ಯ ವಿಧಾನಗಳು ಹಾಗೂ ಸಾಧನಗಳನ್ನು ಕಟು ವಿಮರ್ಶೆಗೆ ಒಳಪಡಿಸಲಾಗಿದೆ. ಇವುಗಳಿಗೆ ಭಾರತ ಹಾಗೂ ಕರ್ನಾಟಕದ ಚಾರಿತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಿಂದ ಪರ್ಯಾಯಗಳನ್ನು ಪ್ರತಿಪಾದಿಸಲಾಗಿದೆ. ಈ ಒಟ್ಟು ವಿದ್ಯಮಾನ ಕುರಿತು ಒಂದು ಕುತೂಹಲಕರ ಅಧ್ಯಯನ ಮಾಡಬಹುದಾಗಿದೆ. 'ಕನ್ನಡ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯ ತಾತ್ವಿಕ ಸ್ವರೂಪ: ಸಾಧ್ಯತೆ – ಸಮಸ್ಯೆಗಳು – ಸವಾಲುಗಳು' ಎನ್ನುವ ವಿಷಯದ ಮೂಲಕ ಇಂಥ ಅಧ್ಯಯನ ಮಾಡುವ ಸಮೃದ್ಧ ಅವಕಾಶವಿದೆ.

ಊ. ಈ ಅಧ್ಯಯನದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳನ್ನು ವರ್ಣ, ವರ್ಗ, ಜಾತಿ ಮತ್ತು ಲಿಂಗದ ಪ್ರಶ್ನೆಗಳ ಮೂಲಕ ಚರ್ಚಿಸಲಾಗಿದೆ. ಈ ಪರಿಕಲ್ಪನೆಗಳಲ್ಲಿ ಯಾವುದೇ ಒಂದು ಪರಿಕಲ್ಪನೆಯನ್ನೇ ಕೇಂದ್ರವಾಗಿಟ್ಟುಕೊಂಡು ಪ್ರತ್ಯೇಕ ಅಧ್ಯಯನ ಮಾಡಬಹುದು. ಏಕೆಂದರೆ, ವರ್ಣ, ವರ್ಗ, ಜಾತಿ ಮತ್ತು ಲಿಂಗ ಪರಿಕಲ್ಪನೆಗಳು ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಹಲವು ಹೊಸ ಕ್ರಮದಲ್ಲಿ ಪ್ರಕಟವಾಗಿದೆ. ಹೀಗೆ ಪ್ರಕಟವಾಗುವುದಕ್ಕೆ, ಅವು ಸಾಮಾಜಿಕ ನೆಲೆಯಲ್ಲಿ ನಿರಂತರವಾಗಿ ಹೊಸ ಸ್ವರೂಪ ಪಡೆದುಕೊಳ್ಳುತ್ತಿರುವುದು ಹಾಗೂ ಇದನ್ನು ಕನ್ನಡದ ಲೇಖಕರ

ಕೃತಿಗಳು ಕಾಲಕಾಲಕ್ಕೆ ನೂತನ ಸ್ವರೂಪದಲ್ಲಿ ಮಂಡಿಸುತ್ತಿರುವುದು ಮುಖ್ಯ ಕಾರಣವಾಗಿದೆ. ದಲಿತ ಮತ್ತು ಬಂಡಾಯದ ಸಾಮಾಜಿಕ ಹಾಗೂ ಆರ್ಥಿಕ ಪ್ರಶ್ನೆಗಳಿಗಿಂತ ಭಿನ್ನವಾಗಿ, ದಲಿತ ಸಾಂಸ್ಕೃತಿಕ ವಿಮರ್ಶೆ ಹಾಗೂ ಬಂಡಾಯ ಸಾಂಸ್ಕೃತಿಕ ವಿಮರ್ಶೆಗಳು ಈ ಪರಿಕಲ್ಪನೆಗಳನ್ನು ಬೇರೆಯೇ ಆದ ನೆಲೆಯಲ್ಲಿ ಅನುಸಂಧಾನ ಮಾಡಿವೆ. ಹೀಗಾಗಿ, ಇಂಥ ಒಂದೇ ಪರಿಕಲ್ಪನೆಯಾಧರಿತ ಸೂಕ್ಷ್ಮ ಹಾಗೂ ಆಳವಾದ ಅಧ್ಯಯನದಿಂದ, ಕನ್ನಡ ಸಾಂಸ್ಕೃತಿಕ ವಿಮರ್ಶೆಯು ಹೇಗೆ ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಸಂಸ್ಕೃತಿಗಳ ಸ್ವರೂಪವನ್ನು ಬೇರೆ ಬೇರೆ ಕ್ರಮಗಳಲ್ಲಿ ವ್ಯಾಖ್ಯಾನಿಸಿದೆ ಹಾಗೂ ವಿಶ್ಲೇಷಿಸಿದೆ ಎನ್ನುವ ಕುತೂಹಲಕಾರಿ ಚಿತ್ರಣ ಸಾಧ್ಯವಾಗುತ್ತದೆ.

ಖ. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಹಿತ್ಯಕ ಆಯಾಮಗಳ ಕುರಿತ ಒಂದು ಸ್ಥೂಲವಾದ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ. ಆದರೆ ಈ ವಿಷಯ ಸಹ ಒಂದು ಪ್ರತ್ಯೇಕವಾದ ಅಧ್ಯಯನಕ್ಕೆ ಸಾಕಾಗುವಷ್ಟು ಸೂಕ್ತವಾದ ಸಾಮಗ್ರಿ ಹೊಂದಿರುವ ಸ್ವರೂಪದ್ದಾಗಿದೆ. ಸಾಹಿತ್ಯದ ಸ್ವರೂಪ, ಉದ್ದೇಶ, ಕಾರ್ಯಮಾದರಿಗಳು ಮತ್ತು ಮಹತ್ವ ಕುರಿತು ಕನ್ನಡ ಸಾಂಸ್ಕೃತಿಕ ವಿಮರ್ಶೆಯು, ಕನ್ನಡದ ಪ್ರಧಾನಧಾರೆ ಹಾಗೂ ವಿವಿಧ ಸೈದ್ಧಾಂತಿಕ ವಿಮರ್ಶಾ ಪ್ರಕಾರಗಳಿಗಿಂತ ಸಾಕಷ್ಟು ಭಿನ್ನವಾದ ಗ್ರಹಿಕೆಗಳನ್ನು ಅಳವಡಿಸಿಕೊಂಡಿದೆ. ಇದರ ಫಲವಾಗಿ ಹಲವು ಹೊಸ ಸ್ವರೂಪದ ಅಭಿವ್ಯಕ್ತಿ ಪ್ರಕಾರಗಳನ್ನು ಸಾಹಿತ್ಯದ ಆಧುನಿಕ ಹಾಗೂ ಅರ್ಥಪೂರ್ಣ ಪ್ರಕಾರಗಳಾಗಿ ಸ್ವೀಕರಿಸಿದೆ. ಹಾಗೆಯೇ, ಇಂಥ ಯಾವುದೇ ಅಭಿವ್ಯಕ್ತಿ ಪ್ರಕಾರದ ರಚನೆಗಳನ್ನು 'ಪಠ್ಯ'ವೆಂದು ಭಾವಿಸಿದೆ. ಇವು ಕಟ್ಟಿಕೊಡುವ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಲೋಕದೃಷ್ಟಿ ಅಥವಾ ಐಡಿಯಾಲಜಿಯನ್ನು ವಿಶ್ಲೇಷಣೆಯ ಸಂದರ್ಭದಲ್ಲಿ ಸಂಸ್ಕೃತಿ ಸಂಕಥನದ ರೂಪವಾಗಿ ಗ್ರಹಿಸಿದೆ. ಈ ಒಟ್ಟು ವಿದ್ಯಮಾನ ಒಂದು ಪ್ರತ್ಯೇಕ ಅಧ್ಯಯನಕ್ಕೆ ಆಕರವಾಗುವಷ್ಟು ವಿಸ್ತಾರ ಹಾಗೂ ವೈವಿಧ್ಯತೆ ಹೊಂದಿದೆ ಎನ್ನುವುದು ಈ ಅಧ್ಯಯನಕಾರನ ಚಿಂತನೆಯಾಗಿದೆ.

ಖಾ. ಇದೇ ಕ್ರಮದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ನೆಲೆಗಳು ಮತ್ತು ಆಯಾಮಗಳನ್ನು ಕುರಿತು ಸಹ ಪ್ರತ್ಯೇಕವಾದ ಅಧ್ಯಯನ ಮಾಡಬಹುದು. ಇಂಥ ಸಮಗ್ರ ಅಧ್ಯಯನಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಅವಕಾಶವಿಲ್ಲ ಮತ್ತು ಅದು ಈ ಅಧ್ಯಯನದ ನಿರ್ದಿಷ್ಟ ಉದ್ದೇಶಕ್ಕೆ ಮೀರಿದ್ದು. ಕನ್ನಡ ಸಾಂಸ್ಕೃತಿಕ ವಿಮರ್ಶೆಯ ರಾಜಕಾರಣದ ಸ್ವರೂಪವು ಬಹುರೂಪಿ ನೆಲೆಗಳಿಂದ ಮತ್ತು ಸ್ತರಗಳಿಂದ ಕೂಡಿರುವ ಸಂಕೀರ್ಣ ಪ್ರಕ್ರಿಯೆಯಾಗಿದೆ. ಸಾಮಾಜಿಕ ನ್ಯಾಯದಿಂದ ಸಾಂಸ್ಕೃತಿಕ ರಾಜಕಾರಣದವರೆಗೆ ಇದರ ಭಿತ್ತಿ ಹರಡಿದೆ. ಮನುಷ್ಯ ಚರಿತ್ರೆ, ನಾಗರಿಕತೆ ಮತ್ತು ಪುರಾಣಗಳ ಪುನರ್ ವಿಮರ್ಶೆ ಮೂಲಕ ವರ್ತಮಾನದ ಬದುಕಿನ ಜ್ವಲಂತ ಪ್ರಶ್ನೆಗಳ ಪೃಥಕ್ಕರಣದ ಸಾಧನವಾಗಿ ರೂಪುಗೊಂಡಿದೆ. ಸ್ಥಳೀಯ ಮತ್ತು ಪಾಶ್ಚಾತ್ಯ ಯಾಜಮಾನ್ಯ ಶಕ್ತಿಗಳ

ಸಾಂಸ್ಕೃತಿಕ ಹಾಗೂ ರಾಜಕೀಯ ಹುನ್ನಾರಗಳಿಗೆ ಪ್ರತಿರೋಧಾತ್ಮಕ ಪರ್ಯಾಯ ರಾಜಕಾರಣಗಳನ್ನು ರೂಪಿಸುವ ಪ್ರಭಾವಶಾಲಿ ಸಾಧನವಾಗಿ ವಿಕಾಸಗೊಂಡಿದೆ. ಆದ್ದರಿಂದ, ಈ ವಿಷಯ ಕುರಿತು ಅಧ್ಯಯನ ಮಾಡುವುದು ಅತ್ಯಂತ ಸಕಾಲಿಕ ಹಾಗೂ ಅರ್ಥಪೂರ್ಣವಾದ ನಡೆಯಾಗಿದೆ.

ಎ. 'ಕನ್ನಡ ಸಾಂಸ್ಕೃತಿಕ ವಿಮರ್ಶೆ ಮತ್ತು ಆಧುನಿಕೋತ್ತರವಾದ' ಎನ್ನುವ ವಿಷಯದ ಕುರಿತು ಅತ್ಯಂತ ಅರ್ಥಪೂರ್ಣವಾದ ಒಂದು ಅಧ್ಯಯನ ಮಾಡಬಹುದು. ಕಳೆದ ಶತಮಾನದ ತೊಂಭತ್ತರ ದಶಕದಿಂದ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಗತಿಶೀಲತೆಯ ಮೇಲೆ ದಟ್ಟವಾದ ಪ್ರಭಾವ ಬೀರುತ್ತಿರುವ ಆಧುನಿಕೋತ್ತರ ಚಿಂತನೆಯು ಸಮಕಾಲೀನ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯನ್ನು ತೀವ್ರ ಸ್ವರೂಪದಲ್ಲಿ ರೂಪಾಂತರಿಸುತ್ತಿದೆ. ಆಧುನಿಕೋತ್ತರ ಚಿಂತನೆಯು ಕೇವಲ ಸಾಹಿತ್ಯಕ ಅಥವಾ ವಿಮರ್ಶಾತ್ಮಕ ಪ್ರಸ್ಥಾನವಾಗಿರದೆ ಸಮಾಜ, ರಾಜಕಾರಣ ಮತ್ತು ಸಂಸ್ಕೃತಿ ಕುರಿತ ನವವಸಾಹತುಶಾಹಿಯ 'ಸಂವಿಧಾನ'ವಾಗಿರುವುದರಿಂದಲೇ ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಇಂಥ ರೂಪಾಂತರಗಳು ಸಂಭವಿಸುತ್ತಿವೆ. ಅದರಲ್ಲೂ, ಈ ಚಿಂತನೆ ಸಾಹಿತ್ಯ ವಿಮರ್ಶೆ ಎನ್ನುವ ಹೆಸರಿಗೆ ಬದಲಾಗಿ 'ಹೊಸ ಸಾಂಸ್ಕೃತಿಕ ಅಧ್ಯಯನ'ದ ಮೂಲಕ ನಡೆಯುತ್ತಿದೆ. ಸಾಹಿತ್ಯಕ ಪ್ರಶ್ನೆಗಳಿಗಿಂತ ಬದುಕಿನ ಮತ್ತು ಆಚರಣೆಯ ಪ್ರಶ್ನೆಗಳನ್ನು, ನಂಬಿಕೆಯ ಲೋಕಗಳನ್ನು, ಸಮಕಾಲೀನ ವಿದ್ಯಮಾನಗಳನ್ನು ಮನುಷ್ಯ ಪರ ಹಾಗೂ ಮನುಷ್ಯ ವಿರೋಧಿ ಎನ್ನುವ ವ್ಯತ್ಯಾಸ ಮಾಡದೆ, 'ವಿಚಿತ್ರ ಸಮತಾವಾದ'ದಡಿ ಪ್ರತಿಪಾದಿಸುತ್ತಿದೆ. ಈ ಪ್ರಕ್ರಿಯೆ ಕನ್ನಡ ಸಾಂಸ್ಕೃತಿಕ ವಿಮರ್ಶೆಯಲ್ಲಿ ಮಾರ್ಕ್ಸ್‌ವಾದಿ ಚಿಂತನೆಯ ನಿರಾಕರಣೆ ಹಾಗೂ ಧಾರ್ಮಿಕ ಪುನರುತ್ಥಾನವಾದಿ ಮೀಮಾಂಸೆಗಳನ್ನು ಹುಟ್ಟುಹಾಕುತ್ತಿದೆ. ಇಂಥ ಸಂದರ್ಭದಲ್ಲಿ ಈ ವಿಷಯ ಕುರಿತ ಅಧ್ಯಯನಕ್ಕೆ ಚಾರಿತ್ರಿಕ ಅಗತ್ಯದ ಹಾಗೂ ಸಾಂಸ್ಕೃತಿಕ ಹೊಣೆಗಾರಿಕೆಯ ಆಯಾಮವಿದೆ. ಹೀಗಾಗಿ, ಇದನ್ನು ಅಕೆಡೆಮಿಕ್ ಆವರಣವನ್ನು ಮೀರಿದ ಅರ್ಥ ಹಾಗೂ ಪ್ರಾಮುಖ್ಯತೆ ಹೊಂದಿರುವ ಮಹತ್ವಪೂರ್ಣವಾದ ಅಧ್ಯಯನವಾಗಿ ಮಾಡುವ ದಟ್ಟವಾದ ಅವಕಾಶವಿದೆ.

ಏ. ಈ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಒಂದು ವಿಚಾರವೆಂದರೆ, ಕನ್ನಡ ಸಾಂಸ್ಕೃತಿಕ ವಿಮರ್ಶೆ ರೂಪುಗೊಂಡಿರುವುದೇ ವಾಗ್ವಾದಗಳ ಮೂಲಕ ಎನ್ನುವುದು. ಇವು ವೈವಿಧ್ಯಮಯವಾಗಿವೆ ಮತ್ತು ಕುತೂಹಲಕರವಾಗಿವೆ. ಕೇವಲ ವಿಮರ್ಶಕರ ಪ್ರಯೋಗಶೀಲ ಆಸಕ್ತಿಯ ಫಲವಾಗಿ ಮಾತ್ರ ಹುಟ್ಟದೆ, ಬದುಕಿನ ಪ್ರಶ್ನೆಗಳ ಕುರಿತ ಕಾಳಜಿಗಳು ರೂಪಿಸಿರುವ ಗ್ರಹಿಕೆ ಹಾಗೂ ಪರಿಜ್ಞಾನದಿಂದ ಹುಟ್ಟಿವೆ. ಇವು ಸಾಹಿತ್ಯ, ವಿಮರ್ಶೆ ಮತ್ತು ಸಂಸ್ಕೃತಿಗಳ ಸ್ವರೂಪಗಳು, ವಿಧಾನಗಳು ಹಾಗೂ ಪ್ರಯೋಜನಗಳನ್ನು ಕುರಿತವಾದ-ಪ್ರತಿವಾದ ಮಂಡಿಸಿವೆ.

ಹಾಗೆಯೇ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಬಹುಮುಖ್ಯ ಪಲ್ಲಟಗಳಿಗೆ ಕಾರಣ ಕೂಡಾ ಆಗಿವೆ. ಅನಂತಮೂರ್ತಿ– ತೇಜಸ್ವಿ; ಬರಗೂರು ಮಾಲಗತ್ತಿ ಯಶವಂತ ಚಿತ್ತಾಲ; ಕೆ.ವಿ. ಎನ್. ಡಿ.ಆರ್. ನಂಗಲಿ; ಕುರ್ತಕೋಟಿ ಮೊಗಳ್ಳಿ ಮಂಜನಾಥ್ ಲತಾ ಮತ್ತು ಚಂದ್ರಶೇಖರ ಐಜೂರು– ಜಿ. ರಾಜಶೇಖರ ಕೆ ಫಣಿರಾಜ್ – ಬರಗೂರು – ಕೆ.ವಿ. ಅಕ್ಷರ – ಜಿ. ರಾಜಶೇಖರ, ಹೀಗೆ ವಿಮರ್ಶಕರ ಹಾಗೂ ಚಿಂತಕರ ನಡುವೆ ಹಲವು ಪ್ರಶ್ನೆಗಳು, ಪರಿಕಲ್ಪನೆಗಳು, ಪರಿಭಾಷೆಗಳು ಮತ್ತು ಪರಿಜ್ಞಾನಗಳಿಗೆ ಸಂಬಂಧಿಸಿದಂತೆ ವಾಗ್ವಾದ ನಡೆದಿರುತ್ತದೆ.ಇದು, ವಿಮರ್ಶಾಲೋಕದ ಒಳಗಿನ ಅಕೆಡೆಮಿಕ್ ಸ್ವರೂಪದ ವಿಚಾರಗೋಷ್ಠಿಗಳು, ಲೇಖನ ರಚನೆಗಳ ಮೂಲಕ ಮಾತ್ರವಲ್ಲದೆ ವೃತ್ತಪತ್ರಿಕೆಗಳ ಹಾಗೂ ವಾರಪತ್ರಿಕೆಗಳಲ್ಲಿನ ಚರ್ಚೆಗಳ, ಸಂವಾದಗಳ ರೂಪದಲ್ಲೂ ನಡೆಯುತ್ತಿದೆ. ಹೀಗಾಗಿ, ಸಮಕಾಲೀನ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ವಾಗ್ವಾದಗಳ ವೇದಿಕೆ ಹಾಗೂ ಪ್ರಶ್ನೆಗಳ ಸ್ವರೂಪ ಕೂಡಾ ಸಾಹಿತ್ಯೇತರ ನೆಲೆಗಳಿಗೆ ಜಿಗಿದಿದೆ. ಹೀಗಾಗಿ ಇದು ಪ್ರೌಢವಾದ ಅಧ್ಯಯನಕ್ಕೆ ಸೂಕ್ತವಾದ ವಿಷಯವಾಗಿದೆ.

ಐ. ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಭಾಗವಾಗಿ ಹುಟ್ಟಿಕೊಂಡ ಗ್ರಹಿಕೆಯಾದ ವಿಜ್ಞಾನ ವಿರೋಧ ಮತ್ತು ಪರಿಸರ ಪ್ರಜ್ಞೆಯ 'ಇಕಾಲಜಿ' ಸಂವೇದನೆಯು ಕನ್ನಡದಲ್ಲಿ 'ಹಸಿರು ವಿಮರ್ಶೆ' ಎನ್ನುವ ಹೊಸ ವಿಮರ್ಶಾ ಪ್ರಕಾರವೊಂದನ್ನು ರೂಪಿಸುತ್ತಿದೆ. ಇದು, ಹಸಿರು ಕಾಳಜಿಯ ಪ್ರಶ್ನೆಗಳನ್ನು ಮನುಷ್ಯ ಬದುಕಿನ ಮತ್ತು ಸಂಸ್ಕೃತಿಯ ಅಳಿವು ಹಾಗೂ ಉಳಿವಿನ ಮಹತ್ವದ ಪ್ರಶ್ನೆಗಳೆಂದು ಭಾವಿಸುವ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಪಠ್ಯಗಳನ್ನು ವಿಶ್ಲೇಷಿಸುತ್ತಿರುವ ಒಂದು ಗಂಭೀರವಾದ ಆಧುನಿಕ ವಿಮರ್ಶಾಕ್ರಮವಾಗಿದೆ. ಇದು ಸಾಹಿತ್ಯ ಮತ್ತು ಸಂಸ್ಕೃತಿ ಪಠ್ಯಗಳನ್ನು ಹೊಸ ಸ್ವರೂಪದ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಭಾಷಿಕ ಆಯಾಮಗಳಲ್ಲಿ ಅನುಸಂಧಾನ ಮಾಡುತ್ತಿದೆ. ನಂಗಲಿ, ಸತ್ಯನಾಥ್, ಹಿ.ಶಿ. ರಾಮಚಂದ್ರೇಗೌಡ, ಮೊದಲಾದವರ ಬರಹಗಳಲ್ಲಿ ಇಂಥ ಪ್ರಯತ್ನಗಳಿವೆ. ಇವು ಪಾಶ್ಚಾತ್ಯ 'ಗ್ರೀನ್ ಕಿಟಿಸಿಸಂ' ಹಾಗೂ 'ಪರಿಸರ ಚಳವಳಿ'ಗಳ ತಾತ್ವಿಕ ಆಲೋಚನೆಗಳಿಗಿಂತ ಹೇಗೆ ಭಿನ್ನವಾಗಿವೆ ಮತ್ತು ಅರ್ಥಪೂರ್ಣವಾಗಿವೆ ಎನ್ನುವುದನ್ನು ಕುರಿತುಸಂಶೋಧನೆ ಮಾಡುವುದು ಇಂದಿನ ಸಂದರ್ಭದಲ್ಲಿ ಅಗತ್ಯವಾಗಿದೆ ಎನ್ನುವುದು ಈ ಸಂಶೋಧಕನ ನಂಬಿಕೆಯಾಗಿದೆ.

ಅನುಬಂಧ

ಆಕರಸೂಚಿ

I. ಪ್ರಧಾನ ಆಕರಗಳು

೧. ಕೃತಿಗಳು

ಅ. ಅಜಕ್ಕಳ ಗಿರೀಶ್ ಭಟ್, ಬುದ್ಧಿಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ, ಚಿಂತನ ಬಯಲು ಪ್ರಕಾಶನ, ದಕ್ಷಿಣ ಕನ್ನಡ, ಮೊದಲನಯೆ ಮುದ್ರಣ ೨೦೦೭

ಆ. ಅನಿಯಾ ಲೂಂಬ ಮತ್ತು ಇತರರು, (ಸಂ), ಪೋಸ್ಟ್‌ಕಲೋನಿಯಲ್ ಸ್ಟಡೀಸ್ ಅಂಡ್ ಬಿಯಾಂಡ್, ಪರ್ಮನೆಂಟ್ ಬ್ಲಾಕ್, ರಾಣಿಖೇಟ್ ಪ್ರಕಾಶನ, ಮೂರನೆಯ ಮುದ್ರಣ ೨೦೧೦

ಇ. ಬಿಲ್ ಆಶ್‌ಕ್ರಾಫ್ಟ್, ಗ್ಯಾರೆಟ್ ಗ್ರಿಫಿತ್ಸ್ ಮತ್ತು ಹೆಲೆನ್ ಟಿಫಿನ್, (ಸಂ), ಪೋಸ್ಟ್‌ಕಲೋನಿಯಲ್ ಸ್ಟಡೀಸ್, ದ ಕೀ ಕಾನ್ಸೆಪ್ಟ್ಸ್, ರೋಟ್‌ಲೆಡ್ಜ್, ಲಂಡನ್ ಮತ್ತು ನ್ಯೂಯಾರ್ಕ್, ಮೊದಲನೆಯ ಭಾರತೀಯ ಮರುಮುದ್ರಣ ೨೦೦೯

ಈ. ಜೆರ್ಮಿ ಹ್ಯಾತ್ರೋನ್, ಎ ಗ್ಲಾಸರಿ ಆಫ್ ಕಾಂಟೆಪರರಿ ಲಿಟರರಿ ಥಿಯರಿ, ಹೆರಿಟೇಜ್ ಪಬ್ಲಿಷರ್ಸ್, ನವದೆಹಲಿ, ಮರುಮುದ್ರಣ ೨೦೧೧

ಉ. ಜೋನಾಥನ್ ಕಲರ್, ಲಿಟರರಿ ಥಿಯರಿ ಎ ವೆರಿ ಶಾರ್ಟ್ ಇನ್ಟ್ರುಡಕ್ಷನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಯು.ಎಸ್.ಎ, ಎರಡನೆಯ ಮುದ್ರಣ ೨೦೦೦

ಊ. ಡೆನ್ನಿಸ್ ವಾಲ್ಡರ್, ಲಿಟರೇಚರ್ ಇನ್ ದ ಮಾರ್ಡನ್ ವರ್ಲ್ಡ್, (ಸಂ), ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಯು.ಎಸ್.ಎ, ಮೂರನೆಯ ಮುದ್ರಣ ೨೦೦೮

ಋ. ಡೇವಿಡ್ ಆ್ಯಯರ್ಸ್, ಲಿಟರರಿ ಥಿಯರಿ, ಬ್ಲಾಕ್‌ವೆಲ್ ಪಬ್ಲಿಷಿಂಗ್, ಯು.ಎನ್.ಎ, ಯು.ಕೆ, ಮತ್ತು ಆಸ್ಟ್ರೇಲಿಯಾ, ಮರುಮುದ್ರಣ ೨೦೦೮

ೠ. ಫಿಲಿಪ್ ರೈಸ್ ಮತ್ತು ಪೆಟ್ರೀಷಿಯಾ ವಾಗ್, (ಸಂ), ಮಾರ್ಡನ್ ಲಿಟರರಿ ಥಿಯರಿ, ಹೆರಿಟೇಜ್ ಪಬ್ಲಿಷರ್ಸ್, ನವದೆಹಲಿ, ಮರುಮುದ್ರಣ ೨೦೧೧

ಎ. ಬಿಜಯ್ ಕುಮಾರ್ ದಾಸ್, ಟ್ವೆಂಟಿಯತ್ ಸೆಂಚುರಿ ಲಿಟರರಿ ಕ್ರಿಟಿಸಿಸಂ, ಅಟ್ಲಾಂಟಿಕ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ (ಪ್ರೈ) ಲಿಮಿಟೆಡ್, ನವದೆಹಲಿ, ಪರಿಷ್ಕೃತ ಮತ್ತು ವಿಸ್ತೃತ ಆರನೆಯ ಮುದ್ರಣ ೨೦೧೦

ಏ. ಸರಸ್ವತಿ ಎಂ. ಮತ್ತು ವಸಂತ್ ಕುಮಾರ್ ಆರ್. (ಸಂ), ಕರ್ನಾಟಕ ಸಂಸ್ಕೃತಿ ಚಿಂತನೆ, ಕನ್ನಡ ವೇದಿಕೆ, ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜ್, ಬೆಂಗಳೂರು, ಮೊದಲನೆಯ ಮುದ್ರಣ ೨೦೦೫

೨. ಲೇಖನಗಳು

ಅ. ಅನಂತಮೂರ್ತಿ ಯು.ಆರ್., 'ಭಾರತೀಯ ಸಂಸ್ಕೃತಿ ಮತ್ತು ಲೇಖಕ', ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ (ಹೆಗ್ಗೋಡು), ಸಾಗರ, ನಾಲ್ಕನೆಯ ಮುದ್ರಣ ೧೯೯೨

ಆ. ಅರವಿಂದ ಮಾಲಗತ್ತಿ, 'ಪಂಪನ ಕಾವ್ಯಗಳಲ್ಲಿ ಅನಾವರಣಗೊಂಡ ವರ್ಣ-ಜಾತಿ ವ್ಯವಸ್ಥೆಯ ಸ್ವರೂಪ', 'ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ದಲಿತತ್ವದ ಧರ್ಮಸಿಂಧು,' 'ರನ್ನನ ಕಾವ್ಯಗಳಲ್ಲಿ ವರ್ಣ ವ್ಯವಸ್ಥೆಯ ವಿರೋಧದ ಸ್ವರೂಪ - ಸಂವಾದ', 'ವಡ್ಡಾರಾಧನೆ ಸಮಾನತೆ ಮತ್ತು ಪಾಪಪ್ರಜ್ಞೆ ಎಂಬ ಜ್ವಾಲೆ', ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು ಮೊದಲನೆಯ ಮುದ್ರಣ ೧೯೯೯; 'ಸ್ತ್ರೀವಾದ ದಲಿತವಾದದಿಂದ ದಲಿತ ಸ್ತ್ರೀವಾದದೆಡೆಗೆ', ವಿಮರ್ಶೆಯ ಮಾರ್ಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಮೊದಲನೆಯ ಮುದ್ರಣ ೨೦೦೪

ಇ. ಆಶಾದೇವಿ ಎಂ.ಎಸ್., 'ಉತ್ತಮ ಸರಕಿದು ಅತಿಲಾಭ ತರುವಂಥ . . . . ಜಾಗತೀಕರಣ ಮತ್ತು ಆತಂಕಿತ ಮಹಿಳೆ', 'ಮಹಿಳೆ ಬಸವಣ್ಣನ ನಿಲುವುಗಳು', 'ಸಂಸ್ಕೃತಿ ಮತ್ತು ಕೋಮುವಾದ', ಸ್ತ್ರೀ ಮತವನ್ನುತ್ತರಿಸಲಾಗದೆ? ಅಕ್ಷರ ಪ್ರಕಾಶನ (ಹೆಗ್ಗೋಡು) ಸಾಗರ, ಮೊದಲನೆಯ ಮುದ್ರಣ ೨೦೦೬

ಈ. ಕೃಷ್ಣಪ್ಪ ಬಿ., 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ', ಪ್ರೊ॥ ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೊದಲನೆಯ ಮುದ್ರಣ ೧೯೯೯

ಉ. ಕೇಶವ ಶರ್ಮ ಕೆ., 'ಕನ್ನಡದಲ್ಲಿ ಸಾಂಸ್ಕೃತಿಕ ವಿಮರ್ಶೆ', ನೀಲ ನಕ್ಷೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ಮೊದಲನೆಯ ಮುದ್ರಣ ೨೦೧೧

ಊ. ಗಣೇಶ್ ಮೊಗಳ್ಳಿ, 'ಸಂಸ್ಕೃತಿ ವಿಮರ್ಶೆಯ ದೇಶಿ ಚಹರೆ', ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊದಲನೆಯ ಮುದ್ರಣ ೨೦೦೬; 'ಊಳಿಗಮಾನ್ಯ ಕಥನ', 'ಸತ್ತವರ ನೆರಳು ಬೆಳಕಾಗುವ ಬಗೆ', ರಾಜಶೇಖರ ಹತಗುಂದಿ (ಸಂ.), ಅಗ್ನಿ ವಾರಪತ್ರಿಕೆ, ಬೆಂಗಳೂರು ೮ನೇ ಡಿಸೆಂಬರ್, ೨೦೧೧; 'ಜಾತ್ಯಾತೀತ ರಾಜಕಾರಣ ಮತ್ತು ಸಾಹಿತ್ಯ', ತಕರಾರು, ಪಲ್ಲವ ಪ್ರಕಾಶನ, ಬಳ್ಳಾರಿ, ಮೊದಲನೆಯ ಮುದ್ರಣ ೨೦೦೮; 'ದಲಿತ ರಾಜಕಾರಣದ ತಾತ್ವಿಕತೆ', ದಲಿತ ಕಥನ, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ಬಳ್ಳಾರಿ, ಮೊದಲನೆಯ ಮುದ್ರಣ ೨೦೦೬

ಋ. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನಿ, 'ಜನಪ್ರಿಯ ಸಾಹಿತ್ಯದಲ್ಲಿ ಸ್ತ್ರೀತ್ವದ ಪ್ರತಿಬಿಂಬ – ತ್ರಿವೇಣಿಯವರ ಕೆಲವು ಕಾದಂಬರಿಗಳು', ಸ್ತ್ರೀವಾದಿ ಸಾಹಿತ್ಯದ ವಿಮರ್ಶೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ಮೊದಲನೆಯ ಮುದ್ರಣ ೧೯೯೪

ೠ. ನಾಗರಾಜ ಕಿ.ರಂ., 'ಹದಿನೇಳು ಮತ್ತು ಹದಿನಂಟನೆಯ ಶತಮಾನದ ಅನುಭಾವ ಸಾಹಿತ್ಯ', ನಟರಾಜ್ ಹುಳಿಯಾರ್ (ಸಂ), ತೆರೆದ ಪಠ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೊದಲನೆಯ ಮುದ್ರಣ ೨೦೧೨

ಎ. ನಾಗರಾಜ ಡಿ.ಆರ್.,'ಅಧಿಕಾರ ವಿಘಟನೆಯ ಆತಂಕಮಯ ಮತ್ತು ಹಾಸ್ಯಮಯ ರೂಪಗಳು ಜನಪ್ರಿಯ ಸಿನಿಮಾಗಳ ಕಲಾ ಮೀಮಾಂಸೆ', ಸಾಹಿತ್ಯ ಕಥನ, ಅಕ್ಷರ ಪ್ರಕಾಶನ (ಹೆಗ್ಗೋಡು) ಸಾಗರ, ಮೊದಲನೆಯ ಮುದ್ರಣ ೧೯೯೬

ಏ. ಪೂರ್ಣಚಂದ್ರ ತೇಜಸ್ವಿ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' 'ಹೊಸ ದಿಗಂತದೆಡೆಗೆ', ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು, ಮೊದಲನೆಯ ಮುದ್ರಣ ೨೦೦೯

ಐ. ಮಣಿಪಾಲ ಆರ್ಕೆ., 'ದೇವನೂರು ಕತೆ ಕಾದಂಬರಿಗಳು: ಆಶಯ ಮತ್ತು ವಿನ್ಯಾಸ', ವಿಮರ್ಶೆಯ ಸವಾಲು, ಸಂವಾದ ಪ್ರಕಾಶನ, ಮಣಿಪಾಲ, ಮೊದಲನೆಯ ಮುದ್ರಣ ೨೦೦೯

ಒ. ಮನು ಚಕ್ರವರ್ತಿ ಮತ್ತು ಶ್ರೀಧರ್ ವಿ.ಎಸ್., 'ಸಾಂಸ್ಕೃತಿಕ ವಿಮರ್ಶೆ ಮತ್ತು ಕನ್ನಡ ಸಾಹಿತ್ಯ ಸಂದರ್ಭ' ಕೇಶವ ಶರ್ಮ ಕೆ., (ಸಂ), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಮೊದಲನೆಯ ಮುದ್ರಣ ೧೯೯೩

ಓ. ರಂಗನಾಥ ಕಂಟನಕುಂಟೆ, 'ಸಂಸ್ಕೃತಿ ವಿಮರ್ಶೆಯಾಗಿ ಸಾಹಿತ್ಯದ ಓದು', ಜನರ ವ್ಯಾಕರಣ, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್–ಕೃಷ್ಣಾಪುರದೊಡ್ಡಿ, ಬೆಂಗಳೂರು, ಮೊದಲನೆಯ ಮುದ್ರಣ ೨೦೧೧

ಔ. ರಹಮತ್ ತರೀಕೆರೆ, 'ಆವರಣ ಏನನ್ನು ಮರೆಮಾಚುತ್ತಿದೆ', ಧರ್ಮಪರೀಕ್ಷೆ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಮೊದಲನೆಯ ಮುದ್ರಣ ೨೦೦೮

ಅಂ. ರಾಘವೇಂದ್ರರಾವ್ ಹೆಚ್.ಎಸ್., 'ಕರ್ನಾಟಕ ಸಂಸ್ಕೃತಿ ಚಿಂತನೆ', ಸರಸ್ವತಿ ಎಂ. ಮತ್ತು ವಸಂತ್ ಕುಮಾರ್ ಆರ್., (ಸಂ), ಕರ್ನಾಟಕ ಸಂಸ್ಕೃತಿ ಚಿಂತನೆ, ಕನ್ನಡ ವೇದಿಕೆ, ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜ್, ಬೆಂಗಳೂರು, ಮೊದಲನೆಯ ಮುದ್ರಣ ೨೦೦೫

ಅಃ. ರಾಮಚಂದ್ರಪ್ಪ ಬರಗೂರು, 'ಬೇಂದ್ರಯವರ ಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆ', ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು, ಮೊದಲನೆಯ ಮುದ್ರಣ ೨೦೦೧

ಕ. ರಾಮಲಿಂಗಪ್ಪ ಟಿ. ಬೇಗೂರು., 'ಸಾಂಸ್ಕೃತಿಕ ಪಲ್ಲಟಗಳು', ಪರಕಾಯ, ನವಕರ್ನಾಟಕ ಪಬ್ಲಿಕೇಶನ್ಸ್ (ಪ್ರೈ) ಲಿಮಿಟೆಡ್, ಬೆಂಗಳೂರು, ಮೊದಲನೆಯ ಮುದ್ರಣ ೨೦೧೦

ಖ. ಶ್ರೀಮತಿ ಹೆಚ್.ಎಸ್., 'ವಿಮೋಚನೆಗಾಗಿ ಸ್ತ್ರೀವಾದಿ ರಾಜಕಾರಣ', ಸ್ತ್ರೀವಾದ, ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ಬಳ್ಳಾರಿ, ಮೊದಲನೆಯ ಮುದ್ರಣ ೨೦೦೩

ಗ. ಸುಮಿತ್ರಾಬಾಯಿ ಬಿ.ಎನ್., 'ಆಧುನಿಕ ಕನ್ನಡ ಸಾಹಿತ್ಯ ವಿಮೋಚನೆಯನ್ನು ನಿರ್ವಹಿಸಿದ ಬಗೆ', ಸಂ. ಮಂ: ಕೋ. ಚನ್ನಬಸಪ್ಪ ಮತ್ತು ಇತರರು, ನಿರಂತರ ಎಂ.ಎಸ್. ಕೃಷ್ಣನ್ ಸ್ಮರಣ ಸಂಸ್ಥೆ (ನೋಂ), ಬೆಂಗಳೂರು , ಮೊದಲನೆಯ ಮುದ್ರಣ ೨೦೦೯

ಘ. ಹರೀಶ್ ಜಿ.ಬಿ., 'ಸಾಂಸ್ಕೃತಿಕ ವಿಮರ್ಶೆಯ ಸಂಕಥನಗಳು', ಬೆಳಕಿನಾಟ, ಸಂಚಯ, ಬೆಂಗಳೂರು, ಮೊದಲನೆಯ ಮುದ್ರಣ ೨೦೦೫

II. ಪೂರಕ ಆಕರಗಳು

೧. ಕೃತಿಗಳು

ಅ. ನಾಗರಾಜ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ (ಹೆಗ್ಗೋಡು), ಸಾಗರ, ಮೊದಲನೆಯ ಮುದ್ರಣ ೧೯೯೬

ಆ. ನಾರಾಯಣ ಕೆ.ವಿ., ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು, ಮೊದಲನೆಯ ಮುದ್ರಣ ೧೯೯೭

ಇ. ಪ್ರಸನ್ನ, ಯಂತ್ರಗಳನ್ನು ಕಳಚೋಣ ಬನ್ನಿ, ಒಂಟಿ ದನಿ ಪ್ರಕಾಶನ, ಹೆಗ್ಗೋಡು, ಸಾಗರ, ಮೊದಲನೆಯ ಮುದ್ರಣ ೨೦೦೯

ಈ. ಬಸವರಾಜ ಕಲ್ಗುಡಿ, ನಕ್ಷೆ ನಕ್ಷತ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಎರಡನೆಯ ಮುದ್ರಣ ೨೦೧೦

ಉ. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಅಭಿವನ, ಬೆಂಗಳೂರು, ಎರಡನೆಯ ಮುದ್ರಣ ೨೦೦೯, ಮರದೊಳಗಣ ಕಿಚ್ಚು', ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು, ಮೂರನೆಯ ಪರಿಷ್ಕೃತ ಮುದ್ರಣ ೨೦೦೨; ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಮೊದಲನೆಯ ಮುದ್ರಣ ೨೦೦೪

ಊ. ರಾಮಯ್ಯ ಕೆ., ಸಿಂಧ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಎರಡನೆಯ ಮುದ್ರಣ ೨೦೧೧.

೨. ಲೇಖನಗಳು

ಅ. ಅರವಿಂದ ಮಾಲಗತ್ತಿ, 'ಬೇಂದ್ರೆಯವರ ಕಾವ್ಯ ಮತ್ತು ಸಾಮಾಜಿಕ ಪ್ರಕ್ರಿಯೆ', 'ಬೇಂದ್ರೆಯವರ ದೇಮವ್ವನ ಮೆರವಣಿಗೆ', ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಮೊದಲನೆಯ ಮುದ್ರಣ ೨೦೦೩; 'ಬೇಂದ್ರಯವರ ಕಾವ್ಯದಲ್ಲಿ ಪಂಚಮರ ಪಥ ಪರೀಕ್ಷೆ', ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು, ಮೊದಲನೆಯ ಮುದ್ರಣ ೧೯೯೯

ಆ. ಉಷಾ ಎಂ., 'ಮಹಿಳಾ ಸಾಹಿತ್ಯದಲ್ಲಿ ಜನಪ್ರಿಯ-ಗಂಭೀರ ಪರಿಕಲ್ಪನೆಗಳು', 'ಮಹಿಳಾ ಸಂಸ್ಕೃತಿ ಸಂಕಥನ' : ಒಂದು ಪ್ರತಿಕ್ರಿಯೆ', ಸುರುಚಿ, ಸಿಎಜಿ ಪಬ್ಲಿಕೇಶನ್ಸ್, ಬೆಂಗಳೂರು, ಮೊದಲನೆಯ ಮುದ್ರಣ ೨೦೦೪

ಇ. ಕೀರ್ತಿನಾಥ ಕುರ್ತುಕೋಟಿ, 'ಗೋವಿನ ಹಾಡು ಮತ್ತು ಕೆರೆಗೆ ಹಾರ' ಸಂ. ಗಿರಡ್ಡಿ ಗೋವಿಂದರಾಜ, ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೦

ಈ. ಕುವೆಂಪು, 'ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ', ದ್ರೌಪದಿಯ ಶ್ರೀಮುಡಿ, ಉದಯರವಿ ಪ್ರಕಾಶನ, ಮೈಸೂರು, ಐದನೆ ಮುದ್ರಣ ೧೯೯೪

ಉ. ಗಣೇಶ್ ಮೊಗಳ್ಳಿ, 'ದಲಿತರು ಮತ್ತು ರಾಜಕಾರಣ', ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ' ಮೊದಲನೆಯ ಮುದ್ರಣ ೨೦೦೨

ಊ. ಧರಣೀದೇವಿ ಮಾಲಗತ್ತಿ, 'ಅಕ್ಕ ದ್ವಂದ್ವಗಳ ಸಮನ್ವಯಕ್ಕೊಂದು ಹೆಸರು', ರಹಮತ್ ತರೀಕೆರೆ (ಸಂ), ಅಕ್ಕಮಹಾದೇವಿ ವಚನಗಳ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಬಳ್ಳಾರಿ, ಮೊದಲನೆಯ ಮುದ್ರಣ ೨೦೦೫

ಋ. ನಾಗಭೂಷಣ ಡಿ.ಎಸ್., 'ಆಧುನಿಕ ಕನ್ನಡ ಸಾಹಿತ್ಯಕ ತಾತ್ವಿಕ ಸಂವಾದಗಳು', ಬೇರು ಬಿಳಲು, ರೂಪ ಪ್ರಕಾಶನ ಮೈಸೂರು, ಮೊದಲನೆಯ ಮುದ್ರಣ ೨೦೦೬; 'ಕನ್ನಡ ಸಾಹಿತ್ಯ ವಿಮರ್ಶೆ: ಒಂದು ತಾತ್ವಿಕ ನೋಟ', ಉಮೇಶ ಹೆಚ್.ಎಸ್., (ಸಂ), ಅರುಹು-ಕುರುಹು, ಮೈಸೂರು ಕನ್ನಡ ತ್ರೈಮಾಸಿಕ ಏಪ್ರಿಲ್-ಜೂನ್ ೨೦೧೨; 'ನವ್ಯೋತ್ತರ ವಿಮರ್ಶೆ': ಒಂದು ತಾತ್ವಿಕ ನೋಟ' ಗಮನ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಚಿತ್ರದುರ್ಗ, ಮೊದಲನೆಯ ಮುದ್ರಣ ೧೯೯೦.

ೠ. ನಾಗರಾಜ, ಕಿ.ರಂ., 'ಮುನ್ನುಡಿ', ನಡುಹಗಲಿನಲ್ಲಿ ಕಂದೀಲುಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ, ಮೊದಲನೆಯ ಮುದ್ರಣ ೨೦೦೪

ಎ. ನಾರಾಯಣ ಕೆ.ವಿ., 'ಜನಪ್ರಿಯ ಸಾಹಿತ್ಯ ಚರ್ಚೆಯ ನೆಲೆಗಳು', ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು ಮೊದಲನೆಯ ಮುದ್ರಣ ೧೯೯೭

೬. ನಿಂಗಪ್ಪ ಮುದೇನೂರು, 'ಮಾದೇಶ್ವರ-ಮಂಟೇಸ್ವಾಮಿ ಎಡಬಲ ಸಂಘರ್ಷಗಳ ಕಥಾನಕ', ಸಂಸ್ಕೃತಿ ದರ್ಶನ, ಮೊದಲನೆಯ ಮುದ್ರಣ ೨೦೦೫

೭. ಪುಟ್ಟಯ್ಯ ಬಿ.ಎಂ., 'ಕನ್ನಡ ಸಾಹಿತ್ಯ: ವರ್ಣ ಮತ್ತು ಜಾತಿ ಪರಿಕಲ್ಪನೆಗಳು' ಕದಡು, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಬಳ್ಳಾರಿ ಮೊದಲನೆಯ ಮುದ್ರಣ ೨೦೦೮, 'ಜಾಗತೀಕರಣ ಮತ್ತು ಸಾಂಸ್ಕೃತಿಕ ಚರ್ಚೆ', ಕಾಲ್ನಡಿಗೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು ಮೊದಲನೆಯ ಮುದ್ರಣ ೧೯೯೯

೮. ಪೂರ್ಣಚಂದ್ರ ತೇಜಸ್ವಿ, 'ಪರಂಪರೆ ಮತ್ತು ಕುವೆಂಪು', ಸಂ. ಶಿವರುದ್ರಪ್ಪ ಜಿ.ಎಸ್., ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಮೂರನೆಯ ಮುದ್ರಣ ೨೦೦೩

೯. ಯಶವಂತ ಚಿತ್ತಾಲ, 'ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ', ಸಾಹಿತ್ಯ ಸೃಜನಶೀಲತೆ ಮತ್ತು ನಾನು, ವಸಂತ ಪ್ರಕಾಶನ, ಬೆಂಗಳೂರು, ಮೂರನೆಯ ವಿಸ್ತೃತ ಮುದ್ರಣ ೨೦೦೫

೧೦. ರಹಮತ್ ತರೀಕೆರೆ, 'ಜಾಗತೀಕರಣದ ಚರ್ಚೆ: ಸಂಸ್ಕೃತಿ ನುಡಿಗಟ್ಟಿನ ಸಮಸ್ಯೆ', 'ವೈದಿಕ ವಿರೋಧದ ಸಮಸ್ಯೆ', ಕನ್ನಡ ಸಾಂಸ್ಕೃತಿಕ ವಿಮರ್ಶೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊದಲನೆಯ ಮುದ್ರಣ ೨೦೦೭; 'ಪುರಾಣದ ಪುನರ್ ವ್ಯಾಖ್ಯಾನ ಮತ್ತು ಹೊಸ ಚರಿತ್ರೆಯ ಆಶಯ', ಪ್ರತಿ ಸಂಸ್ಕೃತಿ, ಅಭಿನವ ಪ್ರಕಾಶನ, ಬೆಂಗಳೂರು, ಎರಡನೆಯ ಮುದ್ರಣ ೨೦೦೯; 'ಸ್ತ್ರೀ ಚೈತನ್ಯ ನೆಲೆ', ಮರದೊಳಗಣ ಕಿಚ್ಚು, ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಮೈಸೂರು, ಮೂರನೆಯ ಪರಿಷ್ಕೃತ ಮುದ್ರಣ ೨೦೦೨

೧೧. ರಾಮಚಂದ್ರಪ್ಪ ಬರಗೂರು, 'ದೇಶ ಕಾಲದ ಸಾಂಸ್ಕೃತಿಕ ರಾಜಕಾರಣ', ಚಂದ್ರಶೇಖರ ಐ ಜೂರ ಮತ್ತು ಮಂಜುನಾಥ ಲತಾ (ಸಂ), ''ದೇಶಕಾಲ''ದ ಸಾಂಸ್ಕೃತಿಕ ರಾಜಕೀಯ' ದೇಶವಿದೇನಹಾ! ಕಾಲವಿದೇನಹಾ!!, ಮೌಲ್ಯಾಗ್ರಹ ಪ್ರಕಾಶನ, ಬೆಂಗಳೂರು, ಮೊದಲನೆಯ ಮುದ್ರಣ ೨೦೧೧

೧೨. ರಾಜಶೇಖರ ಜಿ., 'ಜನ್ನನ ಯಶೋಧರ ಕಾವ್ಯದ ದ್ವಂದ್ವವಿನ್ಯಾಸ,' (ಸಂ) ಲಕ್ಷಣ ಕೊಡಸೆ, ವಿಮರ್ಶಾ ವಿವೇಕ, ಸುಮುಖ ಪ್ರಕಾಶನ, ಬೆಂಗಳೂರು, ಮೊದಲನೆಯ ಮುದ್ರಣ ೨೦೦೮

೧೩. ಲಕ್ಷ್ಮೀಪತಿ ಕೋಲಾರ, 'ತತ್ವಪದಕಾರರ ನಿರ್ವಸಾಹತೀಕರಣ', 'ಮಾಸ್ತಿಕರ ಸಂಸ್ಕೃತಿ', ಕಾಲುದಾರಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ಮೊದಲನೆಯ ಮುದ್ರಣ ೨೦೦೧

೧೪. ವಿಜಯಾದಬ್ಬೆ, 'ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಸ್ತ್ರೀದನಿ', 'ಜನಪದ ಸಾಹಿತ್ಯದ ಸ್ತ್ರೀಜನ: ಒಂದು ನಾರಿನೋಟ', ನಾರಿ-ದಾರಿ-ದಿಗಂತ, ರಚನಾ ಪ್ರಕಾಶನ, ಮೈಸೂರು, ಮೊದಲನೆಯ ಮುದ್ರಣ ೧೯೯೭

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ